ದೇಶಾಂಶ ಹುಡಗಿ ಅವರ

ಬೀದರ ಕನ್ನಡ ಕೋಶ





ದೇಶಾಂಶ ಹುಡಗಿ ಅವರ

ಬೀದರ ಕನ್ನಡ ಕೋಶ

ಬಿದರಿ ಕನ್ನಡ ನುಡಿಯು ಗುಂಡು ಸಿಡಿದಂತೆ ।
ಒಮ್ಮೊಮ್ಮೆ ಜುಳು ಜುಳನೆ ಜಲವು ಹರಿದಂತೆ ॥
ಈ ಕನ್ನಡೊಡಲಲ್ಲಿ ಹುಟ್ಟಿಹುದು ವಚನಾ ।
ಜಗವೆಲ್ಲ ಮಾಡುತಿದೆ ಹಗಲಿರುಳು ಮಥನಾ ॥

– ದೇಶಾಂಶ ಹುಡಗಿ

ಪ್ರಕಾಶಕರು :

ಶಂಭುಲಿಂಗ ವಾಲದೊಡ್ಡಿ

ಗ್ರಾಮ : ವಾಲದೊಡ್ಡಿ, ತಾ॥ಜಿ॥ ಬೀದರ-೫೮೫ ೪೦೧

ಮೊ.ನಂ. ೯೪೪೮೧೮೬೬೫೨

ದೇಶಾಂಶ ಹುಡಗಿ ಅವರ

ಬೀದರ ಕನ್ನಡ ಕೋಶ

ಮ.ನಂ. ೨-೭೫೮, ಅಲ್ಲಮಪ್ರಭುನಗರ
ಬೀದರ-೫೮೫೪೦೩
ಮೊ : ೯೩೪೧೦೫೬೦೦೬, ಸ್ಥಿರ : ೦೮೪೮೨-೬೮೪೮೩೯

ಪುಟ : xvi + ೬೪೦

ಪ್ರತಿಗಳು : ೧೦೦೦

ಬೆಲೆ : ರೂ. ೪೦೦/-

ಮೊದಲ ಮುದ್ರಣ : ೨೦೧೦

ಪ್ರಕಾಶಕರು :
ಶಂಭುಲಿಂಗ ವಾಲದೊಡ್ಡಿ
ಗ್ರಾಮ : ವಾಲದೊಡ್ಡಿ, ತಾ॥ಜಿ॥ ಬೀದರ-೫೮೫ ೪೦೧
ಮೊ.ನಂ. ೯೪೪೮೧೮೬೬೫೨

ಈ ಪುಸ್ತಕದ ಮುದ್ರಣಕ್ಕೆ ಮ್ಯಾಪ್‌ಲಿಥೋ ೭೦ ಜಿಎಸ್‌ಎಂ
ಮುದ್ರಣ ಕಾಗದ ಬಳಸಲಾಗಿದೆ.

ರಕ್ಷಾಪತ್ರ ವಿನ್ಯಾಸ :
ಮೋನಪ್ಪ

ಛಾಯಾಕ್ಷರ ಜೋಡಣೆ :
ವರ್ಷಿಣಿ ಗ್ರಾಫಿಕ್ಸ್
ಬೆಂಗಳೂರು-40, ಫೋ : 9242431040

ಮುದ್ರಕರು
ಸ್ನೇಹಾ ಪ್ರಿಂಟರ್ಸ್
ನಂ. 114, 4ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ
ಅತ್ತಿಗುಪ್ಪೆ, ವಿಜಯನಗರ 2ನೇ ಹಂತ
ಬೆಂಗಳೂರು - ೪೦. ಫೋ : 23392814

ಮುನ್ನುಡಿ

'ಅರ್ಥಾನ್ನಿಘಂಟಯತ್ತಸ್ಮಾತ್ ನಿಘಂಟುಃ ಪರಿಕೀರ್ತಿತಃ' (ಯಾವ ಕಾರಣದಿಂದ ಅರ್ಥಗಳನ್ನು ಪ್ರಕಾಶಪಡಿಸುತ್ತದೆಯೋ ಅದರಿಂದ ನಿಘಂಟು ಎಂಬ ಹೆಸರು ಬಂದಿದೆ.) ಎಂಬ ಸೂಕ್ತಿ ಬಹಳ ಪ್ರಸಿದ್ಧವಿದೆ. ಕನ್ನಡ ಸಾಹಿತ್ಯದಲ್ಲಿ ನಿಘಂಟು ರಚನಾಕಾರ್ಯ, ೧೦ನೇ ಶತಮಾನದಲ್ಲಿಯೇ ಆರಂಭವಾದುದನ್ನು ಕಾಣಬಹುದು. ರನ್ನನ 'ರನ್ನ ಕಂದ' ಅಸಮಗ್ರ ನಿಘಂಟು ಕನ್ನಡದ ಮೊದಲ ನಿಘಂಟು. ೧೨ನೇ ಶತಮಾನದ ನಾಗವರ್ಮನು ತನ್ನ 'ಅಭಿದಾನ ವಸ್ತುಕೋಶ'ದ ವಿಶೇಷವನ್ನು ಹೀಗೆ ಹೇಳಿಕೊಂಡಿರುವನು :

ಪುದಿದ ಮನಸ್ತಮಮಂ ಬಿಡೆ
ಬೆದಱೆ ಸದರ್ಥಪ್ರಕಾಶಮಂ ಮಾಡುಗುಮ-
ಪ್ಪುದಱಿಂ ಸಮಸ್ತ ವಿದ್ಯಾ
ಪ್ರದೀಪಮಭಿದಾನಕೋಶಮಲ್ಲದೆ ಪೆಱತೇಂ ॥

'ಶಬ್ದಮಣಿದರ್ಪಣದ'ದ ಕೇಶಿರಾಜನು-

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ-
ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ ॥

ಎಂದು ಹೇಳಿರುವನು.

ಕರ್ನಾಟಕ ಶಬ್ದಸಾರ (ಸು. ೧೪೦೦), ಕಬ್ಬಿಗರ ಕೈಪಿಡಿ (?), ಚತುರಾಸ್ಯ ನಿಘಂಟು (೧೪೫೦), ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ (೧೫೩೦), ಕರ್ನಾಟಕ ಶಬ್ದಮಂಜರಿ (ಸು. ೧೫೬೦), ಭಾರತ ನಿಘಂಟು (ಸು. ೧೬೦೦), ಕರ್ಣಾಟಕ ಸಂಜೀವನ (ಸು. ೧೬೦೦), ಕವಿಕಂಠಹಾರ (೧೬೪೦)-ಹೀಗೆ ಕನ್ನಡ ನಿಘಂಟುವಿಗೆ ತನ್ನದೇ ಆದ ಪ್ರಾಚೀನ ಇತಿಹಾಸವಿದೆ. ಪಾಶ್ಚಾತ್ಯರಲ್ಲಿ ನಿಘಂಟು ರಚನೆ ೧೬ನೇ ಶತಮಾನದಲ್ಲಿಯೇ ಆರಂಭವಾಯಿತು. ಅಂದಿನಿಂದ ಇಂದಿನವರೆವಿಗೆ ಸತತವಾಗಿ ಕನ್ನಡ ಕೋಶರಚನೆ ಶಾಸ್ತ್ರೀಯವಾಗಿ ಸಿದ್ಧಗೊಂಡು ಬಂದಿದೆ. ಈ ನಿಟ್ಟಿನಲ್ಲಿ ಕಿಟ್ಟೆಲ್‌ರವರ ಸಾಧನೆ ಅತ್ಯಂತ ಗಮನಾರ್ಹವಾದುದು.

'ಬೀದರ ಕನ್ನಡ ಕೋಶ' ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬಳಕೆಯಲ್ಲಿರುವ ಪದಗಳ ಅರ್ಥಕೋಶ. 'ಬಿದರಿ ಕನ್ನಡ ನುಡಿಯು ಗುಂಡು ಸಿಡಿದಂತೆ । ಒಮ್ಮೊಮ್ಮೆ ಜುಳು ಜುಳನೆ ಜಲವು ಹರಿದಂತೆ ।।' ಎಂದು ಇದರ ಲೇಖಕರೇ ಈ ಪ್ರಾದೇಶಿಕ ಭಾಷೆಯ ವೈಶಿಷ್ಟ್ಯ ಹಾಗೂ ಹೆಚ್ಚಳವನ್ನು ತಿಳಿಯಪಡಿಸಿರುವರು. 'ಕೋಶಕಾರನ ಅಂತರಂಗ'ದಲ್ಲಿ ಈ ಕೋಶದ ವೈಶಿಷ್ಟ್ಯವನ್ನು ಲೇಖಕರು ಹೀಗೆ ವಿವರಿಸಿರುವರು : "ಬೀದರ ಕನ್ನಡ ಕೋಶವು ಬರಿಯ ಪದ ಅರ್ಥ ವಿವರಣೆಯಾಗಿಲ್ಲ. ಅದು ಕನ್ನಡ, ಮರಾಠಿ, ತೆಲುಗು ಉರ್ದು, ಹಿಂದಿ, ಇಂಗ್ಲಿಷ್ ಮೊದಲಾದವುಗಳ ಕಲಸು ಮೇಲೋಗರವಾಗಿದೆ. ಅದು ಬಿದರಿ ಧಪಾಟಿಯಂತೆ ಬಲು ಸ್ವಾದಿಷ್ಟವಾಗಿದೆ. ಈ ಕೋಶದಲ್ಲಿ ಬೀದರ ಜಿಲ್ಲೆಯ ಆಡುಕನ್ನಡದ ಅರ್ಥವಡಗಿದೆ. ಸಾಹಿತಿ, ಸಂತರು, ಶರಣರು, ತತ್ವಪದಕಾರರು, ಕವಿಗಳು, ವಚನಕಾರರು ಮೊದಲಾದವರ ಪರಿಚಯದಿಂದಲೂ ಕೂಡಿದೆ. ತೀರ್ಥಕ್ಷೇತ್ರಗಳು, ಮಠ-ಮಸೀದಿಗಳು, ಐತಿಹಾಸಿಕ ಸ್ಥಲಗಳು ಕೂಡಾ ತಮಗಾಗಿ ಸ್ಥಾನವನ್ನು ಇರಿಸಿಕೊಂಡಿವೆ. ಜಾನಪದ ಹಾಡು, ಸಾಂಪ್ರದಾಯಿಕ ಹಾಡುಗಳು, ಆಣಿಪೀಣಿ ಹಾಡುಗಳು, ಗಾದೆಗಳು, ಒಗಟುಗಳು, ಒಡಬುಗಳು, ದೊಡ್ಡಾಟದ ಮಾತುಗಳು, ವಚನಗಳು, ತತ್ವಪದಗಳು, ಮದುವೆ-ಸೋಬಾನೆ-ತೊಟ್ಟಿಲುಗಳ ಹಾಡುಗಳು, ಗೀಗೀ ಪದಗಳು, ಭುಲಾಯಿ ಹಾಡುಗಳು, ವಚನಗಳು, ತತ್ವಪದಗಳು, ಶಿಶುಪ್ರಾಸಗಳು, ಜಾನಪದ ಪ್ರಾಸಗಳು, ಬೈಗಳು ಇತ್ಯಾದಿಗಳೆಲ್ಲ ಈ ಕೋಶದಲ್ಲಿ ತಮಗಾಗಿ ಅವಕಾಶವನ್ನು ಗಿಟ್ಟಿಸಿಕೊಂಡಿವೆ. ಈ ಕೋಶದ ವೈಶಿಷ್ಟ್ಯ ಇದರದೇ ಆಗಿದೆ......."

ಕೋಶಗಳು ಎಲ್ಲರಿಗೂ ಬೇಕಾಗಿರುವುದಿಲ್ಲ, ಸಾಹಿತ್ಯಾಸಕ್ತರು ಹಾಗೂ ಒಂದು ಪದದ ಪ್ರಯೋಗ ಹಾಗೂ ಅದರ ಅರ್ಥವೇನು? ಅದರ ಅರ್ಥಛಾಯೆಗಳೇನು? ಎಂಬುದನ್ನು ತಿಳಿಯಬಯಸುವವರಿಗೆ ಇದರ ಅಗತ್ಯವಿರುತ್ತದೆ. ಸಾಹಿತ್ಯದ ವಿದ್ಯಾರ್ಥಿಗೆ ಒಂದು ನಿರ್ದಿಷ್ಟಪದದ ಮೂಲರೂಪ ಯಾವುದು, ಅದು ಸೋದರ ಭಾಷೆ ಇಲ್ಲವೆ ಅನ್ಯಭಾಷೆಗಳಲ್ಲಿ ಹೇಗೆ ಬಳಕೆಗೊಂಡಿದೆ, ಅಲ್ಲಿ ಅದರ ಅರ್ಥವೇನಿದೆ? ಎಂಬುದು ಮುಖ್ಯವಾಗುತ್ತದೆ. ಭಾಷೆಗೆ ಮಡಿ ಮೈಲಿಗೆಯಿಲ್ಲವಾದುದರಿಂದ ಅದರಲ್ಲಿ ಬೇರೆ ಭಾಷೆಗಳ ಪದಗಳು ಸಹಜವೆನ್ನುವಂತೆ ಸೇರ್ಪಡೆಯಾಗಿ ಭಾಷೆ ಬೆಳೆಯುತ್ತಾ ಹೋಗುತ್ತದೆ; ಮಧುರ ಮೈತ್ರಿಗೆ ಸಂಕೇತವಾಗಿ ಒಂದು ಭಾಷೆಯ ಪದಗಳು ಬೇರೊಂದು ಭಾಷೆಗೆ ವಲಸೆಹೋಗಿ ಅದರ ಕಸುವನ್ನು ಹೆಚ್ಚಿಸುತ್ತವೆ. ಭಾಷೆಯನ್ನು ಹರಿವ ನದಿಗೆ ಹೋಲಿಸಬಹುದು. ಅದು ತನ್ನ ಹರಿವಿನ ಪ್ರದೇಶದ ಸಾರಸತ್ವವನ್ನು ತನ್ನಲ್ಲಿ ಒಳಗುಮಾಡಿಕೊಳ್ಳುತ್ತಾ ಮುಂದೆ ಸಾಗುವುದರಿಂದ ಒಂದು ನಿರ್ದಿಷ್ಟ ಪ್ರದೇಶದ

ಮೆಕ್ಕಲುಮಣ್ಣನ್ನು ತನ್ನ ಜೊತೆಗೆ ಸೇರಿಸಿಕೊಂಡು ಫಲವತ್ತತೆಯನ್ನು ಭಾಷೆಗೆ ತರುತ್ತದೆ. ಕನ್ನಡದ ಭಾಷಾವಿಶೇಷವೆಂದರೆ ಅದರಲ್ಲಿ ಮರಾಠಿ, ತೆಲುಗು, ಉರ್ದು, ಹಿಂದಿ, ಇಂಗ್ಲಿಷ್ ಭಾಷೆಗಳ ಪದಗಳು ಅವಿನಾಭಾವರೂಪದಲ್ಲಿ ಸೇರ್ಪಡೆಯಾಗಿರುವುದು. ಕನ್ನಡ ಭಾಷೆಯು ಜಾಯಮಾನ ಅನ್ಯಭಾಷೆಗಳ ಜೊತೆ ಭಾವಮೈತ್ರಿಯನ್ನು ಬೆಸೆದುಕೊಂಡಿರುವುದು. ಕಲ್ಯಾಣ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಉರ್ದು ಆಡಳಿತ ಭಾಷೆ ಹಾಗೂ ಜನಬಳಕೆಯ ಭಾಷೆಯಾಗಿದ್ದಿತು. ನಿಜಾಮರ ಆಡಳಿತದಲ್ಲಿ ಅದು ಕಲಿಕೆಯ ಭಾಷೆಯೂ ಆಗಿದ್ದುದು ವಿಶೇಷ.

ಹಿಂದೆಯೇ ಹೇಳಿದಂತೆ ಈ ಕೋಶವು ಕಲ್ಯಾಣ ಕರ್ನಾಟಕದ ಗಂಡು ಭಾಷೆಯ ಸೊಗಡನ್ನು, ಗತ್ತನ್ನು, ಅರ್ಥವಂತಿಕೆಯನ್ನು ಪರಿಚಯಿಸುವ ಒಂದು ವಿಶಿಷ್ಟ ಪ್ರಯೋಗ. ತಮ್ಮ ಪ್ರದೇಶದ ಭಾಷಾವೈಶಿಷ್ಟ್ಯವನ್ನು ಸೂಕ್ಷ್ಮವಾಗಿ ಗ್ರಹಿಸುವ ಈ ಕೋಶಕಾರರು ಕಿವಿತೆರೆದು ಪ್ರಾದೇಶಿಕ ವೈಲಕ್ಷಣ್ಯವನ್ನಷ್ಟೇ ಅಲ್ಲದೆ ತಮ್ಮ ಪ್ರದೇಶದ ಭಾಷಾಪ್ರಯೋಗಕ್ಕೆ ಸಾಕ್ಷಿಯಾಗಿ ಜನಬಳಕೆಯ, ಸಾಹಿತ್ಯದ ದೇಸೀಗುಣವನ್ನು, ಅದರ ಬಹುಮುಖೀ ಸಾಂಸ್ಕೃತಿಕ ಆಯಾಮವನ್ನು, ಸಾಮಾನ್ಯವಾಗಿ ಅಲ್ಪಪ್ರಾಣವಿರಬೇಕಾದ ಕಡೆ ಮಹಾಪ್ರಾಣದ ಬಳಕೆಯಲ್ಲಿನ ಗಂಡುಭಾಷೆಯ ಸ್ವಾರಸ್ಯವನ್ನು, ಜಾನಪದೀಯತೆಯನ್ನು ಗುರುತಿಸುತ್ತಾ ಹೋಗುವರು. ಬಾಲ್ಯದಲ್ಲಿ ತಾಯಿ-ತಂದೆಯರು ಆಡುತ್ತಿದ್ದ ಬಿದರಿ ಕನ್ನಡ ಆಡುನುಡಿಯ ಶ್ರೀಮಂತಿಕೆಯಿಂದ ವಿಶೇಷವಾಗಿ ಪ್ರಭಾವಿತರಾಗುವರು. ದೈನಂದಿನ ವ್ಯವಹಾರದಲ್ಲಿ ತಮ್ಮ ಕಿವಿಗೆ ಬಿದ್ದ ಹೊಸ ಪದಗಳನ್ನು ನಿರಂತರವಾಗಿ ದಾಖಲಿಸುತ್ತಾ ಬಂದಿರುವರು. ಪದಗಳ ಸಂಗ್ರಹಕಾರ್ಯದಲ್ಲಿ ವಕ್ತೃಗಳನ್ನು (informants) ಬಳಸಿಕೊಂಡಿರುವರು. ಈ ಕೋಶಕ್ಕೆ ಪದಗಳನ್ನು ಸಂಗ್ರಹಿಸುವಲ್ಲಿ ೧೪ ವರ್ಷಗಳ ದೀರ್ಘ ಶ್ರಮವಿದೆ. ಒಂದು ಧ್ಯಾನಸ್ಥ ಮನಸ್ಸಿನ ಏಕಾಗ್ರತೆ ಈ ಕೋಶದಲ್ಲಿ ಪ್ರತಿಫಲನಗೊಂಡಿದೆ. 'ಬೀದರ ಕನ್ನಡ ಕೋಶವನ್ನು ಪೂರ್ತಿಗೊಳಿಸುವುದೇ ನನ್ನ ತಪಸ್ಸು' ಎಂದು ಹೇಳುವ ಕೋಶಕಾರರ ಮಾತಿನಲ್ಲಿ ಸತ್ಯಾಂಶವಿದೆ. ನನಗೆ ಇಲ್ಲಿ ಮುಖ್ಯವಾಗಿ ಕಾಣಿಸುವುದು ಕೋಶಕಾರರ ನಿತಾಂತ ಶ್ರದ್ಧೆ ಹಾಗೂ ಅರ್ಪಣಾ ಮನೋಭಾವ. ಅವರು ಪ್ರೌಢಶಾಲೆಯ ಕನ್ನಡ ಬೋಧಕರಾಗಿ, ವಯಸ್ಕರ ಶಿಕ್ಷಣ ಯೋಜನಾಧಿಕಾರಿಯಾಗಿ, ಬೀದರಿನ ಸಾಕ್ಷರತಾ ಸಮಿತಿ ಪ್ರಚಾರಕರಾಗಿ ಕೆಲಸ ಮಾಡಿರುವರು. ಹೀಗಾಗಿ ಅವರ ವೃತ್ತಿಜೀವನದ ಜೊತೆ ಈ ಕೋಶ ರಚನೆಯು ಅವಿನಾಭಾವ ಸಂಬಂಧವನ್ನು ಹೊಂದಿದೆ.

ಶ್ರೀ ದೇಶಾಂಶ ಹುಡಗಿಯವರಿಗೆ ಈ ಕೋಶ ರಚನೆಗೆ ಆದರ್ಶವಾದುದು ರೆ॥ ಎಫ್. ಕಿಟ್ಟೆಲ್ಲರು ೧೮೯೪ರಲ್ಲಿ ಪ್ರಕಟಿಸಿದ ಕನ್ನಡ-ಇಂಗ್ಲಿಷ್ ನಿಘಂಟು. ಅವರ

ನಿಘಂಟಿನ ವಿಶೇಷವೆಂದರೆ, ಪ್ರತಿಯೊಂದು ಶಬ್ದಕ್ಕೂ ಆಕರಗಳನ್ನು ಸೂಚಿಸಿರುವುದು. ಅವರು ದೇಶ್ಯ, ಸಂಸ್ಕೃತ, ಅನ್ಯದೇಶ್ಯ ಶಬ್ದಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ತೋರಿಸಿರುವರು. ದೇಶ್ಯ ಶಬ್ದಗಳಿಗೆ ಪ್ರಾಮುಖ್ಯಕೊಟ್ಟು ಅವನ್ನು ದಪ್ಪ ಅಕ್ಷರದಲ್ಲಿ ಕೊಟ್ಟಿದ್ದರೆ, ಸಂಸ್ಕೃತ ಮತ್ತು ಅನ್ಯದೇಶ್ಯ ಶಬ್ದಗಳನ್ನು ಸಣ್ಣ ಅಕ್ಷರಗಳಲ್ಲಿ ಕೊಟ್ಟಿರುವರು. ದೇಶ್ಯ ಶಬ್ದಗಳಿಗೆ ಮೊದಲು ಅರ್ಥವನ್ನೂ, ಆನಂತರ ಬೇರೆ ಬೇರೆ ಸಾಹಿತ್ಯ ಪ್ರಕಾರಗಳ ಪ್ರಯೋಗಗಳನ್ನು ಆಕರಗಳೊಂದಿಗೆ ಕೊಟ್ಟಿರುವರು. ತಮಿಳು, ತುಳು, ಮಲೆಯಾಳ, ತೆಲುಗು ಭಾಷೆಗಳಿಂದ ಜ್ಞಾತಿಶಬ್ದಗಳನ್ನು ಸೂಚಿಸಿರುವರು. ಅನ್ಯದೇಶ್ಯಶಬ್ದಗಳಿಗೆ ಅರ್ಥವನ್ನು ಕೊಟ್ಟ ಮೇಲೆ ಅದು ಯಾವ ಭಾಷೆಯಿಂದ ಬಂದದ್ದು ಎಂಬುದನ್ನು ಸೂಚಿಸುವರು. ಒಂದು ಶಬ್ದ ಬೇರೆ ಬೇರೆ ಮೂಲಗಳಿಂದ ಬಂದಿದ್ದೇ ಆದರೆ, ಪ್ರತ್ಯೇಕ ನಿಷ್ಪತ್ತಿಯನ್ನು ಹೊಂದಿದ್ದರೆ ಆ ಶಬ್ದವನ್ನು ಪ್ರತ್ಯೇಕ ಮುಖ್ಯ ಉಲ್ಲೇಖವಾಗಿ ಕೊಡುವರು. ಈ ರೀತಿಯ ಶಾಸ್ತ್ರೀಯ ವಿಧಾನ ಭಾರತದ ಬೇರಾವ ಭಾಷೆಯ ನಿಘಂಟುಗಳಲ್ಲೂ ಕಂಡುಬರುವುದಿಲ್ಲ.

ಶ್ರೀ ದೇಶಾಂಶ ಹುಡಗಿಯವರ 'ಬೀದರ ಕನ್ನಡ ಕೋಶ'ದ ಒಳ ಸ್ವರೂಪ ರೆ॥ ಎಫ್. ಕಿಟ್ಟೆಲ್‌ರವರ 'ಕನ್ನಡ-ಇಂಗ್ಲಿಷ್ ಕೋಶ'ದ ಮಾದರಿಯನ್ನು ಅನುಸರಿಸಿದ್ದರೂ ತನ್ನದೇ ಆದ ವಿನ್ಯಾಸವನ್ನು ಹೊಂದಿದೆ. ದೇಶಾಂಶ ಹುಡಗಿಯವರು ತಮ್ಮ ಕೋಶದಲ್ಲಿ ಅಕಾರಾದಿಯಾಗಿ ಪದಗಳನ್ನು ದಪ್ಪಕ್ಷರದಲ್ಲಿ ಕೊಟ್ಟು ಅವು ನಾಮಪದವೊ ಕ್ರಿಯಾಪದವೊ, ವಿಶೇಷಣವೊ, ದ್ವಿರುಕ್ತಿಪದವೊ ಎಂಬುದನ್ನು ತಿಳಿಸುವುದರ ಜೊತೆಗೆ ಆ ಪದಗಳು ಮೂಲದಲ್ಲಿ ಯಾವ ಭಾಷೆಯವು ಎಂಬುದನ್ನು ಹೇಳುವರು. ಆನಂತರ ಆ ಪದಕ್ಕೆ ಇರುವ ವಿವಿದಾರ್ಥವನ್ನು ಕೊಡುವರು. ವಿಶೇಷಾರ್ಥವಿದ್ದರೆ ಅದನ್ನೂ ತಿಳಿಸುವರು. ಆ ಶಬ್ದಾರ್ಥ ಜನಬಳಕೆಯಲ್ಲಿ ಹೇಗಿದೆ ಎಂಬುದಕ್ಕೆ ಗಾದೆ, ವಚನ, ಶಿಶುಪ್ರಾಸ, ಹಾಡು, ಒಡಪು, ಬೈಗುಳ ಇತ್ಯಾದಿಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುವರು. ವಿಶಿಷ್ಟಪದವೊಂದು ನಾಮಪದವಾಗಿ ಬಂದಿದ್ದರೆ, ಉದಾಹರಣೆಗೆ ಕರಿಮಸ್ದಿ ಎಂಬುದಕ್ಕೆ ಬೀದರನಗರದ ಕಾಲಿ ಮಸ್ಜಿದ್ ಎಂದು ಅರ್ಥ ಕೊಡುವರು. ಅಷ್ಟಕ್ಕೇ ತೃಪ್ತರಾಗದೆ 'ಕರಿಮಸ್ದಿ ಮುಂದ ಕೆಂಪಕುದುರಿ ಕುಣ್ದಾತು ನೋಡಿರಣ್ಣ' ಎನ್ನುವ ಕಾಲಜ್ಞಾನದ ಸಾಲನ್ನು ಉಲ್ಲೇಖಿಸುವರು. ಈ ಪದದ ಅರ್ಥ ಇನ್ನಷ್ಟು ಸ್ಫುಟವಾಗಿ ಓದುಗರ ಗ್ರಹಿಕೆಗೆ ಸಿಗಲಿ ಎಂದು 'ಸ್ವಾತಂತ್ರ್ಯಪೂರ್ವದಲ್ಲಿ ಉಸ್ಮಾನಗಂಜನ್ನು ರಜಾಕಾರರು ಸುಟ್ಟಿದ ದಾಖಲೆ' ಎಂದು ಸ್ಪಷ್ಟೀಕರಣ ನೀಡುವರು. ಒಂದು ನಾಮಪದ ಅನ್ಯಭಾಷಿಕರ ಬಾಯಲ್ಲಿ ಹೇಗೆ ರೂಪುತಾಳುತ್ತದೆಂಬುದಕ್ಕೆ ಉದಾಹರಣೆಯಾಗಿ ಚಂದರ್ಗಿ ಎನ್ನುವ ಪದಕ್ಕೆ ಕೊಡುವ ವಿವರಣೆ ನೋಡಬಹುದು: ಔರಾದ ತಾಲೂಕಿನ ಒಂದು ಹಳ್ಳಿ, ಅದು ಈಗ ಚಾಂದೋರಿ ಎಂದು ರೂಪುತಾಳಿದೆ

ಎಂದು ಅವರು ಹೇಳುವರು. ನನ್ನ ಗಮನಕ್ಕೆ ಬಂದಂತೆ ಈ ಕೋಶದಲ್ಲಿ ಶ್ರೀ ದೇಶಾಂಶ ಹುಡಗಿಯವರು ಬಳಕೆಯಲ್ಲಿರುವ ವಿಶಿಷ್ಟ ಪ್ರಾದೇಶಿಕ ಶಬ್ದಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಟ್ಟಿರುವರು. ಸೂಕ್ಷ್ಮ ಸಂವೇದಿಯಾದ ಗುಣಗ್ರಾಹಿ ವ್ಯಕ್ತಿ ಮಾತ್ರ ಇಂಥ ಅಪರೂಪದ ಪದಗಳನ್ನು (ಜನಗಳ ಬಾಯಲ್ಲಿ ಬಂದುದನ್ನು) ಸಂಗ್ರಹಿಸಲು ಸಾಧ್ಯ. ಇದಕ್ಕೆ ತಾಳ್ಮೆ, ಶ್ರಮ, ಕಾಲ ಹಾಗೂ ಆಸಕ್ತಿಗಳು ಜೊತೆಗೂಡಿ ಬರಬೇಕು. ಈ ವಿಶೇಷ ಲಕ್ಷಣಗಳೆಲ್ಲವೂ ದೇಶಾಂಶ ಹುಡಗಿಯವರಲ್ಲಿ ಮೇಳನಗೊಂಡಿವೆ.

ಈ ಕೋಶದ ಕೊನೆಯಲ್ಲಿ ಅನುಬಂಧ-೧ರಲ್ಲಿ ಕೋಶದಲ್ಲಿ ಬಳಕೆಯಾಗಿರುವ ಅಮಾವಾಸ್ಯ-ಹುಣ್ಣಿಮೆಗಳು, ವಾರಗಳು, ಕಾಲಗಳು, ಮಳೆ ನಕ್ಷತ್ರಗಳು, ಮನರಂಜನೆಗಳು, ಮನೆಯಲ್ಲಿಯ ಆಟಗಳು, ಬೀದಿ ಆಟಗಳು; ಜನಸಾಮಾನ್ಯರ ಆಹಾರಗಳು, ಉಡುಪುಗಳು, ಒಡವೆಗಳು, ವಾಸದ ಮನೆಗಳು, ಧಾರ್ಮಿಕ ಜಾಗಗಳು; ಅನುಬಂಧ-೨ರಲ್ಲಿ ಒಂದು ಕೋಶ ಸಾಧ್ಯವಾದಷ್ಟು ಪ್ರಾದೇಶಿಕ ಸಂಸ್ಕೃತಿಯ ಪಳೆಯುಳಿಕೆಗಳನ್ನು ತನ್ನಲ್ಲಿ ಹಿಡಿದಿಡಬೇಕೆನ್ನುವ ಪ್ರಾಮಾಣಿಕ ಕಳಕಳಿ ಕೋಶದ ಶಾಸ್ತ್ರೀಯತೆ ಹಾಗೂ ವೈಜ್ಞಾನಿಕ ಮಹತ್ವವನ್ನು ತಿಳಿಯಪಡಿಸುತ್ತದೆ. ಒಂದು ಸಂಸ್ಥೆ ನಿರ್ಮಿಸಬಹುದಾದ ಒನದು ಬೃಹತ್ ಯೋಜನೆಯು ದೈಹಿಕ ಹಾಗೂ ಮಾನಸಿಕ ಶ್ರಮವನ್ನು ನಿರೀಕ್ಷಿಸುತ್ತದೆ. ಇಂಥ ಒಂದು ಮಹತ್ವದ ಕೆಲಸವನ್ನು ಏಕವ್ಯಕ್ತಿಯಾಗಿ ಶ್ರೀ ದೇಶಾಂಶ ಹುಡಗಿಯವರು ಸಾಧಿಸಿರುವುದನ್ನು ಮೆಚ್ಚಲೇಬೇಕಾಗಿದೆ. ಅವರು ತಮ್ಮ ಇಳಿವಯಸ್ಸಿನಲ್ಲಿ ಇಂಥ ಚಿರಕಾಲ ನಿಲ್ಲುವ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತಂದಿರುವರು. ಅದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

– ಡಾ।। ಎಸ್. ವಿದ್ಯಾಶಂಕರ

ಪ್ರಕಾಶಕರ ನುಡಿ

ನಮ್ಮದು ಹೊಸದಾಗಿ ಪ್ರಾರಂಭಗೊಂಡ ಪ್ರಕಾಶನ. ಸಾಕಷ್ಟು ಮಹದಾಸೆಗಳನ್ನು ಇಟ್ಟುಕೊಂಡು, ಈ ಪ್ರಕಾಶನವನ್ನು ಪ್ರಾರಂಭಿಸಿದ್ದೇವೆ. ನಮ್ಮ ಈ ಪ್ರಕಾಶನದ ಚೊಚ್ಚಿಲ ಕೃತಿಯಾಗಿ "ಬೀದರ ಕನ್ನಡ ಕೋಶ"ವನ್ನು ಹೊರತರುತ್ತಿದ್ದೇವೆ. ದೇಶಾಂಶ ಹುಡಗಿಯವರು ಹಿರಿಯ ಸಾಹಿತಿಗಳು. ಅವರು ಬೀದರ ಕನ್ನಡಕ್ಕಾಗಿ ಹಗಲಿರುಳು ಪರಿಶ್ರಮಿಸಿದವರು. ಅವರ ಪರಿಶ್ರಮದ ಫಲವಾಗಿ ಸಿದ್ಧಗೊಂಡ ಈ ಕೃತಿಯು ಕೇವಲ ಶಬ್ದಕೋಶವಷ್ಟೇ ಅಲ್ಲ, ಅದು ಬೀದರ ಜಿಲ್ಲೆಯ ಕನ್ನಡ ಸಾಂಸ್ಕೃತಿಕ ಪರಂಪರೆಯ ಕನ್ನಡಿಯಾಗಿದೆ; ಕಿರಿದರಲ್ಲಿ ಪಿರಿದರ್ಥವನ್ನು ತುಂಬಿಕೊಂಡಿದೆ; ಆಡು ಕನ್ನಡದ ಅಂಗೈ ಕನ್ನಡಿಯಾಗಿದೆ.

ಇಂಥ ಕೃತಿಯನ್ನು ನಮ್ಮ ಪ್ರಕಾಶನದ ಮೂಲಕ ಹೊರತರಲು ಒಪ್ಪಿದ್ದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಪುಸ್ತಕವನ್ನು ಸರ್ವಾಂಗ ಸುಂದರವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಸ್ನೇಹಾ ಪ್ರಿಂಟರ್ಸ್ ಮಾಲೀಕರಾದ ಚಿರಂಜೀವಿಗಳಾದ ವಿ. ಮಹೇಶ್ ಹಾಗೂ ವಿ. ಕಾರ್ತಿಕ್ ಅವರಿಗೆ ಹಾಗೂ ಈ ಕೃತಿಗೊಂದು ಬೆಲೆಯುಳ್ಳ ಮುನ್ನುಡಿಯನ್ನು, ಬರೆದುಕೊಟ್ಟ ಡಾ.ಎಸ್. ವಿದ್ಯಾಶಂಕರ ಅವರಿಗೆ ನಮ್ಮ ಅನಂತ ವಂದನೆಗಳು ಸಲ್ಲುತ್ತವೆ. ಅದರಂತೆ ಮುದ್ರಣದ ನೆರಳಚ್ಚಿನ ಕಾರ್ಯವನ್ನು ನಿಷ್ಠೆಯಿಂದ ನೆರವೇರಿಸಿದ ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು ಅವರಿಗೆ ನಾವು ಋಣಿಯಾಗಿದ್ದೇವೆ.

ನಮ್ಮ ಈ ಚೊಚ್ಚಿಲ ಕೃತಿಯನ್ನು ಓದುಗರು ಕೊಂಡೋದಿ ಬೀದರ ಕನ್ನಡದ ಆಡುನುಡಿಯ ಮಹತ್ವವನ್ನು ಅರಿತುಕೊಂಡರೆ ಹಿರಿಯರಾದ ಶ್ರೀ ದೇಶಾಂಶ ಹುಡಗಿಯವರ ಪರಿಶ್ರಮವು ಸಾರ್ಥಕಗೊಂಡಂತೆ, ನಮ್ಮ ಪ್ರಕಾಶನಕ್ಕೂ ಗೌರವ ಬಂದಂತೆ ಎಂದು ನಂಬುತ್ತೇವೆ.

ವಾಲದೊಡ್ಡಿ
೨೭-೧೨-೨೦೧೦

ಶಂಭುಲಿಂಗ ವಾಲದೊಡ್ಡಿ
ಪ್ರಕಾಶಕರು

ಕೋಶಕಾರನ ಅಂತರಂಗ

ಬಿದರಿ ಕನ್ನಡ ನುಡಿಯು ಗುಂಡು ಸಿಡಿದಂತೆ ।
ಒಮ್ಮೊಮ್ಮೆ ಜುಳುಜುಳನೆ ಜಲವು ಹರಿದಂತೆ॥
ಈ ಕನ್ನಡೊಡಲಲ್ಲಿ ಹುಟ್ಟಿಹುದು ವಚನಾ ।
ಜಗವೆಲ್ಲ ಮಾಡುತಿದೆ ಹಗಲಿರುಳು ಮಥನಾ ॥

ಕನ್ನಡಕ್ಕಾಗಿ ಅಲೆದಾಡದ ಕಾಲಿದ್ದೇನು ಫಲ?
ಕನ್ನಡಕ್ಕಾಗಿ ಬರೆಯಲಾರದ ಕೈಯಿದ್ದೇನು ಫಲ?
ಕನ್ನಡಕ್ಕಾಗಿ ಹಾಡಲಾರದ ಬಾಯಿಯಿದ್ದೇನು ಫಲ?
ಕನ್ನದ ಮೇಲ್ಮೆ ಕಾಣದ ಕಣ್ಣಿದ್ದೇನು ಫಲ?
ಕನ್ನಡದ ಏಳ್ಗೆಗೆ ಕೈಗೂಡಿಸದ ಯಾರಿದ್ದೇನು ಫಲ?
ಕನ್ನಡದ ದಿಗಂಬರ ಕರಿಬಸವೇಶ್ವರ.

ಇದೊಂದು ಮಹತ್ಕೃತಿ. ಧರಿನಾಡು ಕನ್ನಡ ಕಂದನಿಂದ ಕನ್ನಡ ಭುವನೇಶ್ವರಿ ತಾಯಿಯ ಮುಡಿಗೊಂದು ಬಿದರಿ ಕನ್ನಡ ನಾಡಿನ ಸುಗಂಧ ಕುಸುಮದ ಅರ್ಪಣೆ. ಈ ಕೃತಿ ನಾನು ರಚಿಸಿದ್ದೆಂಬ ಕಾರಣಕ್ಕೆ ಮಹತ್ಕೃತಿಯಲ್ಲ. ಕೃತಿಯ ಮಹತ್ವವು ಅದರ ಅಂತರಂಗಕ್ಕೆ ಇಳಿದವರಿಗೆಲ್ಲ ತಪ್ಪದೆ ಮನನವಾಗುವುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಬಿಜಾಪುರ ನೆಲದಿಂದ ಬಂದ ಬಸವಣ್ಣ, ಚೆನ್ನಬಸವಣ್ಣ ಹಾಗೂ ಭಾರತದ ಅಂತೆಯೇ ವಿಶ್ವದ ಮೂಲೆಮೂಲೆಗಳಿಂದ ಬಂದ ೧೨ನೇ ಶತಮಾನದ ಅಂದಿನ ಶರಣರು ಕಲ್ಯಾಣ ಗಡ್ಡೆಯ ಈ ಬಿದರಿ ಕನ್ನಡದಲ್ಲಿಯೇ ತಮ್ಮ ವಚನಗಳನ್ನು ಹೆಣೆದು ವಿಶ್ವದ ದಾರ್ಶನಿಕರನ್ನೆಲ್ಲ ತಮ್ಮತ್ತ ಸೆಳೆದುದು ಗೊತ್ತಿರದ ವಿಷಯವೇನಲ್ಲ. ೧೨ನೇ ಶತಮಾನದ ನಂತರ ಕನ್ನಡದ ಮೇಲೆ ಮರಾಠಿ, ಉರ್ದು, ಹಿಂದಿ, ತೆಲುಗು, ಇಂಗ್ಲೀಷ್ ಮೊದಲಾದ ಆಡಳಿತ ಭಾಷಿಕರ ಪ್ರಭಾವದಿಂದಾಗಿ ಆಯಾ ಭಾಷೆಗಳ ಅನೇಕ ಮಾತುಗಳು ಕನ್ನಡಕ್ಕೆ ಸೇರಿಕೊಂಡು ಅದನ್ನು ಶ್ರೀಮಂತಗೊಳಿಸಿದವು. ಅಲ್ಲದೆ ಕನ್ನಡದಿಂದ ತಮ್ಮ ತಮ್ಮ ಭಾಷೆಗಳನ್ನು ಕೂಡಾ ಸಮೃದ್ಧಗೊಳಿಸಿಕೊಂಡವು.

ಆದರೆ ೧೯೫೦ರಿಂದ ಈಚೆಗೆ ಉದರಂಭರಣಕ್ಕಾಗಿ ಬೀದರ ಜಿಲ್ಲೆಗೆ ಬಂದು ಸೇರಿಕೊಂಡ ಕರ್ನಾಟಕದ ಇತರ ಜಿಲ್ಲೆಗಳ ಕನ್ನಡಿಗರು ಇಲ್ಲಿಯ ಕನ್ನಡ ಭಾಷೆಯ

ವಿಶಿಷ್ಟ ಪದಗಳನ್ನು ಆಯ್ದುಕೊಂಡು ಗೇಲಿಯಾಡುವುದೇ ತಮ್ಮ ಕಾಯಕ ಮಾಡಿಕೊಂಡರು. ಅಷ್ಟೇ ಅಲ್ಲ, ಇಲ್ಲಿಯ ನಮ್ಮ ಬಿದರಿ ಕನ್ನಡಿಗರು ಅವರೊಡನೆ ಕೈಹೊಡೆದು ಬಾಯಿ ತೆರೆದು ಖೊಳ್ಳೆಂದು ನಕ್ಕು ತಮ್ಮ ಗೇಲಿಯನ್ನು ತಾವೇ ಸ್ವಾಗತಿಸುವುದನ್ನು ಕಂಡೆನು, ಕೇಳಿದೆನು. ಇಂಥ ಸಂದರ್ಭಗಳು ನನ್ನನ್ನು ಬಹಳವಾಗಿ ಕದಡಿದವು, ಕಾಡಿದವು, ನೋಯಿಸಿದವು. ಅಂತರಂಗದಲ್ಲಿ ಮಾಯದ ಗಾಯವಾಗಿ ಪರಿಣಮಿಸಿದವು. ಈ ನೋವಿನ ಫಲವಾಗಿಯೇ ನನ್ನಲ್ಲಿ ಬಾಲ್ಯದಿಂದಲೇ ಬೀಡು ಬಿಟ್ಟಿದ ಈ ಬಿದರಿ ಕನ್ನಡ ಕೋಶವು ಬೀಜಗಟ್ಟಿ ಮೊಳಕೆಯೊಡೆಯಲು ಪ್ರಾರಂಭಿಸಿತು. ೧೧-೧೧-೧೯೬೭ರಿಂದ ಪ್ರಾರಂಭಗೊಂಡ ಈ ಬಿದರಿ ಆಡುನುಡಿ ಸುಮಾರು ೧೪ ವರ್ಷಗಳೊಳಗೆ ಮುಕ್ತಾಯಗೊಂಡಿತು. ಕೋಶ ರಚನೆಯೊಂದಿಗೆ ಕೋಶದ ಶುದ್ಧ ಪ್ರತಿ ರಚನೆಯ ಕಾರ್ಯವು ಕೂಡಾ ಅದರ ಹಿಂದೆ ಹಿಂದೆಯೇ ಹೆಜ್ಜೆ ಇಡುತ್ತಾ ಅದೇ ತಿಂಗಳಲ್ಲಿಯೇ ಮುಕ್ತಾಯಗೊಂಡಿತು.

ಬೀದರ ಕನ್ನಡ ಕೋಶವು ಬರಿಯ ಪದಾರ್ಥ ವಿವರಣೆಯಾಗಿಲ್ಲ. ಅದು ಕನ್ನಡ, ಮರಾಠಿ, ತೆಲುಗು, ಉರ್ದು, ಹಿಂದಿ, ಇಂಗ್ಲಿಷ್ ಮೊದಲಾದವುಗಳ ಕಲಸು-ಮೇಲೋಗರವಾಗಿದೆ. ಅದು ಬಿದರಿ ಧಪಾಟಿಯಂತೆ ಬಲು ಸ್ವಾದಿಷ್ಟವಾಗಿದೆ. ಈ ಕೋಶದಲ್ಲಿ ಬೀದರ ಜಿಲ್ಲೆಯ ಆಡುಕನ್ನಡದ ಅರ್ಥವಡಗಿದೆ. ಸಾಹಿತಿ, ಸಂತರು, ಶರಣರು, ತತ್ವಪದಕಾರರು, ಕವಿಗಳು, ವಚನಕಾರರು ಮೊದಲಾದವರ ಪರಿಚಯದಿಂದಲೂ ಕೂಡಿದೆ. ತೀರ್ಥ ಕ್ಷೇತ್ರಗಳು, ಮಠ-ಮಸೀದಿಗಳು, ಐತಿಹಾಸಿಕ ಸ್ಥಳಗಳು ಕೂಡಾ ತಮಗಾಗಿ ಸ್ಥಾನವನ್ನು ಇರಿಸಿಕೊಂಡಿವೆ. ಜಾನಪದ ಹಾಡು, ಸಾಂಪ್ರದಾಯಿಕ ಹಾಡುಗಳು, ಆಣಿಪೀಣಿ ಹಾಡುಗಳು, ಗಾದೆಗಳು, ಒಗಟುಗಳು, ಒಡಬುಗಳು, ದೊಡ್ಡಾಟದ ಮಾತುಗಳು, ವಚನಗಳು, ತತ್ವಪದಗಳು, ಮದುವೆ-ಸೋಬಾನೆ-ತೊಟ್ಟಿಲುಗಳ ಹಾಡುಗಳು, ಗೀಗೀ ಪದಗಳು, ಭುಲಾಯಿ ಹಾಡುಗಳು, ವಚನಗಳು, ತತ್ವ ಪದಗಳು, ಶಿಶು ಪ್ರಾಸಗಳು ಜಾನಪದ ಪ್ರಾಸಗಳು, ಬೈಗಳು ಇತ್ಯಾದಿಗಳೆಲ್ಲ ಈ ಕೋಶದಲ್ಲಿ ತಮಗಾಗಿ ಅವಕಾಶವನ್ನು ಗಿಟ್ಟಿಸಿಕೊಂಡಿವೆ. ಈ ಕೋಶದ ವೈಶಿಷ್ಟ್ಯ ಇದರದೇ ಆಗಿದೆ. ಇದಕ್ಕೆಲ್ಲ ಮಾರ್ಗದರ್ಶಿ ಕಿಟ್ಟೆಲ್ ಕೋಶವೇ ಆಗಿದೆ. ಆದರೂ ಈ ಕೋಶ ಸಂಪೂರ್ಣವಲ್ಲ. ಜಗತ್ತಿನ ಯಾವುದೇ ಭಾಷಾಕೋಶವು ಎಂದೂ ಪರಿಪೂರ್ಣವಲ್ಲ. ಒಂದು ಜೀವಂತ ಭಾಷೆಗೆ ವಿಶ್ವದ ನಾನಾ ಭಾಷಾ ಮೂಲದ ಪದಗಳು ಸೇರುತ್ತ ಅದು ಬೆಳೆಯುತ್ತಲೇ ಇರುತ್ತದೆಂದು ನನ್ನ ನಂಬುಗೆ. ಪ್ರಾಜ್ಞರು ಈ ಬೀದರ ಕನ್ನಡ ಕೋಶವನ್ನೂ ನಿರಂತರ ಬೆಳೆಸುವರೆಂದು ನಂಬುತ್ತೇನೆ.

ನಾನು ನನ್ನ ಬಾಲ್ಯದಿಂದಲೂ ಕನ್ನಡದ ಅಭಿಮಾನಿ. ಹಾಗೆಂದ ಮಾತ್ರಕ್ಕೆ ನಾನು ಇತರ ಭಾಷೆಗಳ ದ್ವೇಷಿ ಎಂದಂತಲ್ಲ. ನನಗೆ ಹಿಂದಿ, ಮರಾಠಿ, ಉರ್ದು, ಇಂಗ್ಲೀಷ್

ಅತಿ ಮೆಚ್ಚಿನ ಭಾಷೆಗಳಾಗಿವೆ. ಆದರೆ ನನಗೆ ಕನ್ನಡವು ಆದ್ಯ ನುಡಿಯಾಗಿದೆ. ಅದರಿಂದಾಗಿ ನಾನು ಶಾಲೆಯಲ್ಲಿ ಉರ್ದು ಪ್ರಾರ್ಥನೆಯನ್ನು ಹೇಳದ ಕಾರಣ ನನ್ನ ಸಹಪಾಠಿಗಳಿಂದ ಥಳಿಸಿಕೊಂಡಿದ್ದೇನೆ. ಮುಖ್ಯ ಅಧ್ಯಾಪಕರಿಂದ ಏರುಗಟ್ಟಿಸಿ ಹೊಡೆಯಿಸಿಕೊಂಡಿದ್ದೇನೆ. ಅಷ್ಟೇ ಅಲ್ಲ, ಮರಾಠಿ ಬೋಧಕರಿಂದ ವೈರತ್ವವನ್ನು ಕಟ್ಟಿಕೊಂಡಿದ್ದೇನೆ. ಆದರೆ ನನ್ನ ಆ ಮರಾಠಿ ಗುರುಗಳು ತಾವು ತಿರಸ್ಕರಿಸಿದ ಕನ್ನಡವನ್ನು ನನ್ನಿಂದಲೇ ಕಲಿತುಕೊಂಡು ತಮ್ಮ ವಾರ್ಷಿಕ ಬಡತಿಯನ್ನು ಪಡೆಯುವುದು ಅನಿವಾರ್ಯವಾಯಿತು.

ನಾನು ಚಿಕ್ಕವನಿರುವಾಗಲೇ ಅಂದರೆ ಐದನೆಯ ವರ್ಗದಲ್ಲಿ ಓದುವಾಗಲೇ ಮೊಟ್ಟಮೊದಲನೆಯದಾಗಿ ಕಿಟ್ಟೆಲ್ ಕನ್ನಡ-ಇಂಗ್ಲಿಷ್ ಕೋಶವನ್ನು ಕಂಡೆನು. ಅದು ಲಿಂಗೈಕ್ಯ ಶಾಮರಾವ ಪಾಟೀಲ್ ಬೋರಂಪಳ್ಳಿ ಇವರ ಕೃಪೆಯಿಂದ. ಶಾಮರಾವ ಪಾಟೀಲ್‌ರು ನನ್ನ ಮೇಲಿನ ವಾತ್ಸಲ್ಯದಿಂದ ಆ ಕೋಶವನ್ನು ನನಗೆ ಕೊಟ್ಟರು. ಅಂದಿನಿಂದಲೇ ನಾನು ಕನ್ನಡ ಕೋಶ ಪ್ರೇಮಿಯಾದೆ ಎಂಬುದು ಸುಳ್ಳಲ್ಲ.

ನನ್ನ ತಾಯಿ ಭೀಮಾಬಾಯಿ ಮತ್ತು ತಂದೆ ಶರಣಪ್ಪ ದೇವರಾಯರು ಕನ್ನಡ ಆಡುನುಡಿಯ ಶ್ರೀಮಂತಿಕೆಯ ವಾರಸುದಾರರು. ಅವರ ಮಾತು ಮಾತಿನಲ್ಲಿ ಕನ್ನಡ ಕೆಚ್ಚು ಉಕ್ಕಿ ಬರುತ್ತಿತ್ತು. ಬಾಲ್ಯದಲ್ಲಿ ನಾನು ಕೇಳಿದ ಅವರಿಬ್ಬರ ಮಾತುಗಳು, ಹಾಡುಗಳು, ನಾಮಾವಳಿಗಳು, ವಚನಗಳು, ಭಜನೆಗಳು ಇತ್ಯಾದಿಗಳೆಲ್ಲ ನನ್ನ ಈ ಕೋಶಕ್ಕೆ ಭಾಂಡವಲಾಗಿ ಒದಗಿಬಂದಿವೆ. ನಾನು ನನ್ನ ಕಿವಿಗಳನ್ನು ಬಾಲ್ಯದಿಂದಲೂ ಬಹಳ ಜಾಗೃತವಾಗಿ ಇಟ್ಟುಕೊಂಡಿದ್ದೇನೆ. ನನ್ನ ಕಿವಿಯಲ್ಲಿ ಬಿದ್ದ ಪ್ರತಿ ಹೊಸ ಪದವು ನನ್ನ ಮೆದುಳಿನ ಕೋಶದಲ್ಲಿ ಅಳಿಯದೆ ಉಳಿಯುವಂತೆ ಮಾಡಿದ್ದೇನೆ. ಯಾವಾಗಲೂ ನನ್ನ ಜೊತೆಯಲ್ಲಿ ಟಿಪ್ಪಣಿ ಪುಸ್ತಕವನ್ನಿಟ್ಟುಕೊಂಡು ಅದರಲ್ಲಿ ದಾಖಲಿಸುತ್ತಾ ಹೋಗಿದ್ದೇನೆ. ಹೊರಗಿನಿಂದ ಬಂದ ಕೂಡಲೆ ಮನೆಯಲ್ಲಿರಿಸಿದ ನಾಲ್ಕುನೂರು ಪುಟದ ರಜಿಸ್ಟರಿನಲ್ಲಿ ರಾಶಿಯೊಟ್ಟಿದ್ದೇನೆ. ಆಮೇಲೆ ಅ ದಿಂದ ಳ ದವರೆಗೆ ಅಕಾರಾದಿಯಾಗಿ ಬರೆದು ಹೊಂದಿಸಿದ್ದೇನೆ. ಹೀಗೆ ಮೂರು ರಜಿಸ್ಟರುಗಳಲ್ಲಿ ಕೋಶವನ್ನು ದಾಖಲಿಸಿದ್ದೇನೆ. ಸಂಗ್ರಹಕಾರ್ಯ ನಡೆಯುತ್ತಿದ್ದಂತೆಯೇ ಶುದ್ಧ ಹಸ್ತಪ್ರತಿಯನ್ನು ತಯಾರಿಸುವ ಕಾರ್ಯವನ್ನು ಜೊತೆಜೊತೆಗೆಯೇ ನಡೆಯಿಸಿಕೊಂಡು ಬಂದಿದ್ದೇನೆ. ಈ ಕೋಶಕಾರ್ಯವು ಮಂಗಳಗೊಳ್ಳಲು ೧೪ ವರ್ಷಗಳು ಬೇಕಾದವು. ಯಾರಿಗೆ ಯಾವ ತಪಸ್ಸಿನಲ್ಲಿ ಆಸಕ್ತಿ ಇದೆಯೋ ನಾನರಿಯಲಾರೆ. ಆದರೆ ಬೀದರ ಕನ್ನಡ ಕೋಶವನ್ನು ಪೂರ್ತಿಗೊಳಿಸುವುದೇ ನನ್ನ ತಪಸ್ಸೆಂದು ನಾನು ಬಗೆದಿದ್ದೇನೆ.

ಈ ಕೋಶ ರಚನೆಯಲ್ಲಿ ರೆ.ಎಫ್. ಕಿಟ್ಟೆಲ್‌ರವರ ಕನ್ನಡ-ಇಂಗ್ಲಿಷ್ ಡಿಕ್ಷನರಿ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟು, ಗುರುನಾಥ ಜೋಶಿಯವರ

ಕನ್ನಡ ಕನ್ನಡ ಶಬ್ದಕೋಶ, ಹೊಸ ದಿಲ್ಲಿಯ ಕಮಲ ಪ್ರಕಾಶನದ ಮಾನಕ ಹಿಂದಿ ಶಬ್ದಕೋಶ, ನನ್ನ ಸಂಪಾದನೆಗಳಾದ ಧರಿನಾಡಿನ ಜಾನಪದ ಒಗಟುಗಳು, ಧರಿನಾಡಿನ ಜಾನಪದ ಗಾದೆಗಳು, ಡಾಕ್ಟರ್ ರಾಜೇಂದ್ರ ಯರನಾಳೆಯವರ ಬೀದರ ಜಿಲ್ಲೆಯ ಬೈಗುಳ, ಶಿರೋಮಣಿ ತಾರೆಯವರ ಜನಪದ ಗಾದೆಗಳು, ಎಚ್. ಕಾಶೀನಾಥ ರೆಡ್ಡಿಯವರ ಸಂಪಾದನೆಗಳು ಇತ್ಯಾದಿಗಳ ಸಹಾಯವನ್ನು ಪಡೆದಿದ್ದೇನೆ. ಅವರಿಗೆಲ್ಲ ನಾನು ಅನಂತ ಋಣಿಯಾಗಿದ್ದೇನೆ.

ಈ ಕೋಶದ ಮುದ್ರಣಾಲಯ ಪ್ರತಿಯನ್ನು ಅಂದರೆ ಶುದ್ಧ ಪ್ರತಿಯನ್ನು ಸಿದ್ಧಗೊಳಿಸುವಾಗ ಹಾಗೂ ಕರಡುಪ್ರತಿಯನ್ನು ತಿದ್ದುವಾಗ, ಲಿಪಿ ಕಾರ್ಯದಲ್ಲಿ ಮತ್ತು ವಾಚನ ಕಾರ್ಯದಲ್ಲಿ ನನ್ನ ಮಗಳಾದ ಕನ್ಯಾಕುಮಾರಿ ಜಗನ್ನಾಥ ಮೂಲಗೆ, ಮೊಮ್ಮಗಳಾದ ಚೆನ್ನಶ್ರೀ ಜಗನ್ನಾಥ ಮೂಲಗೆ, ಮೊಮ್ಮಗನಾದ ಸಂಗಮೇಶ ರವಿಶಂಕರ ದೇವರಾಯ, ಬಸವರಾಜ ಲಾಲಾ ಕಣಜಿ, ಜಗನ್ನಾಥ ಭದ್ರಪ್ಪ ಕಟ್ಟೆ ಮೊದಲಾದವರು ತಮ್ಮ ಅಮೂಲ್ಯ ಸಮಯ ಹಾಗೂ ಶ್ರಮವನ್ನು ಧಾರೆಯೆರೆದಿದ್ದಾರೆ. ಅವರೆಲ್ಲರಿಗೂ ನಾನು ಚಿರಂತನ ಋಣಿಯಾಗಿದ್ದೇನೆ.

ನಾನು ಕೋಶಕಾರನಲ್ಲ; ವ್ಯಾಕರಣಕಾರನಲ್ಲ; ಭಾಷಾಶಾಸ್ತ್ರಜ್ಞನೂ ಅಲ್ಲ. ನಾನು ಕೇವಲ ಧರಿನಾಡು ಕನ್ನಡದ ಅಭಿಮಾನಿ. ಈ ಅಭಿಮಾನವೇ ನನ್ನನ್ನು ಈ ದೀರ್ಘ ಪರಿಶ್ರಮದ ಕೃತಿಯನ್ನು ಹೊರತರಲು ನಿರಂತರ ಪ್ರೇರೇಪಿಸಿ ದುಡಿಯಲು ತೊಡಗಿಸಿದೆ, ದುಡಿಸಿಕೊಂಡಿದೆ. ಈ ನನ್ನ ಅಭಿಮಾನಕ್ಕೆ ನಾನು ಕೃತಜ್ಞನಾಗಿದ್ದೇನೆ. ಈ ಕೋಶದಲ್ಲಿಯ ಲೋಪದೋಶಗಳಿಗೆ ಜ್ಞಾನಿಗಳು ಸೂಚಿಸುವ ಸಲಹೆ, ಸಹಕಾರ, ತಿದ್ದುಪಡಿಗಳಿಗೆ ನಾನು ನತಮಸ್ತಕನಾಗಿ ಸ್ವಾಗತಿಸುತ್ತೇನೆ.

ಈ ಅವಧಿಯಲ್ಲಿ ನಾನು ತೀವ್ರ ಹೃದಯಾಘಾತಕ್ಕೆ ಒಳಗಾಗಿ ಅನೇಕ ಕಷ್ಟಗಳನ್ನು ಅನುಭವಿಸಿದೆ. ಕಿವಿ ಬೇನೆ, ಹರ್ನಿಯಾ ಬೇನೆ, ಅತಿಮೂತ್ರ ಬೇನೆ, ಸಕ್ಕರೆ ಬೇನೆ ಇತ್ಯಾದಿಗಳಿಗೆ ಬಲಿಯಾಗಿ ಹೊರಬಂದಿದ್ದೇನೆ. ನನ್ನ ಧರ್ಮಪತ್ನಿ ಮಹಾದೇವಿ ದೇವರಾಯ ಹೃದಯಾಘಾತಕ್ಕೆ ಒಳಗಾಗಿ ಶಸ್ತ್ರ ಚಿಕಿತ್ಸೆಗಾಗಿ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಬಳಲುತ್ತಿದ್ದಾಳೆ. ನನ್ನ ಮಗಳ ಹಾಳುಗೊಂಡ ಬಾಳಿನ ಕಷ್ಟಸಾಗರದಲ್ಲಿ ದಂಪತಿಗಳಿಬ್ಬರೂ ಮುಳುಮುಳುಗಿ ಎದ್ದಿದ್ದೇವೆ. ಇಂಥ ಎಷ್ಟೋ ಕಷ್ಟಗಳು ರಾಶಿರಾಶಿಯಾಗಿ ಬಂದರೂ ಅವುಗಳನ್ನೆಲ್ಲ ಆಚೆ ತಳ್ಳಿ ಅಭಿಮಾನದಿಂದ ಈ ಕಾರ್ಯವನ್ನು ನೆರವೇರಿಸಿದ್ದೇನೆ.

ಒಂದು ಮಾತು ಇಲ್ಲಿ ಹೇಳಲೇಬೇಕು: ಬೀದರ ಕನ್ನಡ ಕೋಶ ಇದು ನನ್ನ ಪ್ರಥಮ ಪ್ರಯತ್ನ. ಬದುಕಿದ್ದರೆ ಮತ್ತೆ ಸಾವಿರಾರು ಪದಗಳನ್ನು ಬೀದರ ಕನ್ನಡ ನೆಲದಿಂದ ಹೆಕ್ಕಿತೆಗೆದು ಈ ಕೋಶಕ್ಕೆ ಸೇರಿಸುತ್ತೇನೆ. ಬೀದರ ಕನ್ನಡವು ತನ್ನ ಉದರದಲ್ಲಿ ಅನೇಕ

ಹಳಗನ್ನಡ ಪದಗಳಿಗೆ ಪೋಷಣೆ ಕೊಟ್ಟು ಕಾಪಾಡುತ್ತಾ ಬಂದಿದೆ. ಅವು ಅಗಣಿತ ಸಂಖ್ಯೆಯಲ್ಲಿ ಇವೆ. ಅವುಗಳು ಈ ಕೋಶದೊಳಗೆ ಕಣ್ಣಾಡಿಸಿದವರಿಗೆ ಕಾಣದೆ ಇರಲಾರವು. ನನ್ನ ಈ ಪರಿಶ್ರಮಕ್ಕೆ ಧರ್ಮಗುರು ಬಸವಣ್ಣ, ದೀಕ್ಷಾಗುರು ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು ಮತ್ತು ದಿಗಂಬರ ಕರಿಬಸವೇಶ್ವರರ ಆಶೀರ್ವಾದಬಲವೇ ಕಾರಣವೆಂದು ಹೇಳುತ್ತೇನೆ. ಅವರ ಅಡಿದಾವರೆಗಳಲ್ಲಿ ನಾನು ನತಮಸ್ತಕನಾಗಿದ್ದೇನೆ.

ಕೋಶ ರಚನೆಯ ಹಿಗ್ಗು ನನ್ನಲ್ಲಿ ಕಂಡರೂ ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರ "ಚೆನ್ನಬಸವ ಚರಿತೆ" ಮಹಾಕಾವ್ಯವನ್ನು ಪ್ರಕಟಿಸಿಯೇ ಸಾಯುವ ಸಂಕಲ್ಪ ಹೊಂದಿದ್ದೇನೆ. ಈಸಂಕಲ್ಪವನ್ನು ನೆರವೇರಿಸುವುದು ಆ ಸರ್ವಶಕ್ತನಿಗೆ ಬಿಟ್ಟಿದ್ದು. ನಾನು ಕೇವಲ ನಿಮಿತ್ಯ ಮಾತ್ರ. ಕಾರಣೀಭೂತನು ಆತನೇ.

ಈ ಕನ್ನಡ ಕಾರ್ಯದಲ್ಲಿ ಸಹಾಯಹಸ್ತ ಚಾಚಿದವರು ವಾಲದೊಡ್ಡಿ ಗ್ರಾಮದ ಶಶಿ ಪ್ರಕಾಶನದ ಶ್ರೀ ಶಂಭುಲಿಂಗ ವಾಲದೊಡ್ಡಿಯವರು. ಕನ್ನಡ ಸೇವಕನಾದ ನಾನು ಸಿರಿ ಸಂಪತ್ತಿನಿಂದ ಸಾವಿರ ಕಿಲೋಮೀಟರ್ ದೂರದವನು. ಈ ಕೊರತೆಯನ್ನು ನೀಗಿಸಿದ ಈ ಪ್ರಕಾಶಕರಿಗೆ ನನ್ನ ಸಾವಿರ ಸಾವಿರ ನಮನಗಳು. ಮುನ್ನುಡಿ/ ಬೆನ್ನುಡಿಕಾರರಾದ ವಿದ್ಯೆಯ ಗಿರಿಯಾದ ಪ್ರೊ. ವಿದ್ಯಾಶಂಕರರವರ ಆಶೀರ್ವಾದಕ್ಕೆ ನಾನು ಶಿರಬಾಗುತ್ತೇನೆ.

ಮುದ್ರಣಕಾರರು ಎಂಥವರು ಸಿಗುತ್ತಾರೋ ಏನೋ ಎಂದು ಚಿಂತಾತುರನಾದ ನನ್ನ ಚಿಂತೆಗೆ ಪರಿಹಾರ ಒದಗಿಸಿದವರು ಸ್ನೇಹಾ ಪ್ರಿಂಟರ್ಸ್ ಬೆಂಗಳೂರಿನ ಮಾಲೀಕರಾದ ಚಿರಂಜೀವಿಗಳಾದ ವಿ. ಮಹೇಶ್ ಮತ್ತು ವಿ. ಕಾರ್ತಿಕ್‌ರವರು. ಅಲ್ಲದೆ ಅವರ ಮುದ್ರಣಾಲಯದ ನೆರಳಚ್ಚುಗಾರರಾದ ವರ್ಷಿಣಿ ಗ್ರಾಫಿಕ್ಸ್‌ರವರು. ಒಟ್ಟಾರೆ ಎಚ್ಚರ ವಹಿಸಿ ಸುಂದರ ಮುದ್ರಣವನ್ನು ನೆರವೇರಿಸಿಕೊಟ್ಟ ಅವರಿಗೆಲ್ಲ ನನ್ನ ಹಾರ್ದಿಕ ವಂದನೆಗಳು ಸಲ್ಲುತ್ತವೆ.

ಕೋಶ ರಚನೆಯ ಅವಧಿಯಲ್ಲಿ ಮಕ್ಕಳಾದ ರಾಜಶೇಖರ, ರವಿಶಂಕರ, ಕಾವೇರಿ, ಜಯಶಂಕರ, ಕನ್ಯಾಕುಮಾರಿ, ಬಸವರಾಜ ಹಾಗೂ ಸೊಸೆಯಂದಿರಾದ ಶಾರದಾ, ಸವಿತಾ, ಶಾಂತಾ, ಸರಿತಾ ಮೊದಲಾದವರೆಲ್ಲ ನಿರಂತರ ಸೇವೆ ಸಲ್ಲಿಸುವ ಮೂಲಕ ನನ್ನನ್ನು ಕಾಪಾಡಿದ್ದಾರೆ. ನನ್ನ ಆರೋಗ್ಯದ ಮತ್ತು ಸಾಹಿತ್ಯಕ ದುಡಿಮೆಯ ಮೂಲಗುಟ್ಟು ನನ್ನ ಸೌಭಾಗ್ಯವತಿಯಾದ ಮಹಾದೇವಿ ದೇವರಾಯ (ಮಾದು). ಎಲ್ಲರಿಗೂ ನಾನು ಅನಂತ ಋಣಿ. ಈ ಅವಕಾಶ ಒದಗಿಸಿದ ಆ ಕರ್ತನಿಗೂ ನಾನು ನಿರಂತರ ನತಮಸ್ತಕನು.

ಅಲ್ಲಮಪ್ರಭುನಗರ, ಬೀದರ — ದೇಶಾಂಶ ಹುಡಗಿ


೨೭-೧೨-೨೦೧೦

ಸಂಕೇತಗಳು

ಸಂ.	ಸಂಸ್ಕೃತ
ಮ.	ಮರಾಠಿ
ತೆ.	ತೆಲುಗು
ಇಂ.	ಇಂಗ್ಲಿಷ್
ಹಿಂ.	ಹಿಂದಿ
ಉ.	ಉರ್ದು
ಉದಾ.	ಉದಾಹರಣೆ
(ನಾ)	ನಾಮಪದ
(ಸ)	ಸರ್ವನಾಮ
(ಕ್ರಿ)	ಕ್ರಿಯಾಪದ
(ಕ್ರಿವಿ)	ಕ್ರಿಯಾ ವಿಶೇಷಣ
(ವಿ)	ವಿಶೇಷಣ
(ಗು)	ಗುಣವಾಚಕ
(ಅ)	ಅವ್ಯಯ
(ನು)	ನುಡಿಗಟ್ಟು
(ನಿ)	ನಿಷೇದಾರ್ಥ

ಪ್ರತಿ ಅರ್ಥದ ನಂತರ ಅರ್ಧವಿರಾಮವನ್ನು ಬಳಸಲಾಗಿದೆ. ಅರ್ಥವಿವರಣೆಯ ಕೊನೆಯಲ್ಲಿ ಪೂರ್ಣವಿರಾಮ, ಉದ್ಗಾರವಾಚಕ, ಪ್ರಶ್ನಾರ್ಥಕ ಚಿನ್ಹೆಗಳನ್ನು ಬಳಸಲಾಗಿದೆ. ಗಾದೆ, ಭಜನೆ, ಹಾಡು, ಒಗಟು, ಒಡಬು, ಶಿಶುಪ್ರಾಸ, ಜಾನಪದ ಪ್ರಾಸ ಇತ್ಯಾದಿಗಳನ್ನು ಉದಾಹರಣೆಗಾಗಿ ಬಳಸುವಾಗ ( ) ಕಂಸಗಳಲ್ಲಿ ಕೊಡಲಾಗಿದೆ. ನಾನು ನಿಘಂಟುಕಾರನಲ್ಲ. ನನ್ನ ಸಾಮರ್ಥ್ಯದ ವ್ಯಾಪ್ತಿಯಲ್ಲಿ ಪದಾರ್ಥ ವಿವರಣೆಯನ್ನು ಮಾತ್ರ ಈ ಕೋಶದಲ್ಲಿ ಕೊಟ್ಟಿರುತ್ತೇನೆ.

ಸಮರ್ಪಣೆ



ಈ ಕೋಶವನ್ನು ಕನ್ನಡ ಇಂಗ್ಲಿಷ್
ಪ್ರಥಮ ನಿಘಂಟುಕಾರರಾದ
ರೆ.ಎಫ್. ಕಿಟ್ಟೆಲ್ ಅವರಿಗೆ
ಗೌರವಪೂರ್ವಕ
ಸಮರ್ಪಿಸಲಾಗಿದೆ.

– ದೇಶಾಂಶ ಹುಡಗಿ

ಅ

ಅ(ಅ) = ತಿರಸ್ಕಾರ ಇಲ್ಲವೆ ಪುರಸ್ಕಾರ ಸೂಚಕ ಸ್ವರ

ಅS = ತಿರಸ್ಕಾರ ಇಲ್ಲವೆ ಪುರಸ್ಕಾರ ಸೂಚಕ ಸ್ವರ.

ಅಂಕಣಿ (ನಾ) = ಕಾಳುದುರಿದ ತೆನೆ; ಹಂತಿ ತುಳಿಸಿದ ತೆನೆ.

ಅಂಕಣಿರಾಶಿ (ನಾ) = ಮರಳಿಹಂತಿ ಕಟ್ಟಿ, ತುಳಿಸಿ, ರಾಶಿ ಮಾಡುವಿಕೆ.

ಅಂಕಲ್ (ನಾ)ಇಂ. = ಚಿಕ್ಕಪ್ಪ; ದೊಡ್ಡಪ್ಪ; ಚಿಕ್ಕ ಸೋದರ ಮಾವ;

ದೊಡ್ಡ ಸೋದರಮಾವ.

ಅಂಕಲಿಪಿ (ನಾ)ಸಂ = ಮಗ್ಗಿ ಮತ್ತು ವರ್ಣಮಾಲೆ ಪುಸ್ತಕ.

ಅಂಕಾಡೊಂಕಾ (ದ್ವಿ) = ಅಡ್ಡತಿಡ್ಡ.

ಅಂಕಿನಪರದಿ = ನಾಟಕದ ಒಂದು ಭಾಗ ಮುಗಿದ ಕೂಡಲೆ ಬೀಳುವ ಪರದೆ.

ಅಂಕು (ನಾ) = ಅಂಕ; ನಾಟಕದ

ಒಂದು ಭಾಗ.

ಅಂಕುಸು (ನಾ) = ಅಂಕುಶ; (ಗಾದೆ :-ಆನಿಗಿ ಅಂಕುಸೇ ಹಣುಸ್ತಾದ ; ಆನಿ ಆಂಜಾದು ಅಂಕುಸ್ಕ)

ಅಂಗಡಿ (ನಾ) = ಸಂತೆ; ದುಕಾನು; ಮಾರಾಟ ಕೇಂದ್ರ.

ಅಂಗಡಿಘುಂಬು (ಕ್ರಿ) = ಸಂತೆನೆರೆ.

ಅಂಗನವಾಡಿ (ನಾ) = ಶಿಶುಕೇಂದ್ರ; ಶಿಶುಗಳ ಶಾಲೆ.

ಅಂಗಾಡ = ಅನಗಾಡ; ಬಹಳ

ಅಂಗಾಡಂಗಾ ಮಾಡು(ನು) = ಹಿಂದೆ ಮುಂದೆ ನೋಡು; ಅನುಮಾನಪಡು; ಮೈಗಳ್ಳತನ ಮಾಡು.

ಅಂಗಾತ (ನಾ) = ಮೇಲ್ಮೊಗವಾಗಿ ಮಲಗುವಿಕೆ; ಬೆನ್ನು ಕೆಳಗಾಗಿ ಮಲಗುವಿಕೆ; ಕುಸ್ತಿಯಲ್ಲಿಮೇಲ್ಮೊಗವಾಗಿ ಬೀಳುವಿಕೆ (ಉದಾ: ಅಂಗಾತಬಿದ್ದು ಬರ್ಿನಾಸೋತಿಲ್ಲಂತಂತ!)

ಅಂಗಾರ (ನಾ) = ಬೆಂಕಿ; ಧೂಪಾರತಿ ಅಗ್ಗಿಯ ಕುಂಡದಲ್ಲಿಯ ಬೂದಿ (ಭಜನೆ: ಕರಬಸಪ್ಪನ ಅಂಗಾರಾ, ದೇಶಾಕೆಲ್ಲಾ ಭಂಗಾರಾ); ಕಿಚ್ಚು.

ಅಂಗಾಲ್ = ಅಂಗಾಲು; ಪಾದದ ಕೆಳಭಾಗ (ಉದಾ: ಅಂಗಾಲ್ದಿಡ್ದು ನಣ್ಣತ್ತಿ ತನಕಾ ಉರಿ = ಕೋಪಮಿತಿಮೀರು)

ಅಂಗಾಲ್ಬಳಿ (ನಾ) = ಪಾದದ ಚೆಲುವು, ಅಡಿಯ ಸೌಂದರ್ಯ.

ಅಂಗಾಲ್ನೆಕ್ಕು (ಕ್ರಿ) = ಗುಲಾಮನಾಗು; ಹೇಳಿದ್ದು ಕೇಳು.

ಅಂಗಿ (ನಾ) = ಗಂಡಸರು ತೊಡುವ ಮೇಲುಡುಪು.

ಅಂಗುಳ್ (ನಾ) = ನಾಲಗೆಯ ಮೇಲು ಹರವು; ಓಷ್ಟ್ಯ; ಮನೆ ಮುಂದಿನ ಬಯಲು.

ಅಂಗೂರು (ನಾ) = ದ್ರಾಕ್ಷಿ

ಅಂಗೈ (ನಾ) = ಕೈ ತುದಿಯ ಒಳಭಾಗ (ಗಾದೆ : ಅಂಗೈ ತೋರ್ಸಿ ಅವಖಳಿ ಅನುಸ್ಗೊಂಡ್ರು).

ಅಂಗೋಠಾ (ನಾ) ಹಿಂ. = ಹೆಬ್ಬೆರಳು.

ಅಂಗೋಠಾ ಛಾಪ್ (ನಾ) ಹಿಂ. = ಹೆಬ್ಬೆರಳೊತ್ತುವವ,ಅನಕ್ಷರಸ್ಥ;ಹೆಬ್ಬೆಟ್ಟಿನ ಗೆಳೆಯ/ಗೆಳತಿ.

ಅಂಗೋಠಾಭಾದೂರ (ನಾ) = ಹೆಬ್ಬೆಟ್ಟೊತ್ತುವ ವೀರ.

ಅಂಗ್ಠಿ = ಬೆರಳಿನುಂಗುರ

ಅಂಗ್ಡಿ (ನಾ) = ಅಂಗಡಿ; ಸಂತೆ;ದುಕಾನು.

ಅಂಗ್ರೇಜ (ನಾ) ಇಂ. = ಆಂಗ್ಲ; ಫಿರಂಗಿ

ಅಂಗ್ರೇಜಿ (ನಾ) ಇಂ = ಆಂಗ್ಲಭಾಷೆ; ಇಂಗ್ಲಿಷು.

ಅಂಗ್ಲ = ಅಂಗಲ; ಬಿಡಿಬಿಡಿ; ಅಗಲಗಲ್ಲ; ದೂರದೂರ.

ಅಂಗ್ಳ (ನಾ) = ಅಂಗಳ; ಮನೆಮುಂದಿನ ಬಯಲು (ಗಾದೆ-ಮನಿ ಖಳಿ ಅಂಗ್ಳೇ ಹೇಳ್ತಾದ).

ಅಂಚನಾ (ನಾ) = ಅಂದಾಜು; ಸುಮಾರು.

ಅಂಚನಾಕಟ್ಟು (ಕ್ರಿ) = ಅಂದಾಜು ಕಟ್ಟು.

ಅಂಚಿ (ನಾ) = ಸೀರೆ, ಧೋತರ, ಶೆಲ್ಲೆ, ರುಮಾಲುಗಳ ಕೊನೆಯ ತುದಿ; ಬಟ್ಟೆಯ ಕೊನೆಯ ಭಾಗ.

ಅಂಚು (ನಾ) = ಅಂಚಿ (ನೋಡಿರಿ).

ಅಂಚುಕಟ್ಟು (ಕ್ರಿ) = ಕೌದಿ, ಕಂಬಳಿ, ಜಮಖಾನೆಗಳಿಗೆ ಗೋಟು ಕಟ್ಟು; ಕರಿಕಟ್ಟು.

ಅಂಜನ (ನಾ) = ನೆಲದಲ್ಲಿರುವ ನಿಧಿಯನ್ನು ಕಂಡು ಹಿಡಿಯುವವನು ಹಚ್ಚಿಕೊಳ್ಳುವ ಕಾಡಿಗೆ (ವಚನ : ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋರಿರಯ್ಯಾ -ಬಸವಣ್ಣನವರು)

ಅಂಜಾನಾ (ನಾ) ಹಿಂ. = ಗೊತ್ತಿಲ್ಲದವನು; ಅಪರಿಚಿತ.

ಅಂಜಾಮು (ನಾ) ಹಿಂ. = ಪರಿಣಾಮ

ಅಂಜಿಕಿ (ನಾ) = ಅಂಜಿಕೆ.

ಅಂಜು (ಕ್ರಿ) = ಭಯಪಡು.

ಅಂಜುಬುರುಕ (ನಾ) = ಭಯ ಪಡುವವನು.

ಅಂಜುಬುರುಕಿ (ನಾ) = ಭಯ ಪಡುವವಳು.

ಅಂಜುಮನ (ನಾ) ಉ. = ಸಂಘ; ಸಹಕಾರ ಸಂಘ.

ಅಂಜೋರಮ್ಯಾಲಕಪ್ಪಿಹಾಕು (ನಾ) = ಮತ್ತಿಷ್ಟು ಅಂಜಿಸು; ಇನ್ನಷ್ಟು ಭಯಪಡಿಸು.

ಅಂಜೋರು = ಅಂಜುವವರು.

ಅಂಜ್ಬುರ್ಕಿ = ಅಂಜುಬುರುಕಿ; ಭಯಪಡುವವಳು.

ಅಂಜ್ಬುರ್ಕ್ಯಾ(ನಾ) = ಅಂಜುಬುರುಕ; ಭಯಪಡುವವನು (ಬೈಗುಳ)

ಅಂಜ್ಯಾನ (ಳ) = ಅಂಜಿದ್ದಾನೆ (ಳೆ)

ಅಂಜ್ರಿಕಾಯಿ (ನಾ) = ಅಂಜೂರು

ಅಂಟಂಟು (ವಿ.) = ಜಿಗುಟು ಜಿಗುಟಾದ.

ಅಂಟಂಟುಗುಳು (ನಾ) = ಜಿಗಟು ಜಿಗುಟಾದ ಉಗುಳು; ಕಫ.

ಅಂಟಾ (ನಾ) = ಅಟ್ಟ; ಮಂಚಿಗೆ.

ಅಂಟಿ (ನಾ) = ಚಿಕ್ಕತ್ತೆ; ದೊಡ್ಡತ್ತೆ; ಚಿಕ್ಕಮ್ಮ; ದೊಡ್ಡಮ್ಮ.

ಅಂಟಿ (ವಿ) = ಒಂದರ ಮೇಲೊಂದು ಹೇರಿರುವ, ಕುಳಿತಿರುವ, ಇಟ್ಟಿರುವ.

ಅಂಟು (ನಾ) = ಜಿಗುಟು, ಬೇವು, ಬೊಬ್ಬುಲಿಯ ಜಿಗುಟು; ಗೋಂದು.

ಅಂಡಾ (ನಾ) ಹಿಂ. = ತತ್ತಿ, ಗುಡಿಯ ಶಿಖರ.

ಅಂಡಿ (ನಾ) ಹಿಂ. = ಅಂಡಾ; ತತ್ತಿ.

ಅಂಡಿ ಇಡು (ಕ್ರಿ) = ತತ್ತಿಹಾಕು (ಉದಾ: ಮನ್ಯಾಗ್ಕುಂತೇನು ಅಂಡಿ ಇಡ್ತೇನು?)

ಅಂಡಿಗಿ (ನಾ) = ಮಣ್ಣುಕೊಡಗಳ ಮೂಟೆ; ಅರಳೆಮೂಟೆ.

ಅಂಡಿಡು (ಕ್ರಿ) = ಅಡ್ಡಿಒಡ್ಡು ; ಜಗಳ ಹಚ್ಚು; ಭೇದಹುಟ್ಟಿಸು.

ಅಂಡ್ಗಿ (ನಾ) = ಅಂಡಿಗೆ;ಮಣ್ಣುಕೊಡಗಳ ಮೂಟೆ; ಅರಳೆ ಮೂಟೆ.

ಅಂಡು (ನಾ) = ಮುಳ್ಳುಹೊರೆ; ಕಡಿದ ಮುಳ್ಳಿನ ಟೊಂಗೆ.

ಅಂಡುಹೇರು (ಕ್ರಿ) = ಮುಳ್ಳುಟೊಂಗೆ ಒಂದರ ಮೇಲೊಂದಿಡು; ಅಡ್ಡಿಒಡ್ಡು.

ಅಂತ (ನಾ) ಸಂ. = ಕೊನೆ; ಸಾವು.

ಅಂತಕ (ನಾ) ಸಂ. = ಕಂಟಕ; ಆತಂಕ; ಯಮ.

ಅಂತಕಾಲ (ನಾ) = ಸಾಯುವ ಕಾಲ.

ಅಂತಕರ್ಣ (ನಾ) ಸಂ. = ದಯೆ;ಕನಿಕರ.

ಅಂತಾಗು (ಕ್ರಿ) = ಮುಗಿ; ಸಾಯು; ಕೊನೆಗೊಳ್ಳು.

ಅಂತಾನ (ಕ್ರಿ) = ಅನ್ನುತ್ತಾನೆ.

ಅಂತರ್ಕ್ಲೆ = ನಡುಮಧ್ಯದಲ್ಲಿ ; ಆಧಾರ-ವಿಲ್ಲದೆ; ನಿರಾಧಾರ.

ಅಂತಸ್ತು (ನಾ) = ಮಜಲು; ಮಹಡಿ; ಎತ್ತರ; ಘನತೆ; ಮಟ್ಟ; ದೊಡ್ಡಸ್ತಿಕೆ.

ಅಂತೂಇಂತೂ = ಒಟ್ಟಾರೆ; ಒಟ್ಟಿಗೆ.

ಅಂತ್ರ (ನಾ) = ಮಂತ್ರ, ತಾಯಿತ

ಅಂಥಾ (ಅ) = ಅಂತಹ; ಅಂಥ.

ಅಂಥಿಂಥ (ಅ) = ಅಂಥಇಂಥ ; ಅಂತಹ ಇಂತಹ.

ಅಂದ (ಕ್ರಿ) = ಅಂದನು, ನುಡಿದನು, ಹೇಳಿದನು.

ಅಂದಾಜು (ನಾ) = ಊಹೆ; ಅಜಮಾಸು; ಬಹುಶಃ; ಹೆಚ್ಚುಕಡಿಮೆ.

ಅಂದಾಧುಂದ (ವಿ) ಹಿಂ. = ಸಿಕ್ಕಾಪಟ್ಟೆ; ಮಿತಿಮೀರಿದ.

ಅಂದೇಶಾ (ನಾ) ಉ. = ಸಂಶಯ; ಶಂಕೆ; ಕೇಡಾಗುವುದೆಂಬ ಊಹೆ.

ಅಂದ್ರೂನಿ (ವಿ) = ಒಳಮುಗ್ಗಲಿನ; ಇಬ್ಬರ ಮಧ್ಯದ; ಇಬ್ಬಣಗಳ ನಡುವಿನ.

ಅಂದ್ರೂನಿಮಾಮ್ಲಾ (ನಾ) ಹಿಂ. = ಒಳ ರಹಸ್ಯ; ಇಬ್ಬರ ಮಧ್ಯದ ವಿಷಯ; ಇಬ್ಬಣಗಳ ನಡುವಿನ ವಿಷಯ.

ಅಂಧಾ (ನಾ) ಹಿಂ. = ಕುರುಡ; ಕಣ್ಣುಕಾಣದವ (ಗಾದೆ-ಅಂಧಾ ಪೀಸೆ ಕುತ್ತಾ ಖಾಯೆ = ಮುಗ್ಧರ ಶೋಷಣೆ)

ಅಂಧೇರ ನಗರಿ (ನಾ) ಹಿಂ. = ಕತ್ತಲೆಯ ನಗರ; ಅವ್ಯವಸ್ಥೆ ; ಅರಾಜಕತೆ.

ಅಂಧೇರ ನಗರಿ ಚೌಪಟರಾಜಾ (ಗಾದೆ) = ಹದಗೆಟ್ಟ ವ್ಯವಸ್ಥೆ ; ಹದಗೆಟ್ಟ ರಾಜ್ಯ ವ್ಯವಸ್ಥೆ.

ಅಂಬಟ (ನಾ) ಮ. = ಹುಳಿ.

ಅಂಬಟಿಕಾಯಿ (ನಾ) = ಹುಣಸೆಕಾಯಿ; ಅಂಬೋಡಿಕಾಯಿ.

ಅಂಬರ್‌ಚರಕಾ (ನಾ) = ಒಂದೇ ಸಲಕ್ಕೆ ಐದಾರು ದಾರಗಳ ಎಳೆ ಹೊಸೆವ ಕೈಚರಕ.

ಅಂಬಲಿ (ನಾ) = ತಿಳಿ ಗಂಜಿ; ಹಿಟ್ಟಿನಿಂದ ತಯಾರಿಸಿದ ಗಂಜಿ.

ಅಂಬಲಿಕುಂಡ (ನಾ) = ಅಮೃತಕುಂಡ ಎಂಬ ಊರು. ಮೊದಲು ಇದಕ್ಕೆ ಎಂಬಲಿಕುಂಡ ಎಂದು ಕರೆಯುತ್ತಿದ್ದರು. ಇದು ಶರಣರು ನಡೆದಾಡಿದ ಸ್ಥಳ.

ಅಂಬಲಿನೇಮ (ನಾ) = ಅಂಬಲಿಯನ್ನೇ ಸೇವಿಸುವ ವ್ರತ. (ವಚನ : ಕೂಡಲ ಸಂಗನ ಶರಣರಲ್ಲಿ ಅಂಬಲಿಯ ನೇಮದಾತ ನಮ್ಮ ಮಾದರ ಚೆನ್ನಯ್ಯ-ಬಸವಣ್ಣನವರು)

ಅಂಬಾ (ನಾ) = ಆಕಳು (ಬಾಲ ಭಾಷೆ); ಆಕಳಕರುವಿನ ಕೂಗು; ಆಕಳಿಗೆ ಕರೆಯುವ ಕೂಗು.

ಅಂಬಾಡಿಕಾಯಿ (ನಾ) = ತೊಂಡೆಕಾಯಿ ಯಂತೆ ಉದ್ದನೆಯ ಕಾಯಿ; ಉಪ್ಪಿನಕಾಯಿಗೆ ಬಳಸುವ ಕಾಯಿ.

ಅಂಬಾದು (ಅ) = ಅಂಬೋದು; ಅಂದಕೂಡಲೆ; ಆದಮೇಲೆ; ಆಮೇಲೆ.

ಅಂಬಾಬಾಯಿ (ನಾ) = ಭವಾನಿ; ತುಳಜಾಪುರದ ತುಕೂಬಾಯಿ.

ಅಂಬಾಬಾಯಿ ಕುದ್ರಿ (ನಾ) = ಅಂಬಾ ಭವಾನಿಯ ಸವಾರಿ ತುಂಬುವ ವ್ಯಕ್ತಿ.

ಅಂಬಾಬಾಯಿ ಜೋಗ (ನಾ) = ತುಳಜಾಪುರದ ಅಂಬಾಭವಾನಿ ಹೆಸರಿನಲ್ಲಿ ಬೇಡುವ ಭಿಕ್ಷೆ.

ಅಂಬಾರಿ (ನಾ) = ಆನೆ ಮೇಲೆ ಕುಳಿತುಕೊಳ್ಳಲು ಹಾಕುವ ಮಂಟಪದತಂಹ ಆಸನ (ಪೀಣಿ ಹಾಡು : ಆ ಗುಡ್ಡನೋ / ಡೀ ಗುಡ್ಡನೋಡು / ಗುಡ್ಡದ್ಮ್ಯಾಲಾನಿ ನೋ/ ಡಾನಿ ಮ್ಯಾಲಂಬಾರಿ ನೋಡು)

ಅಂಬಿಗ (ನಾ) = ದೋಣಿ ನಡೆಸುವವನು.

ಅಂಬಿಗರ ಚೌಡಯ್ಯ (ನಾ) = ಬಸವಯುಗದ ಒಬ್ಬ ಗಣಾಚಾರಿ ಶರಣರು; ದೋಣಿಕಾಯಕದ ಶರಣರು; ನಿರ್ಭಿಡೆ ವಚನಕಾರರು; ಅಂಬಿಗರ ಚೌಡಯ್ಯ, ವಚನಾಂಕಿತ.

ಅಂಬಿಗ್ಯಾ (ನಾ) = ಅಂಬಿಗ; ದೋಣಿ ನಡೆಸುವವನು.

ಅಂಬಿಟ್ಕರ್ (ನಾ) = ಡಾ।। ಅಂಬೇಡ್ಕರ್ ಭೀಮರಾವ.

ಅಂಬಿಡ್ಕರ್ (ನಾ) = ಡಾ।। ಅಂಬೇಡ್ಕರ ಬೀಮರಾವ.

ಅಂಬೂರು (ನಾ) = ಸಮಗಾರನು ಮೊಳೆ ಕೀಳಲು ಬಳಸುವ ಉಪಕರಣ ; ಇಕ್ಕಳ.

ಅಂಬೆಮೋರಿ (ನಾ) = ಭತ್ತದ ಒಂದು ತಳಿಯ ಹೆಸರು.

ಅಂಬೆಗಾಲಿಡು (ಕ್ರಿ) = ಕೂಸು ಕರುವಿನಂತೆ ನಡೆ.

ಅಂಬೆಗಾಲಿನ ಹೋರಿ =ಅಂಬೆ-ಗಾಲಿಡುವ ಕೂಸು.

ಅಂಬೆಮೋರಿ (ನಾ) = ಭತ್ತದ ಒಂದು ತಳಿಯ ಹೆಸರು;ಘಮ ಘಮಿಸುವ ಭತ್ತ. (ಉದಾ: ಅಂಬೆಮೋರಿ ಅಕ್ಕಿ ಕುದ್ದುಸುದ್ರ, ಅಡ್ಗಿಮನ್ಯಾಗ ಮಕಮಕ, ಹಿರ್ಮನ್ಯಾಗ ಮಕಮಕ, ಪಡಸಾಲ್ಯಾಗ ಮಕಮಕ)

ಅಂಬೇಡ್ಕರ (ನಾ) = ಅಂಬಿಡ್ಕರ ; ಡಾ॥ ಭೀಮರಾವ ಅಂಬೇಡಕರ.

ಅಂಬೋಡಿಕಾಯಿ (ನಾ) = ಉಪ್ಪಿನಕಾಯಿಗೆ ಬಳಸುವ ಒಂದು ಪ್ರಕಾರದ ಕಾಯಿ; ಅಂಬಾಡಿಕಾಯಿ.

ಅಂಬ್ರೂತ (ನಾ) = ಅಮೃತ ; ಪೀಯುಷ (ತಾಯ್ಯೆದೆಯ ಹಾಲಿನ ಮುಂದ ಅಂಬ್ರೂತ ಗಿಮ್ರೂತಯದ್ಕ -ದೇಶಾಂಶ ಹುಡಗಿ.)

ಅಂಬ್ಲಿ (ನಾ) = ಅಂಬಲಿ; ಹಿಟ್ಟಿಗೆ ಝುರಿ ಇಟ್ಟು. ಮಾಡಿದ ತಿಳಿ ಪಾನಕ; ಗಂಜಿ; (ಗಾದೆ : ಘಟ್ಟಿ ಆದುರ ರೊಟ್ಟಿ; ಅಳೂಸಾದ್ರ ಅಂಬ್ಲಿ)

ಅಂಬ್ಲಿಗಿಂಬ್ಲಿ= ಗಂಜಿ ಗಿಂಜಿ.

ಅಂಬ್ಯಾ (ನಾ) = ಆಕಳ ಕೂಗು; ಕರುವಿನ ಕೂಗು.

ಅಂಬ್ಯಾಗಾಲು (ನಾ) = ಅಂಬೆಗಾಲು; ಕೂಸು ಕರುವಿನಂತೆ ನಡೆಯುವಿಕೆ.

ಅಂವ (ಸ.) = ಅವನು.

ಅವಂಟ (ನಾ) = ಅಳತೆಗಾರ ; ಅಳತೆ ಗುತ್ತಿಗೆದಾರ.

ಅಂವಸರ (ನಾ) = ಅವಸರ; ಕೆಟ್ಟಕಾಲ; ಕೆಟ್ಟಸಮಯ.

ಅಂವ್ಪುಂದು (ಅ) = ಅವನದು

ಅಂಸು = ಅಂಶ; ವಂಶ; ರಕ್ತಗುಣ, ಆನುವಂಶೀಯತೆ.

ಅಂಸುಕ (ನಾ) = ವಂಶಕ್ಕೆ ಹುಟ್ಟಿದವನು.

ಅಕಡಾಸು (ಕ್ರಿ) = ಧಿಮಾಕು ಮಾಡು; ಗರ್ವಪಡು; ಸೆಟೆ.

ಅಕಡಿ (ನಾ) = ಅಕ್ಕಡಿ, ಮಿಶ್ರಬೆಳೆಸಾಲು, ನಾಲ್ಕು ಸಾಲುಗಳ ಮಧ್ಯದ ಎರಡುಸಾಲು.

ಅಕಡೂ (ನಾ) = ಸೆಟೆಯುವವನು, ಧಿಮಾಕು ತೋರುವವನು.

ಅಕನಾಕ (ಅ) = ಸುಮ್ಮಸುಮ್ಮನೆ; ವಿನಾಕಾರಣ.

ಅಕರಾ = ಹಿನ್ನೊಂದು ; ಏಕಾದಶ (ಅಕರಾಬಕರಾ / ದಿವಾಳೀ ದಸರಾ)

ಅಕರಿ (ನಾ) = ಅಕರೆ; ಅಕರ್ರ್ಯಾ; ಅನ್ಯಾಯ

ಅಕರೆ (ನಾ) = ಅಕರ್ರ್ಯಾ, ಹುಸಿ, ಅನ್ಯಾಯ; ಅಕರಿ.

ಅಕರ್ರ್ಯಾ (ನಾ) = ಅಕರೆ (ಬೈಗುಳ)

ಅಕರ್ರ್ಯಾ ಆಡು (ಕ್ರಿ) = ಅನ್ಯಾಯ ಸಾಧಿಸು; ಸುಳ್ಳು ಹೇಳು.

ಅಕರ್ರ್ಯಾದುಂಡಿ (ನಾ) = ಅಕ್ಕರ್ದುಂಡಿ; ಅನ್ಯಾಯಗಾರ;ಅನ್ಯಾಯಿ.

ಅಕಲ್ (ನಾ) ಉ. = ಅಕ್ಕಲ್ಲು ; ಬುದ್ಧಿ.

ಅಕಲ್‌ಹಲ್ಲು (ನಾ) = ಬುದ್ಧಿಯಹಲ್ಲು ; ಮೂವತ್ತರ ನಂತರ ಮೂಡುವ ಹಲ್ಲು.

ಅಕಲಂ = ಒಂದು (ಉದಾ: ಅಕಲಂದುಕಲಂ/ತೀನೀಚಾರಿ)

ಅಕಾ (ಅ) = ಅಕೋ; ಅಗೋ.

ಅಕಾಕಾಕಾ (ಅ) = ಅಗೊಗೋಗೋ.

ಅಕಾಡಾಕಾಡಿ (ಅ) = ಅತ್ತತ್ತ.

ಅಕಾಡೀಕಾಡಿ (ಅ) = ಅತ್ತ ಇತ್ತ.

ಅಕಿ (ಸ) = ಆಕೆ, ಅವಳು.

ಅಕುಡಾಸು (ಕ್ರಿ)= ಹೀರಿಕೊ, ಮುರುಡು; ಮುದ್ದೆಯಾಗು; ಸೆಟೆ; ನಿಗುರು.

ಅಕೋ (ಅ) = ಅಗೋ

ಅಕೋಗ (ಅ) = ಅಗೋ ಹಿಂಗ್ಯಾಕಲೆ.

ಅಕೋನೆ (ಅ) = ಏ ಹೀಂಗ್ಯಾಕೇ.

ಅಕೊರೋ (ಅ) = ಅಗೊನೋಡೋ; ಅರೆ ಹೀಂಗ್ಯಾಕೋ.

ಅಕೋರ್ಗ (ಅ) = ಅಕೋನೆ; ಅಕೋನೊ; ಅಲೆಲೆ; ಅಲಲ.

ಅಕ್ಕ (ನಾ) = ಮೊದಲು ಹುಟ್ಟಿದವಳು; ಹಿರಿಯ ಸಹೋದರಿ.

ಅಕ್ಕಂ (ವಿ) = ಅಕಂ; ವಿಕಲಾಂಗ; ವಿಕಲಚೇತನ.

ಅಕ್ಕಅನ್ನಪೂರ್ಣಾ (ನಾ) = ಬೀದರನಗರದಲ್ಲಿ ಅಕ್ಕ ಎಂದೇ ಹೆಸರು ಮಾಡಿರುವ ಬಸವ ಪ್ರತಿಷ್ಠಾನದ ಸ್ಥಾಪಕ ಶರಣೆ.

ಅಕ್ಕಡಿ (ನಾ) = ಅಕ್ಡಿ ; ನಾಲ್ಕು ಸಾಲುಗಳ ಮಧ್ಯದ ಎರಡು ಸಾಲು.

ಅಕ್ಕನಾಗಮ್ಮ (ನಾ) = ಬಸವಣ್ಣನವರ ಅಕ್ಕ. ಚನ್ನಬಸವಣ್ಣನವರ ತಾಯಿ.

ಅಕ್ಕನಾಗಮ್ಮನಗವಿ = ಕಲ್ಯಾಣದ ಬಸವಣ್ಣನವರ ಅಕ್ಕನಾದ ಅಕ್ಕನಾಗಮ್ಮ ವಾಸ ಮಾಡಿದ ಮನೆ; ಬಸವಣ್ಣನವರ ಅರುಹಿನ ಮನೆಗೆ ಹತ್ತಿರದಲ್ಲಿದೆ.

ಅಕ್ಕಮಹಾದೇವಿ (ನಾ) = ಉಡುತಡಿಯ ಶರಣೆ; ಅಕ್ಕಮಹಾದೇವಿ. ಕನ್ನಡದ ಮೊದಲ ಕವಯಿತ್ರಿ.

ಅಕ್ಕಲ್ (ನಾ) ಉ. = ಅಕ್ಕಲ್ಲು ; ಬುದ್ಧಿ.

ಅಕ್ಕಲ್ಗೇಡಿ (ನಾ) = ಬುದ್ಧಿಗೇಡಿ

ಅಕ್ಕಲ್ಲು (ನಾ) ಉ. = ಬುದ್ಧಿ , ಅಕ್ಕಲ್

ಅಕ್ಕಲ್ಹಲ್ಲು (ನಾ) = ಅಕ್ಕಲ್‌ಹಲ್ಲು; ಬುದ್ಧಿಯ ಹಲ್ಲು; ಮೂವತ್ತು ವಯಸ್ಸಿನ ನಂತರ ಮೂಡುವ ಹಲ್ಲು; ಅಕ್ಕಲ್‌ದಾಡೆ.

ಅಕ್ಕಾ = ಏ ಅಕ್ಕ (ಸಂಬೋಧನ)

ಅಕ್ಕಿ (ನಾ) = ಭತ್ತದ ಹೊಟ್ಟು ತೆಗೆದ ಕಾಳು.

ಅಕ್ಕಿಕಾಳು (ನಾ) = ಅಕ್ಷತೆ; ಸೇಸೆ; ಸ್ಯಾಸಿ.

ಅಕ್ಕು (ಕ್ರಿ) = ಕರಗು; ಜೀರ್ಣವಾಗು.

ಅಕ್ರಾ (ನಾ) ಮ. = ಹನ್ನೊಂದು; ಏಕಾದಶ, ಹತ್ತರ ಮೇಲೆ ಇನ್ನೊಂದು ಅಂಕಿ.

ಅಕ್ಡಿ (ನಾ) = ಅಕ್ಕಡಿ, ನಾಲ್ಕು ಸಾಲುಗಳ ಮಧ್ಯದ ಎರಡು ಸಾಲು (ಗಾದೆ : ಅಗೇಡಿ ಸಂಗ್ಡ ಅಕ್ಡಿ ಹಾಕ್ದುರ, ಆಡಿಯೆಲ್ಲಾ ಕರ್ಸಾಲಾಯ್ತಂತ)

ಅಕ್ಸಾ ಅನು (ಕ್ರಿ) = ಹೀನೈಸು, ಅಪಮಾನಿಸು- (ಗಾದೆ = ಅಕ್ಸಾ ಅಂದೋರ್ಮನಿಗಿ ಆರ್ತಿಂಗುಳ್ಸುಳಿಬಾರ್ದು)

ಅಕ್ಷತಾ (ನಾ) ಸಂ. = ಸೇಸೆ; ಅಕ್ಕಿಕಾಳು; ಮದುವೆ ಮತ್ತು ಪೂಜೆಗೆ ಬಳಸುವ ಅಕ್ಕಿಕಾಳು.

ಅಖಂಡ (ವಿ) ಸಂ. = ಖಂಡಾಗದ; ತುಂಡಾಗದ; ಪೂರ್ಣ; ಸಾಬೂತು

ಅಖಂಡ ಪಾರಾಯಣ (ನಾ) ಸಂ. = ನಿರಂತರ ಓದುವಿಕೆ, ನಿರಂತರ ಪುರಾಣವಾಚನ ಮತ್ತು ಶ್ರವಣ.

ಅಖಬಾರ (ನಾ) ಉ. = ವರ್ತಮಾನ ಪತ್ರ; ಸುದ್ದಿ ಪತ್ರಿಕೆ.

ಅಖರೋಟು (ನಾ) ಹಿಂ. = ಒಂದು ಪ್ರಕಾರದ ಎಣ್ಣೆಬೀಜಗಳಿಂದ ಕೂಡಿದ ಕಾಯಿ; ಅಕ್ರೋಟು.

ಅಖಾಡಾ (ನಾ) ಹಿಂ. = ಕುಸ್ತಿಕಣ; ಗರಡಿಮನೆ.

ಅಗಟ್ಗಿ (ನಾ) = ಅಗ್ಗಿಷ್ಟಿಕೆ; ಕುಳ್ಳುಥಾಳಿ; ಸೇಗಡಿ; ಕುಳ್ಳಿನ ಒಲೆ.

ಅಗಟೋಇಗಟೋ = ಮಿತಿಮೀರಿದ; ಅಸಂಖ್ಯೆ; ಅಳೆಯಲಾಗದ.

ಅಗಡದತ್ತ = ಒರಟು; ದೈತ್ಯಸ್ವರೂಪದ

ಅಗಡದತ್ತಹೆಣ್ಣು = ಉದ್ಧಟ ಹೆಣ್ಣು. ಅಜಂಡ ಹೆಣ್ಣು.

ಅಗಡುಭೀಳು (ಕ್ರಿ) = ಗಾಬರಿಯಾಗು; ದಿಗುಲುಗೊಳ್ಳು.

ಅಗತಾದಿ (ನಾ) = ಯುಗಾದಿ ನಂತರದಲ್ಲಿ ಬರುವ ಅಮಾವಾಸ್ಯ. ವೈಶಾಖಮಾಸದ ಅಕ್ಷಯತದಿಗೆ ಅಮಾವಾಸ್ಯ.

ಅಗದಿ (ಅ) (ಮ) = ಕೇವಲ; ಸಂಪೂರ್ಣ, ಬಲ್ಕುಲ್; ಬರಿಯ, ಬಹಳವಾಗಿ; ತೀರ.

ಅಗನ್ಯಾನ (ನಾ) = ಅಜ್ಞಾನ;ತಿಳಿಗೇಡಿತನ

ಅಗರುಬತ್ತಿ (ನಾ) = ಊದುಬತ್ತಿ; ಗಂಧದ ಕಡ್ಡಿ.

ಅಗರ್ಬತ್ತಿ (ನಾ)=ಊದುಬತ್ತಿ; ಅಗರುಬತ್ತಿ.

ಅಗಲಾಡು (ಕ್ರಿ) = ಅಲ್ಲಾಡು; ಸಡಿಲಾಗು, ಬಿಗಿಯಿಲ್ಲದಿರು.

ಅಗಲು (ನಾ) = ತಟ್ಟೆ; ತಾಟು; ಗಂಗಾಳ, ಎಡೆ. (ಗಾದೆ : ಉಂಡ ಅಗಲಾಗ ಉಗುಳ ಬಾರ್ದು)

ಅಗಸ (ನಾ) = ಧೋಬಿ; ಬಟ್ಟೆ ಒಗೆಯುವವನು. (ಗಾದೆ : ಅಗಸನ ಅಂಗೈದಾಗುಣಬೇಕು; ನಾವ್ಹನಂಗಳ್ದಾಗುಣ್ಬಾರ್ದು)

ಅಗಸಗಿತ್ತಿ (ನಾ) = ಅಗಸನ ಹೆಂಡತಿ; ಅಗಸನ ಮನೆಯ ಮಹಿಳೆ.

ಅಗಸಲ್ಗ (ನಾ) = ಅಕ್ಕಸಾಲಿಗ, ಚಿನ್ನದ ಕಾಯಕದವನು. (ಗಾದೆ : ಅಕ್ಕ ಆದರ್ಬಿ ಅಗಸಲ್ಗ . ಗಿರಾಕಿನೇ)

ಅಗಸಲ್ತಿ (ನಾ) = ಅಕ್ಕಸಾಲಿಗ ಮಹಿಳೆ.

ಅಗಸಿ (ನಾ) = ಅಗಸೆ; ಊರ ಹೆಬ್ಬಾಗಿಲು; ಒಂದು ಪ್ರಕಾರದ ಎಣ್ಣೆ ಬೀಜ (ಗಾದೆ : ಅಗಸಿ ಅಗೇದಾಗಿಲ್ದಾಂವ ಆಕಾಡೆ ಹೋಗಾದ್ಬಚ್ಚಿ).

ಅಗಸಿ ಬಂಡೆಗಲ್ಲು (ನು) = ಊರ ಹೊರಬಾಗಿಲಿನ ಮಧ್ಯದಲ್ಲಿ ಹೂಳಿದ ಬಂಡೆಗಲ್ಲು , ಗಟ್ಟಿಮುಟ್ಟಿ; ಎಲ್ಲಪೆಟ್ಟುತಾಳುವವ.

ಅಗಸಿ ಬಡೆಗಲ್ಲು (ನಾ) = ಅಗಸೆ ಬಾಗಿಲಲ್ಲಿ ನಟ್ಟ ನಡುವೆ ಹೂಳಿದ ತಡೆಗಲ್ಲು; ಅಗಸಿ ಬಂಡೆಗಲ್ಲು.

ಅಗಸಿ ಹೊರ್ಗ ಹೋಗಲಿ (ನು) = ಸತ್ತು ಹೆಣವಾಗಿ. ಅಗಸೆ ಹೊರಗೆ ಹೋಗಿ ಕುಣಿ ಕಾಣಲಿ; ಚಿತೆ ಏರಲಿ (ಬೈಗುಳ).

ಅಗಸುದ್ಯಾ (ನಾ) = ಔಷಧ, ಮದ್ದು, ಗಿಡಗಸರ ಮದ್ದು; ಔಸುದ್ಯಾ.

ಅಗಸೇರು (ನಾ) = ಅಕ್ಷರ; ಅಗಸೆಬಾಗಿಲಿನ ಕಾವಲಿಗರು.

ಅಗಸ್ಯಾ (ನಾ) = ಅಗಸೆ ಕಾಯುವವನು, ತಳವಾರ; ಹಿಂದಿನ ಕಾಲದಲ್ಲಿ ಮನೆ ಮನೆಗೆ ಚುಟ್ಟದ ಎಲೆ ಪೂರೈಸುವವನು(ಳು).

ಅಗಳಾಡ್ಸು (ಕ್ರಿ) = ಅಲ್ಲಾಡಿಸು.

ಅಗಳಾಪಗಳಾ = ಸಡಿಲು; ಢೀಲಾಢಾಲಾ; ಅಗಳ್ಪಗಳು.

ಅಗಳಿ (ನಾ) = ಗುಳಿ ಮಾಡದ ಕಟ್ಟಿಗೆ; ಬಾಗಿಲಿನ ತಟ್ಟ. ಹಿಂದೆ ಸರಿಯದಂತೆ ತಡೆಯುವ ಕಟ್ಟಿಗೆ.

ಅಗಳು (ಕ್ರಿ) = ಕೆದರು; ಹಾರೆ, ಗುದ್ದಲಿ ಇತ್ಯಾದಿಗಳಿಂದ ನೆಲದ ಮಣ್ಣನ್ನು ಸಡಿಲುಗೊಳಿಸು.

ಅಗಳು (ನಾ) = ಅನ್ನದ ಕಾಳು (ಗಾದೆ : ಅಗಳು ಕಿವ್ಚದ್ರ ಅನ್ನಾ ತಿಳಿತಾದ)

ಅಗಳ್ಪಗಳ (ವಿ) = ಜಗಜಂಪ, ಸಡಿಲು; ಢೀಲಾಢಾಲಾ.

ಅಗಲಾಗ = ಎಡೆಯಲ್ಲಿ; ತಟ್ಟೆಯಲ್ಲಿ (ಗಾದೆ : ತನ್ನ ಅಗಲಾಗ ಕಾತ್ತಿ ಸತ್ತು ಬಿದ್ದಾದ, ಮಂದಿ ಅಗಲಾಗಿಂದು ನೊಣಾ ಝಾಡುಸ್ತಂತ!)

ಅಗಸಲ್ಲ (ನಾ) = ಅಕ್ಕಸಾಲಿಗ (ಗಾದೆ : ಅಕ್ಕನ ಭಂಗಾರಾದುರ್ಬೀ ಅಗಸಲ್ಲಗ ಗಿರಾಕಿನೇ)

ಅಗಳ್ಯಾಡ್ಸು (ಕ್ರಿ) = ಅಲ್ಲಾಡಿಸು.

ಅಗಾ (ಅ) = ಅಗೋ; ಅಕೋ.

ಅಗಾತಿ (ನಾ) = ಅಗತ್ಯ; ಜರೂರತ್ತು; ತುರ್ತು ಬೇಕಾದದ್ದು.

ಅಗಾವು (ನಾ) = ಎಲ್ಲದರಲ್ಲಿ ನಾ ಮುಂದು ಎನ್ನುವವ.

ಅಗಾವುಧಂಧ್ಯಾ (ನಾ) = ಹೇಳದೆ ಕೇಳದೆ ಮಾಡುವ ಕೆಲಸ.

ಅಗಾಳೆ = ಆಗಲೇ; ಈ ಮೊದಲೇ

ಅಗಿ (ನಾ) = ಅಗೆ; ಸಸಿ, ಮೊಳಕೆ.

ಅಗಿ ಊರು = ಅಗೆ ನೆಡು;ಸಸಿಯೂರು.

ಅಗುಸಿ (ನಾ) = ಅಗಸೆ ಬಾಗಿಲು; ಊರಿನ ಮಹಾದ್ವಾರ.

ಅಗುಸಿಧಾಟುಸ್ಲಿ (ನು) = ಸತ್ತುಹೋಗಲಿ; ಹೆಣ ಅಗಸೆ ಹೊರಗೆ ಹೋಗಿ ಕುಣಿಕಾಣಲಿ (ಬೈಗುಳ).

ಅಗುಸಿ ಬಂಡೆಗಲ್ಲು (ನಾ) = ಅಗಸೆಯ ಮಧ್ಯದಲ್ಲಿ ಹೂಳಿರುವ ಕಲ್ಲು ; ಗಟ್ಟಿಮುಟ್ಟಿ.

ಅಗುಸಿಹೊರ್ಗಹೋಗ್ಲಿ (ನು) = ಸತ್ತು ಸ್ಮಶಾನ ಕಾಣುವಂತಾಗಲಿ (ಬೈಗುಳ)

ಅಗುಳಿ (ನಾ) = ತಟ್ಟಿ ತೆರೆಯದಂತೆ ಹೊಂದಿಸುವಗುಳಿ ಕಟ್ಟಿಗೆ.

ಅಗುಳು (ನಾ) = ಅಗಳು; ಕುದ್ದ ಅಕ್ಕಿಯ ಕಾಳು (ಗಾದೆ : ಅಗುಳು ಕಿವ್ಚಿದ್ರ ಅನ್ನಾ ತಿಳಿತಾದ).

ಅಗೆದ ಹುಣ್ಣಿ (ನಾ) = ಅಗೆ ನಾಟಿ ಮಾಡುವ ಹುಣ್ಣಿಮೆ; ಆಗಿ ಹುಣ್ಣಿಮೆ.

ಅಗೇವು (ನಾ) = ಅಗ್ಯಾ; ನೆಲಮನೆ; ಭುಂಯಾರ ; ಕಣಜ (ಗಾದೆ : ಉಳ್ಳೋರು ಅಗೆವು ತೆಗ್ಯಾಟ್ಗೆ ಬಡೂರು ಜಿವಾ ಬಟ್ರಂತ).

ಅಗೋ (ಅ) = ಅಕೋ; ಅದೋ.

ಅಗೋತ (ನಾ) = ಆವೊತ್ತು; ಆದಿನ; ಅಂದು.

ಅಗೋರೊ (ಅ)= ಆಗೋ ಹಾಗೇಕೆಲೊ

ಅಗ್ಗ (ನಾ) = ಹೀನ; ಕನಿಷ್ಟ; ಕಡಿಮೆ ಬೆಲೆಯದು. (ಗಾದೆ : ಅಗ್ಗದ್ದಾಸಿಗಿ ಮುಗ್ಗಿದ ಜ್ವಾಳ).

ಅಗ್ಗದಾಕಿ (ನಾ) = ಹೀನ ಗುಣದವಳು (ಬೈಗುಳ).

ಅಗ್ಗದಾಂವ (ನಾ) = ಹೀನಗುಣದವನು (ಬೈಗುಳ).

ಅಗ್ಗದ್ದು = ಹೀನಕುಲದ್ದು ; ಕೀಳಾದದ್ದು; ಸಸ್ತಾ; ಕಡಿಮೆ ಬೆಲೆಯುಳ್ಳದ್ದು (ಬೈಗುಳ)

ಅಗ್ಗಮುದ್ದಿ = ಅತಿ ಅಗ್ಗ.

ಅಗ್ಗವಣಿ (ನಾ) = ಅಭಿಷೇಕದ ನೀರು.

ಅಗ್ಗಿ (ನಾ) = ಬೆಂಕಿ; ಅಗ್ನಿ; ಪೂಜೆಯ ಬೆಂಕಿ; ವೀರಭದ್ರ ತುಳಿದ ಅಗ್ನಿ.

ಅಗ್ಗಿ ತುಳಿ (ಕ್ರಿ) = ಅಗ್ನಿಯ ಪ್ರದಕ್ಷಿಣೆ ಹಾಕು; ಫೇರಿಹಾಕು : ವೀರಭದ್ರ ಜಾತ್ರೆಯಲ್ಲಿ ಅಗ್ನಿಯನ್ನು ತುಳಿದು ಚಿದಿಗುಟ್ಟು.

ಅಗ್ಗಿನಗಾಡಿ (ನಾ) = ಉಗಿಬಂಡಿ; ರೈಲುಬಂಡಿ.

ಅಗ್ಯಾ (ನಾ) = ಅಗೇವು; ನೆಲಮನೆ; ಭುಂಯಾರ; ಕಾಳಿನ ಕಣಜ (ಗಾದೆ : ಉಳ್ಳೋರು ಅಗ್ಯಾ ತೆಗ್ಯಾಟ್ಗೆ ಇಲ್ಲೋರು ಸತ್ತು ಹೋದ್ರಂತ)

ಅಗ್ರಾರ (ನಾ) = ಅಗ್ರಹಾರ; ಕಾಣಿಕೆ ಕೊಟ್ಟ ಹಳ್ಳಿ; ಬೀದರ ಕೋಟೆಯ ಕೆಳಮಗ್ಗುಲಲ್ಲಿರುವ ಒಂದು ಹಳ್ಳಿ.

ಅಗುಲ್ಸು (ಕ್ರಿ) = ಅಗಲಿಸು; ದೂರ ಮಾಡು (ಗಾದೆ : ತಾಂಬುರ್ದುಡ್ಡು ತಾಯ್ಮಕ್ಕಿಗಿ ಅಗಲುಸ್ತು).

ಅಗ್ಸ (ನಾ) = ಅಗಸ; ಧೋಬಿ, ಪರೀಟ.

ಅಗ್ಸಲ್ಲ = ಅಕ್ಕಸಾಲಿಗ (ಗಾದೆ : ಅಗ್ಸಲ್ಲ ಮುಳ್ಳೂರ್ದುರ ಬ್ಯಾನಿ ಆಗಾಲ).

ಅಗ್ಸಿ ಬಂಡೆಗಲ್ಲು (ನಾ) = ಅಗಸೆಯಲ್ಲಿ ಹೂಳಲಾದ ದೊಡ್ಡಕಲ್ಲು ; ಬಂಡೆಗಲ್ಲಂತೆ ಗಟ್ಟಿಮುಟ್ಟಿಯಾದವನು.

ಅಗ್ಸಿಬಂಡೆಗಲ್ಲು ಆಗು (ಕ್ರಿ) = ಗಟ್ಟಿಮುಟ್ಟಿಯಾಗು.

ಅಗ್ಸಿ ಬಡೆಗಲ್ಲು (ನಾ) = ಅಗ್ಸಿ ಬಂಡೆಗಲ್ಲು (ನೋಡಿರಿ).

ಅಗ್ಸೆರ್(ನಾ) = ಅಕ್ಷರ.

ಅಚಾನಕ (ಹಿಂ) = ಏಕಾಏಕಿ; ಒಮ್ಮೇಲೆ; ಅಕಸ್ಮಾತ.

ಅಚ್ಚಾಉಚ್ಚಾ = ಹುಚ್ಚುಚ್ಚು; ಹುಚ್ಚಾಟ; ವಾಚಾಳಿತನ.

ಅಚ್ಚಾವುಚ್ಚ (ಅ) = ವ್ಯವಸ್ಥೆ ಇಲ್ಲದೆ; ಅಸಂಬದ್ಧವಾಗಿ; ಅನಾಗರಿಕವಾಗಿ.

ಅಚ್ಚಿ (ನಾ) = ರೊಟ್ಟಿ (ಬಾಲ ಭಾಷೆ).

ಅಚ್ಚು (ನಾ) = ಸಾಚಾ; ಮರದಲ್ಲಿ ಅಥವಾ ಕಬ್ಬಿಣ, ಕಂಚುಗಳಲ್ಲಿ ಬೇಕಾದ

ಆಕಾರವನ್ನು ಕೊರೆದು ಅದರಲ್ಲಿ ಕೆಸರು ಮೆತ್ತಿ ಇಲ್ಲವೆ ಎರಕಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ; ಬೆಲ್ಲದ ಸಾಚಾ; ಎರಕದ ಸಾಧನ.

ಅಚ್ಚುಹಾಕು (ಕ್ರಿ) = ಮೂರ್ತಿ ತಯಾರಿಸು.

ಅಚ್ಚೇರು (ನಾ) = ಅರ್ಧಸೇರು, ಅಚ್ಛೇರು; ಎರಡು ಪಾವು.

ಅಚ್ಫಾ = ಒಳ್ಳೆಯದು; ಅಗಲಿ; ಲಾಡಿಕೆ

ಅಜಂಡ = ಬಹಳ ದೊಡ್ಡ ಗಾತ್ರದ; ದಪ್ಪ; ಅಜಂಡಾ; ಸಭೆಯಲ್ಲಿಡಬೇಕಾದ ಪ್ರಸ್ತಾವ.

ಅಜಗರ (ನಾ) = ಕಾಡಿನ ದೊಡ್ಡ ಹಾವು; ಹೆಬ್ಬಾವು.

ಅಜಗಜಾಂತರ (ನಾ) = ಅತಿ ಅಂತರ; ಹೆಚ್ಚಿನ ಅಂತರ. ಆಡು ಮತ್ತು ಆನೆಗಿರುವಷ್ಟು ಅಂತರ.

ಅಜಬ (ನಾ) ಉ. = ಆಶ್ಚರ್ಯ; ಅಚ್ಚರಿ; ವಿಚಿತ್ರ.

ಅಜಮಾಸು (ನಾ) = ಅಂದಾಜು; ಸರಿಸುಮಾರು.

ಅಜವಾನು (ನಾ) = ಘಮಘಮಿಸುವ ಖಾರದ ಗುಣವುಳ್ಳ ಒಂದು ಪ್ರಕಾರದ ಮಸಾಲೆ ಕಾಳು; ಓಂಕಾಳು.

ಅಜಾರಿ = ಬೇನೆ; ಬೇನೆ ಬಿದ್ದ.

ಅಜೀಜಿ (ನಾ) ಉ. = ವಿನಯ; ಸೌಜನ್ಯ

ಅಜೀಜಿ ಮಾಡು = ವಿನಂತಿಸು, ವಿನಯದಿಂದ ಕೇಳಿಕೊ.

ಅಜೀಬ = ವಿಜಿತ್ರ; ಒಂದು ನಮೂನೆಯ.

ಅಜೀಬಾತ = ಎಂದೆಂದೂ; ಎಂದೂ; ಎಳ್ಳಷ್ಟು; ಏನೇನೂ ಇಲ್ಲ.

ಅಜ್ಜ (ನಾ) = ತಂದೆಯ ಇಲ್ಲವೆ ತಾಯಿಯ ತಂದೆ; ತಾತ; ಹಿರಿಯ; ಪೂಜ್ಯ; ವಯೋವೃದ್ಧ.

ಅಜ್ಞಾತ (ನಾ) = ಹೀನ ಜಾತಿಯವನು; ಕೀಳು ಜಾತಿಯವನು (ಬೈಗುಳ).

ಅಜ್ಜಿ (ನಾ) = ತಂದೆಯ ಇಲ್ಲವೆ ತಾಯಿಯ ತಾಯಿ; ಹಿರಿಯಳು; ವಯೋವೃದ್ಧಳು.

ಅಜುರ್ಣ (ನಾ) = ಅಜೀರ್ಣ; ಅಪಚನ

ಅಟಂಬಾಂಬ್ (ನಾ) ಇಂ. = ಜೋರಾಗಿ ಸದ್ದು ಮಾಡುವ ಪಟಾಕಿ; ಅಣುಬಾಂಬು.

ಅಟಂಬಾಬು ಬಿಡು (ಕ್ರಿ) = ಅಪಾನವಾಯುಬಿಡು; ಹೂಸು ಹೊಡೆ.

ಅಟಕ ಮಾಡು (ಕ್ರಿ) = ಬಂಧಿಸು.

ಅಟಕಾಸು (ಕ್ರಿ) = ಸಿಕ್ಕುಬೀಳು; ಸಿಕ್ಕುಹಾಕು; ಅಡ್ಡಿಮಾಡು.

ಅಟಮಿ = ಅಷ್ಟಮಿ; ಭಾದ್ರಪದ ಶುದ್ಧ ಅಷ್ಟಮಿ; ಜೋ ಕುಮಾರನ ಅಷ್ಟಮಿ (ಹಾಡು : ಅಟಮಿದಿನ ಹುಟಿದಾನೆ ಕೊಮರಾಯ। ಸೆಟೇರು ಕರ್ದು ಬೆಸಗೊಳ್ರಿ ಜೊಕುಮಾರ)

ಅಟಾಟಿ (ನಾ) = ಆಟಾಟಿ; ಆತುರ; ಸಾವು ಸಮೀಪಿಸಿದ ಕ್ಷಣಗಳು; ಹೋಗುವ ಆತುರ.

ಅಟಾಪಿನಲ್ಲಿರು (ಕ್ರಿ) = ಸಮೀಪದಲ್ಲಿರು; ಸ್ವಾಧೀನದಲ್ಲಿರು; ಸನಿಹದಲ್ಲಿರು.

ಅಟಾಪು = ಸಮೀಪ; ಸನಿಹ; ಅಂಕೆ; ಅಧೀನ. ವ್ಯಾಪ್ತಿ.

ಅಟಾಪ್ಸು (ಕ್ರಿ) = ಅಟಾಪಿನಲ್ಲಿ ಇರಿಸಿಕೊ; ಅಂಕೆಯಲ್ಲಿರಿಸಿಕೊ; ವ್ಯಾಪ್ತಿಯಲ್ಲಿರಿಸು.

ಅಟುಕು = ಉದ್ದಗಲ ಕಡಿಮೆ ಇರುವ.

ಅಟುಕು ಜಾಗ (ನಾ) = ಇಕ್ಕಟ್ಟಿನ ಸ್ಥಳ.

ಅsಟು = ಅಷ್ಟು.

ಅಟೂಕು (ವಿ.) ಮ. = ಅಟುಕು; ಉದ್ದಗಲ ಕಡಿಮೆಯುಳ್ಳ; ಇಕ್ಕಟ್ಟಾದ.

ಅಟೋಳಾ (ನಾ) = ಅಟ್ಟಳೆ; ಅಟ್ಟಳೆನಾಡು; ರಂಜೇರುವಿನ ಸಿಂಧರು. ಆಳಿದ ಬೀದರಿನ ಎತ್ತರ ಭೂಪ್ರದೇಶ; ಧರಿಪ್ರಾಂತ; ಧರಿನಾಡು; ಕಲ್ಯಾಣ ಗಡ್ಡೆ; ಅಟ್ಟ.

ಅಟ್ಟ (ನಾ) = ಮನೆಯ ಒಳಮಾಳಿಗೆ; ಸಾಮಾನು ಇಟ್ಟುಕೊಳ್ಳಲು ಬಳಸುವ ಒಳ ಮಾಳಿಗೆ; ಹೊಲದಲ್ಲಿಯ ನಾಲ್ಕು ಕಾಲಿನ ಮಂಚಿಗೆ; ಅಂಟ; ಅಂಟಾ.

ಅಟ್ಟ ಆರ್‍ಯಾಣ (ನಾ) = ದಟ್ಟವಾದ ಅರಣ್ಯ, ಕಾಡು (ಒಡಗತೆ: ಅಟ್ಟ ಆರ್‍ಯಾಣದಾಗ ಅಂಬಾಬಾಯಿ ಝುಕಾಲಿ ಆಡ್ತಾಳ = ಹುಣಸೆಕಾಯಿ).

ಅಟ್ಟರ್ಗಾ (ನಾ) = ಅಟ್ಟರ್ಗಿ ಎಂಬ ಭಾಲ್ಕಿ ತಾಲೂಕಿನ ಒಂದು ಹಳ್ಳಿ; ಅದು ಈಗ ಅಟ್ಟರ್ಗಾ ಎಂದಾಗಿದೆ. ಟೋಳಿ ಕಟ್ಟಿಕೊಂಡು ದುಷ್ಟ ನಿಜಾಮ ಮತ್ತು ರಜಾಕಾರ್ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಸಿದ ವೀರರ ಊರು.

ಅಟ್ಟರ್ಗಾ ಟೋಳಿ (ನಾ) = ನಿಜಾಮ ರಾಜ್ಯದ ರಜಾಕಾರ ಪೋಲಿಗಳ ವಿರುದ್ಧ ಹೋರಾಡಿದ ಸ್ವಯಂ ಸೇವಕರ ತಂಡ.

ಅಟ್ಟಳೆ (ನಾ) = ಅಟೋಳಾ; ರಂಜೇರುವಿನ ಸಿಂಧರು ಆಳಿದ ಬೀದರ ಜಿಲ್ಲೆಯ ಎತ್ತರ ಪ್ರದೇಶ; ಅಟ್ಟಳೆ ನಾಡು, ಧರಿಪ್ರಾಂತ; ಕಲ್ಯಾಣ ಗಡ್ಡೆ.

ಅಟ್ಟಳೆ ನಾಡು (ನಾ) = ರಂಜೇರುವಿನ ಸಿಂಧರು ಆಳಿದ ಬೀದರ ಜಿಲ್ಲೆಯ ಎತ್ತರದ ಪ್ರದೇಶ; ಧರಿನಾಡು; ಧರಿಪ್ರಾಂತ; ಕಲ್ಯಾಣಗಡ್ಡೆ.

ಅಟ್ವಾ = ಅಟ್ವ.

ಅಟ್ವೆ (ನಾ) = ಅಟ್ವೆ ; ಮೆಟ್ಟಿನ ತಳದ ತೊಗಲು.

ಅಟ್ಟಿಡು (ಕ್ರಿ) = ಕುದಿಸಿಡು.

ಅಟ್ಟು = ಕುದಿಸಿ; ಕುದಿಸಿಟ್ಟು; ಕುದ್ದು.

ಅಟ್ಟುಂಬವ = ಅಡುಗೆಬಲ್ಲವ; ತಾನೇ ಅಟ್ಟು ಉಣ್ಣುವವ (ಗಾದೆ : ಅಟ್ಟುಂಬವ್ನ ಮಡ್ಡಿ ಆಗಬಾರ್ದು, ಮಟ್ಟಿ ಹೊಡೆವ್ನ ಆಳಾಗಬಾರ್ದು).

ಅಟ್ಟುಣ್ಕಿ (ನಾ) = ಅಟ್ಟಣಿಕೆ, ಒತ್ತಣಿಕೆ; ತಿಟ್ಟಾಗುವಿಕೆ ; ಒತ್ತೊತ್ತಾಗಿರುವಿಕೆ.

ಅಟ್ಟುಸು (ಕ್ರಿ) = ಕುದಿಸಿ ನೀರಿನ ಅಂಶ ಕಮ್ಮಿಯಾಗುವಂತೆ ಮಾಡು; ಅಟ್ಟುವಂತೆ ಮಾಡು (ಹಾಲು ಅಟ್ಟುಸ್ದರ ಖೊವಾ ತಾಯಾರಾಗ್ತಾದ)

ಅಟ್ಟೂರು (ನಾ) = ಬಸವಕಲ್ಯಾಣ ತಾಲೂಕಿನ ಒಂದು ಸಣ್ಣ ಹಳ್ಳಿ. ಶಾಸಕ ಬಸವರಾಜ ಪಾಟೀಲರ ಊರು.

ಅಠರಾ = ಹದಿನೆಂಟು; ಅಷ್ಟಾದಶ.

ಅಠರಾಪುರಾಣ = ಹದಿನೆಂಟು ಪುರಾಣ, ಅಷ್ಟಾದಶ ಪುರಾಣ.

ಅಠವಡಾ (ನಾ) = ಎಂಟು ದಿನದ ಅವಧಿ.

ಅಠವಣ(ನಾ)ಮ. = ನೆನಪು

ಅಠಾರಾ (ನಾ) ಹಿಂ. = ಹದಿನೆಂಟು, ಅಷ್ಟಾದಶ.

ಅಠ್ಠಾ (ನಾ) ಹಿಂ. = ಎಂಟಂಕಿಯ ಇಸ್ಪೀಟೆಲೆ.

ಅಠ್ಠಾ = ಅಠ್ಠಾ ; ಎಂಟಂಕಿಯ ಇಸ್ಪೀಟೆಲೆ

ಅಡಕಿ (ನಾ) = ಅಡಕೆ; ಪುರುಷನ ಜನನೇಂದ್ರಿಯ

ಅಡಕಿನ ಹಳ್ಳ (ನಾ) = ಆಣೆಕಲ್ಲು ; ಗಜಗದ ಬೀಜ; ಆಣೆಕಲ್ಲಾಟಕ್ಕೆ ಬಳಸುವ ಗಜಗದ ಬೀಜ

ಅಡಕಿಲ್ (ಲು) (ನಾ) = ಒಂದರ ಮೇಲೊಂದೇರಿಸಿದ ಸಾಲುಗಡಿಗೆ, ಕರ್ಬನ್ನು.

ಅಡಕೊ (ಕ್ರಿ) = ಮುಚ್ಚಿರು; ಕಾಣದಂತಿರು, ಮರೆಯಲ್ಲಿರು, ಹುದುಗಿರು. (ಗಾದೆ : ಅಡ್ಕೋಲಾಕ್ಹೋದ್ರ ಹಿಡ್ಕೋಲಾಕ್ಬಂದ್ರಂತ).

ಅಡಕೋತು (ನಾ) = ಅಡಕೆ ಕತ್ತರಿಸುವ ಸಾಧನ (ಗಾದೆ ಅಡಕೋತ್ನಾಗ ಅಡಕಿ ಸಿಕ್ಕಾಂಗ)

ಅಡಗು (ಕ್ರಿ) = ಅಡಗಿಕೊ; ಮುಚ್ಚಿರು; ಕಾಣದಂತಿರು; ಮರೆಯಲ್ಲಿರು; ಹುದುಗಿರು.

ಅಡಚಣಿ (ನಾ) = ತೊಂದರೆ; ಹಣದ ಕೊರತೆ, ಕಷ್ಟಕಾಲ.

ಅಡತಾರ ಯಾಳ್ಯಾ (ನಾ) = ಕೆಟ್ಟವೇಳೆ; ಅಪವೇಳೆ; ಅಸಂಗತವೇಳೆ.

ಅಡದುಡಿ = ಆತುರ; ಗಲಿಬಿಲಿ; ಗಡಿಬಿಡಿ (ಗಾದೆ : ಅಡದುಡಿಗಿ ತುರ್ಕ ಮಾತಿಗಿ ಗಂಟು ಬಿತ್ತು)

ಅಡನಾಡಿ (ನಾ) = ಅನ್ನಾಡಿ; ದರಿದ್ರ; ಮೈಗಳ್ಳ.

ಅಡಮಾಳ (ನಾ) = ನಿರ್ಜನ ಪ್ರದೇಶ; ಬಯಲು; ಮೈದಾನ; ಭಯಾನಕ ಅರಣ್ಯ; ಅಡ್ಮಾಳ.

ಅಡಮೋಟ (ನಾ) = ಅನಕ್ಷರಸ್ಥ ; ಅಜ್ಞಾನಿ.

ಅಡವಾರ (ನಾ) = ವಾರವಲ್ಲದವಾರ; ದಿನವಲ್ಲದದಿನ.

ಅಡಸಟಿ (ನಾ) = ಅಂದಾಜು; ಗುಟ್ಟು; ರಹಸ್ಯ; ಕೀಲು.

ಅಡಸರ (ನಾ) = ಗುಡ್ಡದ ಓರೆ; ವಾರಿ; ಗುಡ್ಡದ ವಾರಿ.

ಅಡಾವು (ನಾ) = ಒತ್ತೆ; ಇಡಗಂಟು.

ಅಡಾವು ಇಡು (ಕ್ರಿ) = ಒತ್ತೆ ಇಡು.

ಅಡಾಯಿಸು (ಕ್ರಿ) = ಅಡ್ಡಿಯಾಗು; ತಡೆ; ಅಡಾಸು.

ಅಡಾಸು (ಕ್ರಿ) = ಅಗತ್ಯಬೀಳು; ಅಡ್ಡಿಯಾಗು; ತಡೆಯಾಗು.

ಅಡಿ (ನಾ) = ಅಡವಿ; ಬಾಳೆ, ಮಾವು ಇತ್ಯಾದಿ ಹುಲ್ಲಿನಲ್ಲಿಟ್ಟು ಹಣ್ಣುಗೊಳಿಸುವ ಮನೆ; ತಂಬಾಕು ಹದಗೊಳಿಸುವ ತಗ್ಗು.

ಅಡಿಅವರಿ (ನಾ) = ಕಾಡಿನ ಅವರೆ.

ಅಡಿಉಳಾಗಡಿ (ನಾ) = ಕಾಡಿನ ಈರುಳ್ಳಿ.

ಅಡಿಎಮ್ಮಿ (ನಾ) = ಕಾಡೆಮ್ಮೆ.

ಅಡಿಔಡ್ಲ (ನಾ) = ಕಾಡು ಔಡಲ; ಎಲೆ ಕಡಿದರೆ ಬಿಳಿಹಾಲು ಸೋರುವ ಗಿಡ; ಮಲ್ಲಾಡಿಕೆ; ಮಲ್ಲಾಡಿಕ್ಯಾ.

ಅಡಿಕಸಬಿ (ನಾ) = ಕೃಷಿ ಕೂಲಿಕಾರ; ಕಸುಬಿನಲ್ಲಿ ನುರಿಯದವ; ಉಪಕಸುಬಿನವ.

ಅಡಿಕ್ವಾಣ (ನಾ) = ಕಾಡುಕೋಣ.

ಅಡಿಗಾಯಿ (ನಾ) = ಅಡಿಹಾಕಿ ಹಣ್ಣುಗೊಳಿಸಿದ ಕಾಯಿ; ಹಣ್ಣುಗಾಯಿ.

ಅಡಿಗಿಡ (ನಾ) = ಕಾಡುಮೇಡು.

ಅಡಿಚಂಚ (ನಾ) = ಕಾಡು ಬೇಟೆಗಾರ; ಅಡವಿ ಚಂಚ.

ಅಡಿಚೊಂಚ (ನಾ) = ಅಡವಿ ಚಂಚ; ಕಾಡು ಬೇಟೆಗಾರ.

ಅಡಿದೇವರು (ನಾ) = ಅಡವಿಯಲ್ಲಿಯ ದೇವರು; ಕಾಡಿನ ದೇವರು (ಗಾದೆ : ಅಡಿ ದೇವ್ರು ಬಂದು ಗುಡಿ ದೇವ್ರಿಗಿ ಓಡ್ಸಿದ್ನಂತ!)

ಅಡಿಧಂದ್ಯಾ (ನಾ) = ಕೃಷಿಕಾಯಕ; ಹೊಲನೆಲಗಳಲ್ಲಿ ದುಡಿಯುವಿಕೆ.

ಅಡಿಪಾಲಾ (ನಾ) = ಹಾಳುಬೀಳು; ಚಲ್ಲಾಪಿಲ್ಲಿ; ಹರಿಹಂಚಿದ್ದು ; ಸತ್ಯಾನಾಶ.

ಅಡಿಬದನಿ (ನಾ) = ಅಡವಿಬದನೆ; ಕಾಡುಬದನೆ.

ಅಡಿಭೀಳು (ಕ್ರಿ) = ಕಾಡು ಸೇರು; ಅಡವಿಯಲ್ಲಿ ಸಂಚರಿಸು; ಅಡವಿ ಪಾಲಾಗು, ಅಡ್ಡಬೀಳು; ಹಾದರಮಾಡು (ಬೈಗುಳ).

ಅಡಿಭೆಂಡಿ (ನಾ) = ಅಡವಿಬೆಂಡೆ; ಕಾಡು ಬೆಂಡೆ.

ಅಡಿಮಲ್ಲಿಗೆ (ನಾ) = ಕಾಡು ಮಲ್ಲಿಗೆ; ಬೇಲಿ ಮಲ್ಲಿಗೆ.

ಅಡಿಸಬ್ಬಿ (ನಾ) = ಕಾಡು ಸಬ್ಬಸಿಗೆ.

ಅಡಿಸೇರು (ಕ್ರಿ) = ಅಡವಿ ಸೇರು; ಕಾಡುಪಾಲಾಗು; ಸತ್ತುಹೋಗು; ಮಣ್ಣುಸೇರು (ಬೈಗುಳ).

ಅಡಿಸ್ಸೇ (ನಾ) = ಎರಡು ನೂರ ಐವತ್ತು.

ಅಡಿಸ್ಸೇರು (ನಾ) = ಎರಡೂವರೆ ಸೇರು.

ಅಡಿಹಂದಿ (ನಾ) = ಕಾಡು ಹಂದಿ; ಅಡವಿ ಹಂದಿ.

ಅಡಿಹಾಕು (ಕ್ರಿ) = ಮಾವು, ಬಾಳೆ ಇತ್ಯಾದಿಗಳು ಹಣ್ಣಾಗುವಂತೆ ಹುಲ್ಲಿನಲ್ಲಿ ಅಥವಾ ಸೊಪ್ಪಿನಲ್ಲಿ ಮುಚ್ಚಿಡು.

ಅಡಿಹಾಗ್ಲ (ನಾ)= ಅಡವಿಹಾಗಲಕಾಯಿ ಮತ್ತು ಅದರ ಬಳ್ಳಿ; ಕಾಡಿನ ಹಾಗಲಕಾಯಿ ಮತ್ತು ಅದರ ಬಳ್ಳಿ.

ಅಡಿಶ್ಯೇ = ಎರಡು ನೂರಾ ಐವತ್ತು.

ಅಡೀಚು = ಎರಡೂವರೆ.

ಅಡು (ಕ್ರಿ) = ಕುದಿಸು, ಬೇಯಿಸು; ಅಡಿಗೆ ಮಾಡು.

ಅಡೆ = ಅರೆ; ಎಲೆ.

ಅಡ್ಕಿ (ನಾ) = ಅಡಕೆ, ಶಿಶ್ನ.

ಅಡ್ಕೋತ (ನಾ) = ಅಡಿಕೆ ಒಡೆವ ಕತ್ತರಿ.

ಅಡ್ಗಾಲು (ನಾ) = ಅಡ್ಡಿ ; ಆತಂಕ; ಕಾಲಲ್ಲಿ ಕಾಲೊಡ್ಡುವಿಕೆ.

ಅಡ್ಡಾಲು ಹಾಕು (ಕ್ರಿ) = ಅಡ್ಡಿ ಉಂಟು ಮಾಡು; ಆತಂಕ ಒಡ್ಡು

ಅಡ್ಗಿ (ನಾ) = ಅಡಿಗೆ; ಅಡುಗೆ; ಬಂಕೆಯೂಟ; ಮೈನೆರೆದವರಿಗೆ ಒಯ್ಯುವ ಊಟ.

ಅಡ್ಗಿಒಯ್ಯಿ (ಕ್ರಿ) = ಗರ್ಭಿಣಿಯರಿಗೆ ಬಂಕೆಯೂಟವನ್ನು ಒಯ್ಯು; ಮೈನೆರೆದವರಿಗೆ ಊಟ ಒಯ್ಯು.

ಅಡ್ಗಿಮನಿ (ನಾ) = ಅಡಿಗೆಯ ಮನೆ; ಅಡಿಗೆಯ ಕೋಣೆ.

ಅಡ್ಗಿಮಾಡು (ಕ್ರಿ) = ಆಹಾರವನ್ನು ಬೇಯಿಸಿ, ಕುದಿಸಿ ಉಣ್ಣಲು ಅಣಿಗೊಳಿಸು.

ಅಡ್ಗಿಯಾಳು (ನಾ) = ಅಡುಗೆ ಮನೆಯಲ್ಲಿ ದುಡಿಯುವ ಆಳು.

ಅಡ್ಡ (ಅ) = ಅಡ್ಡಾಗಿ; ತೊಂದರೆ; ತಡೆ.

ಅಡ್ಡಂಗಿ (ನಾ) = ಹಟ; ರಂಪ; ಚಂಡಿ.

ಅಡ್ಡಂಗಿ ತೆಗಿ (ಕ್ರಿ) = ಹಟಮಾಡು; ರಂಪ ಮಾಡು; ಚಂಡಿ ಹಿಡಿ.

ಅಡ್ಡಂಗಿ ಮಾಡು (ಕ್ರಿ) = ಹಟತೆಗೆ; ರಂಪ ಮಾಡು ಚಂಡಿ ಹಿಡಿ.

ಅಡ್ಡಕ ಪಿರ್ಯಾ (ನಾ) = ಅತಿಪ್ರಿಯ; ಅತಿತುಟ್ಟಿ; ಹೆಚ್ಚು ಬೆಲೆ.

ಅಡ್ಡಖಸಬಿ (ನಾ) = ಉಪಕಸುಬಿನವ; ಉಪ ವೃತ್ತಿಯವ; ತರಬೇತಿ ಇಲ್ಲದವ; ನುರಿಯಲಾರದವ (ಬೈಗುಳ)

ಅಡ್ಡಗಂಟು (ಕ್ರಿ) = ಅಡ್ಡಗಟ್ಟು; ತಡೆಯೊಡ್ಡು.

ಅಡ್ಡಗಟ್ಟು (ಕ್ರಿ) = ತಡೆ; ತಡೆಗಟ್ಟು; ಅಡ್ಡಿಯಾಗು; ರೋಕುಮಾಡು; ರುಕಾಸು.

ಅಡ್ಡಗತಿ (ನಾ) = ಉಪಕತೆ; ಕತೆಯೊಳಗೊಂದು ಕತೆ.

ಅಡ್ಡಗಾಲು ಹಾಕು (ಕ್ರಿ) = ಕಾಲಲ್ಲಿ ಕಾಲು ಹಾಕಿ ಕೆಡಹು; ಚಾಟಿ ಹೊಡೆ, ಕೆಡಿಸು; ತಡೆ(ನು).

ಅಡ್ಡಗೈಬ್ಯಾನಿ (ನಾ) = ಒಂದು ಪ್ರಕಾರದ ಹೊಟ್ಟೆ ಬೇನೆ.

ಅಡ್ಡಗ್ವಾಡಿ (ನಾ) = ಅಡ್ಡಗೋಡೆ, ತಡೆಗೋಡೆ.

ಅಡ್ಡಣ್ಗಿ (ನಾ) = ಮೂರು ಕಾಲಿನ ಪೀಠ. ಊಟದ ತಟ್ಟೆ ಇಡುವ ಕಬ್ಬಿಣ ಅಥವಾ ಹಿತ್ತಾಳೆಯ ಪೀಠ; ತಿಪಾಯಿ.

ಅಡ್ಡಪಾಲ್ಕಿ (ನಾ) = ಅಡ್ಡಲಾಗಿ ಹೊತ್ತೊಯ್ಯುವ ಪಾಲ್ಕಿ. ಜಗದ್ಗುರು ಪಂಚಾಚಾರ್ಯರು ಮೆರೆವಣಿಗೆ ಹೊರಡುವ ಪಾಲ್ಕಿ, ಮೇಣೆ.

ಅಡ್ಡಬರು (ಕ್ರಿ) = ಅಡ್ಡಿ ಉಂಟು ಮಾಡು.

ಅಡ್ಡಬಾಯಿಹಾಕು (ನು) = ಬೇರೆಯವರು ಮಾತಾಡುವಾಗ ನಡುವೆ ಮಾತಾಡು.

ಅಡ್ಡಭೀಳು (ನು) = ಮಲಗು, ಒರಗು; ಹಾದರ ಮಾಡು (ಬೈಗುಳ)

ಅಡ್ಡಯಾಳ್ಯಾ (ನಾ) = ಅಪವೇಳೆ; ಅಡ್ಡವೇಳೆ.

ಅಡ್ಡಹಾದಿ (ನಾ) = ತಪ್ಪುದಾರಿ; ಹಾದಿಬಿಟ್ಟ ಹಾದಿ; ವಾಮ ಮಾರ್ಗ.

ಅಡ್ಡಹೆಸರು (ನಾ) = ಮನೆತನದ ಹೆಸರು.

ಅಡ್ಡಳತೆ (ನಾ) = ವಸ್ತುವಿನ ಅಗಲದ ಅಳತೆ.

ಅಡ್ಡಾ (ನಾ) = ಜನ ಸೇರುವ ಸ್ಥಳ; ಕಟ್ಟೆ; ಚಾವಡಿ; ಜೂಜಿನ ಸ್ಥಳ.

ಅಡ್ಡಾಊರು (ಕ್ರಿ) = ತಳವೂರು; ಬಿಡಾರ ಹೂಡು; ವಾಸಿಸು.

ಅಡ್ಡಾಗಲ (ನಾ) = ಅಗಲಳತೆ; ಅತಿ ಅಗಲ.

ಅಡ್ಡಾಗು (ಕ್ರಿ) = ಮಲಗು; ಒರಗು, ಜರುಗು, ಸರಿ.

ಅಡ್ಡಾತಿಡ್ಡಾ = ಮನಬಂದಂತೆ; ಅಂಕಡೊಂಕ, ಒಂಕಟಿಂಕ.

ಅಡ್ಡಿ (ನಾ) = ಆಡ್ಡಿ; ಮಾನ; ನಾಲ್ಕು ಸೇರಿನ ಮಾನ; ಮೂರು ಸೇರಿನ ಮಾನ; ಅಡ್ಡಗಾಲು; ಬೀಗ; ಬೀಗದ ಕಪ್ಪೆ.

ಅಡ್ಡಿಘುಂಬು (ಕ್ರಿ) = ಸಾವು ಸಮೀಪಿಸು; ಅಡ್ಡಿ ಭರ್ತಿಯಾಗು; ಮಾನ ಪೂರ್ಣಗೊಳ್ಳು.

ಆಡ್ತಾರಯಾಳ್ಯಾ (ನಾ) = ಅಪವೇಳೆ.

ಅಡ್ನಾಡಿ (ನಾ)= ಕಾಡು ಸ್ವಭಾವದವನು.

ಅಡ್ಮಾಳ (ನಾ) = ನಿರ್ಜನ ಪ್ರದೇಶ; ಬಯಲು; ಮೈದಾನ; ಭಯಾನಕ ಅರಣ್ಯ.

ಅಡ್ಸಟ್ (ನಾ) = ಅಂದಾಜು; ಗುಟ್ಟು; ರಹಸ್ಯ, ಕೀಲು.

ಅಣಕಾ (ನಾ) = ಕಟಕಿಯಿಂದ ಕೂಡಿದ ಚುಚ್ಚು ಮಾತು.

ಅಣಗಿಸು (ಕ್ರಿ) = ಅಣಕಿಸು; ಅಪಹಾಸ್ಯ ಮಾಡು; ಅಪಮಾನಿಸು; ಕೋಡಗನಂತೆ ಹಲ್ಲು ತೋರಿಸು.

ಅಣಜ (ನಾ) = ಅಜ್ಜನ ತಂದೆ (ಪಣಜ= ಅಣಜನ ತಂದೆ)

ಅಣಸು (ನಾ) = ಕಬ್ಬಿಣದ ಬಳೆ, ಒನಕೆ, ಕಲ್ಲೂಟ, ಊರುಗೋಲು ಆದಿಗಳಿಗೆ ಸೀಳದಂತೆ ಹಾಕುವ ಕಬ್ಬಿಣದ ಬಳೆ.

ಅಣೆ (ನಾ) = ಆರುದುಡ್ಡಿನ ಉಸ್ಮಾನಿಯಾ ನಾಣ್ಯ; ನಾಲ್ಕು ದುಡ್ಡಿನ ಬ್ರಿಟಿಷ್ ಕಾಲದ ನಾಣ್ಯ; ಹದಿನಾರು ಆಣೆ ಸಮಾನ ಒಂದು ರೂಪಾಯಿ.

ಅಣ್ಣ (ನಾ) = ಒಡ ಹುಟ್ಟಿದವರಲ್ಲಿ ಮೊದಲಿಗ ಅಥವಾ ಹಿರಿಯ ನಾದವನು; ಹಿರಿಯರಿಗೆ ಗೌರವಪೂರ್ವಕ ಕರೆವ ಸಂಬೋಧನೆ (ಗಾದೆ: ಅತ್ತಿಗ್ಯಾಲ ಮುಣ್ದು ಅಣ್ಣನ್ಸಂಗಾಟ ಮಾತು ಬಿಟ್ಟಂತ)

ಅಣ್ಣದೇರು (ನಾ) = ಅಣ್ಣಂದಿರು.

ಅಣ್ತಮ್ಮಿ (ನಾ) = ಅಣ್ಣತಮ್ಮಿಕೆ; ಭಾಗಾದಿತನ; ಭಾಗಾದಿ.

ಅಣ್ತಮ್ದೇರು = ಅಣ್ಣತಮ್ಮಂದಿರು.

ಅತಂತ್ರ = ಅತ್ತವೂ ಅಲ್ಲದ, ಇತ್ತವೂ ಅಲ್ಲದ.

ಅತಗಿ (ನಾ) = ಅತ್ತಿಗೆ; ಅತ್ತಿ.

ಅತಳ (ನಾ) = ಅತಳ, ವಿತಳ, ಸುತಳ, ಪಾತಾಳ ಎಂಬ ಏಳು ಲೋಕಗಳಲ್ಲಿ ಒಂದು ಲೋಕ, ಅತಳ (ದೊಡ್ಡಾಟದ ಮಾತು)

ಅತಾತಾ = ಅತ್ತತ್ತ (ಗಾದೆ : ಅದೇ ಇಲ್ಲ ಅತಾತಾ ಅಂಧಾಂಗ).

ಅತಿ (ವಿ) = ಹೆಚ್ಚು (ಗಾದೆ : ಅತಿ ಆಸಿ ಗತಿಗೆಡುಸ್ತು)

ಅತಿಯಾಗು (ಕ್ರಿ) = ಹೆಚ್ಚಾಗು.

ಅತೋನಾತ = ಮಿತಿಮೀರಿ.

ಅತ್ಗಿ = ಅತ್ತಿಗೆ; ಅಣ್ಣ ಅಥವಾ ತಮ್ಮನ ಹೆಂಡತಿ.

ಅತ್ಗೋತ = ಅಳುತ್ತ

ಅತ್ತ (ಅ) = ಆಕಡೆಗೆ

ಅತ್ತರು (ನಾ) = ಈತರ; ಗಂಧೆಣ್ಣೆ; ಹೂವುಗಳಿಂದ ಭಟ್ಟಿ ಇಳಿಸಿ ತೆಗೆದ ಸುಗಂಧ ದ್ರವ್ಯ.

ಅತ್ತರ್ದಾನ = ಈತರದಾನ, ಗಂಧೆಣ್ಣೆ ಪೆಟ್ಟಿಗೆ.

ಅತ್ತಾ ಇತ್ತಾ = ಅತ್ತಕಡೆ, ಇತ್ತ ಕಡೆ, ಹೆಚ್ಚು ಕಡಿಮೆ.

ಅತ್ತಾರ (ನಾ) = ಗಂಧೆಣ್ಣೆ ವ್ಯಾಪಾರಿ.

ಅತ್ತಿ (ನಾ) = ಅಂಜೂರು ಜಾತಿಯ ಒಂದು ಬಗೆಯ ಮರ ಮತ್ತು ಅದರ ಕಾಯಿ; ಹೆಂಡತಿ ಅಥವಾ ಗಂಡನ ತಾಯಿ; ಅತ್ತೆ.

ಅತ್ತಿಗಿ (ನಾ) = ಅಣ್ಣ ಅಥವಾ ತಮ್ಮನ ಹೆಂಡತಿ.

ಅತ್ತೂಕರ್ದೂ (ಕ್ರಿ) = ಕೈಕಾಲು ಬಿದ್ದು, ರಮಿಸಿ; ನಂಬಿಸಿ (ಗಾದೆ : ಅತ್ತೂಕರ್ದೂ ಅತ್ತಿ ಅನ್ನುಕೊಂಡ್ಹಂತ.)

ಅತ್ತೆ (ನಾ) = ಹೆಂಡತಿ ಅಥವಾ ಗಂಡನ ತಾಯಿ; ತಂದೆಯ ಸೋದರಿ; ಸೋದರತ್ತೆ; ಸೋದರಮಾವನ ಹೆಂಡತಿ.

ಅತ್ತೆ (ಅ) = ಅತ್ತ ಕಡೆಯೆ; ಅತ್ತಲೆ

ಅತ್ಯಚಾರ (ನಾ) = ಅತ್ಯಾಚಾರ; ಸ್ತ್ರೀಯರ ಮೇಲಿನ ಬಲಾತ್ಕಾರ.

ಅತ್ರ = ಅತ್ತರೆ (ಉದಾ: ಅತ್ರೇನು ಸತ್ತೋರು ವಾಪಸ ಬರ್ತಾರಾ?)

ಅತ್ರಾಫ (ನಾ) ಉ. = ಸುತ್ತಮುತ್ತ

ಅತ್ಲಾಗ = ಅತ್ತ ಕಡೆಗೆ

ಅದನಾ (ವಿ) ಉ.= ಕೀಳು; ಕೆಳಮಟ್ಟದ, ಹೀನಗುಣದ.

ಅದಭಾರ (ನಾ) ಹಿಂ. = ಅರ್ಧವಸಂತ ಕಳೆದದ್ದು; ಅರೆವಯಸ್ಸು; ಇಳಿ ವಯಸ್ಸು.

ಅದರಂಟೆ (ವಿ.) = ನಡು, ಮಧ್ಯ; ಜೋತಾಡುವ; ಅತ್ತ ಅಲ್ಲದ ಇತ್ತ ಅಲ್ಲದ;ಅತಂತ್ರ.

ಅದರಪ್ಲೆ = ಅದರಂತೆ; ಅದರಹಾಗೆ.

ಅದಲಾಬದಲು = ಒಂದರ ಬದಲು ಮತ್ತೊಂದು.

ಅದಾ (ಕ್ರಿ) = ಇದೆ; ಇಹುದು; ಆದ; ಆದಾ.

ಅದಾಲತ್ತು (ನಾ) ಉ. = ನ್ಯಾಯಾಲಯ; ಕೋರ್ಟು.

ಅದಾವತಿ (ನಾ) ಉ. = ವೈರತ್ವ; ಶತ್ರುತ್ವ; ಆದಾವತಿ.

ಅದು (ಸ.ನಾ)=ಆ;ಅಲ್ಲಿಕಾಣುವಂತಹದು (ಉದಾ: ಅದು ಯಾರದು ? ಅದು ಕೂಸು ಅದಾ, ಅದು ಗಿಡ ಅದು ಬೆಕ್ಕು; ಅದು ಕಾರಣ ಕೂಡಲ ಸಂಗಮದೇವ, ಲಿಂಗಸ್ಥಳವ ನರಿದವನೇ ಕುಲಜನು.)

ಅದುಬೀ = ಅದು ಕೂಡ; ಅದುವೂ.

ಅದುರು (ಕ್ರಿ) = ನಡುಗು; ಕಂಪಿಸು; ಅಲುಗಾಡು.

ಅದೇ ಇಲ್ಲ ಅತ್ತತ್ತ (ನು) = ಷಂಡಗಂಡನ ಪಾಡು.

ಅದೇನು = ಅದು ತರವೇ, ಯೋಗ್ಯವೇ, ನೀತಿಯೇ?

ಅದ್ಕಿಂತ (ಅ) = ಅದಕ್ಕಿಂತಲೂ.

ಅದ್ಗಚ್ಚಾ (ವಿ.) = ಅರೆಬೆಂದ; ಪೂರ್ಣ ಕುದಿಯದ.

ಅದ್ದ = ಅರ್ಧಾ. ೧/೨ ಭಾಗ.

ಅದ್ದನ (ನಾ) = ಅರ್ಧಸೇರು; ಅದ್ದುನ ಎರಡು ಪಾವು.

ಅದ್ದಸಿಂದ = ಅದರ ಸಲುವಾಗಿ; ಅದಕ್ಕಾಗಿ.

ಅದ್ದಾ (ವಿ) = ಅರ್ಧ (ಗಾದೆ ಅದ್ದಾಕೊಡಾ, ಅಳ್ಳ್ಯಾಡಾದು ಹೆಚ್ಚು)

ಅದ್ದಾತೆಲಿಬ್ಯಾನಿ (ನಾ) = ಅರೆತಲೆಶೂಲೆ, ಒಪಾರಿಬ್ಯಾನಿ.

ಅದ್ನ (ವಿ) = ಅದ್ದನ; ಅರ್ಧಸೇರು; ಎರಡುಪಾವು.

ಅದ್ನಾ (ವಿ)ಉ = ಕೀಳು; ಹೀನ, ನಾದಾನ

ಅದ್ಪಾವು (ನಾ) = ಅರ್ಧಪಾವಿನ ಮಾನ.

ಅದ್ಭಾರ (ನಾ) = ಅರ್ಧವಯಸ್ಸಿನವ; ಇಳಿ ವಯಸ್ಸಿನವ.

ಅದ್ಯಾ (ನಾ) = ಅಧ್ಯಾಯ; ಪುರಾಣದ ಒಂದು ಭಾಗ.

ಅದ್ಯಾಮುಗ್ಸು = ಮರಣಹೊಂದು; ಸಾಯು, ಪುರಾಣದ ಒಂದು ಭಾಗ ಓದಿ ಮುಗಿಸು.

ಅಧೂರಾ (ವಿ) ಹಿಂ. = ಅಪೂರ್ತಿ; ಅರ್ಧಮರ್ಧಮುಗಿಸಿದ.

ಅನಂದ (ನಾ) = ಆನಂದ.

ಅನಕಾ (ಕ್ರಿ.ವಿ) = ಅಲ್ಲಿಯವರೆಗೆ; ಆವರೆಗೆ; ಅಲ್ಲಿಯತನಕ

ಅನಕಾತನ (ಕ್ರಿ.ವಿ) = ಅಲ್ಲಿಯ ತನಕ ಆವರೆಗೆ, ಆತನಕ.

ಅನಗಾಡ (ವಿ.) = ಬಹಳ; ತೋಲು; ಜಾಸ್ತಿ; ಹೆಚ್ಚು ; ಅಧಿಕ.

ಅನಗಿನತ (ವಿ)ಉ. = ಎಣಿಕೆ ಇಲ್ಲದ

ಅನಗೇಡಿ (ನಾ) = ಅನ್ನಕಾಣದೆ ಕೆಟ್ಟವ (ಬೈಗುಳ)

ಅನ್‌ಪಡ (ನಾ) ಹಿಂ. = ಅನಕ್ಷರಸ್ಥ; ಅಶಿಕ್ಷಿತ.

ಅನ್‌ಪಾಸ್ (ನಾ) ಇಂ. = ಅನುತ್ತೀರ್ಣ

ಅನಭಾತ್ಯಾ (ನಾ) = ಅತಿಕೂಳು ತಿನ್ನುವವ.

ಅನಾಚಾರಿ (ನಾ) = ಆಚಾರಗೆಟ್ಟವ (ಗಾದೆ: ಬಾಯಿ ಬ್ರಹ್ಮಚಾರಿ; ಗುಣಾ ಅನಾಚಾರಿ), ಬೈಗುಳ.

ಅನಾಜು (ನಾ) = ಧಾನ್ಯಕಾಳು; ದವಸ

ಅನಾಡಿ (ನಾ) = ಕಾಡುಗುಣದವ; ಅಸಭ್ಯ; ಜಂಗ್ಲಿ.

ಅನಾತ (ನಾ) = ಅನಾಥ; ತಾಯಿ ತಂದೆ ಇಲ್ಲದ, ದಿಕ್ಕಿಲ್ಲದ; ಆಧಾರ ಇಲ್ಲದ.

ಅನಾದಿ (ನಾ) = ಹಳೆಯದು; ಪುರಾತನ; ಮೊದಲನ್ನು ಗುರುತಿಸಲಾಗದುದು.

ಅನಾನಸ್ (ನಾ) = ಪೈನ್ ಎಪಲ್; ಒಂದು ಜಾತಿಯ ಹಣ್ಣು.

ಅನಾಮತ (ವಿ) ಹಿಂ. = ಮೆಲ್ಲಗೆ; ಗೊತ್ತಾಗದಂತೆ; ಸದ್ದಾಗದಂತೆ.

ಅನಾಮತ್ತು (ನಾ) = ಬಳಸದೇ ಭದ್ರವಾಗಿ ಇಡಬೇಕಾದ ಅನ್ಯರ ವಸ್ತು, ದುಡ್ಡು; ಇಡುಗಂಟು; ಅಮಾನತ್ತು.

ಅನಾಮಾತ (ಕ್ರಿ.ವಿ) = ಮೆಲ್ಲಗೆ; ಯಾರಿಗೂ ಗೊತ್ತಾಗದಂತೆ; ಗಪ್ಚುಪ್ಪೆ; ಗುಪ್ತವಾಗಿ

ಅನಾಯಸೆ (ವಿ) = ಸುಲಭವಾಗಿ; ಆಯಾಸವಿಲ್ಲದೆ.

ಅನಾರಸ (ನಾ) = ಒಂದು ಬಗೆಯ ಪಕ್ವಾನ್ನ.

ಅನಾರಸ್ಯಾ(ನಾ) = ಅನಾರಸ (ನೋಡಿರಿ)

ಅನಾಹೂತ (ನಾ) = ಅನಾಹುತ; ಪ್ರಮಾದ; ಕೇಡು.

ಅನು (ಕ್ರಿ) = ಹೇಳು; ನುಡಿ, ಮಾತಾಡು.

ಅನುಕೂಲ (ನಾ)= ಅನ್ಕುಲ ; ಕುಲದವರಲ್ಲದವರು, ಕೀಳು ಕುಲದವರು.

ಅನುತನು (ನಾ) = ಕಷ್ಟನಷ್ಟ, ಸುಖದುಃಖ, ನೋವು ನಲಿವು.

ಅನುಭವ (ನಾ) = ಇಂದ್ರಿಯಗಳ ಮೂಲಕ ಬರುವ ಜ್ಞಾನ.

ಅನುಭವ ಮಂಟಪ (ನಾ) = ಬಸವಕಲ್ಯಾಣದಲ್ಲಿ ಹನ್ನೆರಡನೇ ಶತಮಾನದಲ್ಲಿ ಶರಣರು ಅನುಭಾವಗೋಷ್ಠಿ ನಡೆಸಿದ ಪವಿತ್ರ ಸ್ಥಳ.

ಅನುಭವಸ್ಥ (ನಾ)=ಅನುಭವ ಉಳ್ಳವನು.

ಅನುಮಾನ (ನಾ) = ಸಂಶಯ, ಸಂದೇಹ, ಶಂಕೆ.

ಅನುಮಾನಗೇಡಿ (ನಾ) = ಅನುಮಾನ ಮಾಡುತ್ತ ಕೆಟ್ಟವನು (ಬೈಗುಳ)

ಅನುಲಿ (ನಾ) = ಅಳಿಲು; ಇಣಚಿ.

ಅನುವು (ನಾ) = ಅವಕಾಶ ; ಆಸ್ಪದ.

ಅನುಷ್ಟಾನ (ನಾ) = ಅನುಷ್ಠಾನ; ಆಚರಣೆ.

ಅನ್ನಾ (ಅ) = ತನಕ; ವರೆಗೆ.

ಅನ್ನಾತನಾ (ಅ) = ಅಲ್ಲಿಯವರೆಗೆ.

ಅನ್ಕುಲ (ನಾ) = ಅನ್ಯಕುಲ; ಬೇರೆ ಕುಲ; ಕೀಳು ಕುಲ.

ಅನ್ಕೂಲ(ನಾ) = ಅನುಕೂಲ.

ಅನ್ನಕ್ಕ ಮೂರು ಹರಿದಾರಿ = ಅನ್ನ ಕಾಣದ ಅವಸ್ಥೆ.

ಅನ್ನಾ (ನಾ) = ಆಹಾರ; ಕುದಿಸಿದ ಅಕ್ಕಿ, ಅನ್ನ.

ಅನ್ನಧಾನಾ =ಅನ್ನ ನೀಡುವುದು (ತ್ರಿಪದಿ ಅನ್ನದಾನಕ್ಕಿಂತ ಇನ್ನುದಾನಗಳಿಲ್ಲ. ಅನ್ನಕ್ಕೆ ಮೇಲೆ ಏನುಂಟು/ಲೋಕದೊಳು/ಅನ್ನವೇ ದೈವ ಸರ್ವಜ್ಞ)

ಅನ್ನಭಾತ್ಯಾ (ನಾ) = ಅತಿ ಅನ್ನ ತಿನ್ನುವವನು. ಸದಾ ಅನ್ನಕ್ಕಾಗಿ ಚಡಪಡಿಸುವವನು.

ಅನ್ನವೇ ದೈವ (ನಾ) = ಅನ್ನದಬಾಕಿ; ಅನ್ನ ಉಣ್ಣುವ ಯೋಗ.

ಅನ್ನಾಅನ್ನಾರಾಮಚಂದ್ರ = ಅನ್ನಕ್ಕಾಗಿ ಸದಾ ಚಡಿಪಡಿಸುವವ, ಅನ್ನವೇ ದೇವರು ಎನ್ನುವವನು (ಳು).

ಅನ್ಮಾನ್ = ಅನುಮಾನ; ಸಂಶಯ.

ಅನ್ಮಾನಗೇಡಿ (ನಾ) = ಅನುಮಾನ ಗುಣದಿಂದ ಕೆಟ್ಟವನು

ಅನ್ಯಾ (ನಾ) = ಅನ್ಯಾಯ.

ಅನ್ನ್ಯಾಂತಿ (ನಾ) = ಅನ್ನದಾನ ಮಾಡುವ ಮೂಲಕ ಪಡೆಯುವ ಮನಃಶಾಂತಿ.

ಅನ್ನು (ಕ್ರಿ) = ಅನಿಸು; ಅನ್ನಿಸು.

ಅಪಗಾರ (ನಾ) = ಅಪಕಾರ (ಗಾದೆ: ಉಪಗಾರ ಮಾಡಿದೋರಿಗಿ ಅಪಗಾರ ಮಾಡಿದ್ರಂತ).

ಅಪಗೋ (ಕ್ರಿ) = ಅಪ್ಪಿಕೊ.

ಅಪನಾಪನ್ (ನಾ) ಹಿಂ. = ನನ್ನವರೆಂಬ ಭಾವ, ಕಳಕಳಿ.

ಅಪಪರ್ಚಾರ (ನಾ) = ಸುಳ್ಳು ವಿಷಯ ಬಿಂಬಿಸುವಿಕೆ; ಹುಸಿ ನಂಬಿಕೆ ಹುಟ್ಟಿಸುವಿಕೆ.

ಅಪಮತಲಬಿ (ನಾ) ಹಿಂ. = ಸ್ವಾರ್ಥಿ; ತನ್ನದನ್ನು ಸಾಧಿಸುವವನು.

ಅಪಮಾನ (ನಾ) = ಅವಮಾನ; ಮಾನ ಕಳೆಯುವಿಕೆ (ಗಾದೆ: ಅಪಮಾನಾದ ಮ್ಯಾಲಾ, ಅರ್ಧಾಘಳ್ಗಿ ನಿಂದುರ್ಬಾರ್ದು).

ಅಪರಂಪಾರ (ನಾ) = ಮೇರೆ ಇಲ್ಲದ; ಮಿತಿ ಮೀರಿದ; ಅನಂತ. ಎಲ್ಲೆ ಮೀರಿದ.

ಅಪರೂಪ (ನಾ) = ಕಣ್ಣಿಗೆ ಕಾಣದ ರೂಪ; ಸಿಗಲಾರದ, ದೊರಕದ.

ಅಪಲಂಚಪಲಂ (ನಾ) = ಬೆರೆದಾಟ; ಸಂಭೋಗ.

ಅಪಲಂಚಪಲಂಮಾಡು (ಕ್ರಿ) = ಬೆರೆದಾಡು, ಸಂಭೋಗಿಸು.

ಅಪಲೆ (ಅ) = ಅಂತೆ, ಹಾಗೆ

ಅಪಾ (ನಾ) = ಅಪ್ಪಾ

ಅಪಾಯ (ನಾ) = ವಿಪತ್ತು ; ಕೇಡು; ಹಾನಿ.

ಅಪಾರ (ನಾ) = ಎಲ್ಲೆಯಿಲ್ಲದ; ಕೊನೆಯಿಲ್ಲದ.

ಅಪೀಲು (ನಾ) ಇಂ. = ಮನವಿ; ಮೇಲ್ಮನವಿ.

ಅಪು (ನಾ) = ಅಫೀಮು; ಒಂದು ಪ್ರಕಾರದ ನಶೆಯ ಪದಾರ್ಥ.

ಅಪೂಟ (ವಿ) = ಪೂರ್ಣ; ಶುದ್ಧ; ಬೆರೆಸಲಾರದ; ಮೂಲ.

ಅಪ್ಗಿ (ನಾ) = ಅಪ್ಪುಗೆ; ಜೋಡಣೆ.

ಅಪ್ಗೊ (ಕ್ರಿ) = ಅಪ್ಪಿಕೊ.

ಅಪ್ನೋರು (ನಾ) = ಅಪ್ಪನವರು; ಅಯ್ಯನವರು; ಜಂಗಮರು; ಸ್ವಾಮಿಗಳು.

ಅಪ್ಪ (ನಾ) = ತಂದೆ; (ಗಾದೆ : ಅಪ್ಪಗ ಅಪ್ಪ ಅಂಬಲ್ದಾಂವ ಚಿಕ್ಕಪ್ಪಗ ಅಪ್ಪ ಅಂದಾನಾ ?)

ಅಪ್ಪಾಜಿ (ನಾ) = ತಂದೆಯವರು.

ಅಪ್ಪಿ (ನಾ) = ಸಣ್ಣ ಗಂಡು ಮಕ್ಕಳಿಗೆ ಪ್ರೀತಿಯ ಸಂಬೋಧನೆ.

ಅಪ್ಪಿತಪ್ಪಿ (ಅ) = ಕಣ್ತುತಪ್ಪಿ; ಅಕಸ್ಮಾತ್.

ಅಪ್ಪು (ಕ್ರಿ) = ಆಲಿಂಗಿಸು, ತಬ್ಬು.

ಅಪ್ಪುಳ್ಸು (ಕ್ರಿ) = ಅಪ್ಪಳಿಸು; ತಾಗು; ತಟ್ಟು; ಎತ್ತಿಕುಕ್ಕು.

ಅಪ್ಪೇಸಿ (ನಾ) = ಅಪಯಶಸ್ವಿ (ಬೈಗುಳ).

ಅಫವಾ (ನಾ)ಉ. = ಗಾಳಿಸುದ್ದಿ.

ಅಫ್ರಾತಫ್ರಾ (ನಾ) ಹಿಂ. = ಸುಳ್ಳು ಲೆಕ್ಕ; ಮೋಸ; ಫರಕು, ದುರುಪಯೋಗ.

ಅಫ್ಸರ್ (ನಾ) = ಅಧಿಕಾರಿ; ಆಫೀಸರ್.

ಅಫ್ಸೋಸ್ (ನಾ)ಉ. = ಚಿಂತೆ; ಚಿಂತಾಜನಕ ಸ್ಥಿತಿ.

ಅಬಂಡ (ನಾ) = ದಪ್ಪ; ದಪ್ಪಗಾತ್ರದ್ದು; ತೂಕ; ವಿಶೇಷ ಗಾತ್ರ.

ಅಬಕಾರಿ (ನಾ) = ಹೆಂಡಸಾರಾಯಿಗಳ ಮಾರಾಟದ ಮೇಲೆ ತೆರಿಗೆ ಹೇರುವ ಇಲಾಖೆ.

ಅಬಬಬ (ಅ) = ಅಬ್ಬಬ್ಬ

ಅಬರಕ್ (ನಾ) = ಕಾಗೆಬಂಗಾರ; ಅಭ್ರಕ.

ಅಬರಂಗ (ನಾ) = ಕಾಗೆಬಂಗಾರ; ಅಭ್ರಕ (ಹಾಡು : ಕರಿಯಗುಡ್ಡದ ಮ್ಯಾಲ। ಕರಿ ಎತ್ತು ಕಾಯುವ । ಕರಿಯ ಚೆಲ್ಲಾಣೆ ಅಬರಂಗ ಕೋಲೆ).

ಅಬರು (ನಾ) = ಇಜ್ಜತ್ತು; ಗೌರವ; ಮರ್ಯಾದೆ.

ಅಬಾಬಬ = ಅಬ್ಬಬ್ಬಾ.

ಅಬಿಮಾನ = ಅಭಿಮಾನ.

ಅಬುರಗೇಡಿ (ನಾ) = ಮಾನ ಮರ್ಯಾದೆ ಇಲ್ಲದವ; ಅಬುರ್ಗೇಡಿ (ಬೈಗುಳ).

ಅಬುರ್ಗೇಡಿ (ನಾ) = ಅಬುರಗೇಡಿ; ಮಾನಮರ್ಯಾದೆ ಇಲ್ಲದವ. (ಬೈಗುಳ)

ಅಬೆತುಬೆ (ನಾ) = ಎಲ್ಲಗತೆಲ್ಲ; ಯಾಕಲೆ ಏನಲೆ.

ಅಬ್ಬಡದುಬ್ಬಡ (ವಿ) = ಅವಡಸವಡ; ವಿಕಾರವುಳ್ಳ.

ಅಬ್ಬಬ್ಬ (ಅ) = ಅಬ್ಬಾ; ಓಹೋ.

ಅಬ್ಬರಿಸು (ಕ್ರಿ) = ಆರ್ಭಟಿಸು; ಗರ್ಜಿಸು.

ಅಬ್ಬಾ (ಅ) = ಅಬ್ಬಬ್ಬಾ.

ಅಬ್ಬಾ (ನಾ) = ಅಪ್ಪಾ; ಅಪ್ಪ; ತಂದೆ; ಪಿತ.

ಅಬ್ಬುರು (ನಾ) = ಅಬ್ಬರ

ಅಬ್ಬುರ್ಗೇಡಿ (ನಾ) = ಅಬುರ್ಗೇಡಿ; ಅಬರು ಇಲ್ಲದವ; ಮರ್ಯಾದೆ ಇಲ್ಲದವ.

ಅಭಂಗ (ನಾ) = ಮರಾಠಿ ಭಜನದ ಒಂದು ಪ್ರಕಾರ; ಭಜನದ ಹಾಡಿನ ಕೊನೆಯಲ್ಲಿ ಹೇಳಲಾಗುವ ದ್ವಿಪದಿ (ಉದಾ: ಶರಣರು ಹೊಂಟಾರ ಕಲ್ಲೆಣಕ / ಅಕ್ಕ ಮಾದೇವಿ ದರ್ಶನಕ).

ಅಭಾಳ (ನಾ) = ಮೋಡ.

ಅಭಿಮಾನ (ನಾ) = ಆತ್ಮಗೌರವ.

ಅಭ್ಯಾಸ (ನಾ) = ರೂಢಿ; ಪರಿಪಾಠ.

ಅಭ್ರಕ (ನಾ) =ಅಬರಕ್; ಕಾಗೆಬಂಗಾರ.

ಅಮಂಗಲ (ನಾ) = ಅನಿಷ್ಟ; ಅಶುಭ.

ಅಮನ (ನಾ) ಉ. = ಶಾಂತಿ.

ಅಮನ್‌ಚಮನ್ (ನಾ) ಉ. = ಆನಂದವೇ ಆನಂದ; ನಿಶ್ಚಿಂತ.

ಅಮರವಾಡಿ (ನಾ) = ಬೀದರ ಜಿಲ್ಲೆಯ ಔರಾದ ಎಂಬ ತಾಲೂಕು ಕೇಂದ್ರದ ಊರು; ಮೊದಲು ಅಮರವಾಡಿ ಎಂದಾಗಿತ್ತು. ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮನವರ ಊರು.

ಅಮರಾಯಿ (ನಾ) = ಮಾವಿನ ತೋಪು.

ಅಮರಾವತಿ (ನಾ) = ಇಂದ್ರನಗರ.

ಅಮರೇಶ್ವರ (ನಾ) = ಆಯ್ದಕ್ಕಿ ಮಾರಯ್ಯ ಶರಣರ ವಚನಾಂಕಿತ; ತಾಲೂಕು ಕೇಂದ್ರವಾದ ಔರಾದ (ಬಿ) ಗ್ರಾಮದ ಅಮರೇಶ್ವರ ದೇವರು.

ಅಮಲ್ (ನಾ) ಹಿಂ. = ಕೆಲಸ; ಕರ್ತವ್ಯ.

ಅಮಲ್‌ಬಜಾವಣಿ (ನಾ) ಹಿಂ. = ಅಪ್ಪಣೆಯನ್ನು ಕಾರ್ಯಗತಗೊಳಿಸುವಿಕೆ. ಕರ್ತವ್ಯ ನಿಭಾವಣೆ.

ಅಮಲ್ ಮಾಡು (ಕ್ರಿ) = ಕೆಲಸಮಾಡು

ಅಮಲಾ(ನಾ) ಹಿಂ. = ಸಿಬ್ಬಂದಿ.

ಅಮಾನತ್ತು (ನಾ) = ಸಂರಕ್ಷಣೆಗಾಗಿ ಅನ್ಯರಲ್ಲಿ ಇಡಲಾದ ವಸ್ತು; ಅನಾಮತ್ತು.

ಅಮಾಸಿ (ನಾ) = ಅಮಾವಾಸ್ಯ (ಗಾದೆ : ಅಯ್ಯಸತ್ರ ಅಮಾಸಿ ನಿಂದ್ರಾಲ!)

ಅಮಾಸ್ಯಾ (ನಾ) = ಕರಿಯಬಣ್ಣದವ; ಕರಿಯ ಬಣ್ಣದ ಎತ್ತು.

ಅಮೀನ (ನಾ) ಹಿಂ. = ಪೊಲೀಸ್ ಉಪನಿರೀಕ್ಷಕ.

ಅಮೀರ (ನಾ) ಉ. = ಹಣವಂತ; ಸಾಹುಕಾರ; ಶ್ರೀಮಂತ.

ಅಮೂಕ (ನಾ) = ಅಂದಾಜು; ಗೊತ್ತಾಗದ; ಗೌಪ್ಯ.

ಅಮ್ರೂತ (ನಾ) = ಅಮೃತ (ಕವನ : ಖಾರಾಉಪ್ಪು/ಕಾಡಿನ ಸೊಪ್ಪು/ ಒಕ್ಕಲ್ಗಿತ್ತಿ ಅಡ್ಗಿ/ಅಮ್ರೂತ ಘುಂಬಿದ ಗಡ್ಗಿ॥).

ಅಮ್ರೂತ ಘಳಗಿ (ನಾ) = ಅಮೃತಗಳಿಗೆ; ಒಳ್ಳೆಯ ಘಟಿಕಾ; ಒಳ್ಳೆಯಗಳಿಗೆ.

ಅಮ್ಮ (ನಾ) = ಅವ್ವ; ತಾಯಿ; ಮೊಲೆ.

ಅಮ್ಮಕುಡಿಸು (ಕ್ರಿ) = ಮೊಲೆಯೂಡು.

ಅಮ್ಮಿ (ನಾ) = ತಾಯಿ; ಅಮ್ಮ;ಮೊಲೆ; ಹೆಣ್ಣು ಕೂಸುಗಳಿಗೆ ಪ್ರೀತಿಯ ಸಂಬೋಧನೆ.

ಅಯ್ತಾನ (ನಾ) = ಅಯ್ಯತನ, ಜಂಗಮ ದೀಕ್ಷೆ. ಜಂಗಮಿಕೆ.

ಅಯ್ನೋರು (ನಾ) = ಅಪ್ಪನವರು; ಜಂಗಮರು; ಅಯ್ಯನವರು; ಬ್ರಾಹ್ಮಣರು.

ಅಯ್ಯ (ನಾ) = ಜಂಗಮ; ಬ್ರಾಹ್ಮಣ; ಅಪ್ಪ; ತಂದೆ; ಸ್ವಾಮಿ (ಗಾದೆ : ಅಯ್ಯಸತ್ರ ಅಮಾಸಿ ನಿಂದ್ರಾಲ).

ಅಯ್ಯಾಚಾರ (ನಾ) = ಜಂಗಮದೀಕ್ಷೆ.

ಅಯ್ಯಾರಿ (ನಾ) =ಉಡುಗೊರೆ; ಕಾಣಿಕೆ.

ಅಯ್ಯಾರಿಪಟ್ಟಿ (ನಾ) = ಉಡುಗೊರೆ, ಕಾಣಿಕೆ ಇತ್ಯಾದಿ ಕೊಟ್ಟವರ ಹೆಸರಿನ ಪಟ್ಟಿ ಮತ್ತು ವಿವರ.

ಅಯ್ಯಾಸಿ (ನಾ) ಉ. = ಭೋಗಲಾಲಸೆ.

ಅರಗಾಸಿ (ನಾ) = ಗಳೆ ಹೊತ್ತೊಯ್ಯುವ ರಿಕ್ಕಿನ ಕಟ್ಟಿಗೆ; ಪ್ಯಾಂಟು.

ಅರಗಿಣಿ (ನಾ) = ಉತ್ತಮವಾದ ಗಿಣಿ; ಗಿಳಿಗಳಲ್ಲಿ ಶ್ರೇಷ್ಠವಾದ ಗಿಣಿ; ಪ್ರೀತಿ ಸಂಬೋಧನೆಯ ಮಾತು.

ಅರಗಿನ ಮನಿ (ನಾ) = ಪಾಂಡವರನ್ನು ಕೊಲ್ಲಲು ಕೌರವರು ಕಟ್ಟಿಸಿದ ಲಾಕ್ಷಾ ಗ್ರಹ (ಉದಾ: ಅರಗಿನ ಮನೆಯಲ್ಲಿರುವವರು ಉರಿಗೆ ಅಂಜಲೇಬೇಕು.)

ಅರಗು (ನಾ) = ಒಂದು ಪ್ರಕಾರದ ಕೆಂಪು ದ್ರವ್ಯ. ಲಾಕ್ಷ (ವಚನ : ಅರಗುತಿಂದು

ಕರಗುವ ದೈವ, ಉರಿಯ ಕಂಡು ಮುರುಗುವ ದೈವ ಬಸವಣ್ಣನವರು)

ಅರಗು (ಕ್ರಿ) = ಜೀರ್ಣವಾಗು, ಪಚನವಾಗು; ಕರಗು

ಅರಗೇಡಿ (ನಾ) = ಅರಿವುಗೇಡಿ; ಅರಿವು ಇಲ್ಲದಕ್ಕೆ ಕೆಟ್ಟವ. (ಬೈಗುಳ).

ಅರಟಗಿ (ನಾ) = ಅರವಟ್ಟಿಗೆ; ಉಚಿತ ಕುಡಿಯುವ ನೀರಿನ ಕೇಂದ್ರ.

ಅರಣಿ (ನಾ) = ಹೊಲದ ಬದಿಯ ಮಣ್ಣಿನ ಒಡ್ಡು, ಒಬ್ಬ ನಿಷ್ಠಾವಂತ ವಿದ್ಯಾರ್ಥಿಯ ಹೆಸರನ್ನು ಗುರುವು ಈ ಒಡ್ಡಿಗೆ ಕೊಟ್ಟಿದ್ದಾರೆ.

ಅರಬ (ನಾ) ಉ. = ಅರಬ ದೇಶದವನು.

ಅರಬಸ್ತಾನ (ನಾ) ಉ. = ಅರಬ ಜನರ ದೇಶ.

ಅರಬ್ಬಕುದುರೆ (ನಾ) = ಅರಬಸ್ತಾನದ ಕುದುರೆ.

ಅರಮನಿ (ನಾ) = ಅರಸ ವಾಸಿಸುವ ಮನೆ; ಅರಮನೆ.

ಅರಮಾನ (ನಾ) = ಖಾಯಸ್ಸು; ಹಂಬಲ; ಆಸೆ.

ಅರಮಾನ ಮಿಟಾಸು (ಕ್ರಿ) = ಹಂಬಲ ತೀರಿಸು.

ಅರಳಿ (ನಾ) = ಅರಳಿ ಎಲೆಯಂಥ ಒಡವೆ; ಕೂಸಿನ ಕುಲಾವಿಯ ಒಡವೆ. (ಹಾಡು : ಅರಳೆಲೆ ಮಾಗಾಯಿ/ ಬೆರಳಿ ಗುಂಗುರವಿಟ್ಟು ಸರಸ ಹೊನ್ನುಂಗೂರವರು ತೂಗೀರೆ/ ನೀವು ತೂಗೀರೆ॥

ಅರಿ (ಕ್ರಿ) = ತಿಳಿ, ಅರೆ; ನುಣ್ಣಗೆ ಮಾಡು; ಸಣ್ಣಗೆ ಮಾಡು; ಬುಕ್ಕು; ಮೆಲಿ.

ಅರಿ (ವಿ.) = ಅರ್ಧ; ಕಡಿಮೆ ; ಅರೆ

ಅರಿಭೀಳು (ಕ್ರಿ) = ಕೊರತೆಯಾಗು; ತ್ರುಟಿಯಾಗು; ತುಟಿ ಭೀಳು; ಕಡಿಮೆಯಾಗು.

ಅರುವಿನ ಮನೆ (ನಾ)= ಅರುಹಿನ ಮನೆ, ಬಸವಣ್ಣನವರ ಪೂಜೆಯಗವಿ (ಬಸವಕಲ್ಯಾಣದಲ್ಲಿರುವ)

ಅರಳು ಮರಳು (ನಾ) = ಅರವತ್ತು ವಯಸ್ಸು ದಾಟಿದವರ ಸ್ಮರಣಶಕ್ತಿಯ ಕುಂದುವಿಕೆ.

ಅರೆರೆರೆ (ಅ) = ಅಯ್ಯೋ; ಓಹೋ; ಅಯ್ಯಯ್ಯೋ,

ಅರೆಹುಚ್ಚ (ನಾ) = ಅರ್ಧಮರ್ಧ ಹುಚ್ಚ ಅಥವ ಜಾಣ.

ಅರ್ಕಿಬರ್ಕಿ (ವಿ) = ಕಲಬೆರಕೆ, ವಿವಿಧ ಧಾನ್ಯಗಳು ಬೆರೆಸಿದ.

ಅರ್ಕಿಬರ್ಕಿ ಹಿಟ್ಟು (ನಾ) = ಎಣ್ಣೆಗಾಣದ ಹಿಟ್ಟು; ಧಪಾಟಿ ಹಿಟ್ಟು; ಬೆರಕೆ ರೊಟ್ಟಿಯ ಹಿಟ್ಟು (ಒಡಗತೆ: ಅರ್ಕಿಬರ್ಕಿ ಹಿಟ್ಟು। ಅಳ್ಳಾನ ಒಣಕಿಗಿ ಕಟ್ಟು । ಅತ್ತಿ ಒಳ್ಳಾಗ ಹೆಟ್ಟು । -ಎಣ್ಣೆಗಾಣ)

ಅರ್ಗಾಡ (ನಾ) = ಮಳೆ ಇಲ್ಲದೆ ಬೆಂದ ಭೂಮಿಯ ಸ್ಥಿತಿ.

ಅರ್ಗಾವು (ನಾ) = ಅರ್ಧ ಮರ್ಧ ಕಾಯ್ದು; ಪೂರ್ಣ ಕಾಯದ.

ಅರ್ಗು (ಕ್ರಿ) = ಅರಗು; ಕರಗು; ಜೀರ್ಣವಾಗು.

ಅರ್ಗೇಡಿ (ನಾ) = ಅರಿವಿಲ್ಲದವ; ಅರಿವು ಗೇಡಿ; (ಹಾಡು : ಅರ್ಗೇಡಿ ನರಜನ್ಮಕ । ಅರಿವು ಬರ್ಲಾಕ । ಗುರುಬೇಕಿದಕಾ॥)

ಅರ್ಜಿ (ನಾ) ಹಿಂ. = ವಿನಂತಿ ಪತ್ರ; ಪ್ರಾರ್ಥನಾ ಪತ್ರ; ಅರಿಕೆ.

ಅರ್ಜಿದಾರ (ನಾ) ಹಿಂ. = ಅರ್ಜಿ ಸಲ್ಲಿಸುವವನು.

ಅರ್ಜುಣ (ನಾ) = ಅರ್ಜೀರ್ಣ.

ಅರ್ಜಂಟ್ = ತುರ್ತು; ತಕ್ಷಣ.

ಅರ್ಝುಪ್ಪರ (ನಾ) = ಅರೆಬಂಡೆಯ ಚಪ್ಪರ.

ಅರ್ಝೊಂವಿ (ನಾ) = ಅರಿವು ಇಲ್ಲದವ; ಅರಿವು ಗೆಟ್ಟವ; ಅರಿವುಗೇಡಿ; ಅರ್ಝೊಂವು.

ಅರ್ಝೊಂವು (ನಾ) = ಅರಿವಿಲ್ಲದ (ಅರ್ಝೊಂವಿ ನೋಡಿರಿ)

ಅರ್ಥಾ (ನಾ) = ಅಭಿಪ್ರಾಯ

ಅರ್ದಾ = ಅರ್ಧ

ಅರ್ದು ಬುಕ್ಕು = ಸತಾಯಿಸು

ಅರ್ಧಾ (ವಿ) = ವಸ್ತುವಿನ ಎರಡು ಸಮ ಪಾಲು

ಅರ್ಧಾ ಆಣೆ (ನಾ) = ಮೂರುಪೈಸೆ ಉಸ್ಮಾನಿಯ ಸಿಕ್ಕಾ, ಎರಡು ಪೈಸೆ ಬ್ರಿಟೀಷ್ ನಾಣ್ಯ.

ಅರ್ಧಾಮರ್ಧಾ (ವಿ) = ಪೂರ್ತಿಯಾಗದ; ಅಪೂರ್ಣ.

ಅರ್ಬಿ (ನಾ) = ಬಟ್ಟೆ; ವಸ್ತ್ರ; ಅರಿವೆ.

ಅರ್ಬಿಅಂಚಟಿ (ನಾ) = ಬಟ್ಟೆಬರೆ.

ಅರ್ಬಿಒಗಿ (ಕ್ರಿ) = ಬಟ್ಟೆ ತೊಳೆ.

ಅರ್ಬಿಚಿಂದಿ (ನಾ) = ಬಟ್ಟೆ ಚೂರು; ಬಟ್ಟೆ ತುಂಡು.

ಅರ್ಬಿಪತ್ತಿ (ನಾ) = ಬಟ್ಟೆಯ ಪಟ್ಟಿ; ಕಿರಿ ಅಗಲದ ಉದ್ದನೆಯ ಬಟ್ಟೆಯಚೂರು (ಗಾದೆ : ಆನೆ ಮುಟ್ಟಾದ್ರ ಅರ್ಬಿ ಪತ್ತಿ ಸಾತಾತಾ ?)

ಅರ್ಬೂಜ (ನಾ) = ಬುದ್ಧಿಗೇಡಿ

ಅರ್ಭಾಟ (ನಾ) = ಅಬ್ಬರ

ಅರ್ಸ (ನಾ) = ಅರಸ

ಅರ್ಸಿಣ (ನಾ) = ಅರಿಷಿಣ

ಅರ್ಸಿಣ ಹಚ್ಚು (ಕ್ರಿ) = ಶುಭಯೋಗ ಉಂಟಾಗು.

ಅರ್ಹೊಟ್ಟಿ (ನಾ) = ಅರೆ ತುಂಬಿದ ಹೊಟ್ಟೆ; ಅರೆ ಹೊಟ್ಟೆ ಊಟ.

ಅಲಕ (ಅ) ಹಿಂ. = ಅಲಾಕ; ಬೇರೆ; ಅನ್ಯ; ಮತ್ತೊಂದು

ಅಲಗರ್ಜಿ (ನಾ) = ಸಡಿಲು; ಭದ್ರವಲ್ಲದ; ತಾತ್ಪೂರ್ತಿಕ; ಲಡ್ಡ; ಕಮಜೋರು.

ಅಲಗಲಗ (ಅ) ಹಿಂ. = ಬೇರೆಬೇರೆ.

ಅಲಗಾಡು (ಕ್ರಿ) = ಅಲುಗಾಡು; ಅಲ್ಲಾಡು.

ಅಲಬತ್ತಾ (ಅ) ಹಿಂ = ಅವಶ್ಯ; ತಪ್ಪದೆ (ಗಾದೆ ಭ್ಯಾಡಂದ ಮಾತು ಅಲ್ಬತ್ತಾ ಮಾಡ್ತಂತ) ಉದ್ದೇಶಪೂರ್ವಕವಾಗಿ, ನಿಜ ಹೇಳಬೇಕೆಂದರೆ.

ಅಲಬಂ (ನಾ) ಇಂ = ಛಾಯಾಚಿತ್ರಗಳ ಪುಸ್ತಕ.

ಅಲಲಲ (ಅ) = ಅಯ್ಯಯ್ಯೋ.

ಅಲಾಕ (ಅ) ಹಿಂ. = ಬೇರೆ, ಅಲಕ.

ಅಲಾಕಲಾಕ (ದ್ವಿ) = ಬೇರೆಬೇರೆ.

ಅಲಾಯಿ (ನಾ) ಉ. = ಅಲಾವಿ; ಮೊಹರಂ ಹಬ್ಬ.

ಅಲಾಯಿ ಹಾಡು (ನಾ) = ಮೊಹರಂ ಸಂದರ್ಭದಲ್ಲಿ ಹಾಡುವ ಹಾಡು.

ಅಲಿಕಡೆ (ಅ) ಮ. = ಇತ್ತೀಚೆಗೆ.

ಅಲ್ಕಮಲ್ಕ = ಗುಜುಗಟ್ಟಿದ. ಸಿಕ್ಕುಬಿದ್ದ, ಗೊಂದಲದ.

ಅಲ್ಗರ್ಜಿ = ಸಡಿಲು; ಭದ್ರವಲ್ಲದ; ಅಲ್ಲಾಡುವ.

ಅಲ್ಗಾಡು (ಕ್ರಿ) = ಅಲ್ಲಾಡು.

ಅಲ್ಪ = ಕಮಜೋರು; ಬಲಕುಂದಿದ (ಉದಾ: ಹಲ್ಲು ಅಲ್ಪ ಅಗ್ಯಾವ. ಗಾದೆ: ಅಲ್ಪರ ಸಂಘ, ಅಭಿಮಾನ ಭಂಗ)

ಅಲ್ಬು (ನಾ) = ಆಲುಬು;ಒಂದು ಪ್ರಕಾರದ ಹುಲ್ಲು ಬಳ್ಳಿ; ಹೈನದೆಮ್ಮೆಗಳು ಹೆಚ್ಚು ಹಾಲು ಹಿಂಡುವಂತೆ ಮಾಡುವ ಹುಲ್ಲು.

ಅಲ್ಮಾರಿ (ನಾ) ಇಂ. = ಬೀರು.

ಅಲ್ಲ (ನಾ) = ಹಸಿಶುಂಠಿ (ತ್ರಿಪದಿ : ಅಲ್ಲ ಬೆಲ್ಲವನೊಲ್ಲೆ । ಎಲ್ಲ ಕೊಟ್ಟರು ಒಲ್ಲೆ । ಯಾಕೊಲ್ಲೆನೆಂದರೆ । ಇಲ್ಲದಕ ಒಲ್ಲೆಂದ ಸರ್ವಜ್ಞ ಒಳ್ಳೆಯದಲ್ಲ, ಸರಿಯಲ್ಲ.)

ಅಲ್ಲಮಪ್ರಭು (ನಾ) = ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮಪ್ರಭುದೇವರು; ಅಷ್ಟೂರಿನ ಅಲ್ಲಮಪ್ರಭು, ಅಹ್ಮ ಶಾಹವಲಿ ಬಹಮನಿ.

ಅಲ್ಲಮ ಪ್ರಭುನಗರ (ನಾ) = ಬೀದರಿನ ಕುಂಬಾರ್ಗೇರಿ, ಹಾಗೂ ಗೊರ್ನಳ್ಳಿ ಭಾಗದಲ್ಲಿ ಹುಟ್ಟಿಕೊಂಡ ಒಂದು ಬಡಾವಣೆಯ ಹೆಸರು.

ಅಲ್ಲಮ್ಮುರಬ್ಬ (ನಾ) = ಹಸಿಶುಂಠಿಯ ಲೇಹ.

ಅಲ್ಲಾ (ನಾ) = ಹಸಿಶುಂಠಿ (ಅಲ್ಲ ನೋಡಿರಿ).

ಅಲ್ಲಾಡಿಸು (ಕ್ರಿ) = ಅಲುಗಾಡಿಸು; ಅಳ್ಳಾಡಿಸು, ಸಡಿಲಿಸು.

ಅಲ್ಲಾಡು (ಕ್ರಿ) = ಅಲುಗಾಡು; ಅಳ್ಳಾಡು, ಸಡಿಲಾಗು.

ಅಲ್ಲಾವಲಿ (ನಾ) = ಸಾಧುಪುರುಷ; ಸತ್ಪುರುಷ; ಸಂತ.

ಅಲ್ಲಾಹ (ನಾ) = (ಮುಸಲ್ಮಾನರ) ದೇವರು.

ಅಲ್ಲಾಹ ಮೆಹರ್ಬಾನ = ದೇವರ ದಯೆ ಇರಲಿ.

ಅಲ್ಲಾಹೊತಾಲಾ (ನಾ) = ಸರ್ವಶ್ರೇಷ್ಠನಾದ ಪರಮಾತ್ಮ.

ಅಲ್ವಿದಾ (ಕ್ರಿ) = ಹೋಗಿ ಬನ್ನಿ.

ಅವಖಳಿ (ನಾ) = ಕಳೆ ಇಲ್ಲದ್ದು; ಕಳೆಗೇಡಿ (ಬೈಗುಳ).

ಅವಖಳಿಮಳಿ (ನಾ) = ಮಳೆಗಾಲಕ್ಕಿಂತ ಮುಂಚೆ ಬರುವ ಬೇಸಗೆಯ ಮಳೆ.

ಅವಖಾಡ ಮಳಿ (ನಾ) = ಮಳೆಗಾಲಕ್ಕಿಂತ ಮುನ್ನ ಬರುವ ಅನಿರೀಕ್ಷಿತ ಮಳೆ.

ಅವಗಡ (ನಾ) = ತೊಂದರೆ; ನಾಜೂಕು.

ಅವಗಡ ಆಗು (ಕ್ರಿ)= ತೊಂದರೆಯಾಗು.

ಅವಘಡ (ನಾ) = ಅವಗಡ; ನಾಜೂಕು.

ಅವಜಾರ (ನಾ) ಹಿಂ. = ಯಂತ್ರದ ಬಿಡಿಭಾಗ.

ಅವಡ (ನಾ) = ಮೆಚ್ಚುಗೆ, ನಚ್ಚು.

ಅವಡಾ ಸವಡಾ (ನಾ) ಮ. = ಅಡ್ಡತಿಡ್ಡ. ಅವ್ಯವಸ್ಥಿತ; ಅಕ್ರಮ; ಹುಚ್ಚುಬ್ಚು.

ಅವಡಾಸು = ಮೆಚ್ಚುಗೆಯಾಗು.

ಅವಡಿ (ವಿ.) ಮ. = ಮೆಚ್ಚುಗೆಯ

ಅವಡುಸವಡು (ವಿ.) = ಅಡ್ಡತಿದ್ದ , ಅವ್ಯವಸ್ಥಿತ, ಅಕ್ರಮ; ಹುಚ್ಚುಬ್ಚು; ಅವಡಾಸವಡಾ.

ಅವತ್ರಾಮಾಸಿ (ನಾ) = ಎಳ್ಳಮಾವಾಸ್ಯಯ ನಂತರ ಬರುವ ಅಮಾವಾಸ್ಯ; ಅವರಾತ್ರಿ ಅಮಾವಾಸ್ಯ; ಪೌಷ್ಯ ಅಮಾವಾಸ್ಯ.

ಅವನ ಆಕಳು (ನಾ) = ಆತನ ಆಕಳು; ಆತನ ಹೆಂಡತಿ.

ಅವಬರ್ಕತ್ (ವಿ) ಹಿಂ. = ಬಾಳಿಕೆಯಾಗದ; ಲಾಭ ಕೊಡದ.

ಅವರಾತ್ರಿ = ಅಪರಾತ್ರಿ (ಉದಾ: ರಾತ್ರಿ ಅವರಾತ್ರಿ ತಿರ್ಗಾಡಾದುಛಂದಲ್ಲ)

ಅವಘಾರ (ವಿ) ಮ. = ಬಾಳಿಕೆಯಾಗದ; ಧೀರ್ಘಕಾಲ ಉಳಿಯದ.

ಅವಬರಕತ್ತು (ವಿ) = ಲಾಭಕೊಡದ; ಬಾಳಿಕೆಯಾಗದ; ದೀರ್ಘಕಾಲ ಉಳಿಯದ.

ಅವಲಕ್ಕಿ (ನಾ) = ಕೊಯ್ಲಿಗೆ ಬರುವ ನವಣೆಯನ್ನು ಅಥವಾ ಭತ್ತವನ್ನು ಕುಟ್ಟಿ ತಯಾರಿಸಿದ ಅಕ್ಕಿ.

ಅವಲಕ್ಷಣ = ಲಕ್ಷಣವಿಲ್ಲದ.

ಅವಲಗ (ವಿ)= ನಾಜೂಕು; ಪೆಟ್ಟು ತಗಲಬಾರದ.

ಅವಶುಭ (ನಾ) = ಅಶುಭ; ಕಂಟಕಕಾರಿ.

ಅವಸರ (ನಾ) = ಕೆಟ್ಟ ಸಮಯ; ಅವ್ವರ

ಅವಳಿ (ನಾ) = ಜತೆಜತೆಯಾಗಿ ಹುಟ್ಟಿದ; ಜೋಡಿಯಾಗಿ ಜನಿಸಿದ.

ಅವಳಿಜವಳಿ (ನಾ) = ಜೋಡಿಯಾಗಿ ಹುಟ್ಟಿದವರು.

ಅವಾಚಾರಿ (ನಾ) = ಆಚಾರಗೆಟ್ಟವ; ಅನಾಚಾರಿ

ಅವಾ (ಕ್ರಿ) = ಇರುವುವು; ಇಹವು; ಇವೆ. ಇದ್ದಾರೆ.

ಅವಾರ (ನಾ) = ಸುತ್ತುಗೋಡೆ; ಕಂಪೌಂಡ ಗೋಡೆ.

ಅವಾರಾ (ನಾ) = ಪೋಲಿ; ಗೂಂಡಾ.

ಅವಿ (ನಾ) = ಅವ್ವಿ; ಹೆಣ್ಣು ಮಕ್ಕಳಿಗೆ ವಾತ್ಸಲ್ಯದ ಸಂಬೋಧನೆ.

ಅವು (ಸ) = ಅದು ಎಂಬುದರ ಬಹುವಚನ. ಅವರು ಎಂಬುದರ ಪರ್ಯಾಯ ಪದ.

ಅವುಡು (ನಾ) = ದವಡೆ;

ಅವುಡುಗಚ್ಚು (ಕ್ರಿ) = ದವಡೆ ಕಚ್ಚು;

ಅವುರ್ಸು (ಕ್ರಿ) = ಸಂಬಾಳಿಸು

ಅವ್ಮಾನ = ಅಪಮಾನ.

ಅವ್ರಿ (ನಾ) = ಅವರೆ

ಅವ್ರೇ = ಅವರೇ

ಅವ್ವ (ನಾ) = ಅಮ್ಮ ; ತಾಯಿ; ಅಜ್ಜಿ

ಅವ್ವಣ (ನಾ) = ಅವ್ವನ ಆಣೆ; ತಾಯಿಯ ಆಣೆ.

ಅವ್ವಲ್ (ವಿ) ಉ. = ಪ್ರಥಮ, ಮೊದಲನೆ, ಏಕನಂಬರ್,ಅಸ್ಲಿ.

ಅವ್ವಿ (ನಾ) = ಹೆಣ್ಣು ಮಗುವಿಗೆ ವಾತ್ಸಲ್ಯದಿಂದ ಸಂಬೋಧಿಸುವ ರೀತಿ.

ಅವ್ಸುರ (ನಾ) = ಕೆಟ್ಟ ಸಮಯ; ಅವಸರ.

ಅವ್ಳಿಜವ್ಳಿ (ನಾ) = ಅವಳಿ ಜವಳಿ;ಜೋಡು

ಅಷ್ಟಪೈಲಿ ಉಂಗುರು (ನಾ) = ಎಂಟು ಮಗ್ಗುಲುಳ್ಳ ಉಂಗುರ.

ಅಷ್ಟಾವರಣ (ನಾ) = ಎಂಟು ಆವರಣ ಎಂದರೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ರುದ್ರಾಕ್ಷಿ, ವಿಭೂತಿ, ಮಂತ್ರ ಎಂಬ ಎಂಟು ಆವರಣಗಳು.

ಅಷ್ಟೂರು (ನಾ) = ಬೀದರ ತಾಲೂಕಿನ ಒಂದು ಹಳ್ಳಿ; ಅಲ್ಲಮ ಪ್ರಭು ಅಹಮದ್ ಶಾಹವಲಿಯ ಹಾಗೂ ಬಹಮನಿ ಮನೆತನದ ಇತರರ ಗೋರಿಗಳಿರುವ ಊರು.

ಅಸಲ್ (ಗು) = ಮೂಲ; ನಕಲು ಅಲ್ಲದ;

ಅಸಲ್ದಾರ (ನಾ) = ಮೂಲದವ; ಮೊದಲನೇ ಹಕ್ಕುದಾರ.

ಅಸಾಮಿ (ನಾ) = ವ್ಯಕ್ತಿ; ಮನುಷ್ಯ.

ಅಸ್ತ (ವಿ) = ಕಡಿಮೆ ಅಗಲವಾದ; ಬಿಗಿಯಾದ; ತಿಟ್ಟಾದ.

ಅಸ್ತರ (ನಾ) ಉ. = ಹೊಲಿಗೆಯ ಒಳಬಟ್ಟೆ.

ಅಸ್ತಾನಾ (ಅ) = ಅಲ್ಲಿಯವರೆಗೆ; ಅಷ್ಟೊತ್ತಿನವರೆಗೆ; ಆತನಕ

ಅಸ್ತೀನ್ (ನಾ) ಉ. = ತೋಳು; ಅಂಗಿಯ ತೋಳು

ಅಸ್ತೀನ್ ಕಾ ಸಾಂಪ್ (ನಾ)ಉ. = ತೋಳಲ್ಲಡಗಿದ ಹಾವು; ಅಂತರಂಗದ ವೈರಿ; ಹಿತಶತ್ರು

ಅಸ್ನಾಯಿ (ನಾ) = ನೆಲೆ; ಗುಟ್ಟು; ಸಲಿಗೆ (ಗಾದೆ : ಅಸ್ನಾಯಿ ತೊಗೊಂಡ್ನಾಯಿ ಅಗಲಾಗಬಾಯಿ ಹಾಕ್ತಂತ)

ಅಸ್ಲಿ (ನಾ) = ಮೂಲ; ಬೆರಕಇಲ್ಲದ; ನಕಲಿ ಅಲ್ಲದ.

ಅಹವಾಲು (ನಾ) = ಮನವಿ; ವಿನಂತಿ

ಆಹಾ (ಅ) = ಓಹೋ; ಅರೆರೆ; ವಾಹವ್ವಾ.

ಅಳಗ್ಯಾಡು (ಕ್ರಿ) = ಅಲ್ಲಾಡು; ಅಲುಗಾಡು

ಅಳಗ್ಯಾಡ್ಸು (ಕ್ರಿ) = ಅಲ್ಲಾಡಿಸು; ಅಲುಗಾಡಿಸು

ಅಳದಕ್ಕಿ (ನಾ) = ಅಳುಬುರುಕ; ಅಳುಬುರುಕಿ

ಅಳಮಾರಿ (ನಾ) = ಅಳುಮೋರೆ (ಗಾದೆ: ಆಳಮಾರಿ ಹೆಣ್ಣಿಗಿ, ನಗುಮಾರಿ ಗಂಡಿಗಿ ನಂಬಬಾರ್ದು,

ಅಳಿ (ಕ್ರಿ) = ಅಳತೆಮಾಡು, ಮಾಪನ ಮಾಡು.

ಅಳು (ಕ್ರಿ) = ರೋಧಿಸು (ನಾ) ಅಳುವಿಕೆ

ಅಳುಕು (ಕ್ರಿ) = ಅಲ್ಲಾಡು; ಚುಚ್ಚಿದಂತಾಗು (ಉದಾ: ಕಾಲಾಗಿನ, ಮುಳ್ಳು ಅಳುಕಿಧಾಂಗ ಆಗು).

ಅಳುಬುರುಕ (ನಾ) = ಸದಾಗೋಳಾಡುವವನು.

ಅಳುಬುರುಕಿ (ನಾ) = ಸದಾಗೋಳಾಡುವವಳು.

ಅಳೂಸ (ನಾ) = ಸಡಿಲಾದದ್ದು; ತಿಳಿದ್ರವದಂತೆ ಇದ್ದದ್ದು.

ಅಳು = ಅಳುಕು (ನೋಡಿರಿ)

ಅಳ್ತಿ (ನಾ) = ಅಳತೆ (ಕ್ರಿ) ಅಳುತ್ತಿ

ಅಳ್ಮಾರಿ (ನಾ) = ಅಳುಮುಖ.

ಅಳ್ಮಾರಿಗಿ ಬಾ (ಕ್ರಿ) = ಅಳುಮುಖ ಮಾಡು; ಅಳುವ ಸ್ಥಿತಿಗೆ ಬರು.

ಅಳ್ಯಾ (ನಾ) = ಅಳಿಯ; ಮಗಳ ಗಂಡ; ಸೋದರಿಯ ಅಥವಾ ಸೋದರನ ಮಗ. (ಗಾದೆ : ಅಳ್ಯಾ ಅಲ್ಲಾ, ಮಗಳ್ಗಂಡ).

ಅಳ್ಯಾತನ (ನಾ) = ಅಳಿಯತನ; ಅತ್ತೆಮಾವರ ಮನೆಯ ಆಸ್ತಿಯ ಅಧಿಕಾರಿಯಾಗುವಿಕೆ).

ಅಳ್ಳೃತ್ತಿ (ನಾ) = ತಲೆಯ ನಡುಭಾಗ; ಎಳೆಗೂಸಿನ ನಡುನೆತ್ತಿ, ತಾಳ್ಗಿ, ತಾಳಿಗೆ

ಅಳ್ಳಾಡಿಸು (ಕ್ರಿ) = ಅಲ್ಲಾಡಿಸು.

ಅಳ್ಳಾಡು (ಕ್ರಿ) = ಅಲ್ಲಾಡು.

ಅಳ್ಳಾಡ್ಸು = ಅಲ್ಲಾಡಿಸು.

ಅಳ್ಳಿ (ನಾ) = ಅಳಲೆ ಮರ ಮತ್ತು ದರ ಬೀಜ; ಹಿಂಜಿದ ಹತ್ತಿ.

ಅಳ್ಳಿಕಾಯಿ (ನಾ) = ಅಳಲೆಕಾಯಿ

ಅಳ್ಳಿಗಳ್ಳ (ನಾ) = ಏನೂ ಉಳಿದಿಲ್ಲ; ಪೂಜಿಗೆ ಪೂಜಿ; ಶೇಷ ಸೊನ್ನೆ.

ಅಳ್ಳಿಗಳ್ಳು ಪೂಜೀಗಿಪೂಜಿ (ನು) = ನಿಶ್ಯೇಶ; ಏನೂ ಉಳಿದಿಲ್ಲ;

ಅಳ್ಳಿಗಿಡ (ನಾ)= ಅಳ್ಳೆಲೆ ಮರ.

ಅಳ್ಳಿಗೆ ಬರು (ಸು) = ಸೋಲು, ನಿತ್ರಾಣಾಗು; ತಂಡಿಗೆ ಬರು

ಅಳ್ಳಿಟ್ಟು (ನಾ) = ಜೋಳದ ಅರಳಿನ ಹಿಟ್ಟಿನಿಂದ ತಯಾರಿಸಿದ ಸಿಹಿತಿಂಡಿ.

ಅಳ್ಳು (ನಾ) = ಅರಳು, ಚುರುಮುರಿ, ಮಂಡಳ್ಳು.

ಅಳ್ಳು (ಕ್ರಿ) = ಅರಳು; ಮೊಗ್ಗು ಬಿಚ್ಚಿ ಹೂವಾಗು.

ಅಳ್ಳು ಆಗು (ಕ್ರಿ) = ಮೆತ್ತಗಾಗು.

ಅಳ್ಳು ಮಾಡು (ಕ್ರಿ) = ಮೆತ್ತಗೆಮಾಡು; ಹೊಡೆದು ಮೈ ನುಗ್ಗು ಮಾಡು; ಮಣಿಸು; ಸೋಲಿಸು.

ಅಳ್ಳೆಲಿ (ನಾ) = ಅರಳಿಯ ಎಲೆ; ಅರಳಿ ಎಲೆ ತರಹದ ಚಿನ್ನದೊಡವೆ; ಕೂಸಿನ ಕುಲಾಯಿಯ ಒಡವೆ (ಹಾಡು : ಅಳ್ಳೆಲಿ ಮಾಗಾಯಿ ಬಳ್ಳಿಗುಂಗುರುವಿಟ್ಟ / ಸಣ್ಣ ಹೊನ್ನುಂಗುರದವನ/ ತೂಗೀರೆ ನೀವು ತೂಗೀರೆ).

ಆ

ಆಂಕಾರ (ನಾ) = ಅಹಂಕಾರ (ಭಜನೆ: ಆಂಕಾರ ಸ್ವಾಭಿಮಾನ/ಕಿಂಕರ ಭಾವದಿ/ ಶಂಕರೊಲುಯೆ ಶರೀರಂಗದೊಳು)

ಆಂಗಾತ = ಮೇಲ್ಮೊಗವಾಗಿ ಇಲ್ಲವೆ ಬೆನ್ನು ನೆಲಕ್ಕೆ ಹಚ್ಚಿ ಮಲಗಿದ.

ಆಂಗ್ಲೋರ (ನಾ) = ಮೈಗಳ್ಳ ; ಮುಗ್ಗಲಗೇಡಿ

ಆಂಗ್ಡಿ (ನಾ) = ಸಂತೆ; ದುಕಾನು.

ಆಂಗ್ಡಿಘುಂಬು (ಕ್ರಿ) = ಸಂತೆನೆರೆ.

ಆಂಗ್ಲ = ಅಂಗಲ; ಬಿಡಿಬಿಡಿ; ಸಡಿಲು.

ಆಂಗ್ಳ (ನಾ) = ಅಂಗಳ (ಗಾದೆ : ಮನಿ ಖಳಿ ಆಂಗ್ಳೇ ಹೇಳ್ತಾದ).

ಆಂಞಾ = ಎಮ್ಮೆಗೆ ಕರೆವ ಧ್ವನಿ; ಎಮ್ಮೆಯ ಕೂಗು.

ಆಂಞೆಕ = ಎಮ್ಮೆಯ ಕೂಗು.

ಆಂಟಿ (ನಾ) ಇಂ. = ದೊಡ್ಡಮ್ಮ; ಚಿಕ್ಕಮ್ಮ; ಸೋದರತ್ತೆ.

ಆಂಧ್ರಾ (ನಾ) = ಆಂಧ್ರರಾಜ್ಯ; ಆಂಧ್ರದವನು.

ಆಂಬಟ (ನಾ) = ಹುಣಸೆಹುಳಿ.

ಆಂಬೂರು (ನಾ) = ಅಂಬ್ರ; ಬೇಳೆಯ ಕಟ್ಟಿನಿಂದ ತಯಾರಿಸಿದ ಹುಳಿ ಸಾರು; ಮಜ್ಜಿಗೆ ಹುಳಿಯಿಂದ ತಯಾರಿಸಿದ ಅಂಬ್ರ.

ಆಂಬ್ಲಿಸುರಿ (ಕ್ರಿ) = ಅಂಬಲಿಯ ಸುರುಕು ಹೊಡೆ; ಅಂಬಲಿಯನ್ನು ಸುರಿದುಣ್ಣು.

ಆಂವಗಿ (ನಾ) = ಕುಂಬಾರನು ಗಡಿಗೆ, ಮಡಿಕೆಗಳನ್ನು ಸುಡುವ ಭಟ್ಟಿ, ಆವಿಗೆ.

ಆಂವಟಿ (ನಾ) = ಆವಂಟಿಗ್ಯಾ

ಆಂವಟಿಗ್ಯಾ (ನಾ) = ಅಳತೆಮಾನದ ಗುತ್ತೆದಾರ; ಅಳತೆಮಾನದ ಕಾಯಕದವನು.

ಆಂವರಗ್ಯಾತ (ನಾ) = ಕೀವುರಕ್ತದ ಕಕ್ಕಸ.

ಆಕಡಾ (ನಾ) = ಅಂಕಿ; ಸಂಖ್ಯೆ

ಆಕಾಡಕಾಡಿ (ಅ) = ಅತ್ತತ್ತ; ಅತ್ತಕಡೆ.

ಆಕಾಡಿ = ಆ ಕಡೆ.

ಆಕಾರ (ನಾ) = ಮಾಟ; ರೂಪ; ಹೊಲದ ವಿಸ್ತಾರ; ಕಂದಾಯ ಇಲಾಖೆಯ ತೆರಿಗೆ.

ಆಕಾಶ (ನಾ) = ಮುಗಿಲು; ಗಗನ.

ಆಕಾಶವಾಣಿ (ನಾ) = ರೇಡಿಯೊ; ನಿಸ್ತಂತುವಾಣಿ.

ಆಕಾಸ (ನಾ) = ಆಕಾಶ; ಮುಗಿಲು.

ಆಕಿ = ಆಕೆ; ಅವಳು

ಆಕುಳು (ನಾ) = ಆಕಳು; ಹಸು; ಗೋವು; ಹೆಂಡತಿ; ಪ್ರೇಯಸಿ (ಉದಾ: ಏ, ನಿಂದು ಆಕುಳು ನಡ್ದಾದ ನೋಡು, ಹೋಗು).

ಆಕುಳ್ಕರಾ (ನಾ) = ಹಸುವಿನ ಶಿಶು; ಆಕಳ ಕರು.

ಆಕುಳ್ಕಿ (ನಾ) = ಆಕಳಿಕೆ; ಆ ಎಂದು ಬಾಯಿ ತೆರೆದು ಮುಚ್ಚುವ ನಿಸರ್ಗದತ್ತ ಸಹಜಕ್ರಿಯೆ.

ಆಕುಳ್ಕಿಬಿಡು (ಕ್ರಿ) = ನಿದ್ರೆಯ ಒತ್ತಡದ ಪರಿಣಾಮವಾಗಿ ಆಯೆಂದು ಸಹಜ ಬಾಯಿ ತೆರೆದುಮುಚ್ಚು.

ಆಕುಳ್ಸು (ಕ್ರಿ) = ಆಕುಳ್ಕಿಬಿಡು (ನೋಡಿರಿ).

ಆಕ್ಕ = ಅಕ್ಕ; ಹಿರಿಯ ಸೋದರಿ.

ಆಕ್ಡಿ (ನಾ) = ಅಕ್ಕಡಿ; ಮಿಶ್ರಬೆಳೆಸಾಲು.

ಆಖಿರ್ಕಾರ (ಅ) ಉ.= ಕಟ್ಟಕಡೆಯಲ್ಲಿ ; ಅಂತ್ಯದಲ್ಲಿ.

ಆಖ್ರಿ (ವಿ.) = ಕಡೆ; ಕೊನೆ; ಅಂತಿಮ

ಆಖ್ರಿ ಘಟಿಂಗ (ನಾ) = ಅತಿ ಕೆಟ್ಟವ

ಆಗ (ಅ) = ಆವಾಗ; ಒಳಗೆ; ಅದರಲ್ಲಿ (ಗಲ್ಲ್ಯಾಗ; ಮನ್ಯಾಗ; ಅಂಗಳಾಗ ಎಂಬಂತೆ).

ಆಗಿಂದಾಗ = ತಕ್ಷಣ.

ಆಗೆ (ಅ) = ಆಗಲೆ; ಆಮೊದಲೆ.

ಆಗೋತ = ಆವೊತ್ತು ; ಆದಿನ.

ಆಗೋತೆ (ಅ) = ಆವೊತ್ತೇ; ಅಂದೇ; ಅದೇ ದಿನ.

ಆಗ್ಗ (ನಾ) = ಅಗ್ಗ.

ಆಗ್ಗುದ್ದು= ಅಗದ್ದು; ಕೀಳುಮಟ್ಟದ್ದು (ಬೈಗುಳ).

ಆಗ್ಗ (ನಾ) = ಅಗ್ಗ.

ಆಘಾದ (ನಾ) = ಅಗಾಧ; ಆಶ್ಚರ್ಯ; ಅಚ್ಚರಿ.

ಆಚರಿಸು (ಕ್ರಿ) = ನಡೆಸು; ನೆರವೇರಿಸು.

ಆಚಾಕ = ಆಚೆಗೆ.

ಆಚಾರ (ನಾ) = ನಡವಳಿಕೆ; ನಡತೆ; ಸನ್ನಡತೆ.

ಆಚಾರವಂತ (ನಾ) = ಸಂಪ್ರದಾಯದ ಕಟ್ಟುಪಾಡು ಪಾಲಿಸುವವನು.

ಆಚಾರಹೇಳು (ಕ್ರಿ) = ನೀತಿಹೇಳು (ಗಾದೆ: ಆಚಾರ ಹೇಳಾಂವ ಬದ್ನಿ ಕಾಯಿ ತಿಂದ).

ಆಚಾರಿ (ನಾ) = ಆಚಾರವುಳ್ಳವ; ಆಚಾರ್ಯ.

ಆಚಿ (ಅ) = ಆಚೆ (ಶಿಶುಪ್ರಾಸ : ಧೈಬುಟ್ಟಿಧೈ। ಅಚಮನಿಪೀ।).

ಆಚಿಕಾಡಿ (ಅ) = ಅಚೆಕಡೆಗೆ; ಆಕಡೆಗೆ.

ಆಚಿಕಿ (ಅ) = ಆಚೆಗೆ; ಅತ್ತ ಕಡೆಗೆ.

ಆಚಿಗಿ (ಅ) = ಆಚೆಗೆ; ಆಕಡೆಗೆ.

ಆಚ್ಚಾಉಚ್ಚಾ = ರೀತಿಯಿಲ್ಲದ; ಹದವಿಲ್ಲದ.

ಆಚ್ಯಾಕ (ಅ) = ಆಚೆಗೆ; ಆಚೆಕಡೆಗೆ; ಅತ್ತಕಡೆಗೆ.

ಆಜಾದ (ನಾ) ಉ. =ಸ್ವತಂತ್ರ; ಸ್ವಚ್ಛಂದ.

ಆಜಾದಿ (ನಾ) = ಸ್ವಾತಂತ್ರ್ಯ; ಮುಕ್ತಿ.

ಆಜಾರಿ (ನಾ) = ರೋಗ; ರೋಗದಿಂದ ಬಳಲುವಿಕೆ.

ಆಜಾರಿಯಾಗು (ಕ್ರಿ) = ಬೇನೆಯಿಂದ ಬಳಲು.

ಆಜೂಬಾಜೂ (ನಾ) ಮ. = ನೆರೆಹೊರೆ; ಮಗ್ಗುಲಲ್ಲಿ.

ಆಜೋಬಾ (ನಾ) = ಅಜ್ಜ; ತಾತ; ಅಪ್ಪನ ಇಲ್ಲವೆ ಅವ್ವನ ಅಪ್ಪ.

ಆಜ್ಞಾತ (ನಾ) = ಅಜ್ಞಾತ, ಹೀನ; ಕೆಳವರ್ಗದವ; ಕೆಳಜಾತಿಯವ (ಬೈಗುಳ).

ಆಟ (ನಾ) = ಆಡುವುದು; ನಾಟಕ; ಸಣ್ಣಾಟ; ದೊಡ್ಡಾಟ; ಡಪ್ಪಿನ ಆಟ; ಬಯಲಾಟ ಇತ್ಯಾದಿ.

ಆಟಾಆಡು (ಕ್ರಿ) = ತಂತ್ರಹೂಡು, ನಾಟಕ ಮಾಡು, ಆಡು; ಪಾತ್ರ ನೆರವೇರಿಸು.

ಆಟಾಟಿ (ನಾ) = ಅಟಾಟಿ; ಆತುರತೆ; ಕೆಲಸದ ಒತ್ತಡ; ಸಾವಿನಕ್ಷಣಗಳು; ಇನ್ನೇನು ಸಾವು ಬರುವ ಸಮಯ.

ಆಟಾಟಿ ಹತ್ತು (ಕ್ರಿ) = ಅಟಾಟಿ ಹತ್ತು; ಆತುರತೆಯುಂಟಾಗು; ಕೆಲಸದ ಒತ್ತಡ ಉಂಟಾಗು; ಸಾವಿನ ಕ್ಷಣ ಸಮೀಪಿಸು. ಸಾವಿನ ಕ್ಷಣ ಎಣಿಸು.

ಆಟಾಪಾಟಾ (ನಾ) = ಆಡುವುದು ಮತ್ತು ಹಾಡುವುದು.

ಆಟಾಹಚ್ಚು (ಕ್ರಿ) = ಹುಡುಗಾಟಕೆ ಮಾಡು.

ಆಟಾಹೂಡು (ಕ್ರಿ) = ನಟನೆ ಮಾಡು; ತಂತ್ರ ಹೂಡು.

ಆಟ್ಯಾಪಾಟ್ಯಾ = ಉಪ್ಪಿನಮಡಿಯಾಟ.

ಆಠವಣ (ನಾ)ಮ. = ನೆನಪು.

ಆಡಂಬ್ರ (ನಾ) = ತೋರಿಕೆ; ಡಂಭಾಚಾರ; ಅಹಂಕಾರ.

ಆಡಾಕೂಸು (ನಾ) = ಆಡುವ ಕೂಸು; ಉಂಡಾಡುವವಳು; ಬಾಲಕಿ (ಗಾದೆ : ಆಡಾ ಕೂಸಿಗೊಂದು ಕಾಡಾಕೂಸು. ಗಂಟು ಬಿದ್ದಂಗ).

ಆಡಾಡಿ (ನಾ) = ಆತುರತೆ; ಸಮಯದ ಕೊರತೆ (ಗಾದೆ: ಅಡಾಡಿಗಿ ತುರುಕು ಮಾತಿಗಿ ಗತ್ತಾಯ್ತು).

ಆಡಿ (ನಾ) = ಅಡವಿ;ಕಾಡು; (ಕ್ರಿ) ಆಟವಾಡಿ.

ಆಡಕಿ ಮಾತು (ನಾ) = ನಿಂದೆಯ ಮಾತು; ಜನರಾಡುವ ಮಾತು; ಗಾಳಿ ಮಾತು; ಸುದ್ದಿ.

ಆಡಿಮಾಳ (ನಾ) = ಬೈಲಡವಿ; ಮೈದಾನ; ಅರಣ್ಯ; ಅಡವಿ.

ಆಡಿಸು (ಕ್ರಿ) = ಆಟ ಆಡಿಸು; ರಮಿಸು; ಆಲ್ಲಾಡಿಸು; ಕಲೆಸು; ಬೆರೆಸು.

ಆಡು (ನಾ) = ಮೇಕೆ (ಗಾದೆ : ಆಡ್ಮುಟ್ಟಲ್ದೆಲಿ ಇಲ್ಲ.)

ಆಡು (ಕ್ರಿ) = ಕುಣಿ; ನರ್ತಿಸು; ಆಟವಾಡು

ಆಡ್ಗಾಲು (ನಾ) = ಅಡ್ಡಗಾಲು; ಅಡ್ಡಿ; ಆತಂಕ; ಚಾಟಿ; ಕಾಲಲ್ಲಿ ಕಾಲುಹಾಕುವಿಕೆ.

ಆಡ್ಗಾಲುಹಾಕು (ಕ್ರಿ) = ಅಡ್ಡಿಒಡ್ಡು; ಆತಂಕ ಉಂಟುಮಾಡು; ಅಡ್ಡಗಾಲು ಹಾಕು; ಕಾಲಲ್ಲಿ ಕಾಲುಹಾಕಿ ಕೆಡಹು; ಚಾಟಿಹೊಡಿ.

ಆಡ್ಗೈ (ನಾ) = ಹೊಟ್ಟೆಯಲ್ಲಿಯ ಒಂದು ಪ್ರಕಾರದ ರೋಗ.

ಆಡ್ಡ = ಅಡ್ಡ.

ಆಡ್ಡಬೀಳು (ಕ್ರಿ) = ಮಲಗು; ಹಾದರ ಮಾಡು (ಬೈಗುಳ).

ಅಡ್ಡಾಗು (ಕ್ರಿ) = ಮಲಗು; ನಿದ್ರೆ ಮಾಡು.

ಅಡ್ಡಾಊರು (ಕ್ರಿ) = ತಳವೂರು; ಬೀಡುಬಿಡು;ವಾಸಿಸು.

ಆಡ್ಡಾಡ್ಡ (ದ್ವಿ) = ಅಡ್ಡಅಡ್ಡ; ಮತ್ತೆ ಮತ್ತೆ ಅಡ್ಡಬರು (ಜೊಕುಮಾರನಹಾಡು : ಆಡ್ಡಾಡ್ಡ ಮಳಿ ಬಂದು ಕೆರಿಥುಂಭಿ ಜೊಕುಮಾರ। ಗೊಡ್ಡೋಳೆಲ್ಲಾ ಹೈನಾಗಿ ಜೊಕುಮಾರ।).

ಆಡ್ಡಿ (ನಾ) = ಮಾಪು; ಧಾನ್ಯ ಅಳೆವ ಮಾನ. ಒಮ್ಮನದ ಮಾಪು; ಕೀಲಿಯಕಪ್ಪೆ.

ಆಡ್ಡಿಥುಂಬು (ನಾ) = ಆಯುಷ್ಯ ತೀರು; ಸಾವು ಸಮೀಪಿಸು; ಮರಣಪ್ರಾಪ್ತವಾಗು.

ಆಡ್ಬೀಳು (ಕ್ರಿ) = ಮಲಗು; ಹಾದರ ಮಾಡು. (ಬೈಗುಳ).

ಆಡ್ದುಡಿ = ಆಡಾಡಿ; ಆತುರ (ಗಾದೆ : ಆಡ್ದುಡಿಗಿ ತುರ್ಕ್ ಮಾತಿಗೆ ಗಂಟು ಬಿತ್ತು).

ಆಡ್ನಾಡಿ (ನಾ) = ಅನ್ನಾಡಿ; ಆನಗೇಡಿ; ದರಿದ್ರ (ಬೈಗುಳ).

ಆಡ್ಸು (ಕ್ರಿ) = ಆಟವಾಡಿಸು; ಮಗು ಆಡುವಂತೆ ಮಾಡು.

ಆಣೆತಿನು (ಕ್ರಿ) = ಪ್ರಮಾಣಮಾಡು; ಪ್ರತಿಜ್ಞೆಮಾಡು (ಗಾದೆ: ದುಡ್ಡಿಗೊಂದು ಆಣೆ ತಿಂಬಾಂವ).

ಆಣೆ (ನಾ) = ಆಣೆ; ಅಪ್ಪಣೆ; ಬಂಧನ.

ಆಣೆಪೀಣೆ (ನಾ) = ದನ ಬೆಳಗುವ ಹಾಡು (ಹಾಡು : ಆ ಗುಡ್ಡ ನೋಡು। ಈ ಗುಡ್ಡನೋಡು। ಗುಡ್ಡದ ಮ್ಯಾಲ। ಆನಿ ನೋಡು। ಆನಿಮ್ಯಾಲ। ಅಂಬರಿ ನೋಡು। ಅಂಬರಿದಾಗ। ಅರಸ ನೋಡು। ಅರ್ಸನಕೈದಾಗ। ಕುಡ್ಗಿಲ ನೋಡು॥)

ಆಣೆ ಮಾಡು (ಕ್ರಿ) = ಪ್ರಮಾಣ ಮಾಡು; ಪ್ರತಿಜ್ಞೆಮಾಡು; ಪಣತೊಡು.

ಆಣೆಹಾಕು (ಕ್ರಿ) = ಆಣೆ ಇಡು; ಪ್ರಮಾಣ ಮಾಡಿಸು; ಪ್ರತಿಜ್ಞೆಮಾಡಿಸು; ಅಪ್ಪಣೆ ಮಾಡು.

ಆತ (ಸ.ನಾ) = ಅವನು.

ಆತುಮಾ (ನಾ) = ಆತ್ಮ.

ಆತುಮ್ಸಾಗ್ಸಿ (ನಾ) = ಆತ್ಮಸಾಕ್ಷಿ, ಅಂತರಂಗದ ಸಾಕ್ಷಿ.

ಆತ್ತ (ಅ) = ಅತ್ತ; ಆಕಡೆ.

ಆತ್ತಾ ಇತ್ತಾ (ಅ) = ತುಸು ಆಕಡೆ, ತುಸು ಈ ಕಡೆ.

ಆತ್ತಿ (ನಾ) = ಅತ್ತೆ (ಗಾದೆ : ಆತ್ತಿ ಅಳ್ಳ್ಯಾಗ ಹೊಡ್ದುಳು, ಸೊಸಿ ಹಂಜ್ಯಾಗ್ಹೊಡ್ದುಳು).

ಆದಾ = ಇದೆ; ಇಹುದು.

ಆದಮುಖೋರ (ನಾ)ಉ. = ನರಭಕ್ಷಕ.

ಆದಾಬರ್ಜೆ (ನಾ)ಉ. = ನಮಸ್ಕಾರ ಸ್ವಾಮಿ.

ಆದಾಬು (ನಾ) = ನಮಸ್ಕಾರ; ವಂದನೆ; ಶರಣಾರ್ಥಿ.

ಆದಾರ = ಆಧಾರ, ಆಶ್ರಯ.

ಆದಾರಾಗು = ಆಶ್ರಯಕೊಡು; ಆಧಾರಾಗು.

ಆದಾವತಿ (ನಾ) = ದ್ವೇಷ; ವೈರ; ಹಗೆತನ; ಆಗದಿರುವಿಕೆ.

ಆದಿ (ನಾ) = ಮೊದಲಿಗ, ಮೊದಲಿನವ; ಲಿಂಗಾಯತರಲ್ಲಿಯ ಒಂದು ಒಳಪಂಗಡ.

ಆದುರ = ಆದರೆ (ಗಾದೆ : ಆದುರಾಯ್ತಾರ, ಇಲ್ದುರ ಸ್ವಾಮಾರ), ಸಾಧ್ಯವಾದರೆ.

ಅದ್ದಾ = ಅರ್ಧ; ಅದ್ದಾ; ೧/೨ ಭಾಗ.

ಆದ್ದಾಗಿದ್ದಾ = ಅರ್ದಗಿರ್ಧ

ಆದ್ದೂನ (ನಾ) = ಅರ್ಧಸೇರು; ಅಚ್ಚೇರು; ಎರಡು ಪಾವು.

ಆದ್ಮಿ (ನಾ) ಉ. = ಮನುಷ್ಯ.

ಆದ್ರ = ಆದರೆ.

ಆದ್ಮಿಯತ್ (ನಾ) = ಮನುಷ್ಯತ್ವ.

ಆನಿ (ನಾ) = ಆನೆ (ಗಾದೆ : ಆನಿ ಆಡ್ಡ ಬಿದ್ರ, ಕುದುರಿಯೋಟು ಎತ್ರ).

ಆನಿಕಾಲು (ನಾ) = ಆನೆಯ ಕಾಲಂತೆ ದಪ್ಪಕಾಲಾಗುವ ಒಂದು ರೋಗ; ಆನೆಯ ಕಾಲು.

ಆನಿಕಿ (ನಾ) = ಹೊಂದಿಕೆ; ತೃಪ್ತಿ; ಸಾಲುವಿಕೆ; ಆನಿಕೆ.

ಆನಿಕಿ ಆಗು (ಕ್ರಿ) = ಹೊಂದಿಕೆಯಾಗು; ತೃಪ್ತಿಯಾಗು; ಸಾಕಾಗು.

ಆನಿಸು (ಕ್ರಿ) = ಒಂದಕ್ಕೊಂದು ಹತ್ತಿ ಹತ್ತಿ ಇಡು; ಗೋಡೆಗೆ ಹೊಂದಿಸಿಡು; ಒದಗಿಸು. ಊಟಕ್ಕೆ ಹಾಕು.

ಆನುಸು (ಕ್ರಿ) = ಆನಿಸು (ನೋಡಿರಿ).

ಆನ್ಕಿ (ನಾ) = ಆನಿಕೆ; ಹೊಂದಿಕೆ; ತೃಪ್ತಿ.

ಆಪಕ್ಸ (ನಾ) = ಆಪೇಕ್ಷೆ; ಆಸೆ; ಹಂಬಲ.

ಆಪತ್ತು (ನಾ) = ಕಷ್ಟ; ಸಂಕಟ.

ಆಪು (ನಾ) = ಒಂದು ಬಗೆಯ ಜೊಂಡು ಹುಲ್ಲು; ಆಪು ತೆನೆಯ ಅರಳೆ ಚಕಮಕಿ ಅರಳೆಯಾಗಿ ಬಳಕೆಯಾಗುತಿತ್ತು.

ಆಪ್ಲೆ (ಅ) = ಹಾಗೆ; ಅಂತೆ; ಆದರಂತೆ; ಅಪ್ಲೆ.

ಆಫತ್ತು (ನಾ) = ಸಂಕಟ; ಕಷ್ಟ; ಆಪತ್ತು.

ಆಬಾದಿ (ನಾ) ಉ. = ಜನವಸತಿ; ಜನಸಂಖ್ಯೆ; ಊರು.

ಆಮ್ (ವಿ) ಉ. = ಎಲ್ಲರಿಗೆ ಬೇಕಾದ; ಸಾಮಾನ್ಯ.

ಆಮದು (ನಾ) = ತರಿಸಿಕೊಳ್ಳುವಿಕೆ.

ಆಮರಾಯಿ (ನಾ) = ಮಾವಿನ ತೋಪು, ಬನ.

ಆಮಸೋಲು (ನಾ) = ಒಂದು ಬಗೆಯ ಹುಳಿಹಣ್ಣು

ಆಮಾಸಿ (ನಾ) = ಅಮಾವಾಸ್ಯ; ಕೃಷ್ಣಪಕ್ಷದ ಕೊನೆಯದಿನ; ಪೂರ್ಣಕತ್ತಲೆಯ ರಾತ್ರಿ (ಗಾದೆ : ಅಯ್ಯಸತ್ರ ಆಮಾಸಿ ನಿಂದ್ರಾಲ)

ಆಮ್ದನಿ (ನಾ) = ಆದಾಯ; ಸಂಪಾದನೆ; ಲಾಭ.

ಆಮ್ದಾನಿ (ನಾ) = ಆಮ್ದನಿ; ಆದಾಯ; ಲಾಭ; ಸಂಪಾದನೆ.

ಆಮ್ಯಾಲ (ಅ) = ಆಮೇಲೆ; ಆನಂತರ.

ಆಮ್ರಾಯಿ (ನಾ) = ಅಮರಾಯಿ; ಮಾವಿನತೋಪು.

ಆಮ್ಲಾ (ನಾ) ಉ. = ಸಿಬ್ಬಂದಿ; ಕೆಲಸಗಾರರ ಗುಂಪು.

ಆಮ್ಲೆಟ್ಟು (ನಾ) = ತತ್ತಿಯಿಂದ ಮಾಡಿದ ದೋಸೆ.

ಆಯಕಾರ (ನಾ) = ರೈತರ ಕೆಲಸ ಮಾಡಿಕೊಟ್ಟು ವಾರ್ಷಿಕ ರಾಶಿರುಬ್ಬಿ ಪಡೆದು ಬದುಕುವ ಕಂಬಾರ, ಕುಂಬಾರ, ಬಡಿಗ ಮುಂತಾದವರು.

ಆಯಾ (ನಾ) ಉ. = ಅಂಗನವಾಡಿ ಸೇವಕಿ; ಆಯಮ್ಮ; ದಾದಿ; ದಾಸಿ.

ಆಯಾಸ (ನಾ) = ಬಳಲುವಿಕೆ; ದಣಿಯುವಿಕೆ; ಸೋಲುವಿಕೆ.

ಆಯಿ (ನಾ) = ತಂದೆ ಅಥವಾ ತಾಯಿಯ ತಾಯಿ; ಅತ್ತೆ ಅಥವಾ ಮಾವನ ತಾಯಿ; (ಗಾದೆ: ಆಯಿಗಿ ಅಳ್ಳಿ ಚಿಂತಿ, ಮೊಮ್ಮಗಳಿಗಿ ಮಿಂಡನ ಚಿಂತಿ)
ಆಯಿ (ಕ್ರಿ) = ಆಯ್; ಆಯ್ದುಕೊ; ಸಂಗ್ರಹಿಸು; ಒಂದೊಂದಾಗಿ ಸಂಗ್ರಹಿಸು.

ಆಯಿಜ್ವಾಳಾ (ನಾ) = ಚಪ್ಪಿಜೋಳ; ಜೋಳದ ಒಂದು ಪ್ರಕಾರದ ತಳಿ.

ಆಯ್ಕಾರ (ನಾ) = ಆಯಕಾರ (ನೋಡಿರಿ).

ಆಯ್ಗೇಟಿ (ನಾ) = ಆಯ ತಪ್ಪಿದವನು; ತೂಕ ತಪ್ಪಿದವನು; ಮನಸ್ಥಿತಿ ಸರಿ ಇಲ್ಲದವನು (ಗಾದೆ: ಆರ್ಸಿಹುಡ್ಕುದ್ರ ಆಯ್ಗೇಟಿ ಸಿಕ್ತಂತ! ಆಯ್ಗೇಟಿ ಮಗಾಹುಟ್ಟಿ ಅವ್ವನ ಸಂಗ್ಡನಕ್ರಿ ಆಡ್ತಂತ!)

ಆಯ್ತಾರ (ನಾ) = ಆದಿತ್ಯ ವಾರ; ರವಿವಾರ; ಭಾನುವಾರ (ಪ್ರಾಸ= ಆಯ್ತಾರ ನಿನಗೆ ಒಯ್ತಾರ. ಆದ್ರ ಆಯ್ತಾರ, ಇಲ್ದುರ ಸ್ವಾಮಾರ).

ಆಯ್ತೆ (ಅ) ಮ. = ಅನಾಯಾಸೆ; ಪರಿಶ್ರಮವಿಲ್ಲದೆ

ಆಯ್ದಕ್ಕಿ (ನಾ) = ಅಕ್ಕಿಯ ಒಂದೊಂದು ಕಾಳನ್ನು ಆಯ್ದಾಯ್ದು ಸಂಗ್ರಹಿಸಿದ್ದು; ಒಂದು ಪ್ರಕಾರದ ಕಾಡು ಹಕ್ಕಿ.

ಆಯ್ದಕ್ಕಿ ಮಾರಯ್ಯ (ನಾ) = ಆಯ್ದಕ್ಕಿ ಕಾಯಕದ ಬಸವಯುಗದ ಶರಣ. ಕಾಯಕವೇ ಕೈಲಾಸ ಎಂದು ಸಾರಿದ ಶರಣ.

ಆಯ್ದಕ್ಕಿಲಕ್ಕಮ್ಮ (ನಾ) = ಆಯ್ದಕ್ಕಿ ಮಾರಯ್ಯ ಶರಣರ ಧರ್ಮಪತ್ನಿಯ ಹೆಸರು. ಪತಿಗೆ ಕಾಯಕ ಮಹತ್ವ ತಿಳಿಸಿದ ಶರಣೆ.

ಆರ್ = ಆರರ ಅಂಕಿ; ಆರು (ಕ್ರಿ) ತಣ್ಣಗಾಗು.

ಆರ್ (ನಾ) = ಗಳೆ; ನೇಗಿಲು; ಕುಂಟಿ ಮೊದಲಾದ ಕೃಷಿ ಸಾಧನ.

ಆರ್‌ಕಟ್ಟು (ಕ್ರಿ) = ಗಳೆಹೂಡು; ಉತ್ತುವ ಕೆಲಸವನ್ನು ಪ್ರಾರಂಭಿಸು.

ಆರ (ನಾ) = ಆಹಾರ; ಬಲಿ; ದೆವ್ವ-ಭೂತ ಪಿಶಾಚಗಳಿಗಾಗಿ ಇಟ್ಟ ನೈವೇದ್ಯ.

ಆರಾಕಿ (ನಾ) = ಆರೈಕೆ; ರೋಗಿಯ ಶುಶ್ರೂಷೆ.

ಆರಾದಿ (ನಾ) = ಭೂತ್ಯಾ;ಭೂತೇರು; ಅಂಬಾಬಾಯಿ ಭಕ್ತ ಭಕ್ತೆಯರು; ಆರಾಧನ ಮಾಡುವವರು.

ಆರಾಧೀಪಾ (ನಾ) = ಆರಲಿರುವ ದೀಪ; ಮುಪ್ಪಿನ ಅವಸ್ಥೆಯಲ್ಲಿದ್ದವನು(ಳು); ಸಾವು ಸಮೀಪಿಸಿದವನು(ಳು).

ಆರಾಮ (ನಾ) ಹಿಂ. = ವಿಶ್ರಾಂತಿ; ನಿಶ್ಚಿಂತೆ.

ಆರಾಮ್ಖುರ್ಜಿ (ನಾ) ಉ. = ಸುಖಾಸನ; ಸುಖವಾಗಿ ಮಲಗಲು ಬರುವ ಕುರ್ಚಿ.

ಆರಿದ್ದು = ತಣ್ಣಗಾಗಿದ್ದು.

ಆರಿದ್ರಿ (ನಾ) = ಆರಿದ್ರಾನಕ್ಷತ್ರದ ಮಳೆ.

ಆರಿನ ಸಾಮಾನು (ನಾ) = ಗಳೆಸಾಮಗ್ರಿ; ಉತ್ತುವ ಬಿತ್ತುವ ಸಾಧನಗಳು.

ಆರಿಸು (ಕ್ರಿ) = ಆಯ್ದು ತೆಗೆ, ಶೇಖರಿಸು; ಸ್ವಚ್ಛಗೊಳಿಸು; ದೀಪವನ್ನು ನಂದಿಸು; ಶಾಂತಗೊಳಿಸು; ಆಯ್ಕೆಮಾಡು; ಹುಡುಕು.

ಆರು = ಆರ್; ಆರರ ಅಂಕಿ; ಐದರ ನಂತರದ ಅಂಕಿ; ಗಳೆ, ನೇಗಿಲು, ಕುಂಟಿ ಇತ್ಯಾದಿ.

ಆರು (ಕ್ರಿ) = ತಣ್ಣಗಾಗು; ಶಾಂತನಾಗು; ಸಮಾಧಾನ ತಾಳು; ಕೋಪ ಇಳಿಮುಖವಾಗು.

ಆರುಣಗಿ (ನಾ) = ಆರ್ನ; ದೋಸೇರಿ; ಎರಡು ಸೇರಳತೆಯ ಮಾಪು.

ಆರುತಿ (ನಾ) = ಆರತಿ.

ಆರು ಮೂರು ಮಂದಿ (ನಾ) = ಒಂಭತ್ತು ಜನರು; ನವದ್ವಾರಗಳು (ಹಾಡು : ಆರು ಮೂರು ಒಂಭತ್ತು / ಒಂಭತ ತೂತಿನ ಕೊಡನವ್ವ).

ಆರೂಢರು (ನಾ) = ಯೋಗಾರೂಡರು; ಹುಬ್ಬಳ್ಳಿಯ ಸಿದ್ಧಾರೂಢ ಮಹಾಸ್ವಾಮಿಗಳು; ಹುಡಗಿಯ ದಿಗಂಬರ ಕರಿಬಸವೇಶ್ವರರು (ಭಜನೆ: ಆರೂಢ ಗುರುದೇವಾ ಕರಸಬಸವೇಶಾ-ಕರಿಬಸಪ್ಪ ಮುಗಳಿ ಹುಡಗಿ)

ಆರೇರು (ನಾ) = ಆರ್ಯರು; ಮರಾಠರು; ಮರಾಠಿ ಮಾತನ್ನಾಡುವವರು.

ಆರ್ಗಾಸಿ (ನಾ) = ಹೊಲದಿಂದ ಮನೆಗೆ, ಮನೆಯಿಂದ ಹೊಲಕ್ಕೆ ಗಳೆಸಾಮಾನು ಹೇರಿ ಒಯ್ಯಲು ಬಳಸುವ ರಿಕ್ಕಿನ ಕಟ್ಟಿಗೆ; ಪಾದದವರೆಗಿರುವ ಚೊಲ್ಲಣ; ಪ್ಯಾಂಟು.

ಆರ್ತಿ (ನಾ) = ಆರತಿ.

ಆರ್ನ (ನಾ) = ಎರಡು ಸೇರಳತೆಯ ಮಾಪು; ದೋಸೇರಿ; ಆರುಣಗಿ

ಆರ್ಯಾ (ನಾ) = ಮರಾಠಾ; ಮರಾಠಿಗ; ಮರಾಠಿ ಮಾತಾಡುವವನು.

ಆರ್ಯಾಣ (ನಾ) = ಅರಣ್ಯ; ಕಾಡು; ದಟ್ಟ ಕಾಡು; ವೈರಾಣ (ಒಗಟು : ಅಟ್ಟ ಆರ್ಯಾಣದಾಗಾ ಅಂಬಾಬಾಯಿ ಝುಕಾಲಿ-ಆಡ್ತಾಳ ಹುಣ್ಸೆಕಾಯಿ)

ಆರ್ಸಿ (ನಾ) = ದರ್ಪಣ; ಕನ್ನಡಿ; ಮುಕುರ.

ಆರ್ಸು (ಕ್ರಿ) = ಆರಿಸು; ನಂದಿಸು; ಶಾಂತಮಾಡು ಆಯುದ್ದತೆಗೆ; ಹಸನುಗೊಳಿಸು; ಕೋಪವನ್ನು ಇಳಿಮುಖಗೊಳಿಸು ಹುಡುಕು; ಶೋಧಿಸು.

ಆಲೌಲಾದಿ (ನಾ) ಉ. = ಪೀಡಾನುಪೀಡಿ; ಕುಟುಂಬದವರೆಲ್ಲ; ವಂಶಸ್ಥರೆಲ್ಲ; ವಂಶಾನುವಂಶ.

ಆಲಾ (ನಾ) = ರೋಗಿಯ ಹೃದಯ ಪರೀಕ್ಷೆಯ ಯಂತ್ರ; ಸ್ಟೆತೋಸ್ಕೋಪ್.

ಆಲಾ (ವಿ) = ಅತ್ಯುನ್ನತ.

ಆಲಾಕ್ (ವಿ) ಉ. = ಬೇರೆ.

ಆಲಾಕಲಾಕ (ದ್ವಿ) = ಬೇರೆ ಬೇರೆ.

ಆಲಾಹಜರತ (ನಾ) ಉ. = ಎಲ್ಲರ ಒಡೆಯನಾದ ರಾಜ.

ಆಲಿ (ನಾ) = ಅಂಗಾಲಲ್ಲಾಗುವ ಸುತ್ತು ಹುಣ್ಣು.

ಆಲಿಬೇರು (ನಾ) = ಹಾಲಿನಬೇರು; ಬೇರಿನಲ್ಲಿ ಹಾಲಿನಂಥ ದ್ರವವುಳ್ಳ ಒಂದು ಬಗೆಯ ಸಣ್ಣದಾದ ಕಾಡು ಸಸ್ಯ; ಚಾಬೇರು.

ಆಲೂಗಡ್ಡೆ (ನಾ) = ಗೆಣಸಿನಂತಹ ಒಂದು ಬಗೆಯ ತರಕಾರಿ ಗಡ್ಡೆ.

ಆವಕ (ವ) = ಒಳಗೆ ಬರುವ.

ಆವಗಿ (ನಾ) = ಆವಂಗಿ; ಆವಿಗೆ; ಗಡಿಗೆ, ಮಡಿಕೆ,ಮುಚ್ಚಳ, ಹಣತೆ ಇತ್ಯಾದಿಗಳನ್ನು ಸುಡುವ ಕುಂಬಾರನ ಭಟ್ಟಿ; ಒಲೆ.

ಆವಾ (ಕ್ರಿ) = ಇವೆ; ಇಹವು; ಅವಾ; ಇದ್ದಾರೆ (ಉದಾ: ಬಂದಾವ= ಬಂದಿವೆ, ಬಂದಿದ್ದಾರೆ ಹೋಗ್ಯಾವ= ಹೋಗಿವೆ; ಹೋಗಿದ್ದಾರೆ.)

ಆವಾಜ (ನಾ) = ಶಬ್ದ; ಸದ್ದು; ಗದ್ದಲ.

ಆವಾಜಮಾಡು (ಕ್ರಿ) = ಶಬ್ದಮಾಡು; ಸದ್ದುಮಾಡು; ಗದ್ದಲ ಮಾಡು.

ಆವಾರ (ನಾ) = ಆವರಣ; ಸುತ್ತುಗೋಡೆ.

ಆವಾರಾ (ನಾ) = ಪೋಲಿ; ಗುಂಡಾ

ಆವಾರಾಗಿರಿ = ಪೋಲಿತನ; ಗುಂಡಾಗಿರಿ

ಆವ್ಲಾ (ನಾ) = ನೆಲ್ಲಿಕಾಯಿ ಮತ್ತು ಅದರ ಮರ.

ಆವ್ಸಣ (ನಾ) = ಶಕ್ತಿ; ತಾಕತ್ತು; ಬಲ

ಆವ್ಸಣ್ಕೈಸಾಲು (ಕ್ರಿ) = ಶಕ್ತಿ ಬರು; ಬಲ ಪೂರೈಕೆಯಾಗು.

ಆಷಾಡ (ನಾ) = ಭಾರತೀಯ ಚಾಂದ್ರಮಾನ ಪದ್ಧತಿಯ ಪಂಚಾಂಗದ ಪ್ರಕಾರ ನಾಲ್ಕನೇ ತಿಂಗಳು; ಗೀಷ್ಮ ಋತು. (ಜನಪದ ಪ್ರಾಸ: ಆಷಾಡ ಮಾಸೇ । ಒಳಗ್ಹಾಸ್ಗಿ ಹಾಸೆ । ಬಿಸಿನೀರ ತಾರೇ। ಮಗುಲಾಗ ಬಾರೇ ।।).

ಆಸಡಿಕ್ಯಾ (ನಾ) = ಆಷಾಢಾ ನಕ್ಷತ್ರದ ಮಳೆ. (ಗಾದೆ : ಆಸಡ್ಯಾನ ಘಾಳಿ ಬೀಸಿ ಬೀಸಿ ಬಡ್ದುರ, ಹೇಸಿ ನನ್ಮನ್ಸು ಹೆಂಗ್ಸು ಆಗಬೇಕಂತು).

ಆಸಾನ (ವಿ) = ಸರಳ.

ಆಸಾಮಿ (ನಾ) = ಮನುಷ್ಯ; ವ್ಯಕ್ತಿ; ಆಳು; ಬಾಕಿ ತೀರಿಸಲಾರದವನು.

ಆಸಿ (ನಾ) = ಆಸೆ; ಹಂಬಲ; ಬಯಕೆ; ಆಯುಷ್ಯ (ಗಾದೆ : ಆಸಿ ಮಾಡ್ತು ಘಾಸಿ).

ಆಸಿಬುರುಕ (ನಾ) = ಆಸೆಬುರುಕ.

ಆಸಿವಂತ (ನಾ) = ಆಯುಷ್ಯವಂತ.

ಆಸಿವಂತನಾಗು (ಕ್ರಿ)=ಆಯುಷ್ಯವಂತ-ನಾಗು; ದೀರ್ಘಾಯುಷಿಯಾಗು.

ಆಸುಪಾಸು = ಸುತ್ತ-ಮುತ್ತ; ಅಕ್ಕಪಕ್ಕ; ನೆರೆಹೊರೆ.

ಆಸುರ್ಕಿಬ್ಯಾಸುರ್ಕಿ = ಆಯಾಸ; ಬೇಸರ; ಮನಸ್ಸು ಹತ್ತದಿರುವಿಕೆ.

ಆಸ್ಕಾರಿ (ನಾ) = ಪ್ರಸಿದ್ಧಿ ; ಖ್ಯಾತಿ

ಆಸ್ತಿ (ನಾ) = ಹೊಲಮನೆ, ದುಡ್ಡುದುಗ್ಗಾಣಿ, ಜಂಗಮ ಸಾಧನೆ ಇತ್ಯಾದಿ.

ಆಸ್ರಿ (ನಾ) = ಆಸರೆ; ನೆಳಲು; ಗುಡಿಸಲು;ಸೂರು.

ಆಳಬಾಳ = ಆಳಗಬಳಗದ ಭೇಟಿ (?)

ಆಳಾಂವ (ನಾ) = ಆಳುವವನು (ಗಾದೆ: ಆಳಾವನಿಗಿ ಆರ್ಮಂದಿ ಹೆಂಡರು).

ಆಳಿ (ನಾ) = ವಾಳ; ಶರೀರದ ಮೇಲೆ ಬೆಳೆದ ದುರ್ಮಾಂಸ; ಗೋದಿಹಿಟ್ಟು, ಬೆಲ್ಲ ಮತ್ತು ನೀರು ಬೆರೆಸಿ ತಯಾರಿಸಿದ ತಿಳಿಯಾದ ಗಂಜಿ (ಗಾದೆ : ಯಾಳ್ಯಾ ಹೊತ್ತಿಲ್ದೆ, ಆಳಿ ಮೈನೆರಿತಂತ).

ಆಳಿಕಿ (ನಾ) = ಆಳಿಕೆ; ಆಳ್ವಿಕೆ; ಆಳ್ಕಿ; ಆಡಳಿತ.

ಆಳು (ನಾ) = ನೌಕರ; ವೇತನ ಪಡೆದು ದುಡಿವವನು; ದಿನಗೂಲಿ ಮನುಷ್ಯ. (ಗಾದೆ: ಆಳು ಮಾಡಿದ್ದು ಹಾಳು)

ಆಳು (ಕ್ರಿ) = ಆಡಳಿತ ನಡೆಸು; ಹೆಂಡತಿಯ ಮೇಲೆ ಅಧಿಕಾರ ನಡೆಸು.

ಆಳುದ್ದ = ಮನುಷ್ಯನಷ್ಟು ಎತ್ತರ.

ಆಳುಮಗ (ನಾ) = ಆಳು; ಮಗನಂತೆ ದುಡಿಯುವ ಆಳು; ಆಳ್ಮಗ.

ಆಳುಹೋಳು (ನಾ) = ನೌಕರ ವರ್ಗದವರು; ಆಳು ಮಕ್ಕಳು.

ಆಳೂಸ (ನಾ) = ತಿಳಿ; ತೆಳು; ಸಡಿಲು (ಗಾದೆ : ಆಳೂಸಾದ್ರಅಂಬ್ಲಿ, ಘಟ್ಟ್ಯಾದ್ರ ರೊಟ್ಟಿ).

ಆಳೆತ್ತರ (ನಾ) = ಮನುಷ್ಯನೆತ್ತರ.

ಆಳ್ತಿ (ನಾ) = ಅಳತೆ; ಮಾಪನ.

ಆಳ್ತಿಗೆಟ್ಟು = ಅಳತೆಮೀರಿ; ಮಿತಿಮೀರಿ; ಅಪರಿಮಿತ.

ಆಳ್ತಿಮಾಡು (ಕ್ರಿ) = ಅಳೆ; ಮಾಪನ ಮಾಡು.

ಆಳ್ತಿಮೀರಿ (ಅ) = ಅಳತೆಮೀರಿ; ಮಿತಿಮೀರಿ.

ಆಳ್ತಿತೊಗೊ (ಕ್ರಿ) = ಅಳತೆಮಾಡಿ ಟಿಪ್ಪಣಿ ಮಾಡಿಕೊ.ಸಿಂಪಿಗ ಅಳತೆ ತೆಗೆದು ಕೊ.

ಆಳ್ದಾವ (ನಾ) = ಆಳಿದವನು; ಒಡೆಯ; ಯಜಮಾನ. (ಗಾದೆ : ಮಾಡ್ದವ್ನ ಹೊಲಾ, ಆಳ್ದಾವ್ನ ಹೆಣ್ತಿ).

ಆಳ್ಮಗ (ನಾ) = ಮಗನಂತೆ ದುಡಿವನೌಕರ; ಆಳುಮಗ.

ಆಳ್ಮನ್ಯಾ (ನಾ) = ಆಳಾಗಿ ದುಡಿಮೆ ಮಾಡುವವನು.

ಆಳ್ಸಿ (ನಾ)ಮ. = ಮೈಗಳ್ಳ ; ಆಂಗ್ಚೋರ.

ಆಳ್ಳಿ (ನಾ) = ಅರಳೆ; ಹಿಂಜಿದ ಹತ್ತಿ; ಅಳಲೆ.

ಆಳ್ಳಿಕಾಯಿ (ನಾ) = ಅಳಲೆಕಾಯಿ; ತ್ರಿಫಳಗಳಲ್ಲಿ ಒಂದು ಫಲ.

ಆಳ್ಳಿಗಾಳ್ಳಿ = ಶೂನ್ಯಕ್ಕೆ ಶೂನ್ಯ; ಪೂಜಿಗೆ ಪೂಜಿ; ನಿಶ್ಶೇಷ.

ಆಳ್ಳಿಟ್ಟು (ನಾ) = ಹುರಿದ ಜೋಳವನ್ನು ಬೀಸಿ ಬೆಲ್ಲ ಅಥವಾ ಸಕ್ಕರೆ ಬೆರೆಸಿ ತಯಾರಿಸಿದ ಒಂದು ತರಹದ ತಿಂಡಿ; ನಾಗರ ಪಂಚಮಿಯ ವಿಶೇಷ ತಿಂಡಿ.

ಆಳ್ಳಿ (ನಾ) = ಮಂಡಳ್ಳಿ, ಮಂಡಕ್ಕಿ; ಅರಳು.

ಆಳ್ಳಿ ಹುರಿ (ಕ್ರಿ) = ಜೋಳ, ಮೆಕ್ಕೆಜೋಳ, ಅಕ್ಕಿಕಾಳುಗಳನ್ನು ಭಟ್ಟಿಯಲ್ಲಿ ಬಿಸಿ ಮಾಡಿ ಮಂಡಕ್ಕಿ ತಯಾರಿಸು.

ಇ

ಇಂಕಣಿ (ನಾ) = ಮೂರನೇ ಸಲ ತುಳಿಸಲಾಗುವ ರಾಶಿಯ ತೆನೆ.

ಇಂಕಣಿರಾಶಿ (ನಾ) = ಮೂರನೇ ಸಲದ ರಾಶಿ.

ಇಂಕಾಲ (ಕ್ರಿ) = ಕರಗೊಲ್ಲ; ಅರಗೊಲ್ಲ; ಅರಗದು; ಕರಗದು; ಜೀರ್ಣವಾಗದು.

ಇಂಕು (ನಾ) = ಬರೆಯಲು ಬಳಸುವ ಮಸಿ; ಶಾಯಿ; ಬಣ್ಣ.

ಇಂಕು (ಕ್ರಿ) = ಕರಗು; ಅರಗು; ಜೀರ್ಣವಾಗು

ಇಂಗಳ (ನಾ) = ಬೆಂಕಿಯ ಕೆಂಡ.

ಇಂಗಳಿಕ್ಕು (ಕ್ರಿ) = ಬೆಂಕಿಹಚ್ಚು; ಭೇದ ಹುಟ್ಟಿಸು; ಒಡಕುಂಟುಮಾಡು; ಜಗಳ ಹಚ್ಚು.

ಇಂಗಳಿಡು (ಕ್ರಿ) = ಇಂಗಳಿಕ್ಕು; ಬೆಂಕಿಹಚ್ಚು. ಒಡಕು ಹುಟ್ಟಿಸು, ಬೆಂಕಿ ಹಚ್ಚು.

ಇಂಗು (ಕ್ರಿ) = ಒಣಗು; ಬತ್ತು; ಅಡಗು.

ಇಂಗು (ನಾ) = ಹಿಂಗು; ಅಡಿಗೆಗೆ ಹಾಕುವ ಒಂದು ಪ್ರಕಾರದ ರಸಾಯನ; (ಗಾದೆ : ಇಂಗು ತಿಂದ ಮಂಗ).

ಇಂಗುಸು (ಕ್ರಿ) = ಇಂಗುವಂತೆ ಮಾಡು, ನೀರು ಅಥವಾ ದ್ರವವಸ್ತು ನೆಲವು ನುಂಗುವಂತೆ ಮಾಡು; ಒಣಗಿಸು; ಬತ್ತುವಂತೆ ಮಾಡು; ಆರುವಂತೆ ಮಾಡು.

ಇಂಗ್ರೇಜಿ (ನಾ) = ಇಂಗ್ಲಿಷ್ ಭಾಷೆ.

ಇಂಗ್ಲಂ (ನಾ) ತೆ. = ಇಂಗಳ; ಬೆಂಕಿ.

ಇಂಗ್ಲೀಷು (ನಾ) = ಇಂಗ್ಲಿಷು.

ಇಂಚಿಂಚು (ದ್ವಿ)ಇಂ. = ಪ್ರತಿ ಇಂಚು; ಪ್ರತಿ ಅಂಗುಲ.

ಇಂಚು (ನಾ) = ಅಂಗುಲ; ಉದ್ದಳತೆಯ ಒಂದು ಮಾನ.

ಇಂಚುಪಟ್ಟಿ (ನಾ) = ಅಂಗುಲ ಗುರುತಿನ ಅಳತೆಪಟ್ಟಿ

ಇಂಜನ್ನು (ನಾ) = ಎಂಜಿನ್ನು; ಯಂತ್ರ.

ಇಂಜಿಸ್ಸು (ನಾ) = ಚೌಕಟ್ಟು ಮತ್ತು ತಟ್ಟಿಯನ್ನು ಭದ್ರವಾಗಿ ಹಿಡಿದಿಡುವ ಕಬ್ಬಿಣದ ಪಟ್ಟಿ.

ಇಂಜೆಸೆನ್ (ನಾ) = ಚುಚ್ಚುಮದ್ದು.

ಇಂಜ್ನೀರ (ನಾ) = ಯಂತ್ರಶಿಲ್ಪಿ ; ಅಭಿಯಂತ.

ಇಂತಾ = ಇಂತಹ, ಇಂಥ

ಇಂತೆಜಾಮು (ನಾ) ಉ. = ವ್ಯವಸ್ಥೆ.

ಇಂತೆಜಾರು (ನಾ) ಉ. = ದಾರಿ ಕಾಯುವಿಕೆ; ಹಾದಿ ನೋಡುವಿಕೆ, ಪ್ರತೀಕ್ಷಿಸುವಿಕೆ.

ಇಂತ್ಯಾನ್ (ನಾ) ಉ. = ಇಮ್ತೆಹಾನ್, ಪರೀಕ್ಷೆ.

ಇಂಥಾ = ಇಂಥ; ಇಂತಹ.

ಇಂಬ್ಲಾ (ನಾ) ಮ. = ಸುಲೇಖನ; ಶುದ್ಧಬರಹ; ಉಕ್ತ ಲೇಖನ.

ಇಂವಾ (ಸ.ನಾ.) = ಇವನು.

ಇಂವ್ಹುಂದು = ಇವನದು.

ಇಕಾ = ಇಕೋ; ಇಗೋ; ಇದೋ.

ಇಕಾಇಕಾ (ದ್ವಿ) = ಇಗೋ ಇಗೋ;ಇದೋ ಇದೋ.

ಇಕಾಡಿ (ಅ) = ಈಕಡೆ.

ಇಕಾಡಿಕಾಡಿ (ದ್ವಿ) = ಇತ್ತಿತ್ತಲಾಗಿ; ಇತ್ತೀಚೆಗೆ.

ಇಕಾರ (ನಾ) = ವಿಕಾರ; ಮನಸಿನ ವಿಕೃತಿ; ಕುರೂಪ.

ಇಕಿ (ಸ.ನಾ) = ಇವಳು; ಈಕೆ.

ಇಕಿಂದು = ಇವಳದು, ಈಕೆಯದು.

ಇಕೋ (ಅ) = ಇಗೋ; ಇದೋ.

ಇಕ್ಕು (ಕ್ರಿ) = ಇಡು; ಹೊಡೆ;ಬಡಿ; ಕೊಲ್ಲು.

ಇಕ್ಕುಳ (ನಾ) = ಇಕ್ಳ; ಎರಡು ಮಣಿ; ಕಮ್ಮಾರನ ಕೈಯ ಚಿಮ್ಮಟ, ಹಿಡಿಕೆ.

ಇಕ್ರಮರಾಜಾ (ನಾ) = ವಿಕ್ರಮ-ಭೂಪಾಲ.

ಇಕ್ಕ (ನಾ) = ಇಕ್ಕುಳ; ಕಬ್ಬಿಣದ ಚಿಮ್ಮಟ;ಎರಡು ಮಣ.

ಇಗಳಿ (ನಾ) = ಇಗ್ಗಿ; ಹೈನದೆಮ್ಮೆಗಳಿಗೆ ನುಚ್ಚಿನ ಜತೆ ಕುದಿಸಿ ತಿನಿಸುವ ಕಾಡು ಸಸ್ಯ.

ಇಗ್ತಿ (ನಾ) = ಯುಕ್ತಿ; ವಿಚಾರ; ಹಂಚಿಕೆ.

ಇಗ್ನ (ನಾ) = ವಿಘ್ನ.

ಇಗ್ನೆಸೂರ (ನಾ) = ವಿಘ್ನೇಶ್ವರ; ಗಣಪತಿ

ಇಗ್ಗಿ (ನಾ) = ಇಗಳಿ; ದಪ್ಪ ಎಲೆಯ ಹುಲ್ಲು; ಹೈನದೆಮ್ಮೆಯ ಆಹಾರ.

ಇಚಾಕ (ಅ) = ಈಚೆಗೆ; ಈ ಕಡೆಗೆ.

ಇಚಾರ (ನಾ) = ವಿಚಾರ.

ಇಚಾರಗೇಡಿ (ನಾ) = ವಿಚಾರ ಹೀನ; ವಿಚಾರಗೇಡಿ; ವಿಚಾರ ಮಾಡಲಾರದವನು; ತಿಳಿಗೇಡಿ.

ಇಚಾರ ಮಾಡು (ಕ್ರಿ) = ವಿಚಾರ ಮಾಡು; ತೀರ್ಮಾನಿಸು; ನಿರ್ಣಯಿಸು.

ಇಚಾರವಂತ (ನಾ) = ಆಲೋಚಿಸುವ ಸಾಮರ್ಥ್ಯವುಳ್ಳವನು. ವಿವೇಕಶಾಲಿ.

ಇಚಾರಿಸು = ವಿಚಾರಿಸು.

ಇಚಿತ್ರ = ವಿಚಿತ್ರ.

ಇಜಾ = ಕಾಟ; ಕಾಡುವಿಕೆ; ನೋವು, ಅಪಾಯ.

ಇಜಾಜತ್ತು (ನಾ)ಉ. = ಅಪ್ಪಣೆ.

ಇಜಾಫಾ (ವಿ.) = ಉ. ಹೆಚ್ಚು ; ಅಧಿಕ.

ಇಜಾಫಾ ಆಗು (ಕ್ರಿ) = ಹೆಚ್ಚಳಗೊಳ್ಳು; ಅಧಿಕವಾಗು.

ಇಜಾಫಿ = ಹೆಚ್ಚುವರಿ.

ಇಜಾಮಾಡು (ಕ್ರಿ) = ಕಾಡು; ತೊಂದರೆ ಕೊಡು.

ಇಜ್ಜತ್ತು (ನಾ) = ಮರ್ಯಾದೆ; ಗೌರವ

ಇಟಗಿ (ನಾ) = ಚಿಟಗುಪ್ಪಾ ಸಮೀಪದ ಐತಿಹಾಸಿಕ ಪುರಾತನ ಮಠ ಉಳ್ಳ ಊರು.

ಇಟೀಟೆ = ಇಷ್ಟಿಷ್ಟೆ (ಒಗಟು : ಇಟೇಟೆ ಪಾರ; ಮೂಗಿನಾಗಧಾರ)

ಇಟುಗೊ (ಕ್ರಿ) = ಇಟ್ಟುಕೊ; ಇರಿಸಿಕೊ; ಸೂಳೆಯಾಗಿ ಇರಿಸಿಕೊ; ಒತ್ತೆ ಇಟ್ಟುಕೊ.

ಇಟ್ಗಿ = ವಿರಕ್ತ ಮಠವುಳ್ಳ ಇಟಗಿ ಎಂಬ ಚಿಟಗುಪ್ಪಾ ಹತ್ತಿರದ ಒಂದು ಊರು.

ಇಟ್ಗೊ = ಇಟುಗೊ(ನೋಡಿರಿ)

ಇಟ್ವಂಗ = ಇಟ್ವಂತೆ.

ಇಟ್ವಂಗಿ (ನಾ) = ಇಟ್ಟಿಗೆ; ಭಟ್ಟಿಯಲ್ಲಿ ಸುಟ್ಟು ತಯಾರಿಸಿದ ಮಣ್ಣಿನ ಚೌಕು.

ಇಟ್ವಿಗಿ (ನಾ) = ಇಟ್ಟಿಗೆ; ಇಟ್ವಂಗಿ

ಇಡಿ (ನಾ) = ಬರಗಿನ ನುಚ್ಚಿನೊಂದಿಗೆ ಇಗಳಿ ಸೊಪ್ಪು ಸೇರಿಸಿ ಕುದಿಸಿ ತಯಾರಿಸಿದ ಹಯನದೆಮ್ಮೆಯ ಆಹಾರ.

ಇಡು (ಕ್ರಿ) = ಇರಿಸು, ಇಕ್ಕು, ನೆಲಕ್ಕೆ ಹೊಂದಿಸು.

ಇಡುಗಂಟು (ನಾ) = ಇಡ್ಗಂಟು; ಠೇವಣಿ ಹಣ; ಬಂಡವಾಳ; ಒತ್ತೆ ಬಂಗಾರ.

ಇಡ್ಲಿ (ಕ್ರಿ) = ಇಡಲಿ; (ನಾ) ಇಡ್ಲಿ ತಿಂಡಿ.

ಇಣಜಿ (ನಾ) = ಒಂದು ಪ್ರಕಾರದ ಮರ ಮತ್ತು ಅದರ ಕಾಯಿ; ಇಣಜಿ ಬೀಜಗಳನ್ನು ಅಡಕೆಯಂತೆ ಬಳಸಲಾಗುತ್ತದೆ.

ಇಣಿ (ನಾ) = ಗೂಳಿ, ಎತ್ತು, ಹೋರಿ ಮೊದಲಾದವುಗಳ ಹಿಣಿಲು; ಒಂಟೆಯ ಡುಬ್ಬ.

ಇಣ (ಚಿ) (ನಾ) = ಅಳಿಲು; ಅನುಲಿ

ಇತರ (ಅ) = ಉಳಿದ; ಬೇರೆಯ.

ಇತಲಾಗ (ಅ) = ಇತ್ತಕಡೆ, ಈಚೆ ದಿನಗಳಲ್ಲಿ.

ಇತ್ತ = ಈ ಕಡೆ.

ಇತ್ತರ (ನಾ) = ಸುಗಂಧಿ ಎಣ್ಣೆ.

ಇತ್ತರದಾನ (ನಾ) = ಸುಗಂಧಿ ಬಾಟಲಿಗಳನ್ನಿಡುವ ಪೆಟ್ಟಿಗೆ.

ಇತ್ತಲ್ಲಾ (ನಾ) ಉ. = ಸುದ್ದಿ; ಸಮಾಚಾರ; ವರದಿ.

ಇತ್ಲಾಗ = ಇತ್ತಕಡೆ.

ಇದಿ (ನಾ) = ವಿಧಿ; ಬ್ರಹ್ಮ; ಶೆಟಗೆಮ್ಮ; ಅದೃಷ್ಟ. (ಗಾದೆ: ಇದಿ ಎಲ್ಲಾದಂದ್ರ ನಿನ್‌ಕಾಲಾಗೆ ಅದಾ ಅಂತಂತ).

ಇದ್ದ = ಇದ್ದದ್ದು; ಇದ್ದಂಥ.

ಇದ್ದಾಗ = ಹತ್ತಿರ ಹಣವಿದ್ದಾಗ (ಗಾದೆ: ಇದ್ದಾಗ ನಬಾಬಸಾಬ, ಇಲ್ದಾಗ ಫಕೀರಸಾಬ).

ಇದ್ದಿದ್ದಿದ್ದಂಗ = ಸತ್ಯವಾದದ್ದು (ಗಾದೆ : ಇದ್ದಿದ್ದಿದ್ದಂಗ ಆಡದುರ, ಸಿದ್ದಪ್ಪಗ ಸಿಡ್ಲು ಬಡಿತಂತ)

ಇದ್ದಿದ್ದಿದ್ದಂಗ ಸಿದ್ದೇಶ (ನಾ) = ನಿರಾಳ; ನಿಶ್ಚಿಂತ.

ಇದ್ದಿದ್ದು ಬಿದ್ದಿದ್ದು (ನಾ) = ಅಳಿದುಳಿದದ್ದು

ಇದ್ಯಾ (ನಾ) = ವಿದ್ಯೆ; ಶಿಕ್ಷಣ.

ಇದ್ಯಾವಂತ (ನಾ) = ವಿದ್ಯಾವಂತ

ಇಧವಾ = ವಿಧವೆ

ಇನಂತಿ = ವಿನಂತಿ.

ಇನ್‌ಕಾರ (ನಾ)ಉ. = ತಿರಸ್ಕಾರ.

ಇನ್‌ಸಲ್ಟು (ನಾ)ಇಂ. = ಅವಮಾನ; ಅವಮರ್ಯಾದೆ.

ಇನ್‌ಸಾನಿಯತ್ತು (ನಾ) ಉ. = ಮನುಷತ್ವ.

ಇನ್‌ಸಾಫ್ (ನಾ) ಉ. = ನ್ಯಾಯ

ಇನಾಕಾರಣ = ವಿನಾಕಾರಣ.

ಇನಾಭಿ = ಇನ್ನೂ.

ಇನಾಮತಿ (ನಾ) = ಸರ್ಕಾರ ಕೊಟ್ಟ ಕಂದಾಯ ರಹಿತ ಭೂಮಿ; ಇನಾಮಿ ಭೂಮಿ.

ಇನಾಮಿ (ನಾ) ಉ. = ಸರಕಾರದ ಕಾಣಿಕೆ ಭೂಮಿ.

ಇನಾಮು (ನಾ) ಉ. = ಕಾಣಿಕೆ; ಬಹುಮಾನ

ಇನಾಮ್ದಾರ (ನಾ) ಉ. = ಇನಾಮು ಹೊಂದಿದವ.

ಇನ್ನಾ = ಇನ್ನೂ.

ಇಪರೀತ (ನಾ) = ವಿರುದ್ಧವಾದುದು; ವಿಪರೀತ; ವಿಲಕ್ಷಣವಾದುದು; ಅಸಹಜವಾದುದು.

ಇಪಾರತಿ (ನಾ) = ಅಪವಾದ.

ಇಪ್ಪತ್ತು (ನಾ) = ಇಪ್ಪತ್ತರ ಅಳತೆಮಾನ; ಎರಡು ಹತ್ತು.

ಇಪ್ಪಿ (ನಾ) = ಇಪ್ಪೆ; ಇಪ್ಪೆಯ ಮರ; (ಇಪ್ಪೆಯ ಹೂವಿಂದ ಸರಾಯಿ ತಯಾರಿಸುತ್ತಾರೆ)

ಇಪ್ಪು (ನಾ) = ದನದ ಹುಣ್ಣಿನಲ್ಲಿ ಹುಟ್ಟುವ ಹುಳು.

ಇಪ್ಪಿಡು (ಕ್ರಿ) = ಜಗಳ ಹಚ್ಚು, ಕಿರಿಕಿರಿ ಕೊಡು; ತೊಂದರೆ ಹುಟ್ಟಿಸು. ಹುಣ್ಣು ಬೀಳುವಂತೆ ಮಾಡು; ಗಾಯದ ಜಾಗದಲ್ಲಿ ಹುಳು ಉಂಟಾಗು.

ಇಬಿಸೆಣ (ನಾ) = ರಾವಣನ ತಮ್ಮ; ವಿಭಿಷಣ; ರಾಮಭಕ್ತ; ಒಳವೈರಿ.

ಇಮಾನು (ನಾ) = ವಿಮಾನ; ಶವಸಾಗಿಸುವ ವಿಮಾನ, ಪರಿಮಳ; ಹೆಣದ ವಾಹನ; ಕಮಾನು; ಪ್ರಾಮಾಣಿಕತೆ.

ಇಮಾನುಕಟ್ಟು (ಕ್ರಿ) = ಶವ ಸಾಗಿಸುವ ವಿಮಾನ ಅಥವಾ ಪರಿಮಳವನ್ನು ಸಿದ್ಧಗೊಳಿಸು.

ಇಮಾನ್ದಾರಿ (ನಾ) = ಪ್ರಾಮಾಣಿಕತೆ.

ಇಮಾರತಿ (ನಾ) = ಇಮಾರತು; ದೊಡ್ಡ ಕಟ್ಟಡ; ಭವ್ಯ ಬಂಗಲೆ.

ಇಮಾರತಿ ಧಂದೆ (ನಾ) = ಕಟ್ಟಡ ಕೆಲಸ.

ಇಮಾರತು (ನಾ) ಉ. = ಕಟ್ಟಡ; ಭವ್ಯ ಕಟ್ಟಡ.

ಇಮ್ತ್ಯಾನ (ನಾ) ಉ. = ಪರೀಕ್ಷೆ.

ಇಮ್ಮನ (ನಾ) = ಎರಡು ಮಾನ; ಎರಡು ಮನಸ್ಸು; ಇಬ್ಬಗೆ (ವಚನ: ಒಮ್ಮನವ ಮೀರಿ ಇಮ್ಮನದಲಿ ತಂದಿರಿ. ಇದು ನಿಮ್ಮ ಮನವೊ ಬಸವಣ್ಣನ ಅನುಮಾನದ ಚಿತ್ತವೊ- ಆಯ್ದಕ್ಕಿ ಲಕ್ಕಮ್ಮ.)

ಇಯ್ಯು (ಕ್ರಿ) = ಈ; ಕರುಹಾಕು; ಕೊಡು.

ಇರಭದ್ರ (ನಾ) = ವೀರಭದ್ರ; ಹುಮನಾಬಾದ ಮತ್ತು ಚಾಂಗಲೇರಿಯ ವೀರಭದ್ರದೇವರು.

ಇರಸಂಗಯ್ಯ (ನಾ) = ವೀರಸಂಗಯ್ಯ ಬೀದರ ಕೋಟೆಯ ಒಳಗಡೆ ಸಮಾಧಿಗೊಂಡಿರುವ ವೀರಸಂಗಯ್ಯನೆಂಬ ವೀರ.

ಇರಳಾ (ವಿ) = ವಿರಳ; ಕಡಿಮೆ

ಇರಾಟ್ಗೆ (ಅ) = ಇರುವಾಗಲೇ; ಬದುಕಿರುವಾಗಲೇ.

ಇರಾಟ್ಗೇನೆ (ಅ) = ಬದುಕಿರು-ವಾಗಲೆಯೇ.

ಇರಾದಾ (ನಾ) ಉ. = ಅಭಿಪ್ರಾಯ; ಒಳಮನಸ್ಸು.

ಇರಾದಿ (ನಾ) = ಇರಾದಾ; ಅಭಿಪ್ರಾಯ

ಇರಾದು = ಇರುವುದು; ಇರಬೇಕಾದುದು; ಇರುತ್ತಿರುವಾಗ.

ಇರಿ (ಕ್ರಿ) = ಚುಚ್ಚು ; ಹೊಡೆ; ತಿವಿ.

ಇರ್ರಿ (ಕ್ರಿ) = ಇದ್ದುಬಿಡಿರಿ.

ಇರು (ಕ್ರಿ) = ವಾಸಿಸು; ಬೀಡುಬಿಡು.

ಇರು (ನಾ) = ಇರುವೆ; ಕಂಟಿರುವೆ; ಕಟ್ಟಿರುವೆ; ಕೆಂಪಿರುವೆ; ಹುಚ್ಚಿರುವೆ; ಎಣ್ಣೆ ಇರುವೆ ಇತ್ಯಾದಿ.

ಇರುದ್ದ = ವಿರುದ್ಧ; ಖಿಲಾಪು.

ಇರೇಪು = ಅಡ್ಡ; ಒಂಕ; ವಾರಿ; ಥ್ರಾಸು.

ಇರೇಪು ಬನೀನು (ನಾ) = ಬೆನ್ನಲ್ಲಿ ಅಡ್ಡ ಹೊಲಿಗೆ ಬರುವಂತೆ ಹೊಲಿದ ಒಳ ಅಂಗಿ.

ಇರೋದ (ನಾ) = ವಿರೋಧ.

ಇರ್ಕಲ್ ಸೀರಿ (ನಾ) = ಇಲ್ಕಲ್ಲಿ ನಲ್ಲಿ ತಯಾರಾದ ಸೀರೆ.

ಇರ್ಕಿನಾಗ ಸಿಗು (ಕ್ರಿ) = ಇಕ್ಕಟ್ಟಿನಲ್ಲಿ ಸಿಕ್ಕುಬೀಳು.

ಇರ್ಕು (ನಾ) = ಇಕ್ಕಟ್ಟು.

ಇರ್ತಾಇರ್ತಾ (ದ್ವಿ) = ಇರುತ್ತಿರುತ್ತಾ; ಬರಬರುತ್ತಾ.

ಇರ್ಪಾಕ್ಷಲಿಂಗ (ನಾ) = ವಿರೂಪಾಕ್ಷಲಿಂಗ. (ಭಜನೆ: ಕಾಶೀ ವಿಶ್ವನಾಥ ಗಂಗಾ/ಹಂಪಿ ವಿರೂಪಾಕ್ಷ ಲಿಂಗಾ।।)

ಇರ್ಳ (ನಾ) = ವಿರಳ; ಕಡಿಮೆ.

ಇಲಾಚಿ (ನಾ) = ಇಲೈಚಿ; ಏಲಕ್ಕಿ; ಸುವಾಸನೆಯ ಬೀಜವುಳ್ಳ ಕಾಯಿ.

ಇಲಿ (ನಾ) = ಇಲ್ಯಾಬತ್ತು; ಮೂಷಕ.

ಇಲಿಹಾರಿಹೋಗು (ಕ್ರಿ) = ಪ್ರಾಣಹಾರಿಹೋಗು.

ಇಲೈಚಿ (ನಾ) = ಯಾಲಕ್ಕಿ; ಏಲಕ್ಕಿ.

ಇಲ್ಯಾಬತ್ತು (ನಾ) = ಇಲಿ; ಮೂಷಕ.

ಇಲ್ಜಾಮು (ನಾ) ಉ. = ಅಪವಾದ; ಅಪರಾಧ ಹೇರಿಕೆ.

ಇಲ್ಜಾಮು ಹಚ್ಚು (ಕ್ರಿ) = ಅಪರಾಧ ಹೇರು; ಅಪವಾದಕ್ಕೆ ಗುರಿ ಮಾಡು.

ಇಲ್ದ (ಅ) = ಇಲ್ಲದ; ಅಸ್ತಿತ್ವದಲ್ಲಿಲ್ಲದ (ಗಾದೆ : ಇಲ್ದಬೇಡಿ ಅಲ್ಲನುಸ್ಗೊಂಡು).

ಇಲ್ಲ (ಗ್ರಿ) = ಅಸ್ತಿತ್ವದಲ್ಲಿಲ್ಲ; ಉಳಿದಿಲ್ಲ; ಇಲ್ಲಿ ಇರುವುದಿಲ್ಲ.

ಇಲ್ಲದಾಗ = ಕೈ ಖಾಲಿ ಆದಮೇಲೆ; ಬಡತನ ಬಂದ ಮೇಲೆ (ಗಾದೆ : ಇದ್ದಾಗ ನಬಾಬಸಾಬ,ಇಲ್ಲದಾಗ ಫಕೀರಸಾಬ)

ಇಲ್ಲಾಮಲ್ಲಿ (ನಾ) = ಕೊಂಡೆ ಕೆಲಸ ಮಾಡುವವನು.

ಇಲ್ಲಾಳ (ನಾ) = ಬಸವಕಲ್ಯಾಣ ತಾಲೂಕಿನ ಇಳಿಹಾಳ ಬೊಮ್ಮಯ್ಯನ ಸಮಾಧಿಯುಳ್ಳ, ಜಾತ್ರೆ ನೆರವೇರುವ ಊರು. ಬಿಜಾಪುರ ಜಿಲ್ಲೆಯ ಇಳಿಹಾಳ ಹಾಗೂ ಈ ಇಳಿಹಾಳಗಳ ಬೊಮ್ಮಯ್ಯಗಳ ಕತೆ ಒಂದೇ ಪ್ರಕಾರವಾಗಿದೆ.

ಇಲ್ಲಿ = ಈ ಜಾಗದಲ್ಲಿ.

ಇಲ್ಲಿಥನಾ = ಇಲ್ಲಿಯ ತನಕ.

ಇಲ್ಲು (ನಾ)ತೆ. = ಮನೆ; ವಾಸಸ್ಥಾನ.

ಇವ (ಸ.ನಾ.) = ಇವನು.

ಇವಾಕಿ (ಸ.ನಾ.) = ಪದ್ಧತಿ.

ಇವೇಕ = ವಿವೇಕ.

ಇವೇಕಿ = ವಿವೇಕಿ.

ಇವ್ಳು = ಇವಳು; ಈಕೆ.

ಇಶಾರಾ (ನಾ)ಉ. = ಸೂಚನೆ.

ಇಶಾರಿ (ನಾ) = ಸೂಚನೆ; ಬಯಾನ, ಮುಂಗಡ; ಅಡ್ವಾನ್ಸ.

ಇಶಾರಿ ಮಾಡು (ಕ್ರಿ) = ಸೂಚಿಸು.

ಇಸಮಿಲ್ದು = ನಾಚಿಕೆ ಇಲ್ಲದ್ದು ; ಲಜ್ಜೆ ಗೆಟ್ಟದ್ದು ; ಮನುಷತ್ವ ಇಲ್ಲದ್ದು.

ಇಸಮು (ನಾ) = ನಾಚಿಕೆ ; ಲಜ್ಜೆ; ಮನುಷತ್ವ.

ಇಸಾ (ನಾ) = ವಿಷ; ಜಾರ; ಜಹರು.

ಇಸಾಕಿ ಮಳಿ (ನಾ) = ವಿಶಾಖಾ ನಕ್ಷತ್ರದಲ್ಲಿ ಬರುವ ಮಳೆ.

ಇಸಾಹಾಕು (ಕ್ರಿ) = ವಿಷಊಡು; ವಿಷಪ್ರಾಶನ ಮಾಡಿಸು.

ಇಸುಬು (ನಾ) = ತುರಿ ಇಡುವ ಹುಣ್ಣು. ಚರ್ಮರೋಗ.

ಇಸುಮು (ನಾ) = ಇಸಮು; ನಾಚಿಕೆ.

ಇಸುಮುಳ್ಳವ (ನಾ) = ಮರ್ಯಾದಸ್ತ; ನಾಚಿಕೆಯುಳ್ಳವ.

ಇಸುವಾಸ (ನಾ) = ವಿಶ್ವಾಸ; ನಂಬಿಕೆ.

ಇಸುಮ್ಗೇಡಿ (ನಾ) = ಮರ್ಯಾದೆಗೆಟ್ಟವನು.

ಇಸೇಸ = ವಿಶೇಷ.

ಇಸ್ಕೊ (ಕ್ರಿ) = ಇಸಿದುಕೊ; ಕೇಳಿ ಪಡೆದುಕೊ

(ಗಾದೆ : ಇಸ್ಕೊಂಡ್ತಿಂಬೋರ್ಬಲ್ಲಿ ಕಸ್ಕೊಂಡ್ತಿಂಬೋರು ಹೋದ್ರಂತ).

ಇಸ್ಗೊ (ಕ್ರಿ) = ಇಸ್ಕೊ ; ಇಸಿದು ಕೊ.

ಇಸ್ಟಾಪ್ (ನಾ)ಇಂ. = ಬಸ್ಸು ನಿಲ್ದಾಣ; ಸ್ಟ್ಯಾಂಪು ಕಾಗದ.

ಇಸ್ಟೋೀ(ನಾ)ಇಂ. = ಸ್ಟೌವ್, ಎಣ್ಣೆ ಒಲೆ.

ಇಸ್ತಫಾ (ನಾ) ಉ. = ರಾಜಿನಾಮೆ.

ಇಸ್ತರಿ (ನಾ) = ಇಸ್ತ್ರಿ ಪೆಟ್ಟಿಗೆ.

ಇಸ್ತರಿಮಾಡು (ಕ್ರಿ) = ಇಸ್ತ್ರಿ ಪೆಟ್ಟಿಗೆಯಿಂದ ಬಟ್ಟೆ ಮಡಿಗೊಳಿಸು.

ಇಸ್ತಾರಿ (ನಾ) = ಇಸ್ತರಿ ಪೆಟ್ಟಿಗೆ ; ಮಡಿಕೆ ಹಾಕುವಿಕೆ.

ಇಸ್ಪಿಟ್ಟು (ನಾ) ಇಂ. = ಇಸ್ಪೀಟು, ಇಸ್ಪೀಟೆಲೆ.

ಇಸ್ಬು (ನಾ) = ಇಸುಬು (ನೋಡಿರಿ).

ಇಸ್ಮ್ಳ (ನಾ) = ಅಶ್ಲೀಲ; ಹೊಲಸು.

ಇಸ್ರಾಂತಿ (ನಾ) = ವಿಶ್ರಾಂತಿ.

ಇಸ್ಲಾಮ (ನಾ) = ಮುಸಲ್ಮಾನ ಧರ್ಮ.

ಇಸ್ವನಾತ (ನಾ) = ವಿಶ್ವನಾಥ.

ಇಸ್ವಾಸ (ನಾ) = ವಿಸ್ವಾಸ; ನಂಬಿಗೆ; ಇಸುವಾಸ.

ಇಸ್ವಾಸಗೇಡಿ (ನಾ) = ವಿಶ್ವಾಶಘಾತುಕ; ವಿಶ್ವಾಸ ಕಳೆದುಕೊಂಡವ.

ಇಸ್ವಾಸಘಾತ (ನಾ) = ನಂಬಿಕೆ ದ್ರೋಹ.

ಇಸ್ವಾಸ ಮಾಡು (ಕ್ರಿ) = ನಂಬು; ವಿಶ್ವಾಸವಿಡು.

ಇಸ್ಸಂತ (ಅ) = ಮೂವತ್ತೆರಡು ಹಲ್ಲು ಕಾಣುವಂತೆ ಬಾಯಿ ಕಿಸಿದು.

ಇಸ್ಸಿ (ನಾ) = ಮಲ; ಹೇಲು; ವಿಸರ್ಜಿಸಿದ್ದು; ಹೊಲಸು (ಬಾಲಭಾಷೆ)

ಇಸ್ಸಿಮಾಡು (ಕ್ರಿ) = ಮಲವಿಸರ್ಜನೆ ಮಾಡು.

ಇಳಕೋತ (ಅ) = ಇಳಿಯುತ್ತ; ಕೆಳಗೆ ಬರುತ್ತ; ಕಡಿಮೆಯಾಗುತ್ತ; ಕರಗುತ್ತ; ಮುದಿಯಾಗುತ್ತ (ಗಾದೆ: ಇಳ್ಕೋತ ಹೋಧಾಂಗ ತಿಳ್ಕೋತ ಬರ್ತಾದ).

ಇಳಗಣ್ಣು (ನಾ) = ಇರುಳ್ಗಣ್ಣು ; ರಾತ್ರಿಯಲ್ಲಿ ಕಣ್ಣುಕಾಣದಂತಾಗುವ ರೋಗ.

ಇಳಗಣ್ಣು ಹೋಗು (ಕಿ) = ಇರುಳಲ್ಲಿ ಕಣ್ಣು ಕಾಣದಂತಾಗು.

ಇಳಿ (ಕ್ರಿ) = ಕೆಳಗೆ ಬಾ; ಕಡಿಮೆಯಾಗು; ಕರಗು; ಸಣ್ಣಾಗು; ಅನ್ನಗಂಟಲಿಂದ ಕೆಳಗೆಜಾರು; ಆಳಕ್ಕೆ ಹೋಗು; ಹಣ್ಣಿನ ರುಚಿ ಕೆಡು; ನೆಲದ ಮೇಲೆ ಬಾ; ಬಡಕಲಾಗು.

ಇಳಿಗಾಯಿ (ನಾ) = ರುಚಿಗೆಟ್ಟ ಹಣ್ಣು; ಕೊಳೆತ ಹಣ್ಣು.

ಇಳಿಗಾವು (ನಾ) = ಕಡಿಮೆಗೊಂಡ ಕಾವು, ಶಕ್ತಿ; ಹುಮ್ಮಸು, ಆಯುಷ್ಯ ಇತ್ಯಾದಿ.

ಇಳಿಜಾರಿಕಿ (ನಾ) = ಇಳುಕಲು; ಜಾರು ನೆಲ.

ಇಳಿಬಿಡು (ಕ್ರಿ) = ಜೋತುಹಾಕು; ನೇತಾಡಿಸು; ಕೆಳಕ್ಕೆ ಬಿಡು; ಗಿಡದಿಂದ ಕೆಳಕೆಸಾಗಿಸು; ಮೇಲಿಂದ ಕೆಳಕ್ಕೆ ಸಾಗಿಸು.

ಇಳಿಭಾರ (ನಾ) = ಮುಪ್ಪು; ವೃದ್ಧಾಪ್ಯ; ವಸಂತದ ಕರಗುವಿಕೆ.

ಇಳಿಸು (ಕ್ರಿ) = ಚಿತ್ರಬರೆ; ಇದ್ದಂತೆ ಬರೆ; ದೋಟಿಯಿಂದ ಗಿಡಿದ ಕಾಯಿ ಕಡಿದು ಕೆಳಗೆ ಬರುವಂತೆ ಮಾಡು; ಕೆಳಗಡೆ ಸಾಗಿಸು.

ಇಳಿಹೊತ್ತು (ನಾ) = ಹೊತ್ತು ಮುಳುಗುವ ಸಮಯ; ಸೂರ್ಯನು ಪಶ್ಚಿಮದತ್ತ ಜಾರುವಿಕೆ.

ಇಳಿದೆಲಿ (ನಾ) = ವೀಳ್ಯದೆಲೆ; ತಾಂಬೂಲ

ಇಳ್ಕೋತ (ಕ್ರಿ) = ಇಳಕೋತ; ಇಳಿಯುತ್ತ; ಕಡಿಮೆಯಾಗುತ್ತ.

ಇಳ್ಕೋತಿಳ್ಕೋತ (ದ್ವಿ) = ಇಳಿಯುತ್ತಿಳಿಯುತ್ತ.

ಇಳ್ಯಾ (ನಾ) = ಇಳೆ; ತಾಂಬೂಲ; ಎಲೆಯಡಕೆ

ಇಳ್ಯಾಎತ್ತು (ಕ್ರಿ) = ಮಾತುಕೊಡು; ಪ್ರಮಾಣಮಾಡು; ಆಣೆ ಮಾಡು.

ಇಳ್ಯಾಕುಡು (ಕ್ರಿ) = ಇಳೆಕುಡು; ಎಲೆಯಡಕೆ ಕೊಟ್ಟು ಆಮಂತ್ರಿಸು.

ಇಳ್ಯಾಭಾಯಿ (ನಾ) = ಹೊಕ್ಕು ತುಂಬುವ ಬಾವಿ.

ಇಳ್ಯಾಮು(ಕ್ರಿ) = ಇಳಿಯೋಣ.

ಈ

ಈ (ಕ್ರಿ) = ಕೊಡು; ಈಯು; ಕರುಹಾಕು.

ಈಗ = ಈ ಕ್ಷಣ; ಈವಾಗ.

ಈಗಿಂದೀಗ = ತಕ್ಷಣ; ಈಗಲೆ

ಈಚು (ಕ್ರಿ) = ಚಂಡನ್ನು ಫಣೆಯಿಂದ ಚಿಮ್ಮು; ಚಿಣೆಯನ್ನು ಫಣೆಯಿಂದ ಚಿಮ್ಮು; ಚೀಕು.

ಈಜಿ (ನಾ) ಇಂ. = ಸರಳ, (ಕ್ರಿ): ಈಜಾಡಿ.

ಈಟೀಟು (ನಾ) = ಇಷ್ಟಿಷ್ಟು; ಎಳ್ಳಷ್ಟು.

ಈಟು (ನಾ) = ಇಷ್ಟು.

ಈಟು ಓಟು = ಇಷ್ಟು ಅಷ್ಟು.

ಈಟೆ (ಅ) = ಇಷ್ಟೆ; ಇದಿಷ್ಟೆ.

ಈಡಿಗ್ಯಾ (ನಾ) = ಈಡಿಗ; ಈಳಿಗ.

ಈಡು (ನಾ) = ಬೇಲಿಯ ಬಾಗಿಲು; ಪ್ರವೇಶದ್ವಾರ; ತಾಳಿಕೆ; ಆಧಾರ.

ಈತ (ಸ.ನಾ) = ಇವನು.

ಈತರ (ಅ) = ಹೀಗೆ (ನಾ); ಇತ್ತರ; ಅತ್ತರ; ಗಂಧೆಣ್ಣೆ

ಈತರದಾನಿ (ನಾ) ಉ. = ಗಂಧೆಣ್ಣೆಯ ಪೆಟ್ಟಿಗೆ

ಈತು (ಕ್ರಿ) = ಈಯಿತು, ಕರುಹಾಕಿತು.

ಈದಗಾಹ (ನಾ) ಉ. = ರಮಜಾನ ಮಾಸದ ಕೊನೆ ದಿನ ನಮಾಜು ಓದುವ ಬಯಲು.

ಈಬತ್ತಿ (ನಾ) = ಆಕಳ ಸೆಗಣಿಸುಟ್ಟು ಮಾಡಿದ ಭಸ್ಮ, ಬೂದಿ, ವಿಭೂತಿ ಉಂಡಿ.

ಈಬತ್ತಿ ಉಂಡಿ = ವಿಭೂತಿಗಟ್ಟಿ; ಕೋಳಿಯ ತತ್ತಿ.

ಈಬಾರಿ (ಅ) = ಈಸಲ; ಈಸಾರೆ.

ಈಬ್ತಿ (ನಾ) = ವಿಭೂತಿ; ಭಸ್ಮದ ಗಟ್ಟಿ.

ಈಯಿಸು (ಕ್ರಿ) = ಕರುಹಾಕಲು ಸಹಾಯ ಮಾಡು.

ಈಯು (ಕ್ರಿ) = ಕರುಹಾಕು.

ಈರ (ನಾ) = ವೀರ.

ಈರಭದ್ರ = ವೀರಭದ್ರ.

ಈರಯ್ಯ (ನಾ) = ವೀರಯ್ಯ, ಚಾಂಗಲೇರಿ ಹಾಗೂ ಹಮನಾಬಾದಿನಲ್ಲಿಯ ಪುರಾಣ ಪುರುಷ ವೀರಭದ್ರ ದೇವರು.

ಈರಸೈವ (ನಾ) = ವೀರಶೈವ ಧರ್ಮ, ಶೈವಮತದ ಒಂದು ಪ್ರಭೇದ.

ಈರೇಳು = ಹದಿನಾಲ್ಕು (ಹಾಡು : ಈರೇಳು ಲೋಕನಾಳುವರೊ ತಮ್ಮ ಲೋಕನಾಳುವರೊ ತಮ್ಮ.)

ಈರೇಳುಲೋಕ = ಹದಿನಾಲ್ಕು ಲೋಕ.

ಈವಾಗ = ಈಗ

ಈಸು (ಕ್ರಿ) = ಈಜಾಡು.

ಈಸು = ಇವಿಷ್ಟು.

ಈಸುಗಾಯಿ (ನಾ) = ಈಜುಬುರುಡೆ; ಈಜಲು ಬಳಸುವ ಕುಂಬಳಕಾಯಿ.

ಈಸುಲು (ನಾ) = ಈಜು; ಈಜಾಟ; ನೀರಿನ ಮೇಲೆ ತೇಲಾಟ, ಮನೆಯಲ್ಲಿ ಪ್ರವೇಶಿಸುವ ಮಳೆಯ ತುಂತುರು.

ಈಸುಲುಕಡಿ (ಕ್ರಿ) = ಈಜಿದಾಟು; ಸಂಸಾರ ಹೊಳೆದಾಟು.

ಈಸೆ = ಇವಿಷ್ಟೆ.

ಈಸ್ಲು (ನಾ) = ಈಸುಲು (ನೋಡಿರಿ).

ಈಳ್ಗಿ (ನಾ) = ಈಳಿಗೆ; ತರಕಾರಿ, ಕಾಯಿ ಇತ್ಯಾದಿ ಕೊಯ್ಯಲು ಬಳಸುವ ಮಣೆಯುಳ್ಳಕತ್ತಿ.

ಈಳ್ಗಿಮಣೆ (ನಾ) = ಮಣೆ ಇರುವ ದೊಡ್ಡ ಈಳಿಗೆ.

ಈಳ್ಗೇರು (ನಾ) = ಈಳಿಗರು; ಈಡಿಗರು. ಈಚಲು ಮರದ ಕಳ್ಳು ಇಳಿಸುವವರು ಮಾರುವವರು.

ಈಳ್ಯಾ (ನಾ) = ಈಡಿಗ; ಈಳಿಗ.

ಉ

ಉಂಕಿ (ನಾ) = ನೆಯ್ಗೆಯ ಮಗ್ಗದ ಉದ್ದ ಹಾಸು.

ಉಂಗುಟ (ನಾ) = ಕಾಲಿನ ಹೆಬ್ಬೆರಳು; ಕಾಲಿನ ಹೆಬ್ಬೆರಳು ಸೇರಲು ಚಪ್ಪಲಿಗೆ ಮಾಡಿರುವ ಉಂಗುರ (ನುಡಿಗಟ್ಟು: ಉಂಗುಟದಿಂದ ನಣ್ಣತ್ತಿಥನಕಾ ಉರಿ =ಆಪಾದ ಮಸ್ತಕ ಕೋಪವ್ಯಾಪಿಸು.)

ಉಂಗುರ (ನಾ) = ಬೆರಳಿನ ಆಭರಣ.

ಉಂಗುರುಬಳ್ಳು (ನಾ) = ಅನಾಮಿಕ; ಉಂಗುರ ಇಡುವ ಬೆರಳು.

ಉಂಗುರಿಡು (ಕ್ರಿ) = ಮದುವೆ ನಿಶ್ಚಿತಾರ್ಥದ ಕಾರ್ಯ ಕ್ರಮ ಮಾಡು; (ವಧುವಿನ ಬೆರಳಿಗೆ ವರನು) ಉಂಗುರ ಇಡು.

ಉಂಗುರುಂಗುರ (ದ್ವಿ) = ಉಂಗುರದಂತಿರುವ; ಗೋಲಗೋಲ.

ಉಂಗುರುಗೂದಲು (ನಾ) = ಉಂಗುರದಂತಿರುವ ತಲೇ ಗೂದಲು.

ಉಂಡ ಮನಿ ಜಂತಿ ಎಣ್ಸಾಂವ (ನಾ) = ಉಪಕಾರಗೇಡಿ; ಕೃತಘ್ನ.

ಉಂಡ ಮನಿ ಜಂತಿ ಎಣ್ಸು (ಕ್ರಿ) = ಉಪಕಾರದ ಬದಲು ಅಪಕಾರ ಮಾಡು; ಕೃತಘ್ನನಾಗು(ನು)

ಉಂಡಾಡಿ (ನಾ) = ಉಡಾಳ; ಸೋಮಾರಿ; ಮೈಗಳ್ಳ.

ಉಂಡಾಡು (ಕ್ರಿ) = ಉಂಡು ತಿರುಗಾಡು.

ಉಂಡಾಡುವ = ಅಪ್ರಬುದ್ಧ, ಮೈಗಳ್ಳ.

ಉಂಡಿ (ನಾ) = ಲಾಡು; ಲಡ್ಡು; ಸಿಹಿ ತಿಂಡಿಯ ದುಂಡಾದ ಮುದ್ದೆ.

ಉಂಡಿಕಟ್ಟು (ಕ್ರಿ) = ಸಿಹಿತಿಂಡಿಯ ದುಂಡಾದ ಮುದ್ದೆ ತಯಾರಿಸು.

ಉಂಡಿಖೊಬ್ರಿತಿನು (ಕ್ರಿ) = ಸಿಹಿತಿಂಡಿ ತಿನ್ನುತ್ತ ಮಜಾಮಾಡು.

ಉಂಡಿದ ಅಗಲಾಗ ಉಗುಳು (ನು) = ಉಪಕಾರಗೇಡಿಯಾಗು, ಉಪಕಾರ ಮಾಡಿದವರಿಗೆ ಅಪಕಾರಮಾಡು.

ಉಂಡಿದ್ದೆಲ್ಲಾಹೆಂಡಿ (ಗಾದೆ) = ಸೇವಿಸಿದ್ದೆಲ್ಲವೂ ಮಲ.

ಉಂಡುಪವಾಸಿ (ನಾ) = ಊಟ ಮಾಡಿಯೂ ಮಾಡದಂತಿರುವವನು (ಳು); (ಗಾದೆ : ಉಂಡುಪವಾಸಿ, ಬಳಸಿ ಬ್ರಹ್ಮಚಾರಿ.)

ಉಂಡೋರು (ನಾ) = ಉಂಡವರು.

ಉಂಬಾ (ಅ) = ಉಣ್ಣುವ, ಉಣ್ಣಲು ಯೋಗ್ಯವಾದ; ಉಂಬುವ.

ಉಂಬಾ ಅಗಲು (ನಾ) = ಉಣ್ಣುವತಟ್ಟೆ, ತಾಟು, ಗಂಗಾಳ.

ಉಂಬಾಕೈ = ಉಂಬಾಗೈ; ಉಣ್ಣಲು ಸಹಕರಿಸುವ ಕೈ (ಗಾದೆ : ಉಂಬಾಕೈಲಿ ಕಾಗಿಗಿ ಹೊಡೆಲ್ದಾಂವ); ಬಲಗೈ.

ಉಂಬಾಗ (ಅ) = ಉಣ್ಣುವಾಗ.

ಉಂಬಾಗೈ (ನಾ) = ಉಂಬಾಕೈ (ನೋಡಿರಿ).

ಉಂಬಾಪರಿ (ಅ) = ಉಂಬಾಗ; ಉಣ್ಣುವಾಗ; ಊಟ ಮಾಡುವ ಸಮಯದಲ್ಲಿ.

ಉಕ್ಕ (ನಾ)=ನೀರು;ಜಲ (ಬಾಲಭಾಷೆ).

ಉಕ್ಕಾ (ನಾ) = ಉಕ್ಕ; ನೀರು;ಜಲ (ಬಾಲಭಾಷೆ)

ಉಕ್ಕಿ (ನಾ) = ಕಬ್ಬಿಣದ ನೇಗಿಲು; ಕಬ್ಬಿನ ಗದ್ದೆಯಲ್ಲಿ ಉತ್ತಲು ಬಳಸುವ ನೇಗಿಲು.

ಉಕ್ಕಿಸು (ಕ್ರಿ) = ನೀರಿನೊಡನೆ ಆಹಾರವನ್ನು ಕುದಿಸಿ ಹೊರಚೆಲ್ಲುವಂತೆಮಾಡು. ಹಾಲು, ಬೇಳೆ ಇತ್ಯಾದಿ ಕುದ್ದು ಹೊರಚೆಲ್ಲುವಂತೆ ಮಾಡು.

ಉಕ್ಕು (ಕ್ರಿ) = ಸಳಮಳ ಸೆಳಮಳ ಕುದ್ದು ಹೊರಗೆ ಚೆಲ್ಲು; ಉಪಟಳ ಹೆಚ್ಚಾಗು; ಕುಣಿದಾಡು; ಸಿಡಿದಾಡು; ರೇಗು; ಕಿರಿಕಿರಿ ಕೊಡು; ಸೊಕ್ಕು ಪ್ರದರ್ಶಿಸು.

ಉಕ್ಕು (ನಾ) = ಹದಮಾಡಿದ ಕಬ್ಬಿಣ.

ಉಗಲ್ದಾನಿ (ನಾ) ಉ. = ಉಗುಳುವ ಪಾತ್ರೆ; ಪೀಕದಾನಿ.

ಉಗಾ (ನಾ) = ಉಗಿ; ಹಬೆ; ನೀರಿನ ಆವಿ.

ಉಗಾಡ = ಖಿಲ್ಲಾ; ಮಳೆಬಾರದ ದಿನ; ಒಣಬಾರ ದಿನ.

ಉಗಾಡಕುಡು (ಕ್ರಿ) = ಖಿಲ್ಲಾ ಆಗು; ಮಳೆಬಾರದಿರು, ಬಿಸಿಲು ತೆರೆ.

ಉಗಾದಿ (ನಾ) = ಯುಗಾದಿ; ಚೈತ್ರಶುದ್ಧ ಪ್ರತಿಪದ (ಗಾದೆ : ಉಗಾದಿ ಮರುದಿನ ತಗಾದಿ).

ಉಗಾದಿ ಅಮಾಸಿ (ನಾ) = ಫಾಲ್ಗುಣ ಮಾಸದ ಅಮಾವಾಸ್ಯ; ಚೈತ್ರ ಶುದ್ಧ ಪ್ರತಿಪದಾ ಮುನ್ನ ಬರುವ ಅಮಾವಾಸ್ಯೆ.

ಉಗಿ (ನಾ) = ಹಬೆ; ನೀರಿನ ಆವಿ.

ಉಗುರಾನ ಮಣ್ಣು (ನಾ) = ಉಗುರುಗಳಲ್ಲಿ ಸೇರಿರುವ ಹೊಲಸು (ನುಡಿಗಟ್ಟು : ಉಗುರಾನ್ಮಣ್ಣೇ ಕುಡಲಾರದವ, ಅಂದರೆ ಅತಿ ಜಿಪುಣ).

ಉಗುರು (ನಾ) = ನಖ; ವೀಳ್ಯೆದೆಲೆ ಕತ್ತರಿಸುವ ಕಬ್ಬಿಣದ ಕಿರುಗತ್ತಿ ; ಬೆರಳ ತುದಿಗೆ ಬೆಳೆವ ಅನಗತ್ಯಭಾಗ.

ಉಗುರು ಭೆಚ್ಚಗ = ತುಸುಬಿಸಿಯಾದ; ಸ್ವಲ್ಪ ಕಾಯ್ದಿದ.

ಉಗುರು ಸುತ್ತು (ನಾ) = ಉಗುರಿನ ಸುತ್ತ-ಮುತ್ತ ಆಗುವ ಹುಣ್ಣು; ಸುತ್ತುಣ್ಣು.

ಉಗುಳು (ನಾ) = ಜೊಲ್ಲು; ಲಾಲಾರಸ; ಬಾಯಿಯಲ್ಲಿರುವ ಕಫ; ಬಾಯಿಯಲ್ಲಿ ಉಂಟಾಗುವ ತ್ಯಾಜ್ಯ.

ಉಗುಳು (ಕ್ರಿ) = ಬಾಯಿಯಲ್ಲಿನ ತ್ಯಾಜ್ಯವನ್ನು ಹೊರಚಿಮ್ಮು (ಗಾದೆ : ಉಗುಳ್ಯಾರಂದ್ರ ಉಳ್ಳಾಕ್ಹೇಳ್ಯಾರಂತಂತ!) ಅವಮಾನಿಸು; ಛೀಥೂ ಹಾಕು.

ಉಗುಳು ಧಾಟು (ಕ್ರಿ)= ಅಪ್ಪಣೆ ಮೀರು; ಮಾತು ಮೀರು.

ಉಗುಳ್ನುಂಗು (ಕ್ರಿ) = ಅನುಮಾನಿಸು; ಹಿಂದೆ ಮುಂದೆ ನೋಡು; ಉಪವಾಸಿರು (ಗಾದೆ : ಉಗುಳ್ನುಂಗುದ್ರ ಹೊಟ್ಟೆ ಥುಂಬಾಲ).

ಉಗ್ಗ (ನಾ) = ಪಾತ್ರೆಗಳನ್ನು ಸುಲಭವಾಗಿ ಹಿಡಿದುಕೊಂಡು ಹೋಗಲು ಅವುಗಳ ಕುತ್ತಿಗೆಗೆ ಕಟ್ಟಿದ ಹಗ್ಗ.

ಉಗ್ಗಾ (ನಾ) = ಉಗ್ಗ (ನೋಡಿರಿ)

ಉಗ್ಗುರ = ಉಗ್ರ, ಮೈಯಲ್ಲಿಯ ರೋಮಾಂಚನ.

ಉಗ್ಗುರ ತಾಳು (ಕ್ರಿ) = ಕ್ರೂರಿಯಾಗು, ನಿರ್ದಯಿಯಾಕು; ಅತಿಕೋಪಹೊಂದು; ಉಗ್ರನಾಗು.

ಉಚಲ (ನಾ) = ಅಡ್ವಾನ್ಸ್, ಮುಂಗಡ.

ಉಚುಗೊ (ಕ್ರಿ) = ಸಡಿಲು ವಿಸರ್ಜನೆ ಯಾಗು; (ಉದಾ: ಘಾಳಿಬ್ಯಾನಿ ಸುರು ಆದ್ರ ಉಟ್ಟರ್ಬಿದಾಗೆ ಉಚ್ಗೊಂಡ).

ಉಚ್ಗೊ = ಉಚುಗೊ; ಸಡಿಲು ವಿಸರ್ಜನೆಯಾಗು.

ಉಚ್ಗೊ (ಕ್ರಿ) = ಉಚ್ಗೊ (ನೋಡಿರಿ)

ಉಚ್ಚಿ (ನಾ) = ಉಚ್ಚೆ ; ಮೂತ್ರ; ಏಕಿ; ಕಾಲ್ಮಡಿ (ಉದಾ: ಉಚ್ಚೆಯಾ ಬಚ್ಚಲನು ನೆಚ್ಚಿಕೊಂಡಿರಬೇಡ...ಸರ್ವಜ್ಞ)

ಉಚ್ಚಿ ಮಾಡು (ಕ್ರಿ) = ಮೂತ್ರವನ್ನು ವಿಸರ್ಜಿಸು. ಏಕಿ ಮಾಡು, ಕಾಲ್ಮಡಿಮಾಡು.

ಉಚ್ಚಿಹೊಡೆ (ಕ್ರಿ) = ಮೆಟ್ಟುಚ್ಚಿ ಹೊಡೆ; ಕಾಲ್ಮರಿಯಿಂದ ಬಾರಿಸು.

ಉಚ್ಚು (ಕ್ರಿ) = ಹೊರಗೆತೆಗೆ; ಸೆಳೆ; ಎಳೆದು ತೆಗೆ.

ಉಚ್ಚೈ (ನಾ) = ಉತ್ಸವ.

ಉಜರ = ಅಡ್ಡಿ; ಆತಂಕ

ಉಜಳಣಿ (ನಾ) = ಝುಡತಿ; ಪುನರಾವರ್ತನೆ; ಮಗ್ಗಿ ಮತ್ತು ಮೂಲಾಕ್ಷರಗಳ ಪುಸ್ತಕ.

ಉಜಳಂಬ (ನಾ) = ಬೀದರ ಜಿಲ್ಲೆಯ ಒಂದು ಊರಿನ ಹೆಸರು.

ಉಜಾಡ (ವಿ.) = ಹಾಳುಬಿದ್ದ.

ಉಜಾಡೂರು (ನಾ) = ಹಾಳೂರು; ಹಾಳು ಬಿದ್ದ ಊರು. (ಗಾದೆ: ಉಜಾಡೂರಾಗುಳ್ದವನೇ ಗೌಡ).

ಉಜ್ವಳ (ವಿ) = ಉಜ್ವಲ, ಬೆಳಗುವ, ಚೆನ್ನಾಗಿ ಬೆಳಗುತ್ತಿರುವ.

ಉಜ್ವಳಾಗಲಿ (ಕ್ರಿ) = ಬೆಳಕಾಗಲಿ; ಉರಿಯುತ್ತಿರಲಿ (ಬೈಗುಳ).

ಉಟ್ಗೊ (ಕ್ರಿ) = ಉಡು; ಉಟ್ಟುಕೊ.

ಉಟ್ಟುತೊಟ್ಟು = ಸಿಂಗಾರಾಗಿ, ಥಾಟಾಗಿ; ಸಿದ್ಧವಾಗಿ.

ಉಠಾಣ (ನಾ) = ಎತ್ತರ.

ಉಠಾಣಾಗು (ಕ್ರಿ) = ಎತ್ತರಾಗು.

ಉಠಾಠೇವಿ (ನಾ) ಮ. = ಹಣ ಪಡೆಯುವಿಕೆ ಮತ್ತು ಕೂಡಿಡುವಿಕೆ.

ಉಠಾಸು (ಕ್ರಿ) = ಎತ್ತರಿಸು; ಎತ್ತಿಕೊ; ಹಣಪಡೆ.

ಉಡಾಣ (ನಾ) = ಆಕಾಶದಲ್ಲಿ ಹಾರುವಿಕೆ.

ಉಡಾನ (ನಾ) ಹಿಂ. = ಉಡಾಣ; ಆಕಾಶದಲ್ಲಿ ಹಾರುವಿಕೆ.

ಉಡಾವಗಿರಿ (ನಾ) = ಪೋಲಿತನ, ಉಡಾಳತನ.

ಉಡಾಸು (ಕ್ರಿ) = ಹಾರಿಸು, ವ್ಯಯಮಾಡು.

ಉಡಾಳ (ನಾ) = ಖರ್ಚುಖೋರ; ಗೂಂಡಾ; ತುಂಟ; ಪೋಲಿ; ಆವಾರಾ; ಕೆಲಸಕ್ಕೆ ಬಾರದವನು (ಬೈಗುಳ)

ಉಡಾಳ ಮಂದಿ (ನಾ) = ಖರ್ಚುಖೋರರು, ತುಂಟರು; ಪೋಲಿಗಳು; ಕೆಲಸಕ್ಕೆ ಬಾರದವರು; ಮೈಗಳ್ಳರು. (ತತ್ವಪದ: ಉಡಾಳಮಂದಿಗಿ ಊರ ಒಳಗೆ ಹಿಡೆಲ್ದೋದ್ರೊ। ಪುಢಾರಿ ಪುಢಾರಿ ಮಂದಿಗ್ಯಾರೂ ಕೇಳಲ್ದೋದ್ರೋ-ಕಡಕೋಳ ಮಡಿವಾಳಪ್ಪ)

ಉಡಿ (ನಾ) = ಸೆರಗಿನ ಪದರು; ಮಡಿಲು

ಉಡಿಕಿ (ನಾ) = ಉಡಿಕೆ; ಕೂಡಿಕೆ; ವಿಧವೆಯ ಮರುಮದುವೆ (ಗಾದೆ: ಉಡಿಕಿ ಗಂಡನ ಉಪದ್ರಭಾಳ).

ಉಡಿಹೊಡಿ (ಕ್ರಿ) = ಬಾವಿಯಲ್ಲಿ ತಲೆಕೆಳಗುಮಾಡಿ ಸುರಂಗು ಹೊಡೆ; ನೀರಿನಲ್ಲಿ ತಲೆ ಕೆಳಗುಮಾಡಿ ಜಿಗಿ.

ಉಡು (ನಾ) = ಕಾಲುಗಳಲ್ಲಿ ಭದ್ರಹಿಡಿತ ಉಳ್ಳ ಕಾಡು ಪ್ರಾಣಿ; ಘೋರ್ಪಡ; ಪ್ರಾಚೀನ ಕಾಲದಲ್ಲಿ ಕೋಟೆ ಹತ್ತಲು ಸಹಾಯಕ ವಾಗುತ್ತಿದ್ದ ಪ್ರಾಣಿ.

ಉಡು (ಕ್ರಿ) = ಉಟ್ಟು ಕೊ; ಸೊಂಟಕ್ಕೆ ಸುತ್ತಿಕೊ.

ಉಡುಗು (ಕ್ರಿ) = ಕಸಗೂಡಿಸು, ಮನೆ ಸ್ವಚ್ಚ ಮಾಡು,

ಉಡುಧಾರ (ನಾ) = ನಡಕ್ಕೆ ಕಟ್ಟುವ ದಾರ

ಉಡುಬಾಳ (ನಾ) = ಸುಕ್ಷೇತ್ರ ಎಲ್ಲಮ್ಮನ ದೇವಾಲಯವಿರುವ ಊರು.

ಉಡುವಣಿ (ನಾ) = ಬೆಳ್ಳಿಯ ಉಡುದಾರ.

ಉಡುಸು (ನಾ) = ತೊಡೆಸಂದಿನ ಗಡ್ಡಬೇನೆ.

ಉಡೆಕ್ಕಿ (ನಾ) = ಮದುಮಗಳಿಗೆ ಮತ್ತು ಶೋಭನ ಮಾಡಿಕೊಳ್ಳುವವಳಿಗೆ ಉಡಿಯಲ್ಲಿ ತುಂಬುವ ಅಕ್ಕಿ.

ಉಡೆಕ್ಕಿ ಹಾಕು (ಕ್ರಿ) = ಮದುಮಗಳ ಉಡಿಯಲ್ಲಿ ಅಕ್ಕಿಯನ್ನು ಸುರುವು, ತುಂಬು.

ಉಡ್ಕಿ (ನಾ) = ಕೂಡಿಕೆ ; ಉಡುಕಿ; ವಿಧವೆ-ವಿಧುರರ ಮರುಮದುವೆ; ಸೇರುವೆ, ಸಂಗಮ; ಕೂಡಾವಳಿ.

ಉಡ್ಡಾರಾ (ನಾ) = ಉಡುಧಾರ (ನೋಡಿರಿ).

ಉಡ್ಡಾರಾ ಹರಿಲಿ (ನು) = ಸತ್ತುಹೋಗಲಿ; ಉಸುರಿಲ್ಲದಾಗಲಿ (ಬೈಗುಳ).

ಉಡುಬಾಳೆಲ್ಲಮ್ಮ(ನಾ) = ಉಡುಬಾಳ ಗ್ರಾಮದ ದೇವತೆ.

ಉಣಚಿ (ನಾ) = ತೆನೆಗಳ ಬುಡ; ತೆನೆಯದೇಟು.

ಉಣಿಸು (ಕ್ರಿ) = ತುತ್ತುಮಾಡಿ ತಿನಿಸು.

ಉಣು (ಕ್ರಿ) = ಭೋಗಿಸು; ಅನುಭವಿಸು; ಮಾಡಿದ್ದುಣ್ಣು; ಊಟಮಾಡು.

ಉಣುಲಾಕ್ತಿನ್ಲಾಕ = ಉಣ್ಣಲು ತಿನ್ನಲು.

ಉಣ್ಣಿ (ನಾ) = ಉಣ್ಣೆ ; ಕುರಿಯ ಕೂದಲು (ಜಾನಪದ ಪ್ರಾಸ : ಉಡ್ಯಾಗ ಉಣ್ಣಿ; ಬಾಯ್ದಾಗ ಕುರ್ಣಿ).

ಉತರಾಣಿ (ನಾ) = ಒಂದು ಪ್ರಕಾರದ ಕಾಡು ಸಸ್ಯ; ಗಣಪತಿಪೂಜೆಗೆ ಬಳಸಲಾಗುವ ಸಸ್ಯ; ಶಿವರಾತ್ರಿಯ ದಿನ ಶಿವಪೂಜೆಗೆ ಬಳಸಲಾಗುವ ಉತ್ರಾಣಿ ಕಡ್ಡಿ.

ಉತಾಡಿ = ಅಕ್ರಮ ಕಾಳು ಚೆಲ್ಲಿ ಬೆಳೆಸಿದ ಬೆಳೆ.

ಉತಾಡಿಹಾಕು (ಕ್ರಿ) = ಅಕ್ರಮವಾಗಿ ಬೀಜ ಚೆಲ್ಲಿ , ಅವರೆ, ಹೆಸರು ಇತ್ಯಾದಿ ಬೆಳೆಸು.

ಉತಾರು (ನಾ) = ಇಳಿಜಾರಿಕೆ; ಇಳುಕಲು; ನಕಲು; ಹಿಂದಿನ ಪುಟದ ಒಟ್ಟು ಅಂಕಿಸಂಖ್ಯೆಯನ್ನು ಮುಂದಿನ ಪುಟಕ್ಕೆ ತರುವುದು.

ಉತಾವಳಿ (ವಿ) = ಚೂಟಿ; ಚುರುಕು; ದುಡುಕು.

ಉತ್ತಪ್ಪ (ನಾ) = ಒಂದು ಬಗೆಯ ದಪ್ಪ ದೋಸೆ.

ಉತ್ಮ (ವಿ) = ಉತ್ತಮ; ಶ್ರೇಷ್ಠ, ದೊಡ್ಡ (ಗಾದೆ: ತಾಮಾಡಾದುತ್ಮಾ, ಮಗಾ ಮಾಡಿದ್ಮಧ್ಯಮಾ, ಆಳ್ಮಾಡಾದ್ಹಾಳು).

ಉತ್ತರಿ (ನಾ) = ಉತ್ರಿ; ಉತ್ತರಾ ನಕ್ಷತ್ರದ ಮಳೆ (ಹಾಡು : ಉತ್ತರಿಯ ಮಳೆ ಬಂದು। ಸುತ್ತಿ ಸುತ್ತಿ ಬಡಿವಾಗ । ಜತ್ತಿಗ್ಯಾಗಿನ ನೀರು ಬುತ್ಯಾಗಾವಣ್ಣಾ । ಲಿಂಗವಂತರು ಕೇಳಿರಣ್ಣಾ).

ಉತ್ಪನ್ನ (ನಾ) = ಬೆಳೆ; ಗಳಿಕೆ; ಆದಾಯ; ಸಂಪಾದನೆ.

ಉತ್ರಾಣಿ (ನಾ) = ಉತರಾಣಿ (ನೋಡಿರಿ).

ಉತ್ರಿ (ನಾ) = ಉತ್ತರಾ ಮಳೆ ನಕ್ಷತ್ರ.

ಉದಗಿ (ನಾ) = ಎತ್ತಿನ ಬಂಡಿಯ ಸಮತೂಕ; ಜೋಡುಕಾಲು.

ಉದಗಿ ಹಾರು (ಕ್ರಿ) = ಬಂಡಿಯ ಮುಂಭಾಗ ಮೇಲಕ್ಕೇಳು. ಬಂಡಿಯ ತೂಕ ತಪ್ಪು; ಎರಡು ಕಾಲು ಮೇಲೇಳು.

ಉದಗಿಹಾರ್ಸು (ಕ್ರಿ) = ಬಂಡಿಯ ಮುಂಭಾಗವನ್ನು ಮೇಲಕ್ಕೆತ್ತಿ ಮಾಲು ಖಾಲಿಮಾಡು; ಜೋಡುಕಾಲು ಮೇಲೆತ್ತು; ಸಂಭೋಗಿಸು.

ಉದಗೀರ (ನಾ) = ಮೊದಲು ಬೀದರ ಜಿಲ್ಲೆಯಲ್ಲಿದ್ದು ಈಗ ಮಹಾರಾಷ್ಟ್ರದ ಲಾತೂರು ಜಿಲ್ಲೆ ಸೇರಿರುವ ತಾಲೂಕು ಸ್ಥಳ; ಸ್ವಾತಂತ್ರ್ಯ ಹೋರಾಟಗಾರರು ಬಾಳಿ ಹೋರಾಡಿದ ಊರು. ಕನ್ನಡಕ್ಕೆ ಹೋರಾಡಿದ ಸಂಗ್ರಾಮಪ್ಪ ಶಟಗಾರ, ಪ್ರಭುರಾವಕಂಬ್ಳಿ ವಾಲೆಯವರ ಹುಟ್ಟೂರು.

ಉದಾಕ = ಉದ್ದಾಗಿ, ಎತ್ತರಾಗಿ.

ಉದಾಸ = ಚಿಂತಾಕುಲ.

ಉದಾಸಾಗು (ಕ್ರಿ) = ಚಿಂತಿತನಾಗು.

ಉದುರುದುರ (ದ್ವಿ) = ಬಿಡಿಬಿಡಿ; ಒಂದಕ್ಕೊಂದು ತಗಲಲಾರದ;

ಉದೆವಾಲ (ನಾ) = ಉದಯದಿಕ್ಕು; ಪೂರ್ವ.

ಉದ್ಗೀರ (ನಾ) = ಉದಯಗಿರಿ; ಮಹಾರಾಷ್ಟ್ರದಲ್ಲಿಯ ಒಂದು ಕನ್ನಡದ ಊರು. (ಉದಗೀರ-ನೋಡಿರಿ)

ಉದ್ಘಾಟನ (ನಾ) = ತೆರೆಯುವಿಕೆ; ಪ್ರಾರಂಭೋತ್ಸವ.

ಉದ್ಘಾಟಿಸು (ಕ್ರಿ) = ತೆರೆ; ಪ್ರಾರಂಭಿಸು.

ಉದ್ದರಿ (ನಾ) = ಸಾಲರೂಪದಲ್ಲಿ ಖರೀದಿ ವಿಕ್ರಿ; ಕಡ ಖರೀದಿ (ಸರ್ವಜ್ಞನ ವಚನ : ಉದ್ದರಿಯ ಕೊಟ್ಟಣ್ಣ । ಹದ್ದಾದ ಕಾಗ್ಯಾದ । ಎದ್ದೆದ್ದು ಬೊಗಳುವ ನಾಯಾದ/ಮೈಲಾರ । ಗೊಗ್ಗಯ್ಯನಾದ ಸರ್ವಜ್ಞ).

ಉದ್ದಾನಾಕಿ (ನಾ) = ಉದ್ದಾಗಿದ್ದವಳು; ಎತ್ತರಬಾಗಿದ್ದವಳು (ಒಗಟು: ಉದ್ದಾನಾಕಿಂದು ಉಚ್ಚೆ ಸೈ-ಕಬ್ಬಿನ ರಸ).

ಉದ್ದಾನಿ (ನಾ) = ಊದ್ದಾನ; ಧೂಪಾರತಿ

ಉದ್ದಿಮ (ನಾ) = ಉದ್ಯಮ, ಉದ್ಯೋಗ.

ಉದ್ದಿಮ್ದಾರ (ನಾ) = ಉದ್ಯೋಗಸ್ಥ.

ಉದ್ದು (ನಾ) = ಒಂದು ಬಗೆಯ ದ್ವಿದಳ ಧಾನ್ಯ; ಉದ್ದ, ಉದ್ದಳತೆ (ಗಾದೆ: ಉದ್ದ ಹರಗಿ ಅಡ್ಡ ಬಿತ್ತಾಂವ).

ಉದ್ದು (ಕ್ರಿ) = ಉಜ್ಜು; ಭಾಂಡೆ ತಿಕ್ಕು; ಮಿರುಗುವಂತೆ ಮಾಡು.

ಉದ್ದುಕ (ಅ) = ಉದ್ದಾಗಿ; ಉದ್ದಕ್ಕೆ.

ಉದ್ದೇಶ (ನಾ) = ಧ್ಯೇಯ, ಗುರಿ.

ಉದ್ಯಾ (ನಾ) = ಪೂರ್ವ, ಉದಯ, ಬೆಳಗಾಗಿ.

ಉದ್ಯಾಕ (ಅ) = ಪೂರ್ವದಿಕ್ಕಿಗೆ; ಸೂರ್ಯ ಉದಿಸುವ ದಿಕ್ಕಿಗೆ.

ಉದ್ಯಾಪನ (ನಾ) = ಪೂಜೆಯ ವ್ರತ ಮುಗಿಸುವಿಕೆ.

ಉದ್ಯಾವಾಲ (ನಾ) = ಪೂರ್ವ; ಪೂರ್ವಕ್ಕೆ; ಪೂರ್ವ ದಿಕ್ಕಿಗೆ.

ಉದ್ರಿ (ನಾ) = ಉದ್ದರಿ, ಕಡ, ಸಾಲ.

ಉಧಾರ (ನಾ) = ಉದ್ದರಿ; ಉದ್ರಿ; ಕಡ.

ಉಧೇಉಧೇ = ಭವಾನಿಯ ಜಯಘೋಷ.

ಉಧೋ ಉಧೋ = ಭವಾನಿಯ ಜಯಘೋಷ.

ಉನಾಕು (ನಾ) = ಕಡಿಮೆ ಬೆಲೆಯ; ಕಳಪೆ ಮಟ್ಟದ.

ಉನ್ನಿ (ನಾ) = ಉಣ್ಣೆ; ಎಮ್ಮೆ, ಆಕಳು, ಎತ್ತುಗಳ ಮೈಯ ರಕ್ತಹೀರುವ ಕ್ರಿಮಿ.

ಉಪಗಾರ (ನಾ) = ಉಪಕಾರ; ಸಹಾಯ; ನೆರವು.

ಉಪಾದ್ಯಾ (ನಾ) = ಉಪಾಧ್ಯಾಯ; ಶಿಕ್ಷಕ.

ಉಪಾರ (ನಾ) = ಗೋಡೆ ಕೆಲಸದವನು; ಉಪ್ಪಣೆಗ್ಯಾ; ಉಪ್ಪಣೆಗ.

ಉಪಾಸ (ನಾ) = ಉಪವಾಸ; ಆಹಾರ ಬಿಟ್ಟಿರುವಿಕೆ. (ಗಾದೆ : ಉಪಾಸಿರಬೇಕು; ಉಪದ್ರಿರಬಾರ್ದು).

ಉಪುಗಾರ (ನಾ) = ಉಪಗಾರ; ಉಪಕಾರ; ಸಹಾಯ; ಸಹಕಾರ, ನೆರವು.

ಉಪ್ಕಾರ (ನಾ) = ಉಪಕಾರ.

ಉಪ್ಪದ್ರ (ನಾ) = ಉಪದ್ರವ; ಕಾಟ, ಕಿಟಿಕಿಟಿ. (ಗಾದೆ : ಉಡ್ಕಿಗಂಡನ ಉಪ್ಪದ್ರಭಾಳ).

ಉಪ್ಪಾ (ನಾ) = ಮುದ್ದು; ಚುಂಬನ (ಬಾಲ ಭಾಷೆ).

ಉಪ್ಪಾಕುಡು (ಕ್ರಿ) = ಮುದ್ದುಕೊಡು; ಚುಂಬಿಸು. (ಬಾಲಭಾಷೆ).

ಉಪ್ಪಾರ (ನಾ) = ಉಪ್ಪಣಿಗ; ಗೋಡೆ ಕಟ್ಟುವವ.

ಉಪ್ಪಿಕ್ಕು (ಕ್ರಿ) = ಅನ್ನಹಾಕು (ಗಾದೆ: ಉಪ್ಪಿಕ್ಕಿದವರನ್ನು ಮುಪ್ಪಿನತನಕ ನೆನೆ).

ಉಪ್ಪಿನಕಾಯಿ (ನಾ) = ಮಾವು, ನಿಂಬೆ, ಅಂಬೋಡಿ, ಬೋರೆಕಾಯಿ ಇತ್ಯಾದಿಗಳಿಂದ ತಯಾರಿಸಿದ ವ್ಯಂಜನ. (ಗಾದೆ : ಊಟಕ್ಕೆ ಮೊದಲು ಉಪ್ಪಿನಕಾಯಿ).

ಉಪ್ಪಿನೆಸರು (ನಾ) = ಉಪ್ಪಿನಕಾಯಿ, ಒಂದು ಪ್ರಕಾರದ ವ್ಯಂಜನ.

ಉಪ್ಪು (ನಾ) = ಲವಣ (ಹಳ್ಳಿಗಾಡಿನಲ್ಲಿ ರಾತ್ರಿ ಸಮಯದಲ್ಲಿ ಉಪ್ಪಿಗೆ ಸಕ್ಕರೆಯನ್ನುವ ರೂಡಿ ಇತ್ತು; ಇನ್ನೂ ಅಲ್ಲಲ್ಲಿ ಇದೆ.)

ಉಪ್ಪುಖಾರ ಹಚ್ಚು (ಕ್ರಿ) = ವರ್ಣಿಸು; ಅತಿ ರಂಜಿಸಿ ಹೇಳು.

ಉಪ್ಪುಣು (ಕ್ರಿ) = ಅನ್ನಉಣು; ಅನ್ನದ ರುಣದಲ್ಲಿರು.

ಉಪ್ಪುತರಲಾಕಹೋಗು (ನು) = ಸತ್ತು ಕುಣಿ ಸೇರು.

ಉಪ್ಪುಪ್ಪು (ಅ.) = ಉಪ್ಪಿನಂತೆ ಅತಿ ಪ್ರೀತಿಯ

ಉಪ್ಪುಪ್ಪು ಚೆಲುವೆ (ನಾ) = ಅತಿ ಚೆಲುವೆ; ಹಳ್ಳಿಗಾಡಿನ ಅತಿ ಸುಂದರಿ.

ಉಬ್ಬರ (ನಾ) = ಉಬ್ಬಿದ್ದು.

ಉಬ್ಬು (ಕ್ರಿ) = ದಪ್ಪವಾಗು; ಉತ್ಸಾಹಪಡು; ಹಿಗ್ಗು; ಕೊಬ್ಬು.

ಉಬ್ಬುಣ್ಕಿ (ನಾ) = ಧಗೆ; ಸೆಕೆ.

ಉಬ್ಬುಸು (ನಾ) = ಏದುಸಿರು.

ಉಬ್ಬುಸು (ಕ್ರಿ) = ಉಬ್ಬಿಸು; ವರ್ಣಿಸು.

ಉಬ್ಬುಸ್ಬ್ಯಾಡ (ಕ್ರಿ) = ಉಬ್ಬಿಸಬೇಡ; ವರ್ಣಿಸಬೇಡ; ತಾರೀಫು ಮಾಡಬೇಡ(ನು).

ಉಬ್ಯಾದ (ಕ್ರಿ) = ಉಬ್ಬಿದೆ

ಉಮದಾ (ವಿ.) ಉ. = ಚೆಂದ; ಚೆನ್ನು

ಉಮರ (ನಾ) = ವಯಸ್ಸು; ಉಮ್ಮರು.

ಉಮಾಟ (ನಾ) = ಎತ್ತರ; ಒಡ್ಡು.

ಉಮಾಟಾಗು (ಕ್ರಿ) = ಎತ್ತರಗೊಳ್ಳು.

ಉಮೇದು (ನಾ) = ನಂಬಿಗೆ; ಭರವಸೆ; ಗರ್ಭಿಣಿ.

ಉಮ್ಗಾಯಿ (ಕ್ರಿ) = ಕೊನೆ ಕುದಿಮುಗಿಸು; ಅನ್ನದಪಾತ್ರೆಯ ಮೇಲೆ ಬೆಂಕಿಹೇರಿ ಇಡು.

ಉಮ್ದಾ = ಉತ್ತಮ.

ಉಮ್ಮರು (ನಾ) = ವಯಸ್ಸು.

ಉಮ್ಮಾ (ನಾ) = ಚುಂಬನ; ಮುದ್ದು; ಉಪ್ಪಾ (ಬಾಲಭಾಷೆ).

ಉಮ್ಮಾಕುಡು (ಕ್ರಿ) = ಚುಂಬನ ಕೊಡು (ಬಾಲಭಾಷೆ).

ಉಮ್ಮಿಗೆ (ನಾ) = ಗೋಧಿ ಸೀತನಿ; ಬೇಯಿಸಿದ ಹಸಿರು ಗೋಧಿ.

ಉಮ್ಮೇದು (ನಾ) = ನಂಬಿಗೆ; ಭರವಸೆ, ಗರ್ಭಿಣಿ.

ಉರಿ (ನಾ) = ಜ್ವಾಲೆ; ಬೆಂಕಿಯ ನಾಲಗೆ; ಸಂತಾಪ; ಜ್ವರ.

ಉರಿ (ಕ್ರಿ) = ಸುಡು; ಸುಟ್ಟುಹೋಗು; ತಾಪಪಡು; ಕಿತಾಪತಿ ಮಾಡು; ಹಾರಾಡು; ಕೀಟಲೆ ಕೊಡು.

ಉರಿಥಳಿ (ನಾ) = ಜ್ವರದೊಂದಿಗೆ ಚಳಿ; ಮಲೇರಿಯಾ.

ಉರಿಭೆಂಕಿ (ನಾ) = ಕೆಂಡಮಂಡಲ; ಅತಿಕೋಪ.

ಉರಿಭಂಕಿಯಾಗು (ಕ್ರಿ) = ಅತಿಕೋಪಕಾರು.

ಉರುಣಗಿ (ನಾ) = ಉರುವಣಿಗೆ; ಉರಿಯುವಿಕೆ; ಉಪದ್ರವ; ಕಾಟ; ಕಿರುಕುಳ; ಅಬ್ಬರ.

ಉರುಣಗಿ ಥಣ್ಣಗಾಗ್ಲಿ (ಕ್ರಿ) = ಕಿರಿಕಿರಿ ನಿಂತು ಹೋಗಲಿ; ಶಾಂತವಾಗಲಿ; ಸತ್ತುಹೋಗಲಿ (ಬೈಗುಳ).

ಉರುಗಾಡು (ನಾ) = ಮಳೆ ಇಲ್ಲದೆ ಒಣಗಿನಿಂತ ಬೆಳೆ; ಒಣಗಿದ ಕಾಡು; ಹಸಿರಿಲ್ಲದ ನೆಲ; ಒಣಬಾರ.

ಉರುಗಾಡುಭೀಳು (ಕ್ರಿ) = ಬೆಳೆಬಿತ್ತು ಒಣಗಿ ಹೋಗು.

ಉರುಚ್ಗಿ (ನಾ) = ಉರಿಮೂತ್ರ; ಮೂತ್ರನಾಳದಲ್ಲಿಯ ಉರುಪು ಬೇನೆ.

ಉರುಪಾಟಿ (ನಾ) = ಉಲ್ಟಾ; ಹಿಂಬರಿಕೆ.

ಉರುಪು (ನಾ) = ಉರಿಯುವಿಕೆ; ತಾಪ; ಸಂಕಟ.

ಉರುಳು (ಕ್ರಿ) = ಉರುಳುತ್ತ ಚಲಿಸು; ಹೊರಳಾಡು.

ಉರುಳು (ನಾ) = ಫಾಸಿ; ಶೂಲಿ; ಕುಣಿಕೆಯ ಹಗ್ಗವನ್ನು ಕುತ್ತಿಗೆಗೆ ಹಾಕಿಕೊಳ್ಳುವಿಕೆ.

ಉರ್ಜಾಲ (ನಾ) = ಉರ್ಜಾಳ (ನೋಡಿರಿ)

ಉರ್ಜಾಳ (ನಾ) = ಉರ್ಜಾಲ; ಉರಿಜ್ವಾಲೆ, ಉರಿಬೆಂಕಿ; ಉರುಪು; ಭಗಭಗ ಉರಿಯುವಿಕೆ

ಉರ್ಜಾಳ ಭೀಳು (ಕ್ರಿ) = ಸಂತಾಪ ಉಂಟಾಗು; ಉರಿಜ್ವಾಲೆಯಾಗು; ಉರಿಬೆಂಕಿಯಾಗು.

ಉರ್ಳು (ನಾ) = ಉರುಳು (ನೋಡಿರಿ)

ಉಲುಲಿ (ನಾ) = ಹುರುಳಿಕಾಳು; ಒಂದು ಬಗೆಯ ದ್ವಿದಳ ಧಾನ್ಯ.

ಉಲ್ಟಾ (ನಾ) = ವಿರುದ್ಧವಾದ ದಿಕ್ಕು; ಹಿಂಬರಿಕೆ; ಉಪರಾಟೆ; ಉರುಪಾಟೆ.

ಉಲ್ಟಾಪಲ್ಟಾ (ನಾ) = ಅಸ್ತವ್ಯಸ್ತ; ತಲೆಕೆಳಗು; ಕೆಳಗೆ ಮೇಲೆ ಮಾಡುವುದು; ತಿರ್ಗಾಮುರ್ಗಾ

ಉಲ್ಟಾಮಾಡು (ಕ್ರಿ) = ಹಿಂಬರಿಕೆ ಮಾಡು, ಅಂಗಿಯ ಒಳಮಗ್ಗುಲನ್ನು ಹೊರಗೆ ತಾ.

ಉಲ್ಟಾಸು (ಕ್ರಿ) = ಬರುಕು; ಸುರುವು; ಖಾಲಿ ಮಾಡು; ಬೋರಳ ಹಾಕು.

ಉಲ್ಲಾಸ (ನಾ) = ಸಂತೋಷ; ಉತ್ಸಾಹ.

ಉಲ್ಪಿ (ನಾ) = ವಾಂತಿ; ವಾಕರಿಕೆ; ಕಾರಿಕೆ.

ಉಲ್ಲು (ನಾ) = ಗೂಗೆ; ಹುಚ್ಚ; ಮರುಳ; ದಡ್ಡ, ಮೂರ್ಖ; ಗೂಬೆ.

ಉಸಳಿ (ನಾ) = ಹೆಸರು, ಕಡಲೆ, ಅಲಸಂದಿ, ಅವರೆ ಮೊದಲಾದ ಬೇಳೆಕಾಳುಗಳನ್ನು ಮೊಳಕೆಯೊಡೆಯಿಸಿ ಫೊಣ್ಣೆ ಹಾಕಿ ಮಾಡಿದ ತಿಂಡಿ; ಮೊಳಕೆಕಾಳಿನ ತಿಂಡಿ; ಗುಗ್ಗರಿ.

ಉಸಾಬರಿ (ನಾ) = ಗೋಜು; ಗೊಡವೆ.

ಉಸುಕು (ನಾ) = ಮರಳು; ರೇತಿ.

ಉಸುಬು (ನಾ) = ಮರಳು; ರೇತಿ. ಉಸುಕು. (ಗಾದೆ : ಉಸುಬಿನಾಗ ಉಚ್ಚಿ ಹೊಯ್ದಾಂಗ).

ಉಸುರಡಗಲಿ (ಕ್ರಿ) = ಸತ್ತುಹೋಗಲಿ (ಬೈಗುಳ)

ಉಸುರಿಡು (ಕಿ) = ಗೋಳಾಡು; ನಿಟ್ಟುಸಿರುಬಿಡು.

ಉಸುರು (ಕ್ರಿ) = ಮಾತಾಡು; ಹೇಳು.

ಉಸುರು (ನಾ) = ಶ್ವಾಸೋಚ್ಛ್ವಾಸ; ಉಸಿರಾಟ; ಶಕ್ತಿ; ತಾಕತ್ತು; ಶಾಪ.

ಉಸುರುಡುಗಲಿ (ನು) = ಶಕ್ತಿಕುಂದಲಿ; ಸತ್ತು ಹೋಗಲಿ (ಬೈಗುಳ).

ಉಸುರುಗಟ್ಟು (ಕ್ರಿ) = ಉಸಿರಾಟನಿಲ್ಲು; ಉಸಿರಿಗೆ ಅಡ್ಡಿಯಾಗು.

ಉಸುರುಡುಗು (ಕ್ರಿ) = ಶಕ್ತಿಕುಂದು; ಬಲಗುಂದು.

ಉಸುರು ಹತ್ತು (ಕ್ರಿ)= ಶಾಪತಗಲು; ಶಾಪತಟ್ಟು.

ಉಸುರು ಹಾಕು (ಕ್ರಿ) = ಶಾಪಕೊಡು.

ಉಸುರೋಳ್ಳಿ (ನಾ) = ಮರದ ಮೇಲೆ ವಾಸಿಸುವ ಊಸರ್ವಳ್ಳಿ; ಬಣ್ಣ ಬದಲಾಯಿಸುವ ಪ್ರಾಣಿ.

ಉಸುರ್ಗೇಡಿ (ಕ್ರಿ) = ತಾಕತ್ತಿಲ್ಲದವನು; ಹೆಣಗೇಡಿ.

ಉಸುರ್ಬಿಡು (ಕ್ರಿ) = ಸಾಯಿ; ಸತ್ತುಹೋಗು; ಕೊನೆಯುಸಿರೆಳೆ.

ಉಸುಲು = ಒಳ ಅಳತೆ; ವಿಸ್ತೀರ್ಣ; ಒಳಉಸಲು.

ಉಸುವಾಸ (ನಾ) = ಉಸಿರಾಟ.

ಉಸೂಲು (ನಾ) = ಕಾನೂನು; ನಿಯಮ.

ಉಸ್ನ (ನಾ) = ಕೈಕಡ.

ಉಸ್ತರಾ (ನಾ) = ಕ್ಷೌರಿಕ ಬಳಸುವ ಕತ್ತಿ.

ಉಸ್ತರಾಮುಸಿ (ಕ್ರಿ) = ಕತ್ತಿ ಮಸೆ, ಹರಿತಗೊಳಿಸು.

ಉಸ್ತಾದ (ನಾ) = ಮಾಸ್ತರ ; ಶಿಕ್ಷಕ; ಗುರು; ಆಚಾರ್ಯ.

ಉಸ್ಸು (ನಾ) = ದೀರ್ಘ ಶ್ವಾಸ.

ಉಳಾಗಡ್ಡಿ (ನಾ) = ಉಳ್ಳಾಗಡ್ಡಿ ; ಉಳ್ಳಿಗಡ್ಡಿ; ಈರುಳ್ಳಿ.

ಉಳಾಗಡ್ಡಿ ಬಣಜಗ್ಯಾ (ನಾ) = ಈರುಳ್ಳಿ ವ್ಯಾಪಾರಿ.

ಉಳಿ (ಕ್ರಿ) = ಬದುಕು; ಜೀವಂದಿಂದಿರು; ಉಳಿದುಕೊ; ಬಚಾವಾಗು; ತಂಗು; ನೆಲಸು.

ಉಳಿ (ನಾ) = ಲೋಹ, ಕಟ್ಟಿಗೆ ಮೊದಲಾದವನ್ನು ಕೊರೆಯಲು ಮತ್ತು ಕತ್ತರಿಸಲು ಬಳಸಲಾಗುವ ಕಬ್ಬಿಣದ ಚಾಣ, ಛಾನಾ.

ಉಳಿಗಾಲ (ನಾ) = ಉಳಿವು; ಬದುಕಿ ಉಳಿಯುವಿಕೆ.

ಉಳಿತಾಯ (ನಾ) = ಲಾಭ, ಮಿಕ್ಕಿದ್ದು.

ಉಳಿಸು (ಕ್ರಿ) = ಬಳಸದಂತೆ ಇಡು; ಖರ್ಚುಮಾಡದಿರು; ಉಣ್ಣದಂತಿಡು; ಕಾಯ್ದಿಡು, ಬದುಕಿಸು.

ಉಳುಕೀದು (ಅ) = ಉಳಿದದ್ದು; ಮಿಕ್ಕಿದ್ದು; ಉಳಿಕೆಯದು.

ಉಳುಗಾಲ (ನಾ) = ಉಳಿಯುವ ಕಾಲ; ಬದಕುವ ಯೋಗ.

ಉಳುಸು (ಕ್ರಿ) = ಉಳಿಸು; ಬದುಕಿಸು; ಉಳಿತಾಯ ಮಾಡು; ಕಾಯ್ದಿಡು.

ಉಳ್ಕೊ (ಕ್ರಿ) = ಉಳಿದುಬಿಡು; ಬದುಕು.

ಉಳ್ಯಾಡು (ಕ್ರಿ) = ಉರುಳ್ಯಾಡು; ಮಲಗು (ಗಾದೆ : ಉಂಡು ಉಳ್ಯಾಡಬೇಕು; ಹೊಡ್ದು ಓಡಬೇಕು).

ಉಳ್ಯಾಲ = ಉಳಿಯುವುದಿಲ್ಲ; ಬದುಕುವುದಿಲ್ಲ.

ಉಳ್ಳವರು (ನಾ) = ಶ್ರೀಮಂತರು; ಧನಿಕರು (ವಚನ : ಉಳ್ಳವರು ಶಿವಾಲಯವ ಮಾಡುವರು-ಬಸವಣ್ಣ). ಇದ್ದವರು; (ಗಾದೆ : ಉಳ್ಳವರು ಅಗ್ಯಾತೆಗ್ಯಾಟ್ಗೆ ಇಲ್ದವ್ರು ಸತ್ತು ಹೋದ್ರಂತ).

ಉಳ್ಳಾ = ಇರುವ; ಕೈಯಲ್ಲಿರುವ (ಗಾದೆ: ಉಳ್ಳಾರೊಕ್ಕಕೊಟ್ಟು ಸಿಳ್ಳೀಗೆ ಹೋದ್ನಂತ).

ಉಳ್ಳಾಕ = ಉಣ್ಣಲಿಕ್ಕೆ.

ಉಳ್ಳಾಕ ಹೇಳು (ಕ್ರಿ) = ಭೋಜನಕ್ಕೆ ಆಮಂತ್ರಣ ನೀಡು (ಗಾದೆ : ಸುಳ್ಳರು ಉಳ್ಳಾಕ ಹೇಳ್ದುರ / ಉಂಡು ಹೋದ ಮ್ಯಾಲೆ ಖಾತ್ರಿ).

ಉಳ್ಳಾಗಡ್ಡಿ (ನಾ) = ಉಳ್ಳಿಗಡ್ಡಿ; ಈರುಳ್ಳಿ (ಗಾದೆ : ಉಳ್ಳಾಗಡ್ಡಿ ಸೊಪ್ಪಿಲಿ ಉಳ್ಳು ಹಾಯ್ಕೊಬೇಕು).

ಉಳ್ಳಾಡು (ಕ್ರಿ) = ಉರುಳಾಡು; ಮಲಗು.

ಉಳ್ಳಿ (ನಾ) = ಹೂರಣ ತುಂಬಿದ ಕಣಕ; ಹಪ್ಪಳದ ಹಿಟ್ಟಿನ ಉಂಡಿ; ಕಣಕದ ಉಂಡಿ.

ಉಳ್ಳಿಗಡ್ಡಿ (ನಾ) = ಈರುಳ್ಳಿ.

ಉಳ್ಳಿಥುಂಬು (ಕ್ರಿ) = ಕಣಕದಲ್ಲಿ ಹೂರಣ ಇಡು.

ಉಳ್ಳಿಸು (ಕ್ರಿ) = ಉರುಳಿಸು; ನೆಲದ ಮೇಲೆ ಹೊರಳಿಸುತ್ತ ಮುಂದಕ್ಕೆ ತಳ್ಳು; ಉದುರಿಸು.

ಉಳ್ಳು (ನಾ) = ಉರುಳು; ಫಾಸಿ (ಗಾದೆ: ಅಪ್ಪ ಹಚ್ಚಿದ್ದಾಲದ್ಮರಾ ಅಂತ ಉಳ್ಳು ಹಾಕೋಲಾಕ್ಬರಾಲ).

ಉಳ್ಳು (ಕ್ರಿ) = ಉರುಳು; ಹೊರಳು; ಉದುರು; ಉಳ್ಳಾಡು.

ಉಳ್ಳುಕ(ಕ್ರಿ) = ಉಣ್ಣಲಿಕ್ಕೆ.

ಉಳ್ಳೋರು (ನಾ) = ಉಳ್ಳವರು ಗಾದೆ : (ಉಳ್ಳೋರು ಅಗ್ಯಾ ತೆಗ್ಯಾಟ್ಗೆ। ಬಡೂರ ಹೆಣಾ ಹೋಯ್ತಂತ।).

ಊ

ಊಂಚ (ನಾ) = ಎತ್ತರವಾದ; ಬೆಲೆಬಾಳುವ; ಉತ್ತಮವಾದ; ಭಾರಿ.

ಊಂಚಿ (ನಾ) = ಎತ್ತರವಾದ; ಬೆಲೆಬಾಳುವ; ಉತ್ತಮವಾದ, ಭಾರಿ.

ಊಂಹೂಂ (ನಿ) = ಒಲ್ಲೆ.

ಊಚ (ನಾ) = ಅತಿಬೆಲೆಬಾಳುವ; ಉತ್ತಮವಾದ; ಉತ್ಕೃಷ್ಟವಾದ.

ಊಚ-ಉನಾಕ (ವಿ.) = ಭಾರೀರಾಸೀ.

ಊಚನೀಚ (ನಾ) = ಮೇಲುಕೀಳು; ಶ್ರೇಷ್ಠ ಕನಿಷ್ಠ.

ಊಚಾ (ವಿ.) = ಊಚ; ಬೆಲೆಬಾಳುವ; ಉತ್ತಮವಾದ.

ಊಚಾಪೂರಾ (ವಿ.) = ಅತಿ ಎತ್ತರ.

ಊಚಿ (ವಿ.) = ಊಚ; ಬೆಲೆಬಾಳುವ; ಉತ್ತಮವಾದ.

ಊಟ (ನಾ) = ಉಣ್ಣುವಿಕೆ; ಭೋಜನ; ಆಹಾರ

ಊಟ ತಿಂಡಿ (ನಾ) = ಉಣ್ಣುವಿಕೆ ತಿನ್ನುವಿಕೆ.

ಊಟಬೈಟ (ನಾ) = ಎದ್ದು ಕುಳಿತು ಮಾಡುವ ಸಾಮು, ಆಸನ, ಕಸರತ್ತು, ಸಾಧನೆ, ಶಿಕ್ಷೆ.

ಊಟಾ (ನಾ) = ಊಟ.

ಊಡು (ಕ್ರಿ) = ತಲೆಗೆ ಎಣ್ಣೆ ಉಣಿಸು; ಹೊಲಕ್ಕೆ ನೀರುಣಿಸು; ನೀರು ಕುಡಿಸು; ಉಣಿಸು.

ಊದಿ (ನಾ) = ಊದಾಬಣ್ಣ

ಊದಿನ ಖಡ್ಡಿ (ನಾ) = ಊದುಬತ್ತಿ; ಗಂಧದ ಕಡ್ಡಿ

ಊದು (ನಾ) = ಧೂಪ; ಲೋಬಾನ (ಗಾದೆ : ಊದು ಹಾಕಲ್ದೆ ಪೀರ್ ಏಳಾಲ)

ಊದು (ಕ್ರಿ) = ಉಬ್ಬು; ನಂದಿಸು; ಆರಿಸು; ಊಬು.

ಊದುಗಾಮಣಿ (ನಾ) = ಊದು ಕಾಮಾಲೆ; ಮೈಯು ಉಬ್ಬಿಹಳದಿ ಬಣ್ಣಕ್ಕೆ ತಿರುಗುವ ರೋಗ.

ಊದಬತ್ತಿ (ನಾ) = ಊದಿನಕಡ್ಡಿ; ಗಂಧದಕಡ್ಡಿ.

ಊದ್ದಾನಿ (ನಾ) = ಧೂಪಾರತಿ.

ಊನಾಗು (ಕ್ರಿ) = ಕುಂದಾಗು; ಕೊರತೆಯಾಗು ವಿಕಲಚೇತನನಾಗು.

ಊನು (ನಾ) = ಕುಂದು; ಕೊರತೆ; ನ್ಯೂನತೆ; ದೋಷ; ಅಂಗಹೀನತೆ; ಅಂಗವಿಕಲತೆ.

ಊಬು (ಕ್ರಿ) = ಬಾಯಿಯಿಂದ ಗಾಳಿಯನ್ನು ಊದು; ಪುಂಗಿಬಾರಿಸು (ಗಾದೆ: ಊಬಾದು ಕೊಟ್ಟು ಭಾರ್ಸಾದು ತೊಗೊಂಡ್ರಂತ)

ಊಬು (ನಾ) = ಹೊಟ್ಟು; ತೂರಿದ ಕಸ; ಸುಂಕ; ಸುಂಕಾಳಿ

ಊರಾಗ (ಅ) = ಊರಿನಲ್ಲಿ (ಗಾದೆ: ಊರಾಗ ಮನಿ ಇಲ್ಲ, ಅಡ್ಯಾಗ ಹೊಲ ಇಲ್ಲ).

ಊರಾನಿ (ನಾ) = ಹಂದಿ; ಆನೆಯಂತೆ ಬಚ್ಚಲನೀರಲ್ಲಿ ಮೀಯುವ ಊರಹಂದಿ.

ಊರು (ನಾ) = ಹಳ್ಳಿ; ಗ್ರಾಮ; ವಸತಿ.

ಊರು (ಕ್ರಿ) = ಬೀಜ ಹಾಕು; ಅಗೆ ಹಚ್ಚು; ಚುಚ್ಚು; ನೆಡು; ನಾಟು; ತಳಊರು; ವಾಸಿಸು.

ಊರುಉಸಂತ್ರ (ನಾ) = ಗೊತ್ತು ಗುರಿ; ವಿಳಾಸ; ಠಾವ್ಕಿ.

ಊರುಡುಗಿ (ನಾ) = ಊರಸೂಳೆ (ಗಾದೆ: ಊರುಡಗಿ ಕೈದಾಗಿ ಬಡಗಿ).

ಊರುಕೇರಿ ಒಂದು ಮಾಡು (ಕ್ರಿ) = ಪ್ರಚಾರ ಮಾಡು; ಬೊಬ್ಬಾಟ ಮಾಡು, ಜಾಹೀರು ಮಾಡು (ಬೈಗುಳ).

ಊರುಸಾಬರಿ (ನಾ) = ಊರಿನ ಮೇಲುಸ್ತುವಾರಿ; ಊರಿನ ಚಿಂತೆ.

ಊರ್ಕುದಿ (ನಾ) = ಊರಿನ ಚಿಂತೆ (ಗಾದೆ: ಊರ್ಕುದಿ ಹಚ್ಗೊಂಡು ಮುಲ್ಲಾ ಬಡವಾದ).

ಊರ್ಕೋಳಿ (ನಾ) = ದೇಶಿಕೋಳಿ (ಗಾದೆ: ಊರ್ಕೋಳಿ ಸಾಂಗ್ಡ/ ನೀರ್ಕೋಳಿಬೀ ಸತ್ತುತಂತ!

ಊರ್ನಾಯಿ (ನಾ) = ಸಾಕಲಾರದ ನಾಯಿ; ಬೀದಿನಾಯಿ.

ಊರ್ಬಸವಿ (ನಾ) = ದೇವರಿಗೆ ಬಿಟ್ಟ ಹೆಣ್ಣು; ಸೂಳೆ; ಜಾರಿಣಿ

ಊರ್ಪಂಚೇತಿ (ನಾ) = ಊರಜಗಳ.

ಊರ್ಭಾಯಿ (ನಾ) = ಊರವರು ಬಳಸುವ ಸಾರ್ವಜನಿಕ ಬಾವಿ.

ಊರ್ಸುದ್ದಿ (ನಾ) = ಊರಿನ ಸಮಾಚಾರ.

ಊರ್ಸೂಳಿ (ನಾ) = ಊರವರಿಟ್ಟ ಸೂಳೆ (ಬೈಗುಳ)

ಊರ್ಹಂದಿ (ನಾ) = ಊರಲ್ಲಿ ವಾಸಿಸುವ ಶೂಕರ; ಊರೊಳಗಿರುವ ಹಂದಿ.

ಊರ್ಹಳ್ಳ (ನಾ) = ಊರ ಸಮೀಪದ ಹಳ್ಳ.

ಊರ್ಹಾದರಗಿತ್ತಿ (ನಾ) = ಊರೆಲ್ಲ ಹಾದರ ಮಾಡಿದವಳು (ಬೈಗುಳ)

ಊರ್ಹಾದಿ (ನಾ) = ಊರಿನ ಹಾದಿ.

ಊಳ್ಗ (ನಾ) = ಊಳಿಗ; ಸೇವಕ.

ಎ

ಎಂಕಮ್ಮ (ನಾ) = ಹುಡಗಿ ಗ್ರಾಮದ ಶರಣೆ ಯಂಕಮ್ಮ ತಾಯಿಯೆಂಬ ಆರಾಧ್ಯದೈವ.

ಎಂಕಿ (ನಾ) = ಯಂಕಿ; ಎಂಗಣ್ಣುಳ್ಳವಳು, ಮೆಳ್ಳೆಗಣ್ಣುಳ್ಳವಳು (ಗಾದೆ :ಎಂಕಿಗಿ ಯಂಕಮ್ಮ ಅಂದ್ರ ಬಾಳ್ಯಾ ಹಸುನ.)

ಎಂಗ್, ಎಂಗು (ನಾ) = ಕೊರತೆ; ಕಡಿಮೆ ಬೀಳುವಿಕೆ.

ಎಂಗ್‌ಭೀಳು (ಕ್ರಿ) = ಕೊರತೆಭೀಳು, ಕಡಿಮೆಭೀಳು.

ಎಂಗಣ್ಣು (ನಾ) = ಮೆಳ್ಳೆಗಣ್ಣು; ಓರೆಗಣ್ಣು; ಯಾಸಿಗಣ್ಣು

ಎಂಜಲನ್ನ (ನಾ) = ಎಂಜಲು ಮಾಡಿಟ್ಟ ಆಹಾರ.

ಎಂಜುಲು (ನಾ) = ಉಂಡಿರಿಸಲಾದ ತಟ್ಟೆಯಲ್ಲಿಯ ಆಹಾರ; ಮೀಸಲು ಮುರಿದ ಆಹಾರ; ಮುಸರೆ; ಎಂಜಲೆಲೆ.

ಎಂಜುಲೂಟ (ನಾ) = ಎಂಜಲು ಆಹಾರ; ಎಂಜಲು ಮಾಡಿದ ಎಡೆ.

ಎಂಜುಲೆಡಿ (ನಾ) = ಮೀಸಲು ಮುರಿದ ಎಡೆ.

ಎಂಜುಲೆತ್ತು (ಕ್ರಿ) = ಉಂಡೆಲೆಯನ್ನು ಎತ್ತಿ ಒಂದೆಡೆ ಸಂಗ್ರಹಿಸಿ ಎಸೆ (ಗಾದೆ : ಎಂಜುಲೆತ್ತೇ ತೊತ್ತಿ ಅಂದ್ರ, ಉಂಡೋರೇಸ್ಮಂದಿ ಅಂತಂತ!)

ಎಂಜುಲೆಲಿ (ನಾ) = ಊಟಕ್ಕೆ ಬಳಸಿದ ಎಲೆ; ಎಂಜಲು ಪತ್ರೋಳಿಗೆ.

ಎಂಜುಲ್ಗೈ (ನಾ) = ಊಟ ಮಾಡಲು ಬಳಸಿದ ಮುಸರೆಗೈ (ಗಾದೆ: ಎಂಜಲ್ಗೈಲಿ ಕಾಗಿಗಿ ಹೊಡೆಲ್ದಾಂವ)

ಎಂಜುಲ್ಗೈಲಿ ಕಾಗಿಗಿ ಹೊಡೆಲ್ದಾಂವ (ನಾ) = ಜಿಪುಣ; ಜೀನ; ಜಿಬ್ಬ; ಜಿಂದ.

ಎಂಟು (ನಾ) = ಎಂಟನೆಯ ಅಂಕಿ; ಅಷ್ಟ; ಏಳರ ನಂತರದ ಅಂಕಿ.

ಎಂಟು ಬಾಣ್ಣಿ (ನಾ) = ನಿಜಾಮಕಾಲದ ಯಂದು ರೂಪಾಯಿಯ ೧/೩ ಭಾಗ, ಅಂದರೆ ೩.೨ ಪೈಸೆ.

ಎಂಟೆತ್ತು (ನಾ) = ನಾಲ್ಕು ಜತೆ ಎತ್ತುಗಳು (ಹಂತಿಹಾಡು : ಎಂಟ್ರೆತ್ತು ತೆಕ್ಕೊಂಡು। ಸಂತಿಗಿ ನಾ ಹೋದ। ಗಂಟು ಬಿದ್ದೀತೋ ಮುದಿಗೂಗಿ / ಹೊಟ್ಟೇಲಿ / ಬಾಲ ಹುಟ್ಯಾನೋ ಬಸವಣ್ಣ।)

ಎಂಟೆಳಿಸರ (ನಾ) = ಎಂಟುದಾರದ ಸರ; ಎಂಟು ಪದರಿನ ಮಣಿಮಾಲೆ (ಹಾಡು: ಎಂಟೆಳಿ ಸರ ನಿನಗ/ಗಂಧದ ಬಟ್ಟಲು ನನಗ).

ಎಂಡಿ (ನಾ) = ಏಡಿ.

ಎಂಥಾ (ನಾ) = ಎಂಥ, ಎಂತಹ (ಗಾದೆ: ಎಂಥಾರೊಟ್ಟಿಗಿ ಹ್ಯಾಂತಾ ಪಲ್ಯಾ).

ಎಂಥಾತ (ಸ.ನಾ.) = ಎಂಥವನು.

ಎಂದ (ಅ) = ಎಂದು; ಯಾವಾಗ; ಯಾವದಿನ.

ಎಂದಿಗಾದುರ್ಬೀ = ಎಂದಿಗಾದರೂ; ಯಾವಾಗಾದರೂ; ಎಂದಾದರೂ.

ಎಂದುಬೀ (ಅ) = ಎಂದೆಂದೂ, ಎಂದು ಕೂಡ.

ಎಂದೆಂದೂ (ಅ) = ಯಾವಕಾಲದಲ್ಲೂ; ಎಂದುಕೂಡ.

ಎಂದೋ (ಅ) = ಯಾವಾಗೋ; ಯಾವದಿನವೋ.

ಎಂಬತ್ನಾಲ್ಕು ಲಕ್ಷ = ಜಗತ್ತಿನಜೀವ ಗುಂಪುಗಳ ಒಟ್ಟು ಸಂಖ್ಯೆ. ಭಜನೆ ಎಂಬತ್ತು ನಾಲ್ಕು ಲಕ್ಷ ಜಿವರಾಶಿ । ಶಂಭೋ । ಕಾಣುತಾನ ಕಡಿ ನಡಸಿ॥)

ಎಂಬತ್ವಾಟಾ (ನಾ) = ಎಂಬತ್ತು ತೋಟ.

ಎಂಬಲಿ (ನಾ) = ಅಂಬಲಿ.

ಎಂಬಲ್ಗುಂಡ (ನಾ) = ಚಂಡಕಾಪುರ ಎಂಬ ಊರ ಹತ್ತಿರವಿರುವ ಅಮೃತಕುಂಡ ಎಂಬ ಊರಿಗಿದ್ದ ಮೊದಲಿನ ಹೆಸರು (ಪ್ರಾಸ: ಎಂಬಲಿಗುಂಡುದಾಗ । ಥೆಂಬಿಗಿ ಬಿದ್ದದ। ಹಿಂದಿನ ಪೋರಿ ಝುಳ್ಕೋ ಝುಳ್ಕೋ।)

ಎಕರೆ (ನಾ) = ನಲವತ್ತುಗುಂಟೆ ಅಳತೆಯ ಭೂಮಿ; ಭೂಮಿಯ ಒಂದು ಅಳತೆಮಾನ.

ಎಕಾಡಿ (ಅ) = ಯಾವ ಕಡೆಗೆ; ಎತ್ತ.

ಎಕ್ಕಂಬ (ನಾ) = ಬೀದರ ಜಿಲ್ಲೆಯ ಒಂದು ಊರಿನ ಹೆಸರು.

ಎಕ್ಕಡ (ನಾ) = ಬೂಟು; ಚಪ್ಪಲಿ; ಪಾದರಕ್ಷೆ. (ತೆ) ಯಾವ ಕಡೆಗೆ.

ಎಕ್ಕಲ (ನಾ) = ಒಬ್ಬೊಂಟಿಗ (ಜಾ.ಪ್ರಾಸ: ಎಕ್ಕಲ ಖಾಜಾ ದುಡ್ಡಿಗಿ ರಾಜಾ ತಿರ್ಲಂಭೋಜಾ॥)

ಎಕ್ಕಾ (ನಾ) = ಒಂಟಿ; ಒಂಟಂಕಿ; ಒಂಟಂಕಿ ಇಸ್ಪೀಟು.

ಎಕ್ಕಾದಶಿ (ನಾ) = ಏಕಾದಶಿ; ಪಕ್ಷದ ಹನ್ನೊಂದನೇದಿನ, ಒಪ್ಪೊತ್ತೂಟದ ವ್ರತದ ದಿನ (ಗಾದೆ: ಎಕ್ಕಾದಶಿ, ದುಪ್ಪಟಖಾಶಿ).

ಎಕ್ಕಿ (ನಾ) = ಎಕ್ಕೆ; ಎಕ್ಕೆಗಿಡ; ಅರ್ಕ; ಮಂಚದ ಚೌಕಟ್ಟಿನ ಕಟ್ಟಿಗೆ.

ಎಕ್ಕಿಪಡಿ (ನಾ) = ಎಕ್ಕೆ ಹೆಚ್ಚಾಗಿ ಬೆಳೆವ ಭೂಭಾಗ.

ಎಕ್ಕಿಮುರಿ (ಕ್ರಿ) = ಲಟಿಕೆ ಮುರಿಯುವ ಮೂಲಕ ಶಪಿಸು ಇಲ್ಲವ ಮಮತೆ ತೋರು.

ಎಕ್ಕಿಹಾಲು (ನಾ) = ಎಕ್ಕೆಗಿಡದ ಎಲೆ ಅಥವಾ ಟೊಂಗೆ ಮುರಿದಾಗ ಚಿಮ್ಮುವ ಬಿಳಿರಸ.

ಎಕ್ಕೆಳ್ಳಿ (ನಾ) = ಬೀದರ ಜಿಲ್ಲೆಯಲ್ಲಿ ಎರಡು ಎಕ್ಕೆಳ್ಳಿ ಊರು ಇದ್ದವು. ದೊಡ್ಡ ಎಕ್ಕೆಳ್ಳಿ (ಈಗಜಹೀರಾಬಾದು ಆಗಿದೆ) ಸಣ್ಣ ಎಕ್ಕೆಳ್ಳಿ (ಈಗ ಮನ್ನಾ ಎಕ್ಕೆಳ್ಳಿ ಆಗಿದೆ).

ಎಕ್ಕೊತಕ್ಕೊ = ಎಕ್ವಾತಕ್ವಾ; ಹೆಚ್ಚುಕಡಿಮೆ.

ಎಕ್ವಾತಕ್ವಾ = ಎಕ್ಕೊತಕ್ಕೊ; ಹೆಚ್ಚು ಕಡಿಮೆ.

ಎಕ್ಸಟ್ = ಅರವತ್ತೊಂದು.

ಎಕ್ಸಟ್‌ಬಾಸಟ್ (ನಾ) = ಸಂಭೋಗ ಕ್ರಿಯೆ.

ಎಕ್ರೇ (ನಾ) ಇಂ. = ಕ್ಷ ಕಿರಣ.

ಎಗರಾಡು (ಕ್ರಿ) = ಹಾರಾಡು; ಸೆಟೆದಾಡು.

ಎಚ್ಚ (ನಾ) = ಯಚ್ಚ; ಮಸಾಲೆ; ಅಡಿಗೆ ಸಾಹಿತ್ಯ (ಗಾದೆ: ಎಚ್ಚಾ ಇದ್ರ ಹುಚ್ಚಿಬೀ ಅಡ್ಗಿ ಮಾಡ್ತಾಳ).

ಎಚ್ಚರ = ಎಚ್ರ; ಜಾಗ್ರ.

ಎಚ್ಚರಾಗು (ಕ್ರಿ) = ಎಚ್ಚರಗೊಳ್ಳು; ಎದ್ದೇಳು (ಹಾಡು: ಎಚ್ಚರಾಗೋ ತಮ್ಮ

ಎಚ್ಚರಾಗೋ/ಚಾರ್ ಬಡ್ದು ಹೋಯ್ತಿನ್ನು ಎಚ್ಚರಾಗೊ।।)

ಎಚ್ಚುರ (ನಾ) = ಎಚ್ರ; ಜಾಗ್ರ

ಎಚ್ಚುರಾಗು (ಕ್ರಿ) = ಎಚ್ಚರಾಗು.

ಎಚ್ಚುರ್ಕಿ (ನಾ) = ಎಚ್ಚರಿಕೆ.

ಎಚ್ಚುರ್ದಪ್ಪು (ಕ್ರಿ) = ಎಚ್ಚರ ತಪ್ಪು; ಮೂರ್ಛೆಹೋಗು, ಬೇಹೋಸಾಗು.

ಎಚ್ರ = ಎಚ್ಚರ, ಜಾಗ್ರತೆ.

ಎಚ್ರಿರು (ಕ್ರಿ) = ಎಚ್ಚರಾಗಿರು, ಜಾಗ್ರತನಾಗಿರು; ಮೈ ಮರೆಯಬೇಡ; ಹುಷಾರಿರು.

ಎಟಿ (ಕ್ರಿ) = ಎಟೆ; ಹೊಡೆ; ಗುದ್ದು; ಬಾರಿಸು.

ಎಟುಕು (ಕ್ರಿ) = ಕೈಗೆ ನಿಲುಕು; ಸನಿಹದಲ್ಲಿರು; ಅಟಾಪಿನಲ್ಲಿರು; ಸ್ವಾಧೀನದಲ್ಲಿರು.

ಎಟ್ಟಿ (ನಾ) = ತೊಗಲಿನಪಟ್ಟಿ; ನಾರಿನ ಜೆಟ್ಟಿ; ಹಟಮಾರಿ; ಮೊಂಡ.

ಎಟ್ಟಿ ಹಚ್ಚು (ಕ್ರಿ) = ಹಗ್ಗ ಹೊಸೆಯುವುದನ್ನು ಮುಂದುವರಿಸು; ಮಾತು ಮುಂದುವರಿಸು; ಹಟಮಾಡು.

ಎಡ (ವಿ.) = ವಾಮ; ಬಲಭಾಗವಲ್ಲದ; ಅಶಕ್ತ

ಎಡಕ (ಅ) = ಎಡಕ್ಕ; ಎಡಗಡೆಗೆ, ಎಡಭಾಗಕ್ಕೆ.

ಎಡಗಣ್ಣು (ನಾ) = ಎಡಕಿನ ಭಾಗದಕಣ್ಣು.

ಎಡಗಣ್ಣು ಹಾರು (ನು.) = ಅಪಶಕುನ ಉಂಟಾಗು.

ಎಡಗಾಲು (ನಾ) = ಎಡಕಿನ ಕಾಲು; ರೊಡ್ಗಾಲು.

ಎಡಗೈ (ನಾ) = ಎಡದ ಕೈ; ಲಿಂಗದಕೈ; ರೊಡಗೈ; ಲೊಡಗೈ.

ಎಡಚ (ನಾ) = ಎಲ್ಲ ಕಾರ್ಯದಲ್ಲಿ ಎಡಗೈಯನ್ನು ಬಳಸುವವನು(ಳು); ರೊಡ್ಯಾ; ರೊಡ್ಡಿ.

ಎಡಚು (ನಾ) = ತೊಂದರೆ, ಅನಾನುಕೂಲ.

ಎಡಚಿಡಚ (ದ್ವಿ) = ಮೇಲಿಂದ ಮೇಲಾಗುವ ತೊಂದರೆ; ಅನಾನುಕೂಲ, ಅಸಹಜತೆ.

ಎಡರ್ಝುಂವಿ (ನಾ) = ಮಳ್ಳ; ಹುಚ್ಚ; ಮೂರ್ಖ; ಬೇಕೂಫ; ಅರಿವುಗೇಡಿ.

ಎಡವಂಕಿ (ನಾ) = ಎಡಮಗ್ಗುಲಿಗೆ ಹುರಿಹೊಡೆದ ಆರೆಯ ಮರ ಅಥವಾ ಬನ್ನಿಯ ಮರ.

ಎಡವಟ್ಟ (ನಾ) = ಧಡ್ಡ; ಮೂರ್ಖ; ಕೆಲಸಕ್ಕೆ ಬಾರದವನು.

ಎಡವಟ್ಟು (ನಾ) = ಕೆಲಸ ಕೆಡುವಿಕೆ; ದಡ್ಡತನ; ಕ್ರಮತಪ್ಪುವಿಕೆ.

ಎಡವಾಸ (ನಾ) = ಎಡವಟ್ಟೆ; ಧಡ್ಡ-ಮೂರ್ಖ; ಕೆಲಸಕ್ಕೆ ಬಾರದವನು; ಒರಟ.

ಎಡಾ (ನಾ) = ಅಶಕ್ತ; ಬಲಹೀನ (ಉದಾ: ಈ ಎತ್ತು ಜರಾ ಎಡಾಅದಾ)

ಎಡಾಬಲಾ (ನಾ) = ಎಡಬಲ, ಕಮ್ಮಿ ಜಾಸ್ತಿ; ಬಲಹೀನ-ಬಲಶಾಲಿ.

ಎಡಿ (ನಾ) = ಎಡೆ; ಮೀಸಲು ಅನ್ನ; ನೈವೇದ್ಯ; ಆಹಾರ; ಅನ್ನ ಬಡಸಿದ ತಟ್ಟೆ; ಬೆಳೆಯಲ್ಲಿಯ ಹುಲ್ಲು ಕೀಳುವ

ಉಪಕರಣ (ಗಾದೆ ೧- ತನ್ನ ಎಡಿದಾಗ ಕಾತ್ತಿ ಸತ್ತು ಬಿದ್ದಾದ, ಮಂದಿ ಎಡೀದು ನೊಣಾ ಝಾಡುಸ್ತಂತ! ೨- ಎಡಿ ಆಡ್ದುರ ಹೊಲಾಛಂದ, ತೊಡಿ ಆಡ್ದುರ ಹೆಣ್ಣು ಛಂದ).

ಎಡಿಹಚ್ಚು (ಕ್ರಿ) = ಊಟಕ್ಕೆ ನೀಡು; ಎಡೆ ಮಾಡು.

ಎಡ್ಕ (ಅ) = ಎಡಕ್ಕೆ; ಎಡಬದಿಗೆ; ಎಡದಿಕ್ಕಿಗೆ.

ಎಡ್ಕಾಬಲ್ಕಾ = (ಅ) ಎಡಕ್ಕೆ ಮತ್ತು ಬಲಕ್ಕೆ.

ಎಡ್ಡ (ನಾ) = ದಡ್ಡ; ಬುದ್ಧಿಗೇಡಿ (ಬೈಗುಳ).

ಎಡ್ಡಿ (ನಾ) = ದಡ್ಡಿ; ಹುಚ್ಚಿ; ಬುದ್ಧಿಹೀನೆ (ಬೈಗುಳ).

ಎಡ್ಡಿಪ್ಪತ್ತು (ನಾ) = ನಲವತ್ತು.

ಎಡ್ಡು (ನಾ) = ಎರಡು; ಯಾಡ್ಡು.

ಎಡ್ಡುನಾಲ್ಗಿದಾಂವ (ನಾ) = ಮಾತು ಬದಲಿಸುವವ; ಕೊಟ್ಟ ಮಾತುಮೀರುವವ.

ಎಡ್ನೆ (ಅ) = ಎರಡನೇ

ಎಡ್ರಾಮಿ (ನಾ) = ಹುಚ್ಚು ಹೆಂಗಸು.

ಎಡ್ವಂಕ (ವಿ) = ಎಡಕ್ಕೆ ಹೊರಳಿದ, ಎಡಕ್ಕೆ ಹುರಿಗೊಂಡ.

ಎಡ್ವಂಕಿ (ನಾ) = ಎಡಕ್ಕೆ ಹುರಿಹೊಡೆದ ಆರೆ ಅಥವಾ ಬನ್ನಿಯ ಮರ.

ಎಣುಸಿ ಹೊಡಿ (ಕ್ರಿ) = ಒಂದೊಂದಾಗಿ ಎಣಿಸುತ್ತ ಏಟಹಾಕು.

ಎಣುಸು (ಕ್ರಿ) = ಎಣಿಸು; ಲೆಕ್ಕಿಸು.

ಎಣುಸೆಣುಸಿಹೊಡಿ (ಕ್ರಿ) = ಒಂದೊಂದು ಏಟನ್ನು ಎಣಿಸೆಣಿಸಿ ನಿರಂತರವಾಗಿ ಹೊಡೆ.

ಎಣ್ಕಿ (ನಾ) = ಎಣಿಕೆ; ಎಣಿಸುವಿಕೆ.

ಎಣ್ಣಿ (ನಾ) = ಎಣ್ಣೆ, ಸೇಂಗ, ಎಳ್ಳು, ಕಾರೆಳ್ಳು, ಅಗಸೆ ಇತ್ಯಾದಿಗಳಿಂದ ನುರಿಯಾಗಿ ಹಿಂಡಿ ತೆಗೆದ ದ್ರವ.

ಎಣ್ಣಿಗಪ್ಪು = ಕಪ್ಪು-ಕೆಂಪು ಮಿಶ್ರ ಬಣ್ಣ.

ಎಣ್ಣಿಗೆಂಪು = ಎಣ್ಣೆಯಂತಹ ಕೆಂಪು.

ಎಣ್ಣಿ ಪತ್ಲ (ನಾ) = ಮದುಮಗಳಿಗೆ ಎಣ್ಣೆ ಹಚ್ಚಿ ಮೀಯಿಸಿದ ಮೇಲೆ ಉಡಿಸುವ ಸೀರೆ.

ಎಣ್ಣಿಬಟ್ಲು = ಸೈ ಎಣ್ಣೆ ಕಾಸುವ ಬಟ್ಟಲು; ಸೈ ಎಣ್ಣೆ ಹಾಕಿಡುವ ಬಟ್ಟಲು.

ಎಣ್ಣಿಬೆಣ್ಣಿಮಾಡು (ಕ್ರಿ) = ಎಣ್ಣೆ ಎರೆದು, ಬೆಣ್ಣೆ ಉಣ್ಣಿಸಿ ಬೆಳೆಸು.

ಎಣ್ಣಿಮಾರಿ (ನಾ) = ಎಣ್ಣೆ ಬಣ್ಣದ ಮುಖ, ಮೋರೆ.

ಎಣ್ಣಿ ಮಾರ‍್ಯಾಂವ (ನಾ) = ಎಣ್ಣೆ ಬಣ್ಣದ ಮೋರೇಯುಳ್ಳವನು.

ಎಣ್ಣಿಯೆರಿ (ಕ್ರಿ) = ಮದುಮಕ್ಕಳಿಗೆ ಎಣ್ಣೆಹೂಸಿಮೀಯಿಸು.

ಎಣ್ಣಿಹಚ್ಚು (ಕ್ರಿ) = ವಧುವರರಿಗೆ ಮದುವೆ ಸಮಾರಂಭದಲ್ಲಿ ಎಣ್ಣೆ ಹೂಸಿ ಜತೆಗೂಡಿ ಮೀಯಿಸು.

ಎಣ್ಣಿಹಚ್ಗೊಂಡು ಹೊಯ್ಕೊ (ಕ್ರಿ) = ಬೇಕಾದಷ್ಟು ಹಾರಾಡು, ಚೀರಾಡು; ಬೊಬ್ಬಿಕ್ಕು.

ಎಣ್ಣಿಹಾಡು (ನಾ) = ಮದು ಮಕ್ಕಳು ಮೀಯುವಾಗ ಹಾಡುವ ಹಾಡು-
ಕೆಂಚೆಣ್ಣಿ ಮಿಂಚೆಣ್ಣಿ । ಬಟ್ಲಾಗ ಒಳ್ಳೆಣ್ಣಿ।
ನೆರೆದ ಮುತ್ತೈದೆರೆಲ್ಲ ಎಣ್ಣಿ ಹಚ್ಚ ಬನ್ನಿರೇ।
ಅಯ್ಯಪ್ಪ ಶೆಟ್ಟೇರ ಮಗಳ ಗೌರಮ್ಮಗ।
ಎಣ್ಣಿ ಹಚ್ಚಾಬನ್ನಿರೇ॥

ಎಣ್ಣಿಹೊದ್ಕಿ (ನಾ) = ಮದುಮಕ್ಕಳಿಗೆ ಎಣ್ಣೆ ಹಚ್ಚುವ ಕಾರ್ಯಕ್ರಮದಲ್ಲಿ ಉಡಿಸುವ ತೊಡಿಸುವ ಹೊಸ ಉಡುಪು.

ಎಣ್ಸು (ಕ್ರಿ) = ಎಣಿಸು; ಎಣಿಕೆಮಾಡು.

ಎಣ್ಹೋಳ್ಗಿ (ನಾ) = ಎಣ್ಣೆಯಲ್ಲಿ ಬೇಯಿಸಿದ ಹೋಳಿಗೆ; ಒಬ್ಬಟ್ಟು.

ಎತ್ಕೋ (ಕ್ರಿ) = ಎತ್ತಿಕೊ; ಹೊತ್ತುಕೊ; ಕೂಸನ್ನು ಬಗಲಲ್ಲಿ ಕೂರಿಸಿಕೊ; ಹೆಗಲ ಮೇಲೆ ಕೂರಿಸಿಕೊ.

ಎತ್ಗೈಯಿ (ನಾ) = ಮನುಷ್ಯನ ಕೈಯನ್ನು ಗಗನದತ್ತ ಚಾಚಿದಾಗ ಆಗುವಷ್ಟು ಎತ್ತರ.

ಎತ್ಕೊ (ಕ್ರಿ) = ಎತ್ಕೊ (ನೋಡಿರಿ).

ಎತ್ಗೊಂಡೊಯ್ಲಿ (ಕ್ರಿ) = ಸಾಯಲಿ (ಬೈಗುಳ)

ಎತ್ತ = ಯಾವಕಡೆಗೆ.

ಎತ್ತಕಾಡಿ = ಎತ್ತಕಡೆ; ಯಾವ ಕಡೆ.

ಎತ್ತಬಂತತ್ತ = ಮನ ಬಂದಂತೆ.

ಎತ್ತಿನಚಿಟ್ಟ = ಎತ್ತಿನ ಖರೀದಿ ಪತ್ರ.

ಎತ್ತಿಸು (ಕ್ರಿ) = ಮೇಲಕ್ಕೇಳುವಂತೆ ಮಾಡಿಸು.

ಎತ್ತು (ಕ್ರಿ) = ಮೇಲಕ್ಕೆ ಬರುವಂತೆ ಮಾಡು. ಎತ್ತಿಹಿಡಿ; ಹೆಣ ಎತ್ತಿಕೊಂಡೊಯ್ಯಿ.

ಎತ್ತು (ನಾ) = ತರಡು ಹೊಡೆದ ಹೋರಿ; ಹೊಲಗೆಲಸದಲ್ಲಿ ಪಳಗಿದ ಹೋರಿ.

ಎತ್ರ (ನಾ) = ಎತ್ತರ.

ಎತ್ಲಾಗ = ಎತ್ತಕಡೆ.

ಎತ್ಹೊಡಿ (ಕ್ರಿ) = ಕುಸ್ತಿ ಸ್ಪರ್ಧೆಯಲ್ಲಿ ಎದುರಾಳಿಗೆ ಮೇಲಕ್ಕೆತ್ತಿ ನೆಲಕ್ಕೆ ಅಪ್ಪಳಿಸು, ಕಳವು ಮಾಡು; ಕಬಳಿಸು.

ಎದಕ = ಯಾವುದಕ್ಕೆ; ಯಾತಕ್ಕೆ; ಏತಕ್ಕೆ

ಎದರದು = ಯಾವುದಕ್ಕೆ ಸಂಬಂಧಿಸಿದ್ದು.

ಎದಿ (ನಾ) = ಎದೆ; ಹೃದಯ; ಧೈರ್ಯ; ಗಟ್ಟಿತನ.

ಎದಿಒಡಿ (ಕ್ರಿ) = ಎದೆಯೊಡೆ; ಗಾಬರಿಯಾಗು.

ಎದಿಗುಂಡ್ಗಿ (ನಾ) = ಎದೆ; ಉಬ್ಬಿದೆದೆ.

ಎದಿತನಕ (ನಾ) = ಎದೆಮಟ್ಟ; ಎದೆಯವರೆಗೆ.

ಎದಿಧಸ್ಸನು (ಕ್ರಿ) = ಎದೆದಸಕ್ಕೆನ್ನು; ಎದೆಯೊಡೆ, ಗಾಬರಿಯಾಗು.

ಎದಿಬ್ಯಾನಿ (ನಾ) = ಎದೆಗೆ ಸಂಬಂಧಿಸಿದರೋಗ; ಹೃದಯರೋಗ.

ಎದಿಯುದ್ದ = ಎದೆಮಟ್ಟ; ಎದೆತನಕ.

ಎದೆಮ್ಯಾಲಿನ ಕಲ್ಲು (ನಾ) = ಭಾರ, ಹೊರೆ.

ಎದು (ಸನಾ) = ಯಾವುದು.

ಎದುಕ = ಏತಕ್ಕೆ, ಯಾವುದಕ್ಕೆ.

ಎದುರಾಎದುರು = ಸಮಕ್ಷಮದಲ್ಲೇ; ಸಮ್ಮುಖದಲ್ಲೇ; ಎದುರಲ್ಲೇ.

ಎದುರಾಡು (ಕ್ರಿ) = ವಿರೋಧಿಸಿ ಮಾತಾಡು; ಪ್ರತ್ಯುತ್ತರ ಕೊಡು.

ಎದುರು = ಅಭಿಮುಖ; ಇದಿರು.

ಎದುರುಭೇಟಿ (ನಾ) = ಸ್ವಾಗತ; ಬ್ಯಾಂಡುಬಜಾದೊಂದಿಗೆ ಬೀಗರನ್ನು ಬರಮಾಡಿಕೊಳ್ಳುವಿಕೆ; ಎದುರ್ಭೇಟಿ.

ಎದುರೇಟಾ (ನಾ) = ತಿರುಗೇಟು; ಪ್ರತ್ಯುತ್ತರ.

ಎದುರ್ಗಾಲಿಲಿ ಹುಟ್ಟು = ಗರ್ಭದಿಂದ ಕಾಲು ಮುಂದಾಗಿ (ಕೂಸು) ಹುಟ್ಟು.

ಎದುರ್ಗಾಲು (ನಾ) = ಕಾಲು ಮುಂದಾಗಿ ಕೂಸಿನ ಜನನ.

ಎದುರ್ಗೂಸು (ನಾ) = ತಾನು ಹೆಣ್ಣು ಕೊಟ್ಟ ಮನೆಯಿಂದ ತನ್ನ ಮನೆಗಾಗಿ ಆ ಮನೆಯಿಂದ ಹೆಣ್ಣು ತರುವಿಕೆ.

ಎದ್ಕ = ಎದಕ (ನೋಡಿರಿ)

ಎದ್ದು ಬಂದದ್ದು = ಗಂಡನನ್ನು ಬಿಟ್ಟು ಬೇರೆಯವರ ಮನೆ ಹೊಕ್ಕಿದ ಹೆಂಗಸು (ಬೈಗುಳ).

ಎದ್ದುಹೋಗಿದ್ದು = ಗಂಡನ ಮನೆಬಿಟ್ಟು ಪರರ ಬೆನ್ನು ಹತ್ತಿ ಹೋದಹೆಂಗಸು (ಬೈಗುಳ).

ಎದ್ಯಾಗ ಮೀಸಿ ಇರು = ಗಂಡಸಿನಂತೆ ವೀರತನ ತೋರು.

ಎನ್ನಿ (ನಾ) = ಕೆಲವು; ಸ್ವಲ್ಪ (ಉದಾ: ಎನ್ನಿಮಂದಿ ಹಾಂಗ್ಮಾತಾಡ್ದುರು; ಎನ್ನಿ ಮಂದಿ ಹೀಂಗ ಮಾತಾಡ್ದುರು).

ಎಪ್ಪತ್ತಿನ ಕೆಮ್ಮು (ನಾ) = ನಾಯಿಕೆಮ್ಮು.

ಎಬ್ಬುಸು (ಕ್ರಿ) = ಎಬ್ಬಿಸು; ಕೈಹಿಡಿದು ಏಳುವಂತೆ ಮಾಡು; ಎಚ್ಚರಗೊಳಿಸು.

ಎಬ್ಸು (ಕ್ರಿ) = ಎಬ್ಬಿಸು; ಕೈಹಿಡಿದು ಏಳುವಂತೆ ಮಾಡು; ಎಚ್ಚರಗೊಳಿಸು.

ಎಮ್ಮಕ್ಕ (ನಾ) = ಎಮ್ಮೆಯಂತೆ ಕೊಬ್ಬಿದವಳು.

ಎಮ್ಮಣಕ (ನಾ) = ಪ್ರಾಯಕ್ಕೆ ಬಂದ ಎಮ್ಮೆ.

ಎಮ್ಮಿ (ನಾ) = ಎಮ್ಮೆ; ಮಹಿಷಿ.

ಎಮ್ಮಿಸ್ವಾಮಣ್ಣ = ಎಮ್ಮೆ ಕಾಯುವವ.

ಎರಕಾ = ಎರಕ; ಕಾಯಿಸಿದ ಲೋಹಾದಿಗಳ ದ್ರವವನ್ನು ಸಾಚಾದಲ್ಲಿ ಹಾಕುವಿಕೆ.

ಎರಕಾಹಾಕು (ಕ್ರಿ) = ಸಾಚಾದಲ್ಲಿ ಹಾಕಿ ಉಪಕರಣ ತಯಾರಿಸು, ವಸ್ತುಗಳನ್ನು ತಯಾರಿಸು.

ಎರಡು = ಒಂದರ ನಂತರದ ಅಂಕಿ; ಯಾಡ್ಡು.

ಎರಣೆ (ವಿ) = ಎರಡನೆಯ; ತನ್ನದಲ್ಲದ. ಅನ್ಯ.

ಎರಣೆ ಇಚಾರ (ನಾ) = ಭೇದ ಬಗೆಯುವಿಕೆ; ಎರಡು ಬಗೆಯುವಿಕೆ; ಅನ್ಯ ವಿಚಾರ.

ಎರಣೆ ಸಂಬಂಧ (ನಾ) = ಮರುಮದುವೆ; ಉಡ್ಕಿ; ಕೂಡಿಕೆ.

ಎರಣೆಹೆಣ್ಮಗಳು (ನಾ) = ಪರಸ್ತ್ರೀ; ಪರನಾರಿ; ಅನ್ಯಮಹಿಳೆ.

ಎರಿ = ಎರೆಮಣ್ಣು ; ಕರಿಬಣ್ಣ; ಕಪ್ಪು.

ಎರಿ (ಕ್ರಿ) = ನೀರೆರೆ; ಮಜ್ಜನಮಾಡಿಸು; ಮೈತೊಳೆ; ನೀರು ಕುಡಿಸು.

ಎರಿಅಡಿ (ನಾ) = ಕರಿಮಣ್ಣಿನ ಭೂಮಿ.

ಎರಿಹೊಲ (ನಾ) = ಕರಿಮಣ್ಣುಳ್ಳ ಹೊಲ (ನುಡಿ ಗಟ್ಟು : ಎರಿಹೊಲ್ದಾಗ ನಿಂತ್ರ ಕಾಣಲ್ದಾಂವ).

ಎರ್ಕೊ (ಕ್ರಿ) = ಎಣ್ಣೆ ಹಚ್ಚಿಕೊಂಡು ತಲೆಮೇಲಿನ ಸ್ನಾನ ಮಾಡು ; (ಮುಟ್ಟಾದವಳು) ತಲೆಸ್ನಾನ ಮಾಡು.

ಎರ್ಕೊರ್ಮೋರ್ಬುಡ್ಕ ಬಗ್ಗು = ಬೇರೆಯವರ ಮದುವೆಯಲ್ಲಿ ತನ್ನ ಮದುವೆ ಮಾಡಿಕೊ; ಹೆರವರ ಆಶ್ರಯದಲ್ಲಿ ಬದುಕು.

ಎರ್ಜಾರಿ = ಯರ್ಜಾರಿ; ಬರುಹೋಗು ಮಾಡುವಿಕೆ.

ಎರ್ಜಾರಿ ಮಾಡು (ಕ್ರಿ) = ಬರು-ಹೋಗು ಮಾಡು.

ಎಲಿ (ನಾ) = ಎಲೆ; ವೀಳ್ಯದೆಲೆ; ಇಳ್ಯಾ ಪತ್ರಾವಳಿ; ಊಟದೆಲೆ;

ಎಲಿಗಿ= ಎಲ್ಲಿಗೆ.

ಎಲಿಚಂಚಿ (ನಾ) = ವೀಳ್ಯದೆಲೆ, ಅಡಕೆ, ಕಾಚ ಸುಣ್ಣ ಇತ್ಯಾದಿ ಇಡುವ ಚೀಲ; ಎಲೆಚೀಲ.

ಎಲಿತ್ವಾಟಾ (ನಾ) = ಎಲೆತೋಟ; ವೀಳ್ಯದೆಲೆಯ ತೋಟ; ಪಾನ್ಮಳಾ; ಪಾನ್ಮಲ್ಲಾ.

ಎಲಿಮಳಾ (ನಾ) = ಎಲೆತೋಟ; ಪಾನ್ಮಳಾ.

ಎಲಿಮುಚ್ಚಿದಕಾಯಿ = ಕಾಣಲಾರದಕಾಯಿ; ಎಲೆಮರೆಯಕಾಯಿ; ಕಾಣಲಾರದ ವಸ್ತು; ಬಯಲಿಗೆ ಬಾರದ ವ್ಯಕ್ತಿ, ವಸ್ತು ಇತ್ಯಾದಿ.

ಎಲು (ನಾ) = ಎಲುಬು.

ಎಲುಇಲ್ದನಾಲ್ಗಿ (ನಾ) = ಸಡಿಲು ಬಿಟ್ಟನಾಲಗೆ; ಮನಬಂದಂತೆ ಮಾತಾಡುವಿಕೆ.

ಎಲೊ (ಅ) = ಯಾಕೊ; ಅವಮಾನಕಾರಕ ಸಂಬೋಧನೆ.

ಎಲೊತೆಲೊ (ನಾ) = ಅಸಭ್ಯ ಮಾತು; ಅಡ್ಡತಿಡ್ಡಮಾತು. ಎಲ್ಗತೆಲ್ಗ.

ಎಲ್ಗಾ (ಅ) = ಎಲೆಗೇ; ಅಸಭ್ಯ ಸಂಬೋಧನೆ.

ಎಲ್ಗಾತೆಲ್ಗಾ ಮಾತು (ನಾ) = ಅಸಭ್ಯ ಮಾತು; ಅನಾಗರಿಕ ಮಾತು.

ಎಲ್ಗಾರ (ನಾ) = ವೀಳ್ಯದೆಲೆಮಾರುವ ವ್ಯಾಪಾರಿ; ತಂಬೋಲಿ.

ಎಲ್ಗಾರ್ತಿ (ನಾ) = ಎಲ್ಗಾರನ ಹೆಂಡತಿ; ಎಲ್ಗಾರನ ಮನೆಯ ಮಹಿಳೆ.

ಎಲ್ಲದ = ಎಲ್ಲಿ ಇದೆ?

ಎಲ್ಲಮ್ಮ (ನಾ) = ರೇಣುಕಾದೇವಿ; ಶಕ್ತಿದೇವತೆ. (ಉಡಬಾಳ ಎಲ್ಲಮ್ಮ; ಬಗ್ದೂರಿ ಎಲ್ಲಮ್ಮ)

ಎಲ್ಲಾದ = ಎಲ್ಲಿ ಇದೆ?

ಎಲ್ಲಿ (ಅ) = ಯಾವ ಜಾಗದಲ್ಲಿ

ಎಲ್ಲಿಗಿ = ಎಲ್ಲಿಗೆ; ಯಾವ ಕಡೆಗೆ (ಗಾದೆ: ಎಲ್ಲಿಗಿ ಹೋದುರ್ಬಿ ಒಲಿಗಿ ಮೂರ್ರೆ ಕಲ್ಲು.).

ಎಲ್ಯಾದ = ಎಲ್ಲಿದೆ.

ಎವಿ (ನಾ) = ಕಣ್ಣು ರೆಪ್ಪೆಯಕೂದಲು; ಎವೆ.

ಎಷ್ಟು (ವಿ) = ಏಟು? ಯಾವ ಪ್ರಮಾಣ; ಯಾವ ಅಳತೆ.

ಎಸರು (ನಾ) = ಕುದಿಯುವ ನೀರು; ಪಲ್ಯದಲ್ಲಿಯ ತಿಳಿದ್ರಾವಣ; ಎಸುರು.

ಎಸರು ಬರು (ಕ್ರಿ) = ನೀರು ಕಾಯ್ದು ಸಳಮಳ ಸಳಮಳ ಕುದಿಯತೊಡಗು.

ಎಸುರು (ನಾ) = ಎಸರು (ನೋಡಿರಿ)

ಎಸುಳು (ನಾ) = ಹೂವಿನದಳ; ಪಕಳೆ; ಸೇವಿಗೆ ಎಳೆ.

ಎಸುಳೆಸುಳು (ದ್ವಿ) = ಹೂವಿನದಳ; ಪಕಳೆ; ಸೇವಿಗೆ ಎಳೆ, ಬಿಡಿಬಿಡಿದಳ; ಸೇವಿಗೆಯ ಬಿಡಿ ಬಿಡಿಯಾಗಿರುವಿಕೆ; ಎಳಎಳೆ.

ಎಳಗಂದಿ (ನಾ) = ಹೊಸದಾಗಿ ಕರುಹಾಕಿರುವ ಆಕಳು ಅಥವಾ ಎಮ್ಮೆ.

ಎಳಗಂದಿಹೈನಾ = ಹೊಸದಾಗಿ ಕರುಹಾಕಿದ ಎಮ್ಮೆ ಅಥವಾ ಆಕಳ ಹಯನ.

ಎಳಹೂಟಿ (ನಾ) = ಅಪರಾಧಿಗಳನ್ನು ಆನೆಕಾಲಿಗೆ ಕಟ್ಟಿ ಎಳೆದಾಡಿಸಿ ಕೊಲ್ಲುವ ಶಿಕ್ಷೆ; ಕಲ್ಯಾಣ ಕ್ರಾಂತಿಯ ಹರಳಯ್ಯ ಮಧುವಯ್ಯ ಮತ್ತು ಶೀಲವಂತರಿಗೆ ಬಿಜ್ಜಳಾರಾಜನು ನೀಡಿದ ಶಿಕ್ಷೆ.

ಎಳಿ (ನಾ) = ಎಳೆ; ನೂಲಿನ ಎಳೆ; ನಾರಿನ ಜೆಟ್ಟಿ (ಗಾದೆ: ಎಳಿ ಸಿಕ್ರ ಹಚ್ಚಡ ನುಂಗಾಂವ).

ಎಳಿ (ಕ್ರಿ) = ಸೆಳೆ; ತನ್ನ ಕಡೆಗೆ ಜಗ್ಗು; ಎಳೆದುಕೊ; ಆಕರ್ಷಿಸು.

ಎಳಿಸಿಕ್ರಹಚ್ಚಡ ನುಂಗಾಂವ (ನು) = ಸಮಯಸಾಧಕ.

ಎಳೀಕ (ನಾ) = ಎಳೆಯದಾದ; ಬಲಿಯಲಾರದ; ಹೀನವಾದ; ಕೀಳಾದ; ಎಳೂಕ.

ಎಳುಸು (ಕ್ರಿ) = ಎಳೆಸು; ಬಯಸು; ಅಪೇಕ್ಷಿಸು.

ಎಳೂಕ (ವಿ) = ಎಳೆಯದಾದ; ಬಲಿಯಲಾರದ; ಹೀನವಾದ; ಕೀಳಾದ.

ಎಳೂಕನ್ಕುಲಾ = ಹೀನಕುಲ; ಕೀಳುಕುಲ.

ಎಳ್ಗರು (ನಾ) = ಸಣ್ಣಕರು; ಹೊಸದಾಗಿ ಹುಟ್ಟಿದಕರು. (ಸೋ. ಶತಕ: ಎಳ್ಗರುಂ ಎತ್ತಾಗದೇಲೋಕದೊಳ್).

ಎಳ್ಗಾಯಿ (ನಾ) = ಬಲಿಯದ ಕಾಯಿ.

ಎಳ್ಗೂಸು (ನಾ) = ಸಣ್ಣಕೂಸು; ಚಿಕ್ಕಮಗು; ಎಳೆಯದಾದ ಮಗು; ನವಜಾತಶಿಶು.

ಎಳ್ತಿ (ನಾ) = ಎಳೆತ; ಸೆಳೆತ; ಎಳೆದಾಟ; ಸೆಳೆದಾಟ; ಆಕರ್ಷಣೆ.

ಎಳ್ನಾಗರ (ನಾ) = ಯಳ್ನಾಗರ; ಪುರುಷನ ಜನನೇಂದ್ರಿಯದ ಮೇಲಾಗುವ ಪಕ್ಕುಗಡ್ಡೆ.

ಎಳ್ಸಂಡ್ಗಿ (ನಾ) = ಎಳ್ಳು, ಉದ್ದಿನ ಹಿಟ್ಟು, ರುಚಿಗೆ ತಕ್ಕ ಉಪ್ಪು, ನೀರಿನೊಂದಿಗೆ ಬೆರೆಸಿ ಮಾಡಿದ ವಡೆ, ಸಂಡಿಗೆ.

ಎಳ್ಳಾಮೂಸಿ (ನಾ) = ಎಳ್ಳಮವಾಸ್ಯ; ಮಾರ್ಗಶಿರ ಅಮಾವಾಸ್ಯ; ಭೂಮಿತಾಯಿಯ ಬಂಕೆಯ (ಬಯಕೆಯ) ಹಬ್ಬ. 'ಎಳ್ಳಾಮಾಸಿ ಧಿನಾ ಎಳ್ಳು ದಾಣಿಯೋಟು ಹೊಟ್ಟಿ ನಿವುಚ್ತಾದ' ಎಂಬ ಭಾವನೆ ಈ ಭಾಗದ ರೈತರಲ್ಲಿ ನೆಲೆಸಿದೆ.

ಎಳ್ಳಾಮೂಸಿ ಕರಿ (ನಾ) = ಎಳ್ಳಮಾವಾಸ್ಯೆಯ ಮರುದಿನ.

ಎಳ್ಳಿ (ನಾ) = ಎರಳೆ; ಚಿಗರೆ; ಹರಿಣ.

ಎಳ್ಳು ಕೊದ್ಲಿ (ನಾ) = ಎಳ್ಳಿನ ದಂಟುಗಳ ಸೂಡು (ತೆನ್ನಾಲಿ ರಾಮಕೃಷ್ಣ ಒಗಟು:- ಎಳ್ಳು ಕೊದ್ಲಿ, ಎಮ್ಮಿದಾಂವಾ-ತಿಲಕಾಷ್ಟ ಮಹಿಷ ಬಂಧನಂ).

ಎಳ್ಳುಬೆಲ್ಲ (ನಾ) = ಹಿತವಾದದ್ದು; ಸಿಹಿಯಾದದ್ದು.

ಎಳ್ಳುಬೆಲ್ಲವಾಗು (ಕ್ರಿ) = ಹಿತವಾಗಿರು; ರುಚಿರುಚಿಯಾಗಿರು; ಅನ್ಯೋನ್ಯವಾಗಿರು.

ಎಳ್ಳುಭಣಮಿ (ನಾ) = ಎಳ್ಳು ಕೊದಲಿಯ ಸೂಡುಗಳ ಬಣವೆ (ಹಾಡು:- ಎಳ್ಳು ಭಣಮಿಲಿಂದ। ನಾ ಎದ್ದು ಬರುವಾಗ । ನೀ ಎಲ್ಲಿಗೋಗಿದಿ ಎಲೆದಮಣೀ। ಕೊಲಕೊಲೆ॥).

ಎಳ್ಳು ಹೋಳ್ಗಿ (ನಾ) = ಕುಟ್ಟಿದ ಎಳ್ಳು ಮತ್ತು ಬೆಲ್ಲದ ಹೂರಣವನ್ನು ಕಣಕದಲ್ಲಿಟ್ಟು ತಯಾರಿಸಿದ ವಿಶೇಷ ಹೋಳಿಗೆ.

ಏ

ಏ = ಸಂಬೋಧನ.

ಏಂಡಿ = ಏಡಿ; ಎಂಡಿ.

ಏಕ = ಒಂದರ ಅಂಕಿ; ಒಂದು; ಒಂಟಿ; ಒಂಟಿಗ; ಒಬ್ಬೊಂಟಿಗ.

ಏಕಕ ಲಾಖಾಗು = ದಿನೇ ದಿನೇ ಅಭಿವೃದ್ಧಿಯಾಗು.

ಏಕತಾರಿ (ನಾ) = ಒಂದೇ ತಂತಿಯ ತಂತಿವಾದ್ಯ; ತಂಬೂರಿ.

ಏಕದಂ = ಒಮ್ಮಿದೊಮ್ಮೆ.

ಏಕನಂಬರ್ = ಅತ್ಯುತ್ತಮ; ಪ್ರಥಮ; ಫಸ್ಟ್‌ಕ್ಲಾಸ್.

ಏಕಮುಸ್ತ = ಒಂದೇ ಸಲಕ್ಕೆ; ಠೋಕ್; ಸಗಟು.

ಏಕಸಾ = ಒಂದೇ ಸವನೆ; ಬಿಡುವಿಲ್ಲದೆ.

ಏಕಸಾಥ = ಒಂದೇ ಸಲಕ್ಕೆ; ಒಟ್ಟುಗೂಡಿ.

ಏಕಾಏಕಿ = ಒಮ್ಮಿದೊಮ್ಮೆ; ತಕ್ಷಣ; ತಡವಿಲ್ಲದೆ; ಏಕದಂ.

ಏಕಾದಶಿ (ಏಕಾದಸಿ) = ಚಾಂದ್ರಮಾನ ಕೃಷ್ಣ ಪಕ್ಷದ ಹನ್ನೊಂದನೇ ದಿನ.

ಏಕಿ, ಏಕೀ (ನಾ) (ಮ.) = ಒಗ್ಗಟ್ಟು; ಒಂದಾಗಿರುವಿಕೆ; ಒಂದಾ; ಕಾಲ್ಮಡಿಯುವಿಕೆ; ಮೂತ್ರ ವಿಸರ್ಜನೆ. (ಶಾಲೆಯ ಮಕ್ಕಳು ಮಾಸ್ತರರಿಗೆ ಮೂತ್ರ ವಿಸರ್ಜನೆಗೆ ಹೋಗಲು ಪರವಾನಿಗೆ ಕೇಳುವಿಕೆ).

ಏಕಿಗಿ ಕೂಡು (ಕ್ರಿ) = ಮೂತ್ರ ವಿಸರ್ಜಿಸು; ಉಚ್ಚೆ ಮಾಡು; ಕಾಲ್ಮಡಿಮಾಡು.

ಏಕೀ (ನಾ) ಮ. = ಕಾಲ್ಮಡಿ; ಮೂತ್ರವಿಸರ್ಜನೆ; ಒಗ್ಗಟ್ಟು.

ಏಕೀ ಮಾಡು = ಮೂತ್ರ ವಿಸರ್ಜನೆ ಮಾಡು.

ಏಕೂಣ (ನಾ) = ಒಟ್ಟು.

ಏಗು (ಕ್ರಿ) = ನಿಭಾಯಿಸು; ಸಾಗಿಸು.

ಏಚುಪೇಚು = ಒಳಗಿನ ದುರ್ಮನಸ್ಸು; ಕೆಟ್ಟ ಮನಸ್ಸು; ಒಳಗಿನ ಗುಟ್ಟು.

ಏಟ್ (ವಿ) = ಎಷ್ಟು.

ಏಟಾ (ನಾ) = ಏಟು; ಪೆಟ್ಟು; ಹೊಡೆತ.

ಏಟಾಹಾಕು (ಕ್ರಿ) = ಏಟುಕೊಡು; ಎಟೆ; ಹೊಡಿ.

ಏಟು (ವಿ) = ಎಷ್ಟು.

ಏಟ್ಬೇಕೋಟು = ಬೇಕಾದಷ್ಟು.

ಏಣು (ನಾ) = ಅಂಚು; ತುದಿ (ಪಲ್ಲಂಗದ ಏಣು; ಚೌಕಿಯ ಏಣು; ಕೆತ್ತಿದ ಕಲ್ಲಿನ ಏಣು, ಬಾಗಿಲಿನ ಏಣು, ಇತ್ಯಾದಿ).

ಏನ್ = ಏನು.

ಏನಾರ = ಏನಾದರೂ.

ಏನು = ಪ್ರಶ್ನಾರ್ಥಕ ಸರ್ವನಾಮ; ಯಾವುದು; ಎಂಥಾದ್ದು.

ಏನುಗುಣಾ = ಏನುಕಾರಣ; ಯಾವ ಕಾರಣ.

ಏನೂಯಾಕಾ ಅನಲಾರದೆ = ವಿಚಾರಿಸದೆ; ವಿಚಾರ ಮಾಡದೆ.

ಏನೇ (ಅ) = ಹೆಂಗಸಿಗೆ, ಹೆಂಡತಿಗೆ ಸಂಬೋಧನೆ.

ಏನ್ಹಿಳಿ (ಕ್ರಿ) = ಏನರ್ಥ ಹೇಳು; ಎಷ್ಟು ಸ್ವಚ್ಛ.

ಏನ್ಬೀ (ಅ) = ಏನೂ; ಯಾವುದೂ.

ಏಬರಾಸಿ (ನಾ) = ಅವಿವೇಕಿ; ಕೆಲಸಕ್ಕೆ ಬಾರದವನು. ಅವಕಳೆಯುಳ್ಳವನು (ಳು).

ಏಮಳ್ಳ (ನಾ) = ಎಲ್ಲರಿಂದ ಏಮಳ್ಳಾ, ಏ ಮರುಳಾ ಎಂದು ಕರೆಯಿಸಿ ಕೊಂಡವನು.

ಏರಂಡಿ (ನಾ) = ಔಡಲಗಿಡ; ಏರಂಡ್ಗಿ ಎಂಬ ಹೆಸರಿನ ಊರು.

ಏರಾಟ (ನಾ) = ಜಿದ್ದು; ಪೈಪೋಟಿ; ಮೇಲಾಟ.

ಏರಾಟ್ಗೆ = ಏರುವಷ್ಟರಲ್ಲಿ; ಹತ್ತುವಷ್ಟರಲ್ಲಿ.

ಏರಾಪರಿ (ಅ) = ಏರುವಾಗ; ಹತ್ತುವಾಗ.

ಏರಿಕಿ, ಏರ್ಕಿ (ನಾ) = ಏರಿಕೆ; ಹೆಚ್ಚುವಿಕೆ; ಮೇಲೆ ಏರುವಿಕೆ; ಎತ್ತರಕ್ಕೆ ಬರುವಿಕೆ.

ಏರಿಸು (ಕ್ರಿ) = ಮೇಲೇರಿಸು; ಮೇಲೇರುವಂತೆ ಮಾಡು; ಹತ್ತಿಸು; ಪವಣಿಸು; ಒಳಗೆ ಸೇರಿಸು; ತುರುಕು; ಚುಚ್ಚು; ಹೆಣ್ಣು ದನದ ಮೇಲೆ ಗಂಡು ದನವನ್ನು ಹಚ್ಚಿಸು.

ಏರೀ ಏರೀ (ದ್ವಿ) = ಹತ್ತಿ ಹತ್ತಿ; ನಿರಂತರ ಹತ್ತಿ.

ಏರು (ಕ್ರಿ) = ಮೇಲೆ ಹತ್ತು; ಮರಹತ್ತು; ಮಾಳಿಗೆ ಹತ್ತು; (ದನಗಳು) ಸಂಭೋಗಿಸು.

ಏರುಗಟ್ಟಿ ಹೊಡಿ (ಕ್ರಿ) = ಮಾಳಿಗೆಗೆ ತೂಗು ಹಾಕಿ ಹೊಡೆ; ಕೋಲ್ದಂಡಿಗೆ ಹಾಕಿ ಹೊಡೆ; ಶಿಕ್ಷೆ ಕೊಡು.

ಏರುಗಟ್ಟು (ಕ್ರಿ) = ಕೈ ಕಟ್ಟಿ ಗಿಡಕ್ಕೆ ಇಲ್ಲವೆ ಮಾಳಿಗೆಗೆ ತೂಗುಹಾಕಿ ಶಿಕ್ಷಿಸು.

ಏರುಗಾವು (ಏರ್ಗಾವು) = ಏರುತ್ತಿರುವ ಕಾವು; ಹೆಚ್ಚುತ್ತಿರುವ ಬಿಸಿ, ಸೆಕೆ.

ಏರ್ಕಿ (ಏರಿಕಿ) = ಏರಿಕೆ; ಹೆಚ್ಚುವಿಕೆ; ಮೇಲೇರುವಿಕೆ.

ಏರ್ಸು (ಕ್ರಿ) = ಒಳಗೆ ಸೇರಿಸು; ಪವಣಿಸು. ಮೇಲೇರಿಸು; ತುರುಕು; ಚುಚ್ಚು; ವರ್ಣನೆ ಮಾಡಿ ಉಬ್ಬಿಸು.

ಏಸಾನ (ನಾ) ಉ. = ಐಸಾನ; ಉಪಕಾರ.

ಏಸಾನ್ಮಾಡು (ಕ್ರಿ) = ಉಪಕಾರ ಮಾಡು.

ಏಸು = ಇವು ಎಷ್ಟು? (ಹಾಡು:- ಏಸೂರು ಸುತ್ತಿದರು ಬೀಸೋದು ತಪ್ಪೊಲ್ಲ); ಎಷ್ಟು (ಬಹುವಚನ).

ಏಸು ಸ್ವಾಮಿ = ಪ್ರವಾದಿಯೇಸೂ ಕ್ರಿಸ್ತ.

ಏಳಾಟ್ಗೆ = ಏಳುವಷ್ಟರಲ್ಲಿ.

ಏಳಾಪರಿ = ಏಳುವಾಗ.

ಏಳು (ಕ್ರಿ) = ಎದ್ದೇಳು; ಎಚ್ಚರಾಗು; ಎದ್ದು ನಿಲ್ಲು (ಗಾದೆ:- ಏಳಲಾರದೆತ್ತು; ಮೆಳಿಮ್ಯಾಲ ಬಿತ್ತು; ಏಳಂಬಾ ಜಾಗದಾಗ ಕೂಡಬಾರ್ದು).

ಏಳು = ಆರರ ನಂತರದ ಅಂಕಿ; ಸಪ್ತ. (ಹಾಡು:- ಏಳು ಸುತ್ತಿನ ಕ್ವಾಟಿ। ಅದರಾಗ। ಏಳ ಕುಂತಾನ ಬಸವಾ। ಎಂಬ ಜಾನಪದ ಹಾಡು).

ಏಳುಗೇಣಿನ ಕುದುರೆ = ಎತ್ತರದ ಕುದುರೆ; ಅತಿ ದೊಡ್ಡ ಕುದುರೆ.

ಏಳು ಭೀಳು = ಏಳುವ ಬೀಳುವ ಕ್ರಿಯೆ.

ಏಳು ಸಮ್ದುರ (ನಾ) = ಸಪ್ತಸಾಗರ; ಏಳು ಸಮುದ್ರ.

ಏಳು ಸೂಳಿ (ನಾ) = ಸೂಳೆ ಎಂದು ಬೈದವರಿಗೆ ಏಳು ಸೂಳೆ ಎಂದು ಬೈವ ಮಹಿಳೆಯರ ಪದ್ಧತಿ (ಬೈಗುಳ).

ಏಳೂರು ಸರ್ಪಂಚ (ನಾ) = ಶಿವಕುಮಾರ ನಾಗವಾರ ಎಂಬವರು ಬರೆದ ಒಂದು ಕಥಾ ಸಂಕಲನದ ಹೆಸರು.

ಏಳೆಂಟು = ಏಳು ಇಲ್ಲವೆ ಎಂಟು.

ಏಳೇಳು ಜಲ್ಮ (ನಾ) = ಏಳು ಜನ್ಮಗಳ ಅನಂತ ಭವಮಾಲೆ.

ಏಳ್ತೆ = ಏಳುತ್ತಲೆ; ಎದ್ದ ಕೂಡಲೆ.

ಏಳ್ರಾಗ = ಏಳನೆಯ ತಿಂಗಳಲ್ಲಿ; ಏಳನೇ ವರ್ಷಗಳಲ್ಲಿ.

ಏಳ್ರಾಗ ಹುಟ್ಟಿದ್ದು (ನಾ) = ಏಳನೆಯ ತಿಂಗಳಲ್ಲಿ ಹುಟ್ಟಿದವನು(ಳು) (ಬೈಗುಳ).

ಏಳ್ರಾಗ ಹುಟ್ಟು = ಏಳನೇ ತಿಂಗಳಲ್ಲಿ ಹುಟ್ಟು.

ಐ

ಐ (ಅಯ್) = ಅಯ್ಯಾ; ಅಯ್ಯೆ; ಅಯ್ಯೋ

ಐಂದಿ (ನಾ) = ಮೈಗಳ್ಳ; ಸೋಮಾರಿ.

ಐಂದಿಪನಾ (ನಾ) (ಉ.) = ಮೈಗಳ್ಳತನ.

ಐಕಾಗು = ಐಕ್ಯನಾಗು; ಲಿಂಗದೊಳಗಾಗು; ಶರೀರ ತೊರೆ.

ಐಗೋಳು (ನಾ) = ಅಯ್ಯಗಳು; ಐಯ್ಯನವರು; ಜಂಗಮರು; ಗುರುಗಳು;

ಐಗೋಳ್ಕರ್ಕೋ = ಐಯ್ಯನವರ ಪಾದ ಪೂಜೆ ಮಾಡು; ಜಂಗಮಪಾದ ಪೂಜೆ ಮಾಡು.

ಐಟು (ನಾ) = ಠೀವಿ; ಬಿಂಕ; ಒಗಾಲು; ನಟನೆ.

ಐಡಿಯಾ (ನಾ) ಇಂ. = ವಿಚಾರ.

ಐದಾರು (ನಾ) = ಐದು ಇಲ್ಲವೆ ಆರು.

ಐದು (ನಾ) = ಐದರ ಅಂಕಿ; ನಾಲ್ಕರ ನಂತರದ ಅಂಕಿ.

ಐದು ಮಂದಿಗೌಡರು = ಪಂಚೇಂದ್ರಿಯಗಳು (ಕೊಳ್ಳೂರು ಹುಸನಾಸಾಬನ ವಿಚಾರ).

ಐದೇಶಿ (ನಾ) = ಕೂಸುಹುಟ್ಟಿದ ಐದನೆ ದಿನಕ್ಕೆ ಮಾಡುವ ಹಬ್ಬ.

ಐದೇಶಿ ಕಾಣಲಾರ್ದು (ನಾ) = ಸಂಸ್ಕಾರ ಇಲ್ಲದ್ದು; ದರಿದ್ರ.

ಐದೇಶಿ ಮಾಡು (ಕ್ರಿ) = ಮಗು ಹುಟ್ಟಿದ ಐದನೇ ದಿನದ ಹಬ್ಬ ಆಚರಿಸು.

ಐನ್ (ಅ) =ಐನು; ತುರ್ತು ವೇಳೆಯಲ್ಲಿ.

ಐನ್‌ಟೇಮು (ನಾ) = ತುರ್ತುವೇಳೆ; ಇಕ್ಕಟ್ಟಿನ ಸಮಯ.

ಐನ್‌ಯಾಳ್ಯಾ (ನಾ) = ತುರ್ತು ವೇಳೆ; ಸಂದಿಗ್ಧ ಸಮಯ.

ಐನು (ನಾ) = ತುರ್ತು; ಇಕ್ಕಟ್ಟಿನ.

ಐನೂರು (ನಾ) = ಐದುನೂರು.

ಐನೋರು (ನಾ) = ಐಯ್ಯನವರು; ಜಂಗಮರು; ಅಪ್ಪಗಳು.

ಐನೋರ್ಕರ್ಕೊ = ಜಂಗಮ ಸೇವೆ ಮಾಡು; ಜಂಗಮ ಪಾದಪೂಜೆ ಮಾಡು.

ಐನೋಲಿ (ನಾ) = ಐನೊಳ್ಳಿ; ಚಿಂಚೋಳಿ ತಾಲೂಕಿನ ಒಂದು ಊರಿನ ಹೆಸರು. ಬೀದರನಲ್ಲಿ ಕನ್ನಡ ಕಟ್ಟಲು ಹೋರಾಡಿದ ಪಂಚಾಕ್ಷರಿ ಪುಣ್ಯ ಶೆಟ್ಟಿ ಎಂಬ ಹಿರಿಯ ಸಾಹಿತಿಯ ಹುಟ್ಟೂರು. ಸಾಹಿತಿ ಸಾಧನಾ ರಂಜೋಲ್ಕರರ ಹುಟ್ಟೂರು.

ಐಬಾಗು (ಕ್ರಿ) = ಕುಂದಾಗು; ಕೊರತೆಯಾಗು; ಊನಾಗು; ದೋಷ ಉಂಟಾಗು.

ಐಬಿಲ್ದು (ನಾ) ಉ. = ಕುಂದಿಲ್ಲದ್ದು; ಕೊರತೆ ಇಲ್ಲದ್ದು; ದೋಷವಿಲ್ಲದ್ದು.

ಐಬು (ನಾ) = ಕುಂದು; ಕೊರತೆ; ದೋಷ; ಊನು; ಡಾಗು; ಕಲೆ.

ಐಬು ಹತ್ತು (ಕ್ರಿ) = ದೋಷ ತಗಲು; ಕುಂದು ಉಂಟಾಗು; ಊನಾಗು.

ಐಭೋಗ (ನಾ) = ಪಂಚೇಂದ್ರಿಯ ಸುಖಭೋಗ; ಇಹಸುಖ; ವೈಭೋಗ.

ಐಯಾಚಾರ = ಐಯ್ಯತನ ದೀಕ್ಷೆ; ಜಂಗಮ ದೀಕ್ಷೆ.

ಐಯಾರಿ (ನಾ) = ಉಡುಗೊರೆ; ಹೊರೆ.

ಐಯಿ (ಅ) = ಓಹೊ; ಅಯ್ಯೊ.

ಐರಾಣಿ (ನಾ) = ಮದುವೆಯ ಕಾರಣದಲ್ಲಿ ಕುಂಬಾರನ ಕುಸುರದ ಗಡಿಗೆಗಳನ್ನು ಪೂಜಿಸಿ ತರುವುದೇ ಐರಾಣಿ: (ಐರಾಣಿಯ ಮಾಡು; ಕುಂಬಾರ ಗುಂಡಯ್ಯ! ಖಡ್ಗದ ಕೈಯಲಿ ಕೊಡದ ಮ್ಯಾಲೇನ ಬರದಾನೇ ಸೋ॥)

ಐರಾವಣ ಮೈರಾವಣ = ಪುರಾಣಪಾತ್ರಗಳು.

ಐರಿ (ನಾ) = ಕಣ್ಣೊಳಗೆ ರಕ್ತದಂತೆ ಕೆಂಪು ಉಂಟಾಗುವ ಬೇನೆ.

ಐರಿಗೈರಿ (ವಿ)= ಅಲ್ಲ ಸಲ್ಲದ; ಹಾದರದ.

ಐಲ್‌ಫೈಲ್ = ಅವಡ ಸವಡ; ಹುಚ್ಚುಚ್ಚು ಮಾತಾಡುವುದು; ಬಾಯಿಗೆ ಬಂದಂತೆ ಅಸಭ್ಯ ಮಾತಾಡುವುದು.

ಐವಜ = ಸಂಬಂಧಿಸಿದ; ಉತ್ಪನ್ನ; ಬೆಳೆ.

ಐವಾರು = ಐವರು; ಐದು ಜನರು.

ಐಷಾರಾಮು = ಸುಖಭೋಗ; ಇಹಸುಖ.

ಐಸಿರಿ (ನಾ) = ಐಶ್ವರ್ಯ; ಸಂಪತ್ತು.

ಐಸು (ನಾ) = ಸುಖ.

ಐಸ್ಸಾ (ನಾ) = ಭಾರ ಎತ್ತುವಾಗ ಕೂಲಿಕಾರರು ಏಕ ಕಂಠದಿಂದ ಹಾಕುವ ಕೂಗು.

ಒ

ಒಂಕ = ಡೊಂಕು.

ಒಂಕ ಟಿಂಕ = ಅಂಕುಡೊಂಕು.

ಒಂಕ ಮಲ್ಲಿಗಿ = ಸ್ವಸ್ತಿಕ ಮಲ್ಲಿಗೆ.

ಒಂಕಾಗು = ಓರೆಯಾಗು.

ಒಂಕಾವಲ್ಲಾ ಮಾಡು (ಕ್ರಿ) = ತಿರಸ್ಕಾರ ಮಾಡು.

ಒಂಕಾದಾರಿ = ಕ್ರಮವಲ್ಲದ ಮಾತು; ಅಕ್ರಮ ಕೆಲಸ.

ಒಂಕಿ (ವಂಕಿ) = ರಟ್ಟೆಯ ಕಡಗ; ರಟ್ಟೆಯ ಒಡವೆ; ಗರ್ಭನಿರೋಧಕ್ಕಾಗಿ ಕುಟುಂಬ ಯೋಜನೆಗಾಗಿ ಬಳಸುವ ಸಾಧನ.

ಒಂಗಳ, ವಂಗಳ (ವಿ) ಯ. = ಖರಾಬು; ಕೆಟ್ಟದು; ಕೆಟ್ಟ; ಕೇಡಿಗ.

ಒಂಚೂರು = ಒಂದಿಷ್ಟು.

ಒಂಟ = ಒಬ್ಬವ; ಒಬ್ಬ; ಏಕಾಕಿ; ಒಂದು.

ಒಂಟಗಾಲು (ನಾ) = ಒಂದೇ ಕಾಲು.

ಒಂಟಿಗ (ನಾ) = ಒಬ್ಬವ; ಒಂಟಿಗ್ಯಾ; ಏಕಾಕಿ.

ಒಂಟಿ (ನಾ) = ಒಂಟೆ; ಔರಾದ ತಾಲೂಕಿನ ಸಾರಿಗೆ ಪ್ರಾಣಿ.

ಒಂಟಿ ಗಣ್ಣು = ಒಂದೇ ಕಣ್ಣು.

ಒಂಟಿಗ್ಯಾ (ನಾ) = ಒಬ್ಬೊಂಟಿಗ; ಒಬ್ಬವ; ಏಕಾಕಿ.

ಒಂಟಿ ನಡ್ಗಿ = ಒಂಟೆಯಂತೆ ನಡಿಗೆಯವನು.

ಒಂಟಿ ಮಾರ್ಯಾಂವ = ಒಂಟೆಯಂತೆ ಮೋರೆ ಎತ್ತಿ ನಡೆವವನು.

ಒಂಟು ಗೂಗಿ = ಗೂಬೆಯಂತೆ ಏಕಾಕಿಯಾಗಿರುವಿಕೆ.

ಒಂಟು ಜಿಂದ್ಗಾನಿ (ನಾ) = ಮದುವೆಯಾಗದ ಬಾಳು; ವಿಚ್ಛೇದನ ಬಾಳು; ಏಕಾಕಿಯಾಗಿರುವಿಕೆ.

ಒಂಟೆತ್ತಿನಗಳೆ (ನಾ) = ನಡೆಯಲಾರದ ಒಕ್ಕಲುತನ.

ಒಂಟೆಳಿಸರ (ನಾ) = ಒಂದೇ ಪದರುಳ್ಳ ಮಾಲೆ, ಸರ; ಒಂಟೆಳೆಯ ಮುತ್ತಿನ ಮಾಲೆ.

ಒಂಟ್ಯಾ (ನಾ) = ಒಂಟಿಗ; ಒಬ್ಬವ.

ಒಂಟ್ಯಾ (ನಾ) = ಒಂಟೆ.

ಒಂಡು (ನಾ) = ಕೆಸರು; ರಾಡಿ; ಬಂಡು.

ಒಂದತ್ತು (ನಾ) = ಒಂದು ಹೊತ್ತು; ಒಪ್ಪೊತ್ತು; ದಿನಕ್ಕೊಂದೇ ಊಟದ ವ್ರತ.

ಒಂದಾಗಿರು (ಕ್ರಿ) = ಒಕಟ್ಟಾಗಿರು.

ಒಂದು = ಪ್ರಥಮ ಅಂಕಿ; ಏಕ.

ಒಂದು ಗುಟ್ಟು (ನಾ) = ಒಕ್ಕಟ್ಟು; ಏಕೀ.

ಒಂದೆಳಿ (ನಾ) = ಒಂದೇ ಎಸಳು (ಉದಾ:- ಒಂದೆಳೆ ಖ್ಯಾದಗಿ ನಿನಗ। ಗಂಧದ ಬಟ್ಟಲು ನನಗ).

ಒಂದೇತೀಡು = ಒಂದೇ ನಮೂನೆ; (ಉದಾ:- ಅಕ್ಕಿ ಒಂದೇ ತೀಡು ಅವಾನೋಡ್ರಿ).

ಒಂಬಾತಾಸಿ = ಹಗಲು ಮೂರು ಗಂಟೆಯ ಸಮಯ; ಮೂರನೇ ಪ್ರಹರ.

ಒಂಭತ್ತು = ಎಂಟರ ನಂತರದ ಒಂಟಂಕಿ.

ಒಂಭತ್ತುಥುಂಬು = ಹೆರಿಗೆ ದಿನ ಸಮೀಪಿಸು; ನವಮಾಸ ಭರ್ತಿಯಾಗು.

ಒಕ್ಕಲ್ಗಿತ್ತಿ (ನಾ) = ಒಕ್ಕಲಿಗನ ಹೆಂಡತಿ; ರೈತನ ಹೆಂಡತಿ; ರೈತ ಮಹಿಳೆ.

ಒಕ್ಕಲ್ಯಾ (ನಾ) = ಒಕ್ಕಲಿಗ; ಕೃಷಿಕ; ಕೃಷಿ ಕಾಯಕದವನು; ಹೊಲಗೆಲಸದವನು.

ಒಕ್ಕುಲ್ತಾನ (ನಾ) = ಒಕ್ಕಲುತನ; ಕೃಷಿ ಾಯಕ; ಕೃಷಿ.

ಒಕ್ಕುಲ್ತಾನ ಮಾಡು (ಕ್ರಿ) = ಕೃಷಿ ಕಾಯಕ ಮಾಡು.

ಒಕ್ಕುಳ = ಒಕ್ಳ; ಒಕ್ಕಳ; ಒಂದು ಮಣ.

ಒಕ್ಳ = ಒಕ್ಕಳ; ಒಂದು ಮಣ.

ಒಗಟಾ = ಒಗಟ; ಸಮಸ್ಯೆ; ಒಡ್ಗಗತೆ; ತಿಳಿಯುವ ಕತೆ; ಸಮಸ್ಯೆ.

ಒಗಟಾ ಬಿಡ್ಸು (ಕ್ರಿ) = ಒಗಟದ ಅರ್ಥ ಹೇಳು; ಸಮಸ್ಯೆಯನ್ನು ಪರಿಹರಿಸು; ಒಡ್ಗಗತೆಯನ್ನು ವಿವರಿಸಿ ಹೇಳು.

ಒಗಟಾಹೇಳು (ಕ್ರಿ) = ತಿಳಿಯುವ ಕತೆ ಹೇಳು; ಸಮಸ್ಯೆಯೊಡ್ಡು; ಒಡ್ಗಗತೆ ಹೇಳು.

ಒಗಟಾಹಾಕಿ ಹೆಸರು ಹೇಳು = (ಮದು ಮಕ್ಕಳು) ಒಗಟದೊಂದಿಗೆ ತನ್ನ ಪತಿ ಇಲ್ಲವೆ ಪತ್ನಿಯ ಹೆಸರು ಹೇಳು.

ಒಗಡು (ನಾ) = ಕಬ್ಬಿನ ದಂಟಿನ ಇಲ್ಲವೆ ಜೋಳದ ದಂಟಿನ ಸೊಪ್ಪು.

ಒಗರಡಕಿ = ಬೇಯಿಸದ ಹಸಿಯಡಕೆ.

ಒಗಾಲು(ನಾ) = ವೈಯಾರ; ಡೌಲು.

ಒಗಾಲ್ಮಾಡು (ಕ್ರಿ) = ವೈಯಾರ ಮಾಡು; ಡೌಲು ಮಾಡು (ಗಾದೆ:- ಒಗಾಲ್ಮಾಡಿ ಒಗಿಲಾಕ್ಹೋದ್ರ ಹಳ್ಡಾನ್ಕಲ್ಬಂದು ತೊಡಿಗಿ ಬಡಿತಂತ)

ಒಗಿ (ಕ್ರಿ) = ಒಗೆ; ಬಟ್ಟೆ ತೊಳೆ.

ಒಗುಡು (ನಾ) = ಒಗಡು (ನೋಡಿರಿ)

ಒಗುರು = ಒಗರು; ಒಂದು ಪ್ರಕಾರದ ಬಾಯಿ ರುಚಿ; ಸೊಕ್ಕು; ಕುವ್ವತ್ತು; ತಾಕತ್ತು (ಉದಾ:- ಇವುಂದು ಒಗುರೇಟದಾ ನೋಡು).

ಒಗುರೊಗುರು (ದ್ವಿ) = ಅತಿಯೊಗರು; ಒಗರು ಮಿಶ್ರ ರುಚಿ; ಒಗರೊಗರು.

ಒಗುತೋರ್ಸು (ನಾ) = ಸೊಕ್ಕು ತೋರಿಸು.

ಒಗ್ಗಾಲಾಗು (ಕ್ರಿ) = ಉರುಳು; ಹೊರಳು; ಬಂಡಿಯ ಒಂದು ಗಾಲಿ ಉಚ್ಚಿ ಹೋಗು.

ಒಗ್ಗಾಲಿ = ಒಂದೇ ಗಾಲಿ.

ಒಗ್ಗಾಲು = ಒಂದೇ ಕಾಲು; ಒಂದೇಗಾಲಿ; ಬಂಡಿಯ ಉರುಳುವಿಕೆ.

ಒಗ್ಗಾ (ನಾ) = ಒಗಟಾ (ನೋಡಿರಿ).

ಒಗ್ತನ = ಒಗೆತನ; ವಧುವರ ಸಂಬಂಧ; ನೆಂಟಸ್ತನ; ನಂಟು.

ಒಗ್ಯಾಣ (ನಾ) = ಒಗೆಯುವಿಕೆ; ಬಟ್ಟೆ ತೊಳೆಯುವಿಕೆ.

ಒಗ್ತಾನ = ಒಗ್ತನ; ಒಗೆತನ; ವಧುವರ ಸಂಬಂಧ; ನೆಂಟಸ್ತನ; ನಂಟು.

ಒಗ್ರಾಣಿ (ನಾ) = ಮಂಡಳ್ಳು ತೋಯಿಸಿ ಮಾಡಿದ ಸೂಸಲ; ಫೋಣ್ಣಿ; ಬಗಾರು.

ಒಚ್ಚ (ವಚ್ಚ) = ಚಾವಟ; ಹುರುಟ; ವಾಚಾಳಿ.

ಒಚ್ಚಿ = ಒಂದು; ಏಕ (ಹುಣಸೆ ಬೀಜದಾಟದಲ್ಲಿ ಬಳಸುವ ಒಚ್ಚಿ, ದೋನಿ, ತೀನಿ, ಚಾರಿ, ಛಕ್ಕಾ ಎಂಬ ಒಂಟಂಕಿಗಳು.)

ಒಜ್ಜಿ = ಒಜ್ಜೆ; ಭಾರ.

ಒಜ್ಜಿ ಕುಮ್ಮಾ = ಅತಿಭಾರ; ಹೆಚ್ಚುಭಾರ.

ಒಜ್ಜಿಯಮ = ಅತಿಭಾರ.

ಒಜ್ಜಿ ಹೊರು (ಕ್ರಿ)= ಭಾರ ಹೊತ್ತು ಕೊ; ಜವಾಬ್ದಾರಿವಹಿಸು.

ಒಜ್ಜುರು (ಮಜ್ಜುರು) = ವಜ್ರ.

ಒಟಒಟ (ಧ್ವಿ) = ಒಟಗುಟ್ಟುವಿಕೆ; ಬಾಯಿ ಬಡಿಯುವಿಕೆ.

ಒಟಒಟ್ಯಾ (ವಟವಟ್ಯಾ) (ನಾ) = ಒಂದು ತರಹದ ಕಾಡು ಸಸ್ಯ.

ಒಟ್ಸಾರೆ = ಒಟ್ಟಿನಲ್ಲಿ; ಇಡಿಯಾಗಿ; ಪೂರ್ತಿಯಾಗಿ.

ಒಟ್ಟಿ (ನಾ) = ರೊಟ್ಟಿ (ಬಾಲ ಭಾಷೆ)

ಒಟ್ಟು = ಒಟ್ಟಿಗೆ; ಎಲ್ಲ ಕೂಡಿ; ಮೇಜಾನು.

ಒಟ್ಟು (ಕ್ರಿ) = ಒಂದೆಡೆ ಸೇರಿಸು; ಗುಂಪುಗೊಳಿಸು; ಹೊಂದಿಸು; ಬಣವೆ ಮಾಡು.

ಒಡ ಒಡ (ಧ್ವಿ) = ಸುಮ್ಮ ಸುಮ್ಮನೆ; ಕಷ್ಟ ಸಹಿಸುತ್ತ; ಉಪವಾಸ ವನವಾಸ ತಿರುಗುತ್ತ.

ಒಡ ಒಡ ತಿರುಗು = ಸುಮ್ಮಸುಮ್ಮನೆ ಸಂಚರಿಸು; ಉಪವಾಸ ವನವಾಸ ಮಾಡು.

ಒಡಪು (ನಾ) = ಒಡಬು; ವೀರಭದ್ರ ದೇವರ ಒಡಬು; ಬೆಡಗು; ಬೆಡಗಿನ ವಚನ; ಒಗಟು; ಸಮಸ್ಯೆ. (ಒಡಪು:- ಆಹಾರೆವೀರಾ.... ಆಹಾರೆ ಶರ್ಬಾ..... ಕರುಣೆಸೋ ಕರುಣೆಸೋ.... ಕಾಳಿಂಗ ರುದ್ರ.... ಹ್ಯಾಂಗ್ಬರ್ತಾನ್ವರ್ಲಿ).

ಒಡಬು = ಒಡಪು (ನೋಡಿರಿ).

ಒಡಿ (ನಾ) = ಒಡವೆ; ಆಭರಣ; ಗೊಡವೆ.

ಒಡಿ (ಕ್ರಿ) = ಸೀಳು; ಬಿರಿ; ಚೂರು ಮಾಡು; ಪುಡಿ ಮಾಡು; ಓದು; ಅರ್ಥಹೇಳು.

ಒಡಿಒಡಿಬಾ = ಓಡೋಡಿಬಾ.

ಒಡಿಮುರಿ (ಕ್ರಿ) = ಹುರಿ ಹೊಡೆ; ಹಿಂಡು.

ಒಡಿ ಹಿಡಿ (ಕ್ರಿ) = ಗೊಡವೆ ಬಯಸು; ಗೆಳೆತನ ಮಾಡು.

ಒಡುಕು (ವಿ) = ಒಡೆದ; ಸೀಳಿದ; ಬಿರುಕಾದ; ಒಡಕು.

ಒಡುಕುಬಾಯಿ (ನಾ) = ನಾಲಗೆ ಹಿಡಿತವಿಲ್ಲದ ಬಾಯಿ; ಸಡಿಲು ಬಿಟ್ಟಬಾಯಿ; ಗುಟ್ಟು ರಟ್ಟು ಮಾಡುವ ಬಾಯಿ.

ಒಡ್ಗತಿ (ನಾ) = ಒಡೆಯುವ ಕತೆ; ತಿಳಿಯುವ ಕತೆ; ಒಗಟು; ಸಮಸ್ಯೆ.

ಒಡ್ಡ (ನಾ) = ಗಣೆಗಲ್ಲು ಒಡೆಯುವ ಕೆಲಸದವನು; ಕಲ್ಲು ಕೆತ್ತುವವನು.

ಒಡ್ಡತಿ (ನಾ) = ಒಡ್ಡನ ಹೆಂಡತಿ; ಒಡ್ಡನ ಮನೆಯ ಹೆಂಗಸು; ಒಡ್ಡರವಳು.

ಒಡ್ಡರ್ಭಂಡಿ = ಕಲ್ಲು ಸಾಗಣೆಗಾಗಿ ಒಡ್ಡರು ಬಳಸುವ ಕೋಣಗಳೆಳೆವ ಬಂಡಿ.

ಒಡ್ಡು (ನಾ) = ಏರಿ; ಅರಣೆ; ಅಣೆಕಟ್ಟು; ಹೊಡ್ಡು; ದೊಡ್ಡಸ್ತಿಕೆ; ಬಡಿವಾರ; ಬಾಯಿಬಡಾಯಿ.

ಒಡ್ಡು (ಕ್ರಿ) = ಇಡು; ಅಡ್ಡಿ ಉಂಟು ಮಾಡು; ವಿರೋಧಿಸು; ರೋಕು ಮಾಡು.

ಒಡ್ತಾಳಿ (ನಾ) = ಪಾಸಂಗು; ಪರಡೆ ಸಮವಾಗಿ ನಿಲ್ಲುವಂತೆ ಮಾಡಲು ಬಳಸುವ ಭಾರ.

ಒಡ್ತಾಳಿಕಟ್ಟು (ಕ್ರಿ) = ಪಾಸಂಗ ಕಟ್ಟು; ಸಮತೂಕಗೆಳಿಸು.

ಒಡ್ಮುರಿ (ಕ್ರಿ) = ಒಡಿಮುರಿ; ಹುರಿಹೊಡೆ; ಕೈಕಾಲು ತಿರುವು; ನುರಿಯಾಗಿ ಹಿಂಡು.

ಒಡ್ಮುರ್ಕಿ = ಖೊಟ್ಟಗುಣ; ಕುತ್ತಿಗೆ ಕೊಯ್ವ ಗುಣ.

ಒಡ್ಮುರ್ದು ಕಟ್ಟು (ಕ್ರಿ) = ಕೈಕಾಲು ಬಿಗಿದು ಕಟ್ಟು.

ಒಡ್ಯಾಕಲ್ಲು (ನಾ) = ದ್ವಿದಳ ಧಾನ್ಯಗಳನ್ನು ಒಡೆದು ಬೇಳೆ ಮಾಡುವ ಬೀಸು ಕಲ್ಲು.

ಒಣಉಸಾಬರಿ = ಫಲಕೊಡದ ದುಡಿಮೆ.

ಒಣಕಿ (ಒಣ್ಕಿ) (ನಾ) = ಒನಕೆ; ಭತ್ತ, ನವಣೆ ಇತ್ಯಾದಿಗಳನ್ನು ಒರಳಲ್ಲಿ ಹಾಕಿ ಥಳಿಸುವ ಸಾಧನ (ಗಾದೆ:- ಒಳ್ಳಾಗ ನೆತ್ತಿ ಇಟ್ಟು ಒಣಕಿ ಪೆಟ್ಟಿಗಂಜ್ದು ಹ್ಯಾಂಗ)

ಒಣ್ಕಿ (ನಾ) = ಒನಕೆ (ಒಣಕಿ ನೋಡಿರಿ).

ಒಣ್ಕಿಧಾರಿ ಮಳಿ (ನಾ) = ಮುಸಲ ಧಾರೆಯ ಮಳೆ.

ಒಣಖೆಮ್ಮು (ನಾ) = ಕಫಬಾರದ ಕೆಮ್ಮು; ಬರೀ ಕೆಮ್ಮು.

ಒಣಗಟ್ಗಿ (ನಾ) = ಒಣಗಿದ ಕಟ್ಟಿಗೆ; ಬಡಕಲುಗೊಂಡಶರೀರ; ಸೊರಗಿದ ಮೈ.

ಒಣಗಿ (ಒಣ್ಗಿ) (ನಾ) = ಪಲ್ಯ; ರೊಟ್ಟಿಗೆ ದಿಕ್ಕು.

ಒಣಗಿದ ಹೇಲು (ನು) = ಬಡಕಲು ಶರೀರ.

ಒಣಗಿಸು (ಕ್ರಿ) = ಒಣಗುವಂತೆ ಮಾಡು; ನೀರು ಆರುವಂತೆ ಮಾಡು; ಹಸಿ ಆರಿಸು.

ಒಣಗು (ಕ್ರಿ) = ಹಸಿ ಆರು; ತೇವ ಇಲ್ಲದಾಗು.

ಒಣಬಡಿವಾರ (ನಾ) = ದೊಡ್ಡಸ್ತಿಕೆ.

ಒಣಬರ (ನಾ) = ಮಳೆ ಬರದೆ ಉಂಟಾದ ಬರ.

ಒಣಬಾರ (ನಾ) = ಮಳೆ ಬಾರದಿರುವಿಕೆ; ಮೋಡಗಳು ಇಲ್ಲದಿರುಪಿಕೆ; ಒರಪು.

ಒಣಬಾರ ಭೀಳು (ಕ್ರಿ) = ಮಳೆಬೀಳದಿರು; ಮೋಡಗಳಿಲ್ಲದಿರು; ಒರಪು ಕೊಡು.

ಒಣರೊಟ್ಟಿ (ನಾ) = ಒಣಗಿದ ರೊಟ್ಟಿ; ಬರಿ ರೊಟ್ಟಿ; ಪಲ್ಯ ಒಣಗಿ ಇಲ್ಲದ ರೊಟ್ಟಿ; ಖಂಕು ರೊಟ್ಟಿ.

ಒಣಾಶಾಣೆತಾನ (ನಾ) = ಕೆಲಸಕ್ಕೆ ಬಾರದ ಜಾಣತನ; ಉಪಯೋಗವಿಲ್ಲದ ಪಾಂಡಿತ್ಯ.

ಒಣ್ಯಾಕು (ಕ್ರಿ) = ಸೂರ್ಯನ ಬಿಸಿಲಿನಲ್ಲಿ ಕಾಳು, ಒದ್ದೆ ಬಟ್ಟೆ ಇತ್ಯಾದಿ ಒಣಗಿಸಲು ಹರಡು, ಪಸರಿಸು.

ಒತ್ತವ್ರಿ (ನಾ) = ಒತ್ತವರಿ; ಗಂಟಲು ಮಗ್ಗುಲಿನ ಗಡ್ಡೆ ಬೇನೆ; ಟಾನ್ಸಿಲ್ಸ್.

ಒತ್ತಿಕ್ಕು (ಕ್ರಿ) = ಒತ್ತಿಡು; ಒತ್ತೆ ಇಡು; ಅಡವು ಇಡು.

ಒತ್ತಿಡು (ಕ್ರಿ) = ಒತ್ತಿಕ್ಕು; ಒತ್ತೆ ಇಡು; ಅಡವು ಇಡು.

ಒತ್ತು (ಕ್ರಿ) = ತಿನ್ನು; ಹೊಡಿ; ನೂಕು; ತಳ್ಳು.

ಒತ್ತುಣ್ಕಿ = ಒತ್ತುವಿಕೆ; ಒತ್ತಡ; ತಳ್ಳುವಿಕೆ; ನೂಕುಪಿಕೆ.

ಒತ್ಯಾಕು = ನೂಕು; ಮುಗಿಸಿಬಿಡು; ಕೊಲ್ಲು.

ಒತ್ಲ (ನಾ) = ನೀರು ಕಾಸುವ ಒಲೆ. (ಒಗಟು:- ಅಮಾಸಿ ಕತ್ಲಾ। ಮನಿಹಿಂದ ಒತ್ಲ। ಹೆಸರು ಕೇಳ್ಗೋರ್ಹೆಣಾ ಎತ್ಲಾ).

ಒದರಾಟಾ = ಚೀರಾಟ; ಕೂಗಾಟ; ಕಿರುಚಾಟ.

ಒದರಾಡು (ಕ್ರಿ) = ಚೀರಾಡು; ಕೂಗಾಡು; ಕಿರುಚಾಡು.

ಒದರು (ಕ್ರಿ) = ಕೂಗು; ಚೀರು; ಕಿರುಚು.

ಒದಿ (ಕ್ರಿ) = ಒದೆ; ತುಳಿ; ಕಾಲಿನಿಂದ ಹೊಡೆ; ಕಾಲಿನಿಂದ ನೂಕು; (ಎಮ್ಮೆ) ಹಾಲು ಹಿಂಡುವದನ್ನು ನಿಲ್ಲಿಸು (ಉದಾ:- ಎಮ್ಮಿ ಒದ್ದಾದ, ಹಾಲು ಸಿಗಾಲ) ಗಾದೆ:- ಬಗ್ದುರ ಒದಿತಾರ; ಒದ್ರ ಬಗ್ತಾರ.

ಒದ್ದು ಒಣಹಾಕು (ಕ್ರಿ) = ಒದೆದು ಮೆತ್ತಗೆ ಮಾಡು; ಕಾಲಿನಿಂದ ಒದ್ದು ಒದ್ದು ಸುಸ್ತು ಮಾಡು; ಒದ್ದು ಏಳದಂತೆ ಮಾಡು; ನುಗ್ಗು ಮಾಡು; ಹಣ್ಣು ಮಾಡು.

ಒನಿ (ಕ್ರಿ) = ಒನೆ; ಮೈಯನ್ನು ತೂಗಾಡು; ಮೊರದಿಂದ ಕಾಳು ಹಸನು ಮಾಡು; ನುಗ್ಗು ಮಾಡು.

ಒನಿ ಉಚ್ಚು (ಕ್ರಿ) = ಚೆನ್ನಾಗಿ ಥಳಿಸು; ಹೊಡೆ; ನುಗ್ಗು ಮಾಡು; ಫಜೀತಿ ಮಾಡು; ಕಾಳು ಹಸನು ಮಾಡು.

ಒಪಾರಿ = ಒಮ್ಮಗಲು; ಅರೆಮಗ್ಗಲು.

ಒಪಾರಿ ಬ್ಯಾನಿ = ಒಮ್ಮಗ್ಗಲು ತಲೆಶೂಲೆ; ಅರೆತಲೆಶೂಲೆ; ಅದ್ದಾತೆಲಿ ಬ್ಯಾನಿ.

ಒಪ್ಕೊ (ಕ್ರಿ) = ಒಪ್ಪಿಕೊ; ಒಪ್ಪು; ಸಮ್ಮತಿಸು.

ಒಪ್ಗಿ = ಒಪ್ಪಿಗೆ; ಸಮ್ಮತಿ; ಅನುಮೋದನೆ.

ಒಪ್ಪು (ಕ್ರಿ) = ಸಮ್ಮತಿಸು; ಶೋಭಿಸು; ಮೆಚ್ಚಿಗೆಯಾಗು.

ಒಪ್ಪೊತ್ತು = ಒಂದತ್ತು; ದಿನದಲ್ಲಿ ಒಂದೇ ಊಟ ಮಾಡುವ ವ್ರತ.

ಒಪ್ಸು (ಕ್ರಿ) = ಒಪ್ಪಿಸು; ಕೊಡು; ಅರ್ಪಿಸು; ವಹಿಸಿ ಕೊಡು.

ಒಬ್ಬ (ನಾ) = ಏಕವ್ಯಕ್ತಿ.

ಒಬ್ಬಾಕೆ (ನಾ) = ಒಂಟಿ ಮಹಿಳೆ; ಒಬ್ಬವಳು.

ಒಬ್ಬಿ = ಒರಳಲ್ಲಿ ಒಂದು ಸಲಕ್ಕೆ ಥಳಿಸಲು ಬೇಕಾಗುವಷ್ಟು ಕಾಳು; ಕುಟ್ಟಲು ಬಳಸುವ ಕಾಳಿನ ಒಂದೊಂದು ಕಂತು, ಕುಂಪಿ.

ಒಬ್ಬೂರು (ನಾ) = ಒಬ್ಬರು; ಒಬ್ಬ.

ಒಬ್ರಿಬ್ರು (ನಾ) = ಒಂದಿಬ್ಬರು.

ಒಬ್ಬೊಂಟಿಗ್ಯಾ = ಒಬ್ಬೊಂಟಿಗ; ಏಕಾಕಿ; ಒಂಟು ವ್ಯಕ್ತಿ.

ಒಬ್ರೂ ಒಬ್ರೂ (ದ್ವಿ) = ಒಬ್ಬೊಬ್ಬರಾಗಿ; ಒಬ್ಬರಹಿಂದೆ ಇನ್ನೊಬ್ಬರು.

ಒಮ್ಮ = ಒಮ್ಮೆ; ಒಂದು ಸಲ; ಒಂದು ಬಾರಿ.

ಒಮ್ಮತ = ಒಂದು ಮನಸ್ಸು; ಏಕಾಭಿಪ್ರಾಯ.

ಒಮ್ಮನ (ನಾ) = ಒಮ್ಮನಸ್ಸು; ಒಂದು ಮನಸ್ಸು; ಒಂದು ಮಾನ; ನಾಲ್ಕು ಸೇರಿನ

ಅಳತೆಮಾನ. (ವಚನ:- ಒಮ್ಮನವಾದರೆ ಒಡನೆ ನುಡಿವನು, ಇಮ್ಮನವಾದರೆ ನುಡಿಯನು-ಬಸವಣ್ಣ).

ಒಮ್ಮಬೀ = ಒಂದು ಸಲವೂ.

ಒಮ್ಮಾರಾ = ಒಮ್ಮೆಯಾದರೂ.

ಒಮ್ಮಿಂದೊಮ್ಮೆ = ಏಕಾಏಕಿ; ಥಟ್ಟನೆ; ಒಂದೇ ಸಲಕ್ಕೆ.

ಒಮ್ಮಿಲೆ = ಒಮ್ಮಿದೊಮ್ಮೆ; ಏಕಾಏಕಿ.

ಒಮ್ಮನ (ನಾ) = ನಾಲ್ಕು ಸೇರಿನ ಒಂದು ಮಾನ; ಮೂರು ಸೇರಿನ ಒಂದು ಮಾನ; ಒಮ್ಮನ.

ಒಮ್ಮೊಮ್ಮ = ಒಂದೊಂದು ಸಲ; ಒಮ್ಮೊಮ್ಮೆ.

ಒಯ್ಯಾಟೆ = ಒಯ್ಯುವೆಯಂತೆ.

ಒಯ್ಯಾರ (ನಾ) = ಬೆಡಗು; ಬಿನ್ನಾಣ; ಸೊಗಸು; ಅಂದ.

ಒಯ್ಯಾರಿ (ನಾ) = ಒಯ್ಯಾರಗಿತ್ತಿ; ಡೌಲುಗಾರ್ತಿ.

ಒಯ್ಯಿ (ಕ್ರಿ) = ತೆಗೆದುಕೊಂಡು ಹೋಗು; ಸಾಗಿಸು; ಕರೆದುಕೊಂಡು ಹೋಗು.

ಒರಬರ (ದ್ವಿ) = ಒದರುವಿಕೆ; ವಾಚಾಳಿತನ.

ಒರಗು (ನಾ) = ಮಲಗು; ನಿದ್ದೆ ಹೋಗು; ಆತುಕೊಳ್ಳು; ಪವಡಿಸು; ಆತುಕೊಂಡು ಮಲಗು; ರತಿ ಕೂಟಮಾಡು; ಹಾದರ ಮಾಡು.

ಒರತಿ (ಒರ್ತಿ) = ಗುಂಡ; ಕುಂಡ; ಸೆಲೆ; ಝರಿ; ಹರಿವ ಹಳ್ಳದ ಮಗ್ಗುಲಲಿ ತೋಡಿದ ಗುಂಡ; ಬೆಂಚಿ; ಒರವಿ; ದೈನಿಕ; ನಿರಂತರ.

ಒರಪು (ನಾ) = ಮಳೆಬಾರದಿರುವಿಕೆ; ಮೋಡಗಳು ಇಲ್ಲದಿರುವಿಕೆ; ನಿರಭ್ರತೆ.

ಒರಪುಕುಡು (ಕ್ರಿ) = ಮಳೆಬರದಿರು; ಮೋಡಗಳಿಲ್ಲದಿರು.

ಒರವಿ = ಒರತಿ; ಒರ್ತಿ; ದೈನಿಕ.

ಒರಸು (ಒರ್ಸು) (ಕ್ರಿ) = ತೀಡು; ತಿಕ್ಕು; ಬಟ್ಟೆಯಿಂದ ಒತ್ತಿ ತೆಗೆ; ಲೇಪಿಸು; ಬಳಿ.

ಒರಿ (ಕ್ರಿ) = ಒರೆ; ತಗಣೆಯನ್ನು ಒರೆಸಿಕೊಲ್ಲು; ಹೇನನ್ನು ಉಗುರಿನಿಂದ ಕೊಲ್ಲು; ಸೊಕ್ಕು ಮುರಿ.

ಒರಿಗಿ ಹಚ್ಚು (ಕ್ರಿ) = ಒರೆಗೆ ತಿಕ್ಕಿ ನೋಡು; ಪರೀಕ್ಷಿಸು; ಚಿನ್ನವನ್ನು ಪರೀಕ್ಷಿಸು.

ಒರುಗು (ಕ್ರಿ) = ಒರಗು; ಮಲಗು; ನಿದ್ದೆಹೋಗು; ಆತುಕೊಳ್ಳು; ಪವಡಿಸು; ಹಾದರ ಮಾಡು.

ಒರ್ತಿ (ನಾ) = ಒರತೆ; ನೀರು ವಸರುವ ತಗ್ಗು; ಝರಿ; ಚಿಲುಮೆ; ನೀರಿನ ಗುಂಡ; ರೇತಿಯಲ್ಲಿ ತೋಡಿದ ಗುಂಡ.

ಒರ್ಸು (ಕ್ರಿ) = ಒರೆಸು; ತಿಕ್ಕು; ಸಿವುಟು.

ಒಲಿ (ನಾ) = ಒಲೆ; ಮೂರು ಕಲ್ಲಿನ ಕಿಚ್ಚಿನ ಸಾಧನ.

ಒಲಿ (ಕ್ರಿ) = ಒಪ್ಪು; ಸಮ್ಮತಿಸು; ಬಯಸು.

ಒಲಿಸು = ಒಲಿಯುವಂತೆ ಮಾಡು; ಒಪ್ಪಿಸು.

ಒಲಿ ಸಾಣ್ಣಿ = ಒಲೆಯ ಸಾರಣೆ ಒಲೆಯನ್ನು ಸಾರಿಸುವಿಕೆ.

ಒಲ್ಗುಣಿ (ನಾ) = ಜೋಳದ ಸೀತನಿ ಸುಡಲು ಬಳಸುವ ತಗ್ಗಿನ ಒಲೆ; ಕಿಚ್ಚಿನಲ್ಲಿ

ಸೀತನಿ ಸುಡಲು ಸಾಧ್ಯವಿರುವ ಒಲೆಯ ಕುಣಿ.

ಒಲ್ಲ (ನಿ) = ಬೇಕಿಲ್ಲ (ಗಾದೆ:- ಒಲ್ಲದ್ದು ಬಂದ್ರಬೆಲ್ಲಾ ಬೀ ಕಲ್ಲೆ).

ಒಲ್ಲ ಒಂಕ ಮಾಡು (ಕ್ರಿ) = ತಿರಸ್ಕಾರ ಸೂಚಿಸು.

ಒಲ್ಲದ್ದು ಬಂದರೆ = ಬೇಡವಾದರೆ

ಒಲ್ಲಿ (ಅ) = ಆ ಅಲ್ಲಿ; ಅದೊ ಅಲ್ಲಿ.

ಒಲ್ಲೆ (ಅ) = ಆ ಅಲ್ಲೆ.

ಒಸರು (ಕ್ರಿ) = ಜಿನುಗು; ಸೋರು.

ಒಳ ಉರಿ = ಕಾಣದ ಜ್ವರ; ಒಳ ಜ್ವರ.

ಒಳ ಉಸುಲು = ಒಳ ಅಳತೆ; ವಿಸ್ತೀರ್ಣ.

ಒಳಕ = ಒಳಗೆ.

ಒಳಕಾತ (ಅ) = ಒಳಗೆ; ಇನ್ನೂ ಒಳಗೆ; ಒಳಗಡೆ.

ಒಳಕ್ವಾಟಿ (ನಾ) = ಕೋಟೆಯ ಒಳಭಾಗ; ಒಳಗಿನ ಕೋಟೆ; ಬೀದರ ಕೋಟೆಯ ಒಳಗಿರುವ ಒಳಕೋಟೆ ಎಂಬ ಊರು.

ಒಳಖಿಂಡಿ = ಒಳ ಕಿಂಡಿ; ಹುಮನಾಬಾದ ತಾಲೂಕಿನ ಒಂದು ಹಳ್ಳಿಯ ಹೆಸರು.

ಒಳಗ = ಒಳಗೆ; ಒಳಗಡೆ; ಅಂತರಂಗದಲ್ಲಿ (ಗಾದೆ:- ಒಳಗ ಒಡ್ಮುರ್ಕಿ; ಹೊರ್ಗ ಪ್ರೇಮುಣ್ಕೆ).

ಒಳಗಾಯ (ನಾ) = ಕಂಡುಬಾರದ ಒಳಪೆಟ್ಟು.

ಒಳಗುಟ್ಟು = ಒಳಗಿನ ಗುಟ್ಟು; ರಹಸ್ಯ; ಮುಚ್ಚಿಟ್ಟ ವಿಷಯ.

ಒಳಗೊಳಗ (ದ್ವಿ) = ಒಳಗೊಳಗೆ; ಅಂತರಂಗದಲ್ಲಿ.

ಒಳಜಾತಿ (ನಾ) = ಉಪಜಾತಿ.

ಒಳಪೆಟ್ಟು = ಗಾಯವಿಲ್ಲದ ಹೊಡೆತ; ಕಂಡು ಬಾರದ ಪೆಟ್ಟು.

ಒಳಬಾಗ್ಲು (ನಾ) = ಬಾಗಿಲಿನ ಒಳಭಾಗ; ಒಳಕೋಣೆಯ ಬಾಗಿಲು.

ಒಳಬೇಲಿ (ನಾ) = ಮುಖ್ಯಬೇಲಿಯ ಒಳಗಿರುವ ಇನ್ನೊಂದು ಬೇಲಿ; ಬೇಲಿಯ ಒಳ ಮಗ್ಗಲು.

ಒಳಬ್ಯಾನಿ (ನಾ) = ಕಂಡು ಬಾರದ ಬೇನೆ; ಗುಪ್ತರೋಗ.

ಒಳಿ = ಸಾಲು; ಪುಸ್ತಕದಲ್ಲಿಯ ಬರೆವಣಿಗೆಯ ಸಾಲು.

ಒಳ್ಪಾರ್ಸಿ = ಒಳ ಮಗ್ಗಲು.

ಒಳ್ಮುಚ್ಯಾ (ನಾ) = ಒಳಮುಚ್ಚುಗ; ಮುಟ್ಟಿದ ಕೂಡಲೆ ಒಳಗೆ ಮುಚ್ಚಿಕೊಳ್ಳುವ ಎಲೆಗಳುಳ್ಳ ಗಿಡ; ಮುಟ್ಟಿದರೆ ಮುನಿ ಎಂಬಗಿಡ.

ಒಳ್ಯಾಕ = ಒಳಗೆ; ಅತಿ ಒಳಗೆ.

ಒಳ್ಳಬರ್ಿ = ಒರಳು ಒರೆಸುವ ಬಟ್ಟೆ.

ಒಳ್ಳು (ನಾ) = ಬಂಡೆಗಲ್ಲಿನಲ್ಲಿ ಕೊರೆದ ಕುಳಿ; ಕಾಳುಥಳಿಸಲು, ಭತ್ತ, ಮೆಣಸಿನ ಕಾಯಿ ಕುಟ್ಟಲು ಬಳಕೆಯಾಗುವ ಕುಳಿಯುಳ್ಳ ಬಂಡೆಗಲ್ಲು (ಗಾದೆ:- ಒಳ್ಳಾಗ ನೆತ್ತಿ ಇಟ್ಟು ಒಣಕಿ ಪೆಟ್ಟಿಗಿ ಅಂಜಿದ್ರ ಹ್ಯಾಂಗ?)

ಒಳ್ಳು (ಕ್ರಿ) = ಕರೆ; ಒರಲು; ಜೋರಾಗಿ ಕೂಗು; ಹಕಾರಿ ಹೊಡೆ.

ಒಳ್ಳುಕಲ್ಲು (ನಾ) = ಒರಳು ಮತ್ತು ಬೀಸುವಕಲ್ಲು; ಒರಳು ಕಲ್ಲಿನ ಪೂಜೆಯ ಶಾಸ್ತ್ರ.

ಒಳ್ಳುಕಲ್ಲು ಪೂಜೆ ಮಾಡು = ಮದುವೆ ಸಮಾರಂಭಕ್ಕೆ ಮುನ್ನ ಒರಳುಕಲ್ಲುಗಳಿಗೆ ಪೂಜಿಸುವ ಕ್ರಿಯೆ ನಡೆಸು.

ಒಳ್ಳೆ (ವಿ) = ಉತ್ತಮ.

ಒಳ್ಳೆಣ್ಣಿ (ನಾ) = ಉಂಬುವ ಎಣ್ಣೆ; ಸೈಯೆಣ್ಣೆ.

ಒಳ್ಳೆತಾನ (ನಾ) = ಒಳ್ಳೆಯತನ; ಸಜ್ಜನಿಕೆ.

ಒಳ್ಳೆದು (ನಾ) = ಒಳ್ಳೆಯದು; ಉತ್ತಮವಾದುದು; ಒಳ್ಳಿತು; ಆಗಲಿ.

ಒಳ್ಳೆ ಮಾತಿಲಿ = ಸರಳ ರೀತಿಯಿಂದ; ವಿನಯ ಪೂರ್ವಕ; ಒಳ್ಳೆತನದಿಂದ.

ಒಳ್ಳೊಳ್ಳಿ (ದ್ವಿ) = ಕೂಗಿಕೂಗಿ; ಕರೆ ಕರೆದು; ಒದರಿ ಒದರಿ.

ಒಳ್ಳೊಳ್ಳೆ (ದ್ವಿ) = ಉತ್ತಮೋತ್ತಮ.

ಒಳ್ಳ್ಯಾಂವ = ಒಳ್ಳೆಯವನು.

ಒಳ್ಳ್ಯಾಕಿ = ಒಳ್ಳೆಯವಳು.

ಒಳ್ಳ್ಯೋರು (ನಾ) = ಒಳ್ಳೆಯವರು; ಒಳ್ಳಿದರು. (ಗಾದೆ: ಒಳ್ಳ್ಯೋರ್ಜೀವಾ ಉಳಾಗಡ್ಡಿ ಮ್ಯಾಲಂತ)

ಓ

ಓ = ಅಹೋ; ಹೋ; ಇಲ್ಲಿದ್ದೇನೆ; ಕರೆದುದಕ್ಕೆ ಇಲ್ಲಿದ್ದೇನೆಂಬ ಉತ್ತರ; ಎಲ್ಲಿದ್ದಿರಿ ಎಂಬ ಕರೆ.

ಓಂ = ಓಂಕಾರ; ಓಮ (ಕುಟ್ಟುವ ಹಾಡು:- ಓಮೆಂದು ಕುಟ್ಟಬಾರೆ। ಓಮೆಂದು ಬೀಸಬಾರೆ। ಓಂ ಸೋಮ ಎರಡು। ತಿಳಿಯ ಬೇಕೆ ನಾರಿ। ಹಾಕವ್ವ ಯಾರಿ।।)

ಓಂಬಸವ (ನಾ) = ಓಂಕಾರ ಸ್ವರೂಪಿ ಬಸವಣ್ಣನವರ ಧ್ಯಾನಮಂತ್ರ; ಪಠನ ಮಂತ್ರ; ಪರಸ್ಪರ ಸಲ್ಲಿಸುವ ನಮಸ್ಕಾರ.

ಓಟರ್ (ನಾ) ಇಂ. = ಮತದಾರ.

ಓಟು (ನಾ) ಇಂ. = ಮತ.

ಓಟು = ಅದೋ ಅಷ್ಟು.

ಓಟೂ = ಅದೆಲ್ಲವೂ; ಅದಷ್ಟೆಲ್ಲವೂ.

ಓಟೂ ಈಟೂ = ಅಷ್ಟೂ ಇಷ್ಟೂ; ತುಸು ಮಾತ್ರ; ಅಂದಾಜು; ಅಜಮಾಸು.

ಓಟೆ = ಅದೋ ಅಷ್ಟೆ.

ಓಟೇ = ಅದಷ್ಟೆಯೇ.

ಓಟೋಟೆ = ಅಷ್ಟಷ್ಟೆ.

ಓಡಾ (ನಾ)ಮ.= ನಾಲೆ; ನಾಲಾ; ಬಾಂಗು.

ಓಡಾಓಡ್ಕಿ = ಆತುರಾತುರದಲ್ಲಿ; ಓಡುತ್ತಿರುವಂತೆಯೆ.

ಓಡು (ಕ್ರಿ) = ಪಲಾಯನ ಮಾಡು; ಕಾಲು ಕಿತ್ತು.

ಓಣಿ = ಗಲ್ಲಿ; ಕೇರಿ; ಮನೆ ಸಾಲು.

ಓಣಿ ಓಣಿ (ದ್ವಿ) = ಗಲ್ಲೀಗಲ್ಲೀ; ಬೀದಿಬೀದಿ.

ಓಣ್ಯಾಗ = ಓಣಿಯಲ್ಲಿ.

ಓದಾದು = ಓದುವಿಕೆ; ಓದುವುದು; ವಿದ್ಯಾ; ಜ್ಞಾನ.

ಓದು = ಪಠನ ಮಾಡು; ಅಭ್ಯಾಸ ಮಾಡು.

ಓದುಣ್ಕಿ (ನಾ) = ಓದುವಿಕೆ; ಓದುವ ಅಭ್ಯಾಸ.

ಓನಾಮಶಿವ = ಓಂನಮಃ ಶಿವಾಯ (ಹಾಡು:- ಓ ನಾಮ ಶಿವ ಎನ್ನಿರಿ।

ವೈಯಾರ ದೋಳು। ಹರನಾಮ ಶಿವ ಎನ್ನಿರಿ।).

ಓನಾಮಾ ಸಿಧಂ = ಓಂ ನಮಃ ಸಿದ್ಧ. (ಮೊದಲ ಬರವಣಿಗೆ ಪ್ರಾರಂಭಿಸುವಾಗ ಪಾಟಯ ಮೇಲೆ ಬರೆದು ಕೊಡುವ ಸೊನ್ನಲಾಪುರದ ಸಿದ್ಧರಾಮ ಶರಣರ ಧ್ಯಾನ ಮಂತ್ರ).

ಓಲುಗುಡಿಸು (ಕ್ರಿ) = ಕೆಡಿಸು; ಖರಾಬು ಮಾಡು; ಹಾಳು ಮಾಡು; ಕೆಲಸಕ್ಕೆ ಬಾರದಂತೆ ಮಾಡು; ಹದಗೆಡಿಸು.

ಓಷು = ಅದೋ ಅಷ್ಟು; ಅವಷ್ಟು.

ಓಸು (ನಾ) = ವಂಶ; ವಂಶಾವಳಿ; ವಂಶವೃಕ್ಷ.

ಓಸು ಖಂಡಾಗ್ಲಿ (ಕ್ರಿ) = ವಂಶವಿಲ್ಲವ ನಾಗಲಿ; ನಿಸ್ಸಂತಾನವಾಗಲಿ (ಬೈಗುಳ).

ಓಸು ಘುಮ್ಮಾಗಲಿ (ಕ್ರಿ) = ವಂಶ ನಿರ್ನಾಮವಾಗಲಿ; ನಿಸ್ಸಂತಾನವಾಗಲಿ; ವಂಶಕುಂಠಿತವಾಗಲಿ (ಬೈಗುಳ).

ಓಸೂ = ಅದೋ ಅವಷ್ಟೆಲ್ಲ.

ಓಳಿ (ನಾ) = ಸಾಲು; ಸಮೂಹ; ಗುಂಪು.

ಔ

ಔ = ಅವ್ವ (ಆಶ್ಚರ್ಯ)

ಔಂಟಾ (ನಾ) = ಮರಾಠಿ ಪದ್ಧತಿಯಲ್ಲಿಯ ಮೂರುವರೆ ಅಂಕಿಯ ಮಗ್ಗಿ.

ಔಂಟಾಗು (ಕ್ರಿ) = ಆಟದಗಡಿ ಬಾದಾಗು; ಸಾಯು.

ಔಂಟಾಸು (ಕ್ರಿ) = ಕುದಿ; ಕುದಿಸು; ಕೋಪಗೊಳ್ಳು; ಕಿಡಿಕಿಡಿಯಾಗು.

ಔಂಟ್ಯಾ (ನಾ) = ಆಂವಟಿಗ; ಆವಟಿಗ; ಆಂವಟಿ; ಅಳತೆ ಮಾನದ ಗುತ್ತಿಗೆದಾರ.

ಔಂಟು (ಇಂ.) = ಔಟು; ಬಾದು; ಸಾವು; ಹುದ್ದರಿಯು ನಿರುಪಯುಕ್ತವಾಗುವಿಕೆ.

ಔಂಶಿಕ (ನಾ) = ವಂಶಿಕ; ವಂಶಕ್ಕೆ ಸಂಬಂಧಿಸಿದವ.

ಔಂಸುರ (ನಾ) = ಅವಸರ; ಅಪವೇಳೆ; ದುರ್ದಿನ.

ಔಜಾರ (ನಾ) = ಅವಜಾರ; ಅವಯವ; ಯಂತ್ರದ ಬಿಡಿಭಾಗ.

ಔಡಾಸು (ಕ್ರಿ) = ಅವಡಾಸು; ಮೆಚ್ಚುಗೆಯಾಗು; ಮನಸ್ಸಿಗೆ ಒಪ್ಪಿಗೆಯಾಗು.

ಔಡಾ ಸೌಡಾ (ವಿ) = ಒರಟಾಗಿ; ಶಿಸ್ತಿಲ್ಲದ; ಕ್ರಮಗೆಟ್ಟ.

ಔಡಿ (ವಿ.) (ಮು) = ಮೆಚ್ಚಿನ; ಬಯಕೆಯ.

ಔಡು (ನಾ) = ದವಡೆ.

ಔಡುಗಚ್ಚು (ಕ್ರಿ) = ದವಡೆಗಚ್ಚು; ಹಲ್ಲು ಕಚ್ಚು.

ಔಡುಲ (ನಾ) = ಔಡಲ; ಹರಳು; ಏರಂಡಿ.

ಔಡ್ಲ (ನಾ) = ಔಡಲ; ಹರಳು; ಏರಂಡಿ.

ಔಡ್ಲೆಣ್ಣಿ (ನಾ) = ಹರಳೆಣ್ಣೆ; ಔಡಲ ಬೀಜದಿಂದ ಹೀರಿ ತೆಗೆದ ಎಣ್ಣೆ.

ಔತಾರ = ಅವತಾರ; ರೂಪ (ಅವ್ವಔತಾರ ದೆವ್ವಿನ ಔತಾರ ಆಗೀತು ಎಂಬಂತೆ).

ಔಘಾರ(ವಿ) = ಹೆಚ್ಚು ಕಾಲ ಬಾಳಿಕೆಯಾಗದ; ಹೆಚ್ಚುಕಾಲ ತಾಳಿಕೆಯಾಗದ.

ಔಬರ್ಕತ್ತು (ಉ) = ಔಘಾರ; ಹೆಚ್ಚು ಕಾಲ ಬಾಳಿಕೆಯಾಗದ.

ಔಬುದ್ದಿ (ನಾ) = ಅವಬುದ್ಧಿ; ದುರ್ಗುಣ; ಹೀನತನ.

ಔರತ (ನಾ) = ಹೆಂಗಸು; ಹೆಣ್ಣು; ಹೆಂಡತಿ.

ಔರಾದಿ (ನಾ) = ಅವರಾದಿ ಎಂಬ ಊರು; ಪೂರ್ವಕಾಲದಲ್ಲಿ ಅಮರಾವತಿಯಾಗಿದ್ದ ಊರು; ಬೀದರ ಜಿಲ್ಲೆಯ ಒಂದು ತಾಲೂಕಿನ ಕೇಂದ್ರ ಸ್ಥಳ. ಅಮರೇಶ್ವರ ದೇವಾಲಯವಿರುವ ಊರು.

ಔಲಗ = ಹತ್ತಬಾರದ; ನಾಜೂಕಾದ; ಗಟ್ಟಿಯಲ್ಲದ; ಸಮತಲವಲ್ಲದ.

ಔಲಗಜಾಗ (ನಾ) = ನಾಜೂಕು ಜಾಗ; ಹತ್ತಬಾರದ ಜಾಗ; ಗಟ್ಟಿಯಲ್ಲದ ಜಾಗ; ಸಮತೂಕವಲ್ಲದ ಜಾಗ.

ಔಲಾದಿ (ನಾ) = ವಂಶದ ಕೂಸು; ವಂಶ ಪರಂಪರೆಯ ಕೂಸು; ಆಕಳ ಅಥವಾ ಎಮ್ಮೆಯ ಕರು.

ಔಸುದ್ಯಾ (ನಾ) = ಔಷಧ; ಗಿಡಗಸರ ಮದ್ದು; ಅಗಸುದ್ಯಾ.

ಔಳಿ (ನಾ) = ಅವಳಿ.

ಔಳಿ ಜೌಳಿ (ನಾ) = ಅವಳಿ ಜವಳಿ.

ಕ

ಕಂಕಣ (ನಾ) = ಕೈಕಡಗ; ಬಳೆ; ಮದುಮಕ್ಕಳಿಗೆ ಮುಂಗೈಗೆ ಕಟ್ಟುವ ಅರಷಿಣದಲ್ಲಿ ಅದ್ದಿದ ಸುರಿಗೆಯ ದಾರ; ರಕ್ಷಾ ಸೂತ್ರ; ಉಣ್ಣೆಯ ದಾರ.

ಕಂಕಣ (ಕಾಂಕಣ) ಕಟ್ಟು = ಸಂಕಲ್ಪ ಮಾಡು; ಶಪಥಮಾಡು. ಮದು ಮಕ್ಕಳ ಕೈಗೆ ನೂಲೆಳೆಯನ್ನು ಕಟ್ಟು.

ಕಂಕಣ ಬಲಾ (ನಾ) = ಮದುವೆಯ ಸುಯೋಗ; ಕಂಕಣ ಕಟ್ಟುವ ಸುಯೋಗ.

ಕಂಕಣ ಬಲಾ ಬರು (ಕ್ರಿ) = ಮದುವೆಯ ಸುಯೋಗ ಉಂಟಾಗು.

ಕಂಕಣಿ (ಕಾಂಕಣಿ) = ಕಂಕಿ; ಕಾಳುದುರಿದ ತೆನೆ.

ಕಂಕಿ (ನಾ) = ಕಾಳು ತೆಗೆದ ಜೋಳದ ತೆನೆ; ಕಂಕಣಿ.

ಕಂಕುಳು (ಕೊಂಕುಳು) = ಬಗಲು; ಬಗಲುಸಂದು.

ಕಂಕ್ರೇಟು (ನಾ) = ಒಡೆದ ಕರಿಕಲ್ಲಿನ ಗಟ್ಟಿ ಚಿಂಪು; ಕರಿಕಲ್ಲಿನ ಚಿಂಪುಗಳ ರಾಶಿ; ತಾರಸಿಗೆ ಬಳಸುವ ಚಿಂಪುಗಲ್ಲು.

ಕಂಗಾಲ (ನಾ) = ಬಡವ; ನಿರ್ಗತಿಕ; ಆರ್ಥಿಕ ದುರ್ಬಲನು; ಜಿಪುಣ.

ಕಂಗಾಲಗೇಡಿ (ನಾ) = ಜಿಪುಣತನದಿಂದ, ಬಡತನದಿಂದ, ದೌರ್ಬಲ್ಯಗಳಿಂದ ಕೆಟ್ಟವನು (ಬೈಗುಳ).

ಕಂಗಾಲಾಗು (ಕ್ರಿ) = ದುರ್ಬಲನಾಗು; ಬಡವನಾಗು; ಅಶಕ್ತನಾಗು; ಜಿಪುಣನಾಗು.

ಕಂಗಾಲಿ (ನಾ) = ಬಡವಿ; ಜಿಪುಣೆ.

ಕಂಗಾಲ್ಯಾ (ನಾ) = ಕಂಗಾಲ; ಜಿಪುಣ; ದರಿದ್ರ.

ಕಂಗಿ (ನಾ) = ಕಂಗ್ಯೆ; ಬಾಚಣಿಕೆ; ಹಣಿಗೆ; ತಲೆಗೂದಲು ಹಿಕ್ಕಲು ಬಳಸುವಸಾಧನ.

ಕಂಗಿ ಆಡ್ಸು (ಕ್ರಿ) = ತಲೆ ಬಾಚಿಕೊ.

ಕಂಗ್ಯೆ (ನಾ) = ಕಂಗಿ; ಬಾಚಣಿಕೆ; ಹಣಿಗೆ.

ಕಂಗ್ಟಿ (ನಾ) = ಕನ್ನಡ ಮಾತಾಡುವ ಆಂಧ್ರದ ಒಂದು ಹಳ್ಳಿ.

ಕಂಚಗಾರ (ನಾ) = ಕಂಚು, ಹಿತ್ತಾಳೆ ಮೊದಲಾದ ಲೋಹದ ಕೆಲಸ ಮಾಡುವವನು ಇಲ್ಲವೆ ಆ ಲೋಹಗಳ ಪಾತ್ರೆಗಳನ್ನು ಮಾರಾಟ ಮಾಡುವವನು. (ಕೋಲಾಟದ ಹಾಡು:- ಕಂಚಗಾರ್ಗ ಕಾಲ್ಕೊಟ್ಟ। ಬಳ್ಗಾರ್ಗ ಕೈಕೊಟ್ಟ। ಸಿಂಪ್ಯಾನ ತೋಳ್ಯಾಲ ಮಲಗಿದೆನಾ। ಕೊಲಕೋಲೆ).

ಕಂಚಾಳ (ನಾ) = ಒಂದು ಜಾತಿಯ ಮರ ಮತ್ತು ಅದರ ಹೂವು; ಕಂಚುವಾಳ.

ಕಂಚಿನ್ಕರ್ಬಿನ್ (ನಾ) = ಕಂಚಿನ ಕೊಡಗಳ ಅಡಕಿಲ (ಗಾದೆ:- ಕಂಚಿನ್ಕರ್ಬಿನ್ನೇರ್ಸಿದಾಕಿ ಹಂಚಿಗ್ಯೆಚಾಚಿದ್ಹಂತ!).

ಕಂಚಿನ್ಗಂಗಾಳ್ (ನಾ) = ಕಂಚಿನಿಂದ ಮಾಡಿದ ಊಟದ ತಟ್ಟೆ (ಗಾದೆ:- ಪಂಕ್ತ್ಯಾಗಿಂದೇಳಂದ್ರ ಕಂಚಿನ್ಗಂಗಾಳದಾ ನಂದು ಅಂದನಂತ!).

ಕಂಚು (ನಾ) = ತಾಮ್ರ ಮತ್ತು ತವರಗಳನ್ನು ಮಿಶ್ರಮಾಡಿ ತಯ್ಯಾರಿಸಿದ ಲೋಹ (ಮೇಲ್ವರ್ಗದವರು ಕೆಳವರ್ಗದವರಿಗೆ ತಮ್ಮ ಕಂಚಿನ ಪಾತ್ರೆಯನ್ನು ಬಳಸಲು ಕೊಡುತಿದಿಲ್ಲ).

ಕಂಚುಮಿಂಚಾಗು (ಕ್ರಿ) = ಕಂಚು ಅಥವಾ ಕನ್ನಡಿಯ ಬೆಳಕಿನಂತೆ ಮಿಂಚಿದ ತಕ್ಷಣ ಮಾಯವಾಗು; ಹೀಗೆ ಬಂದು ಹೀಗೆ ಹೋಗು.

ಕಂಚು ಮಿಂಚು (ವಿ)= ಕಂಚಿನ ಬೆಳಕಿನಂತೆ ಮಿಂಚಿ ಮಾಯವಾಗುವ; ಒಂದೆಡೆ ನಿಲ್ಲದ.

ಕಂಚೆಣ್ಣೆ (ನಾ) = ಕಂಚಿನ ಬಣ್ಣದ ಎಣ್ಣೆ; ಕಂಚಿನ ಬಟ್ಟಲಲ್ಲಿ ಸುರುವಿದ ಎಣ್ಣೆ; ಮದುಮಕ್ಕಳಿಗೆ ಮೀಯಲು ಬಳಸುವ ಎಣ್ಣೆ (ಹಾಡು:- ಕಂಚೆಣ್ಣೆ ಮಿಂಚೆಣ್ಣೆ। ಬಟಲಾಗ ಒಳ್ಳೆಣ್ಣೆ। ಅಯ್ಯಪ್ಪ ಶೆಟ್ಟರ। ಮಗಳ ಗೌರಮ್ಮಗ। ಎಣ್ಣೆಹಚ್ಚ ಬನ್ನಿರೇ).

ಕಂಜಾಲ (ನಾ) = ನೀರಿನ ಮೇಲಿನ ಹಾವಸೆ.

ಕಂಜೂಸ (ನಾ) = ಜಿಪುಣ; ಲೋಭಿ; ಖಂಗೀಸ; ಕಂಗಾಲ.

ಕಂಜೂಸಿ (ನಾ) = ಜಿಪುಣತನ; ಲೋಭ.

ಕಂಟಕ (ನಾ) = ಕೇಡು; ವಿಪತ್ತು; ಕುತ್ತು; ಸಂಕಟ.

ಕಂಟಲ್ಯಾ (ನಾ) = ಹೇರೆತ್ತು; ಭಾರ ಹೊರುವ ಎತ್ತು (ಗಾದೆ:- ಕಳ್ಳನ ಮನ್ಯಾಗ್ಕಂಟಲ್ಯಾ ಹಚ್ಚಿದಂಗ!)

ಕಂಟಪಾಟ (ನಾ) = ಬಾಯಿಪಾಠ; ಮುಖದ್ಗತ.

ಕಂಟಾ (ನಾ) = ಕಂಠ; ಧ್ವನಿ; ಸ್ವರ; ಹಾಡುಗಾರಿಕೆ (ಗಾದೆ:- ಕಂಟಾ ಇಲ್ದಾವ್ನ ಹಾಡು ಸೆಂಟದ ಸಮಾನ).

ಕಂಟಾಳ (ನಾ) ಮ. = ಬೇಸರ.

ಕಂಟಾಳ್ಸು (ಕ್ರಿ) = ಕಂಟಾಳಿಸು; ಬೇಸರಿಸು; ಅಸಹ್ಯ ಪಡು.

ಕಂಟಿ (ನಾ) = ಮುಳ್ಳಿನ ಗಿಡ; ಹುಲ್ಲು ಇತ್ಯಾದಿ ಕೂಡಿ ಬೆಳೆದ ಜಾಗ, ಪೊದೆ.

ಕಂಟಿಕಮರಿ (ನಾ) = ಮುಳ್ಳು ಪೊದೆ ಮತ್ತು ಆಳ ಕೊಳ್ಳದ ಜಾಗ.

ಕಂಟಿರು (ನಾ) = ಕಟ್ಟಿರುವೆ; ಕರಿಬಣ್ಣದ ಇರುವೆ.

ಕಂಟಿಸರ (ನಾ) = ಒಂದು ಪ್ರಕಾರದ ಕಂಠಾಭರಣ.

ಕಂಟ್ಲ್ಯಾ (ನಾ) = ಕಂಟಲೆ; ಹೇರೆತ್ತು; ಕಂಟಲ್ಯಾ (ಗಾದೆ:- ಕಳ್ಳನ ಮನ್ಯಾಗ ಕಂಟ್ಲ್ಯಾ ಹಚ್ಚಾರ್ದು).

ಕಂಡಾಪಟ್ಟಿ = ಬಹಳ; ಅತಿ; ತೋಲು; ಅನಗಾಡ; ಮಿತಿ ಇಲ್ಲದ; ಸಿಕ್ಕಾಪಟ್ಟೆ.

ಕಂಡಾಬಟ್ಟಿ = ಕಂಡಾಪಟ್ಟಿ.

ಕಂತಿ (ನಾ) = ಕಂತೆ; ಜೋಳಿಗೆ; ಹೊರೆ; ಗಂಟು; ಕಾಂತಿ; ಬಿಚ್ಚುಲಿಂಗಕ್ಕೆ ಕೂಡಿಸುವ ಕರಿಯ ಬಣ್ಣದ ಕಾಂತಿ.

ಕಂತಿ ಒಗಿ (ಕ್ರಿ) = ಪತನ ಹೊಂದು; ಸತ್ತು ಹೋಗು.

ಕಂತಿಕಾಯಕ (ನಾ) = ಕಂತೆ ಭಿಕ್ಷೆಯ ಕಾಯಕ.

ಕಂತಿ ಭಿಕ್ಷಾ (ನಾ) = ಜೋಳಿಗೆ ಹಿಡಿದು ಅನ್ನ ಭಿಕ್ಷೆ ಬೇಡುವುದು.

ಕಂತು (ನಾ) = ಖಿಸ್ತು; ಕಿಸ್ತು; ವಾಯಿದೆ ಪ್ರಕಾರ ದಿನಕ್ಕೊಮ್ಮೆ; ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಕಟ್ಟಬೇಕಾದ ಸಾಲದ ಖಿಸ್ತು.

ಕಂತ್ರಾಟಿ (ನಾ) = ಕುಹಕಿ; ಲಫಂಗ; ಕಂತ್ರಿ.

ಕಂತ್ರಿ (ನಾ) = ಮೋಸಗಾರ; ಕುಹಕಿ; ಲಫಂಗ.

ಕಂತ್ರಿಗುಣ (ನಾ) = ಕುಹಕ ಗುಣ.

ಕಂತ್ರಿ ಧಂದ್ಯಾ (ನಾ) = ಕೇಡಿನ ಕೆಲಸ; ಕಪಟ ಕಾರ್ಯ.

ಕಂದ (ನಾ) = ಮಗು; ಕೂಸು; ಗಂಡುಮಗು (ಕೋಲಾಟದ ಹಾಡು:- ಅಳಭ್ಯಾಡೋ ಎಲೆಕಂದಾ! ನಾ ಹಾಲ ಮಾರಿ ಬರುವೇನೋ॥).

ಕಂದಗೂಳ (ನಾ) = ಹುಮ್ನಾಬಾದ ತಾಲೂಕಿನ ತಾಳ್ಮಡಗಿ ಗ್ರಾಮದ ಹತ್ತಿರದ ಹಳ್ಳಿ; ಈ ಊರಲ್ಲಿ ಗುಂಡಪ್ಪ ದೇವಣೆ ಮತ್ತು ಶಾಮರಾವ ಪಾಟೀಲ ಎಂಬ ಅನುಭಾವಿಗಳು ಆಗಿ ಹೋಗಿದ್ದಾರೆ. ಶರಣೆ ಮಹಾದೇವಮ್ಮ ಎಂಬ ಅನುಭಾವಿಯೂ ಈ ಊರವರೇ ಆಗಿದ್ದು ಸಧ್ಯ ಖೇಡ ಸಂಗಮದಲ್ಲಿದ್ದಾರೆ. ಔರಾದ ತಾಲೂಕಿನಲ್ಲೂ ಒಂದು ಕಂದಗೂಳ ಗ್ರಾಮವಿದೆ.

ಕಂದೀಲು (ನಾ) = ಖಂದೀಲು; ಲಾಲ್ಟೀನ್; ಲಾಂದ್ರು; ಕೈದೀಪ.

ಕಂದು (ನಾ) = ಕಪ್ಪು; ಕೆಂಪು ಮಿಶ್ರಕಪ್ಪು.

ಕಂದುಗಟ್ಟು (ಕ್ರಿ) = ಪೆಟ್ಟು ತಗಲಿದ ಜಾಗದಲ್ಲಿ ರಕ್ತವು ನೀಲಿ ಇಲ್ಲವೆ ಕಪ್ಪು ಬಣ್ಣವನ್ನು ತಾಳು.

ಕಂದೂರಿ (ನಾ) = ಹೊಲದಲ್ಲಿ ರಾಶಿ ಮಾಡುವಾಗ ಕೊಡುವ ಕುರಿಬಲಿ ಮತ್ತು ಮಾಂಸಾಹಾರ ಅಡುಗೆ.

ಕಂಪನಿ (ಕಂಪ್ನಿ) (ನಾ) = ಗುಂಪು; ಉದ್ದಿಮೆದಾರರ ಮಂಡಳಿ; ಉದ್ಯೋಗಾವಕಾಶದ ಸ್ಥಳ.

ಕಂಪಾ (ನಾ) = ಅಪವಾದ; ನಿಂದೆ; ತಾಳಲಾಗದ ನಿಂದೆಯ ಭಾರ.

ಕಂಪಾಸು (ನಾ) = ಅಳತೆಪಟ್ಟಿ; ಕೈವಾರ; ಕೋನಮಾಪಕಾದಿಗಳ ಪೆಟ್ಟಿಗೆ.

ಕಂಪೌಂಡು (ನಾ) ಇಂ. = ಮನೆ ಸುತ್ತಲೂ ಕಟ್ಟಿದ ಆವರಣದ ಗೋಡೆ.

ಕಂಬರ್ (ನಾ) ಹಿಂ. = ಸೊಂಟ; ನಡ; ಟೊಂಕ.

ಕಂಬರ್ಪಟ್ಟಿ (ನಾ) ಹಿಂ. = ಡಾಬು; ನಡುಪಟ್ಟಿ; ಒಡ್ಯಾಣ; ಸೊಂಟದ ಆಭರಣ.

ಕಂಬಾರ (ನಾ) = ಕಮ್ಮಾರ; ಕಬ್ಬಿಣದ ಉಪಕರಣ ತಯಾರಿಸುವ ಉದ್ಯೋಗಿ.

ಕಂಬುಟ್ಟಿ (ನಾ) = ಕಬ್ಬಿಣದ ಬುಟ್ಟಿ.

ಕಂಬುರು (ನಾ) = ಕರಿದ ಎಣ್ಣೆಯ ವಾಸನೆ; ಘೋಣ್ಣೆ ಎಣ್ಣೆಯ ವಾಸನೆ.

ಕಂಭ್ರ (ನಾ) = ಕಂಬುರ.

ಕಂಬ್ಳಿ (ನಾ) = ಕಾಂಬ್ಳಿ; ಕಂಬಳಿ; ಕುರಿ ಉಣ್ಣೆಯ ಬಟ್ಟೆ; ಗೊಂಗಡಿ; ಜಾಡಿ.

ಕಂಬ್ಳಿಟೊಪ್ಗಿ (ನಾ) = ಶಿರಸ್ಸಿನ ಮೇಲೆ ಹಾಗೂ ಬೆನ್ನ ಹಿಂದೆ ಬರುವಂತೆ ಮಾಡಿದ ಕಂಬಳಿಯ ಟೊಪ್ಪಿಗೆ; ಮಳೆಯಿಂದ ಬಚಾವಾಗಲು ಬಳಸುವ ಕಂಬಳಿಯ ಟೊಪ್ಪಿಗೆ.

ಕಂಬ್ಳಿ ಹುಳಾ (ನಾ) = ಕಂಬಳಿ ಹುಳು; ಕೋರಿ ಹುಳು; ಮುಟ್ಟಿದರೆ ಮೈಯೆಲ್ಲ ತುರಿಯಾಗಿಸುವ ಹುಳು; ಕಾಡ್ಡಿಹುಳಾ.

ಕಂಬ್ಳಿ ಹೊಚ್ಚು (ಕ್ರಿ) = ಗಂಡು ಮಕ್ಕಳಿಗೆ ಪ್ರಥಮ ಬಾರಿ ಕಂಬಳಿ ಹೊದಿಸುವ ರೂಢಿ, ಶಾಸ್ತ್ರವನ್ನು ನೆರವೇರಿಸು (ಈಗ ಇದು ಶಾಲು ಹೊದಿಸುವ ಕಾರ್ಯಕ್ರಮವಾಗಿ ಬದಲಾಗಿದೆ).

ಕಂಭಗ್ತಿ (ನಾ) = ಕೆಡುಗಾಲ; ಅಳಿಗಾಲ; ದುರ್ಭಾಗ್ಯ; ದುರ್ದೈವ.

ಕಂವ (ಅ) = ಅಕೋ ಅವನು.

ಕಂಸ (ನಾ) = ಕೃಷ್ಣನ ಸೋದರಮಾವ; ಬ್ಯಾಕಿಟ್ಟು.

ಕಕಲಾತಿ(ನಾ) = ಕಕುಲಾತಿ; ಆಸೆ; ಚಿಂತೆ; ಕಳವಳ; ಪ್ರಯತ್ನ; ಕೋಶೀಸು.

ಕಕಲಾತಿ ಬಿಡು (ಕ್ರಿ) = ಕಕುಲಾತಿ ಬಿಡು; ಪ್ರಯತ್ನಿಸು; ಕಳವಳ ಪಡು.

ಕಕಾಡಿ (ಅ) = ಅಕೋ ಆಕಡೆ.

ಕಕಿ (ಸ.ನಾ.) = ಅಕೋ ಆಕೆ; ಕಾಕಿ; ಕವಳು.

ಕದು (ಸ.ನಾ.) = ಅಕೋ ಅದು; ಕಾದು.

ಕಕ್ಕ (ನಾ) = ಕಾಕಾ; ಚಿಕ್ಕಪ್ಪ; ಅಪ್ಪನ ತಮ್ಮ; ಚಿಕ್ಕಮ್ಮನ ಗಂಡ.

ಕಕ್ಕಡಿ (ನಾ) = ಕಾಕ್ಡಿ; ದೀವಟಿಗೆ; ದಪ್ಪದೀಪ.

ಕಕ್ಕಸು ಬಿಡು (ಕ್ರಿ) = ಕಕ್ಕುಸು ಬಿಡು; ತೇಕು; ಏದುಸಿರು ಬಿಡು; ಧಾಪಿಸು.

ಕಕ್ಕಿ (ನಾ) = ಕಾಕಿ; ಚಿಕ್ಕಪ್ಪನ ಹೆಂಡತಿ; ಕಕ್ಕೆಯ ಗಿಡ ಮತ್ತು ಅದರ ಕಾಯಿ!

ಕಚಕಚ ಕಡಿ = ಕಡಿದು ತುಂಡು ತುಂಡು ಮಾಡು.

ಕಚಗುಳ್ಳಿ (ನಾ) = ಕಂಕುಳಲ್ಲಿ ಬೆರಳಾಡಿಸಿ ನಗೆಯುಂಟು ಮಾಡುವಿಕೆ; ಗುಜುಗುಳಿ; ಗುಳುಗುಳು.

ಕಚರಾ (ನಾ) ಹಿಂ. = ಕಸ; ರಜ; ಹೊಲಸು; ಕನಿಷ್ಟ.

ಕಚರಾಕುಂಡಿ (ನಾ) ಹಿಂ. = ಕಸದ ಗುಂಡಿ.

ಕಚರಿ (ನಾ) = ಕಚ್ರಿ; ಕಚೇರಿ; ಕಾರ್ಯಾಲಯ; ಆಫೀಸು.

ಕಚಲ್‌ಪಿಚಲ್ (ನಾ) = ನೀರು ಮತ್ತು ಕೆಸರು ಇದ್ದ ಕಡೆ ನಡೆದಾಡುವಾಗಿನ ಕ್ರಿಯೆ.

ಕಚಾಪಿಚ (ನಾ) = ತುಳಿಯುವ ಕ್ರಿಯೆ; ಕಚಾಬಿಚಿ; ಕಚಿಬಿಚಿ.

ಕಚಿಪಿಚಿ (ನಾ) = ಮನಬಂದಂತೆ; ಅವ್ಯವಸ್ಥಿತವಾಗಿ ತುಳಿಯುವ ಇಲ್ಲವೆ ದುಡಿಯುವ ಕ್ರಮ.

ಕಚಿಪಿಚಿ ತುಳಿ (ಕ್ರಿ) = ಮನಬಂದಂತೆ ಅಡ್ಡ ತಿಡ್ಡ ಹೆಜ್ಜೆ ಇಡು; ಬೆನ್ನ ಮೇಲೆ ಕಾಲಿಟ್ಟು ಅದುಮು.

ಕಚ್ಚಾ (ವಿ) ಹಿಂ. = ಹಸಿ; ಕುದಿಯದ; ಅಪಕ್ವ; ನಯಗೊಳಿಸದ; ಸಿದ್ಧಗೊಳಿಸದ.

ಕಚ್ಚಾಕಿರ್ದಿ (ನಾ) = ತಾತ್ಪೂರ್ತಿಕ ಲೆಕ್ಕದ ಪುಸ್ತಕ; ಖತಾವಣಿ ಪುಸ್ತಕ.

ಕಚ್ಚಾಟ (ನಾ) = ಜಗಳ; ಹೊಡೆದಾಟ; ಬಡಿದಾಟ.

ಕಚ್ಚಾಡು (ಕ್ರಿ) = ಹೊಡೆದಾಡು; ಬಡಿದಾಡು.

ಕಚ್ಚಾಪಕ್ಕಾ (ವಿ)ಹಿಂ. = ಹಸಿಬಿಸಿ; ಅರೆಬೆಂದ; ಅರ್ಧಮರ್ಧ ಕುದ್ದ.

ಕಚ್ಚಾಮಾಲು (ನಾ) ಹಿಂ. = ಸಿದ್ಧಗೊಳಿಸಿದ ಮೂಲ ವಸ್ತು; ಸಾಮಗ್ರಿ.

ಕಚ್ಚಿ (ನಾ) = ಕಾಚ್ಚಿ; ಕಚ್ಚೆ; ಧೋತರ, ಸೀರೆ ಮೊದಲಾದವುಗಳ ಸೆರಗಂಚನ್ನು ತೊಡೆ ಸಂದಿಯಿಂದ ಹಿಂದಕ್ಕೊಯ್ದು ಸೊಂಟಕ್ಕೆ ಸಿಕ್ಕಿಸಿದ್ದ ಸ್ಥಿತಿ).

ಕಚ್ಚಿ ಕಡುಕ (ನಾ) = ಕಚ್ಚೆ ಬಿಗಿ ಇಲ್ಲದವನು; ಕಚ್ಚೆ ಹರುಕ; ಲೈಂಗಿಕ ತಾಳ್ಮೆ ಇಲ್ಲದವನು.

ಕಚ್ಚಿ ಮಜಬೂತ ಇರು (ಕ್ರಿ) = ಲೈಂಗಿಕ ಸಂಯಮ ಕಾಯ್ದುಕೊ.

ಕಚ್ಚಿ ಹರುಕ (ನಾ) = ಕಚ್ಚಿ ಕಡುಕ (ನೋಡಿರಿ).

ಕಚ್ಚಿ ಹಾಕು (ಕ್ರಿ) = ಕೆಲಸಕ್ಕೆ ಸಿದ್ಧನಾಗು; ಕದನಕ್ಕೆ ಸಿದ್ಧನಾಗು.

ಕಚ್ಚು (ಕ್ರಿ) = ಹಲ್ಲಿನಿಂದ ಕಡಿ (ಗಾದೆ:- ಕಚ್ಚುವ ನಾಯಿ ಬೊಗಳುವುದಿಲ್ಲ); ಗಿಡದ ಮೇಲೆ ಮೂಡಿದ ಕೊಡಲಿಯ ಗಾಯ.

ಕಚ್ಚು ಹಾಕು (ಕ್ರಿ) = ಕೊಡಲಿ, ಬಾಚಿ ಅಥವಾ ಉಳಿಯಿಂದ ಕಟ್ಟಿಗೆಯ ಮೇಲೆ ಗಾಯ ಮೂಡಿಸು.

ಕಚ್ಚಾಕಚ್ಚಾ (ದ್ವಿ) = ಅನುಮಾನಿಸುತ್ತ.

ಕಜ್ಜಿ (ನಾ) = ಬೊಕ್ಕೆ ಎದ್ದು ತುರಿಕೆಯುಂಟಾಗುವ ಚರ್ಮರೋಗ; ಖಜ್ಜಿ.

ಕಟಕಟಕಡಿ (ಕ್ರಿ) = ನಿರಂತರ ತೊಂದರೆಕೊಡು.

ಕಟಕಟಿ (ನಾ) = ಕಿರಿಕಿರಿ; ತೊಂದರೆ; ಕೀಟಲೆ.

ಕಟಬಾವ್ನಗೆಂಡಿ (ನಾ) = ತೊಗಲು ಬೊಂಬೆಯಾಟ.

ಕಟಾ ಕಟಿ = ಸರಿಸಮಾನ ತೂಗುವಿಕೆ, ಅಳೆಯುವಿಕೆ, ಮಾಪನ.

ಕಟಾಕಟಿ ತೂಗು (ಕ್ರಿ) = ಸರಿಸಮಾನ ತೂಗು.

ಕಟಾವು (ನಾ) = ಪೈರು ಕೊಯ್ಯುವಿಕೆ.

ಕಟಿಂಗ (ನಾ) = ಹಜಾಮತಿ; ಕ್ಷೌರ.

ಕಟ್ಗಿ (ನಾ) = ಕಟ್ಟಿಗೆ, ಸೌದೆ, ಮರ.

ಕಟ್ಟ ಕಡಿಗಿ = ಕಟ್ಟ ಕಡೆಗೆ; ಅಂತ್ಯದಲ್ಲಿ; ಕೊನೆಯಲ್ಲಿ.

ಕಟ್ಟಿ (ನಾ) = ಕಟ್ಟೆ; ಬಂಧಾರಿ; ಬದುವು; ಗದ್ದುಗೆ; ಜಗಲಿ; ವೇದಿಕೆ; ಒಡ್ಡು; ಸಂಬಂಧ ಹರಿದು ಕೊಳ್ಳುವಿಕೆ.

ಕಟ್ಟಿ ಕಟ್ಟಿಸು (ಕ್ರಿ) = ಗದ್ದುಗೆ ನಿರ್ಮಿಸು.

ಕಟ್ಟಿಕಲ್ಲು (ನಾ) = ಗದ್ದುಗೆಯ ಕಲ್ಲು; ಬಂಧಾರಿಯ ಕಲ್ಲು.

ಕಟ್ಟಿಕಲ್ಲು ಕಟ್ಟಿಗಿ ಕೊಡ್ಸು (ಕ್ರಿ) = ಸಲ್ಲಬೇಕಾದವರಿಗೆ ಸಲ್ಲಿಸು; ನ್ಯಾಯ ಒದಗಿಸು.

ಕಟ್ಟು (ನಾ) = ಷರತ್ತು; ಕರಾರು; ಪ್ರಮಾಣ; ಗಂಟು; ಹಗ್ಗದಿಂದ ಬಿಗಿದು ಕಟ್ಟಿದ ವಸ್ತು; ಬೇಳೆ ಕುದಿಸಿದ ನೀರು (ಆಮ್ರಕ್ಕೆ ಬಳಸುವ ಬೇಳೆ ಕುದಿಸಿದ ನೀರು.).

ಕಟ್ಟು (ಕ್ರಿ) = ಹಗ್ಗದಿಂದ ಬಿಗಿ; ಗೋಡೆ ನಿರ್ಮಿಸು; ಕಟ್ಟಡ ನಿರ್ಮಿಸು.

ಕಟ್ಬಣ್ಕಿ (ನಾ) = ಕಟ್ಟಡ ನಿರ್ಮಾಣ ಕಲೆ.

ಕಠಾಣ (ನಾ) = ಹಿಂಗಾರಿ ಬೆಳೆ; ಖರೀಪ ನಂತರದ ಬೆಳೆ.

ಕಠಿಣ (ವಿ) = ಬಿರುಸು; ಗಡುಸು; ತೊಂದರೆಯ.

ಕಠಿಣಿ (ನಾ) = ಕಷ್ಟ ಕಾಲ.

ಕಠೀಣಿ (ನಾ) = ಕಠಿಣೆ; ಕಷ್ಟಕಾಲ.

ಕಠೀಣಿ ಬರು (ಕ್ರಿ) = ಕಠಿಣ ಕಾಲ ಒದಗು.

ಕಠೋರ (ವಿ) = ಬಿರುಸಾದ; ಗಡುಸಾದ; ಗಟ್ಟಿಯಾದ; ಕಲ್ಲಿನಂತಹ.

ಕಡ (ನಾ) = ಸಾಲ; ಉದ್ದರಿ.

ಕಡಕ = ಭೀಕರ.

ಕಡಕಡ ಕಾಸು (ಕ್ರಿ) = ಅತಿಯಾಗಿ ಕಾಸು.

ಕಡಕಂತ್ರ (ನಾ) = ಸೋಡ ಚೀಟಿ; ಫಾರಿಕತಿ; ಮುರ್ಗಡೆ.

ಕಡಕಟ್ಟು = ಸಾಲ ಶೂಲ.

ಕಡಕಡ (ದ್ವಿ) = ಕಿಟಿಕಿಟಿ; ಕಾಡುವಿಕೆ; ಎಣ್ಣೆ ಅಥವಾ ನೀರು ಅತಿಕಾಸುವಿಕೆ.

ಕಡಕಣಿ (ನಾ) = ತರಗ; ಅಂಬಾಬಾಯಿಯ ಘಟಸ್ಥಾಪನೆಯ ಮೇಲೆ ಕಟ್ಟುವ ಗೋಧಿ ಹಿಟ್ಟಿನ ಸಿಹಿ ಹಪ್ಪಳ.

ಕಡಕುಡು (ಕ್ರಿ) = ಮರಳಿ ಕೊಡುವ ಕರಾರಿನ ಮೇಲೆ ಯಾವುದೇ ವಸ್ತುವನ್ನು ಕೊಡು.

ಕಡಗ (ನಾ) = ಕೈ ಅಥವಾ ಕಾಲಿಗೆ ಹಾಕುವ ಬೆಳ್ಳಿ ಬಳೆ.

ಕಡಜುರಿ (ನಾ) = ಜೇನು ಹುಳದಂತೆ ಕೊಂಡಿಯುಳ್ಳ ಒಂದು ಹುಳು.

ಕಡಡಡ = ಬಲುವೇಗವಾಗಿ ಓಡುವಿಕೆ; ಬಲು ರಭಸವಾಗಿ ಉರಿಯ ಹೊತ್ತುವಿಕೆ.

ಕಡ ತೀರಿಸು (ಕ್ರಿ) = ಸಾಲವಾಗಿ ತಂದದ್ದನ್ನು ಹಿಂದಿರುಗಿಸು; ಉಪಕಾರಕ್ಕೆ ಉಪಕಾರ ಮಾಡು; ಸೇಡು ಸಾಧಿಸು.

ಕಡಧಂಟು (ನಾ) = ಹಸಿರು ಕಣಿಕೆ.

ಕಡಾ ಕಟ್ಟು ಮಾಡು (ಕ್ರಿ) = ಸಾಲದ ವ್ಯವಸ್ಥೆ ಮಾಡು; ಸಾಲ ಪಡೆ.

ಕಡಾಯಿ (ನಾ) = ಬಾಳಿಗೆ; ಕಡೈ; ಕಬ್ಬಿನ ಹಾಲು ಕುದಿಸುವ ಕಬ್ಬಿಣದ ದೊಡ್ಡ ಬಾಳಿಗೆ; ಬಾಣಲೆ.

ಕಡಿ (ಕ್ರಿ) = ಕಚ್ಚು; ಕತ್ತರಿಸು; ತುಂಡುಮಾಡು. (ನಾ) ಮಜ್ಜಿಗೆ.

ಕಡಿಕಾಲ (ನಾ) = ಕೊನೆಗಾಲ; ಸಾಯುವ ಕಾಲ; ಅಂತ್ಯಕಾಲ.

ಕಡಿಪತ್ತಾ (ನಾ) = ಕರಿಬೇವು.

ಕಡಿಮಿ = ಕಮ್ಮಿ; ಕೊರತೆ.

ಕಡಿಸಾಲ (ನಾ) = ಕೊನೆಯ ಸಾಲು.

ಕಡಿಸು (ಕ್ರಿ) = ಕಡಿಯಲು ಹಚ್ಚು.

ಕಡೀಕಿ = ಕೊನೆಯಲ್ಲಿ; ಕೊನೆಗೆ; ಕಡೆಗೆ.

ಕಡೀಗಾಗು (ಕ್ರಿ) = ಸೆರಗಾಗು; ಮುಟ್ಟಾಗು; ಬಹಿಷ್ಟೆಯಾಗು; ಋತುಮತಿಯಾಗು; ದೂರಸರಿ.

ಕಡುಕು (ನಾ) = ಹರಿದದ್ದು; ತುಂಡಾದದ್ದು; ಚಿಂದಿಯಾದದ್ದು.

ಕಡುಬು (ನಾ) = ಕಣಕದಲ್ಲಿ ಹೂರಣ ತುಂಬಿ ಕರಿದ ಕಾನೋಲಿ; ಹೂರಣ ಗಡುಬು; ಜೋಳದ ಹಿಟ್ಟನ್ನು ನಾದಿ ಗುಂಡು ಗುಂಡು ಮಾಡಿ ಕುದಿಸಿದ ಆಹಾರ; ರಾಗಿಯ ಮುದ್ದೆ.

ಕಡೈ (ನಾ) = ಕಡಾಯಿ; ಬಾಣಲೆ; ಬಾಳಿಗೆ.

ಕಡ್ಕು (ನಾ) = ಕಡುಕು; ಹರಿದದ್ದು; ತುಂಡಾದದ್ದು; ಚಿಂದಿಯಾದದ್ದು.

ಕಡ್ಕುಡು (ಕ್ರಿ) = ಕಡಿದುಕೊಡು; ಕಾಯಿ ಅಥವಾ ಹೂವನ್ನು ಹರಿದುಕೊಡು.

ಕಡ್ಕೊ (ಕ್ರಿ) = ಕಡುಕೊ; ಕಡಿದುಕೊ; ತಾಳಿ ಹರಿದು ಕೊ; ಘಟಸ್ಫೋಟ ಹೊಂದು.

ಕಡ್ಕೊಂಡ್ತಿನು (ಕ್ರಿ) = ಮೆಲಿದು ತಿನ್ನು; ಹೊಟ್ಟೆ ತುಂಬ ಉಣ್ಣು; ಮನಬಂದಷ್ಟು ನುಂಗು.

ಕಡ್ಡ (ನಾ) = ಗುಡ್ಡದ ಮೇಲಿನ ಒಣಹುಲ್ಲು; ಕುಸಾಳಿಯಿಂದ ಕೂಡಿದ ಹುಲ್ಲು.

ಕಡ್ಡಾ (ನಾ) = ಕಡ್ಡ (ನೋಡಿರಿ)

ಕಡ್ಡಿ (ಕಾಡ್ನಿ) (ನಾ) = ಕಡ್ಲಿ; ಕಡಲೆ (ಗಾದೆ:- ಕಡ್ಡಿ ಗಿಡಕ ಮಂಚಗಿ ಹಾಕಾಂವ ಕುಳ್ಳ)

ಕಡ್ಡಿಸೇಂಗಾ (ನಾ) = ಕಳ್ಳೆಕಾಯಿ; ನೆಲಗಡಲೆ; ಗೆಜ್ಜೆ ಸೇಂಗ.

ಕಡ್ಡಿ ಹುಟ್ಟು (ನು) = ಗಂಡು ಮಗು ಹುಟ್ಟು.

ಕಡ್ಡಿಹುಲಿ (ನಾ) = ಕರಡಿ; ಮೈಯೆಲ್ಲ ಉದ್ದ ಕೇಶವುಳ್ಳ ಒಂದು ಕಾಡುಮಿಕ.

ಕಡ್ಡಿ ಹುಳಾ (ನಾ) = ಕರಡಿಯಂತಿರುವ ಹುಳು; ಕಂಬಳಿ ಹುಳು.

ಕಡ್ತಿ (ನಾ) = ಕಡಿತ; ಕಡಿಯುವಿಕೆ; ಕಚ್ಚುವಿಕೆ; ತುರಿಸುವಿಕೆ.

ಕಡ್ತಿ ತೊಪ್ಲ (ನಾ) = ಗಾಯಕ್ಕೆ ರಸ ಬಳಿಯಲು ಬಳಸುವ ಒಂದು ಪ್ರಕಾರದ ಗಿಡಗಸರು; ಗೆಜ್ಜಿ ಟಿಕ್ಯಾ ಹೆಸರಿನ ಸಣ್ಣದಾದ ಕಾಡು ಸಸ್ಯ; ಆಯೋಡಿನ್ ಗುಣದ ಸಸ್ಯ.

ಕಡ್ಬು (ನಾ) = ಕಡುಬು (ನೋಡಿರಿ)

ಕಡ್ಲಿ (ನಾ) = ಕಡ್ಡಿ; ಒಂದು ಪ್ರಕಾರದ ಬೇಳೆಕಾಳು; ಕಡಲೆ.

ಕಡ್ಲಿಸೇಂಗಾ (ನಾ) = ಕಳ್ಳೇಕಾಯಿ; ಗೆಜ್ಜೆ ಸೇಂಗ.

ಕಡ್ಸಾಲ (ನಾ) = ಬಿತ್ತುವಾಗ ಬೀಜ ಬೀಳಲಾರದೆ ಉಳಿದ ಸಾಲು (ಗಾದೆ:- ಮಳ್ಗೇಡಿ ಜೋಡಿ ಆಕ್ಡಿ ಹಾಕ್ದುರ, ಹೊಲಾ ಎಲ್ಲಾ ಕಡ್ಸಾಲಾಯ್ತುಂತ).

ಕಥಾಳಿ (ನಾ) = ಕಡಲೆ ಕಾಯಿಯ ದಂಟು; ಹರೀಬೂಟ್.

ಕಣಕ (ನಾ) = ಕಣಕಾ; ತೊಯ್ಸಿನಾದಿದ ಗೋಧಿಯ ಹಿಟ್ಟು.

ಕಣಕಣ (ದ್ವಿ) = ಜಡ್ಡು; ಅನಾರೋಗ್ಯ; ಜ್ವರ ಬಾಧೆ; ಮೈಕೈ ನೋವು.

ಕಣಕಣ ಬರು (ಕ್ರಿ) = ಜಡ್ಡು ಬರು; ಅನಾರೋಗ್ಯವುಂಟಾಗು, ಜ್ವರಬಾಧೆಯಾಗು; ಮೈಕೈ ನೋವುಂಟಾಗು.

ಕಣಕಾ (ನಾ) = ಕಣಕ (ನೋಡಿರಿ).

ಕಣಗಿಲ (ನಾ) = ಒಂದು ಬಗೆಯ ಹೂವಿನ ಗಿಡ; ಕೆಂಪು ಹಳದಿ ಬಣ್ಣವುಳ್ಳ ಒಂದು ಪ್ರಕಾರದ ಹಾರಾಡುವ ವಿಷಕಾರಿ ಕೀಟ; ಕಡ್ಜುರಿ; ಕಣ್ಗಿಲ.

ಕಣಜಿ (ನಾ) = ಮಾಜಿ ಶಾಸಕ ಕಲ್ಯಾಣರಾವ ಮೋಳಕೇರಿಯ ಹುಟ್ಟೂರು. ಕಣಕೇಶ್ವರ ದೇವರಿರುವ ಊರು. ಸಾಹಿತಿ ವಿಜಯ ಕುಮಾರ ಸೂಗಾರವರ ಹುಟ್ಟೂರು.

ಕಣಸ (ನಾ) ಮ. = ತೆನೆ; ಮೆಕ್ಕೆ ಜೋಳ ತೆನೆ.

ಕಣ್ಕಟ್ (ನಾ) = ಒಂದು ಊರಿನ ಹೆಸರು. ಸ್ವಾತಂತ್ರ್ಯಪೂರ್ವದಲ್ಲಿ ಕಣ್ಕಟ್ ಊರಿನ ಭೂರಾ ಸಕ್ಕರೆ ಬಹಳ ಪ್ರಸಿದ್ಧಿ ಹೊಂದಿತ್ತು.

ಕಣ್ಕಟ್ಟು (ಕ್ರಿ) = ಮಾಟ ಮಾಡು; ಕೈಚಳಕ ತೋರು; ಜಾದೂ ಮಾಡು.

ಕಣ್ಕಣ (ದ್ವಿ) = ಕಣಕಣ (ನೋಡಿರಿ).

ಕಣ್ಕಣ ಬರು (ಕ್ರಿ) = ಕಣಕಣ ಬರು (ನೋಡಿರಿ).

ಕಣ್ಕಪ್ಪಿ (ನಾ) = ಬಾವುಲಿ.

ಕಣ್ಕಾ (ನಾ) = ಕಣಕ (ನೋಡಿರಿ).

ಕಣ್ಕಿತ್ತು (ಕ್ರಿ) = ನೋಡದಂತೆ ಮಾಡು; ಕಣ್ಣು ಗುಡ್ಡೆಗಳನ್ನು ಕೀಳು.

ಕಣ್ಕಿಸಿ (ಕ್ರಿ) = ದಿಟ್ಟಿಸಿ ನೋಡು; ಕೋಪದ ಕಿಡಿಕಾರು.

ಕಣ್ಕುಣ್ಕಿ (ನಾ) = ಕಣ್ಣಿನ ಕುಣಿಕೆ; ಕಣ್ಣಿನ ತಗ್ಗಾದ ಭಾಗ; ಕಣ್ಣಿನ ಮಗ್ಗಲು.

ಕಣ್ಕೊರಾಸು (ಕ್ರಿ) = ಕಣ್ಕುಕ್ಕು; ಕಣ್ಣಿಗೆ ಮಿಂಚು ತಗುಲಿ ಕಾಣದಂತಾಗು.

ಕಣ್ಗಿಲ (ನಾ) = ಕಣಗಿಲ (ನೋಡಿರಿ).

ಕಣ್ಣುಗಡ್ಡಿ (ನಾ) = ಕಣ್ಣುಗುಡ್ಡೆ; ಕಣ್ಣಿನ ಪಾಪೆ

ಕಣ್ಣಿವುಟು (ಕ್ರಿ) = ಕಣ್ಣು ಹೊಡೆ; ಕಣ್ಣಿನಿಂದ ಸೂಚನೆ ಕೊಡು.

ಕಣ್ಣುಟ್ಲು (ನಾ) = ಕಣ್ಣಿನ ಪೊರೆಗೆ ಆಗುವ ಪಕ್ಕು; ಹುಣ್ಣು.

ಕಣ್ಣ ಪರಿ = ಕಣ್ಣುಕಾಣದಂತೆ ಉಂಟಾಗಿರುವ ಪೊರೆ.

ಕಣ್ಣಪ್ಪ (ನಾ) = ಬೇಡರ ಕಣ್ಣಪ್ಪನೆಂಬ ಪುರಾತನ ಶರಣ.

ಕಣ್ಣಾಗೆಣ್ಣಿಹಾಯ್ಕೊಂಡ್ನೋಡು = ಸರಿಯಾಗಿ ನೋಡು; ಲಕ್ಷಕೊಟ್ಟು ನೋಡು; ದಿಟ್ಟಿಸಿ ನೋಡು.

ಕಣ್ಣಾಗ ಖಟ್ಗಿ ಚುಚ್ಲಿ = ನೋಡಲು ಬರದಂತೆ ಆಗಲಿ (ಬೈಗುಳ).

ಕಣ್ಣಾಗ್ಕಣ್ಣಿಟ್ಟು ನೋಡು = ದಿಟ್ಟಿಸಿ ನೋಡು.

ಕಣ್ಣಾಗ್ಮಣ್ಣು ಭೀಳ್ಳಿ (ಕ್ರಿ) = ಕಣ್ಣು ಕಾಣದಂತಾಗಲಿ (ಬೈಗುಳ).

ಕಣ್ಣಾಡ್ಸು (ಕ್ರಿ) = ನೋಡು; ಓದು.

ಕಣ್ಣಿ (ನಾ) = ಕುಣಿಕೆಯುಳ್ಳ ಹಗ್ಗ; ಸಣ್ಣ ಹಗ್ಗ.

ಕಣ್ಣಿಕ್ಕು (ಕ್ರಿ) = ಕಣ್ಣಿರಿಸು; ನಿಗಾವಹಿಸು; ಲಕ್ಷವಹಿಸು.

ಕಣ್ಣಿಗ್ಗಿ ಪರಿಬರು = ಕಣ್ಣು ಕಾಣದಂತೆ ಪೊರೆ ಉಂಟಾಗು; ಅಹಂಕಾರ ಉಂಟಾಗು; ಮದವೇರು.

ಕಣ್ಣಿಡು (ಕ್ರಿ) = ಕಣ್ಣಿಕ್ಕು (ನೋಡಿರಿ).

ಕಣ್ಣೀರು (ನಾ) = ಕಂಬನಿ; ಕಣ್ಣಿನಿಂದ ಹರಿವ ನೀರು.

ಕಣ್ಣು (ನಾ) = ನೋಡುವ ಅಂಗ; ನೇತ್ರ.

ಕಣ್ಣುಗೊಡ್ಡಿ ಬೆಳಿಲಿ = ಕಣ್ಣು ಕಾಣದಂತಾಗಲಿ (ಬೈಗುಳ).

ಕಣ್ಣುಬಿಡು (ಕ್ರಿ) = ಸೀತಾಫಲದ ಮೇಲ್ಪದರು ತೆರೆದ ಕಣ್ಣುಗಳಂತೆ ತೋರು; ಮುಚ್ಚಿದ ಕಣ್ಣು ತೆರೆದು ನೋಡು.

ಕಣ್ಣು ಮುಚ್ಚು = ನಿದ್ದೆ ಮಾಡು; ಸಾಯು.

ಕಣ್ಣು ಮೂಗಿಲಿಚದುರ = ಸುಂದರ.

ಕಣ್ಣು ಹಾಕು = ನೋಡು.

ಕಣ್ಣು ಹೊಡಿ = ಇಶಾರಿ ಮಾಡು; ದೃಷ್ಟಿ ಹಾಕು.

ಕಣ್ಣೆತ್ತಿ ನೋಡು (ಕ್ರಿ) = ಲಕ್ಷ್ಯಕೊಡು (ಉದಾ:- ಆಂವಾ ಆಕಾಡಿ ಕಣ್ಣೆತ್ತಿ ನೋಡಲಿಲ್ಲ).

ಕಣ್ಣೆದುರು (ನಾ) = ಸಮಕ್ಷಮ; ಎದುರಾ ಎದುರು.

ಕಣ್ಣೆವಿ (ನಾ) = ಕಣ್ಣಿನ ರೆಪ್ಪೆಯ ಕೂದಲು.

ಕಣ್ಣೋಡ್ಸು (ಕ್ರಿ) = ವೇಗವಾಗಿ ಎಲ್ಲ ಕಡೆ ದೃಷ್ಟಿ ಹಾಯಿಸು.

ಕಣ್ತಪ್ಪಿ = ಕಣ್ಣಿಗೆ ಬೀಳದಂತಾಗಿ.

ಕಣ್ತಪ್ಪು (ಕ್ರಿ) = ದೃಷ್ಟಿ ಬೀಳದಂತಾಗು; ಕಣ್ಮರೆಯಾಗು; ಕಾಣದಂತಾಗು.

ಕಣ್ತುಲ (ನಾ) = ಗಡಿಗೆ; ಮಡಿಕೆಗಳು ಉರುಳದಂತೆ ಇಡಲು ಮಾಡಿರುವ ಸಾಲು ತಗ್ಗುಗಳು.

ಕಣ್ತೆರಿ (ಕ್ರಿ) = ಕಣ್ಣು ಬಿಡು; ನೋಡು; ದಯ ಮಾಡು; ಕೃಪೆದೋರು.

ಕಣ್ಬಟ್ಟಲು (ನಾ) = ಕಣ್ಣಿನ ಬಟ್ಟಲು; ಕಣ್ಣು ಗುಡ್ಡೆ ಇರುವ ತಗ್ಗು.

ಕಣ್ಬಡಿ (ಕ್ರಿ) = ಕಣ್ಣಿನ ರೆಪ್ಪೆಯನ್ನು ಮುಚ್ಚು, ತೆರೆ ಮಾಡು; ಪಟಪಟ ರೆಪ್ಪೆ ಬಡೆ.

ಕಣ್ಬಾರು (ಕ್ರಿ) = ಕಣ್ಣಿನ ಬೇನೆ ಉಂಟಾಗು.

ಕಣ್ಬಿಡು (ಕ್ರಿ) = ಕಣ್ಣು ತೆರೆ; ನೋಡು; ಸೀತಾಫಲದ ಕಣ್ಣು ಅಂಗಲವಾಗಿ ಹಣ್ಣಿಗೆ ಬರು (ಉದಾ:- ಚಿತಾಪುಲ್ಕಾಯಿ ಕಣ್ಣು ಬಿಟ್ಟಾವ).

ಕಣ್ಬೆಳ್ಕು (ನಾ) = ಕಣ್ಣಿಗೆ ಕಾಣುವಷ್ಟು ಬೆಳಕು; ನಸುಕು; ಮಸುಕು (ಉದಾ:- ಕಣ್ಬೆಳ್ಕಿರಾಟ್ಗೆ ಕೊಂಪಿ ಸೇರ್ಬೇಕು).

ಕಣ್ಮುಚ್ಗಿ (ನಾ) = ಜೋಳದ ಒಂದು ಪ್ರಕಾರ; ಕಣ್ಣು ಮುಚ್ಚಾಲೆ ಆಟ.

ಕಣ್ಮುಚ್ಗಿ ಆಟ (ನಾ) = ಕಣ್ಣು ಮುಚ್ಚಾಲೆ ಆಟ.

ಕಣ್ಮುಚ್ಚು (ಕ್ರಿ) = ಕಣ್ಣು ಮುಚ್ಚು; ನಿದ್ದೆ ಮಾಡು; ಸಾಯು.

ಕಣ್ಹಾಕು (ಕ್ರಿ) = ಕಣ್ಣು ಹಾಕು; ನೋಡು.

ಕಣ್ಹೊಡಿ (ಕ್ರಿ) = ಕಣ್ಣು ಹೊಡೆ; ಕಣ್ಣಿನಿಂದ ಸೂಚನೆ ಕೊಡು; ಕಣ್ಣಿನ ಮೂಲಕ ಇಂಗಿತ ಸೂಚಿಸು.

ಕತಿ (ನಾ) = ಕಥೆ.

ಕತಿ ಕಟ್ಟು (ಕ್ರಿ) = ಕತೆ ರಚಿಸು.

ಕತಿಹೇಳು (ಕ್ರಿ) = ಕತೆಯನ್ನು ನಿರೂಪಿಸು, ವಿವರಿಸು, ಮನಸಿಗೆ ಬಿಂಬಿಸುವಂತೆ ತಿಳಿಸು.

ಕತ್ತ (ಕಾತ್ತ) = ಅಕೋ ಅತ್ತ.

ಕತ್ತಿ (ನಾ) = ಕತ್ತೆ; ನಾಯಿಂದನ ಉಸ್ತರಾ; ಖಡ್ಗ; ತಲವಾರ.

ಕತ್ತಿ ಬಣಜಗ್ಯಾ(ನಾ) = ಲಿಂಗಾಯತರಲ್ಲಿ ಸತ್ತ ಕತ್ತೆಯನ್ನು ಎಳೆದೊಯ್ಯುವ ಕಾಯಕದವನು.

ಕತ್ತಿಬಣ್ಣ = ಕತ್ತೆಯಬಣ್ಣಕ್ಕೆ ಹೋಲುವ ಮಾಸಲು ಬಣ್ಣ.

ಕತ್ತಿ ಮಸಿ (ಕ್ರಿ) = ವೈರ ಸಾಧಿಸು; ಕತ್ತಿಯನ್ನು ಸಾಣೆಕಲ್ಲಿನ ಮೇಲೆ ತಿಕ್ಕಿ ಚೂಪುಗೊಳಿಸು.

ಕತ್ತುರ್ಸಿಹೊಡಿ (ಕ್ರಿ) = ಚೆನ್ನಾಗಿ ಮೆಲಿದು ಹೊಟ್ಟೆ ತುಂಬ ಉಣ್ಣು.

ಕತ್ತುರ್ಸು (ಕ್ರಿ) = ಬಟ್ಟೆ, ಕಣಿಕೆ, ಕಾಗದ ಇತ್ಯಾದಿಗಳು ಕತ್ತರಿಯಿಂದ ತುಂಡು ಮಾಡು; ಮೆಲಿ; ತಿನ್ನು.

ಕತ್ತುಲು (ನಾ) = ಕತ್ತಲು; ರಾತ್ರಿ.

ಕತ್ತುಲುಕಾಳ (ನಾ) = ಗಾಢಾಂಧಕಾರ; ಕಣ್ಣಿಗೆ ಕಣ್ಣು ಕಾಣದಂಥ ಕತ್ತಲೆ.

ಕತ್ತುಲುಬಗ್ಗಾಳ (ನಾ) = ಗಾಢಾಂಧಕಾರ; ಕಣ್ಣಿಗೆ ಕಣ್ಣು ಕಾಣದಂತಹ ಭಯಾನಕ ಕತ್ತಲೆ.

ಕತ್ತುಲ್ಮನಿ (ನಾ) = ಕತ್ತಲಿಂದ ಕೂಡಿದ ಮನೆ.

ಕತ್ರಿ (ನಾ) = ಕತ್ತರಿ; ಕಪಟ; ಮೋಸ.

ಕತ್ರಿ ಬದ್ನಿಕಾಯಿ (ನಾ) = ಟೊಮ್ಯಾಟೊ; ಹಂದರ ಬದನೆಕಾಯಿ; ಛಪ್ಪರ ಬದ್ನೆಕಾಯಿ.

ಕತ್ಲ (ನಾ) = ಕತ್ತಲು; ಅಂಧಕಾರ (ಒಗಟು:- ಅಮಾಸಿಕತ್ಲ, ಮನಿಹಿಂದ ಪಿತ್ಲ, ಹೆಸರ್ಕೇಳೊರ್ಹೆಣಾ ಎತ್ಲ).

ಕತ್ಲಕುಮಾರ (ನಾ) = ಕಾಮುಕ; ಕಾಮಣ್ಣ.

ಕತ್ಲ ಕುಮಾರ ನಾಟಾ (ನಾ) = ಬೆರೆದಾಟ; ಕೂಟ; ಕಾಮಕೇಳಿ.

ಕದನಾ (ನಾ) = ಕದನ; ಜಗಳ; ಚಂಡಿತನ.

ಕದನಾ ಸುರುಮಾಡು = ಜಗಳ ಮಾಡು; ಜಗಳ ಪ್ರಾರಂಭಿಸು.

ಕದನಾ ಹೂಡು (ಕ್ರಿ) = ಜಗಳ ಹೂಡು; ಕಾದಾಡು.

ಕದರು (ನಾ) = ತಕಲಿ; ನೂಲುವ ಘಿರ್ಕಿ; ಏತದ ಕೆಳಬದಿಯ ಚಕ್ರ, ಗಾಲಿ.

ಕದರು ಹೋಳಿಗೆ (ನಾ) = ಒಂದು ತಕಲಿಯ ಮೊಳೆಗೆ ಅಡಿಯಿಂದ ತುದಿಗೆ ಪವಣಿಸಿದ ಸಾಲು ಹೋಳಿಗೆ.

ಕದಳಿವನ (ನಾ) = ಶ್ರೀ ಶೈಲದ ಪತ್ತಿರ ಅಕ್ಕ ಮಹಾದೇವಿ ವಾಸಿಸಿದ ಕಾಡು.

ಕದಿ (ಕ್ರಿ) = ಕಳವು ಮಾಡು.

ಕದು (ಸ.ನಾ) = ಅಕೋ ಅದು.

ಕದುರಳತೆ = ಅಡಿಯಿಂದ ತುದಿಯವರೆಗೆ ಇರುವ ನೂಲುವ ತಕಲಿಯ ಎತ್ತರ.

ಕದುರು (ನಾ) = ಕದರು (ನೋಡಿರಿ).

ಕದುರು ಹೋಳಿಗಿ (ನಾ) = ಕದರು ಹೋಳಿಗೆ (ನೋಡಿರಿ).

ಕದೇ = ಅಕೋ ಅದೇ.

ಕನಕದಾಸ (ನಾ) = ಕನಕನಾಯಕ ನೆಂಬ ಹೆಸರುಳ್ಳ, ಕುರುಬ ಜನಾಂಗಕ್ಕೆ ಸೇರಿದ ಶ್ರೇಷ್ಠ ಸಂತ.

ಕನಡಿ (ನಾ) = ಕಾನಾಡಿ; ಕನ್ನಡಿ; ಆರ್ಸಿ; ದರ್ಪಣ. (ಗಾದೆ:- ಅಂಗೈ ಹುಣ್ಣಿಗೆ ಕನಡಿ ಯಾತಕ?)

ಕನಸು (ನಾ) = ಸ್ವಪ್ನ.

ಕನಸು ಭೀಳು (ಕ್ರಿ) = ನಿದ್ದೆಯಲ್ಲಿ ಕನವರಿಕೆ ಉಂಟಾಗು.

ಕನಿಕರ (ನಾ) = ಮರುಕ; ಕರುಣೆ.

ಕನಿಸ್ಟ = ಕನಿಷ್ಟ; ಅತಿಹೀನನಾದವನು.

ಕನ್ನಡ (ನಾ) = ಕನ್ನಡಿಗರ ತಾಯ್ನುಡಿ.

ಕನ್ನಡಿ (ನಾ) = ದರ್ಪಣ; ಪ್ರತಿಬಿಂಬ ತೋರಿಸುವ ಗಾಜು.

ಕನ್ನಿ (ನಾ) = ಕನ್ನೆ; ಕುವರಿ; ಕುಮಾರಿ; ಮದುವೆಯಾಗದವಳು.

ಕನ್ನಿ ಮುತ್ತೈದಿ (ನಾ) = ಶೀಲಭ್ರಷ್ಟಳಾಗದ ಮುತ್ತೈದೆ; ಗೌರವದ ಕನ್ನೆ.

ಕನ್ನೆದಾನ (ನಾ) = ಕನ್ನೆಯನ್ನು ದಾನವಾಗಿ ಕೊಟ್ಟು ಮದುವೆ ಮಾಡುವಿಕೆ.

ಕನ್ಯಾಕುಮಾರಿ (ನಾ) = ಭಾರತದ ದಕ್ಷಿಣ ಭೂಶಿರ. ಆಂಧ್ರದ ಶಿಕಾರಿಖಾನಿ ಗ್ರಾಮದ ಕವಯತ್ರಿ. ಈಗ ಬೀದರ ನಗರವಾಸಿನಿ.

ಕಪಟ (ನಾ) = ವಂಚನೆ; ಮೋಸ.

ಕಪಟಿ (ನಾ) = ವಂಚಕ; ಮೋಸಗಾರ.

ಕಪನಿ (ನಾ) = ಜುಬ್ಬ; ಝುಬ್ಬ; ನಿಲುವಂಗಿ.

ಕಪಾಟ (ನಾ) = ಬೀರು; ಅಲ್ಮಾರಿ; ಅಲಮಾರಿ.

ಕಪಾರತಿ (ನಾ) = ಅಪವಾದ; ಬದನಾಮಿ.

ಕಪಾಳ (ನಾ) = ಕೆನ್ನೆ; ಮೆಲುಕು; ಗಲ್ಲ.

ಕಪಾಳ್ಕ ಹೊಡಿ (ನಾ) = ಮೆಲುಕಿನಲ್ಲಿ ಬಾರಿಸು.

ಕಪಾಳ ಚೆನ್ನಿ (ನಾ) = ಕಪಾಳ ಮೋಕ್ಷ; ಮೆಲುಕಿಗೆ ಹಾಕುವ ಏಟ.

ಕಪಿ (ನಾ) = ಕೋತಿ; ಕೋಡಂಗಿ; ಮಂಗ.

ಕಪಿಲ ಸಿದ್ಧಮಲ್ಲಿಕಾರ್ಜುನ (ನಾ) = ಸೊನ್ನಲಾಪುರದ ಸಿದ್ಧರಾಮೇಶ್ವರರ ವಚನಾಂಕಿತ.

ಕಪ್ಕುಲ (ನಾ) = ಕಪ್ಪು ಕುಲ; ಕೀಳು ಕುಲ; ಹೀನ ಕುಲ.

ಕಪ್ಪಡ (ನಾ) = ಬಟ್ಟೆ; ಅರಿವೆ; ವಸ್ತ್ರ.

ಕಪ್ಪಡ ದುಕಾನ (ನಾ) = ಜವಳಿ ಅಂಗಡಿ.

ಕಪ್ಪಡ ಬಜಾರ (ನಾ) = ಬಟ್ಟೆ ಸಂತೆ; ಜವಳಿ ಅಂಗಡಿಗಳ ಸಾಲು.

ಕಪ್ಪಿ (ನಾ) = ಕಪ್ಪೆ; ಕೀಲಿಯ ಅಡ್ಡಿ; ಕೀಲಿ; ಅಡ್ಡಿ.

ಕಪ್ಪು (ನಾ) = ಚಹದ ಬಟ್ಟಲು; ಕರಿಯ ಬಣ್ಣ; ಕಾಡಿಗೆ; ಕಪ್ಪು ಚುಕ್ಕೆ.

ಕಪ್ಪು ಕುಲ (ನಾ) = ಕಪ್ಕುಲ (ನೋಡಿರಿ).

ಕಪ್ಲಾಪುರ (ನಾ) = ದೇವಿಯ ಮಂದಿರವಿರುವ ಭಾಲ್ಕಿ ತಾಲೂಕಿನ ಒಂದು ಹಳ್ಳಿ.

ಕಫಾ (ನಾ) = ಕಫ; ಅಂಟಂಟು ಉಗುಳಿನ ಕೆಮ್ಮು; ದಮ್ಮು; ಗೂರಲು ರೋಗ.

ಕಬಡ್ಡಿ (ನಾ) = ಒಂದು ಬಗೆಯ ಎರಡು ಗುಂಪಿನ ಮಧ್ಯದ ಹೊರಾಂಗಣ ಆಟ; ಉಸಿರು ತೆಗೆದು ಕೊಂಡದ್ದು ಮುಗಿಯುವವರೆಗೆ ಕಬಡ್ಡಿ ಕಬಡ್ಡಿ ಎನ್ನುವ ಆಟ.

ಕಬೀರ್ದಾಸ (ನಾ) = ಉತ್ತರ ಭಾರತದ ಒಬ್ಬ ಸಂತ.

ಕಬೂಲಾಗು (ಕ್ರಿ) = ಒಪ್ಪು; ಸಮ್ಮತಿಸು.

ಕಬೂಲಿ (ನಾ) = ಒಪ್ಪಿಗೆ; ಸಮ್ಮತಿ.

ಕಬ್ಬಸಿ (ನಾ) = ಕಬ್ಬಲಿಗ; ಕಬ್ಬಿಲ; ಬೇಡ; ವ್ಯಾಧ; ಬೆಸ್ತ; ಮೀನುಗಾರ.

ಕಬ್ಬಸಿ (ನಾ) = ಚಹದ ಬಟ್ಟಲು ಮತ್ತು ತಟ್ಟೆ.

ಕಬ್ಬಿಣ (ನಾ) = ಕರಿಯ ಬಣ್ಣದ ಒಂದು ಲೋಹ.

ಕಬ್ಬು (ನಾ) = ಗಣಿಕೆಗಳಿಂದ ಕೂಡಿದ, ಸಿಹಿರಸವುಳ್ಳ ಒಂದು ಸಸ್ಯ; ಖಬ್ಬು.

ಕಬ್ಬುಣ (ನಾ) = ಕಬ್ಬಿಣ (ನೋಡಿರಿ).

ಕಬ್ಬುಣುಬುಟ್ಟಿ (ನಾ) = ಕಬ್ಬಿಣ ಪತ್ರದಿಂದ ತಯಾರಿಸಲ್ಪಟ್ಟ ಬುಟ್ಟಿ.

ಕಬ್ಬೇರು (ಕ್ರಿ) = ಮಾಗು; ಕೊಬ್ಬೇರು; ಕಪ್ಪಾಗು (ಉದಾ:- ಉಪ್ಪಿನ ಕಾಯಿ ಕಬ್ಬೇರ್ಯಾವ).

ಕಮರಿ (ನಾ) = ಆಳವಾದ ಕೊಳ್ಳ; ಪ್ರಪಾತ (ಭಜನೆ:- ಕಮರಿ ಹಾರುವಾಗ ಕೈಯ ಹಿಡಿದನೋ ಮಲ್ಲೀನಾಥ).

ಕಮಳಾ (ನಾ) = ಕಮಳ; ತಾವರೆಯ ಹೂವು.

ಕಮಾನು (ನಾ) = ಅರ್ಧವೃತ್ತದ ಅಗಸೆ; ಬಂಡಿಗೆ ಕಟ್ಟಿದ ಡಾಂಬರಿನ ಛತ್ತು; ಹೆಣಕ್ಕಾಗಿ ಕಟ್ಟಿದ ಅರ್ಧವೃತ್ತದ ಅಗಸೆಯಂತಹ ಸಿಂಗಾರ; ಪರಿಮಳ; ಮಹಾದ್ವಾರ; ಬಿಲ್ಲು.

ಕಮಾಯಿ (ನಾ) = ಗಳಿಕೆ; ಸಂಪಾದನೆ; ಲಾಭ.

ಕಮಾಲು (ನಾ) = ಕೈ ಚಳಕ; ಕೈವಾಡ; ಕರಾಮತ್ತು.

ಕಮಾಸು (ಕ್ರಿ) = ಗಳಿಸು; ಸಂಪಾದಿಸು; ಲಾಭ ಹೊಂದು.

ಕಮಿ (ನಾ)ಹಿಂ. = ಕಮ್ಮಿ; ಕೊರತೆ.

ಕಮೀಟಿ (ನಾ) ಇಂ. = ಸಭೆ; ಚರ್ಚಾಕೂಟ; ಪಂಚರ ಕೂಟ.

ಕಮೀಟಿ ಮಾಡು (ಕ್ರಿ) = ಸಭೆ ಸೇರಿ ಚರ್ಚಿಸು; ಸಭೆ ಸೇರಿಸು.

ಕಮೀನಾ (ನಾ) (ಉ) = ಕೀಳು ಗುಣದವನು; ಹೀನ ಸ್ವಭಾವದವನು.

ಕಮೈ (ನಾ) ಹಿಂ. = ಕಮಾಯಿ; ಗಳಿಕೆ; ಸಂಪಾದನೆ.

ಕಮೈಕೊಡ (ನಾ) = ಐದು ಮಂದಿ ಮುತ್ತೈದೆಯರು ಕೂಡಿ ತೊಟ್ಟಿಲು ಕಾರ್ಯಕ್ರಮದಲ್ಲಿ ಕೂಸಿನ ತಾಯಿಯ ತಲೆಯ ಮೇಲೆ ಕೊಡವಿರಿಸಿ, ಭಾರ ಅದಾನಾ ಹಗುರದಾ ಎಂದು ಕೇಳುತ್ತಾರೆ. ಕೂಸಿನ ತಾಯಿ ಹಗುರದಾ ಎಂದು ಹೇಳುತ್ತಾಳೆ. ಇದೊಂದು ಶಾಸ್ತ್ರ.

ಕಮ್ಜಾತ (ನಾ) = ಕಮ್ಮಿ ಕುಲದವನು; ಕೀಳು ಕುಲದವನು; ಹೀನ ಕುಲದವನು.

ಕಮ್ಜೋರ (ವಿ) ಹಿಂ. = ಅಶಕ್ತ; ಶಕ್ತಿಯ ಕೊರತೆಯುಳ್ಳ.

ಕಮ್ಜೋರಿ (ನಾ) ಹಿಂ.= ಅಶಕ್ತತೆ; ಶಕ್ತಿ ಹೀನತೆ.

ಕಮ್ಮಗ (ಅ) = ಸುವಾಸನೆಯಿಂದ ಕೂಡಿದ; ಖಮ್ಮಗ; ಕಮ್ಮನೆ.

ಕಮ್ಮಿ (ವಿ) = ಕೊರತೆ; ಕಡಿಮೆ.

ಕಮ್ಮಿ ಭೀಳು (ಕ್ರಿ) = ಕೊರತೆಯಾಗು.

ಕಮ್ಮು = ಕೊರತೆ; ಕಡಿಮೆ.

ಕಮ್ರಾ (ನಾ) ಹಿಂ. = ಕೋಣೆ; ಖೋಲಿ; ಖೊಲ್ಲಿ; ರೂಮು.

ಕಮ್ಳಾ (ನಾ) = ಕಮಳಾ; ಕಮಳ; ಕಮಲ.

ಕಯ್ (ನಾ) = ಕೈ; ಕರ; ಹತ್ತ.

ಕಯಪತ (ನಾ) = ಕೈಫಿಯತ; ಸುದ್ದಿ.

ಕರಂಟು (ನಾ) ಇಂ. = ವಿದ್ಯುಚ್ಛಕ್ತಿ; ಬರೋಬರಿ; ಕರೆಕ್ಟ (ಉದಾ:- ಕರಂಟ್ ಹತ್ತು ಭಾಸ್ಲಾಕ ಅಂವಾ ನಮ್ಮನಿಗಿ ಬಂದ್ನೋಡು).

ಕರಕರ (ಧ್ವಿ) = ನೆಲ ಅಗಿಯುವ ಇಲ್ಲವೆ ಕಿದರುವ ಸದ್ದು.

ಕರಕರಿ (ನಾ) = ಕಿರಿಕಿರಿ; ಕಿರ್ಕಿರಿ.

ಕರಕಲು (ನಾ) = ಹೊತ್ತಿ ಕಪ್ಪಾದ ವಸ್ತು.

ಕರಕು (ನಾ) = ಸುಟ್ಟು ಕರ್ರಗಾದದ್ದು; ಕರ್ಕು; ಕರ್ಕಾ; ಕರ್ಮಸಿ.

ಕರಕುಲಾಗು (ಕ್ರಿ) = ಸುಟ್ಟು ಇದ್ದಲಿಯಂತಾಗು

ಕರಗಾರ (ನಾ) = ಕಂಬಳಿಯ ಕರೆ ಕಟ್ಟುವವನು.

ಕರಗಿ ನೀರಾಗು (ಕ್ರಿ) = ಕರುಣೆದೋರು; ಮರುಕ ಪಡು.

ಕರಗು (ಕ್ರಿ) = ಮಾಯವಾಗು; ಕಾಣದಂತಾಗು; ಕನಿಕರದೋರು; ದಯೆದೋರು.

ಕರಜಿಕಾಯಿ (ನಾ) = ಕಣಕದಲ್ಲಿ ಕೊಬ್ಬರಿ, ಖೋವಾ, ಸಕ್ಕರೆ ಇತ್ಯಾದಿ ಇಟ್ಟು ಕಡುಬು ಮಾಡಿ ಕರಿದ ಸಿಹಿ ತಿಂಡಿ; ಸಜ್ಜಕ ತುಂಬಿದ ಕರಿಗಡುಬು.

ಕರಟಗಿ (ನಾ) = ಸಂಕ್ರಾಂತಿಯ ದಿನ ಸ್ನಾನ ಮಾಡುವ ಮೊದಲು ಮೈಗೆ ಲೇಪಿಸಿ ಕೊಳ್ಳುವ ಅಕ್ಕಿ ಮತ್ತು ಎಳ್ಳಿನೊಂದಿಗೆ ರುಬ್ಬಿ ಮಾಡಿದ ದ್ರಾವಣ; ಕರ್ಟಾ.

ಕರಟಾ, ಕರ್ಟಾ (ನಾ) = ಕರಟಗಿ (ನೋಡಿರಿ).

ಕರಡ್ಯಾಳ (ನಾ) = ಚೆನ್ನಬಸವ ಗುರುಕುಲ ಇರುವ ಭಾಲ್ಕಿ ತಾಲೂಕಿನ ಒಂದು ಹಳ್ಳಿ.

ಕರಾಟಾ (ನಾ) = ಎದುರಾಳಿಯನ್ನು ಬಗ್ಗು ಬಡಿಯಲು ಕಲಿಯುವ ಕಸರತ್ತು.

ಕರಾಬಿಟ್ಗೊ (ನು) = ಆಕಳ ಅಥವಾ ಎಮ್ಮೆಯ ಕರುವನ್ನು ಹಾಲು ಕುಡಿಯಲು ಬಿಟ್ಟು ನಂತರ ಹಾಲು ಹಿಂಡಿಕೊ.

ಕರಾಬಿನ್ (ನಾ) ಹಿಂ. = ಆಲಿಕೆಯಂತೆ ಅಗಲ ಬಾಯಿಯುಳ್ಳ ತುಪಾಕಿ.

ಕರಾಮತಿ (ನಾ) = ಕರಾಮತ್ತು; ಕೈ ಚಳಕ; ಕೈವಾಡ; ಕೈಸಫಾವತಿ.

ಕರಾಮತ್ತು (ನಾ) ಹಿಂ.= ಕರಾಮತಿ (ನೋಡಿರಿ).

ಕರಾರು (ನಾ) = ಷರತ್ತು; ಒಪ್ಪಂದ ಪತ್ರ.

ಕರಾರು ಮಾಡು (ಕ್ರಿ) = ಒಪ್ಪಂದ ಮಾಡು; ಒಡಂಬಡಿಕೆಗೊಳಗಾಗು.

ಕರಿ (ನಾ) = ಕಾರು ಹುಣ್ಣಿಮೆಯ ದಿನ ಅಗಸೆ ಬಾಗಿಲಿಗೆ ಕಟ್ಟಿದ, ನುಲಿ ಮತ್ತು ಮಾವಿನೆಲೆಗಳಿಂದ ಮಾಡಿದ ತೋರಣ; ಸಂಕ್ರಾಂತಿ, ಎಳ್ಳಾಮಾಸಿ ಮತ್ತು ಇತರೆ ಅಮಾವಾಸ್ಯಗಳ ಮರುದಿನ; ಕಪ್ಪು; ಕಂದು.

ಕರಿ (ಕ್ರಿ) = ಎಣ್ಣೆ ಅಥವಾ ತುಪ್ಪದಲ್ಲಿ ಬೇಯಿಸು; ಎಣ್ಣೆಯಲ್ಲಿ ಹುರಿ, ತಾಳಿಸು; ಬರಲು ಹೇಳು; ಆಮಂತ್ರಿಸು; ಗೌರವಿಸು.

ಕರಿಎಳ್ಳು (ನಾ) = ಕಪ್ಪು ಬಣ್ಣದ ಎಳ್ಳು; ಗುರೆಳ್ಳು.

ಕರಿಕಟ್ಟು (ಕ್ರಿ) = ಕಂಬಳಿಯ ಕರೆಯನ್ನು ಹುರಿಗೊಳಿಸಿ ಗಟ್ಟಿ ಮಾಡು, ಗೋಟು ಕಟ್ಟು.

ಕರಿಕಡಿ (ನು) = ಕಾರು ಹುಣ್ಣಿಮೆಯ ದಿನದಂದು ಊರ ಅಗಸೆಗೆ ಕಟ್ಟಿದ ಮಾವಿನ ತೋರಣ ಹರಿವುದರೊಂದಿಗೆ

ಕಾಯ್ದಿಟ್ಟ ಹೋರಿಗಳ ಓಟದ ಸ್ಪರ್ಧೆ ಏರ್ಪಡಿಸು.

ಕರಿಕಾಡಿಗಿ (ನಾ)= ಅತಿಕಪ್ಪಾದದು; ಅತಿ ಕಪ್ಪು ಬಣ್ಣದವನು (ಳು).

ಕರಿಖಬ್ಬು (ನಾ) = ಕಪ್ಪು ಬಣ್ಣವುಳ್ಳ ಕಬ್ಬಿನ ತಳಿ; ಕರಿಕಬ್ಬು; ಪಥ್ಯಕ್ಕೆ ಅನುಕೂಲವಾದ ಕಬ್ಬು; ಅದರ ಬೆಲ್ಲವನ್ನು ಪಥ್ಯ ಮಾಡುವ ರೋಗಿಗಳಿಗೆ ಆಹಾರದಲ್ಲಿ ಕೊಡುತ್ತಿದ್ದರು.

ಕರಿಗಡುಬು (ನಾ) = ಎಣ್ಣೆಯಲ್ಲಿ ಬೇಯಿಸಿದ ಕಡುಬು; ಕಾನೋಲಿ.

ಕರಿಗಾಲು (ನಾ) = ಕರ್ಗಾಲು; ಅಶುಭಕಾಲು; ಕೇಡು ತರುವ ಕಾಲು; ಹೆಜ್ಜೆ ಇಟ್ಟರೆ ಕೇಡುಂಟಾಗುವ ಕಾಲು.

ಕರಿಗಾಲ್ಯಾ (ನಾ) = ಕರ್ಗಾಲ್ಯಾ; ಅಶುಭ ಕಾಲುಳ್ಳವನು; ಕೇಡುಗಾಲಿನವನು; ಹೆಜ್ಜೆ ಇಟ್ಟರೆ ಕೇಡುಂಟು ಮಾಡುವವನು. (ಬೈಗುಳ)

ಕರಿಗುಬ್ಬಿ (ನಾ) = ಕಪ್ಪು ಬಣ್ಣದ ಗುಬ್ಬಿ.

ಕರಿನಾಗರ ಹರಿಲಿ (ಕ್ರಿ) = ಕಪ್ಪು ನಾಗರ ಹಾವು ಕಚ್ಚಲಿ; ಕಪ್ಪುನಾಗರ ಹಾವು ಕಚ್ಚಿ ಸಾಯಲಿ (ಬೈಗುಳ).

ಕರಿನಾಲ್ಗಿ (ನಾ) = ಕರ್ನಾಲ್ಗಿ; ಅಶುಭ ನಾಲಗೆ; ಕೇಡು ತರುವ ಹೇಳಿಕೆಯ ನಾಲಗೆ.

ಕರಿನಾಲ್ಗ್ಯಾ (ನಾ) = ಅಶುಭ ನಾಲಗೆ ಉಳ್ಳವನು; ಕೇಡು ನುಡಿವವನು; ಕರ್ನಾಲ್ಗ್ಯಾ.

ಕರಿಬಗಿ (ನಾ) = ಕರೆದು ಮಾಡುವ ಆದರಾತಿಥ್ಯ.

ಕರಿಬಸವೇಶ್ವರ (ನಾ) = ಹುಡುಗಿ ಗ್ರಾಮದ ಕ್ಷೇತ್ರ ಪುರುಷ ದಿಗಂಬರ ಕರಿಬಸವೇಶ್ವರ. ಕರಬಸಪ್ಪ ಮುತ್ಯಾ ಎಂಬುದು ಜನಪದರ ಬಾಯಿಂದ ಬರುವ ಹೆಸರು. ಯಂಕಮ್ಮ ಹಾಗೂ ಮಡಿವಾಳಪ್ಪ ಎಂಬುವವರು ಅವರ ಶಿಷ್ಯರು.

ಕರಿಬಗಿ ಮಾಡು (ಕ್ರಿ) = ಆದರಾತಿಥ್ಯ ಮಾಡು; ಅತಿಥಿ ಸತ್ಕಾರ ಮಾಡು; ಗೌರವಿಸು; ಸನ್ಮಾನಿಸು.

ಕರಿಬೇವು (ನಾ) = ಒಗ್ಗರಣೆ ಅಥವಾ ಫೋಣ್ಣೆಗೆ ಬಳಸುವ ಬೇವಿನಂಥ ಎಲೆಯುಳ್ಳ ಮರದ ಎಲೆ.

ಕರಿಮಣ್ಣು (ನಾ) = ಎರೆಮಣ್ಣು; ಬೆಲೆರಹಿತ ವಸ್ತು.

ಕರಿಮಸಿ (ನಾ) = ಕರ್ಮಸಿ; ಕಪ್ಪು ಮಸಿ; ಹಲ್ಲುಜ್ಜಲು ಬಳಸುವ ಕುಳ್ಳಿನ ಅಥವಾ ಕಟ್ಟಿಗೆಯ ಇದ್ದಲಿ.

ಕರಿಮಸ್ದಿ (ನಾ) = ಬೀದರ ನಗರದ ಕಾಲಿ ಮಸ್ಜಿದ್ (ಕಾಲಜ್ಞಾನ:- ಕರಿಮಸ್ದಿ ಮುಂದ ಕೆಂಪಕುದುರಿ ಕುಣ್ದಾದು ನೋಡಿರಣ್ಣ - ಸ್ವಾತಂತ್ರ್ಯ ಪೂರ್ವದಲ್ಲಿ ಉಸ್ಮಾನಗಂಜನ್ನು ರಜಾಕಾರರು ಸುಟ್ಟಿದ ದಾಖಲೆ).

ಕರಿಮಾರಿ (ನಾ) = ಅನಿಷ್ಟ ಮೋರೆ; ಅರಿಷ್ಟ ಮುಖ.

ಕರಿಮಾರಿಕಟ್ಗೊ (ಕ್ರಿ) = ಮರೆಯಾಗು; ಹೊರಟು ಹೋಗು; ಮೋರೆ ಕಾಣದಂತೆ ದೂರಾಗು.

ಕರಿಹೊಲ (ನಾ) = ಬಿತ್ತಲಾರದೆ ಕಾಯ್ದಿಟ್ಟ ಹೊಲ; ಮೀಸಲು ಹೊಲ.

ಕರಿಸಾಲು (ನಾ) = ಮೊಳಕೆ ನಾಟದಂತಹ ಸಾಲು; ಕರ್ಸಾಲು.

ಕರಿಸಾಲು ಬೀಳು (ಕ್ರಿ) = ಹೊಲದಲ್ಲಿ ಮೊಳಕೆ ಏಳದಂತಾಗು; ಕರ್ಸಾಲಾಗು.

ಕರು (ನಾ) = ಆಕಳು ಇಲ್ಲವೆ ಎಮ್ಮೆಯ ಮರಿ ಅಥವಾ ಶಿಶು; ಶಿಶುವಿಗೆ ವಾತ್ಸಲ್ಯ ಸಂಬೋಧನೆ.

ಕರೋಡ = ಕೋಟಿ ಸಂಖ್ಯೆ; ನೂರು ಲಕ್ಷ.

ಕರೋಡಪತಿ (ನಾ) = ಕೋಟ್ಯಧೀಶ.

ಕರೋಡಗಿರಿ (ನಾ) = ಚುಂಗಿ ನಾಕಾ; ಸುಂಕದ ಕಟ್ಟೆ; ಸುಂಕ ವಸೂಲಿಯ ಜಾಗ.

ಕರ್ಕನಳ್ಳಿ (ನಾ) = ಬಕ್ಕ ಪ್ರಭುವಿನ ಪುಣ್ಯಕ್ಷೇತ್ರವಿರುವ ಊರು.

ಕರ್ಕಲು (ನಾ) = ಸುಟ್ಟು ಬೂದಿಯಾಗುವ ಮುನ್ನ ಆರಿದ ಕುಳ್ಳು, ಕಟ್ಟಿಗೆ ಅಥವಾ ಇತರ ದಹ್ಯ ವಸ್ತು; ಕರಿ ಇದ್ದಲಿಯಂತಾದದ್ದು.

ಕರ್ಕಾ (ನಾ) = ಸುಟ್ಟು ಕರಕಲಾದ ಕುಳ್ಳು; ಕಟ್ಟಿಗೆ, ಇದ್ದಲಿ ಇತ್ಯಾದಿ.

ಕರ್ಕಾಳಿ (ನಾ) = ಅತಿ ಕಪ್ಪು ವರ್ಣದವಳು. (ಬೈಗುಳ)

ಕರ್ಕಾಳ್ಯಾ (ನಾ) = ಅತಿ ಕಪ್ಪು ವರ್ಣದವನು. (ಬೈಗುಳ)

ಕರ್ಕಿಹೊಲ = ಗರಿಕೆ ಬೆಳೆದು ಬೀಳು ಬಿದ್ದ ಹೊಲ.

ಕರ್ಕಿ (ನಾ) = ಕರಿಕೆ; ಗರಿಕೆ.

ಕರ್ಕಿನಾಟು (ಕ್ರಿ) = ಹೊಲಬೀಳು ಬೀಳು.

ಕರ್ಕಿನಟ್ಟು (ನಾ) = ಬೀಳುಬಿದ್ದ. ಹೊಲದ ಹುಲ್ಲು . (ಹಾಡು: ಹಳ್ಳಿ ಆಳನಾ ಹೂಡಿರಬೇಕ। ಕರ್ಕಿನಟ್ಟಾ ತೆಗೆದಿರಬೇಕ।। -ಹುಕೇರಿ ಬಾಳಪ್ಪ)

ಕರ್ಕು (ನಾ) = ಹೊತ್ತಿ ಆರಿದ ಕುಳ್ಳು, ಕಟ್ಟಿಗೆ ಇತ್ಯಾದಿ ಬೂದಿಯಾಗುವ ಮುನ್ನ ನೀರಿನಿಂದ ಆರಿಸಿದ ಕರ್ಕಲು.

ಕರ್ಕೊ (ಕ್ರಿ) = ಕರೆದು ಕೊ; ಐನೋರು ಕರೆದುಕೊ; ಜಂಗಮ ಪಾದ ಪೂಜೆ ಮಾಡು; ಬರಮಾಡಿಕೊಳ್ಳು.

ಕರ್ಗಾರ (ನಾ) = ಉಣ್ಣೆ ಕಂಬಳಿಗೆ ಕರೆ ಕಟ್ಟುವವರು.

ಕರ್ಗಾಲು (ನಾ) = ಕರಿಗಾಲು (ನೋಡಿರಿ).

ಕರ್ಗಾಲ್ಯಾ (ನಾ) = ಅಶುಭ ಕಾಲಿನವನು; ಕಾಲಿಟ್ಟರೆ ಕೇಡು ತರುವವನು; ಆಪ್ಪೇಸಿ.

ಕರ್ಗಾಸ (ನಾ) = ಕರಗಸ; ಗರಗಸ.

ಕರ್ಜಾ (ನಾ) ಉ. = ಸಾಲ; ಋಣ; ರಿಣ.

ಕರ್ಜಿಕಾಯಿ (ನಾ) = ರವೆಯಿಂದ ಕರಿದು ಮಾಡಿದ ಸಿಹಿ ತಿಂಡಿ.

ಕರ್ಟಾ (ನಾ) = ಕರಟಗಿ (ನೋಡಿರಿ)

ಕರ್ಣಾ (ನಾ) = ಕರುಣೆ; ದಯೆ; ಕನಿಕರ (ಗಾದೆ:- ಕರ್ಣಾ ಬಂದ್ರ ಕಾಯಿ, ಮರ್ಣಾ ಬಂದ್ರ ಬಯ್ಯಿ).

ಕರ್ತಾಯಿ (ನಾ) = ಕರ್ತೈ; ಕರ್ತವ್ಯ; ಜವಾಬ್ದಾರಿ.

ಕರ್ತಾಯಿ ಕಡಿ (ಕ್ರಿ) = ಕರ್ತವ್ಯ ನೆರವೇರಿಸು; ಜವಾಬ್ದಾರಿ ನಿಭಾಯಿಸು.

ಕರ್ತೈ (ನಾ) = ಕರ್ತಯಿ; ಕರ್ತವ್ಯ; ಜವಾಬ್ದಾರಿ.

ಕರ್ದಂಟು (ನಾ) = ಕರಿದ ಅಂಟು; ಕರಿದ ಅಂಟಿನಿಂದ ತಯಾರಿಸಲಾದ ಸಿಹಿ ತಿಂಡಿ;

ಕರ್ದಹೋಳ್ಗಿ (ನಾ) = ಎಣ್ಣೆಯಲ್ಲಿ ಬೇಯಿಸಿ ತಯಾರಿಸಿದ ಹೋಳಿಗೆ. ಎಣ್ಣೆ ಹೋಳಿಗೆ (ಗಾದೆ : ಕರ್ದಹೋಳ್ಗಿ ಕೊಟ್ರ, ಬೆಲ್ಲಾಕಮ್ಮಾ ಗ್ಯಾದಂತಂತ!)

ಕರ್ದು(ಕ್ರಿ) = ಕರೆದು, ಬರಮಾಡಿಕೊಂಡು.

ಕರ್ನಾಗರ (ನಾ) = ಕಪ್ಪು ಬಣ್ಣದ ನಾಗರ ಹಾವು.

ಕರ್ನಾಗರ ಹರಿಲಿ (ಕಿ) = ಕರಿನಾಗರ ಹಾವು ಕಚ್ಚಲಿ (ಬೈಗುಳ).

ಕರ್ನಾಟಕ (ನಾ) = ಕನ್ನಡ ನಾಡು, ಕರುನಾಡು.

ಕರ್ನಾಲ್ಗಿ (ನಾ) = ಕೇಡು ನುಡಿವ ನಾಲಗೆ; ನುಡಿದರೆ ಕೇಡು ಸಂಭವಿಸುವ ನಾಲಗೆ; ಕರಿಯ ಮಚ್ಚೆ ಉಳ್ಳ ನಾಲಗೆ.

ಕರ್ನಾಲ್ಯಾ (ನಾ) = ನಾಲಗೆಯ ಮೇಲೆ ಕರಿಯ ಮಚ್ಚೆ ಉಳ್ಳವನು; ನುಡಿದರೆ ಕೇಡುಂಟು ಮಾಡುವ ನಾಲಗೆಯವನು.

ಕರ್ಪುರ (ನಾ) = ಆರತಿಗಾಗಿ ಬಳಸುವ ಸುಗಂಧವುಳ್ಳ ಘನ ವಸ್ತು; ಪ್ಲಾಸ್ಟಿಕ್ಕು; ಪಲಾಸ್ಟಿಕು.

ಕರ್ಬನ್ನು (ನಾ) = ಕರ್ಬೊನ್ನು; ಕಬ್ಬಿಣ, ಕಂಚು ಅಥವಾ ಮಣ್ಣಿನ ಕೊಡಗಳ ಅಡಕಿಲ ಸಾಲು. (ಗಾದೆ:- ಕಂಚಿನ್ ಕರ್ಬನ್ನೇರ್ಸಿದಾಕಿ ಹಂಚಿಗಿ ಕೈ ಚಾಚಿದಳಂತ).

ಕರ್ಬೇವು (ನಾ) = ಕರಿಬೇವು, ಅಡುಗೆಯ ಪರಿಮಳದ ಸೊಪ್ಪು.

ಕರ್ಬೊನ್ನು (ನಾ) = ಕರ್ಬನ್ನು (ನೋಡಿರಿ).

ಕರ್ಮಣಿ (ನಾ) = ಕಪ್ಪು ಬಣ್ಣದ ಮಣಿ; ಮಂಗಳ ಸೂತ್ರದ ಕರಿ ಬಣ್ಣದ ಮಣಿ.

ಕರ್ಮಣಿ ಕಟ್ಗೊ (ಕ್ರಿ) = ಮದುವೆಯಾಗು; ಲಗ್ನ ಮಾಡಿಕೊ.

ಕರ್ಮಣಿ ಕಡಿ (ಕ್ರಿ) = ಮಂಗಳಸೂತ್ರ ಹರಿ; ಗುಳ್ದಾಳಿ ಹರಿ; ವಿಚ್ಛೇದನ ಹೊಂದು; ವಿಧವೆಯಾಗು.

ಕರ್ಮಣಿ ಸರ (ನಾ) = ಮಂಗಳ ಸೂತ್ರ; ತಾಳಿ; ಗುಳ್ದಾಳಿ.

ಕರ್ಮಣಿ ಹರಿ (ಕ್ರಿ) = ಮದುವೆ ಮುರಿ; ವಿಚ್ಛೇದನ ಹೊಂದು.

ಕರ್ಮಣೂಕ (ನಾ) ಮ. = ಮನಸ್ಸು ಹತ್ತುವಿಕೆ.

ಕರ್ಮಣ್ಕಿ (ನಾ) = ಕರ್ಮಣೂಕ; ಮನಸ್ಸು ಹತ್ತುವಿಕೆ.

ಕರ್ಮಸಿ (ನಾ) = ಕರಿ ಬಣ್ಣದ ಲೇಖಣಿಯ ಮಸಿ; ಕರ್ಕಾ; ಸುಟ್ಟು ಆರಿದ ಕಟ್ಟಿಗೆ, ಕುಳ್ಳು ಇತ್ಯಾದಿ ಕಪ್ಪು ವಸ್ತು; ಇದ್ದಲಿ; ರೊಟ್ಟಿ ಹಂಚಿಗೆ ತಗುಲಿದ ಕರಿಮಸಿ.

ಕರ್ಮಾಸು (ಕ್ರಿ) = ಮನಸ್ಸು ಹತ್ತು (ಗಾದೆ : ನನ್ಗಾ ನಿನ್ಗಾ ಜಮಾಸಾಲ; ನಿನಗ್ಬಿಟ್ಟು ಕರ್ಮಾಸಾಲ)

ಕರ್ಸಾಲಾಗು (ಕಿ) = ಕರಿಸಾಲು ಬೀಳು (ನೋಡಿರಿ)

ಕರ್ಸಾಲು (ನಾ) = ಕರಿಸಾಲು (ನೋಡಿರಿ)

ಕರ್ಸೊಳ್ಗ (ನಾ) = ಕಪ್ಪು ಬಣ್ಣವುಳ್ಳವನು (ಳು)

ಕಲ್ಕ್ಮಲ್ಕ್ (ನಾ) = ಗದ್ದಲ; ಗೊಂದಲ; ಗುಂಜು.

ಕಲಕಾಗು (ಕ್ರಿ) = (ನೀರು) ಹೊಲಸಾಗು; ರಾಡಿಯಾಗು; ಗಲೀಜಾಗು.

ಕಲಕು (ವಿ.) = ಹೊಲಸು; ಗಲೀಜು; ಗದ್ದಲ.

ಕಲಕು ಮಲಕು ಮಾಡು (ನಾ) = ಕದಡು; ಗದ್ದಲ ಎಬ್ಬಿಸು; ಗೊಂದಲ ಉಂಟು ಮಾಡು; ಹೊಲಸು ಮಾಡು; ರಾಡಿ ಎಬ್ಬಿಸು.

ಕಲಕುಮಾಡು (ಕ್ರಿ) = ರಾಡಿ ಎಬ್ಬಿಸು.

ಕಲ್ಕೊಬ್ರಿ (ನಾ) = ಕೊಬ್ಬರಿಯಂತೆ ರುಚಿಯುಳ್ಳ ಗಡ್ಡೆಯುಳ್ಳ ಒಂದು ಪ್ರಕಾರದ ಕಾಡುಸಸ್ಯ.

ಕಲಗಂಚಿ (ನಾ) = ಮುಸುರೆಯ ಮಂಥಣಿ; ಎಂಜಲನ್ನ; ಮುಸುರೆ ನೀರು; ಹೊಟ್ಟು, ತೌಡು ಬೆರೆಸಿದ ನೀರು.

ಕಲ್ಗುಬ್ಬಿ (ನಾ) = ಕಲ್ಲು ಗುಂಪಿನಲ್ಲಿ ಮನೆ ಮಾಡುವ ಗುಬ್ಬಿ.

ಕಲ್ಗೂಟ (ನಾ) = ಬೀಸು ಕಲ್ಲಿನ ಗುಂಜಿ, ಗೂಟ; ಬೀಸುಕಲ್ಲಿನ ಹೊಕ್ಕಳ್ಗೂಟ.

ಕಲ್ವತ್ತು (ನಾ) = ಚಟ್ನಿ ಅರೆಯುವ ಇಲ್ಲವೆ ಔಷಧಿ ಅರೆಯುವ ಒರಳು.

ಕಲ್ಬೆರ್ಕಿ (ನಾ) = ಬೆರೆಸಿದ ವಸ್ತು; ಬೇರೆ ಬೇರೆ ಕಾಳಿನ ಮಿಶ್ರಣ; ಧಪಾಟಿಗಾಗಿ ತಯಾರಿಸಲಾದ ಮಿಶ್ರ ಹಿಟ್ಟು; ಉತ್ತಮ ಧಾನ್ಯದೊಂದಿಗೆ ಸಾದಾ ಧಾನ್ಯ ಬೆರೆಸಿದ್ದು.

ಕಲ್ಬೆರ್ಕಿ ಮಾಡು (ಕ್ರಿ) = ಮಿಶ್ರ ಮಾಡು; ಒಂದು ವಸ್ತುವಿನೊಂದಿಗೆ ಇತರ ವಸ್ತುಗಳನ್ನು ಬೆರೆಸು.

ಕಲಮಿ (ವಿ) ಉ = ಕಸಿ ಮಾಡಿದ.

ಕಲಮಿ ಮಾನ್ಕಾಯಿ (ನಾ) = ಕಸಿ ಮಾಡಿ ಬೆಳೆಸಿದ ಮಾವು.

ಕಲಮು (ನಾ) = ಲೆಕ್ಕಣಿಕೆ; ಲೇಖಣಿ; ಸಸ್ಯಗಳ ಕಲಮು ಕಸಿ; ಲೆಕ್ಕಕ್ಕೆ ಸಂಬಂಧಿಸಿದ ಉತಾರು; ನಕಲು.

ಕಲಯಿ (ನಾ) = ಕಲಾಯಿ; ಗಿಲಾಟು.

ಕಲಸು (ಕ್ರಿ) = ಕಲೆಸು; ಬೆರೆಸು; ಮಿಶ್ರಣ ಮಾಡು; ಕೂಡಿಸು.

ಕಲಾಕಾರ (ನಾ) = ಕಲಾವಿದ; ಕಲೆಯನ್ನು ಬಲ್ಲವ.

ಕಲಾಯಿ (ನಾ) = ಕಲಯಿ; ಹಿತ್ತಾಳೆ, ತಾಮ್ರ ಮೊದಲಾದ ಲೋಹದ ಪಾತ್ರೆಗಳು ಕಿಲುಬದಂತೆ ಒರೆಸುವ ತೆಳುವಾದ ಗಿಲಾಟಿನ ಲೇಪನ.

ಕಲಾಯಿಗಾರ (ನಾ) = ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳಿಗೆ ಗಿಲಾಟಿನ ಲೇಪನ ಮಾಡುವವನು.

ಕಲಾಯಿ ಮಾಡು (ಕ್ರಿ) = ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳಿಗೆ ಗಿಲಾಟಿನ ಲೇಪನ ಮಾಡು.

ಕಲಾಲ (ನಾ) = ಹೆಂಡ, ಸಾರಾಯಿ ಮೊದಲಾದ ಮಾದಕ ಪೇಯಗಳ ತಯ್ಯಾರಕ ಮತ್ತು ಮಾರಾಟಗಾರ.

ಕಲಿ (ನಾ) = ಕಲೆ; ಧಬ್ಬಾ; ಕಲಂಕ; ಡಾಗು; ಕಲಿಯುಗ.

ಕಲಿ (ಕ್ರಿ) = ಅರಿ; ತಿಳಿ; ಅಭ್ಯಾಸ ಮಾಡು; ಸೇರು; ಕೂಡು; ಬೆರೆ.

ಕಲಿಕಾಲ (ನಾ) = ಕಲಿಯುಗ; ನಾಲ್ಕನೆಯ ಯುಗ; ಕೆಟ್ಟಕಾಲ.

ಕಲಿಸು (ಕ್ರಿ) = ಬೋಧಿಸು; ಬೆರೆಸು; ಬೆರಕೆ ಮಾಡು; ಜಗಳ ಹಚ್ಚು.

ಕಲ್ಕ (ವಿ) = ಕಲಕಾದ; ಕದಡಿದ; ರಾಡಿಯಾದ.

ಕಲ್ಕುಟ್ಯಾ (ನಾ) = ಕಲ್ಲು ಕಟೆಯುವ ಕಾಯಕದವನು.

ಕಲ್ಖಣಿ (ನಾ) = ಕಲ್ಲಿನ ಗಣಿ; ಕಟ್ಟಡಕ್ಕಾಗಿ ಬಳಸುವ ಕಲ್ಲನ್ನು ಒದಗಿಸುವ ತಾಣ.

ಕಲ್ಖೋರಿ (ನಾ) = ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿಯ ಹೆಸರು. ಇಲ್ಲಿಯ ಜಾತ್ರೆ ಬಹಳ ಪ್ರಸಿದ್ಧವಾದದ್ದು.

ಕಲ್ಗೂಟಾ (ನಾ) = ಬೀಸುವ ಕಲ್ಲಿನ ಗೂಟ; ಗುಂಜಿ.

ಕಲ್ಪನಾ (ನಾ) = ಊಹೆ; ಭಾವನೆ.

ಕಲ್ಪನಾ ಮಾಡು (ಕ್ರಿ) = ಕಲ್ಪಿಸು; ಊಹಿಸು.

ಕಲ್ಬಾಳಿ (ನಾ) = ಗುಂಡುಗಲ್ಲುಗಳಿಂದ ಕಟ್ಟಿದ ಗೋಡೆ

ಕಲ್ಬಟ್ಲು (ನಾ) = ಕಲ್ಲಿನಿಂದ ತಯಾರಿಸಲಾದ ಬಟ್ಟಲು.

ಕಲ್ಯಾಣ (ನಾ) = ಶರಣರ ಕಾಯಕ ಕ್ಷೇತ್ರ ಬಸವ ಕಲ್ಯಾಣ (ಉದಾ :- ಶಿವನ ಕಲ್ಯಾಣ/ಭುವನ ಕಲ್ಯಾಣ/ಶಿವಶರಣರ ಅನುಭವದ ಕಲ್ಯಾಣ).

ಕಲ್ಯಾಣಾಗಲಿ = ನಿಷೇದಾರ್ಥದಲ್ಲಿ ಕೇಡಾಗಲಿ ಎಂಬ ಅರ್ಥದ ಬೈಗಳು; ಒಳ್ಳೆಯದಾಗಲಿ; ಮದುವೆ ನೆರವೇರಲಿ.

ಕಲ್ಲಡಿ (ನಾ) = ಕಲ್ಲಿನಿಂದ ತುಂಬಿದ ಅಡವಿ, ಹೊಲ

ಕಲ್ಲರ್ಬಿ (ನಾ) = ಬೀಸುಕಲ್ಲು ಸ್ವಚ್ಛಗೊಳಿಸುವ ಮತ್ತು ಹಿಟ್ಟು ಬಳಿವ ಬಟ್ಟೆ; ಸುಂದರಿ ಎಂಬ ಹೆಸರಿನ, ತೆಂಗಿನ ಗುಂಜಿನಿಂದ ಮಾಡಲಾದ ಹಿಟ್ಟು ಬಳಿವ ಮತ್ತು ಬೀಸು ಕಲ್ಲು ಸ್ವಚ್ಛಗೊಳಿಸುವ ಸಾಧನ.

ಕಲ್ಲಿ = ಅಕೋ ಅಲ್ಲಿ.

ಕಲ್ಲಿದ್ಲಿ (ನಾ) = ಕಲ್ಲಿನಂತೆ ಗಟ್ಟಿಯಾದ ಇಡ್ಡಲಿ; ಗಣೆಯಿಂದ ಅಗಿದು ತೆಗೆದ ಇಡ್ಡಲಿ.

ಕಲ್ಲುಕೋಳಿ (ನಾ) = ರೇಡಿಯೊ; ಬಾನುಲಿ (ಕಾಲಜ್ಞಾನ :- ಕಲ್ಲುಕೋಳಿ ಕೂಗ್ಯಾತು ನೋಡಿರಣ್ಣ).

ಕಲ್ಲು ಖಿಳಿ (ನಾ) = ಕಲ್ಲಿನಿಂದ ತುಂಬಿದ ಭೂಭಾಗ; ಕಲ್ಲು ಭೂಮಿ.

ಕಲ್ಲುಮುಳ್ಳಾಡಿಸು (ಕ್ರಿ) = ಸವೆದು ಹೋದ ಬೀಸು ಕಲ್ಲನ್ನು ಮತ್ತೆ ಮೊನಚಾಗುವಂತೆ ಛಾನದಿಂದ ಕಟೆ.

ಕಲ್ಲುಮುಳ್ಳಿನ ಹಾದಿ (ನಾ) = ಸಮತಟ್ಟಿಲ್ಲದ, ಕಷ್ಟಕರವಾದ ಕಾಡುದಾರಿ.

ಕಲ್ಲೆ = ಅಕೋ ಅಲ್ಲೆ.

ಕಲ್ಲ್ಯೋ = ಅಕೋ ಅಲ್ಲಿಯೋ.

ಕಲ್ವಾಡಿ (ನಾ) = ಭಾಲ್ಕಿ ತಾಲೂಕಿನ ಒಂದು ಹಳ್ಳಿಯ ಹೆಸರು. ಶಿಕ್ಷಣ ಸಂಸ್ಥೆ ಕಟ್ಟಿದ ಬಸಪ್ಪ ಕಲ್ವಾಡಿ ಎಂಬುವರ ಹುಟ್ಟೂರು.

ಕಲ್ಸಕ್ರಿ (ನಾ) = ಕಲ್ಲು ಸಕ್ಕರೆ; ನಾಬತ್ತು; ಲಾಬತ್ತು; ಖಡಿ ಸಕ್ರಿ.

ಕಲ್ಸಬ್ಸಿ (ನಾ) = ಕಾಡು ಸಬ್ಬಸಿಗ.

ಕಲ್ಸು (ಕ್ರಿ) = ಓದಲು ಬರೆಯಲು ಕಲಿಸು; ಬೆರೆಸು; ಕಲಬೆರಕೆ ಮಾಡು; ಬೋಧಿಸು.

ಕವಕವ ಮಾಡು (ಕ್ರಿ) = ತಲೆಚಿಟ್ಟು ಹಿಡಿವಂತೆ ಮಾತಾಡು; ಕಿಟಿ ಕಿಟಿ ಕೊಡು; ಕಾಡು; ಕಿರ್ಕಿರಿ ಮಾಡು; ಬಾಯಿಮಾಡು.

ಕವಡಿ (ನಾ) = ಕವಡೆ; ಪಗಡೆಕಾಯಿ; ಹಳೆಯ ಕಾಲದ ನಾಣ್ಯ (ಗಾದೆ :- ಕವಡಿ ಆಮ್ದನಿ ಇಲ್ಲ, ಘಳ್ಗಿ ಫುರ್ಸತ್ಗಿ ಇಲ್ಲ).

ಕವಡಿ ಕಿಮ್ಮತ್ತು (ನಾ) = ಅಲ್ಪ ಮೌಲ್ಯ; ಕಡಿಮೆ ಬೆಲೆ; ಅಗ್ಗದ ದರ.

ಕವಡಿ ಮೋಲು (ನಾ) = ಅಗ್ಗ ಬೆಲೆ; ಅಲ್ಪ ಮೌಲ್ಯ.

ಕವಡಿಯಾಟಾ (ನಾ) = ಕವಡೆಯಿಂದ ಆಡುವ ಆಟ; ಪಗಡೆಯಾಟ.

ಕವಡಿಯಾಡು (ಕ್ರಿ) = ಪಗಡೆಯಾಡು; ದ್ಯೂತವಾಡು; ಜೂಜಾಟವಾಡು.

ಕವಡಿಸರ (ನಾ) = ಕವಡೆ ಪವಣಿಸಿ ತಯಾರಿಸಿದ ಕೊರಳ ಮಾಲೆ; ಭೂತೇರ ಕೊರಳ ಮಾಲೆ.

ಕವಡ್ಯಾಳ = ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿ; ಕೌಡ್ಯಾಳ.

ಕವಣಿ (ನಾ) = ಕವಣೆ; ಕಲ್ಲು ಬೀಸಿ ಹೊಡೆಯಲು ಬಳಸುವ ನಾರಿನ ಹಗ್ಗದ ಇಲ್ಲವೆ ತೊಗಲಿನ ಸಾಧನ; ಬೀಸುಗಲ್ಲೆಸೆವ ಸಾಧನ.

ಕವಣಿಗಲ್ಲು (ನಾ) = ಕವಣೆಯಿಂದ ಬೀಸಿ ಎಸೆದಕಲ್ಲು; ಕವಣೆಗಲ್ಲು.

ಕವಣಿಗಲ್ಲು ಹೊಡಿ (ಕ್ರಿ) = ಕವಣೆಯಿಂದ ಬೀಸಿ ಕಲ್ಲನ್ನು ಎಸೆ.

ಕವನಾ (ನಾ) = ಕವನ; ಕವಿತೆ; ಹಾಡು; ಮೋಸ; ಕುಟಿಲಾಟ.

ಕವನಾ ನಡ್ಸು (ಕ್ರಿ) = ಕುಟಿಲಾಟ ಮಾಡು.

ಕವನಾ ಹೂಡು (ಕ್ರಿ) = ತಂತ್ರ ಯೋಜಿಸು, ಮೋಸಮಾಡು; ಕುಟಿಲತನ ನಡೆಸು.

ಕವಲು (ನಾ) = ಟಿಸಿಲು; ರಿಕ್ಕು; ಬರಡಾದ ಟೊಂಗೆ.

ಕವಲೊಡಿ (ನಾ) = ಟಿಸಿಲೊಡೆ; ರಿಕ್ಕೊಡೆ; ಟೊಂಗೆ ಒಡೆ; ಎರಡಾಗು.

ಕವಳಾ (ನಾ) = ಕಬ್ಬಿನ ಗಾಣದ ಬಾಯಲ್ಲಿ ಕೊಟ್ಟ ಕಬ್ಬು; ತುತ್ತು; ಕವಳ.

ಕವಳಾ ಕುಡು(ಕ್ರಿ) = **ಯಂತ್ರದ ಬಾಯಲ್ಲಿಕಬ್ಬುಕೊಡು.**

ಕವಳಾ ತಿನು (ಕ್ರಿ) = ತುತ್ತು ತಿನ್ನು; ಉಣ್ಣು.

ಕವಳಿ (ನಾ) = ಕಳವೆ; ಭತ್ತ; ನೆಲ್ಲು; ಕೌಳಿ.

ಕವಿ (ನಾ) = ಕವಿತೆ ಬರೆಯುವವನು.

ಕವಿಕಟ್ಟು (ಕ್ರಿ) = ಕವಿತೆ ರಚಿಸು.

ಕವಿಗಾರ (ನಾ) = ಕವಿ; ಕವನ ರಚಿಸುವವನು.

ಕವಿಮಾಡು (ಕ್ರಿ) = ಕವಿತೆ ರಚಿಸು.

ಕವ್ಣಿ (ನಾ) = ಕವಣೆ (ನೋಡಿರಿ).

ಕವ್ಣಿಗಲ್ಲು (ನಾ) = ಕವಣೆಗಲ್ಲು (ನೋಡಿರಿ).

ಕವ್ಣಿಗಲ್ಲು ಹೊಡಿ (ನಾ) = ಕವಣೆಗಲ್ಲು ಹೊಡಿ (ನೋಡಿರಿ).

ಕವ್ರು = ಅಕೋ ಅವರು.

ಕವ್ವು = ಅಕೋ ಅವು.

ಕವ್ಳು = ಅಕೋ ಅವಳು.

ಕಸಪಟ್ಟು (ನಾ) = ಕಸ ಬೆರೆತ ಕಾಳು.

ಕಸಬನ್ (ನಾ) = ಕಸ್ಬನ್; ಸೂಳೆ; ಸೂಳೆಗಾರಿಕೆ ಉದ್ಯೋಗ ನಡೆಸುವವಳು.

ಕಸಬಾ (ನಾ) = ಹಳ್ಳಿ; ಗ್ರಾಮ.

ಕಸಬು (ನಾ) = ಕೆಲಸ; ಉದ್ಯೋಗ.

ಕಸಭಾರ್ಗಿ (ನಾ) = ಭಾರಿಗೆ; ರಜಗೀಲು; ಸೊಡ್ಡು; ಝಾಡು; ಪೊರಕೆ.

ಕಸರತ್ತು (ನಾ) = ವ್ಯಾಯಾಮ; ಸಾಮು.

ಕಸಾ (ನಾ) = ಕಸ; ಕೊಳೆ; ಹೊಲಸು; ಪೈರಿನಲ್ಲಿ ಬೆಳೆದ ಕಳೆ; ಸದಿ.

ಕಸಾಮುಸ್ರಿ (ನಾ) = ಮನೆಯಲ್ಲಿ ಬಿದ್ದ ಕಸ ಕಡ್ಡಿ ಮತ್ತು ಮುಸುರೆಯಿಂದ ಕೂಡಿದ ಪಾತ್ರೆ ಇತ್ಯಾದಿ; ಕಸಗುಡಿಸುವಿಕೆ ಮತ್ತು ಮುಸುರೆ ತೊಳೆಯುವಿಕೆ.

ಕಸಿ (ನಾ) = ಅಂಗಿಯ ಕಸೆ, ಬಾರಾಬಂದಿ ಅಂಗಿಯ ಕಸೆ; ಕುಲಾಯಿಯ ಕಸೆ.

ಕಸಿಯಂಗಿ (ನಾ) = ಗುಂಡಿ ಮತ್ತು ಗುಂಡಿ ಮನೆಯ ಬದಲು ಕಸೆಗಳನ್ನು ಹಚ್ಚಿ ಹೊಲಿದ ಅಂಗಿ.

ಕಸಿ ಮಾಡು (ಕ್ರಿ) = ಕಲಮು ಮಾಡಿ ಸಸಿ ನೆಡು; ಬುಡದ ಸುತ್ತ ಮುತ್ತಲಿನ ಮಣ್ಣು ಸಡಿಲುಗೊಳಿಸಿ ಗೊಬ್ಬರ ಹಾಕು.

ಕಸೀಸಿ (ನಾ) = ಸಂಕಟ; ತಳಮಳ; ಕಸಿವಿಸಿ.

ಕಸೀಸಿಯಾಗು (ಕ್ರಿ) = ಚಡಪಡಿಸು; ತಳಮಳಿಸು; ಕಸಿವಿಸಿ ಪಡು.

ಕಸು (ನಾ) = ತಾಕತ್ತು; ಬಲ; ಶಕ್ತಿ.

ಕಸುರು (ನಾ) = ಬಾಕಿ; ಸಿಲ್ಲಕು; ಶೇಷ; ಸತ್ವ; ಸಾರ.

ಕಸ್ಕೊ (ಕ್ರಿ) = ಕಸಿದುಕೊಳ್ಳು.

ಕಸ್ಗುರಿ (ನಾ) = ಕಾಯ್ದಿಟ್ಟ ಬಲಿಯ ಕುರಿ.

ಕಸ್ಗೊ (ಕ್ರಿ) = ಕಸಿದುಕೊ; ಒತ್ತಾಯದಿಂದ ಪಡೆದುಕೊ.

ಕಸ್ಬಾ (ನಾ) = ಹಜಾಮತಿ; ಕ್ಷೌರ; ನೆತ್ತಿ ಬೋಳಿಸುವಿಕೆ; ಕಟಿಂಗ್; ಮಾರಿಗಸ್ಬಾ.

ಕಸ್ಪಟ್ಟು (ನಾ) = ಕಸಬೆರೆತ ಕಾಳು; ಕಸಮಿಶ್ರಿತ ಧಾನ್ಯ.

ಕಸ್ಮುಳ (ನಾ) = ಹೊಲಸು; ಕೊಳೆ; ಕಶ್ಮಲ.

ಕಸ್ಮೋಳ (ನಾ) = ಕಸ್ಮುಳ; ಕಶ್ಮಲ; ಹೊಲಸು; ಕೊಳೆ.

ಕಸ್ಮೋಳಗೇಡಿ (ನಾ) = ಹೊಲಸು ತನದಿಂದ ಕೆಟ್ಟವನು (ಬೈಗಳು).

ಕಸ್ಮೋಳ ಧಂದ್ಯಾ (ನಾ) = ಹೊಲಸು ಕೆಲಸ; ಕೇಡಿನ ಕೆಲಸ.

ಕಸ್ಮೋಳಿ (ನಾ) = ಹೊಲಸಾಗಿರುವವಳು.

ಕಸ್ಮೋಳ್ಯಾ (ನಾ) = ಹೊಲಸಾಗಿರುವವನು.

ಕಸ್ರಾಮುಸ್ರಾ (ನಾ) = ಹದಗೆಟ್ಟ ಸ್ಥಿತಿ; ಅವ್ಯವಸ್ಥಿತವಾದದ್ದು; ಹದಗೆಟ್ಟದ್ದು.

ಕಸ್ಪಾಮಿಸ್ಪಾ (ಕ್ರಿ) = ಕಸಕಡ್ಡಿ ಮಿಶ್ರಿತಗೊಂಡ.

ಕಳಂಡಿ (ನಾ) = ತಂಪುಗಾಳಿ; ಖಾರಿ; ನಸುಕಿನ ಜಾವ ಇಲ್ಲವೆ ಸಂಜೆಗೆ ಬೀಸುವ ಚಳಿಗಾಳಿ.

ಕಳವಿ (ನಾ) = ಭತ್ತ; ನೆಲ್ಲು; ಕವಳಿ.

ಕಳವಿ ಗದ್ದಿ = ಭತ್ತದ ಬೆಳೆಯ ನೀರಾವರಿಯ ಹೊಲ.

ಕಳಸ ಏರ್ಸು (ಕ್ರಿ) = ದೇವಾಲಯದ ಶಿಖರದ ಮೇಲೆ ಕಳಸಗಳನ್ನು ಇರಿಸು.

ಕಳಸಗಿತ್ತಿ (ನಾ) = ಮದುವೆಯಲ್ಲಿ ಕಳಸವುಳ್ಳ ಆರತಿಯನ್ನು ಹಿಡಿಯುವವಳು; (ಗಾದೆ :- ಕರಿಲಾದ್ರೋರ್ಕ್ಮನಿಗಿ ಕಳಸಿಗಿತ್ತಿಯಾಗಿ ಹೋದಳಂತೆ); ಗುರು ಜಗದ್ಗುರುಗಳ ಮೆರೆವಣಿಗೆಯಲ್ಲಿ ತುಂಬಿದ ಕಳಸ ಹೊರುವ ಮುತ್ತೈದೆ.

ಕಳಸಾ (ನಾ) = ಕಳಸ, ಪೂಜೆಗಾಗಿ ನೀರು ತುಂಬಿಡುವ ಬಿಂದಿಗೆ; ಶಿಖರಗಳಿಗೆ ಹಾಕುವ ಕಂಚು, ಹಿತ್ತಾಳೆ, ಬೆಳ್ಳಿ ಅಥವಾ ತಾಮ್ರದ ಗುಂಡು ಗುಂಡಾದ ಪಾತ್ರೆ; (ಗಾದೆ:- ಹುಮನಾಬಾದಿ ಹುಟ್ಟಿ । ಹೂವಿನ ಬಾಜರ ಕಟ್ಟಿ । ವೀರೆಯ್ಯ ಹುಟ್ಟಿ ಗುಡಿ ಕಟ್ಟಿ । ಉಪಾರಣ್ಣ । ಕಳಸಾ ಏರಟ್ಗೆ ಜಿವ ಬಿಟ್ಟಿ ॥).

ಕಳಸಾ ಏರ್ಸು (ಕ್ರಿ) = ದೇವಾಲಯದ ಶಿಖರದ ಮೇಲೆ ಕಂಚು, ಹಿತ್ತಾಳೆ, ತಾಮ್ರ ಅಥವಾ ಬಂಗಾರದ ಕಲಶಗಳನ್ನು ಒಂದರ ಮೇಲೊಂದಿರಿಸು.

ಕಳಸಿ (ನಾ) = ಬಿಂದಿಗೆ; ತುಂಬಿಗೆಗಿಂತ ದೊಡ್ಡದಾದ ಹಾಗೂ ಕೊಡಕಿಂತ ಸಣ್ಣದಾದ ನೀರು ತುಂಬುವ ಪಾತ್ರೆ; ಸಣ್ಣ ಬಿಂದಿಗೆ.

ಕಳಿ (ಕ್ರಿ) = ಕಳೆ; ಬಟ್ಟೆ ಕಳಚು; ನಿರ್ವಸ್ತ್ರವಾಗು.

ಕಳ್ಕಿ (ನಾ) = ಕಣಿಕೆ; ಜೋಳದ ಒಣಗಿದ ದಂಟು.

ಕಳ್ತಾನ (ನಾ) = ಕಳ್ಳತನ; ಕದಿಯುವಿಕೆ.

ಕಳ್ತಾನ ಮಾಡು (ಕ್ರಿ) = ಕಳವು ಮಾಡು; ಕದಿ.

ಕಳಿನ (ನಾ) = ಕಳಸಿ (ನೋಡಿರಿ).

ಕಳ್ಸಾ = ಕಳಸಾ (ನೋಡಿರಿ).

ಕಳ್ಸೆ (ನಾ) = ಕಳನೆ (ನೋಡಿರಿ).

ಕಳ್ಳ (ನಾ) = ಕದಿಯುವವನು; ಕಳ್ಳತನ ಮಾಡುವವನು; ಚೋರ (ಗಾದೆ :- ಕುಂಬಳ್ಕಾಯಿ ಕಳ್ಳಾ ಅಂದ್ರೆ ಹೆಗಲ್ಮುಟ್ಟಿ ನೋಡ್ಕೊಂಡ).

ಕಳ್ಳಕುಬ್ಸಾ ಮಾಡು (ಕ್ರಿ) = ಮೊಟ್ಟ ಮೊದಲು ಬಸಿರಿಯಾದವಳಿಗೆ,

ತೌರಿನವರು ಯಾರಿಗೂ ಗೊತ್ತಾಗದಂತೆ ಎಲ್ಲರಿಗಿಂತ ಮುಂಚೆ ಕುಪ್ಪಸ ತೊಡಿಸುವ ಶಾಸ್ತ್ರ ಏರ್ಪಡಿಸು.

ಕಳ್ಳ ಕೆಸುರು (ನಾ) = ಕಳ್ಳ ಹುದುಲು; ಒಣಗಿದಂತೆ ಕಾಣುವ ಕೆಸರು.

ಕಳ್ಳ ಖಿಂಡಿ (ನಾ) = ಗುಪ್ತದ್ವಾರ; ಗುಪ್ತ ಮಾರ್ಗ.

ಕಳ್ಳ ಮಾಲು (ನಾ) = ಕಳವು ಮಾಡಿ ತಂದ ವಸ್ತು; ಕದ್ದು ತಂದ ವಸ್ತು.

ಕಳ್ಳ ಯಾಪಾರ (ನಾ) = ಮೋಸದಿಂದ ಕೂಡಿದ ಖರೀದಿ ಮತ್ತು ವಿಕ್ರಿ.

ಕಳ್ಳ ಹುದ್ಲು (ನಾ) = ಕಳ್ಳ ಕೆಸರು; ಒಣಗಿದಂತೆ ಕಾಣುವ ಕೆಸರು. (ಹಾಡು: ಇಲ್ಲದಿರ್ಕ ನಿನ್ನ ಅಳುವು। ಕಳ್ಳ। ಹುದುಲಾಗ ಸಿಕ್ಕೇನ । ಕಳ್ಳ । ಹುದುಲಾಗ ಸಿಕ್ಕೇನ.

-ದ.ರಾ. ಬೇಂದ್ರೆ.

ಕಳ್ಳ ಹೆಜ್ಜೆ (ನಾ) = ಮೆಲ್ಲಗೆ ಸದ್ದಾಗದಂತೆ ಇಡುವ ಹೆಜ್ಜೆ.

ಕಳ್ಳಾ ಮುಳ್ಳಿ (ನಾ) = ಮಳೆಗಾಲದಲ್ಲಿ ಕೈಚಾಚಿಕೊಂಡು ತನ್ನ ಸುತ್ತ ಮುತ್ತ ತಾನೆ ಫೇರಿ ಹೊಡೆಯುವ ಮಕ್ಕಳಾಟ (ಮಕ್ಕಳ ಪ್ರಾಸ :- ಕಳ್ಳಾಮುಳ್ಳಿ ಕಾಳ್ಗಿ; ದೇವ್ರ ಗುಡ್ಯಾಗ ಹೋಳ್ಗಿ).

ಕಳ್ಳಿ (ನಾ) = ಕಳ್ಳೆ; ಕಳ್ಳತನ ಮಾಡುವವಳು; ಮುರಿದರೆ, ಚಿವುಟಿದರೆ ಹಾಲು ಸೋರಿಸುವ ಒಂದು ಪ್ರಕಾರದ ಗಿಡ; ಬಿಳಿರಸ ಒಸರುವ ಗಣಿಕೆಯ ಗಿಡ; ಬೇಲಿಗಾಗಿ ಬಳಸುವ ಗಿಡ.

ಕಳ್ಳಿ ಬೇಲಿ (ನಾ) = ಕಳ್ಳಿಗಿಡಗಳನ್ನು ಬೆಳೆಸಿ ಮಾಡಿದ ಬೇಲಿ.

ಕಳ್ಳು (ನಾ) = ಕರುಳು; ಕಳಕಳಿ.

ಕಳ್ಳು ಕಾಳಜಿ (ನಾ) = ಕರುಳಿನ ಕಳಕಳಿ; ನಂಟು ತನದ ಪ್ರೇಮ.

ಕಳ್ಳು ಚುರ್ರನು (ಕ್ರಿ) = ಮನಸಿಗೆ ನೋವಾಗು.

ಕಳ್ಳು ಬೆಳ್ಳಿ (ನಾ) = ಕಳ್ಬೆಳ್ಳಿ; ಕರುಳ ಬಳ್ಳಿ; ಒಂದೇ ರಕ್ತ ಹಂಚಿಕೊಂಡವರೆಂಬ ಭಾವನೆ.

ಕಾ = ಆಕೋ; ಆ.

ಕಾಂಕ್ರೀಟು (ನಾ) = ಕಲ್ಲು ಚಿಂಪು, ರೇತಿ, ಸಿಮೆಂಟುಗಳನ್ನು, ನೀರಿನಲ್ಲಿ ಬೆರೆಸಿ ಮಾಡಿದ ಮಿಶ್ರಣ.

ಕಾಂಚನಾ (ನಾ) = ಕಾಂಚನ; ಹೊನ್ನು; ಚಿನ್ನ (ವಚನ :- ಕಾಂಚನವೆಂಬ ನಾಯನೆಚ್ಚಿ ನಿಮ್ಮ ನಾನು ಮರೆದೆನಯ್ಯಾ - ಬಸವಣ್ಣನವರು).

ಕಾಂಜಿನ ಖಂಬ (ನಾ) = ಬೀದರಿನ ಖಾಜಾ ಮಹಮಮ್ಮೂದ ಗವಾನನ ಮದರಾಸಾದ ಗುಂಬಜ.

ಕಾಂಜಿನ ಘೊಂಬಿ (ನಾ) = ಸುಂದರಿ; ಗಾಜಿನಿಂದ ತಯ್ಯಾರಿಸಿದ ಬೊಂಬೆ.

ಕಾಂಜಿನ ಬಳಿ (ನಾ) = ಗಾಜಿನ ಬಳೆ.

ಕಾಂಜು (ನಾ) = ಗಾಜು.

ಕಾಂಟಾ (ನಾ) = ತಕ್ಕಡಿ; ತ್ರಾಸು; ಮುಳ್ಳು.

ಕಾಂತಾ, ಕಾಂತ (ನಾ) = ಒಡೆಯ; ಗಂಡ; ನಲ್ಲ. ದೊಡ್ಡಾಟದ ಮಾತು. ಮತ್ತಾದರೂ ಹೇಳುವನು ಕೇಳೆನ್ನ ಕ್ರಾಂತಾ। ಸದ್ಗುಣ ಸಮರ್ಥಾ॥

ಕಾಂತಾರ (ನಾ) = ಘೋರ ಅರಣ್ಯ; ದಟ್ಟ ಅಡವಿ.

ಕಾಂತಿ (ನಾ) = ಬೆಳಕು; ಹೊಳಪ್ಪು; ಪ್ರಭೆ; ಹೆಂಡತಿ; ಪತ್ನಿ; ನಲ್ಲೆ; ಹೆಂಗಸು (ಹಾಡು :- ಕಾಂತಿ ನೀ ಬಾರೆಂದು ಏಕಾಂತದಲಿ ಕರೆದು)

ಕಾಂತಿಕೂಡಿಸು (ಕ್ರಿ) = ಇಷ್ಟಲಿಂಗಕ್ಕೆ ಹೊಳಪು ಬರುವಂತೆ ಮಾಡು.

ಕಾಂವ್ಣಿ (ನಾ) = ಕವಣೆ (ನೋಡಿರಿ).

ಕಾಂವ್ಣಿಗಲ್ಲು (ನಾ) = ಕವಣೆಗಾಗಿ ಉಪಯೋಗಿಸುವ ಕಲ್ಲು.

ಕಾಂವು (ನಾ) = ಕೊಡಲಿಯ, ಸಲಿಕೆಯ, ಗುದ್ದಲಿಯ, ಪಿಕಾಸುಗಳ ಶಿರದಲ್ಲಿ ಸೇರಿಸುವ ಕೋಲು. (ಗಾದೆ :- ಕೊಡಲಿಯ ಕಾಂವು ಕುಲಕ್ಕೆ ಕೇಡು).

ಕಾಕ (ನಾ) = ಚಿಕ್ಕಪ್ಪ; ಅಪ್ಪನ ತಮ್ಮ; ತಾಯಿಯ ತಂಗಿಯ ಗಂಡ.

ಕಾಕ ಬದಿ (ನಾ) = ಕೆಟ್ಟ ವಿಚಾರ; ದುರ್ಗುಣ; ಕುಚೇಷ್ಟೆ (ಸೀಗಿಯ ಹಾಡು :- ಯಾಕೊ ರಂಗಯ್ಯ ನಿಮ್ಮ ಕಾಕ ಬದಿಗಳು/ಸಾಕನಡಿ ನಡಿ/ಸರಿಯೆ ಸವತಿ ಮನಿಕಡಿ).

ಕಾಕಾ (ನಾ) = ಚಿಕ್ಕಪ್ಪ; ಅಪ್ಪನ ತಮ್ಮ; ಕಾಕ; ತಾಯಿಯ ತಂಗಿಯ ಗಂಡ; ಉಳ್ಳಿಗಡ್ಡೆಯ ಘಾಟು ವಾಸನೆ; ಕಣ್ಣಿಗೆ ನೀರು ತರುವ ಘಾಟು ವಾಸನೆ.

ಕಾಕಾಡಿ = ಅಕೋ ಆಕಡೆ.

ಕಾಕಿ (ನಾ) = ಚಿಕ್ಕಮ್ಮ; ತಾಯಿಯ ತಂಗಿ; ಕಕ್ಕೆಗಿಡ; ತಾರೀಗಿಡ.

ಕಾಕಿ (ಸ.ನಾ) = ಆಕೋ ಆಕೆ.

ಕಾಗಿ (ನಾ) = ಕಾಗೆ. ಕಾಕ (ಗಾದೆ :- ಕಾಗಿ ಕರ್ರಂದ್ರ ಲಾಳೆತ್ತು ಬೆದುರ್ತಂತ. ಕಾಗಿ ಕಾ ಅಂದ್ರ ಮನಿಥುಂಬ ಬಳ್ಗಾ).

ಕಾಗಿಕಣ್ಣಾಗು (ಕ್ರಿ) = ಚುರುಕು ದಿಟ್ಟಿ ಉಳ್ಳವನಾಗು.

ಕಾಗಿಕಣ್ಣಾಂವ (ನಾ) = ಕಾಗೆಯಂತೆ ಚುರುಕು ಕಣ್ಣು ಉಳ್ಳವನು.

ಕಾಗಿಕಣ್ಣು (ನಾ) = ಸೂಕ್ಷ್ಮ ಕಣ್ಣು.

ಕಾಗಿ ಕೂಟ (ನಾ) = ಹೆಣ್ಣು ಮತ್ತು ಗಂಡು ಕಾಗೆ ಒಂದಾಗುವಿಕೆ; (ಕಾಗೆ ಕೂಟ ನೋಡುವುದು ಅಶುಭವೆಂಬ ಭಾವನೆ ಈ ಭಾಗದಲ್ಲಿದೆ. ಕೂಟ ನೋಡಿದ ವ್ಯಕ್ತಿ ಸತ್ತಿದ್ದಾನೆಂದು ಸುದ್ದಿ ಕಳಿಸುತ್ತಾರೆ. ಅಳುತ್ತ ಬಂದವರು ಉಂಡು ತಿಂದು ನಗುತ್ತ ಹೋಗುತ್ತಾರೆ.)

ಕಾಗಿಕೈ (ನಾ) = ಕೊಡಲಾರದ ಕೈ; ಕಸಿದುಕೊಳ್ಳುವ ಕೈ; ಜಿಪುಣ.

ಕಾಗಿ ಕೈಯ್ಯಾಗ ಕಾರ್ಭಾರ ಕುಡು (ಕ್ರಿ) = ಕಾಗೆ ಗುಣದವನಿಗೆ ಅಧಿಕಾರ ಕೊಡು (ಗಾದೆ :- ಕಾಗಿ ಕೈಯಾಗ ಕಾರ್ಭಾರ ಕೊಟ್ಟರ ಕಚ್ರಿ ಎಲ್ಲಾ ಹೊಲ್ಸು ಮಾಡ್ತು).

ಕಾಗಿ ಜ್ವಾಳಾ (ನಾ) = ಕರಿಯ ಗುನಿಯುಳ್ಳ ಜೋಳ; ಅರಳು ಹುರಿಯಲು ಬಳಸುವ ಜೋಳ; ಅರಳಿನ ಜೋಳ.

ಕಾಗಿ ಮೂರಿ (ನಾ) = ಕಾಗೆಯಂತೆ ಕರಿಮೋರೆ.

ಕಾಗಿನೆಲೆ (ನಾ) = ಕನಕದಾಸರೆಂಬ ಸಂತನ ಊರು.

ಕಾಗಿನೆಲೆಯಾದಿ ಕೇಶವ (ನಾ) = ಕನಕದಾಸರ ಕಾವ್ಯನಾಮ.

ಕಾಗಿ ಮಾರ್‍ಯಾಕಿ (ನಾ) = ಕಾಗೆಯಂತೆ ಕರಿಮೋರೆಯುಳ್ಳವಳು.

ಕಾಗಿ ಮಾರ್‍ಯಾಂವ (ನಾ) = ಕಾಗೆಯಂತೆ ಕರಿಮೋರೆಯುಳ್ಳವನು.

ಕಾಗಿರ್‍ವಾಗಾ (ನಾ) = ಮನುಷ್ಯನು ಕಾಗೆ ಬಣ್ಣಕ್ಕೆ ತಿರುಗುವ ರೋಗ; ಕಾಡಿಗಿ ರೋಗ.

ಕಾಗುಜು (ನಾ) = ಕಾಗದ; ಕಾಗುದು.

ಕಾಗುದು (ನಾ) = ಕಾಗದ.

ಕಾಚಾ (ನಾ) = ಕಾಚು; ತಾಂಬೂಲದಲ್ಲಿ ಸುಣ್ಣದೊಂದಿಗೆ ಸೇರಿಸಿ ತಿನ್ನುವ ಒಂದು ಪದಾರ್ಥ.

ಕಾಚಿಗಿ = ಆಕೋ ಆಚೆಗೆ.

ಕಾಚು (ನಾ) = ಕಾಚಾ (ನೋಡಿರಿ).

ಕಾಚ್ಯಾಕ (ಅ) = ಆಕೋ ಆಚೆಗೆ.

ಕಾಜಾ (ನಾ) = ಅಂಗಿ, ಕೋಟು ಮೊದಲಾದವುಗಳಿಗೆ ಗುಂಡಿ ಹಾಕುವದಕ್ಕಾಗಿ ಮಾಡಿದ ರಂಧ್ರ; ಗುಂಡಿ ಮನೆ.

ಕಾಜಾ ಮಾಡು (ಕ್ರಿ) = ಗುಂಡಿ ಮನೆ ಮಾಡು; ಅಂಗಿಗೆ ಗುಂಡಿ ಹಚ್ಚು.

ಕಾಜು (ನಾ) = ಗುಂಡಿ ಮನೆ; ಗಾಜು.

ಕಾಜೂ (ನಾ) = ಗೋಡಂಬಿ; ಗೇರು ಬೀಜ.

ಕಾಂಞ್ ಕುಂಞ್ ಮಾಡು (ಕ್ರಿ) = ಬಾಯ್ಬಿಚ್ಚು; ಬಾಯಿ ತೆರೆ; ಹೆಚ್ಚು ಕಡಿಮೆ ಮಾಡು; ಸಲ್ಲದುದನ್ನು ಮಾಡು; ಹಿಂದು ಮುಂದೆ ನೋಡು; ಆಕ್ಷೇಪ ಮಾಡು; ವಿರೋಧಿಸು, ಗೊಣಗುಟ್ಟು.

ಕಾಟಂಕೂಟಿ (ನಾ) = ತಪ್ಪು ಚಿನ್ಹೆ ಬಳಸುವಿಕೆ; ತಪ್ಪುಗಳಿಂದ ತುಂಬಿರುವಿಕೆ.

ಕಾಟಂಕೂಟಿ ಮಾಡು (ಕ್ರಿ) = ಬರವಣಿಗೆಯನ್ನು ಕೆಡಿಸು; ಬರೆದುದನ್ನು ರದ್ದು ಮಾಡಿಸು.

ಕಾಟಕ (ನಾ) = ಬೇಟೆಗಾರ; ಮಾಂಸಾಹಾರಿ.

ಕಾಟಕಬ್ಬಲ್ಯಾ (ನಾ) = ಮಾಂಸಾಹಾರಿ ಕಬ್ಬಲಿಗ.

ಕಾಟಾ (ನಾ) = ತಕ್ಕಡಿ; ತ್ರಾಸು; ಮುಳ್ಳು; ಗಡಿಯಾರದ ಮುಳ್ಳು; ಕಾಟ; ತೊಂದರೆ.

ಕಾಟಾ ಕಡಿ (ಕ್ರಿ) = ಸೇಡು ತೀರಿಸಿಕೊ; ಕಷ್ಟ ದೂರ ಮಾಡು; ಕಂಟಕ ದೂರ ಮಾಡು.

ಕಾಟಿ (ನಾ) = ಮೈ ಕಟ್ಟುಳ್ಳವ; ಗಟ್ಟಿ ಮುಟ್ಟಿಯಾದವ.

ಕಾಟೋಪೀಟೋ ಲೂಟೋಬಾಟೋ = ಕೊಲ್ಲು; ಹೊಡಿ; ಲೂಟಿ ಮಾಡು; ಹಂಚಿ ತಿನ್ನು, ಇದು ನಿಜಾಮನಾಳಿಕೆಯ ರಜಾಕಾರರ ದೌರ್ಜನ್ಯದ ಸೂತ್ರ.

ಕಾಡತೂಸು (ನಾ) = ತೋಟಾ; ಮದ್ದು ತುಂಬಿದ ಕೊಳವೆ; ಬಂದೂಕಿನ ಗೋಲಿ.

ಕಾಡಾ (ನಾ) = ವನಸ್ಪತಿಗಳನ್ನು ಕುದಿಸಿ ತೆಗೆದ ಅರ್ಕ; ಕಷಾಯ.

ಕಾಡಾಕಾಲ (ನಾ) = ಕೇಡುಗಾಲ (ಗಾದೆ:- ಕಾಡಾಕಾಲ್ಕ ಕ್ವಾಡಗ ಮಾಡೀತಂತ!)

ಕಾಡಾನಿ (ನಾ) = ಕಾಡಾನೆ; ಕಾಡಿನಲ್ಲಿ ವಾಸಿಸುವ ಆನೆ.

ಕಾಡಿಗಿ (ನಾ) = ಕಾಡಿಗೆ; ದೀಪದ ಉರಿಯ ಮಸಿ; ಕಣ್ಣಿಗೆ ಹಚ್ಚಿಕೊಳ್ಳುವ ಕಾಜಲ್; ಸುರ್ಮಾ.

ಕಾಡಿಗಿಜ್ವಾಳಾ (ನಾ) = ಕಪ್ಪೇರಿದ ಜೋಳದ ಕಾಳು.

ಕಾಡಿಗಿ ತೆನಿ (ನಾ) = ಕಾಡಿಗೆ ಬಣ್ಣಕ್ಕೆ ತಿರುಗಿದ ಜೋಳದ ತೆನೆ.

ಕಾಡಿಗಿ ಬ್ಯಾನಿ (ನಾ) = ಮುಖ, ಮೈ, ಕೈ ಕಪ್ಪೇರುವ ಬೇನೆ; ಕಾಗೆ ರೋಗ, ಜೋಳ ಕಪ್ಪೇರುವ ರೋಗ. (ತತ್ವ :- ಕುಂತುರ್ನಿಂತುರ ಕಾಡುವಂಥಾ ಕಾಡಿಗಿ ಬ್ಯಾನಿ-ದೇಶಾಂಶ ಹುಡಗಿ.)

ಕಾಡಿಗಿರ್ವಾಗಾ (ನಾ) = ಕಾಡಿಗೆ ರೋಗ; ತೆನೆಯ ಕಾಳುಗಳಿಗೆ ತಗಲುವ ಕಾಳನ್ನು ಕಪ್ಪುಗೊಳಿಸುವ ರೋಗ.

ಕಾಡಿಸು (ಕ್ರಿ) = ಕಾಡ್ಸು; ತೊಂದರೆ ಕೊಡು; ಕೀಟಲೆ ಕೊಡು.

ಕಾಡು (ನಾ) = ಅಡವಿ; ದಟ್ಟ ಅರಣ್ಯ.

ಕಾಡು (ಕ್ರಿ) = ಹಿಂಸಿಸು; ಪೀಡಿಸು; ತೊಂದರೆ ಕೊಡು (ಗಾದೆ :- ಕಾಡಿ ಕೂಡಬೇಕು; ಕೂಡಿ ಕಾಡಬಾರದು).

ಕಾಡು ಕುಳ್ಳು (ನಾ) = ಕಾಡಿನಲ್ಲಿ ಬಿದ್ದು ಒಣಗಿದ ಸೆಗಣಿ; ಕಾಡ್ಕುಳ್ಳು; ಕಾರ್ಕುಳ್ಳು.

ಕಾಡು ಪಾಪ (ನಾ) = ವೇಷ ಹಾಕುವವ; ಸ್ಮಶಾನದಲ್ಲಿರುವ ಕಾಡು ಸಿದ್ಧ; ಕೈಚಳಕದಿಂದ ಜನರನ್ನು ಮರುಳುಗೊಳಿಸುವ ಮಾಟಗಾರ.

ಕಾಡು ಬೋಡು (ನಾ) = ಕಾಡಿನಲ್ಲಿ ಸಿಗುವ ಸೊಪ್ಪು, ಹಣ್ಣು ಹಂಪಲ ಇತ್ಯಾದಿ.

ಕಾಡ್ಕುಳ್ಳು (ನಾ) = ಕಾಡು ಕುಳ್ಳು; ಕಾಡಿನಲ್ಲಿ ಬಿದ್ದು ಒಣಗಿದ ಸೆಗಣಿ; ಕಾರ್ಕುಳ್ಳು.

ಕಾಡ್ಡಿ (ನಾ) = ಕರಡಿ; ಕಡಲೆ (ಕಾಡ್ಡಿ ಗಿಡ್ಕ ಮಂಚ್ಗಿ ಹಾಕಾಂವ)

ಕಾಡ್ಡಿ ಹುಲಿ (ನಾ) = ಕರಡಿ

ಕಾಡ್ಡಿ ಹುಲಿ ಆಡ್ಸು (ಕ್ರಿ) = ಕರಡಿಯಿಂದ ಆಟ ವಾಡಿಸು, ಕುಣಿಸು, ಆದಾಯ ಸಾಧನ ಮಾಡಿಕೊ.

ಕಾಡ್ಡಿ ಹುಳಾ (ನಾ) = ಕರಡಿಯಂತೆ ಮೈಯೆಲ್ಲ ಕೂದಲುಳ್ಳ ಒಂದು ಪ್ರಕಾರದ ಕ್ರಿಮಿ; ಕಂಬಳಿ ಹುಳು.

ಕಾಡ್ಡಿಹೊಲ (ನಾ) = ಕಡಲೆ ಬೆಳೆಯ ಹೊಲ (ಗಾದೆ :- ಕಾಡ್ಡಿ ಹೊಲಕ ಮಂಚ್ಗಿ ಹಾಕಾಂವ)

ಕಾಡ್ಸು (ಕ್ರಿ) = ಕಾಡಿಸು; ಕಾಡು ತೊಂದರೆ ಕೊಡು.

ಕಾಣಿಗ (ನಾ) = ಒಂದು ಪ್ರಕಾರದ ಕಾಡು ಗಿಡ ಮತ್ತು ಅದರ ಕಾಯಿ; ಹೊಂಗೆ ಮರ.

ಕಾಣಿಗ್ಯಾ = ಕಾಣಿಗ (ನೋಡಿರಿ).

ಕಾಣ್ಸು (ಕ್ರಿ) = ಕಾಣಿಸು; ತೋರು; ಕಣ್ಣೆದುರು ಬರು.

ಕಾತ = ಅಕೋ ಆತ.

ಕಾದು = ಆಕೋ ಅದು.

ಕಾನ್‌ಕಾನ್ ಕುತ್ತತ್ತಿ (ನಾ) = ಒಂದು ಪ್ರಕಾರದ ಮಕ್ಕಳ ಆಟ (ಶಿಶು ಪ್ರಾಸ:-

ಕಾನ್ ಕಾನ್ ಕುತ್ತತ್ತಿ, ಕಿಲ್ಲಿಗ್ಬಂತೊ ಸಂಗಯ್ಯಾ).

ಕಾನೂನು (ನಾ) = ಕಟ್ಟಳೆ; ನಿಯಮ.

ಕಾನೋಲಿ (ನಾ) = ಒಂದು ಬಗೆಯ ಸಿಹಿ ತಿಂಡಿ; ಹೂರಣಗಡುಬು.

ಕಾನ್ವಾಪ್ಪಿ (ನಾ) = ಬಾವುಲಿ; ತೊಗಲು ಬಾವುಲಿ.

ಕಾನ್ಮೋಡಿ (ನಾ) ಮ.= ಕಿವಿ ಹಿಂಡುವಿಕೆ.

ಕಾಪಾರ (ನಾ) = ಕಾಫರ; ಶೂರ; ಪರಾಕ್ರಮಿ; ಪರಿಶ್ರಮಿ.

ಕಾಪಾಳ್ಬಿನ್ನಿ (ನಾ) = ಮೆಲುಕಿನಲ್ಲಿ ಹಾಕುವ ಏಟ (ಇಲ್ಲಿ ಬಗ್ಗು = ಬಲ್ಲಿ ಕರೆದು ಬಗ್ಗಿಸು. ಕಾನ್ಮೋಡಿ = ಕಿವಿ ಹಿಂಡುವಿಕೆ. ಕಾಪಾಳ್ಬಿನ್ನಿ = ಮೆಲುಕಿನಲ್ಲಿ ಹಾಕುವ ಏಟ. ಇವುಗಳ ಮುಕ್ಕೂಟವೇ ಇಲ್ಲಿ ಬಗ್ಗು; ಕಾನ್ಮೋಡಿ; ಕಾಪಾಳ್ಬಿನ್ನಿ ಎಂಬ ಒಗಟು.

ಕಾಪಿ (ನಾ) = ವಹಿ; ನೋಟುಬುಕ್ಕು; ಪ್ರತಿ; ನಕಲು; ಒಬ್ಬರು ಬರೆದುದನ್ನು ನೋಡಿ ಮತ್ತೊಬ್ಬರು ನಕಲು ಮಾಡುವಿಕೆ; ಕಾಫಿ ಪೇಯ; ಪ್ರತಿರೂಪ.

ಕಾಪಿ ಇಳಿಸು (ಕ್ರಿ) = ಇದ್ದಿದ್ದಂತೆ ಬರೆ; ನಕಲು ಮಾಡು.

ಕಾಪಿ ಕುಡು (ಕ್ರಿ) = ಪರೀಕ್ಷೆಯಲ್ಲಿ ಪರೀಕ್ಷಾರ್ಥಿಗೆ ನಕಲಿನ ಚೀಟಿ ಒದಗಿಸು, ಕೊಡು.

ಕಾಪಿ ಮಾಡು (ಕ್ರಿ) = ನಕಲು ಮಾಡು; ಇದ್ದದ್ದಿದ್ದಂತೆ ಬರೆ.

ಕಾಪಿ ಹಿಡಿ (ಕ್ರಿ) = ಪರೀಕ್ಷೆಯಲ್ಲಿ ನಕಲು ಮಾಡುವ ಕಳ್ಳತನವನ್ನು ಕಂಡು ಹಿಡಿ.

ಕಾಪಿ ಹೊಡಿ (ಕ್ರಿ) = ಒಬ್ಬರು ಬರೆದುದನ್ನು ನೋಡಿ ಇನ್ನೊಬ್ಬರು ನಕಲು ಮಾಡು.

ಕಾಪ್ರಿ (ನಾ) = ಅಪವಾದ; ನಿಂದೆ; ಅಪಕೀರ್ತಿ.

ಕಾಫರ (ನಾ) = ಮುಸ್ಲಿಂ ಧರ್ಮೀಯನಾಗಿದ್ದು ದೇವರನ್ನು ನಂಬಲಾರದವನು; ಭವಿ; ಧರ್ಮಬಾಹಿರ; ಕಾಫಿರ್.

ಕಾಫಿ (ನಾ) = ಕಾಫಿ ಬೀಜದ ಪುಡಿಯಿಂದ ತಯಾರಿಸಲಾದ ತಂಪು ಇಲ್ಲವೆ ಬಿಸಿ ಪಾನೀಯ.

ಕಾಬಿಲ್ (ವಿ) ಉ. = ಖಾಬಿಲ್; ಯೋಗ್ಯವಾದ; ತಕ್ಕುದಾದ.

ಕಾಬಿಲ್ಲಾಗು (ಕ್ರಿ) = ಖಾಬಿಲ್ಲಾಗು; ಯೋಗ್ಯನಾಗು; ತಕ್ಕವನಾಗು.

ಕಾಮಚಲಾವು = ತಾತ್ಪೂರ್ತಿಕ; ಸಮಯಕ್ಕೆ ಹೊಂದುವ.

ಕಾಮಣ್ಣ (ನಾ) = ಕಾಮದೇವ; ಹೋಳಿಕಾಮಣ್ಣ.

ಕಾಮಧೇನು (ನಾ) = ಬೇಡಿದ್ದನ್ನು ಕೊಡುವ ಗಿಡ (ಹಾಡು :- ಕಾಮಧೇನು ಕಲ್ಪವೃಕ್ಷ । ಯಾವ ಜಾಗಾದಲ್ಲಿ ಇತ್ತು। ಕಾಮಧೇನು॥).

ಕಾಮಶಾಸ್ತ್ರ (ನಾ) = ರತಿ ಕ್ರೀಡೆಯ ವಿಜ್ಞಾನ; ಪ್ರೇಮ ಪಾಠದ ವಿಜ್ಞಾನ; ಶೃಂಗಾರ ಕೂಟದ ವಿಜ್ಞಾನ.

ಕಾಮಾ (ನಾ) = ಕಾಮ; ಕಾಮ ದೇವರು (ಹೋಳಿ ಹಾಡು :- ಕಾಮಾ ಭೀಮಾ ಒಳ್ಳೆವ್ರಪ್ಪ। ಯಾರಿಗೇನ್ಮಾಡ್ಯಾರಪ್ಪಾ। ಹೂಸ್ಬುರ್ಕಿ ಮುದುಕಿಗಿ.... ಕೂಸ್ಪೀಳಾಂಗ ಆತ್ತಾಳೊ).

ಕಾಮ್ಣಿ (ನಾ) ಉ. = ಕಾಮಾಲೆ (ಗಾದೆ:- ಕಾಮ್ಣಿ ಆದೋರ್ಕಣ್ಣಿಗಿ ದುನಿಯಾ ಎಲ್ಲಾ ಹಚ್ಚೆ).

ಕಾಮ್ಯಾಬ (ವಿ.) = ಉತ್ತೀರ್ಣ; ಪಾಸು; ಯಶಸ್ವಿ.

ಕಾಯಂ (ವಿ) ಉ. = ಖಾಯಮ್ಮು; ಶಾಶ್ವತ; ಸ್ಥಿರವಾದ; ಖಚಿತವಾದ.

ಕಾಯ (ನಾ) = ಖಾಯಾ; ಶರೀರ.

ಕಾಯಕ (ನಾ) = ಭಕ್ತಿಯಿಂದ ಮಾಡುವ ಕಾಯಕಷ್ಟ.

ಕಾಯಾಪುರ (ನಾ) = ಶರೀರ, ದೇಹ (ಕೊಳ್ಳೂರ ಹುಸ್ನಾನ ಹಾಡು).

ಕಾಯಿ (ಕ್ರಿ) = ಕಾಪಾಡು; ರಕ್ಷಿಸು; ಕಾಯು; ಬಿಸಿಯಾಗು.

ಕಾಯಿ (ನಾ) = ಮಿಡಿಯೂ ಅಲ್ಲದ ಹಣ್ಣೂ ಅಲ್ಲದ ಫಲ.

ಕಾಯಿ ಬೀಜ = ಸೇಂಗದ ಕಾಳು.

ಕಾಯಿ ಕಡಿ (ಕ್ರಿ) = ಗಿಡದಿಂದ ಫಲವನ್ನು ಹರಿ (ಕೋಲಿನ ಹಾಡು :- ಬಾಳಿಯಾ ಬನದವ್ವೆ ರಂಗ। ಬಾಲೀನಾ ಒಬ್ಬವ್ವೆ ರಂಗ। ಕಾಯಿ ಕಡಿಭ್ಯಾಡ। ಘೊಲ್ಲೆ ಮುರಿಭ್ಯಾಡ।).

ಕಾಯು (ಕ್ರಿ) = ಬಿಸಿಯಾಗು; ಬೆಚ್ಚಗಾಗು, ದಾರಿ ಕಾಯು.

ಕಾಯ್ಕಡಿ (ಕ್ರಿ) = ಗಿಡದ ಫಲವನ್ನು ಕಿತ್ತುಕೊ (ಕೋಲಿನ ಹಾಡು :- ಕಾಯ್ಕಡಿ ಭ್ಯಾಡ್ಯಾ। ಘೊಲ್ಯಾ ಮುಡಿಭ್ಯಾಡಾ।).

ಕಾಯ್ದಾ (ನಾ) = ಕಾನೂನು.

ಕಾಯ್ಬೀಜ (ನಾ) = ಸೇಂಗದ ಬೀಜ; ಭಯ್ಯ್ಯಾಂಗ ಬೀಜ.

ಕಾಯ್ಲಿ (ನಾ) = ಕಾವಲು; ಪಹರೆ.

ಕಾಯ್ಲಿ ಮಾಡು (ಕ್ರಿ) = ಕಾವಲಿರು; ಕಾವಲು ಕೆಲಸ ಮಾಡು.

ಕಾರಂಜಾ (ನಾ) = ಬೀದರ ಜಿಲ್ಲೆಯ ನೀರಾವರಿ ಅಣೆಕಟ್ಟು.

ಕಾರಂಜಿ (ನಾ) = ಜೋರಾಗಿ ಚಿಮ್ಮುವ ನೀರು.

ಕಾರಕಿರ್ದಿ (ನಾ)ಉ. = ನಡಾವಳಿ; ಅಧಿಕಾರದ ಅವಧಿ; ಆಡಳಿತ ಕಾಲ.

ಕಾರಖಾನಿ (ನಾ) = ಕಾರ್ಖಾನೆ; ಯಂತ್ರಗಳ ಸಹಾಯದಿಂದ ದೊಡ್ಡ ಪ್ರಮಾಣದಲ್ಲಿ ವಸ್ತುಗಳನ್ನು ತಯಾರಿಸುವ ಕಾರ್ಯಸ್ಥಳ.

ಕಾರಣ (ನಾ) = ನಿಮಿತ್ತ; ಉದ್ದೇಶ; ಕಾರ್ಯಕ್ರಮ; ಆದುದರಿಂದ; ಸಲುವಾಗಿ.

ಕಾರಭಾರ (ನಾ) = ಉಸ್ತುವಾರಿ; ಜವಾಬ್ದಾರಿ; ಉಸಾಬಾರಿ; ಕಾರ್ಭಾರ.

ಕಾರಭಾರಿ (ನಾ) = ಊರ ಮುಂದಾಳು; ಕಾರ್ಯದರ್ಶಿ.

ಕಾರಸ್ತಾನ (ನಾ) = ಒಳಸಂಚು; ಪಿತೂರಿ; ಕುತಂತ್ರ.

ಕಾರಾಳ (ನಾ) = ಅಚ್ಚಕಪ್ಪಾದ ಮುಂಗಾರಿ ಸಣ್ಣ ಸಣ್ಣ ಎಣ್ಣೆ ಕಾಳು.

ಕಾರಾಳು (ನಾ) = ಕಾರಾಳ; ಒಂದು ಪ್ರಕಾರದ ಕಪ್ಪಗಿನ ಸಣ್ಣ ಎಣ್ಣೆ ಕಾಳು.

ಕಾರಿ (ನಾ) = ಕಾರೆ; ಒಂದು ಪ್ರಕಾರದ ಮುಳ್ಳು ಪೊದೆ ಮತ್ತು ತಿನ್ನಲು ಉಪಯೋಗವಾಗುವ ಅದರ ಅರಿಷಿಣ ಬಣ್ಣದ ಕಾಯಿ (ಜನಪದ ಹಾಡು :- ಕಾರಿಯಾ ಕಂಟ್ಯಾಗಾ। ಕುಂತಾರ್ಮ್ಯಾ ವೋರ್ಕಳ್ಯಾರು। ಒಬ್ಬ ಕೂಡ್ದಾ। ಇಬ್ರಿಗ್ಕಣ್ಣೇಯಿಲ್ಲ).

ಕಾರಿಪಟ್ಗಿ (ನಾ) = ಒಂದು ಪ್ರಕಾರದ ಚಿನ್ನದ ಕಂಠಾಭರಣ.

ಕಾರಿಮುಳ್ಳು (ನಾ) = ಒಂದು ಪ್ರಕಾರದ ಕಾಡು ಗಿಡದ ಗಟ್ಟಿ ಮುಳ್ಳು (ಗಾದೆ: ಬಾಯಿಬೆಲ್ಲ, ಕೈಕಾರಿಮುಳ್ಳು.)

ಕಾರು (ಕ್ರಿ) = ವಾಂತಿ ಮಾಡಿಕೊ, ಉಲ್ಟಿಯಾಗು; ಹೊರಗೆಡಹು; ಸಿಟ್ಟುಹೊರ ಹಾಕು.

ಕಾರು (ನಾ) = ಕಬ್ಬಿಣದಿಂದ ಮಾಡಲ್ಪಟ್ಟ ನೇಗಿಲಿನ ಹಲ್ಲು. ಗಿಡ್ಡಿ ಮೋಟಾರು ವಾಹನ.

ಕಾರುಣ್ಣಿ (ನಾ) = ಕಾರ ಹುಣ್ಣಿಮೆ; ಮುಂಗಾರು ಪ್ರಾರಂಭದ ಮೊದಲ ಹುಣ್ಣಿವೆ; ರೈತರು ದನಕರು, ಎತ್ತುಗಳ ಮೈ ತೊಳೆದು ಮತಾಟಿ, ಕೊಂಬುಚೌರಿ ಮತ್ತು ಬಣ್ಣಗಳಿಂದ ಸಿಂಗರಿಸಿ ಹೋಳಿಗೆ ತಿನಿಸಿ ಆಚರಿಸುವ ಹಬ್ಬ (ಗಾದೆ :- ಕಾರುಣ್ಣಿ ಬಂತು ಕರ್ಕೊತ, ಹೋಳುಣ್ಣಿ ಬಂತು ಹುರ್ಕೊತ).

ಕಾರೆಳ್ಳು (ನಾ) = ಕಪ್ಪು ಬಣ್ಣದ ಎಳ್ಳು; ಗುರೆಳ್ಳು; ಒಂದು ಪ್ರಕಾರದ ಎಣ್ಣೆ ಕಾಳು.

ಕಾರೋಭಾರ (ನಾ) = ಕಾರಭಾರ; ಕಾರ್ಯಭಾರ; ಉದ್ಯಮ; ಉದ್ಯೋಗ; ವ್ಯವಹಾರ.

ಕಾರ್ಕಿ (ನಾ) = ಕಾರಿಕೆ; ವಾಂತಿ; ಉಲ್ಟಿ; ಓಕರಿಕೆ; ವಾಕರ್ಕಿ.

ಕಾರ್ಕುಳ್ಳು (ನಾ) = ಕಾಡಿನಲ್ಲಿ ಬಿದ್ದು ಒಣಗಿದ ಸೆಗಣಿ; ಕಾಡ್ಕುಳ್ಳು; ಕಾಡು ಕುಳ್ಳು.

ಕಾರ್ಖಾನಿ (ನಾ) = ಕಾರಖಾನೆ; ದೊಡ್ಡ ಪ್ರಮಾಣದ ಯಂತ್ರ ಸಹಾಯದಿಂದ ನಡೆಸಲಾಗುವ ಉದ್ಯಮ ಕೇಂದ್ರ.

ಕಾರ್ಯಾ (ನಾ) = ದೇವಿಯೆದುರು ಕುರಿಕೋಣ ಆಡುಗಳ ಬಲಿಕೊಟ್ಟು ಆಚರಿಸುವ ಹಬ್ಬ.

ಕಾರ್ಯಾದಕ್ವಾಣಾ (ನಾ) = ಬಲಿಗಾಗಿ ಸಿದ್ಧಗೊಳಿಸಲಾದ ಸೊಕ್ಕಿದ ದೇವತಿ ಕೋಣ.

ಕಾಲ್ (ನಾ) = ಕಾಲು; ಮೊಳಕಾಲಿನಿಂದ ಪಾದದ ವರೆಗಿನ ಶರೀರದ ಭಾಗ; ದೂರವಾಣಿಯ ಕರೆ (ಉದಾ :- ನೀ ಕಾಲ್ ಮಾಡು, ನಾ ಬರ್ತಾ).

ಕಾಲಂತ್ಕ (ನಾ) = ಯಮ; ಕೊಲೆಗಾರ; ಕಟುಕ ಮನಸ್ಸಿನವ; ಕೆಟ್ಟವ.

ಕಾಲಂತ್ರ (ನಾ) = ಕಾಲಮಾನ; ದಿನಮಾನ.

ಕಾಲಜ್ಞಾನ (ನಾ) = ಮುಂದೆ ಆಗುವದನ್ನು ಅಥವಾ ಭವಿಷ್ಯದಲ್ಲಿ ಆಗುವುದನ್ನು ತಿಳಿಯುವಿಕೆ. (ಹಾಡು :- ಮುಂದಿನ್ನು ದಿನಮಾನ ಬಲು ಕೆಟ್ಟ ಬರ್ತಾವ ಕೇಳಿರಣ್ಣ। ಎಂದು

ಎಂದೆನಬೇಡಿ ಬಂದಾವು ದಿನಮಾನ ನೋಡಿರಣ್ಣ॥).

ಕಾಲಮಾನ (ನಾ) = ಕಾಲಸ್ಥಿತಿ; ದಿನಮಾನ.

ಕಾಲರಾ (ನಾ) ಇಂ. = ವಾಂತಿಬೇಧಿ; ಹೈಜಾ; ಕುಂಡಿಬಾಯಿ ಬೇನೆ.

ಕಾಲಾ (ನಾ) = ಕಾಲ; ಸಮಯ; ವೇಳೆ.

ಕಾಲಾ ಕಳಿ (ಕ್ರಿ) = ಸಮಯ ನೂಕು; ಜೀವನ ಸಾಗಿಸು; ಹೊತ್ತುಗಳೆ.

ಕಾಲಾಗ ಕಟ್ಗಿ ಹೊಡಿ (ಕ್ರಿ) = ಕೆಲಸ ಕೆಡಿಸು; ಬಾಧೆ ಉಂಟು ಮಾಡು; ಕಾಲಲ್ಲಿ ತೊಡಕಾಗು.

ಕಾಲಾಗ ತೊಡಕು (ಕ್ರಿ) = ಅಡ್ಡಿಯಾಗು; ತಡೆಯುಂಟು ಮಾಡು; ಅಡ್ಡಗಾಲು ಹಾಕು; ವಿಘ್ನ ಒಡ್ಡು.

ಕಾಲಾಗಸನಿ ಇರು (ಕ್ರಿ) = ಶನಿಕಾಟವಾಗು; ದೈವಬಲ ಕಡಿಮೆಯಾಗು.

ಕಾಲಾಧಂದಾ (ನಾ) = ಕಪ್ಪು ವ್ಯವಹಾರ; ಕಳ್ಳ ವ್ಯಾಪಾರ.

ಕಾಲಾಪಾನಿ ಸಜಾ (ನಾ) = ಕರಿ ನೀರಿನ ಶಿಕ್ಷೆ; ಜನ ಸಂಪರ್ಕವಿಲ್ಲದ ಅಂದಮಾನ, ನಿಕೋಬಾರ ನಡುಗಡ್ಡೆಗಳ ಕಾರಾಗ್ರಹದಲ್ಲಿ ಕೈದಿಯಾಗಿಡುವಿಕೆ.

ಕಾಲಾಖಜಾರ (ನಾ) = ಕಪ್ಪು ವ್ಯವಹಾರದ ಸಂತೆ.

ಕಾಲಾರು (ನಾ) = ಕಾಲರು; ಅಂಗಿ, ಕೋಟು ಇತ್ಯಾದಿಗಳ ಕೊರಳ ಪಟ್ಟಿ.

ಕಾಲಿ (ನಾ) = ಕಾಳಿಕಾ ದೇವಿ; ಕಾಲುವೆ; ನಾಲೆ.

ಕಾಲಿಗಿ ಘೆಜ್ಜಿ ಕಟ್ಟು (ನು) = ನಿರಂತರ ದುಡಿಮೆಗೆ ತೊಡಗು; ಅಡಿಯ ಮೇಲ್ಭಾಗದಲ್ಲಿ ಗೆಜ್ಜೆಯನ್ನು ಹೊಂದಿಸಿ ಬಿಗಿ.

ಕಾಲಿಗಿ ಮುಳ್ಳುರಿಲಿ = ನಡೆಯಲು ಬರದಂತಾಗಲಿ; ಕುಂಟಾಗಲಿ (ಬೈಗುಳ).

ಕಾಲಿಡು (ಕ್ರಿ) = ಹೆಜ್ಜೆ ಇಡು; ನಡೆ; ಪ್ರವೇಶಿಸು.

ಕಾಲು (ನಾ) = ತೊಡೆಯಿಂದ ಪಾದದವರೆಗಿನ ಭಾಗ; ಮಂಚ ಮತ್ತು ಕುರ್ಚಿ ಇತ್ಯಾದಿಗಳ ತೋಳು.

ಕಾಲುಂಗುರು (ನಾ) = ಮುತ್ತೈದೆಯರು ಕಾಲ್ಬೆರಳಿಗೆ ಇಡುವ ಬೆಳ್ಳಿಯ ಉಂಗುರ.

ಕಾಲುಕಟ್ಟು (ಕ್ರಿ) = ಅಲ್ಲಾಡದಂತೆ ಮಾಡು; ಸ್ವಾಧೀನದಲ್ಲಿರಿಸು; ಬಂಧಿಸು.

ಕಾಲು ಕೆದರು (ಕ್ರಿ) = ಜಗಳ ತೆಗೆ; ಕಲಹ ಹೂಡು; ತಂಟೆ ತೆಗೆ.

ಕಾಲು ಚಾಚು (ಕ್ರಿ) = ವಿರಮಿಸು; ಮಲಗು; ಮುಂದಕ್ಕೆ ನುಗ್ಗು; ಆತಿಕ್ರಮಣ ಮಾಡು (ಗಾದೆ:- ಹಾಸ್ಗಿ ಇದ್ದೋಟು ಕಾಲು ಚಾಚು)

ಕಾಲು ಜಾರು (ಕ್ರಿ) = ಹೆಜ್ಜೆ ತಪ್ಪು; ಎಡವು; ಕೆಟ್ಟದಾರಿ ಹಿಡಿ; ಅಡ್ಡದಾರಿ ಹಿಡಿ; ಶೀಲಗೆಡು; ಕಾಲು ಜರುಗು; ತೂಕ ತಪ್ಪು.

ಕಾಲು ಬಿಟ್ಟ ಕತ್ತಿ (ನಾ) = ಸ್ವೇಚ್ಛಾಚಾರಿ; ಸ್ವಚ್ಛಂದ ಕುಣಿವವನು (ಉು).

ಕಾಲು ಭೀಳು (ಕ್ರಿ) = ಅಡಿಗೆ ಬೀಳು; ಶರಣಾಗು; ತಪ್ಪೊಪ್ಪು.

ಕಾಲು ಹಿಡಿ (ಕ್ರಿ) = ಶರಣಾಗು; ಆಶ್ರಯ ಕೋರು.

ಕಾಲೂರು (ಕ್ರಿ) = ತಳವೂರು; ಇಳಿದುಕೊ; ವಾಸಿಸು; ಮಳೆ ನೆಲಕ್ಕಿಳಿ (ಉದಾ :- ಗಂಗಿವಾಲ್ಕ ಮಳಿ ಕಾಲೂರ್‍ಯಾದ).

ಕಾಲೆಳಿ (ಕ್ರಿ) = ಹಿಂದೆ ಬೀಳು; ಹಿಂದಕ್ಕೆಳೆ; ಮುಂದೆ ಹೋಗದಂತೆ ಅಡ್ಡಗಾಲು ಹಾಕು.

ಕಾಲೇಜು (ನಾ) ಇಂ. = ಮಹಾ ವಿದ್ಯಾಲಯ.

ಕಾಲೋನಿ (ನಾ) = ವಿಸ್ತರಣೆ; ಬಡಾವಣೆ.

ಕಾಲ್ಕಿತ್ತು (ಕ್ರಿ) = ಓಡಿ ಹೋಗು; ತಳಬಿಡು.

ಕಾಲ್ಕಿಸಿ (ಕ್ರಿ) = ಕಾಲು ಅಗಲಗೊಳಿಸು.

ಕಾಲ್ಕುದುರಿ (ನಾ) = ಕಾಲೆ ವಾಹನ; ಕಾಲೇ ಕುದುರೆ (ಗಾದೆ :- ಕಾಲ್ಕುದುರಿ, ಕೋಲ್ವಬ್ಯ).

ಕಾಲ್ಕೆದುರು (ಕ್ರಿ) = ಜಗಳ ತೆಗೆ; ತಂಟೆ ಹೂಡು; ನಾಯಿಯಂತೆ ಕಾಲು ಕೆದರಿ ಜಗಳ ತೆಗೆ.

ಕಾಲ್ಕೈ ಮುರಿ (ಕ್ರಿ) = ಸತ್ತ ವ್ಯಕ್ತಿಯ ಕೈ ಮಡಿಸಿ ಎದೆಯ ಮೇಲಿರಿಸು ಮತ್ತು ಕಾಲು ಮಡಿಸಿ ಪದ್ಮಾಸನದಂತೆ ಮಾಡು.

ಕಾಲ್ಗಡಗ (ನಾ) = ಕಾಲಿಗೆ ತೊಡಿಸಿದ ಬೆಳ್ಳಿಯ ಕಡಗ; ಪಾದಕ್ಕೆ ಹತ್ತಿ ಇರುವ ಕಾಲಿನ ಕಡಗ; ಹಾಲ್ಗಡಗ.

ಕಾಲ್ಗುಣ (ನಾ) = ಕಾಲಿಟ್ಟ ಕ್ಷಣದಿಂದ ಪ್ರಾಪ್ತವಾಗುವ ಒಳ್ಳೆಯ ಅಥವಾ ಕೆಟ್ಟ ಫಲಪ್ರಾಪ್ತಿ.

ಕಾಲ್ಗೈ (ನಾ) = ಹರಗಿದ ಹೊಲದಲ್ಲಿ ಉಳಿದ ಕೊಯ್ಲಿ ಅಥವಾ ಕಸಪಟ್ಟು.

ಕಾಲ್ಗೈಯಾಗು (ಕ್ರಿ) = ಭೂಮಿ ಫಲವತ್ತಾಗು; ಹೊಲ ಸಸಾರ ಭರಿತವಾಗು.

ಕಾಲ್ಚಾಚು (ಕ್ರಿ) = ಮಲಗು; ಅಡ್ಡಾಗು; ಕಾಲು ಮುಂದಕ್ಕೆ ತೂರು; ವಿಶ್ರಾಂತಿ ಹೊಂದು.

ಕಾಲ್ಚೇಟು (ನಾ) = ತೋಡಿದ ತಗ್ಗಿನ ದಂಡೆಯ ಅಸಮವಾದ ಉಬ್ಬರ ಭಾಗ.

ಕಾಲ್ಜಾರಿದಾಕಿ = ಶೀಲಗೆಟ್ಟಾಕೆ.

ಕಾಲ್ಜಾರು (ಕ್ರಿ) = ಕಾಲುಜಾರು; ನೀತಿಗೆಡು; ಎಡವು; ಶೀಲಭ್ರಷ್ಟವಾಗು.

ಕಾಲ್ತಿಕ್ಕು (ಕ್ರಿ) = ಹಟಮಾಡು; ಚಂಡಿಹಿಡಿ.

ಕಾಲ್ತುಳಿ (ಕ್ರಿ) = ಕಾಲಿನಿಂದ ಕಾಲನ್ನು ಅದುಮು; ಕೆಣಕು; ಕೇಡು ಬಗೆ; ಕಾಮ ಕೇಳಿಗೆ ಆಹ್ವಾನಿಸು (ಗಾದೆ :- ಮ್ಯಾಲ ನಗ್ಗಾರ, ತೆಳ್ಗ ಕಾಲ್ತುಳಿತಾರ).

ಕಾಲ್ದಾರಿ (ನಾ) = ಜನರು ನಡೆದು ನಡೆದು ಮೂಡಿಸಿದ ದಾರಿ.

ಕಾಲ್ಧೂಳಿ (ನಾ) = ಕಾಲಿಗಂಟಿ ಬಂದ ಇಲ್ಲವೆ ಕಾಲ್ನಡಿಗೆಯಿಂದ ಗಾಳಿಗೆ ಹಾರಿದ ಮಣ್ಣು; ಕಾಲಿಗಂಟಿ ಬಂದ ಮಣ್ಣಿನಿಂದ ಉಂಟಾಗುವ ಉದರದ ಅನಾರೋಗ್ಯ; ಹೊಟ್ಟೆನೋವು.

ಕಾಲ್ಬೇಡಿ (ನಾ) = ಕೈದಿಯ ಕಾಲುಗಳಿಗೆ ಬಿಗಿದ ಕಬ್ಬಿಣ ಕಡಗ ಮತ್ತು ಸರಪಳಿ.

ಕಾಲ್ಬೀಳು (ಕ್ರಿ) = ಶರಣಾಗು; ವಂದಿಸು; ನಮಿಸು; ತಪ್ಪೊಪ್ಪು.

ಕಾಲ್ಮಡಿ (ನಾ) = ಮೂತ್ರ ವಿಸರ್ಜನೆ; ಏಕಿ; ಒಂದಾ (ಗಾದೆ:- ನೀತಿಲಿ ನಡ್ಯಾದೆ ಮಡಿ, ನೀತಿ ಬಿಟ್ರ ಕಾಲ್ಮಡಿ).

ಕಾಲ್ಮಡಿ (ಕ್ರಿ) = ಮೂತ್ರ ವಿಸರ್ಜಿಸು; ಏಕಿಮಾಡು; ಒಂದಾ ಮಾಡು.

ಕಾಲ್ಮಡಿ ಪರೀಕ್ಷಾ (ನಾ) = ಮೂತ್ರ ಪರೀಕ್ಷೆ.

ಕಾಲ್ಮಡಿ ಮಾಡು (ಕ್ರಿ) = ಕಾಲುಗಳನ್ನು ಮಡಿಚಿ ಕುಳಿತು ಮೂತ್ರ ವಿಸರ್ಜನೆ ಮಾಡು.

ಕಾಲ್ಮುರಿ (ಕ್ರಿ) = ಕಾಲು ನಡೆಯಲು ಬಾರದಂತೆ ಮಾಡು; ಸತ್ತವರ ಕಾಲುಗಳನ್ನು ಪದ್ಮಾಸನದಂತೆ ಹೊಂದಿಸು.

ಕಾಲ್ಯಾಲ ಕಾಲಿಟ್ಟು ಸೀಳು (ಕ್ರಿ) = ಮನುಷ್ಯನಿಗೆ ಕಟ್ಟಿಗೆಯಂತೆ ಸೀಳಿ ಹೋಳು ಮಾಡು.

ಕಾವಡಿ (ನಾ) = ಯಾತ್ರಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಬಳಸುವ ತಕ್ಕಡಿಯಂತಿರುವ ಒಂದು ಸಾಧನ (ಶ್ರೀ ಶೈಲದಲ್ಲಿ ಅಡವಿಚಂಚರು ಯಾತ್ರಿಗಳನ್ನು ಕಾವಡಿಯಲ್ಲಿ ಕೂರಿಸಿ ಹೊತ್ತುಕೊಂಡು ಸಾಗಿಸುತ್ತಿದ್ದರು).

ಕಾವಲಿ (ನಾ) = ಕಾವಲು; ಪಹರೆ; ರಕ್ಷಣೆ.

ಕಾವಲಿರು (ಕ್ರಿ) = ಪಹರೆ ಕೊಡು; ರಕ್ಷಣೆ ಮಾಡು.

ಕಾವಲು (ನಾ) = ಪಹರೆ, ರಕ್ಷಣೆ.

ಕಾವಿ (ನಾ) = ಒಂದು ಬಗೆಯ ಬಣ್ಣ; ಕೇಸರಿ ಬಣ್ಣ; ಕಾಷಾಯ ವಸ್ತ್ರ (ಭಜನೆ : ಕಾವಿ ಝಂಡಾ ಕೈದಾಗಾ, ಸಿದ್ಧನಭಜನಿ ಮನದಾಗಾ)

ಕಾವು (ನಾ) = ಕಾಂವು; ಕೊಡಲಿಯ ಹಿಡಿಕೆ (ಗಾದೆ :- ಕೊಡಲಿಯ ಕಾವು; ಕುಲಕ್ಕೆ ಕೇಡು); ಬಿಸುಪು; ಬಿಸಿ; ಉಷ್ಣತೆ; ಸೆಕೆ.

ಕಾವು ಕುಡು (ಕ್ರಿ) = ಬಿಸಿಮಾಡು. ಬೆಚ್ಚಗೆ ಮಾಡು, ಹಕ್ಕಿ ತನ್ನ ತತ್ತಿಗಳಿಗೆ ಬೆಚ್ಚಗಿಡು.

ಕಾವುಲ್ಗಾರ (ನಾ) = ಪಹರೆದಾರ; ಕಾಯುವವನು; ಚೌಕಿದಾರ.

ಕಾವೇರಿ (ನಾ) = ಕರ್ನಾಟಕದ ಒಂದು ನದಿ.

ಕಾವೇರು (ಕ್ರಿ) = ಬಿಸಿಯುಂಟಾಗು; ಸೆಕೆಯು ಹೆಚ್ಚಾಗು.

ಕಾಶೀ (ನಾ) = ವಿಶ್ವನಾಥನಲಿಂಗನ ಪುಣ್ಯ ಕ್ಷೇತ್ರವೆನಿಸಿದ ವಾರಣಾಸಿ; ಉತ್ತರ ಭಾರತದ ಪ್ರಸಿದ್ಧ ಗಂಗಾತೀರದ ತೀರ್ಥ ಸ್ಥಳ (ಜಾನಪದ :- ಕಾಶೀಗಿ ಹೋಗ್ಲಾಕ। ಏನೊಂದು ದಿನ ಬೇಕ। ಕಾಶೀ ಹಡದವ್ವ ಮನಿಯಾಗ।).

ಕಾಶೀಯಾತ್ರಾ (ನಾ) = ಕಾಶೀ ಕ್ಷೇತ್ರ ದರ್ಶನಕಾಗಿ ಮಾಡುವಯಾತ್ರೆ (ಭಜನೆ:- ಕಾಶೀ ಯಾತ್ರಕ ಪೋಗಿ। ಶ್ರೀಶೈಲಾ ತಿರುಗಿ। ಕುಂತ ಉದಾಸಾಗಿ। ಕಾಣಾಲಿಲ್ಲಾ।। - ಸಿದ್ಧಪ್ರಭು).

ಕಾಶ್ಮೀರ (ನಾ) = ಉತ್ತರ ಭಾರತದ ಒಂದು ರಾಜ್ಯದ ಹೆಸರು; ಮಹಾಶರಣ ಮೋಳಿಗಿ ಮಾರಯ್ಯನವರು ಪೂರ್ವಾಶ್ರಮದಲ್ಲಿ ಆಳಿದ ರಾಜ್ಯ ಹಾಗೂ ನಗರ.

ಕಾಶ್ಮೀರಿ (ವಿ) = ಕಾಶ್ಮೀರ ರಾಜ್ಯದ, ಕಾಶ್ಮೀರ ರಾಜ್ಯದಲ್ಲಿ ತಯಾರಾದ.

ಕಾಶ್ಮೀರಿ ಶಾಲು (ನಾ) = ಕಾಶ್ಮೀರ ರಾಜ್ಯದಲ್ಲಿ ತಯಾರಾದ ಮಿದು ಉಣ್ಣೆಯ ಕಂಬಳಿ.

ಕಾಸು (ಕ್ರಿ) = ಕಾಯಿಸು; ಬಿಸಿ ಮಾಡು.

ಕಾಸು (ನಾ) = ತಾಮ್ರದ ಸಣ್ಣ ನಾಣ್ಯ; ಶಾಯಿ (ಶಾಹೀ) ದುಡ್ಡು; ದುಡ್ಡು.

ಕಾಸುಣ್ಕಿ (ನಾ) = ಕಾಯಿಸುವಿಕೆ.

ಕಾಸ್ಗಿ (ನಾ) = ಬೆಳೆ ತೆಗೆದ ಮೇಲೆ ಹೊಲದಲ್ಲುಳಿದ ಕಸಕಡ್ಡಿ.

ಕಾಸ್ಗೆ ಆಯಿ (ಕ್ರಿ) = ಹೊಲದಲ್ಲಿಯ ಕಸಕಡ್ಡಿ ಆಯ್ದು ತೆಗೆ; ಹೊಲ ಜಳಜಳ ಮಾಡು.

ಕಾಳಜ (ನಾ) = ಕರುಳು; ಕಳ್ಳು; ಅಂತರಂಗ.

ಕಾಳಜಿ (ನಾ) = ಎಚ್ಚರಿಕೆ; ಕಳಕಳಿ; ಕಾಳ್ಜಿ.

ಕಾಳಮ್ಮ (ನಾ) = ಕಾಳಿ; ದುರ್ಗೆ; ಪಾರ್ವತಿ.

ಕಾಳಾಗು (ಕ್ರಿ) = ಬೆನ್ನುಹತ್ತು; ಕಾಡು; ಪೀಡಿಸು.

ಕಾಳಾ ಬಜಾರ (ನಾ) = ಕಪ್ಪು ವ್ಯವಹಾರ; ಕಳ್ಳ ಸಂತೆ.

ಕಾಳು (ನಾ) = ಬೀಜ; ಧಾನ್ಯ.

ಕಾಳೋರ್ಲಿಂಗ (ನಾ) = ಸುಕ್ಷೇತ್ರ ಕಾಳ್ಗಿ ಎಂಬ ಗ್ರಾಮದಲ್ಲಿರುವ ಸ್ಥಾವರಲಿಂಗ.

ಕಾಳ್ಜಿ (ನಾ) = ಕಾಳಜಿ; ಗೊಡವೆ; ಚಿಂತೆ; ಆರೈಕೆ; ಶುಶ್ರೂಷೆ.

ಕಾಳ್ಜಿ ತೊಗೊ (ಕ್ರಿ) = ಕಾಳಜಿವಹಿಸು; ಎಚ್ಚರವಹಿಸು; ನಿಗರಾಣಿ ಮಾಡು.

ಕಾಳ್ಜಿ ಮಾಡು (ಕ್ರಿ) = ಎಚ್ಚರವಹಿಸು; ಆರೈಕೆ ಮಾಡು; ಶುಶ್ರೂಷೆ ಮಾಡು.

ಕಾಳ್ಜು (ನಾ) = ಕಾಳಿಜ; ಪಿತ್ತಾಶಯ; ಕರುಳು.

ಕಿಂಕರ (ನಾ) = ಆಳು; ಸೇವಕ (ಗಾದೆ:- ಶಂಕರಾ ಸದ್ಭಕ್ತ ಕಿಂಕರಾ. ಅಭಂಗ:- ಶಿವಶಿವ ಶಿವಶಿವ ಶಂಕರಾ। ನಾನಿನ ಪಾದಕ ಕಿಂಕರಾ)

ಕಿಂಣಿ (ನಾ) = ಕಿಣ್ಣಿ; ಕಿರ್ಗುಣಿ; ಸಣ್ಣ ಸೀರೆ; ಕಿಣ್ಣಿ ಎಂಬ ಬಸವಕಲ್ಯಾಣ ತಾಲೂಕಿನ ಮುಡಬಿ ಸಮೀಪದ ಒಂದು ಊರು, ಶರಣನಗರ.

ಕಿಂತಾ (ಅ) = ಇಕೋ ಇಂತಹ; ಕಿಂತಲೂ.

ಕಿಂಥಾ (ಅ) = ಇಕೋ ಇಂಥಾ.

ಕಿಂಮತ್ತು (ನಾ) = ಕಿಮ್ಮತ್ತು; ಬೆಲೆ; ಮೌಲ್ಯ; ಘನತೆ; ಮರ್ಯಾದೆ.

ಕಿಂವ (ನಾ) = ಇಕೋ ಇಂವನು; ಹುಣ್ಣಿನಲ್ಲಿ ಉಂಟಾಗುವ ಕೀವು.

ಕಿಂವಾ (ನಾ) = ಕೀವು.

ಕಿಂವಾಘುಂಬು (ಕ್ರಿ) = ಕೀವು ಉಂಟಾಗು.

ಕಿಂವಾರಕ್ತಾ (ನಾ) = ಕೀವು ರಕ್ತ ಮಿಶ್ರಣ.

ಕಿಂವಾರಕ್ತಾ ಭೀಳು (ಕ್ರಿ) = ಗುದದ್ವಾರದಿಂದ ಕೀವು ರಕ್ತ ಒಸರು.

ಕಿಕಡಂಬತ್ತಿ (ನಾ) = ಕೆಡಿಸುವ ಕೆಲಸ (ಉದಾ:- ಅಂವಾ ಯಾವಾಗ್ಬೀ ಕಿಕಡಂಬತ್ತಿ ಮಾಡ್ತಿರ್ತಾನ).

ಕಿಕಡಂಬತ್ತಿ ಮಾಡು (ಕ್ರಿ) = ಕೆಡಿಸುವ ಕೆಲಸ ಮಾಡು.

ಕಿಕಾಡಿ = ಇಕೋ ಈ ಕಡೆ.

ಕಿಕಿ = ಇಕೋ ಈಕೆ.

ಕಿಕ್ಕು ಹೊಡಿ (ಕ್ರಿ) = ಒದೆ; ಅಂಗಾಲಿನಿಂದ ಹೊಡೆ.

ಕಿಚಾಕ (ಅ) = ಇಕೋ ಈಚೆಗೆ.

ಕಿಚೇಕಿ (ಅ) = ಇಕೋ ಈಚೆಕಡೆ.

ಕಿಚ್ಚಾರು (ಕ್ರಿ) = ಶಾಖ ಕಮ್ಮಿಯಾಗು; ಕೋಪ ಶಮನವಾಗು; ಸಿಟ್ಟು ತಣ್ಣಗಾಗು.

ಕಿಚ್ಚಿಕ್ಕು (ಕ್ರಿ) = ಉರಿ ಹಚ್ಚು; ಶವಕ್ಕೆ ಉರಿ ತಗಲಿಸು; ಬೆಂಕಿ ಹಚ್ಚು; ಜಗಳ ಹುಟ್ಟಿಸು.

ಕಿಚ್ಚು (ನಾ) = ಬೆಂಕಿ; ಉರಿ ಆರಿದ ನಿಗಿನಿಗಿ ಬೆಂಕಿಯ ರಾಶಿ; ಎದೆಗುದಿ; ಸಂಕಟ.

ಕಿಚ್ಚು ಕುಡು (ಕ್ರಿ) = ಬೆಂಕಿ ಹಚ್ಚು; ಶವಕ್ಕೆ ಉರಿ ಹಚ್ಚು.

ಕಿಚ್ಚು ಹಿಡಿ (ಕ್ರಿ) = ಮನೆಯಿಂದ ಸ್ಮಶಾನದವರೆಗೆ ಹೆಣದ ಮುಂದೆ ಬೆಂಕಿ ಹಿಡಿದುಕೊಂಡು ಹೋಗುವ ಶಾಸ್ತ್ರ ಮಾಡು.

ಕಿಟಕಿಟ (ದ್ವಿ) = ಕಿರಿಕಿರಿ; ಕರಕರಿ; ಕೀಟಲೆ; ತೊಂದರೆ.

ಕಿಟೀಟು (ಅ) = ಇಕೋ ಇಷ್ಟಿಷ್ಟು.

ಕಿಟೀಟೆ (ಅ) = ಇಕೋ ಇಷ್ಟಿಷ್ಟೆ.

ಕಿಟ್ಟ (ನಾ) = ಲೋಹ ಕರಗಿದ ಮೇಲೆ ಉಳಿವ ನಿರುಪಯುಕ್ತ ವಸ್ತು; ಕಬ್ಬಿಣದ ಹೇಲು.

ಕಿಟ್ಟು (ನಾ) = ಕೃಷ್ಣ

ಕಿಟ್ಟ (ನಾ) = ಕೃಷ್ಣ

ಕಿಡಕ (ನಾ) = ವಿಷಾರಿ ಅಲ್ಲದ ಹಾವು; ಮಣ್ಣುಮುಕ್ಕುವ ಹಾವು; ಫಡ್ಡು ಹಾವು.

ಕಿಡಸಿ (ನಾ) = ಕೆಡಿಸುವ ಗುಣದವಳು.

ಕಿಡಸ್ಯಾ (ನಾ) = ಕೆಡಿಸುವ ಗುಣದವನು; ಬೊಗರೆ ಆಟದಲ್ಲಿ ಕೆಡಿಸುವ ಹುದ್ದರಿ.

ಕಿಡಿ (ನಾ) = ಬೆಂಕಿಯ ಅಣು.

ಕಿಡಿಕಾರು (ಕ್ರಿ) = ಉರಿಯಿಂದ ಬೆಂಕಿಯ ಕಣ ಸಿಡಿ; ಸಿಟ್ಟು ಮಾಡು; ಕೋಪವನ್ನು ಪ್ರದರ್ಶಿಸು.

ಕಿಡಿಗಣ್ಣು (ನಾ) = ಕೋಪದಿಂದ ಕೆಂಪಾದ ಕಣ್ಣು; ಬೆಂಕಿಯ ಕಿಡಿಯಂತಾದ ಕಣ್ಣು.

ಕಿಡಿಗಣ್ಣು ಬಿಡು (ಕ್ರಿ) = ಸಿಟ್ಟಿನ ಕಣ್ಣು ತೋರು.

ಕಿಡಿಗೇಡಿ (ನಾ) = ತುಂಟ; ಕೆಡುಕುಂಟು ಮಾಡುವವನು; ತೊಂದರೆ ಕೊಡುವವನು.

ಕಿಡುಸ್ಯಾ (ನಾ) = ಕೇಡಿಗ; ಕಿಡ್ಸ್ಯಾ; ಕೆಡಿಸುವವನು; ಬೊಗರೆ ಆಟದಲ್ಲಿ ಕೆಡಿಸುವ ಗಡಿ.

ಕಿಣ್ಗಿ (ನಾ) = ಕಿಣಗಿ (ಕಿಣ್ಣಿ) ಎಂಬ ಬಸವ ಕಲ್ಯಾಣ ತಾಲೂಕಿನ ಒಂದು ಊರು. ಅದು ಮುಲ್ಲಾಮಾರಿ ಯೋಜನೆಯಲ್ಲಿ ಮುಳುಗಡೆಯಾಗಿದೆ. ಹೊಸವಸತಿಗೆ ಶರಣನಗರ ಎಂದು ಹೆಸರಿಸಲಾಗಿದೆ.

ಕಿಣ್ಣಿ (ನಾ) = ಕಿರುಗುಣಿ; ಸಣ್ಣ ಸೀರೆ; ಕಿಣ್ಣಿ ಎಂಬ ಒಂದು ಊರು.

ಕಿಣ್ಣಿಉಡುಸು (ಕ್ರಿ) = ಕುಮಾರಿಗೆ ಕಿರ್ಗುಣಿ ಉಡಿಸುವ ಶಾಸ್ತ್ರ ಮಾಡು.

ಕಿತಾಪತಿ (ನಾ) = ಕುಹಕತನ; ಇಲ್ಲದ ಕಾರಭಾರ.

ಕಿತಾಬು (ನಾ) ಉ. = ಪುಸ್ತಕ; ಹೊತ್ತಗೆ; ಗ್ರಂಥ.

ಕಿತಾಬೋದು = ಗ್ರಂಥ ಪಠನ ಮಾಡು.

ಕಿತ್ಗೊ (ಕ್ರಿ) = ಷಪ್ಪ ಹರ್ಕೊ (ಬೈಗುಳ).

ಕಿತ್ಗೊಂಡೇಳು (ಕ್ರಿ) = ಗುಳೆ ಕಿತ್ತು; ಬಿಟ್ಟು ಹೋಗು; ಹೊರಟು ಹೋಗು.

ಕಿತ್ತ (ಅ) = ಇಕೋ ಇತ್ತ.

ಕಿತ್ತ ಬಾ (ಕ್ರಿ) = ಇಕೋ ಇತ್ತ ಕಡೆ ಬಾ.

ಕಿತ್ತಾ (ನಾ) = ಮಾದರಿಯ ಲಿಪಿ; ತಿದ್ದುವ ಲಿಪಿ; ಕಿತ್ಯಾ; ಸುಲೇಖನ.

ಕಿತ್ತು (ಕ್ರಿ) = ಕೀಳು; ಹರಿ; ಕಿತ್ತಿ ತೆಗೆ.

ಕಿತ್ಯಾ (ನಾ) = ಮಾದರಿ ಲೇಖನ; ಸುಲೇಖನ; ತಿದ್ದುವ ಲಿಪಿ.

ಕಿತ್ಯಾ ತೀಡು (ಕ್ರಿ) = ಸುಲೇಖನ ಅಭ್ಯಾಸ ಮಾಡು.

ಕಿದು = ಇಕೋ ಇದು.

ಕಿದುರಾಗ = ಇಕೋ ಇದರಲ್ಲಿ.

ಕಿದೆ = ಇಕೋ ಇದೇ.

ಕಿನ್ನುರಿ (ನಾ) = ತಂಬೂರಿಯಂತಹ ಒಂದು ವಾದ್ಯ.

ಕಿನ್ನುರಿ ಬೊಮ್ಮಯ್ಯ (ನಾ) = ಸಣ್ಣ ಹಳಿಖೇಡದ ವಾಸಿಯಾದ ಹನ್ನೆರಡನೇ ಶತಮಾನದ ಕಿನ್ನರಿ ಕಾಯಕದ ಒಬ್ಬ ಶರಣರು.

ಕಿಪ್ಡಿ (ನಾ) = ಕಿಪ್ಪಡಿ; ಕೆಳಹೊಟ್ಟೆ; ಕಿಬ್ಬೊಟ್ಟೆ.

ಕಿಪ್ಡಿಘಳ್ಕಿ = ಹೆಣ್ಣಿನ ಹಾದರದ ಗಳಿಕೆ.

ಕಿಪ್ಡಿ ಮಾರು (ಕ್ರಿ) = ಹಾದರ ಮಾಡು.

ಕಿಪ್ಡಿ ಮ್ಯಾಲ ಒದಿ (ಕ್ರಿ) = ಕೆಳಹೊಟ್ಟೆಯ ಮೇಲೆ ಕಾಲಿನಿಂದ ಹೊಡೆ.

ಕಿಪ್ಪಡಿ (ನಾ) = ಕಿಪ್ಡಿ; ಕೆಳ ಹೊಟ್ಟೆ.

ಕಿಫಾಯತಿ (ನಾ)ಉ. = ಉಳಿತಾಯ.

ಕಿಬಾಲಿ (ನಾ) = ಒಪ್ಪಿಗೆ.

ಕಿಮುಟಿ (ನಾ) = ಹೊಲಸು ಮೈಯುಳ್ಳವಳು.

ಕಿಮುಟು (ನಾ) = ತುಪ್ಪ, ಎಣ್ಣೆ ಮೊದಲಾದವುಗಳ ಜಿಡ್ಡುಗಟ್ಟಿದ ವಾಸನೆ; ಮಾಸಿದ್ದು.

ಕಿಮುಟ್ಯಾ (ನಾ) = ಹೊಲಸು ಮೈಯುಳ್ಳವನು.

ಕಿಮ್ಮತಿ = ಬೆಲೆ ಬಾಳುವ.

ಕಿಮ್ಮತ್ತಿಡು (ಕ್ರಿ) = ಬೆಲೆಕೊಡು; ಗೌರವಿಸು.

ಕಿಮ್ಮತ್ತು (ನಾ) = ಬೆಲೆ; ಮೌಲ್ಯ; ಗೌರವ; ಮರ್ಯಾದೆ.

ಕಿಮ್ಮತ್ತುಕುಡು (ಕ್ರಿ) = ಗೌರವಿಸು; ಮರ್ಯಾದೆ ಮಾಡು.

ಕಿಮ್ಮತ್ತೇರು (ಕ್ರಿ) = ದರ ಹೆಚ್ಚಾಗು; ತುಟ್ಟಿಯಾಗು; ಬೆಲೆ ಹೆಚ್ಚಳವಾಗು.

ಕಿರಾಣಾ (ನಾ) = ಕಿರಾಣಿ; ದಿನಸಿ ವಸ್ತು.

ಕಿರಾಣಾ ಬಜಾರ (ನಾ) = ಕಿರಾಣಿ ವಸ್ತುಗಳ ಸಂತೆ; ದಿನಸಿ ವಸ್ತುಗಳ ಬಜಾರ.

ಕಿರಾಣಿ (ನಾ) = ದಿನಸಿ ಸಾಮಾನು; ದಿನ ಬಳಕೆಯ ವಸ್ತು.

ಕಿರಾಯಿ (ನಾ) = ಬಾಡಿಗೆ; ಭಾಡಾ.

ಕಿರಾಯಿಮನಿ (ನಾ) = ಬಾಡಿಗೆ ಮನೆ.

ಕಿರಿಕಿರಿ (ನಾ) = ಕಿರುಕುಳ; ಕಾಟ; ತೊಂದರೆ.

ಕಿರಿಬಟ್ಟು (ನಾ) = ಕಿರಿಯ ಬೆರಳು; ಸಣ್ಣ ಬೆರಳು.

ಕಿರಿಬಳ್ಳು (ನಾ) = ಸಣ್ಣ ಬೆರಳು; ಕನಿಷ್ಟ ಬೆರಳು.

ಕಿರಿಟಾ (ನಾ) = ಮುಕುಟ; ಶಿರೋಭೂಷಣ; ಕಿರ್ಟಾ.

ಕಿರುಗುಣಿ (ನಾ) = ಅಗಲ ಕಡಿಮೆ ಇರುವ ಸೀರೆ; ಕುಮಾರಿಯರಿಗೆ ಪ್ರಥಮ ಸಲ ಉಡಿಸುವ ಸಣ್ಣ ಸೀರೆ; ಕಿರ್ಗುಣಿ.

ಕಿರುಗುಣಿ ಕಾರಣ (ನಾ) = ಕುಮಾರಿಗೆ ಮೊಟ್ಟ ಮೊದಲು ಕಿರಿದಾದ ಸೀರೆ ಉಡಿಸುವ ಕಾರ್ಯಕ್ರಮ.

ಕಿರುಗ್ಯೈಂಞ್ (ನಾ) = ತುಸು ಕಹಿಯಾದದ್ದು.

ಕಿರು ನಾಲ್ಗಿ (ನಾ) = ಗಂಟಲ ಹತ್ತಿರ ನಾಲಗೆ ಮೇಲೆ ನೇತಾಡುವ ಮಾಂಸಲ ಘಂಟೆ.

ಕಿರುನಾಲ್ಗಿ ಭೀಳು (ಕ್ರಿ) = ಕಿರು ನಾಲಗೆ ಉಬ್ಬಿ ನಾಲಗೆಗೆ ತಗಲುವಂತಾಗು.

ಕಿರ್ಕ (ನಾ) = ಕುಳ್ಳ; ಗಿಡ್ಡ; ಸಣ್ಣವನು; ಕಡಿಮೆ ಎತ್ತರದವನು.

ಕಿರ್ಕತ್ತು (ನಾ) = ಕೃತ್ತಿಕಾ ಮಳೆ ನಕ್ಷತ್ರ; ಮೂರನೇ ಮಳೆ ನಕ್ಷತ್ರ.

ಕಿರ್ಕಿರಿ (ನಾ) = ಕರಕರಿ; ಕಿಟಿಕಿಟಿ; ಕಿರಿಕಿರಿ.

ಕಿರ್ಕುಣಿ (ನಾ) = ತಟ್ಟಿ ತಿರುಗುವ ಕೇಂದ್ರಬಿಂದುವಿನ ಗುಣಿ.

ಕಿರ್ಗುಣಿ (ನಾ) = ಕಿರುಗುಣಿ (ನೋಡಿರಿ).

ಕಿರ್ಗುಣಿ ಉಡಿಸು (ಕ್ರಿ) = ಪ್ರಥಮಸಲ ಕುಮಾರಿಗೆ ಸೀರೆ ಉಡಿಸುವ ಶಾಸ್ತ್ರ ನೇರವೇರಿಸು.

ಕಿರ್ಗ್ಯೈಂಞ್ (ನಾ) = ಕಿರು ಗ್ಯೈಂಞ್; ತುಸು ತುಸು ಕಹಿ; ಕಹಿಕಹಿ.

ಕಿರ್ಚನ್ (ನಾ) = ಕ್ರಿಶ್ಚಿಯನ್; ಕ್ರಿಸ್ತಾನ; ಕ್ರೈಸ್ತ.

ಕಿರ್ಟಾ (ನಾ) = ಕಿರಿಟಾ; ಕಿರೀಟ.

ಕಿರ್ದ (ನಾ) = ಬುಡ್ಡ; ಗಿಡ್ಡ; ಕುಳ್ಳ; ಎತ್ತರ ಕಡಿಮೆ ಉಳ್ಳವನು; ಎತ್ತರ ಕಡಿಮೆ ಇದ್ದ; ಸಣ್ಣಗಿದ್ದ ವಸ್ತು.

ಕಿರ್ದಿ (ನಾ) = ದೈನಿಕ ವ್ಯವಹಾರದ ಲೆಕ್ಕಪತ್ರ ಪುಸ್ತಕ.

ಕಿರ್ನಾಲ್ಗಿ (ನಾ) = ಕಿರುನಾಲಗೆ; ಗಂಟಲ ಸಮೀಪ ನಾಲಗೆ ಮೇಲೆ ನೇತಾಡುವ ಕಿರಿದಾದ ನಾಲಗೆಯಂತಹ ವಸ್ತು.

ಕಿರ್ಮಿಂಜಿ (ನಾ) = ತುಸು ಮಿಂಚುವ ಬಣ್ಣ; ಕ್ರಿಮ್ಜನ್ ಬಣ್ಣ; ಕಪ್ಪು ಮಿಶ್ರಿತ ಕೆಂಬಣ್ಣ; ಅರಗಿನ ಬಣ್ಣ.

ಕಿರ್ಯಾ (ನಾ) = ಕ್ರಿಯಾ; ಕ್ರಿಯೆ; ಸಂಪ್ರದಾಯ ಪೂರಿತ ಕ್ರಿಯಾಚಾರ.

ಕಿರ್ಯಾಚಾರ (ನಾ) = ಕ್ರಿಯೆ ಮತ್ತು ಆಚಾರ

ಕಿಲಾರ್ಕ (ನಾ) ಇಂ = ಕ್ಲರ್ಕ್; ಕಾರಕೂನ; ಗುಮಾಸ್ತ; ಕಲರ್ಕ.

ಕಿಲಾಸು (ನಾ) ಇಂ = ಕ್ಲಾಸು; ವರ್ಗ.

ಕಿಲು (ನಾ) = ಕಿಲೋಗ್ರಾಂ.

ಕಿಲುಂ (ನಾ) = ಕಿಲುಮು; ಕಿಲುಬು; ತಾಮ್ರ ಮತ್ತು ಹಿತ್ತಾಳೆ ಮೇಲೆ ಉಂಟಾಗುವ ನೀಲಿ ಬಣ್ಣದ ಕಿಲುಬು ಕೊಳೆ.

ಕಿಲುಂಬಿಡು (ಕ್ರಿ) = ಕಿಲುಬುಗಟ್ಟು.

ಕಿಲುಬು (ನಾ) = ಕೊಳೆ; ಕಲ್ಮಷ; ಹಿತ್ತಾಳೆ ಅಥವಾ ತಾಮ್ರದ ಮೇಲೆ ನೀಲಿ ಕೊಳೆ ಉಂಟಾಗುವಿಕೆ.

ಕಿಲುಬುಗಟ್ಟು (ಕ್ರಿ) = ಹಿತ್ತಾಳೆ ಅಥವಾ ತಾಮ್ರ ಪಾತ್ರೆ ಮೇಲೆ ಕೊಳೆಯುಂಟಾಗು.

ಕಿಲುಬು ಬಿಡು (ಕ್ರಿ) = ಕಿಲುಬುಗಟ್ಟು; ವಿಷವಾಗು; ಕಿಲುಬುಂಟಾಗು.

ಕಿಲುಬು ಹಿಡಿ (ಕ್ರಿ) = ಹಿತ್ತಾಳೆ, ತಾಮ್ರಾದಿ ಭಾಂಡೆಗಳ ಮೇಲೆ ಕಲೆಯುಂಟಾಗು.

ಕಿಲುಬೇರು = ಕಿಲುಬುಗಟ್ಟು; ವಿಷವಾಗು; ಕಲೆಯುಂಟಾಗು.

ಕಿಲೋಗ್ರಾಂ (ನಾ) = ಒಂದು ಸಾವಿರ ಗ್ರಾಂ; ತೂಕವುಳ್ಳ ತೂಕದಕಲ್ಲು.

ಕಿಲ್ಲಿ (ಅ) = ಇಕೋ ಇಲ್ಲಿ.

ಕಿಲ್ಲೆ (ಅ) = ಇಕೋ ಇಲ್ಲೆ.

ಕಿಲ್ಲ್ಯಾ (ನಾ) = ಕಿಲ್ಲೆ; ಕೋಟೆ; ದುರ್ಗ; ಕ್ವಾಟಿ.

ಕಿವಾ (ಸ.ನಾ) = ಕಿವ; ಇಕೋ ಇಂವನು.

ಕಿವಾ (ನಾ) = ಕೀವು; ಹುಣ್ಣಿನಿಂದ ಒಸರುವ ದ್ರವ.

ಕಿವಾರಗ್ತಾ ಭೀಳು (ಕ್ರಿ) = ಕೀವು ರಕ್ತ ಮಿಶ್ರದ ಭೇದಿಯಾಗು.

ಕಿವಿ (ನಾ) = ಶಬ್ದವನ್ನು ಗ್ರಹಿಸುವ ಇಂದ್ರಿಯ; ಶ್ರವಣ; ಕಡಾಯಿ ಅಥವಾ ಬಾಳಿಗೆಗಳ ಹಿಡಿಕೆ.

ಕಿವಿಕಿತ್ತು (ಕ್ರಿ) = ಶರೀರದಿಂದ ಶ್ರವಣ ಸಾಧನವನ್ನು ದೂರ ಮಾಡು (ಕಿವಿಕಿತ್ತೆ ಎಂಬುದು ಗ್ರಾಮೀಣ ಬೈಗಳು).

ಕಿವಿಕುಡು (ಕ್ರಿ) = ಮನಸಿಟ್ಟು ಕೇಳು.

ಕಿವಿಖೂರಾಗು (ಕ್ರಿ) = ಕಿವಿ ಕೇಳುವಂತಾಗು.

ಕಿವಿಗಡಚಿಕ್ಕು (ಕ್ರಿ) = ಜೋರಾದ ಧ್ವನಿ ಕಿವಿಯಲ್ಲಿ ಸೇರಿ ಏನೂ ಕೇಳಿ ಬರದಂತಾಗು.

ಕಿವಿಘುಂಬು (ಕ್ರಿ) = ಬೋಧಿಸು; ಕಲಿಸು; ಕಲಿಸಿ ಸಿದ್ಧಗೊಳಿಸು; ಕಪಟವನ್ನು ಕಲಿಸು.

ಕಿವಿಪರ್ದಿ (ನಾ) = ಕಿವಿಯ ಒಳಪೊರೆ.

ಕಿವಿಬ್ಯಾನಿ (ನಾ) = ಕಿವಿ ನೋವು; ಶ್ರವಣೇಂದ್ರಿಯದ ಬೇನೆ.

ಕಿವಿಯೂರು(ಕ್ರ) = ಕಿವಿಗೆ ತಾಮ್ರದ ತಂತಿ ಚುಚ್ಚು.

ಕಿವಿಹಿಂಡು = ಕಿವಿಯನ್ನು ಒಡಿಮುರಿ.

ಕಿವಿಹಿಂಡೆ = ಕಿವಿಯನ್ನು ಹುರಿ ಹೊಡೆದೇನು; (ಬೈಗುಳ.)

ಕಿವಿ ಕಚ್ಚಾ (ನಾ) = ಕೇಳಿದ್ದೆಲ್ಲ ಸತ್ಯವೆಂದು ನಂಬುವವನು(ಳು).

ಕಿವು = ಇಕೋ ಇವು.

ಕಿವುಂದು = ಇಕೋ ಇವನದು.

ಕಿವುಚು (ಕ್ರಿ) = ಕಲೆಸು; ಬೆರೆಸು; ಅದುಮು; ಮಿದ್ದು; ನಾದು; ಕಿವ್ಚು; ಒರಸಿಕ್ಕು; ಪರೀಕ್ಷಿಸು.

ಕಿವುಡ (ನಾ) = ಕಿವಿ ಕೇಳಿಸಲಾರದವನು; ಬಧಿರ; ಕಿವ್ಡ; ಕಿವುಡ್ಯಾ.

ಕಿವುಡಾಗು (ಕ್ರಿ) = ಕಿವಿ ಕೇಳಿಸದಂತಾಗು.

ಕಿವುಡಿ (ನಾ) =ಕಿವಿ ಕೇಳಿಸಲಾರದವಳು.

ಕಿವುರು (ಸ.ನಾ.) = ಇಕೊ ಇವರು.

ಕಿವೆ = ಇಕೋ ಇವೇ; ಇಕೋ ಇವು ಮಾತ್ರ.

ಕಿವ್ಚು (ಕ್ರಿ) = ಕಿವುಚು (ನೋಡಿರಿ).

ಕಿವ್ಚ್ಯಾ = ಕಿವುಚುವವ; ಅತಿ ಪರೀಕ್ಷಿಸುವವ.

ಕಿವ್ಡ (ನಾ) = ಕಿವುಡುತನ ಉಳ್ಳವನು (ಗಾದೆ:- ಗೌಡಾ ಗೌಡಾ ಅಂದ್ರ ಕಿವ್ಡಾ ಕಿವ್ಡಾ ಅಂತೇ ಅಂದ್ನಂತ).

ಕಿವ್ಡಿ (ನಾ) = ಕಿವುಡಿ; ಬಧಿರೆ.

ಕಿವ್ಡ್ಯಾ (ನಾ) = ಕಿವುಡ; ಬಧಿರ (ಕಿವುಡ ನೋಡಿರಿ).

ಕಿವ್ಡ್ಯಾಗಖಟ್ಗಿ = ಕಿವುಡನಿಗೆ ಹೀನೈಸುವ ಬೈಗಳು.

ಕಿವ್ರು = ಇಕೋ ಇವು.

ಕಿವ್ವ = ಇಕೋ ಇವು ಮಾತ್ರ.

ಕಿವ್ಳು = ಇಕೋ ಇವಳು.

ಕಿಷ್ಟು = ಇಕೊ ಇಷ್ಟು.

ಕಿಷ್ಣ (ನಾ) = ಕೃಷ್ಣ.

ಕಿಸಿ (ಕ್ರಿ) = ಅಗಲವಾಗಿಸು; ತೆರೆ; ಸಾಧ್ಯವಾಗಿಸು.

ಕಿಸೀತೆ (ಕ್ರಿ) = ಹರೀತೇ, ಕಿತ್ತುತೇ (ಏನೂ ಮಾಡಲಾಗದೆಂಬ ಭಾವ)

ಕಿಸೀ ಹಾಲತ್ತದಾಗ = ಯಾವುದೇ ಸ್ಥಿತಿಯಲ್ಲಿ; ಏನೇ ಪರಿಯಿಂದ.

ಕಿಸುಗಣ್ಣು (ನಾ) = ಕೋಪ ಕಾರುವ ಕಣ್ಣು; ತೆರೆದ ಕಣ್ಣು.

ಕಿಸುಗಾಲು = ಅಗಲಗೊಂಡಕಾಲು; ನೇರವಲ್ಲದ ಕಾಲು.

ಕಿಸುಬಾಯಿ (ನಾ) = ತೆರೆದಬಾಯಿ; ತೆರ್ಬಾಯಿ; ಹಲ್ಲು ತೆರೆದ ಬಾಯಿ (ಗಾದೆ:- ಹಾಡಿದ್ದೇ ಹಾಡೋ, ಕಿಸುಬಾಯಿ ದಾಸಾ).

ಕಿಸುರು = ಕೂಸುಗಳಿಗಾಗುವ ಹಸಿರು ಭೇದಿ ರೋಗ.

ಕಿಸುರ್ಯಾ (ನಾ) = ಸದಾ ಭೇದಿ ಮಾಡಿಕೊಳ್ಳುವವನು.

ಕಿಸೆಗಳ್ಳ (ನಾ) = ಕಿಸೆಕತ್ತರಿಸಿ ಹಣ ಹೊಡೆಯುವವನು; ಜೇಬುಗಳ್ಳ.

ಕಿಸ್ನ (ನಾ) = ಕೃಷ್ಣ.

ಕಿಸ್ನ ಕಾರಸ್ತಾನ (ನಾ) = ಮೋಸದ ಕಾರುಭಾರ.

ಕಿಸ್ನಾವತಾರ (ನಾ) = ಮಹಾವಿಷ್ಣುವಿನ ಕೃಷ್ಣಾವತಾರ.

ಕಿಸ್ತಿ (ನಾ) = ಕಪ್ಪು ಬಸಿ ಇಡಲು ಬಳಸುವ ತಟ್ಟೆ; ದೋಣಿ; ಪೀರನೆದುರು ಇರುವ ಕಲ್ಲಿನ ದೊಡ್ಡ ತಟ್ಟೆ.

ಕಿಳ್ಳಿಗೆ ಹತ್ತು (ಕ್ರಿ) = ಆಳದ ವರೆಗೆ ಅಂಗಾಲು ಇಲ್ಲವೆ ಅಂಗೈಯಲ್ಲಿ ಗಾಯವಾಗು; ಮುಳ್ಳು ಆಳಕ್ಕೆ ಚುಚ್ಚು.

ಕಿಳ್ಳು (ನಾ) = ಕಿತ್ತೆಸೆಯಬೇಕಾದ ಜೋಳದ ಬಾಟಿ, ನೊರಜು ಬೆಳೆ; ರಸವಿಲ್ಲದ ಕಬ್ಬಿನ ಬೆಂಡು; ಆಳ; ತಳ; ಕಾಳಜ.

ಕಿಳ್ಳು ಕಿತ್ತು (ಕ್ರಿ) = ನೊರಜು ಬೆಳೆಯನ್ನು ಕಿತ್ತೆಸೆ; ಬಾಟಿಯನ್ನು ಕೀಳು.

ಕಿಳ್ಳು ಮೆಯ್ಸು (ಕ್ರಿ) = ದನಗಳಿಗೆ ನೊರಜು ಬೆಳೆಯನ್ನು ತಿನಿಸು.

ಕಿಳ್ಳು ಮೇವು (ನಾ) = ದನಗಳಿಗೆ ತಿನಿಸುವ ನೊರಜು ಬೆಳೆ ಆಹಾರ.

ಕೀ (ಅ) = ಇಕೋ ಈ.

ಕೀಕಿ (ಸ.ನಾ) = ಇಕೋ ಈಕೆ.

ಕೀಗ (ಅ) = ಇಕೋ ಈಗ.

ಕೀಗೆ = ಇಕೋ ಈಗ್ಲೆ.

ಕೀಚಕ (ನಾ) = ವಿರಾಟರಾಜನ ಸೇನಾಪತಿ (ಹುಡುಗಿ ಗ್ರಾಮದ ಲಿಂ. ಶರಣಪ್ಪ ಹೊಸಳ್ಳಿ ಎಂಬವರು ಕೀಚಕನ ಪಾತ್ರ ಮಾಡಿದ ಕಾರಣ ಅವರಿಗೆ ಬಂದ ಅಡ್ಡ ಹೆಸರು.)

ಕೀಚಕವದಾ (ನಾ) = ಕೀಚಕನ ವಧೆ ಕುರಿತ ನಾಟಕ.

ಕೀಚಾಕ (ಅ) = ಇಕೋ ಈಚೆ ಕಡೆಗೆ.

ಕೀಚಿಕಿ (ಅ) = ಇಕೋ ಈಚೆ ಕಡೆಗೆ.

ಕೀಜಾಗ (ಅ) = ಇಕೋ ಈ ಜಾಗ.

ಕೀಟು (ಅ) = ಇಕೋ ಇಷ್ಟು.

ಕೀಟೂ ಕೋಟೂ = ಇಕೋ ಇಷ್ಟು ಅಕೋ ಅಷ್ಟು; ಇಷ್ಟೂ ಅಷ್ಟೂ (ಉದಾ:- ಕೀಟೂ ಕೋಟೂ ನಡಿತ್ಲೆ ಕಾಲ್ಮೊಯ್ಲಾತಾವ ಅಂಬಾಂವ. ಕೀಟೂ ಕೋಟೂ ಮಾತಿಗೆ ತಕ್ರಾರು ತೆಗ್ಯಾಂವ.)

ಕೀಟೆ (ಅ) = ಇಕೋ ಇಷ್ಟೆ.

ಕೀತ (ಸನಾ) = ಇಕೋ ಈತ.

ಕೀಧಾರಿ (ಅ) = ಇಕೋ ಈ ದಾರಿ.

ಕೀರ್ತನ (ನಾ) = ನಾಮಪಠಣ ಮಾಡುವಿಕೆ; ಹೇಳುವಿಕೆ; ಹೊಗಳುವಿಕೆ; ಸ್ತುತಿ; ಹರಿಕಥೆ; ವಚನ ಪ್ರವಚನ.

ಕೀರ್ತನ ಮಾಡು (ಕ್ರಿ) = ದೇವರ ಮಹಿಮೆ ಕುರಿತು ಮಾತಾಡು, ಹಾಡು; ಪ್ರವಚನ ಮಾಡು.

ಕೀರ್ತಿ (ನಾ) = ಖ್ಯಾತಿ; ಯಶಸ್ಸು.

ಕೀರ್ತಿಫಳ್ಸು (ಕ್ರಿ) = ಖ್ಯಾತಿವಂತನಾಗು; ಪ್ರಸಿದ್ಧಿ ಹೊಂದು.

ಕೀರ್ತಿವಂತ (ನಾ) = ಪ್ರಸಿದ್ಧಿ ಹೊಂದಿದವನು; ಹೆಸರು ಮಾಡಿದವನು; ಯಶವನ್ನು ಸಾಧಿಸಿದವನು.

ಕೀರ್ತಿವಂತಾಗು (ಕ್ರಿ) = ಪ್ರಸಿದ್ಧಿ ಹೊಂದು; ಯಶಸ್ಸು ಹೊಂದು.

ಕೀಲಿ (ನಾ) = ಬೀಗ; ಅಡ್ಡಿ; ಪೆಟ್ಟಿಗೆ ಬಾಗಿಲು ಇತ್ಯಾದಿಗಳ ಭದ್ರತೆಯ ಸಾಧನ.

ಕೀಲಿಕುಡು (ಕ್ರಿ) = ಗಡಿಯಾರ, ಆಟಿಗೆ ಕಾರು ಇತ್ಯಾದಿಗಳ ಸುರುಳಿಯನ್ನು ಬಿಗಿಗೊಳಿಸು.

ಕೀಲಿಕೈ (ನಾ) = ಬೀಗದ ಕೈ; ಕುಂಜಿ; ಚಾವಿ; ಬೀಗವನ್ನು ತೆರೆಯುವ ಸಾಧನ; ಗುಟ್ಟು; ರಹಸ್ಯ (ಉದಾ:- ಅವ್ನ ಕೀಲಿಕೈ ನನ್ನಕೈಯಾಗ ಅದಾ)

ಕೀಲಿಜಡಿ (ಕ್ರಿ) = ಬೀಗಹಾಕು.

ಕೀಲಿ ತೆಗಿ (ಕ್ರಿ) = ಬೀಗತೆರೆ.

ಕೀಲಿ ಭೀಳು (ಕ್ರಿ) = ಬಂದಾಗು; ಮುಚ್ಚಿಕೊಳ್ಳು, ಬೀಗ ಭದ್ರವಾಗು.

ಕೀಲಿ ಮುರಿ (ಕ್ರಿ) = ಕೀಲಿಯ ಕೊಕ್ಕೆ ಮುರಿದು ಬೀಗ ತೆಗೆ; ಬೀಗಮುರಿ.

ಕೀಲಿ ಹಾಕು (ಕ್ರಿ) = ಬೀಗ ಭದ್ರಗೊಳಿಸು.

ಕೀಲು (ನಾ) = ಎರಡು ಎಲುವುಗಳ ನಡುವಿನ ಸಂದು, ಜಾಗ; ಕಡೆಗೀಲು.

ಕೀಲು ಕುದುರಿ (ನಾ) = ಚಾವಿ ಕೊಟ್ಟರೆ ನಡೆಯುವ ಯಂತ್ರದ ಕುದುರೆ; ಕೀಲ್ಗುರ್‍ರಂ; ಕೀಲ್ಕುದ್ರಿ.

ಕೀಲುಗುರ್‍ರಂ (ನಾ)ತೆ. = ಕೀಲು ಕುದುರೆ.

ಕೀಲುಗೊಂಬಿ (ನಾ) = ಕೀಲಿ ಕೊಟ್ಟರೆ ನಡೆಯುವ ಯಂತ್ರದ ಗೊಂಬೆ.

ಕೀಲ್ಕುದ್ರಿ (ನಾ) = ಕೀಲು ಕುದುರಿ (ನೋಡಿರಿ).

ಕೀವಾ (ನಾ) = ಕೀವು; ಹುಣ್ಣಿನಲ್ಲಿಯ ದ್ರವ.

ಕೀವಾ ಆಗು (ಕ್ರಿ) = ಹುಣ್ಣಿನಲ್ಲಿ ಕೀವುಂಟಾಗು.

ಕೀವಾಥುಂಬು (ಕ್ರಿ) = ಹುಣ್ಣಿನಲ್ಲಿ ಕೀವಿನಿಂದ ಉಬ್ಬುಂಟಾಗು; ಕೀವು ತುಂಬು.

ಕೀವಾರಕ್ತಾ (ನಾ) = ಮಲವಿ ಸರ್ಜನೆಯಲ್ಲಿಯ ಕೀವುನೆತ್ತರ ಮಿಶ್ರಣ.

ಕೀಸು (ಅ) = ಇಕೋ ಇವಿಷ್ಟು; ಇಕೋ ಈಸು (ಉದಾ:- ಕೀಸು ಕೋಸು ಅನಭ್ಯಾಡ್ರಿ ಕೊಟ್ಟೋಸು ತೊಗೋರಿ).

ಕೀಳು (ನಾ) = ಹೀನ; ಕೆಳ ಮಟ್ಟದ.

ಕುಂಕುಡಕಾಯಿ (ನಾ) = ನೀರಿನೊಡನೆ ತಿಕ್ಕಿದರೆ ನೊರೆ ಕೊಡುವ, ಬಟ್ಟೆ ತೊಳೆಯಲು. ತಲೆ ತೊಳೆದುಕೊಳ್ಳಲು ಬಳಕೆ ಯಾಗುವ ಕಾಯಿ; ಬುರುಗಿನ ಕಾಯಿ.

ಕುಂಕೂ (ನಾ) = ಕುಂಕುಮ.

ಕುಂಚಿ (ನಾ) = ಸಣ್ಣ ಮಕ್ಕಳ ತಲೆ ಮತ್ತು ಬೆನ್ನನ್ನು ಪೂರ್ತಿಯಾಗಿ ಮುಚ್ಚುವಂತೆ ಹಾಕುವ ಕುಲಾಯಿ; ಕಾಳು, ಹುಲ್ಲು, ತರಕಾರಿ ಇತ್ಯಾದಿ ತುಂಬಿ ಸಾಗಿಸಲು ಬಳಸುವ ಬಟ್ಟೆಯ ಸಾಧನ; ಕುಂಚಿಗೆ.

ಕುಂಚ್ಗಿ (ನಾ) = ಕುಂಚಿಗೆ; ಕುಂಚಿ; ಬಣ್ಣ, ಸುಣ್ಣ ಇತ್ಯಾದಿ ಬಳಿಯಲು ಬಳಸುವ ಕುಂಚ (ಗಾದೆ:- ಕುಂಚ್ಗಿ ಹರ್ದು ಕುಲಾಯಿ ಮಾಡಿದ್ಹಂತ!)

ಕುಂಜಿ (ನಾ) = ಕೀಲಿಕೈ; ಬೀಗದಕೈ.

ಕುಂಜಿಕುಡು (ಕ್ರಿ) = ಗಡಿಯಾರದ ಯಂತ್ರದ ಸುರುಳಿಯನ್ನು ಬಿಗಿಗೊಳಿಸಿ ನಡೆಯುವಂತೆ ಮಾಡು; ಚಾವಿ ತಿರುವು.

ಕುಂಜಿ ತಿರುವು (ಕ್ರಿ) = ಕುಂಜಿಕುಡು (ನೋಡಿರಿ).

ಕುಂಞಾ (ನಾ) = ಗ್ರಾಮೀಣ ಜನಪದ ದೇವರು. ಬೀದರ ಜಿಲ್ಲೆಯ ಬಾಲೆಯರು ಕುಂಞಾನ ಮೂರ್ತಿ ಮಾಡಿ ಪೂಜಿಸುವರು. ಹಾಗೆಯೇ ಕುಂಞಾ ಕುಂಞಾ। ಕುಂಞಾನ ಬಾಯಾಗುಣ್ಕೆ । ನಿಮ್ಮಾಯಿ ಬಾಯ್ದಾಗೊಣ್ಕೆ । ಎಂದು ಹಾಡುತ್ತಾರೆ.

ಕುಂಟ (ನಾ) = ಕಾಲು ಊನವಾದವನು; ಹೆಳವ.

ಕುಂಟಲಿಪಿ (ನಾ) = ಕುಂಟುವ ಆಟ; ಕುಂಟಾಟ.

ಕುಂಟಾಟ (ನಾ) = ಕುಂಟುತ್ತ ಇತರರನ್ನು ಮುಟ್ಟುವ ಮಕ್ಕಳ ಆಟ; ಕುಂಟುತ್ತ ಕಲ್ಲಿನ ಬಿಲ್ಲೆಯನ್ನು ಚಿಮ್ಮುವ ಆಟ.

ಕುಂಟಿ (ನಾ) = ಹೆಳವೆ; ಕಾಲು ಊನಾದವಳು; ಕುಂಟುಗಾಲಿನವಳು; ಕೃಷಿಕಾರ್ಯದ ಗಳೆ.

ಕುಂಟಿ ಕಟ್ಬು (ಕ್ರಿ) = ಗಳೆ ಹೂಡು; ಹೊಲವನ್ನು ಕುಂಟಿಯಿಂದ ಊಳು.

ಕುಂಟಿಗೊಂದು ಕೊಡ್ಡು ಹಚ್ಚು = ನಡೆಯುವ ಗಳೆಯ ಎದುರು ಕೊರಡು ಹಚ್ಚು. ಅಡ್ಡಗಾಲು ಹಾಕು; ವಿಘ್ನ ಒಡ್ಡು; ಅಡ್ಡಿ ಮಾಡು. (ಗಾದೆ:- ಕುಂಟಿಗೊಂದು ಕೊಡ್ಡು ಹಚ್ಚು.)

ಕುಂಟಿಣಿ (ನಾ) = ಹಾದರಿಗರಿಗೆ ಮಧ್ಯಸ್ತಿಕೆವಹಿಸುವವಳು; ಪ್ರೇಮಿಗಳ ಮಧ್ಯ ದೂತೆಯಾಗಿ ದುಡಿವವಳು; ಕುಂಟುಣಿ; ಕುಂಟುಣ್ಗಿತ್ತಿ.

ಕುಂಟಿರುಮ್ಮಾ = ಗಳೆದ (ಆರಿನ) ಹಿಡಿಕೆ.

ಕುಂಟು (ಕ್ರಿ) = ಒಂದೇ ಕಾಲಿನ ಮೇಲೆ ಹೆಚ್ಚು ಭಾರ ಹಾಕಿ ನಡೆ.

ಕುಂಟುನೆವನ (ನಾ) = ಸಮರ್ಪಕವಲ್ಲದ ಕಾರಣ; ತೋರಿಕೆಯ ನೆಪ; ಇಲ್ಲದ ಕಾರಣ.

ಕುಂಟುಣಿ (ನಾ) = ಕುಂಟಿಣಿ; ಕುಂಟುಸ್ತನ ಕಾರ್ಯ ಮಾಡುವವನು(ಳು); ಪ್ರೇಮಿಗಳ ಮಧ್ಯಸ್ಥ(ಳು).

ಕುಂಟುಣ್ಗಿತ್ತಿ (ನಾ) = ಕುಂಟುಸ್ತನ ಮಾಡುವವಳು; ಪ್ರೇಮಿಗಳ ಮಧ್ಯಸ್ಥೆ; ಹಾದರಕ್ಕೆ ಸಹಕರಿಸುವವಳು.

ಕುಂಟುಸ್ತಾನ (ನಾ) = ತಲೆಹಿಡುಕ ತನ; ಹಾದರಕ್ಕೆ ಸಹಕರಿಸುವಿಕೆ.

ಕುಂಟೆತ್ತು (ನಾ) = ಕಾಲು ಊನಗೊಂಡ ಎತ್ತು; ಕುಂಟುಗಾಲಿನ ಎತ್ತು.

ಕುಂಟೆ ಸಿರ್ಸಿ (ನಾ) = ಭಾಲ್ಕಿ ತಾಲೂಕಿನ ಒಂದು ಹಳ್ಳಿ.

ಕುಂಟ್ಕುದ್ರಿ (ನಾ) = ಕಾಲು ಊನಗೊಂಡ ಕುದುರೆ (ಹಾಡು:- ಯಾವೂರಾಂವಾ ಏನ್ಭಂದ ಕಾಣಸ್ತನೇ ತಂಗಿ। ಏನ್ಭಂದ ಕಾಣಸ್ತಾನ। ಕುಂಟ್ಕುದ್ರಿ ಕುಣಿಸ್ತಾನ।।)

ಕುಂಟ್ಗಾಲು (ನಾ) = ಕುಂಟುವ ಕಾಲು; ಊನಗೊಂಡ ಕಾಲು.

ಕುಂಟ್ಲಿಪಿ (ನಾ) = ಕುಂಟಾಟ; ಕುಂಟುತ್ತ ಕಲ್ಲಿನ ಬಿಲ್ಲೆಯನ್ನು ಚಿಮ್ಮುವ ಆಟ; ಲಂಗ್ಡಿ ಆಟ.

ಕುಂಡ (ನಾ) = ಕುಂಡಾ; ಮಣ್ಣು ತುಂಬಿ ಗಿಡ ನೆಡಲು ಬಳಸುವ ಮಣ್ಣಿನ ಅಗಲ ಮಡಕೆ.

ಕುಂಡ್ಪಪ್ಪ (ನಾ) = ಷಂಡ; ನಪುಂಸಕ.

ಕುಂಡಲಿ (ನಾ) = ಕುಂಡಲಿನಿ; ಜಾತಕ.

ಕುಂಡಾ (ನಾ) = ಕುಂಡ (ನೋಡಿರಿ).

ಕುಂಡಿ (ನಾ) = ನಿತಂಬ; ಪಿರ್ರೆ; ಗುದ.

ಕುಂಡಿ ಊರು (ಕ್ರಿ) = ಕುಳಿತುಕೊ.

ಕುಂಡಿ ಎಲುಮುರಿ (ಕ್ರಿ) = ಗುದ್ದಿ ಗುದ್ದಿ ಹಣ್ಣು ಮಾಡು.

ಕುಂಡಿ ಎಳಿ (ಕ್ರಿ) = ಸೋಲು ಒಪ್ಪು; ಶರಣಾಗು.

ಕುಂಡಿ ಕೂಡಲ್ಲು = ಒಂದೆಡೆ ನಿಲ್ಲಲಾಗದು.

ಕುಂಡಿಖೂರಾಗು (ಕ್ರಿ) = ಮೈಗಳ್ಳಾಗು. (ಹಿಟ್ಟಿನ ಗಿರಣಿ, ಕುಟ್ಟುವ ಗಿರಣಿ ಬಂದ ಸಲ್ಯಾಕ ಹೆಂಗ್ಸೂರ್‍ಕುಂಡಿ ಖೂರ ಆಗ್ಯಾವ).

ಕುಂಡಿಗಿ ನೀರು (ನಾ) = ಗುದ ಪ್ರಕ್ಷಾಲನೆಗೆ ನೀರು ಬೇಕೆಂದು ಸಣ್ಣ ಮಕ್ಕಳು ಹಾಕುವ ಕೂಗು.

ಕುಂಡಿಘಾಳಿ ಬಿಟ್ಗೋತ ಕೂಡು (ನು) = ನಿಶ್ಚಿಂತನಾಗಿರು.

ಕುಂಡಿಗಿ ಬೇರು ಬಿಡು (ನು) = ಕುಳಿತರೆ ಏಳಲಾರದಂತಾಗು; ಬೇರು ಬಿಟ್ಟ ಗಿಡದಂತೆ ಅಲ್ಲಾಡದಿರು; ಭೂಭಾರವಾಗು.

ಕುಂಡಿಗಿ ಭೆಂಕಿ ಹತ್ತು (ನು) = ಧಕ್ಕೆ ತಗಲು; ಚುರುಕು ಮುಟ್ಟು.

ಕುಂಡಿಗಿ ಹಲ್ಲು ಬರು (ನು) = ಸೊಕ್ಕು ತಲೆಗೇರು.

ಕುಂಡಿತನ ಮಡಿಯಾಗು (ನು) = ಸಂಪೂರ್ಣ ವೃದ್ಧನಾಗು; ನಡಬಾಗಿ ಗುದ ಹಿಂದಕ್ಕೆ ತೂರು.

ಕುಂಡಿ ತಿರುವು (ಕ್ರಿ) = ಕುಳಿತಲ್ಲಿಯೇ ಮಗ್ಗುಲಿಗೆ ಹೊರಳು.

ಕುಂಡಿ ತೆಳಗ (ಅ) = ಕುಳಿತ ಜಾಗದಲ್ಲಿ; ಸಮೀಪದಲ್ಲಿ ಗುದದ ಕೆಳಗೆ.

ಕುಂಡಿ ತೊಳಿ (ಕ್ರಿ) = ಗುದ ಪ್ರಕ್ಷಾಲನ ಮಾಡು; ಸೇವೆ ಮಾಡು.

ಕುಂಡಿಥುಂಬು (ಕ್ರಿ) = ಸೊಕ್ಕೇರು; ಅಹಂಕಾರ ಬರು.

ಕುಂಡಿಪದ್ರು (ನಾ) = ಹಿಂಭಾಗದಲ್ಲಿರುವ ಸೀರೆಯ ಪದರು, ಭಾಗ.

ಕುಂಡಿಬಾಯಿ ಬಿಡಲಿ (ನು) = ವಾಂತಿ ಭೇದಿಯಾಗಲಿ; ಸಾಯಲಿ (ಬೈಗುಳ).

ಕುಂಡಿ ಬಾಯ್ಬಿಡು = ವಾಂತಿ ಭೇದಿಯಾಗು; ಕಾಲರಾ ರೋಗ ಬರು.

ಕುಂಡಿಬಿಡು (ಕ್ರಿ) = ಉಬ್ಬು; ಸೊಕ್ಕೇರು.

ಕುಂಡಿಬುಡ್ಕ (ಅ) = ಕುಂಡಿ ಕೆಳಗೆ; ಅತಿ ಸಮೀಪದಲ್ಲಿ.

ಕುಂಡಿ ಮುಂಡಿ = ಹೊಲಸು ಬೈಗಳು.

ಕುಂಡಿಸೆರಗು = ಸೀರೆಯ ಒಳಪದರು; ಕುಂಡಿ ಪದರು; ಹಿಂಭಾಗಕ್ಕೆ ಬರುವ ಸೀರೆಯ ಪದರು, ಕೊನೆ.

ಕುಂಡಿಹಚ್ಚು = ದೇವರಿಗೆ ನಿಂತಲ್ಲೆ ನಮಸ್ಕಾರ ಮಾಡಬಾರದು. ತುಸು ಕುಂಡಿ ಹಚ್ಚಿ ಅಂದರೆ ಕುಳಿತು ಹೋಗು; ಕುಳಿತುಕೊ.

ಕುಂಡುರು (ಕ್ರಿ) = ಕುಳಿತುಕೊ; ಕುಂಡಿಊರು.

ಕುಂಡುರ್ಕಿ (ನಾ) = ಕುಳಿತುಕೊಳ್ಳುವಿಕೆ.

ಕುಂಡುರ್ಕಿಲೆ (ಅ) = ಕುಳಿತುಕ್ಕೊತ್ತಲೆ; ಕುಳಿತು ಕೊಳ್ಳುತ್ತಿರುವಂತೆಯೆ.

ಕುಂಡುಬರ್ೀಳು (ಕ್ರಿ) = ಕುಸಿದು ಬೀಳು; ಬೀಳು; ನಿಂತಲ್ಲಿಂಯೇ ಕುಸಿದು ಬಿಡು.

ಕುಂಡೆಗ (ಅ) = ಕುಳಿತಲ್ಲಿಯೇ; ಹತ್ತಿರವೇ, ತನ್ನಕೆಳಗೆ.

ಕುಂಡೆಗ ಬತ್ತಿ ಮಾಡು (ಕ್ರಿ) = ಕೆಣಕು; ಕೆಡಿಸು; ಹದಗೆಡಿಸು.

ಕುಂಡೆನ ಗೂದಿ (ನಾ) = ಗುದದ್ವಾರದ ಮಾಂಸ; ಬಟ್ಟೆ ಬಾಜಿ; ಸಲ್ಲದ ಮಾತು; ಹೂಳಿಕೆ; ಗುಪ್ತವಾಗಿದ್ದದ್ದು.

ಕುಂಡೆನ ಹೆಂಡಿ (ನಾ) = ಮಲ; ಬಟ್ಟೆ ಬಾಜಿ; ಅಲ್ಲಸಲ್ಲದ ಮಾತು; ಮುಚ್ಚಿ ಉಳಿದ ಹೀನತನ.

ಕುಂಡ್ರು (ಕ್ರಿ) = ಕುಳಿತುಕೊ (ಗಾದೆ:- ಕುಂಡುರ್ಲಾರ್ದ ಬಟ್ಟಿಗಿ ಕುಲ್ಕಣಿ ಮನಿಗ್ಹೋದ್ರ ಕೂಡ್ಸಿ ದಂಡಾ ತೊಗೊಂಡ್ನಂತ).

ಕುಂಡ್ಯಾಗಕಟ್ಗಿ (ನಾ) = ರೈತ ಮಹಿಳೆಯರ ಬೈಗಳು.

ಕುಂಡ್ಯಾಗದಮ್ಮಿರು (ಕ್ರಿ) = ಮೈಯಾಗ ತಾಕತ್ತಿರು; ಹಣದ ಜೋರು ಹೊಂದು.

ಕುಂಡ್ಯಾಗ ಬತ್ತಿ ಮಾಡು (ಕ್ರಿ) = ಕೆಡಿಸು; ಹದಗೆಡಿಸು; ಕೆಣಕು.

ಕುಂಡ್ಯಾನ ಘೆರಿ ಎಣ್ಸು (ಕ್ರಿ) = ಸೂಕ್ಷ್ಮವಾಗಿ ನೋಡು.

ಕುಂತ್ರಾ ನಿಂದ್ರಾ ಜಾಗಾ (ನಾ) = ಬೈಠಕ; ನಿತ್ಯ ಒಂದೆಡೆ ಸೇರುವ ಜಾಗ.

ಕುಂತ (ಕ್ರಿ) = ಕುಳಿತ; ಕುಳಿತುಕೊಂಡ.

ಕುಂತನಿಂತಜನ (ನಾ) = ನೆರೆದಿದ್ದ ಜನ; ಸಭೆ ಸೇರಿದ ಜನ (ಹಾಡು:- ಕುಂತ ನಿಂತ ಜನರೆಲ್ಲಾ ಕೇಳಿರಿ ಖಿಲ್ಲಾ!).

ಕುಂತಾಗ (ಅ) = ಕುಳಿತಿರುವಾಗ.

ಕುಂತಾಳ (ಕ್ರಿ) = ಕುಳಿತಿದ್ದಾಳೆ.

ಕುಂತಿ (ಕ್ರಿ) = ಕುಂತು; ಕುಳಿತುಕೊಂಡು; ಕುಳಿತ ಮೇಲೆ.

ಕುಂತಿ (ನಾ) = ಪಾಂಡವರ ತಾಯಿ (ಗಾದೆ:- ಅಂತೂ ಇಂತೂ ಕುಂತಿ ಮಕ್ಕಿಗಿ ರಾಜಿಲ್ಲ).

ಕುಂತಿನಿಂತಿ (ಕ್ರಿ) = ಕುಂತುನಿಂತು; ವಿಶ್ರಾಂತಿ ಪಡೆದು.

ಕುಂತು ನಿಂತು (ನು) = ನಿಶ್ಚಿಂತವಾಗಿ ಕಾಲಕಳೆಯುತ್ತ; ಹರಟೆ ಹೊಡೆಯುತ್ತ; ಕಾಲಹರಣ ಮಾಡುತ್ತ. ವಿಶ್ರಾಂತಿ ಹೊಂದಿ. (ಹಾಡು : ಊರಿಗಂತ ನೀನು ಬಾರೆ। ನೀರಿಗಂತ ನಾನು ಬರುವೆ । ಕಂತು ನಿಂತು ಮಾತನಾಡೋಣ.)

ಕುಂತೆವ್ವ (ನಾ) = ಪಾಂಡವರ ತಾಯಿ ಕುಂತಿ.

ಕುಂತ್ರಾ ನಿಂತ್ರಾ = ಯಾವಾಗಲೂ; ನಿರಂತರ; ಎಡೆ ಬಿಡದೆ.

ಕುಂದಣ (ನಾ) = ಚಿನ್ನದಲ್ಲಿ ಹರಳನ್ನು ಕೂರಿಸುವ ಕೆಲಸ.

ಕುಂದಾ (ನಾ) = ಹಾಲಿನಲ್ಲಿ ತಯಾರಿಸಿದ ಒಂದು ಪ್ರಕಾರದ ಸಿಹಿ ತಿಂಡಿ.

ಕುಂದಾಗು (ಕ್ರಿ) = ಕೊರತೆಯಾಗು; ಊನವಾಗು; ದನಕ್ಕೆ ಒಂದು ಪ್ರಕಾರದ ರೋಗ ಬರು; ಅಪವಾದ ಬರು.

ಕುಂದಿಡು (ಕ್ರಿ) = ಊನ ಉಂಟು ಮಾಡು; ಕಲಂಕ ಹಚ್ಚು; ಅಪವಾದ ಹೇರು.

ಕುಂದು (ನಾ) = ಕೊರತೆ; ನ್ಯೂನತೆ; ದೋಷ.

ಕುಂದುನ (ನಾ) = ಕುಂದನ; ಕುಂದಣ; ಬಂಗಾರಕ್ಕೆ ಕೂಡಿಸಿದ ಹರಳು.

ಕುಂದುನ್ನ ಹಳ್ಳ (ನಾ) = ಕುಂದನದ ಹರಳು; ಬಂಗಾರದ ಆಭರಣದಲ್ಲಿ ಬೆಸೆದ ಹರಳು.

ಕುಂದುಬರು (ಕ್ರಿ) = ದನಕ್ಕೆ ಒಂದು ಪ್ರಕಾರದ ರೋಗ ಬರು.

ಕುಂದೆಣ್ಸು (ಕ್ರಿ) = ತಪ್ಪು ಹುಡುಕು; ಕೊರತೆಯನ್ನು ತೋರಿಸು.

ಕುಂಪಿ (ನಾ) = ಕುಂಪ್ಪಿ; ರಾಶಿ; ಒತ್ತಟ್ಟಿಗೆ ಸಂಗ್ರಹಿಸಿದ್ದ ಧಾನ್ಯ, ರೇತಿ, ಮಣ್ಣು ಇತ್ಯಾದಿ.

ಕುಂಪ್ಪಿ (ನಾ) = ಕುಂಪಿ (ನೋಡಿರಿ).

ಕುಂಬರ (ನಾ) = ಕುಂಬಾರ; ಕುಂಭಕಾರ; ಮಡಕೆ, ಗಡಿಗೆ ಇತ್ಯಾದಿಗಳನ್ನು ತಯಾರಿಸುವವ (ಹಾಡು:- ಚೆನಪ್ಪ ಚೆನಗೌಡಾ। ಕುಂಬರ ಮಾಡಿದ ಕೊಡನವ್ವಾ).

ಕುಂಬಾರ (ನಾ) = ಕುಂಬರ; ಮಡಕೆಗಳನ್ನು ತಯಾರಿಸುವವನು.

ಕುಂಬಾರ ಗುಂಡಯ್ಯ (ನಾ) = ಹನ್ನೆರಡನೇ ಶತಮಾನದ ಒಬ್ಬ ಶಿವಶರಣ; ತನ್ನ ಭಕ್ತಿ ಬಲದಿಂದ ಶಿವನನ್ನು ಕೂಡ ಕುಣಿಯಲು ಹಚ್ಚಿದವನು (ಐರಣಿ ಹಾಡು:- ಕುಂಬಾರ ಗುಂಡಯ್ಯ। ಖಡಗಾದ ಕೈಯಲಿ। ಕೊಡದಾ ಮ್ಯಾಲೇನ ಬರದಾನೇ ಸೋ।।)

ಕುಂಬಾರ ಕುಕ್ಡಿ (ನಾ) = ಕೋಗಿಲೆ ಜಾತಿಯ ಒಂದು ಹಕ್ಕಿ (ಜನಪದ ಪ್ರಾಸ:- ಕುಂಬಾರ್ಕುಕ್ಡಿ। ನಿಮ್ಮಾಯಿ ಮುಕ್ಡಿ); ಒಂದು ಪ್ರಕಾರದ ಹುಳು.

ಕುಂಬಿ (ನಾ) = ಗೋಡೆಯ ಮೇಲ್ಭಾಗದಲ್ಲಿ ಮಾಳಿಗೆಯ ಸುತ್ತಲೂ ಕಟ್ಟಿದ ದಿಂಡು; ಗೋಡೆಯ ತಲೆಕಟ್ಟಡ.

ಕುಂಬುಳ (ನಾ) = ಕುಂಬಳ ಬಳ್ಳಿ ಮತ್ತು ಅದರ ಕಾಯಿ; ಸೋರೆ ಕಾಯಿ; ಕೂಷ್ಮಾಂಡ.

ಕುಂಬುಳಿ (ನಾ) = ಕುಂಬಳದಂತೆ ಕೊಬ್ಬಿದವಳು; ಸೋರೆಯಂತೆ ಉಬ್ಬಿದವಳು.

ಕುಂಬ್ಳಿ (ನಾ) = ಕುಂಬುಳಿ (ನೋಡಿರಿ).

ಕುಂಬುಳ್ಕುಡಿ (ನಾ) = ಸೋರೆಬಳ್ಳಿಯ ಮುಂದಿನ ತುದಿ.

ಕುಂಬ್ಳ್ಯಾ (ನಾ) = ಸೋರೆ ಕಾಯಂತೆ ಉಬ್ಬಿದವನು.

ಕುಂಭ್ಕರ್ಣ (ನಾ) = ಕುಂಭಕರ್ಣ; ರಾವಣನ ತಮ್ಮ; ನಿದ್ದೆ ಬಡಕ.

ಕುಂಭ್ಕರ್ಣ ನಿದ್ದಿ (ನಾ) = ಮಲಗಿದರೆ ಬೇಗ ಏಳಲಾರದ ನಿದ್ದಿ.

ಕುಕ್ಕಡ ಕೂ (ನಾ) = ಕೋಳಿ, ಹುಂಜಗಳ ಕೂಗು.

ಕುಕ್ಕಿ (ನಾ) = ಕೂಕಿ; ನಾಯಿ (ಬಾಲಭಾಷೆ)

ಕುಕ್ಕು (ನಾ) ತೆ. = ಕುಂಡಿ; ಗುದ (ಶಿಶು ಭಾಷೆ); ಒಂದು ಪ್ರಕಾರದ ಕಾಡು ಸಸ್ಯ.

ಕುಕ್ಕು (ಕ್ರಿ) = (ಹಕ್ಕಿ, ಕೋಳಿ, ಕಾಗೆಗಳು) ಚಂಚುವಿನಿಂದ ಚುಚ್ಚು; ತಿವಿ; ಕುಟ್ಟು. ನೆಲದ ಮೇಲೆ ಹಾಕಿ ಅದುಮು.

ಕುಕ್ಕುರ್ಸು (ಕ್ರಿ) = ಕುಕ್ಕರಿಸು; ಮೇಲೆತ್ತಿ ನೆಲದ ಮೇಲೆ ಕುಕ್ಕು; ಕುಸಿದು ಬೀಳು; ಎತ್ತೆತ್ತಿ ಕುಕ್ಕಿ ಬಟ್ಟೆ ತೊಳೆ; ಎತ್ತೆತ್ತಿ ಅಪ್ಪಳಿಸು.

ಕುಕ್ಕೆನ್ಹುವ್ವ (ನಾ) = ಕುಕ್ಕು ಎಂಬ ಕಾಡು ಸಸ್ಯ ಮತ್ತು ಅದರ ಹೂವು (ಸೀಗಿ ಹಾಡು:- ಕುಕ್ಕೆ ನ್ಹುವ್ವಕ। ಭಾಳ ಪಿರಿಯ ಮಾಡಿದ। ಯಾಕೊ ರಂಗಯ್ಯಾ ನಿನ್ನ ಕಾಕ ಬದಿಗಳು। ಸಾಕ ನಡಿನಡಿ। ಸರಿಯೆ ಸವತಿ ಮನಿಕಡಿ).

ಕುಕ್ಡಿ (ನಾ) = ಕುಕ್ಕಡಿ; ಕದಿರಿಗೆ ಸುತ್ತಿದ ರಾಟಿಯಿಂದ ನೂತದಾರ; ಕುಕ್ಕುಡಿ.

ಕುಗ್ಗು (ಕ್ರಿ) = ಕುಂದು; ಸೊರಗು; ಮ್ಲಾನವಾಗು; ಬಡಕಲಾಗು; ಒಣಗು.

ಕುಚುಕುಚು (ದ್ವಿ) = ಪಿಸುಪಿಸು; ಪಿಸು ಮಾತು; ಕಿವಿಯ ಸಮೀಪದಲ್ಲಿ ಮಾತು ಹೇಳುವಿಕೆ.

ಕುಚ್ಚಗುರ್ಣ (ನಾ) = ಮತ್ಸರ ಪಡುವಿಕೆ.

ಕುಚ್ಚುಗೇಡಿ (ನಾ) = ಮತ್ಸರ ಬುದ್ಧಿಯುಳ್ಳವನು / ಳು.

ಕುಚ್ಲಾಸು (ಕ್ರಿ) = ತುಳಿ; ಕಾಲ ಕೆಳಗಿಟ್ಟು ಅದುಮು; ಹಾನಿವುಂಟು ಮಾಡು; ನಾಶಮಾಡು.

ಕುಚ್ಲಿ (ನಾ) = ಕುಚಲಿ; ಅಡಕೆಯಂತೆ ತಿನ್ನಲು ಬಳಸುವ ಬೀಜ ಮತ್ತು ಅದರಗಿಡ.

ಕುಟಾಂ (ನಾ) = ಕುಟುಂಬ.

ಕುಟಾಂಸೈತ = ಕುಟುಂಬ ಸಹಿತ.

ಕುಟುಂಬ (ನಾ) = ಖಾಂದಾನ; ಮನೆತನ; ವಂಶ; ಸಂಸಾರ; ಮನೆಯೊಡತಿ; ಹೆಂಡತಿ.

ಕುಟ್ಟಿ ಕುಟ್ಟಿ ಥುಂಬು (ನು) = ಒತ್ತೊತ್ತಿ ತುಂಬು; ದಟ್ಟಾಗಿ ಸೇರಿಸು.

ಕುಟ್ಟಿಡು (ನು) = ಸೇಡನ್ನು ಹೊಂದು; ಒಳಗೊಳಗೆ ಕತ್ತಿ ಮಸೆ; ಪ್ರತಿಸೇಡಿಗಾಗಿ ಪ್ರತೀಕ್ಷಿಸು.

ಕುಟ್ಟು (ಕ್ರಿ) = ಒನಕೆಯಿಂದ ಕಾಳುಗಳನ್ನು ಥಳಿಸು; ಜೋರಾಗಿ ಹೊಡೆ; ಚೆನ್ನಾಗಿ ಬಾರಿಸು.

ಕುಟ್ಟು (ನಾ) = ಸೇಡು; ಮತ್ಸರ; ಹೊಟ್ಟೆಯುರಿ.

ಕುಟ್ಲಾಟಾ (ನಾ) = ಕುಟಿಲಾಟ; ಮೋಸಗಾರಿಕೆ; ವಂಚನೆ.

ಕುಡ (ನಾ) = ಕಬ್ಬಿನ ಗಾಣದ ಬಾಯಿ.

ಕುಡಾ ಎಮ್ಮಿ (ನಾ) = ಕೊಡುವ ಎಮ್ಮೆ; ಹಿಂಡುವ ಎಮ್ಮೆ; ಹಯನದೆಮ್ಮೆ (ಗಾದೆ:- ಕುಡಾ ಎಮ್ಮಿಗ್ಬಿಟ್ಟು, ಹೊಡ್ಯಾ ಕ್ವಾಣೆಗಿ ತಂದ್ರಂತ!).

ಕುಡಾಡಿ (ನಾ) = ಕೊಡಲಿ.

ಕುಡಾದುಕೊಟ್ಟು (ನು) = ಕೊಡಬೇಕಾದ ಹಣವನ್ನು ಕೊಟ್ಟು;

ನಿರ್ಧರಿತ ಒತ್ತೆಯನ್ನು ಕೊಟ್ಟು (ಗಾದೆ:- ಕುಡಾದು ಕೊಟ್ಟು ಕುಡ್ಡಿಗಿ ಹೋದ್ರಂತ!).

ಕುಡಿ (ಕ್ರಿ) = ಪಾನಮಾಡು; ದ್ರವ ಪದಾರ್ಥವನ್ನು ಹೀರು; ನಶೆಯ ಪಾನೀಯವನ್ನು ಸೇವಿಸು.

ಕುಡಿ (ನಾ) = ದೀಪದ ಬತ್ತಿಯ ತುದಿಯಲ್ಲಿ ಬರುವ ಬೆಂಕಿಯ ಕಣ, ಚೂರು; ಉರಿಯುವ ದೀಪದ ಬತ್ತಿಯ ತುದಿ.

ಕುಡಿಕಡಿ (ಕ್ರಿ) = ತಂಬಾಕು ಸಸಿಯ ಚೆಂಡಿ ಹಾಗು ಮಗ್ಗುಲಿನ ಚಿಗುರನ್ನು ಚಿವುಟಿ ಹಾಕು; ದೀಪದ ತುದಿಯ ಕೆಂಡದಂತಹ ಭಾಗವನ್ನು ಉದುರಿಸು.

ಕುಡಿ ಚಾಚು (ಕ್ರಿ) = ಎಣ್ಣೆಬತ್ತಿಯನ್ನು ಚಾಚಿ ದೀಪ ಉರಿವಂತೆ ಮಾಡು; ವಂಶವೃದ್ಧಿಸು; ಬೆಳೆಸು.

ಕುಡಿ ಚಿವುಟು (ಕ್ರಿ) = ವಂಶನಾಶ ಮಾಡು.

ಕುಡಿ ಬರು (ಕ್ರಿ) = ದೀಪದ ಮೇಲೆ ಕಿಡಿಯಂತಹ ವಸ್ತು ಉಂಟಾಗು.

ಕುಡಿ ಮೀಸೆ (ನಾ) = ಎಳೆ ಮೀಸೆ; ಕೊನೆಮೀಸೆ.

ಕುಡು (ಕ್ರಿ) = ಕೊಡು; ಒಪ್ಪಿಸು; ಸಮರ್ಪಿಸು; ದಾನಮಾಡು; ಮದುವೆ ಮಾಡಿಕೊಡು; ಲಗ್ನ ಮಾಡಿ ಕೊಡು; ಹೊಡೆ; ಬಾರಿಸು (ಉದಾ:- ಒಂದು ಕುಡು ಮೆಲುಕಿನಾಗ, ಅಂದ್ರ ತಾನೇ ಸುಮ್ನಿರ್ತಾನ.)

ಕುಡು (ಕುಡ) (ನಾ) = ಕಬ್ಬಿನ ಗಾಣದಲ್ಲಿ ಕಬ್ಬು ತುರುಕುವ ಜಾಗ, ಬಾಯಿ.

ಕುಡುಕ (ನಾ) = ಸೆರೆಯ ವ್ಯಸನೀ (ಗಾದೆ:- ಕುಡುಕನ್ಮಾತು ಹುಡ್ಕುದರ ಸಿಗಾಲ).

ಕುಡುಕ್ಯಾ (ನಾ) = ಕುಡುಕ; ಕುಡ್ಕ. (ಬೈಗುಳ)

ಕುಡುಗೀಲು (ನಾ) = ಕುಡುಗೋಲು; ಕುಡ್ಗೋಲು; ಕುಡ್ಗೀಲು; ಹುಲ್ಲು ಕೊಯ್ಯುವ ಸಾಧನ.

ಕುಡ್ಗೀಲು (ನಾ) = ಕುಡುಗೀಲು (ನೋಡಿರಿ).

ಕುಡುಕುಡುಕುಡು (ಧ್ವಿ) = ಕಪ್ಪೆಯ ವಟಗುಟ್ಟುವಿಕೆ.

ಕುಡುತಿ (ನಾ) = ಕುಡ್ತಿ; ಕುಡಿತೆ; ಬೊಗಸೆ; ಎರಡು ಅಂಗೈಗಳಲ್ಲಿ ಹಿಡಿಸುವಷ್ಟು; ಅಂಜಲಿ.

ಕುಡುಕುಡು ಮಾಡು (ಕ್ರಿ) = ಗೊಣಗುಟ್ಟು.

ಕುಡುಪು (ನಾ) = ಹಗ್ಗ ಹುರಿ ಬೀಳುವಿಕೆ; ದಾರ ಸಿಕ್ಕುಗಟ್ಟುವಿಕೆ; ಮತ್ಸರ; ಹೊಟ್ಟೆಕಿಚ್ಚು.

ಕುಡ್ಕ (ನಾ) = ಕುಡುಕ (ನೋಡಿರಿ).

ಕುಡ್ಡ (ನಾ) = ಕುರುಡ; ಕಣ್ಣು ಕಾಣಲಾರದವ; ಅಂಧ. (ಪ್ರಾಸ:- ಕುಡ್ಡ ಕುನಾಸೀ। ಮೂಗಿನಾಗ ನಾಸಿ। ರುಪ್ಪೈ ಎಣುಸ್ತಾನ ಚೌಕಾಸಿ).

ಕುಡ್ಡಾಕುಡ್ಡಾ (ಧ್ವಿ) = ಸಾರಣೆ ಮಾಡುವಾಗ, ಸುಣ್ಣ ಬಳಿವಾಗ ಅಲ್ಲಲ್ಲಿ ಬಿಟ್ಟು ಹೋದ ಜಾಗಗಳು.

ಕುಡ್ಡಿ (ನಾ) = ಕುರುಡಿ; ಭ್ರಮರ.

ಕುಡ್ತಾ (ನಾ) = ಅಂಗಿ. (ಕ್ರಿ) ಕೊಡುತ್ತೇನೆ.

ಕುಡ್ತಿ (ನಾ) = ಕುಡುತಿ (ನೋಡಿರಿ).

ಕುಡ್ಸು = ಕುಡಿಸು; ಕುಡಿವಂತೆ ಮಾಡು; ಕೊಡಿಸು.

ಕುಣಿ (ಕ್ರಿ) = ನೆಗೆದಾಡು; ಜಿಗಿದಾಡು; ನರ್ತಿಸು (ಗಾದೆ:- ಕುಣಿಲಾಕ್ಬರಲ್ದಾಕಿ ಅಂಗ್ಳ ಡೊಂಡಕದ್ಧಂತ).

ಕುಣಿ (ನಾ) = ಹೆಣ ಹೂಳಲು ತೋಡಿದ ತಗ್ಗು; ತಗ್ಗು (ಹಾಡು:- ಶಿವನಾಮ್‌ನು ನುಡಿಯದ ಬಾಯಿ ಬಚ್ಚಲ ಕುಣಿಯಂತೆ). ಹೆಣ ಹೂಳಿದ ಜಾಗ; ಸಮಾಧಿ; ಗೋರಿ (ಗಾದೆ:- ಕುಣಿಗೊಯ್ದ ಹೆಣಾ ಮನಿಗಿ ವಾಪಾಸ ತರಾಲ).

ಕುಣಿಗೇರಿ (ನಾ) = ಹೆಣ ಹೂಳುವ ಸಾಮಾಜಿಕ ಜಾಗ; ಸ್ಮಶಾನ; ಮಸಣ; ರುದ್ರಭೂಮಿ; ಖಬರಸ್ತಾನ; ಮಸೂಟ್ಗಿ; ಹೆಣ ಸುಡುವ ಜಾಗ (ಗಾದೆ:- ಊರಿಗಿ ಮೀರ್‍ಯಾನ ಕುಣಿಗೇರಿಗಿ ಬೇಕಾಗ್ಯಾನ).

ಕುಣಿತೋಡು (ಕ್ರಿ) = ಹೆಣ ಇಡಲು ತಗ್ಗು ಕೊರೆ; ಕೊಲ್ಲು; ಕುಣಿ ಹೊಡಿ.

ಕುಣಿಸೇರು (ಕ್ರಿ) = ಸಾಯು; ಹೆಣವಾಗು; ಕುಣಿಕಾಣು (ಬೈಗುಳ).

ಕುಣಿಸೇರ್ಲಿ (ನು) = ಸತ್ತು ಕುಣಿಕಾಣಲಿ; ಕುಣಿಸೇರುವಂತಾಗಲಿ (ಬೈಗುಳ).

ಕುಣುಬಟ (ನಾ) = ಕುಣುಬಿ; ಕೃಷಿ ಕೆಲಸದವ; ರೈತ.

ಕುಣುಬಿ (ನಾ) = ಕುಣುಬಟ; ರೈತ; ಒಕ್ಕಲಿಗ.

ಕುಣುಸು (ಕ್ರಿ) = ಕುಣಿಯಿಸು. ಕುಣಿವಂತೆ ಮಾಡು; ತನ್ನ ಮನಸ್ಸಿಗೆ ಬಂದಂತೆ ಇತರರನ್ನು ಬಳಸು.

ಕುಣುಸ್ಯಾಡು (ಕ್ರಿ) = ತನ್ನ ಇಚ್ಛೆಗೆ ತಕ್ಕಂತೆ ವರ್ತಿಸುವಂತೆ ಮಾಡು.

ಕುಣ್ಕಿ (ನಾ) = ಕುಣಿಕೆ; ಹಗ್ಗದ ಉಂಗುರ; ಕಣ್ಣಿಯ ಉಂಗುರ; ಯೋನಿ.

ಕುಣ್ತಿ (ನಾ) = ಕುಣಿತ; ನರ್ತನ.

ಕುಣ್ತಿ ಮಾಡು (ಕ್ರಿ) = ಕುಣಿದಾಡು; ನರ್ತಿಸು.

ಕುಣ್ಬಟ (ನಾ) = ಒಕ್ಕಲುತನ ಕಾಯಕದವನು; ರೈತಾಪಿ; ಕುಣಬಿ.

ಕುಣ್ಬಿ (ನಾ) = ರೈತ; ಕುಣಬಿ.

ಕುಣ್ಯಾಗ ಕಾಲ್ಚಾಚು (ಕ್ರಿ) = ಸಾಯು; ಸಾವಿಗೆ ಸಮೀಪಿಸು.

ಕುಣ್ಯಾಗಿಕ್ಕು (ಕ್ರಿ) = ಹೂಳು; ಮಣ್ಣು ಮಾಡು; ಹೆಣವನ್ನು ಮಣ್ಣಿನಲ್ಲಿ ಮುಚ್ಚು.

ಕುಣ್ಯಾಗಿಡ್ಲಿ (ನು) = ಹೆಣವಾಗಿ ಕುಣಿ ಕಾಣುವಂತಾಗಲಿ; ಕುಣಿಯಲ್ಲಿಟ್ಟು ಮಣ್ಣು ಮುಚ್ಚಲಿ (ಬೈಗುಳ).

ಕುತ್ಗಿ (ನಾ) = ಕುತ್ತಿಗೆ; ಕೊರಳು; ಕಂಠ.

ಕುತ್ಗಿ ಅಡಾರ (ಅ) = ಕುತ್ತಿಗೆ ತನಕ (ತಿನ್ನುವಿಕೆ).

ಕುತ್ಗಿಒತ್ತು (ಕ್ರಿ) = ಕುತ್ತಿಗೆ ಹಿಚುಕಿ ಕೊಲ್ಲು.

ಕುತ್ಗಿ-ಕೊಯ್ಯಿ (ಕ್ರಿ) = ಮೋಸ ಮಾಡು; ವಂಚಿಸು; ಕತ್ತಿಯಿಂದ ಕುತ್ತಿಗೆ ಕಡಿ.

ಕುತ್ಗಿಗಿ ಕೈಹಾಕು (ಕ್ರಿ) = ಕುತ್ತಿಗೆಗೆ ಕೈ ಇಕ್ಕಿ ದಬ್ಬು.

ಕುತ್ಗಿಗಿ ಫಾಣ (ನಾ) = ಉರುಳು; ಸಂಕಟ.

ಕುತ್ಗಿಗಿ ಫಾಣ ಹಾಕು (ಕ್ರಿ) = ಸಂಕಟ ಒಡ್ಡು; ಪೀಡಿಸು.

ಕುತ್ಗಿ ತೆರ್ದುಹೂಳು (ಕ್ರಿ) = ಕುತ್ತಿಗೆ ಕಾಣುವಂತೆ ಮಣ್ಣು ಮುಚ್ಚು. (ನುಡಿಗಟ್ಟು:- ಕುತ್ಗಿತೆರ್ದು ಹೂಳಿ ಕತ್ತಿ ಧಾಟ್ಸೈ).

ಕುತ್ಗಿ ಹೊಡಿ (ಕ್ರಿ) = ಕುತ್ತಿಗೆ ಕತ್ತರಿಸು; ಮೋಸ ಮಾಡು; ವಂಚಿಸು.

ಕುತ್ತ (ನಾ) = ರೋಗ; ವ್ಯಾಧಿ; ಆಪತ್ತು; ತೊಂದರೆ; ಕಷ್ಟ; ಕುತ್ತು.

ಕುತ್ತ ಸುತ್ತು (ಕ್ರಿ) = ರೋಗ ಉಂಟಾಗು; ವ್ಯಾಧಿ ಉಂಟಾಗು.

ಕುತ್ತಾ (ನಾ) = ಕುತ್ತ; ಕುತ್ತು.

ಕುತ್ತಾ ಸುತ್ತು (ಕ್ರಿ) = ಕುತ್ತು ಆವರಿಸು; ರೋಗ ಉಂಟಾಗು; ಗಂಡಾಂತರ ಸುತ್ತು.

ಕುತ್ತುಸುರು (ನಾ) = ತೇಕುವಿಕೆ; ಸಂತಾಪ ಪಡುವಿಕೆ.

ಕುತ್ತುಸುರು ಬಿಡು (ಕ್ರಿ) = ತೇಕು; ಸಂತಾಪ ಪಡು.

ಕುತ್ತೆಸುದು (ನಾ) = ಕುದಿಯುವ ನೀರು.

ಕುದಿ (ಕ್ರಿ) = ಮರುಗು; ಶಾಖದಿಂದ ಉಕ್ಕು; ಮನಸಿನಲ್ಲಿ ನೊಂದುಕೊ.

ಕುದಿ (ನಾ) = ಕುದಿಯುವಿಕೆ; ಮರಳುವಿಕೆ; ಸಂಕಟ ಪಡುವಿಕೆ; ಸಂತಾಪ; ಚಿಂತೆ; ಉಕ್ಕುವಿಕೆ; ಅನ್ನದ ಕುದಿಯುವಿಕೆ.

ಕುದಿ ಭೀಳು (ಕ್ರಿ) = ಚಿಂತೆಯಾಗು.

ಕುದಿ ಮಾಡು (ಕ್ರಿ) = ಚಿಂತೆಮಾಡು.

ಕುದಿ ಹಿಂದಾಗು (ಕ್ರಿ) = ಚಿಂತೆ ದೂರಾಗು; ನಿಶ್ಚಿಂತನಾಗು.

ಕುದಿ ಹಿಡಿ (ಕ್ರಿ) = ಕುದಿಯಲು ಪ್ರಾರಂಭಿಸು; ಚಿಂತೆಗೊಳಗಾಗು.

ಕುದುರಿ (ನಾ) = ಕುದುರೆ; ಅಶ್ವ; ತುರಗ; ಹಯ; ಶಿಶ್ನ.

ಕುದುರಿ ಆಗು (ಕ್ರಿ) = ನಡೆ; ಓಡು; ಗುಣ ಮುಖನಾಗು.

ಕುದುರಿ ಏರು (ಕ್ರಿ) = ಕುದುರೆ ಸವಾರಿ ಮಾಡು.

ಕುದುರಿ ಜೇನು (ನಾ) = ಹುಳಿ ಹುಳಿ, ಸಿಹಿ ಸಿಹಿ ಸ್ವಾದದ ಜೇನು ಸಂಗ್ರಹ ಮಾಡುವ ಜೇನ್ನೊಣ ಮತ್ತು ಜೇನು; ಹೆಜ್ಜೇನು. (ಗಾದೆ : ಕುದುರಿ ಜೇನಿಗಿ ಕೆಣಕ್ದುರು ಕುಣ್ಯಾಗ ಹೋಗಾತಾತನಾ ಬಡಾಲ.)

ಕುದುರಿ ಪಾಗಾ (ನಾ) = ಕುದುರೆ ಕಟ್ಟುವ ಜಾಗ; ಲಾಯ.

ಕುದುರಿ ಸವಾರಿ (ನಾ) = ಕುದುರೆಯ ಬೆನ್ನೇರಿ ಮಾಡುವ ಪ್ರಯಾಣ.

ಕುದುರಿ ಹೊಗು (ಕ್ರಿ) = ಕುದುರೆ ಮನೆ ಸೇರಿ ಹಾಳಾಗು.

ಕುದ್ದುರ್ಗೇಡಿ (ನಾ) = ಅತಿದುಷ್ಟ; ಧೂರ್ತ; ತುಂಟ; ಕಿಡಿಗೇಡಿ (ಬೈಗುಳ).

ಕುದ್ದು ಸುಣ್ಣಾ ಆಗು (ಕ್ರಿ) = ನುಣ್ಣಾಗಿ ಕುದಿ.

ಕುದ್ರಿ (ನಾ) = ಕುದುರೆ; ಬಂದೂಕಿನ ಖಟ್ಕಾ (ಕೊಂಡಿ).

ಕುದ್ರಿ ಆಗು (ಕ್ರಿ) = ಓಟಕ್ಕೆ ಸಿದ್ಧವಾಗು; ನಡೆ; ಓಡು, ಗುಣಮುಖನಾಗು.

ಕುದ್ರಿ ಒತ್ತು (ಕ್ರಿ) = ಖಟ್ಕಾ ಅದುಮಿ ಬಂದೂಕು ಹಾರಿಸು.

ಕುನಾವಟ (ನಾ) = ಕುನುಸು; ವೈರತ್ವ; ದುಷ್ಮನಿ.

ಕುನಾಸಗೇಡಿ (ನಾ) = ಕೊಳಕು ಗುಣಗಳಿಂದ ಕೆಟ್ಟವ(ಳು).

ಕುನುಸಿಡು (ಕ್ರಿ) = ಸೇಡಿನ ಮನೋಭಾವ ಹೊಂದು.

ಕುನುಸು (ನಾ) = ಸೇಡಿನ ಮನೋಭಾವ.

ಕುನ್ನಿ (ನಾ) = ನಾಯಿ ಮರಿ; ಗಂಡು ಮಗು (ವಚನ:- ನಮ್ಮ ಕುನ್ನಿಗೆ ಕೂಸ ಕೊಡಬೇಡಿ - ಬಸವಣ್ಣ).

ಕುಪ್ಪಿ (ನಾ) = ಭರಣಿ; ಸಣ್ಣಸೀಸ; ಗಾಜಿನ ಇಲ್ಲವೆ ಪ್ಲಾಸ್ಟಿಕ್ಕಿನ ಸಣ್ಣ ಪಾತ್ರೆ.

ಕುಪ್ರಿ (ನಾ) = ಕಣ್ಣು ಬೇನೆ; ಕಣ್ಣು ಮೇಲಿನ ಪೊರೆ.

ಕುಪ್ರಿಬರು (ಕ್ರಿ) = ಕಣ್ಣ ಮೇಲೆ ಪೊರೆಯುಂಟಾಗು.

ಕುಬಂಡಾಗ್ಯಾದ = ಕುದಿ ಆಗ್ಯಾದ; ಚಿಂತೆಯಾಗಿದೆ.

ಕುಬಾಲು (ವಿ.) = ಕುದಿ; ಚಿಂತೆ; ಭಯದಿಂದ ಕೂಡಿದ (ಉದಾ:- ಆಜಾಗಾ ಭಾರೀ ಕುಬಾಲದಾ).

ಕುಬಾಲುಭೀಳು (ಕ್ರಿ) = ಕುದಿಯಾಗು; ಚಿಂತೆಯಾಗು; ಭಯ ಉಂಟಾಗು.

ಕುಬುಸಾ (ನಾ) = ಕುಪ್ಪಸ, ರವಿಕೆ; ಹಾವಿನ ಮೈ ಮೇಲಿನ ಪೊರೆ (ಒಗಟು:- ಕುಬುಸಾ ಕಳೀ ಖೊಲ್ಯಾಗ್ನಡಿ = ಬಾಳೆಹಣ್ಣು).

ಕುಬುಸಾ ಉಚ್ಚು (ಕ್ರಿ) = ಹಾವಿನ ಪೊರೆ ಕಳಚು.

ಕುಬುಸಾ ಕಳಿ (ಕ್ರಿ) = ಮೈಮೇಲಿನ ರವಿಕೆ ಉಚ್ಚೆ ತೆಗೆ (ಒಗಟು:- ಕುಬುಸಾಕಳಿ, ಖೊಲ್ಯಾಗ ನಡಿ-ಬಾಳೆಹಣ್ಣು).

ಕುಬುಸಾ ಮಾಡು (ಕ್ರಿ) = ಮೊದಲ ಸಲ ಗರ್ಭಿಣಿಗೆ ಕುಪ್ಪಸ ತೊಡಿಸುವ ಶಾಸ್ತ್ರ ಮಾಡು.

ಕುಬ್ಸಾ (ನಾ) = ಕುಬುಸಾ (ನೋಡಿರಿ).

ಕುಬ್ಸಾ ತೊಡ್ಸು (ಕ್ರಿ) = ಮೊದಲಸಲ ಗರ್ಭಿಣಿಯಾದವಳಿಗೆ ಕುಪ್ಪಸ ತೊಡಿಸುವ ಕಾರ್ಯಕ್ರಮ ಮಾಡು; ಕುಬುಸಾ ಮಾಡು.

ಕುಬ್ಸಾ ಮಾಡು (ಕ್ರಿ) = ಅತಿಥಿ ಮಹಿಳೆಗೆ ಕುಪ್ಪಸದ ಖಣಗಳನ್ನು ಉಡುಗೊರೆಯಾಗಿ ಕೊಡು; ಮೊದಲ ಸಲ ಗರ್ಭಿಣಿಯಾದ ಮಹಿಳೆಗೆ ಕುಪ್ಪಸ ತೊಡಿಸುವ ಶಾಸ್ತ್ರ ಮಾಡು; ಕುಬುಸಾ ಮಾಡು.

ಕುಮರ (ನಾ) = ಕುಮಾರ.

ಕುಮರಿ (ನಾ) = ಕುಮಾರಿ; ಕುವರಿ; ಕನ್ನೆ.

ಕುಮ್ಮಾ (ನಾ) = ಒಂದು ಬೊಗರೆಗೆ ಮತ್ತೊಂದು ಬೊಗರೆಯಿಂದ ಮೊಳೆ ಚುಚ್ಚುವಂತೆ ಹೊಡೆಯುವ ಆಟ.

ಕುಮ್ಮಾ ಆಟ (ನಾ) = ಬೊಗರೆಯಿಂದ ಬೊಗರೆಗೆ ಕುಕ್ಕಿ ಮೊಳೆ ಚುಚ್ಚುವಂತೆ ಮಾಡುವ ಆಟ.

ಕುಮ್ಮಾ ಹೊಡಿ (ಕ್ರಿ) = ಒಂದು ಬೊಗರೆಯಿಂದ ಮತ್ತೊಂದು ಬೊಗರೆಗೆ ಮೊಳೆ ಚುಚ್ಚುವಂತೆ ಚಚ್ಚು.

ಕುರಗಡ (ನಾ) = ದಪ್ಪನೆಯ ಹಗ್ಗ; ಸೋಲುಹಗ್ಗ.

ಕುರಿ (ನಾ) = ಮೈತುಂಬ ಉಣ್ಣೆಯುಳ್ಳ ಪ್ರಾಣಿ.

ಕುರಿಗಡ್ಡ (ನಾ) = ಕುರುಚಲು ಗಡ್ಡ; ಕುರಿಯಂತಹ ದಾಡಿ.

ಕುರಿತೆಲಿ (ನಾ) = ಕುರಿ ಬುದ್ಧಿ.

ಕುರು (ನಾ) = ಕೀವು ರಕ್ತಗಳಿಂದ ಕೂಡಿದ ಗಡ್ಡೆ.

ಕುರುಕುರು (ದ್ವಿ) = ಕರಿದ ಹಪ್ಪಳ ತಿಂದರೆ ಆಗುವ ಸದ್ದು; ಕುರ್ಕುರು; ಇಲಿಕೆದರುವ ಸದ್ದು.

ಕುರುಡ್ಗಿ (ನಾ) = ಕುರುಡಿಗೆ; ಅಕ್ಕಿ, ಜೋಳ, ಗೋದಿ ಮುಂತಾದವುಗಳಿಂದ ತಯಾರಿಸಿದ ಎಸಳೆಸಳು ನಂಜಿಕೆ.

ಕುರುಡ್ಗಿಡಬ್ಬಿ (ನಾ) = ಕುರುಡಿಗೆ ತಯಾರಿಸುವ ಉಪಕರಣ.

ಕುರುಣಿ (ನಾ) = ಕುರಿ ಉಣ್ಣೆಯ ದಾರ. (ಜನಪದ ಪ್ರಾಸ : ಕುರುಬ ಕುಂಚಗಿ । ಮ್ಯಾಲ ಮಂಚಗಿ । ಉಡಿಯಾಗ ಉಣ್ಣಿ। ಬಾಯ್ದಾಗ ಕುರುಣಿ.)

ಕುರುಪು (ನಾ) = ಅಂಗಾಲಲ್ಲಾಗುವ ಸುತ್ತುಗಡ್ಡೆ.

ಕುರುಬ (ನಾ) = ಕುರ್ಬ; ಕುರಿಕಾಯವವನು; ಕುರಿಗಾಹಿ (ಪ್ರಾಸ:- ಕುರುಬ ಕುಂಚಿಗಿ। ಮ್ಯಾಲ ಮಂಚಿಗಿ। ಉಡ್ಯಾಗ ಉಣ್ಣಿ। ಬಾಯ್ದಾಗ್ಕುರ್ಣಿ); ಧನಗರ; ಗೊಂಡ.

ಕುರುಸಾಲ್ಯಾ (ನಾ) = ಕುರ್ಸಾಲ್ಯಾ; ಕೌರವರ ಗುಣದವನು; ಕೌರವರ ಸಾಲಿನವನು; (ಗುಲ್ಬರ್ಗಾ-ಬೀದರ ಸೀಮಾಂತ ಭಾಗದ ಬೈಗುಳ).

ಕುರ್ಕುಲಿ (ನಾ) = ಕುರುಕುಲಿ; ಸಣ್ಣ ಬುಟ್ಟಿ; ಸೇಂಗಾ ಆಯುವಾಗ ಬಳಸುವ ಸಣ್ಣ ಬುಟ್ಟಿ.

ಕುರ್ಗಡು (ನಾ)= ಕುರ್ಗಾಡ; ದಪ್ಪ ಹಗ್ಗ.

ಕುರ್ಗಾಡು (ನಾ) = ದಪ್ಪ ಹಾಗೂ ಗಟ್ಟಿಯಾದ ಹಗ್ಗ.

ಕುರ್ಣಿ (ನಾ) = ಕುರುಣಿ; ಕುನ್ನೂಲು (ಜಾನಪದ ಪ್ರಾಸ:- ಕುರ್ಬ ಕುಂಚಗಿ। ಮ್ಯಾಲ ಮಂಚಗಿ। ಉಡ್ಯಾಗ ಉಣ್ಣಿ। ಬಾಯ್ದಾಗ್ಕುರ್ಣಿ).

ಕುನ್ನೂಲು (ನಾ) = ಕುರಿ ಉಣ್ಣೆಯ ದಾರ.

ಕುರ್ರು (ನಾ) = ಗುಟ್ಟು; ರಹಸ್ಯ.

ಕುರ್ಸಿ (ನಾ) = ಕುರ್ಚಿ; ಖುರ್ಜಿ; ಆಸನ.

ಕುಲ (ನಾ) = ಗುಂಪು; ಸಮೂಹ; ವಂಶ; ಮನೆತನ, ಖಾಂದಾನ.

ಕುಲಕರ್ಣಿ (ನಾ) = ನಿಜಾಮಕಾಲದ ಗ್ರಾಮಲೆಕ್ಕಿಗ.

ಕುಲಗೆಡು (ಕ್ರಿ) = ಕುಲಕೆ ಸಲ್ಲದ ಕೆಲಸ ಮಾಡು; ಕುಲಬಾಹಿರನಾಗು; ಮತಾಂತರ ಹೊಂದು.

ಕುಲಗೇಡಿ (ನಾ) = ಕುಲಗೆಟ್ಟವನು (ಬೈಗುಳ); ಕಲಬಾಹಿರ.

ಕುಲಗೋತ್ರ (ನಾ) = ಕುಲ ಮತ್ತು ಗೋತ್ರ; ಜಾತಿ ಮತ್ತು ವಂಶ; ಮನೆತನದ ಆದಿ-ಅಂತ; ಬಳಕೆ; ಗುರು ಪರಂಪರೆ.

ಕುಲಾಟಿ (ನಾ) = ಕೊಲಾಟಿ; ಲಾಗ; ಲೊಟಂಗಿ.

ಕುಲಾಟಿ ಹೊಡಿ (ಕ್ರಿ) = ಲಾಗಹಾಕು; ಲೊಟಂಗಿ ಹೊಡಿ.

ಕುಲಾಬಲಾ (ನಾ) = ಕುಲದ ರೀತಿ ನೀತಿ; ಜಾತಿ; ಬಳಕೆ.

ಕುಲಾಬಿ (ನಾ) = ಕೊಂಡಿ; ತೊಟ್ಟಿಲು, ತೂಗು ಮಂಚ ಇತ್ಯಾದಿ ನೇತು ಹಾಕಲು ಮಾಳಿಗೆಗೆ ಜೋಡಿಸಿದ ಕೊಂಡಿ.

ಕುಲಾಯಿ (ನಾ) = ತಲೆಯುಡಿಗೆ; ಕೂಸಿನ ತಲೆಗೆ ಕಟ್ಟುವ ಟೋಪಿ.

ಕುಲಾಯಿ ಕಟ್ಟು (ಕ್ರಿ) = ಕೂಸಿನ ತಲೆಗೆ ಕಿವಿ ಮುಚ್ಚುವಂತೆ ಕಸೆಯ ಟೋಪಿಯನ್ನು ಕಟ್ಟು.

ಕುಲಾಯಿ ಹೊಲಿ (ಕ್ರಿ) = ಕೂಸಿನ ತಲೆಗಾಗಿ ಕಸೆಯುಳ್ಳ ಟೋಪಿಯನ್ನು ಮಾಡು.

ಕುಲಾಲ (ನಾ) = ಕುಂಬಾರ; ಕುಂಭಕಾರ.

ಕುಲಾವಿ (ನಾ) = ಕುಲ್ಯೈ; ಕುಲಾಯಿ ಕೂಸಿನ ತಲೆಯ ಟೋಪಿ.

ಕುಲ್ಯೈ (ನಾ) = ಕುಲಾವಿ; ಕುಲಾಯಿ; ಕೂಸಿನ ತಲೆಗೆ ಕಟ್ಟುವ ಕಸೆಯುಳ್ಳ ಟೋಪಿ.

ಕುಲ್ಕ ಬಟ್ಟಾ (ನಾ) = ಕುಲಕ್ಕೆ ಕಲಂಕ, ಅಗೌರವ.

ಕುಲ್ಗೇಡಿ (ನಾ) = ಕುಲಗೇಡಿ; ಕುಲಗೆಟ್ಟವನು; ಕುಲಬಾಹಿರ.

ಕುಲ್ಲ = ಖುಲ್ಲ; ಖೂಳ (?)

ಕುಲ್ಲಗುಣಾ (ನಾ) = ಹೀನ ಗುಣ.

ಕುಲ್ಬೊರ್ತ = ಕುಲಕ್ಕೆ ಸಲ್ಲದ; ಕುಲಬಾಹಿರವಾದ. (ಗಾದೆ : ಕೆಟ್ಟೆಣ್ಣು ಕುಲ್ಬೊರ್ತು.)

ಕುವ್ವತ್ತು (ನಾ) = ತಾಕ್ಕತು; ಸಾಮರ್ಥ್ಯ; ಶಕ್ತಿ.

ಕುಶ (ನಾ) = ಶ್ರೀರಾಮನ ಮಗ.

ಕುಸಾಳಿ (ನಾ) = ಹುಲ್ಲು ಬೀಜ; ಮುಳ್ಳಿನಂತಿರುವ ಮೈಗೆ ಮೆತ್ತುವ ಸುಂಕದ ಹುಲ್ಲು ಬೀಜ.

ಕುಸಿ (ಕ್ರಿ) = ಕುಗ್ಗು; ಕುಂದು; ಕಡಿಮೆಯಾಗು; ಮನಸ್ಸು ಮುದುಡು.

ಕುಸಿಬಿದ್ದ ಕಣ್ಣು (ನಾ) = ಗುಳಿಬಿದ್ದ ನೇತ್ರ; ಆಳಕ್ಕಿಳಿದ ಕಣ್ಣು.

ಕುಸಿ ಭೀಳು (ಕ್ರಿ) = ಕಡಿಮೆಯಾಗು; ಕೊರತೆಯಾಗು; ಕುಂದಾಗು.

ಕುಸುಬಿ (ನಾ) = ಕುಸ್ಬಿ; ಕುಸುಬೆ; ಕುಸುಮೆ; ಒಂದು ಪ್ರಕಾರದ ಬಿಳಿ ಬಣ್ಣದ ಎಣ್ಣೆಕಾಳು.

ಕುಸುಬಿ ಹಾಲು (ನಾ) = ಕುಸುಬೆಯನ್ನು ನೀರಿನೊಂದಿಗೆ ಥಳಿಸಿ ತೆಗೆದ ಬಿಳಿ ಬಣ್ಣದ ದ್ರವ. ಕಾರುಣ್ಣೆ ಮುನ್ನಾದಿನ ಅಂದರೆ ಹೊನ್ನುಗ್ಗಿ ದಿನ, ದನಗಳ ಪೂಜೆ ಮಾಡಿ, ಕುಸುಬಿ ಹಾಲು ಮತ್ತು ಕಿಚಡಿಯನ್ನು ದನಗಳಿಗೆ ತಿನಿಸುವ ಶಾಸ್ತ್ರ.

ಕುಸುಬಿ ಹಾಲು ಕಿಚಡಿ (ನಾ) = ಕುಸುಬೆಯನ್ನು ನೀರಿನೊಂದಿಗೆ ಕುಟ್ಟಿ ಹಿಂಡಿದ ದ್ರಾವಣ ಹಾಗೂ ಜೋಳ ಥಳಿಸಿ ಕುದಿಸಿದ ಕಿಚಡಿ; ಕಾರುಣ್ಣೆಯ ಹೊನ್ನುಗ್ಗಿ.

ಕುಸುರಾ (ನಾ) = ಕುಸುರ; ಕುಸ್ರಾ, ಬೇಲ ಬೂಟಾ; ಕೆತ್ತನೆ ಕೆಲಸ ಮಾಡಿದ ಪಾತ್ರೆ, ಒಡವೆ; ಸೂಕ್ಷ್ಮ ಕುಸುರಿ ಕೆಲಸ (ಉದಾ:- ಕುಸುರಾ ಇದ್ದಲ್ಲಿ ಕೆಸರು, ಕೊಳೆ ಬಹಳ).

ಕುಸುರೆಳ್ಳು (ನಾ) = ಸಕ್ಕರೆಯ ಪಾಕದಲ್ಲಿ ಎಳ್ಳನ್ನು ಅದ್ದಿ ತಯಾರಿಸಿದ ಕುಸುರದ ಕಾಳು.

ಕುಸ್ತಾನ್ಮುಸ್ತಿ (ನಾ) = ಸತತವಾದ ಮಲ್ಲಯುದ್ಧ; ನಿಲ್ಲದ ಮಲ್ಲಯುದ್ಧ; ಕಾಳಗ; ತಿಕ್ಕಾಟ; ಹೊಡಪೆಟ್ಟು.

ಕುಸ್ತಿ (ನಾ) = ಜಟ್ಟಿ ಕಾಳಗ; ಮಲ್ಲಯುದ್ಧ; ಕೈ ಕೈ ಮಿಲಾಯಿಸುವಿಕೆ.

ಕುಸ್ತಿಗಡಿ (ನಾ) = ಜಟ್ಟಿ; ಪೈಲ್ವಾನ.

ಕುಸ್ತಿಯಾಡು (ಕ್ರಿ) = ಮಲ್ಲಯುದ್ಧ ಮಾಡು; ಜಟ್ಟಿ ಕಾಳಗವಾಡು; ಹೊಡೆದಾಡು.

ಕುಸ್ಬಿ (ನಾ) = ಕುಸುಬೆ; ಕುಸುಮೆ; ಒಂದು ಪ್ರಕಾರದ ಬಿಳಿ ಬಣ್ಣದ ಎಣ್ಣೆ ಕಾಳು.

ಕುಸ್ಮತಿ (ನಾ) = ಹೊಟ್ಟೆ ಕಿಚ್ಚು; ಖುಸ್ಮತಿ; ಮತ್ಸರ.

ಕುಸ್ಮತ್ತು (ನಾ) = ಕುಸ್ಮತಿ; ಖುಸ್ಮತ್ತು; ಹೊಟ್ಟೆ ಕಿಚ್ಚು; ಮತ್ಸರ.

ಕುಸ್ರ ಕುಸ್ರ (ದ್ವಿ) = ಕುಸುರು ಕುಸುರಾದ; ನಾಜೂಕಿನ ಕೆತ್ತನೆ ಕೆಲಸದ.

ಕುಳುಪಾಂಡ್ಯಾ (ನಾ) = ಕೂಳಕ್ಕಾಗಿ ಬಡಿದಾಡುವವ, ಕೂಳು ಹೆಚ್ಚು ತಿನ್ನುವವ; ಕೂಳು ಬಾಕ.

ಕುಳುಭಾನ (ನಾ) = ಒಣಗಿದ ಸೆಗಣಿಯ ಬೆರಣಿಗಳ ಬಣವೆ; ಕುಳ್ಳುಭಾನ; ಕುಳ್ಳು ಬಣವೆ. (ಗಾದೆ:- ಕುಳುಭಾನ ಸುತ್ತ ಕುಳ್ಳು ಆಯಿ).

ಕುಳ್ಳಿ (ನಾ) = ಮಣ್ಣಿನ ಸಣ್ಣ ಮಡಿಕೆ; ಕುಡಿಕೆ; ಸ್ತ್ರೀ ಜನನೇಂದ್ರಿಯ.

ಕುಳ್ಳಿ ಬೆದರು (ಕ್ರಿ) = ಮೈನೆರೆ; ದೊಡ್ಡವಳಾಗು; ಪ್ರಥಮ ಸಲ ರಜಸ್ವಲೆಯಾಗು.

ಕುಳ್ಳು (ನಾ) = ದಪ್ಪ ರೊಟ್ಟಿಯಂತೆ ಬಡಿದು ಒಣಗಿಸಿದ ಸೆಗಣಿ.

ಕುಳ್ಳು ಕರ್ಕಾ (ನಾ) = ಕುಳ್ಳು ಬೆಂಕಿ ಆರಿಸಿ ತಯಾರಿಸಿದ ಹಲ್ಲುಜ್ಜುವ ಕರ್ಕಲು.

ಕುಳ್ಳುಥಾಳಿ (ನಾ) = ಕುಳ್ಳಿನ ಅಗ್ಗಿಷ್ಟಿಕೆ; ಕುಳ್ಳು ಉರಿಸಿ ಹಾಲು ಕಾಸುವ ಕುಳಿ.

ಕುಳ್ಳುಭಾನ ಒಟ್ಟು (ಕ್ರಿ) = ಒಣಗಿದ ಬೆರಣಿಗಳನ್ನು ವ್ಯವಸ್ಥಿತವಾಗಿ ಹೊಂದಿಸು.

ಕುಳ್ಳುಭಾನಾ ಒಟ್ಲಿ (ನು) = ಕುಳ್ಳಿನ ಭಾನದಲ್ಲಿ ಶವವಿಟ್ಟು ಸುಡುವಂತಾಗಲಿ. (ಬೈಗುಳ).

ಕೂsಕ್ (ನಾ) = ನಾಯಿಗೆ ಕರೆವ ಕೂಗು.

ಕೂಕಮ್ಡೆಬ್ಬಿ (ನಾ) = ಕುಂಕುಮದ ಕರಂಡಕ.

ಕೂಕಮ್ಮು (ನಾ) = ಕುಂಕುಮ.

ಕೂಕಮ್ಮುಕಿಡುಸ್ಕೊ (ಕ್ರಿ) = ವಿಧವೆಯಾಗು.

ಕೂಕಮ್ಹಚ್ಚು (ಕ್ರಿ) = ನಿಶ್ಚಿತಾರ್ಥ ಶಾಸ್ತ್ರ ಮಾಡು.

ಕೂಕಿ (ನಾ) = ನಾಯಿ (ಬಾಲಭಾಷೆ).

ಕೂಗಳತಿ (ನಾ) = ಕೂಗು ಹಾಕಿದರೆ ಕೇಳಿಸುವಷ್ಟು ದೂರ, ಅಂತರ.

ಕೂಗು (ನಾ) = ಹಕಾರಿ; ಜೋರಾಗಿ ಕರೆಯುವಿಕೆ. (ಕ್ರಿ) = ಜೋರಾಗಿ ಹಕಾರಿಹೊಡೆ; ಅರಚು.

ಕೂಗುಣ (ನಾ) = ಕಿವಿಯ ಮಲ; ಕೂಗುಣ್ಕಿ; ಗೂಬಿ.

ಕೂಗುಣತೆಗಿ (ಕ್ರಿ) = ಕಿವಿಯಲ್ಲಿಯ ಮೇಣದಂಥ ಹೊಲಸು ಹೊರಗೆ ಬರಿಸು; ಗೂಬಿ ತೆಗೆ.

ಕೂಗುಣ ತೆಗ್ಸು (ಕ್ರಿ) = ಕಿವಿಯ ಹೊಲಸು ಹೊರ ತೆಗೆಯಿಸು.

ಕೂಗುಣ್ಕಿ (ನಾ) = ಕಿವಿಯಲ್ಲಿಯ ಮೇಣದಂಥ ಹೊಲಸು.

ಕೂಗುಲು (ನಾ) = ಕೂದಲು; ಕೇಶ.

ಕೂಗುಲು ಹಿಕ್ಕೊ (ನಾ) = ಕೂದಲು ಬಾಚಿಕೊ.

ಕೂಚು (ಕ್ರಿ)ತೆ. = ಕುಳಿತುಕೊ (ಬಾಲ ಭಾಷೆ).

ಕೂಟ (ನಾ) = ಕೂಡುವಿಕೆ; ಸೇರಿಕೆ; ಸಂಯೋಗ; ಸಂಭೋಗ.

ಕೂಟರ್ (ನಾ) = ಸ್ಕೂಟರ್; ಇಗ್ಗಾಲಿ.

ಕೂಟಿ (ನಾ) = ಸಣ್ಣ ಸ್ಕೂಟರ್; ಸಣ್ಣ ಇಗ್ಗಾಲಿ.

ಕೂಡಲ (ನಾ) = ಕೂಡಿಕೊಳ್ಳುವಿಕೆ; ಕೂಡಲ ಸಂಗಮ, ಬಸವಣ್ಣನವರ ಐಕ್ಯ ಸ್ಥಳ; ಔರಾದ ತಾಲೂಕಿನ ಖೇಡ ಸಂಗಮ.

ಕೂಡಲ ಚೆನ್ನಸಂಗಮದೇವ (ನಾ) = ಚಿನ್ಮಯಜ್ಞಾನಿ ಚೆನ್ನಬಸವಣ್ಣನವರ ವಚನಾಂಕಿತ.

ಕೂಡಲ ಸಂಗಮ (ನಾ) = ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮ ಹಾಗೂ ಮಹಾತ್ಮಾ ಬಸವಣ್ಣನವರ ಐಕ್ಯ ಸ್ಥಳ.

ಕೂಡಲ ಸಂಗಮ ದೇವ (ನಾ) = ವಿಶ್ವಗುರು ಬಸವಣ್ಣನವರ ವಚನಾಂಕಿತ. ಮಾತೆ ಮಹಾದೇವಿಯವರು ಈ ವಚನಾಂಕಿತವನ್ನು ತಿರುಚಿ ಲಿಂಗದೇವ ಮಾಡಿದ್ದಾರೆ.

ಕೂಡಿಕಿ (ನಾ) = ಕೂಡಿಕೆ; ಉಡ್ಕಿ; ಸೇರುವೆ; ವಿಧವೆ ಮತ್ತು ವಿಧುರರ ಮರು ಮದುವೆ.

ಕೂಡು (ಕ್ರಿ) = ಸೇರು; ಜತೆಯಾಗು; ಜೋಡಿಯಾಗು; ಒಂದಾಗು; ಕುಳಿತುಕೊ.

ಕೂಡುತ್ಲೆ = ಕುಳಿತುಕೊಳ್ಳುತ್ತಲೆ.

ಕೂದ್ಲು (ನಾ) = ಕೂದಲು.

ಕೂದ್ಲೆಳಿ (ನಾ) = ಕೂದಲಿನ ತುಂಡು.

ಕೂದ್ಲೆಳಿಲಿಂದ ಕುತ್ಗಿ ಕೊಯ್ಯಿ (ನು) = ಗೊತ್ತಾಗದಂತೆ ಮೋಸ ಮಾಡು, ವಂಚಿಸು.

ಕೂದ್ಲೆಳಿಯೋಟುಫರಕ ಭೀಳು (ನು) = ಸ್ವಲ್ಪ ವ್ಯತ್ಯಾಸವುಂಟಾಗು.

ಕೂರ (ವಿ.) = ಖೂರು; ಚೂಪು; ಹರಿತವಾದ.

ಕೂರಿಗಿ (ನಾ) = ಕೂರಿಗೆ; ಹೊಲದಲ್ಲಿ ಬೀಜ ಬಿತ್ತಲು ಬಳಸುವ ಮೂರು ತಾಳಿನ ಉಪಕರಣ, ಸಾಧನ; ಮೂರು ಕೊಳವೆಯಬುಕ್ಕ; ಭೂಮಿಯ ಅಳತೆಮಾನ; ನಾಲ್ಕು ಎಕರೆಯ ಅಳತೆಮಾನ.

ಕೂರ್ಗಿ (ನಾ) = ಕೂರಿಗಿ (ನೋಡಿರಿ).

ಕೂರ್ಗಿತಾಳು (ನಾ) = ಕೂರಿಗೆಯ ಮೂರು ಹಲ್ಲಂತಿರುವ ನಕ್ಷತ್ರಗಳ ಸಾಲು.

ಕೂರ್ಗಿ ಹೊಡಿ (ಕ್ರಿ) = ಕೂರಿಗೆಯನ್ನು ನಡೆಸು; ಬಿತ್ತಣಿಕೆ ನಡೆಸು.

ಕೂಲಿ (ನಾ) = ದುಡಿಮೆಗಾಗಿ ಕೊಡುವ ಹಣ, ಕಾಳು ಮುಂತಾದವು; ಗಳಿಕೆ; ಸಂಪಾದನೆ; ಕೂಲಿಕಾರ; ಜೀತ.

ಕೂಲಿ ಕುಬ್ಬಿ (ನಾ) = ಕೂಲಿಕುಂಬಳಿ; ದಿನಗೂಲಿ.

ಕೂಲು (ನಾ) = ಬೆಣೆ; ತುದಿ; ಕೊನೆ; ಕೀಲು; ಕಟ್ಟಿಗೆ ಜೋಡಣೆಯ ಕೀಲು; ತಳ ಗೂಟ.

ಕೂಲ್ಕಾರ (ನಾ) = ಕೂಲಿಕಾರ; ಕೂಲಿಯಾಳು.

ಕೂಲ್ಕಾರ್ತಿ (ನಾ) = ಕೂಲಿಕಾರ್ತಿ; ಕೂಲಿ ಕಾಯಕದ ಮಹಿಳೆ.

ಕೂವತ್ತು (ನಾ) ಉ. = ತಾಕತ್ತು; ಶಕ್ತಿ; ಸಾಮರ್ಥ್ಯ.

ಕೂಸಾಡಿಸು (ಕ್ರಿ) = ಅಳುವ ಕೂಸನ್ನು ಆಟ ಆಡುವಂತೆ ಮಾಡು; ಮದುವೆಯಲ್ಲಿ ಕೂಸಾಡಿಸುವ ಶಾಸ್ತ್ರ ಮಾಡು; ಕೂಸುಕೊಡು; ಹೆಣ್ಣು ಒಪ್ಪಿಸು.

ಕೂಸು (ನಾ) = ಮೊಲೆಯುಣ್ಣುವ ಮಗು; ಹಸುಳೆ; ಮದುವೆಯಾಗದ ಹೆಣ್ಣು; ಕನ್ಯೆ.

ಕೂಸು ಕುಡು (ಕ್ರಿ) = ಕೂಸಾಡಿಸು; ಮದುವೆಯಲ್ಲಿ ಕೂಸಾಡಿಸುವ ಶಾಸ್ತ್ರ ಮಾಡು; ಹೆಣ್ಣು ಒಪ್ಪಿಸು.

ಕೂಸುಮರಿ (ನಾ) = ಎಳೆಯ ಮಗು; ಹೆಣ್ಣು ಗೂಸು; ಗಂಡುಗೂಸು.

ಕೂಳಾ (ನಾ) = ಕೂಳ (ನೋಡಿರಿ).

ಕೂಳಾ ತಿನು (ಕ್ರಿ) = ಅನ್ನ ನುಂಗು; ಬುಕ್ಕು; ತಿನ್ನು (ಹೀನೈಸುವ ನುಡಿ, ಬೈಗುಳ).

ಕೂಳಾ ಹೆಚ್ಚಾಗು (ಕ್ರಿ) = ಸೊಕ್ಕೇರು.

ಕೂಳು (ನಾ) = ಕೂಳ; ಅನ್ನ ಆಹಾರ.

ಕೂಳ್ದಂಡ (ನಾ) = ಉಂಡಾಡಿ; ಉಂಡು ದುಡಿಯಲಾರದವನು.

ಕೂಳ್ಪಾಂಡ್ಯಾ (ನಾ) = ಕೂಳುಬಾಕ; ಕೂಳಕ್ಕಾಗಿ ಚಡಪಡಿಸುವವ; ಉಂಡು ಕಾಲು ಕಿತ್ತುವವ.

ಕೃಷ್ಣ (ನಾ) = ವಸುದೇವ-ದೇವಕಿಯರ ಮಗ; ಮಹಾವಿಷ್ಣುವಿನ ಅವತಾರ.

ಕೆಂಗಣ್ಣು (ನಾ) = ಕೆಂಪಾದ ಕಣ್ಣು; ಕೋಪ ಕಾರುವ ಕಣ್ಣು.

ಕೆಂಚ (ನಾ) = ಕೆಂಪು ವರ್ಣದವನು; ಕೆಂಬಣ್ಣದವನು; ಚೆಲುವ; ಸುಂದರ; ಗೌರವರ್ಣದವನು (ಉದಾ:- ಕರಿಕ ಕೆಂಚನ ನೆನೆದೊಡೆ ಕೆಂಚನಾಗ ಬಲ್ಲನೆ ಬಸವಣ್ಣ).

ಕೆಂಚಿ (ನಾ) = ಕೆಂಚುಳ್ಳವಳು.

ಕೆಂಚು (ನಾ) = ಕೆಂಬಣ್ಣ.

ಕೆಂಚೆಣ್ಣಿ (ನಾ) = ಕೆಂಪು ವರ್ಣದ ಎಣ್ಣೆ; ಬಂಗಾರ ಬಣ್ಣದ ಎಣ್ಣೆ; ಮದುಮಕ್ಕಳಿಗೆ ಮೀಯಲು ಬಳಸುವ ಎಣ್ಣೆ; (ಹಾಡು:- ಕೆಂಚೆಣ್ಣೆ ಮಿಂಚೆಣ್ಣೆ। ಬಟಲಾಗ। ಬಳ್ಳೆಣ್ಣಿ। ಅಯ್ಯಪ್ಪ ಶೆಟ್ಟರ। ಮಗಳು ಗೌರಮ್ಮಾಗ। ಎಣ್ಣೆ ಹಚ್ಚಾ ಬನ್ನಿರೇ॥).

ಕೆಂಚ್ಯಾನಮೆಳಿ (ನಾ) = ಮೈಯಲ್ಲಿ ಮುಳ್ಳುಳ್ಳ ಒಂದು ಬಗೆಯ ಕಾಡು ಬಳ್ಳಿಯ ಮೆಳೆ; ಹರ್ಗ್ಯಾನ್ಮೆಳೆ.

ಕೆಂಜಡಿ (ನಾ) = ಕೆಂಜಡೆ; ಕೆಂಪು ಕೂದಲು.

ಕೆಂಜಾರೆ (ನಾ) = ಒಂದು ಜನಾಂಗ, ಜಾತಿ.

ಕೆಂಜ್ವಾಳಾ = ಕೆಂಪು ಜೋಳ.

ಕೆಂಡ (ನಾ) = ಉರಿಯುತ್ತಿರುವ ಇದ್ದಲಿ; ಇಂಗಳ; ಖೆಂಡ; ಬೆಂಕಿ.

ಕೆಂಡ ಕಾರು (ಕ್ರಿ) = ಸಿಟ್ಟು ಮಾಡು; ಕಿಡಿಕಿಡಿಯಾಗು.

ಕೆಂಪಾಡಿ (ನಾ) = ಕೆಮ್ಮಣ್ಣಿರುವ ಹೊಲ, ಭೂಭಾಗ; ಕೆಮ್ಮಣ್ಣಿನ ಹೊಲ.

ಕೆಂಪು (ನಾ) = ಕೆಂಬಣ್ಣ; ರಕ್ತದ ಬಣ್ಣ.

ಕೆಂಪುಗಜ್ಜರಿ (ನಾ) = ಗಜ್ಜರೆಯಂತೆ ಕೆಂಪಗಿರುವವನು(ಳು). ಕೆಂಬಣ್ಣದ ಗಜ್ಜರಿ.

ಕೆಂಪುಮೊಸಡಿ (ನಾ) = ಕೆಂಪು ಮೋರೆಯ ಆಂಗ್ಲ.

ಕೆಂಪೇರು (ಕ್ರಿ) = ಕೆಂಪುಬಣ್ಣಕ್ಕೆ ತಿರುಗು; ಕೆಂಪಗಾಗು; ಮೂಡಲ ದಿಕ್ಕಿನಲ್ಲಿ ಗಗನವು ಕೆಂಪಗಾಗು.

ಕೆಂಬಣ್ಣ (ನಾ) = ಕೆಂಪು; ರಕ್ತದ ಬಣ್ಣ.

ಕೆಂಮಣ್ಣು (ನಾ) = ಕೆಂಪು ಬಣ್ಣದ ಮಣ್ಣು; ಗೋಡೆಯ ಕೆಳ ಭಾಗದಲ್ಲಿ ಸಾರಣೆಗೆ ಬಳಸುವ ಮಣ್ಣು.

ಕೆಚ್ಚಲು (ನಾ) = ಹಸು, ಎಮ್ಮೆ, ಮೇಕೆ ಮೊದಲಾದ ಪ್ರಾಣಿಗಳ ಸ್ತನ, ಮೊಲೆ. ಹೆಣ್ಣು ದನಗಳ ಜನನೇಂದ್ರಿಯ.

ಕೆಚ್ಚಿ (ನಾ) = ಕೆಚ್ಚಲು; ಸ್ತನ; ಸ್ತ್ರೀ ಜನನೇಂದ್ರಿಯ.

ಕೆಟ್ಟ (ವಿ) = ಕೇಡು ಮಾಡುವ; ಒಳ್ಳೆಯದಲ್ಲದ; ಕೆಡುಕಿನ.

ಕೆಟ್ಟಾಣಿ (ನಾ) = ಕೆಟ್ಟ ಆಣೆ; ಕರಾರಿನ ಕೇಡಿನ ಅಪ್ಪಣೆ (ಪ್ರಾಸ:- ಕೆಟ್ಟಕೆಟ್ಟಾಣೆ। ಕ್ಯಾರಾಳಾಣೆ।).

ಕೆಡು (ಕ್ರಿ) = ಅಳಿ; ಹಳಸು; ಕೊಳೆ; ಇಲ್ಲವಾಗು; ಶೀಲವನ್ನು ಕಳೆದುಕೊಳ್ಳು; ನೀತಿಗೆಡು.

ಕೆಡುಗಾಲ (ನಾ) = ಕೇಡು ತರುವ ಕಾಲ.

ಕೆಡುಸಿ (ನಾ) = ಕೆಲಸ ಕೆಡಿಸುವವಳು.

ಕೆಡುಸು (ಕ್ರಿ) = ಕೆಡಿಸು; ಅಳಿಸು; ಶೀಲಗೆಡಿಸು; ಇಲ್ಲವಾಗಿಸು.

ಕೆಡ್ಸಿ (ನಾ) = ಕೆಡುಸಿ; ಕೆಲಸ ಕೆಡಿಸುವವಳು.

ಕೆಡ್ಸ್ಯಾ (ನಾ) = ಕೆಲಸ ಕೆಡಿಸುವವನು; ಬೊಗರೆ ಆಟದಲ್ಲಿ ಕೆಡಿಸುವ ಕೆಲಸದ ಗಡಿ, ಹುದ್ದರಿ.

ಕೆಣುಕಿ ಕ್ಯಾರಾಳ ಹಾಯ್ಕೊ = ಸುಮ್ಮನೆ ರೇಗಿಸಿ ಸಂಕಟ ಸುತ್ತಿಕೊ; ವಿನಾಕಾರಣ ಆಪತ್ತು ತಂದುಕೊ.

ಕೆಣುಕು (ಕ್ರಿ) = ಕೆಣಕು; ಛೇಡಿಸು; ರೇಗಿಸು; ಕೆರಳಿಸು; ಆಕ್ರಮಿಸು (ಗಾದೆ:- ಕೆಣಕಿ ಕ್ಯಾರಾಳ ಹಾಕುಸ್ಕೊಂಡ್ತಂತ).

ಕೆತ್ತು (ಕ್ರಿ) = ಮೇಲ್ಭಾಗವನ್ನು ಸುಲಿ; ತೆಳ್ಳಗೆ ಮಾಡು; ನುಣುಪುಗೊಳಿಸು; ಬಾಚಿಯಿಂದ ಕೆದರು.

ಕೆತ್ತೆಬಾಜಿ (ನಾ) = ಅಧಿಕ ಪ್ರಸಂಗತನ; ಅನಾವಶ್ಯಕ ಉಪದ್ವ್ಯಾಪ; ತರುವಿಕೆ, ಕಿತಾಪತಿ.

ಕೆದರಿಕ್ಯಾರಾಳಹಾಯ್ಕೊ (ನು) = ಕೆಣುಕಿ ಕ್ಯಾರಾಳ ಹಾಯ್ಕೊ (ನೋಡಿರಿ); ಅನಾವಶ್ಯಕ ಸಂಕಟ ತಂದುಕೊ.

ಕೆದರಿಸು (ಕ್ರಿ) = ತೋಡಿಸು; ಅಗೆಯಿಸು; ಚೆಲ್ಲಾಪಿಲ್ಲಿಗೊಳಿಸು; ಹರಡು.

ಕೆದರು (ಕ್ರಿ) = ಹರಡು; ಚದುರಿಸು; ಉಗುರು, ಖುರ್ಪಿ, ಗುದ್ದಲಿ ಇತ್ಯಾದಿಗಳಿಂದ ಬಗೆ, ಕೆರೆ, ಬೆದಕು.

ಕೆದುರು (ಕ್ರಿ) = ಕೆದರು (ನೋಡಿರಿ).

ಕೆನಿ (ನಾ) = ಕೆನೆ; ಹಾಲಿನ ಅಥವಾ ಮೊಸರಿನ ಸಾರ ವತ್ತಾದ ಭಾಗ; ಸಾರ; ತಿರುಳು; ಸೊಬಗು.

ಕೆನಿಕೆನಿ ಮೊಸರು (ನಾ) = ಕೆನೆ ಮಿಶ್ರಿತ ಸ್ವಾದಿಷ್ಟ ಮೊಸರು (ಆಣಿಪೀಣಿ ಹಾಡು:- ಮಾರ್ಮಾರು ಹುಲ್ಲು। ಸೇರ್ಸೇರು ಹಾಲು। ಕೆನಿಕೆನಿ ಮೊಸರು। ಕಣ್ಣಿ ಕಣ್ಣಿ ಬೆಣ್ಣಿ।).

ಕೆನಿಗಟ್ಟು (ಕ್ರಿ) = ಹಾಲು ಕಾಯ್ದು ಮೇಲೆ ಪದರುಂಟಾಗು.

ಕೆಬ್ಣ (ನಾ) = ಕಬ್ಬಿಣ

ಕೆರಿ (ನಾ) = ಏರಿಹಾಕಿ ನೀರು ನಿಲ್ಲಿಸಿದ ಸ್ಥಳ; ಜಲಾಶಯ; ಕೆರೆ.

ಕೆಲಸ (ನಾ) = ಕಾರ್ಯ; ಧಂದೆ; ಉದ್ಯೋಗ; ವೃತ್ತಿ; ಕಾಯಕ.

ಕೆಲಸಗೇಡಿ (ನಾ) = ಕೆಲಸಕ್ಕೆ ಬಾರದವನು; ಕೆಲಸ ಕೆಡಿಸುವವನು; ಮೈಗಳ್ಳ.

ಕೆಸುರು (ನಾ) = ಕೆಸರು; ನೀರು ಮಣ್ಣಿನ ಮಿಶ್ರಣ; ಪಂಕ; ರಾಡಿ.

ಕೆಳಗ = ಕೆಳಗೆ; ಕೆಳಭಾಗದಲ್ಲಿ; ತೆಳಗೆ; ಅಡಿಯಲ್ಲಿ; ತಳದಲ್ಲಿ.

ಕೇಂದ್ರ (ನಾ) = ಮಧ್ಯಬಿಂದು; ಮೂಲಸ್ಥಾನ.

ಕೇಂದ್ರ ಸರಕಾರ (ನಾ) = ಸಮಗ್ರ ರಾಷ್ಟ್ರದ ಆಡಳಿತ ನಡೆಸಲು ದೇಶದ ರಾಜಧಾನಿಯಲ್ಲಿರುವ ಪ್ರಧಾನ ಸರಕಾರ.

ಕೇಜಿ (ನಾ) = ಕಿಲೋಗ್ರಾಮ ತೂಕ ಮತ್ತು ತೂಕದ ಕಲ್ಲು.

ಕೇಡು (ನಾ) = ಕೆಡುಕು; ಅಪಾಯ; ಆಪತ್ತು.

ಕೇರಿ (ನಾ) = ಮನೆಸಾಲುಗಳ ನಡುವಿನ ಹಾದಿ; ಬೀದಿ; ಓಣಿ; ಊರು (ಉದಾ:- ಸಿಂಧನ ಕೇರಿ, ಮೋಳಕೇರಿ, ಸಿತಾಳಗೇರಿ, ಹಳ್ಳದಕೇರಿ, ಒಡ್ಡನ್ಕೇರಿ; ಹೂಗೇರಿ, ಹುಣುಸ್ಗೇರಿ, ತೆಳಕೇರಿ, ಮೇಲ್ಕೇರಿ ಇತ್ಯಾದಿ).

ಕೇರು (ಕ್ರಿ) = ಮೊರದಿಂದ ಕಾಳು ಮತ್ತು ಕಸಕಡ್ಡಿ ಬೇರೆ ಮಾಡು; ಹಸನು ಮಾಡು; ಬೀಸುದಾಣಿ ತಯಾರಿಸು.

ಕೇಲು (ನಾ) = ಮಣ್ಣಿನಿಂದ ಮಾಡಿದ ದೊಡ್ಡ ಹರವಿ; ರಂಜಣಿಗೆ.

ಕೇಸಕ್ಕಿ (ನಾ) = ಖೇಸಕ್ಕಿ; ಥಳಿಸಿ ಮೇಲ್ಪದರು ತೆಗೆಯಲಾರದ ಅಕ್ಕಿ; ಕೆಂಪಕ್ಕಿ.

ಕೇಸಿ = ಮುಗಿಸಿ; ಕೊನೆಗೊಳಿಸಿ; ಮಾಡಿಮುಗಿಸಿ (ಉದಾ:- ಮಾಡಿಕೇಸಿ, ಉಂಡುಕೇಸಿ, ಇತ್ಯಾದಿ).

ಕೇಸು (ನಾ) = ಖೇಸು; ತವುಡು; ಹೊಟ್ಟು; ಅಕ್ಕಿಯ ಮೇಲ್ಪದರಿನ ಕೆಂಬಣ್ಣ ಮತ್ತು ಅದರ ಹೊಟ್ಟು; ದಾವೆ; ಮೊಕದ್ದಮೆ; ಖಟ್ಲೆ.

ಕೇಸುಹಾಕು (ಕ್ರಿ) = ಖಟ್ಲೆ ಹೇರು; ದಾವೆ ಹೂಡು; ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗು.

ಕೇಳು (ಕ್ರಿ) = ಕಿವಿಗೊಡು; ಲಕ್ಷಕೊಡು; ಆಲಿಸು; ಅಪ್ಪಣೆಪಾಲಿಸು; ಪ್ರಶ್ನೆ ಮಾಡು; ಬೇಡು.

ಕೇಳ್ಸು (ಕ್ರಿ) = ಕೇಳಿಸು; ಕಿವಿಗೆ ಬೀಳುವಂತೆ ಮಾಡು; ಕಿವಿ ಕೊಡುವಂತೆ ಮಾಡು; ಆಲಿಸುವಂತೆ ಮಾಡು.

ಕೈ (ನಾ) = ಕರ; ಹಸ್ತ; ಸಿಗ್ನಲ್; ಸಂಕೇತ; ಹೆಸರಿನ ಪಾಟಿ.

ಕೈಂಚಿ (ನಾ) = ಕತ್ತರಿ.

ಕೈಕಾಡಿ (ನಾ) = ಒಂದು ಜನಾಂಗದ ಹೆಸರು.

ಕೈಕಾಲು ಮುರಿ (ಕ್ರಿ) = ಹೊಡೆದು ಬಡಿದು ಕೈಕಾಲು ನುಗ್ಗು ಮಾಡು; ಹೆಣದ ಕೈಕಾಲು ಮಡಿಚಿ ಹೊಂದಿಸು.

ಕೈಕಾಲ್ಸು (ಕ್ರಿ) = ಕೈಗೂಡ್ಸು; ಕುಣಿಯಲ್ಲಿ ಶವವಿರಿಸಿ ಮುಚ್ಚಿದ ಮಣ್ಣನ್ನು ಅನೇಕ ಜನರು ಕೈಗೂಡಿಸಿ ತಳದಿಂದ ತುದಿವರೆಗೆ ಶಂಕು ವಿನಾಕಾರ ಮಾಡು; ಮಣ್ಣೇರ್ಸು.

ಕೈಕುಡು (ಕ್ರಿ) = ಮೋಸಮಾಡು; ಠಕ್ಕಿಸು.

ಕೈಗಡ (ನಾ) = ಎರವಲು; ಬಡ್ಡಿಯಿಲ್ಲದ ಸಾಲ.

ಕೈಗುಂಡಿ (ನಾ) = ಅಂಗಿತೋಳಿನ ಗುಂಡಿ.

ಕೈಗೂಡ್ಸು (ಕ್ರಿ) = ಕೈಕಾಲ್ಸು (ನೋಡಿರಿ).

ಕೈಗುಣಾ (ನಾ) = ಕೈಗುಣ; ಕೈಯ ಸಾಮರ್ಥ್ಯ; ಹಸ್ತ ಕೌಶಲ್ಯ; ಹಸ್ತಗುಣ; ಮಹತ್ವ.

ಕೈಗೂಲಿ (ನಾ) = ದಿನಗೂಲಿ ದುಡಿಮೆ; ದಿನಗೂಲಿಯಿಂದ ಬರುವ ಆದಾಯ; ಕಟ್ಟೆ ಬಲದ ಸಂಪಾದನೆ.

ಕೈಗೂಸು (ನಾ) = ಕೈಯಲ್ಲಿ ಎತ್ತುಕೊಳ್ಳಬಹುದಾದ ಕೂಸು; ಚಿಕ್ಕಮಗು; ಆಡಿಸಿದಂತೆ ಆಡುವ ವ್ಯಕ್ತಿ; ಕೈಗೊಂಬೆ.

ಕೈಗಬಾ (ನು) = ವಯಸ್ಕನಾಗು; ದುಡಿಯಲು ಯೋಗ್ಯನಾಗು; ಕೌಮಾರ್ಯದಾಟು; ಪ್ರಾಯಕ್ಕೆ ಬರು.

ಕೈಗೆ ಹತ್ತು (ಕ್ರಿ) = ಸಿಗು; ದೊರಕು; ವಶವಾಗು; ದಕ್ಕು.

ಕೈಘಾಣ (ನಾ) = ಕೈಯಿಂದ ನಡೆಸುವ ಕಬ್ಬಿನ ಗಾಣ.

ಕೈ ಘೊಂಬಿ (ನಾ) = ಹೇಳಿದ್ದನ್ನು ಕೇಳಿ ಕೊಂಡು ಇರುವವನು(ಳು).

ಕೈಚಳಕ (ನಾ) = ಹಸ್ತ ಕೌಶಲ್ಯ; ನೈಪುಣ್ಯ; ಕೈಸಫಾವತಿ.

ಕೈಚಾಚು (ಕ್ರಿ) = ಬೇಡು; ಯಾಚಿಸು.

ಕೈಚೀಲ (ನಾ) = ಕೈಯಲ್ಲಿ ಹಿಡುಕೊಳ್ಳುವ ಚೀಲ.

ಕೈತಪ್ಪು (ಕ್ರಿ) = ಕೈಯಿಂದ ತಪ್ಪಿಹೋಗು; ಕೈಯಿಂದ ಜಾರಿ ಹೋಗು. **(ನಾ) =** ಕೈಯಿಂದ ಆದ ತಪ್ಪು, ಪ್ರಮಾದ.

ಕೈ ತುತ್ತು (ನಾ) = ಒಂದು ಸಲಕ್ಕೆ ಕೈಯಿಂದ ಬಾಯಿಗೆ ಸೇರಿಸುವಷ್ಟು ಆಹಾರ; ಕೂಸುಗಳಿಗೆ ಉಣಿಸುವ ತುಸು ತುಸು ಆಹಾರ; ಕೈಯಿಂದ ಮುಟ್ಟಿಗೆ ಮಾಡಿಕೊಡುವ ಆಹಾರ.

ಕೈ ತೆಳಗ = ಕೈಕೆಳಗೆ; ಅಧೀನದಲ್ಲಿ; ವಶದಲ್ಲಿ.

ಕೈಫಾತ (ನಾ) = ಕೈಫಿಯತ್; ಕೈಫೇತ್; ಸುದ್ದಿ, ಸಮಾಚಾರ.

ಕೈಬಿಚ್ಚಿ ಕುಡು (ಕ್ರಿ) = ಮನಸಾರೆ ದಾನಮಾಡು.

ಕೈಬಿಡಾದು (ನಾ) = ಪ್ರಥಮ ಪುಣ್ಯತಿಥಿ ಆಚರಣೆ.

ಕೈಬಿಡು (ಕ್ರಿ) = ಮಧ್ಯದಲ್ಲೇ ಬಿಟ್ಟು ಹೋಗು; ಮದುವೆ ಬಂಧನವನ್ನು ಮುರಿ; ಮೃತ ಆತ್ಮನ ಪ್ರಥಮ ಪುಣ್ಯ ತಿಥಿ ಮಾಡು.

ಕೈಬಿಸಿ ಮಾಡು (ಕ್ರಿ) = ಲಂಚಕೊಡು.

ಕೈಭೀಳು (ಕ್ರಿ) = ರೈಲಿನ ಸಿಗ್ನಲ್ ಬೀಳು; ಸಂಕೇತ ತೋರು.

ಕೈಭೆಚ್ಚುಗ ಮಾಡು = ಲಂಚಕೊಡು.

ಕೈಮಗ್ಗ (ನಾ) = ಕೈಯಿಂದ ನಡೆಸುವ ನೆಯ್ಗೆ ಸಾಧನ.

ಕೈಮಾಡು (ಕ್ರಿ) = ಹೊಡೆ; ಸನ್ನೆ ಮಾಡು.

ಕೈಮೀರಿ ಹೋಗು (ಕ್ರಿ) = ಸ್ವಾಧೀನ ತಪ್ಪು.

ಕೈಮೀರು (ಕ್ರಿ) = ಹಿಡಿತ ತಪ್ಪು; ಮಿತಿಮೀರು; ಅತಿಯಾಗು; ಸಾಮರ್ಥ್ಯಕ್ಕೆ ಮೀರು; ಅಧಿಕವಾಗು.

ಕೈಮುಗಿ (ಕ್ರಿ) = ನಮಿಸು.

ಕೈಮುರಿ (ಕ್ರಿ) = ಕೈ ತುಂಡಾಗು; ಕೈ ತುಂಡಾಗಿಸು; ಕೆಲಸ ಕೆಡು.

ಕೈಮ್ಯಾಲ ಬದುಕು (ಕ್ರಿ) = ರಟ್ಟೆ ಮುರಿದು ದುಡಿದು ಜೀವನ ನಿರ್ವಹಿಸು.

ಕೈಯಾಡ್ಸು (ಕ್ರಿ) = ಬೆನ್ನ ಮೇಲೆ ಕೈಸವರಿ ನೇವರಿಸು; ಹಂಚಿನ ಮೇಲಿನ ಕಾಳು, ರೊಟ್ಟಿ, ಆಹಾರ ಇತ್ಯಾದಿ ಹೊತ್ತಲಾರದಂತೆ ನೋಡಿಕೊ; ಕೈಯನ್ನು ಅಲ್ಲಾಡಿಸು; ಬೆಳೆಯಲ್ಲಿಯ ಕಳೆತೆಗೆ.

ಕೈರಾಟಿ (ನಾ) = ಕೂಸಿಗೆ ಕಂಕುಳಲ್ಲಿ ಎತ್ತಿಕೊಂಡು ಅಡ್ಡಾಡಿದ ಅಭ್ಯಾಸ.

ಕೈರಾಟಿ ಭೀಳು (ಕ್ರಿ) = ಕೂಸಿಗೆ ಕಂಕುಳಲ್ಲಿ ಎತ್ತಿಕೊಂಡು ಅಡ್ಡಾಡಿದ ಅಭ್ಯಾಸವುಂಟಾಗು.

ಕೈಲಾಗು (ಕ್ರಿ) = ದುಡಿಯುವಂತಾಗು (ಹಾಡು:- ಕೈಲಾಗಲಾರದೆತ್ತು। ಕಡಕೊಂಡು ಭೀಳತಾದ। ಹಿಡಕೊಂಡು ಮೆಲ್ಲಗ ನಡಿಯೀರೊ॥).

ಕೈಲಾಸ (ನಾ) = ಶಿವನ ವಾಸಸ್ಥಾನ; ಸ್ವರ್ಗ (ವಚನ:- ಕಾಯಕವೇ ಕೈಲಾಸ-ಆಯ್ದಕ್ಕಿ ಮಾರಯ್ಯ. ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ, ಕೈಲಾಸವ ಕಾಣಬಲ್ಲೆನು-ಬಸವಣ್ಣ.)

ಕೈಲಾಸವಾಸಿ (ನಾ) = ಶಿವ; ಸತ್ತವ; ತೀರಿಕೊಂಡವ; ಸ್ವರ್ಗವಾಸಿ; ಮುಕ್ತ; ಕೈವಲ್ಯ ಪದ ಹೊಂದಿದವ (ವಚನ:- ದೇವಾ ಭಕ್ತನೆಂದು ನಂಬಿದ ಕಾರಣ ನಮ್ಮ ಕೂಡಲ ಸಂಗನ ಶರಣರು ಕೈಲಾಸವಾಸಿಗಳಾದರು - ಬಸವಣ್ಣನವರು).

ಕೈವಾರ (ನಾ) = ವೃತ್ತ ರೇಖೆಯನ್ನು ಎಳೆಯುವ ಒಂದು ಸಲಕರಣೆ; ಕಂಪಾಸು.

ಕೈಸಘಾವತಿ (ನಾ) = ಕೈಚಳಕ; ಹಸ್ತಕೌಶಲ್ಯ

ಕೈಸಾಲ (ನಾ) = ಕೈಗಡ; ನಂಬಿಕೆ ಮೇಲೆ ಕೊಡುವ ಸಾಲ.

ಕೈ ಸುಟ್ಟುಕೊ (ಕ್ರಿ) = ಅನುಭವಿಸು; ಹಾನಿಹೊಂದು.

ಕೈಹಾಕು (ಕ್ರಿ) = ಕೆಲಸ ಹಿಡಿ; ಪ್ರಾರಂಭಿಸು.

ಕೈಹಿಡಿ (ಕ್ರಿ) = ಮದುವೆಯಾಗು; ಮಕ್ಕಳಿಗೆ ವೃದ್ಧರಿಗೆ ಮತ್ತು ರೋಗಿಗಳಿಗೆ ಕೈ ಹಿಡಿದು ನಡೆಸು; ಸಹಕರಿಸು.

ಕೊಂಕು (ನಾ) = ಡೊಂಕು; ವಕ್ರತೆ.

ಕೊಂಕು ಗುಣ (ನಾ) = ಡೊಂಕುತನ; ವಕ್ರಬುದ್ಧಿ.

ಕೊಂಕುಳು (ನಾ) = ಕೊಂಕುಳ; ಬಗಲು; ಬಗಲಿನ ಸಂದು; ಕಂಕುಳ (ಗಾದೆ:ಕೊಂಕುಳ್ದಾಗ್ಕೂಸಿಟ್ಗೊಂಡು ಕೇರಿಯೆಲ್ಲಾ ಹುಡ್ಕ್ಯಾಡ್ದಾರಂತ!).

ಕೊಂಕುಳ್ದಾಗ್ಕೈಯಾಡ್ಸು (ಕ್ರಿ) = ಕಚಗುಳಿ ಇಡು; ನಗಿಸು.

ಕೊಂಗ (ನಾ) = ಕೋತಿ; ಮಂಗ; ಕಿಡಿಗೇಡಿ; ಕೋತಿ ಗುಣದವನು(ಳು).

ಕೊಂಗಗುಣ (ನಾ) = ಕೋತಿಗುಣ; ಕುಚೇಷ್ಟೆ ಗುಣ.

ಕೊಂಗೈ (ನಾ) = ಬಾಚಣಿಕೆ; ಹಣಿಗೆ.

ಕೊಂಗೈಧಾರಾ (ನಾ) = ಗಾಳಿಪಟ (ಪತಂಗ) ಹಾರಿಸಲು ಬಳಸುವ ದಾರ.

ಕೊಂಚಿ (ನಾ) = ಕುಂಚಿ.

ಕೊಂಡ (ಕ್ರಿ) = ಕುಡಿದ (ನೀರು ಕೊಂಡ, ಸೆರೆ ಕೊಂಡ ಇತ್ಯಾದಿ).

ಕೊಂಡ (ನಾ) = ಕುಂಡ; ಗುಂಡ; ನಾಲ್ಕೂ ಕಡೆ ಮೆಟ್ಟಿಲುಳ್ಳ ಹೊಕ್ಕು ತುಂಬುವ ಬಾವಿ.

ಕೊಂಡ ಮನ್ಯಾ (ನಾ) = ಸೆರೆ ಕುಡಿದ ವ್ಯಕ್ತಿ.

ಕೊಂಡವಾಡಿ (ನಾ) = ಕೋಂಡವಾಡಿ; ಕಳ್ಳದನಗಳನ್ನು, ಕಳೆದು ಹೋದ ದನಗಳನ್ನು ಹಿಡಿದು ತಂದು ಕಟ್ಟಿ ಹಾಕುವ ಜಾಗ.

ಕೊಂಡಾಂವ (ನಾ) = ಸಾರಾಯಿ, ಸಿಂದಿ ಕುಡಿದ ಮನುಷ್ಯ.

ಕೊಂಡಿ (ನಾ) = ಕೊಕ್ಕೆ; ಚೇಳಿನ ಕುಟುಕುವ ಮುಳ್ಳು; ಚಿಲುಕ; ಚಾಡಿ; ನಿಂದೆ.

ಕೊಂಡಿ ಮಿಂಚಣ್ಣ (ನಾ) = ಕೊಂಡೆ ಮಂಚಣ್ಣ; ಚಾಡಿಕಾರ; ನಿಂದೆಕಾರ; ಹಚ್ಚಪ್ಪ ಚುಚ್ಚಪ್ಪ (ಹಾಡು:- ಕಲ್ಯಾಣ ಪುರದೋಳು ಬಸವ ರಾಜೇಂದ್ರನು। ನಿಲ್ಲದೆ ಪವಾಡ ಮೆರೆದಿಹನು। ಅಲ್ಲಿ ಕೊಂಡಿ ಮಿಂಚಣ್ಣರು ಇರುತಿಹರು। ಶಂಭುವೇ ಶಂಭು ಲಿಂಗವೇ।।).

ಕೊಂಡುಹಾಕು (ಕ್ರಿ) = ಕುಡಿದು ಬಿಡು.

ಕೊಂಡೆಪ್ಪ (ನಾ) = ಕೊಂಡೆ ಕೆಲಸದವನು; ಹಚ್ಚಪ್ಪ ಚುಚ್ಚಪ್ಪ.

ಕೊಂಪಿ (ನಾ) = ಕೊಂಪೆ; ಗುಂಪಾ; ಗುಡಿಸಲು (ಗಾದೆ: ಹಂಪಿಗೋಗಾದ್ಕಿಂತಾ, ಕೊಂಪ್ಯ ಗಿರಾದುಛಂದ।)

ಕೊಂಪಿ ಹೊಚ್ಚು (ಕ್ರಿ) = ಗುಡಿಸಲು ತಯಾರಿಸು.

ಕೊಚ್ಚು (ನಾ) = ಮಣ್ಣಿನಪುಡಿ, ಹುಡಿ, ಧೂಳು, ಇತ್ಯಾದಿ. (ಕ್ರಿ) = ಪ್ರಯತ್ನಿಸು; ಕೋಶೀಶಿ ಮಾಡು; ಸ್ವಸ್ತುತಿ ಮಾಡಿಕೊ; ಚಿಗುಳಿಸು; ಆಗಿಹೋದುದನ್ನು ನೆನಪಿಸು.

ಕೊಟಗ್ಯಾಳ (ನಾ) = ಬೀದರ ಜಿಲ್ಲೆಯ ಒಂದು ಹಳ್ಳಿಯ ಹೆಸರು.

ಕೊಟಮ್ಗಿ (ನಾ) = ಮೈಲಾರ ಮಲ್ಲಯ್ಯನ ವಾಗ್ಗೇಯಕಾರರು ಬಳಸುವ ಕಟ್ಟಿಗೆಯ ಪಾತ್ರೆ.

ಕೊಟ್ಗಿ (ನಾ) = ಕೊಟ್ಟಿಗೆ; ದನಕರುಗಳ ಹಟ್ಟಿ (ಗಾದೆ:- ಹೆಣ್ಣುಹುಟ್ಟುದ್ರ ಮನಿಖಾಲಿ; ಕ್ವಾಣಾ ಹುಟ್ಟುದ್ರ ಕೊಟ್ಗಿ ಖಾಲಿ).

ಕೊಠಡಿ = ಕೊಟಡಿ; ಕೋಣೆ; ಖೋಲಿ.

ಕೊಡ (ನಾ) = ಮಣ್ಣು ಅಥವಾ ಲೋಹದಿಂದ ಮಾಡಿದ ಪಾತ್ರೆ; ಗಡಿಗೆ; ನೀರಿನ ಪಾತ್ರೆ (ಐರಣಿ ಹಾಡು:- ಕುಂಬಾರ ಗುಂಡಯ್ಯ। ಖಡಗದ ಕೈಯಲಿ। ಕೊಡದಾ ಮ್ಯಾಲೇನು ಬಾರದಾನೇ ಸೋ।).

ಕೊಡತಿ (ನಾ) = ಮರದ ಸುತ್ತಿಗೆ; ಧಾನ್ಯ ಬಡಿವ ಸಾಧನ; ಮಣ್ಣು ನುರಿಗೊಳಿಸುವ ಕಟ್ಟಿಗೆಯ ಸಾಧನ.

ಕೊಡಪತ್ರಿ (ನಾ) = ಒಂದು ಪ್ರಕಾರದ ಔಷಧಿ ಬಳ್ಳಿ; ತಿಂದರೆ ನಾಲಗೆಯ ಸ್ವಾದ ತಪ್ಪಿಸುವ, ಸಕ್ಕರೆಯು ಮಳಲಂತೆ ಅನುಭವಕ್ಕೆ ಬರುವ ಎಲೆಯುಳ್ಳ ಬಳ್ಳಿ; ಕೊರಡು ಪತ್ರೆ.

ಕೊಡು (ಕ್ರಿ) = ಒಪ್ಪಿಸು; ಸಲ್ಲಿಸು; ಹೆಣ್ಣು ಕೊಡು; ಹೆಣ್ಣನ್ನು ಮದುವೆ ಮಾಡಿಕೊಡು; ನೀಡು; ದಾನಮಾಡು.

ಕೊಡ್ಡಿ (ನಾ) = ಕೊಡಲಿ; ಮರ ಮೊದಲಾದುವುಗಳನ್ನು ಕಡಿಯುವ ಸಾಧನ.

ಕೊಡ್ಡು (ನಾ) = ಕೊರಡು; ಒಣಗಿದ ಮರ.

ಕೊಡ್ಲಿ (ನಾ) = ಕೊಡಲಿ (ಗಾದೆ : ಕೊಡ್ಲಿಯ ಕಾವು ಕುಲಕ್ಕ ಕೇಡು).

ಕೊಣಮ್ಗಿ (ನಾ) = ಹಿಟ್ಟನ್ನು ನಾದಲು ಬಳಸುವ ಅಗಲವಾದ ಮರದ ಹರಿವಾಣ; ಕೊಟಮ್ಗಿ; ತಗಾರಿ.

ಕೊತ್ಮಿರಿ (ನಾ) = ಕೊತಂಬ್ರಿ; ಧನಿಯಾ.

ಕೊದಲಿ(ಳಿ) (ನಾ) = ಎಳ್ಳಿನ ಕೊದ್ಲಿ (ಎಳ್ಳು ಕೊದ್ಲಿ ಎಮ್ಮೆ ದಾಂವಾ-ತಿಲಕಾಷ್ಟ ಮಹಿಷ ಬಂಧನಂ-ಎಂಬ ತೆನ್ನಾಲಿ ರಾಮನ ಕತೆ.)

ಕೊನಿ (ನಾ) = ಕೊನೆ; ಅಂತ್ಯ; ಸಾವು.

ಕೊನಿಗಾಲ (ನಾ) = ಕೊನೆಯ ಕಾಲ; ಅಂತಿಮ ಕಾಲ; ಸಾವು ಸಮೀಪಿಸಿದ ಕಾಲ.

ಕೊನಿಗಿಹಚ್ಚು (ಕ್ರಿ) = ಕೊನೆಗಾಣಿಸು; ಕೊನೆ ಮುಟ್ಟಿಸು; ಗುರಿಗೆ ತಲುಪಿಸು; ತಲುಪು.

ಕೊಮಾರ (ನಾ) = ಕುಮಾರ; ಮಗ.

ಕೊಮುಟ್ಗಿತ್ತಿ (ನಾ) = ಕೋಮಟಿಗರ ಮನೆಯ ಮಹಿಳೆ.

ಕೊಮುಟ್ಯಾ (ನಾ) = ಕೋಮಟಿ; ಕೋಮಟಿಗ; ಉಪ್ಪು (ಬೀದರ ಜಿಲ್ಲೆಯ ಕೆಲವುಹಳ್ಳಿಗಳಲ್ಲಿ ರಾತ್ರಿ ಹೊತ್ತು ಉಪ್ಪಿಗೆ ಕೊಮುಟ್ಯಾ ಎನ್ನುವ ರೂಢಿ ಇದೆ).

ಕೊಮ್ರಾಯ (ನಾ) = ಅರಸುಗುವರ; ಜೊಕುಮಾರ (ಹಾಡು:- ಅಷ್ಟಮಿ ದಿನ। ಹುಟಿದಾನೆ ಕೋಮ್ರಾಯಾ ಶಟೇರ್ಕರ್ದು ಬೆಸಗೊಳ್ರಿ ಜೊಕುಮಾರಾ॥).

ಕೊಯ್ (ಕ್ರಿ) = ಕೊಯ್ಯಿ; ಕತ್ತರಿಸು; ಸೀಳು.

ಕೊಯ್ತಿ (ನಾ) = ಕತ್ತರಿಸುವ ಸಾಧನ; ಉದ್ದ ಕೋಲುಳ್ಳ ಅರ್ಧಚಂದ್ರಾಕಾರದ ಕತ್ತಿ; ಕುಡುಗೋಲು.

ಕೊಯ್ಯಿ (ಕ್ರಿ) = ಕೊಯ್; ಕತ್ತರಿಸು; ಸೀಳು.

ಕೊಯ್ಲ್ನು (ನಾ) = ತೊಗರೆ, ಜೋಳ, ಎಳ್ಳು ಮೊದಲಾದವುಗಳ ಕೊಯ್ದ ದಂಟಿನ ಬುಡ.

ಕೊಯ್ಲ್ನುಮಾಸು (ನಾ) = ಎಮ್ಮೆ, ಆಕಳುಗಳ ಜನನೇಂದ್ರಿಯದಿಂದ ಒಸರುವ ಜಿಗುಟು ದ್ರವ.

ಕೊರಕೊಂಚಾ (ನಾ) = ಕ್ರೌಂಚ; ಕೊಕ್ಕರೆ; ಖೌಂಜು.

ಕೊರಾಸು (ಕ್ರಿ) = ಮಿಂಚು; ಕಣ್ಣು ಕುಕ್ಕು; ಕೋರೈಸು.

ಕೊರಿ (ಕ್ರಿ) = ಕೆರೆ; ಬೆಂಕಿ ಕಡ್ಡಿ ಗೀಚು; ಕಡ್ಡಿ ಕೆರೆ.

ಕೊರಿ (ನಾ) = ಕೊರವಿ ಎಂಬ ಸೇಡಮ್ ತಾಲೂಕಿನ ಒಂದು ಹಳ್ಳಿಯ ಹೆಸರು.

ಕೊರ್‍ಯಾ (ನಾ) = ಕೊರವ; ಗೊರವ.

ಕೊಲಾಟೆ (ನಾ) = ಲಾಗ; ಲೊಟಂಗಿ; ಲಟಂಗಿ; ಕುಲಾಟಿ.

ಕೊಲ್ಯಾಕು (ಕ್ರಿ) = ಕೊಲ್ಲಿಬಿಡು; ಕೊಂದು ಬಿಡು.

ಕೊಲ್ಲಿ ಪಾಕ (ನಾ) = ಕೋಲನಪಾಕ ಎಂಬ ಆಂಧ್ರ ರಾಜ್ಯದ ಒಂದು ಊರು, ಜಗದ್ಗುರು ರೇಣುಕಾಚಾರ್ಯರು ಉದಿಸಿದ ಊರು, ವೀರಶೈವರ ತೀರ್ಥಕ್ಷೇತ್ರ.

ಕೊಲ್ಲು (ಕ್ರಿ) = ಸಾಯಿಸು; ಪ್ರಾಣ ತೆಗೆ.

ಕೊಸುರು (ಕ್ರಿ) = ಹೆಚ್ಚು ಮಾತು ಹೇಳು; ಕೊಸರು.

ಕೊಸುರ್ಮಾತು = ಹೆಚ್ಚಿನ ಮಾತು; ಅತಿ ಮಾತು; ಕೆದಕುವ ಮಾತು.

ಕೊಳ (ನಾ) = ಕೊಳ್ಳ; ತಗ್ಗು ಪ್ರದೇಶ; ಹಳ್ಳ.

ಕೊಳಕು = ಕೊಳೆತದ್ದು; ಕೆಟ್ಟಿದ್ದು .

ಕೊಳಾಳಿ (ನಾ) = ಕೊಳವೆ.

ಕೊಳಿ (ಕ್ರಿ) = ಕೆಟ್ಟುನಾರು; ಕೊಳೆತು. ದುರ್ನಾತವಾಗು.

ಕೊಳ್ಕ (ನಾ) = ಕೊಳಕು ಗುಣದವನು; ಕೊಳೆತ ವಸ್ತು; ಕೆಟ್ಟದ್ದು (ಬೈಗುಳ).

ಕೊಳ್ಕ್ಯಾ (ನಾ) = ಕೊಳ್ಕ (ನೋಡಿರಿ).

ಕೊಳ್ಚಿ (ನಾ) = ಕೊಳ್ಳಿ; ಉರಿಯುವ ಕಟ್ಟಿಗೆ; ಉರಿಬೆಂಕಿ.

ಕೊಳ್ಸಿ (ನಾ) = ಇದ್ದಲಿ; ಇದ್ಲಿ.

ಕೊಳ್ಳ (ನಾ) = ಕೊಳ; ತಗ್ಗು ಪ್ರದೇಶ; ಹಳ್ಳ.

ಕೊಳ್ಳಾಣಿ (ನಾ) = ಕೊರಳಾಣೆ; ಕೊರಳ ಸಾಕ್ಷಿ.

ಕೊಳ್ಳಿ (ನಾ) = ಕೊಳ್ಚಿ; ಉರಿಯುವ ಕಟ್ಟಿಗೆ; ಉರಿಬೆಂಕಿ.

ಕೊಳ್ಳಿ ಇಡು (ಕ್ರಿ) = ಬೆಂಕಿ ಹಚ್ಚು; ಉರಿಯುವಂತೆ ಮಾಡು; ಜಗಳ ಹೊತ್ತಿಸು.

ಕೊಳ್ಳು (ನಾ) = ಕೊರಳು; ಕುತ್ತಿಗೆ.

ಕೊಳ್ಳು ಕೊಯ್ಯಿ (ಕ್ರಿ) = ಕುತ್ತಿಗೆ ಕತ್ತರಿಸು; ಮೋಸ ಮಾಡು.

ಕೊಳ್ಳು ಸಾಗ್ಸಿ (ನಾ) = ಕೊರಳು ಸಾಕ್ಷಿ; ಕೊರಳಾಣೆ.

ಕೊಳ್ಳೂರು (ನಾ) = ಬಸವಕಲ್ಯಾಣ ತಾಲೂಕಿನ ಹಾರಕೂಡ ಸಮೀಪದ ಒಂದು ಊರು; ಕೊಳ್ಳೂರು ಹುಸ್ನಾ ಕವಿಯ ಊರು; ಪ್ರಸಿದ್ಧ ಸಾಹಿತಿ ಡಾ॥ ಜಿ.ಬಿ. ವಿಸಾಜಿ ಹಾಗೂ ಅವರ ಮಗ ಡಾ॥ ವಿಕ್ರಮ ವಿಸಾಜಿಯ ಊರು. ಇತ್ತೀಚೆಗೆ ಅಂದರೆ ನಿಜಾಮ ಕಾಲದಲ್ಲಿ ಅದರ ಹೆಸರು ಕೊಹಿನೂರು ಎಂದು ಬದಲಾಯಿಸಲಾಗಿದೆ. ಅದು ಈಗ ಕೊಹಿನೂರು ಪಹಾಡ ಎಂತಲೂ ಗುರುತಿಸಲಾಗುತ್ತದೆ. ಆದರೆ ಗ್ರಾಮೀಣ ಜನರ ಬಾಯಲ್ಲಿ ಅದು ಕೊಳ್ಳೂರೇ ಇದೆ.

ಕೊಳ್ಳೂರು ಹುಸ್ನಾ (ನಾ) = ಕೊಳ್ಳೂರಿನ ಹುಸೇನಸಾಬ ಕವಿಯ ಮುದ್ರಾಂಕಿತ, ಕಾವ್ಯ ನಾಮ.

ಕೋಂಗಳಿ (ನಾ) = ಬಸವ ಕಲ್ಯಾಣ ತಾಲುಕಿನ ಒಂದು ಹಳ್ಳಿ.

ಕೋಂಡವಾಡಿ (ನಾ) = ತುಡುಗು ದನಗಳನ್ನು ಕೂಡು ಹಾಕುವ ಸರಕಾರಿ ಮನೆ, ದೊಡ್ಡಿ.

ಕೋಂಡಾಬಾಯಿ (ನಾ) = ಬಸವ ಕಲ್ಯಾಣ ತಾಲುಕಿನ ಮುಡಬಿ ಊರಿನ ಒಬ್ಬ ಪ್ರಸಿದ್ಧ ಗ್ರಾಮೀಣ ಶೂಲಗಿತ್ತಿಯ ಹೆಸರು.

ಕೋಗಿರು (ನಾ) = ಕುದುರೆಯ ಬೆನ್ನಿಗೆ ಹಚ್ಚುವ ಜೀನು; ಥಡಿ; ಮುಟ್ಟು.

ಕೋಟಾ (ನಾ) = ಕೋಠಾ; ಹೊಟ್ಟೆ; ಉಗ್ರಾಣ; ಗೋದಾಮು.

ಕೋಟಾಖಾನಿ (ನಾ) = ಉಗ್ರಾಣ; ಕೋಠಾಖಾನೆ; ಹೊಟ್ಟೆ.

ಕೋಟು (ನಾ) ಇಂ. = ಅಂಗಿಯಂತಿರುವ ಸಾಲು ಗುಂಡಿಯ ದಪ್ಪವಾದ ಮೇಲುಡುಪು.

ಕೋಟು (ವಿ.) = ಅಕೋ ಅಷ್ಟು.

ಕೋಟು ಕೀಟು (ವಿ) = ಅಕೋ ಅಷ್ಟು ಇಷ್ಟು; ತುಸು; ಚಿಲ್ಲರೆ; ಹೀನ; ಸಣ್ಣ ಸಣ್ಣ.

ಕೋಟೆ (ವಿ.) = ಅಕೋ ಅಷ್ಟೆ.

ಕೋಠಾ (ನಾ) = ಕೋಟಾ (ನೋಡಿರಿ).

ಕೋಠಾಖಾನಿ (ನಾ) = ಕೋಟಾಖಾನಿ (ನೋಡಿರಿ).

ಕೋಠಾ ಘುಂಬು (ಕ್ರಿ) = ಹೊಟ್ಟೆ ಭರ್ತಿಯಾಗು ಉಗ್ರಾಣ ತುಂಬು; ಕೋಠಾ ತುಂಬು.

ಕೋಡಂಗಿ (ನಾ) = ಕಪ್ಪುಮುಖದ ವಾನರ; ಮೂರ್ಖ.

ಕೋತವಾಲ (ನಾ) = ಪೋಲೀಸು.

ಕೋತವಾಲಿ ಪಟೇಲ (ನಾ) = ಪೋಲೀಸ ಗೌಡ.

ಕೋತಿ (ನಾ) = ಮಂಗ; ಕಪಿ; ಕೆಂಪು ಬಣ್ಣದ ಕಪಿ.

ಕೋತಿಗುಣ (ನಾ) = ಮಂಗನ ಸ್ವಭಾವ ಮತ್ತು ನಡತೆ.

ಕೋನ್‌ಹೈ ಅನು (ಕ್ರಿ) = ಮಾತಾಡಿಸು; ವಿಚಾರಿಸು; ಪ್ರತಿಭಟಿಸು.

ಕೋಮಟಿ (ನಾ) = ಕೋಮ್ಟಿ; ಕೋಮಟಿಗ; ಕೊಮುಟ್ಯಾ (ನೋಡಿರಿ).

ಕೋಮ್ಟಿ (ನಾ) = ಕೋಮಟಿಗ (ಕೊಮುಟ್ಯಾ-ನೋಡಿರಿ).

ಕೋರಟು (ನಾ) ಇಂ. = ಕೋರ್ಟು; ನ್ಯಾಯಾಲಯ; ನ್ಯಾಯಾಸ್ಥಾನ; ಅದಾಲತ್ತು.

ಕೋರಾ (ವಿ) = ಹೊಚ್ಚ ಹೊಸ (ಕಾಗದ, ಬಟ್ಟೆ, ಇತ್ಯಾದಿ); ಖಾಲಿಯಾದ; ಬರಿದಾದ; ಸ್ವಚ್ಛವಾದ; ಬಿಳಿದಾದ.

ಕೋರಾ ಇರು (ಕ್ರಿ) = ಬುದ್ಧಿಹೀನನಾಗಿರು; ಪ್ರಾಮಾಣಿಕನಾಗಿರು; ಸ್ವಚ್ಛ ಮನ ಹಾಗೂ ಕೈಯುಳ್ಳವನಾಗು.

ಕೋರಿ (ನಾ) = ಹಳೆಯ ಕಂಬಳಿಯ ಚಿಂದಿ; ಹರ್ಕು ಕಂಬಳಿ; ಹಳೆಯ ಬಟ್ಟೆಯ ತುಂಡು (ಗಾದೆ:- ನಿನ್ಗಂಡ ಎಲ್ಲನಾ ಅಂದ್ರ ಕಾರಿ ಗಿಡ್ದಾಗ ಕೋರಿ ಹಚ್ಕೊಂಡ್ಕುಂತಾ-ನಂತಂತ!).

ಕೋರ್ಟು (ನಾ) = ಅದಾಲತ್ತು; ನ್ಯಾಯಾಲಯ.

ಕೋರ್ಡಾ (ನಾ) = ಬಾರ್ಕೋಲು; ಚಬಕಾ

ಕೋರ್ಡಾಭಾರ್ಸು (ಕ್ರಿ) = ಬಾರ್ಕೋಲೇಟಾ ಹಾಕು; ಚಾಬೂಕಿನಿಂದ ಹೊಡೆ.

ಕೋಲಾಟ (ನಾ) = ಕೋಲಿಗೆ ಕೋಲು ತಟಿತ್ತ ಆಡುವ ಆಟ.

ಕೋಲಾಡು (ಕ್ರಿ) = ಕೋಲಿನ ತಾಳದೊಂದಿಗೆ ಗುಂಪಾಗಿ ಹಾಡುತ್ತ ಕುಣಿ.

ಕೋಲಿ (ನಾ) = ಕಬ್ಬಲಿಗ; ಕೋಳಿ.

ಕೋಲಿನ ಪದ (ನಾ) = ಕೋಲಾಟದ ಹಾಡು (ಉದಾ:- ಗೋಪಮ್ಮಾನಿನ ಮಗನಾ ಗುಣಗಳು ನ್ಯಾಯ ಹೇಳಮ್ಮಾ ಸಖಿಯೆ। ಚದುರಾ ಬಾಲೇರೆದುರಾ ಬರುವಗ। ನಗುತಾ ನಿಂತಿದನೇ ಸಖಿಯೆ).

ಕೋಲು (ನಾ) = ಕೆತ್ತಿ ನುಣ್ಣಗೆ ಮಾಡಿದ ಕೋಲಾಟದ ಸುಂದರ ಕಟ್ಟಿಗೆ; ಹಿರಿಯರು, ಕುಂಟರು ಬಳಸುವ ಊರುಗೋಲು.

ಕೋಲು ಹಾಕು (ಕ್ರಿ) = ಕೋಲುಬಾರಿಸುತ್ತ; ವೃತ್ತಾ ಕಾರದಲ್ಲಿ ಕುಣಿಯುತ್ತ ಹಾಡುತ್ತ ಆಟವಾಡು.

ಕೋಲೆಣ್ಣ ಕೋಲೆ (ನಾ) = ಭುಲಾಯಿ ಹಾಡಿನಪಲ್ಲವಿ (ಉದಾ:- ಕಲ್ಯಾಣಂಬಾದು ಪ್ಯಾಟಿ। ಕಲಿಯುವರಲ್ಲಿ ಲಾಠಿ। ಹುಡುಗರಿರುವರು ಜತಿ। ಕೋಲೆಣ್ಣಕೋಲೆ).

ಕೋಲೆಮುತ್ತಿನ ಕೋಲೆ (ನಾ) = ಮಹಿಳೆಯರ ಸಾಂಪ್ರದಾಯಿಕ ಹಾಡುಗಳ ಪಲ್ಲವಿ.

ಕೋಲ್ದಂಡ್ಗಿ (ನಾ) = ಮಾಳಿಗೆಯ ಸರಕ್ಕೆ ಮನುಷ್ಯನನ್ನು ಏರ್ಗಟ್ಟುವ ಸಾಧನ.

ಕೋಲ್ಲಿ (ಅ) = ಅಕೋ ಅಲ್ಲಿ.

ಕೋಶೀಸು (ನಾ) ಉ. = ಪ್ರಯತ್ನ.

ಕೋಶೀಸು ಮಾಡು (ಕ್ರಿ) = ಪ್ರಯತ್ನ ಮಾಡು; ಪ್ರಯತ್ನಿಸು.

ಕೋಸಂಬ್ರಿ (ನಾ) = ಹಸಿ ತರಕಾರಿಗಳನ್ನು ಹೆಚ್ಚಿ; ಮೊಸರು; ಉಪ್ಪಿನೊಂದಿಗೆ ಬೆರೆಸಿ ತಯಾರಿಸುವ ನಂಜಿಕೊಳ್ಳುವ ಪದಾರ್ಥ.

ಕೋಸು (ನಾ) (ಉ) = ಮೂರು ಮೈಲು ಉದ್ದದ ಅಳತೆಮಾನ; ಹರದಾರಿ; ೩ ೩/೪ ಕಿ.ಮಿ. ಅಳತೆಮಾನದ ದೂರ; ತರಕಾರಿಯ ಒಂದು ಪ್ರಕಾರ.

ಕೋಸು (ನಾ) = ಅಕೋ ಅಷ್ಟು; ಅವಷ್ಟು; (ಸಮೂಹವಾಚಕ).

ಕೋಸು ಕೀಸು = ಅಕೋ ಅಷ್ಟೂ ಇಷ್ಟೂ.

ಕೋಸೆ (ಆ) = ಅಕೋ ಅವಷ್ಟೇ.

ಕೋಳಿ (ನಾ) = ಒಂದು ಬಗೆಯ ಪಕ್ಷಿ; ಹೆಣ್ಣು ಕೋಳಿ; ಹೇಂಟೆ (ಗಾದೆ:- ನನ್ನ ಕೋಳಿ ಕೂಗಲ್ದೆ ಬೆಳಗಾಗಾಲ ಅಂತಂತಾ)

ಕೋಳಿ ಕುಸ್ತಿ (ನಾ) = ಕೋಳಿಯ ಕಾಲಿಗೆ ಕತ್ತಿ ಕಟ್ಟಿ ಕಾಳಗಕ್ಕೆ ತೊಡಗಿಸು.

ಕೋಳಿಕೂಡ್ಸು (ಕ್ರಿ) = ಕೋಳಿಯಂತೆ ಬಾಗಿಸಿ ನಿಲ್ಲಿಸಿ (ಶಿಕ್ಷಕರು) ಮಕ್ಕಳಿಗೆ ಶಿಕ್ಷೆ ಕೊಡು.

ಕೋಳೂರು ಕಡಗೂಸು (ನಾ) = ಒಬ್ಬ ಬಾಲ ಶರಣೆಯ ಹೆಸರು.

ಕೋಳ್ಸಾ (ನಾ) = ಕೋಳ್ಸಿ; ಇದ್ದಿ.

ಕೋಳ್ಸಿ (ನಾ) = ಕೋಳ್ಸಾ; ಕಟ್ಟಿಗೆ ಸುಟ್ಟು ಆರಿಸಿಟ್ಟ ಉರುವಲು; ಇದ್ದಲಿ.

ಕೋಳ್ಸಿ ಒಲಿ (ನಾ) = ಇದ್ದಲಿಯಿಂದ ಉರಿಸುವ ಒಲೆ; ಸೇಗ್ಡಿ.

ಕೋಳ್ಸಿಗಾಡಿ (ನಾ) = ರಜಾಕಾರರ ಉಪಟಳದ ಕಾಲದಲ್ಲಿ ಭಾರತ ಸರಕಾರದಿಂದ ಡೀಜಲ್ಲು ಮತ್ತು ಪೆಟ್ರೋಲು ಪೂರೈಕೆ ನಿಲ್ಲಿಸಿದಾಗ, ರೈಲಿನಂತೆ ಇದ್ದಲಿಯಿಂದ ನಡೆಸಲಾದ ವಾಹನ; ಕುದ್ರಿ ಮೋಕು ಏರುವಾಗ ಆ ವಾಹನ ಒಲ್ಲೆ ಎಂದಾಗ ಮೇಲೆ ಕುಳಿತವರೆಲ್ಲ ಇಳಿದು ತಳ್ಳಿ ಮೇಲೆ ತರುತಿದ್ದರು.

ಕೋಳ್ಸಿ ತಯಾರಿಸು (ಕ್ರಿ) = ಕಟ್ಟಿಗೆಯನ್ನು ಭಟ್ಟಿಯಲ್ಲಿ ಸುಟ್ಟು ಆರಿಸಿ ಇದ್ದಲಿಯನ್ನು ಸಿದ್ಧಗೊಳಿಸು.

ಕೊಳ್ಸಿ ಭಟ್ಟಿ (ನಾ) = ಇದ್ದಲಿ ತಯಾರಿಸುವ ಕಾರ್ಖಾನೆ.

ಕೌಕೌ ಅನು (ಕ್ರಿ) = ಕಿರಿಕಿರಿಮಾಡು; ತೊಂದರೆ ಕೊಡು; ಬಲ್ಲಂತೆ ಬಾಯಿ ಬಡಿ.

ಕೌಟಗಿ (ನಾ) = ಬೀದರ ಜಿಲ್ಲೆಯಲ್ಲಿ ಕೌಟ್ಗಿಯೆಂಬ ಎರಡು ಊರುಗಳಿದೆ; ಒಂದು ಸಣ್ಣ ಕೌಟ್ಗಿ; ಇನ್ನೊಂದು ದೊಡ್ಡ ಕೌಟ್ಗಿ. ಅವು ಈಗ ಕೌಟಾ (ಕೆ) ಹಾಗೂ ಕೌಟಾ (ಬಿ) ಎಂದಾಗಿವೆ. ಕೌಟಾ (ಬಿ) ಗ್ರಾಮದಲ್ಲಿ ಬಸವಶ್ರೀ ಸಿದ್ರಾಮ ಶರಣರು ಬೆಲ್ದಾಳ ಅವರ ಶಿವಯೋಗಾಶ್ರಮವಿದೆ.

ಕೌಟಾ (ನಾ) = ಕೌಟಗಿ (ನೋಡಿ).

ಕೌರವ (ನಾ) = ಪಾಂಡವರ ದಾಯಾದಿ; ಧೃತರಾಷ್ಟ್ರ; ಕೌರವರ ತಂದೆ.

ಕೌಲು (ನಾ) = ಹೊಲ ಸಾಗುವಳಿಯ ಒಪ್ಪಂದ ಕರಾರು.

ಕೌಲೊಡಿ (ಕ್ರಿ) = ಟಿಸಿಳಾಗು; ಎರಡಾಗು.

ಕೌಳಾ (ನಾ) = ಕವಳ; ಗಾಣದಬಾಯಿಯ ಕಬ್ಬು; ತುತ್ತು.

ಕೌಳಿ (ನಾ) = ಕವಳಿ; ಕಳವೆ; ಭತ್ತ; ನೆಲ್ಲು.

ಕ್ಯಾಂಬ್ರಾ (ನಾ) ಇಂ. = ಕ್ಯಾಮ್ರಾ; ಛಾಯಾಗ್ರಾಹಕ.

ಕ್ಯಾದ್ಗಿ (ನಾ) (ಇಂ) = ಕೇದಗೆ; ಖ್ಯಾದಿಗೆ.

ಕ್ಯಾರ ಬೀಜ (ನಾ) = ಗೇರುಬೀಜ.

ಕ್ಯಾರಾಳ (ನಾ) = ಗೇರು ಕಾಯಿ ಮತ್ತು ಅದರ ಮರ (ಗಾದೆ:- ಕೆಣುಕಿ ಕ್ಯಾರಾಳ ಹಾಯ್ಕೊಂಡತಂತ!).

ಕ್ಯಾರಾಳಹಾಕು (ಕ್ರಿ) = (ಮಕ್ಕಳಾಗದವರು) ಅನ್ಯರ ಕೂಸಿಗೆ ಮರ್ಮಾಂಗದಲ್ಲಿ ಕ್ಯಾರಾಳೆಣ್ಣೆಯ ಚುಕ್ಕೆ ಇಡು.

ಕ್ಯಾರಾಳಪಲ್ಕಾ (ನಾ) = ಗೇರುಕಾಯಿ ಒಡೆದ ಮೇಲೆ ಸಿಗುವ ಕಾಜೂ ಅಂತಹ ತಿರುಳು.

ಕ್ಯಾರಾಳಾಣಿ (ನಾ) = ಕೆಟ್ಟ ಆಣೆ; ಕಟು ಆಜ್ಞೆ(ಜಾನಪದ ಪ್ರಾಸ:- ಕೆಟ್ಕೆಟ್ಟಾಣಿ। ಕ್ಯಾರಾಳಾಣಿ।).

ಕ್ವಳ್ಳು (ನಾ) = ಕೊರಳು.

ಕ್ವಾಟಿ (ನಾ) = ಕೋಟೆ; ಬೀದರ ಕೋಟೆ; ಬೀದರ ನಗರ ಕೋಟೆ; ಬಿದುರ್ಕ್ವಾಟಿ (ಗ್ರಾಮೀಣ ಹಿರಿಯರು ಇನ್ನೂ ಬೀದರಿಗೆ ಕ್ವಾಟಿ ಎಂದೇ ಗುರುತಿಸುತ್ತಾರೆ).

ಕ್ವಾಡಂಗಿ (ನಾ) = ಕ್ವಾಡಗ, ಕೋಡಂಗಿ (ನೋಡಿರಿ).

ಕ್ವಾಡಗ (ನಾ) = ಕೋಡಗ; ಕೋಡಂಗಿ; ಕರಿಮೋರೆ ಹಾಗೂ ಬಿಳಿ ಮೈಯುಳ್ಳ ವಾನರ.

ಕ್ವಾಡುಗ್ಗೆಮ್ಮು (ನಾ) = ಕೋಡಗನಂತೆ ಕೆಮ್ಮುವಿಕೆ.

ಕ್ವಾಣಾ (ನಾ) = ಕೋಣ; ಹುಂಬ; ಹೊಂಬ; ಉದ್ಧಟ; ಹಲ್ಗಟ (ಗಾದೆ:- ಕ್ವಾಣೆನ್ಮುಂದ ಕಿನ್ನುರಿ ಭಾರ್ಸುದ್ರ, ಶಂಭುಲಿಂಗನ ಗುಡಿ ಎಲ್ಲದ ಅಂತಂತ).

ಕ್ವಾಣೆನ ಕುಸ್ತಿ (ನಾ) = ಮನರಂಜನೆಗಾಗಿ ಏರ್ಪಡಿಸುವ ಕೋಣನಕುಸ್ತಿ; ಹುಂಬರ ಹೋರಾಟ; ಜಂಗಿಕುಸ್ತಿ.

ಕ್ವಾರಿ = ಕೋರೆ; ಖ್ವಾರಿ.

ಕ್ವಾರಿ ಹಲ್ಲು (ನಾ) = ಕೋರೆಹಲ್ಲು (ಆನೆ ಹಾಗೂ ಕಾಡು ಹಂದಿಗಳ ತೋರಿಕೆಯ ಹಲ್ಲುಗಳು).

ಕ್ವಾರ್ಮೀಸಿ (ನಾ) = ಎಳೆಮೀಸೆ; ಚೂಪು ಮೀಸೆ; ಹುರಿಮೀಸೆ (ಒಗಟು:- ಆರ್ಕಾಲಾಂವ। ಕ್ವಾರ್ಮೀಸ್ಯಾಂವ। ಉಪ್ಪು ತರಲ್ದಾಂವ। ಸಪ್ಪಂದುಂಬಲ್ದಾಂವ। ಮನಿಕಟ್ಟಲ್ದಾಂವ। ಮಳಿಗಂಜಲ್ದಾಂವ-ನೊಣ)

ಕ್ವೊಳ್ಳು (ನಾ) = ಕೊರಳು; ಕುತ್ತಿಗೆ.

ಕ್ವೊಳ್ಳುಕೊಯ್ಯಿ = ಕುತ್ತಿಗೆ ಕತ್ತರಿಸು; ಮೋಸಮಾಡು.

ಖ

ಖಂಕು (ವಿ) = ಒಣಗಿದ್ದುದು.

ಖಂಕ್ರೊಟ್ಟಿ (ನಾ) = ಒಣಗಿದ ರೊಟ್ಟಿ; ಕಟಿರೊಟ್ಟಿ.

ಖಂಗೀಸ (ನಾ) = ಕಂಜೂಸ; ಜಿಪುಣ; ಜಿಂದ; ಜೀನ.

ಖಂಟಾ (ನಾ) = ತಲೆಗೂದಲು.

ಖಂಟಾ ಹಾರ್ಸು (ಕ್ರಿ) = ತಲೆಗೂದಲುದುರುವಂತೆ ಹೊಡೆ.

ಖಂಡತುಂಡ = ಖಡಾ ಮುಡಿ; ಇದ್ದದ್ದಿದ್ದಂತೆ.

ಖಂಡತುಂಡುಮಾಡು (ಕ್ರಿ) = ಖಡಾಮುಡಿ ಮಾತಾಡು; ಇದ್ದುದಿದ್ದಂತೆ ಹೇಳು.

ಖಂಡಾ (ನಾ) ಹಿಂ. = ಮಾಂಸ; ಮಾಂಸದ ಚೂರು.

ಖಂಡಾದೇವರು (ನಾ) = ಖಂಡೋಬಾ (ಜಾನಪದ ಪ್ರಾಸ:- ಮುಂಗ್ಲಿ ಮುಂಗ್ಲಿ ಮಾರಿತೋರ್ಸು; ಖಂಡಾದೇವರ ಕುಂಡಿ ತೋರ್ಸು).

ಖಂಡಿ (ನಾ) = ಖಂಡುಗ.

ಖಂಡುಗ (ನಾ) = ಇಪ್ಪತ್ತು ಮಣದ ಅಳತೆ; ಒಂದು ಬಗೆಯ ಧಾನ್ಯದ ಅಳತೆ ಮಾನ; ಖಂಡಿ (ಗಾದೆ:- ಖಂಡುಗ್ದಾಗ ಖಸಖಸಿ ಅಡಗಿಧಂಗ).

ಖಂಡುದಾಣಿ (ನಾ) = ತೊಗರೆಯಲ್ಲಿಯ ಹುಳು ಹತ್ತಿದ ಕಾಳು; ಖಂಡಾದ ಕಾಳು.

ಖಂಡುಭೀಳು (ಕ್ರಿ) = ನಿಂತು ಹೋಗು; ಕೊರತೆಯಾಗು; ಕಡಿತ ಬೀಳು.

ಖಂಡೋಬಾ (ನಾ) = ಖಂಡಾದೇವ್ರು (ಗಾದೆ:- ಧಿನ್ನಾ ಉಂಡು ಹೋಗ್ಲಾಕ ಖಂಡೋಬಾನ ಖೀರಲ್ಲ).

ಖಂಡ್ಕಿ (ನಾ) = ಖಂಡು; ಕಬ್ಬಿನ ಗಣಿಕೆ, ತುಂಡು; ಬೆರಳಿನ ಮಡಿಚುವ ಜಾಗ.

ಖಂಡ್ರಾಬಂಡ್ರಾ = ಒರಟೊರಟು; ನುಣುಪಲ್ಲದ.

ಖಂತಾ = ಅಕೋ ಅಂತಹ.

ಖಂತಾದು = ಅಕೋ ಅಂತಹದು.

ಖಂದುಕ (ನಾ) = ಕಂದಕ; ಕೋಟೆ ಸುತ್ತಲಿನ ಆಳ ತಗ್ಗು.

ಖಂದೇಲಿ (ನಾ) = ಖಂದೀಲು, ಕಂದೀಲು; ಲಾಂಡ್ರು; ತೂಗುದೀಪ; ಕೈದೀಪ.

ಖಂಬಾ (ನಾ) = ಕಂಭ; ಸ್ತಂಭ; ನೆಲದಲ್ಲಿ ಹುಗಿದು ನಿಲ್ಲಿಸಿದ ಉದ್ದ ಮರ; ಆಧಾರ.

ಖಂಬೀರ (ನಾ) = ಬಹಾದ್ದೂರ; ವೀರ; ಗಂಭೀರ.

ಖಂಯಿ (ವಿ.) = ಕಹಿ.

ಖಂಯಿಕುಲ (ನಾ) = ಕಹಿಕುಲ; ಮಿಶ್ರಸಂತತಿಯ ಕುಲ; ಅನೀತಿ ಸಂತಾನ.

ಖಂಯಿಬಾಯಿ (ನಾ) = ಸತ್ತವರೆದುರು ಕುಳಿತು ಅತ್ತತ್ತು ಕಹಿಗೊಂಡ ಬಾಯಿ.

ಖಂಯಿಬಾಯಿ ತೊಳ್ಸು (ಕ್ರಿ) = ಸತ್ತವರ ಮನೆಯ ಸದಸ್ಯರಿಗೆ ಬಳಗದವರು ಅಡಿಗೆ ಒಯ್ದು ಉಣಿಸಿ, ನೀರು ಕುಡಿಸಿ, ಬಾಯಿಯನ್ನು ತೊಳೆದುಕೊಳ್ಳುವಂತೆ ಮಾಡು; ದುಃಖ ಮರೆಯಿಸು; ಅಳುವವರಿಗೆ ತಮ್ಮ ಸಹಕಾರದಿಂದ ಸಾಂತ್ವನಗೊಳಿಸು.

ಖಂವುಟ (ನಾ) = ಖೌಂಟ; ಕಿಮುಟ; ಕಿಮ್ಮುಟ.

ಖಂವುಟ್ಯಾ (ನಾ) = ಬಿಳುಪೊಡೆದ ಹೊಟ್ಟೆನಿಂದ ಕೂಡಿದ ತಲೆಯವನು.

ಖಗ್ಯಾಯಿ (ನಾ) = ಹಣ್ಣಾಗದ ಬಲಿತ ಕಾಯಿ.

ಖಗ್ಗ (ನಾ) = ಕಸುಗಾಯಿ; ಎಳಗಾಯಿ; ಖಸುಕು; ಕಸುಕು.

ಖಚಾಖಚ = ಒತ್ತೊತ್ತಾಗಿ; ದಟ್ಟವಾಗಿ.

ಖಜಾನ್ಯಾ (ನಾ) = ಖಜಾನೆ; ಟ್ರೇಜರಿ.

ಖಜಾಳಿ (ನಾ) = ಹಾದರ್ಗಿತ್ತಿ; ಸೂಳೆ; ಮೈ ಬಾಡಿಗೆಯವಳು.

ಖಜಾಳ್ಯಾ (ನಾ) = ಹಾದರಿಗ; ಗಂಡು ಸೂಳೆ; ಮಂಗಳ ಮುಖಿ.

ಖಜೀಲು (ನಾ) = ನಾಚಿಕೆ ಪಡುವಿಕೆ.

ಖಜೂರು (ನಾ) ಉ. = ಖರ್ಜೂರು; ಉತ್ತತ್ತಿ.

ಖಜ್ಜಿ (ನಾ) = ಕಜ್ಜಿ; ಸಣ್ಣಸಣ್ಣ ಬೊಕ್ಕೆ ಏಳುವ ಚರ್ಮರೋಗ.

ಖಟಗಿ (ನಾ) = ಕಟ್ಟಿಗೆ; ಮರ.

ಖಟಗಿ ಖಬ್ಬು (ನಾ) = ಕಟ್ಟಿಗೆಯಂತೆ ಗಟ್ಟಿಯಾಗಿರುವ ಕಬ್ಬು; ಕಬ್ಬಿನ ಒಂದು ಪ್ರಕಾರದ ತಳಿ.

ಖಟಾಖಟ್ = ತಕ್ಷಣ; ತಡಮಾಡದೆ.

ಖಟಿ = ಬಿರುಸಾದ, ಒಣಗಿದ.

ಖಟಿಪಿಟಿ = ಪ್ರಯತ್ನ.

ಖಟಿರೊಟ್ಟಿ (ನಾ) = ಬಿರುಸು ರೊಟ್ಟಿ, ಒಣಗಿದ ರೊಟ್ಟಿ.

ಖಟುಕ (ನಾ) = ವ್ಯಾಧ; ಕಟುಕ; ಕಸಾಯಿ (ಗಾದೆ:- ಖಟುಕನ ಮನ್ಯಾಗ ಆಕುಳು ಕಟ್ಟಿ ಹುಡುಕ್ಯಾಡಬಾರ್ದು).

ಖಟುಕು (ನಾ) = ಖಡುಕು; ಕಠಿಣನೆಲ; ಕಲ್ಲುನೆಲ.

ಖಟುಕ್ಚಿಂಚೋಳಿ (ನಾ) = ಭಾಲ್ಕಿ ತಾಲೂಕಿನ ವಲಯ ಮಟ್ಟದ ಹಳ್ಳಿ; ಇಲ್ಲಿ ಮಲ್ಲಪ್ಪ ಚಾಮರಡ್ಡಿ ಮತ್ತು ಅಪ್ಪಾರಾಯ ಕುಲ್ಕರ್ಣಿ ಎಂಬ ತತ್ವ ಪದಕಾರರು ಆಗಿ ಹೋಗಿದ್ದಾರೆ. ಇದಕ್ಕೆ ಖಡ್ಗಚಿಂಚೋಳಿ ಎಂತಲೂ ಕರೆಯುತ್ತಾರೆ. ಹುಡುಗಿ ಗ್ರಾಮದ ಶರಣರಾದ ಕಡಗಂಚಿ ಮಡಿವಾಳದಪ್ಪನವರ ಹುಟ್ಟೂರು.

ಖಟೂರು = ಬಿರುಸು; ಗಟ್ಟಿ.

ಖಟೂರ್ರೊಟ್ಟಿ (ನಾ) = ಬಿರುಸಾದ ರೊಟ್ಟಿ; ಒಣಗಿದ ರೊಟ್ಟಿ.

ಖಟ್ಕಾ (ನಾ) = ಬಂದೂಕಿನ ಕುದುರೆ, ಗುಂಡಿ.

ಖಟ್ಕಾಒತ್ತು = ಬಂದೂಕು ಹಾರಿಸು; ಗುಂಡಿ ಒತ್ತು.

ಖಟ್ಗಿ ಮುರ್ದು ಕೈಯಾಗ್ಕುಡು (ಕ್ರಿ) = ನಿರ್ಭಿಡೆ ಮಾತಾಡು; ಖಡಾಮುಡಿ ಮಾತಾಡು.

ಖಟ್ಪ = ಕೆಲಸಕ್ಕೆಬಾರದ, ಇಲ್ಲ ಸಲ್ಲದ; ಅನಾವಶ್ಯಕ.

ಖಟ್ಪ ಕಿರ್ಕಿರಿ (ನಾ) = ಇಲ್ಲಸಲ್ಲದ ಕಿರಿಕಿರಿ; ಅನಾವಶ್ಯಕ ಕೀಟಲೆ; ತೊಂದರೆ.

ಖಟ್ಪಭೀಳು = ಬೆಳವಣಿಗೆ ನಿಲ್ಲು; ನಿಂತು ಹೋಗು.

ಖಟ್ಟಾಮೀಠಾ = ಹುಳಿ ಹುಳಿ, ಸಿಹಿಸಿಹಿ ಸಕ್ಕರೆ ಗೋಲಿ.

ಖಡತಾರ (ವಿ.) = ಗಟ್ಟಿಮುಟ್ಟ; ನೆಟ್ಟಗೆ; ನೇರ.

ಖಡಾಖಡಿ = ನಿಂತ ನಿಂತಲ್ಲೆ; ತಕ್ಷಣ; ಏಕಾಏಕಿ.

ಖಡಾಮುಡಿ = ಇದ್ದುದ್ದಿದ್ದಂತೆ!

ಖಡಿ (ವಿ) = ನೇರ; ಸೀಧಾ (ಗಾದೆ:- ಬಿದ್ದುರ್ಬಿೀ ಮೂಗು ಖಡಿ ಅದಾ ಅಂದ್ನಂತ!).

ಖಡಿ ಆಲುಬು (ನಾ) = ಆಲುಬು ಹುಲ್ಲಿನಲ್ಲಿ ಎರಡು ಪ್ರಕಾರ. ಒಂದು ಖಡಿ ಆಲುಬು; ಇನ್ನೊಂದು ಬಳ್ಳಿ ಆಲುಬು. ಆಲುಬು ತಿಂದ ಹಯನದ ದನ ಹೆಚ್ಚು ಹಾಲು ಹಿಂಡುತ್ತವೆ.

ಖಡು (ನಾ) = ಸೀಮೆ ಸುಣ್ಣ; ಚಾಕಪೀಸು.

ಖಡುಕು (ನಾ) = ಖಟುಕು; ಕಠಿಣ ನೆಲ; ಗಟ್ಟಿನೆಲ.

ಖಡುಚಿ (ನಾ) = ಕಡಚಿ; ರೊಟ್ಟಿ ತಿರುಹುವ ಸಾಧನ.

ಖಡ್ಜಿ ಆಡ್ಸು (ಕ್ರಿ) = ಹಂಚಿನಲ್ಲಿ ಹುರಿಯುತ್ತಿರುವ ವಸ್ತುಗಳು ಹೊತ್ತದಂತೆ ಮೇಲೆ ಕೆಳಗೆ ಮಾಡು.

ಖಡ್ಡ = ಕಾರಣವಿಲ್ಲದ; ವಿನಾಕಾರಣ.

ಖಡ್ಡಿ (ನಾ) = ಕಡ್ಡಿ; ಬೆಂಕಿಕಡ್ಡಿ; ದೀಪದ ಕಡ್ಡಿ.

ಖಡ್ಡಿ ಆಡ್ಸು (ಕ್ರಿ) = ಕಿವಿಯ ರಂಧ್ರದಲ್ಲಿ ಕಡ್ಡಿಯನ್ನು ಸುತ್ತಾಡಿಸು.

ಖಡ್ಡು ಕಿರ್ಕಿರಿ (ನಾ) = ಅಕಾರಣ ಕಿರಿಕಿರಿ; ತೊಂದರೆ, ಕೀಟಲೆ.

ಖಡ್ಡುಭೀಳು (ಕ್ರಿ) = ನಿಂತುಹೋಗು; ಕೊರತೆಯಾಗು; ಕಡಿಮೆ ಬೀಳು; ಖಂಡು ಬೀಳು.

ಖಡ್ತಾರ (ನಿ) = ನೇರ; ಗಟ್ಟಿ ಮುಟ್ಟಿ.

ಖಡ್ಯಾ (ನಾ) = ಕಡಗ; ಕುಸ್ತಿಗೆದ್ದವನಿಗೆ ತೊಡಿಸುವ ಬೆಳ್ಳಿಯ ಇಲ್ಲವೆ ಬಂಗಾರದ ಕಡಗ.

ಖಡ್ಯಾ ಹಾಕು (ಕ್ರಿ) = ಕಡಗ ತೊಡಿಸಿ ಸನ್ಮಾನಿಸು.

ಖಣ (ನಾ) = ಮಡಿಚಿಟ್ಟ ಕುಪ್ಪಸದ ಹೊಸ ಬಟ್ಟೆ.

ಖಣಖಣ(ದ್ವಿ) = ಬಳೆ, ಕಡಗ, ಕಾಲುಂಗುರುಗಳ ಸದ್ದು.

ಖಣಿ (ನಾ) = ಗಣಿ; ಕಟ್ಟಡಕ್ಕಾಗಿ ಕಲ್ಲು ತೆಗೆವ ಹಾಗೂ ಪೂರೈಸುವ ತಾಣ, ಶರೀರ.

ಖತಂ (ನಾ) = ಮುಗಿತಾಯ; ಸಮಾಪ್ತಿ.

ಖತಂ ಮಾಡು (ಕ್ರಿ) = ಮುಗಿಸು; ತೀರಿಸು; ಕೊಲ್ಲು

ಖತನಾ (ನಾ) = ಸುಂತಿ; ಸುನ್ನತ (ಮುಸಲ್ಮಾನರ ಒಂದು ಧಾರ್ಮಿಕ ಸಂಸ್ಕಾರ).

ಖತನಾ ಮಾಡು (ಕ್ರಿ) = ಸುಂತಿಮಾಡು; ಸುನ್ನತ ಮಾಡು; ಮುಸಲ್ಮಾನರ ಧಾರ್ಮಿಕ ಸಂಸ್ಕಾರ ನೆರವೇರಿಸು.

ಖತಾಲ್ರಾತ್ರಿ = ಮುಸಲ್ಮಾನ ಪೀರರಾದ ಹಸನ-ಹುಸೇನರ ಕೊಲೆಯ ರಾತ್ರಿ; ಮತದಾನದ ಮುನ್ನಾರಾತ್ರಿ.

ಖತಾವಣಿ (ನಾ) = ಖಾತೆ ಬರೆಯುವಿಕೆ; ಕಿರ್ದಿಯಿಂದ ಲೆಕ್ಕವನ್ನು ಖಾತೆಗೆ ಸೇರಿಸುವಿಕೆ.

ಖತೈ (ಉ) = ಎಂದೂ; ತಪ್ಪಿಯೂ.

ಖತ್ನಾ (ನಾ) (ಉ) = ಖತ್ನಾ; ಸುಂತಿ; ಸುನ್ನತ.

ಖತ್ರಿ, ಖತ್ರೆ (ನಾ) = ಕ್ಷತ್ರೀಯ.

ಖದಂ (ನಾ) (ಉ) = ಹೆಜ್ಜೆ; ಕುದುರೆ ನಡಿಗೆ.

ಖದಂ ಕಲಿಸು (ಕ್ರಿ) = ಕುದುರೆಗೆ ನಡಿಗೆ ಕಲಿಸು; ಓಟ ಕಲಿಸು.

ಖದಖದ (ದ್ವಿ) = ಕುದಿಯುವ ಕ್ರಿಯೆ.

ಖದರ (ನಾ) ಉ. = ಕಿಮ್ಮತ್ತು; ಮರ್ಯಾದೆ; ಗೌರವ.

ಖದರ ಮಾಡು (ಕ್ರಿ) = ಮರ್ಯಾದೆ ಕೊಡು; ಗೌರವಿಸು.

ಖದರ್ಗೇಡಿ (ನಾ) = ಮರ್ಯಾದೆ ಗೆಟ್ಟವನು(ಳು).

ಖದಲಾಬದಲಿ (ನಾ) = ಅದಲಾಬದಲಿ; ಸ್ಥಳಾಂತರ; ಇದರ ಜಾಗದಲ್ಲಿ ಅದು, ಅದರ ಜಾಗದಲ್ಲಿ ಇದು.

ಖದಲ್ಬದಲ್ (ನಾ) = ಅದಲಾಬದ್ಲಿ; ಸ್ಥಳಾಂತರ; ಇದರ ಜಾಗದಲ್ಲಿ ಅದು, ಅದರ ಜಾಗದಲ್ಲಿ ಇದು (ಶಿಶುಪ್ರಾಸ:- ಖದಲ್ಬದಲ್। ಕಡ್ಲಿ ಕಾಯಿ। ಕಿವುರ್ಬಿಟ್ಕೆವ್ಯಾರು).

ಖದೀಮಿ (ವಿ.) ಉ = ಹಳೆಯ ಕಾಲದ ಪ್ರಾಚೀನ.

ಖದ್ದಿ ಕಡಿ (ಕ್ರಿ) = ಕೆಟ್ಟಿದ್ದನ್ನು ಸರಿಪಡಿಸು; ಸಮಾಧಾನ ಪಡಿಸು; ಶಾಂತಗೊಳಿಸು.

ಖನಕಾಸಿ = ಖನ್ನಂತ; ಜೋರಾಗಿ.

ಖನನನ = ನಿರಂತರ ಗಂಟೆ ಬಾರಿಸುವಿಕೆ.

ಖನಾಖನಾ (ದ್ವಿ) = ಮತ್ತೆ ಮತ್ತೆ ಸದ್ದು ಬರುವಂತೆ ಜೋರಾಗಿ ಹೊಡೆಯುವ ಕ್ರಿಯೆ.

ಖನ್ನಂತ = ಸದ್ದು ಬರುವಂತೆ ಜೋರಾಗಿ.

ಖನ್ನಿ (ನಾ) = ಕನ್ನೆ; ಕನ್ನಿಕೆ; ಅವಿವಾಹಿತೆ.

ಖನ್ನಿ ಮುತ್ತೈದಿ (ನಾ) = ಭ್ರಷ್ಟಳಾಗದ ಕುಮಾರಿ; ಅವಿವಾಹಿತೆ; ಶೀಲಗೆಡದ ಕನ್ನೆ.

ಖಪಲಿ (ನಾ) = ಜವೆ ಗೋಧಿ; ಖಪ್ಲಿ.

ಖಪ್ರ (ನಾ) = ಬೋಕಿ; ಮನೆ ಛಾವಣಿಯ ಹಂಚು.

ಖಪ್ರೋಳ್ಗಿ (ನಾ) = ಮನೆ ಛಾವಣಿಗೆ ಬಳಸುವ ಮಣ್ಣಿನ ಹಂಚು ಹಾಗೂ ಅವುಗಳ ಸಾಲು.

ಖಬರ (ನಾ) ಉ = ಹೆಣ ಹುಗಿದ ಜಾಗ; ಕುಣಿ; ಸಮಾಧಿ.

ಖಬರಸ್ತಾನ (ನಾ) ಉ = ಕುಣಿಗೇರಿ; ಮಸಣ; ಮಸುಟ್ಗಿ.

ಖಬರು (ನಾ) (ಉ) = ಸುದ್ದಿ; ಎಚ್ಚರ. ಗೋರಿ; ಸಮಾಧಿ.

ಖಬುರು (ನಾ) = ಖಬರು; ಸುದ್ದಿ; ಎಚ್ಚರ.

ಖಬ್ರೂತರು (ನಾ) ಉ = ಪಾರಿವಾಳ.

ಖಬರ್ಗೇಡಿ (ನಾ) = ಎಚ್ಚರಗೇಡಿ; ಮೈ ಮೇಲೆ ಎಚ್ಚರಿಲ್ಲದವನು(ಳು).

ಖಬ್ಜಾ (ನಾ) ಉ. = ಕಬ್ಜಾ; ಸ್ವಾಧೀನತೆ;

ಖಬ್ಜಾಮಾಡು (ಕ್ರಿ) = ಸ್ವಾಧೀನ ಪಡಿಸಿಕೊ.

ಖಬ್ಸೂರತ್ (ನಾ) (ಉ) = ಸುಂದರಾಂಗ; ಚೆಲುವ; ಖೊಬ್ಸೂರತ್.

ಖಬ್ಬು (ನಾ) = ಕಬ್ಬು.

ಖಬ್ಬುತುಳಿ (ಕ್ರಿ) = ಕಬ್ಬನ್ನು ನೆಡು; ಕಬ್ಬಿನ ಬೀಜದ ಗಣಿಕೆಯನ್ನು ಕೆಸರಲ್ಲಿಟ್ಟು ತುಳಿದು ಕಬ್ಬು ಚಿಗುರುವಂತೆ ಮಾಡು.

ಖಮಾಸು (ಕ್ರಿ) ಉ = ಬಾಗಿಸು; ಬಗ್ಗಿಸು.

ಖಮೀಸು (ನಾ) = ಮುಂಗೈವರೆಗೆ ತೋಳುಳ್ಳ ಅಂಗಿ.

ಖಮ್ಮಗ (ಅ) = ಸುಗಂಧ ಬರುವಂತೆ; ಕರಿದ ಅಥವಾ ಎಣ್ಣೆಯಲ್ಲಿ ತಾಳಿಸಿದಂತಹ ವಾಸನೆ. ಕಮ್ಮನೆ.

ಖಮ್ಮಗ ಮಾರಿ (ನಾ) = ಸುಂದರ ಸುವಾಸಿಕ ಮೋರೆ.

ಖಯಾಲ (ನಾ) ಉ = ಲಕ್ಷ; ಗಮನ; ಇಚ್ಛೆ.

ಖಯಾಲಿ (ನಾ) = ಇಷ್ಟಬಂದಂತೆ ವರ್ತಿಸುವವನು(ಳು); ಚಂಚಲ; ಲಹರಿಯವನು(ಳು).

ಖರ್ಬೂಜು (ನಾ) = ಸೌತೆ ಜಾತಿಯ ಸಿಹಿ ಹಣ್ಣು; ಕಲ್ಲಂಗಡಿ ಹಣ್ಣು.

ಖರಾಟಿ (ನಾ) ಉ = ಗೊರಕೆ.

ಖರಾಬಾಗು (ಕ್ರಿ) = ಕೆಡು; ಹಾಳಾಗು.

ಖರಾಬಿ (ನಾ) = ಕೇಡು.

ಖರಾಬು (ವಿ.) ಉ = ದೋಷವುಳ್ಳದ್ದು; ಕೆಟ್ಟದ್ದು; ಕೆಟ್ಟ.

ಖರಾಬ್ಯಾ (ನಾ) = ಕೇಡಿಸುವವನು.

ಖರೀದಿ (ನಾ) (ಉ) = ಕೊಳ್ಳುವಿಕೆ; ಖರ್ದಿ.

ಖರೀದಿಸು (ಕ್ರಿ) = ಖರೀದಿ ಮಾಡು; ಕೊಂಡುಕೊಳ್ಳು.

ಖರೀಫು (ನಾ). = ಮುಂಗಾರು ಬೆಳೆ.

ಖರೀಬ (ವಿ.) = ಸಮೀಪ.

ಖರೀಬ ಖರೀಬ (ದ್ವಿ) (ಉ) = ಸಮೀಪ ಸಮೀಪ; ಹೆಚ್ಚು ಕಡಿಮೆ.

ಖರೆ (ನಾ) = ಸತ್ಯ; ನಿಜ; ದಿಟ.

ಖರೆ ಖರೆ (ದ್ವಿ) = ಸತ್ಯ ಸತ್ಯ; ಸತ್ಯವನ್ನು ಒತ್ತಿ ಹೇಳುವಿಕೆ.

ಖರ್ಚಾ (ನಾ) = ಖರ್ಚು; ವ್ಯಯ.

ಖರ್ಚಾಗು (ಕ್ರಿ) = ವೆಚ್ಚವಾಗು; ವ್ಯಯವಾಗು.

ಖರ್ಚು (ನಾ)ಉ. = ವೆಚ್ಚ; ವ್ಯಯ.

ಖರ್ಚುಮಾಡು (ಕ್ರಿ) = ವೆಚ್ಚಮಾಡು; ವ್ಯಯಿಸು.

ಖರ್ಜಾ (ನಾ) ಉ = ಸಾಲ; ಬಾಕಿ.

ಖರ್ಜಾ ಕುಡು (ಕ್ರಿ) = ಸಾಲ ಕೊಡು; ಸಾಲ ನೀಡು.

ಖರ್ಜು (ನಾ) = ತೂರಿದ ರಾಶಿಯ ಸಮೀಪದ ಕಾಳು ಮಿಶ್ರಿತ ಹೊಟ್ಟು.

ಖರ್ಜೂರ (ನಾ) ಸಂ. = ಉತ್ತತ್ತಿ; ಖಜೂರು.

ಖರ್ದಿ (ನಾ) = ಖರೀದಿ; ಕೊಂಡುಕೊಳ್ಳುವಿಕೆ.

ಖರ್ದಿ ವಿಕ್ರಿ (ನಾ) = ವ್ಯಾಪಾರ; ವ್ಯವಹಾರ.

ಖರ್ಮ (ನಾ) = ಕರ್ಮ. (ಕಾಲಜ್ಞಾನ : ಖರ್ಮಾವು ಹೆಚ್ಚೆತ್ತು । ಧರ್ಮವು ಮುಳುಗೆತ್ತು ಕೇಳೀರಣ್ಣಾ ॥)

ಖರ್‍ರಗ (ವಿ) = ಕರ್‍ರಗೆ; ಕಪ್ಪನೆ.

ಖಲಂ (ನಾ) ಉ. = ಕಲಮು; ಲೆಕ್ಕಣಿಕೆ; ಪೆನ್ನು.

ಖಲಂದಾನ (ನಾ) = ಲೇಖಣಿ ಇಡುವ ಸಾಧನ.

ಖಲಲಲ = ಕಲಲಲ ಬಾಯಿ ಸದ್ದು ಮಾಡುವಿಕೆ; ಜಗಳಕ್ಕೆ ಇಳಿಯುವಿಕೆ.

ಖಲಾಸು ಮಾಡು (ಕ್ರಿ) = ಮುಗಿಸು; ಕೊಲ್ಲು.

ಖಲೀಲಾಗು (ಕ್ರಿ) = ಖರಾಬಾಗು; ಕೆಟ್ಟು ಹೋಗು.

ಖಲೀಲಿ (ನಾ) ಉ = ಖರಾಬಿ; ಕೇಡು.

ಖಲು (ನಾ) = ಸಂಚಾರಿ ಒರಳು.

ಖಲ್ಬತ್ತು (ನಾ) = ಖಲು ಮತ್ತು ಕುಟ್ಟುವ ಬತ್ತಿ

ಖವಾ (ನಾ) = ಖೋವಾ; ಕಾಯಿಸಿ ಗಟ್ಟಿಗೊಳಿಸಿದ ಹಾಲು.

ಖವ್ವಾಲಿ (ನಾ) = ಸೂಫೀ ಪದ್ಧತಿಯ ಹಾಡುಗಾರಿಕೆ.

ಖಸ ಖಸಿ (ನಾ) = ಗಸ ಗಸೆ.

ಖಸಾಬ (ನಾ) ಉ. = ಕಸಾಯಿ; ಕಟುಕ; ವ್ಯಾಧ.

ಖಸುಕು (ನಾ) = ಹಣ್ಣಾಗದ ಕಾಯಿ; ಖಗ್ಗು; ಕಸುಕು.

ಖಸ್ಗುರಿ (ನಾ) = ಕಾಯಿದ್ದಿಟ್ಟ ಕುರಿ.

ಖಸ್ಬಿ (ನಾ) = ಕಸುಬಿನ ಪೆಟ್ಟಿಗೆ; ನಾಯಿಂದನ ಪೆಟ್ಟಿಗೆ.

ಖಸ್ಸಂತ = ಖಸ್ಸನೆ; ಗಸ್ಸನೆ; ಅತಿ ಜೋರಾಗಿ ಕಚ್ಚನೆ ಚಾಕು/ಕತ್ತಿ ಇತ್ಯಾದಿಯಿಂದ ಚುಚ್ಚುವಿಕೆ.

ಖಳದ ಹೊಲ್ಯಾ (ನಾ) = ಹೊಲದಲ್ಲಿಯ ರಾಶಿಯ ಕಣದಲ್ಲಿ ದುಡಿವ ದಲಿತ.

ಖಳಾ (ನಾ) = ಕಣ; ತೆನೆ ತುಳಸಿ ರಾಶಿ ಮಾಡುವ ಜಾಗ.

ಖಳಾಗಟ್ಟು (ಕ್ರಿ) = ಚಂದ್ರನ ಸುತ್ತ ಬಿಳಿಯ ವರ್ತುಳ ಉಂಟಾಗು.

ಖಳಾ ಮಾಡು (ಕ್ರಿ) = ತೆನೆ ತುಳಿಸಲು ಇಲ್ಲವೆ ಬಡಿಯಲು ಕಣವನ್ನು ಸಿದ್ಧಗೊಳಿಸು.

ಖಳಿ (ನಾ) = ಕಳೆ; ಚಹರೆ.

ಖಳಿಮ್ಯಾಲ ಮಳಿ ಬರ್ಲಿ (ನುಡಿ) = ಖಳ್ಗೇಡಿ; ಕಳೆಗೇಡಿ; ಕಳೆಗೆಟ್ಟವ; ಮಳೆಬಂದು ಕಳೆ ಜಳಜಳಗೊಳ್ಳಲಿ (ಬೈಗುಳ)

ಖಳಿವಂತ (ನಾ) = ಕಳೆಯುಳ್ಳವನು; ಚದುರ.

ಖಳಿವಂತಿ (ನಾ) = ಕಳೆಯುಳ್ಳವಳು; ಚುದುರೆ.

ಖಳಿಗೇಡಿ (ನಾ) = ಕಳೆಗೆಟ್ಟವನು(ಳು); ಕಳೆಯಿಲ್ಲದವನು(ಳು) (ಬೈಗುಳ).

ಖಳ್ಗೇಡಿ (ನಾ) = ಖಳಿಗೇಡಿ (ನೋಡಿರಿ).

ಖಾಂಗ = ಅಕೋ ಹಾಂಗ

ಖಾಂಗಾ ಖೀಂಗ = ಹಾಂಗಾ ಹೀಂಗಾ.

ಖಾಂಗಿಂದ = ಅಕೋ ಹಾಂಗಿಂದ; ಅಕೋ ಅತ್ತ ಕಡೆಯಿಂದ.

ಖಾಂಡು (ನಾ) = ದೇವರ ಹೆಸರಿನಲ್ಲಿ ಮಾಡುವ ಸಾಮೂಹಿಕ ಅನ್ನದಾನ; ದಾಸೋಹ (ಉದಾ:- ಕಂಡೋರಿಗಿ ನೀಡಲಾಕ ಕರ್ಬಾಸಪ್ನ ಖಾಂಡಲ್ಲ).

ಖಾಂದಾನು (ನಾ) (ಉ) = ವಂಶ; ಸಂತಾನ ಪರಂಪರೆ.

ಖಾಕಿ (ನಾ) = ಪೋಲಿಸರ ಉಡುಪಿನ ಬಣ್ಣ; ಮಾಸಲು ಹಳದಿ ಬಣ್ಣ.

ಖಾಜಾ (ನಾ) = ಅಜ್ಮೀರದ ಸೂಫೀ ಸಂತ; ಕಲಬುರ್ಗಿಯ ಸೂಫೀ ಸಂತ ಖಾಜಾ ಬಂದೇನವಾಜ ಗೇಸೂದರಾಜ.

ಖಾಜಾನ ಖಂಬ (ನಾ) = ಬೀದರಿನ ಖಾಜಾ ಮಹಮುದ ಗವಾನನ ಶಾಲೆಯ ಕಟ್ಟಡದ ಒಂದು ಬುರುಜು; ಕಾಜಿನ ಖಂಬ.

ಖಾಜಿ (ನಾ) (ಉ) = ಕಾಜಿ; ಮಹಮ್ಮದೀಯರ ನ್ಯಾಯಾಧೀಶ (ಗಾದೆ:- ಗಂಡಾ ಹೆಣ್ತಿ ರಾಜಿ ಆದ್ರ ಏನ್ಮಾಡ್ತಾನ ಖಾಜಿ).

ಖಾಟು (ನಾ) = ಘಾಟು; ಕಟುವಾಸನೆ; ಕಂಬರ; ಬಗಾರ ವಾಸನೆ.

ಖಾಡ್ಗಾ (ನಾ) = ಕಡಗ; ಬೆಳ್ಳಿ ಅಥವಾ ಬಂಗಾರದ ಕಡಗ.

ಖಾತ (ನಾ) = ಗೊಬ್ಬರ.

ಖಾತರಿ (ನಾ) = ಖಾತ್ರಿ; ನಿಶ್ಚಿತ.

ಖಾತಾ (ನಾ) = ಲೆಕ್ಕದ ಪುಸ್ತಕ; ಕಿರ್ದಿ ಪುಸ್ತಕ; ಖಾತೆ.

ಖಾತೇದಾರ (ನಾ) = ಭೂಮಿಯ ಮಾಲೀಕತ್ವವನ್ನು ಪಡೆದು, ಸರಕಾರದ ದಫ್ತರಿನಲ್ಲಿ ದಾಖಲಿಸಿಕೊಂಡವನು; ಬ್ಯಾಂಕಿನಲ್ಲಿ ಖಾತೆ ಹೊಂದಿದವನು.

ಖಾದಿ (ನಾ) = ಕೈನೂಲಿನಿಂದ ಕೈ ಮಗ್ಗದಲ್ಲಿ ನೆಯ್ದ ಬಟ್ಟೆ; ಖದ್ದರ್.

ಖಾನ್‌ಪಾನ್ (ನಾ) = ಊಟ-ತಿಂಡಿ-ಕುಡಿತ; ಊಟೋಪಚಾರ.

ಖಾನಾಬರಾಬಿ (ನಾ) ಉ.= ಕೆಡುಗಾಲ; ಅನ್ನಕಾಣದಿರುವಿಕೆ.

ಖಾನಾಪಾನಿ (ನಾ) ಉ. = ಊಟ ತಿಂಡಿ; ಊಟೋಪಚಾರ.

ಖಾನಾವಳಿ (ನಾ) = ಊಟದ ಅಂಗಡಿ.

ಖಾನಿ (ನಾ) = ಭಾಗ; ಚಿಕ್ಕ ವಿಭಾಗ.

ಖಾನೆಸುಮಾರಿ (ನಾ) ಉ. = ಮನೆಗಣತಿ; ಮನೆಗಳ ಎಣಿಕೆ.

ಖಾಬಿಲ್ (ವಿ) ಉ. = ಯೋಗ್ಯ; ಸಲ್ಲುವ; ಕಾಬಿಲ್.

ಖಾಮೋಖಾ (ವಿ) ಉ. = ವಿನಾಕರಣ; ಸುಮ್ಮ ಸುಮ್ಮನೆ.

ಖಾಮೋಷ (ನಾ) ಉ.= ನಿಶ್ಯಬ್ದ; ಶಾಂತಿ; ಮೌನ; (ಕ್ರಿ) ಷುಮ್ಮನಿರಿ; ಶಾಂತರಾಗಿರಿ.

ಖಾಮೋಷಿ (ನಾ) ಉ. = ಶಾಂತತೆ; ನಿಶ್ಯಬ್ದ; ಮೌನ.

ಖಾಯಂ (ವಿ.)ಉ. = ಕಾಯಂ, ಶಾಶ್ವತ; ಬದಲಾಗದ.

ಖಾಯಸ್ಸು (ನಾ) = ಇಚ್ಛೆ; ಹಂಬಲ.

ಖಾಯಾ (ನಾ) = ಕಾಯ; ಶರೀರ; ದೇಹ; ಧಂಡ; ಮೈ (ಹಾಡು:- ಎಲ್ಲಾದೊ ಖಾಯಾ। ಅಲ್ಲಾದೊ ಛಾಯಾ।। ಮಾಣಿಕ ಪ್ರಭು ಮಹಾರಾಜ).

ಖಾಯಾಸು (ನಾ) = ಖಾಯಸ್ಸು; ಇಚ್ಛೆ; ಹಂಬಲ.

ಖಾರ (ನಾ) = ತೀಕ್ಷ್ಣವಾದ ರುಚಿ; ಕ್ಷಾರ.

ಖಾರಖಾರ (ದ್ವಿ) = ಅಲ್ಪ ಸ್ವಲ್ಪ ಖಾರ ಬೆರೆತಂತಿರುವ ರುಚಿ.

ಖಾರಬ್ಯಾಳಿ (ನಾ) = ಖಾರ, ಉಪ್ಪು, ಹುಳಿ, ಸೇರಿಸಿದ ಬೇಳೆ ಸಾರು.

ಖಾರಾ (ನಾ) = ಕಾರ; ಖಾರ್ಪುಡಿ; ಮೆಣಸಿನ ಪುಡಿ; ಸೇವು, ಚೂಡಾ, ಮಿಸಳ.

ಖಾರಾ ಉಪ್ಪು (ನಾ) = ಸ್ವಾದದ ಮೂಲ ವಸ್ತುಗಳು. (ಕವನ : ಖಾರಾ ಉಪ್ಪು। ಕಾಡಿನ್ನೊಪ್ಪು। ಒಕ್ಕಲ್ಗಿತ್ತಿ ಅಡ್ಗಿ। ಅಮೃತ ತುಂಬದ್ಗಡ್ಗಿ।।-ದೇಶಾಂಶ ಹುಡಗಿ.)

ಖಾರಾಬಿಸ್ಕೋಟು (ನಾ) = ಉಪ್ಪಿನ ಬಿಸ್ಕತ್ತು.

ಖಾರಿ (ನಾ) = ತಂಪುಗಾಳಿ; ನಸುಕಿನ ಜಾವ ಇಲ್ಲವೆ ಸಂಜೆ ಸಮಯದಲ್ಲಿ ಬೀಸುವ ಚಳಿಗಾಳಿ; ಕಳಂಡಿ.

ಖಾರಿ ಬೂಂದಿ (ನಾ) = ಖಾರ, ಉಪ್ಪು, ಮಸಾಲಿ ಹಚ್ಚಿದ ಕಡಲೆ ಹಿಟ್ಟಿನ ಕರಿದ ಕಾಳು.

ಖಾರೀಕು (ನಾ) = ಖರ್ಜೂರು; ಉತ್ತತ್ತಿ; ಖಜೂರು.

ಖಾರ್ಕಿ (ನಾ) = ಖಾರೀಕು; ಖಜೂರು (ಬಾಲಭಾಷೆ).

ಖಾಲಿ (ವಿ) = ಬರಿದಾದ; ತೆರವಾದ.

ಖಾಸ (ವಿ.) = ವಿಶೇಷ; ಸ್ವಂತ; ತನ್ನ.

ಖಾಸಗಿ (ವಿ.) = ವೈಯಕ್ತಿಕ; ಒಂದು ವಸ್ತುವಿಗೆ ಅಥವಾ ವ್ಯಕ್ತಿಗೆ ಸಂಬಂಧಿಸಿದ; ಸ್ವಂತದ; ಸರಕಾರದಲ್ಲದ.

ಖಾಸಮಗ (ನಾ) = ಸ್ವಂತ ಮಗ; ತನ್ನ ಮಗ.

ಖಾಸಾ (ವಿ.) = ತನ್ನದೇ ಆದ; ಸ್ವಂತದ ವ್ಯಕ್ತಿಗತವಾದ.

ಖಾಸಿಂರಜವಿ (ನಾ) = ರಜಾಕಾರ ಮುಖಂಡ; ಹಿಂದುಗಳ ಸಾಮೂಹಿಕ ವಧೆಯ ಹೊಂಚು ಹಾಕಿದ ಜಾತ್ಯಂಧ ಮುಖಂಡ; ನಿಜಾಮನಿಗೆ ದಾರಿ ತಪ್ಪಿಸಿದ ನಾಯಕ.

ಖಾಸಿಯತ್ತು (ನಾ)ಉ. = ಸ್ವಭಾವ; ಹುಟ್ಟು ಗುಣ; ಅಭ್ಯಾಸ.

ಖಿಂಗ = ಇಕೋ ಹಿಂಗ.

ಖಿಂಚಾಸಿಕುಡು (ಕ್ರಿ) = ಜೋರಾಗಿ ಹೊಡೆ; ಎಳೆದು ಹೊಡೆ.

ಖಿಂಚಾಸು (ಕ್ರಿ) = ಜೋರಾಗಿ ಹೊಡೆ, ಏಟು ಹಾಕು; ಎಳೆ.

ಖಿಂಡಿ (ನಾ) = ಕಿಂಡಿ; ಒಳಖಿಂಡಿ; ಬೆಳಖಿಂಡಿ; ಜೇರ್ಖಿಂಡಿ; ಕಳ್ಳಕಿಂಡಿ; ಕಳ್ಳಮಾರ್ಗ; ಗುಪ್ತಮಾರ್ಗ.

ಖಿಂಡಿಬಾಗ್ಲು (ನಾ) = ದಿಡ್ಡಿ ಬಾಗಿಲು; ಉಪದ್ವಾರ; ಹಿತ್ತಿಲು ಬಾಗಿಲು.

ಖಿಂತಾ = ಇಕೋ ಇಂತಹ.

ಖಿಂತಾದ್ದು = ಇಕೋ ಇಂತಹದು.

ಖಿಕ್ಕಂತ = ಕೋತಿ ಅಥವಾ ಕೋಡಗನಂತೆ ಬಾಯ್ತೆರೆದು ಹಲ್ಲು ತೋರುವಿಕೆ; ಖಿಸ್ಸಂತ ಅಣಗಿಸುವಿಕೆ.

ಖಿಚಡಿ (ನಾ) = ಕಿಚ್ಚಡಿ; ಅಕ್ಕಿ ಬೇಳೆ ಕುದಿಸಿ ಮಾಡಿದ ಅನ್ನ; ಖಿಚ್ಡಿ (ಕುಸುಬಿ ಹಾಲು ಖಿಚಡಿ ಎಂಬ ಜಾನಪದ ಕಥೆ).

ಖಿಚ್ಡಿ (ನಾ) = ಖಿಚಡಿ (ನೋಡಿರಿ).

ಖಿಚ್ಡಿ ಹೊರಗ ಭೀಳು (ಕ್ರಿ) = ರಹಸ್ಯ ಬಯಲಾಗು; ಗುಟ್ಟುರಟ್ಟಾಗು; ಹೀನತನ ಬಯಲಿಗೆ ಬರು.

ಖಿಡಕಿ (ನಾ) = ಕಿಟಕಿ; ಕಿಂಡಿ (ಹಾಡು:- ಎಂಥ ಚೆಲುವ ಎಂಥ ಚೆಲುವ ಈ ತಡಕಿ/ನೋಡ್ಲಾಕ ಬಿಟ್ಟಾರಪ್ಪಾ ಜೋಡು ಖಿಡಕಿ॥-ದೇಶಾಂಶ ಹುಡಗಿ).

ಖಿಡ್ಕಿ ಬಂದ ಮಾಡು (ಕ್ರಿ) = ಕಿಟಕಿ ಮುಚ್ಚು.

ಖಿಲಾ (ನಾ) = ಕಿಲ್ಲೆ; ಕೋಟೆ; ದುರ್ಗ.

ಖಿಲಾಡಿ (ನಾ) = ಆಟಗಾರ; ತುಂಟ; ಕಿಡಿಗೇಡಿ; ನಗೆಚಾಟಿಕೆ ಸ್ವಭಾವದವನು(ಳು).

ಖಿಲಾಪ (ವಿ.)ಉ. = ವಿರುದ್ಧ; ಎದುರಾಗಿ.

ಖಿಲಾರಿ (ನಾ) = ಹಸುವಿನ ಒಂದು ತಳಿ ಅಥವಾ ವಂಶಾವಳಿ; ಭೂಕಂಪ ಅನುಭವಿಸಿದ ಮಹಾರಾಷ್ಟ್ರದ ಖಿಲಾರಿ ಎಂಬ ಊರು.

ಖಿಲಾ (ನಾ) = ಕಿಲ್ಲೆ; ಕೋಟೆ.

ಖಿಲ್ಯಾ (ನಾ) = ಕಿಲ್ಲೆ; ಕೋಟೆ (ಉದಾ:- ಖಿಲ್ಯಾ ಬಂತು ಸಿಂಹ ಹೋಯ್ತು - ಛತ್ರಪತಿ ಶಿವಾಜಿ).

ಖಿಸ್ಕಾಸು (ಕ್ರಿ) = ಜಾರು; ತಳ ಬಿಡು; ಹೊರಟು ಹೋಗು.

ಖಿಸ್ತು (ನಾ) = ಕಂತು; ಕಂತಿನ ಮೂಲಕ ಹಣವನ್ನು ಪಾವತಿ ಮಾಡುವಿಕೆ; ಕಿಸ್ತು.

ಖಿಸ್ಮತ್ತು (ನಾ) = ಹಣೆ ಬರಹ; ದೈವ ಬಲ.

ಖಿಸ್ಮಿಸಿ (ನಾ) = ಒಣದ್ರಾಕ್ಷಿ.

ಖಿಸ್ಯಾ (ನಾ) = ಕಿಸೆ; ಜೇಬು; ಬಕ್ಕಣ.

ಖಿಸ್ಸಂತ = ಹಲ್ಲು ಕಾಣುವಂತೆ ನಗುವಿಕೆ.

ಖಿಸ್ಸಾ (ನಾ)ಉ. = ಕಥೆ; ಇತಿಹಾಸ; ಹಗರಣ.

ಖಿಸ್ಸಾ ಇಳುಸು (ಕ್ರಿ) = ಹಗರಣ ವಿವರಿಸು; ಕಥೆ ಹೇಳು; ಘಟನೆ ವಿವರಿಸು.

ಖಿಸ್ಸಾ ಹೇಳು (ಕ್ರಿ) = ಕಥೆ ಹೇಳು.

ಖೀಂಗ = ಇಕೋ ಹೀಂಗ.

ಖೀರು (ನಾ) = ಹಾಲಿನ ಜೊತೆ ಅಕ್ಕಿ, ಯಾಲಕ್ಕಿ, ಗೋಡಂಬಿ, ಖಿಸ್ಮಿಸಿ ಸೇರಿಸಿ ಕುದಿಸಿ ಮಾಡಿದ ಪಾಯಸ.

ಖುಟ್ಟಿ (ನಾ) = ಗೂಟ; ಗುಂಜಿ.

ಖುತುಬಿ (ನಾ) = ರಂಜಾನದ ಕೊನೆ ದಿನದ ಹಬ್ಬದ ಪ್ರಾರ್ಥನೆ; ಕುತ್ಬಿ; ಕುತ್ಬ-ಎ-ರಂಜಾನ.

ಖುದಾ (ನಾ) ಉ. = ದೇವರು; ಅಲ್ಲಾಹ; ಪರಮಾತ್ಮ.

ಖುದಾಲಿ (ನಾ) ಹಿಂ.= ಗುದ್ದಲಿ; ನೆಲ ಕೆದರುವ ಸಾಧನ.

ಖುದ್ಗರ್ಜ(ನಾ) = ಸ್ವಾರ್ಥಿ; ತನ್ನಹಿತವನ್ನೇ ಬಯಸುವವ.

ಖುದ್ಗರ್ಜಿ (ವಿ.) = ಸ್ವಾರ್ಥ; ತನ್ನ ಹಿತವನ್ನೇ ಬಯಸುವ.

ಖುದ್ದು (ನಾ) ಉ. = ಸ್ವತಃ; ಸ್ವಯಂ.

ಖುದ್ಬಖುದ್ ಉ. = ತನ್ನ ತಾನೇ; ತಾನಾಗಿಯೇ.

ಖುಫಿಯಾ (ನಾ) ಉ. = ಗುಪ್ತಚರ; ಗೌಪ್ಯ.

ಖುಬ್ಸೂರತ್ (ನಾ) ಉ = ಸುಂದರಾಂಗ; ಚೆಲುವ (ವಿ.) ಚೆಲುವಾದ; ಸುಂದರವಾದ.

ಖುರ (ನಾ) = ಕುದುರೆ, ದನ, ಕುರಿ ಮುಂತಾದವುಗಳ ಕಾಲಿನ ಗೊರಸು.

ಖುರಂಚಿ (ನಾ) = ಚೂಪುಗಲ್ಲು.

ಖುರಾನ (ನಾ) = ಮುಸಲ್ಮಾನರ ಪವಿತ್ರವಾದ ಪ್ರಮುಖ ಧರ್ಮಗ್ರಂಥ.

ಖುರುಪಿ (ನಾ) = ಖುರ್ಪಿ; ಕಳೆ ತೆಗೆಯಲು ಬಳಸುವ ಕಟ್ಟಿಗೆಯ ಹಿಡಿಕೆಯುಳ್ಳ ಕಬ್ಬಿಣದ ಉಪಕರಣ.

ಖುರ್ಜಿ (ನಾ) = ಕುರ್ಚಿ; ಆಸನ.

ಖುರ್ಬಾನಿ (ನಾ) ಉ. = ಬಲಿ; ಬಲಿದಾನ.

ಖುರ್ಬಾನಾಗು (ಕ್ರಿ) = ಬಲಿಯಾಗು.

ಖುರ್ಬಾನ್ಮಾಡು (ಕ್ರಿ) = ಬಲಿಕೊಡು.

ಖುಲಾಸಾ (ನಾ) = ಬಿಡುಗಡೆ; ವಿವರ.

ಖುಲಾಸು (ಕ್ರಿ) = ತೆರೆ.

ಖುಲುಖುಲು (ಧ್ವಿ) = ಕುಲು ಕುಲು.

ಖುಲ್ಲಂಖುಲ್ಲಾ (ವಿ) ಉ.= ಬಿಚ್ಚಿಟ್ಟ; ತೆರೆದಿಟ್ಟ; ಮುಚ್ಚು ಮರೆಯಿಲ್ಲದ; ಬಹಿರಂಗಗೊಂಡ.

ಖುಲ್ಲಾ(ನಾ) ಉ. = ಬಯಲು; ತೆರೆದ್ದದ್ದು.

ಖುಲ್ಲಾ ಮಾಡು (ಕ್ರಿ) = ತೆರೆದು ಬಯಲು ಮಾಡು.

ಖುಶ (ವಿ) = ಆನಂದಭರಿತ.

ಖುಶಾಮತಿ (ನಾ) ಉ. = ರಮಿಸುವಿಕೆ; ನಂಬಿಸುವಿಕೆ; ಬೆಣ್ಣೆ ಹಚ್ಚುವಿಕೆ.

ಖುಶಾಲ (ನಾ) = ಸೌಖ್ಯ; ಸಂತೋಷ; ಹಿಗ್ಗು; ಮನಃಪೂರ್ವಕ.

ಖುಶಿ (ನಾ) = ಖುಶಾಲಿ; ಹಿಗ್ಗು; ಬಕ್ಷೀಸು; ಕಾಣಿಕೆ; ಹರ್ಷದಿಂದ ಕಾಣಿಕೆ ಕೊಡುವಿಕೆ.

ಖುಷ್ಕಿ (ನಾ) ಉ. = ಒಣ ಭೂಮಿ; ಮಳೆ ನೀರಿನಿಂದ ಬೆಳೆ ಬೆಳೆಯುವ ಭೂಮಿ.

ಖುಸುಖುಸು (ಧ್ವಿ) = ಅಳುವ ಅಭಿವ್ಯಕ್ತಿ; ಧ್ವನಿ

ಖುಸುಬಿ (ನಾ) = ಕುಸುಬೆ; ಕುಸುಮೆ; ಒಂದು ಪ್ರಕಾರದ ಎಣ್ಣೆಕಾಳು (ಜಾನಪದ ಕಥೆ:- ಖುಸುಬಿ ಹಾಲು ಖಿಚ್ಡಿ)

ಖುಸ್ಬಿ (ನಾ) = ಖುಸುಬಿ (ನೋಡಿರಿ).

ಖುಷ್ಬೂ (ನಾ) = ಸುವಾಸನೆ; ಸುಗಂಧ.

ಖುಶ್ಮತ್ತು (ನಾ) = ವೈರ; ಒಳಜಗಳ; ಸೇಡು; ಮತ್ಸರ.

ಖುಸ್ಸಾಗು (ಕ್ರಿ) = ಹಿಗ್ಗು, ಸಂತೋಷಪಡು.

ಖೂಟು (ನಾ) = ಮೊಳಕೆಯಂತೆ ತೇಲಿದ ಗಡ್ಡ.

ಖೂಣ (ನಾ) ಮ. = ಕೊಲೆ; ಖೂನ.

ಖೂನ ಮಾಡು (ಕ್ರಿ) = ಕೊಲೆ ಮಾಡು.

ಖೂನಾ (ನಾ) = ಗುರುತು; ಕುರುಹು; ಗುರುತಿಸುವಿಕೆ.

ಖೂನಾಗೊತ್ತು (ನಾ) = ಪರಿಚಯ; ಪತ್ತಾ; ವಿಳಾಸ.

ಖೂನಿ (ನಾ) = ಕೊಲೆಗಾರ; ಕೊಲೆ; ಕೊಲ್ಲುವಿಕೆ.

ಖೂಪ (ವಿ) = ಖೂಬ; ಬಹಳ; ಬಕ್ಕ; ತೋಲು.

ಖೂಬ (ವಿ) = ಖೂಪ; ಬಹಳ; ಬಕ್ಕ; ತೋಲು.

ಖೂಬಸೂರತ್ (ವಿ) ಉ. = ಚೆಲುವುಳ್ಳ; ಚದುರಾದ.

ಖೂಬಿ (ನಾ) = ವಿಶೇಷತೆ; ವೈಶಿಷ್ಟ್ಯ.

ಖೂರ (ವಿ.) = ಚೂಪಾದ

ಖೂರನ್ನುಂಡಿದಾಂವ (ನಾ) = ಮೈಗಳ್ಳ; ದುಡಿಯಲಾರದವನು.

ಖೂರನ್ನುಂಡಿದಾಕಿ (ನಾ) = ಮೈಗಳ್ಳಿ; ದುಡಿಯಲಾರದವಳು.

ಖೂರಾಗು (ಕ್ರಿ) = ಚೂಪಾಗು; ಹರಿತವಾಗು.

ಖೂರುಕ (ವಿ) = ಖೂರು; ಕೂರುಕ; ಚೂಪು; ಕೂರಿತ್ತು; ಹರಿತ.

ಖೂರ್ಕ (ವಿ) = ಖೂರುಕ (ನೋಡಿರಿ).

ಖೂಳ (ನಾ) = ನೀಚ; ದುಷ್ಟ; ಅಂಗವಿಕಲ.

ಖೂಳ್ಗೇಡಿ (ನಾ) = ವಿಕಲತೆಯಿಂದ ಕೆಟ್ಟಿದವನು; ದುರುಳತನದಿಂದ ಕೆಟ್ಟವನು; ನೀಚ; ದುಷ್ಟ (ಬೈಗುಳ).

ಖೆಂಚ (ನಾ) = ಕೆಂಚ.

ಖೆಂಚ್ಗ (ವಿ) = ಕೆಂಚಗೆ.

ಖೆಂಡ (ನಾ) = ಕೆಂಡ.

ಖೆಂಪ (ವಿ) = ಕೆಂಪು.

ಖೆಂಪಗ (ವಿ) = ಕೆಂಪಗೆ.

ಖೆಂಪಗ ಕೂಕಮ್ಮು (ನಾ) = ಕುಂಕುಮದಂತೆ ಕೆಂಪು.

ಖೆಂಪು (ವಿ.) = ಕೆಂಪು.

ಖೆಕ್ಕಂತ (ಅ) = ಖೆಕ್ ಎಂದು ಸದ್ದು ಮಾಡಿ ನಗುವಿಕೆ; ಕೆಮ್ಮುವಿಕೆ.

ಖೆಕಾಖೆಕ್ (ದ್ವಿ) = ಖೆಕ್‌ಖೆಕ್ ಎಂದು ನಗುವಿಕೆ, ಕೆಮ್ಮುವಿಕೆ.

ಖೆಡುವ್ವು (ಕ್ರಿ) = ಕೆಡವು; ಸೋಲಿಸು; ನೆಲಕ್ಕೆ ಹಾಕು.

ಖೆಮ್ಮು (ನಾ) = ಕೆಮ್ಮು (ಗಾದೆ:- ಖೆಮ್ಮು ಕೊಟ್ಟು ದಮ್ಮು ತೊಗೊಂಡ್ರಂತ.)

ಖೆಮ್ಮು ಹತ್ತು (ಕ್ರಿ) = ಕೆಮ್ಮುರೋಗ ಅಂಟು. ಮುಂಗುವರಿ.

ಖೆಮ್ಮುಸು (ಕ್ರಿ) = ಕೆಮ್ಮಿಸು; ಕೆಮ್ಮು ಬೇನೆ ಉಂಟಾಗು.

ಖೇಂತಿ (ನಾ) = ಹಾಳು ಬೀಳು.

ಖೇಂತಿ ಆಗು (ಕ್ರಿ) = ಹಾಳಾಗು; ಕೆಡು.

ಖೇಂತಿ ಎಬ್ಬಿಸು (ಕ್ರಿ) = ಹಾಳು ಮಾಡು; ಹರಿ ಹಂಚು; ಕೆಡು; ಕೆಡಿಸು.

ಖೇಚಿ (ನಾ) = ಠೇಚಿ; ಕಾಲಿಗೆ ಕಲ್ಲು ತಟ್ಟುವಿಕೆ.

ಖೇಡ (ನಾ) = ಹಳ್ಳಿ; ಗ್ರಾಮ; ಖೇಡಾ (ಉದಾ:- ಹಳ್ಳಿ ಖೇಡ; ಬೇಮಳಖೇಡ; ತೊಗರ್ಖೇಡ; ವಾಂಜರ ಖೇಡ; ನಾರಾಯಣಖೇಡ ಇತ್ಯಾದಿ).

ಖೇಡಾ (ನಾ) = ಹಳ್ಳಿ; ಗ್ರಾಮ; ಖೇಡ.

ಖೇದ (ನ್ನು) = ದುಃಖ; ಒಳನೋವು; ಅಂತರಂಗದಲ್ಲಿಯ ಸಂಕಟ.

ಖೇಪಿ = ಬಾರಿ; ಸರದಿ; ಸಲ.

ಖೇಪಿಗಿ ಖೇಪು = ಒಂದಾದ ಮೇಲೊಂದು; ಗುಂಪು ಗುಂಪಾಗಿ; ತಂಡ ತಂಡವಾಗಿ; ನಿರಂತರವಾಗಿ; ರಾಶಿರಾಶಿಯಾಗಿ; ಸಾಲುಸಾಲಾಗಿ.

ಖೇಪು (ನಾ) = ಬಾರಿ; ಸರದಿ; ಸಲ; ಪಾಳಿ.

ಖೇಸಕ್ಕಿ (ನಾ) = ಕೆಂಪು ಮೇಲ್ಪದರುಳ್ಳ ಅಕ್ಕಿ; ಪಾಲಿಷ ಮಾಡಲಾರದ ಅಕ್ಕಿ.

ಖೇಸು (ನಾ) = ಕೆಂಪು; ಕೆಂಪು ಪದರು; ಅಕ್ಕಿಯ ಮೇಲಿನ ಕೆಂಪು ಪದರು.

ಖೇಳ (ನಾ) = ಆಟ; ಕ್ರೀಡೆ; ವಿಹಾರ.

ಖೇಳಗಿ (ನಾ) = ಖೇರ್ಡಾ (ಬಿ) ಎಂದು ಕರೆಯಲ್ಪಡುವ ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿ; ಶರಣಪ್ಪ ಬೆಳೆಂಬ್ಗಿ ಎಂಬ ಪ್ರಸಿದ್ಧ ಸಂಗೀತಗಾರನ ಹುಟ್ಟೂರು; ಪ್ರಸಿದ್ಧ ವಿರಕ್ತ ಮಠವಿರುವ ಊರು.

ಖೈಂಞ್ = ಕಹಿ; ಹೀನ; ಕೀಳು (ಗಾದೆ:- ತಿಂಬಾ ತನಕ ತಿಂದು, ತುಂಬು ಖೈಂಞ್ ಅಂತಂತ!).

ಖೈಂಞ್‌ಕುಲ (ನಾ) = ಕಹಿಕುಲ; ಹೀನಕುಲ; ಕೀಳು ಕುಲ; ಮಿಶ್ರಕುಲ.

ಖೈಂಞ್‌ಗುಂಬ್ಳ (ನಾ) = ಕಹಿ ಸೋರೆ.

ಖೈಂಞ್‌ಗುಣ (ನಾ) = ಕೀಳು ಗುಣ; ಕೆಟ್ಟ ಗುಣ.

ಖೈಂಞ್ ಜಾತಿ (ನಾ) = ಕಹಿ ಜಾತಿ; ಹೀನ ಜಾತಿ; ಕೀಳು ಜಾತಿ; ಮಿಶ್ರ ಜಾತಿ.

ಖೈಂಞ್‌ಜಾರ (ನಾ) = ಕಹಿವಿಷ, ವಿಷದಂತೆ ಕಹಿಯುಳ್ಳ ವಸ್ತು.

ಖೈಂಞ್‌ಬಾಯಿ (ನಾ) = ಕಹಿಬಾಯಿ; ಸತ್ತವರ ಮನೆಯ ಕಹಿ ವಾತಾವರಣ.

ಖೈಂಞ್ ಬಾಯಿತೊಳ್ಸು (ಕ್ರಿ) = ಸಾವು ಉಂಟಾಗಿ ದುಃಖಿಸುತ್ತಿಕೊಂಡ ಮನೆಯವರಿಗೆ ಅಡಿಗೆ ಒಯ್ದು ಉಣಿಸಿ ಸಾಂತ್ವನ ಹೇಳು.

ಖೈಂಞ್ ಬೀಜ (ನಾ) = ಕಹಿ ಬೀಜ; ಮಿಶ್ರ ಬೀಜ; ಕಹಿಗೊಂಡ ನೆಲಗಡ್ಲೆ ಕಾಳು.

ಖೈಂಞ್ ರೋಗ (ನಾ) = ಕಹಿ ರೋಗ; ಕ್ಷಯ ರೋಗ; ಟಿ.ಬಿ.

ಖೈಂಞ್ ಸೌತಿ (ನಾ) = ಕಹಿ ಸೌತೆ.

ಖೈಂಞ್ ಹತ್ತು (ಕ್ರಿ) = ಕಹಿ ಎನಿಸು; ಕಹಿಯಾಗು.

ಖೈದಿ (ನಾ) = ಕೈದಿ; ಬಂಧಿಸಲ್ಪಟ್ಟವನು(ಳು); ಸೆರೆಮನೆ ಸೇರಿದವನು (ಳು).

ಖೈರ = ಆಗಲಿ; ಇರಲಿ; ಸರಿ.

ಖೈರಾತ (ನಾ) ಉ. = ದಾನ; ಭಿಕ್ಷೆ.

ಖೈರಾತಿ (ನಾ) ಉ. = ಭಿಕಾರಿ; ಫಕೀರಿ.

ಖೈರಾತು (ನಾ) ಉ. = ದಾನ; ಭಿಕ್ಷೆ.

ಖೈರಿಯತ್ (ನಾ) ಉ.= ಕ್ಷೇಮ; ಕುಶಲ.

ಖೊಂಕು ನರಿ (ನಾ) = ಕೊಂಕುನರಿ; ನರಿಜಾತಿಯ ಒಂದು ಪ್ರಾಣಿ.

ಖೊಂಚಿ (ನಾ) = ಟೊಂಗೆ; ಮುರಿದ ಟೊಂಗೆಯ ಚೂಪು ಭಾಗ; ಮಗ್ಗುಲಲ್ಲಿ ಬೆಳೆದ ಟೊಂಗೆ.

ಖೊಂಞ್‌ಖೊಞ್ (ಧ್ವಿ) = ಕೆಮ್ಮುವ ಸದ್ದು.

ಖೊಂಡ (ನಾ) = ಹೊಂಬ.

ಖೊಂಡಕುಲ (ನಾ) = ಹೊಂಬ ಕುಲ.

ಖೊಂಡ ಗುಣ (ನಾ) = ಹೊಂಬ ಗುಣ.

ಖೊಂಡಾಗು (ಕ್ರಿ) = ಹೊಂಬ ಗುಣದವನಾಗು.

ಖೊಂಬು (ನಾ) = ಕೊಂಬು; ಕೋಡು; ಖೋಡು.

ಖೊಂಬ್ಚಾರಿ (ನಾ) = ಕೊಂಬಿಗೆ ಸಿಕ್ಕಿಸುವ ಚೌರಿ; ಕಾರುಣ್ಣಿ ಹಬ್ಬದಂದು ಎತ್ತಿನ ಕೊಂಬಿಗೆ ಹಾಕಿ ಶೃಂಗರಿಸುವ ಚೌರಿ.

ಖೊಕಾಸು (ಕ್ರಿ) = ಕೆಮ್ಮು.

ಖೊಕ್ಕಂತ (ಅ) = ಖೊಕ್ಕನೆ; ಖೊಕ್ಕೆಂದು ಸದ್ದು ಬರುವಂತೆ.

ಖೊಕ್ಕೊ (ನಾ) = ಖೋಖೋ ಆಟ.

ಖೊಕ್ಖೊಕ್ (ಧ್ವಿ)=ನಿರಂತರ ಕೆಮ್ಮುವಿಕೆ.

ಖೊಜ್ಜಾ (ನಾ) = ಷಂಡ; ಹಿಜ್ಜ; ಹಿಜಡ್ಯಾ; ನಾಮರ್ದ.

ಖೊಟ್‌ಖೊಟ್ (ಧ್ವಿ) = ಕೋಲು ಅಥವಾ ಬಡಿಗೆಯನ್ನು ನೆಲ ಇಲ್ಲವೆ ಫರ್ಸಿಯ ಮೇಲೆ ಕುಟ್ಟುವ ಸದ್ದು.

ಖೊಟಡಿ (ನಾ) = ಕೊಠಡಿ; ಖೋಲಿ; ಖೊಲ್ಲಿ.

ಖೊಟಿ (ನಾ) = ಸುಳ್ಳು; ಕೆಟ್ಟ.

ಖೊಟಿಗುಣ (ನಾ) = ಸುಳ್ಳತನ; ಕೆಟ್ಟತನ; ಸೇಡು ಬುದ್ಧಿ.

ಖೊಟ್ಟಿ (ನಾ) = ನಿಜವಲ್ಲದುದು; ಖೋಟಾ; ನಕಲಿ; ಸೇಡು.

ಖೊಡಬ್ಯಾಳಿ (ನಾ) = ಕೋಡುಬಳೆ; ಬೆರಕೆ ಹಿಟ್ಟಿನಲ್ಲಿ ಖಾರ, ಉಪ್ಪು, ಅರಿಷಿಣ, ಜೀರಿಗೆ ಇತ್ಯಾದಿ ಬೆರೆಸಿ ನೀರೊಡನೆ ನಾದಿ, ಸುರುಳಿಗಳನ್ನು ತಯಾರಿಸಿ ಕರಿದ ವಿಶೇಷ ತಿಂಡಿ.

ಖೊಬ್ರಿ (ನಾ) = ಕೊಬ್ರಿ; ಕೊಬ್ಬರಿ.

ಖೊಬ್ರಿ ಕುಡು (ಕ್ರಿ) = ಅಣ್ಣತಮ್ಮರಿಗೆ ಕೊಬ್ಬರಿ ಕೊಟ್ಟು ಸನ್ಮಾನಿಸಿದರೆ, ಅಕ್ಕ ತಂಗಿಯರಿಗೆ ಅಣ್ಣತಮ್ಮರು ಉಡುಗೊರೆ ಕೊಟ್ಟು ಸನ್ಮಾನಿಸುವ ಶಾಸ್ತ್ರ ನೆರವೇರಿಸು.

ಖೊಬ್ರಿಖಾರ (ನಾ) = ಕೊಬ್ಬರಿ, ಖಾರ, ಉಪ್ಪು, ಬಳ್ಳೊಳ್ಳಿ, ಜೀರಿಗೆ ಇತ್ಯಾದಿ ಬೆರೆಸಿ ಕುಟ್ಟಿದ ಚಟ್ನಿ.

ಖೊಬ್ರಿಹಳಕು (ನಾ) = ಕೊಬ್ಬರಿಯ ಚೂರು (ಗಾದೆ:- ರೊಟ್ಟಿ ಖೊಬ್ರಿಹಳ ಕಾಗು).

ಖೊಬ್ರಿಬಟ್ಲು (ನಾ) = ಬಟ್ಟಲಂತಿರುವ ಕೊಬ್ಬರಿ; ಕೊಬ್ಬರಿಯ ಅರ್ಧ ಗೋಲ.

ಖೊಲ್ಲಿ (ನಾ) = ಖೋಲಿ; ಕೋಣೆ; ಕೊಠಡಿ.

ಖೊಲ್ಯಾಗ (ಅ) = ಕೋಣೆಯಲ್ಲಿ (ಒಗಟು:- ಕುಬ್ಸಾ ಕಳಿ, ಖೊಲ್ಯಾಗ ನಡಿ-ಬಾಳೆಹಣ್ಣು).

ಖೋ (ನಾ) = ಒಂದು ಪ್ರಕಾರದ ಭಾರತೀಯ ಆಟ.

ಖೋಖೋ (ನಾ) = ಖೋ (ನೋಡಿರಿ).

ಖೋಕುಡು (ಕ್ರಿ) = ಅನ್ಯರನ್ನು ಓಡಿಸಿ ತಾನು ಸೇರಿಕೊ.

ಖೋಕ್ಲಾ(ನಾ) = ಖಾಲಿ; ಕೆಮ್ಮು , ಟೊಳ್ಳು.

ಖೋಚಿ (ನಾ) = ಉಪಶಾಖೆ; ಕಡಿದ ಮರದ ಚೂಪು ಭಾಗ.

ಖೋಜ (ನಾ) ಹಿಂ. = ಹುಡುಕಾಟ.

ಖೋಜಾ (ನಾ) = ಷಂಡ; ಹಿಜಡ್ಯಾ; ನಂಪುಂಸಕ.

ಖೋಟಾ (ನಾ) = ಸುಳ್ಳು; ನಕಲಿ; ಮೂಲವಲ್ಲದ.

ಖೋಟಾ ನೋಟು (ನಾ) = ಜಾಲಿ ನೋಟು; ನಕಲಿ ನೋಟು; ಕಳ್ಳ ನೋಟು; ಸುಳ್ಳುನೋಟು.

ಖೋಡಿ (ನಾ) = ಕೆಟ್ಟತನ; ದುರುಳತನ; ನೀಚತನ; ಹೀನತನ ; ಕೆಟ್ಟತನ.

ಖೋಡಿರಾಟಿ (ನಾ) = ಕೆಟ್ಟ ಅಭ್ಯಾಸ; ಹೀನರೂಢಿ.

ಖೋಡು (ನಾ) = ಕೋಡು; ಕೊಂಬು; ಶೃಂಗ (ಗಾದೆ:- ಖೋಡು ಮಾರಿದವನಿಗೆ ಕೇಡು ತಪ್ಪಾಲ; ಸೀಗಿ ಹಾಡು:- ಅಣ್ಣಾನ ತ್ವಾಟಕ। ಹೂಕಂತ ಹೋದರ। ಹೊನ್ನಾ ಖೋಡೆಮ್ಮಿ ಹೊಡದಿತೆ ಕೋಲೆ).

ಖೋಡುಕೊಯ್ಯು (ಕ್ರಿ) = ಬೆಳೆದ ಕೋಡನ್ನು ಕರಗಸದಿಂದ ಕತ್ತರಿಸು; ಸೊಕ್ಕು ಅಡಗಿಸು (ಸೀಗಿ ಹಾಡು:- ಆ ಎಮ್ಮಿಗ್ಹೊಡಿಯಲಿ। ಆ ಎಮ್ಮಿಗ್ಬಡಿಯಲಿ। ಆ ಎಮ್ಮಿ ಖೋಡ ಕೊಯ್ಸಲಿ ಕೋಲೆ).

ಖೋಡು ಬರು (ಕ್ರಿ) = ಸೊಕ್ಕು ಬರು; ಮದವೇರು.

ಖೋಡಬ್ಯಾಳಿ (ನಾ) = ಕೋಡುಬಳೆ; ಬೆರಕೆ ಹಿಟ್ಟಿನಲ್ಲಿ ಖಾರ, ಉಪ್ಪು, ಅರಿಶಿಣ ಇತ್ಯಾದಿ ಬೆರೆಸಿ ಮಾಡಿದ ಸುರುಳಿಯಾಕಾರದ ಕರಿದ ತಿಂಡಿ.

ಖೋಡು ಮಾರು (ಕ್ರಿ) = ದನಗಳ ವ್ಯಾಪಾರ ಮಾಡು; ಕೋಡುಳ್ಳ ಪ್ರಾಣಿಗಳ ಖರೀದಿ ವಿಕ್ರಿ ಮಾಡು.

ಖೋಡು ಮುರಿ (ಕ್ರಿ) = ಸೊಕ್ಕು ಅಡಗಿಸು.

ಖೋಡು ಮುರ್ಕಿ (ನಾ) = ತೆನೆ ಬಾಗುವ ಮುಂಗಾರಿ ಜೋಳ; ಸೇರು ಬಿಜ ಬಿತ್ತಿದ್ದರೆ ಖಂಡುಗ ಬೆಳೆಯುವ ಸೇರ್ಖಂಡಿ ಎಂಬ ಹೆಸರಿನ ಜೋಳ.

ಖೋಡ್ಕಿ = ಕೋಡು.

ಖೋತಾ (ನಾ) = ಕೊರತೆ; ಲುಕ್ಸಾನ; ಹಾನಿ.

ಖೋಪ್ಡಿ (ನಾ) = ನೆತ್ತಿ; ನೆತ್ತಿಯ ಬುರುಡೆ.

ಖೋಪ್ಡಿ ಸೀದಾ ಮಾಡು (ಕ್ರಿ) = ದಾರಿಗೆ ಬರುವಂತೆ ಮಾಡು; ತಿದ್ದು; ತಿಳುವಳಿಕೆ ಹೇಳು.

ಖೋಪ್ರಾ ಮಿಠಾಯಿ (ನಾ) ಹಿಂ. = ಕೊಬ್ಬರಿ ಮತ್ತು ಸಕ್ಕರೆಯಿಂದ ತಯಾರಿಸಿದ ಸಿಹಿ ತಿಂಡಿ.

ಖೋಲ್ (ನಾ) = (ನೀರಿನ) ಆಳ; ಘುಂಬ.

ಖೋಲಿ (ನಾ) = ಖೊಲ್ಲಿ; ಕೋಣೆ; ಕೊಠಡಿ.

ಖೋವಾ (ನಾ) = ಖವಾ; ಹಾಲನ್ನು ಕಾಯಿಸಿ; ಅಟ್ಟಿಸಿ, ಗಟ್ಟಿ ಮಾಡಿದ ಪದಾರ್ಥ.

ಖೌಂಜು (ನಾ) = ಕೊರಕೊಂಚ; ಕ್ರೌಂಚ; ಕೊಕ್ಕರೆ.

ಖೌಂಟಿಕಾಯಿ (ನಾ) = ಕವಟಿಕಾಯಿ; ಒಳಗೆ ತಿರುಳಿದ್ದು ಮೇಲೆ ಗಟ್ಟಿಯಾದ ಪದರನ್ನು ಹೊಂದಿದ ಒಂದು ಪ್ರಕಾರದ ಕಾಯಿ; (ಉರ್ದು) ಕವೀಟ.

ಖೌಂಟು (ನಾ) = ತಲೆ ಹೊಟ್ಟು ಆಗಿರುವ ಒಂದು ಪ್ರಕಾರದ ರೋಗ; ಕಿಮುಟು; ಕೆಟ್ಟದ್ದು. (ಗಾದೆ:- ಖೌಂಟು ಖೊಬ್ರಿ; ಜಿಗುಟು ಬೆಲ್ಲ).

ಖೌಂಟುಹಾರ್ಸು (ನಾ) = ತಲೆಯ ಕಿಮುಟು ಉದುರುವಂತೆ ಜೋರಾಗಿ ಹೊಡೆ.

ಖೌಂಟ್ಯಾ (ನಾ) = ಕಿಮುಟು ಬಟ್ಟೆಯುಳ್ಳವನು; ಕೊಳಕು ಸುತ್ತಿದವನು.

ಖೌಂದಿ (ನಾ) = ಖೌದಿ; ಕೌದಿ; ಕವುಂದಿ.

ಖೌದಿ (ನಾ) = ಖೌಂದಿ; ಕೌದಿ; ಕವುಂದಿ (ಜಾನಪದ ಪ್ರಾಸ:- ಬತ್ಲೆ ಬುರ್ಕಿ, ಖೌದಿ ಹರ್ಕಿ, ಜಾಡ ಮಲ್ಲಪ್ಪನ ಹಿರಿ ಹೆಣ್ತಿ).

ಖೌದಿ ಪಾಲಾಹಾಕು (ಕ್ರಿ) = ಕೌದಿ ಹೊಲಿಯಲು ಉದ್ದ ಆಗಲ ನಿರ್ಧರಿಸಿ ಅಂಚುಗಳನ್ನು ಹೊಲಿದು ಸಿದ್ಧಗೊಳಿಸು.

ಖೌಮೀ (ವಿ.) ಉ. = ಕೌಮೀ; ರಾಷ್ಟ್ರೀಯ.

ಖೌಳಾಸು (ಕ್ರಿ) = ಕುದಿ; ಕುದಿಸು; ಒಳಗೊಳಗೆ ಕೋಪಗೊಳ್ಳು, ಮುನಿಸು ತಾಳು.

ಖ್ಯಾಕರಿಸು (ಕ್ರಿ) = ಕೇಕರಿಸು; ಕೆಮ್ಮು.

ಖ್ಯಾಕುರ್ಸು (ಕ್ರಿ) = ಕೇಕರಿಸು; ಕೆಮ್ಮು.

ಖ್ಯಾದಗಿ (ನಾ) = ಕೇದಗೆ; ಕೇತಕಿ (ಹಾಡು:- ಒಂದೆಳಿ ಖ್ಯಾದಗಿ ನಿನಗ। ಗಂಧದ ಬಟ್ಟಲು ನನಗ। ಆದರ ಮ್ಯಾಲೊಂದಡಕಿಲ ಮಡಕಿಲ। ಮಂಚವ ಹಾಕಿದ॥)

ಖ್ಯಾಲ್ (ನಾ) = ಖ್ಯಾಲು; ಗಮನ; ಲಕ್ಷ್ಯ.

ಖ್ಯಾಲ ಬೈರಿ (ನಾ) = ಚಂಚಲ ಗುಣದವ; ಕ್ಷಣಿಕ ಸ್ವಭಾವದವ; ಸ್ವಚ್ಛಂದ ವಿಚಾರದವ; ಛಾನಸಿ; ಹರಾಮ.

ಖ್ಯಾಲಾಗು (ಕ್ರಿ) = ಮನಸ್ಸಾಗು; ಹಂಬಲವಾಗು.

ಖ್ಯಾಲಿಡು (ಕ್ರಿ) = ಲಕ್ಷ್ಯಕೊಡು; ಮನಸ್ಸಿಡು.

ಖ್ಯಾಲು (ನಾ) = ಖ್ಯಾಲ್; ಗಮನ; ಲಕ್ಷ್ಯ.

ಖ್ಯಾಲು ತಿರುಗು (ಕ್ರಿ) = ನೆನಪಾಗು; ಮನಸ್ಸಾಗು.

ಖ್ಯಾಲು ಬಿಡು (ಕ್ರಿ) = ಆಸೆ ಬಿಡು; ಮರೆತು ಬಿಡು.

ಖ್ವಾಜಾ (ನಾ) = ಖಾಜಾ ಬಂದೇ ನವಾಜ ಎಂಬ ಸೂಫೀ ಸಂತ; ಬೀದರಿನ ಖಾಜಾ ಮಹಮುದ ಗವಾನ ಎಂಬ ಐತಿಹಾಸಿಕ ಖ್ಯಾತಿಯ ಮಂತ್ರಿ.

ಖ್ವಾಡಿ (ನಾ) = ಕಬ್ಬು ಕಟಾವು ಮಾಡಿದ ಮೇಲೆ, ಕಬ್ಬಿನ ಮಡಿಗಳಿಗೆ ನೀರೂಡಿ ಮತ್ತೆ ಚಿಗುರಿಸಿದ ಕಬ್ಬಿನ ಬೆಳೆ.

ಖ್ವಾರಿ (ನಾ) = ಕೋರೆ. ಕ್ವಾರಿ.

ಖ್ವಾರಿ ಹಲ್ಲು (ನಾ) = ಕೋರೆ ಹಲ್ಲು; ಆನೆ ಮತ್ತು ಹಂದಿಗಳ ದವಡೆ ಮಗ್ಗುಲಿಗೆ ಮೂಡುವ ಉದ್ದ ಹಲ್ಲು.

ಗ

ಗ (ನಾ) = ಗರ್ವ

ಗ ಬರು (ಕ್ರಿ) = ಗರ್ವ ಉಂಟಾಗು; ಅಹಂಕಾರ ಬರು.

ಗಂಗಮ್ಮ ತಾಯಿ (ನಾ) = ಹರಿಯುವ ನೀರು; ನದಿ ನೀರು; ನಿಂತ ನೀರು; ಗಂಗೆ

ಗಂಗಾ (ನಾ) = ಗಂಗಾ ನದಿ; ಗಂಗೆ; ನೀರು; ಹರಿಯುವ ನೀರು; ನದಿಯ ನೀರು.

ಗಂಗಾಧರ (ನಾ) = ಶಿವ; ಗಂಗೆಯನ್ನು ಶಿರದಲ್ಲಿ ಇರಿಸಿಕೊಂಡವನು; ಕರ್ಕನಳ್ಳಿ ಕ್ಷೇತ್ರದ ಒಡೆಯ ಗಂಗಾಧರ ಬಕ್ಕಪ್ರಭು.

ಗಂಗಾಳ (ನಾ) = ಉಣ್ಣುವ ತಟ್ಟೆ; ನೀರು ತುಂಬುವ ಸತಾಳಿ; ಗಂಗಾಳ.

ಗಂಗಾಳ ಮಂಟಪ (ನಾ) = ದೊಡ್ಡಾಟದ ಮಂಟಪ; ಗಂಗಾಳ ಹೊಂದಿಸಿ ತಯಾರಿಸಿದ ಮಂಟಪ.

ಗಂಗಾಳ (ನಾ) = ಉಣ್ಣುವ ತಟ್ಟೆ; ನೀರು ತುಂಬುವ ಸತಾಳಿ.

ಗಂಗಿ (ನಾ) = ಗಂಗೆ; ಗಂಗಾ ನದಿ; ನೀರು; ಗಂಗಮ್ಮ; ಉತ್ತರ ದಿಕ್ಕು.

ಗಂಗಿದೊಗಲು (ನಾ) = ಎತ್ತು, ಹೋರಿ, ಆಕಳುಗಳ ಕುತ್ತಿಗೆಯ ಕೆಳಭಾಗದಲ್ಲಿ ಜೋತು ಬಿದ್ದಿರುವ ಮೃದುವಾದ ತೊಗಲು.

ಗಂಗಿ ಮಾರಿ (ನಾ) = ಉತ್ತರ ದಿಕ್ಕು; ಬಡಗಣ.

ಗಂಗಿ ವಾಲ್ (ವಿ) = ಉತ್ತರ ದಿಕ್ಕಿನ (ನಾ) ಉತ್ತರದಿಕ್ಕು; ಬಡಗಣ.

ಗಂಗೆತ್ತು (ನಾ) = ಬಗೆ ಬಗೆಯ ಆಟ ಮಾಡಿ ತೋರಿಸುವ ಸಿಂಗರಿಸಿದ ಎತ್ತು; ಕೋಲೆ ಬಸವ.

ಗಂಜಣಿ (ನಾ) = ಗಂಜ್ಣಿ; ಗಣಜಲ; ಒಂದು ಬಗೆಯ ಸುಂಕವುಳ್ಳ ಹುಲ್ಲು; ಸಣ್ಣ ಮಕ್ಕಳ ಮೈಮೇಲೆ ಉಂಟಾಗುವ ರಾಶಿ ರಾಶಿ ಪಕ್ಕುಗಳ ಒಂದು ರೋಗ.

ಗಂಜಳ (ನಾ) = ಮುಸುರೆ.

ಗಂಜಿ (ನಾ) = ಅಕ್ಕಿಯನ್ನು ಕುದಿಸಿ ಬಸಿದು ತೆಗೆದ ಸಾರ; ಹಿಟ್ಟಿನಿಂದ ಇಲ್ಲವೆ ರವೆಯಿಂದ ತಯಾರಿಸಿದ ದ್ರವರೂಪದ ಆಹಾರ; ಅಂಬ್ಲಿ; ಅಂಬಲಿ.

ಗಂಜಿ ಕೇಂದ್ರ (ನಾ) = ಭಾಲಕಿಯ ಚೆನ್ನ ಬಸವ ಪಟ್ಟ ದ್ದೇವರು ಬರಗಾಲದಲ್ಲಿ ಹಸಿದವರಿಗಾಗಿ ಹಂಚಲು ಸ್ಥಾಪಿಸಿದ ಅಂಬಲಿ ಪ್ರಸಾದದ ಮನೆ.

ಗಂಜು (ನಾ) = ವಸ್ತುಗಳನ್ನು ಮಾರುವ ಸ್ಥಳ;ಮಾರುಕಟ್ಟೆ;ರೈತ ಬಜಾರು; ಮಂಡಿ.

ಗಂಜೋಟಿ (ನಾ) = ಗಾಂಜಾ ಸೇದುವ ವ್ಯಸನಿ.

ಗಂಟಲು (ನಾ) = ಕೊರಳು; ಕುತ್ತಿಗೆ; ಕಂಠ; ಅನ್ನನುಂಗುವ ನಾಳ.

ಗಂಟಲು ಘಾಣ (ನಾ) = ಕುತ್ತಿಗೆಯ ಉರುಳು.

ಗಂಟಲು ಘುರ್ಘುರಿ (ನಾ) = ಸಾವಿನಂಥ ಸಂಕಟ; ಶೂಲದಂಥ ಸಂಕಟ.

ಗಂಟು (ನಾ) = ಹೂತಿಟ್ಟ ಹಣ; ಐಶ್ವರ್ಯ; ನಿಧಿ; ಸೇರಿಸಿ ಕಟ್ಟಿದುದು; ಕಟ್ಟು; ತೊಡಕು; ಸಿಕ್ಕು; ಗುಂಜು.

ಗಂಟುಕಟ್ಟು (ಕ್ರಿ) = ವಸ್ತುಗಳನ್ನು, ಧಾನ್ಯವನ್ನು ಬಟ್ಟೆಯಲ್ಲಿ ಸಂಗ್ರಹಿಸಿ ಮೂಟೆಕಟ್ಟು.

ಗಂಟು ಗದಡಿ (ನಾ) = ಸಾಮಾನು ಸರಂಜಾಮು.

ಗಂಟುಗಳ್ಳ (ನಾ) = ಇನ್ನೊಬ್ಬರಿಂದ ತೆಗೆದುಕೊಂಡ ಹಣವನ್ನು ಮುಳುಗಿಸುವವ; ಕಡ ಅಥವಾ ಸಾಲ ರೂಪದಲ್ಲಿ ತಂದದ್ದನ್ನು ಹಿಂತಿರುಗಿಸಲಾರದವನು.

ಗಂಟುಗಳ್ಳಿ (ನಾ) = ಇನ್ನೊಬ್ಬರಿಂದ ತೆಗೆದುಕೊಂಡ ಹಣವನ್ನು ಮುಳುಗಿಸುವವಳು; ಕಡ ಅಥವಾ ಸಾಲ ರೂಪದಲ್ಲಿ ತಂದದ್ದನ್ನು ಹಿಂತಿರುಗಿಸಲಾರದವಳು.

ಗಂಟು ಜರುಗು (ಕ್ರಿ) = ಭಾರ ಎತ್ತುವ ಮೂಲಕ ಹೊಟ್ಟೆಯಲ್ಲಿ ನೋವುಂಟಾಗು.

ಗಂಟು ಬಿಚ್ಚು (ಕ್ರಿ) = ರೊಟ್ಟಿಯ ಬುತ್ತಿಯನ್ನು ಬಿಚ್ಚು.

ಗಂಟು ಭೀಳು (ಕ್ರಿ) = ಭೇಟಿಯಾಗು; ಕೂಡಿ ಬರು; ಗಂಟು ಗಂಟಾಗು (ಜಾನಪದ ಹಾಡು:- ಎಂಟೆತ್ತು ತಕ್ಕೊಂಡು। ಸಂತಿಗೆ ನಾ ಹೋದ। ಗಂಟುಬಿದ್ದಿತ್ತೋ ಮುದಿ ರಂಡಿ। ಹೊಟ್ಟೀಲಿ। ಬಾಲ ಹುಟ್ಯಾನ ಬಸವಣ್ಣ।; ಗಾದೆ:- ದುಬಲ್ಗುಂಡಿದಲಾಲಾ। ಗಂಟ್ಬಿದ್ರ ಬಿಡಾಲ).

ಗಂಟುಮಲ್ಗಿ (ನಾ) = ಗಂಟು ಮಲ್ಲಿಗೆ; ಘಂಟ್ಮಲ್ಲಿಗಿ; ಮಲ್ಲಿಗೆ ಹೂವಿನ ಸರ; ಗಂಟಲು ಅಥವಾ ಕೊರಳಿನ ಸುತ್ತ ಉಂಟಾಗುವ ಗಂಟು ಗಂಟಾದ ಹುಣ್ಣು; ಹುಣ್ಣಿನ ಸರಮಾಲೆ; ಗಂಡ ಮಾಲೆ.

ಗಂಟು ಮಾರಿ (ನಾ) = ಗಂಟುಗಟ್ಟಿದ ಮೋರೆ; ಮುನಿದ ಮೋರೆ.

ಗಂಟ್ಗಟ್ಟು (ಕ್ರಿ) = ದಾರ ಅಥವಾ ಹಗ್ಗ ಗಂಟು ಗಂಟಾಗು; ಸಿಕ್ಕು ಗಟ್ಟು.

ಗಂಟ್ಗಳ್ಳ (ನಾ) = ಗಂಟುಗಳ್ಳ; ಇನ್ನೊಬ್ಬರಿಂದ ತೆಗೆದುಕೊಂಡ ಹಣವನ್ನು ಮುಳುಗಿಸುವವನು.

ಗಂಟಲ್ಫಾಣಾ (ನಾ) = ಕೊರಳಿಗುರುಳು; ಮಹಾ ಸಂಕಟ.

ಗಂಟ್ಮಲ್ಗಿ (ನಾ) = ಗಂಟು ಮಲ್ಗಿ (ನೋಡಿರಿ).

ಗಂಟ್ಹಾಕು (ಕ್ರಿ) = ಮದುವೆ ಮಾಡು; ಸಂಬಂಧ ಹೊಂದಿಸು; ಹಗ್ಗವನ್ನು ಜೋಡಿಸಿ ಕಟ್ಟು.

ಗಂಡ (ನಾ) = ಪತಿ; ಮದುವೆಯಾದ ಗಂಡು; ಪುರುಷ.

ಗಂಡಮಾಲ (ನಾ) = ಗಂಟಲ ಸುತ್ತಲಿನ ಹುಣ್ಣಿನ ಸಾಲು; ಗಂಟು ಮಲ್ಲಿಗೆ ಹುಣ್ಣು; ಗಂಟಲ ಹುಣ್ಣು.

ಗಂಡಸರ ಭೋಗಿ (ನಾ) = ಹೆಂಗಸರ ಭೋಗಿಯ ಮರುದಿನ ಅಂದರೆ ಸಂಕ್ರಾಂತಿಯ ದಿನ; ಸಂಕ್ರಾಂತಿ; ಗಂಡಸರು ಎಳ್ಳು ಮತ್ತು ಅಕ್ಕಿಯ ಕರಟಿಗೆ ಬಳಿದುಕೊಂಡು ಮಾಡುವ ಸ್ನಾನದ ದಿನ.

ಗಂಡಾಗು (ಕ್ರಿ) = ಮಣಿಯದಂತಾಗು; ಮೀರಿ ಹೋಗು.

ಗಂಡಾಂತ್ರ (ನಾ) = ಸಂಕಟ; ಕಷ್ಟ; ಅನಿರೀಕ್ಷಿತ ಸಂಕಟ; ಗಂಡಾಂತರ.

ಗಂಡಾಳು (ನಾ) = ಕೂಲಿ ಕೆಲಸ ಮಾಡುವ ಗಂಡಸು.

ಗಂಡಿ (ನಾ) = ತಳ; ಬಂಡು.

ಗಂಡೀ ಚೂಡೇರು (ನಾ) = ಒಂದು ಜನಾಂಗ; ಅಲೆಮಾರಿ ಜನಾಂಗ.

ಗಂಡು (ನಾ) = ಪುರುಷ; ಮದುವೆಯ ವರ.

ಗಂಡು ಗಚ್ಚಿ (ನಾ) = ಗಂಡಸರಂತೆ ಹಾಕಿದ ಕಚ್ಚೆ; ನಿರಿಗೆಯನ್ನು ಹಿಂದಕ್ಕೆ ಹೊರಳಿಸಿ ಬಿಗಿದು ಕಟ್ಟಿದ ಹೆಂಗಸರ ಕಚ್ಚೆ; ವೀರ ಗಚ್ಚೆ.

ಗಂಡುಗುಳು (ನಾ) = ಗಂಟು ಗಟ್ಟಿದ ಉಗುಳು; ಅಂಟಂಟಾದ ಉಗುಳು; ಕಫ.

ಗಂಡು ಜಾಣಿ (ನಾ) = ಗಣ ಜಾಣೆ; ಗಂಡಿನಂತೆ ವರ್ತಿಸುವವಳು; ಗಣ್ಜಾಣೆ.

ಗಂಡು ಬೀರಿ (ನಾ) = ಗಂಡಿನಂತೆ ವರ್ತಿಸುವ ಹೆಣ್ಣು; ಪಿರಿ ಪಿರಿ ತಿರುಗುವ ಹೆಣ್ಣು.

ಗಂಡೆ (ನಾ) = ರೊಕ್ಕ; ದುಡ್ಡು; ನಾಲ್ಕು ದುಡ್ಡು ; ಬಾಣ್ಣೆ.

ಗಂಡೆ ಎಣ್ಸು (ಕ್ರಿ) = ನಾಲ್ಕು ದುಡ್ಡಿನ ಗುಂಪು ಮಾಡಿ ಎಣಿಸು.

ಗಂಡ್ಜಾಣಿ (ನಾ) = ಗಣ್ಜಾಣೆ; ಗಂಡು ಜಾಣೆ; ಮಂಗಳ ಮುಖಿ.

ಗಂಡಾ (ನಾ) = ಹೊಲಸು.

ಗಂಡಾ ಧಂದಾ (ನಾ) = ಕೊಳಕು ಕೆಲಸ, ಹೀನ ಕಾರ್ಯ.

ಗಂದಿ ಗುಡಿ (ನಾ) = ಗಂಧೆಣ್ಣೆ ಮಾರುವವನು.

ಗಂದುಕು (ನಾ) = ಗಂಧಕ; ಹಳದಿ ಬಣ್ಣದ ಒಂದು ರಸಾಯನ ವಸ್ತು.

ಗಂಧ (ನಾ) = ವಾಸನೆ; ಸುವಾಸನೆ; ಪರಿಮಳ.

ಗಂಧೆಣ್ಣಿ (ನಾ) = ಸುವಾಸನೆ ಬೀರುವ ಎಣ್ಣೆ.

ಗಂಪಾ (ನಾ) ತೆ. = ಬುಟ್ಟಿ; ಪುಟ್ಟಿ; ಗಂಪೆ.

ಗಂಪಾಗುತ್ತಿ (ನಾ) = ಅಧಿಕವಾದ ದುಡಿಮೆ; ಶಕ್ತಿ ಮೀರಿದ ದುಡಿಮೆ. ಬುಟ್ಟಿ ಅಳತೆಯ ಗುತ್ತಿಗೆ

ಗಂಭೀರ (ವಿ.) = ಘನವಾದ; ಭವ್ಯವಾದ.

ಗಕ್ಕಂತ = ಒಮ್ಮಿದೊಮ್ಮೆ; ಏಕಾಏಕಿ; ಗರಕ್ಕಂತ; ಗಕ್ಕನೆ.

ಗಗ್ಗಿ (ನಾ) = ತೊಟ್ಟಿಲು ತಳದ ಹಗ್ಗದ ಹೆಣಿಕೆಯ ಚೌಕಟ್ಟು.

ಗಚಾಗಚ = ವಾಹನ ಎತ್ತೆತ್ತಿ ಬಡಿವ ಕ್ರಿಯೆಯ ಸೂಚನೆ.

ಗಚಾಟಿ (ನಾ) = ಗಲ್ಲಕ್ಕೆ ಬೆರಳು ತಿವಿಯುವಿಕೆ.

ಗಚಾಟಿತಿವಿ (ಕ್ರಿ) = ಗಲ್ಲಕ್ಕೆ ಬೆರಳು ತಿವಿ, ಚುಚ್ಚು.

ಗಚಾಟಿ ಹರಿ (ಕ್ರಿ) = ಗಲ್ಲಕ್ಕೆ ಜೋರಾಗಿ ಚಿವುಟು.

ಗಚ್ಕಿ (ನಾ) = ವಾಹನದಲ್ಲಿ ಎತ್ತೆತ್ತಿ ಬಡಿಯುವಿಕೆ.

ಗಚ್ಚ ಗಚ್ಚ (ದ್ವಿ) = ಕುಟ್ಟುವ, ಚುಚ್ಚುವ, ಎತ್ತೆತ್ತಿ ಬಡಿವ ಕ್ರಿಯೆ.

ಗಚ್ಚಿನ ಗ್ವಾಡಿ (ನಾ) = ಗರಸು ಮತ್ತು ಕಲ್ಲಿನಿಂದ ಕಟ್ಟಿದ ಗೋಡೆ.

ಗಚ್ಚಿನ ಘಾಣಾ (ನಾ) = ಗರಸು ತಯಾರಿಸುವ ಗಾಣ; ಗಚ್ಚಿನ ಗಾಣ.

ಗಚ್ಚು (ನಾ) = ಗೋಡೆ ಕಟ್ಟಲು ಬಳಸುವ ಗಾರೆ; ಗರಸು.

ಗಜ (ನಾ) = ಎರಡು ಮೊಳ ಇಲ್ಲವೆ ಮೂರು ಅಡಿಯ ಅಳತೆ.

ಗಜಕರ್ಣ (ನಾ) = ಇಸುಬು; ಒಂದು ಬಗೆಯ ಚರ್ಮರೋಗ.

ಗಜಗ (ನಾ) = ಒಂದು ಪ್ರಕಾರದ ಮುಳ್ಳು ಬಳ್ಳಿ ಮತ್ತು ಅದರ ಬೀಜ.

ಗಜಗಟ್ಲೆ = ಗಜ ಉದ್ದದಷ್ಟು; ಅನೇಕ ಗಜಗಳಷ್ಟು.

ಗಜಗಿಣ್ತಿ (ನಾ) = ಗಜದ ಅಳತೆ; ಮೂರು ಫೀಟಿನ ಅಳತೆಮಾನ, ಗಜದ ಲೆಕ್ಕಕನುಸಾರ ಮಾಪನ.

ಗಜನಿಂಬಿ (ನಾ) = ಉದ್ದ ಹಾಗೂ ದಪ್ಪವಿರುವ ನಿಂಬೆ ಜಾತಿಯ ಒಂದು ಪ್ರಕಾರದ ಕಾಯಿ.

ಗಜಗಾ (ನಾ) = ಒಂದು ಪ್ರಕಾರದ ಮುಳ್ಳಿನ ಪೊದೆ ಹಾಗೂ ಮಹಿಳೆಯರು (ಬಾಲೆಯರು) ಆಡಲು ಬಳಸುವ ಅದರ ಗುಂಡಾದ ಕಾಯಿ; ಗಜಗ.

ಗಜರಾ (ನಾ) = ಹಾರ; ಹೂವಿನ ಹಾರ; ದಪ್ಪವಾದ ಹಾರ.

ಗಜಲ್ (ನಾ) = ಉರ್ದುಭಾಷೆಯ ಒಂದು ಛಂದಸ್ಸು; ಉರ್ದು ಹಾಡಿನ ಒಂದು ಬಗೆ.

ಗಜುಗ (ನಾ) = ಗಜಗ, ಗಜಗಾ (ನೋಡಿರಿ).

ಗಜ್ಜರಿ (ನಾ) = ಒಂದು ಬಗೆಯ ಸಿಹಿಯಾದ ತರಕಾರಿ ಗಡ್ಡೆ.

ಗಜ್ರಿ (ನಾ) = ಗಜ್ಜರಿ (ನೋಡಿರಿ).

ಗಟಗಟ (ದ್ವಿ) = ನೀರು, ಹಾಲು ಇತ್ಯಾದಿ ಕುಡಿಯುವಾಗ ಆಗುವ ಗಂಟಲಲ್ಲಿಯ ಸದ್ದು.

ಗಟಾಯಿ (ನಾ) = ಗಟಯಿ; ಗಟ್ಟೈ; ಕಟವಾಯ; ದಾಡೆ; ದಂಷ್ಟ್ರಾ.

ಗಟ್ಟಾ (ನಾ) = ಬೀಡಿಯ ಅಥವಾ ನೋಟಿದ ಕಟ್ಟು, ಬಂಡಲ್ಲು.

ಗಟ್ಟಾಕಟ್ಟು (ಕ್ರಿ) = ಕಡ್ಡಿ, ಬೀಡಿ, ನೋಟು, ಇತ್ಯಾದಿಗಳನ್ನು ಹೊಂದಿಸಿ ಕಟ್ಟು.

ಗಡಗಂಚಿ (ನಾ) = ಗಡಂಚಿ; ಗಡವಂಚಿ.

ಗಡಗಡ (ದ್ವಿ) = ಓಡುವ ಕ್ರಿಯೆ.

ಗಡಗಿ (ನಾ) = ಮಡಿಕೆ; ಮಣ್ಣಿನ ಪಾತ್ರೆ.

ಗಡಗುಪ = ಮಟಮಾಯ.

ಗಡಂಚಿ (ನಾ) = ಗಡವಂಚಿ; ವಸ್ತುಗಳು, ಧಾನ್ಯದ ಚೀಲ ಇತ್ಯಾದಿಗಳನ್ನು ಗೋಡೆಗೆ ಆನಿಸಿ ಇಡಲು ಮಾಡಿದ ಅಟ್ಟ; ಗಡಗಂಚಿ.

ಗಡಚಿಕ್ಕು (ಕ್ರಿ) = ಮಿತಿ ಮೀರಿದ ಸದ್ದಿನಿಂದ ಕಿವಿ ಏನೂ ಕೇಳದಂತಾಗು.

ಗಡಚು (ವಿ.) = ದಟ್ಟವಾದ ಗಹನವಾದ; ಗಟ್ಟಿಯಾದ; ಗಡಸು.

ಗಡಚು ಬೆಳಿ (ನಾ) = ದಟ್ಟಬಾದ ಬೆಳೆ.

ಗಡಬಡ (ನಾ) = ಗಡಿಬಿಡಿ; ಅವಸರ; ಆತುರ; ಗೊಂದಲ; ಗದ್ದಲ.

ಗಡವಂಚಿ (ನಾ) = ಗಡಂಚಿ (ನೋಡಿರಿ).

ಗಡವಂತಿ (ನಾ) = ಹುಮ್ನಾಬಾದ ತಾಲೂಕಿನ ಮಾಣಿಕನಗರ ಸಮೀಪವಿರುವ ಒಂದು ಹಳ್ಳಿ ಪ್ರಸಿದ್ಧ ಸಾಹಿತಿ, ಹಿಂದಿ-ಕನ್ನಡ ಸಾಹಿತಿ ಬಿ.ಎಸ್.ಖೂಬಾ (ಬಂಡೆಪ್ಪ ಖೂಬಾ) ಎಂಬವರ ಕಾಯಕ ಕ್ಷೇತ್ರ.

ಗಡಿ (ನಾ) = ಸಣ್ಣ ಕೋಟೆ; ಆಟದ ಹುದ್ದರಿ; ಎಲ್ಲೆ; ಅಂಚು; ಸೀಮೆ.

ಗಡಿಕುಸ್ನೂರು (ನಾ) = ಔರಾದ ತಾಲೂಕಿನ ಒಂದು ಹಳ್ಳಿ. ಯುವ ಕವಿ ರಮೇಶ ಬಿರಾದಾರರ ಹುಟ್ಟೂರು.

ಗಡಿಗೌಡಗೈ (ನಾ) = ಗಡಿಗೌಡಗಾಂವ ಎಂದು ರೂಪಾಂತರ ಗೊಂಡ ಔರಾದ ತಾಲೂಕಿನ ಒಂದು ಹಳ್ಳಿ.

ಗಡಿಬಿಡಿ (ನಾ) = ಗಡಬಡ; ಆತುರ; ತ್ವರೆ; ಗದ್ದಲ.

ಗಡಿಬಿಡಿ ಮಾಡು (ಕ್ರಿ) = ತ್ವರೆ ಮಾಡು; ಆತುರ ಪಡು; ಗದ್ದಲ ಮಾಡು.

ಗಡೇರ ಹೊಲ (ನಾ) = ಗಡಿ ಸಂರಕ್ಷಕರಿಗೆ ಉಪ ಜೀವನಕ್ಕಾಗಿ ಸರಕಾರ ಕೊಟ್ಟ ಹೊಲ.

ಗಡೇರು (ನಾ) = ಗಡಿಕಾಯುವವರು.

ಗಡ್ಗಿ (ನಾ) = ಗಡಿಗೆ; ಮಡಿಕೆ; ಮಣ್ಣಿನ ಪಾತ್ರೆ.

ಗಡ್ಗಿ ಖೊಡಬ್ಯಾಳಿ (ನಾ) = ಮಣ್ಣೆತ್ತಿನ ಅಮಾವಾಸ್ಯೆದಂದು ಬೆರಕೆ ಹಿಟ್ಟನ್ನು ನೀರು, ಮುಟ್ಗಿ ತೊಪ್ಪಲು ಇತ್ಯಾದಿಗಳೊಂದಿಗೆ ನಾದಿ, ಮುಟ್ಟಿಗೆಯಲ್ಲಿ ಒತ್ತಿ ಕಡುಬು, ಕೋಡುಬಳೆ ತಯಾರಿಸಿ ಮಡಿಕೆಯಲ್ಲಿ ಕುದಿಸಿದ್ದು.

ಗಡ್ಯಾ (ನಾ) = ಕಂಭದ ನೆತ್ತಿಯ ಚಚೌಕದ ನಾಲ್ಕು ಮೂಲೆಗಳ ಜಾಗ.

ಗಡ್ಡಾ (ನಾ) = ಗಡ್ಡ; ಗಟಾಯಿ ಮೇಲೆ ಬೆಳೆದ ಕೂದಲು.

ಗಡ್ಡಾಕಾಯು (ಕ್ರಿ) = ಗಡ್ಡ ಬೋಳಿಸದಂತೆ ಇರು.

ಗಡ್ಡಾ ಬೋಳಿಸು (ಕ್ರಿ) = ಮಾರಿಗಪ್ಪ ಮಾಡು; ದಾಡಿ ಬೋಳಿಸು.

ಗಡ್ಡಾ ಮೀಸಿ (ನಾ) = ಗಟಾಯಿಯ ಮೇಲೆ ಮತ್ತು ಮೇಲ್ತುಟಿಯ ಮೇಲೆ ಬೆಳೆದ ಕೇಶರಾಶಿ.

ಗಡ್ಡಿ (ನಾ) = ಗಡ್ಡೆ; ಕಂದಮೂಲ; ಶರೀರದ ಗಡ್ಡೆ ಗಟ್ಟಿದ ಭಾಗ; ಗಡ್ಡೆ ಬೇನೆ; ಘತ್ರ.

ಗಡ್ಡಿ ಕರಗು (ಕ್ರಿ) = ಗಟ್ಟಿಗೊಂಡು ಕಲ್ಲಂತಾಗಿದ್ದ ಶರೀರದ ಭಾಗವು ಮೊದಲಿನಂತೆ ಮೆದುವಾಗು.

ಗಡ್ಡಿಗಟ್ಟು (ಕ್ರಿ) = ಶರೀರದ ಯಾವುದೇ ಭಾಗದಲ್ಲಿ ಮಾಂಸ ಮತ್ತು ಚರ್ಮ ಗಟ್ಟಿ ಕಲ್ಲಂತಾಗು.

ಗಡ್ಡಿಬ್ಯಾನಿ (ನಾ) = ಗಡ್ಡೆ ಬೇನೆ; ಪ್ಲೇಗು; ಇಲಿಯ ಮೇಲಿನ ಚಿಕ್ಕಾಡುಗಳಿಂದ ಹರಡುವ ಗಡ್ಡೆ ಬೇನೆ.

ಗಣ (ನಾ) = ಶಿವನ ಪ್ರಮಥ (ವಚನ:- ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ- ಬಸವಣ್ಣನವರು).

ಗಣಜಾಣಿ (ನಾ) = ಗಂಡಿನಂತೆ ವರ್ತಿಸುವ ಗಯ್ಯಾಳಿ ಹೆಣ್ಣು; ಹೆಣ್ಣಿನಂತೆ ವರ್ತಿಸುವ ಗಂಡು.

ಗಣತಿ (ನಾ) = ಎಣಿಕೆ; ಎಣಿಸುವಿಕೆ; ಮೋಜಣಿ.

ಗಣನಾಥ (ನಾ) = ಗಣಪತಿ (ಕೋಲಾಟದ ಹಾಡು:- ಗಣನಾಥಾ ಗೌರಿ ಪುತ್ರಾನಮೋ ನಮೋ। ಸಿರಿ ಗೌರಿ ತನಯಗತಿ ನಮೋ ನಮೋ।।).

ಗಣಪಣ್ಣ (ನಾ) = ಗಣಪತಿ; ಗಜಾನನ.

ಗಣಪತಿ (ನಾ) = ಗಣಂಗಳ ಒಡೆಯ; ಗಣೇಶ; ಗೌರಿಯ ಮಗ (ಕೋಲಿನ ಹಾಡು:- ಗಣಪತಿ ಗಣರಾಜಾ।

ಮಾಡುವ್ವೆ ಪೂಜಾ। ಮಾಡುವೆ ಪೂಜಾ। ನಿತ್ತೆ ರೋಜಾ॥).

ಗಣಪ್ಪ (ನಾ) = ಗಣಪತಿ (ನೋಡಿರಿ).

ಗಣಾಚಾರಿ (ನಾ) = ಕಾಯಕದ ಜಂಗಮ (ಗಾದೆ:- ಗಂಡ ಬಿಟ್ಟು ಬೆರ್ಣೀ, ಗಣಾಚಾರಿ ಬಿಡಾಲ).

ಗಣುಸ್ತಾನ (ನಾ) = ಗಂಡಸುತನ; ಪುರುಷತ್ವ.

ಗಣ್ಕಿ (ನಾ) = ಗಣಿಕೆ; ಜೋಳ, ಕಬ್ಬುಗಳ ದಂಟಿಗೆ ಇರುವ ಖಂಡು ಖಂಡಾದ ಗುರುತು (ಉದಾ:- ಕಬ್ಬಿನ ಗಣಿಕೆ; ಜೋಳದ ಗಣಿಕೆ; ಬಿದಿರು ಗಣಿಕೆ ಇತ್ಯಾದಿ).

ಗಣ್ಜಾಣಿ (ನಾ) = ಗಣಜಾಣಿ (ನೋಡಿರಿ)

ಗಣ್ಜಲು (ನಾ) = ಸಣ್ಣ ಮಕ್ಕಳ ಮೈ ಮೇಲೆ ರಾಶಿ ರಾಶಿಯಾಗಿ ಉಂಟಾಗುವ ಪಕ್ಕುಗಳ ರೋಗ; ಗಂಜಣಿ ಹುಲ್ಲು; ಸುಂಕವುಳ್ಳ ಹುಲ್ಲು; ಒಂದು ಪ್ರಕಾರದ ಸುಗಂಧಿ ಹುಲ್ಲು).

ಗಣ್ಸು (ನಾ) = ಗಂಡಸು; ಪುರುಷ.

ಗಣ್ಸುಕೂಸು (ನಾ) = ಗಂಡು ಶಿಶು.

ಗಣ್ಸುಭೋಗಿ (ನಾ) = ಹೆಂಗಸರ ಭೋಗಿಯ ಮರು ದಿನ; ಸಂಕ್ರಾಂತಿ; ಮಕರ ಸಂಕ್ರಮಣ; ಈ ದಿನ ಗಂಡಸರು ಎಳ್ಳು ಮತ್ತು ಅಕ್ಕಿಯ ಕರಟಿಗೆ ಲೇಪಿಸಿಕೊಂಡು ಸ್ನಾನ ಮಾಡುವ ದಿನ.

ಗಣ್ಸೂರು (ನಾ) = ಗಂಡಸರು.

ಗತಿ (ನಾ) = ಪರಿಸ್ಥಿತಿ; ಇರುವ ಸ್ಥಿತಿ; ಅವಸ್ಥೆ; ಹಾಲತ್ತು; ಆಧಾರ (ಉದಾ:- ಗತಿಯಿಲ್ಲದೆಂಕಮ್ಮಗೆ ಗತಿಯಾದ ಕರಿಬಸವ).

ಗತಿ (ಅ) = ಹಾಂಗ; ಹಾಂಗೆ; ಹಾಗೆ (ಉದಾ:- ಅವನ್ಗತಿ ಇನ್ನೊಬ್ಬಾಂವ ಹುಟ್ಟೇ ಇಲ್ಲ).

ಗತಿ (ನಾ) = ಸ್ಥಿತಿ; ಪರಿಸ್ಥಿತಿ; ನಿರ್ವಾಹ; ಆಧಾರ (ಉ:- ಗತಿ ಇಲ್ಲದ ಯಂಕಮ್ಮಗೆ ಗತಿಯಾದ ಕರಿಬಸವ).

ಗತಿಗೆಡು (ಕ್ರಿ) = ಸ್ಥಿತಿಕೆಟ್ಟು ಹೋಗು; ಆಧಾರವಿಲ್ಲದಂತಾಗು; ಆಶ್ರಯ ತಪ್ಪು.

ಗತಿಗೇಡಿ (ನಾ) = ಗತಿಗೆಟ್ಟವನು(ಳು); ಇದ್ದುದೆಲ್ಲವನ್ನು ಕಳೆದುಕೊಂಡವನು(ಳು); ದರಿದ್ರ; ದುರ್ದೈವಿ; ನಿರ್ಭಾಗ್ಯ (ಗ್ಯೆ).

ಗತಿಯಾಗು (ಕ್ರಿ) = ಆಧಾರವಾಗು; ಸಹಾಯಕ್ಕೆ ನಿಲ್ಲು; ಸಹಕಾರ ಕೊಡು.

ಗತ್ತಾಗು (ಕ್ರಿ) = ಹೊಂದಿಕೆಯಾಗು; ಜೋಡಾಗು.

ಗತ್ತು (ನಾ) = ತಾಳಮಾನದ ಒಂದು ಲಯ.

ಗತ್ತು ಗೂಡು (ಕ್ರಿ) = ಒಂದು ಗೂಡು; ಹೊಂದಿಕೆಯಾಗು; ವಿಚಾರ ಸಾಮ್ಯ ಉಂಟಾಗು.

ಗದಗದ ಗದ = ನಡುಗುವಿಕೆಯ ರೀತಿ, ಗತಿ.

ಗದಡಾಗು (ಕ್ರಿ) = ಗಡ್ಡೆಗಟ್ಟು; ಗಡ್ಡೆಬೇನೆಯಾಗು.

ಗದಡಿ (ನಾ) = ಗದಡು; ಗದುಡು; ಗಡ್ಡೆ.

ಗದುಡು (ನಾ) = ಗದಡು; ಗದಡಿ; ಗಡ್ಡೆ.

ಗದ್ದಲ (ನಾ) = ಗೊಂದಲ; ಗಲಾಟೆ; ಹೊಲಸು.

ಗದ್ದಾರ (ನಾ) = ದೇಶದ್ರೋಹಿ; ಅಪ್ರಮಾಣಿಕ; ಬೇಮಾನ್.

ಗದ್ದಾರಿ (ನಾ) = ದೇಶದ್ರೋಹ; ರಾಷ್ಟ್ರಘಾತ.

ಗದ್ದಿ (ನಾ) = ನೀರಾವರಿ ನೆಲ್ಲು ಬೆಳೆವ ಭೂಮಿ; ಗದ್ದೆ.

ಗದ್ಗಿ (ನಾ) = ಗದ್ದುಗೆ; ಪೀಠ; ಸಿಂಹಾಸನ; ಸಮಾಧಿ.

ಗದ್ದಗಿ (ನಾ) = ಗದ್ದುಗೆ; ಪೀಠ; ಸಿಂಹಾಸನ; ಸಮಾಧಿ.

ಗಪಚುಪ್ಪು (ನಾ) = ಒಂದು ಪ್ರಕಾರದ ತಿಂಡಿ; ಶಾಂತ; ಮೌನವಾಗಿರುವಿಕೆ.

ಗಪಾತ್ಲೆ = ಮುಕಾಟ್ಲೆ; ಮೌನವಾಗಿ. (ಉದಾ: ನಾ ಗಪಾತ್ಲೆ ಕುಡ್ತಾ। ನೀ ಗುಬುತ್ಲೆ ಒಯ್ಯಿ.)

ಗಪ್ಪನೆ = ಕೂಡಲೆ; ಥಟ್ಟನೆ.

ಗಪ್ಪಾ (ನಾ) = ಹರಟೆ; ಗಪ್ಶೆಪ್.

ಗಪ್ಪಾಗು (ಕ್ರಿ) = ಮಾತಾಡದಿರು; ಶಾಂತನಾಗಿರು; ಸುಮ್ಮನಾಗಿರು.

ಗಪ್ಪು = ಶಾಂತ; ಗಪ್ಚಪ್ಪು; ಮೌನ.

ಗಪ್ಪುಚುಪ್ಪು = ಶಾಂತ; ಮಾತಾಡದಿರುವಿಕೆ.

ಗಪ್ಪು ಹೊಡಿ (ಕ್ರಿ) = ಶಾಂತನಾಗು; ಮೌನತಾಳು; ಸದ್ದು ಮಾಡದಿರು.

ಗಪ್ಶೆಪ್ (ನಾ) = ಹರಟೆ; ಕಾಲಹರಣ.

ಗಫಲತ್ತು (ನಾ) ಉ. = ಮೋಸ; ಧೋಕಾ, ಮೈಮರೆವು.

ಗಫಲತ್ತಾಗ = ಮೋಸದಿಂದ, ಮೈಮರೆವಿನಲ್ಲಿ.

ಗಬರು (ನಾ) = ಗುಮ್ಮಣ್ಣ; ಜಾಣ; ಚತುರ.

ಗಬಾಡ (ನಾ) = ಒರಟು.

ಗಬ್ಬ (ಅ) = ಆಕಳು, ಎಮ್ಮೆ, ಕುರಿ, ಮೇಕೆ ಆದಿಗಳ ಗರ್ಭ; ಗರ್ಭ.

ಗಬ್ಬಾ ಉಚ್ಚೊ (ಕ್ರಿ) = ಪ್ರಾಣಿಗಳ ಗರ್ಭಪಾತವಾಗು.

ಗಬ್ಬಾಹೋಗು (ಕ್ರಿ) = ಗರ್ಭಧಾರಣ ಮಾಡು (ಎಮ್ಮೆ, ಆಕಳು, ಕುರಿ, ಮೇಕೆ, ಕುದುರೆ, ಕತ್ತೆ ಆದಿ ಗರ್ಭಧಾರಣ ಮಾಡು).

ಗಬ್ಬು (ವಿ.) = ಹೊಲಸು; ಕೆಟ್ಟ.

ಗಬ್ಬುನಾತ (ನಾ) = ದುರ್ನಾತ; ದುರ್ಗಂಧ.

ಗಬ್ಬುನಾರು (ಕ್ರಿ) = ದುರ್ಗಂಧ ಹರಡು; ಕೆಟ್ಟ ವಾಸನೆ ಬೀರು.

ಗಬ್ಬೇಳು (ಕ್ರಿ) = ಹೊಲಸುನಾರು; ಅಪಕೀರ್ತಿ ಹರಡು.

ಗಮ್ಮತ್ತು (ನಾ) = ವಿಚಿತ್ರವಾದದ್ದು; ತಮಾಷೆ; ಮೋಜು.

ಗಯ್ಯಾಳಿ (ನಾ) = ಅಡವಿ ಅಕಳಂತೆ ಸುತ್ತಾಡುವವಳು; ಭಯವಿಲ್ಲದವಳು; ದುಷ್ಟ ಸ್ವಭಾವದವಳು.

ಗಯ್ರಾಣಿ (ನಾ) = ಗೈರಾಣಿ; ಗಾಯ್ರಾಣಿ; ಅಡವಿ ಸಂಚಾರಿ ಅಕಳು; ಅಡವಿ ಅಕಳಿನಂತೆ ಸಂಚರಿಸುವವಳು.

ಗರಂ (ವಿ) = ಬಿಸಿ; ಬೆಚ್ಚಗಿನ; ಸುಡುವ (ಗಾದೆ:- ಹಂಚು ಗರಂ ಇದ್ದಾಗೇ ರೊಟ್ಟಿ ಸುಟ್ಕೊಬೇಕು).

ಗರಂಗರಂ (ದ್ವಿ) = ಬಿಸಿಬಿಸಿ; ಸುಡುಸುಡುವ.

ಗರಕ್ಕಂತ (ಅ) = ಗಕ್ಕಂತ; ಒಮ್ಮಿದೊಮ್ಮೆ; ಏಕಾಏಕಿ; ಥಟ್ಟನೆ.

ಗರಗರ (ಧ್ವಿ) = ವೇಗವಾಗಿ.

ಗರರರ = ಗಿಮಿಗಿಮಿ.

ಗರಸು (ನಾ) = ಗಚ್ಚು; ಗಾರೆ.

ಗರೀಬ (ನಾ) = ಬಡವ; ದರಿದ್ರ (ಗಾದೆ:- ಗರೀಬ್ಕೀ ಬೀಬೀ ಸಬ್ಕೀ ಭಾಬೀ).

ಗರೀಬ ನನ್ನಾ (ನಾ) = ಮಂಗಲಗಿಯ ನನ್ನಾ ಸಾಬ ಎಂಬ ಕವಿಯ ಕಾವ್ಯನಾಮ.

ಗರೀಬಿ (ನಾ) = ಬಡತನ; ದಾರಿದ್ರ್ಯ.

ಗರ್ಜಿ (ನಾ) = ಸ್ವಾರ್ಥಿ; ಅಗತ್ಯ ಮುಗಿದ ಕೂಡಲೆ ತಿರುಗಿ ಬೀಳುವವನು(ಳು).

ಗರ್ಜಿನ ಪೂರ್ತೆ = ಅಗತ್ಯಕ್ಕೆ ತಕ್ಕಷ್ಟು.

ಗರ್ಜು (ನಾ) = ಅಗತ್ಯ; ಅವಶ್ಯಕತೆ; ಜರೂರತ್ತು; (ಗಾದೆ:- ಆಯಿತ್ನನ್ನ ಗರ್ಜು, ಇನ್ಯಾತುರ್ದರ್ದು?).

ಗರ್ತಿ (ನಾ) = ಗರತಿ; ಪತಿವ್ರತೆ (ನಾಟಕ ಹಾಡು:- ಸಾಬಾ ಶಾಮಾ ಇಬ್ಬರು ಕೂಡಿ ಇಟ್ಟಾರವ್ವಾ ಮನಾ। ಗರ್ತಿ ಎಂಬುದನು ತೋರಿಸಿಕುಡುವೆ ನಾನವರಿಗೆ ಒಂದಿನಾ).

ಗರ್ದನ (ನಾ) = ಗೋಣು; ಕುತ್ತಿಗೆ; ಗರ್ದನಿ.

ಗರ್ದನಿ (ನಾ) = ಗರ್ದನ (ನೋಡಿರಿ).

ಗರ್ದಿ (ನಾ) = ಗದ್ದಲ; ಗಲಿಬಿಲಿ.

ಗರ್ದಿಎಬ್ಬುಸು (ಕ್ರಿ) = ಗದ್ದಲಮಾಡು; ಗಲಾಟೆ ಮಾಡು.

ಗರ್ಭಗುಡಿ (ನಾ) = ದೇವಾಲಯದಲ್ಲಿಯ ಮೂಲ ವಿಗ್ರಹವಿರುವ ಒಳಭಾಗ; ಗರ್ಭಗ್ರಹ.

ಗರ್ಮಾ ಗರಂ = ಬಿಸಿಬಿಸಿ.

ಗರ್ಮಾಗರ್ಮಿದಾಗ = ಕಾವಿರುವಾಗಲೆ; ಹದವಿರುವಾಗಲೆ.

ಗರ್ಮಿ (ನಾ) ಉ. = ಉಷ್ಣತೆ; ಕಾವು; ಸೆಕೆ.

ಗರ್‍ರಂತ = ಗರಕ್ಕನೆ; ಗಿಮಿಗಿಮಿಯಾಗಿ.

ಗರ್ವಿಷ್ಟ (ನಾ) = ಅಹಂಕಾರಿ; ಮದಾಂಧ.

ಗಲತಿ (ನಾ) = ಗಲ್ತಿ; ತಪ್ಪು; ಚೂಕು.

ಗಲಬರಿಸು (ಕ್ರಿ) = ಪಾತ್ರೆ ಮುಂತಾದುವನ್ನು ಉಜ್ಜಿ ನೀರಿನಲ್ಲಿ ತೊಳೆ.

ಗಲಾ (ನಾ) ಉ. = ಕೊರಳು; ಅಂಗಿಯ ಕೊರಳ ಪಟ್ಟಿ.

ಗಲೀಜು (ನಾ) ಉ. = ಹೊಲಸು; ಕೊಳಕು; ಕೊಳೆ.

ಗಲ್ತನಿ ಚೀಲ (ನಾ) = ಸಣಬಿನ ನಾರಿನಿಂದ ಇಲ್ಲವೆ ಫುಂಡಿ ನಾರಿನಿಂದ ತಯಾರಿಸಿದ ಚೀಲ, ಬಾರ್ದಾನಿ.

ಗಲ್ತಿ (ನಾ) ಉ. = ಗಲತಿ; ತಪ್ಪು; ಚೂಕು.

ಗಲ್ತಿ ಮಾಡು (ಕ್ರಿ) = ತಪ್ಪು ಮಾಡು.

ಗಲ್ತಿ ಸರಿಮಾಡ್ಕೊ (ಕ್ರಿ) = ತಪ್ಪು ತಿದ್ದಿಕೊ.

ಗಲ್ಲ (ನಾ) = ಕೆನ್ನೆ; ಮೆಲುಕಿನ ಕೆಳಭಾಗ.

ಗಲ್ಲಮೀಸಿ (ನಾ) = ಗಲ್ಲದಮೇಲೆ ಬೆಳೆಸಿದ ಮೀಸೆ.

ಗಲ್ಲಾ (ನಾ) = ಹಣದ ಪೆಟ್ಟಿಗೆ; ತಿಜೋರಿ; ಗಲ್ಲ.

ಗಲ್ಲಾ ಚಿವುಟು (ಕ್ರಿ) = ಗಲ್ಲವನ್ನು ಎರಡು ಬೆರಳಿನ ಉಗುರುಗಳಿಂದ ಅದುಮು.

ಗಲ್ಲಾದ ಮ್ಯಾಲ ಕೂಡು (ಕ್ರಿ) = ಹಣಕಾಸು ವ್ಯವಹಾರ ನೋಡಿಕೊ; ತಿಜೋರಿ ವ್ಯವಹಾರ ನೋಡಿಕೊ.

ಗಲ್ಲಾಮಾಲಕ (ನಾ) = ಹಣದ ಪೆಟ್ಟಿಗೆಯ ಒಡೆಯ; ತಿಜೋರಿ ಮಾಲಿಕ.

ಗಲ್ಲಾಹಿಂಡು (ಕ್ರಿ) = ಕೆನ್ನೆಗೆ ಚಿವುಟು; ಬೇನೆಯಾಗುವಂತೆ ಗಲ್ಲವನ್ನು ಒಡಿಮುರಿ (ಜಾನಪದ ಪ್ರಾಸ:- ಗಲ್ಲಾ ಹಿಂಡಿ ಬಲ್ಲಾಕುಡು).

ಗಲ್ಲಿ (ನಾ) = ಓಣಿ; ಮನೆ ಸಾಲುಗಳ ಮಧ್ಯದಲ್ಲಿರುವ ದಾರಿ.

ಗಲ್ಲಿ ಗಲ್ಲಿ (ದ್ವಿ) = ಓಣಿ ಓಣಿ; ಕೇರಿ ಕೇರಿ.

ಗವಯಿ (ನಾ) = ಹಾಡುಗಾರ; ಗವಾಯಿ; ಗಾಯಕ (ಉದಾ:- ಪುಟ್ಟರಾಜ ಗವಾಯಿ; ಪಂಚಾಕ್ಷರ ಗವಾಯಿ).

ಗವಳಿ (ನಾ) = ಗೌಳಿ; ಗೌಳಿಗ; ಗೊಲ್ಲ.

ಗವಳಿಗ (ನಾ) = ಗೌಳಿಗ; ಗೌಳಿ; ಗೊಲ್ಲ.

ಗವಳ್ಗಿತ್ತಿ (ನಾ) = ಹಾಲು, ಮೊಸರು, ಬೆಣ್ಣೆ ಇತ್ಯಾದಿ ಮಾರುವ ಮಹಿಳೆ; ಗೌಳಿಗರ ಮನೆಯ ಮಹಿಳೆ.

ಗವಾ (ನಾ) = ಸಾಕ್ಷಿ; ಶಾಯ್ದಿ; ತಾರ್ಸಿ ಕೆಲಸಕ್ಕಾಗಿ ಕಟ್ಟುವ ಅಟ್ಟಣಿಗೆ; ಪರವಂಚ.

ಗವಾರಿ (ನಾ) = ಬಿಡಾಡಿ; ಗೋಮಾಳದ ದನಕರು.

ಗವಾರಿದನ (ನಾ) = ಬಿಡಾಡಿ ದನಕರು; ಗೋಮಾಳದಲ್ಲಿ ಮೇಯುವ ದನಕರು.

ಗವಾಯಿ (ನಾ) = ಗವಯಿ; ಹಾಡುಗಾರ; ಗಾಯಕ.

ಗವಿ (ನಾ) = ಗುಹೆ; ನೆಲಮನೆ; ನೆಲದಲ್ಲಿ ಕೊರೆದ ಮನೆ.

ಗಸ್ತಿ (ನಾ) = ಕಾವಲಿನ ಸುತ್ತಾಟ; ಪಹರೆದಾರನ ಸುತ್ತಾಟ.

ಗಸ್ತಿ ತಿರುಗು (ಕ್ರಿ) = ಕಾವಲು ಸಂಚರಿಸು; ಪಹರೆ ಮಾಡು.

ಗಸ್ತು (ನಾ) = ಬೌಳಿ; ಚಕ್ಕರು; ತಲೆಸುತ್ತುವಿಕೆ.

ಗಳಗಂಟೆ (ನಾ) = ಎತ್ತುಗಳ ಕೊರಳಲ್ಲಿ ಕಟ್ಟುವ ಗಳಗಳ ಸದ್ದು ಮಾಡುವ ಘಂಟೆ.

ಗಳಾ (ನಾ) = ಕುತ್ತಿಗೆ; ಗೋಣು; ಅಂಗಿಯ ಕೊರಳ ಪಟ್ಟಿ.

ಗಳಾಸು (ಕ್ರಿ) = ಸೋಸು; ಶೋಧಿಸು.

ಗಳಿ (ಕ್ರಿ) = ಗಳೆ; ಭೋಗಿಸು; ಅನುಭವಿಸು (ಹಾಡು:- ತಾ ಮಾಡಿದ ಪಾಪಾ ತಾಗಳಿಬೇಕ। ಶಿವನ ಮ್ಯಾಲ್ಯಾಕ ಸಬುದಿಡ ಬೇಕ।).

ಗಳು (ನಾ) = ಬಿದಿರಿನ ಕೋಲು; ಮರದ ಕೋಲು; ಉದ್ದಾದ ಮರದ ಕೋಲು.

ಗಳೆ (ನಾ) = ನೇಗಿಲು; ಆರು; ಕುಂಟಿ; ಕೂರಿಗಿ; ಬೇಸಾಯ ಉಪಕರಣ.

ಗಳೋ ಅಂತ ಅಳು (ಕ್ರಿ) = ಗೋಳು ಹೇಳಿಕೊಂಡು ಅಳು; ಗಳಗಳನೆ ಅಳು.

ಗಾಂಗಮ್ತಾಯಿ (ನಾ) = ಗಂಗಮ್ಮ ತಾಯಿ; ಹರಿವನೀರು; ಗಂಗಾ ನದಿ; ಶಿವನ ಜಡೆಯಿಂದ ಚಿಮ್ಮಿದ ಗಂಗೆ.

ಗಾಂಗಮ್ಮ (ನಾ) = ಗಂಗಮ್ಮ; ಗಂಗಮ್ಮ ತಾಯಿ; ಹರಿವ ನೀರು; ಗಂಗಾನದಿ; ಶಿವನ ಜಡೆಯಿಂದ ಚಿಮ್ಮಿದ ಗಂಗಾನದಿ.

ಗಾಂಗಾಳ (ನಾ) = ಉಣ್ಣುವ ತಟ್ಟೆ; ನೀರು ತುಂಬುವ ಪಾತ್ರೆ; ಸತಾಳಿ.

ಗಾಂಗಾಳ ಮಂಟಪ (ನಾ) = ಉಣ್ಣುವ ತಟ್ಟೆಗಳನ್ನು ಹೊಂದಿಸಿ ಮಾಡಿದ ದೊಡ್ಡಾಟದ ಆಟ್ಟ.

ಗಾಂಗಿ (ನಾ) = ಗಂಗಾನದಿ; ಹರಿವ ನೀರು; ಗಂಗಮ್ಮ; ಶಿವನ ಜಡೆಯಿಂದ ಚಿಮ್ಮಿದ ಗಂಗಾನದಿ; ಉತ್ತರ ದಿಕ್ಕು.

ಗಾಂಗಿಮಾರಿ (ನಾ) = ಉತ್ತರ ದಿಕ್ಕು; ಗಂಗೆ ಇರುವ ದಿಕ್ಕು; ಬಡಗಣ.

ಗಾಂಜಾ (ನಾ) = ಗಾಂಜಿ; ತಂಬಾಕು; ಅಮಲೇರಿಸುವ ಒಂದು ಬಗೆಯ ವನಸ್ಪತಿ; ಹೊಗೆಯನ್ನು ಸೇದಿದರೆ ಇಲ್ಲವೆ ಎಲೆಯನ್ನು ಆಹಾರದಲ್ಲಿ ಬೆರೆಸಿ ತಿಂದರೆ ನಶೆತರುವ ವನಸ್ಪತಿ (ವ್ಯಸನಿಗಳ ಗಾದೆ:- ಗಾಂಜಾ ಸೇದಾಂವ ಗರ್ತಿ ಮಗ).

ಗಾಂಜಿ (ನಾ) = ಗಾಂಜಾ (ನೋಡಿರಿ).

ಗಾಂಡನಕ್ರಾ (ನಾ) = ಹೀನ ಚೇಷ್ಟೆ; ಷಂಡ ಚೇಷ್ಟೆ.

ಗಾಂಡು (ನಾ) = ಹೆಣ್ಣಿನಂತೆ ವರ್ತಿಸುವವನು; ಷಂಡ; ಸಲಿಂಗ ಕಾಮಿ; ಮಂಗಲಮುಖಿ.

ಗಾಂಡೂಗಿರಿ (ನಾ) = ಸಲಿಂಗರತಿ; ಷಂಡತನ, ಹೀನತನ.

ಗಾಂವ (ನಾ) = ಊರು; ಹಳ್ಳಿ; ಊರುಗಳ ನಾಮಾಂತ್ಯದೊಂದಿಗೆ ಸೇರುವ ಪದ (ಉದಾ:- ಕಪ್ಪರಗಾಂವ; ಹಿರೆನಾಗಾಂವ; ಚಿಕ್ಕ ನಾಗಾಂವ; ಹಣೆಗಾಂವ; ಡೋಣಗಾಂವ; ವಾಗಲ್ಗಾಂವ; ಗದಲೆಗಾಂವ; ದ್ಯಾಗಾಂವ; ಜಾಯ್ಗಾಂವ ಇತ್ಯಾದಿ).

ಗಾಂವಠಾಣ (ನಾ) = ಊರಿನ ವಿಸ್ತರಣೆಗಾಗಿ ಕಾಯ್ದಿಟ್ಟ ಜಾಗ.

ಗಾಂವಠಿ = ಗಾವ್ಠಿ; ಗ್ರಾಮೀಣ.

ಗಾಗ್ಗಿ (ನಾ) = ಗಗ್ಗಿ; ತೊಟ್ಟಿಲ ತಳದಲ್ಲಿ ಹೆಣೆದಿರುವ ಹಗ್ಗದ ಜಾಲ.

ಗಾಡಾ (ವಿ.) = ಗಾಢ; ಅತಿಶಯ; ಹೆಚ್ಚಳ; ಒತ್ತೊತ್ತಾದ; ಗಾಢ ಮಸಿ; ಗಾಢ ಮೈತ್ರಿ; ದಟ್ಟವಾದ ಬಣ್ಣ; ಗಟ್ಟಿದ್ರವ.

ಗಾಡಿ (ನಾ) = ಬಂಡಿ; ಶಕಟ; ವಾಹನ; ಎತ್ತಿನ ಬಂಡಿ.

ಗಾಡಿಬಿಡು (ಕ್ರಿ) = ಓಡಿಹೋಗು; ಹೊರಡು.

ಗಾಡ್ಡಿ (ನಾ) = ಗಡ್ಡೆ; ಆಹಾರ ಸಂಗ್ರಹಿಸಿ ದಪ್ಪವಾದ ಬೇರು; ಜೇನಿನ ಗಡ್ಡೆ.

ಗಾಡ್ದಿ (ನಾ)ತೆ = ಗಾರ್ದಪ; ಕತ್ತೆ.

ಗಾಢ (ವಿ.) = ಗಾಡಾ (ನೋಡಿರಿ).

ಗಾಢಾ (ವಿ.) = ಗಾಡಾ (ನೋಡಿರಿ).

ಗಾಣಾ (ನಾ) = ಹಾಡು; ಗಾಯನ; ಗಾನ.

ಗಾಣಾಬಜಾನಾ (ನಾ) = ಗಾನಾ-ಬಜಾನಾ; ಸಂಗೀತ; ಹಾಡುಗಾರಿಕೆ.

ಗಾಣ್ಜುಲ (ನಾ) = ಗಣಜಲ; ಗಂಜಣೆ; ಒಂದು ಪ್ರಕಾರದ ಸಿಡುಬುರೋಗ; ಸುಂಕಾಳಿಯಿಂದ ಕೂಡಿದ ಹುಲ್ಲು; ಘಾಟುವಾಸನೆಯ ಎಣ್ಣೆ ಒದಗಿಸುವ ಒಂದು ಪ್ರಕಾರದ ಹುಲ್ಲು.

ಗಾದಿ (ನಾ) = ಅರಳೆಯನ್ನು ತುಂಬಿ ಮಾಡಿದ ಮೆತ್ತನೆಯ ಹಾಸಿಗೆ.

ಗಾನಾ (ನಾ) = ಗಾಣಾ; ಗಾನ; ಗಾಯನ; ಸಂಗೀತ; ಹಾಡು.

ಗಾನಾ ಬಜಾನಾ (ನಾ) = ಹಾಡುವಿಕೆ ಮತ್ತು ವಾದ್ಯ ವಾದನದ ಸಮ್ಮೇಳ.

ಗಾಫಲದಾಗ = ಗಫಲತ್ದಾಗ; ಮೋಸದಿಂದ.

ಗಾಬಿ (ನಾ) = ಫಲದ ಒಳತಿರುಳು.

ಗಾಯ್ಬಾಗು (ಕ್ರಿ) = ಮಾಯವಾಗು; ಕಾಣದಂತಾಗು.

ಗಾಯ್ಮಳ್ಳಿ (ನಾ) = ಶೀಲಗೆಟ್ಟವಳು.

ಗಾಯ್ಮಾಳ (ನಾ) = ದನಕರುಗಳು ಮೇಯುವ ಬಯಲು.

ಗಾಯ್ಮಾಳಿ (ನಾ) = ಸರಕಾರಿ ಜಮೀನಿನಲ್ಲಿ ಮೇಯುವದನ.

ಗಾಯ್ಮುಖ (ನಾ) = ಗೋಮುಖದಿಂದ ನೀರು ಚಿಮ್ಮುವ ಬೀದರ ಜಿಲ್ಲೆಯ ಮೈಲಾರದ ಒಂದು ಪವಿತ್ರ ಕ್ಷೇತ್ರ.

ಗ್ರಾಯ್ರಾಣ (ನಾ) = ದನಕರುಗಳು ಮೇಯಲು ಊರವರು ಬಿಟ್ಟ ಭೂಭಾಗ.

ಗಾಯ್ರಾಣಿ (ನಾ) = ಆಕಳಂತೆ ಸ್ವಚ್ಛಂದವಾಗಿ ಸಂಚರಿಸುವ ಹೆಣ್ಣು; ಶೀಲಗೆಟ್ಟವಳು; ಸರಕಾರಿ ಜಮೀನಿನಲ್ಲಿ ಮೇಯುವ ದನ.

ಗಾರಿ (ನಾ) = ಗರಸು; ಗಚ್ಚು; ಸುಣ್ಣ ಮತ್ತು ಮರಳಿನಿಂದ ಮಾಡಿದ ಮಿಶ್ರಣ; ತಗ್ಗು.

ಗಾರಿ ಹೊಡಿ (ಕ್ರಿ) = ತಗ್ಗು ತೋಡು.

ಗಾರು (ನಾ) = ಉಜ್ಜಿದರೆ ಕಿಡಿಕಾರುವ ಕಲ್ಲಿನ ಚೂರು; ಮಳೆಯ ಜತೆ ಬೀಳುವ ಹೆಪ್ಪು ಗಟ್ಟಿದ ಮಂಜಿನ ಚೂರು; ಅಣೆಕಲ್ಲು.

ಗಾರುಗಲ್ಲು (ನಾ) = ಬಿಳುಪಾದ ಕಲ್ಲು; ಚಕಮಕಿಕಲ್ಲು; ಉಜ್ಜಿದರೆ ಕಿಡಿಕಾರುವ ಕಲ್ಲು; ಮಳೆಯ ಜತೆ ಬೀಳುವ ಮಂಜುಗಡ್ಡೆ.

ಗಾರುಡ್ಯಾ (ನಾ) = ಗಾರುಡಿಗ; ಜಾದುಗಾರ.

ಗಾವ್ಕರಿ (ನಾ) = ಹಳ್ಳಿವಾಸಿ; ಗ್ರಾಮ ವಾಸಿ.

ಗಾವಠಿ (ನಾ) = ಗಾವ್ಠಿ; ಗಾಂವಠಿ; ಗ್ರಾಮೀಣ; ಖಾಸ್ಗಿ; ಹಳ್ಳಿಗ.

ಗಾವಳಿ (ನಾ) = ಗದ್ದಲ; ಸದ್ದು; ಚೀರಾಟ; ಕೂಗಾಟ.

ಗಾವು (ನಾ) = ಗ್ರಾಮದೇವತೆ ಎದುರು ಪೋತ್ಯಾ ಎಂಬವನು ಕುರಿಯನ್ನು ಹಲ್ಲಿನಿಂದ ಕಚ್ಚಿ ಹರಿದು ಕೊಲ್ಲುವಿಕೆ.

ಗಾವುಗುರಿ (ನಾ) = ಗಾವು ಹರಿಯಲು ಮೀಸಲಿಟ್ಟ ಕುರಿ.

ಗಾವು ಹರಿ (ಕ್ರಿ) = ಗ್ರಾಮದೇವತೆ ಎದುರು ಮೀಸಲಿಟ್ಟ ಕುರಿಯನ್ನು ಬಾಯಿಯಿಂದ ಕಚ್ಚಿ ಬಲಿಕೊಡು; ಜೀವಂತ ಕುರಿಯನ್ನು ಬಾಯಿಯಿಂದ ಕಚ್ಚಿ ಹರಿದು ಬಲಿ ಕೊಡು.

ಗಾವ್ಠಾಣ (ನಾ) = ಗಾವು ಠಾಣ; ಊರಿನ ವಿಸ್ತರಣೆಗಾಗಿ ಸರಕಾರದವರು ಕಾಯ್ದಿಟ್ಟ ಜಾಗ.

ಗಾಳ (ನಾ) = ಮೀನು ಹಿಡಿಯುವ ಕೊಂಡಿ, ಕೊಕ್ಕೆ; ಕುತಂತ್ರ; ಹೂಳು; ಹೂಳಿಕೆ; ಕೆಸರು.

ಗಾಳ ಹಾಕು (ಕ್ರಿ) = ಕೊಕ್ಕೆಯಿಂದ ಮೀನನ್ನು ಹಿಡಿ.

ಗಾಳು (ನಾ) = ತಳದಲ್ಲಿ ಉಳಿದ ವಂಡು, ಬಂಡು, ಮಡ್ಡಿ; ರಾಡಿ; ರಬಡಿ.

ಗಾಳ್ಸು (ಕ್ರಿ) = ಗಾಳಿಸು; ಶೋಧಿಸು; ಸೋಸು; ಸೋರುವಂತೆ ಮಾಡು.

ಗಿಚ್ಚಿ (ನಾ)= ಒಂದು ಬೊಗರೆಯಿಂದ ಮತ್ತೊಂದು ಬೊಗರೆಗೆ ಜೋರಾಗಿ ಮೊಳೆ ನೆಡುವಂತೆ ಹೊಡೆಯುವಿಕೆ; ಸಂಭೋಗ; ರತಿ ಕ್ರೀಡೆ.

ಗಿಚ್ಚಿ ಹೊಡಿ (ಕ್ರಿ)= ಇನ್ನೊಬ್ಬರ ಬೊಗರೆಯ ಮೇಲೆ ಕಚ್ಚು ಬೀಳುವಂತೆ ತನ್ನ ಬೊಗರೆಯಿಂದ ಹೊಡೆ; ಸಂಭೋಗಿಸು; ರತಿ ಕ್ರೀಡೆಯಾಡು.

ಗಿಚ್ಯಾ (ನಾ)= ಬೊಗರೆ ಆಟದಲ್ಲಿಯ ಒಬ್ಬ ಹುದ್ದರಿ. ಸೋತವನ ಬೊಗರೆಗೆ ತನ್ನ ಬೊಗರೆಯ ಕಬ್ಬಿಣದ ಮೊಳೆ ನೆಡುವಂತೆ ಹೊಡೆವವನು. ಅವನಿಗೆ ಹುಗುಸ್ಯಾ ಎಂತಲೂ ಕರೆಯುತ್ತಿದ್ದರು.

ಗಿಜಗ (ನಾ)= ಗೋಜಲು; ಗೊಂದಲ.

ಗಿಜಾಡ (ನಾ)= ಉಸಾಬರಿ; ಗೋಜು.

ಗಿಜಿಗಿಜಿ= ಅಸಹ್ಯ ಆಗುವಂತಿರುವ ಅಂಟಂಟು ಆಹಾರ ಪದಾರ್ಥ; ಕೀವು ಒಸರುವ ಹುಣ್ಣು.

ಗಿಟ್ಟಿ (ನಾ)= ಸೆರೆಬಾಟ್ಲಿ; ಕರಿ ಕಲ್ಲಿನ ಚೂರು; ಕಟ್ಟಿಗೆ ಚೂರು (ಪಚ್ಚರ).

ಗಿಟ್ಟಿ ಒಡಿ (ಕ್ರಿ)= ಕರಿಕಲ್ಲನ್ನು ಸುತ್ತಿಗೆಯಿಂದ ಒಡೆದು ಚೂರು ಮಾಡು.

ಗಿಟ್ಟಿ ಹಾಕು (ಕ್ರಿ)= ಸೆರೆ ಸೇವಿಸು.

ಗಿಟ್ಟಿ ಹೊಡಿ (ಕ್ರಿ)= ಸೆರೆ ಸೇವಿಸು.

ಗಿಡ (ನಾ)= ಸಣ್ಣ ಮರ; ಗಿಡಾ.

ಗಿಡಗಂಟೆ (ನಾ)= ಕಂಟೆಯಿಂದ ಸುತ್ತುವರಿದಿರುವ ಗಿಡ ಮತ್ತು ಪೊದೆ.

ಗಿಡಾ (ನಾ)= ಗಿಡ; ಸಣ್ಣಮರ.

ಗಿಡ್ಗಸರು (ನಾ)= ಗಿಡಮೂಲಿಕೆ, ಔಷಧಿಗೆ ಬಳಕೆಯಾಗುವ ಗಡ್ಡೆ, ಬೇರು, ನಾರು ಇತ್ಯಾದಿ.

ಗಿಡ್ಡ (ನಾ)= ಕುಳ್ಳ, ಬುಡ್ಡ; ಎತ್ತರ ಕಡಿಮೆ ಯುಳ್ಳವನು; ಗುಜ್ಜ.

ಗಿಡ್ಡಿ (ನಾ)= ಗಿಡ್ಡ ಹೆಂಗಸು; ಕುಳ್ಳೆ; ಕುಳ್ಳಿ, ಬುಡ್ಡಿ.

ಗಿಡ್ಡಿ ಮೋಟರು (ನಾ)= ಟೂರಿಂಗ್ ಕಾರು; ಪ್ರವಾಸಿ ವಾಹನ.

ಗಿಡ್ಡು (ನಾ)= ಎತ್ತರ ಕಡಿಮೆಯುಳ್ಳವ; ಕುಳ್ಳ; ಬುಡ್ಡ; ಗುಜ್ಜ (ಬೈಗುಳ).

ಗಿಣತಿ (ನಾ)= ಗಣತಿ; ಎಣಿಕೆ; ಎಣಿಸುವಿಕೆ; ಮೋಜಣಿ.

ಗಿಣಿ (ನಾ)= ಗಿಳಿ; ಹಸಿರು ಬಣ್ಣದ ಗರಿ ಮತ್ತು ಕೆಂಪು ಕೊಕ್ಕು ಇರುವ ಪಕ್ಷಿ; ಕೀರ; ಶುಕ (ಹಾಡು:– ಗಿಣಿಯು ಪಂಜರದೊಳಗಿಲ್ಲ).

ಗಿಣ್ಣಾ (ನಾ)= ಗಿಣ್ಣ; ಎಳಗಂದಿ ಹಾಲಿನಿಂದ ತಯಾರಿಸಲಾದ ಸಿಹಿ ತಿಂಡಿ.

ಗಿದ್ದ = ೧/೪ ಭಾಗ; ನಾಲ್ಕರಲ್ಲಿ ಒಂದು ಭಾಗ; ಒಂದು ರೊಟ್ಟಿಯಲ್ಲಿ ೧/೪ ಭಾಗ.

ಗಿದ್ದನ (ನಾ)= ಒಂದು ಸೇರಿನ ನಾಲ್ಕನೇ ಭಾಗ; ೧/೪ ಸೇರು.

ಗಿದ್ದಾ (ನಾ)= ಗಿರ್ದಾ, ಗಿದ್ದ; ೧/೪ ಭಾಗ, ಒಂದು ರೊಟ್ಟಿಯ ೧/೪ ಭಾಗ.

ಗಿನಾಸು (ಕ್ರಿ)= ಲಕ್ಷದಲ್ಲಿಡು; ಗಮನಿಸು; ಎಣಿಸು.

ಗಿನ್ತಿ (ನಾ)= ಎಣಿಸುವಿಕೆ.

ಗಿನ್ನಾ (ನಾ)= ಗಿಣ್ಣಾ; ಗಿಣ್ಣ; ಎಳಗಂದಿ ಹಾಲಿನಿಂದ ತಯಾರಿಸಿದ ಸಿಹಿ ತಿಂಡಿ

ಗಿನ್ಯಾನ (ನಾ)= ಜ್ಞಾನ; ತಿಳುವಳಿಕೆ; ಅರಿವು

ಗಿನ್ಯಾನಿ (ನಾ)= ಜ್ಞಾನಿ; ಅರಿವುಳ್ಳವನು/ಳು; ತಿಳಿವಂತ/ತೆ.)

ಗಿಮಿಗಿಮಿ ()= ವಸ್ತುವು ತನ್ನ ಸುತ್ತ ತಾನು ಸುತ್ತುವಿಕೆ.

ಗಿರ್ ಗಿರ್ (ಧ್ವ)= ಗಿಮಿಗಿಮಿ (ನೋಡಿರಿ).

ಗಿರಕಿ (ನಾ)= ಗಿರ್ಕಿ; ಫಿರ್ಕಿ; ಚಕ್ರ; ಬಾವಿಯ ನೀರೆತ್ತಲು ಬಳಸುವ ಚಕ್ರ.

ಗಿರಕಿ ಹೊಡಿ (ಕ್ರಿ)= ಸುತ್ತು ಹೊಡೆ; ತಿರುಗು; ತನ್ನ ಸುತ್ತ ತಾನೆ ಸುತ್ತಾಡು.

ಗಿರಣಿ (ನಾ)= ಗಿರ್ಣಿ; ಯಂತ್ರಗಳ್ಳುಳ್ಳ ಕಾರ್ಖಾನೆ; ಮಿಲ್ಲು; ಬೀಸುವ, ಕುಟ್ಟುವ, ರಾಶಿ ಮಾಡುವ ಯಂತ್ರ.

ಗಿರವಿ (ನಾ)= ಅಡಾವು; ಒತ್ತೆ; ಗಿರ್ವಿ.

ಗಿರಾ (ನಾ)= ಗ್ರಹ; ಕಂಟಕ.

ಗಿರಾಚಾರ (ನಾ)= ಗ್ರಹಕಂಟಕ; ಗ್ರಹ ದೋಷ.

ಗಿರಾಕಿ (ನಾ)= ಗ್ರಾಹಕ; ಕೊಂಡು-ಕೊಳ್ಳುವವನು(ಳು)

ಗಿರಾಣ (ನಾ)= ಗ್ರಹಣ; ಸೂರ್ಯ, ಚಂದ್ರ ಮತ್ತು ಭೂಮಿ ಮೂರು ಒಂದೇ ರೇಖೆಯಲ್ಲಿ ಬಂದಾಗ ಉಂಟಾಗುವ ಸೂರ್ಯ ಗ್ರಹಣ; ಸೂರ್ಯ, ಭೂಮಿ ಮತ್ತು ಚಂದ್ರ ಒಂದೇ ರೇಖೆಯಲ್ಲಿ ಬಂದಾಗ ಉಂಟಾಗುವ ಚಂದ್ರಗ್ರಹಣ.

ಗಿರಾಣ ಬಿಡು (ಕ್ರಿ)= ಗ್ರಹಣ ಉಂಟಾದುದು ಕರಗು; ಗ್ರಹಣ ಇಲ್ಲವಾಗು.

ಗಿರಾಣ ಹಿಡಿ (ಕ್ರಿ)= ಗ್ರಹಣ ಉಂಟಾಗುವ.

ಗಿರಾಂಪಂಚಾಯತ (ನಾ)= ಗ್ರಾಮ ಪಂಚಾಯತ.

ಗಿರಿಜನ (ನಾ)= ಗುಡ್ಡಗಾಡು ಜನ; ಹಿಂದುಳಿದ ಜನಾಂಗ.

ಗಿರಿಲ್ (ನಾ)= ಸುತ್ತುಗೋಡೆ ಅಥವಾ ಆವಾರದ ಮೇಲೆ ಜೋಡಿಸುವ ಕಬ್ಬಿಣಜಾಲಿ; ಗ್ರಿಲ್.

ಗಿರೀಸು (ನಾ)= ಗ್ರೀಸು; ಯಂತ್ರಗಳಲ್ಲಿ ಬಳಸುವ ಸ್ನಿಗ್ಧ ಪದಾರ್ಥ.

ಗಿರ್ಣಿ (ನಾ)= ಗಿರಣಿ (ನೋಡಿರಿ).

ಗಿರ್ದಾ (ನಾ)= ೧/೪ ಭಾಗ; ರೊಟ್ಟಿ ಅಥವಾ ಯಾವುದೇ ವಸ್ತುವಿನ ೧/೪ ಭಾಗ.

ಗಿರ್ದಾವಾರ (ನಾ)= ಕಂದಾಯ ಇಲಾಖೆಯ ನಿರೀಕ್ಷಕ; ೧/೪ ವಾರ ಅಳತೆಯ ಬಟ್ಟೆ.

ಗಿರ್ಧಾ (ನಾ)= ಗಿರ್ದಾ (ನೋಡಿರಿ).

ಗಿರ್ಯಾ (ನಾ)= ಗಿರಾ (ನೋಡಿರಿ).

ಗಿರ್ವಿ (ನಾ)= ಗಿರವಿ (ನೋಡಿರಿ).

ಗಿಲ್ ಗಿಲ್ (ಧ್ವ)= ಗಿಳ್ ಗಿಳ್ ಎಂಬ ಗೆಜ್ಜೆ ಸದ್ದು.

ಗಿಲಗಂಚಿ (ನಾ)= ಗಿಲ್ಗಂಚಿ; ಗಿಳ್ ಗಿಳ್ ಸದ್ದು ಮಾಡುವ ಮಕ್ಕಳ ಆಟಿಕೆ.

ಗಿಲಾಟು (ನಾ)= ಜರ್ಮನ್ ಸಿಲ್ವರ್ ಧಾತು.

ಗಿಲಾವಾ (ನಾ)= ಹಿತ್ತಾಳೆ, ತಾಮ್ರಾದಿ ತಟ್ಟೆಗಳಿಗೆ ಕಿಲುಬೇರದಂತೆ ಮಾಡುವ ಬಿಳಿಯ ಲೇಪನ; ಪ್ಲಾಸ್ಟರ್; ಸಿಮೆಂಟು,

ರೇತಿ ಮತ್ತು ನೀರು ಬೆರೆಸಿ, ಗೋಡೆಗೆ ಲೇಪನ ಮಾಡುವಿಕೆ.

ಗಿಲಾಸು (ನಾ)= ಚೊಂಬು; ಲೋಟ.

ಗಿಲ್ಕಿ (ನಾ)= ಗಿಲಗಂಚಿ (ನೋಡಿರಿ).

ಬಸವ ಕಲ್ಯಾಣ ತಾಲೂಕಿನ ಒಂದು ಹಳ್ಳಿ.

ಗಿಲ್ಲಾ (ನಾ)= ಚುಗಲಿ; ನಿಂದೆ; ಚಾಡಿ.

ಗಿಲ್ಲಾಹೇಳು (ಕ್ರಿ)= ನಿಂದೆಯಾಡು; ಚಾಡಿ ಹೇಳು; ಚುಗಲಿ ಹೇಳು; ಒಬ್ಬರ ವಿಷಯ ಮತ್ತೊಬ್ಬರಿಗೆ ಗುಟ್ಟಾಗಿ ಹೇಳು.

ಗಿಲ್ಲಿ(ನಾ)= ಚಿಣಿ; ಮಕ್ಕಳ ಆಟದ ಕಟ್ಟಿಗೆಯ ಚೂರು.

ಗಿಲ್ಲಿದಾಂಡು (ನಾ)= ಚಿಣಿಫಣಿ; ಮಕ್ಕಳಾಟದ ಕಟ್ಟಿಗೆಯ ಚಿಣಿ ಮತ್ತು ಅದನ್ನು ಹೊಡೆಯಲು ಬಳಸುವ ಫಣಿ, ಬ್ಯಾಟು.

ಗಿಳಿ (ನಾ)= ಗಿಣಿ; ಶುಕ.

ಗಿಳಿ ಪಾಠ (ನಾ)= ಅರ್ಥ ತಿಳಿಯದೆ ಗಿಣಿಯಂತೆ ಓದುವಿಕೆ (ಗಿಳಿಯೋದಿ ಮಲವ ಮೆದ್ದಂತೆ)

ಗಿಳಿಮಾತು (ನಾ)= ಗಿಳಿಯಂತೆ ಬಾಯಿಪಾಠ ಮಾಡಿದ ಮಾತು.

ಗಿಳಿಮೂಗು (ನಾ)= ಗಿಳಿಮೂಗಿನಂತಹ ಮೂಗು.

ಗಿಳಿಮೂತಿಗಡ್ಡಿ (ನಾ)= ಅಮೃತ ಬಳ್ಳಿಯ ಗಡ್ಡೆ; ವಿಷಭಾಧೆಯಾದಾಗ ವಾಂತಿ ಮಾಡಿಸಲು ಬಳಸುವ ಗಿಡಮೂಲಿಕೆ, ಗಿಡಗಸರ; ಅಶ್ವಗಂಧಿ.

ಗಿಳ್ಗಿಳ್ಳ (ದ್ವಿ)= ಗಿಲ್ ಗಿಲ್ಲೆಂಬ ಗೆಜ್ಜೆಸದ್ದು

ಗೀಕ್ (ನಾ)= ಕೋಡಂಗಿಯ ಕೂಗು.

ಗೀಗೀ (ನಾ)= ಕಲ್ಗಿ ತುರಾಯಿ ಹಾಡಿನಲ್ಲಿ ಬಳಸುವ ಪಲ್ಲವಿ ರಾಗ.

ಗೀಚು (ಕ್ರಿ)= ಗೀರು; ಕೆದರು; ಗೆರೆ ಎಳೆ.

ಗೀಚುಣ್ಕಿ (ನಾ)= ಕೊಬ್ಬರಿ, ಮಾವು ಇತ್ಯಾದಿಗಳನ್ನು ಗೀಚಿ ತುರಿ ತೆಗೆವ ಸಾಧನ.

ಗೀಜುಗ (ನಾ)= ಒಂದು ಬಗೆಯ ಹಕ್ಕಿ; ಗುಬ್ಬಿ; ಗುಬ್ಬಚ್ಚಿ.

ಗೀಟಾ (ನಾ)= ಗೆರೆ; ಗೀಟು; ರೇಖೆ; ಮಿತಿ, ಮೇರೆ; ಎಲ್ಲೆ.

ಗೀಟಾ ಎಳಿ (ಕ್ರಿ)= ಗೆರೆ ಎಳೆ; ಗೀಚು; ಗೀರು.

ಗೀತಾ (ನಾ)= ಭವವದ್ಗೀತೆ; ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಗೀತೋಪದೇಶ.

ಗೀರು (ಕ್ರಿ)= ಗೆರೆ ಎಳೆ; ಗೀಚು.

ಗುಂಗಾ (ನಾ)= ಮೂಕ; ಮಾತು-ಬಾರದವನು.

ಗುಂಗಾಗು (ಕ್ರಿ)= ಮಗ್ನನಾಗು; ತಲ್ಲೀನನಾಗು; ಮರುಳಾಗು.

ಗುಂಗುರು ಗೂದಲು(ನಾ)= ಉಂಗುರು ಕೂದಲು; ಸುರುಳಿ ಸುರುಳಿಯಾಗಿರುವ ತಲೆಗೂದಲು.

ಗುಂಜಿ (ನಾ)= ಕಟ್ಟಿಗೆಯ ಕಂಬ; ಬೀಸುಕಲ್ಲಿನ ಗೂಟ; ಗುಲ್ಗುಂಜಿ; ಗುಲ್ಗುಗಂಜಿ ತೂಕದ ಪ್ರಮಾಣ (ಎಂಟು ಗುಂಜಿ=ಒಂದು ಮಾಸಿ).

ಗುಂಜು (ನಾ)= ದಾರ, ಹಗ್ಗ, ಕೂದಲು ಇತ್ಯಾದಿಗಳ ಸಿಕ್ಕು; ತೆಂಗಿನ ಎಳೆಯ ಸಿಕ್ಕು.

ಗುಂಜು (ಕ್ರಿ)= ಎಳೆ; ಜಗ್ಗು; ಮುಂದಕ್ಕೆ ಬರುವಂತೆ ಮಾಡು.

ಗುಂಜುಗಟ್ಟು (ಕ್ರಿ)= ಗುಂಜು ಗುಂಜಾಗು; ಸಿಕ್ಕಾಗು; ಎಳೆ ಬಿಡಿಸದಂತಾಗು.

ಗುಂಞಗುಟ್ಟು (ಕ್ರಿ)= ಕಿವಿಯಲ್ಲಿ ಗುಂಞ ಎಂಬ ಸದ್ದುಂಟಾಗು; ಗುಂಞ ಎಂದು ಸದ್ದು ಮಾಡುತ್ತ ಹಾರಾಡು.

ಗುಂಟ (ಅ.)= ಗೊಂಟ; ಹೊಂದಿ-ಕೊಂಡಂತೆ.

ಗುಂಟಾ (ನಾ)= ಗುಂಟೆ; ಭೂಮಿಯ ಒಂದು ಅಳತೆಮಾನ; ಒಂದು ಎಕರೆಯ ೧/೪೦ ಭಾಗ

ಗುಂಡಾ (ನಾ)= ಕುಂಡ; ಗುಂಡ; ನೀರಿನ ಚಿಲುಮೆ, ಪೋಲಿ; ಆವಾರಾ; ಬಂಗಾರದ ದಪ್ಪ ಮಣಿ.

ಗುಂಡಾಕ (ಅ)= ದುಂಡಗೆ; ದಂಡಗೆ; ದುಂಡಾದ.

ಗುಂಡಾಗರ್ದಿ (ನಾ)= ಪೋಲಿತನ; ದುಂಡಾವರ್ತನೆ.

ಗುಂಡಾಗಿರಿ (ನಾ)=ಪೋಲಿತನ; ಆವಾರಾಗಿರಿ.

ಗುಂಡಾಗು (ಕ್ರಿ)= ಗೋಲಾಕಾರವಾಗು; ವರ್ತುಳಾಕಾರವಾಗು; ಆರೋಗ್ಯವಂತನಾಗು; ಆಪಸ ರಾಜಿಯಾಗು.

ಗುಂಡಾತೊಳ್ಸು (ಕ್ರಿ)= ತೀರ್ಥಕ್ಷೇತ್ರದ ನೀರಿನ ಕುಂಡವನ್ನು ಸ್ವಚ್ಛ ಮಾಡಿಸುವ ಹರಕೆ ತೀರಿಸು.

ಗುಂಡಾ ಮುಣುಗು (ಕ್ರಿ)= ತೀರ್ಥ ಕ್ಷೇತ್ರದ ಕುಂಡದ ನೀರಿನಿಂದ ಸ್ನಾನ ಮಾಡು.

ಗುಂಡಾಳಿ (ನಾ)= ದುಂಡಾಗಿ ಸುತ್ತಿದ ದಾರದ ಉಂಡಿ.

ಗುಂಡಾಳ್ಸು (ಕ್ರಿ)= ದಾರವನ್ನು ಚೆಂಡಿನ ಆಕಾರದಲ್ಲಿ ಸುತ್ತು.

ಗುಂಡಿ (ನಾ)= ಬಟನ್; ವಿದ್ಯುತ್ತಿನ ಬಟನ್ನು; ತಗ್ಗು; ದುಂಡಗಿನ ದೊಡ್ಡ ಅಡಿಗೆ ಪಾತ್ರೆ; ಅಂಗಿಯ ಎದೆ ಮುಚ್ಚುವ ಅಥವಾ ತೆರೆಯುವ ಸಾಧನ.

ಗುಂಡಿಗಿ (ನಾ)= ಗುಂಡಿಗೆ; ನೀರಿನ ಬಿಂದಿಗೆ; ಕಳಸಿ.

ಗುಂಡುಕ (ವಿ)= ಗೋಲಾಕಾರದ; ಗುಂಡು ಗುಂಡಾದ.

ಗುಂಡುಕಾಗು (ಕ್ರಿ)= ಆಪಸ ರಾಜಿಯಾಗು; ಒಪ್ಪಂದ ಮಾಡಿಕೊ.

ಗುಂಡುಗಡ್ಗಿ (ನಾ)= ಲಿಂಗದ ಕಾಯಿ; ಚೌಕಾ; ಗೋಲಾಕಾರದ ಗಡಿಗೆ.

ಗುಂಡುಗಲ್ಲು (ನಾ)= ದುಂಡಾದ ಕಲ್ಲು; ಬೀಸುಕಲ್ಲಿನ ಗುಂಜಿ (ಗೂಟ) ನೆಡಿಸಲು ಬಳಸಲಾಗುವ ದುಂಡಾದ ಕಲ್ಲು.

ಗುಂಡುಬೇನು (ನಾ)= ಗುಂಡಾದ ಕಾಯಿಯುಳ್ಳ ಬೇವಿನ ಜಾತಿಯ ಮರ; ಹೆಬ್ಬೇವು.

ಗುಂಡು ಮಲ್ಗಿ (ನಾ)= ದುಂಡುಮಲ್ಲಿಗೆ.

ಗುಂಡಾಗು (ಕಿ)= ಗುಂಡುಕಾಗು; ಆಪಸ ರಾಜಿಯಾಗು; ಒಪ್ಪಂದ ಮಾಡಿಕೊ.

ಗುಂಡ್ಗಲ್ಲು (ನಾ)= ಗುಂಡುಗಲ್ಲು (ನೋಡಿರಿ)

ಗುಂಡ್ಗಿ (ನಾ)= ಗುಂಡಿಗಿ (ನೋಡಿರಿ)

ಗುಂಡ್ಜ್ವಾಳಾ= ಬಿಳಿ ಜೋಳದ ಒಂದು ತಳಿ.

ಗುಂಡ್ಬೇನು (ನಾ)= ಗುಂಡು ಬೇನು (ನೋಡಿರಿ)

ಗುಂಪಾ (ನಾ)= ಗುಡಿಸಲು; ಕುಟೀರ; ಆಶ್ರಯ; ಬೀದರ ನಗರದ ಸಿದ್ಧಾರೂಢ ಆಶ್ರಮ.

ಗುಂಪಾಗು (ಕ್ರಿ)= ಒಟ್ಟುಗೂಡು; ಒಂದು ಕಡೆಸೇರು.

ಗುಂಪಿ (ನಾ)= ಕುಂಪಿ; ರಾಶಿ.

ಗುಂಪು (ನಾ)= ಸಮೂಹ; ಮಂದೆ.

ಗುಂಬಜ (ನಾ)= ಗುಮ್ಮಟ; ಗುಮ್ವಾ; ಬುರುಜು.

ಗುಗ್ಗಿ (ನಾ)= ಗೂಗೆ; ನಿಶಾಚರ ಪಕ್ಷಿ.

ಗುಜುಗುಜು (ನಾ)= ಮೆಲ್ಲಗಿನ ಮಾತು, ಪಿಸು ಮಾತು, ಪಿಸು ಮಾತಿನ ಗದ್ದಲ.

ಗುಜುರಾಣಿ (ನಾ)= ನಿರ್ವಾಹ; ದಿನ ನೂಕುವಿಕೆ; ಬದುಕು ಸಾಗಿಸುವಿಕೆ

ಗುಜುರಾತಿ (ನಾ)= ಗುಜುರಾತ ದೇಶದವನು (ಳು); ಗುಜರಾತದ ರಾಜ್ಯ ಭಾಷೆ.

ಗುಜುಗುಳ್ಕಿ (ನಾ)= ಕಚಗುಳಿ.

ಗುಜ್ಜ (ನಾ)= ಕುಳ್ಳ; ಗಿಡ್ಡ, ಕಡಿಮೆ ಉದ್ದ ಅಥವಾ ಎತ್ತರವುಳ್ಳದ್ದು.

ಗುಜ್ಜಾಗು (ಕ್ರಿ)= ಸಣ್ಣದಾಗು; ಎತ್ತರ ಕಡಿಮೆ ಯಾಗು; ಉದ್ದ ಕಡಿಮೆಯಾಗು.

ಗುಜ್ಜು(ವಿ.)= ಗಿಡ್ಡನೆ; ಕುಳ್ಳನೆ; ಉದ್ದ ಅಥವಾ ಎತ್ತರ ಕಡಿಮೆಯುಳ್ಳ; ಗುಜ್ಜಾದ; ಕಿರಿದಾದ.

ಗುಟ (ನಾ)= ಹಕ್ಕಿಗಳು ತಮ್ಮ ಮರಿಗಳಿಗೆ ಹಾಕುವ ಬಾಯ್ತುತ್ತು.

ಗುಟಹಾಕು (ಕ್ರಿ)= (ಹಕ್ಕಿ) ಮರಿಗಳಿಗೆ ಬಾಯ್ತುತ್ತು ಹಾಕು.

ಗುಟುಕು (ನಾ)= ಒಂದು ಸಲಕ್ಕೆ ನುಂಗಲು ಬರುವಷ್ಟು ನೀರು, ಹಾಲು, ಮಜ್ಜಿಗೆ ಅಥವಾ ಇತರೆ ದ್ರವ.

ಗುಟುರು (ನಾ)= ಪಾರಿವಾಳದ ಕೂಗು.

ಗುಟ್ಕಾ (ನಾ)= ತಂಬಾಕು ಮತ್ತು ಇತರೆ ನಶೆ ಪದಾರ್ಥಗಳ ಪುಟಕೊಟ್ಟ ಅಡಕೆ ಪುಡಿ, ಚೂರು.

ಗುಟ್ಗುಟಿ (ನಾ)= ಗಂಟಲು (ಉ: ಜಿವಾಗುಟ್ಗುಟಿಗಿ ಬಂದಾದ, ಉಳ್ಯಾಂಗಿಲ್ಲ)

ಗುಟ್ಗುಟಿಗಿ ಬರು (ಕ್ರಿ)= ಸಾವು ಸಮೀಪಿಸು.

ಗುಡಂಬ (ನಾ)= ಮಾವು ಮತ್ತು ಬೆಲ್ಲಸೇರಿಸಿ ತಯಾರಿಸಿದ ವ್ಯಂಜನ; ಗುಳಂಬ; ಸೆರೆ; ಬೆಲ್ಲದಿಂದ ತಯಾರಿಸಿದ ಸಾರಾಯಿ.

ಗುಡಿ (ನಾ)= ದೇವಾಲಯ; ದೇವಸ್ಥಾನ (ದಾಸರ ಹಾಡು : ಗುಡಿಯ ನೋಡಿರಣ್ಣಾ ದೇಹದ ಗುಡಿಯನೋಡಿರಣ್ಣ । ದೇಹದ ಗುಡಿಯ ನೋಡಿರಣ್ಣಾ ॥ ಪ್ರಾಸಃ-ಮಳಿ ಬಂತೋ ಮಲ್ಲೇಶಾ, ಗುಡಿಕಟ್ಟೋ ಸಿದ್ಧೇಶಾ).

ಗುಡುಗು(ನಾ)= ಮೋಡಗಳ ಗದ್ದರಿಸುವಿಕೆ.

ಗುಡುಗುಡಿ (ನಾ)= ಹುಕ್ಕಾ; ಗುಡುಗುಡು ಎಂದು ಸದ್ದು ಮಾಡುವ ತಂಬಾಕು ಸೇದುವ ಒಂದು ಸಾಧನ.

ಗುಡುಗುಡು (ದ್ವಿ)= ಮೋಡಗಳ ಸದ್ದು.

ಗುಡುಗುಡು ಮುತ್ಯಾ (ನಾ)= ಮಳೆ ತರುವ ಅಜ್ಜ; ಮಳೆರಾಯ (ಜನಪದ ಪ್ರಾಸ: ಗುಡುಗುಡು ಮುತ್ಯಾ ಬಂದಾನಾ । ಕಾಯಿ ಖೊಬ್ರಿ ತಂದಾನ).

ಗುಡ್ಡಾಡು (ನಾ)= ಗುಡ್ಡ ಮತ್ತು ಕಾಡುಗಳಿಂದ ತುಂಬಿದ ಭೂಭಾಗ.

ಗುಡ್ಡಾ (ನಾ)= ಗುಡ್ಡ; ಸಣ್ಣ ಬೆಟ್ಟ (ಗಾದೆ: ಗುಡ್ಡಾ ಕಳ್ಕೊಂಡು, ಖಡ್ಡಿದಸಿಂದ ಕಚ್ಚಾಡ್ಡುರಂತ).

ಗುಣ (ನಾ)= ನಡತೆ-ಸ್ವಭಾವ.

ಗುಣಗೇಡಿ (ನಾ)= ದುರ್ಗುಣಿ; ಕಿಡಿಗೇಡಿ; ಕೆಟ್ಟಗುಣದವನು(ಳು).

ಗುಣವಂತ (ನಾ)= ಸದ್ಗುಣಿ; ಒಳ್ಳೆಯ ಗುಣದವನು.

ಗುಣವಂತಿ (ನಾ)= ಸದ್ಗುಣಿಯಾದವಳು; ಒಳ್ಳೆಯ ಗುಣದವಳು (ಹಾಡು: ಗುಣವಂತಿಯಾಗಮ್ಮ। ಘನವಂತಿ ನೀನು । ಕ್ಷಣ ಕಾಲ ಹರಟೆಯಲ್ಲಿ । ಕಳೆಯಬೇಡ ಜಾಣಿ।।)

ಗುಣುಗುಣಿಸು (ಕ್ರಿ)= ಗುಣುಗುಣು ಮೂಗಿನಲ್ಲೇ ಹಾಡು; ಪಿಸುಮಾತನಾಡು; ಅಸ್ಪಷ್ಟವಾಗಿ ಮಾತನಾಡು.

ಗುಣಗುಣು (ದ್ವಿ)= ಮೂಗಿನಲ್ಲೇ ಹಾಡುವಿಕೆ.

ಗುಣುಪುಣು (ನಾ)= ಪಿಸುಮಾತು; ಗುಟ್ಟಿನ ಮಾತು; ಗೌಪ್ಯ ಸಂಭಾಷಣೆ.

ಗುಣ್ಗೇಡಿ (ನಾ)= ಗುಣಗೇಡಿ (ನೋಡಿರಿ)

ಗುಣ್ಪುಣು (ನಾ)= ಗುಣುಪುಣು (ನೋಡಿರಿ)

ಗುತಾಸು (ಕ್ರಿ)= ತೊಡಗು, ಹೊಂದಿಕೊ.

ಗುತ್ಗಿ (ನಾ)= ಗುತ್ತಿಗೆ.

ಗುತ್ತಾ, ಗುತ್ತಿ, (ನಾ)= ಗುತ್ತಿಗೆ; ಗುತ್ತಾ; ಒಪ್ಪಂದದ ಪ್ರಕಾರ ಕೆಲಸ ಮಾಡುವಿಕೆ, ಮಾಡಿಸುವಿಕೆ; ಗುಡ್ಡ; ದಿನ್ನೆ; ಬಿಗಿಯಾದದ್ದು (ಉದಾ: ಬಳಿ ಗುತ್ತಿ ಇಟ್ರ ಝುಲ್ದಿ ಧಕ್ಕಿ ಆಗಾಲ)

ಗುತ್ತಿಗಿ (ನಾ)= ಗುತ್ತಿಗೆ; ಗುತ್ತಿ; ಗುತ್ತಾ; ಕರಾರಿನ ಪ್ರಕಾರ ಮಾಡುವ ಅಥವಾ ಮಾಡಿಸುವ ಕೆಲಸ.

ಗುತ್ತಿ ಹಿಡಿ (ಕ್ರಿ)= ಕರಾರಿನ ಮೇಲೆ ಕೆಲಸ ಮಾಡು ಇಲ್ಲವೆ ಮಾಡಿಸು.

ಗುತ್ತೇದಾರ (ನಾ)= ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿಸುವವನು.

ಗುತ್ತೇದಾರಿ (ನಾ)= ಗುತ್ತಿಹಿಡಿಯುವಿಕೆ.

ಗುದಿ (ನಾ)= ಇಲಿ ಅಥವಾ ಹೆಗ್ಗಣದ ಬಿಲ; ಗುದ್ವ; ಬೊಂದಿ; ನಾರಿನ ಹಗ್ಗದ ಸುರುಳಿ; ನುಲಿಯ ಸುರುಳಿ.

ಗುದುಳಿ (ನಾ)= ಗುದ್ದಳಿ (ನೋಡಿರಿ)

ಗುದ್ವ (ನಾ)= ಬಿಲ; ಇಲಿ, ಹೆಗ್ಗಣ ಮುಂತಾದುವುಗಳ ನೆಲಮನೆ.

ಗುದ್ದಲಿ (ನಾ)= ಗುದ್ದಳಿ (ನೋಡಿರಿ).

ಗುದ್ದಳಿ (ನಾ)= ಗುದ್ದಲಿ; ಗುದ್ಲಿ; ಖುದಾಲಿ; ನೆಲವನ್ನು ಅಗೆವ ಸಾಧನ.

ಗುದ್ದಿಕೊಲ್ಲು (ಕ್ರಿ)= ಹೊಡೆದು ಸಾಯಿಸು.

ಗುದ್ದಿ ಹೆಂಡಿ ಕೆಡವು (ಕ್ರಿ)= ಗುದ್ದಿ ಗುದ್ದಿ ಹಣ್ಣುಗಾಯಿ ನೀರು ಗಾಯಿ ಮಾಡು; ಹೊಡೆದು ಮೆತ್ತಗೆ ಮಾಡು.

ಗುದ್ದು (ಕ್ರಿ)= ಮುಷ್ಟಿಯಿಂದ ಹೊಡೆ.

ಗುದ್ಮರ್ಗಿ (ನಾ)= ಇಬ್ಬರ ನಡುವೆ ಅಥವಾ ಎರಡು ಗುಂಪಿನ ನಡುವೆ ಜರುಗುವ

ಮುಷ್ಠಿಯುದ್ಧ (ಗುಲಬರ್ಗಾ ಜಿಲ್ಲೆಯ ಸೇಡಮದಲ್ಲಿ ಈಗಲೂ ಪ್ರತಿ ವರ್ಷ ಕಾರು ಹುಣ್ಣಿಮೆ ದಿನದಂದು ಎರಡು ಗುಂಪಿನ ನಡುವೆ ಗುದ್ಮುರ್ಗಿ ತಪ್ಪದೆ ನಡೆಯುತ್ತದೆ).

ಗುದ್ಲಿ (ನಾ)= ಗುದ್ದಳಿ; ಗುದ್ದಲಿ; ಖಿದಾಲಿ; ನೆಲಕೆದರುವ ಸಾಧನ.

ಗುದ್ಲಿ ಪೂಜೆ (ನಾ)= ಹೊಸದಾಗಿ ಕಟ್ಟಡ ಕಾಮ್ಗಾರಿ ಚಾಲು ಮಾಡುವ ಮೊದಲು ನೆರವೇರಿಸುವ ಗುದ್ದಲಿ, ಹಾರೆ, ಸಲಿಕೆ ಇತ್ಯಾದಿಗಳನ್ನು ಇಟ್ಟು ಮಾಡುವ ಪೂಜೆ.

ಗುದ್ಳಿ (ನಾ)= ಗುದ್ದಳಿ, ನೆಲ ಕೆದರುವ ಸಾಧನ.

ಗುದ್ಳಿ ಭೀಳು (ಕ್ರಿ)= ಮೊಹರಂ ಪ್ರಾರಂಭವಾಗು.

ಗುನಾ (ನಾ)= ಗುನ್ಹೆ; ಅಪರಾಧ; ತಪ್ಪು.

ಗುನಿ (ನಾ)= ಗುನುಗು; ಜೋಳದ ಕಾಳಿನ ಮೇಲಿನ ಹೊಟ್ಟು.

ಗುನುಗುನಾಸು (ಕ್ರಿ)= ಗುಣುಗುಣು ಸಣ್ಣ ದನಿ ಮಾಡಿ ಹಾಡು; ಮೂಗಿನಲ್ಲೇ ಹಾಡು.

ಗುನೆಗಾರ (ನಾ)= ಅಪರಾಧಿ; ತಪ್ಪಿತಸ್ತ.

ಗುನ್ನಾ ಹೊಡಿ (ಕ್ರಿ)= ಶಾಲೆಗೆ ಹೋಗದಿರು; ಕೆಲಸದ ಜಾಗ ಬಿಟ್ಟು ಹೋಗು; ಚಟ್ಟಾ ಹೊಡೆ.

ಗುಪುತ್ಲೆ (ಅ)= ಗುಪ್ತವಾಗಿ; ಕಾಣದಂತೆ; ರಹಸ್ಯವಾಗಿ (ಉದಾ: ನಾಗುಪುತ್ಲೆ ಕುಡ್ತಾ, ನೀಗಪಾತ್ಲೆ ಒಯ್ಯಿ).

ಗುಪ್ತ ಮಾರ (ನಾ)= ಒಳಪೆಟ್ಟು; ಗಾಯವಾಗದಂಥಕಣ್ಣಿಗೆಕಾಣದಂಥ ಪೆಟ್ಟು.

ಗುಪ್ತಿ (ನಾ)= ಕೋಲಿನಲ್ಲಿ ಇರಿಸಿರುವ ಗುಪ್ತಚೂರಿ.

ಗುಬಾರು(ನಾ)= ವಿಮಾನ; ಹವಾಯಿ ಜಹಾಜು

ಗುಬುತ (ನಾ)= ಗುಪ್ತ; ರಹಸ್ಯ.

ಗುಬುತ್ಲೆ (ಅ)= ಗುಪುತ್ಲೆ (ನೋಡಿರಿ).

ಗುಬ್ಬಿ (ನಾ)= ಒಂದು ಸಣ್ಣ ಪಕ್ಷಿ; ಗುಬ್ಬಚ್ಚಿ; ಗೀಜಗ (ಶಿಶುಪ್ರಾಸ: ಗುಬ್ಬಿ ಗುಬ್ಬಿ । ನೀ ಎಲ್ಲಿದ್ದಿ। ಯಾವಾಗೆದ್ದಿ। ನಿಂದೇನು ಸುದ್ದಿ। ಧನಾಶ್ರೀ ಮಾಣಿಕರಾವ)

ಗುಬ್ಬಿಮಂಚಾ (ನಾ)= ಆಕಾಶದಲ್ಲಿ ಒಂದು ನಕ್ಷತ್ರ ಗುಂಪು.

ಗುಬ್ಬಿಮನಿ (ನಾ)= ಗುಬ್ಬಚ್ಚಿಗೂಡು; ಗೀಜಗನ ಗೂಡು.

ಗುಬ್ಯಾಳ (ನಾ)= ಭಾಲ್ಕಿ ತಾಲೂಕಿನ ಮದ್ಕಟ್ಟೆ ಗ್ರಾಮದ ಸಮೀಪದ ಒಂದು ಹಾಳೂರು.

ಗುಮಾನಿ (ನಾ)= ಸಂಶಯ, ಅನುಮಾನ.

ಗುಮಾಸ್ತ (ನಾ)= ಕಾರಕೂನ; ಲಿಪಿಕ; ಮುನೀಮ; ಸಹಾಯಕ.

ಗುಮಾಸ್ತಾಪಟವಾರಿ (ನಾ)= ಪಟವಾರಿ ಅಥವಾ ಕುಲ್ಕರ್ಣಿಯ ಸಹಾಯಕ, ಕಾರ್ಕೂನ.

ಗುಮಾಸ್ತಾ ಪಾಟೀಲ (ನಾ)= ಪೋಲಿಸ ಪಾಟೀಲ ಅಥವಾ ಮಾಲಿ ಪಾಟೀಲನ ಕಾರಕೂನ, ಸಹಾಯಕ.

ಗುಮ್ಮಾ (ನಾ)= ಗುಮ್ಮಟ; ಗುಂಬಜ; ಬುರುಜು.

ಗುಮ್ಮಿ (ನಾ)= ಪೆಟ್ಟು ಬಡಿದು ಮೈಮೇಲೆ ಉಂಟಾದ ಬಾವು.

ಗುಮ್ಮನ್ನುಸ್ಕ (ನಾ)= ಮಾತಾಡಲಾರದವನು; ತನ್ನಲ್ಲಿ ತಾನಿರುವವನು; ಸುಮ್ಮನಿದ್ದು ಎಲ್ಲವನ್ನು ಸಾಧಿಸುವವನು.

ಗುರಿ (ನಾ)= ನಿಶಾನೆ.

ಗುರಿಕಟ್ಟು (ನಾ)= ನಿಶಾನೆ ಸಾಧಿಸು.

ಗುಮ್ಮಿ (ನಾ)= ಕಾಳಿನ ಕಣಜ; ಸೇತುವೆಗೆ ಬಳಸುವ ಸಿಮೆಂಟಿನ ಕೊಳವೆ; ಸಿಮೆಂಟಿನಿಂದ ಮಾಡಿದ ಗೋಲಾಕಾರದ ಜಲ ಸಂಗ್ರಾಹಕ.

ಗುಮ್ಮು (ಕ್ರಿ)= ಮುಷ್ಠಿಯಿಂದ ಬೆನ್ನಲ್ಲಿ ಇಲ್ಲವೆ ಅಂಗಾಂಗದ ಮೇಲೆ ಜೋರಾಗಿ ಗುದ್ದು.

ಗುರು (ನಾ)= ವಿದ್ಯೆಯನ್ನು ಕಲಿಸುವವನು; ಗುರುಗ್ರಹ; ಧರ್ಮದೀಕ್ಷೆ ಕೊಡುವವನು; ಉಪದೇಶ ನೀಡುವವನು (ಸರ್ವಜ್ಞನ ವಚನ: ತಂದೆಗೂ ಗುರುವಿಗೂ ಒಂದು ಅಂತರ ಉಂಟು। ತಂದೆ ಹೇಳುವನು ಬಹುಬುದ್ಧಿ। ಗುರುವಿಂದ। ಬಂಧನವು ಬಯಲು ಸರ್ವಜ್ಞ).

ಗುರುಗುರು (ಧ್ವಿ)= ನಿದ್ದೆಯ ಸದ್ದು.

ಗುರು ದೀಕ್ಷೆ (ನಾ)= ಗುರುಗಳಿಂದ ಪಡೆಯುವ ಬೋಧೆ

ಗುರುನಾಥ ಅಕ್ಕಣ್ಣ (ನಾ)= ಬ.ಕ. ತಾಲೂಕಿನ ಗ್ವಾರ್ಟಿ ಗ್ರಾಮದ ಪ್ರಸಿದ್ಧ ಸಣ್ಣ ಕತೆಗಾರ.

ಗುರು ಪಲ್ಲಟ= ವರ್ಷಕ್ಕೊಂದು ಸಲ ಗುರುಗ್ರಹದ ಸ್ಥಾನ ಬದಲಾವಣೆ.

ಗುರುಪ್ಪಾದ (ನಾ)= ಗುರುವಿನ ಚರಣ.

ಗುರುಪುತ್ರ (ನಾ)= ಗುರುವಿಗೆ ತಕ್ಕ ಶಿಷ್ಯ; ಗುರು ಆಜ್ಞೆ ಪಾಲಿಸುವವ.

ಗುರುಬಲ (ನಾ)= ಗುರುವಿನ ನೈತಿಕ ಬಲ, ಬೆಂಬಲ.

ಗುರುಭೋಧಾ (ನಾ)= ಗುರುಬೋಧೆ; ಗುರೂಪದೇಶ; ಗುರುದೀಕ್ಷೆ; ಗುರುಮಂತ್ರ ಗುರು ಹೇಳಿಕೊಡುವುದು.

ಗುರುಭೋದಿ (ನಾ)= ಗುರುಬೋಧಾ (ನೋಡಿರಿ)

ಗುರುವಾರ = ಬ್ರಹಸ್ಪತಿವಾರ; ಭೇಸ್ತವಾರ.

ಗುರೂಜಿ (ನಾ)= ಗುರುಗಳು; ಶಿಕ್ಷಕ; ಮಾಸ್ತರ; ಅಧ್ಯಾಪಕ.

ಗುರ್ಕಾಸು (ಕ್ರಿ)= ದಿಟ್ಟಿಸಿ ನೋಡು; ಕಣ್ಣು ಕಿಸಿದು ನೋಡು; ಆರ್ಭಟಿಸು.

ಗುರ್ಖಾ (ನಾ)= ಗೋರ್ಖಾ; ನೇಪಾಲ ಮೂಲದ ಜನಾಂಗ; ರಾತ್ರಿಯಲ್ಲಿ ಓಣಿಯ ಕಾವಲುಗಾರ.

ಗುರ್ಗುಂಜಿ (ನಾ)= ಒಂದು ಬಗೆಯ ಗಿಡ ಮತ್ತು ತುಸು ಕಪ್ಪಾಗಿಯೂ, ಉಳಿದ ಭಾಗ ಕೆಂಪಾಗಿಯೂ ಇಲ್ಲವೆ ಬಿಳಿದಾಗಿಯೂ ಇರುವ ಅದರ ಬೀಜ; ಗುಲುಗುಂಜಿ; ಗುರುಗುಂಜಿ.

ಗುರ್ಗುಟ್ಟು (ಕ್ರಿ)= ಹೆದರಿಸು.

ಗುರ್ರನೆ (ಕ್ರಿ)= ನಾಯಿಯ ಗುರುಗುಟ್ಟುವಿಕೆಯ ಧ್ವನಿ (ಉದಾ: ನನ್ನ ನಾಯಿ ನನಗೆ ಗುರ್ರಂತು).

ಗುಲಾಬಿ (ನಾ)= ಗುಲಾಬದ ಹೂ; ಹೂಗಳ ರಾಜ.

ಗುಲಾಬ್ಜಾಮೂನು (ನಾ)= ಮೈದಾಹಿಟ್ಟು, ಖೋವಾ ಮತ್ತು ಸಕ್ಕರೆ ಮಿಶ್ರಮಾಡಿ ತಯಾರಿಸಿದ ಒಂದು ಬಗೆಯ ಸಿಹಿ ತಿಂಡಿ.

ಗುಲಾಮ (ನಾ)= ಅಡಿಯಾಳು; ಸೇವಕ; ಸೋತವನು.

ಗುಲಾಮ ಗಿರಿ (ನಾ)= ದಾಸ್ಯ; ಅಡಿಯಾಳು ತನ

ಗುಲಾಮಿ (ನಾ)= ಗುಲಾಮಗಿರಿ (ನೋಡಿರಿ)

ಗುಲಾಲು (ನಾ)= ಗುಲಾಬಿ ಬಣ್ಣದ ಪುಡಿ, ಹುಡಿ.

ಗುಲಾಲು ಬುಕಿಟ್ಟು (ನಾ)= ಗುಲಾಬಿ ಬಣ್ಣದ ಹಾಗೂ ನಾಸಿ ಬಣ್ಣದ ಹುಡಿ.

ಗುಲುಗುಂಜಿ (ನಾ)= ಗುರುಗುಂಜಿ; ಗುರ್ಗುಂಜಿ (ನೋಡಿರಿ).

ಗುಲ್ಕಂದ (ನಾ)= ಗುಲ್ಕನ್ನು; ಗುಲಾಬಿ ಹೂವಿನ ಪಕಳೆಗಳನ್ನು ಸಕ್ಕರೆಯಲ್ಲಿ ಸೇರಿಸಿ ಮಾಡಿದ ಲೇಹ.

ಗುಲ್ಗುಂಜಿ (ನಾ)= ಗುರ್ಗುಂಜಿ (ನೋಡಿರಿ).

ಗುಲ್ದಸ್ತಾ (ನಾ)= ಹೂವಿನ ಗೊಂಚಲು.

ಗುಲ್ಫಾಮ್ (ನಾ)= ಹೆಂಡದಲ್ಲಿ ಬೆರಸಿದರೆ ಅತಿಯಾದ ನಶೆ ಉಂಟು ಮಾಡುವ ಒಂದು ಪ್ರಕಾರದ ರಸಾಯನ.

ಗುಲ್ಮಾ (ನಾ)= ಇಸ್ಪೀಟ್ ಎಲೆಗಳಲ್ಲಿ ಗುಲಾಮ (ಜಾಕಿ) ಎಂಬ ಎಲೆ.

ಗುಲ್ಮಾಸಿ (ನಾ)= ಒಂದು ಪ್ರಕಾರದ ಉದ್ದಾದ ಹೂ ಮತ್ತು ಅದರ ಗಿಡ.

ಗುಲ್ಲು (ನಾ)= ಗದ್ದಲ; ಗಲಾಟೆ; ಗಾವಳಿ; ಚೀರಾಟ; ಕೂಗಾಟ.

ಗುಲ್ಲು ಮಾಡು (ಕ್ರಿ)= ಗದ್ದಲ ಮಾಡು; ಗಲಾಟೆ ಮಾಡು; ಗಾವಳಿ ಎಬ್ಬಿಸು; ಚೀರಾಡು; ಕೂಗಾಡು; ಜೋರಾಗಿ ಮಾತಾಡು.

ಗುಹೇಶ್ವರ (ನಾ)= ಶೂನ್ಯಸಿಂಹಾ-ಸನಾಧೀಶ್ವರರೂ, ಅನುಭವ ಮಂಟಪದ ಅಧ್ಯಕ್ಷರೂ ಆದಂಥ ಅಲ್ಲಮಪ್ರಭುದೇವರ ವಚನಾಂಕಿತ; ಗೊಹೇಶ್ವರ.

ಗುಳಂಬ (ನಾ)= ಗುಡಂಬ (ನೋಡಿರಿ).

ಗುಳಪೀಠ (ನಾ)= ಬೆಲ್ಲದ ಪುಡಿ; ಕೆಂಪು ಸಕ್ಕರೆ; ದೇಸಿ ಸಕ್ಕರೆ.

ಗುಳಾರ (ನಾ)= ಉದ್ದಾದ ಕೊಟ್ಟಿಗೆ; ಹುಲ್ಲಿನಿಂದ ತಯಾರಿಸಿದ ಚಪ್ಪರ; ದನಕರುಗಳಿಗಾಗಿ ತಯಾರಿಸಲಾದ ಬಿಸಿಲು, ಮಳೆ, ಚಳಿ ತಡೆಯುವ ಆಸರೆ.

ಗುಳಿ (ನಾ)= ಬಾಗಿಲಿಗೆ ಅಡ್ಡಲಾಗಿ ತಡೆಯೊಡ್ಡುವ ಮರದ ತುಂಡು.

ಗುಳಿಎಳಿ (ಕ್ರಿ)= ಗುಳಿ ಮಾಡದ ಮರದ ತುಂಡನ್ನು ಎಳೆದು, ತಟ್ಟಿ ತೆರೆಯದಂತೆ ಹೊಂದಿಸು

ಗುಳಿಮಾಡ (ನಾ)= ಗುಳಿ ಕಟ್ಟೆಗೆ ಇಡಲು ಗೋಡೆಯೊಳಗೆ ನಿರ್ಮಿಸಲಾದ ಉದ್ದಾದ ಮಾಡ.

ಗುಳುಂ ಮಾಡು (ಕ್ರಿ)= ನುಂಗಿ ಬಿಡು; ಕಬಳಿಸು; ಬೇರೆಯವರಿಂದ ಪಡೆದ ವಸ್ತುವನ್ನು ಹಿಂತಿರುಗಿಸದಿರು.

ಗುಳುಗುಂಚಿ (ನಾ)= ಕಚಗುಳಿ

ಗುಳುಗುಚ್ಚಿ (ನಾ)= ಗುಳುಗುಂಚಿ; ಕಚಗುಳಿ; ಕಂಕುಳಲ್ಲಿ ಕೈಯಾಡಿಸಿ ನಗಿಸುವಿಕೆ.

ಗುಳುಗುಳು (ದ್ವಿ)= ನುಂಗುವ ಕ್ರಿಯೆ; ಕಚಗುಳಿ ಕ್ರಿಯೆ;

ಗುಳುಗುಳು ಮಾಡು (ಕ್ರಿ)= ಕಚಗುಳಿ ಇಡು; ನಗಿಸು

ಗುಳೆಕಾರ (ನಾ)= ಘುಳೆಕಾರ; ಗುಳೆ ಬಂದವನು; ಗುಳೆ ಹೋದವನು; ಊರು ಬಿಟ್ಟವನು.

ಗುಳ್ದಾಳಿ (ನಾ)= ಗುಳ್ಳು; ಮಾಂಗಲ್ಯ; ಮಂಗಳ ಸೂತ್ರ.

ಗುಳ್ದಾಳಿ ಕಟ್ಟು (ಕ್ರಿ)= ಮದುವೆ ಮಾಡಿಕೊ.

ಗುಲ್ದಾಳಿ ಹರ್ಕೊ (ಕ್ರಿ)= ಮದುವೆಯ ಬಂಧನವನ್ನು ಮುರಿ; ವಿಚ್ಛೇದನ ಹೊಂದು; ತಾಳಿ ಹರಿದುಕೊ; ತಲಾಖ ಕೊಡು.

ಗುಳ್ವಾಂಗ್ಯ (ನಾ)=ಅಕ್ಕಿ ಮತ್ತು ಉದ್ದಿನ ಬೇಳೆ ರುಬ್ಬಿ ತಯಾರಿಸಿದ ಗುಂಡು ಗುಂಡು ತಿಂಡಿ

ಗುಳ್ಪೀಟ (ನಾ)= ಗುಳಪೀಠ (ನೋಡಿರಿ)

ಗುಳ್ಳಿ (ನಾ)= ಗುರುಳೆ; ಗುಳ್ಳೆ; ಜೀವ, ಪ್ರಾಣ. (ಹಾಡು: ನೀರ ಮೇಲಿನ ಗುಳ್ಳಿ। ಸಾಗುವದೆಲಿಯ ತನಕ। ಎಂದಿಗಾದರು ಹೋಗಬೇಕು। ತಿಳಿಜೀವವೇ-ದೇಶಾಂಶ ಹುಡಗಿ); ಪಕ್ಕು; ಚರ್ಮದ ಮೇಲೆ ಕೀವು, ತಿಳಿ ದ್ರವಗಳಿಂದ ಉಂಟಾದ ಉಬ್ಬು; ಕುಳ್ಳಿ; ಮಣ್ಣಿನ ಮಿಳ್ಳಿ.

ಗುಳ್ಳಿ ಒಡಿ (ಕ್ರಿ)= ಗುರುಳೆ ಇಲ್ಲವಾಗು; ಜೀವ ಹೋಗು; ಸಾವು ಉಂಟಾಗು.

ಗುಳ್ಳು (ನಾ)= ತಾಳಿ; ತಾಳಿಯಂತಹ ಒಡವೆ; ಗುಳ್ದಾಳಿ; ಕಂಠಾಭರಣ.

ಗುಳ್ಯಾ (ನಾ)= ವಲಸೆ ಹೋಗುವಿಕೆ; ಗುಳೆ

ಗುಳ್ಯಾ ಕಟ್ಗೊಂಡು ಹೋಗು (ಕ್ರಿ)= ವಲಸೆ ಹೋಗು; ಗುಳೆ ಹೋಗು; ಊರುಬಿಟ್ಟು ಹೋಗು.

ಗುಳ್ಯಾಕಾರ (ನಾ)= ಊರು ಬಿಟ್ಟು ಬಂದವನು; ಗುಳೆ ಹೋದವನು; ವಲಸೆಗಾರ.

ಗುಳ್ಯಾ ಕಿತ್ತು (ಕ್ರಿ)= ಮನೆಬಿಟ್ಟು ಹೋಗು; ವಲಸೆ ಹೋಗು.

ಗೂಕ (ನಾ)= ಗೂಗೆಯ ಕೂಗು; ಕೋಡಂಗಿಯ ಕೂಗು.

ಗೂಗಿ (ನಾ)= ಗೂಗೆ; ಘೂಕ; ಗೂಬೆ.

ಗೂಗಿಮಾರಿ (ನಾ)= ಗೂಗೆಯಂತಹ ಮೋರೆ.

ಗೂಟ (ನಾ)= ಘೂಟ; ಗುಂಜಿ, ನೆಲದಲ್ಲಿ ಹುಗಿದ ಕಂಭ; ಶಿಶ್ನ.

ಗೂಡು (ನಾ)= ಸೂಡು; ಸೂಡುಗಳ ಬಣವೆ; ತೆನೆ ಇರುವ ಸೂಡು.

ಗೂಡ್ಮುರಿ (ಕ್ರಿ)= ಸೂಡಿನಿಂದ ತೆನೆಮುರಿದು ಬೇರ್ಪಡಿಸು.

ಗೂದಿ (ನಾ)= ಗುದದ್ವಾರದಿಂದ ಹೊರಬಂದ ಮಾಂಸ.

ಗೂದಿ ಖೆಡುವು (ಕ್ರಿ)= ಹೊಡೆದು ಬಡಿದು ಗುದ ದ್ವಾರದ ಮಾಂಸವನ್ನು ಹೊರಬೀಳುವಂತೆ ಮಾಡು; ಹೊಡೆದು ಹಣ್ಣು ಹಣ್ಣು ಮಾಡು

ಗೂದಿ ಬಯ್ಲಿಗ್ಬೀಳು (ಕ್ರಿ)= ಮುಚ್ಚಿದುದು ಬಯಲಿಗೆ ಬರು; ಕಳ್ಳ ಗುಣ ಜಾಹೀರಾಗು; ಗುದದ್ವಾರ ತೆರೆ.

ಗೂದಿ ಹೊರ್ಗಭೀಳು (ಕ್ರಿ)= ಗುದದ್ವಾರದ ಮಾಂಸ ಹೊರಗೆ ಬೀಳು; ಹೂಳಿಕೆ ಹೊರ ಬೀಳು; ಕಳ್ಳಗುಣ ಬಯಲಾಗು; ರಹಸ್ಯ ಬಯಲಾಗು.

ಗೂನಾಗು (ಕ್ರಿ)= ಬಾಗು; ಬಗ್ಗು; ಡೂಗಾಗು.

ಗೂನಿ (ನಾ)= ಗೂನುಬೆನ್ನುಳ್ಳವಳು; ಡೂಗಿ.

ಗೂನು (ನಾ)= ಡೂಗು; ಉಬ್ಬಿದ ಬೆನ್ನು ಹಾಗೂ ಒಳಸೇರಿದ ಎದೆ.

ಗೂಬಿ (ನಾ)= ಮೇಣದಂತೆ ಗಟ್ಟಿಗೊಂಡ ಕಿವಿಯಲ್ಲಿಯ ಮಲ; ಕೂಗುಣ.

ಗೂಬಿತೆಗ್ಯಾಂವ (ನಾ)= ಕಿವಿಸ್ವಚ್ಛ-ಗೊಳಿಸುವವನು.

ಗೂರ್ಖಾ (ನಾ)= ಗುರ್ಖಾ; ಗೋರ್ಖಾ; ನೇಪಾಲ ಮೂಲದ ಒಂದು ಜನಾಂಗ; ಓಣಿಯ ಕಾವಲು ಗಾರ.

ಗೂಳಂಬಾ (ನಾ)= ಬೆಲ್ಲದಲ್ಲಿ ತಯಾರಿಸಿದ ಮಾವಿನ ಕಾಯಿಯ ಲೇಹ.

ಗೂಳ್ವೀಠ (ನಾ)= ಹಿಟ್ಟಿನಂತಿರುವ ಸಕ್ಕರೆ; ಬೆಲ್ಲದಿಂದ ಮಾಡಿದ ಸಕ್ಕರೆ; ದೇಸೀ ಸಕ್ಕರೆ.

ಗೆಂಡಿ (ನಾ)= ಗೂದಿ; ಹೆಂಡೆ; ಗಡ್ಡೆ.

ಗೆಂಡಿ ಹೊರಬೀಳು (ಕ್ರಿ)= ಆಕಳು, ಎಮ್ಮೆ ಇತ್ಯಾದಿಗಳ ಜನನೇಂದ್ರಿಯ ಇಲ್ಲವೆ ಗುದದ್ವಾರದಿಂದ ಮಾಂಸ ಹೊರಬೀಳು.

ಗಜ್ಜಿಟಿಕ್ಯಾ (ನಾ)= ಗೆಜ್ಜೆಗಳಿಂದ ಕೂಡಿದ ಚಿನ್ನದ ಕಂಠಾಭರಣ; ಘಜ್ಜಿಟಿಕ್ಯಾ.

ಗೆಣತಿ (ನಾ)= ಗೆಳತಿ; ಸಖಿ; ಸ್ನೇಹಿತೆ; ನಲ್ಲೆ; ಪ್ರೇಯಸಿ; ಗೆಣೆಕಾತಿ.

ಗೆಣೆಕಾರ (ನಾ)= ಗೆಳೆಯ, ಸ್ನೇಹಿತ; ನಲ್ಲ; ಇನಿಯ.

ಗೆಣ್ಯಾ (ನಾ)= ಗೆಣೆಯ; ಜೊತೆಗಾರ; ಸ್ನೇಹಿತ; ಗೆಣೆಕಾರ; ಗೆಳ್ಯಾ; ಪ್ರಿಯಕರ; ನಲ್ಲ.

ಗೆಣ್ಸು (ನಾ)= ಗೆಣಸು; ರತ್ನಾಲು; ಸಿಹಿಗಡ್ಡೆಯ ಸಸ್ಯ; ಶಿಶ್ನ; ಪುರುಷನ ಜನನೇಂದ್ರಿಯ.

ಗೆದಿ (ಕ್ರಿ)= ಗೆಲ್ಲು; ಜಯಿಸು; ವಿಜಯಿಯಾಗು.

ಗೆದ್ಯಾದು ಸೋಲಾದು (ನಾ)= ಗೆಲುವು ಮತ್ತು ಸೋಲು; ಯಶ ಮತ್ತು ಅಪಯಶ.

ಗೆರಿ (ನಾ)= ಗೆರೆ; ರೇಖೆ; ರೇಷೆ.

ಗೆರಿ ಎಳಿ (ಕ್ರಿ)= ಸೀಮೆ ಕಾಯಂ ಮಾಡು; ರೇಖೆ ಮೂಡಿಸು.

ಗೆರಿದಾಟು (ಕ್ರಿ)= ಎಲ್ಲೆ ಮೀರು; ಮಾತು ಮೀರು; ಸೀಮೆಯನ್ನು ಅತಿಕ್ರಮಿಸು (ಉದಾ: ಸೀತಾದೇವಿ ಲಕ್ಷ್ಮಣಗೆರಿ ಧಾಟಿದಳು).

ಗೆರಿ ಹಾಕು (ಕ್ರಿ)= ಮೇರೆ ಗುರುತಿಸು; ಎಲ್ಲೆಯನ್ನು ಕಾಯಂಗೊಳಿಸು; ಮಾತು ತೆಗೆದುಕೊ (ಸೀತೆಯ ಗುಡಿಸಲಿನ ಸುತ್ತ ಲಕ್ಷ್ಮಣನು ಗೆರೆ ಹಾಕಿದನು).

ಗೆಳತಿ (ನಾ)= ಗೆಣತಿ, ಗೆಣೆಕಾತಿ; ಸಖಿ; ಗೆಳ್ತಿ.

ಗೆಳ್ತಾನ (ನಾ)= ಗೆಳೆತನ; ಸ್ನೇಹ; ಮೈತ್ರಿ.

ಗೆಳ್ತಿ (ನಾ)= ಗೆಳತಿ (ನೋಡಿರಿ).

ಗೆಳ್ಯಾ (ನಾ)= ಗೆಣ್ಯಾ; ಗೆಳೆಯ; ಗೆಣೆಯ; ಗೆಣೆಕಾರ; ಸ್ನೇಹಿತ; ಸಂಗಾತಿ; ಸಖ; ಪ್ರಿಯಕರ.

ಗೇಜು (ನಾ)= ದಪ್ಪಳತೆಯ ಮಾನ.

ಗೇಟು (ನಾ)= ಬಾಗಿಲು; ಸುತ್ತುಗೋಡೆಯ ಬಾಗಿಲು; ರೈಲು ಪಟ್ಟಿಯ ಬಾಗಿಲು.

ಗೇಟು ಹಾಕು (ಕ್ರಿ)= ಮುಖ್ಯದ್ವಾರ ಮುಚ್ಚು.

ಗೇಣು (ನಾ)= ಅಂಗೈ ಬಿಚ್ಚಿದಾಗ ಹೆಬ್ಬೆಟ್ಟಿನ ತುದಿಯಿಂದ ಕಿರಿಬೆರಳಿನ ತುದಿವರೆಗಿನ

ಅಂತರದ ಅಳತೆ; ಒಂಭತ್ತು ಇಂಚಿನ ಅಳತೆ (ಚಂಪಾ, ಚೋಟು, ಗೇಣು, ಮೊಳ, ಗಜ, ಮಾರು ಇವು ಕೈ ಅಳತೆಗಳ ಮಾನಗಳು).

ಗೇಣು ಹಾಕು (ಕ್ರಿ)= ವಸ್ತುವಿನ ಉದ್ದಳತೆ, ಅಗಲಳತೆ ಅಥವಾ ಎತ್ತರಳತೆಯನ್ನು ಗೇಣಳತೆಯಿಂದ ಗುರುತಿಸು.

ಗೈಪಾಗು (ಕ್ರಿ)= ಗಾಯಬ್ ಆಗು; ಮಾಯವಾಗು; ಲೀನವಾಗು.

ಗೈಪು (ನಾ)= ಗಾಯಬ್; ಮಾಯವಾಗುವಿಕೆ; ಲೀನನಾಗುವಿಕೆ.

ಗೈಬಾವತಿ (ನಾ)= ಗೈಬೂಪೀರನ ಹೆಸರನ್ನು ಹೆಣ್ಣು ಮಕ್ಕಳಿಗೆ ಇಡುವ ರೀತಿ.

ಗೈಮಳ್ಳಿ (ನಾ)= ಗಾಯ್ಮಳಿ; ಗವಾರಿ ದನಗಳಂಥವಳು; ಸಂಚಾರಿ ಹೆಣ್ಣು.

ಗೈಯಾಳಿ (ನಾ)= ಗಯ್ಯಾಳಿ; ಗವಾರಿ; ಆಕಳಂತೆ ಸಿಕ್ಕೆಡೆ ಸಂಚರಿಸುವವಳು; ಲೈಂಗಿಕ ದುರ್ನಡತೆವುಳ್ಳವಳು.

ಗೈರ (ವಿ) ಉ. = ಅನ್ಯ; ಬೇರೆ; ಇತರೆ.

ಗೈರಧಂದ್ಯಾ (ನಾ)= ಅಲ್ಲದ ಕೆಲಸ; ಹೀನ ಕೆಲಸ.

ಗೈರಾಣ (ನಾ)= ಗಾಯ್ರಾಣ; ಊರದನ ಕರುಗಳು ಮೇಯುವ ಜಾಗ.

ಗೈರಾಣಿ (ನಾ)= ಗಾಯ್ರಾಣಿ; ಗಾಯ್ಮಾಳಿ; ಗವಾರಿ ದನಗಳಂತೆ ಸಂಚರಿಸುವವನು(ಳು).

ಗೈರಿ (ನಾ)= ನೀಚ; ತುಂಟ; ಜಂಗ್ಲಿ; ಕಾಡು ಸ್ವಭಾವವುಳ್ಳವನು(ಳು); ಕಾಡಿನಲ್ಲಿ ಬೆಳೆದದ್ದು.

ಗೈರಿಕಟ್ಗಿ (ನಾ)= ಕಾಡಿನಲ್ಲಿ ಬೆಳೆದ ಮರದ ಕಟ್ಟಿಗೆ; ಜಂಗ್ಲಿ ಕಟ್ಟಿಗೆ; ಉರುವಲು; ಸೌದೆ.

ಗೈರು ಉ. = ಅನ್ಯ; ಬೇರೆ.

ಗೈರು ಹಾಜರಿ (ನಾ) ಉ. = ಅನುಪಸ್ಥಿತಿ.

ಗೈರ್ಜವಾಬ್ದಾರ (ನಾ) ಉ. = ಜವಾಬ್ದಾರಿ ಇಲ್ಲದವನು.

ಗೈರ್ಜವಾಬ್ದಾರಿ (ನಾ) ಉ.= ಬೇಜವಾ-ಬ್ದಾರಿ; ಜುಮ್ಮೇದಾರಿ ಇಲ್ಲದ.

ಗೈರ್ಜಾತಿ (ನಾ)= ಅನ್ಯಜಾತಿ; ಇತರೆ ಕುಲ.

ಗೈರ್ಜುಮ್ಮಾ (ನಾ)= ಬೇಜವಾಬ್ದಾರಿ.

ಗೈರ್ಧಂದ್ಯಾ (ನಾ)= ಹೀನ ಕೆಲಸ; ಕೀಳು ಕೆಲಸ.

ಗೈರ್ಮಂದಿ (ನಾ)= ಅನ್ಯರು; ಅನ್ಯಜನ; ಇತರೆ ಜನ

ಗೈರ್ಮನ್ಯಾ (ನಾ)= ಅನ್ಯ ಮನುಷ್ಯ; ಬೇರೆ ವ್ಯಕ್ತಿ

ಗೊಂಟ (ಅ)= ಗುಂಟ; ಜತೆಗೆ; ಹೊಂದಿಕೊಂಡಂತೆ; (ಬದುವಿನ ಗೊಂಟ; ಹಾದಿಗೊಂಟ ಇತ್ಯಾದಿ).

ಗೊಂಡ (ನಾ)= ಕುರುಬ; ಧನಗರ (ಬೀರಗೊಂಡ, ಶಂಕರಗೊಂಡ, ಶಿವಗೊಂಡ, ಭೀಮಗೊಂಡ ಇತ್ಯಾದಿ).

ಗೊಂಡೆ (ನಾ)= ಗೊಂಚಲು; ಘೊಂಡ್ಯಾ.

ಗೊಂಡೆದ ಮೆಟ್ಟು (ನಾ)= ಗೊಂಡೆ ಹಚ್ಚಿದ ಚಪ್ಪಲಿ; ಘೊಂಡ್ಯಾದ ಚಪ್ಪಲಿ.

ಗೊಂಡ್ಯಾ (ನಾ)= ಗೊಂಡೆ; ಘೊಂಡೆ; ಹೂವಿನ ಗೊಂಚಲು, ಎತ್ತಿನ ಮತಾಟಿಯಗೊಂಚಲು, ಗೊಂಡೆ.

ಗೊಂದಳ (ನಾ)= ಗೊಂದಲ; ಗೋಂಧಳ; ಅಂಬಾ ಬಾಯಿ ಹೆಸರಲ್ಲಿ ರಾತ್ರಿ ಜಾಗರಣ ಮಾಡಿ ಗೊಂದಳಿಗರಿಂದ ಹೇಳಿಸುವ ಕಥೆ.

ಗೊಂದಳ ಹಾಕು (ಕ್ರಿ)= ಅಂಬಾಯಿ ಹೆಸರಿನಲ್ಲಿ ರಾತ್ರಿಕತೆ ಹೇಳಿಸಿ ಜಾಗರಣೆ ಮಾಡು.

ಗೊಂದಳ್ಯಾ (ನಾ)= ಗೊಂದಳಿಗ; ಅಂಬಾಬಾಯಿಯ ಕತೆ ಹೇಳುವವನು.

ಗೊಂಞನು (ಕ್ರಿ)= ನೊಣಗಳು ಗುಂಯ್ಗುಟ್ಟು

ಗೊಟಾಸು (ಕ್ರಿ)= ಬಂಗಾರದ ಮಣಿಗಳನ್ನು ದಾರದಿಂದ ಪವಣಿಸಿ ಹೆಣೆ; ಘೊಟಾಸು.

ಗೊಟಗೊಟಿ (ನಾ)= ಟೊಳ್ಳು; ತಿರುಳು ಇಲ್ಲದ್ದು; ತಿರುಳು ಒಣಗಿದ್ದು.

ಗೊಟ್ಟವ್ಗೊಟ್ಟ (ನಾ)= ಹುಮನಾಬಾದ ತಾಲುಕಿನ ಒಂದು ಅರಣ್ಯದ ಹೆಸರು; ಐತಿಹಾಸಿಕ ಒಂದು ಹಾಳೂರು.

ಗೊಟ್ಟ (ನಾ)= ದವಗಳಿಗೆ ಔಷಧ ಕುಡಿಸುವ ನಳಿಕೆ; ಲಾಳಿಕೆ.

ಗೊಟ್ಟಿ (ನಾ)= ಯೋನಿ; ಸ್ತ್ರೀ ಜನನೇಂದ್ರಿಯ.

ಗೊಡಿ (ನಾ)= ಗೊಡವೆ; ಉಸಾಬರಿ; ಸಂಬಂಧ; ಸಂಪರ್ಕ.

ಗೊಡ್ಡಿ (ನಾ)= ಬಂಜೆ; ಕರುಹಾಕದ ಹಸು; ಎಮ್ಮೆ; ಇತ್ಯಾದಿ.

ಗೊಡ್ಡು (ನಾ)= ಕರು ಹಾಕಲಾರದ್ದು; ಈಯಲಾರದ್ದು.

ಗೊಡ್ಡು ಭಾರ್ಗಿ (ನಾ)= ಕೆಲಸಕ್ಕೆ ಬಾರದ ಬಂಜೆ.

ಗೊಡ್ಡು ಮಾತು (ನಾ)= ಕೆಲಸಕ್ಕೆ ಬಾರದ ಮಾತು; ನಿರುಪಯುಕ್ತ ಚರ್ಚೆ.

ಗೊಡ್ಡು ಹೋಗು (ಕ್ರಿ)= ಬಂಜೆಯಾಗು.

ಗೊಣಸು (ನಾ)= ಗೆಣಸು; ರತ್ನಾಲು; ಸಿಹಿ ಬಟಾಟೆ; ಶಿಶ್ನ; ಪುರುಷನ ಜನನೇಂದ್ರಿಯ.

ಗೊತ್ತು (ನಾ)= ಖೂನ; ಪರಿಚಯ; ಪತ್ತಾ; ನೆಲೆ; ನಿವಾಸ; ತಿಳಿವು.

ಗೊತ್ತು ಗುರಿ (ನಾ)= ಠಾವು ಠಿಕಾಣಿ; ವಿಳಾಸ; ಪತಾ; ಪತ್ತೆ.

ಗೊನ್ನಿ (ನಾ)= ಒಣಗಿದ ಸಿಂಬಳ; ಮೆಕ್ಕಡ; ಸುಂಬಳ ತುಂಬಿದ ಮೂಗು; ಮರವನ್ನು ಕೊರೆಯುವ ಹುಳು.

ಗೊನ್ನಿ ಮೂಗು (ನಾ)= ಸಿಂಬಳ ತುಂಬಿದ ಮೂಗು.

ಗೊಬ್ಬಿ (ನಾ)= ಸೋರುವ ಹೆಂಡವನ್ನು ಸಂಗ್ರಹಿಸುವ ಮಡಕೆ; ಹೆಂಡ ತುಂಬಿಡುವ ಮಡಿಕೆ; ಬೊಬ್ಬೆ; ಬೊಂಬಡಿ.

ಗೊಬ್ಬಿ ಏಳು (ನಾ)= ಗದ್ದಲ ಅಥವಾ ಗಾವಳಿ ಪ್ರಾರಂಭವಾಗು

ಗೊಬ್ಬಿ ಹೊಡಿ (ಕ್ರಿ)= ಬೋಂಬ್ಡಿ ಹೊಡಿ; ಬೊಬ್ಬೆ ಹಾಕು; ಹೊಯ್ಕೊ.

ಗೊಬ್ಬುರು (ನಾ)= ಗೊಬ್ಬರ; ಗೊಬ್ರ; ಖಾತ.

ಗೊಬ್ಬುರ್ಭಂಡಿ (ನಾ)= ಗೊಬ್ಬರ ಸಾಗಿಸುವ ಚಕ್ಕಡಿ; (ಗಾದೆ: ಒಬ್ಬ ಮ್ಯಾಲೊಬ್ಬುರ್ಹಾಕಿ, ಗೊಬ್ಬುರ್ಭಂಡಿ ಹೊಡ್ದಿದ್ರಂತ).

ಗೊರ್ಕಿ (ನಾ)= ಗೊರಕೆ; ನಿದ್ದೆಯಲ್ಲಿ ಬರುವ ಗೊರ್‍ರೆಂಬ ಸದ್ದು.

ಗೊಲ್ಲ (ನಾ)= ಗವಳಿಗ; ನಾಟಿ ಔಷಧ ಕೊಡುವ ಗೊಲ್ಲ ಜನಾಂಗಕ್ಕೆ ಸಂಬಂಧಿಸಿದ ವೈದ್ಯ (ಕೋಲಿನ ಹಾಡು: ಹಾಲ ಮಾರುತ ಬಂದಾಳಿವಳೊ ಹವಳದ ನಾಮದ ಗೊಲ್ಲರ ಪೋರಿ).

ಗೊಲ್ಲತಿ (ನಾ)= ಗವಳಗಿತ್ತಿ; ಗೌಳಿಗರ ಮನೆಯ ಮಹಿಳೆ.

ಗೊಲ್ಲರ್ಬಾಲಿ (ನಾ)= ಗೊಲ್ಲತಿ; ಗವಳಿಗರ ಮಹಿಳೆ; ಗವಳಿಗರ ಹುಡುಗಿ (ಕೋಲಿನ ಹಾಡು: ಎಲ್ಲಾಳಪ್ಪ ಗೊಲ್ಲರ್ಬಾಲಿ। ಕಿಲ್ಲೆ ನಿಂತಂಗಾಯ್ತಲ್ಲ!).

ಗೊಳಿ (ನಾ)= ಕುಂಪಿ; ರಾಶಿ.

ಗೊಳಿಮಾಡು (ಕ್ರಿ)= ಕುಂಪಿಮಾಡು; ಒಂದೆಡೆ ಶೇಖರಿಸು; ಒಟ್ಟು ಗೂಡಿಸು; ರಾಶಿ ಹಾಕು.

ಗೊಳಕ (ನಾ)= ಹುಳುಕು ಮೋರೆಯವನು.

ಗೊಳ್ಳಾ ಸೊಳ್ಳಾ (ನಾ)= ಅಂತಿಂಥದ್ದು; ಹೊಟ್ಟು ಸೇರಿದ್ದು, ಹುಳು ಹತ್ತಿದ್ದು; ಕೆಟ್ಟು ಹೋದದ್ದು.

ಗೊಳ್ಕಿ (ನಾ)= ಹುಳುಕು ಮೋರೆಯವಳು.

ಗೊಳ್ಗಲ್ಲು (ನಾ)= ಸಣ್ಣ ಸಣ್ಣ ಗುಂಡುಗಲ್ಲು.

ಗೊಳ್ಯಾಕು (ಕ್ರಿ)= ಒಟ್ಟುಗೂಡಿಸು; ಶೇಖರಿಸು; ಸಂಗ್ರಹಿಸು.

ಗೊಳ್ಳಿ (ನಾ)= ಗೊರಳೆ; ಗೆದ್ದಲು; ಬಿಳಿ ಇರುವೆ (ಗಾದೆ: ಮನಿಕಟ್ಟಿದಾವ ಗೊಳ್ಳೆಪ್ಪ; ಸೇರ್ಕೊಂಡು ಬಿಟ್ಟಾಂವ ನಾಗಪ್ಪ).

ಗೊಳ್ಳಿ ಬಾಶಾ (ನಾ)= ಗೊರಳೆಗಳ ರಾಜ; ದಪ್ಪ ಗೊರಳೆ; ಟೇಕರಾಜಾ.

ಗೊಳ್ಳಿಮನಿ (ನಾ)= ಗೊರಳೆಗಳ ಹುತ್ತ; ಗೆದ್ದಲು ಮನೆ.

ಗೊಳ್ಳಿ ಮಾರ್ಯಾಂವ (ನಾ)= ಹುಳುಕು ಮೋರೆಯವ; ದೇವಿರೋಗ ಅಥವಾ ಸಿಡುಬು ಗಾಯಗಳುಳ್ಳ ಮುಖದವನು.

ಗೊಳ್ಳಿ ಹತ್ತು (ಕ್ರಿ)= ಗೊರಳೆಯಿಂದ ಕಟ್ಟಿಗೆಗೆ ಕೊರೆತ ಉಂಟಾಗು; ಒಳಗೊಳಗೆ ಕೊರೆ; ಬಡಕಲಾಗು.

ಗೊಳ್ಳು (ನಾ)= ಸೊಳ್ಳು; ಜೊಳ್ಳು.

ಗೊಳ್ಳು ಮಾತು (ನಾ)= ಕೆಲಸಕ್ಕೆ ಬಾರದ ಸಂಭಾಷಣೆ; ನಿರುಪಯುಕ್ತ ಮಾತು.

ಗೊಳ್ಯಾ (ನಾ)= ಹುಳುಕು ಮೋರೆಯವ; ಮೋರೆಯ ಮೇಲೆ ಮೈಲಿಬೇನೆಯ ಗಾಯಗಳುಳ್ಳವನು (ಬೈಗುಳ).

ಗೋಂ (ನಾ)= ಗೋಮು; ಲಕ್ಷ್ಮೀ ಚೇಳು; ಸರೀಸೃಪ.

ಗೋಂದು (ನಾ)= ಅಂಟು; ಮರದಿಂದ ಸೋರುವ ಜಿಗುಟು ದ್ರವ.

ಗೋಂದ್ಗೈ (ನಾ)= ಕರ್ನಾಟಕ ಆಂಧ್ರ ಸೀಮೆಯ ಒಂದು ಹಳ್ಳಿ; ಭಾಲ್ಕಿ ಹಿರೇಮಠದ ಚೆನ್ನಬಸವಪಟ್ಟದೇವರ ಪರಮ ಭಕ್ತ ಹಣಮಂತರಾವ ಕಾರ್ಯದರ್ಶಿಯ ಹುಟ್ಟೂರು.

ಗೋಂಧಳ (ನಾ)= ಗೊಂದಲ; ಅಂಬಾಬಾಯಿಯ ಪೂಜೆ ಮತ್ತು ಜಾಗರಣ

ಗೋಂಧ್ಳಿ (ನಾ)= ಗೊಂದಲಿಗ; ಅಂಬಾಬಾಯಿಯ ಪೂಜಾರಿ.

ಗೋಕಟ್ಟಾ (ನಾ)= ದನಕರುಗಳು ನೀರು ಕುಡಿಯಲು ನಿರ್ಮಿಸಲಾದ ಚಿಕ್ಕ ಕೆರೆ; ಕುಂಟೆ.

ಗೋಕುಳ (ನಾ)= ಗೋಕುಲ; ಗೋಸಂಪತ್ತು; ಶ್ರೀ ಕೃಷ್ಣನು ಬೆಳೆದ ಸ್ಥಾನ; ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿಯ ಹೆಸರು.

ಗೋಜಿಗೆ ಹೋಗು (ಕ್ರಿ)= ಸಂಬಂಧ ಹೊಂದು; ಸಂಪರ್ಕ ಹೊಂದು.

ಗೋಜು (ನಾ)= ಗೊಂದಲ; ಕಿರ್ಕಿರಿ; ಸಂಪರ್ಕ; ಸಂಬಂಧ.

ಗೋಟಿ (ನಾ)= ಗೋಲಿ; ಮಕ್ಕಳಾಟದ ಗಾಜಿನ ಇಲ್ಲವೆ ಕಲ್ಲಿನ ಚಿಕ್ಕ ಗುಂಡು.

ಗೋಟಿ ಆಡು (ಕ್ರಿ)= ಗೋಲಿಯಾಡು; ವ್ಯರ್ಥ ಸಮಯ ಹಾಳು ಮಾಡು (ಉದಾ: ನಾನೇನು ಹಸಿಗೋಟಿ ಆಡಿಲ್ಲ, ನೆನಪಿಡು ತಮ್ಮಾ).

ಗೋಟು (ನಾ)= ಬಟ್ಟೆಯ ಅಂಚು ಬಿಚ್ಚದಂತೆ ಹಾಕುವ ಹೊಲಿಗೆ; ಗಾಳಿಪಟ ಹರಿಯದಂತೆ ಸುತ್ತಲು ಕಟ್ಟಿದ ದಾರ.

ಗೋಟು ಕಟ್ಟು (ನಾ)= ಬಟ್ಟೆ ಬಿಚ್ಚದಂತೆ ಸುತ್ತಲೂ ಹೊಲಿಗೆ ಹಾಕು; ಗಾಳಿಪಟ ಹರಿದು ಹೋಗದಂತೆ ಸುತ್ತಲೂ ದಾರ ಕಟ್ಟು.

ಗೋಡ (ನಾ) **ಮ.** = ಸಿಹಿ; ರುಚಿ

ಗೋಡ ಗೋಡ (ವಿ) **ಮ.** = ಸಿಹಿ ಸಿಹಿ; ರುಚಿ ರುಚಿ

ಗೋಡಂಬಾ (ನಾ) **ಮ.** = ಮಾವು ಮತ್ತು ಬೆಲ್ಲ ಬೆರಸಿ ತಯ್ಯಾರಿಸಿದ ವ್ಯಂಜನ.

ಗೋಡ ತೇಲ (ನಾ) **ಮ.** = ಒಳ್ಳೆಣ್ಣೆ; ಉಂಬುವ ಎಣ್ಣೆ; ಸೈಎಣ್ಣೆ.

ಗೋಣು (ನಾ)= ಕುತ್ತಿಗೆ; ಕತ್ತು; ಕೊರಳು; ಗರ್ದನ; ಗರ್ದನಿ.

ಗೋಣು ಕೊಯ್ಯಿ (ಕ್ರಿ)= ಕುತ್ತಿಗೆ ಕತ್ತರಿಸು; ಮೋಸ ಮಾಡು; ವಂಚಿಸು.

ಗೋಣುಮುರಿ (ನು)= ಕುತ್ತಿಗೆ ಒಡಿ ಮುರಿ; ಗೋಣ್ಮುರಿ; ಮೋಸಮಾಡು; ವಂಚಿಸು.

ಗೋಣು ಹಾಕು (ಕ್ರಿ)= ಒಪ್ಪು; ಒಪ್ಪಿಗೆ ಸೂಚಿಸು; ಸಮ್ಮತಿಸು.

ಗೋಣೆತ್ತು (ಕ್ರಿ)= ಮುಖ ಮೇಲಕ್ಕೆತ್ತು.

ಗೋಣ್ಮುರಿ (ಕ್ರಿ)= ಕುತ್ತಿಗೆ ಒಡಿಮುರಿ; ಮೋಸ ಮಾಡು; ವಂಚಿಸು.

ಗೋತಾ (ನಾ)= ತಲೆಕೆಳಗು; ಸುರಂಗು; ಲಾಗಾಟಿ; ಫೇಲು.

ಗೋತಾ ಹೊಡಿ (ಕ್ರಿ)= ತಲೆಕೆಳಗು ಮಾಡು; ಲಾಗಹೊಡಿ; ಬೀಳು; ನಾಪಾಸಾಗು; ಉರುವಣಿಗೆ ಆರು; ತಣ್ಣಗಾಗು; ನೀರಲ್ಲಿ ಸುರಂಗ ಹೊಡಿ.

ಗೋತ್ರ (ನಾ)= ಕುಲ, ವಂಶ, ನಾಮಧೇಯ; ಹೆಸರು; ಗುರುಪರಂಪರೆ (ವಚನ: ಗೋತ್ರನಾಮವ ಬೆಸಗೊಂಡಡೆ ಮಾತ ನೂಕದೆ ಸುಮ್ಮನಿದ್ದಿರಿದೇನಯ್ಯಾ? ಗೋತ್ರ ಮಾದಾರ ಚೆನ್ನಯ್ಯ–ಬಸವಣ್ಣ)

ಗೋದಾಮು (ನಾ)= ಗುದಾಮು; ಮಳಿಗೆ; ಧಾನ್ಯ ಮತ್ತು ವಸ್ತುಗಳನ್ನು ಶೇಖರಿಸಿಡುವ ಸ್ಥಳ.

ಗೋದಾವರಿ (ನಾ)= ಕರ್ನಾಟಕದ ಉತ್ತರ ಸೀಮೆಯ ನದಿ ಮತ್ತು ಅದರ ಪಾತಳಿ (ಕಂದಪದ್ಯ: ಕಾವೇರಿಯಿಂದ ಮಾಗೋ। ದಾವರಿವರೆ ಮಿರ್ಪ ನಾಡದಾ ಕನ್ನಡದೊಳ್।)

ಗೋಧೂಳಿ (ನಾ)= ದನಕರುಗಳು ಮನೆಗೆ ಬರುವಸಮುದಲ್ಲಿಹಾರುವ ಮಣ್ಣಿನ ಹುಡಿ.

ಗೋಧೂಳಿ ಮುಹೂರ್ತ (ನಾ)= ದನಕರುಗಳು ಮನೆಗೆ ಬರುವ ಶುಭ ಸಮಯ.

ಗೋಪಾಲ (ನಾ)= ದನಕಾಯುವವ; ಶ್ರೀಕೃಷ್ಣ.

ಗೋಪಿ (ನಾ)= ಗೋಪಮ್ಮ; ಶ್ರೀ ಕೃಷ್ಣನ ಸಾಕು ತಾಯಿ (ಭಜನೆ: ಗೋಪಿ ನಿನ್ನ ಕಂದ ಬಾಲ ಮುಕುಂದ ಹಾಲ ಕೆನಿ ಮೊಸರು ತಿಂದಾನೆ-ಮಾಣಿಕಪ್ರಭು.)

ಗೋಪಿನ ಹಗ್ಗ (ನಾ)= ಹಲವು ಎಳೆಗಳ ಹೆಣಿಕೆಯ ದಪ್ಪ ದಾರ, ಹಗ್ಗ.

ಗೋಪು (ನಾ)= ಮಲಕು ಮಲಕಾದ ಹೆಣಿಕೆ; ಹಲವು ಎಳೆಗಳ ಹೆಣಿಕೆ.

ಗೋಪೆಮ್ಮ (ನಾ)= ಶ್ರೀಕೃಷ್ಣನ ಸಾಕು ತಾಯಿ (ಕೋಲಿನ ಹಾಡು: ಗೋಪೆಮ್ಮಾ ನಿನ್ನ ಮಗನಾ ಗುಣಗಳ। ನ್ಯಾಯಾ ಹೇಳಮ್ಮಾ ಸಖಿಯೆ। ಚದುರಾ ಬಾಲೇರೆದುರಾ ಬರುವಾಗ ನಗುತಾ ನಿಂತಿದನೇ ಸಖಿಯೆ।।)

ಗೋಬಿ (ನಾ)= ಎಲೆಗಡ್ಡೆ ತರಕಾರಿ.

ಗೋಮಾರಿ (ನಾ)= ಕಬ್ಬಿನ ಒಂದು ಪ್ರಕಾರದ ತಳಿಯ ಹೆಸರು; ಮೆದುವಾದ, ಸುಲಿದು ತಿನ್ನಲು ಅನುಕೂಲವಾದ ಕಬ್ಬು.

ಗೋಮಾಳ (ನಾ)= ದನಕರುಗಳಿಗಾಗಿ ಮೇಯಲು ಬಿಟ್ಟ ಸರಕಾರಿ ಜಮೀನು.

ಗೋಮು (ನಾ)= ಲಕ್ಷ್ಮೀ ಚೇಳು; ಸರಿಸೃಪ; ಸಹಸ್ರಪದಿ; ಕೋಣನ ಮೂಗಿನಲ್ಲಿ ಸೇರಿದರೆ ಸಾವು ತರುವ ಕೀಟ

ಗೋಮ್ತೇಳು (ನಾ)= ಲಕ್ಷ್ಮಿಚೇಳು; ಸರಿಸೃಪ; ಸಹಸ್ರ ಪದಿ; ಗೋಮು.

ಗೋರಂಟಿ (ನಾ)= ಬಸವಕಲ್ಯಾಣ ತಾಲೂಕಿನ ಒಂದು ಐತಿಹಾಸಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾದ ಗ್ವಾರ್ಟಿ ಎಂಬ ಊರು; ಗ್ವಾರ್ಟಿಗ್ರಾಮ ರಜಾಕಾರರು ಹಿಂದುಗಳ ಸಾಮೂಹಿಕ ನರಮೇಧ ಜರುಗಿಸಿದ ಊರು. ಇದಕ್ಕೆ ದಕ್ಷಿಣ ಭಾರತದ ಜಲಿಯಾನ ವಾಲಾಬಾಗ ಎನ್ನುತ್ತಾರೆ. ಸಂಗೀತ ವಿದ್ಯಾಲಯವಿದ್ದ ಊರು.

ಗೋರಖಧಂದ್ಯಾ(ನಾ)= ಮೋಸದ ಕೆಲಸ.

ಗೋರಖನಾಥ (ನಾ)= ನವನಾಥರಲ್ಲಿ ಒಬ್ಬರು.

ಗೋರಾ (ನಾ)= ಕೆಂಚ; ಅಂಗ್ರೇಜ; ಆಂಗ್ಲ.

ಗೋರಾ ಕುಂಬಾರ (ನಾ)= ಪಾಂಡುರಂಗನ ಪರಮ ಭಕ್ತನೊಬ್ಬನ ಹೆಸರು (ಭಜನೆ: ಭಕ್ತಿ ಇಟ್ಟು ಅವ। ಭಜನಿ ಮಾಡುತಿದ್ದ! ಗೋರಾ ಕುಂಬಾರಾ।। ಆತನ ಭಾವ ಭಕ್ತಿಗೆ । ಪ್ರತ್ಯಕ್ಷನಾದನು। ವಿಠೋಬ ದೇವರಾ।।)

ಗೋರಾಗುಮ್ಯಾ ()= ಅತಿ ಕೆಂಚ.

ಗೋರಾಮಂದಿ (ನಾ)= ಅಂಗ್ರೇಜರು; ಬಿಳಿಯರು.

ಗೋರಿ (ನಾ)= ಸಮಾಧಿ; ಕೆಂಚ ಹೆಣ್ಣು.

ಗೋರಿಗ್ಹೋಗು (ಕ್ರಿ)= ಸಾಯಿ; ಕುಣಿಸೇರು.

ಗೋರ್ಖಾ (ನಾ)= ಗುರ್ಖಾ; ನೇಪಾಲದ ಗುರ್ಖಾಜನಾಂಗದವನು; ರಾತ್ರಿ ಕಾವಲುಗಾರ; ಓಣಿಯ ಕಾವಲಿಗ.

ಗೋಲ(ಗು)= ದುಂಡಾದ; ವರ್ತುಳಾಕಾರದ; ಚೆಂಡಿನಾಕಾರದ (ಹಾಡು: ಗೋಲಗೋಲಗೋಲಗೋಲ ಗುಮ್ಮಟಾ ಮೇಲೆ ಹತ್ತಿ ನೋಡಿದರೆ ಏನದ್ಭುತ –ವಿದ್ಯಾದರ ಕುಕ್ಕುಂದಾ).

ಗೋಲಗುಂಬಜ (ನಾ)= ಗೋಲ್ಗುಮ್ಮಟ.

ಗೋಲಗುಮ್ಮ (ನಾ)= ಗೋಲಗುಮ್ಮಟ; ಗೋಲ ಗುಂಬಜ.

ಗೋಲಾಖಂಬಾ (ನಾ) ಉ. = ಬೀದಿ ದೀಪದ ಕಂಭ.

ಗೋಲಾಖಾನಾ (ನಾ) ಉ. = ದೀಪದ ಖಂಬದ ಜಾಗ.

ಗೋಲಾಗು (ಕ್ರಿ)= ವರ್ತುಳಾಕಾರವಾಗು; ಒಂದಾಗು; ಆಪಸರಾಜಿಯಾಗು.

ಗೋಲಾಬಾರಿ (ನಾ)= ಬಂದೂಕಿನಿಂದ ನಿರಂತರ ಗುಂಡು ಹಾರಿಸುವಿಕೆ, ಬೆಂಕಿ ಕಾರುವಿಕೆ.

ಗೋಲಿ (ನಾ)= ಮಕ್ಕಳಾಟದ ಗಾಜಿನ ಇಲ್ಲವೆ ಕಲ್ಲಿನ ಗೋಟಿ; ಬಂದೂಕಿನ ಗೊಲಿ.

ಗೋಲು (ನಾ)= ಗುರಿ ತಲುಪಿದ ಆಟ; ಗೋಲ್; ಗುರಿ.

ಗೋಲ್ಗುಮ್ಮಾ (ನಾ)= ಗೋಲ್ಗುಂಬಜ್; ಗೋಲ್ಗುಮ್ಮಟ; ವಿಜಾಪುರದ ಗೋಲ್ಗುಂಬಜ

ಗೋಲ್ಮಾಲ (ನಾ)= ಮೋಸ; ಮೋಸಗಾರಿಕೆ.

ಗೋಷಾ (ನಾ)ಉ.= ಘೋಷಾ; ಮುಸಲ್ಮಾನ ಹೆಂಗಸರು ಮುಖ ಮೈಗಳನ್ನು ಮುಚ್ಚುವಂತೆ ಧರಿಸುವ ಮುಸುಕು; ಬುರುಕಿ; ಮುಸಲ್ಮಾನ ಮಹಿಳೆಯರ ಏಕಾಂತ ಸ್ಥಳ.

ಗೋಸಾಯಿ (ನಾ)= ಗೋಸ್ವಾಮಿ; ಬೈರಾಗಿ; ವಿರಕ್ತ.

ಗೋಳಾಡು (ಕ್ರಿ)= ಗೋಳು ತೋಡಿಕೊ; ಗೋಳು ಹೇಳಿ ಅಳು; ದುಃಖ ಹೇಳಿಕೊ.

ಗೋಳಿಪಲ್ಯ (ನಾ)= ಒಂದು ಪ್ರಕಾರದ ತರಕಾರಿ ಸೊಪ್ಪು.

ಗೋಳಿಟ್ಕೊ (ಕ್ರಿ)= ಸತಾಯಿಸು; ತೊಂದರೆ ಕೊಡು.

ಗೋಳಿಮಾಡು (ಕ್ರಿ)= ಒಟ್ಟು ಗೂಡಿಸು; ಒಂದುಕಡೆ ಜಮಾಯಿಸು.

ಗೋಳು (ನಾ)= ದುಃಖ; ಬೊಬ್ಬೆ; ಕಷ್ಟ; ಸಂಕಟ.

ಗೋಳ್ಯಾಗು (ಕ್ರಿ)= ಒಟ್ಟುಗೂಡು; ಒಂದು ಕಡೆ ಸೇರು; ಒಟ್ಟಾಗು.

ಗೌಂಡಿ (ನಾ)= ಗವಂಡಿ; ಗಾವುಂಡಿ; ಉಪ್ಪಾರ; ಗಾರೆ ಕೆಲಸದವನು.

ಗೌಂಡಿಧಂದ್ಯಾ (ನಾ)= ಉಪ್ಪಾರಿಕೆ.

ಗೌಂಡ್ಗಾಂವ (ನಾ)= ಭಾಲ್ಕಿ ತಾಲೂಕಿನ ಒಂದು ಊರು; ಗೌಂಡ್ಸ್ಯೆ, ಗೌಂಡ್ಗಾಂವ, ಗೌಡ್ಸ್ಯೆ, ಗೌಡ್ಗಾಂವ ಮುಂತಾದ ರೀತಿಯಿಂದ ಕರೆಯಲ್ಪಡುತ್ತದೆ. ತತ್ವಪದಕಾರ ಪಂಚಾಕ್ಷರಿಯ ಹುಟ್ಟೂರು.

ಗೌಡ (ನಾ)= ನಿಜಾಮನ ಕಾಲದ ಒಬ್ಬ ಗ್ರಾಮಾಧಿಕಾರಿ; ಪೋಲಿಸಗೌಡ, ಮಾಲಿಗೌಡ ಇತ್ಯಾದಿ (ಗಾದೆ: ಗೌಡನ್ಮಗಳಾದ್ರೇನು, ಗಂಡಗ್ಹೆಣ್ತೆನೇ,); ಶಿಶ್ನ, ಪುರುಷನ ಜನನೇಂದ್ರಿಯ.

ಗೌಡತಿ (ನಾ)= ಗೌಡನ ಹೆಂಡತಿ; ಗೌಡನ ಮನೆಯ ಹೆಂಗಸು (ಗಾದೆ: ಗೌಡ ಗಡ್ಡಾ ಕಾಯ್ದರ, ಗೌಡತಿ ಬಗಲು ಕಾಯ್ದಳು)

ಗೌಡ್ರಗದ್ದಲ (ನಾ)= ಗೌಡನ ಕಿತಾಪತಿ; ಗೌಡ್ರ ಗದ್ಲ ಎಂಬ ಪ್ರಸಿದ್ಧ ನಾಟಕ.

ಗೌಡ್ಕಿ (ನಾ)= ಗೌಡಿಕೆ; ಗೌಡನ ಅಧಿಕಾರ, ಆಡಳಿತ.

ಗೌಡ್ಗಾಂವ (ನಾ)= ಗೌಂಡ್ಗಾಂವ (ನೋಡಿರಿ)

ಗೌಣ (ನಾ)= ಕೀಳು; ಕೆಳಮಟ್ಟದ; ಹೀನ.

ಗೌರಮ್ಮ (ನಾ)= ಗೌರಿದೇವಿ; ಪಾರ್ವತಿ; ಗುಣವಂತಿ.

ಗೌರಿ (ನಾ)= ಪಾರ್ವತಿ; ಗೌರಮ್ಮ.

ಗೌರಿಕುಳ್ಳಿ (ನಾ)= ಗೌರಿದೇವಿಯ ಆಟಕ್ಕಾಗಿ ಬಾಲೆಯರು ಬಳಸುವ ಮಣ್ಣಿನ ಇಲ್ಲವೆ ಕಂಚಿನ ಕುಡಿಕೆ.

ಗೌರಿಮಗ (ನಾ)= ಗಣಪತಿ; ಗಜಾನನ; ಪಾರ್ವತಿಸುತ (ಹಾಡು: ಮೊದಲಿಗಿ ಯಾರ್‍ಯಾರ। ಎರಗುವೆನು ಗುರುರಾಯ। ಗೌರೀ ಮಗಾ ಗಣಪಣ್ಣಾಗೊ। ಬಸವಣ್ಣಾಗೊ॥).

ಗೌರಿ ಹುಣ್ಣಿ(ನಾ)= ಗೌರಮ್ಮನ ಹುಣ್ಣಿವೆ; ಪಾರ್ವತಿಯ ಹುಣ್ಣಿವೆ; ಕಾರ್ತಿಕ ಮಾಸದ ಹುಣ್ಣಿಮೆ.

ಗೌರ್ಯಾ (ನಾ)= ಒಣಗಿದ ಸೆಗಣಿ; ಕಾಡು ಕುಳ್ಳು; ಕುಳ್ಳು.

ಗೌಳಗಿತ್ತಿ (ನಾ)= ಗೌಳಿಗರ ಮಹಿಳೆ.

ಗೌಳಗೇರಿ (ನಾ)= ಗೌಳಿಗರ ಕೇರಿ.

ಗೌಳಣಬಾಯಿ (ನಾ) ಮ. = ಗೌಳಗಿತ್ತಿ; ಗೌಳಿಗರ ಮಹಿಳೆ.

ಗೌಳಿ (ನಾ)= ಗವಳಿ; ಗೋವಳಿಗ; ಗೊಲ್ಲ.

ಗೌಳೇರು (ನಾ)= ಗೌಳಿಗರು.

ಗೌಳ್ಯಾ (ನಾ)= ಗೌಳ್ಯಾ; ಗವಳಿಗ.

ಗೌಳ್ಯಾ (ನಾ)= ಗೌಳಿ; ಗೌಳಿಗ.

ಗ್ಯಾರಂಟಿ (ನಾ)ಇಂ.= ಖಾತ್ರಿ; ಖಚಿತ; ನಿಶ್ಚಿತ.

ಗ್ಯಾರಂವಿ (ನಾ)= ಏಕಾದಶಿ; ಹನ್ನೊಂದನೇ ದಿನ.

ಗ್ಯಾರಾ = ಹನ್ನೊಂದು.

ಗ್ಯಾರಾಮೂಸೆ (ನಾ)= ಕೀಳು ಕುಲದವನು; ಹೀನ ಕುಲದವನು; ಮರಾಠರಲ್ಲಿಯ ಒಂದು ಉಪ ಪಂಗಡ.

ಗ್ರಹ (ನಾ)= ಗಿರ್ಯಾ, ಗಿರಾ; ದುಷ್ಟ ಶಕ್ತಿ; ಕಂಟಕ.

ಗ್ರಾಚಾರ (ನಾ)= ದುರದೃಷ್ಟ; ದುರವಸ್ಥೆ; ಗ್ರಹಕಂಟಕ; ಗ್ರಹದೋಷ.

ಗ್ರಾಮ (ನಾ)= ಊರು; ಹಳ್ಳಿ.

ಗ್ರಾಮ ಪಂಚಾಯತ (ನಾ)= ಗ್ರಾಮದ ಚುನಾಯಿತ ಪ್ರತಿನಿಧಿಗಳ ಆಡಳಿತ ಮಂಡಳಿ.

ಗ್ಲಾಸು (ನಾ)= ಗಿಲಾಸು; ಲೋಟ; ಚೊಂಬು.

ಗ್ವಾಡಿ (ನಾ)= ಗೋಡೆ; ಭಿತ್ತಿ.

ಗ್ವಾಡಿಕಟ್ಟು (ಕ್ರಿ)= ಗೋಡೆ ನಿರ್ಮಿಸು.

ಗ್ವಾಡಿಗಿಕೂಡ್ಸು (ಕ್ರಿ)= ಸತ್ತವನಿಗೆ ಗೋಡೆಗೆ ಕೂಡಿಸುವ ಶಾಸ್ತ್ರ ಮಾಡು.

ಗ್ವಾಡಿಗಿ ಕೂಡ್ಸಿ (ನು)= ಸತ್ತುಗೋಡೆಗೆ ಕೂಡುವಂತೆ ಆಗ್ಲಿ (ಬೈಗುಳ).

ಗ್ವಾತ (ನಾ)= ಗೋಮೂತ್ರ; ಆಕಳ ಮೂತ್ರ.

ಗ್ವಾರ್ಟಿ (ನಾ)= ಗೋರಂಟಿ; ೧೯೪೮ರಲ್ಲಿ ನಿಜಾಮನ ರಜಾಕಾರರು ಮಾಡಿದ ಅತ್ಯಾಚಾರ, ಕೊಲೆ, ಸುಲಿಗೆಗಳು ತಾರಕ

ಸ್ಥಿತಿಗೆ ಮುಟ್ಟಿದ ಊರು; ಒಂದೇ ದಿನಕ್ಕೆ ೨೬೦ ಜನರ ಕೊಲೆ ಕಂಡ ಊರು; ಮಾನಕ್ಕಂಜಿ ಸಾವಿರಾರು ಜನ ಮಹಿಳೆಯರು ಬಾವಿಹಾರಿ ಪ್ರಾಣಕೊಟ್ಟ ಊರು; ಹಿಂದುಗಳನ್ನು ಜೀವಂತ ಸುಟ್ಟ ಊರು; ದಕ್ಷಿಣ ಭಾರತದ ಜಲಿಯಾನವಾಲಾ ಬಾಗ ಎನಿಸಿಕೊಂಡ ಊರು; ಚಾಲುಕ್ಯ ಕಾಲದ ಐತಿಹಾಸಿಕ ಊರು; ಮೇಲ್ಗಲ್ಲಿ ವಿರುಪಾಕ್ಷಯ್ಯ ಹಾಗೂ ಕೆಳ್ಗಲ್ಲಿ ವಿರುಪಾಕ್ಷಯ್ಯ ಎಂಬ ಭುಲಾಯಿ ಪದಕಾರರ ಊರು.

ಗ್ವಾಸಾಯಿ (ನಾ)= ಗೋಸಾಯಿ; ಗೋಸ್ವಾಮಿ.

ಗ್ವಾಸೈ (ನಾ)= ಗ್ವಾಸಾಯಿ; ಗೋಸಾಯಿ; ಗೋಸ್ವಾಮಿ.

ಗ್ವಾಳ್ಕ (ನಾ)= ಗೊರಳೆ ಹುತ್ತದ ಮೋರೆಯವನು; ಹುಳುಕು ಮೋರೆಯವನು

ಘ

ಘಂ = ಗಂ ಎಂಬ ವಾಸನೆ.

ಘಂಟಾ (ನಾ)= ಘಂಟೆ, ಗಂಟೆ; ತಾಸು; ಅವಧಿ; (ಉದಾ: ಈಗ ಏಸ್ನೇ ಘಂಟಾ ನಡ್ದಾದ?)

ಘಂಟಿ(ನಾ)= ಗಂಟೆ; ಘಣ ಘಣ ಎಂದು ಸದ್ದು ಮಾಡುವ ಸಾಧನ (ಹಂತಿಯ ಹಾಡು: ಆರ ಸಾವಿರ ಘಂಟಿ ಮೂರ ಸಾವಿರ ಜಂಗ। ಧೂರ ಕೇಳ್ಯಾವೋದುರ್ಗಕೋ। ನಮ್ಮೆತ್ತು। ಧೂಳ ಹಾರ್‍ಯಾದೋ ಗಗನಾಕೋ।।); ಚಿಕ್ಕ ಹುಡುಗ; ಕಂತೆ ಭಿಕ್ಷೆಯವ ನ ಕೈಯ ಗಂಟೆ.

ಘಂಟಿ ಭಾರ್ಸು (ಕ್ರಿ)= ಗಂಟೆ ಬಾರಿಸು; ಗಂಟೆ ಸದ್ದು ಮಾಡು (ಉ: ಘಂಟಿ ಭಾರುಸ್ತು, ಸಾಲಿ ಬಿಟ್ತು)

ಘಂಟಿ ಹೊಡಿ (ಕ್ರಿ)= ಗಂಟೆ ಭಾರಿಸು; ಏನೂ ಹೊಳೆಯದಂತಾಗು; ಮಂಕಾಗು (ಉದಾ: ಆಂವಾ ಕೈಕೊಟ್ಟು ಹೋದಾ, ಇಂವಾ ಘಂಟಿ ಹೊಡ್ಕೋತಾ ಕುಂತಾ).

ಘಂಟ್ಯಾ (ನಾ)= ಘಂಟಾ; ಗಂಟೆ (ಚೌಬಾರದ ಮ್ಯಾಲಿನ ಘಡಿ ಘಂಟ್ಯಾ ಕೊಮ್ಮ ಘಣ್ ಘಣ್ ಅಂತ ಘಂಟಿ ಹೊಡಿತಾದ)

ಘಂತ್ರಾಗೋಳಿ (ನಾ)= ಹಾಳು ಬೀಳು; ಚೆಲ್ಲಾಪಿಲ್ಲಿ.

ಘಂದ (ನಾ)=ಗಂಧ; ಸಿರಿಗಂಧ. (ಗೌರಿ ಹಾಡು: ಒಂದೆಳಿಸರ ನಿನಗೆ ಘಂದದ ಬಟ್ಟಲುನನಗೆ).

ಘಂದದ ದಿನ (ನಾ)= ಪೀರಗೆ ಗಂಧ ಬಳಿಯುವ ಶಾಸ್ತ್ರ (ಅಲಾವಿ ಹಾಡು: ಬಂದೇ ನವಾಜಾನ ಘಂದದ ದಿನಾ ಭಾಳ್ಮಂದಿ ಬರುತಾರೊ ಧೂರಿನ ಜನಾ).

ಘಂದಾ (ನಾ)= ಶ್ರೀಗಂಧ; ಚಂದನವನ್ನು ತಿಕ್ಕಿ ತೆಗೆದ ಗಂಧವುಳ್ಳ ದ್ರಾವಣ.

ಘಂದಾ ಸೋಸು (ಕ್ರಿ)= ಸಾಣೆಕಲ್ಲಿನ ಮೇಲೆ ಶ್ರೀಗಂಧದ ಕೊರಡನ್ನು ತಿಕ್ಕಿ ಸುವಾಸಿಕ ದ್ರಾವಣವನ್ನು ನಿರ್ಮಿಸು.

ಘಂದೆಣ್ಣಿ(ನಾ)= ಗಂಧೆಣ್ಣೆ; ಸುವಾಸಿಕ ಎಣ್ಣೆ

ಘಂಭೀರ = ಗಂಭೀರ.

ಘಗ್ರಿ (ನಾ)= ಘಗ್ಗರಿ; ಗಗ್ಗರಿ

ಘಚ್ಚಿ (ನಾ)= ಗಟ್ಟಿ; ನಿಶ್ಚಿತ; ಪಕ್ಕಾ; ಮಜಬೂತ

ಘಚ್ಚಿ ಆಗು (ಕ್ರಿ)= ನಿಶ್ಚಿತಗೊಳ್ಳು; ನೆಂಟಸ್ತನ ಪಕ್ಕಾ ಆಗು

ಘಚ್ಚಿ ಮಾಡು (ಕ್ರಿ)= ನಿಶ್ಚಿತ ಮಾಡು; ನೆಂಟಸ್ತನ ಕಾಯಂಗೊಳ್ಳು; ನೆಂಟಸ್ತನ ಗಟ್ಟಿಗೊಳಿಸಿದ ಶಾಸ್ತ್ರನೆರವೇರಿಸು; ಸಕ್ಕರೆ ತಿನ್ನು.

ಘಟದ ಹಿಪ್ಪರ್ಗಿ (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಹಳ್ಳಿ. ಇಲ್ಲಿ ರಾಮಲಿಂಗ ಸ್ಥಾಪನೆ ಇದೆ. ಕಲ್ಯಾಣ ನವಾಬನ ಕಾಲದಲ್ಲಿ ಮುಡಬಿಯ ಬೇಲೂರೆಯವರ ಹೊಲದಲ್ಲಿರುವ ರಾಮ ಲಿಂಗ ದೇವಾಲಯವನ್ನು ಕೆಡವಿ ಅದರ ಕಲ್ಲುಗಳನ್ನು ಮತ್ತು ನಾರಾಯಣಪುರ ದೇವಾಲಯಗಳ ಕಲ್ಲುಗಳನ್ನು ಬಸವ ಕಲ್ಯಾಣ ಕೋಟೆ ದುರುಸ್ತಿಗೆ ಬಳಸಲಾಯಿತು. ಆಗ ಜನರು ಮುಡಬಿಯ ರಾಮಲಿಂಗನನ್ನು ಘಟದ ಹಿಪ್ಪರ್ಗಿಯ ಗವಿಯಲ್ಲಿ ಸ್ಥಾಪಿಸಿದರು. ಇದರಿಂದ ಘಟದ ಹಿಪ್ಪರ್ಗಿಯು ರಾಮಲಿಂಗನ ಹಿಪ್ಪರ್ಗಿ-ಯಾಯಿತು. ಅದಕ್ಕೂ ಮೊದಲು ಆ ರಾಮಲಿಂಗನ ಹಿಪ್ಪೆರ್ಗಿಯು ಮಡಿವಾಳ ಮಾಚಿದೇವರ ಗವಿಯುಳ್ಳ ಹಿಪ್ಪರ್ಗಿ-ಯಾಗಿತ್ತು ಎಂಬ ನಂಬುಗೆ ಇದೆ.

ಘಟ (ನಾ)= ಘಟಿ; ಮಣ್ಣಿನ ಕುಳ್ಳಿ; ಅಂಬಾಬಾಯಿಯ ಘಟಸ್ಥಾಪನೆ; ಅರಣ್ಯ

ಘಟಾ (ಘಟಿಕ)= ಮಡಿಕೆ; ಕುಳ್ಳಿ; ಗಡಿಗೆ; ಅಂಬಾಬಾಯಿಯ ಘಟ ಸ್ಥಾಪನೆಗಾಗಿ ಬಳಸುವ ಮಣ್ಣಿನ ಕುಳ್ಳಿ.

ಘಟಾ ಕೂಡ್ಸು (ಕ್ರಿ)= ಅಂಬಾಬಾಯಿಯ ಪೂಜೆಗಾಗಿ ಕಾಯ್ದಿಟ್ಟ ಹೊಲದ ಮಣ್ಣಿನೊಂದಿಗೆ ಐದು ಪ್ರಕಾರದ ಕಾಳುಗಳನ್ನು ಬೆರೆಸಿ ಜಗಲಿಯ ಮೇಲೆ ರಾಸಿಯನ್ನು ಹಾಕಿ ನೀರೆರೆದು ಐದು ಒಂಬತ್ತು ದಿನಗಳವರೆಗೆ ಪೂಜಿಸು.

ಘಟಾರು (ನಾ)= ಗಟಾರು; ಚರಂಡಿ

ಘಟಾಸು (ಕ್ರಿ)= ಸಂಭವಿಸು.

ಘಟಿ (ನಾ)= ಕುಳ್ಳಿ; ಕುಡಿಕೆ.

ಘಟಿ ಕೂಡ್ಸು (ಕ್ರಿ)= ಘಟಾ ಕೂಡ್ಸು (ನೋಡಿರಿ)

ಘಟೋಡಿ (ನಾ)= ಅರಣ್ಯ ಪ್ರದೇಶ; ಕಾಡು ಭೂಮಿ.

ಘಟ್ಟಿ (ನಾ)= ವಿಭೂತಿ ಉಂಡಿ.

ಘಟ್ಟಿ (ವಿ)= ಗಟ್ಟಿ; ಘಚ್ಚಿ; ಗಾಥಾ (ಗಾದೆ: ಘಟ್ಟಿ ಆದ್ರರೊಟ್ಟಿ, ಆಳೂಸಾದ್ರ ಅಂಬ್ಲಿ).

ಘಟ್ಟಿ ಮಾಡು (ಕ್ರಿ)= ನೆಂಟಸ್ತವ ಕುದುರಿಸು; ಬಾಯಿಪಾಠ ಮಾಡು; ಕಂಠಪಾಠ ಮಾಡು.

ಘಟ್ಯಾಳಿ (ನಾ)= ಬೇಳೆ ಕುದಿಸಿ ತಯಾರಿಸಿದ ಗಟ್ಟಿ ಪಲ್ಯ.

ಘಟ್ಮಾಡು (ಕ್ರಿ)= ಉರುಹೊಡಿ; ಕಂಠಗತ ಮಾಡಿಕೊ; ನಂಟಸ್ತನ ಕುದುರಿಸು.

ಘಟ್ಮುಟ್ಟು (ನಾ)= ಗಟ್ಟಿ ಮುಟ್ಟಿ; ಶಕ್ತಿಶಾಲಿ.

ಘಟ್ರೊಟ್ಟಿ (ನಾ)= ನೆಂಟಸ್ತನ ಕುದುರಿದ ಮೇಲೆ ಬೀಗರಿಗೆ ಕಟ್ಟಿಕೊಡುವ ಬುತ್ತಿ.

ಘಡವಯಿ (ನಾ)= ತಾಮ್ರ, ಹಿತ್ತಾಳೆಗಳನ್ನು ಬಡಿದು ಪಾತ್ರೆಗಳನ್ನು ತಯಾರಿಸುವಿಕೆ (ಗಾದೆ: ಘಡವಯಿಕಿಂತಾ ಮಡವೈನೆ ಜಾಸ್ತಿ).

ಘಡಾ ಮೋಡಿ (ನಾ)= ವ್ಯವಹಾರ; ವ್ಯಾಪಾರ; ಉದ್ಯೋಗದ ಅಬ್ಬರ.

ಘಡಾಸು (ಕ್ರಿ)= ಘಟಿಸು; ಘಟನೆ ಜರುಗು; ಸಂಭವಿಸು.

ಘಡಿ (ನಾ) ಉ. = ಗಡಿಯಾರ; ಘಡ್ಯಾಳ.

ಘಡಿ ಘಡಿ (ಅ) ಹಿಂ = ಪ್ರತಿಕ್ಷಣ; ಕ್ಷಣ ಕ್ಷಣಕ್ಕೆ; ಮತ್ತೆ ಮತ್ತೆ.

ಘಡುಸು (ಕ್ರಿ)= ಘಡ್ಸು, ಹೊಡೆ, ಗುದ್ದು; ರುಬ್ಬು; ಅರೆ; ಕುದಿಸಿದ ಬೇಳೆಯನ್ನು ಹುಟ್ಟಿನಿಂದ ಅರೆದು ಸಣ್ಣಗೆ ಮಾಡು; ಕುಟ್ಟು; ಮಗುಚು; ಕಿವುಚು.

ಘಡ್ಯಾಳ (ನಾ) ಮ. = ಗಡಿಯಾರ

ಘಡ್ಸು (ಕ್ರಿ)= ಘಡುಸು (ನೋಡಿರಿ)

ಘಣ ಘಣ (ದ್ವಿ)= ಗಂಟೆಯ ಕಿಣಿಕಿಣಿ.

ಘಣ್ಸಾರ (ವಿ)= ಗಂಡಸಿಗೆ ಸಲ್ಲುವಂಥ; ಜಬರ್ದಸ್ತ; ಅತಿಭಾರದ; ಮೀರಿದ; ದೊಡ್ಡ ಗಾತ್ರದ (ಉ: ಘಣ್ಸಾರ ಯಾಡ್ರೊಟ್ವಿ, ಒಂದು ಗಂಗಾಳ ನುಚ್ಚು ಹೊಡ್ದು, ಘೊರ್ಕಿ ಹೊಡ್ಕೋತಾ ಮಕೊಂಡ).

ಘತ್ತರ್ಗಿ (ನಾ)= ಭಾಗಮ್ಮ ದೇವಿಯ ತೀರ್ಥಕ್ಷೇತ್ರ; ಹರಕೆ ಹೊತ್ತ ಭಾವುಕ ಭಕ್ತರು ತಮ್ಮ ನಡದ ಮೂಳೆಗೆ ಕಬ್ಬಿಣದ ಕೊಕ್ಕೆ ಸಿಕ್ಕಿಸಿಕೊಂಡು ಸಿಡಿ (ಉಯ್ಯಾಲೆ)-ಯಾಡುವ ರೂಢಿ ಇದೆ.

ಘದ್ದುರ್ಸು (ಕ್ರಿ)= ಗದ್ದರಿಸು.

ಘನ (ವಿ)= ದೊಡ್ಡದಾದ; ಅಧಿಕವಾದ; ಹೆಚ್ಚಾದ.

ಘನವಂತ (ನಾ)= ದೊಡ್ಡ ಗುಣದವನು.

ಘನವಂತಿ (ನಾ)= ದೊಡ್ಡ ಗುಣದವಳು. (ಹಾಡು: ಗುಣವಂತಿಯಾಗಮ್ಮ ಘನವಂತಿ ನೀನು ಕ್ಷಣ ಕಾಲ ಹರಟೆಯಲ್ಲಿ ಕಳೆಯಬೇಡ ಜಾಣೆ)

ಘನ್ನು (ನಾ)= ದಪ್ಪವಾದ ಉಕ್ಕಿನ ಸುತ್ತಿಗೆ.

ಘಬ್ರಾಸು (ಕ್ರಿ)= ಗಾಬರಿಯಾಗು; ದಿಗಿಲುಗೊಳ್ಳು.

ಘಮುಘಮಾ (ದ್ವಿ)= ಗಮಗಮ.

ಘಮಂಡ (ನಾ)ಹಿಂ. = ಅಹಂಕಾರ; ಗರ್ವ.

ಘಮಂಡಿ (ನಾ) ಹಿಂ. = ಅಹಂಕಾರಿ; ಗರ್ವಿಷ್ಟ.

ಘಮಂಡೇರು (ಕ್ರಿ)= ಅಹಂಕಾರ ಬರು; ಗರ್ವಬರು.

ಘಮಾಕಿ= ಸುವಾಸನೆ; ಗಮಾಕಿ.

ಘಮಾಕಿ ಹೊಂಡ್ರು (ಕ್ರಿ)= ಸುಗಂಧ ಬೀರು; ವಾಸನೆ ಹರಡು.

ಘಮ್ಮುಸು (ಕ್ರಿ)= ಮೈಗಳ್ಳತನ ಮಾಡು; ಕೆಲಸವನ್ನು ನಿರ್ಲಕ್ಷಿಸು.

ಘರಾನಾ (ನಾ) ಹಿಂ. = ಮನೆತನ; ಕುಟುಂಬ; ಖಾಂದಾನ.

ಘರ್ಕುಲಿ (ನಾ) ಮ. = ಮಕ್ಕಳು ಕಟ್ಟಿದ ಆಟದ ಮನೆ.

ಘರ್ಕುಲಿ ಕಟ್ಟು (ಕ್ರಿ)= ಮಕ್ಕಳಾಟದ ಮನೆಯನ್ನು ನಿರ್ಮಿಸು.

ಘಸಕ್ಕಂತ (ಅ)= ಕಸಕ್ಕನೆ; ಕಟಕ್ಕನೆ

ಘಸಾಸು (ಕ್ರಿ)= ಘಿಸಾಸು; ತಿಕ್ಕು; ಒರೆಸು.

ಘಸಿ (ನಾ)= ಗಸಿ; ಬಂಡಿಯ ಚಕ್ರದಲ್ಲಿ ಬಳಕೆಯಾದ ಎಣ್ಣೆ; ಜಿಗುಟುಗೊಂಡ ಎಣ್ಣೆ.

ಘಸಿಬಿಸಿ (ನಾ)= ಹಿಗ್ಗಾ ಮುಗ್ಗಾ; ಒರಟು ವ್ಯವಹಾರ.

ಘಸಿಬಿಸಿ ಮಾಡು (ಕ್ರಿ)= ಹಿಗ್ಗಾಮುಗ್ಗಾ ಎಳೆದಾಡು; ಒರಟುತನ ತೋರು.

ಘಸ್ಸಂತ (ಅ)= ಜೋರಾಗಿ; ಕಸಕ್ಕನೆ; ಕಟಕ್ಕನೆ.

ಘಳಘಳ (ದ್ವಿ)= ಗಣಗಣ (ಗಂಟೆಸದ್ದು); (ಗಾದೆ: ಘಳಘಳ ಘಂಟಿ ಸಿದ್ದೇಶ)

ಘಳಗಂಟೆ (ನಾ)= ಗಳಗಳ ನಾದ ಕೊಡುವ ಗಂಟೆ.

ಘಳ್ಕಿ (ನಾ)= ಗಳಿಕೆ; ಆದಾಯ; ಸಂಪಾದನೆ

ಘಳ್ಗಿ (ನಾ)= ಘಟ್ಕಾ; ಗಳಿಗೆ; ಮಡಿಕೆ ಹಾಕುವಿಕೆ, (ಗಾದೆ : ಘಳ್ಗಿ ಸಲ್ಯಾಕ ಮಳ್ಗಿ ಸುಟ್ಗೊಂಡ್ರಂತ!)

ಘಳ್ಗಿಮುಳ್ಗಿ (ಅ)= ತಿರ್ಗಿಮುರ್ಗಿ; ತಿರುತಿರುಗಿ; ಮತ್ತೆ ಮತ್ತೆ.

ಘಳ್ಗಿಮುರಿ (ಕ್ರಿ)= ಹೊಸಬಟ್ಟೆಯ ಗಳಿಗೆ ಬಿಚ್ಚಿ ಉಟ್ಟುಕೊ

ಘಳ್ಗಿ ಹಾಕು (ಕ್ರಿ)= ಮಡಿ ಮಾಡು; ಇಸ್ತ್ರಿಮಾಡು.

ಘಳ್ಗೀತ (ನಾ)= ಘಳ್ಗಿ ಹೊತ್ತು; ಗಳಿಗೆ ಹೊತ್ತು; ತುಸುಸಮಯ.

ಘಳ್ಸು (ಕ್ರಿ)= ಗಳಿಸು; ಸಂಪಾದಿಸು; ಆದಾಯ ಹೊಂದು.

ಘಳ್ಸ್ಯಾಕು (ಕ್ರಿ)= ಗಳಿಸಿ ತಂದು ಉಣಿಸಿ ಸಲಹು.

ಘಾಂ (ನಾ)ಮ.= ಬೆವರು; ಪಸೀನಾ.

ಘಾಂಬಿಡು (ಕ್ರಿ)= ಬೆವರುಂಟಾಗು.

ಘಾಗರ (ನಾ) ಹಿಂ. = ಕೊಡ; ನೀರಿನ ಪಾತ್ರೆ.

ಘಾಗ್ರಿ (ನಾ)= ಘಗ್ಗರಿ; ಗಗ್ಗರಿ; ಲಂಗಾ; ಸ್ತ್ರೀಯರ ನಡದ ಕೆಳಗಿನ ಉಡುಪು, ಒಳ ಉಡುಪು; ನೀರಿನ ಕೊಡ; ಬಿಂದಿಗೆ.

ಘಾಟ ಹಿಪ್ಪರ್ಗಿ (ನಾ)= ಘಟದ ಹಿಪ್ಪರ್ಗಿ (ನೋಡಿರಿ).

ಘಾಟಾ (ನಾ)= ಲುಕ್ಸಾನು; ನುಕ್ಸಾನು; ತೋಟಾ; ಹಾನಿ.

ಘಾಟಿ (ನಾ)= ಬೆಟ್ಟದ ಮಗ್ಗುಲಿನ ದಾರಿ; ಎರಡು ಬೆಟ್ಟಗಳ ನಡುವಿನ ತಿಟ್ಟಾದ ದಾರಿ; ಕಣಿವೆ.

ಘಾಟು (ನಾ)= ಖಾಟು, ಕಟುವಾಸನೆ.

ಘಾಡಗೂಡ (ನಾ)= ಮಳೆಯ ಮುನ್ಸೂಚನೆಯ ಅಬ್ಬರ, ತೀವ್ರತೆ.

ಘಾಣ (ನಾ)= ಕಬ್ಬಿನ ಗಾಣ; ಆಲೆಮನೆ; ಎಣ್ಣೆಗಾಣ.

ಘಾಣಗಿತ್ತಿ (ನಾ)= ಗಾಣಿಗನ ಹೆಂಡತಿ; ಗಾಣಿಗನ ಮನೆಯ ಮಹಿಳೆ.

ಘಾಣಿ (ನಾ)= ದುರ್ವಾಸನೆ; ದುರ್ನಾತ; ಹೊಲಸಾಗಿರುವವಳು.

ಘಾಣಿಗ್ಯಾ (ನಾ)= ಗಾಣಿಗ.

ಘಾಣ್ಯಾ (ನಾ)= ಹೊಲಸಾಗಿರುವವನು.

ಘಾತ (ನಾ)= ಅಪಾಯ; ಆಪತ್ತು.

ಘಾತುಕ (ನಾ)= ಹಿಂಸಿಸುವವ; ಕೊಲೆಗಾರ; ಮೋಸಗಾರ.

ಘಾಬ್ರಿ (ನಾ)= ಗಾಬರಿ.

ಘಾಬ್ರಿ ಘಾಬ್ರಿ (ದ್ವಿ)= ಸಾವಿನ ಸಮಯದ ಚಡಪಡಿಕೆ

ಘಾಬ್ರಿ ಭೀಳು (ಕ್ರಿ)= ಭಯಪಡು; ಗಾಬರಿಗೊಳ್ಳು.

ಘಾಮು (ನಾ) ಮ. = ಬೆವರು.

ಘಾಮು ಘಾಮು (ದ್ವಿ)= ಬೆವರೇ ಬೆವರು.

ಘಾಮಾಗು (ಕ್ರಿ)= ಬೆವರು ಬಿಡು; ಬೆವರುಂಟಾಗು

ಘಾಮು (ನಾ)= ಬೆವರು; ಪಸೀನಾ.

ಘಾಮುಬಿಡು (ಕ್ರಿ)= ಬೆವರು ಉಂಟಾಗು; ಪಸೀನಾ ಒಸರು.

ಘಾಯ (ನಾ)= ಗಾಯ; ಜಖಮು; ಪೆಟ್ಟಿನಿಂದಾದ ರಕ್ತಸ್ರಾವ ಮತ್ತು ಚರ್ಮ ಕೊರೆತ.

ಘಾರಿಗಿ (ನಾ)= ಗಾರಿಗೆ; ಜೋಳದ ಸೀತನಿಯೊಂಧಿಗೆ ಬೆಲ್ಲ ಬೆರೆಸಿ ಕರಿದು ತಯಾರಿಸಿದ ಒಂದು ಪ್ರಕಾರದ ಸಿಹಿ ತಿನಿಸು.

ಘಾಲಿ (ನಾ)= ಗಾಲಿ; ಚಕ್ರ.

ಘಾಲಿ ಹಾಕು (ಕ್ರಿ)= ಮೋಸಮಾಡು; ವಂಚಿಸು.

ಘಾಲ್ಯಾಡಿ (ನಾ)= ಕೆಡಿಸುವವ; ಕೇಡಿಗ; ವಂಚಕ; ಕಂತ್ರಿ.

ಘಾವ (ನಾ) ಹಿಂ. = ಘಾಯ; ಗಾಯ.

ಘಾಸ (ನಾ) ಮ. = ಅನ್ನದ ತುತ್ತು

ಘಾಸ್ಲೇಟು (ನಾ)= ಸೀಮೆ ಎಣ್ಣೆ; ಕಲ್ಲೆಣ್ಣೆ.

ಘಾಳಿ (ನಾ)= ಗಾಳಿ; ವಾಯು.

ಘಾಳಿಗ್ಗುದ್ದು (ಕ್ರಿ)= ಗಾಳಿಗೆ ಗುದ್ದು, ತಿವಿ; ಉಪಯೋಗವಿಲ್ಲದ ಪರಿಶ್ರಮ (ಗಾದೆ: ಘಾಳಿಗ್ಗುದ್ದಿ ಮೈನೊಯ್ಸಿಕೊಂಡ್ನಂತ)

ಘಾಳಿ ಮಾತು (ನಾ)= ಸುಳ್ಳು ಸುದ್ದಿ; ವದಂತಿ.

ಘಾಳಿಸುದ್ದಿ (ನಾ)= ಹಾರಿಕೆಯ ವರ್ತಮಾನ; ಆಧಾರ ವಿಲ್ಲದ ವರ್ತಮಾನ; ವದಂತಿ.

ಘಾಳೇರಿ (ನಾ)= ಗಾಳಿಯಿಂದ ತಿರುಗುವ ಮಕ್ಕಳ ಆಟಿಕೆ; ಗಿರಗಟ್ಟೆ.

ಘಾಳ್ಯಾ (ನಾ)= ಗಾಳಿಪ್ಪ ಹೆಸರನ್ನು ಕೆಡಿಸಿ ನುಡಿವ ನಮೂನೆ.

ಘಿನಾಸು (ಕ್ರಿ)= ಗಿನಾಸು; ಗಣನೆಗೆ ತೆಗೆದುಕೊ.

ಘಿರಕಿ (ನಾ)= ಗಿರಕಿ; ಬಾವಿಯ ಚಕ್ರ.

ಘಿರ್ಕಿ (ನಾ)= ಗಿರಕಿ; ಚಕ್ರ.

ಘಿರ್ಕಿಹೊಡಿ (ಕ್ರಿ)= ಸುತ್ತುಹಾಕು; ಸುತ್ತಾಡು.

ಘಿಲ್ ಘಿಲ್ (ಧ್ವಿ)= ಗಿಲ್ಲ್ ಗಿಲ್ಲ್; ಗಿಳ್ಳ್ ಗಿಳ್ಳ್

ಘಿಸಡ್ಯಾ (ನಾ)= ಘಿಸಾಡಿ; ಬಯಲುಗಂಬಾರ; ಸಂಚಾರಿ ಕಂಬಾರ.

ಘಿಸಾಡಿ (ನಾ)= ಘಿಸಡ್ಯಾ; ಬಯಲು ಗಂಬಾರ; ಸಂಚಾರಿ ಕಂಬಾರ.

ಘಿಸಾಸು (ಕ್ರಿ)= ತಿಕ್ಕು; ಒರೆಸು; ಉಜ್ಜು.

ಘೀ (ನಾ)= ತುಪ್ಪ; ಘೃತ.

ಘೀಕ್ (ನಾ)= ಕೋಡಂಗಿಯ ಕೂಗು.

ಘೀಖಿಚಡಿ (ನಾ)= ತುಪ್ಪ ಅನ್ನ; ಕಲಬೆರಕೆ.

ಘೀ ಖಿಚ್ಡಿಯಾಗು. (ಕ್ರಿ)= ಕುದ್ದು ರಾಡಿಯಾಗು; ಕಲಬೆರಕೆಯಾಗು

ಘೀಟಾ (ನಾ)= ಗೀಟಾ; ಗೆರೆ; ಘೇತಿ.

ಘೀಟಾ ಎಳಿ (ಕ್ರಿ)= ಗೆರೆ ಎಳೆ; ಗೆರೆ ಮೂಡಿಸು.

ಘೀ ರೈಸ್ (ನಾ)= ತುಪ್ಪದಲ್ಲಿ ಸಿದ್ಧಗೊಳಿಸಿದ ಬೋನ.

ಘುಂ (ವಿ)= ಘುಂಬ; ಘುಮ್ಮ; ಆಳ (ಉದಾ: ನೀರು ತೋಲು ಘುಂ ಹೋಗ್ಯಾವ; ಭಾಯಿ ತೋಲು ಘುಂಬ ಅದಾ).

ಘುಂಗ್ರು (ನಾ)= ಗೆಜ್ಜೆ; ಉಂಗುರುಂಗುರು.

ಘುಂಬ (ವಿ)= ಘುಂ; ಘುಮ್ಮ; ಆಳ; ಕಪಟ (ಗಾದೆ: ಘುಂಬ ನೀರಾಗ ಕಲ್ಲು ಭೀಟಿಧಾಂಗ!)

ಘುಂಬ ಇರು (ಕ್ರಿ)= ಅಂತರಂಗದಲ್ಲಿ ಕಪಟಿಯಾಗಿರು; ಗಂಭೀರವಾಗಿರು (ಆಮನ್ಯಾ ತೋಲು ಘುಂಬ ಹನಾ; ಆವನ್ನರಿ ನಾನಂತೆ ಟೆಕಾಸೀನಿ).

ಘುಗ್ರಿ (ನಾ)= ಜೋಳ, ಕಡಲೆ ಬೆರೆಸಿ ಉಪ್ಪಿನೊಂದಿಗೆ ಕುದಿಸಿದ ಕಾಳು; ಅವರೆ, ತೊಗರಿ, ಹೆಸರು ಇತ್ಯಾದಿಗಳನ್ನು ಕುದಿಸಿ, ಖಾರ ಉಪ್ಪಿನೊಂದಿಗೆ ಬಗಾರ ಹೊಡೆದು ತಯಾರಿಸಿದ ತಿಂಡಿ, ತಿನಿಸು.

ಘುಗ್ರಿಬೀರು (ಕ್ರಿ)= ಮನೆಮನೆಗೆ ಹೋಗಿ ಗುಗ್ಗರಿ ಹಂಚುವ ಶಾಸ್ತ್ರ ಮಾಡು.

ಘುಡ್ಸವಾರಿ (ನಾ)= ಕುದುರೆ ಸವಾರಿ.

ಘುಮಾವು (ನಾ)= ತಿರುವು; ತಿರುಗುವ ಸ್ಥಲ; ವರ್ತುಳ; ಕೂಡುದಾರಿ.

ಘುಮಾಸು (ಕ್ರಿ)= ತಿರುಗಿಸು; ತಿರುಗಾಡಿಸು; ಸುತ್ತು ಹೊಡೆ; ಫೇರಿ ಹಾಕು.

ಘುಮ್ಮ (ನಾ)= ಘುಂಬ; ಆಳ; ಕಪಟ.

ಘುರ್ಕಾ (ನಾ)= ಗೂರ್ಖಾ; ನೇಪಾಲೀ ಮೂಲದವನು; ರಾತ್ರಿ ಕಾವಲುಗಾರನು.

ಘುರ್ಕಾಸು (ಕ್ರಿ)= ಕಣ್ಣು ಕಿಸಿದು ನೋಡು; ದಿಟ್ಟಿಸಿ ನೋಡು.

ಘುರ್ಕಿ (ನಾ)= ಗೊರಕೆ.

ಘುರ್ಕಿಹೊಡಿ (ಕ್ರಿ)= ನಿದ್ದೆಯಲ್ಲಿ ಘುರ್ರ್ ಘುರ್ರ್ ಎಂದು ಗೊರಕೆಯ ಸದ್ದು ಮಾಡು.

ಘುರ್ಘುರಿ (ನಾ)= ಸಂಕಟ; ಅಂಜಿಕೆ; ಶ್ವಾಸದ ತೊಂದರೆ; ಮರಣದ ಸಮಯದ ಶ್ವಾಸದ ಸದ್ದು.

ಘುರ್ಘುರಿ ಹತ್ತು (ಕ್ರಿ)= ಶ್ವಾಸದ ತೊಂದರೆಯಾಗು; ಸಾವಿನ ಸಮಯದಲ್ಲಿ ಶ್ವಾಸದ ಕಠಿಣತೆಯುಂಟಾಗು.

ಘುರ್ದಾಳಿ (ನಾ)= ಗಡಬಡ; ಗೊಂದಲ; ಅರಚಾಟ; ಕೂಗಾಟ.

ಘುಸಾಸು (ಕ್ರಿ)= ಒಳಸೇರು; ಒಳತೂರು.

ಘುಸಿ (ನಾ)= ಹಾರೆ; ಖಾರ ಕುಟ್ಟುವ ಅಥವಾ ನೆಲ ಕೆದರುವ ಸಾಧನ.

ಘುಸುಘುಸು (ದ್ವಿ)= ಗುಸುಗುಸು; ಕೆಮ್ಮುವಿಕೆ; ಕದ್ದು ಮಾತಾಡುವಿಕೆ.

ಘುಳು ಘುಳಿಸು (ಕ್ರಿ)= ಬಾಯಿಯಲ್ಲಿ ನೀರು ಹಾಕಿ ಮುಕ್ಕಳಿಸು; ಖದ ಖದ ಕುದಿ ಹಿಡಿ.

ಘುಳಿಕಾರ (ನಾ)= ಗುಳೆಕಾರ; ವಲಸೆಗಾರ; ಗಂಟು ಮೂಟೆ ಕಟ್ಟಿಕೊಂಡು ಬಂದವನು.

ಘುಳ್ಕುಘುಳ್ಕು (ದ್ವಿ)= ಕೈಬಳೆಯ ಸದ್ದಿನ ಕ್ರಮ(ಹೋಳಿ ಹಾಡು: ಹೊರ್ಸಿನ್ಯಾಲು ಬುಳ್ಕು ಬುಳ್ಕು ಕೈಯಾನ್ಬಳಿ ಘುಳ್ಳು ಘುಳ್ಳು)

ಘುಳ್ಳ ಘುಳ್ಳ (ದ್ವಿ)= ಗೆಜ್ಜೆ ಸದ್ದು.

ಘೂಂಗಟ (ನಾ)= ಪರದೆ; ಮೋರೆ ಮುಸುಕು; ಬುರ್ಕಿ.

ಘೂಂಸಾ (ನಾ)ಹಿಂ.= ಮುಷ್ಠಿಯಿಂದ ಗುದ್ದುವಿಕೆ; ಗೂಂಸಾ

ಘೂಂಸಾಕುಡು (ಕ್ರಿ)= ಜೋರಾಗಿ ಮುಷ್ಠಿಯಿಂದ ಗುದ್ದು.

ಘೂಂಸು (ನಾ)ಹಿಂ.= ಹೆಗ್ಗಣ.

ಘೂಗ್ರಿ (ನಾ)= ಲಂಬಾಣಿ ಮುತ್ತೈದೆಯ ಮುಂಗುರುಳಿನ ರೂಪಾಯಿ ತರಹದ ಒಡವೆ.

ಘೂಟಾ (ನಾ)= ಗೂಟ; ಗುಂಜಿ.

ಘೂಟಾ ಅಳ್ಳಾಡ್ಸು (ಕ್ರಿ)= ಗೂಟ ಅಳ್ಳಾಡಿಸು; ಸಡಿಲು ಮಾಡು; ಮನೆ ಹಾಳು ಮಾಡು.

ಘೂಟಾ ಗುಂಜಿ ಕಿತ್ತು ಬಿಡು = ನಾಶಮಾಡು, ಮನೆ ಹಾಳು ಮಾಡು.

ಘೂಟಾ ಹೊಡಿ (ಕ್ರಿ)= ಗೂಟ ನೆಡು; ನೆಲದಲ್ಲಿ ಕಟ್ಟಿಗೆಯ ಗೂಟ ಹೂಳು.

ಘೂರು (ನಾ)= ಗೂರು, ಕೆಮ್ಮು.

ಘೂರು ಬ್ಯಾನಿ (ನಾ)= ಧಾಪು; ಕೆಮ್ಮು ಬೇನೆ.

ಘೂರಿ (ನಾ)= ಗೂರು ಬೇನೆಯುಳ್ಳವಳು.

ಘೂರ್ಯಾ (ನಾ)= ಗೂರು ಬೇನೆ ಉಳ್ಳವನು (ಬೈಗುಳ).

ಘೂಸಾ (ನಾ)= ಘೂಂಸಾ; ಮುಷ್ಟಿಯಿಂದ ಗುದ್ದುವಿಕೆ.

ಘೂಸಾ ಕುಡು (ಕ್ರಿ)= ಮುಷ್ಟಿಯಿಂದ ಜೋರಾಗಿ ಗುದ್ದು.

ಘೂಸು (ನಾ)= ಘೂಂಸು; ಹೆಗ್ಗಣ.

ಘೂಳಿ (ನಾ)= ಗೂಳಿ; ದೇವರಿಗೆ ಬಿಟ್ಟ ಹೋರಿ (ಗಾದೆ : ಯಾಳ್ಯಾ ಇಲ್ದ ಯಾಳ್ಯಾ ಘೂಳಿ ಮೈನೆರಿತಂತ!)

ಘೂಳ್ಯಾ (ನಾ)= ಗೂಳಿಯಂತೆ ಅಲೆದಾಡುವವನು. (ಬೈಗುಳ)

ಘೆಂವುಸೆ ಭೌರಿಸೆ (ನಾ)= ಅಲಾಯಿ ಹಾಡು ಮತ್ತು ಮಕ್ಕಳ ಜಯ ಘೋಷ.

ಘೆಜ್ಜಿ ಕಟ್ಟಿಧಾಂಗ (ನು)= ನರ್ತಕರಂತೆ ನಿರಂತರ ತಿರುಗಾಡಿದಂತೆ, ನಿರಂತರತೆ ಉಳ್ಳಂತೆ

ಘೆರಿ (ನಾ)= ಘೇರಿ; ಗೆರೆ.

ಘೆರಿ ಎಳಿ (ಕ್ರಿ)= ಗೆರೆ ಎಳೆ; ಸೀಮೆ ಗುರುತಿಸು.

ಘೆರಿಧಾಟು (ಕ್ರಿ)= ಮಾತು ಮೀರು; ಅಪ್ಪಣೆ ಮೀರು.

ಘೆರಿಹಾಕು (ಕ್ರಿ)= ಗೆರೆ ಎಳೆ; ಸೀಮೆ ಗುರುತಿಸು.

ಘೇ (ಕ್ರಿ)= ಜಯವಾಗಲಿ; (ನಾ)ಜಯ.

ಘೇತಿ (ನಾ)= ಗೆರೆ; ಘೇರಿ; ಸೀಮೆ.

ಘೇತ್ಲ್ಯಾ (ನಾ)= ಬಯಸಿದ್ದು ಸಿಕ್ಕ ಕೂಡಲೆ ಜರುಗುವವ.

ಘೇರಾ (ನಾ)= ಸುತ್ತಳತೆ; ಸುತ್ತು;

ಘೇರಾ ಬಂದಿ (ನಾ)= ಸುತ್ತ ಮುತ್ತ ಕಾವಲು.

ಘೇರಾ ಹಾಕು (ಕ್ರಿ)= ಸುತ್ತುವರಿ.

ಘೇರಿ (ನಾ)= ಗೆರೆ; ಸೀಮೆ.

ಘೇರಿ ಎಳಿ (ಕ್ರಿ)= ಸೀಮೆ ಗುರುತಿಸು.

ಘೇರಿಧಾಟು (ಕ್ರಿ)= ಮಾತು ಮೀರು; ಅಪ್ಪಣೆಯನ್ನು ಕಡೆಗಾಣಿಸು.

ಘೇರಿ ಹಾಕು (ಕ್ರಿ)= ಗೆರೆ ಎಳೆ.

ಘೊಂಗ್ಡಿ (ನಾ)= ಗೊಂಗಡಿ; ಕಂಬಳಿ.

ಘೊಂಗ್ಡಿಹುಳಾ (ನಾ)= ಕಂಬಳಿ ಹುಳು.

ಘೊಂಡಿ (ನಾ)= ಗೊಂಡೆ; ಗೊಂಚಲು; ಗುಂಡಿ.

ಘೊಂಡ್ಯಾ (ನಾ)= ಗೊಂಡೆ; ಗೊಂಚಲು; ಅಂಗಿಯ ಗುಂಡಿ.

ಘೊಂಬಿ (ನಾ)= ಗೊಂಬೆ; ಬೊಂಬೆ.

ಘೊಂಬಿ ಮೈಥುಂಬು= ಗೊಂಬೆ ಮೂಲಕ ಭಾನಾಮತಿ ಕ್ರಿಯೆ ನಡೆಸು.

ಘೊಕಾಸು (ಕ್ರಿ)= ಕಂಠಪಾಠ ಮಾಡು; ಬಾಯಿ ಪಾಠ ಮಾಡು; ಮುಖಪಾಠ ಮಾಡು.

ಘೊಟಾಸು (ಕ್ರಿ)= ದ್ರವ ಪದಾರ್ಥವನ್ನು ಕುದಿಸಿ ಅಟ್ಟಿಸು, ಬಂಗಾರದ ಮಣಿಗಳನ್ನು ದಾರದಿಂದ ಹೆಣೆ; ಕುದಿಸಿದ ಬೇಳೆ ಅಥವಾ ಹುಗ್ಗಿಯನ್ನು ಹುಟ್ಟಿನಿಂದ ರುಬ್ಬು, ಅರೆ, ನುರಿಗೊಳಿಸು.

ಘೊಟಾಳಿ (ನಾ)= ಹಾಳು ಬೀಳುವಿಕೆ.

ಘೊಪಾಳಾ (ನಾ)= ಹದಗೆಡುವಿಕೆ.

ಘೊರ್ಕಿ (ನಾ)= ಗೊರಕೆ.

ಘೊರ್ಕಿ ಹೊಡಿ (ಕ್ರಿ)= ಗೊರಕೆ ಹೊಡೆ; ಘುರ್ ಘುರ್ ಸದ್ದು ಮಾಡುತ್ತ ನಿದ್ದೆ ಮಾಡು.

ಘೊರ್ಕುಲಿ (ನಾ)= ಘರ್ಕುಲಿ; ಮಕ್ಕಳು ಕಟ್ಟಿದ ಆಟದ ಮನೆ.

ಘೊಲಾಸ (ನಾ)= ಹೊಲಸು; ಕೊಳಕು; ಮಾಸಿದ್ದು.

ಘೊಲಾಸಿ (ನಾ)= ಹೊಲಸು ಹೊಲಸಾಗಿರುವವಳು (ಬೈಗುಳ).

ಘೊಲಾಸ್ಯಾ (ನಾ)= ಹೊಲಸು ಹೊಲಸಾಗಿರುವವನು (ಬೈಗುಳ)

ಘೊಲ್ಯಾ (ನಾ)= ಗೊಲ್ಲೆ; ಗೊಂಚಲು.

ಘೊಲ್ಯಾಕ ಘೊಲ್ಯಾ (ನು)= ಇಡೀ ಮಾವಿನಗೊಲ್ಲೆ; ಇಡೀ ಕಾಯಿಯ ಗೊಲ್ಲೆ.

ಘೋಟ್ನಿ (ನಾ)= ಕುದಿಸಿದ ಬೇಳೆಯನ್ನು ಮಗುಚಲು (ಅರೆಯಲು) ಬಳಸುವ ಮರದ ಸಾಧನ.

ಘೋಡಾ (ನಾ)= ಕುದುರೆ; ಬಂದೂಕಿನ ಗುಂಡಿ; ಪುರುಷನ ಜನನೇಂದ್ರಿಯ.

ಘೋಡ್ಕಿ (ನಾ)= ಮಗ್ಗಲು.

ಘೋಡ್ವಾಡಿ (ನಾ)= ಬೀದರ ಜಿಲ್ಲೆಯ ಮಸ್ತಾನ ಖಾದ್ರಿ ಎಂಬ ಒಬ್ಬ ಮುಸಲ್ಮಾನ ಸಂತನ ಪವಿತ್ರ ಕ್ಷೇತ್ರವುಳ್ಳ ಊರು.

ಘೋದಿ (ನಾ)= ಗೋಧಿ; ಹೆಣ್ಣು.

ಘೋದಿ ಹುಟ್ಟು (ನು)= ಹೆಣ್ಣು ಹುಟ್ಟು.

ಘೋರ (ನಾ)= ಅತಿ ಕಠಿಣ; ಕಷ್ಟದಾಯಕ.

ಘೋರ್ಪಡ (ನಾ)= ಉಡ; ಪ್ರಾಚೀನ ಕಾಲದಲ್ಲಿ ಸೈನಿಕರು ಇದರ ಸೊಂಟಕ್ಕೆ ಹಗ್ಗಕಟ್ಟಿ ಕೋಟೆ ಹತ್ತಲು ಬಳಸುತ್ತಿದ್ದರು. ತಾನಾಜಿ ಮಾಲುಸರೆ ಇದೇ ಘೋರ್ಪಡದಿಂದ ಸಿಂಹಗಡ ಕೋಟೆ ಹತ್ತಿ ವಿಜಯಿಯಾದನು.

ಘೋಷಾ (ನಾ)= ಗೋಷಾ; ಭುರ್ಕಿ; ಬುರುಕಿ; ಪರದೆ.

ಘೋಳಿ (ನಾ)= ಗೋಳಿ; ಒಂದು ಬಗೆಯ ಸೊಪ್ಪಿನ ತರಕಾರಿ.

ಘೋಳಿಪಲ್ಯಾ = ಒಂದು ಬಗೆಯ ಸೊಪ್ಪಿನ ತರಕಾರಿ; ಗೋಳಿಪಲ್ಲೆ.

ಘ್ವಾಡಿ (ನಾ)= ಗೋಡೆ.

ಘ್ವಾಡಿಕಟ್ಟು (ಕ್ರಿ)= ಗೋಡೆ ಎತ್ತರಿಸು.

ಘ್ವಾಡಿಹಾರು (ಕ್ರಿ)= ಗೋಡೆ ಮೇಲಿಂದ ಆಚೆಗೆ ಜಿಗಿ.

ಚ

ಚಂಗ (ನಾ)= ಸೆರಗು; ಹೆಣಾಲು; ಮೇರಿ; ವೇಣಿ.

ಚಂಗಳಾ (ನಾ)= ಒಬ್ಬ ಶರಣೆಯ ಹೆಸರು; ಹಳೆಯ ಕಾಲದ ಮಹಿಳೆಯರ ಹೆಸರು.

ಚಂಗಾ (ನಾ)= ಸುಖಿ; ಆರಾಮು; ಲಹರಿ; ಹಿಗ್ಗಿನಲ್ಲಿ.

ಚಂಗು (ಕ್ರಿ)= ಹಾರು, ನೆಗೆ, ಜಿಗಿ.

ಚಂಗು (ನಾ)= ಬೆನ್ನ ಹಿಂದೆ ಇಳಿ ಬಿಟ್ಟ ಮುಂಡಾಸಿನ ಬಾಲ; ಕೊನೆ; ಸೆರಗು; ಚೊಂಗು; ಮೇರಿ (**ಗೀಗೀಪದ**: ಮಾರುದ್ದ ಚಂಗು ಬಿಟ್ಟು। ಸೀರಿ ಒಳಗ ಲಂಗಾ ಉಟ್ಟು। ಬೀದಿ ಬೀದಿ ತಿರ್ಗಾದೊಂದು ಕಲತಾರಣ್ಣ।।ಹಾಗೀಯಗಾ.......ದೇಶಾಂಶ ಹುಡಗಿ).

ಚಂಚ (ನಾ)= ಡೊಂಕು ಕೈಯುಳ್ಳವ; ಚೊಂಚ; ಅಡವಿ ಚಂಚ (ಶ್ರೀಶೈಲ ಬೆಟ್ಟ ಹತ್ತುವ ತೀರ್ಥಯಾತ್ರಿಗಳಿಗೆ ಚಂಚರು ತಮ್ಮ ಕಾವಡಿಯಲ್ಲಿ ಕೂರಿಸಿಕೊಂಡು ಬೆಟ್ಟ ಹತ್ತಿಸುತ್ತಿದ್ದರು).

ಚಂಚಳ (ವಿ)= ಚಲಿಸುವ; ಚಪಲ ಸ್ವಭಾವದ.

ಚಂಚಳ್ಮಂಚ್ಛ (ನಾ)= ಚಂಚಲತೆಯಿಂದ ಕೂಡಿದ; ಸ್ಥಿರ ವಿಚಾರ ಇಲ್ಲದ.

ಚಂಚಿ (ನಾ)= ಸಂಚಿ; ಎಲೆ ಅಡಿಕೆಯ ಚೀಲ; ಚಕಮಕಿ ಚೀಲ.

ಚಂಡಾ (ನಾ)= ತಲೆ; ಕುತ್ತಿಗೆಯ ಮೇಲ್ಭಾಗ, ತುದಿ.

ಚಂಡಾಟ (ನಾ)= ಚಂಡಿನ ಆಟ.

ಚಂಡಾಡು (ಕ್ರಿ)= ಕುತ್ತಿಗೆ ಕಡಿದು ಹಾರಿಸು.

ಚಂಡಾ ಸಾಫ್ ಮಾಡು= ಕುತ್ತಿಗೆ ಹೊಡೆ; ಜೀವತೆಗೆ; ಬೋಳಿಸು; ಟೋಪಿ ಹಾಕು; ತಲೆಗೂದಲುದುರುವಂತೆ ಹೊಡೆ; ಮರದ ಚೆಂಡಿಯನ್ನು ಕಡಿ.

ಚಂಡಾಳ (ನಾ)= ಕ್ರೂರ ಕೆಲಸ ಮಾಡುವವನು; ದುಷ್ಟ; ವಧಿಕ.

ಚಂಡಿ (ನಾ)= ಗಿಡದ ತುದಿ; ಕೊನೆ; ಹಟಮಾರಿ; ಹಟಮಾರಿತನ; ಉದ್ದಾಲಕ ಮಹರ್ಷಿಯ ಹೆಂಡತಿ; ಹಟ ಮಾರಿ ಹೆಣ್ಣು.

ಚಂಡಿ ಚಿವುಟ್ಲಿ (ನು)= ಚೆಂಡಿ ಚಿವುಟಿ ಬೆಳೆಯದಂತೆ ಮಾಡಲಿ; ಸಂತಾನ ನಿಂತು ಹೋಗಲಿ, ನಾಶವಾಗಲಿ (ಬೈಗಳು).

ಚಂಡು (ನಾ)= ನೆಲದ ಮೇಲೆ ಎಸೆದರೆ ಪುಟಿಯುವ ಬಟ್ಟೆಯ ಇಲ್ಲವೆ ರಬ್ಬರಿನ ಗುಂಡಾದ ವಸ್ತು.

ಚಂಡುಲಿ (ನಾ)= ಸೊಂಡಿಲಿ; ಚುಚಂದ್ರಿ; ವಿಷಕಾರಿ ಇಲಿ.

ಚಂಡುವ್ವ (ನಾ)= ಚಂಡಿನಂತೆ ದುಂಡಾದ ಹೂವು; ಚಂಡಿನ ಹೂವ್ವ.

ಚಂಡೂಲಾಲ (ನಾ)= ಮಾತು ಹೇಳುತ್ತ ದಿನ ಕಳೆಯುವವನು.

ಚಂಡ್ಕಿ (ನಾ)= ಚೆಂಡಿಕೆ; ಶಿಖೆ.

ಚಣ್ಕಿ (ನಾ)= ಚೆಂಡಿಕೆ; ಚಂಡ್ಕಿ; ಶಿಖೆ.

ಚಂದನ (ನಾ)= ಶ್ರೀಗಂಧ.

ಚಂದರ್ಗಿ (ನಾ)= ಔರಾದ ತಾಲೂಕಿನ ಒಂದು ಹಳ್ಳಿ, ಅದು ಈಗ ಚಾಂದೋರಿಯೆಂದು ಅನ್ಯ ಭಾಷಿಕರ ಬಾಯಲ್ಲಿ ರೂಪು ತಾಳಿದೆ.

ಚಂದಮಾಂವ (ನಾ)= ಚಂದ್ರ; ಚಂದಾಮಾಮಾ.

ಚಂದಮುರ್ತ್ಯಾ (ನಾ)= ಚಂದ್ರಾಮಜ್ಜ (ಬಾಲ ಭಾಷೆ) (ಶಿಶುಪ್ರಾಸ : ಚಂದಮುರ್ತ್ಯಾ ಬಂದಾನಾ। ಭಜ್ಜಿ ರೊಟ್ಟಿ ತಂದಾನಾ॥)

ಚಂದಾ (ನಾ)= ದೇಣಿಗೆ; ಸತ್ಕಾರ್ಯಕಾಗಿ ದಾನ; ವಂತಿಗೆ; ವರ್ಗಣಿ.

ಚಂದಾದಾರ (ನಾ)= ದೇಣಿಗೆ ಕೊಡುವವ; ವರ್ಗಣಿದಾರ; ವಂತಿಗೆದಾರ.

ಚಂದಾಮಾಮಾ (ನಾ)= ಚಂದ್ರಮಾವ (ಬಾಲಭಾಷೆ) ಶಿಶುಪ್ರಾಸ: ಚಂದಾಮಾಮಾ ಬ್ಯಾರೀಕಾಯಿ ಬಟಲ ತುಂಬಾ ಬಾರೀ ಕಾಯಿ ನಮ್ಮತ್ತಿ ಬೇಡ್ತಾಳಿನ್ನೊಂದ್ಕಾಯಿ॥

ಚಂದಿ (ನಾ)= ಕುದುರೆ ಬಾಯಿಗೆ ಕಟ್ಟುವ ಅಹಾರ ಮತ್ತು ಅದರ ಚೀಲ; ತೋಬ್ರಿ; ತೊಯ್ಸಿದ ನುರುಗು; ಚುನ್ನಿ (ಕುದ್ರಿಗಿ ಚಂದಿತಿನ್ನಾದರಾಗೆ, ಮಾಲಕುನ ಚಿಂದಿಹಾರಿ ಹೋಯ್ತುಂತ!)

ಚಂದುರ್ಗಿ (ನಾ)= ಔರಾದ ತಾಲೂಕಿನ ಒಂದು ಹಳ್ಳಿ; ಅದು ಈಗ ಚಾಂದೋರಿ ಎಂದು ವಿಕಾರಗೊಂಡಿದೆ.

ಚಂದ್ರ (ನಾ)= ಶಶಿ; ಚಂದ್ರಾಮ; ಚಂದಿರ; ಚಂದುಮಾಂವ; ಚಂದಮುರ್ತ್ಯಾ; ದನಗಳ ಹಣೆ ಮೇಲಿನ ದುಂಡಗಿನ ಬಿಳಿ ಬಣ್ಣ; ಹಣೆ ಚಂದ್ರ.

ಚಂದ್ರಹಾರ (ನಾ)= ಕೊರಳಲ್ಲಿ ಧರಿಸುವ ಒಂದು ಬಗೆಯ ಚಿನ್ನದ ಆಭರಣ.

ಚಂದ್ರಾಮ (ನಾ)= ಚಂದಾಮಾಮ; ಚಂದ್ರಮಾವ.

ಚಂದ್ರಿ (ನಾ)= ಹಣೆ ಮೇಲೆ ಬಿಳಿ ಬಣ್ಣವುಳ್ಳ ಆಕಳು, ಎಮ್ಮೆ ಇತ್ಯಾದಿ.

ಚಂದ್ರಿಹನಾ = ಹರಾಮ ಇದ್ದಾನೆ; ತುಂಟ ಇದ್ದಾನೆ.

ಚಂದ್ರ್ಯಾ (ನಾ)= ಹುಣ್ಣಿಮೆ ಚಂದ್ರನ ಬಣ್ಣವುಳ್ಳ ಹೋರಿ ಎತ್ತು ಇತ್ಯಾದಿ; ಚಂದ್ರಪ್ಪನಿಗೆ ಹೀನೈಸಿ 'ಚಂದ್ರ್ಯಾ' ಎಂಬ ರೂಢಿ.

ಚಂಪಾ (ನಾ)= ನಾಲ್ಕು ಬೆರಳಿನ ಅಳತೆ ಮಾನ; ನಾಲ್ಕು ಅಂಗುಲಳತೆ (ಚಂಪಾ, ಚೋಟು, ಗೇಣು, ಮೊಳ, ಗಜ, ಮಾರು, ಇವು ಕೈ ಅಳತೆಗಳು).

ಚಂಪಾಚಿ (ನಾ)= ಚಂದ್ರಕಾಂತ ಪಾಟೀಲ ಚಿಮೋಡ ಎಂಬ ಕತೆಗಾರ.

ಚಂಪಿ (ನಾ)= ಕೂದಲುದುರಿ ನುಣ್ಣಗಾದ ತಲೆ.

ಚಂಬಾರ (ನಾ)= ಸಮ್ಗಾರ; ಚಮ್ಮಾರ (ಗಾದೆ: ಚಂಬಾರ ದೇವ್ರಿಗಿ ಚಪ್ಲಿಲಿ ಪೂಜಾ)

ಚಂಬು (ನಾ)= ತಾಂಬ್ರ, ಹಿತ್ತಾಳೆ, ಜರ್ಮನ್ ಸಿಲ್ವರ, ಗಾಜು ಇತ್ಯಾದಿಗಳಿಂದ ತಯಾರಿಸಿದ ಬಾಯಿ ಸಣ್ಣದಿರುವ ಗುಂಡಗಿನ ಲೋಟ; ನೀರು ಕುಡಿಯಲು ಬಳಸುವ ತಗಡಿನಡಬ್ಬ; ಜಾಮು; ತಂಬಿಗೆ.

ಚಂಬೇಲಿ (ನಾ)= ಚಮೇಲಿ ಬಳ್ಳಿ ಮತ್ತು ಅದರ ಹೂ.

ಚಕ್‌ಚಕ್ (ದ್ವಿ)= ಸ್ವಚ್ಛ.

ಚಕಮುಕಿ (ನಾ)= ಘರ್ಷಣೆ; ಹೋರಾಟ; ಬೆಂಕಿ ಹುಟ್ಟಿಸಲು ಬಳಸುವ ಕಲ್ಲು ಮತ್ತು ಕಬ್ಬಿಣದ ತುಂಡು.

ಚಕಮುಕಿ ಕಲ್ಲು (ನಾ)= ಉಜ್ಜಿದರೆ ಕಿಡಿ ಕಾರುವ ಕಲ್ಲು; ಗಾರುಗಲ್ಲು.

ಚಕಮುಕಿ ಚೀಲ (ನಾ)= ಚಕಮುಕಿಕಲ್ಲು, ಕಬ್ಬಿಣದ ತುಂಡು ಹಾಗೂ ಬೆಂಕಿ ಹೊತ್ತಿಸಲು ಬಳಕೆಯಾಗುವ ಅರಳೆ ಇತ್ಯಾದಿ ಇಡುವ ಚಂಚಿ, ಸಂಚಿ, ಚೀಲ ಇತ್ಯಾದಿ.

ಚಕಾರಿ (ನಾ)= ಬಂಡಿಗಾಲಿ ಮೂಡಿಸಿದ ಹಾದಿ, ಗೆರೆ.

ಚಕೋತಾ (ನಾ)= ಒಂದು ಪ್ರಕಾರದ ತಿನ್ನುವ ಕಾಯಿ.

ಚಕೋಲಿ (ನಾ)= ಚಕ್ಕುಲಿ; ಚಿಕ್ಕ ಹುಡುಗಿ.

ಚಕ್ಕರ್ (ನಾ)= ವರ್ತುಳಾಕಾರವಾಗಿ ಸುತ್ತುವಿಕೆ; ತಪ್ಪಿಸಿಕೊಳ್ಳುವಿಕೆ; ಗೈರು ಹಾಜರಿ; ಚಕ್ರ (ಉದಾ: ಶಾಲೆಗೆ ಚಕ್ಕರ್, ಊಟಕೆ ಹಾಜರ್).

ಚಕ್ಕರ್ ಕುಡು (ಕ್ರಿ)= ತಪ್ಪಿಸು; ಗೈರು ಹಾಜರಾಗು.

ಚಕ್ಕರ್ ಬರು (ಕ್ರಿ)= ತಲೆಸುತ್ತಿದಂತಾಗು.

ಚಕ್ಕರ್ ಮಲ್ಲಿಗಿ (ನಾ)= ಸ್ವಸ್ತಿಕ ಮಲ್ಲಿಗೆ.

ಚಕ್ಕಿ (ನಾ)= ಚಕ್ಕೆ; ಚಿಂಪು; ಚಕಳೆ; ಬೀಸುಕಲ್ಲು.

ಚಕ್ಕು (ನಾ)= ಹುಂಡಿ.

ಚಕ್ಡಿ (ನಾ)= ಚಕ್ಕಡಿ; ಎತ್ತಿನ ಬಂಡಿ.

ಚಕ್ಮುಕಿ (ನಾ)= ಚಕಮುಕಿ (ನೋಡಿರಿ)

ಚಕ್ರಬಡ್ಡಿ (ನಾ)= ಬಡ್ಡಿಯ ಮೇಲೆ ಮರು ಬಡ್ಡಿ ವಸೂಲು ಮಾಡುವಿಕೆ.

ಚಕ್ರಾವಡಿ (ನಾ)= ಚಕ್ರಬಡ್ಡಿ.

ಚಕ್ರೀಭಜ್ನಿ (ನಾ)= ವರ್ತುಳಾಕಾರವಾಗಿ ಸುತ್ತು ಹೊಡೆಯುತ್ತ ಮಾಡುವ ದೇವರ ಭಜನೆ, ಹಾಡುಗಾರಿಕೆ.

ಚಕ್ಲಿ (ನಾ)= ಚಕ್ಕುಲಿ; ಒಂದು ಬಗೆಯ ಕರಿದ ತಿಂಡಿ.

ಚಕ್ಳಿ (ನಾ)= ನೆಲದಿಂದ ಎದ್ದ ಮಣ್ಣ ಹಕ್ಕಳಿಕೆ; ಕಟ್ಟಿಗೆಯ ಚಪ್ಪಟೆ ಚೂರು; ಚಕಳೆ.

ಚಗಚಿ (ನಾ)= ಚೊಗಚೆ; ಒಂದು ಪ್ರಕಾರದ ಕಾಡು ಸೊಪ್ಪು ತರಕಾರಿ.

ಚಗಳಿ (ನಾ)= ಅರ್ಧಮರ್ಧ ಮೆಲಿದು ಎಸೆದ ಮೇವು, ಕಣಿಕೆ ಇತ್ಯಾದಿ.

ಚಗುಳ್ಸು (ಕ್ರಿ)= ಮೆಲಿ; ಮೆಲುಕು ಹಾಕು; ಚವುಳ್ಸು.

ಚಚೌಕ (ವಿ)= ನಾಲ್ಕೂ ಕಡೆ ಸಮನಾಗಿರುವ; ಸಮ ಚತುರ್ಭುಜ

ಚಟಗುಟ್ಲೆ (ಅ)= ಚಟ್ಟನೆ, ಚಿಟ್ಟನೆ (ಚೀರುವ ಕ್ರಿಯೆ).

ಚಟಾ (ನಾ)= ಚಟ; ಚಾಳಿ; ರೂಢಿ; ಅಭ್ಯಾಸ.

ಚಟೈ (ನಾ)= ಚಾಪೆ; ಸಿಂಧಿ ಎಲೆಗಳಿಂದ ಇಲ್ಲವೆ ಹುಲ್ಲಿನಿಂದ ತಯಾರಿಸಿದ ಹಾಸಿಗೆ.

ಚಟ್ಕಿ (ನಾ)= ಕಾಲುಂಗುರ; ಕಾಲ್ಬೆರಳಿನ ಬೆಳ್ಳಿಯುಂಗುರ (ಲಂಬಾಣಿ ಭಾಷೆ).

ಚಟ್ಗಿ (ನಾ)= ಚಟ್ಟಿಗೆ; ಮಣ್ಣಿನ ಪಾತ್ರೆ; ಮಡಕೆ.

ಚಟ್ಟಂತ (ಅ)= ಚಟ್ಗುಟ್ಲೆ; ಚಿಟ್ಟನೆ (ಚೀರುವ ಕ್ರಿಯೆ).

ಚಟ್ಪಾ (ನಾ)= ಚಟ್ಟ; ಹೆಣವನ್ನು ಸಾಗಿಸಲು ಬಿದಿರಿನಿಂದ ಇಲ್ಲವೆ ಲಕ್ಕಿಯಿಂದ ತಯಾರಿಸಿದ ಸಾಧನ; ಮೋರೆ ತಪ್ಪಿಸುವಿಕೆ; ಚಕ್ಕರ ಕೊಡುವಿಕೆ.

ಚಟ್ಟಾ ಕುಡು (ಕ್ರಿ)= ಓಡಿ ಹೋಗು; ಚಕ್ಕರ್ ಕೊಡು.

ಚಟ್ಟಿ (ನಾ)= ಷಷ್ಟಿ; ಚಟ್ಟಿ ಅಮಾವಾಸ್ಯ (ಗಾದೆ: ಚಟ್ಟಿ ಅಮಾಸಿಗಿ ಛಳಿ ಚಿಟ್ಟುಲು ಬಾರುಸ್ತಾದ).

ಚಟ್ಟಿ ಅಮಾವಾಸಿ (ನಾ)= ಯಳ್ಳಾ ಮಾಸಿಗೆ ಮುನ್ನ ಬರುವ ಮೈಲಾರ ಮಲ್ಲಯ್ಯನ ಭಕ್ತರು ಕೊಟಮ್ಗಿ ತುಂಬುವ ಶಾಸ್ತ್ರ ಮಾಡುವ ಅಮಾವಾಸ್ಯೆ.

ಚಟ್ನಿ(ನಾ)= ಚಟ್ನಿ; ಸೇಂಗಾಬೀಜದ ಇಲ್ಲವೆ ಕಡಲೆ ಪುಟಾಣಿ ಅರೆದು ತಯಾರಿಸಿದ ಒಂದು ಪ್ರಕಾರದ ವ್ಯಂಜನ ಪದಾರ್ಥ.

ಚಟ್ನಿ ಪುಡಿ (ನಾ)= ಎಣ್ಣೆಕಾಳುಗಳನ್ನು ಹುರಿದು ಖಾರ ಉಪ್ಪು ಸೇರಿಸಿ ಅರೆದ ಹಿಂಡಿ; ಪುಟಾಣಿಯ ಹಿಂಡಿ.

ಚಟ್ನಿ (ನಾ)= ಚಟ್ಣಿ (ನೋಡಿರಿ)

ಚಟ್ನಿ ಅರಿ (ಕ್ರಿ)= ಖಾರ, ವ್ಯಂಜನ ಪದಾರ್ಥ ಇತ್ಯಾದಿಗಳನ್ನು ಕುಟ್ಟು; ಲುಕ್ಸಾನೆ ಮಾಡು.

ಚಟ್ನೆ (ಅ)= ಚಿಟ್ಟನೆ (ಚೀರು, ಕಿರುಚು).

ಚಡ (ನಾ)= ಏರಿ; ಒಡ್ಡು; ಹೊಡ್ಡು; ತಿಟ್ಟು. (ಉ: ಚಡ ಏರಿದ ಮ್ಯಾಲ ದಮ್ಮು ಬರಾದು ಖಾತ್ರಿನೆ ನೋಡ್ರಿ).

ಚಡೇರು (ಕ್ರಿ)= ಒಡ್ಡು ಹತ್ತು, ಏರಿ ಹತ್ತು; ದಿನ್ನೆ ಹತ್ತು.

ಚಡಪುಡ್ಕಿ (ನಾ)= ಚಡಪಡಿಕೆ; ಅಸಮಾಧಾನ.

ಚಡಪುಡ್ಸು (ಕ್ರಿ)= ಚಡಪಡಿಸು; ತ್ವರೆಗೊಳ್ಳು; ಒದ್ದಾಡು; ಹೊರಳಾಡು

ಚಡಾವಡಿ (ನಾ)= ಏರಾಟ; ಸ್ಪರ್ಧೆ.

ಚಡಾವಡಿ ಮಾಡು (ಕ್ರಿ)= ಏರಾಟ ನಡೆಸು.

ಚಡಾವು (ನಾ)= ಬೂಟು; ಮಚ್ಚೆ; ಏರಿ; ಒಡ್ಡು; ದಿನ್ನೆ.

ಚಡಾಸು (ಕ್ರಿ)= ಏರಿಸು; ದರವನ್ನು ಹೆಚ್ಚಿಸು; ಹರಾಜಿನಲ್ಲಿ ಹೆಚ್ಚಿನ ಬೋಲಿ ಮಾಡು; ಸೂಜಿಗೆ ದಾರ ಪವಣಿಸು.

ಚಡ್ಡಿ (ನಾ)= ಅರೆಚಣ್ಣ; ಲಂಗೋಟಿ; ಕೂರಿಗೆಯ ಮೇಲ್ಭಾಗದ ಮೂರು ರಂಧ್ರದ ದುಂಡಾಗಿ ತಯಾರಿಸಿದ ಕಟ್ಟಿಗೆಯ ಉಪಕರಣ ಮೂರು ಬುಕ್ಕಗಳ ಮುಕ್ಕೂಟದ ಉಪಕರಣ.

ಚಡ್ಡಿ ದೋಸ್ತ (ನಾ)= ಲಂಗೋಟಿಯಾರ; ಅತಿ ಆತ್ಮೀಯ.

ಚಡ್ಡಿ ಬಿಗಿ (ಕ್ರಿ)= ಲಂಗೋಟಿ ಕಟ್ಟಿ ಕುಸ್ತಿಗೆ ಸಿದ್ಧವಾಗು; ಬಿತ್ತುಣಿಕೆಯ ಕೂರಿಗೆ ಸಿದ್ಧಗೊಳಿಸು.

ಚಡ್ತಿ (ನಾ)= ಏರಿಕೆ.

ಚಣಗಿ (ನಾ)= ಒಂದು ಬಗೆಯ ದ್ವಿದಳ ಧಾನ್ಯ ಮತ್ತು ಅದರ ಸಸ್ಯ; ಮಸೂರು.

ಚಣ್ಗಿಬ್ಯಾಳಿ (ನಾ)= ಚಣಗಿ ಕಾಳನ್ನು ಒಡೆದು ಇಬ್ಭಾಗ ಮಾಡಿದ ಫಲಕ; ಚಣಗಿ ಬೇಳೆಯಿಂದ ತಯಾರಿಸಿದ ಹುಳಿಸಾರು, ಹುಳಿ ಬೇಳೆ.

ಚಣ್ಣಿ (ನಾ)= ಚಣ್ಣ; ಚಲ್ಲಣ; ಚೊಲಣೆ.

ಚತುರ (ನಾ)= ಜಾಣ; ನಿಪುಣ; ಚಟುವಟಿಕೆಯುಳ್ಳ.

ಚದುರ (ನಾ)= ಜಾಣ; ಬುದ್ಧಿವಂತ; ಸುಂದರ.

ಚದುರಿ (ನಾ)= ಜಾಣೆ; ಬುದ್ಧಿವಂತೆ; ಸುಂದರಿ.

ಚನ್ನಬಸವಣ್ಣ (ನಾ)= ಬಸವಣ್ಣನವರ ಅಕ್ಕನಾದ ಅಕ್ಕನಾಗಮ್ಮನ ಮಗ, ಸಿದ್ಧರಾಮೇಶ್ವರರ ದೀಕ್ಷಾಗುರು, ಷಟ್‌ಸ್ಥಲ ಚಕ್ರವರ್ತಿ, ಬಿಜ್ಜಳನ ರಾಜ್ಯದ ಚಿಕ್ಕದಂಡ ನಾಯಕ.

ಚನ್ನಬಸವ ಪಟ್ಟದ್ದೇವ (ನಾ)= ಕನ್ನಡದ ಪಟ್ಟದ್ದೇವರೆಂದೇ ಖ್ಯಾತಿ ಹೊಂದಿದ, ಕನ್ನಡದ ಹೋರಾಟಗಾರರಾದ ಭಾಲ್ಕಿ ಹಿರೇಮಠದ ಪಟ್ಟಾಧ್ಯಕ್ಷರಾದ ಲಿಂ. ಡಾ. ಚೆನ್ನಬಸವರು; ಬೀದರ ಜಿಲ್ಲೆಯ ಕನ್ನಡ ಕಟ್ಟಿದ ಮಠಾಧೀಶರು. ತಮ್ಮ ಮಠದಿಂದ ಮೊಟ್ಟ ಮೊದಲು ಕನ್ನಡ ಪುಸ್ತಕ ಪ್ರಕಾಶನ ನಡೆಸಿದವರು.

ಚೆನ್ನವೀರ ಶಿವಾಚಾರ್ಯ (ನಾ)= ಹಾರ್ಕೂಡ ಹಿರೇ ಮಠದ ಪಟ್ಟಾಧ್ಯಕ್ಷರು, ಕನ್ನಡ ಸಾಹಿತ್ಯ ಸೇವೆಗೆ ನಿರಂತರ ಶ್ರಮಿಸುತ್ತಿರುವವರು.

ಚಪರಾಕಿ (ನಾ)= ಮೆಲುಕಿನಲ್ಲಿ ಕೊಡುವ ಏಟ; ತಪರಾಕಿ; ತಮಾಚಾ; ಕಪಾಳ ಮೋಕ್ಷ.

ಚಪರಾಕಿ ಕುಡು (ಕ್ರಿ)= ಮೆಲುಕಿನಲ್ಲಿ ಏಟ ಹಾಕು.

ಚಪರಾಸಿ (ನಾ)= ಕಚೇರಿ ಸಿಪಾಯಿ; ಜವಾನ; ಚಪ್ರಾಸಿ; ಛಪರಾಸಿ.

ಚಪಾತಿ (ನಾ)= ಗೋಧಿ ರೊಟ್ಟಿ.

ಚಪುಟ (ವಿ)= ಚಪ್ಪಟೆ.

ಚಪೂಟು (ವಿ)= ಚಪ್ಪಟೆ; ಚಪುಟ.

ಚಪ್ಗೊಡ್ಲಿ (ನಾ)= ತೆಳ್ಳಗಿರುವ ಅರ್ಧಚಂದ್ರಾಕೃತಿಯ ಕೊಡಲಿ; ತೆಳ್ಳಗಿರುವ ಕೊಡಲಿ.

ಚಪ್ಪಿ (ನಾ)= ಚಪ್ಪಟೆಯಾದ ಸೆರೆಯ ಬಾಟಲಿ; ಆಂಧ್ರದ ನಾರಾಯಣಖೇಡ ತಾಲೂಕಿನ ಒಂದು ಹಳ್ಳಿ. ತತ್ವಪದಕಾರರಾದ ಸಧ್ಯ ಬೀದರಿನ ಚಿಟ್ಟಾವಾಡಿ ವಾಸಿಯಾಗಿರುವ ರಘುನಾಥ ಹಡಪದರ ಹುಟ್ಟೂರು.

ಚಪ್ಪಲಿ (ನಾ)= ಚಪ್ಲಿ; ಮೆಟ್ಟು; ಕಾಲ್ಮರಿ; ಪಾದರಕ್ಷೆ.

ಚಪ್ಪುರ್ಸು (ಕ್ರಿ)= ಚಪ್ಪರಿಸು; ಬೆನ್ನು ಬಾರಿಸು; ಹುರಿದುಂಬಿಸು.

ಚಪ್ಪುಳು (ನಾ)= ಚಪ್ಪಾಳೆ; ಟಾಳಿ; ಗೋಲಾಕಾರ ಮಾಡಿದ ಸೆಗಣಿಯ ಕುಳ್ಳು

ಚಪ್ಪುಳು ಭಾರ್ಸು (ಕ್ರಿ)= ಚಪ್ಪಾಳೆ ತಟ್ಟು; ಟಾಳಿ ಹೊಡಿ.

ಚಪ್ಪುಳ್ಗುಳ್ಳು (ನಾ)= ಸಗಣಿ ತಟ್ಟಿ ತಯಾರಿಸಿದ ಸಣ್ಣ ಬೆರಣಿ.

ಚಪ್ರಾಕಿ (ನಾ)= ಚಪರಾಕಿ (ನೋಡಿರಿ)

ಚಪ್ಲಿ (ನಾ)= ಚಪ್ಪಲಿ (ನೋಡಿರಿ)

ಚಪ್ಪ (ನಾ)= ಚಪ್ಪಾಳೆ; ಚತುರ; ಚುರುಕು .

ಚಪ್ಪ ಇರು (ಕ್ರಿ)= ಚುರುಕಾಗಿರು; ಚತುರನಾಗಿರು.

ಚಪ್ಪಬಡಿ (ಕ್ರಿ)= ಟಾಳಿ ಹೊಡಿ; ಚಪ್ಪಾಳೆ ತಟ್ಟು; ಸೆಗಣೆಯಿಂದ ಸಣ್ಣ ಬೆರಣಿ ತಟ್ಟು

ಚಪ್ಪಾಗು (ಕ್ರಿ)= ಚುರುಕಾಗು; ಚತುರ ನಾಗು

ಚಬುಕಾ (ನಾ)= ಚಬಕ; ಚಾವಟಿ; ತೊಗಲಿನ ಬಾರುಕೋಲು; ಹಂಟರ್.

ಚಬಾಸು (ಕ್ರಿ)= ಮೆಲಿ; ತಿನ್ನು.

ಚಮುಕಾಸು (ಕ್ರಿ)= ಮಿಂಚು; ಹೊಳೆ.

ಚಮಕಿ (ನಾ)= ಮಿಂಚು; ಮಿಂಚುವ ಹುಡಿ.

ಚಮತ್ಕಾರ (ನಾ)= ಸೋಜಿಗ, ವಿಸ್ಮಯ; ಚಾತುರ್ಯ; ಕೌಶಲ್ಯ.

ಚಮನ (ನಾ)= ಹೂದೋಟ; ಬಗೀಚಾ; ಆನಂದ.

ಚಮ್ಚಾ (ನಾ)= ಚಮಚ; ಸೌಟಿನಾಕಾರದ ಸಣ್ಣ ಸಾಧನ; ಮಧ್ಯಸ್ಥ.

ಚಮ್ಚಾಗಿರಿ (ನಾ)= ಮಧ್ಯಸ್ಥಿಕೆ; ಬಾಲಬಡಿಯುವಿಕೆ; ಪಕ್ಷವಹಿಸುವಿಕೆ.

ಚಮ್ಡಾ (ನಾ)= ಚರ್ಮ; ತೊಗಲು.

ಚಮ್ಡಾ ಉಚ್ಚು (ಕ್ರಿ)= ಚರ್ಮ ಸುಲಿದು ತೆಗೆ; ಚರ್ಮಕೀಳುವಂತೆ ಜೋರಾಗಿ ಹೊಡೆ.

ಚಮ್ಡಾಸುಲಿ (ಕ್ರಿ)= ಚಮ್ಡಾ ಉಚ್ಚು (ನೋಡಿರಿ).

ಚಮತ್ಕಾರ ತೋರ್ಸು (ಕ್ರಿ)= ಚಾತುರ್ಯ ಪ್ರದರ್ಶಿಸು.

ಚರಂಡಿ (ನಾ)= ಗಟಾರ; ಮೋರಿ.

ಚರಕಪಳ್ಳಿ (ನಾ)= ಜಹೀರಾಬಾದ ತಾಲೂಕಿನ ಒಂದು ಕನ್ನಡ ಹಳ್ಳಿ. ಅದು ಈಗ ಚಿರಾಗ್ಪಲ್ಲಿಯಾಗಿದೆ.

ಚರಖಾ (ನಾ)ಹಿಂ.= ಚರಕ; ನೂಲುವ ರಾಟಿ.

ಚರಖಾ ತಿರುವು (ಕ್ರಿ)= ಚರಕ ನಡೆಸು.

ಚರಗಾ (ನಾ)= ಚರಗ; ಸರಗ. ಯಳ್ಳಮಾವಾಸ್ಯೆಯ ದಿನ ಹೊಲಗದ್ದೆಗಳಲ್ಲಿ ರೈತರು ಭೂಮಿ ತಾಯಿಗೆ ಬಂಕೆಯೂಟವೆಂದು ಕ್ಷೇತ್ರದ ಎಲ್ಲ ದಿಕ್ಕಿಗೆ ಎರಚುವ ಆಹಾರ ಪದಾರ್ಥ; ಹಾಗೆ ಎರಚುವಾಗ "ಒಲಗ್ಯಾ ಒಲಗ್ಯಾ" ಎಂದು ಒಬ್ಬ ರೈತ ಮುಂದೆ ನಡೆದರೆ "ಚಲ್ಲಂಪೋಲ್ಯಾ" ಎಂದು ಹಿಂದಿನ ರೈತ ನೀರು ಸಿಂಪಡಿಸುವ ಶಾಸ್ತ್ರ ನೆರವೇರಿಸುತ್ತಾರೆ.

ಚರಗಾ ಹೊಡಿ (ಕ್ರಿ)= ಚರಗ ಚೆಲ್ಲು; ಸರಗ ಎರಚು (ಚರಗಾ ನೋಡಿರಿ); ಭೂಮಿ ತಾಯಿಗೆ ಬಂಕೆಯೂಟ ಉಣಿಸು.

ಚರಗಿ (ನಾ)= ಚರವಿಗೆ; ಚರಿಗೆ; ಅಗಲವಾದ ಬಾಯಿಯುಳ್ಳ ಲೋಹದ ಪಾತ್ರೆ; ತಾಮ್ರದ ಹಂಡೆ.

ಚರಚಟ (ನಾ)ಮ.= ಹಗ್ಗ; ಸರವಿ; ಕಣ್ಣಿ.

ಚರಣ (ನಾ)= ಪಾದ.

ಚರಣ ಭೀಳು (ಕ್ರಿ)= ಪ್ರವೇಶವಾಗು.

ಚರಣಾಮೃತ (ನಾ)= ಪಾದೋದಕ (ಭಜನೆ ಗುರುಚನ್ನ ವೀರೇಶನ ಕದುಣಾಮೃತ ಸುರಿವಾ। ಚರಣಾಮೃತ ಸುರಿವಾ।).

ಚರಾಸು (ಕ್ರಿ)= ಮೇಯಿಸು; ಠಕ್ಕಿಸು.

ಚರಿತ್ರ (ನಾ)= ನಡಾವಳಿ; ಮಹಾ ಪುರುಷರ ಜೀವನದ ರೀತಿ ನೀತಿ.

ಚರ್ಕಾ (ನಾ)= ಚರಖಾ (ನೋಡಿರಿ).

ಚರ್ಕಾನಡ್ಸು (ಕ್ರಿ)= ಚರಕದಿಂದ ನೂಲುವ ಕೆಲಸ ಮಾಡು, ನೂಲುತೆಗೆ.

ಚರ್ಕಿಕುಡು (ಕ್ರಿ)= ಕಾಯ್ದ ಕಬ್ಬಿಣದ ತುಂಡಿನಿಂದ ಮೈ ಮೇಲೆ ಚುಚ್ಚು; ಬರೆ ಎಳೆ.

ಚರ್ಕುಳಿ (ನಾ)= ಸಡಿಲು ವಿಸರ್ಜನೆ; ಭೇದಿ.

ಚರ್ಗಿ (ನಾ)= ಚರಿಗೆ.

ಚರ್ಗುಟ್ಲೆ (ಅ)= ಚರ್‍ರನೆ (ಸುಡುವಿಕೆ).

ಚರ್ಚಾ (ನಾ)= ಚರ್ಚೆ; ಚಿಂತನೆ.

ಚರ್ಚಾಮಾಡು (ಕ್ರಿ)= ಚರ್ಚಿಸು, ವಿಚಾರ ಮಂಥನ ಮಾಡು.

ಚರ್ಚು (ಕ್ರಿ)= ತರಚು; ಬರಚು.

ಚರ್ಚು (ನಾ)= ಕ್ರೈಸ್ತ ಧರ್ಮದವರ ಪ್ರಾರ್ಥನಾ ಮಂದಿರ.

ಚರ್ಬಿ (ನಾ)= ನೆಣ; ಕೊಬ್ಬು.

ಚರ್ಮ (ನಾ)= ತೊಗಲು; ತ್ವಚೆ.

ಚರಮ್ರೋಗ (ನಾ)= ಚರ್ಮರೋಗ.

ಚಲನ್ (ನಾ)= ನಡತೆ; ನಡಾವಳಿ; ಚಾಲಚಲನ್.

ಚಲವಾದಿ (ನಾ)= ಉಪ್ಪಾರ; ಗವಂಡಿ; ಕಟ್ಟಡ ನಿರ್ಮಾಣ ಕೆಲಸದವ.

ಚಲಾಕತಿ (ನಾ)= ಚಾಲಾಕಿ; ಜಾಣತನ.

ಚಲಾವಣೆ (ನಾ)= ವ್ಯವಹಾರದಲ್ಲಿರುವಿಕೆ; ಬಳಕೆ; ಚಲ್ತಿ; ಮುಂದುವರಿದಿರುವಿಕೆ.

ಚಲಾಸು (ಕ್ರಿ)= ನಡೆಸು; ಪ್ರಾರಂಭಿಸು.

ಚಲ್ತಾಪುರ್ತಾ (ಗು)= ತಾತ್ಕಾಲಿಕ; ಕೆಲಸ. ನಡೆಸುವ ಮಟ್ಟಿಗೆ.

ಚಲ್ತಿ (ನಾ)= ಮುಂದುವರಿದ; ಜಾರಿಯಲ್ಲಿರುವ.

ಚಲ್ತಿನಡಿಲಿ ( )= ಚಲಾವಣೆಯಲ್ಲಿರಲಿ; ಮುಂದುವರಿಯಲಿ.

ಚಲ್ಲಂ ಪೋಲ್ಸ್ಯಾ (ನು)= ಯಳ್ಳಾಮಾಸಿಯ ದಿನ ಭೂಮಿ ತಾಯಿಗೆ ಬಂಕಿಯೂಟ ಎರಚುವಾಗ ಮುಂದಿನ ರೈತ "ಒಲಗ್ಯಾ ಓಲಗ್ಯಾ" ಎಂದು ಹೇಳಿದರೆ ಹಿಂದಿನ ರೈತ "ಚಲ್ಲಂಪೋಲ್ಸ್ಯಾ" ಎಂದು ಹೇಳಿ ನೀರು ಸಿಂಪಡಿಸುತ್ತಾನೆ.

ಚಲ್ವಿ (ನಾ)= ಚೆಲುವೆ; ಸುಂದರಿ; ಸುಂದರಾಂಗಿ.

ಚವಡಕ್ಕಿ (ನಾ)= ಚೌಡಕ್ಕಿ; ಚೌಡಿಕಿ; ಒಂದು ಪ್ರಕಾರದ ಚರ್ಮವಾದ್ಯ.

ಚವಾಳು (ನಾ)= ಸೌಳು.

ಚವಾಳು ನೆಲ (ನಾ)= ಸೌಳು ಭೂಮಿ

ಚವುರಿ (ನಾ)= ಚವ್ರಿ; ಚೌರಿ; ಬೀಸಣಿಕೆ.

ಚವುಲಿ (ನಾ)= ನಾಲ್ಕಾಣೆ; ಇಪ್ಪತ್ತೈದು ಪೈಸೆ.

ಚವ್ರಿ (ನಾ)= ಚೌರಿ; ಬೀಸಣಿಕೆ; ಚವುರಿ

ಚವ್ರಿಬೀಸು (ಕ್ರಿ)= ಬೀಸಣಿಕೆ ಹಾಕು; ಗಾಳಿ ಬೀಸು.

ಚವ್ಲಿ (ನಾ)= ಚೌಲಿ; ನಾಲ್ಕಾಣೆ; ಇಪ್ಪತ್ತೈದು ಪೈಸೆ.

ಚವ್ವಾ (ನಾ)= ನಾಲ್ಕಂಕಿಯ ಇಸ್ಪೀಟೆಲೆ.

ಚವ್ಳಿ (ನಾ)= ಚವಳೆ; ಒಂದು ಪ್ರಕಾರದ ತರಕಾರಿ ಕಾಯಿ. ಬೀದರಿನ ಶ್ರೀ ಗಣೇಶ ಅವಧೂತ ಮಹಾರಾಜರ ಪವಿತ್ರ ಕ್ಷೇತ್ರ.

ಚವ್ಳುಸು (ಕ್ರಿ)= ಮೆಲಿ; ತಿನ್ನು; ಚಗಳಿಸು.

ಚಷ್ಕಾ (ನಾ)= ರುಚಿ; ಸವಿ.

ಚಷ್ಮಾ (ನಾ)= ಚಾಳೀಸು; ಕನ್ನಡಕ.

ಚಷ್ಮಾಹಚ್ಚು (ಕ್ರಿ)= ಕನ್ನಡಕ ಬಳಸು.

ಚಹಾ (ನಾ)= ಚಹ; ಚಾ; ಟೀ ಸೊಪ್ಪಿನಿಂದ ಮಾಡಿದ ಬಿಸಿ ಪಾನೀಯ.

ಚಹಾಪಾನಿ (ನಾ)= ಚಹಪಾನ; ಅಲ್ಪೋಪಹಾರ; ನಶಾಬಾಜಿ.

ಚಹಾಸು (ಕ್ರಿ)= ಇಚ್ಛಿಸು; ಬಯಸು; ಪ್ರೀತಿಸು; ಮೆಚ್ಚು; ನಚ್ಚು.

ಚಳವಳ (ನಾ)= ಚಳುವಳಿ; ಆಂದೋಲನ; ನ್ಯಾಯಯುತ ಹಕ್ಕಿಗಾಗಿ ಹೋರಾಟ.

ಚಳವಳಿ (ನಾ)= ಚಳವಳ; ಆಂದೋಲನ; ನ್ಯಾಯಯುತ ಹಕ್ಕಿಗಾಗಿ ಹೋರಾಟ.

ಚಳ್ಳಂ (ನಾ)= ತಾಲ; ತಾಳ; ಕಂಚಿನ ಜೋಡು ವಾದ್ಯ.

ಚಳ್ಳಣ್ಣು ತಿನ್ಸು (ನು)= ಮೋಸ ಮಾಡು ಠಕ್ಕಿಸು; ವಂಚಿಸು.

ಚಳ್ಳಂ ಭಾರ್ಸು (ಕ್ರಿ)= ತಾಳ ಕುಟ್ಟು, ಬಾರಿಸು.

ಚಳ್ಳಿ (ನಾ)= ಚಿಟ್ಟಿ; ಬಲಿಯಲಾರದ ಎಳಗಾಯಿ.

ಚಾ (ನಾ)= ಚಹ; ಹಾಲು, ಸಕ್ಕರೆ, ಚಹ ಸೊಪ್ಪು ಸೇರಿಸಿ ಕುದಿಸಿ ಮಾಡಿದ ಬಿಸಿ ಪಾನೀಯ (ಹಾಡು:ನೀಕೇಳೊ ತಮ್ಮಾ।ಚಾ ಕುಡ್ದವ ಯಾವಾಗೆನ ಧಮ್ಮಾ।।) ಚಾಂ ಚಾಂ= ಕೂಸಿನ ಅಳುವಿನ ಧ್ವನಿ.

ಚಾಂಚಾಂ (ಧ್ವಿ)= ಕೂಸಿನ ಅಳುವಿನ ಧ್ವನಿ.

ಚಾಂಗಲೇರಿ (ನಾ)= ಹುಮನಾಬಾದ ತಾಲೂಕಿನ ಒಂದು ಊರಿನ ಹೆಸರು; ವೀರಭದ್ರೇಶ್ವರನ (ವೀರಯ್ಯನ) ತೀರ್ಥಕ್ಷೇತ್ರ. (ಹಂತಿ ಹಾಡು: ಚಾಂಗಲೇರಿಯ ಸುತ್ತ ಚಂಡ ಮಾಯಿನ ಗಿಡ। ಗುಂಡದ ಸುತ್ತಾ ಗಿಳಿಹಿಂಡು। ವೀರಯ್ನ। ಪಲ್ಲಕ್ಕಿ ಸುತ್ತಾ ಪರಿಮಳ।।)

ಚಾಂಡಾಲ (ನಾ)= ಚಂಡಾಲ; ವಧಿಕ.

ಚಾಂಡಾಲ ಚೌಕ್ಡಿ (ನಾ)= ದುಷ್ಟ ಚತುಷ್ಟಯ; ದುರ್ಯೋಧನ, ದುಶ್ಯಾಸನ, ಶಕುನಿ ಮತ್ತು ಕರ್ಣ ಎಂಬ ನಾಲ್ವರು ದುಷ್ಟರ ತಂಡ.

ಚಾಂದ (ನಾ)= ಚಂದ್ರ; ಶಶಿ.

ಚಾಂದ ಕಾಣ್ಸು (ಕ್ರಿ)= ಚಂದ್ರ ದರ್ಶನವಾಗು; ಅಮಾವಾಸ್ಯ ನಂತರ ಪ್ರಥಮ ಸಲ ಚಂದ್ರಕಾಣಿಸು.

ಚಾಂದ ನೋಡು (ಕ್ರಿ)= (ಚಂದ್ರನ ನೋಡುತ್ತ) ತಿಂಗಳ ದಿನಗಳನ್ನು ಎಣಿಸು (ಗಾದೆ: ಚಾಂದ ನೋಡಿ ಪಗಾರ ಘಚ್ಚಿ ಮಾಡಾಂವ).

ಚಾಂಡೇಶ್ವರ (ನಾ)= ಚಾಂದಲೇಶ್ವರ ಎಂಬ ಪೌರಾಣಿಕ ಶಿವ ದೇವಾಲಯವಿರುವ ಊರು.

ಚಾಂದಬೀಬೀ (ನಾ)= ವೀರ ಮಹಿಳೆಯಾದ ಒಬ್ಬ ಮುಸಲ್ಮಾನ ಮಹಾರಾಣಿ; ಕೋಟೆ ಸಂರಕ್ಷಣೆಗಾಗಿ ಹೋರಾಡಿದ ಮಹಾರಾಣಿ.

ಚಾಂದೋರಿ (ನಾ)= ಚಂದರ್ಗಿ ಎಂಬ ಊರು.

ಚಾಂಬಾರ (ನಾ)= ಚಮ್ಮಾರ; ಸಮಗಾರ

ಚಾಂಬಾಳ (ನಾ)= ವೀರಶೈವ ಮಠವುಳ್ಳ ಒಂದು ಹಳ್ಳಿ

ಚಾಕ್ (ನಾ)= ಗಾಲಿ; ಚಕ್ರ; ಬಂಡಿಯಗಾಲಿ; ಸೀಮೆಸುಣ್ಣ

ಚಾಕರಿ (ನಾ)= ನೌಕರಿ; ವೇತನ ಪಡೆದು ದುಡಿಯುವಿಕೆ.

ಚಾಕಿ (ನಾ)= ಬೆರಕೆ; ಕಲಬೆರಕೆ.

ಚಾಕಿ ಮಾಡು (ಕ್ರಿ)= ಕಲಬೆರಕೆ ಮಾಡು.

ಚಾಕು (ನಾ)= ಕೊಯ್ಯುವ ಸಾಧನ; ಚೂರಿ.

ಚಾಕ್ಪೀಸು (ನಾ)= ಸೀಮೆಸುಣ್ಣ; ಖಡು.

ಚಾಕ್ಲೇಟು (ನಾ)= ಸಿಹಿ ತಿಂಡಿ (ಮಕ್ಕಳಿಗಾಗಿ)

ಚಾಗಾಮಟ್ಟಿ (ನಾ)= ಕಾಡು ಕೇದಗೆ; ಖ್ಯಾದಗಿ.

ಚಾಗಿ (ನಾ)= ಚೇಗ; ಮರದ ಮಧ್ಯದಲ್ಲಿ ಇರುವ ತಿರುಳು.

ಚಾಗಿ ಖಟ್ಗಿ (ನಾ)= ಗಟ್ಟಿ ತಿರುಳುಳ್ಳ ಮರದ ತುಂಡು.

ಚಾಗಿಸು (ಕ್ರಿ)= ಸಾಗಿಸು; ಮುಂದುವರಿಸು.

ಚಾಗು (ಕ್ರಿ)= ಸಾಗು; ಮುಂದುವರಿ.

ಚಾಗ್ಸು (ಕ್ರಿ)= ಚಾಗಿಸು; ಸಾಗಿಸು.

ಚಾಚಣಿ (ನಾ)= ಕಬ್ಬಿನ ಹಾಲಿನ ಕಾಸುವಿಕೆಯ ಹದನ; ಬೆಲ್ಲವಾಗುವ ಹಂತ.

ಚಾಚಾ (ನಾ)= ತಂದೆಯ ಸೋದರ; ಚಿಕ್ಕಪ್ಪ; ಕಕ್ಕ; ಕಾಕಾ; ಚಿಕ್ಕಮ್ಮನ ಗಂಡ.

ಚಾಚಿ (ನಾ)= ಕಾಕಿ; ತಾಯಿಯ ತಂಗಿ; ತಂದೆಯ ತಮ್ಮನ ಹೆಂಡತಿ.

ಚಾಚು (ಕ್ರಿ)= ತಳ್ಳು; ನೂಕು; ಮುಂದಕ್ಕೆ ವಿಸ್ತರಿಸು; ಒಲೆಯ ಕಟ್ಟಿಗೆಯನ್ನು ಒಳಕ್ಕೆ ತಳ್ಳು.

ಚಾಚುಣ್ಕಿ (ನಾ)= ಮುಂದೆ ತಳ್ಳುವಿಕೆ.

ಚಾಚೂ (ಅ)= ಎಷ್ಟೂ; ಎಳ್ಳಷ್ಟೂ; ಏನೂ.

ಚಾಜಾ (ನಾ)= ಚಾಜ; ಸೀದಾ; ಅಕ್ಕಿ, ಹಿಟ್ಟು; ಬೇಳೆ, ಬೆಲ್ಲ, ಎಣ್ಣೆ ಇತ್ಯಾದಿ ಸ್ವಯಪಾಕದ ವಸ್ತುಗಳನ್ನು ಗೌರವ ಪೂರ್ವಕವಾಗಿ ಕೊಡುವಿಕೆ.

ಚಾಟ್ ಭಂಡಾರ (ನಾ)= ಗಪ್‌ಚಿಪ್ ಬಂಡಿ, ಅಂಗಡಿ.

ಚಾಟಾ (ನಾ)= ಹರಟೆ

ಚಾಟಾ ಹೊಡಿ (ಕ್ರಿ)= ಹರಟೆ ಹೊಡೆ; ಹೊತ್ತು ಕಳೆ.

ಚಾಟಿ (ನಾ)= ಅಡ್ಡಗಾಲು ಹಾಕುವಿಕೆ; ಕೆಡಹುವಿಕೆ.

ಚಾಟಿ ಹೊಡಿ (ಕ್ರಿ)= ಅಡ್ಡಗಾಲು ಹಾಕಿ ಕೆಡಹು; ಕೆಡಹು.

ಚಾಣಕ್ರಾಯ್ನ ಕತಿ (ನಾ)= ಹರಟೆ; ಕಾಲಹರಣ; ಚಾಣಕ್ಯ ತಂತ್ರ.

ಚಾಣಕ್ರಾಯ್ನ ಕತಿ ಹೇಳು (ಕ್ರಿ)= ಹರಟೆ ಹೊಡೆ; ಕಾಲಹರಣ ಮಾಡು.

ಚಾತುರಿ (ನಾ)= ಚಾತುರ್ಯ.

ಚಾತುರ್ಮಾಸ (ನಾ)= ನಾಲ್ಕು ತಿಂಗಳಲ್ಲಿ ಮುಗಿವ ಒಂದು ವ್ರತ; ಆಷಾಢ ಕೃಷ್ಣಪಕ್ಷದಿಂದ ಪ್ರಾರಂಭವಾಗಿ ಮಾರ್ಗಶಿರ ಪೌರ್ಣಿಮೆಗೆ ಮುಗಿಯುವ ವ್ರತ.

ಚಾದರ (ನಾ)= ಹತ್ತಿಯ ಅಥವಾ ರೇಷ್ಮೆಯ ದಪ್ಪ ಹೊದಿಕೆ; ಶಾಲು; ಹಚ್ಚಡ; ದುಪಾಟಿ; ದುಪ್ಪಟಿ.

ಚಾಪತ್ತಿ (ನಾ)= ಚಹಪುಡಿ.

ಚಾಪಾಣಿ ಖರ್ಚು (ನಾ)= ಚಹಪಾನ ಖರ್ಚು; ಜೇಬುಖರ್ಚು; ಚಿಲ್ಲರೆ ವೆಚ್ಚ.

ಚಾಪಾರ್ಟಿ (ನಾ)= ಚಹ ತಿಂಡಿ ಆಮಂತ್ರಣ.

ಚಾಪಿ (ನಾ)= ಚಾಪೆ; ಸಿಂದಿ ಎಲೆ, ತಾಡಿನ ಎಲೆ ಅಥವಾ ಮದಿ ಹುಲ್ಲಿನಿಂದ ತಯಾರಿಸಿದ ಹಾಸಿಗೆ.

ಚಾಪ್ಲೂಸಿ (ನಾ)= ಬೆಣ್ಣೆ ಹಚ್ಚುವಿಕೆ; ನಂಬಿಸುವಿಕೆ.

ಚಾಪು (ನಾ)= ಚಪ್ಪಳ; ಚುರುಕು

ಚಾರ (ವಿ)= ನಾಲ್ಕು (ಹಾಡು: ಎಚ್ಚರಾಗೋತಮ್ಮ ಎಚ್ಚರಾಗೋ। ಚಾರ ಬಡ್ಡು ಹೋಯ್ತಿನ್ನು ಎಚ್ಚರಾಗೊ)

ಚಾರಪಾಯಿ (ನಾ)ಹಿಂ.= ಹೊರಸು; ಮಂಚ

ಚಾರಮಿನಾರ (ನಾ)= ನಾಲ್ಕು ಶಿಖರಗಳುಳ್ಳ ಹೈದರಾಬಾದ ನಗರದಲ್ಲಿಯ ಒಂದು ಕಟ್ಟಡ.

ಚಾಯ (ನಾ)ಹಿಂ.= ಚಹ; ಟೀಸೊಪ್ಪಿನಿಂದ ತಯಾರಿಸಿದ ಬಿಸಿ ಪೇಯ.

ಚಾರಾ (ನಾ)= ಹುಲ್ಲು; ಹುಳಿಸಾರು; ಉಪಾಯ; ಗತ್ಯಂತರ; ನಿರ್ವಾಹ ಮಾರ್ಗ (ಉದಾ: ಅದಕ ಬಿಟ್ರ ಬ್ಯಾರೆ ಚಾರಾನೇ ಇದ್ದಿಲ್ಲ).

ಚಾರಾಣೆ (ನಾ)= ನಾಲ್ಕಾಣೆ; ಇಪ್ಪತ್ತೈದು ಪೈಸೆ; ೧/೪ಭಾಗ; ರೂಪಾಯಿಯ ೧/೪ ಭಾಗ.

ಚಾರಾಣೆ ಭಾಗ (ನಾ)= ೧/೪ಭಾಗ (ಉದಾ: ಚಾರಾಣೆ ಭಾಗ ಬೆಳಿ ದನಾ ತಿಂದೇ ಹಾಳಾಗೆದ ನೋಡ್ರಿ).

ಚಾರಿ (ನಾ)= ಒಂದು ಅಂಗೈಯಲ್ಲಿ ಹಿಡಿಸುವಷ್ಟು ಧಾನ್ಯ, ಹಿಟ್ಟು, ಸಕ್ಕರೆ, ಮಣ್ಣು ಇತ್ಯಾದಿ (ಚಾರಿ, ಕುಡ್ತಿ ಮುಟ್ಟಿ ಫಕ್ಕಿ) ಇವು ಹಿಂದೆ ಧಾನ್ಯ ಅಳತೆಯ ಸಾಧನವಾಗಿದ್ದವು. ಶಾಲೆಯ ಮಕ್ಕಳು ನೀರು ಕುಡಿಯಲು ಹೋಗಲು ಮಾಸ್ತರರಿಂದ ಪರವಾನಿಗೆ ಕೇಳುವಿಕೆ, ನಾಲ್ಕು.

ಚಾರಿ ಮುಕ್ಕು (ನಾ)= ಅಲ್ಪಸ್ವಲ್ಪ; ತುಸು.

ಚಾರ್ಜು (ನಾ)ಇಂ.= ಪ್ರಯಾಣ ದರ.

ಚಾಲ್ (ನಾ)ಹಿಂ.= ನಡಿಗೆ; ಕುದುರೆ ನಡಿಗೆ; ನಡತೆ; ಸ್ವಭಾವ.

ಚಾಲಚಲನ (ನಾ)= ನಡಾವಳಿ; ಆಚಾರ ವಿಚಾರ; ರೂಢಿ.

ಚಾಲಬಾಜಿ (ನಾ)= ಚಲಾಕತಿ; ಚಾಲಾಕಿ; ಜಾಣತನ; ಶಾಣೆತನ

ಚಾಲಾಕಬಾವು (ನಾ)= ಮೈಕೈ ಸೆಳೆಯುವಿಕೆ.

ಚಾಲಾಕವಾಯಿ (ನಾ)= ಮೈ ಕೈ ಸೆಳೆಯುವಿಕೆ.

ಚಾಲಾಕಿ (ನಾ)= ಚುರುಕುತನ; ಚಾಕ ಚಾಕ್ಯತೆ; ಚಾತುರ್ಯ; ಜಾಣತನ; ಶಾಣೆತನ.

ಚಾಲಿ (ನಾ)= ಹಸಿ ಅಡಕೆ; ಛಾಲಿಯಾ; ಇನಾಮಿ ಜಮೀನು.

ಚಾಲು (ನಾ)= ನಡೆಯುವ ಸ್ಥಿತಿಯಲ್ಲಿರುವಂತದ್ದು; ಚಾಲಾಕ; ಚತುರ; ಜಾಣ.

ಚಾಲುಗಿರಿ (ನಾ)= ಚಾಲಾಕಿ; ಜಾಣತನ; ಮೋಸ.

ಚಾಲು ಮಾಡು (ಕ್ರಿ)= (ಯಂತ್ರ) ನಡೆಸು; ಓಡಿಸು; ಪ್ರಾರಂಭಿಸು; ಸುರು ಮಾಡು.

ಚಾಲು ಹಾಲತ್ತು (ನಾ)= ಬಳಸಲು ಯೋಗ್ಯ ಸ್ಥಿತಿ; ನಡೆಸುವಯೋಗ್ಯ ಸ್ಥಿತಿ.

ಚಾಲೊಡಿ (ಕ್ರಿ)= ಪ್ರಯತ್ನಿಸು; ವಿನಂತಿಸು; ನಂಬಿಸು; ರಮಿಸು.

ಚಾಲ್ತಿ (ನಾ)= ಜನಬಳಕೆಯ; ರೂಡಿಯ; ಪ್ರಚಲಿತ.

ಚಾವಟ (ನಾ)= ಚಾವೂ; ನೀಚ; ತುಂಟ.

ಚಾವಡಿ (ನಾ)= ಗ್ರಾಮ ಕಚೇರಿ; ಕೋತವಾಲನ ಕಚೇರಿ; ಪೋಲಿಸ್ ಚೌಕಿ.

ಚಾವಡಿ ಕಟ್ಟಿ (ನಾ)= ಗ್ರಾಮಾಧಿಕಾರಿಗಳು ಕುಳಿತು ಕೊಳ್ಳುವ ಗದ್ದುಗೆ.

ಚಾವಿ (ನಾ)= ಬೀಗದ ಕೈ; ಕೀಲಿಕೈ; ಕುಂಜಿ.

ಚಾವಿಕುಡು (ಕ್ರಿ)= ಗಡಿಯಾರದಲ್ಲಿ ನಡೆಯುವ ಶಕ್ತಿಯನ್ನು ಕೀಲಿ ತಿರುವಿ ತುಂಬು.

ಚಾವೂ (ನಾ)= ಚಾವಟ (ನೋಡಿರಿ)

ಚಾವೂಸ (ನಾ)= ಮುಸಲ್ಮಾನರಲ್ಲಿ ಒಂದು ಪಂಗಡ.

ಚಾಷ್ಟಿ (ನಾ)= ಚೇಷ್ಟೆ; ಹುಡುಗಾಟ; ತಮಾಷೆ; ತುಂಟತನ; ಕೀಟಲೆ.

ಚಾಳ (ನಾ)= ಒಂದೇ ಬಗೆಯ ಮನೆಗಳ ಸಾಲು.

ಚಾಳಣಿ (ನಾ)= ಛನ್ನಿ; ಜಲ್ಲಡಿ; ರೇತಿ ಸೋಸುವ ತಂತಿಯ ಸಾಧನ.

ಚಾಳಿ (ನಾ)= ವರ್ತನೆ; ವ್ಯಸನ; ಚಟ; ಅಭ್ಯಾಸ; ನಡತೆ.

ಚಾಳೀಸು (ನಾ)= ನಲವತ್ತು; ಕನ್ನಡಕ; ಚಷ್ಮಾ.

ಚಾಳ್ಕಾಪೂರ (ನಾ)= ಭಾಲ್ಕಿ ತಾಲೂಕಿನ ಒಂದು ಊರು; ಚಳ್ಕಾಪೂರು ಎಂತಲೂ ರೂಢಿಯಲ್ಲಿರುವ ಊರು. ಇಲ್ಲಿ ಪ್ರಸಿದ್ಧ ಬಲಭೀಮನ (ಹನುಮದೇವರ) ದೇವಾಲಯವಿದೆ. ೧೯೪೮ರ ಅವಧಿಯಲ್ಲಿಯ ರಜಾಕಾರ ಉಪಟಳ ಕಾಲದಲ್ಲಿ ಕೋಡಂಗಿಗಳು ಬಲಭೀಮ ದೇವಾಲಯವನ್ನು ರಕ್ಷಿಸಿದವು. ಹುಡುಗಿ ಗ್ರಾಮದ ದಿಗಂಬರ ಕರಿಬಸವೇಶ್ವರ ಮತ್ತು ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳ ಜನ್ಮಸ್ಥಳ.

ಚಿಂಚ (ನಾ)= ಹುಣಸೆ ಮರ ಮತ್ತು ಅದರ ಹಣ್ಣು.

ಚಿಂಚಿತ್ತು (ನಾ)= ಹುಣಸೆ ಹಣ್ಣಿನ ಬಣ್ಣದ ಎತ್ತು (ತ್ರಿಪದಿ : ಚಿಂಚಿತ್ತು ಎರಡಾಗಿ। ಛೀಮಾರಿ ಸೊಸೆಯಾಗಿ। ಮಿಂಚಾಗಿ ತಿರುಗುವ ಮಗನಾಗೆ! ಆ ಮನೆಗೆ। ಲಂಚ ತಪ್ಪುವುದೆ ಸರ್ವಜ್ಞ।।).

ಚಿಂಚೋಳಿ (ನಾ)= ಬೀದರ ಜಿಲ್ಲೆಯಲ್ಲಿ ಚಿಂಚೋಳಿ ಹೆಸರಿನ ನಾಲ್ಕು ಹಳ್ಳಿಗಳಿವೆ. ೧) ಖಡ್ಗ ಚಿಂಚೋಳಿ ೨) ಬೇನ್ಚಿಂಚೋಳಿ ೩) ಕಂಬಾರ ಚಿಂಚೋಳಿ ೪) ಕುಮಾರ ಚಿಂಚೋಳಿ. ಖಡ್ಗಚಿಂಚೋಳಿಯು ಪ್ರಸಿದ್ಧ ತತ್ವ ಪದಕಾರರಾದ ಮಲ್ಲಪ್ಪ ಚಾಮರೆಡ್ಡಿ ಮತ್ತು ಅಪ್ಪಾರಾವ ಕುಲ್ಕರ್ಣಿಯವರ ಹುಟ್ಟೂರಾಗಿದೆ. ಇದು ದಿಗಂಬರ ಕರಿಬಸವೇಶ್ವರರ ಶಿಷ್ಯರಾದ ಮಡಿವಾಳಪ್ಪ ಕಡಗಂಚಿಯವರ ಹುಟ್ಟೂರು ಕೂಡ ಆಗಿದೆ. ಬೇನ್ಚಿಂಚೋಳಿಯು ಪ್ರಸಿದ್ಧ ಬಯಲಾಟಕಾರರಾದ ಗಿರೆಪ್ಪ ಎಂಬವರ ಹುಟ್ಟೂರಾಗಿದೆ. ಅಲ್ಲದೆ ಉರಿಲಿಂಗ ಪೆದ್ದಿ ಪರಂಪರೆಯ ಕೇಂದ್ರವಾಗಿದೆ.

ಚಿಂತಾಕಿ (ನಾ)= ಬೀದರ ತಾಲೂಕಿನ ಒಂದುಹಳ್ಳಿ.

ಚಿಂತಿ (ನಾ)= ಚಿಂತೆ; ಕಳವಳ; ದುಮ್ಮಾನ (ತತ್ವಪದ: ಚಿಂತಿ ಎಂಬುದು ಭಾಳ ಘನವಾಗಲೀ। ಸಂತೋಸೆಂಬುದು ನಮ್ಗ ಇಲ್ಲದಾಗಲಿ।।).

ಚಿಂತಿಬಿಡು (ಕ್ರಿ)= ನಿಶ್ಚಿಂತನಾಗು.

ಚಿಂತಿಸು (ಕ್ರಿ)= ಯೋಚಿಸು; ಆಲೋಚಿಸು; ಚಿಂತೆ ಮಾಡು.

ಚಿಂದಿ (ನಾ)= ಹರಕು ಬಟ್ಟೆ; ತುಂಡು ಅರಿವೆ; ಬಟ್ಟೆ ಚೂರು.

ಚಿಂದಿ ಉಡಾಸು (ನು)= ಹೊಡೆದು ಹಣ್ಣು ಮಾಡು; ಚಿಂದಿ ಹಾರಿಸು; ಛೀಫಜೀತಿ ಮಾಡು; ಲೂಟಿ ಮಾಡು; ಕೊಳ್ಳೆ ಹೊಡೆ.

ಚಿಂದಿ ಉಡು (ಕ್ರಿ)= ಹರಕು ಬಟ್ಟೆ ಧರಿಸು.

ಚಿಂದಿಚಿಂದಿ ಮಾಡು (ಕ್ರಿ)= ಹರಿದು ಚೂರು ಚೂರು ಮಾಡು.

ಚಿಂದಿ ಬಟ್ಟಿ (ನಾ)= ಹರುಕು ಬಟ್ಟೆ; ತುಂಡು ಬಟ್ಟೆ.

ಚಿಂದಿ ಹಾರ್ಸು (ನು)= ಚಿಂದಿ ಉಡಾಸು (ನೋಡಿರಿ).

ಚಿಂದೋಟಿ (ನಾ)= ಹರುಕು ಉಡುಪು; ಲಂಗೋಟಿ.

ಚಿಂಪು (ನಾ)= ಕಲ್ಲಿನ ಚಪ್ಪಟೆಯಾದ ತುಂಡು; ಯೋನಿ; ಸ್ತ್ರೀ ಜನನೇಂದ್ರಿಯ (ಗಾದೆ: ತೊಡ್ಯಾಗ ಚಿಂಪು ಫಚ್ಚಿ ಇದ್ರ, ಉಡ್ಯಾಗ ಜ್ವಾಳಾ ಫಚ್ಚಿ).

ಚಿಂವುಚಿಂವು ಅನು (ಕ್ರಿ)= ಚಿಂವು ಗುಟ್ಟು ಚಿಂವ್ ಚಿಂವ್ ಎನ್ನು.

ಚಿಂವುಟು (ಕ್ರಿ)= ಚೂಂಟು; ಚಿವುಟು; ಉಗುರುಗಳಿಂದ ಚರ್ಮವನ್ನು ಹಿಂಡು.

ಚಿಕಟಪಟ್ಟಿ (ನಾ)= ಅಂಟಿಕೊಳ್ಳುವ ಗುಣವುಳ್ಳ ಉದ್ದಾದ ಪಟ್ಟಿ.

ಚಿಕ್ಣಾ(ನಾ)= ಸ್ನಿಗ್ಧ ಪದಾರ್ಥ; ಬೆಣ್ಣೆ, ತುಪ್ಪ, ಎಣ್ಣೆ ಮೊದಲಾದ ಸ್ನಿಗ್ಧ ಪದಾರ್ಥ

ಚಿಕ್ಣಿ(ನಾ)= ಅಡಕೆಯಲ್ಲಿ ಒಂದು ಪ್ರಕಾರ; ನುಣ್ಣಾದ.

ಚಿಕ್ಣಿಗಡ್ಗಿ (ನಾ)= ಒಂದು ಪ್ರಕಾರದ ಮಣ್ಣಿನ ಗಡಿಗೆ; ಖಣಿಗಡಿಗೆ; ಮಡಕೆ.

ಚಿಕ್ಣಿ ಹಂಡಿ (ನಾ)= ನುಣ್ಣಗಿನ ನೆತ್ತಿ (ಪ್ರಾಸ: ಚಿಕ್ಣಿಹಂಡಿ ಚಾಯ್ ಗರಮ್। ಕುಡ್ಯಾಂವ ಪಕ್ಕಾ ಬೇಶರಮ್।)

ಚಿಕನ್ (ನಾ)ಇಂ. = ಕೊಳಿ; ಕೋಳಿಮರಿ.

ಚಿಕನ್ ಬಿರ್ಯಾನಿ (ನಾ)= ಕೋಳಿ ಮಾಂಸ ಸೇರಿಸಿದ ನೆಲ್ಲಕ್ಕಿ ಅನ್ನ.

ಚಿಕ್ಕ (ವಿ)= ಎಳೆಯ; ಬಾಲ್ಯಾವಸ್ಥೆಯ; ಸಣ್ಣ; ಕಿರಿಯದಾದ.

ಚಿಕ್ಕಡ (ನಾ)= ಸೊಳ್ಳೆ; ದ್ವಾಮಿ; ಕೆಸರು.

ಚಿಕ್ಕಪ್ಪ (ನಾ)= ಚಿಗಪ್ಪ; ಕಕ್ಕ (ಗಾದೆ: ಅಪ್ಪಗಪ್ಪ ಅನಲ್ದಾಂವ ಚಿಕ್ಕಪ್ಗ ಅಪ್ಪ ಅಂದಾನಾ ?)

ಚಿಕ್ಕಮ್ಮ (ನಾ)= ಸಣ್ಣವ್ವ; ತಾಯಿಯ ತಂಗಿ; ಚಿಕ್ಕಪ್ಪನ ಹೆಂಡತಿ.

ಚಿಕ್ಕಾಕಿ (ನಾ)= ಸಣ್ಣಾಕೆ; ಕನ್ಯೆ; ವರಾರ್ಥಿ; ವರನೆದುರು ಪರೀಕ್ಷೆಗೆ ಗುರಿಯಾದ ಕನ್ನಿಕೆ, ವಧೂ.

ಚಿಕ್ಕಿ (ನಾ)= ಸಣ್ಣವಳು; ಚುಕ್ಕೆ.

ಚಿಕ್ಕು (ನಾ)= ಸಿಕ್ಕು; ಕೂದಲ ಗುಂಜು; ದಾರದ ಗುಂಜು; ಹಗ್ಗದ ಗುಂಜು; ಸಪೋಟಾ ಕಾಯಿ.

ಚಿಕ್ಕುಡು (ನಾ)= ಚಿಕ್ಕಡ; ಸೊಳ್ಳೆ; ದ್ವಾಮಿ

ಚಿಕ್ಕುಡ್ಬತ್ತಿ (ನಾ)= ಸೊಳ್ಳೆ ನಾಶಕ ಸುರುಳಿ.

ಚಿಕ್ನಾ (ವಿ)= ಚಿಕಣಾ; ಕೊಬ್ಬಿನಿಂದ ಕೂಡಿದ್ದು.

ಚಿಕ್ನಾಗಾಯಿ (ನಾ)= ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿ. ಅದು ಈಗ ಚಿಕ್ನಾಗಾಂವ ಆಗಿದೆ.

ಚಿಗಪ್ಪ (ನಾ)= ಚಿಕ್ಕಪ್ಪ (ನೋಡಿರಿ).

ಚಿಗಳಿ (ನಾ)= ಎಳ್ಳು ಬೆಲ್ಲ ಸೇರಿಸಿ ಇಲ್ಲವೆ ಸೇಂಗದ ಬೀಜ, ಬೆಲ್ಲವ ಸೇರಿಸಿ ತಯಾರಿಸಿದ ಸಿಹಿ ತಿಂಡಿ.

ಚಿಗುರು (ಕ್ರಿ)= ಮೊಳಕೆಯೊಡೆ; ಚಿಗಿ; ಚಿಗುರು; ಅಂಕುರಿಸು. (ನಾ) ಚಿಗಿತದ್ದು.

ಚಿಗುರೊಡಿ (ಕ್ರಿ)= ಚಿಗುರಲು ಪ್ರಾರಂಭಿಸು; ಚಿಗಿ; ಮುಗುಳು ಚಾಚು; ಮುಗುಳು ಹಾಕು.

ಚಿಗುರ್ಮೀಸೆ (ನಾ)= ಅದೇ ತಾನೆ ಮೂಡುತ್ತಿರವ ಎಳೆ ಮೀಸೆ.

ಚಿಗುಳಿಸು (ಕ್ರಿ)= ಹಿಂದೆ ಆದುದನ್ನು ಅಥವಾ ಆಗಿ ಹೋದುದನ್ನು ಮತ್ತೆ ನೆನಪಿಸು; ಮತ್ತೆ ವರ್ಧಿಸು.

ಚಿಗುಳ್ಸು (ಕ್ರಿ)= ಹಿಂದೆ ಆದುದನ್ನು ಮತ್ತೆ ನೆನಪಿಸು.

ಚಿಗ್ಳಿ (ನಾ)= ಚಿಗಳಿ (ನೋಡಿರಿ)

ಚಿಟಗುಪ್ಪಾ (ನಾ)= ಚಿಡಗುಂಪಿ ಎಂಬ ಹುಮನಾಬಾದ ತಾಲೂಕಿನ ಪ್ರಸಿದ್ಧ ಐತಿಹಾಸಿಕ ಊರು; ಸ್ವಾತಂತ್ರ್ಯ ಪೂರ್ವದಲ್ಲಿ ನಿಜಾಮನ ಪಾಯ್ಗಾ ಜಿಲ್ಲೆಯ ಕೇಂದ್ರ ಸ್ಥಳ; ಸ್ವಾತಂತ್ರ್ಯ ಹೋರಾಟಗಾರರ ಕೋಟೆ ಎನಿಸಿದ ಊರು; ಮಡಿವಾಳಪ್ಪ ಎಂಬ ಪ್ರಸಿದ್ಧ ಶಿವಭಕ್ತನ ಕಾರ್ಯಕ್ಷೇತ್ರ; ಗೌಳಿಗರ ಸಂತ ಬಾಳೋಬಾನ ಪವಿತ್ರ ಕ್ಷೇತ್ರ.

ಚಿಟಮಿಟಕಾಯಿ (ನಾ)= ಕಾಡಿನಲ್ಲಿ ಬೆಳೆಯುವ ಒಂದು ಪ್ರಕಾರದ ಫಲ.

ಚಿಟಿ (ನಾ)= ಸಿಟಿ; ಶಹರ; ಪಟ್ಟಣ.

ಚಿಟ್ಕಾಸು (ಕ್ರಿ)= ಮೆತ್ತು; ಅಂಟಿಸು.

ಚಿಟ್ಕಿ (ನಾ)= ಚುಟಕಿ; ಮೂಗಿಗೇರಿಸುವಷ್ಟು (ನಸ್ಯ); ಹೆಬ್ಬೆರಳು ಮತ್ತು ಮಧ್ಯಬೆರಳಿನಿಂದ ಮಾಡುವ ಸದ್ದು.

ಚಿಟ್ಕಿ ಭಾರ್ಸು (ಕ್ರಿ)= ಚುಟಕಿ ಬಾರಿಸು; ಹೆಬ್ಬೆರಳು ಮತ್ತು ಮಧ್ಯ ಬೆರಳಿನಿಂದ ಚುಟ್ ಚುಟ್ ಎಂದು ಸದ್ದು ಮಾಡು.

ಚಿಟ್ಟ (ವಿ)= ಚಿಕ್ಕ; ಸಣ್ಣ; ಕುಳ್ಳ; ಗಿಡ್ಡ.

ಚಿಟ್ಟ ಕುದುರಿ (ನಾ)= ಸಣ್ಣ ಕುದುರೆ; ಕಡಿಮೆ ಎತ್ತರದ ಕುದುರೆ; ಅಪಾನ ವಾಯು (ಒಗಟು: ಚಿಟ್ಟಕುದುರಿ ಬಿಟ್ರ ಸಿಗಾಲ್ಲ-ಹೂಸು)

ಚಿಟ್ಟನೆ (ಅ)= ಚಿರ್‍ರನೆ (ಕಿರುಚು).

ಚಿಟ್ಟಾ (ನಾ)= ಚಿಟ್ಟ್ಯಾ ಎಂಬ ಬೀದರ ತಾಲುಕಿನ ಒಂದು ಹಳ್ಳಿ.

ಚಿಟ್ಟಾವಾಡಿ (ನಾ)= ರಘುನಾಥ ಹಡಪದ ಎಂಬ ತತ್ವ ಪದಕಾರರ ವಾಸದ ಊರು.

ಚಿಟ್ಟಿ (ನಾ)= ದನಗಳ ಖರೀದಿ ಪತ್ರ (ಗಾದೆ-ಬಾಳೂಮ್ಯಾಲ ಹವಾಲ್ತಿ, ದೇಗ್ಲೂರ ಮ್ಯಾಲ ಚಿಟ್ಟಿ) ಓಲೆ; ಪತ್ರ ; ಮಂತ್ರ ಬರೆದ ಚೀಟಿ; ಒಂದು ಪ್ರಕಾರದ ಕೀಟ; ಚಿಕ್ಕವಳು; ಸಣ್ಣವಳು.

ಚಿಟ್ಟಿ ಚಪಾಟಿ (ನಾ)= ಕಾಗದ ಪತ್ರ; ದನಗಳ ಖರೀದಿ ವಿಕ್ರಿ ಪತ್ರ; ಕರಾರು ಪತ್ರ.

ಚಿಟ್ಟಿ ಬರಿ (ಕ್ರಿ)= ಓಲೆ ಬರೆ; ರಸೀತಿ ಬರೆ.

ಚಿಟ್ಟಿ ಮಾಡ್ಸು (ಕ್ರಿ)= ದನಗಳ ಖರೀದಿ ವಿಕ್ರಿ ಪತ್ರ ಬರೆಯಿಸು.

ಚಿಟ್ಟಿ ಸಿಕ್ಕಿಲ್ಲ (ನು)= ಸಾವು ಬಂದಿಲ್ಲ.

ಚಿಟ್ಟಿ ಹರಿಯಿತು (ನು)= ಸಾವು ಬಂತು.

ಚಿಟ್ಟು ಹಿಡಿ (ಕ್ರಿ)= ಬೇಸರವಾಗು; ಜಿಗುಪ್ಸೆ ಹೊಂದು.

ಚಿಟ್ಟು ಹಿಡಿಸು (ಕ್ರಿ)= ಬೇಸರ ಪಡಿಸು; ಜಿಗುಪ್ಸೆ ಉಂಟು ಮಾಡು.

ಚಿಟ್ಲಿ (ನಾ)= ಬಾರ್ಕೋಲಿನ ತುದಿಯ ದಾರ ಅಥವಾ ತೊಗಲಿನ ಪಟ್ಟಿ.

ಚಿಟ್ಲಿ ಭಾರ್ಸು (ಕ್ರಿ)= ಬಾರ್ಕೋಲು ಬೀಸಿ ಸದ್ದು ಮಾಡು; ಚಳಿ ಅತಿಯಾಗು; ಬಿಸಿಲು ಅತಿಯಾಗು.

ಚಿಡಗುಂಪಿ (ನಾ)= ಚಿಟಗುಪ್ಪಾ (ನೋಡಿರಿ).

ಚಿಡಾಸು (ಕ್ರಿ)= ರೇಗಿಸು; ಕೋಪ ಬರುವಂತೆ ಮಾಡು; ಕೆಣಕು; ಪೀಡಿಸು.

ಚಿಡ್ಚಾಪಿ (ನಾ)= ಚಿಕ್ಕ ಚಾಪೆ; ಚಾಪೆ.

ಚಿಡ್ರಿಗಿ ಬಾ (ಕ್ರಿ)= ಕೋಪಗೊಳ್ಳು ಸಿಡಿಮಿಡಿಗೊಳ್ಳು, ಸಿಡಿಪಿಡಿ ಮಾಡು.

ಚಿಣಿ (ನಾ)= ಎರಡೂ ತುದಿಗೆ ಶಂಕುವಿನಂತೆ ಕೆತ್ತಿ ಚೂಪು ಮಾಡಿದ ಕಟ್ಟಿಗೆಯ ತುಂಡು; ಛಿಣಿ; ಚಿಲ್ಲಿ; ಗಿಲ್ಲಿ.

ಚಿಣಿ-ಫಣಿ (ನಾ)= ಎರಡೂ ತುದಿಗೆ ಶಂಕುವಿನಂತೆ ಕೆತ್ತಿದ ಕಟ್ಟಿಗೆಯ ತುಂಡು ಮತ್ತು ಅದನ್ನು ಹೊಡೆದು ಆಡಲು ಬಳಸುವ ಕೋಲು; ಗಿಲ್ಲಿದಾಂಡು; ಛಿಣಿಫಣಿ; ಚಿಲ್ಲಿಫಳಿ.

ಚಿತಾ (ನಾ)= ಚಿತೆ; ಹೆಣವನ್ನು ಸುಡಲು ಒಟ್ಟಿದ ಕಟ್ಟಿಗೆ ಕುಳ್ಳಿನ ರಾಶಿ.

ಚಿತಾಭಸ್ಮ (ನಾ)= ಚಿತೆಯ ಬೂದಿ; ಹೆಣಸುಟ್ಟ ಬೂದಿ

ಚಿತ್ಕಾ (ನಾ)= ಚಿತ್ತಕ; ಚಿರತೆ

ಚಿತ್ತಕ (ನಾ)= ಚಿತ್ಕಾ; ಚಿರತೆ.

ಚಿತ್ತಾಗು (ಕ್ರಿ)= ಅಂಗಾತಾಗು; ಮುಗಿಲಿನತ್ತ ಮೋರೆ ಮಾಡಿ ಮಲಗು; ಸೋಲು.

ಚಿತ್ತಿ (ನಾ)= ಚಿತ್ತಾ ಎಂಬ ಮಳೆಯ ನಕ್ಷತ್ರ; ಶ್ವಾನ ಬೆದೆಯ ನಕ್ಷತ್ರ.

ಚಿತ್ತಿಡು (ಕ್ರಿ)= ಲಕ್ಷ್ಯಕೊಡು; ಗಮನಿಸು.

ಚಿತ್ತಿ ಬೆದಿ (ನಾ)= ಶ್ವಾನ ಬೆದೆಯ ನಕ್ಷತ್ರ; ನಾಯಿಕೂಟದ ಬೆದೆ.

ಚಿತ್ತು (ನಾ)= ಚಿತ್ತ; ಮನಸ್ಸು; ಲಕ್ಷ್ಯ; ಅಪೇಕ್ಷೆ; ಆಶಯ; ಅಂಗಾತ; ಮುಗಿಲಿನತ್ತ ಮೋರೆ ಮಾಡಿ ಮಲಗಿದ ಅವಸ್ಥೆ.

ಚಿತ್ತು ಮಾಡು (ಕ್ರಿ)= ಕುಸ್ತಿಯಲ್ಲಿ ಎದುರಾಳಿಯನ್ನು ಅಂಗಾತ ಹಾಕು; ಸೋಲಿಸು.

ಚಿತ್ತುರು (ನಾ)= ಚಿತ್ರ; ಚಿತ್ತಾರ.

ಚಿತ್ಪಟ್ಟಾಗು (ಕ್ರಿ)= ಕುಸ್ತಿಯಾಡು; ಸಂಭೋಗಿಸು; ರತಿಕ್ರೀಡೆ ನಡೆಸು.

ಚಿತ್ಪಟ್ಟು (ನಾ)= ಅಂಗಾತ ಮತ್ತು ಬೋರಳು; ನಾಣ್ಯದ ಎರಡು ಮಗ್ಗಲು; ಒಂದು ಆಟ.

ಚಿತ್ರ (ನಾ)= ಚಿತ್ತಾರ.

ಚಿತ್ರಾ ಇಳ್ಸು (ಕ್ರಿ)= ಚಿತ್ರ ಬರೆ.

ಚಿದಂಬರಾಶ್ರಮ (ನಾ)= ಗುಂಪಾ ಎಂದೇ ಖ್ಯಾತಿ ಹೊಂದಿರುವ ಬೀದರ ನಗರದ ದಕ್ಷಿಣಕ್ಕಿರುವ ಮನ್ನಳ್ಳಿ ರಸ್ತೆಯಲ್ಲಿಯ ಸಿದ್ಧಾರೂಢ ಸ್ವಾಮಿಗಳ ಮಠ ಮತ್ತು

ದೇವಾಲಯ; ಶ್ರೀ ಶಿವಕುಮಾರ ಸ್ವಾಮಿಗಳ ಆಶ್ರಮ.

ಚಿದಿ (ನಾ)= ಬುಕ್ಕಿ; ಚೂರು ಚೂರು.

ಚಿದಿಗುಟ್ಟು (ಕ್ರಿ)= ಬುಕ್ಕಿ ಮಾಡು; ಪುಡಿಪುಡಿ ಮಾಡು; ಕುಟ್ಟು.

ಚಿದುರಾಗು (ಕ್ರಿ)= ಚೂರಾಗು; ಛಿದ್ರ ಛಿದ್ರವಾಗು.

ಚಿದುರು (ನಾ)= ಚೂರು; ತುಂಡು.

ಚಿದುರೆಣ್ಸು (ಕ್ರಿ)= ಛಿದ್ರ ಹುಡುಕು; ತಪ್ಪು ಹುಡುಕು.

ಚಿದುರ್ಚಿದುರಾಗು (ಕ್ರಿ)= ಚೂರು ಚೂರಾಗು; ತುಂಡು ತುಂಡಾಗು.

ಚಿದ್ರಿ (ನಾ)= ಬೀದರ ನಗರದ ಒಂದು ಭಾಗವಾಗಿರುವ ವಿಮಾನ ನಿಲ್ದಾಣಕ್ಕೆ ಹೊಂದಿರುವ ಒಂದು ಊರು.

ಚಿನ್ನ (ನಾ)= ಹೊನ್ನು; ಸುವರ್ಣ; ಬಂಗಾರ; ಹಳದಿ ಬಣ್ಣದ ಒಂದು ಲೋಹ.

ಚಿಪಾಟಿ (ನಾ)= ಕಣಿಕೆಯ ತುಂಡು; ದನಗಳು ತಿಂದೆಸೆದ ಕಣಿಕೆಯ ತುಂಡು.

ಚಿಪ್ಕಾಸು (ಕ್ರಿ)= ಮೆತ್ತು; ಅಂಟಿಸು; ಅಂಟುವಂತೆ ಮಾಡು.

ಚಿಪ್ಚಿಪಿ (ದ್ವಿ)= ಮಂಜಿನಂಥ ಮಳೆ; ಸೀರ್ಮಳೆ; ತುಂತುರುಮಳೆ; ಜಿಟಿಜಿಟಿ; ಅಂಟಂಟು.

ಚಿಪ್ಡಿ (ನಾ)= ಸಿಳ್ಳಿ; ಸಿಳ್ಳುಗಣ್ಣಿನವಳು (ಬೈಗುಳ).

ಚಿಪ್ಡಾ (ನಾ)= ಸಿಳ್ಳುಗಣ್ಣಿನವನು; ಸಿಳ್ಳ್ಯಾ (ಬೈಗುಳ).

ಚಿಪ್ಪುಡು (ನಾ)= ಸಿಳ್ಳು; ಕಣ್ಣಿನಿಂದ ಒಸರುವ ತಿಳಿಹಳದಿ ಬಣ್ಣದ ಹೊಲಸು; ಪಿಚ್ಚು.

ಚಿಪ್ಪುಡ್ಗಣ್ಣು (ನಾ)= ಸಿಳ್ಳುಗಣ್ಣು; ಪಿಚ್ಚಗಣ್ಣು.

ಚಿಬ್ಬು (ನಾ)= ಒಂದು ಪ್ರಕಾರದ ಚರ್ಮರೋಗ.

ಚಿಮುಟಗಿ (ನಾ)= ಚಿಮ್ಮಟ; ಚಿಮ್ಮಟಿಗೆ.

ಚಿಮ್ಟಾ (ನಾ)= ಚಿಮ್ಮಟ; ಚಿಮ್ಮಟಿಗೆ.

ಚಿಮ್ಟಿ ತೊಗೊ (ಕ್ರಿ)= ಚಿವುಟು.

ಚಿಮ್ನಿ (ನಾ)= ಸೀಮೆ ಎಣ್ಣೆಯ ದೀಪದ ಸಾಧನ; ಬುಡ್ಡಿ ದೀಪ, ಕೈದೀಪ.

ಚಿಮ್ನಿ ಎಣ್ಣೆ (ನಾ)= ಸೀಮೆ ಎಣ್ಣೆ; ಕಲ್ಲೆಣ್ಣೆ ಘಾಸ್ಲೇಟ.

ಚಿಮ್ಮು (ಕ್ರಿ)= ಚೆಂಡು ಅಥವಾ ಚಿಣಿಯನ್ನು ಈಚು, ಚೀಕು, ಹಾರುವಂತೆ ತಳ್ಳು; ಹಾರೆಯನ್ನು ತಳದಲ್ಲಿ ಸೇರಿಸಿ ಮೇಲೆತ್ತು.

ಚಿಮ್ಮು (ನಾ)= ವಸ್ತುವನ್ನು ಚಿಮ್ಮಿ ಮೇಲೆತ್ತುವ ಹಾರೆ, ಕಟ್ಟಿಗೆ ಇತ್ಯಾದಿ ಸಾಧನ.

ಚಿಮ್ಮು ಹಾಕು (ಕ್ರಿ)= ಚಿಮ್ಮಿನ ಸಾಧನ ಬಳಸಿ ಮೇಲೆತ್ತು.

ಚಿರಂಜೀವಿ (ನಾ)= ಮಗ; ಪುತ್ರ; ಅಮರ.

ಚಿರಗುಟ್ಲೆ ಚೀರು (ಕ್ರಿ)= ಚಿಟ್ಟನೆ ಚೀರು; ಚಿರ್ರನೆ ಚೀರು.

ಚಿರಾಗ (ನಾ)= ದೀಪ.

ಚಿರಾಗಪಲ್ಲಿ (ನಾ)= ಚಿರಕ್ಪಳ್ಳಿ (ನೋಡಿರಿ).

ಚಿರ್ಡಿಕಿ (ನಾ)= ಚೀಡು; ಕೋಪ.

ಚಿಲ್ಕಣಿ (ನಾ)= ಕುಣಿಕೆ ಇರುವ ಹಗ್ಗದ ಒಂದು ಪ್ರಕಾರ; ಕಣದಲ್ಲಿ ಮೇಟಿಗೆ ಸಿಕ್ಕಿಸಿದ ವರ್ತುಳಾಕಾರದ ಹಗ್ಗ.

ಚಿಲ್ಕಾ (ನಾ)= ಕೊಂಡಿ; ಚಿಲಕ.

ಚಿಲ್ಕಾ ಹಾಕು (ನಾ)= ಕೊಂಡಿ ಹಾಕು; ಚಿಲಕ ಹಾಕು.

ಚಿಲ್ಕಿ (ನಾ)= ಮಾಳಿಗೆಗೆ ಮೇಲ್ಮುದ್ದಿ ಹಾಕುವ ಮೊದಲು ಹಾಸಲಾಗುವ ಕಟ್ಟಿಗೆಯ ಆಯತಾಕಾರದ ತುಂಡುಗಳು.

ಚಿಲ್ಮಿ (ನಾ)= ನೀರಿನ ಬುಗ್ಗೆ; ನೀರಿನ ಸಣ್ಣ ಗುಂಡ; ನೀರಿನ ಒರತೆ; ತಂಬಾಕು ಸೇದಲು ಬಳಸುವ ಮಣ್ಣಿನಿಂದ ಮಾಡಿದ ಚುಟ್ಟದ ಸಾಧನ.

ಚಿಲ್ಲರ (ನಾ)= ಒಂದು ಪೂರ್ಣನಾಣ್ಯದ ಭಾಗಗಳಾದ ಸಣ್ಣ ಪುಟ್ಟ ನಾಣ್ಯಗಳು; ರೂಪಾಯಿಯ ಭಾಗಗಳಾದ ದುಡ್ಡು, ಹತ್ತು ದುಡ್ಡು, ಇಪ್ಪತ್ತು ದುಡ್ಡು ಇತ್ಯಾದಿ; ಬಿಡಿ ನಾಣ್ಯ; ಬಿಡಿನೋಟುಗಳು; ಕಿರುಕೋಳ.

ಚಿಲ್ಲರ ಮಂದಿ (ನಾ)= ಸಾಮಾನ್ಯ ಜನ; ಸಣ್ಣ ಪುಟ್ಟ ಜನ; ಹೀನ ಜನ.

ಚಿಲ್ಲರ ಯಾಪಾರಿ (ನಾ)= ಕಿರುಕೋಳ ವ್ಯಾಪಾರಿ; ಸಣ್ಣ ವ್ಯಾಪಾರಿ.

ಚಿಲ್ಲಾಳ (ನಾ)= ಭಕ್ತ ಸಿರಿಯಾಳನ ಮಗ

ಚಿಲ್ಲಿ (ನಾ)= ಚಿಣಿ; ಫಣಿ; ಗಿಲ್ಲಿ (ಚಿಣಿ ನೋಡಿರಿ).

ಚಿಲ್ಲಿ ಫಳಿ (ನಾ)= ಚಿಣಿಫಣಿ (ನೋಡಿರಿ)

ಚಿಲ್ಲಿ ಬೀಜ (ನಾ)= ನಿರ್ಮಲಿ ಬೀಜ; ಅಡಕೆಯಂತೆ ತಿನ್ನಲು ಬಳಸಲಾಗುವ ಕಾಡುಮರದ ಬೀಜ; ಔಷಧೀಯ ಗುಣವುಳ್ಳ ಬೀಜ.

ಚಿವುಟು (ಕ್ರಿ)= ಉಗುರುಗಳಿಂದ ಚರ್ಮವನ್ನು ಹಿಂಡು, ಅದುಮು.

ಚಿವುರು (ಕ್ರಿ)= ಉಗುರಿನಿಂದ ಕೆರೆ, ಕೆವರು; ತುರಿಸು.

ಚಿವ್ಡಾ (ನಾ)= ಹುರಿದು ಒಗ್ಗರಣೆ ಹಾಕಿದ ಅವಲಕ್ಕಿ; ಖಾರ ಉಪ್ಪು ಸೇರಿಸಿ ತಯ್ಯಾರಿಸಿದ ಮಂಡಕ್ಕಿ ತಿಂಡಿ.

ಚಿವ್ಡಾ ಮಾಡು (ಕ್ರಿ)= ಮಂಡಳ್ಳಿಗೆ ಖಾರ ಉಪ್ಪು ಬೆರೆಸಿ ಬಗಾರು ಹಾಕಿ ತಿಂಡಿ ತಯಾರಿಸು.

ಚೀಕಿ (ನಾ)= ದೇಟು ಕಡಿದ ಕೂಡಲೆ ತಿಳಿದಾದ ಬಿಳಿ ದ್ರವವನ್ನು ಅತಿಯಾಗಿ , ಒಸರುವ ಕಸುಕು ಮಾವು.

ಚೀಕು (ನಾ)= ಮಾವಿನ ದೇಟು ಕಡಿದ ಕೂಡಲೆ ಕಾಯಿಯಿಂದ ಒಸರುವ ಬಿಳಿ ದ್ರವ.

ಚೀಕು (ಕ್ರಿ)= ಚೆಂಡು ಅಥವಾ ಚಿಣಿಯನ್ನು ಬೋದಿನಿಂದ ದೂರಕ್ಕೆ ಫಣಿಯ ಸಹಾಯದಿಂದ ಚಿಮ್ಮು ತಳ್ಳು, ಈಚು.

ಚೀಕು ಸೋರು (ಕ್ರಿ)= ಹರಿದ ಮಾವಿನಿಂದ ಮತ್ತು ದೇಟಿನಿಂದ ಬಿಳಿದ್ರವ ವಸರು

ಚೀಜು (ನಾ)= ವಸ್ತು; ದಿನ್ನು; ಚಿನ್ನ, ಬೆಳ್ಳಿಯ ಒಡವೆ-ವಸ್ತು, ಒಡವೆ.

ಚೀಟಿ (ನಾ)= ಚಿಟ್ಟಿ; ಸಂದೇಶ ಬರೆದ ಕಾಗದ; ವಸ್ತುವನ್ನು ಕಾಗದದಲ್ಲಿಟ್ಟು ಕಟ್ಟಿದ ಪುಡಿ; ಯಂತ್ರ ಬರೆದ ಕಾಗದ.

ಚೀಟಿ ಕಟ್ಟು (ಕ್ರಿ)= ಪುಡಿ ಕಟ್ಟು, ವಸ್ತುವನ್ನು ಕಾಗದಲ್ಲಿಟ್ಟು ಬಂಧಿಸು; ಮಂತ್ರ ಬರೆದ ಕಾಗದವನ್ನು ಕೊರಳಲ್ಲಿ ಹಾಕು ಇಲ್ಲವೆ ರಟ್ಟೆಗೆ ಕಟ್ಟು.

ಚೀಟು (ನಾ)= ಚೀಟಿ; ನಾನಾ ಬಣ್ಣದ ಚಿತ್ರಣ ಮುದ್ರಿಸಿದ ಬಟ್ಟೆ; ಬಣ್ಣದ ಚಿತ್ರಣವುಳ್ಳ ಬಟ್ಟೆ; ಪ್ರಿಂಟು; ಛೀಟು.

ಚೀಟು ಹೊಡಿ (ಕ್ರಿ)= ತರತರದ ಬಣ್ಣಗಳ ಚಿತ್ರ ಮುದ್ರಿಸು.

ಚೀಡು (ನಾ)ಹಿಂ.= ಸಿಟ್ಟು; ಕೋಪ; ಚಿರಡಿಕೆ

ಚೀಡು ಬರು (ಕ್ರಿ)= ಸಿಟ್ಟು ಉಂಟಾಗು; ಕೋಪಗೊಳ್ಳು.

ಚೀನಿ (ವಿ)= ಚೀನಾದೇಶದ್ದು; ಬಿಳಿ ಮಣ್ಣಿನದು.

ಚೀನಿ ಮಣ್ಣು (ನಾ)= ಬಿಳಿಮಣ್ಣು.

ಚೀಪು (ಕ್ರಿ)= ತುಟಿ ಮುತ್ತು ನಾಲಗೆಯಿಂದ ಹೀರಿ ರುಚಿಯನ್ನು ಸವಿ; ಸೀಪು; ಹೀರು; ಹಿಪ್ಪು.

ಚೀಪು (ವಿ)ಇಂ. = ಸಸ್ತಾ; ಸೋಯಿ; ಅಗ್ಗ.

ಚೀಪ್ಸು (ಕ್ರಿ)= ಚೀಪಿಸು; ನೆಕ್ಕಿಸು; ನೆಕ್ಕುವಂತೆ ಮಾಡು; ಹೀರಿಸು.

ಚೀರಾಟ (ನಾ)= ಚೀರುವಿಕೆ; ಅರಚುವಿಕೆ; ಕೂಗುವಿಕೆ.

ಚೀರಾಡು (ಕ್ರಿ)= ಚೀರು; ಅರಚು; ಆರ್ಭಟಿಸು; ಜೋರಾಗಿ ಕೂಗು.

ಚೀರು (ಕ್ರಿ)= ಅರಚು; ಗಟ್ಟಿಯಾಗಿ ಕೂಗು.

ಚೀರ್ಫಾಡ (ನಾ)= ಶವ ಪರೀಕ್ಷೆ; ಹರಿದು, ಸೀಳಿ ಪರೀಕ್ಷಿಸುವಿಕೆ.

ಚೀರ್ಫಾಡ ಗಲ್ಲಿ (ನಾ)= ಶವ ಪರೀಕ್ಷಾಗಾರದ ಸುತ್ತ ಮುತ್ತ ಹುಟ್ಟಿರುವ ಭಾಲ್ಕಿ ನಗರದ ಒಂದು ಬಡಾವಣೆಯ ಹೆಸರು.

ಚೀರ್ಯಾಡು (ಕ್ರಿ)= ಚೀರಾಡು; ರೇಗಾಡು; ಕೂಗಾಡು.

ಚೀಲ (ನಾ)= ಧಾನ್ಯ, ಪದಾರ್ಥ ಇತ್ಯಾದಿಗಳನ್ನು ತುಂಬಲು ಬಳಸುವ ಬಟ್ಟೆ ಅಥವಾ ಗೋಣಿಯಿಂದ ತಯ್ಯಾರಿಸಿದ ಮೂರು ಕಡೆ ಹೊಲಿಗೆ ಇರುವ ಸಾಧನ; ಥೈಲಿ; ಥೈಲಾ; ಚಂಚಿ; ಸಂಚಿ.

ಚೀಲಾ (ನಾ)= ಚೀಲ; ಥೈಲಿ; ಥೈಲಾ; ಚಂಚಿ; ಸಂಚಿ

ಚುಂಗಿ ನಾಕಾ (ನಾ)= ತೆರಿಗೆ ವಸೂಲಿ ಮಾಡುವ ಜಾಗ; ಸುಂಕದ ಕಟ್ಟೆ.

ಚುಂಗು (ನಾ)= ಸೀರೆಯ ಸೆರಗು; ರುಮಾಲಿನ ತೂಗುಬಿಟ್ಟ ಭಾಗ; ಚಂಗ; ತುದಿ; ಕೊನೆ.

ಚುಂಗ್ಡಿ (ನಾ)= ತುಂಬಿದ ಧಾನ್ಯದ ಚೀಲ; ಧಾನ್ಯ ತುಂಬಿದ ಸಣ್ಣಚೀಲ; ಪೂರ್ಣಭರ್ತಿಯಾಗದ ಚೀಲ.

ಚುಂಚು (ನಾ)= ಪಕ್ಷಿಯ ಬಾಯಿ, ಕೊಕ್ಕು.

ಚುಂಚು ಹೊಡಿ (ಕ್ರಿ)= (ಹಕ್ಕಿ) ಮೂಗನ್ನು ಚುಚ್ಚು; ಕುಕ್ಕು.

ಚುಕಾರಿ (ನಾ)= ಕಳ್ಳದನ; ಬಿಡಾಡಿದನ; ಯಜಮಾನನಿಂದ ತಪ್ಪಿಸಿಕೊಂಡ ಎತ್ತು, ಎಮ್ಮೆ, ಆಕಳು ಇತ್ಯಾದಿ.

ಚುಕಾಸು (ಕ್ರಿ)= ಸಾಲ ತೀರಿಸು; ಲೆಕ್ಕ ಸರಿ ಮಾಡು; ಪೂರೈಸು; ಬರೋಬರಿ ಮಾಡು; ಸರಿ ಮಾಡು.

ಚುಕ್ಕಾ (ನಾ)= ಮುಸುಕಿ; ಎತ್ತು, ಆಕಳು, ಎಮ್ಮೆಗಳು ಬೆಳೆ ತಿನ್ನದಂತೆ ಅವುಗಳ ಬಾಯಿಗೆ ಬಿಗಿದ ಜಾಳಿಗೆ; ಮುಸ್ಕಿ.

ಚುಕ್ಕಿ (ನಾ)= ಚಿಕ್ಕೆ; ನಕ್ಷತ್ರ (**ಗಾದೆ:** ಚುಕ್ಕಿ ಹೊಂಡ್ರಾಟ್ಗೆ ಬುತ್ತಿ ಕಟ್ತುರ್ಬಿ, ನಿಚ್ಚದ್ಯಾಳ್ಯಾ ತಪ್ಪಾಂಗಿಲ್ಲ) ತಪ್ಪು; ಚುಕ್ಕು; ಚೂಕು.

ಚುಕ್ಕಿ ಚಂದ್ರಾಮ (ನಾ)= ಚದುರ; ಸುಂದರ (ಉ: ಪಾರಗೇನ್ನೋಡಾದದಾ, ಚುಕ್ಕಿ ಚಂದ್ರಾ ಮಾಗ್ಯಾನ).

ಚುಕ್ಕು (ಕ್ರಿ)= ತಪ್ಪು ಮಾಡು; ತಪ್ಪಾಗು.

ಚುಕ್ಕು (ನಾ)= ಚೂಕು; ತಪ್ಪು.

ಚುಕ್ಕು ಮಾಡು (ಕ್ರಿ)= ತಪ್ಪು ಮಾಡು; ತಪ್ಪಾಗು; ತಪ್ಪಿ ನಡೆ.

ಚುಕ್ತಾ (ವಿ)= ಪೂರ್ಣ; ಪೂರಾ; ಪೂರ್ತಿ; ಬೇಬಾಕ್; ಚುಗ್ತಾ; ಎಲ್ಲ.

ಚುಗಲಿ (ನಾ)= ಚಾಡಿ; ನಿಂದೆ

ಚುಗಲಿ ಹೇಳು (ಕ್ರಿ)= ಚಾಡಿ ಹೇಳು; ನಿಂದೆಯಾಡು.

ಚುಗ್ತಾ (ವಿ.)= ಚುಕ್ತಾ (ನೋಡಿರಿ).

ಚುಗ್ಯಾ (ನಾ)= ಚುಗಲಿ ಹೇಳುವವನು; ನಿಂದಕ; ಚಾಡಿ ಖೋರ.

ಚುಚಂದ್ರಿ (ನಾ)= ಒಂದು ಬಗೆಯ ವಿಷಕಾರಿ ಇಲಿ; ಸೊಂಡಿಲಿ; ಚಂಡುಲಿ; ಚೊಂಡುಲಿ.

ಚುಚ್ಲಿ (ನಾ)= ನಿಂದೆ; ಚುಗಲಿ; ಚಾಡಿ.

ಚುಚ್ಲಿ ಆಡು (ಕ್ರಿ)= ನಿಂದೆ ಮಾಡು; ಚುಗ್ಲಿ ಹೇಳು; ಹಚ್ಚಪ್ಪ ಚುಚ್ಚಪ್ಪ ಕೆಲಸ ಮಾಡು.

ಚುಚ್ಲಿಹೇಳು (ಕ್ರಿ)= ನಿಂದೆ ಯಾಡು; ಚಾಡಿ ಹೇಳು; ಚುಗಲಿಯಾಡು; ಹಚ್ಚಪ್ಪ ಚುಚ್ಚಪ್ಪ ಮಾಡು.

ಚುಚ್ಚು (ಕ್ರಿ)= ಚಾಕು, ಚೂರಿ, ಮುಳ್ಳು, ಕೋಲು ಇತ್ಯಾದಿಗಳಿಂದ ತಿವಿ, ಇರಿ, ತೂತು ಮಾಡು, ಗಾಯ ಮಾಡು.

ಚುಚ್ಚು ಮಾತು (ನಾ)= ಮನನೋಯಿಸುವಂತೆ ಮಾತಾಡುವಿಕೆ.

ಚುಟುಕು (ನಾ)= ಚಿಕ್ಕದ್ದು; ಸಣ್ಣದ್ದು.

ಚುಟುಕು ಚುಂಗಿ (ನಾ)= ತೇಳು, ಚೇಳು (ಒಗಟು : ಚುಟುಕು ಚುಂಗಿ ಲೋಲೋ ಭಂಗಿ –ಚೇಳು)

ಚುಟ್ಕಿ (ನಾ)= ಬರೆಹಾಕುವಿಕೆ; ಕಾದ ಕಬ್ಬಿಣದಿಂದ ಬರೆಯುವ ಬರೆ.

ಚುಟ್ಕಿ ಹತ್ತು (ಕ್ರಿ)= ಚಿಂತೆಯಾಗು; ಒಳಗುದಿಯುಂಟಾಗು.

ಚುಟ್ಕಿ ಹಾಕು (ಕ್ರಿ)= ಕಾದ ಕಬ್ಬಿಣದಿಂದ ಬರೆ ಎಳೆ; ಕ್ಯಾರಾಳೆಣ್ಣೆಯಿಂದ ಬರೆ ಹಾಕು.

ಚುಟ್ಕು ಮುಟ್ಕು (ವಿ)= ಸಣ್ಣ ಪುಟ್ಟ; ಚಿಲ್ಲರೆ; ನಗಣ್ಯ.

ಚುಟ್ಟ ಬಿಗಿ (ಕ್ರಿ)= ಚುಟ್ಟಾ ಸೇದು; ಹೊಗೆಸೊಪ್ಪು ಸೇದು.

ಚುಟ್ಟಾ (ನಾ)= ಚುಟ್ಟದೆಲೆಯಲ್ಲಿ ಹೊಗೆ ಸೊಪ್ಪು ತುಂಬಿ ಮಾಡಿದ ಹೊಗೆ ಸೇವಿಸುವ ಸಾಧನ; ಬೀಡಿ; ಚುಟ್ಟ; ಹೊಗೆ ಬತ್ತಿ.

ಚುಟ್ಟಾ ಬಿಗಿ (ಕ್ರಿ)= ತಂಬಾಕಿನ ಹೊಗೆಯನ್ನು ಸೇವಿಸು; ಹೊಗೆ ಸೊಪ್ಪು ಸೇದು.

ಚುಟ್ಟಾ ಬಿಗ್ಯಾ ಹೊತ್ತು (ನಾ)= ಒಂದು ಚುಟ್ಟ ಸೇದಲು ಬೇಕಾಗುವಷ್ಟು ಸಮಯ, ಅವಧಿ.

ಚುಡಜೆಲಿ (ನಾ)= ಚುಟ್ಟ ಕಟ್ಟಲು ಬಳಸುವ ಕಾಡುಗಿಡದ ಎಲೆ; ಚುಟ್ಟದೆಲೆ.

ಚುಡದೆಲಿ (ನಾ)= ಚುಡಜೆಲಿ (ನೋಡಿರಿ)

ಚುಡವಾ (ನಾ)= ಚೂಡಾ; ಚಿವ್ಡಾ; ಒಗ್ಗರಣೆ ಹಾಕಿದ ಅವಲಕ್ಕಿ ಅಥವಾ ಮಂಡಳ್ಳು

ಚುಡಾಸು (ಕ್ರಿ)= ಕೀಟಲೆ ಕೊಟ್ಟು ರೇಗಿಸು; ಕೆಣಕು; ಛೇಡಿಸು.

ಚುಡಿದಾರ ಪಾಯ್ಜಾಮಾ (ನಾ)= ಸೊಂಟದಿಂದ ಪಾದದವರೆಗೆ ಮೇಲೆ ಅಗಲ, ಕೆಳಗೆ ಗುತ್ತಾಗಿರುವ ಒಂದು ಪ್ರಕಾರದ ಉಡುಗೆ.

ಚುಣುಗು (ನಾ)= ಸೊಳ್ಳೆ; ದ್ವಾಮಿ; ಚಿಕ್ಕಡ.

ಚುನಾವು (ನಾ)= ಚುನಾವಣೆ; ಮತದಾನ; ಎಲೆಕ್ಷನ್.

ಚುನಾಸು (ಕ್ರಿ)= ಆಯ್ಕೆ ಮಾಡು; ಆರಿಸಿ ತರು; ಮತದಾನ ಮಾಡಿ ಗೆಲ್ಲಿಸು.

ಚುನ್ನಿ (ನಾ)= ಕುದುರೆಗಾಗಿ ತಯಾರಿಸಿದ ಆಹಾರ; ಚಂದಿ; ದನದ ಆಹಾರ.

ಚುಪ್ (ಕ್ರಿ)= ಶಾಂತನಾಗು; ಸುಮ್ಮನಿರು.

ಚುಪ್‌ಚಾಪ್ (ಅ)ಹಿಂ.= ಮೌನವಾಗಿ; ಸದ್ದಿಲ್ಲದೆ.

ಚುಪ್ಕಿ (ನಾ)ಹಿಂ. = ಮೌನ; ಮಾತಾಡದಿರುವಿಕೆ.

ಚುಬಾಸು (ಕ್ರಿ)= ಚುಚ್ಚು; ಚಾಕು, ಚೂರಿ, ಸೂಜಿ, ಡಬ್ಬಣ ಮೊದಲಾದವುಗಳಿಂದ ಚುಚ್ಚು.

ಚುರ್ಕಿ (ನಾ)= ಚುರುಕು; ಕಾಯ್ದ ಕಬ್ಬಿಣದಿಂದ ಹಾಕಿದ ಬರೆ.

ಚುರ್ಕಿಕುಡು (ಕ್ರಿ)= ಕಾಯ್ದ ಕಬ್ಬಿಣದಿಂದ ಬರೆ ಎಳೆ.

ಚುರ್ಕುಮುಟ್ಸು (ಕ್ರಿ)= ಹಿಂಸಿಸು; ನೋಯಿಸು; ಬಿಸಿತಟ್ಟಿಸು.

ಚುರ್ಗುಟ್ಟು (ಕ್ರಿ)= ಚುರ್ರೆಂದು ಸುಟ್ಟ ಅನುಭವವಾಗು.

ಚುರ್ಚಿ (ನಾ)= ಶರೀರಕ್ಕೆ ತಗುಲಿದರೆ ತುರಿಯುಂಟು ಮಾಡುವ ಕಾಯಿಯುಳ್ಳ ಸಸ್ಯ; ತುರಿಕೆ ಗಿಡ; ತುರುಚಿ.

ಚುರ್ಮುರಿ (ನಾ)= ಮಂಡಳ್ಳು; ಮಂಡಕ್ಕಿ.

ಚುಸ್ತಿ (ನಾ)= ಚುರುಕುತನ.

ಚುಳುಕ್ಚುಳುಕ್ (ದ್ವಿ)= ತಡೆ ತಡೆದು ಮೂತ್ರ ವಿಸರ್ಜಿಸುವಿಕೆ; ಎಮ್ಮೆ ಆಕಳುಗಳ ಮೂತ್ರ ವಿಸರ್ಜಿಸುವಿಕೆ. ನಿಂತು ನಿಂತು ಸುರಿಯುವ ಸಣ್ಣಧಾರೆಯ ನೀರಿನ ರೀತಿ.

ಚುಳುಳುಳು (ಅ)= ನಲ್ಲಿಯಿಂದ ಸಣ್ಣಾಗಿ ಬೀಳುವ ನೀರಿನ ರೀತಿ; ಮೂತ್ರ ವಿಸರ್ಜನೆ ಸದ್ದಿನ ರೀತಿ.

ಚುಳ್ಕಿ ನಾಲಾ (ನಾ)= ಬಸವಕಲ್ಯಾಣ ತಾಲೂಕಿನಲ್ಲಿ ಹರಿಯುವ ಒಂದು ಸಣ್ಣನಾಲೆ ಮತ್ತು ಅದರ ನೀರಾವರಿ ಯೋಜನೆ.

ಚುಳ್ಳು (ನಾ)= ತುಸುತುಸುವಾಗಿ, ಹನಿಹನಿಯಾಗಿ ಬೀಳುವ ನೀರು; ದನಗಳ ಮೂತ್ರ ವಿಸರ್ಜನೆ.

ಚುಳ್ಳು ನೀರು (ನಾ)= ತುಸು ನೀರು.

ಚೂಂಚಾಂ ಅನು (ಕ್ರಿ)= ಹಾಂಗಾ ಹೀಂಗಾ ಮಾಡು; ಹಾಗೆ ಹೀಗೆ ಮಾಡು (ಉ: ಚೂಂಚಾಂ ಅಂದಿ ಅಂದ್ರಾ ಬಾಯ್ದಾನ್ಬತ್ತೀಸ್ಹಲ್ಲು ಉದುರ್ತಾವ, ನೆಂಪಿಡು).

ಚೂಕು (ನಾ)= ತಪ್ಪು.

ಚೂಟು (ಕ್ರಿ)= ಚೂಂಟು; ಚಿವುಟು, ಉಗುರುಗಳಿಂದ ಚರ್ಮವನ್ನು ಹಿಂಡು.

ಚೂಡಾ (ನಾ)= ಚುಡವಾ; ಚಿವ್ಡಾ (ಹಾಡು: ಚಾದ ಜೋಡೀ ಚೂಡಾಧಂಗ-ದ.ರಾ. ಬೇಂದ್ರೆ)

ಚೂಜಾ (ನಾ)ಹಿಂ. = ಕೋಳಿ ಮರಿ.

ಚೂತ್ಯಾ (ನಾ)= ಷಂಡ; ಹಿಜಡ್ಯಾ; ಖೋಜ್ಯಾ; ಗಾಂಡೂ; ಹೆಣ್ಣಿನ ಚಟುವಟಿಕೆಯವ (ಚೂತ್ಯಾ ಸಾಯಾಲ, ದೇಶ ಪಾವನಾಗಾಲ).

ಚೂತ್ಯಾಗಿರಿ (ನಾ)= ಷಂಡತನ; ಸಲಿಂಗ ರತಿಗಾರಿಕೆ.

ಚೂತ್ಯಾನಂದನ (ನಾ)= ಷಂಡನ ಮಗ; ಷಂಡ.

ಚೂರಾ (ನಾ)= ಚೂರು; ತುಂಡು; ಬುಕ್ಕಿ.

ಚೂರು (ನಾ)= ಸಣ್ಣ ತುಂಡು.

ಚುರ್ಚೂರಾಗು (ಕ್ರಿ)= ತುಂಡು ತುಂಡು ಆಗು.

ಚೂರ್ಚೂರು (ದ್ವಿ)= ತುಂಡು ತುಂಡು.

ಚೂಲಾರು (ಕ್ರಿ)= ತೀಟೆತೀರು.

ಚೂಲು (ನಾ)= ತೀಟೆ; ಒಳತೀಟೆ; ತುರಿಸುವಿಕೆ; ತುರಿಕೆ.

ಚೂಲೇಳು (ಕ್ರಿ)= ತೀಟೆ ಉಂಟಾಗು (ಗಾದೆ: ಚೂಲೆದ್ರ ಏಳೂರು ಉಜಾಡಂಬಾದು- ಸುಳ್ಳಲ್ಲ)

ಚೆಂಗು (ನಾ)= ಚಂಗು; ಚೊಂಗು; ಹೆಳಲು; ಹೆಣಲು; ರುಮಾಲಿನ (ಮುಂಡಾಸಿನ) ಇಳಿಬಿಟ್ಟ ತುದಿ.

ಚೆಂಗು ಬಿಡು (ಕ್ರಿ)= ಬೆನ್ನ ಹಿಂದೆ ರುಮಾಲಿನ ಕೊನೆ ಅಥವಾ ಕೂದಲಿನ ಹೆಳಲನ್ನು ನೇತಾಡಿಸು.

ಚೆಂಚ (ನಾ)= ಚೊಂಚ; ಅಡವಿ ಚೊಂಚ; ಬೇಡ; ಶಬರ.

ಚೆಂಚಿ (ನಾ)= ಸಂಚಿ; ಎಲೆಯ ಚೀಲ.

ಚೆಂಡಾ (ನಾ)= ಚೆಂಡಿ; ಗಿಡದ ತುದಿ; ಚೆಂಡ್ಕಿ; ಶಿರ; ತಲೆ.

ಚೆಂಡಾಟ (ನಾ)= ಚೆಂಡಿನ ಆಟ.

ಚೆಂಡಾಡು (ಕ್ರಿ)= ಚೆಂಡಿನ ಆಟವಾಡು; ಕುತ್ತಿಗೆ ಕತ್ತರಿಸು; ಕೊಲ್ಲು; ಸಂಹರಿಸು.

ಚೆಂಡಾಸಾಫ ಮಾಡು (ಕ್ರಿ)= ನೆತ್ತಿಯನ್ನು ನುಣ್ಣಗೆ ಬೋಳಿಸು; ಗಿಡದ ತುದಿಯನ್ನು ಕಡಿ; ನೆತ್ತಿಯ ಮೇಲೆ ಹೊಡೆ.

ಚೆಂಡಿ (ನಾ)= ಗಿಡದ ತುದಿ; ಚಂಡಿ ಎಂಬ ಹಟಮಾರಿ ಹೆಣ್ಣು; ದೇಗುಲದ ಶಿಖರ.

ಚೆಂಡಿ ಚಿವುಟ್ಲಿ (ನು)= ವಂಶ ನಾಶವಾಗಲಿ; ನಿರ್ವಂಶವಾಗಲಿ (ಬೈಗುಳ)

ಚೆಂಡು (ನಾ)= ಬಟ್ಟೆಯಿಂದ ಅಥವಾ ರಬ್ಬರಿನಿಂದ ತಯ್ಯಾರಿಸಲಾದ ದುಂಡಾದ ಪುಟಿಯುವ ಆಟಿಕೆ.

ಚೆಂಡುದಾಂಡು (ನಾ)= ಆಟದ ಚೆಂಡು ಮತ್ತು ಫಣೆ, ಫಳಿ, ಬ್ಯಾಟು.

ಚಂಡ್ಕಿ (ನಾ)= ಚಂಡಿಕೆ; ಜುಟ್ಟು; ಶಿಖೆ.

ಚೆಂಡ್ಕಿ ಕಾಯು (ಕ್ರಿ)= ಶಿಖೆ ಬೆಳೆಸು; ಚಂಡಿಕೆ ಬೋಳಿಸದಿರು; ಜುಟ್ಟು ಬೆಳೆಸು.

ಚೆಂದ (ನಾ)= ಚಂದ; ಛಂದ; ಒಳ್ಳಿತು; ಒಪ್ಪ; ಓರಣ.

ಚಿಕೊಲಿ (ನಾ)= ಚಪಾತಿಯ ಚಚ್ಚೌಕ ಚೂರುಗಳನ್ನು ಖಾರ ಉಪ್ಪಿನೊಂದಿಗೆ ಕುದಿಸಿ ತಯ್ಯಾರಿಸಿದ ಆಹಾರ.

ಚಿಕ್ಕಿ (ನಾ)= ಚಕ್ಕೆ; ಕಟ್ಟಿಗೆಯ ಚೂರು; (ಉರ್ದು) ಬೀಸುಕಲ್ಲು.

ಚೆಕ್ಕಿ ಎಬ್ಸು (ಕ್ರಿ)= ಮರದ ಭಾಗವನ್ನು ಕೊಡಲಿಯಿಂದ ಅಥವಾ ಬಾಚಿಯಿಂದ ಸೀಳಿ ತೆಗೆ.

ಚೆಕ್ಲಿ ಭೀಳು (ಕ್ರಿ)= ಹಾದಿ ಬಿಟ್ಟು ಬೇರೆ ಹಾದಿಗೆ ಹೋಗು; ಮಾರ್ಗ ವ್ಯತ್ಯಾಸವಾಗು.

ಚೆಕ್ಲಿ ಹಾಕು (ಕ್ರಿ)= ತಪ್ಪಿಸಿಕೊ; ಮರೆವು ಹಾಕು; ಜಾರಿಕೊ; ನುಣುಚಿಕೊ.

ಚೆಕ್ಕಿ (ನಾ)= ಕೊಡಲಿ ಅಥವಾ ಬಾಚಿಯಿಂದ ಸೀಳಿ ತೆಗೆದ ಮರದ ಚೂರು; ಮರದ ತೊಗಟೆ.

ಚೆಟ್ಟಿ (ನಾ)= ಪಕ್ಷದ ಆರನೆಯ ದಿನ; ಷಷ್ಟಿ; ಎಳೆಗಾಯಿ; (ಚೆಟ್ಟಿ ಅಮಾಸಿಗಿ ಛಳಿ ಚೆಟ್ಲು ಭಾರಸ್ತದ) ಚಳ್ಳಿ; ಚೆಟ್ಟಿ ಹೆಸರಿನ ಅಮವಾಸ್ಯೆ.

ಚೆಟ್ಟಿ ಅಮಾಸಿ (ನಾ)= ಎಳ್ಳಮವಾಸ್ಯೆಗಿಂತ ಮುನ್ನ ಬರುವ ಅಮವಾಸ್ಯೆ; ಮೈಲಾರ ಮಲ್ಲಯ್ಯನ ಜಾತ್ರೆ ಪ್ರಾರಂಭದ ದಿನ; ಕಾರ್ತಿಕ ಅಮಾವಾಸ್ಯೆ.

ಚೆಡ್ಡಿ (ನಾ)= ಕೂರಿಗೆಯ ಮೂರು ರಂಧ್ರದ ಸಾಧನ; ಬಿತ್ತುವ ಬೀಜವನ್ನು ಹಾಕಿ ನಡಕ್ಕೆ ಸಿಕ್ಕಿಸಿಕೊಳ್ಳುವ ದಪ್ಪ ಬಟ್ಟೆಯ ಅಥವಾ ಗೋಣಿಯ ಚೀಲ ಅಥವಾ ಉಡಿ; ಚಲ್ಲಣ; ಚಣ್ಣ; ಚೊಲೊಣಿ.

ಚೆಡ್ಡಿ ದೋಸ್ತ (ನಾ)= ಆತ್ಮೀಯ ಗೆಳೆಯ; ಬಾಲ್ಯದಿಂದ ಬಂದ ಸ್ನೇಹಿತ; ಲಂಗೋಟಿಯಾರ.

ಚೆಣ್ಣಾ(ನಾ)= ಚಣ್ಣ; ಚಲ್ಲಣ, ಚೊಲೊಣಿ.

ಚೆನ್ನ (ನಾ)= ಅಂದ; ಸೊಗಸು; ಚೆಲುವ.

ಚೆನ್ನಬಸವ (ನಾ)= ಬಸವಣ್ಣನವರ ಸೋದರಳಿಯ (ಅಕ್ಕನ ಮಗ); ಹನ್ನೆರಡನೆಯ ಶತಮಾನದ ಕ್ರಾಂತಿಕಾರಿ ಶರಣ; ಸೊನ್ನಲಾಪುರದ ಸಿದ್ಧರಾಮೇಶ್ವರಗೆ ಲಿಂಗ ದೀಕ್ಷೆಕೊಟ್ಟ ಗುರು; ಉಳವಿಯಲ್ಲಿ ವಚನ ಸಾಹಿತ್ಯವನ್ನು ಮತ್ತೆ ಬರೆಯಿಸಿ ನಾಡಿನಾದ್ಯಂತ ಮಠಮಾನ್ಯಗಳಿಗೆ ಕಳಿಸಿಕೊಟ್ಟ ಮಹಾನುಭಾವ. ಇಪ್ಪತ್ತನೆ ಶತಮಾನದಲ್ಲಿ ಬದುಕಿದ ಕನ್ನಡದ ಪಟ್ಟದ್ದೇವರೆನಿಸಿದ ಭಾಲ್ಕಿ ಹಿರೇಮಠ ಸಂಸ್ಥಾನದ ಶತಾಯುಷಿ ಡಾ. ಚೆನ್ನ ಬಸವ ಪಟ್ಟದ್ದೇವರು; ಹಾರ ಕೊಡ ಹಿರೇಮಠ ಸಂಸ್ಥಾನದ ಚನ್ನ ಬಸವ ಪಟ್ಟದ್ದೇವರು.

ಚೆನ್ನಮಲ್ಲಿಕಾರ್ಜುನ (ನಾ)= ಶರಣೆ ಅಕ್ಕಮಹಾದೇವಿಯ ವಚನಾಂಕಿತ.

ಚೆನ್ನಯ್ಯ (ನಾ)= ಹನ್ನೆರಡನೆಯ ಶತಮಾನದ ಶರಣ ಮಾದಾರ ಚೆನ್ನಯ್ಯ.

ಚೆಯ್ರ್ಯಾ (ನಾ)= ಚಹರೆ; ಮುಖ ಚರ್ಯೆ, ಮುಖಲಕ್ಷಣ.

ಚೆಲು (ನಾ)= ಚೆಲುವ; ಚೆಲುವಿ.

ಚೆಲುವ (ನಾ)= ಸುಂದರಾಂಗ; ಚೆನ್ನಿಗ.

ಚೆಲುವಿ (ನಾ)= ಸುಂದರಾಂಗಿ ಚೆಲುವೆ.

ಚೆಲುವ್ಯಾ (ನಾ)= ಚೆಲುವ; ಚೆನ್ನಿಗ; ಸುಂದರಾಂಗ.

ಚೆಲ್ವಿ (ನಾ)= ಚೆಲುವಿ (ನೋಡಿರಿ)

ಚೆಲ್ವ್ಯಾ (ನಾ)= ಚೆಲುವ್ಯಾ (ನೋಡಿರಿ)

ಚೇಟು (ನಾ)= ಗೋಜು; ಗೊಂದಲ; ಉಸಾಬರಿ; ಭಾರ; ಕೂಳುಭಾರ; ಕಾಟ

ಚೇರಾ (ನಾ)= ಚಹರೆ; ಮುಖ ಚರ್ಯೆ; ಮುಖಲಕ್ಷಣ; ಚೇರ್ಯ.

ಚೇರಿಳಿ (ಕ್ರಿ)= ಅಂಡವೃದ್ಧಿಯಾಗು; ತರಡು ಉಬ್ಬಿ ಬೇನೆಯಾಗು; ಫೋತಾ ಉಬ್ಬು.

ಚೇರು (ನಾ)= ತರುಡು; ಅಂಡ; ವೃಷಣ; ಫೋತಾ; ಕುರ್ಚಿ; ನಾಲ್ಕು ಕಾಲಿನ ಆಸನ.

ಚೇರ್ಯಾ (ನಾ)= ಚೇರಾ (ನೋಡಿರಿ).

ಚೇಲಾ (ನಾ)= ಶಿಷ್ಯ; ಮುರೀದ; ವಿದ್ಯಾರ್ಥಿ; ಅನುಯಾಯಿ; ಹಿಂಬಾಲಕ.

ಚೈತ್ರ (ನಾ)= ಹಿಂದುಗಳ ಚಾಂದ್ರಮಾನ ವರ್ಷದ ಮೊದಲನೆಯ ತಿಂಗಳು; ವಸಂತ ಋತು ಪ್ರಾರಂಭ.

ಚೈನಾ ಮೂಂಗು (ನಾ)= ಹೆಸರು ಕಾಳಿನ ಒಂದು ತಳಿ.

ಚೈನಾ ಸಿಲ್ಕು (ನಾ)= ಚೀನಾ ದೇಶದಲ್ಲಿ ತಯಾರಾದ ರೇಷ್ಮೆ.

ಚೈನಿ (ನಾ)= ವಿಲಾಸ; ಸುಖಭೋಗ; ಷೋಕಿ

ಚೈನಿ ಉಡಾಸು (ಕ್ರಿ)= ಸುಖಭೋಗದಲ್ಲಿ ಮುಳುಗು; ಖರ್ಚುಖೋರನಾಗು; ಮಜಾ ಮಾಡು.

ಚೈನಿ ಮಾಡು (ಕ್ರಿ)= ಚೈನಿ ಉಡಾಸು (ನೋಡಿರಿ).

ಚೈನು (ನಾ)= ಕೊರಳಲ್ಲಿ ಧರಿಸುವ ಚಿನ್ನದ ಸರಪಳಿ; ಲಾಕಿಟ್ಟು; ಕಾಲಲ್ಲಿ ಧರಿಸುವ ಬೆಳ್ಳಿಯ ಸರಪಳಿ; ಪೈಜಣ.

ಚೊಂಗು (ನಾ)= ಚೆಂಗು; ಬೆನ್ನಮೇಲೆ ಇಳಿ ಬಿಟ್ಟ ಮುಂಡಾಸಿನ ಬಾಲ; ಕೊನೆ; ಸೆರಗು; ಹೆಣಲು; ಹೆಳಲು; ಮೇರಿ.

ಚೊಂಗು ಬಿಡು (ಕ್ರಿ)= ರುಮಾಲಿನ ಬಾಲ ಇಳಿ ಬಿಡು; ಹೆಣಾಲು ಇಳಿ ಬಿಡು.

ಚೊಂಚ (ನಾ)= ಸೊಟ್ಟಗೈಯವ; ಶಬರ; ಚಂಚ (ಬೈಗುಳ).

ಚೊಂಚಿ (ನಾ)= ಸೊಟ್ಟಕೈಯವಳು (ಬೈಗುಳ).

ಚೊಂಡಿ (ನಾ)= ಬೀದರ ತಾಲುಕಿನ ಒಂದುಹಳ್ಳಿ.

ಚೊಂಡಿಗಲ್ಲಿ (ನಾ)= ಬೀದರ ನಗರದ ಒಂದು ಓಣಿ.

ಚೊಂಡಿ ಮುಖೇಡ (ನಾ)= ಔರಾದ ತಾಲುಕಿನ ಒಂದು ಹಳ್ಳಿ.

ಚೊಂಡುಲಿ (ನಾ)= ಚುಂಡುಲಿ; ಸೊಂಡಿಲಿ; ವಿಷಕಾರಿ ಇಲಿ.

ಚೊಂಬು (ನಾ)= ಚಂಬು; ಲೋಟ; ತಂಬಿಗೆ.

ಚೊಗ್ಚಿ (ನಾ)= ಚಗಚೆ; ಒಂದು ಪ್ರಕಾರದ ಕಾಡು ತರಕಾರಿ ಸೊಪ್ಪು.

ಚೊಚ್ಚಿಲು (ನಾ)= ಮೊದಲನೆಯ ಸಂತಾನ; ಪ್ರಥಮ ಮಗು; ಜ್ಯೇಷ್ಠ ಸಂತಾನ.

ಚೊಚ್ಚುಲು (ನಾ)= ಚೊಚ್ಚಿಲು (ನೋಡಿರಿ).

ಚೊಞ ಅನಭ್ಯಾಡ (ನು)= ಮಾತಾಡಬೇಡ; ಬಾಯಿ ಬಿಡಬೇಡ; ಎದುರುತ್ತರ ಕೊಡಬೇಡ.

ಚೊಞ ಮಾತು (ನಾ)= ಅಸಾಧ್ಯ ಮಾತು; ಸುಳ್ಳು ಮಾತು.

ಚೊಟ್ಟ್ಯಾ (ನಾ)= ಚೋರ; ಕಳ್ಳ.

ಚೊಣ್ಣೆ (ನಾ)= ಚಲ್ಲಣ; ಚಣ್ಣ; ಚೊಲೊಣಿ

ಚೊಲೊಣಿ (ನಾ)= ಚೊಣ್ಣೆ (ನೇಗಿಹಾಡು: ಕೆಂಪ ಗುಡ್ಡದ ಮ್ಯಾಲಾ । ಕೆಂಪೆತ್ತು

ಕಾಯುವ । ಕೆಂಪ ಚೊಲ್ಲೊಣಿ ಅಬರಂಗ ಕೋಲೆ)

ಚೋಂಗಿ (ನಾ)ಉ.= ಚೊಂಗಿ; ಚೋಂಗ್ಯಾ; ಮುಸಲ್ಮಾನರು ಹಬ್ಬದ ದಿನದಂದು ಗೋಧಿ ಹಿಟ್ಟು, ಬೆಲ್ಲ ಬೆರೆಸಿ, ನಾದಿ, ಕರಿದು ತಯಾರಿಸುವ ಸಿಹಿ ತಿಂಡಿ.

ಚೋಂಗ್ಯಾ (ನಾ)= ಚೋಂಗಿ (ನೋಡಿರಿ)

ಚೋಕಾ ಮೇಳಾ (ನಾ)= ಚೋಕಾ ಸಂತನ ಹಿಂದಿರುವ ಶಿಷ್ಯರ ತಂಡ.

ಚೋಚುಣ್ಕೆ (ನಾ)= ಕೀಟಲೆ; ಕಾಟ; ತೊಂದರೆ.

ಚೋಜಿಗ (ನಾ)= ಸೋಜಿಗ; ಆಶ್ಚರ್ಯ.

ಚೋಟು (ನಾ)= ಹೆಬ್ಬೆರಳಿನ ತುದಿಯಿಂದ ತೋರುಬೆರಳಿನ ತುದಿಯವರೆಗಿನ ಉದ್ದಳತೆ.

ಚೋಟುದ್ದ (ವಿ)= ಚೋಟಳತೆಯ; ಕಡಿಮೆ ಉದ್ದದ; ಕಡಿಮೆ ಎತ್ತರದ.

ಚೋಟ್ಯಾ (ನಾ)= ಕುಳ್ಳ; ಗಿಡ್ಡ ಕಡಿಮೆ ಎತ್ತರದವ; ಸಣ್ಣವ; ಕುಬ್ಜ.

ಚೋದಿ (ನಾ)= ಸೂಳೆ; ಜಾರಿಣಿ (ಬೈಗುಳ)

ಚೋದಿಕೆ (ನಾ)= ಚೋದಿ ಮಗನೆ; ಸೂಳೆ ಮಗನೆ (ಬೈಗುಳ).

ಚೋದಿಮಗ (ನಾ)= ಸೂಳೆ ಮಗ; ಜಾರಿಣಿ ಮಗ (ಬೈಗುಳ).

ಚೋದೂ (ನಾ)= ಸಂಭೋಗಿಸುವವ; ಲೈಂಗಿಕ ಅತ್ಯಾಸೆಯುಳ್ಳವ; ಪುಕ್ಕಟೆ ಪಡೆಯುವವನು (ಬೈಗುಳ).

ಚೋದ್ಮಣಿ (ನಾ)= ಬೆಲೆ ಬಾಳುವ ಮುತ್ತು; ಚಂಚಲೆ; ಸ್ವೇಚ್ಛಾಚಾರಿಣಿ.

ಚೋಪಾಗು (ಕ್ರಿ)= ಒಂದುಗೂಡು; ಒಟ್ಟುಗೂಡು ಉದಾ: ಮಂದಿ ಒಮ್ಮಿಂದೊಮ್ಮೆ ಚೋಪಾಗಿ ಭೆಂಕಿ ಆರುಸ್ತು.

ಚೋಪು (ನಾ)= ಒಟ್ಟುಗೂಡುವಿಕೆ; ಒಂದಾಗುವಿಕೆ.

ಚೋರ (ನಾ)= ಕಳ್ಳ; ತುಡುಗ.

ಚೋರಿ (ನಾ)= ಕಳವು; ಕಳ್ಳತನ; ತುಡುಗುತನ.

ಚೋರಿಚೋರಿ (ದ್ವಿ)= ಕದ್ದು ಕದ್ದು; ಗುಟ್ಟಾಗಿ.

ಚೋರಿಮಾಲು (ನಾ)= ಕಳವಿನ ಧಾನ್ಯ, ಸಾಮಾನು, ಸರಕು ಇತ್ಯಾದಿ.

ಚೋರ್ಕಿಸ್ಯಾ (ನಾ)= ಗುಪ್ತಜೇಬು; ಕಳ್ಳ ಜೇಬು.

ಚೋರ್ಖಿಂಡಿ (ನಾ)= ಕಳ್ಳ ಕಿಂಡಿ; ಗುಪ್ತದ್ವಾರ.

ಚೋರ್ಬಜಾರ (ನಾ)= ಕಳ್ಳ ಸಂತೆ; ಕಳವಿನ ಮಾಲು ಮಾರಾಟ ಮಾಡುವಸಂತೆ.

ಚೋಳಖಣ (ನಾ)= ಕುಪ್ಪಸದ ಹೊಸ ಬಟ್ಟೆ.

ಚೋಳವ್ವ (ನಾ)= ಹಳೆಯ ಕಾಲದ ಮಹಿಳೆಯರಿಗಿಡುವ ಹೆಸರು.

ಚೋಳಾಯಿಸು (ಕ್ರಿ)= ಮಸಾಜು ಮಾಡು; ಒರೆಸು; ತಿಕ್ಕು; ಮುರಿದ ಎಲುಬನ್ನು ಸರಿಪಡಿಸಿ ಒರೆಸು.

ಚೋಳಿ (ನಾ)= ಕುಪ್ಪಸ; ಬ್ಲೌಜು.

ಚೌ (ನಾ)= ರುಚಿ.

ಚೌಕ (ನಾ)= ಚಚೌಕ; ಚೌರಸ್ತೆ; ಚೌಕು; ಚತುಷ್ಕ.

ಚೌಕಟ್ಟು (ನಾ)= ನಾಲ್ಕು ಮೂಲೆಯ ಕಟ್ಟಿಗೆಯ ಕಟ್ಟು.

ಚೌಕಡಿ (ನಾ)= ನಾಲ್ಕರ ಗುಂಪು; ಚಾಂಡಾಲ ಚೌಕಡಿ; ಚೌಕಾಕಾರದ್ದು.

ಚೌಕಾ (ನಾ)= ಇಷ್ಟಲಿಂಗದ ಕಾಯಿ; ಗುಂಡ್ಗಡಿಗೆ; ಕರಡಿಗೆ.

ಚೌಕಾರಿ ಭೀಳು (ಕ್ರಿ)= ನಾಗಾಲೋಟ ಓಡು; ವೇಗವಾಗಿ ಓಡು.

ಚೌಕಾಶಿ (ನಾ)= ಒರೆಗೆ ಹಚ್ಚುವಿಕೆ; ಪರೀಕ್ಷಿಸುವಿಕೆ; ಧಾರಣೆ ಹೊಂದಿಸುವಿಕೆ (ಪ್ರಾಸ: ಕುಡ್ಡಕುನಾಶಿ। ಕುಂಡೆಗನಾಶಿ। ರುಪ್ಪೈ ಎಣುಸ್ತನ ಚೌಕಾಶಿ)

ಚೌಕಾಶಿ ಮಾಡು (ಕ್ರಿ)= ಒರೆಗೆ ಹಚ್ಚು; ಪ್ರಯತ್ನಿಸು; ಧಾರಣೆ ಹೊಂದಿಸು; ಕೋಶೀಸು ಮಾಡು; ಪರೀಕ್ಷಿಸು.

ಚೌಕಿದಾರ (ನಾ)= ಕಾವಲುಗಾರ; ಪಹರೆದಾರ.

ಚೌಕಿಮಣಿ (ನಾ)= ಚೌರಂಗ; ನಾಲ್ಕು ಕಾಲಿನ ಪೀಠ, ಮಣೆ.

ಚೌಕೋನಿ (ವಿ)= ನಾಲ್ಕು ಮೂಲೆಯುಳ್ಳ.

ಚೌಡಕ್ಕಿ (ನಾ)= ಚೌಡಿಕ್ಯ, ಒಂದು ಪ್ರಕಾರದ ವಾದ್ಯ.

ಚೌಡಕ್ಕಿಮ್ಯಾಳ (ನಾ)= ಚೌಡಿಕೆ ವಾದ್ಯ ಬಾರಿಸುತ್ತ ಹಾಡುವವರ ಮೇಳ.

ಚೌಡಾಯಿ (ನಾ)ಉ.= ಅಗಲ; ಅಗಲಳತೆ.

ಚೌತಿ (ನಾ)= ಚೌಥಿ; ಚತುರ್ಥಿ; ಭಾಪ್ರಪದ ಶುಕ್ಲದ ಗಣೇಶ ಚೌಥಿ ಹಬ್ಬ; ಚೌತಿ ಅಮಾವಾಸೆ ಶ್ರಾವಣ ಅಮಾವಾಸ್ಯೆ.

ಚೌತೈ (ನಾ)= ಚೌಥಯಿ; ೧/೪ ಭಾಗ; ಕಾಲುಭಾಗ.

ಚೌಥಾ (ವಿ)= ನಾಲ್ಕನೆಯ.

ಚೌದಾ (ನಾ)= ಹದಿನಾಲ್ಕು; ಚತುರ್ದಶ;

ಚೌದಾಪುಡಿ (ನಾ)= ಗಿಡಮೂಲಿಕೆ; ಗಿಡಗಸರ

ಚೌದಾಪುಡಿದುಕಾನು (ನಾ)= ಗಿಡ-ಮೂಲಿಕೆ ಅಥವಾ ಗಿಡ್ಡಗಸರ ಮಾರಾಟದ ಅಂಗಡಿ.

ಚೌಧುರಿ (ನಾ)= ಕಟುಕರ ಮುಖಂಡ.

ಚೌಪಟ್ಯಾಗು (ಕ್ರಿ)= ಓಡಿ ಹೋಗು.

ಚೌಪಟ್ಟು (ನಾ)= ನಾಲ್ಕು ಪಟ್ಟು.

ಚೌಪದನ (ನಾ)= ನಾಲ್ಕು ಪಾದ ವುಳ್ಳ ಹಾಡು; ಚೌಪದಿ.

ಚೌಪಳಾ (ನಾ)= ನಾಲ್ಕು ಬಟ್ಟಲುಳ್ಳ ರಂಗೋಲಿ, ಕುಂಕುಮ, ಅರಿಷಿಣ ಇತ್ಯಾದಿ ಇಡುವ ಸಾಧನ.

ಚೌಫೇರಿ ಭೀಳು (ಕ್ರಿ)= ಫರಕ ಆಗು; ವ್ಯತ್ಯಾಸ ಉಂಟಾಗು; ಕೆಲಸ ಕೆಡು.

ಚೌಬಾರಾ (ನಾ)= ಬೀದರಿನ ನಾಲ್ಕು ದಾರಿಗಳ ಮಧ್ಯದ ಗಡಿಯಾರದ ಶಿಖರ.

ಚೌಭಾಷಾ (ನಾ)= ನಾಲ್ಕು ಭಾಷೆ; ಕನ್ನಡ, ತೆಲುಗು, ಮರಾಠಿ; ಉರ್ದು.

ಚೌರಂಗ ಮಣಿ (ನಾ)= ಚೌಕಿಮಣಿ; ನಾಲ್ಕು ಕಾಲಿನ ಪೀಠ.

ಚೌರಸ್ತಾ (ನಾ)= ನಾಲ್ಕುರಸ್ತೆಗಳು ಕೂಡುವ ಚೌಕು, ವರ್ತುಳ.

ಚೌರಿ (ನಾ)= ಬೀಸಣಿಕೆ; ಗಾಳಿ ಬೀಸುವ ಸಾಧನ; ರಾಜ ಮಹಾರಾಜರು ಮತ್ತು ಗುರು ಜಗದ್ಗುರುಗಳಿಗೆ ಗಾಳಿ ಹಾಕುವ ಸಾಧನ; ಚಾಮರ.

ಚೌರ್ಯಾಂಯ್ಸಿ (ನಾ.)= ಎಂಬತ್ತು ನಾಲ್ಕು.

ಚೌರ್ಯಾಯ್ಸಿಲಾಖ (ನಾ)= ಎಂಬತ್ನಾಲ್ಕು ಲಕ್ಷ ಉದಾ: ಚೌರ್ಯಾಯ್ಸಿ ಲಾಖ ಜೀವ್ರಾಸಿಗಿ, ಶಂಭುವು ಕಾಣುತಾನ ಕಡಿನಡೆಸಿ.

ಚೌಲಿ (ನಾ)= ಚವಲಿ; ನಾಲ್ಕಾಣೆ ನಾಣ್ಯ.

ಚೌವಾ (ವಿ.)= ನಾಲ್ಕಂಕಿಯ ಇಸ್ಪೀಟಿನ ಎಲೆ.

ಚೌಸಟಿ ಇದ್ಯ (ನಾ)= ಅರವತ್ನಾಲ್ಕು ವಿದ್ಯಗಳು.

ಚೌಳಿ (ನಾ)= ಚವಳಿ ಎಂಬತರಕಾರಿ ಕಾಯಿ; ಚೌಳಿಮುತ್ಯಾ ಎಂದೇ ಭಕ್ತರ ಬಾಯಲ್ಲಿರುವ ಗಣೇಶ ಅವಧೂತ ಮಹಾರಾಜರ ಕರ್ಮ ಕ್ಷೇತ್ರವುಳ್ಳ ಊರು.

ಚ್ಯಪ್ಪ (ನಾ)= ಚಪ್ಪಳ; ಚಪಲ ಗುಣದವ; ಚುರಕುತನ ಉಳ್ಳವ.

ಚ್ಯಂಚಿ (ನಾ)= ಚ್ಯಾಂಚಿ (ನೋಡಿರಿ)

ಚ್ಯಾಂಚಿ (ನಾ)= ಚಾಂಚಿ; ಎಲೆ, ಅಡಕೆ, ತಂಬಾಕು, ಸುಣ್ಣ, ಕಾಚು ಇತ್ಯಾದಿ ಇಟ್ಟುಕೊಳ್ಳುವ ಸಣ್ಣಚೀಲ; ಸಂಚಿ.

ಚ್ಯಾಂಬಾಳ (ನಾ)= ಪ್ರಸಿದ್ಧಲಿಂಗಾಯತ ಮಠವುಳ್ಳ ಪ್ರಾಚೀನ ಕಾಲದ ಊರು.

ಚ್ಯಾಜಾ (ನಾ)= ಗೌರವ ಕಾಣಿಕೆ.

ಚ್ಯಾಜಾಕುಡು (ಕ್ರಿ)= ಕಾಣಿಕೆ ಕೊಟ್ಟು ಗೌರವಿಸು.

ಚ್ಯಾರಿ (ನಾ)= ಅಂಗೈ ತುಂಬ ಹಿಡಿಸುವಷ್ಟು ಕಾಳು, ಸಕ್ಕರೆ, ಹಿಟ್ಟು ಇತ್ಯಾದಿ ಅಳತೆ ಮಾನ; ನಾಲ್ಕು; **ಉದಾ: ಶಿಶುಪ್ರಾಸ;** ಅಕಲಂ। ದುಕಲಂ। ತೀನೀ। ಚ್ಯಾರಿ। ಚಮ್ಮನ ಬೇಟಾ। ಧಾನಾಧೂನಾ। ಕಿಸ್ತಿ ಮುಸ್ತಿ ಪುಕಾಲ॥

ಚ್ಯಾಲಿ (ನಾ)= ಸರಕಾರದಿಂದ ಸಿಕ್ಕ ಕಾಣಿಕೆಯ ಜಮೀನು; ಇನಾಮತಿ.

ಚ್ಯೂತ್ಯಾ (ನಾ) ಹಿಂ. = ಷಂಡ.

ಛ

ಛಂಗಂತ (ಅ)= ಚಂಗನೆ; ಟಣ್ಣನೆ

ಛಂದ (ನಾ)= ಚಂದ; ಅಂದ; ಚೆಲುವು (ಗಾದೆ: ಛಂದ ಇಲ್ದಛಂದ, ಅದಕ್ಯಾಕ ಫಂದ?)

ಛಂದಗೇಡಿ (ನಾ)= ಚಂದಗೇಡಿ; ಚಂದಗೆಟ್ಟವನು(ಳು); ಛಂದ್ಗೇಡಿ.

ಛಂದಾಬಣ್ಣಾ (ನಾ)= ಸಿಂಗಾರ; ಶೃಂಗಾರ

ಛಂದಾ ಬಣ್ಣಾ ಮಾಡು (ಕ್ರಿ)= ಸಿಂಗರಿಸು; ಸಿಂಗಾರ ಗೊಳಿಸು.

ಛಂದ್ಗೇಡಿ (ನಾ)= ಛಂದಗೇಡಿ (ನೋಡಿರಿ).

ಛಕಛಕ (ದ್ವಿ)= ಚಕಚಕ; ಥಳಥಳ.

ಛಕಳಿ (ನಾ)= ಚಕಳೆ; ಮಣ್ಣಿನ ಹಕ್ಕಳಿಕೆ; ಹುಣ್ಣಿನ ಮೇಲಿನ ಪದರು.

ಛಕಾ (ನಾ)= ಸೆಕೆ; ಸೂಚನೆ; ಪ್ರಭಾವ.

ಛಕಿ (ನಾ)= ಬೆಂಕಿ ಕಾವಿನ ಪ್ರತಾಪ.

ಛಕ್ಕಾ (ನಾ)= ಆರು ನಂಬರಿನ ಇಸ್ಪೀಟೆಲೆ; ಸಿಕ್ಸರ್; ಆರು ಓಟದ ಬಾಂಡ್ರಿ ಹೊಡೆತ.

ಛಕ್ಕಾಛುಟಾಸು (ಕ್ರಿ)= ಎದೆಯೊಡೆ.

ಛಕ್ಕಾ ಛುಡಾಸು (ಕ್ರಿ)= ಅಂಜಿಸು; ಎದೆ ಒಡೆಯುವಂತೆ ಮಾಡು.

ಛಕ್ಡಿ (ನಾ)= ಚಕ್ಕಡಿ; ಎರಡೆತ್ತಿನ ಬಂಡಿ; ಎತ್ತಿನ ಬಂಡಿ.

ಛಕ್ಕಾ (ನಾ)= ಜಾಣ್ಯಾ; ಷಂಡ; ನಪುಂಸಕ.

ಛಜ್ಜಾ (ನಾ)= ಗೋಡೆಯಲ್ಲಿ ಮುಂಚಾಚಿದ ಭಾಗ.

ಛಜ್ಜೆ (ನಾ)= ಸಜ್ಜೆ.

ಛಜ್ಜುಕ (ನಾ)= ಸಜ್ಜುಕ; ಶೀಕಾ; ಕೇಸರಿಭಾತ.

ಛಟಛಟ (ದ್ವಿ)= ಚಟಚಟ (ಹುರಿಯುವ ಸದ್ದು); (ಅತಿ) ಬಿಸಿಲು; ಸೆಕೆ

ಛಟಾಕು (ನಾ)= ಅಳತೆಯ ಇಲ್ಲವೆ ತೂಕದ ಒಂದು ಮಾನ; ಐವತ್ತು ಗ್ರಾಮ.

ಛಟಾಕಿ (ನಾ)= ಸಣ್ಣವಳು; ಕುಬ್ಜೆ; ಕುಳ್ಳಿ.

ಛಟಾಕ್ಯಾ (ನಾ)= ಕುಳ್ಳ; ಗಿಡ್ಡ; ಸಣ್ಣವ (ಬೈಗುಳ)

ಛಟಾಸು (ಕ್ರಿ)= ಕಡಿದು ಕೆತ್ತಿ ಸಮತಲಮಾಡು.

ಛಟ್ಟಿ (ನಾ)= ಚಟ್ಟಿ; ಷಷ್ಠೀ; ಆರನೆಯ ದಿನ; ಎಳ್ಳಮಾವಾಸ್ಯ ಮುನ್ನ ಬರುವ ಅಮಾವಾಸ್ಯ; ಬೀದರ ಜಿಲ್ಲೆಯ ಮೈಲಾರ ಮಲ್ಲಯ್ಯನ ಜಾತ್ರೆ ಪ್ರಾರಂಭಗೊಳ್ಳುವ ಮಾಸ.

ಛಟ್ಟಿ ಅಮಾಸಿ (ನಾ)= ಎಳ್ಳಮಾವಾಸ್ಯೆಗೆ ಮುನ್ನ ಬರುವ ಅಮಾವಾಸ್ಯ; ಮೈಲಾರ ಮಲ್ಲಯ್ಯನ ಭಕ್ತರು ಮಲ್ಲಯ್ಯನ ಕೊಟಮ್ಗಿ ತುಂಬುವ ಶಾಸ್ತ್ರ ಮಾಡುವ ಅಮಾವಾಸ್ಯೆ, ಷಷ್ಠಿಹಬ್ಬ.

ಛಡಿ (ನಾ)= ಬೆತ್ತದ ಪೋಕಾ; ಎಳೆಯದಾದ ಮೆತ್ತಗಿನ ಲಕ್ಕೆಯ ಕಟ್ಟಿಗೆ.

ಛಡಿಭಾರ್ಸು (ಕ್ರಿ)= ಬೆತ್ತದಿಂದ ಹೊಡೆ.

ಛಡ್ಯಾಲ (ನಾ)= ಕಬ್ಬಿನ ತೋಟದ ಸುತ್ತ ಬೆಳೆಸುವ ಎತ್ತರವಾಗಿ ಹಾಗೂ ಸಬೂಳಾಗಿ ಇರುವ ಗಿಡ.

ಛತ್ತೀಸಾಕ್ದಾ (ನಾ)= ಮೂವತ್ತಾರರ ಸಂಖ್ಯೆ; ಒಬ್ಬರಿಗೊಬ್ಬರು ಸೇರಲಾರದವರು; ವಿರೋಧಿ.

ಛತ್ತು (ನಾ)= ಮಾಳಿಗೆ; ಮೇಲ್ಛಾವಣಿ

ಛತ್ತುರ್ದಶಿ (ನಾ)= ಪಕ್ಷದ ೧೪ನೇ ದಿನ; ಚತುರ್ದಶಿ; ಮಾಸ ಶಿವರಾತ್ರಿ.

ಛತ್ತು ಹಾಕು (ಕ್ರಿ)= ಮಾಳಿಗೆ ಹೇರು.

ಛತ್ತುರ್ಕಿ (ನಾ)= ಛತ್ರಿ; ಸತ್ತಿಗೆ; ಕೊಡೆ.

ಛತ್ರಪತಿ (ನಾ)= ರಾಜ; ದೊರೆ; ಶಿವಾಜಿ ಮಹಾರಾಜರಿಗೆ ಕೊಡಲಾದ ಬಿರುದು, ಪದವಿ.

ಛತ್ರಿ (ನಾ)= ಸತ್ತಿಗೆ; ಕೊಡೆ

ಛದಾಮ (ನಾ)= ಬದಮಾಸ; ಲಫಂಗ; ತುಂಟ.

ಛದಾಮಗುಣ (ನಾ)= ಕೊಳಕು ಗುಣ; ಹೀನಗುಣ; ಲಫಂಗ ತನ.

ಛದಾಮನಾಗು (ಕ್ರಿ)= ಕೊಳಕು ಗುಣದವನಾಗು; ಹೀನಗುಣದವನಾಗು; ಲಫಂಗನಾಗು.

ಛನನನ (ಅ)= ನಾಣ್ಯಗಳ ನಾದ; ನಾಣ್ಯರಾಶಿ ಬೀಳುವಿಕೆ.

ಛನಾಸು (ಕ್ರಿ)= ಜಲ್ಲಡಿ ಹಿಡಿ; ಸೋಸು; ಶೋಧಿಸು.

ಛನ್ನಿ (ನಾ)= ಜಲ್ಲಡಿ; ಝುಲುಡಿ; ಛಾನಾ; ತಬಲಾ ಜೋಡಿಯಲ್ಲೊಂದು.

ಛನ್ನಿ ಮಾಡು (ಕ್ರಿ)= ಜಲ್ಲಡಿ ಹಿಡಿ; ರೇತಿ, ಹಿಟ್ಟು ರವೆ ಇತ್ಯಾದಿಗಳನ್ನು ಜಲ್ಲಡಿಯಿಂದ ಶೋಧಿಸು, ಸೋಸು.

ಛಪಛಪ (ದ್ವಿ)= ಸಪಸಪ (ಹೊಡೆಯುವ ಸದ್ದು)

ಛಪರಾಸಿ (ನಾ)= ಚಪರಾಸಿ; ಸಿಪಾಯಿ; ಕಚೇರಿ ಸೇವಕ.

ಛಪಾವಣಿ (ನಾ)= ಮುದ್ರಣ ಕಾರ್ಯ; ಅಚ್ಚುಗೊಳಿಸುವಿಕೆ

ಛಪಾಸು (ಕ್ರಿ)= ಮುದ್ರಿಸು; ಅಚ್ಚುಗೊಳಿಸು

ಛಪ್ಪನ್ನ (ನಾ)= ಐವತ್ತಾರು (ನೀ ಇಲ್ದುರ ಮತ್ತೊಬಾಕಿ, ಛಪ್ಪನ್ನು ಹೆಣ್ಣು ತರ್ತಾ ಗೊತ್ರಾ).

ಛಪ್ಪನ್ನಾರು ರಾಜವಾಡೆ (ನಾ)= ಐವತ್ತಾರು ರಾಜ್ಯಗಳು (ಬಯಲಾಟದ ಮಾತು).

ಛಪ್ಪರ (ನಾ)= ಚಪ್ಪರ; ಹುಲ್ಲಿನಿಂದ ಹೊದಿಸಿದ ಛಾವಣಿ.

ಛಪ್ಪರಪಲಂಗು (ನಾ)= ಮಚ್ಛರ್ದಾನಿ ಇರುವ ಮಂಚ; ಸೊಳ್ಳೆಪರದೆಯುಳ್ಳ ಮಂಚ.

ಛಪ್ಪ ರ್ಬದಿ (ನಾ)= ಚಪ್ಪರ ಹೊದಿಸುವಿಕೆ.

ಛಪ್ಪರ್ಬದ್ನಿ (ನಾ)= ಹಂದರ ಬದನೆ; ಕತ್ರಿಬದನೆ; ಟಮಾಟ.

ಛಪ್ಪಾ (ನಾ)= ಛಾಪು; ಮುದ್ರೆ.

ಛಪ್ಪಿಬ್ಯಾನಿ (ನಾ)= ಹೆಗಲಿನ ಕೆಳಗಿನ ಬೇನೆ

ಛಪ್ಪಾ (ನಾ)= ಹೆಗಲ ಕೆಳಗಿನ ಬೆನ್ನೆಲುಬು.

ಛಪ್ರ (ನಾ)= ಚಪ್ಪರ

ಛಪ್ರಾಸಿ= ಚಪರಾಸಿ; ಸಿಪಾಯಿ; ಜವಾನ; ಸೇವಕ.

ಛಮ್ ಛಮ್ (ದ್ವಿ)= ಗೆಜ್ಜೆನಾದ; ನಾಣ್ಯಗಳನಾದ.

ಛರ್ರ= ತುಂಟ; ಹರಾಮ; ಜಗಳಗಂಟ.

ಛರ್‍ರ್ಯಾ (ನಾ)= ವಾಹನಗಳ ಗಾಲಿಗಳಲ್ಲಿ ಬಳಸಲಾಗುವ ಉಕ್ಕಿನ ಜಾರು ಗುಂಡುಗಳು.

ಛಲ (ನಾ)= ಹಟ; ದೃಢ ನಿಶ್ಚಯ.

ಛಲೊ (ನಾ)= ಚಂದ; ಉತ್ತಮ.

ಛಲ್ಲಾಟ (ನಾ)= ಚೆಲ್ಲಾಟ; ಸಿಕ್ಕಕಡೆ ಎಸೆಯುವಿಕೆ; ಬಿಸಾಡುವಿಕೆ.

ಛಲ್ಲು (ಕ್ರಿ)= ಚೆಲ್ಲು; ಹರಡು; ಸಿಕ್ಕಕಡೆ ಎಸೆ; ಬಿಸಾಡು.

ಛಳಿ (ನಾ)= ಚಳಿ; ಶೀತ.

ಛಳಿಗಾಲ (ನಾ)= ಚಳಿಗಾಲ; ಚಳಿ ಹೆಚ್ಚಾಗಿರುವ ಕಾಲ; ಶೀತಕಾಲ.

ಛಳಿ ಭೀಳು (ನಾ)= ಜೋಳದ ಬೆಳೆಗೆ ರೋಗ ಬೀಳು.

ಛಳಿರ್ವಾಗಾ (ನಾ)= ಚಳಿರೋಗ; ಬಿಳಿ ಜೋಳದ ಬೆಳೆಗೆ ಬರುವ ಚಳಿ ರೋಗ.

ಛಳಿ ಹೊಡಿ (ಕ್ರಿ)= ಚಳಿಹಾಕು; ಸೆಗಣಿಯ ರಾಡಿಯನ್ನು ಸಿಂಪಡಿಸು; ನೀರು ಸಿಂಪಡಿಸು

(ಹಾದಿಗೆ ಹಂದ್ರ ಹಾಕಿ ಬೀದಿಗಿ ಛಳಿ ಹೊಡ್ದೂರು).

ಛಳುಕ್ಕನು (ಕ್ರಿ)= ಛಳ್ಳನು (ನೋಡಿರಿ)

ಛಳ್ಗಾಲ (ನಾ)= ಚಳಿಗಾಲ; ಶೀತಕಾಲ (ಗಾದೆ: ಮಳ್ಗಾಲ್ದಾಗ ಮನಿ ನೋಡ್ಬಾರ್ದು ಛಳ್ಗಾಲ್ದಾಗ ಹೆಣ್ಣು ನೋಡ್ಬಾರ್ದು).

ಛಳ್ಳನು (ಕ್ರಿ)= ಉಳುಕು; ಕುತ್ತಿಗೆ ಅಥವಾ ಕಾಲು ಉಳುಕು; ಹೊರಳಿದಂತಾಗು; ನೋವಾಗು; ಏಕಾಏಕಿ ನೋವಾಗು.

ಛಾಛೂ (ನಾ)= ಮಂತ್ರ ಹಾಕುವಿಕೆ; ಮಂತ್ರಿಸುವಿಕೆ; ಮಂತ್ರ.

ಛಾಛೂ ಮಾಡು (ಕ್ರಿ)= ಮಂತ್ರಿಸು.

ಛಾಟಿ (ನಾ)= ಸಣ್ಣ ಅಂಗಿ; ಒಳ ಅಂಗಿ; ಬನೀನು; ಸಣ್ಣ ತೋಳಿನ ಅಂಗಿ.

ಛಾಡಿ (ನಾ)= ಚಾಡಿ; ನಿಂದೆ; ಭಾನಾಮತಿ; ಕೇಗಾಮತಿ; ಮಾಟ ಮಂತ್ರ (ಗಾದೆ: ಅಪ್ಪಗ ಛಾಡಿ ಮಾಡಿ ಅವ್ವನ ಸೋಬ್ತಿ ಆಥಂಗ!).

ಛಾಡಿ ಮಾಡು (ಕ್ರಿ)= ಭಾನಾಮತಿ ಮಾಡು; ಮಾಟ ಮಂತ್ರ ಮಾಡು (ಛಾಡಿ ನೋಡಿರಿ).

ಛಾಡಿ ಹೇಳು (ಕ್ರಿ)= ನಿಂದೆಯಾಡು; ಚುಗ್ಲಿಯಾಡು.

ಛಾಣಾ (ನಾ)= ಚಾಣ; ಕಲ್ಲು ಒಡೆವ, ಕಬ್ಬಿಣ ಕಡೆವ ಉಳಿ.

ಛಾತಾ (ನಾ)= ಛಾತಿ; ಎದೆ; ಧೈರ್ಯ; ಎದೆಯಳತೆ.

ಛಾತಿ (ನಾ)= ಎದೆ; ಧೈರ್ಯ; ಛಾತಾ;

ಛಾನಸಿ (ನಾ)= ಸ್ವಚ್ಛಂದ ವಿಚಾರ-ದವನು(ಳು); ಹರಾಮ; ಸಮಯ ಸಾಧಕ; ಖ್ಯಾಲಬೈರಿ.

ಛಾಪಾ (ನಾ)= ಹಿಂ. ಮುದ್ರಣ; ಅಚ್ಚು.

ಛಾಪಾಖಾನಿ (ನಾ)= ಹಿಂ. ಮುದ್ರಣಾಲಯ; ಅಚ್ಚು ಕೂಟ.

ಛಾಪಾಹೊಡಿ (ಕ್ರಿ)= ಮುದ್ರಿಸು; ಪ್ರಭಾವ ಬೀರು; ಮುದ್ರೆ ಹಾಕು.

ಛಾಪು (ನಾ)= ಹಿಂ. ಪ್ರಭಾವ.

ಛಾಪು ಒತ್ತು (ಕ್ರಿ)= ಪ್ರಭಾವ ಬೀರು.

ಛಾಯಾ (ನಾ)= ಹಿಂ. ನೆರಳು; ಪ್ರತಿಬಿಂಬ; ವರ್ಚಸ್ಸು; ಸಾದೃಶ್ಯ; ಹೋಲಿಕೆ; ಪ್ರಭಾವ.

ಛಾಯಾಭೀಳು (ಕ್ರಿ)= ನೆರಳಾಗು; ಪ್ರಭಾವ ಬೀರು.

ಛಾವಣಿ (ನಾ)= ಹಿಂ. ಆಸರೆ; ದಂಡಿನ ಬೀಡು; ಛತ್ತು.

ಛಾಷ್ಟಿ (ನಾ)= ಚೇಷ್ಟೆ; ಕುಚೇಷ್ಟೆ.

ಛಿಂಪುಡ್ಸು (ಕ್ರಿ)= ಸಿಂಪಡಿಸು; ಚಳಿಹಾಕು; ತಳಿ ಸಿಂಪಡಿಸು.

ಛಿಚೋರಾ (ನಾ)= ಹಿಂ. ಹುಡುಗಾಟಿಕೆ ಸ್ವಭಾವದವನು (ಳು); ಪೋರಾಬಟ್ಟೆ; ಪಾರಾಬಟ್ಟೆ.

ಛಿಡಾಸು (ಕ್ರಿ)= ಹಿಂ ಕೆಣಕು; ಛೇಡಿಸು; ಚುಡಾಯಿಸು.

ಛಿಡಿ (ನಾ)= ಹಿಂ. ಮೆಟ್ಟಲು; ನಿಚ್ಚಣಿಕೆ; ಸೀಡಿ.

ಛಿಡಿ ಆಡು (ಕ್ರಿ)= ಘತ್ತರ್ಗಿ ಬಾಯಮ್ಮನ ಎದುರು ನಡದ ಮಣಿಕಟ್ಟಿಗೆ ಕೊಕ್ಕೆ ಸಿಕ್ಕಿಸಿಕೊಂಡು ನೇತಾಡಿ ಹರಕೆ ಸಲ್ಲಿಸು.

ಛಿಡಿಕಟ್ಟಿ (ನಾ)= ಪ್ರವೇಶ ದ್ವಾರದ ಮೆಟ್ಟಲು; ಪಡ ಸಾಲೆಯ ಮೆಟ್ಟಲು;

ಮಾಳಿಗೆಯ ಮೆಟ್ಟಲು. (ಉ : ನಿಮ್ಮ ಮನೀದು ಭಿಡಿಕಟ್ಟೆ ವಿರಾಲ, ತಿಳಿತಾ?)

ಭಿಡಿದಾಡು (ಕ್ರಿ)= ಹಾರಾಡು; ನೆಗೆದಾಡು; ಎಗರಾಡು; ಕುಣಿದಾಡು.

ಭಿಡಿಮುಳ್ಳು (ನಾ)= ಸಿಡಿದು ಬಂದು ನೆಡುವ ಮುಳ್ಳು; ಸಿಡಿ ಮುಳ್ಳು.

ಭಿಡಿಯಾಡು (ನು)= ಘತ್ತರ್ಗಿ ಭಾಗ್ಯವಂತಿ ದೇವಿ ಎದುರು ಬಂಡಿಗೆ ಜೋತು ಬಿದ್ದು ತೂಗಾಡುವ ಹರಕೆ ಸಲ್ಲಿಸು.

ಭಿಡಿಯೇರು=(ಕ್ರಿ) ಮೆಟ್ಟಲು ಹತ್ತು.

ಭಿಡ್ಡಾಡು= ಸಿಡಿದಾಡು.

ಭಿಡ್ಸು (ಕ್ರಿ)= ಸಿಡಿಸು; ಹಾರಿಸು; ಮೈಮೇಲೆ ನೀರು, ರಾಡಿ, ಬಣ್ಣ ಇತ್ಯಾದಿ ಸಿಂಪಡಿಸು.

ಭಿಣಿ (ನಾ)= ಚಿಣಿ; ಚಿಲ್ಲಿ; ಗಿಲ್ಲಿ.

ಭಿನಾಲಿ (ನಾ) ಹಿಂ.=ಹಣಕಸಿಯುವ ಸೂಳೆ.

ಭಿನಾಲ್ಯಾ (ನಾ)= ಹಿಂ= ಹೆಣ್ಣಿನ ಸ್ವಭಾವದ ಗಂಡು; ಸಲಿಂಗ ರತಿಯ ಗಂಡು.

ಭೀಗುಟ್ಟು (ಕ್ರಿ)= ಅಪಮಾನಿಸು; ಧಿಕ್ಕರಿಸು; ತಿರಸ್ಕರಿಸು.

ಭೀಕಾ (ನಾ)= ಹಿಂ= ಚಹದ ಗ್ಲಾಸುಗಳನ್ನು ಒಯ್ಯುವ ಕಬ್ಬಿಣ ಅಥವಾ ಹಿತ್ತಾಳೆಯ ಸಾಧನ.

ಭೀಭೀ (ಅ)= ಥೂ ಥೂ; ಧಿಕ್ಕಾರ; ತಿರಸ್ಕಾರ ಸೂಚಕ ನುಡಿ.

ಭೀಟಾ (ನಾ)= ಹಿಂ; ಚುಕ್ಕೆ; ಚುಕ್ಕಿ ಚುಕ್ಕಿ ಯಾದ

ಭೀಟಾದಾರ (ನಾ) ಹಿಂ= ಚುಕ್ಕೆ ಬಿದ್ದಿರುವ; ಕಳಿತ (ಬಾಳೆ ಹಣ್ಣು).

ಭೀಟಾ ಭೀಳು (ಕ್ರಿ)= ಚುಕ್ಕೆ ಚುಕ್ಕೆಯಾಗು.

ಭೀಟು (ನಾ) ಹಿಂ= ಮುದ್ರಿಸಿದ ಬಟ್ಟೆ; ಪ್ರಿಂಟುಬಟ್ಟೆ.

ಭೀಟು ಹೊಡಿ (ಕ್ರಿ)= ಮುದ್ರಿಸು; ಬಟ್ಟೆ ಮೇಲೆ ಛಾಪಾ ಒತ್ತು.

ಭೀಟೆದಾರ (ನಾ) ಹಿಂ= ಭೀಟಾದಾರ (ನೋಡಿರಿ)

ಭೀ ತೆಗಿ (ಅ)= ಛೀಹೋಗು; ಥೂ ನಿನ್ನ.

ಭೀಥೂ (ಅ)= ಅವಮಾನ; ಧಿಕ್ಕಾರ.

ಭೀಥೂ ಮಾಡು (ಕ್ರಿ)= ಅವಮಾನಿಸು; ಧಿಕ್ಕರಿಸು.

ಭೀಮಾರಿ (ನಾ)= ಛೀಥೂ ಹಾಕಿಸಿ-ಕೊಳ್ಳುವವನು(ಳು) (ಸರ್ವಜ್ಞ ವಚನ; ಚಿಂಚೆರಡು ಎತ್ತಾಗಿ ಭೀಮಾರಿ ಸೊಸೆಯಾಗಿ).

ಭುಕುಭುಕು (ದ್ವಿ)= ರೈಲುಬಂಡಿ ನಡೆವ ಸದ್ದು.

ಭುಟಾವ (ನಾ)= ಹುಡುಗಾಟದವ; ಪಾರಾಬಟ್ಟೆ; ಪೋರಾಬಟ್ಟೆ.

ಭುಟಾವಗಿರಿ (ನಾ)= ಹುಡುಗತನ; ಪೋರ್ಖೇಳ.

ಭುಟಾಸು (ಕ್ರಿ) ಹಿಂ= ಬಿಡು; ಬಿಡಿಸು.

ಭುಟ್ಕಾರಾ (ನಾ) ಹಿಂ = ಬಿಡುಗಡೆ; ಮುಕ್ತಿ.

ಭುಟ್ಬಾ (ನಾ) ಹಿಂ= ಚಿಲ್ಲರೆ; ಬಿಡಿನಾಣ್ಯ.

ಭುಟ್ಟಿ (ನಾ) ಹಿಂ=ಸೂಟಿ; ಬಿಡುವು; ರಜೆ.

ಭುಡಾಸು (ಕ್ರಿ) ಹಿಂ= ಬಿಡಿಸು; ಮುಕ್ತಿಗೊಳಿಸು.

ಭುಪಾರುಸ್ತುಮ (ನಾ) ಹಿಂ= ಗುಪ್ತ ಜಟ್ಟಿ; ಬೂದಿ ಮುಚ್ಚಿದ ಕೆಂಡ.

ಭುಪಾಸಿಡು (ಕ್ರಿ) ಹಿಂ= ಮುಚ್ಚಿಡು; ಬಚ್ಚಿಡು.

ಭುಪಾಸು (ಕ್ರಿ) ಹಿಂ= ಮುಚ್ಚು; ಮುಚ್ಚಿಡು; ಕಾಣದಂತೆ ಇಡು.

ಭೂ (ಅ)= ಮೇಲೇರಿ ಹೋಗಲು ನಾಯಿಗೆ ಆದೇಶ.

ಭೂಭಾ (ನಾ)= ಮಂತ್ರ; ಮಂತ್ರಿಸುವ ಕ್ರಿಯೆ.

ಭೂಜಿ (ನಾ)= ಸೂಜಿ; ಹೊಲಿಗೆಗೆ ಬಳಸುವ ಸಾಧನ.

ಭೂಜಿ ಚುಚ್ಚು (ಕ್ರಿ)= ಚುಚ್ಚು ಮದ್ದು ಕೊಡು.

ಭೂಜು (ನಾ)= ಹುಲ್ಲು ಚಪ್ಪರ ಹೊದಿಸುವ ಕಾರ್ಯದಲ್ಲಿ ಬಳಸುವ ಸೂಜಿಯಂತಹ ಉದ್ದಾದ ಕೋಲು, ಸಲಾಕೆ.

ಭೂಜು ಕಟ್ಗ (ನಾ)= ಸೂಜಿಯಂತೆ ಛಪ್ಪರ ಹೊಲಿಗೆಗೆ ಬಳಸುವ ಉದ್ದಕಟ್ಟಿಗೆ.

ಭೂಜು ತಿರುವು (ಕ್ರಿ)= ಭೂಜು ಕಟ್ಟಿಗೆಯ ಕುಣಿಕೆಗೆ ನಾರಿನ ಹುರಿ ಸಿಕ್ಕಿಸಿ ಎಳೆದುಕೊಳ್ಳು.

ಭೂಟು (ನಾ) ಹಿಂ= ಸೋಡಿ; ರಿಬೇಟ.

ಭೂತಭಾತ (ನಾ) ಹಿಂ= ಮುಟ್ಟಿ ತಟ್ಟಿ; ಮಡಿಮೈಲಿಗೆ; ಮುಡಿಚಿಟ್ಟು.

ಭೂ ಬಿಡು (ಕ್ರಿ)= ನಾಯಿಯನ್ನು ಮೈಮೇಲೆ ಏರಿ ಹೋಗುವಂತೆ ಆದೇಶಿಸು.

ಭೂಮಂತ್ರ (ನಾ)= ಬೂದಿ ಬಳಸಿ ಮಂತ್ರಿಸುವಿಕೆ.

ಭೂರಿ (ನಾ) ಹಿಂ= ಚೂರಿ; ಸುರಿಗೆ.

ಭೂ ಹಚ್ಚು (ಕ್ರಿ)= ನಾಯಿಯನ್ನು ಬೆನ್ನು ಹಚ್ಚು.

ಭೆ (ಅ)= ಮೂದಲಿಕೆ; ನಿಷೇಧಗಳನ್ನು ಸೂಚಿಸುವ ಪದ.

ಛೆ (ನಾ) ಹಿಂ= ಆರರ ಅಂಕಿ.

ಛೆಂಜಿ (ನಾ)= ಸಂಧ್ಯಾ; ಸಂಜೆ.

ಛೆಂಜಿಕಿ (ಅ)= ಸಂಜೆಗೆ (ಗಾದೆ: ಮುಂಜೇಳಿ ಬಂದ ಮಳಿ ! ಛಂಜಿಕಿ ಬಂದ ನೆಂಟ ಭೇಗಿ ಹೋಗಾಲ).

ಛೆಂಜಿ ಮುಂದ (ಅ)= ಸಂಜೆಗೆ ಮುನ್ನ.

ಛೆಕಾ (ನಾ)= ಛೆಕಿ; ಸೆಕೆ; ಪ್ರಭಾವ.

ಛೆಕಿ (ನಾ)= ಸೆಕೆ; ಛೆಕಾ; ಪ್ರಭಾವ.

ಛೆಕಿ ಹತ್ತು (ಕ್ರಿ)= ಸೆಕೆಯ ಪ್ರಭಾವವಾಗು; ಅಂಜಿಕೆ ಉಂಟಾಗು.

ಛೆಜ್ಜಿ (ನಾ)= ಸಜ್ಜೆ; ಒಂದು ಪ್ರಕಾರದ ಸಣ್ಣ ಧಾನ್ಯ.

ಛೆಜ್ಜಿಮಾಲ್ದಿ (ನಾ)= ಸಜ್ಜೆರೊಟ್ಟಿ ಕುಟ್ಟಿ ಬೆಲ್ಲ ಬೆರೆಸಿ ಮಾಡಿದ ಆಹಾರ.

ಛೆಟ್ಟಿ (ನಾ)= ಚಟ್ಟಿ; ಚಟ್ಟಿ ಅಮಾವಾಸ್ಯ; ಷಷ್ಠಿ.

ಛೆಡಿ (ನಾ) ಹಿಂ=ಛಡಿ; ಬೆತ್ತ; ಮೆತ್ತಗಿನ ಪೋಕಾ.

ಛೆತ್ತೀಸ (ನಾ)ಹಿಂ. = ಮೂವತ್ತಾರು.

ಛೆಲ್ಲು (ಕ್ರಿ)= ಚೆಲ್ಲು; ಬೀಳುವಂತೆ ಮಾಡು; ಹರಡು; ಚೆಲ್ಲಾಪಿಲ್ಲಿ ಮಾಡು.

ಛೆಲ್ಯಾಕು(ಕ್ರಿ)= ಚೆಲ್ಲಿಬಿಡು; ಎಸೆದು ಬಿಡು; ಬಿಸಾಕು; ಛಿಡ್ಸಾಕು.

ಭೇ ಭೇ (ದ್ವಿ)= ಬೇಡವೇ ಬೇಡ ಎಂಬ ತಿರಸ್ಕಾರ.

ಭೇಡ ಭಾಡ (ನಾ) ಹಿಂ= ಕೆಣಕಾಟ; ಕುಚೇಷ್ಟೆ.

ಭೊಲೊ (ವಿ)= ಚಂದ; ಚಲುವು.

ಭೊಲೊ ಖರಾಬು (ನಾ)= ಒಳ್ಳೆಯದು ಕೆಟ್ಟದ್ದು.

ಭೊಲೊ ನೋಡ್ಕೊ (ನು)= ಸರಿಯಾಗಿ ಆರೈಕೆ ಮಾಡು; ಚೆನ್ನಾಗಿ ಥಳಿಸು; ವಿಶೇಷ ಗಮನ ಕೊಡು.

ಭೋಟಾ ಮೋಟಾ (ವಿ) ಹಿಂ= ಸಣ್ಣಪುಟ್ಟ; ಸಣ್ಣ ಪ್ರಮಾಣದ; ಸಣ್ಣ ಸಣ್ಣ.

ಭೋಟಿ (ನಾ) ಹಿಂ= ಸಣ್ಣ ಹುಡುಗಿಗೆ ಪ್ರೀತಿಯಿಂದ ಸಂಭೋಧಿಸುವಿಕೆ; ಸಣ್ಣಾಕೆ; ಸಣ್ಣವಳು.

ಭೋಟು (ನಾ) ಹಿಂ= ಗಂಡು ಮಗುವಿಗೆ ಪ್ರೀತಿಯಿಂದ ಸಂಬೋಧಿಸುವಿಕೆ.

ಭೋಟ್ಯಾ (ನಾ) ಹಿಂ= ಭೋಟು (ನೋಡಿರಿ)

ಭೋಡಪಕಡ (ನಾ) ಹಿಂ= ಹಿಡಿಬಿಡು ಕೆಲಸ; ಅಸ್ಥಿರತೆ

ಜ

ಜಂಕ್ಷನ್ (ನಾ) ಇಂ= ರೈಲು ಬಂಡಿ ಮತ್ತು ಬಸ್ಸುಗಳ ಕೇಂದ್ರ ನಿಲ್ದಾಣ.

ಜಂಗಮ (ನಾ) ಸಂ= ಸಂಚಾರಿ; ಅಯ್ಯನವರು; ವಿರಕ್ತ; ಸ್ವಾಮಿಗಳು (ಜಂಗಮಂ ಜಗಭರಿತಂ).

ಜಂಗಮ ದೀಕ್ಷಾ (ನಾ)ಸಂ= ಅಯ್ಯಾಚಾರ; ಜಂಗಮತ್ವದ ಬೋಧೆ.

ಜಂಗಲ್ (ನಾ) ಹಿಂ= ಕಾಡು; ಅರಣ್ಯ; ಅಡವಿ.

ಜಂಗಲಿ (ನಾ) ಹಿಂ= ಜಂಗ್ಲಿ; ಕಾಡು ಸ್ವಭಾವದವ; ಕಾಡುವಾಸಿ; ತಿರುಗಾಡುವ ಹೆಂಗಸು.

ಜಂಗಿಕುಸ್ತಿ (ನಾ) ಹಿಂ= ಯುದ್ಧ ಸಮಾನವಾದ ಕುಸ್ತಿ; ಜಬರ್ದಸ್ತ ಕುಸ್ತಿ.

ಜಂಗು (ನಾ) ಹಿಂ= ಯುದ್ಧ; ಕುಸ್ತಿ; ತುಕ್ಕು; ದನಗಳ ಕೊರಳಿನ ಗೆಜ್ಜೆ (**ಹಂತಿ ಹಾಡು:** ಆರಸಾವಿರ ಘಂಟಿ। ಮೂರ ಸಾವಿರ ಜಂಗು। ಧೂರ ಕೇಳ್ಯಾವೊ ದುರ್ಗಾಕೋ। ನಮ್ಮೆತ್ತು। ಧೂಳ ಹಾರ್ಯಾದೋ ಗಗನಾಕೊ॥)

ಜಂಗುತಿನು (ಕ್ರಿ)= ತುಕ್ಕು ಹಿಡಿ; ಜಂಗು ಹಿಡಿ.

ಜಂಗು ಹಿಡಿ (ಕ್ರಿ)= ಜಂಗು ತಿನು; ತುಕ್ಕು ಹಿಡಿ.

ಜಂಗ್ಲಿ (ನಾ) ಹಿಂ= ಕಾಡು ಗುಣದವನು (ಳು) ಒರಟು ಗುಣದವನು(ಳು).

ಜಂಜಾಟ (ನಾ)= ಝುಂಜಾಟ; ಜಂಜಡ; ಉಸಾಬರಿ.

ಜಂತರ್ಮಂತರ್ (ನಾ) ಹಿಂ= ಮಾಟ ಮಂತ್ರ; ಯಂತ್ರ ತಂತ್ರ.

ಜಂತಿ (ನಾ)= ಒಂದು ಪ್ರಕಾರದ ದಪ್ಪ ಎಲೆಯುಳ್ಳ ಮುಳ್ಳುಗಿಡ; ಮೇಲ್ಛಾವಣಿಗಳಿಗೆ ಆಧಾರವಾಗಿ ತೊಲೆಗಳ ಮೇಲೆ ಹಾಕುವ ಮರದ ಸಣ್ಣ ಅಡ್ಡಪಟ್ಟಿ (ಗಾದೆ: ಉಂಡ್ಮನಿ ಜಂತಿ

ಎಣುಸ್ವಾರ್ದು); ಹಡೆದವಳು; ಕರುವಿನ ತಾಯಿ.

ಜಂತಿಗಿಡ (ನಾ)= ಒಂದು ಪ್ರಕಾರದ ದಪ್ಪ ಎಲೆಉಳ್ಳ ಮುಳ್ಳು ಗಿಡ; ಡಬ್ಬಣದಂತಹ ಮುಳ್ಳುಳ್ಳ ಗಿಡ.

ಜಂತಿ ಮುಳ್ಳು (ನಾ)= ಡಬ್ಬಣದಂತಿರುವ ಒಂದು ಪ್ರಕಾರದ ಮುಳ್ಳು.

ಜಂತು (ನಾ) ಸಂ= ಹುಳು; ಕರುಳಿನಲ್ಲಿ ಹುಟ್ಟಿ ಬೆಳೆದು ತೊಂದರೆ ಕೊಡುವ ಹುಳು.

ಜಂತು ಭೀಳು (ಕ್ರಿ)= ಗುದ ದ್ವಾರದಿಂದ ಬಿಳಿಯ ಕೀಟ ಹೊರಬರು.

ಜಂತ್ರ (ನಾ)= ಯಂತ್ರ; ಕಟ್ಟಿಗೆ ಕೊರೆಯಲು ಮತ್ತು ಕಟ್ಟಿಗೆಯಲ್ಲಿ ಕುಸುರು ಮೂಡಿಸಲು ಬಳಸುವ ಯಂತ್ರ.

ಜಂತ್ರ ಭೌರಿ (ನಾ)= ಕುಸುರದ ಬೊಗರೆ; ಕುಸುರಿ ಕೆಲಸದಿಂದ ತಯ್ಯಾರಿಸಿದ ಬೊಗರೆ.

ಜಂತ್ರ ಹಿಡಿಸು (ಕ್ರಿ)= ಯಂತ್ರದಿಂದ ಕಟ್ಟಿಗೆಯನ್ನು ನುಣುಪುಗೊಳಿಸು, ಕುಸುರ ಮೂಡಿಸು.

ಜಂತ್ರಿ (ನಾ) ಹಿಂ= ಜಂತರಿ; ಪಂಚಾಂಗ; ದಿನಚರಿ; ಕಾಲ ನಿರ್ಣಯ; ಜೇಬೀ ದಿನಚರಿ.

ಜಂಬ್ಯಾ (ನಾ) ಉ= ಝುಂಬ್ಯಾ; ಕಠಾರಿ; ಕಿರುಗತ್ತಿ; ಛೂರಿ.

ಜಕಾತ (ನಾ) ಉ= ತಲೆಗಂದಾಯ; ಕಂದಾಯ.

ಜಖಮ್ (ನಾ) ಉ= ಗಾಯ; ಜಖಮು; ಕತ್ತಿಯ ಪೆಟ್ಟು.

ಜಖಮಾಗು (ಕ್ರಿ)= ಗಾಯವಾಗು; ಕತ್ತಿಯಿಂದ ಅಥವಾ ಹರಿತ ವಸ್ತುವಿನಿಂದ ಗಾಯವಾಗು.

ಜಗ (ನಾ) ಸಂ=ಜಗತ್ತು; ಲೋಕ; ವಿಶ್ವ

ಜಗಜಂಪು (ನಾ)= ಅಗಳಪಗಳ; ಢೀಲಾಢಾಲಾ; ಅಗಲಾತಿಅಗಲ; ಪ್ರಶಸ್ತ.

ಜಗಭರಿತ (ನಾ)= ಜಗವೆಲ್ಲ ವ್ಯಾಪಿಸಿದವ; ಜಗದ್ವ್ಯಾಪಿ (ಮಂತ್ರ: ಜಂಗಮಂ ಜಗಭರಿತಂ)

ಜಗ್ತಾ (ನಾ)= ಜಗತ್ತು

ಜಗದ್ಗುರು (ನಾ) ಸಂ= ಮಠಗಳ ಹಾಗೂ ಮಠಾಧೀಶರ ಒಡೆಯನು; ಲೋಕ ಪೂಜ್ಯನಾದವನು; ಚತುರಾಚಾರ್ಯರು; ಪಂಚಾಚಾರ್ಯರು; ಪೋಪ ಇಲ್ಕಲ್ಲ, ಚಿತ್ರದುರ್ಗ, ಹುಬ್ಬಳ್ಳಿ, ಗದಗ, ಡಂಬಳ, ಬಸವ ಕಲ್ಯಾಣ ಕೊಡಂಗಲ್ ಮೊದಲಾದಲ್ಲಿರುವ ವಿರಕ್ತ ಜಗದ್ಗುರುಗಳು; ವಿಶ್ವಗುರುಗಳು.

ಜಗಭಂಡ (ನಾ)= ಅತಿನಾಚಿಕೆಗೆಟ್ಟವನು; ನಿರ್ಲಜ್ಜ.

ಜಗಮಗಾಸು (ಕ್ರಿ) ಹಿಂ= ಥಳಥಳ ಹೊಳೆ, ಮಿಂಚು, ಪ್ರಕಾಶಿಸು.

ಜಗಲಿ (ನಾ)= ದೇವಸ್ಥಾಪನೆಯ ಕಟ್ಟೆ (ಉದಾ: ನಿನ್ನ ಜಗಲಿ ಮ್ಯಾಲಿನ್ದೇವ್ರಿಗ್ಗೀ ತಪ್ಪಿದ್ದಲ್ಲ); ಜಗುಲಿ; ಜಗ್ಲಿ.

ಜಗಾಸು (ಕ್ರಿ) ಹಿಂ= ಎಚ್ಚರಿಸು; ಎಚ್ಚರಿರು; ಜಾಗರಣೆ ಮಾಡು.

ಜಗುಲಿ (ನಾ)= ಜಗಲಿ (ನೋಡಿರಿ).

ಜಗ್ಗಾಟ (ನಾ)= ಎಳೆದಾಟ; ಜಗ್ಗುವಿಕೆ

ಜಗ್ಗು (ಕ್ರಿ)= ಜೊಗ್ಗು; ಎಳೆ; ಸೆಳೆ.

ಜಗ್ಲಿ (ನಾ)= ಜಗಲಿ; ಜಗುಲಿ; ದೇವರ ಕಟ್ಟೆ.

ಜಜಗಿ (ನಾ) ಹಿಂ=ಬಾಣತನ.

ಜಜಗಿಖಾನಿ (ನಾ) ಹಿಂ=ಪ್ರಸೂತಿ ಗ್ರಹ; ಬಾಣತಿ ಮನೆ.

ಜಜ್ಜು (ಕ್ರಿ)= ಕಲ್ಲಿನಿಂದ ಚಚ್ಚು, ಕುಟ್ಟು, ಗುದ್ದು; ಚಪ್ಪಟೆಗೊಳಿಸು; ಪುಡಿ ಮಾಡು

ಜಜ್ಜು (ನಾ) ಇಂ= ನ್ಯಾಯಾಧೀಶ.

ಜಟ್ಟಿ (ನಾ)= ಕುಸ್ತಿಗಡಿ; ಪೈಲವಾನ.

ಜಡ (ನಾ)= ಕಠಿಣ; ಭಾರ; ಬೇನೆ; ಅನಾರೋಗ್ಯ.

ಜಡತಿ (ನಾ)= ಗುದ್ದುವಿಕೆ; ಝಡ್ತಿ; ತಪಾಸಣೆ; ಸಂಭೋಗ.

ಜಡತಿ ಮಾಡು (ಕ್ರಿ)= ಗುದ್ದು; ಹೊಡಿ; ತಪಾಸಿಸು, ಸಂಭೋಗಿಸು.

ಜಡಾ (ವಿ)= ಜಡ; ಒಜ್ಜೆ; ಭಾರ; ಅನಾರೋಗ್ಯ.

ಜಡಾಬರು (ಕ್ರಿ)= ಜಡ್ಡುಬರು; ಬೇನೆ ಬರು; ಅನಾರೋಗ್ಯವುಂಟಾಗು.

ಜಡಾಹೋಗು (ಕ್ರಿ)= ಭಾರವೆನಿಸು; ಕಠಿಣವಾಗು;

ಜಡಿ (ಕ್ರಿ)= ಹೊಡೆ; ಬಡಿ; ಬೆದರಿಸು; ಅಂಜಿಸು; ಗುದ್ದು; ತುರುಕು; ಸಂಭೋಗಿಸು

ಜಡಿ (ನಾ)= ಜಡೆ; ಹೆರಳು; ಹೆಣಾಲು; ಮೇರಿ; ಆಲದ ಮರದ ಆಗಂತುಕ ಬೇರು (ಭಜನೆ-ಗಂಗಾದೇವಿ ಜಡಿದಾಗ ಪಾರ್ವತಿ ದೇವಿ ತೊಡಿಮ್ಯಾಗ)

ಜಡಿ ಇಳಿಸು (ಕ್ರಿ)= ಜಾವಳಕತ್ತರಿಸು; ಮೊದಲನೇ ಸಲ ಕೇಶಕರ್ತನ ಶಾಸ್ತ್ರ ಮಾಡು.

ಜಡಿಕಾಯು (ಕ್ರಿ)= ತಲೆಗೂದಲು ಬೋಳಿಸದಂತಿರು.

ಜಡಿಗಟ್ಟು (ಕ್ರಿ)= ತಲೆಗೂದಲು ಗಂಟು ಗಂಟಾಗು.

ಜಡಿವೂರು (ಕ್ರಿ)= ತಳವೂರು; ವಾಸಿಸು; ಕಾಯಮ್ಮಾಗಿ ಇರು.

ಜಡ್ಡಾಗು (ಕ್ರಿ)= ಕಾಯಿಲೆಯಾಗು; ಅನಾರೋಗ್ಯವುಂಟಾಗು.

ಜಡ್ಡು (ನಾ)= ಕಾಯಿಲೆ; ಅನಾರೋಗ್ಯ; ಬೇನೆ; ಜಡ; ಬೇಮಾರಿ.

ಜತಗಿ (ನಾ)= ಜತ್ಗಿ; ಜತ್ತಿಗೆ; ನೊಗವನ್ನು ಎತ್ತಿನ ಕೊರಳ ಮೇಲೆ ಬಂಧಿಸಲು ರೈತರು ಬಳಸುವ ತೊಗಲಿನ ಇಲ್ಲವೆ ಹಗ್ಗದ ಹೆಣಿಕೆಯ ಪಟ್ಟಿ (ಹಾಡು: ನೀಕೇಳೊ ಶ್ರೀ ಗುರುವೆ।ಚೆನ್ನಬಸವಣ್ಣ। ಭಿನ್ನ ಭೇದವ ಬೇಡವಣ್ಣ।। ಉತ್ತರಿ ಮಳಿಬಂದು। ಸುತಿ ಸುತ್ತಿ ಬಡಿವಾಗ। ಜತಗಿದಾಗಿನ ನೀರು। ಬುತ್ಯಾಗಾವಣ್ಣ। ಲಿಂಗವಂತರು ಕೇಳಿರಣ್ಣ।।)

ಜತಿ (ನಾ)= ಜೋಡಿ; ಜತೆ; ಸಂಗಾತಿ; ಸಂಭೋಗ; ಒತ್ತಟ್ಟು.

ಜತ್ಗಿ (ನಾ)= ಜತಗಿ (ನೋಡಿರಿ).

ಜತ್ತನ (ನಾ)= ಹುಷಾರ; ಎಚ್ಚರ; ಜತ್ನ.

ಜತ್ತು (ನಾ)= ಜತೆ; ಜೊತೆ; ಜೋಡಿ; ಸಂಗಾತಿ.

ಜತ್ನ (ನಾ)= ಜತ್ತನ (ನೋಡಿರಿ).

ಜನ (ನಾ)=ಮನುಷ್ಯ ಸಮುದಾಯ; ಜನತೆ.

ಜನಗಿ (ನಾ)= ದೇವರ ನೈವೇದ್ಯದ ಹಾಲಿಗಾಗಿ ಮೀಸಲಿಟ್ಟ ಆಕಳು; ಜನ್ಗಿ ಆಕಳು; ಗೂಳಿ ಆಕಳು.

ಜನತಾ (ನಾ) ಸಂ= ಜನ; ನಾಗರಿಕರು.

ಜನತಾಸೀರೆ (ನಾ)= ಜನ ಸಾಮಾನ್ಯರು ಉಡುವ ಸೀರೆ; ಜನತಾ ಸರಕಾರ ಬಿಡುಗಡೆ ಮಾಡಿದ ಜನ ಸಾಮಾನ್ಯರು ಉಡುವ ಹತ್ತಿಯ ಸೀರೆ.

ಜನದ ಗೂಡ ಜಾತ್ರಿ (ನಾ)= ಎಲ್ಲರೊಂದಿಗೆ ಹೊಂದುವಿಕೆ.

ಜನದನಿ (ನಾ)= ಬೀದರ ನಗರದಿಂದ ಮಲ್ಲಿಕಾರ್ಜುನ ಸ್ವಾಮಿಯವರು ನಡೆಸುತ್ತಿದ್ದ ಪ್ರಸಿದ್ಧ ದಿನ ಪತ್ರಿಕೆ. ಅದು ಈಗ ಅನ್ಯರ ಸಂಪಾದನೆಯಲ್ಲಿದೆ.

ಜನ ಧ್ವನಿ (ನಾ)= ಮಲ್ಲಿಕಾರ್ಜುನ ಸ್ವಾಮಿ ಸಂಪಾದನೆಯ ಬೀದರದ ಸ್ಥಳೀಯ ಪತ್ರಿಕೆ.

ಜನಾನಾ (ನಾ) ಉ.= ಹೆಣ್ಣು; ಹೆಣ್ಣು ಮಕ್ಕಳು; ಮಹಿಳೆಯರ ಕೋಣೆ.

ಜನಾನ್ಖಾವಿ (ನಾ)= ಹೆಂಗಸರ ಕೋಣೆ ಅಂತಃಪುರ.

ಜನಿವಾರ (ನಾ)= ಜನಾವರ; ಜಾನ್ವರ; ಮೂಕ ಪ್ರಾಣಿ ಯಜ್ಞೋಪವಿತ; ಯಜ್ಞ ಸೂತ್ರ.

ಜನಿವಾರ ಹಾಯ್ಕೊ (ಕ್ರಿ)= ಗುರುದೀಕ್ಷೆ ಹೊಂದು; ಯಜ್ಞೋಪವಿತ ಧರಿಸು; ಮೌಂಜಿ ಬಂಧನ ಮಾಡಿಕೊ.

ಜಪ (ನಾ) ಸಂ = ಗುರುಮಂತ್ರವನ್ನು ಮತ್ತೆ ಮತ್ತೆ ನುಡಿಯುವಿಕೆ; ದೇವರ ನಾಮಸ್ಮರಣವನ್ನು ನಿರಂತರ ಮಾಡುವಿಕೆ, ಧ್ಯಾನ.

ಜಪ ಮಾಡು (ಕ್ರಿ)= ಗುರು ಮಂತ್ರವನ್ನು ನಿರಂತರ ಪಠಿಸು; ನಿರಂತರ ದೇವರ ನಾಮ ಸ್ಮರಣೆ ಮಾಡು; ಧ್ಯಾನ ಮಾಡು.

ಜಪಮಾಳಾ (ನಾ)= ಜಪ ಮಾಡುವಾಗ ಎಣಿಸಲು ಬಳಸುವ ಮಣಿಮಾಲೆ; ರುದ್ರಾಕ್ಷಿ ಮಾಲೆ.

ಜಪ್ತಿ (ನಾ)= ಆಸ್ತಿ ಮೊದಲಾದುವನ್ನು ಒತ್ತಾಯದಿಂದ ವಶಪಡಿಸಿಕೊಳ್ಳುವಿಕೆ.

ಜಪ್ತು ಮಾಡು (ಕ್ರಿ)= ಆಸ್ತಿ ಮೊದಲಾದುವನ್ನು ಒತ್ತಾಯದಿಂದ ಸ್ವಾಧೀನ ಪಡಿಸಿಕೊ.

ಜಪ್ಪಿಸು (ಕ್ರಿ)= ಝುಪ್ಪಿಸು; ಹೊಂಚು ಹಾಕು; ಸಮಯಕ್ಕಾಗಿ ಕಾಯು; ಎಚ್ಚರದಿಂದಿರು.

ಜಬರ (ನಾ)= ತಾಖತ್ವಾರ; ಶಕ್ತಿಶಾಲಿ.

ಜಬರದಸ್ತಿ (ನಾ)ಉ= ಒತ್ತಾಯ; ಜಬ್ರಿ; ಬಲಾತ್ಕಾರ.

ಜಬರಿ (ನಾ) ಉ= ಮೂಜೋರಿ; ಜಬರ್ದಸ್ತಿ; ಒತ್ತಾಯ.

ಜಬಾನಿ (ನಾ)ಉ= ಬಾಯಿಪಾಠ; ಮುಖದ್ಗತ; ಕಂಠಗತ.

ಜಬಾನು (ನಾ) ಉ= ನಾಲಗೆ; ವಚನ.

ಜಬಾನುಕುಡು (ಕ್ರಿ)= ಮಾತುಕೊಡು; ವಚನಕೊಡು ಒಪ್ಪಿಕೊ; ಸಮ್ಮತಿಸು.

ಜಬಾನ್ದಾನಿ (ನಾ)ಉ.= ಮೌಖಿಕ ಪರೀಕ್ಷೆ.

ಜಬುರ್ಸು (ಕ್ರಿ)= ಜಬರಿಸು; ಗದರಿಸು; ಬಯ್ಯು.

ಜಬ್ಬು (ಕ್ರಿ)= ಚೀಪು; ಹೀರು; ಸೀಪು; ಹಿಪ್ಪು.

ಜಮಾಖರ್ಚು (ನಾ) ಹಿಂ= ಆಯವ್ಯಯ; ಗಳಿಕೆ ಬಳಕೆ.

ಜಮಾತಿ (ನಾ) ಉ=ಜನಸಮೂಹ; ಮಂದಿ; ಹಿಂಡು.

ಜಮಾದಾರ (ನಾ)ಉ=ಪೋಲೀಸ ಪೇದೆಗಿಂತ ಮೇಲಿನ ಹುದ್ದೆಯವನು,

ಗ್ರಾಮ ಸಹಾಯಕ (ಗಾದೆ: ತಸಿಲ್ದಾರ ಜಮಾದಾರ್ಗ ಹೊಡ್ಡ, ಜಮಾದಾರ ಹೆಣ್ತಿಗಿ ಹೊಡ್ಡ)

ಜಮಾನತ್ತು (ನಾ) ಉ. = ಜಾಮೀನು; ಜುಮೇದಾರಿ; ಕೋರ್ಟಿಗೆ ಬಂದು ಬರೆದುಕೊಡುವ ಜುಮ್ಮೇದಾರಿ ಪತ್ರ.

ಜಮಾನತ್ದಾರ (ನಾ)ಉ=ಕೋರ್ಟಿಗೆ ಜುಮ್ಮೆದಾರಿ ಪತ್ರ ಬರೆದುಕೊಡುವವ; ಜುಮ್ಮೇದಾರಿ ವಹಿಸಿಕೊಳ್ಳುವವ.

ಜಮಾಲಗೊಟ್ಟ (ನಾ)ಉ= ಜುಲಾಬು ಆಗುವ ಗಿಡ ಮೂಲಿಕೆ ಮದ್ದು.

ಜಮಾಸು (ಕ್ರಿ)= ಸಂಗ್ರಹಿಸು; ಒಟ್ಟುಗೂಡಿಸು; ಹೊಂದಿಸು; ರಾಶಿ ಹಾಕು.

ಜಮೀನು (ನಾ)ಉ= ಭೂಮಿ; ನೆಲ.

ಜಮೀನ್ಚಕ್ಕರ್ (ನಾ)ಉ= ನೆಲದ ಮೇಲೆ ಸುತ್ತು ಹೊಡೆವ ಸ್ಫೋಟಕ ಆಟಿಕೆ.

ಜಮೀನ್ದಾರ (ನಾ)ಉ= ಜಮೀನುದಾರ; ಅತಿ ಜಮೀನು ಉಳ್ಳವ; ಪರಂಪರೆಯಿಂದ ಜಮೀನಿನ ಒಡೆತನ ಹೊಂದಿದವ.

ಜಮ್ಖಾನಿ (ನಾ)= ಝುಮ್ಖಾನಿ; ನೂಲು ಗಂಬಳಿ.

ಜಯ (ನಾ)ಸಂ= ಗೆಲುವು; ಯಶ.

ಜಯಜಯ ಆಗ್ಲಿ (ನು)= ಉದ್ಧಾರಾಗಲಿ; ಯಶಬರಲಿ; ಹಾಳು ಬೀಳಾಗಲಿ (ಬೈಗುಳ)

ಜಯಂತಿ (ನಾ)ಸಂ= ಹುಟ್ಟು ಹಬ್ಬ; ವರ್ಧಂತಿ; ವಿಭೂತಿ ಪುರುಷರ ಹುಟ್ಟು ಹಬ್ಬ.

ಜಯ ಬಸವ (ನಾ)= ಬಸವಣ್ಣನವರ ಹೆಸರಿನಲ್ಲಿ ಹೇಳುವ ನಮಸ್ಕಾರ; ಶರಣಾರ್ಥಿ; ನಮಸ್ತೆ.

ಜಯಭೀಮ (ನಾ)= ಅಂಬೇಡ್ಕರರ ಅನುಯಾಯಿಗಳು ಪರಸ್ಪರ ವಂದಿಸುವಾಗ ಬಳಸುವ ಪದ; ನಮಸ್ಕಾರ; ನಮಸ್ತೆ; ವಂದನೆ.

ಜಯಹಿಂದ (ನಾ)= ೧೯೪೭ರಿಂದ ಪ್ರಾರಂಭವಾದ ನಮಸ್ಕಾರ ಅರ್ಥದ ಪದ; ಸ್ವತಂತ್ರ ಭಾರತ ಎಂಬ ನಮಸ್ಕಾರ ಸೂಚಕ ಪದ.

ಜಯ್ರಾಮ್ಜೀ (ನಾ) ಹಿಂ= ಶ್ರೀರಾಮನ ಹೆಸರಿನಲ್ಲಿ ಹೇಳುವ ನಮಸ್ಕಾರ.

ಜರ (ನಾ) ಹಿಂ=ಜರತಾರಿ; ಬಂಗಾರ.

ಜರತಾರಿ (ವಿ.) ಹಿಂ= ಜರಿಯ ಕೆಲಸ ಮಾಡಿದ (ಉದಾ: ಬಸವರಾಜ ಕಟ್ಟಿಮನಿಯವರ ಜರತಾರಿ ಜಗದ್ಗುರು ಕಾದಂಬರಿ).

ಜರದ್ರುಮಾಲ (ನಾ) ಹಿಂ=ಜರತಾರಿ ಮುಂಡಾಸು.

ಜರಾ (ವಿ) ಹಿಂ=ತುಸು; ಸ್ವಲ್ಪ; ಥೋಡ.

ಜರಾಜರಾ (ವಿ) ಹಿಂ= ತುಸುತುಸು.

ಜರಾಬೀ (ಅ) ಹಿಂ=ತುಸುವೂ; ಸ್ವಲ್ಪವೂ; ಕೊಂಚವೂ.

ಜರೂರತ್ತು (ನಾ)= ಅಗತ್ಯ; ಅವಶ್ಯಕತೆ.

ಜರೂರಿ (ವಿ.) ಹಿಂ= ಅಗತ್ಯ, ಅವಶ್ಯಕ.

ಜರೂರಿ ಬೀಳು (ಕ್ರಿ)= ಬೇಕಾಗು; ಅಗತ್ಯವಾಗು; ಇಲ್ಲದೆ ನಡೆಯದಂತಾಗು.

ಜರೂರ್ಜರೂರ (ದ್ವಿ) = ಅತ್ಯಗತ್ಯ; ತಪ್ಪದೆ.

ಜರ್ಗು (ಕ್ರಿ)= ಜರುಗು; ಆಚೆಗೆ ಸರಿ; ನಡೆ; ಸಾಗು.

ಜರ್ದರುಮಾಲು (ನಾ)= ಬಂಗಾರದಂತೆ ಮಿಂಚುವ ಅಂಚುಳ್ಳ ಮುಂಡಾಸು.

ಜರ್ದಾ (ನಾ)ಹಿಂ= ಜರದಾ; ತಾಂಬೂಲದೊಂದಿಗೆ ಸೇವಿಸುವ ಸುವಾಸಿಕ ತಂಬಾಕು.

ಜರ್ಬು (ನಾ) ಹಿಂ=ಅಂಜಿಕೆ; ಆಡಂಬರ; ಅಹಮ್ಮು; ವೈಭವ.

ಜರ್ಮನ್ ಸಿಲ್ವರ್ (ನಾ) ಇಂ=ಗಿಲಾಟು ಧಾತು; ಅಡುಗೆ ಪಾತ್ರೆ ನಿರ್ಮಾಣದಲ್ಲಿ ಹೆಚ್ಚಾಗಿ ಬಳಕೆಯಾಗುವ ಲೋಹ.

ಜಲನ್ (ನಾ) ಹಿಂ= ಉರುವಲು; ಹೊಟ್ಟೆ ಕಿಚ್ಚು; ಮತ್ಸರ.

ಜಲಸಂಗ (ನಾ)= ಬೀದರ ಜಿಲ್ಲೆಯ ಹುಮ್ನಾಬಾದಾ ತಾಲೂಕಿನ ದುಬಲ್ಗುಂಡಿ ಹತ್ತಿರ ಇರುವ ಚಾಲುಕ್ಯ ಕಾಲದ ಐತಿಹಾಸಿಕ ಕಲ್ಮೇಶ್ವರ ದೇವಾಲಯವಿರುವ ಊರು. ಇಲ್ಲಿಯ ಶಿಲಾಲೇಖ ಶಿಲ್ಪವು ಜಾಗತ್ತಿಕ ಆಕರ್ಷಣೆ ಆಗಿದೆ. ಧರಿನಾಡು ಕನ್ನಡ ಸಂಘದ ಕಚೇರಿ ಮುದ್ರಿಕೆಯಲ್ಲಿ ಬಳಸಲಾಗಿದೆ.

ಜಲಾಸು (ಕ್ರಿ)= ಹೊಟ್ಟೆ ಕಿಚ್ಚು ಪಡು; ಮತ್ಸರ ಹೊಂದು; ಸುಡು.

ಜಲುಮು (ನಾ)= ಜನ್ಮ; ಹುಟ್ಟು.

ಜಲ್ಮ (ನಾ)= ಜನ್ಮ.

ಜಲ್ಮಕುಂಡ್ಲಿ (ನಾ)= ಜನ್ಮಕುಂಡಲಿ; ಜನ್ಮಪತ್ರಿಕೆ; ಜಾತಕ.

ಜಲ್ಮ ಹೆಸರು (ನಾ)= ಜನ್ಮ ನಾಮ.

ಜಲ್ಮಾ (ನಾ)= ಜಲ್ಮ (ನೋಡಿರಿ)

ಜಲ್ಮುತಾಗಾಂತಿ (ನು)= ಹುಟ್ಟಿದಂದಿನಿಂದ; ಆಜನ್ಮ.

ಜಲ್ಸಾ (ನಾ) ಹಿಂ= ಆನಂದಕೂಟ; ಸಭೆ; ಹಿಗ್ಗಿನ ಅಭಿವ್ಯಕ್ತಿಯ ಸಭೆ; ಸಮಾರಂಭ.

ಜವಳ (ಅ)= ಹತ್ತಿರ; ಸಮೀಪ;

ಜವಳ ಜವಳ (ದ್ವಿ)= ಸಮೀಪ ಸಮೀಪ; ಅಂದಾಜು; ಸರಿ ಸುಮಾರು; ಹೆಚ್ಚು ಕಡಿಮೆ.

ಜವಾನ (ನಾ) ಹಿಂ= ಹರೆಯದವ; ಪೋಲೀಸು ಪೇದೆ; ಸಿಪಾಯಿ.

ಜವಾನಿ (ನಾ) ಹಿಂ= ಯೌವನ; ಹರೆಯ (ಗಾದೆ: ಜವಾನಿ ದಿವಾನಿ).

ಜವಾಬಿ (ವಿ) ಹಿಂ=ಉತ್ತರ ಹೊಂದಿರುವ; ಉತ್ತರ ಬರೆಯಲು ಅಗತ್ಯವಿರುವ; ಎದುರುತ್ತರವಾಗಿ ಪ್ರತ್ಯುತ್ತರವಾಗಿ.

ಜವಾಬಿ ಕಾರ್ಡು (ನಾ)= ಉತ್ತರಕ್ಕಾಗಿ ಕಳಿಸಲಾದ ಕೋರಾ ಪತ್ರ.

ಜವಾಬು (ನಾ) ಹಿಂ= ಪ್ರಶ್ನೆಗೆ ಉತ್ತರ; ಪ್ರತಿವಾದದ ಹೇಳಿಕೆ; ಎದುರುತ್ತರವಾಗಿ ಮಾಡಿದ ಕಾರ್ಯ; ಮರು ಮಾತು; ಜಾಬು; ಕೂಗು.

ಜವಾಬ್ದಾರ (ನಾ) ಹಿಂ= ಹೊಣೆಗಾರ.

ಜವಾಬ್ದಾರಿ (ನಾ) ಹಿಂ= ಹೊಣೆಗಾರಿಕೆ.

ಜವಾಬ್ದಾರಿ ನಿಭಾಸು (ಕ್ರಿ)= ಕರ್ತವ್ಯ ನೆರವೇರಿಸು.

ಜವಾರಿ (ನಾ)= ಜೋಳ; ದೇಶೀ; ಸ್ಥಳೀಯ; ಸ್ವದೇಶದಲ್ಲಿ ಹುಟ್ಟಿ ಬೆಳೆದ.

ಜವಿ (ನಾ)= ಜವೆ; ಎವೆ; ಜವೆಗೋಧಿ ತೆನೆಯ ಮೇಲಿನ ಸುಂಕದ ಕಡ್ಡಿ; ಕುದುರೆ ಬಾಲದ ಕೂದಲು; ಎತ್ತಿನ ಬಾಲದ ಕೂದಲು; ಕೂದಲೆಳೆ; ಕಣ್ಣು ರೆಪ್ಪೆಯ ಕೂದಲು.

ಜವಿಘೋದಿ (ನಾ)= ಜವೆಗೋಧಿ; ತೆನೆಯ ಮೇಲೆ ಮುಳ್ಳು ಸುಂಕವುಳ್ಳ ಗೋಧಿ.

ಜವಿಹಗ್ಗ (ನಾ)= ಕುದುರೆ ಬಾಲದ ಇಲ್ಲವೆ ಎತ್ತಿನ ಬಾಲದ ಕೂದಲಿಂದ ಹೊಸೆದು ತಯಾರಿಸಿದ ಹಗ್ಗ.

ಜಸ್ಸಾಗು (ಕ್ರಿ)= ಯಶಸ್ಸು ಉಂಟಾಗು.

ಜಸ್ಸಿಲ್ಲದಾಗು (ಕ್ರಿ)= ಅಪಯಶ ಉಂಟಾಗು.

ಜಸ್ಸು (ನಾ)= ಯಶಸ್ಸು; ಕೀರ್ತಿ; ಗುರಿ ಸಾಧನೆ.

ಜಾಂತಿ (ನಾ)= ಭಾಲ್ಕಿ ತಾಲೂಕಿನ ಕಣಜಿ ಗ್ರಾಮದ ಉತ್ತರ ದಿಕ್ಕಿಗಿರುವ ಈ ಗ್ರಾಮದಲ್ಲಿ ಘೊಂಗ್ಡಿಮುತ್ತ್ಯಾ ಎಂಬ ಹೆಸರಿನಿಂದ ಪ್ರಖ್ಯಾತನಾದ, ಯಲ್ಲಾಲಿಂಗ ಮುತ್ತ್ಯಾ ಅವರ ಶಿಷ್ಯನ ಕಾಯಕ ಕ್ಷೇತ್ರ, ವಾಸಸ್ಥಾನ.

ಜಾಂಬಾಜ (ನಾ) ಹಿಂ= ಜೀವಕ್ಕೆ ಜೀವ ಕೊಡುವವನು.

ಜಾಂಬು (ನಾ) ಹಿಂ= ಜಾಮು; ನೀರು ಕುಡಿಯುವ ಚಂಬು; ಸೆರೆಪಾನದ ಚಂಬು; ಲೋಟ.

ಜಾಕ್ (ನಾ) ಇಂ= ವಾಹನ ಅಥವಾ ಇತರೆ ಭಾರದ ವಸ್ತುವನ್ನು ಮೇಲೆತ್ತುವ ಸಾಧನ.

ಜಾಕಿಟ್ಟು (ನಾ)ಇಂ=ಮೇಲಂಗಿ; ತೋಳಿಲ್ಲದ ಅಂಗಿ.

ಜಾಕು (ನಾ) ಇಂ= ಜಾಕ್ (ನೋಡಿರಿ)

ಜಾಕು ಹಚ್ಚು (ಕ್ರಿ)= ಭಾರ ಎತ್ತಲು ಜಾಕ್ ಬಳಸು;(ನು) ಕಷ್ಟದಲ್ಲಿ ಸಿಲುಕಿದವನನ್ನು ಪಾರು ಮಾಡು; ಕಷ್ಟದಿಂದ ಹೊರ ಬರುವಂತೆ ಮಾಡು.

ಜಾಗ (ನಾ)= ಸ್ಥಳ, ಜಾಗಾ; ತಳ; ಮನೆಯನಿವೇಶನ; ನೆಲೆ; ಎಡೆ; ಅವಕಾಶ

ಜಾಗರಣೆ (ನಾ)= ನಿದ್ದೆ ಮಾಡದಿರುವಿಕೆ; ಎಚ್ಚರವಾಗಿರುವಿಕೆ.

ಜಾಗರಣೆ ಮಾಡು (ಕ್ರಿ)= ಇಡೀ ರಾತ್ರಿ ಎಚ್ಚರವಾಗಿರು; ಮಲಗದಿರು.

ಜಾಗರೂಕ (ವಿ) ಸಂ= ಎಚ್ಚರವುಳ್ಳ; ಸಾವಧಾನ.

ಜಾಗಾ (ನಾ)= ಜಾಗ (ನೋಡಿರಿ)

ಜಾಗಿರ್ದಾರ (ನಾ) ಹಿಂ= ಜಹಗೀರದಾರ; ಉಂಬಳಿ ಭೂಮಿಯನ್ನು ಪಡೆದವನು.

ಜಾಗಿರ್ದಾರಿ (ನಾ) ಹಿಂ= ಜಾಗಿರ್ದಾರನ ಅಧಿಕಾರ ಮತ್ತು ಆಸ್ತಿ ಪಾಸ್ತಿ.

ಜಾಗೀರು (ನಾ)= ಜಹಗೀರು; ಮಾನ್ಯವಾಗಿ ದೊರೆತ ಭೂಮಿ; ಜಾಗೀರಿ.

ಜಾಗ್ರತಿ (ನಾ)= ಜಾಗ್ರತೆ; ಎಚ್ಚರ (ದೊಡ್ಡಾಟದ ಮಾತು: ನಿನ್ನ ನಾಮಾಂಕಿತ ಹೇಳು ಸಾರಥಿ ಅತಿ ಜಾಗ್ರತಿ).

ಜಾಜಾ (ನಾ)= ಜಾಜಿ ಬಣ್ಣದ ಮಣ್ಣು; ಮಣ್ಣಿನ ಗೋಡೆಗೆ ಸಾರಣೆ ಮಾಡಲು ಬಳಸುವ ಜಾಜಿ ಬಣ್ಣದ ಮಣ್ಣು.

ಜಾಜಿಕಾಯಿ (ನಾ)= ಒಂದು ಬಗೆಯ ಸುವಾಸಿಕ ಫಲ; ಜಾಯಫಳ.

ಜಾಡ (ನಾ)= ನೇಕಾರ; ಜೇಡ.

ಜಾಡಮಿ (ನಾ)= ಜೇಡನ ಹುಳು; ಜಾಡ್ಮಿ.

ಜಾಡಮಿ ಮನಿ (ನಾ)= ಜೇಡನ ಜಾಲ.

ಜಾಡ್ಮಿ (ನಾ)= ಜಾಡಮಿ (ನೋಡಿರಿ)

ಜಾಣ (ನಾ)= ಬುದ್ಧಿವಂತ; ಚತುರ (ಗಾದೆ: ಜಾಣ ಜಾರಿ ಬಿದ್ರ ಕಾಣಲ್ಧಂಗ ಎದ್ದಂತ.)

ಜಾಣಿ (ನಾ)= ಗಂಡಿನ ತರಹ ವರ್ತಿಸುವವಳು; ಗಾವು ಹರಿವ ಪೋತ್ರಾಜನ ಹೆಂಡತಿ.

ಜಾಣೀವ (ನಾ) ಮ= ತಿಳುವಳಿಕೆ.

ಜಾಣ್ಯಾ (ನಾ)= ಷಂಡ; ನಪುಂಸಕ; ನಾಮರ್ದ; ಹಿಜ್ಜ; ಹಿಜಡ್ಯಾ; ಪೋಣೆ ಆಟ್; ಮಂಗಳ ಮುಖಿ.

ಜಾತಕ (ನಾ) ಸಂ= ಜನ್ಮ ಕುಂಡಲಿ; ಜನ್ಮಪತ್ರ.

ಜಾತಕಾರ (ನಾ)= ಜಾತಗಾರ; ಬಹುರೂಪಿ; ಭೈರೂಪಿ; ನಟ; ಬೀದಿನಟ.

ಜಾತಗಾರ (ನಾ)= ಜಾತಕಾರ (ನೋಡಿರಿ

ಜಾತಿ (ನಾ)= ಹುಟ್ಟಿದ ಕುಲ, ಗೋತ್ರ, ವಂಶ, ವರ್ಣ, ಯೋನಿ ಭೇದ ಸೂಚಕ ವರ್ಗ, ವರ್ಣ, ಜನಾಂಗ ಇತ್ಯಾದಿ (ಕುಟ್ಟುವ ಹಾಡು: ಜಾತಿ ಸೂತಕವಿಲ್ಲಾ। ಮುಟ್ಟು ಮೈಲಿಗಿಯಿಲ್ಲಾ। ಮುಡಿಚೆಟ್ಟು ಮೊದಲೇ ಇಲ್ಲೆಂದ ಬಸವಣ್ಣನವ್ವ।।-ಶರಣಕವಿ ಮಹಾಗಾಂವ)

ಜಾತ್ರಿ (ನಾ)= ಜಾತ್ರೆ; ಯಾತ್ರೆ; ಉತ್ಸವ; ಹಬ್ಬ.

ಜಾಥಾ (ನಾ) ಹಿಂ= ಜತ್ಥಾ; ತಂಡ; ಕಲಾವಿದರ ಸಂಚಾರಿ ತಂಡ; ಪ್ರಚಾರ ತಂಡ.

ಜಾದಾಕಮ್ಮು = ಹೆಚ್ಚು ಕಡಿಮೆ

ಜಾದು (ನಾ) ಹಿಂ=ಕೈಚಳಕದ ವಿದ್ಯೆ; ಇಂದ್ರಜಾಲ

ಜಾದುಂಗಾರ (ನಾ) ಹಿಂ= ಮೋಡಿ ಮಾಡುವವ; ಕೈಚಳಕ ತೋರುವವ; ಇಂದ್ರಜಾಲವಿದ್ಯೆ ಬಲ್ಲವ.

ಜಾನು (ಕ್ರಿ)=ಅನ್ನದ ಗಂಜಿಯನ್ನು ಇಲ್ಲವೆ ಬೇಳೆಯ ಕಟ್ಟನ್ನು ಜಿಬಲಿಕೆ ಹಚ್ಚಿ ಬಸಿ, ಸೋಸು (ಉದಾ: ಅನ್ನಾಜಾನು; ಬ್ಯಾಳಿಜಾನು).

ಜಾಪಳ (ನಾ)=ಪೇರಲ; ಜಾಪುಳ್ಕಾಯಿ.

ಜಾಪುಳ್ಕಾಯಿ (ನಾ)= ಜಾಪಳ; ಪೇರಲ.

ಜಾಬು (ನಾ)= ಕೂಗು; ಉತ್ತರ; ಕರೆಯುವಿಕೆ; ಓಗೊಡುವಿಕೆ.

ಜಾಬುಕುಡು (ಕ್ರಿ)= ಕೂಗು ಹಾಕು; ಓ ಎನ್ನು; ಓಗೊಡು.

ಜಾಮರ್ದ (ನಾ)= ವೀರಗಂಡು; ಬಹದ್ದೂರ; ಮೈ ಮುರಿದು ದುಡಿಯುವವನು.

ಜಾಮು (ನಾ)ಉ=ಜಾಂಬು; ಚಂಬೂ; ಸಾರಾಯಿ, ನೀರು ಇತ್ಯಾದಿ ದ್ರವ ಸೇವಿಸುವ ಲೋಟ; ಜರ್ಮನ್ ಸಿಲ್ವರ್ ಲೋಟ; ಶರೀರ ಸಾಮರ್ಥ್ಯ; ಕುವ್ವತ್ತು.

ಜಾಮೂನು (ನಾ) ಹಿಂ=ನೇರಿಲೆ ಹಣ್ಣು; ಖವಾ, ಮೈದಾಹಿಟ್ಟು ಮತ್ತು ಸಕ್ಕರೆ ಸೇರಿಸಿ ತಯಾರಿಸಿದ ಸಿಹಿ ತಿಂಡಿ.

ಜಾಯಫಳ (ನಾ)= ಜಾಜಿಕಾಯಿ; ಒಂದು ಪ್ರಕಾರದ ಸುವಾಸಿಕ ಫಲ.

ಜಾಯ್ದಾತ್ (ನಾ) ಉ= ಆಸ್ತಿ; ಹೊಲ, ಮನೆ ಮತ್ತು ಇತರೆ ಚರ ಆಸ್ತಿ.

ಜಾಯ್ದಾದು (ನಾ) ಉ= ಜಾಯ್ದಾತ್ (ನೋಡಿರಿ).

ಜಾರ (ನಾ) ಉ= ಜಹರ; ವಿಷ; ಪ್ರಾಣ ಘಾತುಕ ಮದ್ದು.

ಜಾರ ಹಾಕು (ಕ್ರಿ)= ವಿಷ ಉಣಿಸು.

ಜಾರಿಕಿ (ನಾ)= ಜಾರಿಕೆ; ಇಳುಕಲು; ಜಾರುವಂತಿರುವ ನೆಲ; ಕೆಸರುಳ್ಳ ನೆಲ; ಜಾರ್ಕಿ (**ಒಗಟು:** ಜಾರಿಕಿ ನೆಲದಾಗ ಜೀರಿಗಿ ಛೆಲ್ಯಾರ)

ಜಾರು (ಕ್ರಿ)= ಜರುಗು; ನುಣುಚಿಕೊಳ್ಳು; ಮೇಲಿನಿಂದ ಕೆಳಗೆ ಸರಿ; ಕಾಲಿನ ಹಿಡಿತ ಕಳೆದುಕೊ; ನಡೆತಪ್ಪು; ನೀತಿಗೆಡು; ಶೀಲಭ್ರಷ್ಟನಾಗು(ಳಾಗು).

ಜಾರ್ಕಿ (ನಾ)= ಜಾರಿಕೆ; ಜಾರುವ ಜಾಗ; ಇಳುಕಲು.

ಜಾರ್ಬಂಡಿ (ನಾ)= ಜಾರುಬಂಡೆ; ಜಾರುವ ಆಟದ ಸಾಧನೆ; ಫಿಸಲ್ ಬಂಡಿ.

ಜಾಲಗಾರ (ನಾ)= ಮೀನುಗಾರ; ಬೆಸ್ತ; ಅಂಬಿಗ

ಜಾಲಿ (ನಾ)= ಜಾಳಿಗೆ, ಜಾಳ್ಗಿ; ಮೀನಿನಬಲೆ; ನಕಲಿ.

ಜಾವಕ (ವಿ.)= ಹೊರಗೆ ಹೋಗುವ.

ಜಾವೃ (ನಾ)= ಜಾವಳ; ಕತ್ತರಿಸದೆ ಇರುವ ಕೂಸಿನ ಜಡೆ.

ಜಾಹೀರಾತು (ನಾ)= ಪ್ರಚುರಪಡಿಸುವಿಕೆ; ಜಾಹೀರುಗೊಳಿಸುವಿಕೆ.

ಜಾಳ (ನಾ)= ಜಾಳಿಗೆ; ಬಲೆ; ಬೆಂಕಿ; ಉರಿ.

ಜಾಳಿಗಿ (ನಾ)= ಜಾಳಿಗೆ; ಮೀನು ಹಿಡಿವ ಬಲೆ; ಜಾಳ್ಗಿ; ಬಲೆ; ಜಾಲ.

ಜಾಳ್ಗಟ್ಟು (ಕ್ರಿ)= ಜಾಲ ನಿರ್ಮಾಣವಾಗು; ಜೇಡ ಮನೆಗಟ್ಟು.

ಜಾಳ್ಗಿ (ನಾ)= ಜಾಳಿಗಿ (ನೋಡಿರಿ).

ಜಾಳ್ಗಿಬೀಸು (ಕ್ರಿ)= ಮೀನು ಹಿಡಿಯಲು ಬಲೆ ಹಾಕು.

ಜಾಳ್ಗಿಹಾಕು (ಕ್ರಿ)= ಬಲೆ ಒಡ್ಡು; ಜಾಲ ಒಡ್ಡು; ಜಾಲಬೀಸು.

ಜಿಂದ (ನಾ)= ಜೀನ; ಜಿಪುಣ; ಕಂಜೂಸ; ಲೋಭಿ; ಖಂಗೀಸ.

ಜಿಂದಗಾನಿ (ನಾ)= ಸಂಸಾರ; ಜಿನಗಾನಿ.

ಜಿಂದಗಿ (ನಾ) ಉ= ಬದುಕು; ಬಾಳುವೆ; ಆಸ್ತಿ; ಸ್ವತ್ತು; ಸಂಸಾರ; ಜಿನಗಾನಿ.

ಜಿಂದತನ (ನಾ)= ಜಿಪುಣತನ; ಜೀನತನ; ಕಂಜೂಸಿ.

ಜಿಂದಾ (ವಿ)= ಜೀವಂತ; ಜೀವ ಇರುವ.

ಜಿಂದಾದಿಲ್ (ನಾ) ಹಿಂ= ಕಳಕಳಿಯುಳ್ಳವ; ದೊಡ್ಡ ಮನಸ್ಸಿನವ; ಉದಾರ ಹೃದಯಿ.

ಜಿಂದಾಬಾದ (ಕ್ರಿ) ಉ= ಚಿರಾಯು ಆಗಲಿ; ಬದುಕಿರಲಿ; ಜಯವಾಗಲಿ.

ಜಿಂದಾ ಜಲಾಸು (ಕ್ರಿ)= ಹಿಂ= ಜೀವಂತ ಸುಟ್ಟು ಹಾಕು.

ಜಿಂದಾ ಹೂಳು (ಕ್ರಿ)= ಜೀವಂತ-ವಾಗಿರುವಾಗಲೆ ಕುಣಿ ತೋಡಿ ಮಣ್ಣು ಮುಚ್ಚು; ಜೀವಂತ ಹೂಳು.

ಜಿಕಿರ (ನಾ) ಉ= ಜಿಕೀರಿ; ಪ್ರಸ್ತಾಪ; ನೆನಪು ಸಂದರ್ಭ.

ಜಿಕೀರಿ (ನಾ) ಉ= ಜಿಕಿರ (ನೋಡಿರಿ).

ಜಿಗರಿ ದೋಸ್ತ(ನಾ) ಉ= ನೆಚ್ಚಿನ ಗೆಳೆಯ; ಆತ್ಮೀಯ.

ಜಿಗಿ (ನಾ)= ಶಕ್ತಿ; ಜಿಗುಟುತನ; ಜಿಗುಟು.

ಜಿಗಿಯೇರು (ಕ್ರಿ)= ಶಕ್ತಿ ಹೆಚ್ಚಾಗು.

ಜಿಗಿ ಹಾಕು (ಕ್ರಿ)= ಜೋಳದ ಹಿಟ್ಟಿನ ಜತೆ ನೀರಿನ ಎಸರು ಬೆರೆಸು.

ಜಗಿಹಾರು (ಕ್ರಿ)= ಶಕ್ತಿಗುಂದು; ಜಿಗುಟುತನ ಇಲ್ಲವಾಗು.

ಜಿಗುಟಾಗು (ಕ್ರಿ)= ಅಂಟಂಟಾಗು; ಜಿಗಿಯಾಗು.

ಜಿಗುಟು (ವಿ.)= ಅಂಟಂಟು; ಅಂಟಿಕೊಳ್ಳುವ (ಗಾದೆ: ಖೌಂಟು ಖೊಬ್ರಿ; ಜಿಗುಟು ಬೆಲ್ಲಾ).

ಜಿಗುಟು ಮಣ್ಣು (ನಾ)= ಜೇಡಿಮಣ್ಣು; ಎರೆಮಣ್ಣು.

ಜಿಟಿ ಜಿಟಿ (ಧ್ವಿ)= ಜಿಣಿ ಜಿಣಿ; ತುಂತುರು (ಮಳೆ).

ಜಿಡ್ಡು (ನಾ)= ಎಣ್ಣೆ; ತುಪ್ಪ ಮುಂತಾದುವುಗಳ ಜಿಗಿ ಅಥವಾ ಜಿಗುಟು.

ಜಿಡ್ಡು ಹಿಡಿ (ಕ್ರಿ)= ದೀರ್ಘಾವಧಿ ಬೇನೆ ಮುಂದುವರಿ.

ಜಿಡ್ಡೆಣ್ಣೆ (ನಾ)= ಜಿಗುಟುಗೊಂಡ ಎಣ್ಣೆ.

ಜಿಣಿ ಜಿಣಿ (ಧ್ವಿ)= ಜಿಟಿಜಿಟಿ; ಸಣ್ಣಾಗಿ ಮಳೆ ಹನಿ ಉದುರುವಿಕೆ.

ಜಿದ್ದಾಜಿದ್ದಿ (ನಾ)= ಪಣ ಒಡ್ಡುವ ಏರಾಟ.

ಜಿದ್ದಿ (ನಾ)= ಹಟಮಾರಿ; ಹಟಮಾರಿತನ.

ಜಿದ್ದಿಗಿಭೀಳು (ಕ್ರಿ)= ಹಟಹಿಡಿ.

ಜಿದ್ದಿನಾಟ (ನಾ)= ಪಣ ಒಡ್ಡಿ ಆಡುವ ಆಟ.

ಜಿದ್ದು (ನಾ)= ಹಟ; ದುರಾಗ್ರಹ; ಪೈಪೋಟಿ; ಪಣ; ಪಂಥ; ಷರ್ತಿ; ಬಾಜಿ.

ಜಿದ್ದು ಕಟ್ಟು (ಕ್ರಿ)= ಬಾಜಿ ಕಟ್ಟು; ಷರ್ತಿ ಕಟ್ಟು; ಪಣ ಒಡ್ಡು.

ಜಿನಗಾನಿ (ನಾ) ಉ= ಬದುಕು; ಬಾಳುವೆ; ಆಸ್ತಿ; ಸ್ವತ್ತು; ಸಂಸಾರ; ಜಿಂದ್ಗಿ.

ಜಿಪುಣ (ನಾ)= ಜಿಬ್ಬ; ಜಿಂದ; ಜೀನ; ಕೃಪಣ.

ಜಿಬಿ (ವಿ.)= ಜಿಗುಟು; ಅಂಟು; ಅಂಟುವ.

ಜಿಬಿಜಿಬಿ (ಧ್ವಿ)= ಅಂಟಂಟು; ಜಿಗಿಜಿಗಿ.

ಜಿಬುರ್ಕಿ (ನಾ)= ಬೇಳೆಯ ಕಟ್ಟು ಅಥವಾ ಅನ್ನದ ಗಂಜಿಯನ್ನು ಬಸಿಯಲು ಕುದಿಸಿದ ಪಾತ್ರೆಯ ಬಾಯಿಗೆ ಹಚ್ಚಿ ಬಳಸುವ ಬಿದಿರಿನ ದುಂಡಾದ ತಡಿಕೆ; ಗಂಜಿ ಸೋಸಿ ತೆಗೆಯುವ ಬೆತ್ತದ ಸಾಧನ; ಜಿಬುಲ್ಕಿ.

ಜಿಬುಲ್ಕಿ (ನಾ)= ಜಿಬುರ್ಕಿ (ನೋಡಿರಿ).

ಜಿಬ್ಬ (ನಾ)= ಜಿಪುಣ; ಜೀನ; ಜಿಂದ; ಕೃಪಣ.

ಜಿಮ್ಮಾ (ನಾ) ಹಿಂ= ಜಿಮ್ಮೆದಾರಿ; ಜವಾಬ್ದಾರಿ; ಜಿಮ್ಯಾ.

ಜಿಮ್ಮೆದಾರಿ (ನಾ) ಹಿಂ= ಜವಾಬ್ದಾರಿ; ಜಿಮ್ಮಾ; ಜಿಮ್ಯಾ.

ಜಿಮ್ಯಾ (ನಾ) ಹಿಂ= ಜಿಮ್ಮಾ (ನೋಡಿರಿ).

ಜಿರಾ (ನಾ)= ಪಾಟಿಸವಾಲು (ಕೋರ್ಟಿನಲ್ಲಿ).

ಜಿರಾ ಕಟಾಸು (ಕ್ರಿ) ಉ= ಪಾಟಿಸವಾಲು ಹಾಕು.

ಜಿರಾತಿ (ನಾ)= ಒಕ್ಕಲುತನ; ಕೃಷಿಕಾಯಕ.

ಜಿರಾತು (ನಾ) ಉ= ಜಿರಾತಿ (ನೋಡಿರಿ).

ಜಿಲಾಬಿ (ನಾ) ಹಿಂ= ಜಿಲೇಬಿ; ಮೈದಾ ಹಿಟ್ಟಿನಿಂದ ತಯ್ಯಾರಿಸಿದ ಸಿಹಿತಿಂಡಿ.

ಜಿಲೇಬಿ (ನಾ) ಹಿಂ= ಜಿಲಾಬಿ (ನೋಡಿರಿ).

ಜಿಲ್ಲಾ (ನಾ) ಉ= ಜಿಲ್ಲೆ; ತಾಲ್ಲೂಕು ಸಮೂಹಗಳ ಆಡಳಿತ ಕೇಂದ್ರ.

ಜಿಲ್ಲಾ ಪಂಚಾಯತ (ನಾ)= ಜಿಲ್ಲೆಯ ಚುನಾಯಿತ ಆಡಳಿತಮಂಡಳಿ.

ಜಿಲ್ಯಾ (ನಾ)= ಜಿಲ್ಲಾ; ಜಿಲ್ಲೆ.

ಜಿವದಾಗ ಜಿವಾ ಇಲ್ಲದಿರು (ನು)= ಹೊಯ್ದಾಟದಲ್ಲಿರು; ಅಸಮಾಧಾನದಲ್ಲಿರು; ಮಾನಸಿಕ ಗೊಂದಲದಲ್ಲಿರು.

ಜಿವಮಾನ (ನಾ)= ಜೀವಮಾನ; ಬದುಕಿರುವ ಕಾಲ; ಜೀವನ ಕಾಲ.

ಜಿವರಾಶಿ (ನಾ)= ಜೀವರಾಶಿ; ಜೀವಕೋಟಿ; ಪ್ರಾಣಿ ಸಮೂಹ (ಹಾಡು: ಎಂಬತ್ತು ನಾಲ್ಕು ಲಕ್ಷ ಜಿವರಾಶಿ। ಶಂಭೋ ಕಾಣುತಾನ ಕಡಿನಡಸಿ।।)

ಜಿವಾ (ನಾ)= ಜೀವ; ಪ್ರಾಣ (ಗಾದೆ: ಜಿವಾ ಇರಾಥನಾ ಫಜೀತಿಗೇನು ಕಮ್ಮಿ !)

ಜಿವಾ ಕುಡು (ಕ್ರಿ)= ಪ್ರಾಣ ಬಿಡು; ಸಾಯು; ಮರಣ ಹೊಂದು; ಜೀವ ಕೊಡು.

ಜಿವಾಜಿವಾಮಾಡು (ಕ್ರಿ)= ಅತಿ ಪ್ರೀತಿ ತೋರು.

ಜಿವಾ ತೊಗೊ (ಕ್ರಿ)= ಕೊಲ್ಲು; ಸಾಯಿಸು; ಮೋಸ ಮಾಡು; ವಂಚಿಸು.

ಜಿವಾಥುಂಬು (ಕ್ರಿ)= ಜೀವ ಉಳಿಸು; ಬದುಕುವಂತೆ ಮಾಡು; ಶಕ್ತಿ ಬರುವಂತೆ ಮಾಡು; ನಿರ್ಜೀವಿಗೆ ಜೀವ ಬರುವಂತೆ ಮಾಡು.

ಜಿವಾಹಿಡಿ (ಕ್ರಿ)= ಉಸಿರಾಡು; ಬದುಕಿರು.

ಜಿವಾ ಹೊಡಿ (ಕ್ರಿ)= ಪ್ರಾಣ ತೆಗೆ; ಕೊಲ್ಲು.

ಜಿವಾ ಹೋಗು (ಕ್ರಿ)= ಸತ್ತು ಹೋಗು; ಮೃತ್ಯುಬರು.

ಜಿವಾಳ (ನಾ)= ಜೀವಾಳ; ಜೀವದಿಂದ ಕೂಡಿರುವ; ಅಂತರಾಳ (ಉದಾ: ಮುಳ್ಳು ಜಿವಾಳ್ಕ ಮುಟ್ಟೆದ; ಅದ್ಕೆ ಬ್ಯಾನಿ ತಾಳಲ್ದು)

ಜೀಜೀ ಘಕ್ಕಾ (ನಾ)= ಜೀSSS ಎಂದು ಸದ್ದು ಮಾಡುವ ಭ್ರಮರ.

ಜೀಜೀ ಹೊಡಿ (ಕ್ರಿ)= ಕಲ್ಗಿ ತುರಾಯಿ ಹಾಡಿನ ಪಲ್ಲವಿ ಹಾಡು; ಬಾಲ ಬಡಿ; ಅಂಗಾಲು ನೆಕ್ಕು.

ಜೀತ್ (ನಾ)= ಜಯ; ಗೆಲುವು; ಯಶ

ಜೀತಾಪೀರ (ನಾ)= ಜಿಂದಾಪೀರ; ಜೀವಂತದೇವರು.

ಜೀತಿ (ನಾ)= ಸೆಲೆ; ಬುಗ್ಗೆ; ಒಸರುವಿಕೆ; ನೆಲದಿಂದ ನಿರಂತರ ನೀರಿನ ಚಿಮ್ಮುವಿಕೆ.

ಜೀತಿ ಹಿಡಿ (ಕ್ರಿ)= ನೆಲದಿಂದ ನಿರಂತರ ನೀರು ಚಿಮ್ಮು, ಒಸರು, ಹರಿ.

ಜೀನಗಾರ (ನಾ)= ಕುದುರೆಯ ಥಡಿಯನ್ನು ತಯಾರಿಸುವವನು; ಚಿತ್ರಗಾರ.

ಜೀನು (ನಾ)= ಕುದುರೆಯ ಬೆನ್ನಮೇಲೆ ಕುಳಿತುಕೊಳ್ಳಲು ಹಾಕುವ ನೂಲಿನ ಇಲ್ಲವೆ ಚರ್ಮದ ಥಡಿ.

ಜೀನ್ಯಾ (ನಾ)= ಮಾಳಿಗೆ ಹತ್ತುವ ಮೆಟ್ಟಿಲುಗಳ ಸಾಲು

ಜೀಬು (ನಾ)= ಜೀಪು; ಮೋಟಾರುವಾಹನ; ನಾಲಿಗೆ.

ಜೀರಾಮಣಿ (ನಾ)= ಗುಳ್ಳು, ಗುಳ್ದಾಳಿ; ಒಂದು ಬಗೆಯ ಚಿನ್ನದ ಕಂಠಾಭರಣ.

ಜೀರ್ಗಿ (ನಾ)= ಜೀರಿಗೆ, ಜೀರಕ, ಮಸಾಲೆಕಾಳು; ವಗರಾಣಿಕಾಣು; ಘೋಣಿದಾಣಿ. (ಒಗಟು :

ಜಾರಿಕಿನೆಲದಾಗ ಜೀರ್ಗಿಭೆಲ್ಸ್ಯಾರ -ಮುಗಿಲು, ಚುಕ್ಕಿಗಳು).

ಜೀವಂತ (ನಾ)= ಬದುಕಿರುವ; ಜೀವಉಳ್ಳ.

ಜೀವ (ನಾ)= ಸಂ= ಪ್ರಾಣ; ಜೀವಾತ್ಮ.

ಜೀವಧಾನ (ನಾ)= ಜೀವದಾನ; ಬದುಕಲು ಅವಕಾಶ ಕೊಡುವಿಕೆ.

ಜೀವಾ (ನಾ)= ಜೀವ; ಜೀವಾತ್ಮ; ಪ್ರಾಣ; ಜಿವಾ.

ಜೀವಾ ಹಿಂಡು (ಕ್ರಿ)= ತೊಂದರೆ ಕೊಡು; ಪೀಡಿಸು; ಸಾಯಿಸು.

ಜೀವಾ ಹೊಡಿ (ಕ್ರಿ)= ಜೀವ ತೆಗೆ; ಸಾಯಿಸು; ಕೊಲ್ಲು.

ಜೀ ಹೊಡಿ (ಕ್ರಿ)= ಪಲ್ಲವಿ ಹಾಡು; ಟುಣ್‌ಟುಣಿ ಹೊಡಿ; ಬಾಲಬಡಿ; ಅಂಗಾಲು ನೆಕ್ಕು.

ಜುಂ (ನಾ)= ರೋಮಾಂಚನ; ಪುಳಕ.

ಜುಂಜುಂ (ಧ್ವಿ)= ಚುಂಚುಂ; ಮುಳ್ಳೇರುವಿಕೆ.

ಜುಂಹಿಡಿ (ಕ್ರಿ)= ಅಂಗಾಲು, ಅಂಗೈ ಅಥವಾ ಶರೀರದ ಯಾವುದೆ ಭಾಗದಲ್ಲಿ ಮುಳ್ಳೇರು; ಜೋಮು ಹಿಡಿ; ಇರುವೆ ಬಂದಂತಾಗು.

ಜುಗ (ನಾ)= ಜೊತೆ; ಜೋಡಿ.

ಜುಗತಿ (ನಾ)= ಪ್ರಯತ್ನ ಕೋಶೀಸು; ಉಳಿತಾಯ.

ಜುಗತಿ ಮಾಡು (ಕ್ರಿ)= ಪ್ರಯತ್ನ ಮಾಡು; ಉಳಿತಾಯ ಮಾಡು; ಉಳಿಸು; ಜೀನತನಮಾಡು.

ಜುಗಾ (ನಾ)= ಜುಗ (ನೋಡಿರಿ).

ಜುಗಾಡು (ನಾ)= ಸಾಮಗ್ರಿ; ಅವಶ್ಯಕ ವಸ್ತುಗಳ ಸಂಗ್ರಹ.

ಜುಗಾರು (ನಾ)= ಜೂಜು; ಪಂದ್ಯ; ಪಣ.

ಜುಜಬಿ (ವಿ.)= ಅಲ್ಪವಾದ; ಸಣ್ಣದಾದ; ಚಿಲ್ರೆ; ಅತಿ ಸಾಮಾನ್ಯ ಮಟ್ಟದ.

ಜುಡಾವಾಗು (ಕ್ರಿ)= ಜೋಡಿಯಾಗು; ಜತೆಗೂಡು.

ಜುಡಾಸು (ಕ್ರಿ)= ಜೋಡಿಸು; ಹೊಂದಿಸು; ಜೋಡಿಮಾಡು.

ಜುನಾ (ನಾ)ಮ= ಹಳೆಯದು.

ಜುನಾ ಸಾಮಾನು (ನಾ)= ಹಳೆಯ ಸಾಮಾನು.

ಜುನಿ (ನಾ)ಮ.= ಹಳೆಯದು

ಜುನೂನು (ನಾ)ಹಿಂ = ಹುಚ್ಚು; ಹುಚ್ಚ; ಪಾಗಲ್.

ಜುಬಾನು (ನಾ) ಉ.= ಜಬಾನು; ನಾಲಗೆ; ವಚನ.

ಜುಬಾಬು (ನಾ) ಉ.= ಜವಾಬು; ಉತ್ತರ.

ಜುಬಾಬು ಒಡಿ (ಕ್ರಿ)= ಮಾತಾಡು; (ಪೀರನ ಸವಾರಿ) ಮಾತಾಡು.

ಜುಬಾಬುಕುಡು (ಕ್ರಿ) = ಉತ್ತರಿಸು.

ಜುಮ್ಮಕಜುಮ್ಮಾ (ಅ) ಉ.= ಪ್ರತಿ ಶುಕ್ರವಾರ. ಶುಕ್ರವಾರದಿಂದ ಮುಂದಿನ ಶುಕ್ರವಾರದವರೆಗೆ

ಜುಮ್ಮಾ (ನಾ) ಉ.= ಶುಕ್ರವಾರ; ಜುಮ್ಮೆದಾರಿ.

ಜುಮ್ಮಾ ಮಸೀದಿ (ನಾ) ಉ.= ಪ್ರತಿ ಶುಕ್ರವಾರ ಮುಸಲ್ಮಾನರು ಪ್ರಾರ್ಥನೆ ಸಲ್ಲಿಸುವ ಜಾಗ.

ಜುಮ್ಮು ಹಿಡಿ (ಕ್ರಿ)= ಜುಂ ಹಿಡಿ (ನೋಡಿರಿ).

ಜುಮ್ಲಾ (ನಾ) ಉ.= ಒಟ್ಟು; ಮೊತ್ತ.

ಜುರ್ಮಾನಾ (ನಾ) ಉ.= ದಂಡ; ಜುಲ್ಮಾನೆ.

ಜುರ್ಮಾನಾ ಹಾಕು (ಕ್ರಿ)= ದಂಡ ಹೇರು; ಜುಲ್ಮಾನೆ ವಿಧಿಸು.

ಜುರ್ರತ್ತು (ನಾ) ಉ.= ಹಿಮ್ಮತ್ತು; ಧೈರ್ಯ; ಎದೆಗಾರಿಕೆ.

ಜುಲಾಬು (ನಾ) ಉ.= ಭೇದಿ; ವಿರೇಚನ; ಮಲವಿಸರ್ಜನೆಯ ಔಷಧಿ.

ಜುಲಾಬು ಕುಡು (ಕ್ರಿ)= ಭೇದಿಯಾಗುವಂತೆ ಮಾಡು; ಪಾಠ ಕಲಿಸು; ಸೇಡು ಸಾಧಿಸು.

ಜುಲುಮಿ (ನಾ) ಉ.= ಅತ್ಯಾಚಾರ; ಕಾಟ; ತೊಂದರೆ.

ಜುಲುಮು (ನಾ) ಉ.= ಜುಲುಮಿ (ನೋಡಿರಿ).

ಜುಲುಸು (ನಾ) ಉ.= ಮೆರವಣಿಗೆ; ದಿಬ್ಬಣ.

ಜುಲುಸುತೆಗಿ (ಕ್ರಿ) ಉ.= ಮೆರವಣಿಗೆ ಹೊರಡಿಸು; ದಿಬ್ಬಣ ಹೊರಡಿಸು.

ಜುಲೈ (ನಾ) ಉ.= ಹಟಕಾರ; ನೇಕಾರ; ಜೇಡ; ಜಾಡ; ಇಂಗ್ಲಿಷ್ ಕ್ಯಾಲೆಂಡರಿನ ಏಳನೆಯ ತಿಂಗಳು.

ಜುಲ್ಮಾನಾ (ನಾ)= ಜುರ್ಮಾನಾ (ನೋಡಿರಿ).

ಜುಲ್ಮು (ನಾ) ಉ.= ಜುಲುಮು (ನೋಡಿರಿ).

ಜುವ್ವಾ (ನಾ) ಹಿಂ.= ಜೂಜು; ಪರೇಲ್; ಮೂರೆಲೆ ಇಸ್ಪೀಟಿನ ಆಟ; ಅಂದರ ಬಾಹರ ಆಟ; ಪಗಡೆಯಾಟ.

ಜುವ್ವಾ ಅಡ್ಡಾ (ನಾ)= ಜೂಜಾಟದ ಕೇಂದ್ರ.

ಜುವ್ವಾಬಾಜ (ನಾ) ಉ.= ಜೂಜಿನ ವ್ಯಸನಿ.

ಜುವ್ವಾಬಾಜಿ (ನಾ) ಉ= ಜೂಜುಗಾರಿಕೆ.

ಜೂತಂಪಟ್ಟಿ (ನಾ)= ಪರಸ್ಪರ ಪಾದರಕ್ಷೆ-ಪ್ರಹಾರ.

ಜೂರತ್ತು (ನಾ)= ಜೋರು; ಹಿಮ್ಮತ್ತು; ಸಾಹಸ; ಧೈರ್ಯ; ಎದೆಗಾರಿಕೆ.

ಜೂಸು (ನಾ)ಇಂ.= ಕಬ್ಬಿನ ರಸ; ಹಣ್ಣಿನ ರಸ; ಸಾರ.

ಜೆಟ್ಟಿ (ನಾ)= ಯಟ್ಟಿ; ನಾರಿನ ಯಟ್ಟಿ; ಸಣಬು ಅಥವಾ ಪುಂಡಿಯ ನಾರಿನ ಎಳೆ.

ಜೇ ಅಂತ (ಅ)= ಒಂದೇ ಸಮನೆ; ನಿರಂತರ.

ಜೇ ಅಂತ ಹರಿಬೀಳು (ನು)= ಒಂದೇ ಸಮನೆ ಹಟಮಾಡು; ಜಿದ್ದು ಸಾಧಿಸು; ಕಿರಿಕಿರಿ ಮಾಡು.

ಜೇಕು (ನಾ)= ಒಂದು ಪ್ರಕಾರದ ಸುವಾಸಿಕ ಗಡ್ಡೆಯುಳ್ಳ ಹುಲ್ಲು; ಜೌಗು ಪ್ರದೇಶದ ಹುಲ್ಲು; ದೇಕು.

ಜೇನಿನ ಗಡ್ಡಿ (ನಾ)= ಜೇನಿನ ಗೂಡಿನಲ್ಲಿಯ ಮಧು ಉಳ್ಳ ಭಾಗ.

ಜೇನು (ನಾ)= ಜೇನಿನ ಗೂಡು; ಜೇನು ತುಪ್ಪ.

ಜೇನು ತುಪ್ಪ (ನಾ)= ಜೇನು ಹುಳು ಸಂಗ್ರಹಿಸುವ ಮಧು.

ಜೇನು ಹುಟ್ಟಿ (ನಾ)= ಜೇನಿನ ಗೂಡಿನಲ್ಲಿಯ ಮರಿಗಳನ್ನು ಸಾಕುವ ಭಾಗ.

ಜೇನು ಹೊಡಿ (ಕ್ರಿ)= ಜೇನು ಬಿಡಿಸು; ಜೇನುತುಪ್ಪ ಸಂಗ್ರಹಿಸು.

ಜೇನ್ನೊಣ (ನಾ)= ಜೇನು ಹುಳು.

ಜೇಬೀ (ವಿ) ಹಿಂ= ಜೇಬಿನಲ್ಲಿರುವ; ಕಿಸೆಯಲ್ಲಿರುವ; ಬಕ್ಕಣದಲ್ಲಿರುವ.

ಜೇಬೀಘಡಿ (ನಾ) ಹಿಂ.= ಜೇಬಿನಲ್ಲಿರುವ ಗಡಿಯಾರ.

ಜೇಬು (ನಾ) ಹಿಂ.= ಕಿಸೆ; ಬಕ್ಕಣ.

ಜೇಬುಗಳ್ಳ (ನಾ)= ಕಿಸೆಗಳ್ಳ.

ಜೇಬು ಹೊಡಿ (ಕ್ರಿ)= ಕಿಸೆ ಕತ್ತರಿಸು; ಜೇಬಿನ ಹಣವನ್ನು ಗೊತ್ತಾಗದಂತೆ ತೆಗೆದುಕೊ.

ಜೇರಾಗು (ಕ್ರಿ)= ಗಂಭೀರವಾಗಿ ಅನಾರೋಗ್ಯದಿಂದ ನರಳು; ಕಾಯಿಲೆ ಬೀಳು.

ಜೇರಿಗೆ ಬಾ (ಕ್ರಿ)= ಸಾವು ಸಮೀಪಿಸು.

ಜೇರು ಆಗು (ಕ್ರಿ)= ಮೃತ್ಯುಶಯ್ಯೆಯಲ್ಲಿರು.

ಜೇರುಖಿಂಡಿ (ನಾ)= ಗೋಡೆಯಲ್ಲಿರುವ ಮಾಳಿಗೆ ಸಮೀಪದ ಕಿಂಡಿ.

ಜೇರುಮಾಡು (ಕ್ರಿ)= ಬೇನೆಯಿಂದ ಜರ್ಜರಿತಗೊಳಿಸು.

ಜೇಲಖಾನಿ (ನಾ) ಉ.= ಜೈಲು; ಕಾರಾಗ್ರಹ.

ಜೇಲು (ನಾ)= ಜೈಲು; ಸೆರೆಮನೆ; ಕಾರಾಗ್ರಹ.

ಜೈ (ನಾ)= ಜಯ.

ಜೈ ಕರ್ನಾಟಕ (ನಾ)= ಕರ್ನಾಟಕಕ್ಕೆ ಜಯವಾಗಲಿ.

ಜೈದೇವಿ ಗಾಯಕ್ವಾಡ (ನಾ)= ರಾಜೇಶ್ವರ ಗ್ರಾಮದ ಒಬ್ಬ ಪ್ರಸಿದ್ಧ ದಲಿತ ಸಾಹಿತಿ.

ಜೈ ಬಸವ (ನಾ)= ಬಸವ ಭಕ್ತರು ಸಲ್ಲಿಸುವ ನಮಸ್ಕಾರ; ಶರಣಾರ್ಥಿ.

ಜೈಭೀಮ (ನಾ)= ಡಾ. ಭೀಮರಾವ ಅಂಬೇಡ್ಕರರ ಅನುಯಾಯಿಗಳು ಸಲ್ಲಿಸುವ ನಮಸ್ಕಾರ.

ಜೈ ಮಾಡು (ಕ್ರಿ)= ನಮಸ್ಕರಿಸು (ಬಾಲಭಾಷೆ).

ಜೈರಾಮ (ನಾ)= ರಾಮ ಭಕ್ತರು ಸಲ್ಲಿಸುವ ನಮಸ್ಕಾರ.

ಜೈಲು (ನಾ)= ಜೇಲು; ಸೆರೆಮನೆ; ಕಾರಾಗೃಹ.

ಜೈ ಸಾಯಿರಾಮ (ನಾ)= ಸಾಯಿಬಾಬಾನ ಭಕ್ತರು ಸಲ್ಲಿಸುವ ನಮಸ್ಕಾರ.

ಜೈಹಿಂದ (ನಾ)= ಭಾರತಸ್ವಾತಂತ್ರ್ಯ ಹೋರಾಟಗಾರರು ಸಲ್ಲಿಸುವ ನಮಸ್ಕಾರ; ಹೈದ್ರಾಬಾದ ರಾಜ್ಯದ ಮೇಲೆ ಭಾರತ ಸರಕಾರದ ವಿಜಯ (೧೭-೦೯-೧೯೪೮). ಭಾಷಣಾಂತ್ಯದಲ್ಲಿ ಭಾಷಣಕಾರರು ಸಲ್ಲಿಸುವ ವಂದನೆ; ಹಿಂದುಸ್ತಾನಕ್ಕೆ ಜಯವಾಗಲಿ.

ಜೈಹಿಂದಯಾಳ್ಯಾ (ನಾ)= ಹೈದ್ರಾಬಾದ ರಾಜ್ಯದಲ್ಲಿ ರಜಾಕಾರರು ನಡೆಸಿದ ಅತ್ಯಾಚಾರದ ವಿರುದ್ಧ ಭಾರತ ಸರಕಾರ

ವಿಜಯ ಸಾಧಿಸಿದ ಕಾಲ (ದಿ. ೧೭-೦೯-೧೯೪೮).

ಜೈ ಹೊಡಿ (ಕ್ರಿ)= ಜಯ ಘೋಷ ಮಾಡು; ಬಾಲ ಬಡಿ; ಅಂಗಾಲು ನೆಕ್ಕು.

ಜೊಂಡು (ನಾ)= ನೀರಿನಲ್ಲಿಯ ಪಾಚಿ; ಹಾವಸೆ; ಬಾಯಿಯಲ್ಲಿಯ ಅಂಟಂಟು-ಗುಳು; ಗಂಡುಗುಳು.

ಜೊಂಡುಗಟ್ಟು (ಕ್ರಿ)= ಪಾಚಿಉಂಟಾಗು; ಹಾವಸೆಯುಂಟಾಗು; ಹಾಸುಗಟ್ಟು.

ಜೊಕುಮಾರ (ನಾ)= ಭಾದ್ರಪದಶುಕ್ಲದ ಅಷ್ಟಮಿ (ಅಟಮಿ) ಯಂದು ಜನ್ಮ ತಾಳುವ ಜನಪದ ದೇವರು. ಜೋಕುಮಾರನ ಭಕ್ತೆಯರು ಆದಿನದಿಂದ ಜೊಕುಮಾರನ ಮಣ್ಣಿನ ಪ್ರತಿಮೆಯನ್ನು ಲಕ್ಕಿಯ ಬುಟ್ಟಿಯಲ್ಲಿ ಇಟಗೊಂಡು ಮನೆಮನೆ ಸುತ್ತುತ್ತ "ಆಟ್ಮಿ ದಿನ ಹುಟಿದಾನೆ ಕೊಮ್ರಾಯ ಸೆಟೀರ್ಕದ್ರ್ಯ ಬೆಸ್ಗೊಳ್ರಿ ಜೊಕುಮಾರ" ಎಂದು ಹಾಡುತ್ತಾರೆ. ಅಷ್ಟಮಿದಿನ ಗಣೇಶ ವಿಸರ್ಜನೆ ಮಾಡದಿದ್ದರೆ ಗಣೇಶನ ಹೊಟ್ಟೆಯೊಡೆಯುವುದೆಂದು ಜಾನಪದರ ನಂಬುಗೆಯಾಗಿದೆ.

ಜೋಕುಮಾರ ಹುಣ್ಣಿ (ನಾ)= ಜೋಕೆನ್ನುಣ್ಣಿ; ಜೊಕುಮಾರನ ಹುಣ್ಣಿವೆ; ಭಾದ್ರಪದ ಮಾಸದಲ್ಲಿ ಬರುವ ಜೊಕುಮಾರ ಹುಣ್ಣಿವೆ.

ಜೊಗಿಭೀಳು (ಕ್ರಿ)= ಜೋತಾಡು; ನೇತಾಡು.

ಜೊಗ್ಗಿ (ಬಿ.)= ಬಹಳ; ಸಿಕ್ಕಾಬಟ್ಟೆ; ಎಳೆದು ಹಿಡಿದು.

ಜೊಗ್ಗಿ ಹಿಡಿ (ಕ್ರಿ)= ಎಳೆದು ಹಿಡಿ.

ಜೊಗ್ಗಿ ಹೊಡಿ (ಕ್ರಿ)= ಜೋರಾಗಿ ಹೊಡಿ; ಹೊಟ್ಟೆತುಂಬ ಉಣ್ಣು; ಮನಸ್ಸಿಗೆ ಬಂದಷ್ಟು ಉಣ್ಣು.

ಜೊಗ್ಗು (ಕ್ರಿ)= ಜಗ್ಗು; ಎಳೆ.

ಜೊಗ್ಯಾಡು (ಕ್ರಿ)= ಎಳೆದಾಡು; ಖಿಂಚಾಸು.

ಜೊಜ್ಜು (ನಾ)= ತೊದಲು ಮಾತಾಡುವವ; ತೊದಲ್ಯಾ ಜೊಜ್ಯಾ.

ಜೊಜ್ಜಿ (ನಾ)= ತೊದಲು ಮಾತನಾಡುವವಳು; ತೊದಲೆ (ಬೈಗುಳ)

ಜೊಜ್ಜು (ಕ್ರಿ)= ತೊದಲು; ತೊದಲು. ಮಾತಾಡು.

ಜೊಜ್ಯಾ (ನಾ)= ಜೊಜ್ಜ; ತೊದಲು ಮಾತಾಡುವವನು; ತೊದಲ್ಯಾ (ಬೈಗುಳ)

ಜೊಲ್ಲಿ (ನಾ)= ಆಸೆಬುರುಕಿ; ಹಂಬಲಿಸುವವಳು; ಜೊಲ್ಲು ಸೋರಿಸುವವಳು.

ಜೊಲ್ಲು (ನಾ)= ಲಾಲಾರಸ; ಬಾಯಿಯಿಂದ ಸೋರುವ ಇಲ್ಲವೆ ಒಸರುವ ತಿಳಿದಾದ ದ್ರವ.

ಜೊಲ್ಲು ಸೋರು (ಕ್ರಿ)= ಬಾಯಿಯಿಂದ ಲಾಲಾರಸ ಒಸರು; ಹಂಬಲವಾಗು.

ಜೊಲ್ಲು ಸೋರ್ಸು (ಕ್ರಿ)= ಬಾಯಿಯಿಂದ ಲಾಲಾರಸ ಸೋರಿಸು; ಆಸೆಪಡು; ಹಂಬಲಿಸು;

ಜೊಲ್ಲುಕುಡಿ (ಕ್ರಿ)= ಎಂಜಲು ಕುಡಿ; ಎಂಜಲಿಗೆ ಆಶಿಸು; ಹಂಬಲ ಪಡು.

ಜೊಲ್ಲುತಿನು (ಕ್ರಿ)= ಎಂಜಲು ಸೇವಿಸು; ಎಂಜಲು ಇಚ್ಛಿಸು; ಹಂಬಲಿಸು.

ಜೊಲ್ಲ್ಯಾ (ನಾ)= ಜೊಲ್ಲು ಸೋರಿಸುವವ; ಜೊಲ್ಲಿನಿಂದ ಮೈ ಹೊಲಸು ಮಾಡಿಕೊಂಡವ; ಹಂಬಲಿಗ; ಆಸೆಬುರುಕ (ಬೈಗುಳ)

ಜೊಳ್ಳು (ನಾ)= ಸೊಳ್ಳು; ಪೊಳ್ಳು; ನುಸಿ ಅಥವಾ ಹುಳುಹತ್ತಿ ಪೊಳ್ಳಾದ ಕಾಳು.

ಜೋಂಬ್ಯಾ (ನಾ)= ಸಿಂಬಳ ಸೋರಿಸುವವನು; ಇಳಿ ಮೋರೆಯವನು; ಜೋಲು ಮುಖ ಉಳ್ಳವನ; ಸುಂಬುಳ್ಯಾ (ಬೈಗುಳ).

ಜೋಕು (ನಾ)= ಹಾಸ್ಯ; ಹಾಸ್ಯ ಚಟಾಕಿ.

ಜೋಕುಮಾರ (ನಾ)= ಜೊಕುಮಾರ; ಜೋಕ್ಯಾ; ಭಾದ್ರಪದ ಶುಕ್ಲ ಅಷ್ಟಮಿಯಂದು ಹುಟ್ಟಿದ ಜನಪದ ದೇವರು ಜೊಕುಮಾರ. ಗಣಪತಿಯು ಜೋಕುಮಾರನ ಭೇಟಿ ಮಾಡಿದರೆ ಗಣಪತಿಯ ಹೊಟ್ಟೆಯೊಡೆಯುವುದೆಂಬುದು ಜನಪದರ ನಂಬುಗೆಯಾಗಿದೆ.

ಜೋಕ್ಯಾ (ನಾ)= ಜೊಕುಮಾರ; ಜೋಕುಮಾರ.

ಜೋಕ್ಯಾನ್ಹುಣ್ಣಿ (ನಾ)= ಭಾದ್ರಪದ ಮಾಸದಲ್ಲಿ ಬರುವ ಹುಣ್ಣಿವೆ.

ಜೋಗಣ್ಯಾ (ನಾ)= ದೇವಿಯ ಹೆಸರಿನಲ್ಲಿ ಭಿಕ್ಷೆ ಬೇಡುವ ಭಕ್ತ; ಅಂಬಾಬಾಯಿಯ ಭಕ್ತ.

ಜೋಗಣಿ (ನಾ)= ಅಂಬಾಬಾಯಿಯ ಭಕ್ತೆ; ದೇವದಾಸಿ; ಯೋಗಿನಿ; ತಪಸ್ವಿನಿ.

ಜೋಗತಿ (ನಾ)= ಅಂಬಾಭವಾನಿಯ ಹೆಸರಿನಲ್ಲಿ ಜೋಗಾ ಬೇಡುವ ಕಾಯಕದವಳು; ಅಂಬಾಬಾಯಿ ಭಕ್ತೆ.

ಜೋಗಾ (ನಾ)= ಅಂಬಾ ಭವಾನಿಯ ಹೆಸರಿನಲ್ಲಿ ಬೇಡುವ ಭಿಕ್ಷೆ.

ಜೋಗಾ ಬೇಡು (ಕ್ರಿ)= ಅಂಬಾ ಭವಾನಿಯ ಹೆಸರಿನಲ್ಲಿ ಭಿಕ್ಷೆ ಬೇಡು.

ಜೋಗಿ (ನಾ)= ಯೊ:ಗಿ ಸಾಧು; ತಪಸ್ವಿ.

ಜೋಗುಣಿ (ನಾ)= ದೇವದಾಸಿ; ದೇವಿಯ ಹೆಸರಿಗೆ ಬಿಟ್ಟ ಹೆಣ್ಣು; ಯೋಗಿನಿ; ತಪಸ್ವಿನಿ; ಯೋಗಿಣಿ.

ಜೋಗುಳ (ನಾ)= ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು; ಲಾಲಿಪದ; ತೊಟ್ಟಿಲಿನ ಮೇಲ್ಭಾಗದಲ್ಲಿ ಕಟ್ಟಿದ ಬಟ್ಟೆಯ ಜೋಳಿಗೆ.

ಜೋಗುಳ ಹಾಡು (ನಾ)= ತೊಟ್ಟಿಲ ಹಾಡು; ತೊಟ್ಟಿಲು ತೂಗುತ್ತ ಕೂಸನ್ನು ಮಲಗಿಸುವ ಹಾಡು (ಉದಾ: ಜೋಜೋ ಎಂದು ಜಲ್ಮಕ್ಕೆ ಬಂದು। ನಿಜಗುರು ಕರುಣಾದಿ ಬೋಧಾವ ಪಡೆದು। ಮೂಜಗದೊಡೆಯನ ಮೂಲವತಿಳಿದು। ಬೀಜ ಮಂತ್ರದಿಂದೆ ಜೋಗುಳ ಪಾಡಿರೆಂದು ಜೋಜೋ॥)

ಜೋಗ್ತಿ (ನಾ)= ಜೋಗತಿ (ನೋಡಿರಿ)

ಜೋಡಾ (ನಾ)= ಬೂಟು; ಮೊಚ್ಚೆ; ಪಾದರಕ್ಷೆ.

ಜೋಡಾ ಉಚ್ಚು (ನಾ)= ಮೊಚ್ಚೆ ತೋರಿಸು; ಮೊಚ್ಚೆಯಿಂದ ಹೊಡೆಯುವೆನೆಂದು ಸೂಚಿಸು.

ಜೋಡಾ ತೋರ್ಸು (ಕ್ರಿ)= ಮೊಚ್ಚೆ ತೋರಿಸು; ಪಾದ ರಕ್ಷೆಯಿಂದ ಹೊಡೆಯುವೆನೆಂದು ಸೂಚಿಸು.

ಜೋಡಾ ಹಚ್ಚಿ ಹೊಡಿ (ಕ್ರಿ)= ಬೂಟಿನಿಂದ ಹೊಡೆ; ಮೆಟ್ಟಿನಿಂದ ಹೊಡೆ.

ಜೋಡಿ (ನಾ)= ಇಬ್ಬರಗುಂಪು; ಜೊತೆ; ಜೋಡು.

ಜೋಡಿಯಾಗು (ಕ್ರಿ)= ಹೊಂದಿಕೊಳ್ಳು; ಜೊತೆಗೂಡು; ಮದುವೆಯಾಗು.

ಜೋಡು (ನಾ)= ಜೋಡಿ; ಜೊತೆ; ಇಬ್ಬರ ಗುಂಪು.

ಜೋಡುನಲ್ಲಿ ಬಂದೂಕು (ನಾ)= ಎರಡುನಳಕೆಯ ತುಪಾಕಿ, ಬಂದೂಕು.

ಜೋಡುನಾಲ್ಗಿ (ನಾ)= ಹಾವಿನ ನಾಲಗೆ; ವಿಷ ಊಡುವ ನಾಲಗೆ; ಮಾತು ಬದಲಿಸುವ ನಾಲಗೆ.

ಜೋಡ್ಸು (ಕ್ರಿ)= ಜೋಡಿಸು; ಹೊಂದಿಸು; ಜತೆಗೂಡಿಸು.

ಜೋತಿ (ನಾ)= ಜ್ಯೋತಿ; ದೀಪ.

ಜೋತಿ ಸಾಗ್ಸಿ (ನಾ)= ದೀಪದ ಸಾಕ್ಷಿ; ದೀಪದಾಣೆ.

ಜೋತಿ ಬೆಳಗು (ಕ್ರಿ)= ಆರತಿ ಎತ್ತು; ಆರತಿ ಮಾಡು.

ಜೋಬು (ನಾ)= ಜೇಬು; ಕಿಸೆ.

ಜೋರಾಜೋರು (ದ್ವಿ)= ಸೋರಿದಂತೆ; ಒಸರಿದಂತೆ.

ಜೋರು (ನಾ)= ಒತ್ತಾಯ; ಬಲಾತ್ಕಾರ.

ಜೋಸಿ (ನಾ)= ಜೋಯಿಸ; ಪಂಚಾಂಗ ಹೇಳುವವನು.

ಜೋಸು (ನಾ)ಉ.= ಉತ್ಸಾಹ; ಹುಮ್ಮಸು.

ಜೋಳ್ಗಿ (ನಾ)= ಜೋಳಿಗೆ; ಬಟ್ಟೆಯಿಂದ ಮಾಡಿದ ತೊಟ್ಟಿಲು.

ಜ್ಞಾನ (ನಾ)= ತಿಳುವಳಿಕೆ.

ಜ್ಯೋತಿರ್ಲಿಂಗ (ನಾ)= ಭಾರತದಾದ್ಯಂತ ಇರುವ ಹನ್ನೆರಡು ಲಿಂಗಗಳು.

ಜ್ವರ (ನಾ)= ಉರಿ; ಶರೀರದ ಶಾಖವೇರುವ ಒಂದು ಬಗೆಯ ರೋಗ ಲಕ್ಷಣ.

ಜ್ವಾಕಿ (ನಾ)= ಜೋಕೆ; ಎಚ್ಚರ; ಹುಷಾರ; ಜ್ವಾಪಾನ.

ಜ್ವಾಳಾ (ನಾ)= ಜೋಳ.

ಜ್ವಾಳ್ದಾಬ್ಬಿ (ನಾ)= ಜೋಳದಾಪ್ಯಾ ಎಂಬ ಊರು.

ಜ್ವಾಳ್ದುಬಾನಾ (ನಾ)= ಜೋಳ ಥಳಿಸಿ, ಕುದಿಸಿ, ತಯಾರಿಸಿದ ಬೋನ; ಅನ್ನ.

ಝ

ಝುಂಕಾರ (ನಾ)= ಝುಣಗುಟ್ಟುವಿಕೆ; ಜಣತ್ಕಾರ.

ಝುಂಗು (ನಾ)= ಜಂಗು; ತುಕ್ಕು; ಕಬ್ಬಿಣದ ಕೆಡುವಿಕೆ.

ಝುಂಗುತಿನು (ಕ್ರಿ)= ಜಂಗು ಉಂಟಾಗು; ತುಕ್ಕು ಹಿಡಿ; ಕಬ್ಬಿಣ ಕೆಡು.

ಝುಂಗು ಹಿಡಿ (ಕ್ರಿ)= ತುಕ್ಕುಂಟಾಗು; ಜಂಗುತಿನು; ಕಬ್ಬಿಣ ಕೆಡು.

ಝುಂಗೇರು (ಕ್ರಿ)= ಜಂಗುತಿನು; ತುಕ್ಕು ಹಿಡಿ; ಕಬ್ಬಿಣ ಕೆಡು.

ಝುಂಗೊಡಿ (ಕ್ರಿ)= ಜಂಗು ಉಂಟಾಗು; ಕಬ್ಬಿಣ ಕೆಡು; ತುಕ್ಕು ಹಿಡಿ.

ಝುಂಜಟ (ನಾ)= ಗೋಜು; ಉಸಾಬರಿ; ಜಂಜಾಟ; ಜಂಜಡ.

ಝುಂಜಟ ಸುತ್ತು (ಕ್ರಿ)= ಜಂಜಾಟದಲ್ಲಿ ಸಿಲುಕು; ಜಂಜಡಸುತ್ತುವರಿ.

ಝುಂಡಾ (ನಾ)= ಧ್ವಜ; ನಿಶಾನೆ; ಪತಾಕೆ.

ಝುಂಡುವ್ವಾ (ನಾ)= ಚೆಂಡುವ್ವ; ಚೆಂಡಿ ನಂತಿರುವ ಹೂವು.

ಝುಂಪರು (ನಾ)= ಜಂಪರು; ಕುಪ್ಪಸ; ರವಿಕೆ; ಹೆಂಗಸರ ಎದೆಯುಡುಪು.

ಝುಂಪು (ನಾ)= ಜಂಪು; ಮಂಪರು; ತೂಕಡಿಕೆ.

ಝುಂಪು ಹತ್ತು (ಕ್ರಿ)= ನಿದ್ರೆ ಬರು; ತೂಕಡಿಕೆ ಉಂಟಾಗು.

ಝುಂಬ್ಯಾ (ನಾ)= ಜಂಬಿಯಾ; ಚೂರಿ.

ಝುಕ್ಕುಸ್ತಾ (ಅ)= ಅನಿರ್ವಾಹ; ನಿರ್ವಾಹವಿಲ್ಲದೆ; ಬೇರೆ ದಾರಿ ಕಾಣದೆ.

ಝುಕ್ಬುದ್ದಿ (ನಾ)= ತಪ್ಪು ವಿಚಾರ, ತಪ್ಪು ಕೆಲಸ; ಪಶ್ಚಾತ್ತಾಪ.

ಝುಕ್ಮರಾಸು (ಕ್ರಿ)= ಗಾಳಹಾಕಿ ಮೀನು ಹಿಡಿ; ನಿರ್ವಾಹವಿಲ್ಲದೆ ಒಪ್ಪು; ದುಡಿ.

ಝುಕ್ಮಾರಿ (ನಾ)= ಮೀನುಗಾರಿಕೆ; ಕಾಲಹರಣ ಮಾಡುವಿಕೆ.

ಝುಗಝುಗ (ದ್ವಿ)= ಫಳಫಳ; ತಳತಳ (ಗಾದೆ: ಮ್ಯಾಲಝುಗಝುಗ; ಒಳ್ಗ ಭಗಭಗ.)

ಝುಗಡಗಂಟ (ನಾ)= ಜಗಳಗಂಟ; ಜಗಳ ತೆಗೆವ ಸ್ವಭಾವದವನು.

ಝುಗಡಗಂಟಿ (ನಾ)= ಜಗಳಗಂಟೆ; ಜಗಳ ತೆಗೆವ ಸ್ವಭಾವದವಳು.

ಝುಗಡಾ (ನಾ)ಉ= ಜಗಳ, ತಂಟೆ, ಕಿರಿಕಿರಿಮಾಡುವಿಕೆ.

ಝುಗಡಾತಂಟಿ (ನಾ)= ಜಗಳ, ತಂಟೆ; ಕಿರಿಕಿರಿ ಮಾಡುವಿಕೆ.

ಝುಗಡಾ ತೆಗಿ (ಕ್ರಿ)= ಜಗಳ ಪ್ರಾರಂಭಿಸು; ಕಿರಿಕಿರಿ ಹೂಡು.

ಝುಗಡಾಹೂಡು (ಕ್ರಿ)= ಜಗಳವನ್ನು ಪ್ರಾರಂಭಿಸು; ಜಗಳತೆಗೆ; ಕಿರಿಕಿರಿ ಹುಟ್ಟಿಸು.

ಝುಗಮುಗ (ನಾ) ಉ= ಥಳಥಳ ಹೊಳೆಯುವಿಕೆ; ಬೆಳಕಿನ ಹೆಚ್ಚಳ.

ಝುಗಮುಗಾಸು (ಕ್ರಿ)= ಥಳಥಳಿಸು; ಪ್ರಕಾಶಿಸು; ಹೊಳೆ.

ಝುಗ್ಗಂತ (ಅ)= ಫಳಕ್ಕನೆ; ಥಳಥಳನೆ.

ಝುಜ್ಜು (ನಾ)= ರೀತಿ; ಲಕ್ಷಣ; ತೋರಿಕೆ.

ಝುಟ್ (ಅ)ಹಿಂ.=ಬೇಗ; ತಾಬಡ್ತೋಬ; (ಗಾದೆ: ಝುಟ್ಮಂಗ್ನಿ; ಷಟ್ಯಾದಿ)

ಝುಟಕಾ (ನಾ)= ಜಟಕಾ; ಕುದುರೆ ಬಂಡಿ;

ಝುಟಾಝುಟ್ (ದ್ವಿ) ಹಿಂ= ಬೇಗಬೇಗ; ತೀವ್ರಗತಿಯಿಂದ; ಫಟ್‌ಫಟ್.

ಝುಟಾಪಟಿ (ನಾ)= ಹೊಡಪೆಟ್ಟು; ತಕರಾರು.

ಝುಟ್ಕಾ (ನಾ)ಹಿಂ.= ಓಡುತ್ತಿರುವ ವಾಹನ ಒಮ್ಮೆಲೆ ನಿಂತು ಓಡುವಿಕೆ; ಧಕ್ಕೆ; ಜಟ್ಕಾ.

ಝಟ್ಕ (ನಾ)= ಓಡುವ ವಾಹನ ಒಮ್ಮೇಲೆ ನಿಂತು ಓಡುವಿಕೆ; ಧಕ್ಕೆ; ಕೆಣಕುವಿಕೆ; ಎಳೆದು ಬಿಡುವಿಕೆ.

ಝಟ್ಕಕುಡು (ಕ್ರಿ)= ಕೆಣಕಿ ಬಿಡು; ಎಳೆದು ಬಿಡು; ಅಂಟಿಸಿ ಬಿಡು; ಜೋಲಿ ಹೊಡೆ.

ಝಟ್ಝಟ್ (ದ್ವಿ)= ಬೇಗಬೇಗ; ತೀವ್ರಗತಿಯಿಂದ.

ಝಟ್ಪು (ನಾ)= ಗೋಜು; ಜಂಜಡ; ಸಂಬಂಧ.

ಝಟ್ಪಟ್ (ದ್ವಿ) ಹಿಂ.=ಬೇಗ; ತೀವ್ರಗತಿಯಿಂದ.

ಝಡಕಾಸು (ಕ್ರಿ) ಹಿಂ.= ಅಂಜಿಸು; ಬೆದರಿಸು.

ಝಡತಿ (ನಾ)ಹಿಂ.= ಜಡತಿ; ತಪಾಸಣೆ; ತನಿಖೆ; ಪುನರಾವರ್ತನೆ; ಪರೀಕ್ಷೆ.

ಝಡತಿಕುಡು (ಕ್ರಿ)= ಪುನರಾವರ್ತನೆ ಒಪ್ಪಿಸು; ಪರೀಕ್ಷೆ ಕೊಡು; ತನಿಖೆಗೆ ಗುರಿಯಾಗು.

ಝಡತಿತೊಗೊ (ಕ್ರಿ)= ತಪಾಸಣೆ ಮಾಡು; ತನಿಖೆ ಮಾಡು; ಪರಿಶೀಲಿಸು; ಪರೀಕ್ಷಿಸು; ಪುನರಾವರ್ತನೆ ಮಾಡಿಸು.

ಝಡಿ (ನಾ) ಹಿಂ.= ತುಂತುರು ಮಳೆ; ಸೀರುಮಳೆ.

ಝನನನ (ನಾ)= ನಾಣ್ಯಗಳ ಸುರಿಯುವಿಕೆ.

ಝಪಾಟಿ (ಅ) ಮ. ಬೇಗ; ಬೇಗನೆ.

ಝಪಾಡ್ಸು (ಕ್ರಿ)= ಸುತ್ತಿಕೊ; ಭೂತ ಬಾಧೆಯಾಗು; ದೆವ್ವಹಿಡಿ.

ಝಪ್ನೆ (ಅ)= ಜಪ್ಪನೆ; ತತ್ಕಾಲ; ಆಗಿಂದಾಗ.

ಝಪ್ಪಿಸು (ಕ್ರಿ)= ಜಪ್ಪಿಸು; ಗಮನವಿಡು.

ಝಪ್ಪು (ಕ್ರಿ)= ಝಪ್ಪಿಸು; ಜಪ್ಪಿಸು; ಗಮನವಿಡು.

ಝಮ್ಖಾನಿ= ಜಮಖಾನೆ; ನೂಲುಗಂಬಳಿ.

ಝರಣಿ (ನಾ)= ಝರಿ; ನೀರಿನ ಸೆಲೆ; ಝರ್ಪಿ; ನೀರಿನ ಬುಗ್ಗೆ; ಒಸರು ನೀರು.

ಝರಣಿ ನರಸಿಂಹ (ನಾ)= ಬೀದರಿನ ಪೂರ್ವಕ್ಕಿಗಿರುವ ನರಸಿಂಹ ಝರಣಿ ಎಂಬ ದೇವರು; ಮಹಿಳೆಯರು ಹರಕೆ ಹೊರುವ ಹಿರೋಡ್ಯಾ ಎಂಬ ದೇವರು; ನರಸಿಂಹ ಝರಣಿಯಿಂದ ನಿರಂತರ ನೀರು ಹರಿಯುತ್ತಿರುತ್ತದೆ.

ಝರಾ (ನಾ) ಹಿಂ=ಝರಿ; ನೀರಿನ ಸೆಲೆ; ನೀರಿನ ಬುಗ್ಗೆ; ಒಸರು ನೀರು.

ಝರಾ ಸಂಗಮ (ನಾ)= ಆಂಧ್ರದ ಜಹೀರಾಬಾದ ತಾಲೂಕಿನಲ್ಲಿರುವ ಕೇತಕಿ ಸಂಗಮೇಶ್ವರ ದೇವರ ಕ್ಷೇತ್ರ.

ಝರಿ (ನಾ) ಹಿಂ.= ನೀರಿನ ಸೆಲೆ; ಝರಣಿ; ಝರ್ಪಿ; ಬೆಟ್ಟದಿಂದ ಬಸಿದು ಬರುವ ಇಲ್ಲವೆ ನೆಲದಿಂದ ಚಿಮ್ಮಿ ಬರುವ ನೀರು.

ಝರ್ನ್ಯಾ (ನಾ)= ಝರಣಿ ನರಸಿಂಹ (ನೋಡಿರಿ).

ಝರ್ಪಿ (ನಾ)= ಝರಿ (ನೋಡಿರಿ).

ಝರ್ಪಿಬಿಡು (ಕ್ರಿ)= ನೆಲದಿಂದ ನೀರು ಚಿಮ್ಮು.

ಝಲಡಿ (ನಾ)= ಜಲ್ಲಡಿ; ಚಾಳಣಿ; ಛನ್ನಿ.

ಝುಲಡಿ ಹಿಡಿ (ಕ್ರಿ)= ಸೋಸು; ಶೋಧಿಸು; ದಪ್ಪ ಸಣ್ಣ ಬೇರೆ ಬೇರೆ ಮಾಡು.

ಝುಲಡಿ ಹುಣ್ಣು (ನಾ)= ಜಲ್ಲಡಿಯಂತೆ ತೂತ ತೂತ ಇರುವ ಹುಣ್ಣು.

ಝುಲಾಸು (ಕ್ರಿ)= ಬೆಸೆ; ಜೋಡಿಸು; ಕಬ್ಬಿಣ, ತಾಮ್ರ ಇತ್ಯಾದಿ ಲೋಹಗಳನ್ನು ಹಿತ್ತಾಳೆಯ ಸಹಾಯದಿಂದ ಕಾಯಿಸಿ ಹೊಂದಿಸು.

ಝುಲುಡಿ (ನಾ)= ಝುಲಡಿ (ನೋಡಿರಿ)

ಝುಲುಡಿಹಿಡಿ (ಕ್ರಿ)= ಝುಲಡಿಹಿಡಿ (ನೋಡಿರಿ).

ಝುಲ್ದಿ (ನಾ)= ಝುಲಡಿ (ನೋಡಿರಿ)

ಝುಲ್ದಿ (ಅ)= ಬೇಗನೆ; ತೀವ್ರಗತಿಯಿಂದ

ಝುಲ್ದಿಝುಲ್ದಿ (ದ್ವಿ)= ಬೇಗಬೇಗ.

ಝುಲ್ಲಿಸು (ಕ್ರಿ)= ಜಲ್ಲಿಸು; ಅಲ್ಲಾಡಿಸು; ಅದುರಿಸು; ಗಿಡದ ಬೊಡ್ಡೆ ಹಿಡಿದು ಅಲ್ಲಾಡಿಸಿ ಹಣ್ಣು ಉದುರಿಸು; ಬಡಕಲಾಗು.

ಝುಲ್ಲು (ನಾ)= ಚಿಂತೆ; ಕುದಿ; ಮೈಪರವೆ.

ಝುಲ್ಲು ಬಿಡು (ಕ್ರಿ)= ಮೈಪರವೆ ತೊರೆ; ಭಯಬಿಡು; ಚಿಂತೆಬಿಡು; ಕುದಿಬಿಡು.

ಝುಲ್ಲುಸು (ಕ್ರಿ)= ಝುಲ್ಲಿಸು (ನೋಡಿರಿ).

ಝುಲ್ಲು ಹಾರು (ಕ್ರಿ)= ಭಯದೂರವಾಗು; ಚಿಂತೆ ಇಲ್ಲವಾಗು; ಕುದಿ ಹಿಂದಾಗು.

ಝುಲ್ಸಾ (ನಾ)= ಹಿಗ್ಗಿನ ಔತಣ ಕೂಟ; ಚಹಪಾರ್ಟಿ.

ಝುಲ್ಸಾಕುಡು (ಕ್ರಿ)= ಔತಣಕೊಡು; ಪ್ರೀತಿ ಭೋಜನ ಏರ್ಪಡಿಸು.

ಝುಳ (ನಾ)= ಜಳ; ಝುಳಾ; ಬೇಸಗೆ ಬಿಸಿಲಿನ ಪ್ರತಾಪ; ಬಿಸಿಗಾಳಿ.

ಝುಳಕ (ನಾ)= ಜಳಕ; ಝುಳಕಾ; ಸ್ನಾನ; ಮೈತೊಳೆದು ಕೊಳ್ಳುವಿಕೆ.

ಝುಳಝುಳ (ದ್ವಿ)= ನಿರ್ಮಲ; ಜಳಜಳ; ನಿರುಂಬ್ಳ.

ಝುಳಪು (ನಾ)= ಜಳಪು; ಮಿಂಚು; ಹೊಳಪು.

ಝುಳಾ (ನಾ)= ಝುಳ (ನೋಡಿರಿ)

ಝುಳಾ ಬಡಿ (ಕ್ರಿ)= ಬೇಸಗೆ ಬಿಸಿಲಿನ ಸೆಕೆತಾಗಿ ಜ್ವರ ಭಾದೆಯಾಗು; ಉರಿಯ ಶಾಖ ತಗಲು.

ಝುಳ್ಕಾ (ನಾ)= ಝುಳಕ; ಜಳಕ; ಸ್ನಾನ; ಮೈ ತೊಳೆದು ಕೊಳ್ಳುವಿಕೆ (ಹಾಡು: ಎಂಬಲಿ ಗುಂಡ್ದಾಗ ಥೆಂಬಿಗಿ ಬಿದ್ದದ ಹಿಂದಿನ ಪೋರಿ ಝುಳ್ಕಾಝುಳ್ಕಾ।)

ಝುಳ್ಕಾ ಮಾಡು (ಕ್ರಿ)= ಸ್ನಾನ ಮಾಡು; ದೇವರ ಪೂಜೆಮಾಡು (ಆಂಧ್ರದ ನಾರಾಯಣ ಖೇಡ ತಾಲೂಕಿನಲ್ಲಿ ದೇವರ ಪೂಜೆ ಮಾಡು; ಲಿಂಗಪೂಜೆ ಮಾಡು ಎಂಬರ್ಥದಲ್ಲಿ ಬಳಸುತ್ತಾರೆ); ಸ್ನಾನ ಪೂಜೆ ಮುಗಿಸು.

ಝೂಂಕಣ (ನಾ) ಮ.= ಮುಚ್ಚಳ; ಮುಚ್ಚಣಿಕೆ; ಢಕ್ಕನ್.

ಝೂಂಕಿ (ನಾ)ಹಿಂ.= ದೃಶ್ಯ; ನೋಟ.

ಝೂಂಗಿ (ನಾ)= ಸೊಂಟದ ಕೆಳಗಿನೊಳ ಉಡುಪು; ಝೂಂಗು; ಒಳಚಣ್ಣ; ಅಂಡರ್‌ವೇರ್.

ಝೂಂಗು (ನಾ)= ಝೂಂಗಿ (ನೋಡಿರಿ)

ಝಾಂಗ್ಟಿ (ನಾ)= ಜಾಂಗಟೆ; ಜಾಗಂಟೆ; ಕಂಚಿನಿಂದ ತಯಾರಿಸಿದ ವರ್ತುಲಾಕಾರದ ವಾದ್ಯ (ಶರಣ ಮಡಿವಾಳ ಮಾಚಿದೇವರು ಹೊರಗೆ ಹೊರಟಾಗ, ಭವಿಗಳ ಮಾತು ಕಿವಿಗೆ ಬೀಳ ಬಾರದೆಂದು ಬಾರಿಸುತಿದ್ದ ಕಂಚಿನ ವಾದ್ಯ).

ಝಾಂಗ್ಟಿಭಾರ್ಸು (ಕ್ರಿ)= ಜಾಗಂಟೆ ಬಾರಿಸು.

ಝಾಗು (ನಾ) ಹಿಂ.= ನೊರೆ; ಬುರುಗು.

ಝಾಡಫಳಿ (ನಾ) ಮ.= ಮರಕೋತಿ ಆಟ; ಮರಮಂಗನಾಟ.

ಝಾಡಮಾಲಿ (ನಾ)= ಕಸಗುಡಿಸು-ವವನು(ಳು); ಬೀದಿ ಕಸ ಗೂಡಿಸುವವನು(ಳು); ಝಾಡ್ಮಾಲಿ.

ಝಾಡಿ (ನಾ)= ಜಾಡಿ; ದಪ್ಪ ಒರಟು ಬಟ್ಟೆ; ದಪ್ಪ ಕಂಬಳಿ; ಗಿಡಗಂಟಿ; ಮುಳ್ಳುಕಂಟಿ; ಎತ್ತಿನ ಉಚ್ಚೆಯ ಹಾವಿನಂಥ ಹೆಜ್ಜೆ.

ಝಾಡಿಸು (ಕ್ರಿ)= ಜಾಡಿಸು; ಕೊಡಹು; ಒದರು; ನಿಂದಿಸು; ಝಡಕಾಸು; ಭಯಪಡಿಸು; ಬೆದರಿಸು.

ಝಾಡು (ನಾ) ಹಿಂ.= ಭಾರಿಗೆ; ಕಸಬರಿಗೆ; ಅಂಗಳ ಗುಡಿಸುವ ಕಸಬರಿಗೆ; ರಜಗೀಲ. (ಒಗಟು: ಆಂಗ್ಭೆಲ್ಲಾ ಓಡಾಡ್ತದ; ಮೂಲ್ಯಾಗ್ಬಂದು ಮಲಗ್ತಾದ-ಝಾಡು).

ಝಾಡು ಆಡ್ಸು (ಕ್ರಿ)= ಕಸಗೂಡಿಸಿ ಆಚೆ ಎಸೆ (ಗಾ: ಝಾಡು ಆಡ್ದುರ ಅಂಗಳಛಂದ; ಎಡಿ ಆಡ್ದುರ ಬೆಳಿಛಂದ).

ಝಾಡು ಹೊಡಿ (ಕ್ರಿ)= ಕಸಗೂಡಿಸು.

ಝಾಡ್ಮಾಲಿ (ನಾ) ಹಿಂ.= ಝಾಡಮಾಲಿ (ನೋಡಿರಿ)

ಝಾಡ್ಸಿ ಒದಿ (ಕ್ರಿ)= ಜೋರಾಗಿ ಒದೆ; ಜೋರಾಗಿ ಕಾಲಿನಿಂದ ಹೊಡೆ.

ಝಾಡ್ಸು (ಕ್ರಿ)= ಝಾಡಿಸು; ಜಾಡಿಸು; ಕೊಡವು; ಒದರು; ಅಂಟಿಸು; ಭಯ ಪಡಿಸು; ಬೆದರಿಸು; ನಿಂದಿಸು.

ಝಾಪು (ನಾ)= ಹೆಜ್ಜೆ; ದೂರಹೆಜ್ಜೆ; ದಾಪುಗಾಲು.

ಝಪುಗಾಲಿಡು (ಕ್ರಿ)= ದೂರ ದೂರ ಹೆಜ್ಜೆ ಇಡು; ಓಡು.

ಝಾಪುಗಾಲಾಂವ (ನಾ)= ವೇವಾಗಿ ಓಡುವವನು.

ಝಾಪುಗಾಲು (ನಾ)= ದಾಪುಗಾಲು; ದೂರ ಹೆಜ್ಜೆ.

ಝಾರ (ನಾ) ಹಿಂ.=ಜಹರ; ವಿಷ; ಕೊಲ್ಲುವ ಮದ್ದು.

ಝಾರೀ (ನಾ)= ಎಣ್ಣೆಯಲ್ಲಿ ಕರಿಯುವ ಕೆಲಸಕ್ಕಾಗಿ ಬಳಸುವ ರಂಧ್ರಗಳುಳ್ಳ ಸೌಟು.

ಝಾಲರಿ (ನಾ)= ಅಂಗಿಯ ತೋಳಂಚಿಗೆ; ಬ್ಲೌಜಿನ ತೋಳಂಚಿಗೆ ಇಲ್ಲವೆ ಲಂಗಾದ ಕೆಳ ಅಂಚಿಗೆ ಹೊಂದಿಸಿ ಹೊಲಿದ ಬಟ್ಟೆಯ ಕುಸುರಿ.

ಝಾಲರು (ನಾ)= ಝಾಲರಿ (ನೋಡಿರಿ).

ಝಿಂಗ್ರಿ (ನಾ) ಹಿಂ.= ಜೋಳದ ಒಂದು ತಳಿ.

ಝಿಂಗೂರ (ನಾ)= ಝುರುಳಿ; ಜಿರಳೆ .

ಝಿಡ್ಕಾಸು (ಕ್ರಿ)= ಝಿಡ್ಕಿಕೊಡು; ಬೆದರಿಸು; ಜಬರಿಸು; ಭಯಪಡಿಸು; ಅಂಜಿಸು.

ಝಿಡ್ಕಿ (ನಾ)ಹಿಂ.= ಝಿಡಕಿ; ಜಬರಿಸುವಿಕೆ; ಬೆದರಿಸುವಿಕೆ.

ಝಿಡ್ಕಿಕುಡು (ಕ್ರಿ)= ಝಿಡ್ಕಾಸು (ನೋಡಿರಿ).

ಝಿಡ್ಕಿತಿನು (ಕ್ರಿ)= ಬೆದರಿಕೆ ಪಡು; ಅಂಜಿಕೆ ಪಡು; ಧಿಕ್ಕಾರ ಅನುಭವಿಸು.

ಝಿಲ್ಲಿ (ನಾ)= ಸೈಕ್ಲೊಸ್ಟೆಲ್ ಕಾಗದ.

ಝಿಲ್ಲಿಕಟಾಸು= ಸೈಕ್ಲೊಸ್ಟೈಲ್ ಕಾಗದದ ಮೇಲೆ ಉಕ್ಕಿನ ಲೇಖನಿದಿಂದ ಅಕ್ಷರ ಕೊರೆ.

ಝೀಲು (ನಾ)= ನೆಲದಿಂದ ಚಿಮ್ಮಿ ಹರಿಯುವ ನೀರು.

ಝುಂಜಾಮುಟ್ಟಿ (ನಾ)= ಪರಸ್ಪರ ಎಳೆದಾಟ, ಗುದ್ದಾಟ, ಕುಸ್ತಾನ್ಕುಸ್ತಿ, ಹೊಡೆದಾಟ.

ಝುಂಡಿಂಗ್ಝುಂಡು (ದ್ವಿ)= ಗುಂಪು ಗುಂಪು

ಝುಂಡು (ನಾ) ಹಿಂ.= ಜನರ ಗುಂಪು; ಪೊದೆ; ಝುಡ್ಡು.

ಝುಂಡುಗಟ್ಟು (ಕ್ರಿ)= ಗುಂಪುಗೂಡು; ಒಟ್ಟುಗೂಡು.

ಝುಕಾಲಿ (ನಾ)= ಜೋಕಾಲಿ; ಉಯ್ಯಾಲೆ

ಝುಕಾವು (ನಾ)= ಬಾಗುವಿಕೆ; ಒಲವು

ಝುಕಾಸಿಕುಡು (ಕ್ರಿ)= ಬಗ್ಗಿಸಿ ಬೆನ್ನಲ್ಲಿ ಜೋರಾಗಿ ಗುದ್ದು.

ಝುಕಾಸಿಗುದ್ದು (ಕ್ರಿ)= ಬಗ್ಗಿಸಿ ಬೆನ್ನಲ್ಲಿ ಮುಷ್ಟಿಯಿಂದ ಹೊಡೆ.

ಝುಕಾಸು (ಕ್ರಿ)= ಬಗ್ಗಿಸು; ಒಗ್ಗಿಸು; ಮಣಿಸು.

ಝುಟ್ಟಾ (ನಾ)= ಜುಟ್ಟು; ತಲೆಗೂದಲು.

ಝುಡ್ಡು (ನಾ)= ಮುಳ್ಳುಕಂಟಿ; ಗಿಡಗಳ ಗುಂಪು.

ಝುಪ್ರಿ (ನಾ)= ಜುಲ್ಫಿ; ಜುಟ್ಟು; ಕೆದರಿದ ತಲೆ ಗೂದಲು; ಕೇಶರಾಶಿ.

ಝುಬ್ಬಾ(ನಾ) ಹಿಂ.= ಜುಬ್ಬ; ನಿಲುವಂಗಿ.

ಝುಮ್ಕಾ (ನಾ)= ಕಿವಿಯೋಲೆ; ಲೋಲಕ.

ಝುಮ್ಮರ್ (ನಾ)= ಭರ್ತಿ; ಬಹಳಷ್ಟು (ಉ: ಮಂದಿ ಝುಮ್ಮರ್ ಥುಂಬೆದ).

ಝುರಳಿ (ನಾ)= ಜಿರಳೆ; ಸಹಸ್ರಪದಿ; ಜರಿ; ಲಕ್ಷ್ಮಿ ಚೇಳು. (ಇದು ಕೋಣನ ಮೂಗಿನಲ್ಲಿ ಸೇರಿದರೆ ಜೀವ ಹಿಂಡುವದೆಂದು ಇಲ್ಲಿಯ ರೈತರ ನಂಬಿಕೆ).

ಝುರಿ (ನಾ)= ಹುಳಿಮಜ್ಜಿಗೆ; ಹೆಪ್ಪು.

ಝುರಿ ಹಾಕು (ಕ್ರಿ)= ಜೋಳದರವೆ ತೋಯಿಸಿ, ಅದರಲ್ಲಿ ಹುಳಿ ಮಜ್ಜಿಗೆ ಬೆರೆಸು; ಜಿಲೇಬಿ ಹಿಟ್ಟಿಗೆ ಮಜ್ಜಿಗೆ ಹುಳಿ ಬೆರೆಸು.

ಝುರುಕಿ (ನಾ)= ಜುರುಜುರು ಮೊಲೆಹಾಲನ್ನು ಹೀರುವಿಕೆ. ಒಂದು ಸಲದ ಚುಟ್ಟದ ಹೊಗೆಯನ್ನು ಹೀರುವಿಕೆ; ಎಳೆದರೆ ಸಹಜ ಬಿಚ್ಚುವಂತೆ ಹಾಕಿದ ದಾರದ ಇಲ್ಲವೆ ಹಗ್ಗದ ಗಂಟು.

ಝುರ್ಕಿಎಳಿ (ಕ್ರಿ)= ಮೊಲೆಹೀರು; ಚುಟ್ಟದ ಹೊಗೆ ಹೀರು; ಗಂಟು ಸಡಿಲುಗೊಳಿಸು.

ಝುಲ್ಪಿ (ನಾ)= ಜುಟ್ಟು; ತಲೆಗೂದಲು; ಜುಲ್ಫಿ.

ಝುಳುಕು (ನಾ)= ತುಸುನಿದ್ರೆ; ಜಂಪು ಹತ್ತುವಿಕೆ.

ಝೂಟಾಮೂಟಾ= ಝೂಟುಮೂಟು; ಸುಳ್ಳೊಂದು ಸೊಗಡೊಂದು.

ಝೂಟ ಧಂದ್ಯಾ (ನಾ)= ಸುಳ್ಳು ಕೆಲಸ; ಸುಳ್ಳು ಸಾಧಿಸುವಿಕೆ.

ಝೂಟುಮೂಟು= ಸುಳ್ಳೊಂದು ಸೊಗಡೊಂದು; ಝೂಟಾಮೂಟಾ.

ಝೂಟ್ಯಾಕ ಬಂದಾನ (ನುಡಿ) = ಸಾವಿಗೆ ಸಮೀಪಿಸಿದ್ದಾನೆ.

ಝೂಡಿ (ನಾ)= ಹೊಂದಿಸಿ ನಿಲ್ಲಿಸಿದ ಜೋಳದ ದಂಟಿನ ಸೂಡುಗಳು; ಸೂಡು.

ಝೂಲು (ನಾ)= ಕಾರ್ಹುಣ್ಣಿವೆದಿನ ಎತ್ತುಗಳ ಮೈ ತೊಳೆದು ಅವುಗಳ ಬೆನ್ನ ಮೇಲೆ ಹೊದಿಸುವ ಬೆಲೆಬಾಳುವ ಬಟ್ಟೆ; ಕುದುರೆಯ ಬೆನ್ನ ಮೇಲೆ ಹೊದಿಸುವ ನಯವಾದ ಬಟ್ಟೆ; ಜೂಲು (ಉದಾ: ನಾಲನು ಬಡಿಸದ। ಜೂಲನು ಹೊದಿಸದ। ಲಾಲನೆ ಪಾಲನೆ ಬಯಸದ ಕುದುರೆ। -ಸಿದ್ಧಯ್ಯ ಪುರಾಣಿಕ)

ಝೂಲು ಹಾಕು (ಕ್ರಿ)= ಜೂಲು ಹೊದಿಸು; ಎತ್ತು, ಹೋರಿ; ಕುದುರೆ ಆದಿಗಳ ಬೆನ್ನ ಮೇಲೆ ಬೆಲೆ ಬಾಳುವ ಬಟ್ಟೆ ಹಾಕಿ ಶೃಂಗರಿಸು.

ಝೆಂಡಾ (ನಾ) ಹಿಂ.= ಝುಂಡಾ; ಧ್ವಜ; ನಿಶಾನೆ; ಬಾವುಟ .

ಝೆಂಡಾ ವಂದನ (ನಾ) ಹಿ.= ಧ್ವಜವಂದನೆ.

ಝೆಂಡಾಹಾರ್ಸು (ಕ್ರಿ)= ಬಾವುಟ ಹಾರುವಂತೆ ಮಾಡು; ಬಾವುಟವು ಕಂಭದ ತುದಿವರೆಗೆ ಹೋಗಿ ಹಾರುವಂತೆ ಮಾಡು

ಝೆಬ್ಬು (ನಾ)= ಇಸ್ಪೀಟಾಟದ ಒಂದು ಪ್ರಕಾರ.

ಝೆಮಖಾನಿ = ಝುಮ್ಮಾನಿ (ನೋಡಿರಿ).

ಝೆಂಪು (ನಾ)= ಮಂಪರು; ಜಂಪು; ನಿದ್ರೆ ಆವರಿಸುವಿಕೆ.

ಝೋಕಾಸು (ಕ್ರಿ)= ಬಗ್ಗಿಸು; ಬಾಗುವಂತೆ ಮಾಡು; ಜೋರುಮಾಡು; ಝುಕಾಸು.

ಝೋಂಪ್ಡಿ (ನಾ) ಹಿಂ.=ಗುಡಿಸಲು.

ಝೋಂಪು (ನಾ) ಮ.= ನಿದ್ರೆ; ನಿದ್ದೆ; ಮಂಪರು.

ಝೋಕಾಸು (ಕ್ರಿ)= ತೂಗು; ವಸ್ತುಗಳ ತೂಕಮಾಡು.

ಝೋಕಿ (ನಾ)= ತೊಟ್ಟಿಲು ತೂಗುವಿಕೆ; ಉಯ್ಯಾಲೆ ತೂಗುವಿಕೆ.

ಝೋಕಿ ಹೊಡಿ (ಕ್ರಿ)= ತೂಗು; ತೂಗಾಡಿಸು; ಉಯ್ಯಾಲೆ, ತೊಟ್ಟಿಲು ಇತ್ಯಾದಿ ತೂಗಾಡುವಂತೆ ಮಾಡು.

ಝೋಕು (ನಾ)= ಜೋಲಿ; ಝೋಲಿ; ಮೈಯ ಸಮತೂಕ.

ಝೋಕು ಹೋಗು (ಕ್ರಿ)= ಮೈಯ ಸಮತೂಕ ತಪ್ಪು; ಝೋಲಿಹೋಗು; ಓರೆಯಾಗಿ ಬೀಳುವಂತಾಗು.

ಝೋಪಡಪಟ್ಟಿ (ನಾ) ಮ.= ಗುಡಿಸಲುಗಳ ಬಡಾವಣೆ; ಬಡಬಗ್ಗರಿಂದ ಕೂಡಿದ ವಿಸ್ತರಣೆ.

ಝೋಪ್ಡಿ (ನಾ) ಹಿಂ.= ಗುಡಿಸಲು; ಪರ್ಣಕುಟೀರ.

ಝೋಲಿ (ನಾ)= ಮೈತೂಕ; ಸಮತೂಕ.

ಝೋಲಿಝುಪಾಟ (ನಾ) ಮ.=ಪರಸ್ಪರ ಎಳೆದಾಟ ಮತ್ತು ಗುದ್ದಾಟ.

ಝೋಲಿ ತಿನು (ಕ್ರಿ)= ತೂಕ ತಪ್ಪು.

ಝೋಲಿಹೊಡಿ (ಕ್ರಿ)= ತೂಕತಪ್ಪಿಸು; ಜೋರಾಗಿ ಎಳೆದು ಬಿಡು; ನಿದ್ರೆಯಿಂದ ತೂಕಡಿಸು.

ಝೋಲಿ ಹೋಗು (ಕ್ರಿ)= ತೂಕತಪ್ಪು.

ಟ

ಟಂಕಣಖಾರ (ನಾ)= ಲೋಹಶುದ್ಧಿಗೊಳಿಸುವ ಲವಣ; ಲೋಹಗಳ ಬೆಸುಗೆಗಾಗಿ ಬಳಸುವ ರಸಾಯನ.

ಟಂಕಾ (ನಾ)= ಬೆಸುಗೆ; ಬಟ್ಟಾ; ಕಲಂಕ.

ಟಂಕಾಸು (ಕ್ರಿ)= ಬೆಸೆ; ನಾಣ್ಯ ಮುದ್ರಿಸು.

ಟಂಕ್ಸಾಲಿ (ನಾ)= ನಾಣ್ಯಗಳನ್ನು ಮುದ್ರಿಸುವ ಸ್ಥಳ.

ಟಂಗಾಸು (ಕ್ರಿ)= ತೂಗುಹಾಕು; ನೇತುಹಾಕು.

ಟಂಚ್ (ವಿ)= ಪೂರ್ತಿತುಂಬಿದ.

ಟಂಚಾಗು (ಕ್ರಿ)= ಪೂರ್ತಿತುಂಬು; ಭರ್ತಿಯಾಗು.

ಟಂಟಂ (ನಾ)= ಬಾರಿಸುವನಾದ; ಮೂರು ಗಾಲಿಯ ಸ್ವಚಾಲಿವಾಹನ.

ಟಕಳಿ (ನಾ)= ನುಣ್ಣಗಿನ ನೆತ್ತಿ; ಕೂದಲು ದುರಿದ ತಲೆಬುರುಡೆ.

ಟಕಳು (ನಾ)= ಕೂದಲುದುರಿದ ತಲೆಬುರಡೆಯುಳ್ಳವನು (ಹೀನೈಸುವಿಕೆ).

ಟಕ್ಕರ್ (ನಾ)= ಅಪಘಾತ; ಢಿಕ್ಕಿ; ವಾಹನಗಳು ಪರಸ್ಪರ ಅಪ್ಪಳಿಸುವಿಕೆ.

ಟಗರಾ (ನಾ)= ಟಗರು; ಗಂಡು ಆಡು.

ಟಚ್‌ಮಾಡು (ಕ್ರಿ)= ಮುಟ್ಟು; ಸ್ಪರ್ಶಿಸು.

ಟಟ್ಟೂ (ನಾ) ಹಿಂ.= ದೇಸೀಕುದುರೆ; ಮಾಳೆಗಾಂವದ ಕುದುರೆ; ಕಾಠೇವಾಡದ ಕುದುರೆ

ಟಣ್ಬಣ್ (ದ್ವಿ)= ನೆಗೆದಾಟ; ಜಿಗಿದಾಟ; ಸಿಡಿದಾಟ; ಎಗರಾಟ; ಓಡಾಟ

ಟಣಾಟಣಾ (ದ್ವಿ)= ಟಣ್ಬಣ್ (ನೋಡಿರಿ) (ದೊಡ್ಡಾಟದ ಮಾತು: ಭಲೆಲೆಲೆ ಸಾರಥಿ। ನೊಣಾತಿಂದು ಕಾರತಿ । ಟಣಾಟಣಾ ಹಾರತಿ॥)

ಟಪಾಟಪ್= ತ್ವರಿತವಾಗಿ; ಮತ್ತೆ ಮತ್ತೆ; ನಿಲ್ಲದೆ; ಎಡೆಬಿಡದೆ

ಟಪಾರ್ಯಾಟಪಾರ್ಯಾ (ದ್ವಿ)= ದಪ್ಪದಪ್ಪ; ಟೊಪಾರ್ಯಾ ಟೊಪಾರ್ಯಾ

ಟಪಾಲು (ನಾ)= ಅಂಚೆ; ಟಪ್ಪಾ.

ಟಪ್ನಟ್ಲೆ (ಅ)= ಟಪ್ಪನೆ; ಟಪ್ಪಟಪ್ಪನೆ; ತಕ್ಷಣವೆ ಮತ್ತೆ ಮತ್ತೆ (ಹೇಳಾದಿಲ್ಲಾ ಕೇಳಾದಿಲ್ಲ, ಟಪ್ನಟ್ಲೆ ಕಾಲಿಗಿ ಭೀಳಲಾತುನು).

ಟಪ್ನಳ್ಗುಳು (ನಾ)= ಗಿಡದಿಂದ ಅತ್ತಿಕಾಯಿ ಉದುರಿ ಗುಳುಗುಳು ಉರುಳಿ ಹೋಗುವ ಕ್ರಿಯೆ.

ಟಪ್ತಿನು (ಕ್ರಿ)= ನಿಲ್ಲು; ವಿಶ್ರಾಂತಿಸು; ನೆಲಕ್ಕೆ ಚೆಂಡು ತಾಗು; ಪುಟಿ.

ಟಪ್ಪಾ (ನಾ)= ಅಂಚೆ; ಮೆಟ್ಟಲು.

ಟಪ್ಪು (ಕ್ರಿ)= ಚೆಂಡಿನ ಪುಟಿಯುವಿಕೆ.

ಟಪ್ಪುತಿನು (ಕ್ರಿ)= ಟಪ್ತಿನು; ವಿಶ್ರಾಂತಿಸು; ಚೆಂಡು ನೆಲಕ್ಕಪ್ಪಳಿಸಿ ಪುಟಿ.

ಟರ್ಟುರ್ (ನಾ)= ಒದರಾಟ; ಚೀರಾಟ; ಬೊಗಳಾಟ; ಅತಿ ಮಾತಾಡುವಿಕೆ.

ಟರ್ಟುರ್ ಮಾಡು (ಕ್ರಿ)= ಗೋಳಾಡು; ಒದರಾಡು; ಚೀರಾಡು; ಅತಿ ಮಾತಾಡು.

ಟರ್ರನೆ (ಅ)= ಟರಕ್ನೆ; ಟರ್ರ್ ಎಂದು ಸದ್ದಾಗುವಂತೆ (ಬಟ್ಟೆ ಅಥವಾ ಕಾಗದ ಹರಿಯುವಿಕೆಯ ಸದ್ದು)

ಟವರ್ (ನಾ) ಇಂ.= ಮೊಬೈಲ್ ಸಂದೇಶ ಪ್ರಸಾರದ ಶಿಖರ; ಗೋಪುರ.

ಟವರ್‌ಬರು (ಕ್ರಿ) ಇಂ.= ಮೊಬೈಲ ಶಿಖರದಿಂದ ಸಂಕೇತ ಪ್ರಾಪ್ತವಾಗು.

ಟವಾಳಿ (ನಾ)= ಗೊಂದಲ; ಗದ್ದಲ; ಗಲಿಬಿಲಿ; ದಿಗಿಲೆಬ್ಬಿಸುವಿಕೆ; ವಂಚನೆ; ಮೋಸ.

ಟವಾಳಿ ಎಬ್ಬಿಸು (ಕ್ರಿ)= ದಿಗಿಲುಗೊಳಿಸು; ಗೊಂದಲ ಎಬ್ಬಿಸು; ಗಲಿಬಿಲಿ ಉಂಟು ಮಾಡು.

ಟಳಾಸು (ಕ್ರಿ)= ಹೊತ್ತುಗಳೆ; ವಿಶ್ರಾಂತಿಸು; ಸಮಯ ಹಾಳು ಮಾಡು.

ಟಾಂಕಣಖಾರ (ನಾ)= ಟಂಕಣಖಾರ (ನೋಡಿರಿ)

ಟಾಂಗ (ನಾ) ಹಿಂ.=ಕಾಲು; ಕೋಳಿಯ ಕಾಲು.

ಟಾಂಗಾ (ನಾ)= ಒಂಟಿಕುದುರೆಯ ಗಾಡಿ; ಕುದುರೆ ಬಂಡಿ; ಜಟಕಾ.

ಟಾಂಗಾ ಏರು (ಕ್ರಿ)= ಕುದುರೆ ಬಂಡಿ ಹತ್ತು.

ಟಾಂಗು (ನಾ)= ಹಿಂ.=ಕಾಲು; ಕೋಳಿಕಾಲು.

ಟಾಂಗುಹೊಡಿ (ಕ್ರಿ)= ಅಡ್ಡಗಾಲು ಹಾಕು; ಅಡ್ಡಿ ಉಂಟು ಮಾಡು.

ಟಾಂಗ್ಯಾ (ನಾ)= ಟಾಂಗಾ (ನೋಡಿರಿ)

ಟಾಂಗ್ಹಾಕು (ಕ್ರಿ)= ಅಡ್ಡಗಾಲು ಹಾಕು; ಅಡ್ಡಿಯೊಡ್ಡು.

ಟಾಂ ಟಾಂ (ನಾ)= ಡಂಗುರ ಸಾರುವಿಕೆ; ಮುನಾದಿ ಹೊಡೆಯುವಿಕೆ; ಹಲಗೆ ಬಾರಿಸಿ ಡಂಗುರ ಸಾರುವಿಕೆ.

ಟಾಕಿ (ನಾ)= ಹೊಲಿಗೆ; ಉಳಿಯ ಪೆಟ್ಟು; ನೀರು ತುಂಬುವ ತೊಟ್ಟಿ; ಹೌಜು; ಹೌದು; ಟ್ಯಾಂಕು; ಚಲನಚಿತ್ರಮಂದಿರ; ಟಾಕೀಜು.

ಟಾಕಿ ತೆಗಿ (ಕ್ರಿ)= ಶಸ್ತ್ರ ಚಿಕಿತ್ಸೆಯ ಹೊಲಿಗೆಗಳನ್ನು ಬಿಚ್ಚು; ಹೊಲಿದ ಹೊಲಿಗೆಯನ್ನು ತೆಗೆದು ಹಾಕು.

ಟಾಕಿಹಾಕು (ಕ್ರಿ)= ಹೊಲಿ; ಹೊಲಿಗೆ ಹಾಕು.

ಟಾಕು (ನಾ) ಮ.= ಲೇಖಣಿ; ಪೆನ್ನು; ಬಿಲ್ಲಿನಾ ಕಾರದ ಕಟ್ಟಡದ ಭಾಗ; ಕಮಾನು.

ಟಾಕುಮುರಿ (ಕ್ರಿ)= ಮರಣದಂಡನೆಯನ್ನು ವಿಧಿಸಿದ ಲೇಖಣಿಯನ್ನು ಮುರಿದುಹಾಕು; ತುಂಡುಗೊಳಿಸು.

ಟಾಚಣಿ (ನಾ) ಮ.= ಗುಂಡು ಸೂಜಿ; ಪಿನ್ನು; ಟೋಚನ್ನು.

ಟಾಟಾ (ಕ್ರಿ) ಇಂ.= ವಿದಾಯ ಹೇಳು; ಹೋಗಿ ಬನ್ನಿ; ಒಂದು ಕಂಪನಿಯ ಹೆಸರು.

ಟಾಪ್ ಟೀಪ್ (ನಾ)= ಸ್ವಚ್ಛ; ವ್ಯವಸ್ಥಿತ.

ಟಾಪು (ನಾ) ಇಂ.= ಆಟೊ, ಬಸ್ಸು, ಕಾರು, ರಿಕ್ಷಾ ಮೊದಲಾದವುಗಳ ಮೇಲುಛಾವಣಿ; ಎತ್ತಿನ ಬಂಡಿ, ಟಾಂಗಾ ಇತ್ಯಾದಿಗಳ ಮೇಲು ಛಾವಣಿ; ಛತ್ತು; ಹುಡುಗಿಯರ ಎದೆಯುಡುಪು; ಕಿವಿಯ ಆಭರಣ; ಛಾಪಾಕಾಗದ; ಶಿಖರ; ಗಿಡದ ಚೆಂಡಿ.

ಟಾಪ್ಪಾಗುದು= ಛಾಪಾಕಾಗದ; ಸ್ಟಾಂಪ್ ಕಾಗದ.

ಟಾರು (ನಾ) ಇಂ.=ಡಾಂಬಾರು; ಮಹಾಮಾರ್ಗಗಳ ರಚನೆಗಾಗಿ ಬಳಸುವ ಡಾಂಬಾರು.

ಟಾರ್ರೋಡು (ನಾ) ಇಂ.=ಡಾಂಬಾರ್ ರೋಡು.

ಟಾಲಂಟೋಲ್ (ನಾ)= ಹೊತ್ತುಗಳಿಯುವಿಕೆ; ಮೈಗಳ್ಳತನ; ನಿರ್ಲಕ್ಷತನ.

ಟಾಲಂಟೋಲ್ಮಾಡು (ಕ್ರಿ)= ಟಳಾಸು; ಹೊತ್ತುಗಳೆ; ಸಮಯ ವ್ಯಯಮಾಡು; ಮೈಗಳ್ಳತನ ತೋರು.

ಟಾವೆಲ್ಲು (ನಾ) ಇಂ.= ಟಾವೆಲ್; ತುವಾಲು; ಸೆಲ್ಲೆ; ಸೆಲ್ಲ್ಯಾ.

ಟಾಳಿ (ನಾ) ಮ. ಚಪ್ಪಾಳೆ; ಚಪ್ಪಾಳೆ ತಟ್ಟುವಿಕೆ: ಕರತಾಡನ.

ಟಾಳಿ ಭಾರ್ಸು (ಕ್ರಿ)= ಚಪ್ಪಾಳೆ ತಟ್ಟು; ಕರತಾಡನ ಮಾಡು;

ಟಾಳಿ ಹೊಡಿ (ಕ್ರಿ)= ಟಾಳಿಭಾರ್ಸು (ನೋಡಿರಿ).

ಟಾಳು (ನಾ) ಮ.= ಹಿತ್ತಾಳೆ ಅಥವಾ ಕಂಚಿನಿಂದ ಮಾಡಿದ ಜೋಡು ಬಟ್ಟಲು ವಾದ್ಯ; ಕೂಸಿನ ತಲೆಯ ಮಿದುವಾದ ತಾಳಿಗೆ; ಕೂದಲುದುರಿದ ತಲೆ; ನೆತ್ತಿ;

ಟಿಂಗ್‌ಟಿಂಗ್ (ಧ್ವಿ)= ಗಡಿಯಾರದ ಎಚ್ಚರಿಕೆ ಗಂಟೆಯ ಸದ್ದು.

ಟಿಂಗಲ್ (ನಾ)= ನಗೆಚಾಟಿಕೆ; ಅಣಕ; ಅಪಹಾಸ್ಯ.

ಟಿಂಗಲ್ಲುಡಾಸು (ಕ್ರಿ)= ಅಪಹಾಸ್ಯಯಾಡು; ಅಣಕವಾಡು.

ಟಿಂವ್‌ಟಿಂವ್ (ಧ್ವಿ)= ತುಂತುನಿಯನಾದ; ತಂತಿವಾದ್ಯ ಅಥವಾ ಏಕತಾರಿಯನಾದ; ತಂಬೂರಿನಾದ.

ಟಿಂವ್‌ಟಿಂವಿ (ನಾ)= ತುಂತುನಿ; ಟುಂಟುನಿ; ಒಂದು ಪ್ರಕಾರದ ತಂತುವಾದ್ಯ; ತಂಬೂರಿ.

ಟಿಂವಕ್ಕಿ (ನಾ)= ಟಿವ್ವಕ್ಕಿ; ಬಡಿಗನ ಹಕ್ಕಿ.

ಟಿಕ (ನಾ)= ತಿಗ; ಪಿರ್ರೆ

ಟಿಕಳಿ (ನಾ)= ಕುಂಕುಮ ಬೊಟ್ಟು; ಕುಂಕುಮತಿಲಕದ ಗುಂಡಾದ ತುಂಡು.

ಟಿಕಳಿಹಚ್ಗೊ (ಕ್ರಿ)= ಕುಂಕುಮಬೊಟ್ಟು ಇಟ್ಟುಕೊ; ತಿಲಕ ಇಟ್ಟುಕೊ.

ಟಿಕಾವು (ನಾ)ಹಿಂ.= ತಾಳಿಕೆ; ಬಾಳಿಕೆ.

ಟಿಕಾಸು (ಕ್ರಿ)= ದೀರ್ಘಕಾಲ ಉಳಿದುಕೊ, ಹೊಂದಿಕೊ, ತಾಳು, ಬಾಳು.

ಟಿಕೀಟು (ನಾ)= ಇಂ.= ಟಿಗೀಟು; ತಿಗೀಟು; ಬಸ್ ಪ್ರಯಾಣ ಚೀಟಿ; ಸಿನೇಮಾ ಪ್ರವೇಶ ಚೀಟಿ; ಸರ್ಕಸ್ ನೋಡುವ ಪರವಾನಿಗೆ ಚೀಟಿ.

ಟಿಕ್ಕುಸು (ನಾ) ಇಂ.= ಟ್ಯಾಕ್ಸು; ತೆರಿಗೆ; ಕಂದಾಯ.

ಟಿಕ್ಕುಸುಥುಂಬು (ಕ್ರಿ)= ಟ್ಯಾಕ್ಸುಕೊಡು; ತೆರಿಗೆ ತುಂಬು; ಕಂದಾಯಸಲ್ಲಿಸು.

ಟಿಗರಿ (ನಾ)= ತಿಗರಿ; ಕುಂಬಾರ ಬಳಸುವ ಚಕ್ರ.

ಟಿಗರಿ ತಿರುವು (ಕ್ರಿ)= ಕುಂಬಾರನ ಚಕ್ರ ನಡೆಸು.

ಟಿಗಾ (ನಾ)= ತಿಗ; ಟಿಗ; ಪಿರ್ರೆ.

ಟಿಗೀಟು (ನಾ)= ಇಂ= ಟಿಕೀಟು (ನೋಡಿರಿ)

ಟಿಚ್ಚಾಗು (ಕ್ರಿ)= ತೃಪ್ತಾಗು; ಸಂತೃಪ್ತಾಗು.

ಟಿಣುಕು (ಕ್ರಿ)= ತಿಣುಕು (ಗಾದೆ: ಆರು ಹಡ್ಡೋರ್ಮುಂದ ಮೂರು ಹಡ್ದಾಕಿ ಇನ್ನಾ ಟಿಣುಕು ಅಂಧ್ಯಂತ).

ಟಿಪಣ (ನಾ) ಮ.=ಟಿಪ್ಪಣಿ; ಬರೆವಣಿಗೆ.

ಟಿಪಣ ಮಾಡ್ಕೊ (ಕ್ರಿ)= ಬರೆದುಕೊ.

ಟಿಪಾಯಿ (ನಾ) ಮ.= ಮೂರು ಕಾಲಿನ ಕಬ್ಬಿಣದ ಇಲ್ಲವೆ ಕಟ್ಟಿಗೆಯ ಅಡ್ಡಣಿಗೆ, ಮಣೆ ಇತ್ಯಾದಿ.

ಟಿಮ್ಮನು (ಕ್ರಿ)= ಮೈ ಕೈಬಿಗಿ; ಬಾಗದಂತೆಸೆಟೆ.

ಟಿಪಾಸ್ಕೊ (ಕ್ರಿ)= ಬರೆದುಕೊ; ಟಿಪ್ಪಣಿ ಮಾಡಿಕೊ.

ಟಿವ್ವಕ್ಕಿ (ನಾ)=ಟಿಂವ್‌ಟಿಂವ್ ಎಂದು ಕೂಗುವ ಟಿಂವಕ್ಕಿ; ಬಡಿಗನ ಹಕ್ಕಿ.

ಟಿವ್ಯನ್ (ನಾ) ಇಂ.= ಟೂಷನ್; ಮನೆಪಾಠ.

ಟಿ.ಸಿ (ನಾ)= ಇಂ.ಬಿಡುಪತ್ರಿಕೆ; ಟ್ರಾನ್ಸ್‌ಫರ್ ಸರ್ಟಿಫಿಕೇಟ್.

ಟಿಸುಳು (ನಾ)= ಟಿಸಿಳು; ಟಿಸಿಲು; ಕವಲು; ಸೀಳು; ಟಿಸುಳು; ರಿಕ್ಕು; ಒಂದು ಟೊಂಗೆ ಬೆಳೆದು ಎರಡಾಗುವಿಕೆ.

ಟಿಸುಳೊಡಿ (ಕ್ರಿ)= ಟೊಂಗೆ ಎರಡಾಗು; ಕವಲೊಡೆ.

ಟೀ (ನಾ)ಇಂ. = ಚಹ.

ಟೀಕಾ (ನಾ)= ಚುಚ್ಚು ಮದ್ದು.

ಟೀಕಾಕುಡು (ಕ್ರಿ)= ಸೂಜಿಯಿಂದ ಚುಚ್ಚಿ ಮದ್ದನ್ನು ಸ್ನಾಯು ಅಥವಾ ನರದಲ್ಲಿ ಬಿಡು.

ಟೀಕಾತೊಗೊ (ಕ್ರಿ)= ಚುಚ್ಚು ಮದ್ದನ್ನು ತೆಗೆದುಕೊ.

ಟೀಕಾಮಾಡು (ಕ್ರಿ)= ನಿಂದಿಸು; ನಿಂದೆಯಾಡು; ಚುಚ್ಚು ಮದ್ದನ್ನು ಕೊಡು.

ಟೀಕು (ನಾ)= ಟೀಕೆ; ಟಿಪ್ಪಣಿ; ವಿವರಣೆ; ಭಾವಾರ್ಥವಿವರಣೆ.

ಟೀಚರ (ನಾ) ಇಂ=ಮಾಸ್ತರ್ತಿ; ಮಾಸ್ತರ; ಶಿಕ್ಷಕ; ಶಿಕ್ಷಕಿ.

ಟೀಚು ಹೊಡಿ (ಕ್ರಿ)= ನರಬಡಿತದಲ್ಲಿ ನೋವಾಗು.

ಟೀಣು (ನಾ)= ತಗಡಿನ ಪತ್ರಾ; ತಗಡಿನಡಬ್ಬ.

ಟೀಣು ಹಾಕು (ಕ್ರಿ)= ತಗಡಿನ ಛಾವಣಿ ತಯಾರಿಸು.

ಟೀಪಾ (ನಾ)= ಟೀಪಿ; ಮಾವಿನ ಬೀಜ.

ಟೀಪಿ (ನಾ)= ಟೀಪಾ; ಮಾವಿನ ಬೀಜ.

ಟೀಪು (ನಾ)= ಯಂತ್ರದಿಂದ ಹಾಕುವ ಹೊಲಿಗೆ; ಕೈಹೊಲಿಗೆ.

ಟೀಪು ಹಾಕು (ಕ್ರಿ)= ಕೈ ಹೊಲಿಗೆ ಹಾಕು; ಯಂತ್ರದಿಂದ ಹೊಲಿಗೆ ಹಾಕು.

ಟೀಬೀ (ನಾ) ಇಂ.= ಕ್ಷಯರೋಗ; ಖೈಂರೋಗ.

ಟೀಮು (ನಾ)ಇಂ. = ಆಟಗಾರರ ತಂಡ.

ಟೀರಿಂಗ್ (ನಾ) ಇಂ.= ಸ್ಟೀರಿಂಗ್; ಯಂತ್ರವಾಹನದ ಚುಕ್ಕಾಣಿ.

ಟೀವೀ (ನಾ) ಇಂ= ಟೆಲಿವಿಜನ್; ದೂರದರ್ಶನ.

ಟೀಸೀ (ನಾ) ಇಂ.= ಟ್ರಾನ್ಸ್‌ಫರ್ ಸರ್ಟಿಫಿಕೇಟ; ಶಾಲಾ ಬಿಡುಗಡೆ ಪತ್ರ.

ಟುಂಯ್‌ಟುಂಯ್ (ದ್ವಿ)= ತುಂತುನಿನಾದ; ತಂತಿವಾದ್ಯದನಾದ.

ಟುಂಟುಣಿ (ನಾ)= ಟುಣ್ ಟುಣಿ; ತುಂತುನಿ; ಒಂದು ಪ್ರಕಾರದ ತಂತಿವಾದ್ಯ

ಟುಂಟುಣಿ ಭಾರ್ಸು (ಕ್ರಿ)= ತುಂತುನಿ ಭಾರ್ಸು; ಗೀಗೀ ಪದ ಕಾರನ ಜತೆ ಏಕತಂತುವಾದ್ಯ ಬಾರಿಸು; ಬಾಲಬಡಿ; ಸ್ವಾರ್ಥಕ್ಕಾಗಿ ಸುಳ್ಳನ್ನು ಸಮರ್ಥಿಸು.

ಟುಕಡಿ (ನಾ)= ಟುಕ್ಡಿ; ತುಕ್ಡಿ; ತುಂಡು.

ಟುಕು ಟುಕು (ದ್ವಿ)= ನಿರಂತರ; ನಿಂತುನಿಲ್ಲದಂತೆ; ಸತತ; ಒಂದೇ ಪ್ರಕಾರ.

ಟುಕ್ಡಿ (ನಾ)= ತುಕ್ಡಿ; ತುಂಡು; ಟುಕಡಿ.

ಟುಕ್ಡಿಮಾಡು (ಕ್ರಿ)= ತುಂಡರಿಸು; ತುಂಡು ಮಾಡು.

ಟುಕ್ನಿ (ನಾ)= ತುಂಡು; ಚೂರು.

ಟುಕ್ನಿ ಮಾಡು (ಕ್ರಿ)= ತುಂಡು ಮಾಡು; ಕಡಿದು ಚೂರು ಮಾಡು.

ಟುಣ್‌ಟುಣ್ (ದ್ವಿ)= ಜಿಗಿಯುವಿಕೆ; ಹಾರುವಿಕೆ; ಕಪ್ಪೆ ಜಿಗಿತದ ಕ್ರಮ.

ಟುಣುಕ್‌ಟುಣುಕ್ (ದ್ವಿ)= ಜಿಗಿಯುವಿಕೆ ಕ್ರಮ; ಕಪ್ಪೆ ಜಿಗಿತದ ಕ್ರಮ

ಟುಣ್ಬುಣಿ (ನಾ)= ತುಂತುಣಿ; ಟುಂಟುನಿ; ಏಕತಂತು ವಾದ್ಯ.

ಟುಣ್ಬುಣಿ ಭಾರ್ಸು (ಕ್ರಿ)= ತಂತಿ ವಾದ್ಯಭಾರಿಸು; ಬಾಲಬಡಿ; ಹಿಂಬಾಲಿಸು; ಸ್ವಾರ್ಥಕ್ಕಾಗಿ ಅಲ್ಲದುದನ್ನು ಅಹುದೆನ್ನು.

ಟುಬ್ (ನಾ)= ಬಂದೂಕು ಹಾರಿಸಿದ ಸದ್ದು.

ಟುಬಾಕು (ನಾ)= ಬಂದೂಕು; ತುಪಾಕಿ; ಗನ್ನು.

ಟುಬಾಕು ಹಾರ್ಸು (ಕ್ರಿ)= ಬಂದೂಕು ಹಾರಿಸು; ಬಂದೂಕಿನ ಬೆಂಕಿ ಕಾರು.

ಟುಬ್ಕಿ (ನಾ)= ನೀರಲ್ಲಿ ಪ್ರಾಣಿ ಈಜು ಬಾರದೆ ಮುಳುಗು ತೇಲು ಮಾಡುವಿಕೆ.

ಟುಬ್ಕಿತಿನು (ಕ್ರಿ)= ಮುಳುಗು ತೇಲು ಮಾಡು.

ಟುಮ್ಕ್ (ನಾ)= ನುಣುಪು (ಉದಾ: ಹಸುರ್ಹುಲ್ಲು ಮೆಯ್ದು ಎಮ್ಮಿ ಟುಮ್ಕ್ ಆಗೆದ).

ಟುಮ್ಮ (ವಿ.)= ಉಬ್ಬಿದ ಹೊಟ್ಟೆಯ; ಡುಮ್ಮ (ಗಾದೆ: ಹೊಟ್ಟೆಟುಮ್ಮ; ಕೈ ಕಾಲ್ಸಣ್ಣ)

ಟುಮ್ಮಿ (ನಾ)= ಹೊಟ್ಟೆ ಉಬ್ಬಿದವಳು; ಡುಮ್ಮಿ.

ಟುಮ್ಯಾ (ನಾ)= ಹೊಟ್ಟೆ ಉಬ್ಬಿದವನು; ಡುಮ್ಯಾ (ಬೈಗುಳ)

ಟುರ್ಕಿ (ನಾ)= ಅಪಾನವಾಯು ಬಿಡುವ ಸದ್ದು; ಸದಾ ಅಪಾನ ವಾಯು ಬಿಡುವವಳು (ಬೈಗುಳ)

ಟುರ್ಕಿಹೊಡಿ (ಕ್ರಿ)= ಸದ್ದಾಗುವಂತೆ ಅಪಾನವಾಯು ಬಿಡು.

ಟುರ್ಕ್ಯಾ (ನಾ)= ಸದಾ ಸದ್ದಾಗುವಂತೆ ಅಪಾನವಾಯುವನ್ನು ಬಿಡುವವನು (ಬೈಗುಳ)

ಟುಳುಕಾಟ (ನಾ)= ತುಳುಕಾಟ; ಹೊರಚೆಲ್ಲಾಟ; ಅಲ್ಲಾಟದಿಂದ ಕೊಡದಲ್ಲಿಯ ನೀರು ಹೊರ ಚೆಲ್ಲುವಿಕೆ.

ಟುಳುಕಾಡು (ಕ್ರಿ)= ತುಳುಕಾಡು.

ಟುಳುಕಿ (ನಾ)= ತುಳುಕುವಿಕೆ; ಹೊರಚೆಲ್ಲುವಿಕೆ; ಕೊಡದಿಂದ ನೀರು ಹೊರಚಿಮ್ಮುವಿಕೆ.

ಟುಳುಕು (ಕ್ರಿ)= ತುಳುಕು; ಹೊರಚೆಲ್ಲು; ಕೊಡದಲ್ಲಿಯ ನೀರು ಹೊರಚಿಮ್ಮು (ಗಾದೆ: ಅರ್ಧಾಕೊಡದಲ್ಲಿಯ ನೀರು ಟುಳುಕುವುದುಭಾಳ; ತುಂಬಿದ ಕೊಡ ತುಳುಕುವುದಿಲ್ಲ)

ಟುಳುಕುಸು (ಕ್ರಿ)= ತುಳುಕಿಸು; ಹೊರ ಚಿಮ್ಮುವಂತೆ ಮಾಡು.

ಟುಳುಕ್ಟುಳುಕ್ (ಧ್ವಿ)= ನೀರಿನ ತುಳುಕುವಿಕೆಯ ಸದ್ದು

ಟುಳುಕ್ಯಾದ = ತುಳುಕಿದೆ.

ಟುಳುಕ್ಸು (ಕ್ರಿ)= ತುಳುಕಿಸು; ತುಳುಕುವಂತೆ ಮಾಡು; ಹೊರಚಿಮ್ಮುವಂತೆ ಮಾಡು.

ಟೂಕು (ನಾ)= ಅಂದಾಜು; ಗುಟ್ಟು; ರಹಸ್ಯ

ಟೂಕುಸಿಗು (ಕ್ರಿ)= ಗುಟ್ಟು ರಟ್ಟಾಗು; ರಹಸ್ಯ ಬಯಲಾಗು.

ಟೂಟಿ (ನಾ)= ನಳದ ಕಿವಿ; ಟೋಟಿ.

ಟೂಪು (ನಾ) ಇಂ.= ಟ್ಯೂಬು; ಸೈಕಲ್ ಟೈರಿನ ಒಳಗೆ ಇಡುವ ರಬ್ಬರ ಕೊಳವೆ.

ಟೂಬು (ನಾ) ಇಂ.= ರಬ್ಬರ ಕೊಳವೆ; ಕಬ್ಬಿಣ ಕೊಳವೆ; ಕೊಳವೆ; ನಲಿಕೆ.

ಟೂರು (ನಾ) ಇಂ.= ಪ್ರಯಾಣ; ಯಾತ್ರೆ.

ಟೂರ್ಮಾಡು (ಕ್ರಿ)= ಪ್ರಯಾಣ ಮಾಡು; ಯಾತ್ರೆಮಾಡು.

ಟೂಸೆನ್ (ನಾ)ಇಂ.= ಮನೆಪಾಠ.

ಟೂಸೆನ್ ಹೇಳು (ಕ್ರಿ)= ಮನೆಪಾಠ ಬೋಧನೆ ಮಾಡು.

ಟೆಂಕಾ (ನಾ)= ಟಂಕಾ; ಬೆಸುಗೆ; ಬಟ್ಟಾ; ಕಲಂಕ.

ಟೆಂಕ್ಸಾಲಿ (ನಾ)= ಟಂಕಸಾಲೆ; ನೋಟುಗಳ ಮುದ್ರಣಾಲಯ.

ಟೆಂಗು (ನಾ)= ತೆಂಗು (ಗಾದೆ: ಉಪ್ಪಿನಾಂವ ಉಳ್ಯಾಡಿ ಅತ್ತ, ಟೆಂಗಿನಾಂವ ಹೊಳ್ಯಾಡಿ ಅತ್ರ).

ಟೆಂಗು ತಿನು (ನು)= ತೊಂದರೆ ಅನುಭವಿಸು; ಕಾಟ ತಾಳು; ತೆಂಗುತಿನು.

ಟೆಂಗು ತಿನುಸು (ನು)= ತೊಂದರೆ ಕೊಡು; ಕಾಟ ಕೊಡು.

ಟೆಂಗೊಡಿ (ಕ್ರಿ)= ದೇವರ ಮುಂದೆ ತೆಂಗಿನಕಾಯಿ ಒಡೆ; ನೆತ್ತಿ ಒಡೆಯುವಂತೆ ಪೆಟ್ಟು ಹಾಕು; ತಲೆಗೆ ಪೆಟ್ಟಾಗು.

ಟೆಂಗೋಣಿ (ನಾ)= ತೆಂಗಿನ ಪರಟೆಯಂತೆ ಮಣ್ಣಿನಿಂದ ಇಲ್ಲವೆ ಕಲ್ಲಿನಿಂದ ತಯಾರಿಸಿದ ಪಾತ್ರೆ.

ಟೆಂಗ್ಟೆಂಗ್ (ಧ್ವಿ)= ಗಂಟೆ ಬಾರಿಸಿದಾಗ ಉಂಟಾಗುವ ಸದ್ದು.

ಟೆಂಗ್ಳಿ (ನಾ)= ಕಲ್ಬುರ್ಗಿ ಜಿಲ್ಲೆಯ ಒಂದು ಊರಿನ ಹೆಸರು.

ಟೆಂಟು (ನಾ) ಇಂ.= ಡೇರೆ; ಗುಡಾರ.

ಟೆಂಟುಹಾಕು (ಕ್ರಿ)= ಡೇರೆ ಹೂಡು.

ಟೆಂಟೌಸು (ನಾ) ಇಂ.= ಬಾಡಿಗೆಯಿಂದ ಡೇರೆ ಸಾಮಾಗ್ರಿ ಒದಗಿಸುವ ಅಂಗಡಿ.

ಟೆಂಪರ್ (ನಾ) ಇಂ.= ಸೊಕ್ಕು; ಅಹಂಕಾರ; ಅಂತಸ್ಸತ್ವ.

ಟೆಂಪೊ (ನಾ) ಇಂ.= ಚಿಕ್ಕಲಾರಿ; ಚಿಕ್ಕಟ್ರಕ್ಕು; ಸಾಮಾನು ಸರಂಜಾಮು ಸಾಗಿಸುವ ಸಣ್ಣ ಯಂತ್ರವಾಹನ.

ಟೆಂಪೊರ್ವರಿ (ನಾ) ಇಂ.= ತಾತ್ಪೂರ್ತಿಕ; ಅಲ್ಪಾವಧಿಯ; ಟೆಂಪೋರರಿ; ತಾತ್ಕಾಲಿಕ

ಟೆಂಪೋ (ನಾ)= ಸಣ್ಣ ಸಾಗಾಟ ವಾಹನ.

ಟೆಕಾಸು (ಕ್ರಿ)= ಟಿಕಾಸು; ಟೆಕ್ಕು; ತಾಳು; ಬಾಳು.

ಟೆಕ್ಕಾಲ (ಕ್ರಿ)= ಟೆಕ್ಕುವುದಿಲ್ಲ; ತಾಳುವುದಿಲ್ಲ; ಬಾಳುವುದಿಲ್ಲ.

ಟೆಕ್ಕಿ (ನಾ)= ತೆಕ್ಕೆ; ತೆಕ್ಕೆಯಲ್ಲಿ ಹಿಡಿಸುವಷ್ಟು.

ಟೆಕ್ಕಿಸ್ವಾಮಣ್ಣ (ನಾ)= ತೆಕ್ಕೆಯಷ್ಟು ತಿಂದು ತೆಕ್ಕೆ ತೆಕ್ಕೆ ಹೊತ್ತು ಹಾಕುವವನು; ಕಠಿಣ ಪರಿಶ್ರಮಿ.

ಟೆಕ್ಯಾ (ನಾ)= ತೆಕ್ಯಾ; ಮುಸಲ್ಮಾನ ಫಕೀರರ ವಾಸಸ್ಥಾನ.

ಟೆಗ್ಗು (ನಾ)= ತೆಗ್ಗು; ತಗ್ಗು; ಗುಂಡಿ;

ಟೆಗ್ಗು ಕೆದುರು (ಕ್ರಿ)= ತಗ್ಗು ತೋಡು; ಕುಣಿ ತೋಡು.

ಟೆಗ್ಗು ಹೊಡಿ (ಕ್ರಿ)= ತಗ್ಗು ತೋಡು; ಕುಣಿ ತೋಡು.

ಟೆಣಗು (ನಾ)= ಎರಡು ಹೊಲಗಳ ಮಧ್ಯದಲ್ಲಿ ತೋಡಿದ ನೀರು ಬಸಿವ ಕಾಲುವೆ.

ಟೆನಂಟು (ನಾ) ಇಂ.= ಹೊಲ ಅಥವಾ ಮನೆಜಾಗಗಳ ಕಾಬೀಜುದಾರ.

ಟೆನನ್ಸಿ (ನಾ) ಇಂ.= ಕಾಬೀಜು; ಕಬ್ಜಾ; ಸ್ವಾಮಿತ್ವ.

ಟೆನನ್ಸಿಯಾಕ್ಟ್ (ನಾ) ಇಂ.= ಹೊಲ; ಮನೆಜಾಗ ಇಲ್ಲವೆ ಮನೆಯ ಕಾಬೀಜು-ದಾರಿಯ ಕಾನೂನು.

ಟೆಪ್ಗಿ (ನಾ)= ಟೊಪ್ಪಿಗೆ; ಟೋಪಿ; ಶಿರಸ್ತ್ರಾಣ; ಮುಖಾವರಣ.

ಟೆಪ್ಪುಗಿ (ನಾ)= ಟೊಪ್ಪಿಗಿ; (ನೋಡಿರಿ)

ಟೆಪ್ಪುಗಿ ಹಾಕು (ನು)= ಮೋಸ ಮಾಡು; ವಂಚಿಸು.

ಟೆಪ್ಪುಗಿ ಭೀಳು (ನು)= ಮೋಸ ಹೋಗು.

ಟೇಂ (ನಾ)= ಇಂ.= ಟೈಮು; ಸಮಯ; ಟೇಮು

ಟೇಂಟೇಮಿನ ಮಾತು (ನಾ)= ಒಂದೊಂದು ಸಮಯದ ಮಾತು; ಹಿಂದೆ ಆದ ಘಟನೆ.

ಟೇಂಪಾಸು (ನಾ)ಇಂ.= ಕಾಲಹರಣ; ಹೊತ್ತಗಮನ.

ಟೇಂಬಿಟ್ಟುಟೇಂ (ನಾ)= ಅಕಾಲ; ಅವೇಳೆ.

ಟೇಕಡಿ (ನಾ) ಹಿಂ.= ಟೇಕಣಿ; ಏರಿ; ಒಡ್ಡು; ಹೊಡ್ಡು; ದಿನ್ನೆ.

ಟೇಕಣಿ (ನಾ)= ಟೇಕಡಿ (ನೋಡಿರಿ); ಭಾಲ್ಕಿಯಲ್ಲಿರುವ ರಾಮಟೇಕಣಿ.

ಟೇಕಾ (ನಾ)= ಬೆನ್ನಾಸರೆ; ಬೆನ್ನಿನ ಆಧಾರ.

ಟೇಕಾ ಕುಡು (ಕ್ರಿ)= ಬೆನ್ನಾಸರೆ ಹೊಂದು.

ಟೇಕು (ನಾ)= ಏರಿ; ಒಡ್ಡು; ಹೊಡ್ಡು; ಟೇಕಣಿ.

ಟೇಕು (ಕ್ರಿ)= ತೇಕು; ಏದುಸಿರುಬಿಡು; ಧಾಪಿಸು.

ಟೇಕ್ಯಾ (ನಾ)= ಟೇಕಾ; ಬೆನ್ನಾಸರೆ.

ಟೇಕ್ರಾಜಾ (ನಾ)= ಗೊಳ್ಳಿಭಾಷಾ; ಗೊರಳೆಗಳ ಒಡೆಯ.

ಟೇಪು (ನಾ) ಇಂ.= ಸುರುಳಿ; ಧ್ವನಿ ಸುರುಳಿ; ಅಳತೆ ಪಟ್ಟಿಯ ಸುರುಳಿ.

ಟೇಪ್ರಿಕಾರ್ಡು (ನಾ) ಇಂ.= ಧ್ವನಿ ಸುರುಳಿ; ಧ್ವನಿ ಸುರುಳಿ ನಡೆಸುವ ಪಟ್ಟಿ.

ಟೇಬಲ್ಲು (ನಾ) ಇಂ.= ನಾಲ್ಕುಕಾಲಿನ ಮೇಜು; ಕುರ್ಚಿಯ ಮುಂದೆ ಇಟ್ಟುಕೊಂಡು ಬರೆಯಲು ಬಳಸುವ ಆಧಾರ (ಒಗಟು: ನಾಕು ಕಾಲಿನ ನಾಗಪ್ಪ; ಬಯ್ಯಾದದಾ ಬಾಗಪ್ಪ-ಟೇಬಲ್ಲು)

ಟೇಮು (ನಾ) ಇಂ.= ಟೇಂ; ಟೈಮು; ಸಮಯ.

ಟೇಮ್ಟೇಬಲ್ಲು(ನಾ) ಇಂ.= ವೇಳಾಪತ್ರಿಕೆ; ಸಮಯ ಸಾರಿಣಿ.

ಟೇಲರ್ (ನಾ) ಇಂ.= ಸಿಂಪಿಗ; ಸಿಂಪ್ಯಾ; ದರ್ಜಿ; ಹೊಲಿಗೆ ಕಾಯಕದವನು.

ಟೇಲರಿಂಗ್ (ನಾ) ಇಂ.= ಸಿಂಪಿಗತನ; ಹೊಲಿಗೆ ಕಾಯಕ.

ಟೈಂ (ನಾ) ಇಂ.= ಸಮಯ.

ಟೈಂಪಾಸು (ನಾ) ಇಂ.= ಹೊತ್ತಗಮನಿ; ಕಾಲಹರಣ.

ಟೈ (ನಾ) ಇಂ.= ಕೊರಳ ಪಟ್ಟಿ.

ಟೈಟು (ನಾ) ಇಂ.= ಬಿಗಿ; ಭದ್ರ.

ಟೈಪಿಸ್ಟ್ (ನಾ) ಇಂ.= ಬೆರಳಚ್ಚುಗಾರ.

ಟೈಪು (ನಾ)ಇಂ.= ಬೆರಳಚ್ಚು.

ಟೈಪುಮಾಡು (ಕ್ರಿ)= ಬೆರಳಚ್ಚುಗೊಳಿಸು.

ಟೈರು (ನಾ) ಇಂ.= ವಾಹನಗಳ ರಬ್ಬರ ಗಾಲಿ.

ಟೈಲಾಸು (ಕ್ರಿ)= ಟಹಲಾಸು; ವಾಯು ವಿಹಾರ ಮಾಡು.

ಟೊಂಕ (ನಾ)= ಸೊಂಟ; ನಡ; ಕಟಿ.

ಟೊಂಕಾ ಟಿಮ್ಮನು (ಕ್ರಿ)= ಸೊಂಟ ಬಿಗಿದು ಹೋಗು.

ಟೊಂಕಾ ಹಿಡ್ಕೊ (ಕ್ರಿ)= ನಡಬೇನೆ ಉಂಟಾಗು.

ಟೊಂಗಿ (ನಾ)= ನೆತ್ತಿಯ ಮೇಲೆ ಬೆರಳೆಲುಬಿನಿಂದ ಹಾಕುವ ಏಟ; ಬಿರುಸಾದ ವಸ್ತುವಿನಿಂದ ತಲೆಯ ಮೇಲೆ ಹೊಡೆಯುವಿಕೆ.

ಟೊಂಗಿ ಕಸಿ (ನಾ)= ನೆತ್ತಿಯ ಮೇಲೆ ಬೆರಳೆಲುಬಿನಿಂದ ಟೊಕ್ ಟೊಕ್ ಎಂದು ಹೊಡೆ.

ಟೊಂಗಿಭಾರ್ಸು (ಕ್ರಿ)= ಟೊಂಗಿ ಕಸಿ (ನೋಡಿರಿ).

ಟೊಂಗ್ಟೊಂಗ್ (ಧ್ವಿ)= ಗಂಟೆಸದ್ದು.

ಟೊಂಞೆ (ನಾ)= ತಂತಿನಾದ.

ಟೊಂಞೆಗುಟ್ಟು (ನಾ)= ತಂತಿನಾದ ಮಾಡು.

ಟೊಣಗಾಗು (ಕ್ರಿ)= ಟೊಣಗಿನ ಕಾಳಿನಂತೆ ನುಣುಪಾಗಿರು; ಜಾರು ಜಾರಾಗಿರು; ಗಟ್ಟಿಯಾಗಿರು.

ಟೊಣಗು (ನಾ)= ಭತ್ತದ ಬೆಳೆಯಲ್ಲಿ ಬೆಳೆಯುವ ಕಾಡು ಸಸ್ಯ ಮತ್ತು ಅದರ ಕಾಳು.

ಟೊಣಪ (ನಾ)= ಟೊಣಪ್ಯಾ; ದಾಂಡಿಗ.

ಟೊಣಪಿ (ನಾ)= ಬಡಿಗೆ; ಲಟ್ಟು; ಉದ್ದಕೋಲು; ಅಜಂಡ ಶರೀರದವಳು.

ಟೊಣಪ್ಯಾ (ನಾ)= ದಾಂಡಿಗ; ಟೊಣ್ಯಾ; ಟೊಣಪ; ದಪ್ಪಗಿದ್ದವ; ಅಜಂಡ ಶರೀರವುಳ್ಳವನು; ಗಟ್ಟಿಮುಟ್ಟಾಗಿರುವನು. (ಬೈಗುಳ).

ಟೊಣ್ಯಾ (ನಾ)= ಟೊಣಪ್ಯಾ (ನೋಡಿರಿ)

ಟೊಪಾರ್ಯಾ (ನಾ)= ಟಪಾರ್ಯಾ; ದಪ್ಪ.

ಟೊಪಾರ್ಯಾ ಟೊಪಾರ್ಯಾ (ದ್ವಿ)= ದಪ್ಪದಪ್ಪ; ಟಪಾರ್ಯಾಟಪಾರ್ಯಾ.

ಟೊಪ್ಗಿ (ನಾ)= ಟೋಪಿ; ಟೊಪ್ಪಿಗೆ; ತಲೆಯುಡಿಗೆ.

ಟೊಪ್ಗಿ ಭೀಳು (ಕ್ರಿ)= ಮೋಸ ಹೋಗು; ವಂಚನೆಗೊಳಗಾಗು.

ಟೊಪ್ಗಿ ಹಾಕು (ಕ್ರಿ)= ಮೋಸಗೊಳಿಸು; ವಂಚಿಸು.

ಟೊಪ್ಪಿಗಿ (ನಾ)= ಟೊಪ್ಗಿ; ಟೊಪ್ಪಿಗೆ; ಕವಚ; ತಲೆಯ ಉಡುಗೆ; ಶಿರಸ್ತ್ರಾಣ.

ಟೊಳ್ಳಾಗು (ಕ್ರಿ)= ಹೊಳ್ಳಾಗು; ತಿರುಳಿಲ್ಲದಂತಾಗು.

ಟೊಳ್ಳಿಕಾಯಿ (ನಾ)= ರೇಷ್ಮೆಗೂಡು; ಟೊಳ್ಳಾದ ಕಾಯಿ.

ಟೊಳ್ಳು (ನಾ)= ಹೊಳ್ಳು; ಪೊಳ್ಳು; ಸೊಳ್ಳು; ಸತ್ವರಹಿತವಾದದ್ದು; ತಿರುಳಿಲ್ಲದ್ದು.

ಟೋಕ್ರಿ (ನಾ) ಹಿಂ.=ಬುಟ್ಟಿ; ನೌಕೆ; ನಾವೆ; ದೋಣಿ.

ಟೋಕ್ರಿ ನಡ್ಸು (ಕ್ರಿ)= ಹುಟ್ಟು ಹೊಡಿ; ದೋಣಿ ನಡೆಸು.

ಟೋಚನ್ (ನಾ) ಹಿಂ.= ಟಾಚಣಿ; ಗುಂಡುಸೂಜಿ; ಡಬ್ಬಣ; ಹಿಡಿಕೆಯುಳ್ಳ ಡಬ್ಬಣ.

ಟೋಟಲ್ಲು (ನಾ) ಇಂ.= ಒಟ್ಟುಗೂಡಿದ್ದು; ಒಟ್ಟು.

ಟೋಟಲ್ಲು ಕಟ್ಟು (ಕ್ರಿ)= ಒಟ್ಟುಗೂಡಿಸು; ಮೇಜಾನ್ ಮಾಡು.

ಟೋಪಿ (ನಾ)= ಟೊಪ್ಪಿಗೆ; ತಲೆಯ ಉಡುಗೆ; ಶಿರಸ್ತ್ರಾಣ; ಮುಖಾವರಣ.

ಟೋಪಿನ ಸೆರಗು (ನಾ)= ಸೀರೆ ಸೆರಗಿನ ಒಂದು ಪ್ರಕಾರ.

ಟೋಪಿ ಭೀಳು (ಕ್ರಿ)= ಮೋಸಹೋಗು; ವಂಚನೆಗೊಳ್ಳು.

ಟೋಪಿ ಹಾಕು (ಕ್ರಿ)= ಮೋಸಗೊಳಿಸು; ವಂಚಿಸು.

ಟೋಪು (ನಾ) ಉ.=ತೋಪು; ಬೃಹತ್ ಬಂದೂಕು; ನೆಲದ ಮೇಲೆ ಇಟ್ಟು ಹಾರಿಸುವ ಬಂದೂಕು.

ಟೋಪುಖಾನಿ (ನಾ) ಉ.= ತೋಪುಖಾನೆ; ತೋಪು ಇರಿಸುವ ಮನೆ.

ಟೋಪು ಹಾರ್ಸು (ಕ್ರಿ)= ತೋಪು ಹಾರಿಸು.

ಟೋಪ್ಖಾನಿ (ನಾ)= ಟೋಪುಖಾನಿ (ನೋಡಿರಿ).

ಟೋಪ್ಲಿ (ನಾ) ಮ.= ಬುಟ್ಟಿ; ಲಮಾಣಿ ಮಹಿಳೆಯ ಮುಂಗುರುಳಿಗೆ ನೇತಾಡುವ ಲೋಲಕದಂಥ ದಪ್ಪನೆಯ ಒಡವೆ.

ಟೋಮ್ಣಿ (ನಾ) ಮ.= ಆಧಾರ.

ಟೊಳ್ಳಿಕಾಯಿ (ನಾ)= ರೇಷ್ಮೆ ಗೂಡು.

ಟೋಳಿ (ನಾ) ಮ.= ತಂಡ; ಗುಂಪು; ಸೈನ್ಯದ ತಂಡ; ಹೋರಾಟಗಾರರ ತಂಡ (ಅಟ್ವೆಗಾರ್ ಟೋಳಿ ಕಂಡ್ರ ರಜಾಕಾರ ಕ್ರೂರಿಗಳು ಕಾಲಿಗೆ ಬುದ್ಧಿ ಹೇಳುತ್ತಿದ್ದರು).

ಟೋಳಿ ಕಟ್ಟು (ಕ್ರಿ)= ಗುಂಪುಗಟ್ಟು; ಒಟ್ಟಾಗು; ಒಂದು ಗುಟ್ಟಾಗು; ತಂಡರಚಿಸು.

ಟೌನು (ನಾ)= ಇಂ.= ಟೌನ್‌ಪೋಲಿಸ ಸ್ಟೇಷನ್ನು; ಪೋಲೀಸನಾಕಾ; ನಗರ ಪೋಲೀಸ ನಾಕಾ.

ಟ್ಯಕ್ಕಿ (ನಾ)= ತೆಕ್ಕೆ; ತೆಕ್ಕೆಯಲ್ಲಿ ಬರುವಷ್ಟು

ಟ್ಯಕ್ಕಿ ಟ್ಯಕ್ಕಿ (ದ್ವಿ) =ತೆಕ್ಕೆ ತೆಕ್ಕೆ; ಹೇರಳ; ರಾಶಿಗಟ್ಟಲೆ.

ಟ್ಯಾಕ್ಟರಿ (ನಾ) ಇಂ.= ಟ್ರ್ಯಾಕ್ಟರ್; ಯಂತ್ರ ನೇಗಿಲು; ಯಂತ್ರದಿಂದ ಉತ್ತುವ ಬಿತ್ತುವ ಸಾಧನ.

ಟ್ಯಾಕ್ಸಿ (ನಾ) ಇಂ.= ಬಾಡಿಗೆ ವಾಹನ.

ಟ್ರಾಲಿ (ನಾ) ಇಂ.= ಟ್ರೇಲರ್; ಹಿಂಗಾಡಿ; ತಳ್ಳು ಬಂಡಿ.

ಟ್ರಿಂಗ್ ಟ್ರಿಂಗ್ (ದ್ವಿ) ಇಂ.= ಫೋನು ಕರೆಯ ಸದ್ದು.

ಟ್ರಿಕ್ಕು (ನಾ) ಇಂ.= ತಂತ್ರ; ಗುಟ್ಟು; ರಹಸ್ಯ; ಚಾತುರ್ಯ.

ಟ್ರಿಕ್ಕು ತೋರ್ಸು (ಕ್ರಿ)= ತಂತ್ರ ಪ್ರದರ್ಶಿಸು; ಜಾಣತನ ತೋರಿಸು; ಬುದ್ಧಿಚಾತುರ್ಯ ತೋರು.

ಟ್ರಿಕ್ಕು ನಡ್ಸು (ಕ್ರಿ)= ತಂತ್ರಹೂಡು; ಜಾಣತನ ತೋರಿಸು.

ಟ್ರಿಕ್ಕು ಹುಡುಕು (ಕ್ರಿ)= ತಂತ್ರವನ್ನು ಹುಡುಕು; ಹೊಸತಂತ್ರವನ್ನು ಶೋಧಿಸು.

ಠ

ಠಂಡಾ (ನಾ)= ತಣ್ಣಗೆ; ತಂಪು.

ಠಂಡಾಠಂಡಾ (ದ್ವಿ)= ಅತಿ ತಂಪು; ಶಾಂತ.

ಠಂಡಾ ಬರಫ್ (ನಾ) ಉ.= ಮಂಜು ಗಡ್ಡೆಯಿಂದ ತಯಾರಿಸಿದ ಸಿಹಿ ತಿಂಡಿ; ಆಯ್ಸ್ ಕ್ರೀಮ್.

ಠಕ್ಕ (ನಾ)= ಮೋಸಗಾರ; ಧೋಕಾಬಾಜ; ವಂಚಕ; ಧೂರ್ತ; ಕಳ್ಳ.

ಠಕ್ಕುಗುಣ (ನಾ)= ಮೋಸದ ಗುಣ; ಠಕ್ಕುತನ.

ಠಕ್ಕುತನ (ನಾ)= ಮೋಸಗಾರಿಕೆ.

ಠಕ್ಸು (ಕ್ರಿ)= ಠಕ್ಕಿಸು; ಮೋಸಗೊಳಿಸು.

ಠಣಣಣ (ಅ)= ಬೊಬ್ಬಿಕ್ಕುವ ಕ್ರಿಯೆ.

ಠರಾವು (ನಾ)= ನಿಶ್ಚಯ; ತೀರ್ಮಾನ.

ಠರಾಸು (ಕ್ರಿ)= ನಿಶ್ಚಯಿಸು; ತೀರ್ಮಾನಿಸು; ನಿರ್ಧರಿಸು; ನಿರ್ಣಯಿಸು; ಪಕ್ಕಾಗೊಳಿಸು; ಖಚಿತಗೊಳಿಸು.

ಠಾಕ್‌ಠೀಕ್ (ನಾ)= ವ್ಯವಸ್ಥಿತ; ಸುಸಜ್ಜಿತ.

ಠಾಕುರ (ನಾ)= ಹಿಂ.= ರಜಪೂತ.

ಠಾಣಲಿ (ನಾ)= ದೀಪ ಇಡುವ ಕಟ್ಟೆಗೆಯ ಆಸನ.

ಠಾಣಾ (ನಾ)= ಪೊಲೀಸ್ ಸ್ಟೇಷನ್.

ಠಾಣಾಕುಶ್ನೂರು (ನಾ)= ಔರಾದ ತಾಲ್ಲೂಕಿನ ಒಂದು ವಲಯ ಕೇಂದ್ರವಿರುವ ಊರು. ಸಾಹಿತಿ ರಾಜೇಂದ್ರ ಯರನಾಳೆ (ಕುಯವೀರಾ) ಅವರ ಜನ್ಮಸ್ಥಳ.

ಠಾಣ್ಯಾ (ನಾ)= ಠಾಣೆ; ಪೋಲಿಸ್‌ಕೇಂದ್ರ.

ಠಾರು ಹೊಡಿ (ಕ್ರಿ)= ಹತ್ಯಾರು ಪ್ರಯೋಗ ಮಾಡಿ ವಧಿಸು.

ಠಾರ್ಯಾ (ನಾ)= ಠಿಕಾಣಿ; ಮೂಲಜಾಗ; ಮೊದಲಿನಜಾಗ.

ಠಾರ್ಯಾಕ್ಕತ್ತು (ಕ್ರಿ)= ಮೂಲಜಾಗಕ್ಕೆ ಬರು; ಮೊದಲಿನ ಜಾಗಕ್ಕೆಬರು; ಒಂದು ಜಾಗ ಕಾಯಂಗೊಳಿಸಿಕೊ.

ಠಾವು ಠಿಕಾಣಿ (ನಾ) ಮ.= ವಸತಿ; ವಿಳಾಸ; ಗೊತ್ತು ಗುರಿ; ಪರಿಚಯ.

ಠಾವುಕ (ನಾ)ಮ.= ಗೊತ್ತು; ಪರಿಚಯ.

ಠಾವ್ಕಿ (ನಾ) ಮ.= ಪರಿಚಯಸ್ಥ; ಪರಿಚಯದ; ಗೊತ್ತಿದ್ದ.

ಠಿಕರಿ (ನಾ) ಮ.= ಬೋಕಿ; ಗಡಿಗೆಯ ಒಡಕು ಭಾಗ; ಒಡಕುಗಡಿಗೆ.

ಠಿಕಾಣಿ (ನಾ) ಉ.= ಜಾಗ; ವಸತಿ; ವಾಸಸ್ಥಳ.

ಠಿಕಾಣಿ ಕಿತ್ತು (ಕ್ರಿ)= ತಳಬಿಡು; ಹೊರಟು ಹೋಗು.

ಠಿಕಾಣಿ ಹೂಡು (ಕ್ರಿ)= ಬೀಡುಬಿಡು; ವಾಸಿಸು; ಉಳಿಸು.

ಠಿಗರಿ (ನಾ)= ಟಿಗರಿ; ತಿಗರಿ; ಕುಂಬಾರ ಬಳಸುವ ಚಕ್ರ.

ಠಿಗಳಿ (ನಾ) ಮ.= ತೇಪೆ; ಚಿಂದಿ ಜೋಡಣೆ, ಹರಿದ ಬಟ್ಟೆಗೆ ಬೇರೆ ಬಟ್ಟೆಯ ತುಂಡು ಹೊಂದಿಸಿದ್ದು.

ಠಿಗುಳು (ನಾ)= ಠಿಗಳಿ; ತೇಪೆ; ಹರಿದ ಬಟ್ಟೆಗೆ ಬೇರೆ ಬಟ್ಟೆ ತುಂಡು ಜೋಡಿಸಿ ಗಟ್ಟಿಗೊಳಿಸಿದ ಜಾಗ.

ಠಿಬ್ಬಿ (ನಾ)= ಒಂದು ಪ್ರಕಾರದ ಹೊಲಿಗೆ.

ಠಿಬ್ಬಿ ಹಾಕು (ಕ್ರಿ)= ಹೊಲಿಗೆ ಹಾಕು; ಹೊಲಿದು ಜೋಡಿಸು.

ಠಿರ್‌ರ್‌ರ್ = ಕುರಿಗಳಿಗೆ ಮಗ್ಗುಲಿಗೆ ತಿರುಗಲು ಅಥವಾ ಹಿಂತಿರುಗಲು ನೀಡುವ ಆದೇಶ ಧ್ವನಿ

ಠಿಸ್ = ಬೆಕ್ಕು ಕೋಪ ಗೊಂಡಾಗ ಮಾಡುವ ಸದ್ದು.

ಠಿಸುಳು (ನಾ)= ಟಿಸುಳು; ಟಿಸಿಳು; ಸೀಳಿಕೆ; ಸೀಳು; ಕಾಲು ಒಡೆಯುವಿಕೆ.

ಠಿಸ್ಸನು (ಕ್ರಿ)= ಬೆಕ್ಕು ಕೋಪದೋರು (ಗಾದೆ: ನಮ್ಮ ಬೆಕ್ಕು ನಮ್ಗೇ ಠಿಸ್ಸಂತು).

ಠೀಕ್ (ವಿ.) ಉ.= ಸರಿ; ಭೇಷ್; ಉತ್ತಮ; ಶಾಬ್ಬಾಷ್.

ಠೀಕ್‌ಠಾಕ್ (ಅ)= ವ್ಯವಸ್ಥಿತ; ಶಿಸ್ತು ಬದ್ಧ; ಠಾಕ್ ಠೀಕ್.

ಠುಕುರಾಸು (ಕ್ರಿ) ಉ.= ಠೋಕರ್ ಹೊಡೆ; ಒದೆ; ಬೂಟಿನ ತುದಿಯಿಂದ ಒದೆ.

ಠುಕ್ರಾಸು (ಕ್ರಿ) ಉ.=ಠುಕುರಾಸು (ನೋಡಿರಿ).

ಠುಸ್ಸನು (ಕ್ರಿ)= ಗಾಳಿ ಹೊರ ಹೋಗುವ ಸದ್ದಾಗು.

ಠುಸ್ಸಾಗು (ಕ್ರಿ)= ಕೆಲಸಕೆಡು; ನಿರರ್ಥಕವಾಗು; ನಿಷ್ಕ್ರಿಯವಾಗು; ವಾಹನ ಚಕ್ರದ ರಬ್ಬರ ಟ್ಯೂಬಿನ ಗಾಳಿ ಹೊರಹೋಗು; ಕೆಲಸ ನಿಂತು ಬಿಡು.

ಠುಸ್ಸು (ನಾ)= ರಬ್ಬರ ಟ್ಯೂಬಿನ ಗಾಳಿ ಹೊರ ಹೋಗುವಿಕೆ; ಕೆಲಸ ಕೆಡುವಿಕೆ; ಕೆಲಸನಿಂತು ಬಿಡುವಿಕೆ.

ಠೆಸ್ಕಿ (ನಾ)= ಶ್ವಾಸನಾಳದಲ್ಲಿ ನೀರು ಅಥವಾ ಅನ್ನದ ಕಾಳು ಸೇರಿ ಉಂಟಾಗುವ ಕೆಮ್ಮು.

ಠೆಸ್ಕಿ ಹತ್ತು (ಕ್ರಿ)= ಶ್ವಾಸನಾಳದಲ್ಲಿ ನೀರು ಅಥವಾ ಅನ್ನದ ಕಾಳು ಸೇರಿ ಕೆಮ್ಮುಂಟಾಗು.

ಠೇಕಾ (ನಾ) ಹಿಂ.= ಗುತ್ತಿಗೆ; ಗುತ್ತೇದಾರಿ; ಕರಾರಿನ ಮೇಲೆ ಕೆಲಸ ನಿರ್ವಹಿಸುವ ಜವಾಬ್ದಾರಿ.

ಠೇಕಾತೊಗೊ (ಕ್ರಿ)= ಗುತ್ತಿಗೆ ಹಿಡಿ; ಗುತ್ತೆದಾರಿ ವಹಿಸಿಕೊ; ಕರಾರಿನ ಮೇಲೆ ಕೆಲಸ ನಿರ್ವಹಿಸುವ ಜವಾಬ್ದಾರಿ ವಹಿಸು.

ಠೇಚಿ (ನಾ)= ಕಾಲ್ಬೆರಳಿಗೆ ಬಡಿದ ಪೆಟ್ಟು.

ಠೇಚಿಬಡಿ (ಕ್ರಿ)= ಕಾಲ್ಬೆರಳಿಗೆ ನೆಲದ ಕಲ್ಲು ಬಡಿ.

ಠೇಚಿ ಹತ್ತು (ಕ್ರಿ)= ಠೇಚಿ ಬಡಿ; ಕಾಲ್ಬೆರಳಿಗೆ ಪೆಟ್ಟು ಬಡಿ; ಧಕ್ಕೆ ತಗಲು; ಪೆಟ್ಟಿನ ಅನುಭವವಾಗು; ತಾಪ ಉಣು.

ಠೇಲಂಠೇಲಿ (ನಾ)= ನೂಕಾಟ; ತುಳುಕಾಟ; ತೆರೆಗಳ ಅಪ್ಪಳಿಸುವಿಕೆ.

ಠೇಲಿ (ನಾ)= ತುಳುಕುವಿಕೆ; ತೆರೆ; ಲೋಟು; ಅಲೆ.

ಠೇಲಿಹೊಡಿ (ಕ್ರಿ)= ತುಳುಕಾಡು; ತೆರೆ ಅಪ್ಪಳಿಸು; ಜನದಟ್ಟಣೆಯಾಗಿ ನೂಕಾಟ ಉಂಟಾಗು.

ಠೇವಣಾತಿ (ನಾ) ಮ.= ಇಡುಗಂಟು; ಉಳಿತಾಯ, ಠೇವಣಿ.

ಠೇವಣಿ (ನಾ) ಮ.= ಇಡುಗಂಟು; ಉಳಿತಾಯ; ಠೇವಣಾತಿ.

ಠೊಕಾರಿ (ನಾ)= ಟೊಳ್ಳಾದ ಗಿಡದ ಪೊಟರೆ; ಕೊರೆದ ಪೊಳ್ಳಾದ ನೆಲ.

ಠೊಕಾರಿ ಭೀಳು (ಕ್ರಿ)= ನೆಲವುಟೊಳ್ಳಾಗು; ಗಿಡದಲ್ಲಿ ಟೊಳ್ಳುಂಟಾಗು.

ಠೊಕಾಸು (ಕ್ರಿ) ಉ.= ಹೊಡೆ; ಜೋರಾಗಿ ಹೊಡೆ.

ಠೋಕ್ (ನಾ)= ಸಗಟು; ಏಕ್ಮುಸ್ತ; ಒಟ್ಟಿಗೆ.

ಠೋಕ್ ಖರೀದಿ (ನಾ)= ಸಗಟು ಖರೀದಿ; ಏಕ್ಮುಸ್ತ ಕೊಳ್ಳುವಿಕೆ.

ಠೋಕ್ ಮಾರಾಟ (ನಾ)= ಸಗಟು ಬೇಚಿ; ಏಕ್ಮುಸ್ತ ಮಾರಾಟ.

ಠೋಕರ್ (ನಾ)= ಬೂಟು ಅಥವಾ ಚಪ್ಪಲಿಯ ಮುಂಭಾಗದಲ್ಲಿ ಜೋಡಿಸಿದ ಕಬ್ಬಿಣದ ಸಂರಕ್ಷಕ; ಮುಂಗಾಲಿನಿಂದ ಒದೆಯುವಿಕೆ; ಬೂಟುಗಾಲಿನಿಂದ ಒದೆಯುವಿಕೆ; ಠೇಚಿ; ಮುಂಗಾಲಿಗೆ ಬಡಿದ ಪೆಟ್ಟು.

ಠೋಕರ್ ತಿನು (ಕ್ರಿ)= ಠೇಚಿ ಬಡಿದು ನೋವು ಅನುಭವಿಸು; ಕಾಲ್ಬೆರಳಿಗೆ ಪೆಟ್ಟು ಬಡಿದು ನೋವು ಅನುಭವಿಸು; ಅನುಭವಿಸು; ಧಕ್ಕೆ ತಿನ್ನು; ಕಷ್ಟ ಪಡು.

ಠೋಕರ ಹೊಡಿ (ಕ್ರಿ)= ಮುಂಗಾಲಿನಿಂದ ಒದೆ; ಕಾಲಿನಿಂದ ತಳ್ಳು; ತಿರಸ್ಕರಿಸು.

ಠೋಕಿ (ನಾ)= ಜರ್ಮನ್ ಸಿಲ್ವರಿನಿಂದ ತಯ್ಯಾರಿಸಿದ ಅಡಿಗೆ ಪಾತ್ರೆ; ಅಗಲ ಬಾಯಿಯ ಅಡಿಗೆಯ ಸಣ್ಣ ಪಾತ್ರೆ.

ಠೋಕು (ನಾ)= ಠೋಕ್; ಸಗಟು; ಚಿಲ್ಲರೆ ಮಾಡಲಾರದ ನೋಟು; ನಾಣ್ಯ; ನೂರು; ಐದು ನೂರು; ಸಾವಿರದ ನೋಟು.

ಠೋಕು ಮಾತು (ನಾ)= ಖರೆಮಾತು; ಕುಂದಿಲ್ಲದ ನುಡಿ; ಮೂಲಮಾತು; ಪ್ರತ್ಯುತ್ತರ ಇಲ್ಲದ ಮಾತು.

ಠೋಕು ವ್ಯಾಪಾರಿ (ನಾ)= ಸಗಟು ಖರೀದಿ ವಿಕ್ರಿ ಮಾಡುವ ವ್ಯಾಪಾರಿ.

ಠ್ಯಾಂವು (ನಾ) ಮ.= ತಾಂವು; ಕಾಗದದ ದೊಡ್ಡ ಹಾಳೆ, ಠಾವು.

ಡ

ಡಂಕಾ (ನಾ)= ಹಿಂ.= ಡಂಗುರ; ಮುನಾದಿ; ಟಾಂಟಾಂ.

ಡಂಕಾಬಜಾಸು (ಕ್ರಿ) ಹಿಂ.= ಡಂಗುರ ಸಾರು; ಮುನಾದಿ ಹೊಡೆ; ಟಾಂಟಾಂ ಬಾರಿಸು (ಉದಾ: ಸ್ವಾಮಿ ಬಸವೇಶ ದುನಿಯಾಮೆ ಕ್ಯಾಕರಗಯಾ। ಸಮಾನತಕಾ ಡಂಕಾಬಜಾಕರ ಗಯಾ। –ಶರಣ ಕವಿ ಮಹಾಗಾಂವ)

ಡಂಕಾಭಾರ್ಸು (ಕ್ರಿ)= ಡಂಕಾಬಜಾಸು (ನೋಡಿರಿ).

ಡಂಗುರ (ನಾ)= ಡೊಂಗುರ; ಮುನಾದಿ; ಡಂಕಾ.

ಡಂಗುರು ಹೊಡಿ (ಕ್ರಿ)= ಡಂಕಾಭಾರ್ಸು; ಡಂಗುರ ಸಾರು; ಮುನಾದಿ ಹೊಡಿ; ಥಿಂಡೋರಿ ಹೊಡಿ.

ಡಂಗೂರು (ನಾ)= ಮುನಾದಿ; ಡಂಗುರ; ಥಿಂಡೋರಿ (ಹಾಡು: ಕೇಳಿರಿ ಕೇಳಿರಿ ಡಂಗೂರ ನೀವೆಲ್ಲ। ಹೇಳಿಲ್ಲ ಕೇಳಿಲ್ಲ ಅಂದೀರಿ ನೀವೆಲ್ಲ).

ಡಂಬಾಚಾರ (ನಾ)= ಆಡಂಬರ; ತೋರಿಕೆಯ ನಡೆವಳಿಕೆ; ಬೂಟಾಟಿಕೆ.

ಡಕಡಕ (ದ್ವಿ)= ಎದೆಬಡಿತದ ತೀವ್ರತೆಯ ಧ್ವನಿ; ಡವಡವ.

ಡಚ್ (ವಿ)= ಪೂರ್ತಿ ತುಂಬಿದ್ದ.

ಡಜನ್ (ನಾ) ಇಂ.= ಹನ್ನೆರಡರ ಗುಂಪೆಣಿಕೆ. (ಒಂದು ಡಜನ್ ಬಾಳೆಹಣ್ಣು ಎಂಬ ತರಹ)

ಡಟಾಸು (ಕ್ರಿ)= ಜಬರಿಸು; ಅಂಜಿಸು; ಭಯಪಡಿಸು; ಏರುಧ್ವನಿಯಿಂದ ದಬಾಯಿಸು.

ಡಣಕಿ (ನಾ)= ಹುಲಿಯ ಅಬ್ಬರಿಸುವಿಕೆ; ಹೋರಿ, ಎತ್ತುಗಳ ಅಬ್ಬರಿಸುವಿಕೆ; ಡುರುಕಿ.

ಡಣಕಿ ಹೊಡಿ (ಕ್ರಿ)= ಡುರುಕಿ ಹಾಕು; ಅಬ್ಬರಿಸು; ಗುಟುರು ಹಾಕು.

ಡಪ್ಪು (ನಾ)= ದಪ್ಪು; ಸಣ್ಣದಾದ ಚರ್ಮವಾದ್ಯ; ಉಡದ ಚರ್ಮದಿಂದ ಇಲ್ಲವೆ ಇತರೆ ಚರ್ಮದಿಂದ ತಯಾರಿಸಲಾದ ಸಣ್ಣ ಗಾತ್ರದ ಚರ್ಮವಾದ್ಯ.

ಡಪ್ಲಿ (ನಾ)= ಹಿಂ.= ಡಪ್ಪು (ನೋಡಿರಿ)

ಡಬಡಬ (ದ್ವಿ)= ಡವಡವ; ಗಾಬರಿಯಿಂದ ಹೆಚ್ಚಾದ ಎದೆ ಬಡಿತ; ಡಕಡಕ.

ಡಬ್ಣ (ನಾ)= ಡಬ್ಬಣ (ನೋಡಿರಿ)

ಡಬರಿ (ನಾ)= ನೀರು ತುಂಬಿದ ತಗ್ಗು; ಡಬ್ರಿ; ಮಳೆಯಿಂದ ಸಂಗ್ರಹವಾದ ಇಲ್ಲವೆ ಹರಿಯದೆ ನಿಂತ ನೀರು.

ಡಬ್ಬಣ (ನಾ)= ಗೋಣಿ ಚೀಲ ಹೊಲಿಯಲು ಬಳಸುವ ಕಬ್ಬಿಣ ಅಥವಾ ಉಕ್ಕಿನ ದಪ್ಪ ಸೂಜಿ; ದಬ್ಬಣ; ಡಾಬಣ.

ಡಬ್ಬಲ್ಲು = ದುಪ್ಪಟ್ಟು; ಎರಡು ಪಟ್ಟು.

ಡಬ್ಬಾ (ನಾ) ಹಿಂ.= ಡಬ್ಬ; ಡಬ್ಬಾ; ಅನಾಜು, ಸಾಮಾನು ಇತ್ಯಾದಿಗಳನ್ನು ತುಂಬಿಡಲು ಬಳಸುವ ತಗಡಿನ ಡಬ್ಬಿ.

ಡಬ್ಬಿ (ನಾ) ಹಿಂ.= ಡಬ್ಬಾ (ನೋಡಿರಿ).

ಡಬ್ಬಿಡು (ಕ್ರಿ)= ಬೋರಳಿಡು; ಬಾಳಿ ಹಾಕು.

ಡಬ್ಬು (ನಾ)= ಬೋರಳು; ಅಡಿಮೇಲು.

ಡಬ್ಬುಹಾಕು (ಕ್ರಿ)= ಡಬ್ಬಿಡು (ನೋಡಿರಿ).

ಡಬ್ರಿ (ನಾ)= ಡಬರಿ (ನೋಡಿರಿ).

ಡಮ್ರು (ನಾ)= ಡಮರು; ಒಂದು ಬಗೆಯ ಚರ್ಮವಾದ್ಯ.

ಡವಾರಿ (ನಾ) ಮ.= ಕಣದ ರಾಶಿಯ ಹಬ್ಬ; ಕಣದ ಹಬ್ಬ; ಬಣವೆ ಹಬ್ಬ.

ಡಾಂಬಾರು (ನಾ)= ಡಾಮರು; ದಾಮರು; ಟಾರೆಣ್ಣೆ.

ಡಾಂಬಾರೆಣ್ಣೆ (ನಾ)= ಟಾರೆಣ್ಣೆ; ಡಾಂಬಾರು; ಡಾಮರು.

ಡಾಂಬಾರ್ರೋಡು (ನಾ)= ಟಾರ್ರೋಡು.

ಡಾಂವು (ನಾ)= ದಾಂವಾ; ಡಾವಾ; ದಾವಣಿಯ ಹಗ್ಗ; ಆಟದ ಪಾಳಿ.

ಡಾಂಸು (ನಾ) ಮ.= ಚಿಕ್ಕಡು; ಚಿಕ್ಕಾಡು; ಚಿಕ್ಡು; ದೋಮೆ; ಸೊಳ್ಳೆ.

ಡಾಕಾ (ನಾ)= ಕಳ್ಳತನ; ದರೋಡೆ; ಕನ್ನ ಹಾಕುವಿಕೆ.

ಡಾಕು (ನಾ)= ಕಳ್ಳ; ದರೋಡೆಖೋರ.

ಡಾಕುಳ್ಗಿ (ನಾ)= ಹುಮ್ನಾಬಾದ ತಾಲೂಕಿನ ಒಂದು ಸ್ಥಳ ನಾಮ. ದನಗಳನ್ನು ಬಲಿ ಕೊಡುವ ಊರು.

ಡಾಗು (ನಾ)= ಭಾಂಗಿ; ಗಂಟು; ಮೂಟೆ; ಪೇಠಿ; ಪೆಟ್ಟಿಗೆ; ಕಪ್ಪು ಕಲೆ; ಕಲೆ; ಗುರುತು.

ಡಾಗ್ದಾರ (ನಾ)= ಡಾಕ್ಟರ; ವೈದ್ಯ.

ಡಾಗ್ದಾರ್ಕಿ (ನಾ)= ವೈದ್ಯಗಾರಿಕೆ.

ಡಾಟು (ನಾ)= ಡಟ್ಟಾ; ಬೂಚು; ಮುಚ್ಚಣಿಕೆ.

ಡಾಬಣ (ನಾ)= ಡಬ್ಬಣ (ನೋಡಿರಿ).

ಡಾಬಾ (ನಾ)= ಡಾಬು; ನಡಪಟ್ಟಿ; ಒಡ್ಯಾಣ.

ಡಾಬು (ನಾ)= ಡಾಬಾ (ನೋಡಿರಿ).

ಡಾರೆಕ್ಟ್ (ನಾ)ಇಂ=ನೇರ; ಸೀದಾ; ನೆಟ್ಟಗೆ

ಡಾಲ್ಡಾ (ನಾ) ಇಂ.= ವನಸ್ಪತಿ ಎಣ್ಣೆ; ವನಸ್ಪತಿ ತುಪ್ಪ.

ಡಾವಣಿ (ನಾ)= ದಾವಣಿ; ದನಕರುಗಳನ್ನು ಸಾಲಾಗಿ ಒಂದೆಡೆ ಕಟ್ಟುವ ಜಾಗ; ಸಾಲು; ದನಗಳಸಾಲು.

ಡಾವಾ (ನಾ)= ಡಾಂವು; ದಾಂವಾ; ಡಾಂವಾ; ದಾವಣಿಯ ಹಗ್ಗ ಹಾಗೂ ಅದಕ್ಕೆ ಜೋಡಿಸಿದ ದನಳ ಕೊರಳಿನ ಕಣ್ಣಿ.

ಡಾವು (ನಾ)= ಕುಸ್ತಿಯಾಟ; ಹಂಚಿಕೆ; ಉಪಾಯ.

ಡಾವುರ್ಗ್ಯಾ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿ; ಡಾವರ್ಗಾವ ಎಂತಲೂ ಕರೆಯುತ್ತಾರೆ.

ಡಾವುಪೇಚು (ನಾ)= ಕುಸ್ತಿಯ ಉಪಾಯ; ತಂತ್ರ; ಪಟ್ಟು.

ಡಾಳಿಂಬ್ರ (ನಾ)= ದಾಳಿಂಬ್ರ; ದಾಳೆಂಬ್ರ; ಡಾಳೆಂಬ್ರ; ಸಾಲು ಮುತ್ತಿನಂತೆ ಬೀಜ ಹೊಂದಿರುವ ಒಂದು ಪ್ರಕಾರದ ತಿನ್ನುವ ಕಾಯಿ ಮತ್ತು ಅದರ ಗಿಡ.

ಡಿಂಕ್ (ನಾ)= ಮ. ಅಂಟು; ಗಿಡದಿಂದ ಒಸರುವ ಜಿಗುಟು ವಸ್ತು.

ಡಿಂಕ್ ಲಾಡು (ನಾ)ಮ.= ಅಂಟಿನ ಉಂಡಿ; ಅಂಟಿನಿಂದ ತಯಾರಿಸಿದ ಚಂಡಿನಾಕಾರದ ಸಿಹಿ ತಿಂಡಿ.

ಡಿಂಕು (ನಾ)ಮ.= ಡಿಂಕ್ (ನೋಡಿರಿ)

ಡಿಂಡೋರಿ (ನಾ) ಮ.= ಢಿಂಡೋರಿ; ಡಂಗುರ; ಮುನಾದಿ; ಟಾಂಟಾಂ; ಡಂಕಾ.

ಡಿಂಡೋರಿ ಹೊಡಿ (ಕ್ರಿ)= ಡಂಗುರ ಸಾರು; ಮುನಾದಿ ಹೊಡಿ; ಡಂಕಾ ಬಜಾಸು.

ಡಿಗ್ಗಿ (ನಾ)= ಢಿಗ್ಗಿ; ರಾಶಿ; ಕುಂಪಿ; ಕುಂಪ್ಪಿ (ಔರಾದ ತಾಲೂಕಿನ ಡಿಗ್ಗಿ ಎಂಬ ಹೆಸರಿನ ಊರು).

ಡಿಗ್ಗಿ ಡಿಗ್ಗಿ (ದ್ವಿ) = ರಾಶಿರಾಶಿ; ಸಿಕ್ಕಾಬಟ್ಟೆ ಸಂಗ್ರಹ.

ಡಿಗ್ಗಿ ಹಾಕು (ಕ್ರಿ)= ರಾಶಿಯೊಟ್ಟು; ರಾಶಿಹಾಕು; ಹುಲ್ಲು; ಕಣಿಕೆ, ಸೇಂಗಾ ಇತ್ಯಾದಿ ಒಂದೆಡೆ ಶೇಖರಿಸು.

ಡಿಗ್ರಿ (ನಾ) ಇಂ.= ಡಿಕ್ರಿ; ಕೋರ್ಟಿನ ತೀರ್ಪು; ತೀರ್ಮಾನ; ಆಜ್ಞೆ; ಪದವಿ.

ಡಿಜೈನು (ನಾ) ಇಂ.= ನಮೂನೆ; ಕುಸುರ; ಕಲಾಕೃತಿ.

ಡಿಬ್ರಿ (ನಾ) ಇಂ.= ನಟ್ಟು ಬೋಲ್ಟು; ಸ್ಕ್ರೂ; ಬಿರಡಿ.

ಡಿರೆವರ (ನಾ) ಇಂ.= ಡ್ರೈವರ್; ಚಾಲಕ; ಯಂತ್ರ ವಾಹಕ.

ಡಿಸಿಮಿಸಿ (ನಾ)= ಒಡಕು; ಭೇದ; ಮನಸ್ತಾಪ.

ಡಿಸಿಮಿಸಿ ಆಗು (ಕ್ರಿ)= ಮನಸ್ತಾಪ ಉಂಟಾಗು; ದೂರಾಗು; ಭೇದ ಬರು; ಒಡಕುಂಟಾಗು.

ಡಿಳ್ಳಿ (ನಾ)= ದಿಲ್ಲಿ; ದೆಹಲಿ (ಗಾದೆ: ಹಳ್ಳಿ ಹಾಳಾಯ್ತು, ಡಿಳ್ಳಿ ಪಟ್ಣಾಯ್ತು)

ಡೀಪೊ (ನಾ) ಇಂ.= ಬಸ್ಸುಗಳ ಮಳಿಗೆ; ಪುಸ್ತಕ ಮಳಿಗೆ.

ಡುಕರಿಜೋಳ (ನಾ)= ಜೋಳದ ಒಂದು ಪ್ರಕಾರ.

ಡುಕುಡುಕಿ (ನಾ)= ಅಂಜಿಕೆ; ಭಯ.

ಡುಕ್ಕರ್ (ನಾ)= ಶೂಕರ; ಸುವ್ವರ; ಹಂದಿ.

ಡುಕ್ಕರ್ ಮಾರ್ಯಾಂವ (ನಾ)= ಹಂದಿ ಮುಖದಂತಿದ್ದವನು.

ಡುಕ್ಕು (ನಾ)= ಮೌನವಾಗಿರುವಿಕೆ; ಮಾತಾಡದಂತಿರುವಿಕೆ.

ಡುಕ್ಕು ಹೊಡಿ (ಕ್ರಿ)= ನಿದ್ರೆ ಹೋದಂತೆ ನಟಿಸು; ಮಾತಾಡದಿರು; (ಗಾದೆ: ನಿದ್ದಿ ಹತ್ತಿದಾಂವ್ಗ ಎಬ್ಬಿಸ್ಲಾಕ ಬರ್ತಾದ, ಡುಕ್ಕು ಹೊಡ್ದಾಂವ್ಗ ಎಬ್ಬಿಸ್ಲಾಕ ಬರಾಲ).

ಡುಕ್ರಿಜ್ವಾಳ (ನಾ)= ಡುಕರಿಜೋಳ; ಜೋಳದ ಒಂದು ಪ್ರಕಾರ.

ಡುಗ್ಗಾಗು (ಕ್ರಿ)= ಚೂರುಚೂರಾಗು; ನುಗ್ಗಾಗು;

ಡುಗ್ಗು (ನಾ)= ಬುಕ್ಣಿ; ಚೂರು; ಪುಡಿ; ಹುಡಿ.

ಡುಗ್ಗು ಮಾಡು (ಕ್ರಿ)= ಬಡಿದು ಪುಡಿ ಪುಡಿ ಮಾಡು; ಚೂರು ಚೂರು ಮಾಡು; ಹುಡಿಗೊಳಿಸು.

ಡುಡುಡು (ನಾ)= ಕಬಡ್ಡಿಯಾಟ; ಹುತುತುಆಟ; ದಮ್ಮು ಹಿಡಿದು ಆಡುವ ಆಟ.

ಡುಬರಿ (ನಾ)= ಡುಬ್ಬ; ಬೆನ್ನು; ಬೆನ್ನು ಹುರಿ; ಒಂಟೆಯ ಉಬ್ಬಿದ ಬೆನ್ನು; ಮದಾರಿ.

ಡುಬಾಸು (ಕ್ರಿ)= ಮುಳುಗಿಸು; ತಂದ ಸಾಲವನ್ನು ಹಿಂದಿರುಗಿ ಕೊಡದಂತಿರು.

ಡುಬ್ಕಿ (ನಾ)= ನೀರಲ್ಲಿ ಮುಳುಗುವಿಕೆ; ಅನುತ್ತೀರ್ಣ; ಫೇಲು.

ಡುಬ್ಕಿಹೊಡಿ (ಕ್ರಿ)= ನೀರಲ್ಲಿ ಮುಳುಗು; ಸುರಂಗು ಹೊಡೆ; ನೀರಲ್ಲಿ ಮುಳುಗಿದವ ಮೇಲೆ ಬರದಂತಿರು; ಅನುತ್ತೀರ್ಣನಾಗು; ಪರೀಕ್ಷೆಯಲ್ಲಿ ಲಾಗಹೊಡೆ; ಫೇಲಾಗು; ಗೈರು ಹಾಜರಾಗು.

ಡುಬ್ಗಯಿ (ನಾ)= ಮುಳುಗಡೆ; ಕೊಟ್ಟಹಣ ಮರಳಿ ಬಾರದಿರುವಿಕೆ.

ಡುಬ್ಬ(ನಾ)= ಡುಬರಿ; ಬೆನ್ನು; ಬೆನ್ನು ಹುರಿ; ಒಂಟೆಯ ಮದಾರಿ.

ಡುಬ್ಬಾ ಬೆಳಗು (ಕ್ರಿ)= ಡುಬ್ಬದ ಮೇಲೆ ಜೋರಾಗಿ ಹೊಡೆ; ಬೆನ್ನ ಹುರಿಯ ಮೇಲೆ ಇಲ್ಲವೆ ಬೆನ್ನ ಮೇಲೆ ಜೋರಾಗಿ ಹೊಡೆ.

ಡುಮುಕು (ಕ್ರಿ)= ಮುಳುಗು; ನೀರಲ್ಲಡಗು; ನೀರಲ್ಲಿ ಕಾಣದಂತಾಗು (ಗೌರಿಹಾಡು: ಹರಿಯ ಹಾಯಲೆ। ದೊಡ್ಡ ಮಡುವ ಡುಮುಕಲೆ).

ಡುಮ್ಕಿ (ನಾ)= ಡುಬ್ಕಿ; ಅನುತ್ತೀರ್ಣ; ಫೇಲು.

ಡುಮ್ಮ (ನಾ)= ಟುಮ್ಮ; ಹೊಟ್ಟೆ ಉಬ್ಬಿದವ (ಗಾದೆ: ಹೊಟ್ಟೆ ಡುಮ್ಮ; ಕೈಕಾಲ್ಸಣ್ಣ).

ಡುಮ್ಮಿ (ನಾ)= ಟುಮ್ಮಿ; ಹೊಟ್ಟೆ ಉಬ್ಬಿದವಳು.

ಡುರುಕಿ (ನಾ)= ಹುಲಿ; ಹಂದಿ ಅಥವಾ ಹೋರಿಗಳ ಡಣಕಿ; ಗುಟುರು ಹಾಕುವಿಕೆ.

ಡುರುಕಿ ಹಾಕು (ಕ್ರಿ)= ಗುಟುರು ಹಾಕು; ಡಣಕಿ ಹಾಕು.

ಡುರುಕಿ ಹೊಡಿ (ಕ್ರಿ)= ಡುರುಕಿ ಹಾಕು (ನೋಡಿರಿ)

ಡುರುಕುಡುರುಕು (ದ್ವಿ)= ಹಂದಿ; ಹುಲಿ ಅಥವಾ ಹೋರಿ (ಗೂಳಿ)ಯ ಡಣಕಿ; ಡುರುಕಿ.

ಡುರ್ಕಿ (ನಾ)= ಡುರುಕಿ; ಡಣಕಿ.

ಡುಶ್ (ನಾ)= ಮಕ್ಕಳಾಟದ ಡಿಕ್ಕಿ

ಡುಶುಂಡುಶುಂ (ದ್ವಿ)= ಗುದ್ದಾಟ; ಮುಷ್ಠಿಯುದ್ಧ.

ಡುಳ್ಳ್ (ನಾ)= ಬಾದ; ಬೇಕಾರ; ಡುಳ್ಳಿ; ಮುಳುಗಡೆ.

ಡುಳ್ಳಾಗು (ಕ್ರಿ)= ಬಾದಾಗು; ಬೇಕಾರಾಗು; ಮುಳುಗಡೆ ಆಗು.

ಡುಳ್ಳಿ (ನಾ)= ಬಾದು; ಬೇಕಾರ; ಡುಳ್ಳು; ಡುಳ್ಳ; ಮುಳುಗಡೆ;

ಡುಳ್ಳು (ನಾ)= ಡುಳ್ಳಿ (ನೋಡಿರಿ).

ಡೂಗಾಗು (ಕ್ರಿ)= ಬೆನ್ನು ಬಾಗು; ಎದೆಗೂಡು ಒಳಸೇರು; ಗೂನಾಗು.

ಡೂಗಿ (ನಾ)= ಬೆನ್ನು ಬಾಗಿದವನು(ಳು).

ಡೂಗು (ನಾ)= ಬಾಗಿದ ಬೆನ್ನು; ಗೂನು.

ಡೂಗ್ಯಾ (ನಾ)= ಬೆನ್ನು ಬಾಗಿದವನು (ಬೈಗುಳ)

ಡೆಂಗಡೆಂಗಡೆಂಗ (ನಾ)= ಹಲಗೆ ವಾದ್ಯದ ಒಂದು ಗತ್ತು (ಉದಾ: ಡೆಂಗಡೆಂಗಡೆಂಗ್, ದೋಪೈಗೆ ಮಂಗ್)

ಡೆಂಗು (ಕ್ರಿ) ತೆ.= ಜಡಿ; ಸಂಭೋಗಿಸು; ಲೈಂಗಿಕ ಕ್ರಿಯೆ ನಡೆಸು; ಮೋಸಗೊಳಿಸು; ವಂಚಿಸು.

ಡೇಕು (ನಾ)= ಜೇಕು; ಜೇಕಿನ ಹುಲ್ಲು; ಸುವಾಸಿಕ ಗಡ್ಡೆಯುಳ್ಳ ಹುಲ್ಲು; ಜೌಗು ಪ್ರದೇಶದ ಹುಲ್ಲು.

ಡೇರಾ (ನಾ) ಹಿಂ.= ಡೇರ್ಯಾ; ಡೇರೆ; ಗುಡಾರ; ಬಟ್ಟೆಯಿಂದ ತಯಾರಿಸಿದ ಸಂಚಾರಿ ಮನೆ.

ಡೇರ್ಯಾ (ನಾ)= ಡೇರಾ (ನೋಡಿರಿ).

ಡೇರ್ಯಾ ಹೂಡು (ಕ್ರಿ)= ಡೇರೆ ಹಾಕು; ತಾತ್ಪೂರ್ತಿ ವಸತಿ ಏರ್ಪಡಿಸು; ಟೆಂಟು ಹಾಕು.

ಡೇರ್ಯಾ ಹೊಡಿ (ಕ್ರಿ)= ಬಿಡಾರ ಹೂಡು.

ಡೇಲಿ (ನಾ) ಇಂ.= ದಿನಾಲು; ಪ್ರತಿದಿನದ; ಡೈಲಿ; ದೈನಿಕ.

ಡೈನಾಮೇಟ್ (ನಾ)= ಸಿಡಿಮದ್ದಿನಿಂದ ತಯಾರಿಸಿದ ಸ್ಫೋಟಕ.

ಡೈನುಮಾ (ನಾ) ಇಂ.= ವಿದ್ಯುತ್ ಉತ್ಪಾದಕ ಯಂತ್ರ.

ಡೈರಿ (ನಾ) ಇಂ.= ದಿನಚರಿ ಪುಸ್ತಕ; ದಿನಚರಿ; ಹಾಲಿನ ಕೇಂದ್ರ.

ಡೈಲಾಗು (ನಾ)= ಇಂ.= ಮಾತು; ಸಂಭಾಷಣೆ; ನಾಟಕದ ಮಾತು.

ಡೈಲಿ (ನಾ) ಇಂ.= ದಿನಾಲು; ದೈನಿಕ; ಪ್ರತಿನಿತ್ಯ.

ಡೊಂಕ (ನಾ)= ಒಂಕ; ಓರೆ.

ಡೊಂಕಾಗು (ಕ್ರಿ)= ಒಂಕಾಗು; ಓರೆಯಾಗು; ವಕ್ರವಾಗು; ಮಣಿ; ಬಾಗು.

ಡೊಂಕು (ನಾ)= ಒಂಕ; ಓರೆ.

ಡೊಂಕುಬುದ್ಧಿ (ನಾ)= ಕುಹಕತನ.

ಡೊಂಗು (ನಾ)= ಕಳ್ಳದನದ ಕೊರಳಿಗೆ, ವೇಗವಾಗಿ ಓಡಲು ಬಾರದಂತೆ ಕಟ್ಟಿದ ಉದ್ದಕೋಲು.

ಡೊಂಗುರ (ನಾ)= ಡಂಗುರ; ಹಲಗೆ ಬಾರಿಸಿ ಸುದ್ದಿ ಸಾರುವಿಕೆ.

ಡೊಂಗು ಹಾಕು (ಕ್ರಿ)= ದನಗಳ ಕೊರಳಿಗೆ, ಓಡಲು ಬಾರದಂತೆ ಉದ್ದಕೋಲನ್ನು ತೂಗುಹಾಕು.

ಡೊಂಗುರು ಹೊಡಿ (ಕ್ರಿ)= ಡಂಗುರ ಸಾರು; ಮುನಾದಿ ಹೊಡಿ.

ಡೊಂಗ್ರಾಳ (ನಾ)= ಮ.= ಗುಡ್ಡಗಾಡು ಪ್ರದೇಶ.

ಡೊಂಗ್ರಿ ಜಮೀನು (ನಾ)= ಗುಡ್ಡಗಾಡು ಭೂಮಿ.

ಡೊಂಬ (ನಾ)= ಮೈಚಾತುರ್ಯ ತೋರುವವ; ತಂತಿಯ ಮೇಲೆ ನಡೆಯುವವ; ಬೀದಿ ಸರ್ಕಸ್ಸು ಪ್ರದರ್ಶಿಸುವವ; ಬೀದಿ ಕಸರತ್ತು ತೋರುವವ.

ಡೊಂಬತಿ (ನಾ)= ಡೊಂಬ್ತಿ; ಡೊಂಬರ ಹೆಂಗಸು; ಮೈಚಾತುರ್ಯ ತೋರುವವಳು; ಬೀದಿ ಸರ್ಕಸ್ಸು ತೋರುವವಳು; ಬೀದಿ ಕಸರತ್ತು ಪ್ರದರ್ಶಿಸುವವಳು.

ಡೊಂಬ್ತಿ (ನಾ)= ಡೊಂಬತಿ (ನೋಡಿರಿ

ಡೊಂಬ್ರಾಟ (ನಾ)= ಡೊಂಬರು ಬೀದಿಯಲ್ಲಿ ಹೂಡುವ ಕಸರತ್ತು ಮತ್ತು ಮೈ ಚಾತುರ್ಯದ ಆಟ.

ಡೊಕ್ಕು (ನಾ)= ಕಬ್ಬಿಣ, ತಾಮ್ರ, ಹಿತ್ತಾಳೆ ಇತ್ಯಾದಿಗಳ ಪಾತ್ರೆಗಳಿಗೆ ಪೆಟ್ಟು ಬಿದ್ದು ಒಳತಗ್ಗಿದ್ದು; ಡೊಪ್ಪು.

ಡೊಕ್ಕುಭೀಳು (ಕ್ರಿ)= ಪೆಟ್ಟು ತಗಲಿ ಪಾತ್ರೆಗಳು ಒಳತಗ್ಗು, ಒಳಸೇರು, ಡೊಪ್ಪಾಗು.

ಡೊಗ್ಗಾಲು (ನಾ)= ನೆಲಕ್ಕೆ ತಗಲುವಂತೆ ಊರಿದ ಮೊಣಕಾಲು; ಅಂಬೆಗಾಲು.

ಡೊಗ್ಗಾಲೂರು (ಕ್ರಿ)= ಸೋಲೊಪ್ಪು; ಶರಣಾಗು; ಮೊಣಕಾಲೂರು; (ಎತ್ತು) ಮೊಣಕಾಲೂರು.

ಡೊಗ್ಗಾಲ್ಮಂಡಿ (ನಾ)= ನೆಲಕ್ಕೆ ಮೊಣಕಾಲೂರುವಿಕೆ.

ಡೊಗ್ಗಾಲ್ಮಂಡಿ ಹೊಡಿ (ಕ್ರಿ)= ಕಾಲು ಮಡಿಚಿ ಮೊಣಕಾಲನ್ನು ನೆಲಕ್ಕೆ ತಾಗಿಸು; (ಎತ್ತು) ಕೂಡುಬೀಳು.

ಡೊಗ್ಗು (ಕ್ರಿ)= ಬಗ್ಗು; ಶರಣಾಗು; ಸಲಾಮು ಹೊಡಿ; ದುಡಿ; ಸೆರಗು ಹಾಸು.

ಡೊಣ್ಣೆ (ನಾ)= ಡೊಪ್ಪಿ; ಮುತ್ತುಗದೆಲೆಯ ದ್ರೋಣಿ.

ಡೊನೇಶನ್ (ನಾ) ಇಂ. = ದೇಣಿಗೆ; ಚಂದಾ; ಕಾಣಿಕೆ

ಡೊಪ್ಪಾಗು (ಕ್ರಿ)= ಒಳತಗ್ಗು; ಒಳಸೇರು; ಡೊಕ್ಕುಬೀಳು.

ಡೊಪ್ಪಿ (ನಾ)= ಡೊಣ್ಣೆ (ನೋಡಿರಿ).

ಡೊಪ್ಪುಬೀಳು (ಕ್ರಿ)= ಡೊಪ್ಪಾಗು (ನೋಡಿರಿ).

ಡೊಳ್ಳಿ ಬುಟ್ಟಿ (ನಾ)= ತಳದಲ್ಲೂ ಸುತ್ತ ಮುತ್ತಲೂ ಬಹಳ ಅಗಲವಾಗಿರುವ ಲಕ್ಕೆಯ ಬುಟ್ಟಿ.

ಡೊಳ್ಳು (ನಾ)= ಢೊಳ್ಳು; ಉಬ್ಬಿದ ಹೊಟ್ಟೆ; ಇಬ್ಬದಿಯಲ್ಲೂ ಚರ್ಮ ಹೊಂದಿಸಿರುವ ದೊಡ್ಡ ಚರ್ಮವಾದ್ಯ.

ಡೊಳ್ಳ್ಯಾ (ನಾ)= ಉಬ್ಬಿದ ಹೊಟ್ಟೆಯುಳ್ಳವನು.

ಡೋಕ (ನಾ) ಮ.= ತಲೆ; ನೆತ್ತಿ; ಶಿರಸ್ಸು; ಡೋಸ್ಕ

ಡೋಕು (ನಾ)= ದೊಡ್ಡಮೀನು.

ಡೋಕು (ಕ್ರಿ)= ಕುಡಿ; ಹೀರು (ಉದಾ: ಒಂದು ಪ್ಯಾಲಿ ಹಾಲು ಡೋಕಿದ ಮ್ಯಾಲ ಸುಮ್ಮನಾದ).

ಡೋಕುಸು (ಕ್ರಿ)= ಕುಡಿಸು; ಕುಡಿಯುವಂತೆ ಮಾಡು (ಕ್ರೋಧ ಮತ್ತು ತಿರಸ್ಕಾರದಿಂದ ಹೇಳುವ ಮಾತು).

ಡೋಗಿ (ನಾ)= ತಲೆಬುರುಡೆ.

ಡೋಗಿ ಬ್ಯಾನಿ (ನಾ)= ತಲೆಗೆ ಸಂಬಂಧಿಸಿದ ಬೇನೆ; ಕಲಬುರ್ಗಿಯ ಶರಣಬಸಪ್ಪನ ಚರಿತ್ರೆಯಲ್ಲಿ ಡೋಗಿ ಬೇನೆ ಪ್ರಸ್ತಾಪವಿದೆ.

ಡೋಡೋ (ದ್ವಿ)= ಹೀಯಾಳಿಕೆ ಪದ.

ಡೋಡೋ ಟಿಮ್ಮಯ್ಯ (ನಾ)= ಹಳ್ಳಿ ಮಕ್ಕಳು ವರ್ತುಳಾಕಾರದಲ್ಲಿ ಕುಳಿತು ಸುತ್ತು ಹೊಡೆಯುವ ಆಟ **ಪೂರ್ತಿ ಪ್ರಾಸ:** ಡೋಡೋ ಟಿಮ್ಮಯ್ಯಾ। ಸೊಡ್ಡಾ ಎಲ್ಲಿ ಬಚ್ಚಿಟ್ಟೆ।)

ಡೋಡೋ ಮುಟುಗಿ (ನಾ)= ಇದು ಒಂದು ಹೀಯಾಳಿಕೆಯ ಪ್ರಾಸವಿದೆ. ಇದರ ಪೂರ್ತಿಪ್ರಾಸವು ಹೀಗಿದೆ: ಡೋಡೋ ಮುಟಗಿ। ಕುಂಬಾರ ಚಟಗಿ.

ಡೋಣಿ (ನಾ)= ಡೋಣಿ; ನೌಕೆ; ನಾವೆ; ಹರಿಗೋಲು; ಚರ್ಮತೊಯ್ಸಲು ಬಳಸುವ ದೊಡ್ಡ ಗಾತ್ರದ ಮಣ್ಣಿನ ಪಾತ್ರೆ. ಸಮಗಾರ ಹರಳಯ್ಯನ ದೋಣಿ. ಈ ದೋಣಿಯ ನೀರಿನಿಂದಲೇ ಮಧುವಯ್ಯ ಶರಣ ಮೈಯ ಉರುಪು ಶಾಂತವಾಯಿತು.

ಡೋಣ್ಗಾಂವ (ನಾ)= ಮಹಾಳಪ್ಪಯ್ಯನ ಸುಕ್ಷೇತ್ರ ವೆನಿಸಿದ ಔರಾದ ತಾಲೂಕಿನ ಒಂದು ಊರು; ಸಾಂಸದ ನರಸಿಂಗ ಹುಳ್ಳಾ ಸೂರ್ಯವಂಶಿಯ ಹುಟ್ಟೂರು.

ಡೋಣ್ಗಾಪೂರ (ನಾ)= ಡೋಣೇಶ್ವರ ಸುಕ್ಷೇತ್ರ ವೆನಿಸಿದ ಭಾಲ್ಕಿ ತಾಲೂಕಿನ ಒಂದು ಊರು.

ಡೋನೇಶನ (ನಾ) ಇಂ.= ದೇಣಿಗೆ; ಚಂದಾ; ಕಾಣಿಕೆ.

ಡೋಬು (ನಾ)= ನೀರಿನ ಮಡಿಯ ಮತ್ತು ನಾಲೆಯ ಏರಿ; ಅಂಚು.

ಡೋಬೇರ್ಸು (ಕ್ರಿ)= ನೀರಾವರಿ ಭೂಮಿಯ ನಾಲೆಯ ಮತ್ತು ಮಡಿಯ ಏರಿಯ ಮಣ್ಣನ್ನು ಎತ್ತರಿಸು.

ಡೋಬೊಡಿ (ಕ್ರಿ)= ಡೋಬು ಒಡೆದು ನೀರಿಗೆ ದಾರಿ ಮಾಡಿಕೊಡು; ಡೋಬು ಹಾಳಾಗಿ ನೀರು ದಿಕ್ಕಾಪಾಲಾಗು.

ಡೋರಿ (ನಾ)= ಕಬ್ಬಿನಗಾಣದ ಕಾರ್ಖಾನೆಯಲ್ಲಿ ಬಳಸಲಾಗುವ ದೊಡ್ಡದಾದ ಸೌಟು; ಬೂಟಿನ ದಪ್ಪದಾರ; ಗೋಪಿನ ದಾರ.

ಡೋರಿಯಾ ಬೂಟು (ನಾ)= ದಾರದಿಂದ ಕಟ್ಟಿಕೊಂಡು ಬಳಸಲಾಗುವ ಬೂಟು.

ಡೋರು (ನಾ) ಇಂ.= ದ್ವಾರ; ಬಾಗಿಲು.

ಡೋಲಿ (ನಾ) ಹಿಂ.= ಮೇಣ್ಯಾ; ಮೇಣೆ; ಪಲ್ಲಕ್ಕಿ; ಪೀರನ ಮೇಣೆ.

ಡೋಲಿಕಟ್ಟು (ಕ್ರಿ)= ಪೀರನ ಮೇಣೆ ತಯಾರಿಸು.

ಡೋಸ್ಕ (ನಾ) ಮ.= ಡೋಕ (ನೋಡಿರಿ)

ಡೌರಿ (ನಾ) ಇಂ.= ವರದಕ್ಷಿಣೆ; ವರನಿಗೆ ಕೊಡುವ ಕಾಣಿಕೆ; ಹುಂಡಾ; ಹುಂಡ್ಯಾ.

ಡೌಲು (ನಾ)= ಒಣಹೆಮ್ಮೆ; ಆಡಂಬರ; ಘನತೆ; ದೊಡ್ಡಸ್ತಿಕೆ;

ಡ್ವಾರ (ನಾ)= ಎಳೆಯ; ಖಿಗ್ಗು; ಕಸುಕು; ಕಸುಗಾಯಿ; ಒಗರು; ಒಗರೊಗರು

ಡ್ವಾರಗಾಯಿ (ನಾ)= ಕಸುಗಾಯಿ; ಹಣ್ಣಾಗದ ಕಾಯಿ.

ಢ

ಢ (ನಾ)= ದಡ್ಡ; ಅಜ್ಞಾನಿ.

ಢಂ (ನಾ)= ಸ್ಫೋಟದ ಸದ್ದು; ಸ್ಫೋಟ.

ಢಂಗು (ನಾ)= ನಾಟಕ; ನಟನೆ; ಢೊಂಗು; ಡೋಂಗು.

ಢಂಗು ಮಾಡು (ಕ್ರಿ)= ನಾಟಕಮಾಡು; ನಟಿಸು; ನಟನೆ ಮಾಡು.

ಢಂಗ್ರಿ (ನಾ)= ಮುದುಕ; ಮುದುಕಿ; ಬಡಕಲು. (ಉದಾ: ಡಂಗ್ರಿ ಎಮ್ಮಿ ಎಲುತೇಲಿ ಸತ್ತು ಹೋಯ್ತು).

ಢಂಗ್ರಿ ಸಾಲಿ (ನಾ)= ಮುದುಕ ಮುದುಕಿಯರ ಶಾಲೆ; ವಯಸ್ಕರ ಶಿಕ್ಷಣಕೇಂದ್ರ.

ಢಕಲಂಪಟ್ಟಿ (ನಾ)= ನೂಕಾಟ; ನೂಕು ನುಗ್ಗಲು; ತಳ್ಳಾಟ.

ಥಕಲಾಸು (ಕ್ರಿ)= ನೂಕು; ತಳ್ಳು; ವಿದ್ಯಾರ್ಥಿಗೆ ಮುಂದಿನ ವರ್ಗಕ್ಕೆ ಅನುಕಂಪ ದೋರಿ ಕಳಿಸು; ಮುಂದೂಡು.

ಥಕಲ್ಯಾಲು (ನಾ)= ನೂಕಿದರೆ ನಡೆವ ವಾಹನ.

ಥಕ್ಕನ್ (ನಾ) ಹಿಂ.= ಮುಚ್ಚಣಿಕೆ

ಥಕ್ಲಂ ಘಟ್ಟಿ (ನಾ)= ಮುಂದೂಡಿಕೆ; ನೂಕಾಟ; ತಳ್ಳಾಟ.

ಥಕ್ಲಾಸು (ಕ್ರಿ)= ನೂಕು; ತಳ್ಳು; ಮುಂದೂಡು; ಕರುಣೆದೋರಿ ಪಾಸು ಮಾಡು.

ಥಗಿ (ನಾ)= ಧಗೆ; ಉಬ್ಬಣಿಕೆ; ಬೆವೆಯುವಿಕೆ.

ಥಗ್ಗಾ (ನಾ)= ಥಂಥಂ ಎಂದು ನಾದ ಮಾಡುವ ತಬ್ಲಾವಾದ್ಯ.

ಥಣಥಣಥಣ (ನಾ)= ಹಲಗೆ ವಾದ್ಯದ ನಾದ

ಥಣ್ಣನ್ನದಿರು (ಕ್ರಿ)= ಪ್ರತಿಕ್ರಿಯಿಸದಿರು; ಜಗ್ಗದಿರು; ಅಲ್ಲಾಡದಿರು.

ಥಾಲು (ನಾ)= ಗುರಾಣಿ; ಕತ್ತಿಗೆ ಎದುರಾಗಿ ಬಳಸುವ ಸುರಕ್ಷಿತತೆಯ ಸಾಧನ.

ಥಾಳ (ನಾ)= ಹೊಳಪು; ನಿಚ್ಚಳವಾಗಿ ಕಾಣುವಂಥದ್ದು.

ಥಾಳಿ (ನಾ)= ಕಡಲೆಯ ಕಾಯಿಯುಳ್ಳ ದಂಟು; ಫಳ್ಯಾ.

ಥಿಂಡೋರಿ (ನಾ) ಹಿಂ.= ಡಂಗುರ; ಡೊಂಗುರ; ಮುನಾದಿ; ಹಲಗೆ ಬಾರಿಸಿ ಸಾರುವಿಕೆ.

ಥಿಂಡೋರಿ ಹೊಡಿ (ಕ್ರಿ)= ಡಂಗುರ ಸಾರು.

ಥಿಕ್ಕಿ (ನಾ)= ಡಿಕ್ಕಿ, ಅಪ್ಪಳಿಸುವಿಕೆ; ಟಕ್ಕರ್; ಅಪಘಾತ.

ಥಿಕ್ಕಿ ಹೊಡಿ (ಕ್ರಿ)= ಅಪ್ಪಳಿಸು; ಟಕ್ಕರ್ ಹೊಡಿ; ಅಪಘಾತ ಮಾಡು.

ಥಿಗಾರಿ (ನಾ) ಮ.=ರಾಶಿ; ಕುಂಪಿ; ಬಹಳಷ್ಟು.

ಥಿಗಾರಿ ಥಿಗಾರಿ (ದ್ವಿ)= ರಾಶಿಗಟ್ಟಲೆ; ರಾಶಿರಾಶಿ.

ಥಿಗ್ಗಿ (ನಾ)= ರಾಶಿ; ಕುಂಪಿ.

ಥಿಗ್ಗಿ ಥಿಗ್ಗಿ (ದ್ವಿ) = ರಾಶಿ ರಾಶಿ.

ಥಿಗ್ಗಿಹಾಕು (ಕ್ರಿ)= ರಾಶಿಯೊಟ್ಟು; ಒಂದೆಡೆ ಹಾಕು.

ಥೀಲಾ (ವಿ.) ಹಿಂ.= ಥೀಲು; ಸಡಿಲು; ಲಡ್ಡ; ಅಶಕ್ತ; ಅಗಳಪಗಳ.

ಥೀಲಾಥಾಲಾ (ವಿ)= ಅಗಳಪಗಳ; ಬೇಕಾದಷ್ಟು ಉದ್ದಗಲ.

ಥೀಲಾಮನ್ಯಾ (ನಾ)= ಲಡ್ಡ ಮನುಷ್ಯ; ಅಶಕ್ತ ವ್ಯಕ್ತಿ

ಥೀಲು (ವಿ.)= ಸಡಿಲು; ಥೀಲಾ; ಉದ್ದಗಲಳತೆ ಸಾಕಷ್ಟುಳ್ಳ.

ಥುಂಗಣ (ನಾ) ಮ.= ಕುಂಡಿ; ಗುದ.

ಥುಂಡಾಸು (ಕ್ರಿ) ಹಿಂ.= ಹುಡುಕು; ಶೋಧಿಸು; ಹುಡುಕಿಸು.

ಥೇಕುರ್ಕಿ (ನಾ)= ಡೇಕರಿಕೆ; ತೇಗುವಿಕೆ.

ಥೇಕೂಣ (ನಾ)ಮ.= ತಗಣಿ; ಮನುಷ್ಯನ ರಕ್ತ ಹೀರುವ ಮಂಚ, ಹೊರಸು, ಗೋಡೆ ಸಂದುಗಳಲ್ಲಿ ವಾಸಿಸುವ ಒಂದು ಕ್ರಿಮಿ.

ಢೇಣ (ನಾ)= ಹೊಲಸು.

ಢೇಣಾಪುರಿ (ನಾ)= ಹೊಲಸಿನ ಆಗರ.

ಢೇಣೆಬ್ಬಿಸು (ಕ್ರಿ)= ಹೊಲಸೆಬ್ಬಿಸು; ಹೊಲಸುವಾಸನೆ ಹರಡುವಂತೆ ಮಾಡು.

ಢೇಣೇಳು (ಕ್ರಿ)= ಹೊಲಸುಂಟಾಗು.

ಢೇಣ್ಯಾ (ನಾ)= ಹೊಲಸು ಮೈಯುಳ್ಳವ (ಬೈಗುಳ)

ಢೇಪಿ (ನಾ)= ದಪ್ಪ ಶರೀರ ಉಳ್ಳವಳು.

ಢೇಪು (ನಾ)= ಡೊಳ್ಳು ಹೊಟ್ಟೆಯವನು; ದಪ್ಪ ಶರೀರದವನು (ಬೈಗುಳ)

ಢೇರಿ (ನಾ)= ಹೊಟ್ಟೆಯಿಂದ ಹೊರಬಿದ್ದ ಕರುಳು.

ಢೇರ್ಯಾ (ನಾ)= ಡೇರಾ; ಡೇರೆ; ತಂಬೂ; ಟೆಂಟು.

ಢೆಲೋಜಿ (ನಾ) ಹಿಂ.= ಬೈಠಕ ಖಾನೆ

ಢೋಂಗಿ (ನಾ)= ಕಪಟಿ; ನಟನೆ ಮಾಡುವವ; ಢಂಗು ಮಾಡುವವನು.

ಢೋಂಗು (ನಾ)= ಢಂಗು; ನಾಟಕ; ನಟನೆ.

ಢೊಂಪ್ರಿ (ನಾ)= ಬೆನ್ನು; ಬೆನ್ನುಹುರಿ.

ಢೊಂಪ್ರಿ ಬೆಳಗು (ಕ್ರಿ)= ಬೆನ್ನ ಮೇಲೆ ಜೋರಾಗಿ ಹೊಡೆ.

ಢೊಣ್ಣೆ(ನಾ)= ಡೊಣ್ಣೆ; ದ್ರೋಣೆ; ಡೊಪ್ಪಿ.

ಢೊಳ್ಳಿ ಬುಟ್ಟಿ = ತಳದಿಂದ ತುದಿಯವರೆಗೆ ಅತಿ ಅಗಲವಾಗಿರುವ ಲಕ್ಕೆಯ ಬುಟ್ಟಿ.

ಢೊಳ್ಳು (ನಾ)= ಡೊಳ್ಳು; ಉಬ್ಬಿದ ಹೊಟ್ಟೆ; ಚರ್ಮವಾದ್ಯ.

ಢೊಳ್ಳು ಭಾರ್ಸು (ಕ್ರಿ)= ಚರ್ಮವಾದ್ಯ ನುಡಿಸು; ಬಾರಿಸು.

ಢೋಂಗಿ (ನಾ)= ಢೊಂಗಿ (ನೋಡಿರಿ)

ಡೋಂಗು (ನಾ)= ಢಂಗು; ನಟನೆ.

ಢೋಲಕ್ (ನಾ)= ಢೋಲ್ಕಿ; ಢೋಲಕ್ಕು; ಮದ್ದಳೆ.

ಢೋಲು (ನಾ)= ಡೊಳ್ಳುವಾದ್ಯ; ಮದ್ದಳೆ.

ಢೋಲ್ಕಿ (ನಾ)= ಢೋಲು (ನೋಡಿರಿ).

ಣ

ಣೊಣ (ನಾ)= ನೊಣ; ಮಕ್ಷ (ಗಾದೆ: ತನ್ನೆಡ್ಯಾಗ ಕಾತ್ತಿ ಸತ್ತು ಬಿದ್ದಾದ, ಮಂದಿ ಎಡ್ಯಾಂದು ಣೊಣಾ ಹೊಡಿತಂತ।)

ಣೌ (ನಾ)= ನೌ; ಒಂಬತ್ತು.

ಣೌದೊ (ನಾ) ಮ.= ತೊಂಬತ್ತು.

ಣೌಲ್ಯಾ (ನಾ)=ಒಂಬತ್ತಂಕಿಯ ಇಸ್ಪೀಟೆಲೆ.

ಣೌಸೆ (ನಾ) ಮ.= ಒಂಬೈನೂರು.

ತ

ತಂಗ್ ()= ಅಟುಕು; ಒತ್ತೊತ್ತು; ಅಡಚಣೆ.

ತಂಗಾಗು (ಕ್ರಿ)= ಕಷ್ಟಕಾಲ ಉಂಟಾಗು.

ತಂಗಿ (ನಾ)= ಅಡಚಣೆ; ಒತ್ತೊತ್ತಾಗಿರುವಿಕೆ; ತನಗಿಂತ ಕಿರಿಯ ಸೋದರಿ; ತನ್ನ ನಂತರ ಹುಟ್ಟಿದವಳು; ಬೆನ್ನಿಗೆ ಹುಟ್ಟಿದವಳು.

ತಂಗು (ನಾ)= ಕೈಯಲ್ಲಿ ಕಾಸಿಲ್ಲದ ಪರಿಸ್ಥಿತಿ; ಅಡಚಣೆ; ಕಷ್ಟಕಾಲ.

ತಂಗುಳನ್ನ (ನಾ)= ಆರಿದ ಅನ್ನ; ಹಿಂದಿನದಿನದ ಅನ್ನ.

ತಂಗುಳು (ನಾ)= ತೊಂಗುಳು; ತಂಗೂಳು; ಆರಿದ ಅನ್ನ; ದಿನಕಳೆದ ಅನ್ನ.

ತಂಗೂಳು (ನಾ)= ತಂಪಾದ ಕೂಳು; ಆರಿದ ಕೂಳು; ದಿನ ಕಳೆದ ಕೂಳು; ಹಳಸಿದ ಕೂಳು.

ತಂಗ್ಯಾ (ಅ)= ತಂಗಿಯೆ (ವಾತ್ಸಲ್ಯ ಸಂಬೋಧನೆ).

ತಂಟಾ (ನಾ)= ತಂಟೆ; ಜಗಳ; ತಂಟ್ಯಾ.

ತಂಟಿ (ನಾ)= ತಂಟೆ.

ತಂಟ್ಯಾ (ನಾ)= ತಂಟಾ (ನೋಡಿರಿ).

ತಂಡ (ನಾ)= ಗುಂಪು.

ತಂಡಿಗಿತಾ (ಕ್ರಿ)= ತಾಳ್ಮೆ ಗೆಡಿಸು; ಬೇಸರ ಪಡಿಸು; ಕಾಡು.

ತಂಡಿಗಿ ಬಾ (ಕ್ರಿ)= ತಾಳ್ಮೆ ಮೀರು; ತಾಳದಂತಾಗು; ಬೇಸರವುಂಟಾಗು.

ತಂತಿ (ನಾ)= ಲೋಹದ ತೆಳುವಾದ ಎಳೆ; ತಂತಿ ಸುದ್ದಿ; ತಾರು.

ತಂತ್ರ (ನಾ)= ಉಪಾಯ; ಹಂಚಿಕೆ; ಸಂಚು.

ತಂದಿ (ನಾ)= ತಂದೆ; ಅಪ್ಪ.

ತಂದಿ (ಕ್ರಿ)= ತಂದಿಟ್ಟೆ; ಮಾಡಿಟ್ಟೆ.

ತಂದುರುಸ್ತ (ನಾ) ಉ.= ಆರೋಗ್ಯವಂತ

ತಂದುರುಸ್ತಿ (ನಾ) ಉ.= ಆರೋಗ್ಯ

ತಂದೂರಿ (ನಾ) ಹಿಂ.= ಭಟ್ಟಿಯಲ್ಲಿ ಬೇಯಿಸಿದ ರೊಟ್ಟಿ.

ತಂಪ (ವಿ)= ತಂಪು; ತಣ್ಪು

ತಂಪಾಗು (ಕ್ರಿ)= ತಣ್ಣಗಾಗು; ನೆಲಹಸಿಯೇರು.

ತಂಪು (ನಾ)= ತಣ್ಣಗೆ; ಶಾಂತಿ; ಸಮಾಧಾನ

ತಂಪೇರು (ಕ್ರಿ)= ತಂಪಾಗು; ತಣ್ಣಗಾಗು; ನೆಲ ಹಸಿಯಾಗು; ನೀರು ಒಸರಿ ಶೀತವಾಗು.

ತಂಬಾಕು (ನಾ)= ಹೊಗೆಸೊಪ್ಪು.

ತಂಬಾಕು ಬಿಗಿ (ಬಿ)= ಹೊಗೆಸೊಪ್ಪು ಸೇದು; ಗಾಂಜಾ ಸೇದು.

ತಂಬಿಟ್ಟು (ನಾ)= ಜೋಳದ ಅರಳು ಬೀಸಿ ತಯಾರಿಸಿದ ಅಳ್ಳಿಟ್ಟು; ಹುರಿ ಹಿಟ್ಟಿನಿಂದ ತಯಾರಿಸಿದ ಸಿಹಿ ತಿಂಡಿ.

ತಂಬೂ (ನಾ)= ಡೇರೆ; ಗುಡಾರ; ಟೆಂಟು.

ತಂಬೂರಿ (ನಾ)= ಒಂದು ಬಗೆಯ ತಂತಿ ವಾದ್ಯ.

ತಂಬೋಲಿ (ನಾ)= ಎಲೆಗಾರ; ಎಲ್ಗಾರ; ಎಲೆಮಾರುವವ.

ತಕರಾರು (ನಾ)= ವಾದ; ವಿರೋಧ; ಅಡ್ಡಿ; ಆಕ್ಷೇಪಣೆ; ಜಗಳ; ಬಾಯಿಬಾಯಿ ಹತ್ತುವಿಕೆ.

ತಕಲಿ (ನಾ)= ಹತ್ತಿಯ ಹಂಜಿಯಿಂದ ಕೈನೂಲು ಹೊಸೆವ ಸಾಧನ.

ತಕಾ = ತನಕ; ವರೆಗೆ.

ತಕಾವಿ (ನಾ)= ಸರಕಾರವು ರೈತರಿಗೆ ಕೊಡುವ ಸಾಲ.

ತಕ್ಕ (ಅ) = ಯೋಗ್ಯ; ಸಲ್ಲುವಂಥ.

ತಕ್ಕು (ನಾ)= ಮಾವಿನ ತುರಿಯಿಂದ ತಯಾರಿಸಿದ ಚಟ್ನಿ.

ತಕ್ಡಿ (ನಾ)= ತಕ್ಕಡಿ; ವಸ್ತುಗಳ ಭಾರವನ್ನು ತೂಗಿ ನಿರ್ಧರಿಸುವ ಸಾಧನ; ತ್ರಾಸು.

ತಕ್ರಾರು (ನಾ)= ತಕರಾರು (ನೋಡಿರಿ).

ತಕ್ರಿ (ನಾ)= ಸಕ್ಕರೆ; (ಬಾಲಭಾಷೆ).

ತಕ್ಷಣ (ಅ)= ಆಗಿಂದಾಗ; ತತ್ಕಾಲ.

ತಕ್ಸೀಮ (ನಾ)= ಪಾಲು; ಹಂಚಿಕೆ; ಭಾಗ.

ತಕ್ಸೀಮ ಮಾಡು (ಕ್ರಿ)= ಸಮವಾಗಿ ಹಂಚು; ಭಾಗಿಸು; ವಿತರಣೆಮಾಡು.

ತಖ್ತಾ (ನಾ)= ಹಲಗೆ.

ತಗಡಾ (ನಾ)= ತಗಡು; ಪತ್ರಾ; ಝಿಕ್ ಷೀಟ್; ಗಟ್ಟಿ ಮುಟ್ಟಿ; ಬಲಿಷ್ಠ.

ತಗಡಿನ ಭಾವಣಿ (ನಾ)= ತಗಡಿನ ಆಸರೆಯುಳ್ಳ ಮನೆ.

ತಗಣಿ (ನಾ)= ತಗುಣಿ (ನೋಡಿರಿ).

ತಗತ್ಯಾ (ನಾ)= ಸಿಂಹಾಸನ; ರಾಜನ ಅಧಿಕಾರ ಪೀಠ; ತಖತ; ತಖ್ತ.

ತಗದೀರು (ನಾ)= ದೈವಬಲ; ಹಣೆಬರಹ; ತಗ್ದೀರು.

ತಗಾದಿ (ನಾ)= ವಸೂಲಿ; ಒತ್ತಾಯದ ವಸೂಲಿ; ಬಲವಂತದ ವಸೂಲಿ. (ಗಾದೆ: ಉಗಾದಿ ಮರ್ಧಿನಾ ತಗಾದಿ).

ತಗಾರಿ (ನಾ)= ಕೊಣಮ್ಗಿ; ಕೊಟಮ್ಗಿ; ರೊಟ್ಟಿ ಬಡೆವ ಕಟ್ಟಿಗೆಯ ಅಗಲವಾದ ತಟ್ಟೆ; ಕಬ್ಬಿಣದ ತಟ್ಟೆ.

ತಗಿಬಿಗಿ (ನಾ)= ಸಾವಿನ ಕ್ಷಣಗಣನೆ.

ತಗಿಬಿಗಿ ಮಾಡು (ಕ್ರಿ)= ಸಾವಿನ ಕೊನೆಯ ಕ್ಷಣ ಎಣಿಸು; ಸಾವಿನ ಲಕ್ಷಣ ತೋರಿಸು.

ತಗುಣಿ (ನಾ)= ತಗಣಿ; ಮನುಷ್ಯನ ರಕ್ತ ಹೀರಿ ಬದುಕುವ; ಮಂಚ, ಪಲ್ಲಂಗ, ಗೋಡೆಸಂದುಗಳಲ್ಲಿ ವಾಸ ಮಾಡುವ ಕೀಟ (ಗಾದೆ: ತಗುಣಿ ತಾಪಾತಾಳಲ್ದಕ ತೊಟ್ಟಿದಂಗಿ ಸುಟ್ಟಿದ್ರಂತ।)

ತಗ್ಗಿ ಬಗ್ಗಿ (ದ್ವಿ)= ಸಗ್ಗಿಬಗ್ಗಿ; ವಿನಯ ಪೂರ್ವಕ.

ತಗ್ಡಾ (ನಾ)= ತಗಡಾ (ನೋಡಿರಿ).

ತಗ್ತ್ಯಾ (ನಾ)= ತಗತ್ಯಾ (ನೋಡಿರಿ).

ತಗ್ದೀರು (ನಾ)= ತಗದೀರು (ನೋಡಿರಿ).

ತಜದೀಕ (ನಾ)= ಟಿಪ್ಪಣಿ; ವಿವರಣೆಯೊಂದಿಗೆ ರುಜು ಹಾಕುವಿಕೆ.

ತಜದೀಕ ಮಾಡು (ಕ್ರಿ)= ಟಿಪ್ಪಣಿ ಬರೆ.

ತಜರುಪಾ (ನಾ)= ತಜರುಬಾ; ಅನುಭಾವ; ತಿಳುವಳಿಕೆ.

ತಜರುಬಾ (ನಾ)= ತಜರುಪಾ (ನೋಡಿರಿ).

ತಟತಟ ಅನು (ಕ್ರಿ)= ಹುಣ್ಣಿನಲ್ಲಿ ಕೀವು ಉಂಟಾಗಿ ನೋವುಂಟಾಗು.

ತಟಕು (ವಿ)= ತಟುಕು; ತುಸು; ಥೋಡೆ; ಕೊಂಚ; ಸ್ವಲ್ಪ; ತೊಟುಕು.

ತಟಾರ್ನೆತ್ತಿ (ನಾ)= ಕೆದರಿದ ಕೂದಲಿನ ತಲೆ; ಎಣ್ಣೆ ಕಾಣದೆ ಓರಣಗೊಳ್ಳದ ತಲೆ.

ತಟಾವಟಿಗಿ ಬಂದಾದ (ನುಡಿ)= ಸಂಬಂಧ ಕೆಡಲಿದೆ; ಕಡಿದು ಹೋಗಲಿದೆ.

ತಟುಕು (ವಿ)= ತಟಕು (ನೋಡಿರಿ).

ತಟ್ಟರ್ನೆತ್ತಿ (ನಾ)= ತಟಾರ್ನೆತ್ತಿ (ನೋಡಿರಿ).

ತಟ್ಟಿ (ನಾ)= ಬಿದಿರಿನ ಅಥವಾ ಲಕ್ಕಿಯ ತಡಿಕೆ; ಬಾಗಿಲು.

ತಟ್ಟಿತೆರಿ (ಕ್ರಿ)= ಬಾಗಿಲು ತೆಗೆ.

ತಟ್ಟು (ನಾ)= ಗೋಣಿತಟ್ಟು; ಗೋಣಿ ಹಾಸುಗೆ; ನಾರಿನಿಂದ ತಯಾರಿಸಿದ ಹಾಸುಗೆ.

ತಟ್ಟು (ಕ್ರಿ)= ಕಾಲಿಗೆ ಬಡಿ; ದೀರ್ಘಾವಧಿ ತಾಳಿಕೆಯಾಗು; ಬಾಳಿಕೆಯಾಗು.

ತಟ್ಟು ನೆಯ್ (ಕ್ರಿ)= ಸಣಬಿನ ಹುರಿಯಿಂದ ಹಾಸುಗೆಯನ್ನು ಹೆಣೆ.

ತಡ (ನಾ)= ಸಾವಕಾಶ; ನಿಧಾನ.

ತಡಕಿ (ನಾ)= ಬಿದಿರಿನ ಇಲ್ಲವೆ ಲಕ್ಕೆಯ ತಡಿಕೆ; ತಟಾರ; ಶರೀರ (ಹಾಡು: ಏನಥಂದ ಏನಥಂದ ಈ ತಡಕಿ । ನೋಡಿದರ ಗುಂಡ ಗುಂಡ ಗೋಲ್ತಡಕಿ)

ತಡವಾಗು (ಕ್ರಿ)= ನಿಧಾನವಾಗು; ವೇಳೆಯಾಗು; ಸಮಯ ಮೀರು; ನಿಗದಿತ ಸಮಯವನ್ನು ಮೀರು.

ತಡಿ (ಕ್ರಿ)= ನಿಲ್ಲು; ಮುಂದೆ ಸಾಗದಂತೆ ಮಾಡು; ತಡೆ; ತಡಮಾಡು; ನಿಧಾನಿಸು.

ತಡ್ಕಿ (ನಾ)= ತಡಕಿ (ನೋಡಿರಿ).

ತತ್ತರ (ನಾ)= ನಡುಕ; ಕಂಪನ; ಕಕ್ಕಾವಿಕ್ಕಿ; ತಬ್ಬಿಬ್ಬು.

ತತ್ತರ ಬತ್ತರ (ನಾ)= ಥತ್ತರ ಬತ್ತರ; ನಡುಕ; ಕಂಪನ.

ತತ್ತರ ಬತ್ತರ ಮಾಡು (ಕ್ರಿ)= ಗದಗದನಡುಗು; ಕಂಪಿಸು.

ತತ್ತಿ (ನಾ)= ಅಂಡಿ; ಅಂಡಾ; ಮೊಟ್ಟೆ.

ತತ್ತಿ ಇಡು (ಕ್ರಿ)= ಮೊಟ್ಟೆಹಾಕು (ಉದಾ: ಮನಿಮನಿ ಅಂತ ಬಡ್ಡಾಡ್ತಿ; ಮನ್ಯಾಗೇನು ತತ್ತಿ ಇಟ್ಟೇದೆ?)

ತತ್ತಿಗಿ ಕಾವುಕುಡು (ಕ್ರಿ)= ತತ್ತಿಯ ಮೇಲೆ ಕುಳಿತು ಬೆಚ್ಚಗಾಗುವಂತೆ ಮಾಡು.

ತತ್ತಿ ಹಾಕು (ಕ್ರಿ)= ಮೊಟ್ಟೆ ಇಡು.

ತತ್ರಾಣಿ (ನಾ)= ಕುಡಿಯುವ ನೀರಿಗಾಗಿ ಬಳಸುವ ಚಪ್ಪಟೆಯಾದ ಸಂಚಾರಿ ಮಣ್ಣಿನ ಹೂಜಿ.

ತತ್ವ (ನಾ)= ತತ್ತ್ವ; ಸಿದ್ಧಾಂತ; ಯಥಾರ್ಥತೆ; ನಿಜಸ್ಥಿತಿ; ಸಾರ (ಜೋಗುಳ ಹಾಡು: ಶಬ್ದೊಂದು ಗುಣವಾಯ್ತು ಆಕಾಶ ತತ್ವ। ಶಬ್ದ ಸ್ಪರ್ಶ ಎರಡು ವಾಯುವು ತತ್ವ। ಶಬ್ದಸ್ಪರ್ಶರೂಪ ಅಗ್ನಿಯ ತತ್ವ । ಶಬ್ದಾದಿ। ಗಂಧಂತೆ ಪೃಥಿವಿ ಆಪ ಇವೈದು ತತ್ವಾ।। ಜೋಜೋ।। ಸೇಡಂ ಗ್ರಾಮದ ಗುರು ಶಾಂತ ಕಂಬಳೇಶ ವಿರಚಿತ)

ತತ್ವಪದ (ನಾ)= ತತ್ವಾರ್ಥದಿಂದ ಕೂಡಿದ ಹಾಡು; ಸ್ವರ ವಚನ.

ತತ್ವ ಹಾಡು (ಕ್ರಿ)= ತತ್ವಪದ ಹೇಳು; ಸ್ವರವಚನ ಹಾಡು.

ತದಗಿ (ನಾ)= ಶುಕ್ಲ ಪಕ್ಷ ಇಲ್ಲವೆ ಕೃಷ್ಣ ಪಕ್ಷದ ಮೂರನೆಯ ದಿನ.

ತದ್ಗಿ (ನಾ)= ತದಗಿ (ನೋಡಿರಿ).

ತದ್ದು (ನಾ)= ತುರಿಕೆ ಇಡುವ ಒಂದು ಪ್ರಕಾರದ ಚರ್ಮರೋಗ; ಹುಣ್ಣು.

ತದ್ರೂಪ (ನಾ)= ಅದರಂತಹದು; ಹಾಗೆಯೇ; ಹೂಬೇಹೂಬ.

ತನಕ (ಅ)= ವರೆಗೆ; ಪರ್ಯಂತ; ತನಕಾ

ತನಕಾ (ನಾ)ಉ.= ವೇತನ; ಪಗಾರ; ಸಂಬಳ

ತನಖ್ಖಿ (ನಾ)ಉ.= ತನಿಖೆ; ವಿಚಾರಣೆ; ತಪಾಸಣೆ; ಶೋಧ.

ತನಖ್ಖಿ ಮಾಡು (ಕ್ರಿ)= ಪರಿಶೀಲಿಸು; ಶೋಧಿಸು; ತಪಾಸಿಸು.

ತನಬ್ಬಿ (ನಾ) ಉ.= ಬಾಗಿಲು ಹೊಂದಿದ ಗೋಡೆಯ ಒಳ ಮಾಡು.

ತನು (ನಾ) ಸಂ.= ಶರೀರ; ದೇಹ; ಮೈ; (ತತ್ವಪದ: ತನುವಿನಾಶಕ ಬಿದ್ದು ಮನವ ಸೂರೆಯಗೊಂಬೆ। ಎನಗೊಂದು ಮಾತ್ಹೇಳು ಜೀವವೆ। ಎನಗೊಂದು ಮಾತ್ಹೇಳು ಜೀವವೇ॥)

ತನ್ತಾನೆ (ಅ)= ತನ್ನಷ್ಟಕ್ಕೆ ತಾನೇ; ತಾನಾಗಿಯೇ; ತಾನೇ.

ತಪ (ನಾ) ಸಂ.= ತಪಸ್ಸು

ತಪರಾಕ (ನಾ) ಉ.= ತಪ್ಪು; ವ್ಯತ್ಯಾಸ; ಫರಕು.

ತಪರಾಕ ಭೀಳು (ಕ್ರಿ)= ತಪ್ಪಾಗು; ವ್ಯತ್ಯಾಸ ವಾಗು; ಫರಕ ಬೀಳು.

ತಪರಾಕಿ (ನಾ)= ಚಪರಾಕಿ; ತಮಾಚಾ; ಕಪಾಳ ಮೋಕ್ಷ; ಮೆಲುಕಿನಲ್ಲಿ ಹೊಡೆಯುವಿಕೆ.

ತಪಸ್ವಿ (ನಾ)= ತಪಸ್ಸನ್ನು ಆಚರಿಸುವವನು.

ತಪಸ್ಸು (ನಾ)= ವ್ರತ ನಿಯಮಾದಿಗಳನ್ನು ಪಾಲಿಸುತ್ತ ದೇಹ ದಂಡನೆ ಮಾಡುವಿಕೆ.

ತಪಾಗಳಿ (ಕ್ರಿ)= ಕಷ್ಟ ಭೋಗಿಸು.

ತಪಾಸಣಿ (ನಾ)= ವಿಚಾರಣೆ; ಪರಿಶೀಲನೆ

ತಪಾಸು (ನಾ)= ಶೋಧ; ಹುಡುಕಾಟ; ಪರಿಶೀಲನೆ.

ತಪಾಸು ಮಾಡು (ಕ್ರಿ)= ಹುಡುಕು; ಶೋಧ ಮಾಡು; ಪರಿಶೀಲಿಸು.

ತಪ್ದಂಡ (ನಾ)= ತಪ್ಪು ಮಾಡಿದ್ದಕ್ಕಾಗಿ ಕೊಡಬೇಕಾದ ದಂಡ.

ತಪ್ಪಾತಾರ (ವಿ.)= ಮಿತಿಮೀರಿದ; ಅತಿ; ಬಹಳ; ತೋಲು.

ತಪ್ಪಿನಡಿ (ಕ್ರಿ)= ಹಾದಿ ಬಿಟ್ಟು ನಡೆ; ದುರ್ನಡೆ ತೋರು.

ತಪ್ಪಿಸು (ಕ್ರಿ)= ತಪ್ಪಾಗುವಂತೆ ಮಾಡು; ನೆರವೇರದಂತೆ ಮಾಡು

ತಪ್ಪು (ನಾ)= ಅಪರಾಧ; ಪಾಪ; ಪ್ರಮಾದ.

ತಪ್ಪು (ಕ್ರಿ)= ಹಾದಿ ಬಿಡು; ರೀತಿಗೆಡು.

ತಪ್ಪುದಾರಿ (ನಾ)= ಅಡ್ಡದಾರಿ; ಕೆಟ್ಟಹಾದಿ; ಸರಿಯಲ್ಲದ ಮಾರ್ಗ.

ತಪ್ಪುನಡಿ (ನಾ)= ಹಾದಿಬಿಟ್ಟ ನಡಿಗೆ.

ತಪ್ಪುಲು (ನಾ)= ತೊಪ್ಪಲು; ಸೊಪ್ಪು.

ತಪ್ಪೆಜ್ಜಿ (ನಾ)= ಕೂಸಿನ ತಪ್ಪು ತಪ್ಪಾದ ಹೆಜ್ಜೆ; ತಪ್ಪುದಾರಿ ಹಿಡಿವ ಹೆಜ್ಜೆ; ನೀತಿಗೆಟ್ಟ ಹೆಜ್ಜೆ; ತಾಳ ತಪ್ಪಿದ ನರ್ತನದ ಹೆಜ್ಜೆ.

ತಪ್ಪೇಲಿ (ನಾ)= ತಪ್ಪಲೆ; ಹಿತ್ತಾಳೆ; ತಾಮ್ರ; ಸ್ಟೀಲು; ಇತ್ಯಾದಿಗಳಿಂದ ತಯಾರಿಸಿದ ದುಂಡನೆಯ ಅಡಿಗೆ ಪಾತ್ರೆ.

ತಪ್ಸೀಲ (ನಾ)ಉ.= ವಿವರಣೆ

ತಫರಕ (ನಾ)= ಫರಕು; ವ್ಯತ್ಯಾಸ; ಹೆಚ್ಚು ಕಡಿಮೆಯಾಗುವಿಕೆ

ತಫರಕ ಬೀಳು (ಕ್ರಿ)= ಫರಕಾಗು; ವ್ಯತ್ಯಾಸವಾಗು; ಹೆಚ್ಚು ಕಡಿಮೆಯಾಗು.

ತಬಕಾ (ನಾ)= ತಟ್ಟೆ; ಹರಿವಾಣ; ಪರಾತ.

ತಬಲಾ (ನಾ)= ಒಂದು ಬಗೆಯ ಚರ್ಮವಾದ್ಯ ಜೋಡಿ.

ತಬಾದಲಾ (ನಾ)= ವರ್ಗಾವಣೆ; ಸ್ಥಳ ಬದಲಾವಣೆ.

ತಬಾದಲಾ ಆಗು (ಕ್ರಿ)= ವರ್ಗವಾಗಿ ಬೇರೆ ಸ್ಥಳಕೆ ಹೋಗು.

ತಬಾದಲಾ ಮಾಡು (ಕ್ರಿ)= ನೌಕರರಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸು.

ತಬ್ಬು (ಕ್ರಿ)= ತೆಕ್ಕೆಯಲ್ಲಿ ಹಿಡಿದುಕೊ; ಅಪ್ಪು.

ತಮಾಚಾ (ನಾ)ಉ.= ಚಪರಾಕಿ; ಕಪಾಳ ಮೋಕ್ಷ; ಮೆಲುಕಿನಲ್ಲಿ ಹೊಡೆಯುವಿಕೆ.

ತಮಾಚಾಕುಡು (ಕ್ರಿ)= ಕಪ್ಪಾಳಕ್ಕೆ ಹೊಡೆ.

ತಮಾಟಗಾರ (ನಾ)= ತಾಮ್ರ; ಹಿತ್ತಾಳೆ ಕೆಲಸದವನು.

ತಮಾಟಾ (ನಾ)= ಟಮಾಟ; ಹಂದರ ಬದನೆಗಿಡ ಮತ್ತು ಅದರಕಾಯಿ; ಒಂದು ಬಗೆಯ ತರಕಾರಿ ಕಾಯಿ.

ತಮಾಮ (ವಿ.) ಉ.= ಎಲ್ಲ; ಸರ್ವ.

ತಮಾಶಾ (ನಾ) ಉ.=ನರ್ತನ ಮತ್ತು ಗಾಯನ; ಅಶ್ಲೀಲ ಗಾಯನ ಮತ್ತು ನರ್ತನದ ಕಾರ್ಯಕ್ರಮ; ಮೋಜಿನ ಪ್ರದರ್ಶನ.

ತಮ್ದೇರು (ನಾ)= ತಮ್ಮಂದಿರು; ತಮ್ಮದೇರು.

ತಮ್ಮ (ನಾ)= ಕಿರಿಯ ಸಹೋದರ; ತನ್ನ ನಂತರ ಹುಟ್ಟಿದವನು; ಕಿರಿಯನು.

ತಮ್ಮದೇರು (ನಾ)= ತಮ್ದೇರು (ನೋಡಿರಿ)

ತಮ್ಮ್ಯಾ (ನಾ)= ಏತಮ್ಮಾ ಎಂಬ ಸಂಭೋಧನ (ಲಾಡಿಕೆ ಮಾತು).

ತಯಾರಾಗು (ಕ್ರಿ)= ಸಿದ್ಧನಾಗು; ಅಣಿಯಾಗು; ಬಲಿಷ್ಠ ನಾಗು.

ತಯಾರಿ (ನಾ)= ಸಿದ್ಧತೆ; ಏರ್ಪಾಡು

ತಯಾರಿ ಮಾಡು (ಕ್ರಿ)= ಸಿದ್ಧಗೊಳಿಸು; ಅಣಿಗೊಳಿಸು; ಸಜ್ಜುಗೊಳಿಸು.

ತಯಾರಿಸು (ಕ್ರಿ)= ವಸ್ತುವನ್ನು ಸಿದ್ಧಗೊಳಿಸು; ತಯಾರಿ ಮಾಡು; ಅಣಿಗೊಳಿಸು; ಸಜ್ಜುಗೊಳಿಸು.

ತರಚು (ಕ್ರಿ)= ಪರಚು; ಚರಚು.

ತರಫ್ದಾರಿ (ನಾ)ಉ.= ಪಕ್ಷವಹಿಸುವಿಕೆ; ಸಿಫಾರಸು;

ತರಹೆವಾರಿ (ಅ)= ತರಾವರಿ; ತರತರಹದ; ವಿಧವಿಧದ; ಹಲವು ಪ್ರಕಾರದ

ತರಾ (ನಾ)= ತರಹ; ರೀತಿ; ತೆರ.

ತರಾಜು (ನಾ)= ತಕ್ಕಡಿ; ತ್ರಾಸು.

ತರಾಣ (ನಾ)= ತ್ರಾಣ; ಪ್ರಾಣ; ಪರಾಣ.

ತರಾತುರಿ (ಅ)= ಆತುರಾತುರ.

ತರಾವರಿ (ಅ)= ತರಹೆವಾರಿ (ನೋಡಿರಿ)

ತರಾಸು (ನಾ)= ತ್ರಾಸು; ತೊಂದರೆ.

ತರಾಸಾಗು (ಕ್ರಿ) = ತ್ರಾಸು ಉಂಟಾಗು.

ತರಿ (ನಾ) ಉ.= ನೀರಾವರಿ ಭೂಮಿ; ಗದ್ದೆ.

ತರುಬಿಸು = ನಿಲ್ಲಿಸುವಂತೆ ಮಾಡು.

ತರುಬು (ಕ್ರಿ)= ತಡೆ; ನಿಲ್ಲಿಸು; ತರ್ಬು; ವಾಹನ ಚಲಿಸದಂತೆ ಮಾಡು; ಎತ್ತಿನ ಬಂಡಿ, ಕುದುರೆ ಬಂಡಿ ಚಲಿಸದಂತೆ ಮಾಡು.

ತರುವಾಯ (ವಿ)= ನಂತರ; ಆಮೇಲೆ; ಬಳಿಕ.

ತರ್ಕೀಬು (ನಾ) ಉ.= ವಿಚಾರ; ಉಪಾಯ ತಂತ್ರ.

ತರ್ಗಾ (ನಾ)= ತರಗ; ಅಂಬಾಬಾಯಿಯ ಜಗಲಿಯ ಮೇಲೆ ಕಟ್ಟಲಾಗುವ

ಗೋಧಿಕಣಕದ ಸಿಹಿ ಹಪ್ಪಳ; ಕೋಡು ಬಳೆ, ಬಳೆ, ಕಾಲುಂಗುರ, ಪಿಲ್ಲೆ, ಹೆಣಾಲು ಇತ್ಯಾದಿ.

ತರ್ಚು (ಕ್ರಿ)= ತರಚು; ಪರಚು; ಕೆವರು; ಬರಚು.

ತರ್ಜುಮಾ (ನಾ)ಉ.= ಅನುವಾದ; ಭಾಷಾಂತರ.

ತರ್ಜುಮಾ ಮಾಡು (ಕ್ರಿ)= ಭಾಷಾಂತರಿಸು.

ತರ್ಬು (ಕ್ರಿ)= ತರುಬು (ನೋಡಿರಿ).

ತರ್ಬುಸು (ಕ್ರಿ)= ತಡೆಯಿಸು; ನಿಲ್ಲುವಂತೆ ಮಾಡು.

ತಲಬಾಗ್ಲು (ನಾ)= ತಲ್ಬಾಗ್ಲು; ಹೊರಬಾಗಿಲು; ಪ್ರವೇಶದ್ವಾರ; ಮುಖ್ಯದ್ವಾರ.

ತಲಬು (ನಾ) ಉ.= ವ್ಯಸನ; ಚಟ; ಅಭ್ಯಾಸ; ರೂಢಿ.

ತಲಾ (ಅ)= ಪ್ರತಿಯೊಬ್ಬರಿಗೆ; ಪ್ರತಿಯೊಂದಕ್ಕೆ.

ತಲಾಖ್ (ನಾ)= ಘಟಸ್ಫೋಟ್; ಫಾರಿಕತಿ; ಬಿಡುಗಡೆ.

ತಲಾಖ್ನಾಮಾ (ನಾ) ಉ.= ಘಟಸ್ಫೋಟ ದಾಖಲಾತಿ; ಬಿಡುಗಡೆ ಪತ್ರ; ಸೋಡಚೀಟಿ.

ತಲಾರಿ (ನಾ)= ನೇಗಿಲು; ಕೂರಿಗೆ; ಕುಂಟೆ; ಗೊಬ್ಬರ ಬಂಡಿ ಇತ್ಯಾದಿಗಳಿಗೆ ಬುಡದೆತ್ತಿನ ನಂತರ ಹೂಡುವ ಮುಂಚೂಣಿ ಎತ್ತುಗಳ ಜೋಡಿ; ಎಳೆಯ ಹೋರಿಗಳ ಜೋಡಿ.

ತಲಾಷ ಮಾಡು (ಕ್ರಿ)= ಹುಡುಕು; ಶೋಧಿಸು

ತಲಾಷಿ (ನಾ)= ಹುಡುಕಾಟ; ಶೋಧ.

ತಲುಪು (ನಾ)= ತಲ್ಪು; ಕಟ್ಟಿಗೆಯ ಹಲಗೆ.

ತಲುಪು (ಕ್ರಿ)= ತಲ್ಪು; ಮುಟ್ಟು; ಗುರಿ ಸೇರು.

ತಲುಬು (ನಾ) ಉ.= ತಲಬು (ನೋಡಿರಿ).

ತಲ್ಪು (ನಾ)= ತಲುಪು (ನಾ) ನೋಡಿರಿ.

ತಲ್ಪು (ಕ್ರಿ)= ತಲ್ಪು (ಕ್ರಿ) ನೋಡಿರಿ.

ತಲ್ಬಾಗುಲು ಧಾಟು (ಕ್ರಿ)= ಮನೆ ಹೊರಗೆ ಹೋಗು; ಮನೆಬಿಡು; ಮನೆಬಿಟ್ಟು ಹೋಗು (ಹೆಣ್ಣು) ಗಂಡನ ಮನೆಬಿಟ್ಟು ಹೋಗು; ಆಜ್ಞೆಮೀರಿ ಮನೆ ಹೊರಗೆ ಹೋಗು.

ತಲ್ಬು (ನಾ)= ತಲಬು (ನೋಡಿರಿ)

ತವಡು (ನಾ)= ತೌಡು; ಧಾನ್ಯದ ಮೇಲ್ಪದರಿನ ಹುಡಿ; ಭತ್ತ ಮುಂತಾದ ಧಾನ್ಯದ ಹೊಟ್ಟು.

ತವದಿ (ನಾ)= ತವ್ದಿ; ರಾಗಿ; ಒಂದು ಬಗೆಯ ಏಕದಳ ಧಾನ್ಯ

ತವದಿಕಡುಬು (ನಾ)= ರಾಗಿಕಡುಬು; ರಾಗಿಮುದ್ದೆ.

ತವರಾ (ನಾ)= ತವರ; ಒಂದು ಬಗೆಯ ಲೋಹ.

ತವ್ದಿ (ನಾ)= ತವದೆ; ರಾಗಿ; ಒಂದು ಬಗೆಯ ಏಕದಳ ಧಾನ್ಯ

ತವ್ದಿಕಡ್ಬು (ನಾ)= ರಾಗಿಕಡುಬು; ರಾಗಿಮುದ್ದೆ

ತವ್ಲಿ (ಅ)= ಜಾಗದಲ್ಲಿ; ಥಾವದಲ್ಲಿ; ಠಾವಿನಲ್ಲಿ; ಸ್ಥಳದಲ್ಲಿ

ತವ್ವಿ (ನಾ)= ತೊವ್ವೆ; ಹುಳಿ ಬೇಳೆ ಸಾರು (ಬ್ರಾಹ್ಮಣ ಭಾಷೆ).

ತಸೀಲು (ನಾ) ಉ.= ಭೂಗಂದಾಯ.

ತಸೀಲ್ದಾರ (ನಾ) ಉ.= ತಾಲೂಕಾ ಮಟ್ಟದ ಭೂಗಂದಾಯ ಅಧಿಕಾರಿ.

ತಸ್ತರಿ (ನಾ)ಉ.= ಸಣ್ಣತಟ್ಟೆ; ಅಗಲವಾದ ಚೀನಿ ಮಣ್ಣಿನ ಬಟ್ಟಲು.

ತಸ್ಫ್ಯಾ (ನಾ)= ನ್ಯಾಯ ನಿರ್ಣಯ; ನ್ಯಾಯದಾನ; ಫೈಸ್ಲಾ.

ತಸ್ವೀರ (ನಾ) ಉ.= ಚಿತ್ರ; ಭಾವಚಿತ್ರ; ಛಾಯಾಚಿತ್ರ.

ತಸ್ವೀರ್ ಖಿಂಚಾಸು . (ಕ್ರಿ)= ಛಾಯಾಚಿತ್ರತೆಗೆ; ಚಿತ್ರ ಬರೆ; ಭಾವಚಿತ್ರ ಬರೆ.

ತಹತ್ (ಅ)= ಆಧೀನದಲ್ಲಿ; ವ್ಯಾಪ್ತಿಯಲ್ಲಿ.

ತಳ (ನಾ)= ಸ್ಥಳ; ಮೂಲಜಾಗ; ನೆಲ; ಭೂಮಿ; ಹುಟ್ಟೂರು; ಬಾವಿಯ ಕೆಳನೆಲ; ಕೆರೆಯ ಕೆಳನೆಲ; ಸಮುದ್ರದ ಆಳದಲ್ಲಿ ಇರುವ ನೆಲ; ನದಿಯ ಕೆಳನೆಲ.

ತಳಕಾಣು (ಕ್ರಿ)= ನೀರು ಇಲ್ಲದೆ ಬಾವಿ, ಕೆರೆ, ನದಿ ಇತ್ಯಾದಿಗಳ ನೆಲ ಕಣ್ಣಿಗೆ ಎಟಕು; ತಳಕ್ಕೆ ಮುಟ್ಟು; ನೀರಿನ ಆಳದ ನೆಲಕ್ಕೆ ತಲುಪು; ನೀರಲ್ಲಿ ಮುಳುಗಿಸಾಯು.

ತಳಕಿತ್ತು (ಕ್ರಿ)= ಜಾಗಬಿಡು; ಓಡಿ ಹೋಗು; ಊರು ಬಿಡು.

ತಳಕು (ನಾ)= ಜೋಡಿಗೊಂಡವರು; ಜೋಡಿಗೊಳ್ಳುವಂತೆ ಕಣ್ಣಿಯಿಂದ ಕಟ್ಟಿದ ದನ. ಜೋಡಿಗೊಳಿಸುವಿಕೆ.

ತಳಕು ಹಾಕು (ಕ್ರಿ)= ಜೋಡಿಗೊಳಿಸು; ಎರಡು ಅಥವಾ ಹೆಚ್ಚು ಪಶುಗಳನ್ನು ಒಂದೇ ಕಣ್ಣಿಯಿಂದ ಬಂಧಿಸು.

ತಳಘಾಟ (ನಾ)= ಬೀದರ ಕೋಟೆಯ ಕೆಳ ಬದಿಯಲ್ಲಿ ಪೂರ್ವದಿಕ್ಕಿಗಿರುವ ಒಂದು ಹಳ್ಳಿ.

ತಳಝಾಡಿಸು (ಕ್ರಿ)= ಏನೂ ಇಲ್ಲದಂತೆ ಚೀಲವನ್ನು ಜಾಡಿಸು; ಏನೂ ಇಲ್ಲದಂತಾಗು; ಖಾಲಿಯಾಗು.

ತಳತೇಲು (ಕ್ರಿ)= ನದಿ, ಕೆರೆ, ಬಾವಿ ಇತ್ಯಾದಿಗಳಲ್ಲಿ ನೀರಿಲ್ಲದೆ ಕೆಳ ನೆಲ ಕಾಣುವಂತಾಗು.

ತಳಪಾಯ (ನಾ)= ಬುನಾದಿ; ಅಡಿಪಾಯ; ಪಾಯಾ.

ತಳಬಿಡು (ಕ್ರಿ)= ಹೊರಟು ಹೋಗು; ಕಾಲುಕಿತ್ತು; ಕಾಣದಂತೆ ಮಾಯವಾಗು.

ತಳಬುಡ (ನಾ)= ಆದಿ ಅಂತ; ಗೊತ್ತು ಗುರಿ; ವಿಳಾಸ.

ತಳಬುರ್ಸಿ (ಅ)= ತಳಕ್ಕೆ ಹೊಂದಿದಂತೆ; ತಳದಿಂದ; ತಳದಲ್ಲಿ.

ತಳಭೋಗ (ನಾ)= ಬೀದರ ಕೋಟೆಯ ಕೆಳಭಾಗದಲ್ಲಿ ಇರುವ ಒಂದು ಹಳ್ಳಿಯ ಹೆಸರು.

ತಳಮಳ (ನಾ)= ಕಳವಳ; ಸಂಕಟ.

ತಳಮಾಳ್ಗಿ (ನಾ)= ನೆಲಮಟ್ಟದ ಮನೆಯ ಮೇಲೆ ಹಾಕಿದ ಮಾಳಿಗೆ; ನೆಲಮಾಳಿಗೆ; ನೆಲಮನೆ.

ತಳವಾಡ (ನಾ)= ಭಾಲ್ಕಿ ತಾಲೂಕಿನ ಒಂದು ಊರು; ಕನ್ನಡ ತಳವಾಡ ಊರು.

ತಳವಾರ (ನಾ)= ಊರಿನ ಕಾವಲುಗಾರ; ಕೋಟೆಯ ಕಾವಲುಗಾರ.

ತಳವೂರು (ಕ್ರಿ)= ನೆಲೆಗೊಳ್ಳು; ವಾಸಿಸು; ಬೀಡು ಬಿಡು.

ತಳಾಬಳಿ (ಕ್ರಿ)= ಬಾವಿಯ ತಳದವರೆಗೆ ನೀರಿಲ್ಲದಂತಾಗು; ಗುಮ್ಮಿಯ ತಳದವರೆಗೆ ಕಾಳು ಇಲ್ಲದಂತಾಗು.

ತಳಾ ಇಲ್ಲಾ ಬುಡಾ ಇಲ್ಲಾ (ನುಡಿ)= ಗೊತ್ತಿಲ್ಲ ಗುರಿಯಿಲ್ಲ; ಅಪರಿಚಿತ; ಹೊಸಬ; ವಿಳಾಸ ಇಲ್ಲದ.

ತಳಾಹಿಡಿ (ನಾ)= ಒಂದೆಡೆ ಉಳಿದು ಬಿಡು; ಅಲ್ಲಾಡದಂತಿರು.

ತಳಿ (ನಾ)= ಪಶು ಅಥವಾ ಧಾನ್ಯಗಳ ಒಂದು ಪೀಳಿಗೆ.

ತಳುಕು (ನಾ)= ತಳಕು (ನೋಡಿರಿ)

ತಳ್ಕು (ನಾ)= ತಳಕು (ನೋಡಿರಿ).

ತಳ್ಕು ಹಾಕು (ಕ್ರಿ)= ತಳಕು ಹಾಕು (ನೋಡಿರಿ).

ತಳ್ಕಿ (ನಾ)= ಒಡನಾಟ; ಗೊಡವೆ; ಗೋಜು; ಸಂಬಂಧ; ಸಹವಾಸ.

ತಾ (ಕ್ರಿ)= ಕೊಡು; ತೆಗೆದುಕೊಂಡು ಬಾ.

ತಾಂಡಾ (ನಾ)= ತಾಂಡೆ; ತಾಂಡ್ಯಾ; ಲಮಾಣಿಗಳು ವಾಸಿಸುವ ಊರು; ತಂಡ. (ಹಾಡು: ಬಿಯ್ಯಾರೆ ಬಿಯ್ಯಾರೇ। ತಾಂಡಾ ಕಿಧರ ಗಯ್ಯೋರೇ॥).

ತಾಂಡ್ಯಾ (ನಾ)= ತಾಂಡಾ (ನೋಡಿರಿ).

ತಾಂಬಟ್ಗಾರ (ನಾ)= ತಾಮ್ರ ಮತ್ತು ಹಿತ್ತಾಳೆ ಕೆಲಸದವನು.

ತಾಂಬುರ್ಥೆಂಬ್ಗಿ (ನಾ)= ತಾಮ್ರದಿಂದ ತಯಾರಿಸಿದ ನೀರು ಬಳಸುವ ತಂಬಿಗೆ.

ತಾಂಬುರ್ದುಡ್ಡು (ನಾ)= ತಾಮ್ರದ ನಾಣ್ಯ. (ಗಾದೆ: ತಾಂಬುರ್ದುಡ್ಡು ತಾಯಿ ಮಕ್ಳಿಗಿ ಧೂರ ಮಾಡ್ತಂತ).

ತಾಂಬೂರು (ನಾ)= ತಾಮ್ರ; ಒಂದು ಪ್ರಕಾರದ ಲೋಹ.

ತಾಂಬೇಲಿ (ನಾ)= ಆಮೆ; ಕೂರ್ಮ.

ತಾಂಬ್ಡಿ (ವಿ)= ತಾಮ್ರದ ಬಣ್ಣದ್ದು.

ತಾಂಬ್ಯಾ (ನಾ)= ತಂಬಿಗೆ; ತಾಮ್ರದ ತಂಬಿಗೆ.

ತಾಂಬ್ರ (ನಾ)= ತಾಮ್ರ; ಒಂದು ಪ್ರಕಾರದ ಲೋಹ.

ತಾಂಬ್ರತೆಲಿ (ನಾ)= ಕೂದಲುದುರಿದ ತಲೆ.

ತಾಂವು (ನಾ)= ಠ್ಯಾಂವು; ಕಾಗದದೊಡ್ಡ ಹಾಳೆ.

ತಾಕಲಾಟ (ನಾ)= ಘರ್ಷಣೆ; ತಿಕ್ಕಾಟ; ಹೊಯ್ದಾಟ.

ತಾಕಲಾಡು (ಕ್ರಿ)= ಹೊಯ್ದಾಡು; ಎಡೆತಾಕಲಾಡು

ತಾಕೀತು (ನಾ)= ಎಚ್ಚರಿಕೆ; ಪೂರ್ವಸೂಚನೆ; ಜತಾಯಿಸುವಿಕೆ; ಜತಾಯಿಸಿ ಹೇಳುವಿಕೆ; ಅಧಿಕಾರ ಪೂರ್ವಕ ಕಟ್ಟಪ್ಪಣೆ.

ತಾಕತ್ತು (ನಾ) ಉ.= ಶಕ್ತಿ; ಸಾಮರ್ಥ್ಯ; ಕುವ್ವತ್ತು.

ತಾಕತ್ವಾರ (ನಾ) ಉ.= ಸಾಮರ್ಥ್ಯವಾನ; ಸಮರ್ಥ.

ತಾಕತ್ವಾರಾಗು (ಕ್ರಿ)= ಶಕ್ತಿ ಶಾಲಿಯಾಗು.

ತಾಗಾನ್ತಿ (ಅ)= ನಿರಂತರ; ಸದಾ; ಹಮೇಶಾ; ಯಾವಾಗಲು; ಹಿಂದಿನಿಂದ.

ತಾಜಾ (ನಾ) ಉ.= ಅಗದಿ ಹೊಸದಾದ; ಆಗಲೆ ತಯಾರಿಸಿದ (ಅಡಿಗೆ).

ತಾಜಾತಾಜಾ (ದ್ವಿ) = ಬಿಸಿಬಿಸಿ; ಆಗಲೆ ತಯಾರಿಸಿದ.

ತಾಜಾಪನಾ (ನಾ) ಉ.= ಹೊಸತನ; ನೂತನತೆ; ನವ್ಯತೆ.

ತಾಜಾ ರೋಜಗಾರೀ (ನಾ)= ನಿತ್ಯನೂತನ ಉದ್ಯೋಗ; ನಿತ್ಯ ಕೂಲಿ ಮಾಡಿದ ಸಂಪಾದನೆ.

ತಾಜ್ಗಿ (ನಾ)= ತಾಜಾಪನಾ (ನೋಡಿರಿ)

ತಾಟಗಿತ್ತಿ (ನಾ)= ಗಯ್ಯಾಳಿ; ಗಣಜಾಣೆ; ಬಜಾರಿ; ಗಂಡುಬೀರಿ.

ತಾಟು (ನಾ)= ತಟ್ಟೆ; ಗಂಗಾಳ; ನಾರಿನಿಂದ ತಯಾರಿಸಿದ ತಟ್ಟು; ನಾರಿನ ಹಾಸಿಗೆ.

ತಾಟ್ಲಿ (ನಾ)= ಸಣ್ಣ ತಟ್ಟೆ; ತಾಟು.

ತಾಡಪತ್ರಿ (ನಾ)= ನೀರಿಳಿಯದಂತೆ ಟಾರು, ಮೇಣ ಇತ್ಯಾದಿ ಬಳಿದು ತಯಾರಿಸಿದ ಬಟ್ಟೆ; ಟಾರ್ಪಾಲು.

ತಾಡಿ (ನಾ)= ತಾಡಿನಗಿಡದ ರಸ; ನಶೆಯ ರಸ; ಕಳ್ಳು.

ತಾತಾ (ನಾ)= ತಂದೆಯ ತಂದೆ; ತಾಯಿಯ ತಂದೆ; ಅಜ್ಜ; ಮುತ್ಯಾ; ಮುದುಕ; ಹಿರಿಯ.

ತಾತ್ಪೂರ್ತಿಕ (ಅ) ಸಂ.= ಆ ಸಮಯಕ್ಕೆ ಸಲ್ಲುವಷ್ಟು; ಆ ಸಮಯಕ್ಕೆ ತಕ್ಕಷ್ಟು; ಎಷ್ಟು; ಬೇಕೋ ಅಷ್ಟು; ಅಗತ್ಯಕ್ಕೆ ತಕ್ಕಷ್ಟು.

ತಾಪಾ (ನಾ)= ತಾಪ; ಸಂಕಟ; ಕಷ್ಟ; ನೋವು.

ತಾಪು (ನಾ)= ತಾಪಾ (ನೋಡಿರಿ).

ತಾಪ್ಪಲು (ನಾ)= ತಪ್ಪಲು; ತೊಪ್ಪಲು; ಸೊಪ್ಪು

ತಾಪ್ರಿ (ನಾ)= ದಾನ್ಯದ ಮೇಲ್ಪದರು; ಜಲ್ಲಡಿ ಹಿಡಿದ ಹಿಟ್ಟಿನಿಂದ ಬೇರ್ಪಟ್ಟ ಹೊಟ್ಟು.

ತಾಬಂಡಿ (ನಾ)= ದೊಡ್ಡತಟ್ಟೆ; ಪರಾತ (ಒಗಟು: ಬಂಡಿ ಅಲ್ದ ಬಂಡಿ ಯಾ ಬಂಡಿ –ತಾಬಂಡಿ).

ತಾಬಡತೋಬ (ಅ)= ಆಗಿಂದಾಗ; ಕೂಡಲೆ; ತಕ್ಷಣ;

ತಾಬಾ (ಅ) ಉ.= ಆಧೀನ; ಸ್ವಾಧೀನ.

ತಾಬಿ (ನಾ)= ಹಿಟ್ಟು ಜಲ್ಲಡಿ ಹಿಡಿದ ಮೇಲೆ ಉಳಿವ ಗುನಿ, ಕಸಪಟ್ಟು ಇತ್ಯಾದಿ.

ತಾಬೇದಾರ (ನಾ) ಉ.= ಆಧೀನಸ್ಥ

ತಾಬೇದಾರಿ (ನಾ)= ಕೈ ಕೆಳಗೆ ದುಡಿಯುವಿಕೆ; ಹೇಳಿದಷ್ಟು ನೆರವೇರಿಸುವಿಕೆ.

ತಾಮಟಗಾರ (ನಾ)= ತಾಮ್ರ, ಹಿತ್ತಾಳೆಯ ಕೆಲಸದವನು.

ತಾಮ್ರ (ನಾ)= ತಾಂಬ್ರ; ಒಂದು ಬಗೆಯ ಕೆಂಪು ಲೋಹ.

ತಾಯಿ (ನಾ)= ಅವ್ವ; ಅಕ್ಕ (ಮರಾಠಿ).

ತಾಯಿ ಕಳ್ಳು (ನಾ)= ತಾಯಿಯ ಕರುಳು, ಕಳಕಳಿ.

ತಾಯಿತ (ನಾ)= ತಾಯ್ತ; ತಾವೀಜು; ಯಂತ್ರ ಮಂತ್ರ; ಕೈಗೆ ಅಥವಾ ಕೊರಳಲ್ಲಿ ಧರಿಸುವ ಮಂತ್ರದ ಪದಕ.

ತಾರೆ ಶಿರೋಮಣಿ (ನಾ)= ಬೀದರ ನಗರದ ಮಂಗಲ ಪೇಟದ ಒಬ್ಬ ಸಾಹಿತಿ.

ತಾಯಿಗಂಡ (ನಾ)= ತಾಯಿಯ ಮೇಲೆ ಕೈ ಮಾಡುವವ; ಮಾತೃದ್ರೋಹಿ; ತಾಯ್ಗಂಡ; ಕಾಮುಕ; ಉಪಕಾರಗೇಡಿ (ಬೈಗುಳ)

ತಾಯ್ಗಂಡ (ನಾ)= ತಾಯಿಗಂಡ (ನೋಡಿರಿ)

ತಾಯ್ತಂದಿ (ನಾ)= ಅವ್ವ ಅಪ್ಪ; ಹಡೆದವರು.

ತಾಯ್ತ (ನಾ)= ತಾಯಿತ (ನೋಡಿರಿ)

ತಾಯ್ತ ಕಟ್ಟು (ಕ್ರಿ)= ಮಂತ್ರಪೂರಿತ ಪದಕವನ್ನು ಕೊರಳಲ್ಲಿ ಇಲ್ಲವೆ ರಟ್ಟೆಯಲ್ಲಿ ಕಟ್ಟು.

ತಾರಸಿ (ನಾ)= ಆರ್‌ಸಿಸಿ; ಸಿಮೆಂಟಿನ ಮೇಲ್ಛಾವಣಿ.

ತಾರಾತಿಗಡಿ (ನಾ)= ಮೋಸ; ಕಪಟ; ವಂಚನೆ; ಕುಟಿಲ ಕಾರ್ಯ.

ತಾರಿ (ನಾ)= ತ್ರಿಫಳಾ ಚೂರ್ಣಕ್ಕಾಗಿ ಬಳಸಲಾಗುವ ಒಂದು ಬಗೆಯ ಕಾಡುಫಲ ಮತ್ತು ಅದರ ಗಿಡ

ತಾರೀಖು (ನಾ)ಉ.= ದಿನಾಂಕ; ತೇದಿ; ತಿಥಿ,

ತಾರೀಫು (ನಾ) ಉ.= ವರ್ಣನೆ; ಹೊಗಳಿಕೆ; ಮೆಚ್ಚುಗೆ; ಆಶ್ಚರ್ಯ; ವಿಚಿತ್ರ.

ತಾರೀಫು ಮಾಡು (ಕ್ರಿ)= ವರ್ಣಿಸು; ಹೊಗಳು; ಮೆಚ್ಚುಗೆ ಸೂಸು; ಆಶ್ಚರ್ಯಪಡು.

ತಾರು (ನಾ)ಹಿಂ.= ತಂತಿ; ತಂತಿ ಸಂದೇಶ.

ತಾರುಖಳಿಸು (ಕ್ರಿ)= ತಂತಿ ಸುದ್ದಿ ಕಳುಹಿಸು; ತಂತಿ ಸಂದೇಶ ರವಾನಿಸು.

ತಾರೆಳಿ (ಕ್ರಿ)= ತಂತಿಯನ್ನು ಚಾಚು; ತಂತಿಬಿಗಿ; ತಂತಿ ಬೇಲಿ ಹಚ್ಚು.

ತಾರೇ (ಕ್ರಿ)= ಕೊಡುನೇ; ತೆಗೆದುಕೊಂಡು ಬಾರೇ. (ದಾಸರ ಹಾಡು: ತಾರಕ್ಕ ಬಿಂದಗಿ। ನಾನೀರಿಗೋಗುವೆ। ತಾರೇ ಬಿಂದಗಿಯಾ)

ತಾಲ (ನಾ)= ತಾಳ; ಹಿತ್ತಾಳೆ ಅಥವಾ ಕಂಚಿನಿಂದ ತಯಾರಿಸಿದ ಬಟ್ಟಲಂಥ ಜೋಡು ವಾದ್ಯ; ಚಳ್ಳಂ.

ತಾಲಿ (ನಾ)= ಸಾಲಿ; ಶಾಲೆ; ಪಾಠಶಾಲೆ (ಬಾಲಭಾಷೆ).

ತಾಲಿಬಖಾನ (ನಾ)ಉ.= ಒಂದು ಪ್ರಕಾರದ ವೀರ್ಯ ವೃದ್ಧಿ ಸಸ್ಯ ಮತ್ತು ಅದರ ಕಾಳು.

ತಾಲೀಂಖಾನಿ (ನಾ) ಉ.= ಗರಡಿಮನೆ; ವ್ಯಾಯಾಮ ಮಾಡು.

ತಾಲೀಮು (ನಾ) ಉ.= ವ್ಯಾಯಾಮ; ಕಸರತ್ತು; ಅಭ್ಯಾಸ; ತರಬೇತಿ; ಗರಡಿ.

ತಾಲೀಮು ನಡೆಸು (ಕ್ರಿ)= ವ್ಯಾಯಾಮ ಮಾಡು; ಕಸರತ್ತು ಮಾಡು.

ತಾಲೂಕಾ (ನಾ)= ತಹಸಿಲ್ದಾರನ ವ್ಯಾಪ್ತಿಯ ಭೂಪ್ರದೇಶ; ಸಂಬಂಧ.

ತಾಲೂಕ್ದಾರ (ನಾ)= ಜಿಲ್ಲಾಧಿಕಾರಿ; ಡಿ.ಸಿ.

ತಾವೀಜ (ನಾ)= ತಾಯಿತ; ತಾಯ್ತ; ಮಂತ್ರ ತುಂಬಿದ ಚೀಟಿಯುಳ್ಳ ಪದಕ.

ತಾವು (ಸ)= ಗೌರವ ಸೂಚಕ ನೀನು (ಬಯಲಾಟದ ಮಾತು: ತಾವು ಬಂದವರು ದಾರು ತಾಯೆ। ಸಕಲ ಲೋಕದ ಮಾಯೆ। ಒಡೆದ ಕುಂಬಳ ಕಾಯೆ।)

ತಾಪ್ಪಿ (ನಾ)= ರಾಗಿ; ಒಂದು ಪ್ರಕಾರದ ಸಣ್ಣದಾದ ಏಕದಳ ಧಾನ್ಯ.

ತಾಪ್ಪಿ ಕಡುಬು (ನಾ)= ರಾಗಿಮುದ್ದಿ; ರಾಗಿ ಹಿಟ್ಟಿನ ಕಡುಬು.

ತಾಪ್ರಾ (ನಾ)= ಒಂದು ಪ್ರಕಾರದ ಲೋಹ; ತವರ.

ತಾಪ್ಲಿ (ಅ)= ತವ್ಲಿ (ನೋಡಿರಿ).

ತಾಸೀರ (ನಾ)= ಹುಟ್ಟುಗುಣ; ವಿಶೇಷ ಗುಣ.

ತಾಸೀಲ (ನಾ)= ಕೆಟ್ಟಗುಣ; ಹೀನಗುಣ; ಕೆಟ್ಟದ್ದು.

ತಾಸು (ನಾ)= ಗಂಟೆಕಾಲ; ಘಂಟೆಯ ಅವಧಿ.

ತಾಸ್ಯಾ (ನಾ)= ಒಂದು ಪ್ರಕಾರದ ಚರ್ಮವಾದ್ಯ.

ತಾಳ (ನಾ)= ತಾಲ (ನೋಡಿರಿ).

ತಾಳ ಮೇಳ (ನಾ)= ಹೊಂದಾಣಿಕೆ.

ತಾಳಿ (ನಾ)= ಗುಳ್ದಾಳಿ; ಮಂಗಳ ಸೂತ್ರ.

ತಾಳಿ ಕಟ್ಟು (ಕ್ರಿ)= ಕೊರಳಿಗೆ ಮಂಗಳ ಸೂತ್ರ ಕಟ್ಟು; ಮದುವೆ ಮಾಡಿಕೊ.

ತಾಳಿಸು (ಕ್ರಿ)= ತರಕಾರಿ, ಹಸಿಕಾಳು ಇತ್ಯಾದಿಯನ್ನು ಎಣ್ಣೆ ಹಚ್ಚಿ ಹುರಿ.

ತಾಳಿಹರಿ (ಕ್ರಿ)= ಮಂಗಳ ಸೂತ್ರ ಕಡಿ; ಮದುವೆಮುರಿ; ಒಗೆತನ ಹರಿದುಕೊ; ಫಾರೀಕತಿ ಕೊಡು; ವಿವಾಹ ವಿಚ್ಛೇದನ ಮಾಡಿಕೊ.

ತಾಳು (ನಾ)= ಕುಂಟಿ ಅಥವಾ ಕೂರಿಗೆಯ ಕಟ್ಟಿಗೆಯೊಂದಿಗೆ ಜೋಡಿಸಿದ ಕಬ್ಬಿಣದ ಹಲ್ಲು.

ತಾಳು (ಕ್ರಿ)= ಸಹಿಸು; ತಡೆ; ಅನುಭವಿಸು; ಭೋಗಿಸು; ಕಷ್ಟವನ್ನು ಉಣ್ಣು.

ತಾಳ್ಕಿ (ನಾ)= ತಾಳಿಕೆ; ಬಾಳಿಕೆ.

ತಾಳ್ಕಿಯಾಗು (ಕ್ರಿ)= ದೀರ್ಘ ಬಾಳಿಕೆಯಾಗು.

ತಾಳ್ಗಿ (ನಾ)= ತಾಳಿಗೆ; ಕೂಸಿನ ನೆತ್ತಿಯ ಮೆತ್ತಗಿನ ಮೇಲ್ಭಾಗ; ಕೂಸಿನ ನೆತ್ತಿಯ ಮೆತ್ತಗಿನ ಮುಂಭಾಗ.

ತಾಳ್ಗಿ ಕಟ್ಟು (ಕ್ರಿ)= ಕೂಸಿನ ತಾಳಿಗೆಯ ಬೇನೆ ನಿವಾರಿಸಲು ತಲೆಗೆ ಗಿಡಮೂಲಿಕೆಯನ್ನು ಕಟ್ಟು.

ತಾಳ್ಗಿಭೀಳು (ಕ್ರಿ)= ಕೂಸಿನ ತಾಳಿಗೆಯ ಭಾಗ ಆಳಕ್ಕಿಳಿ ಇಲ್ಲವೆ ಉಬ್ಬು; ತಾಳಿಗೆಗೆ ಬಾಧೆಯಾಗು; ನೋವಾಗು.

ತಾಳ್ಭಾರ್ಸು (ಕ್ರಿ)= ತಾಳಬಾರಿಸು; ತಾಳಹಾಕು; ತಾಳಕುಟ್ಟು.

ತಾಳ್ಮಡಗಿ (ನಾ)= ಮುಂಬೈ ಹೈದ್ರಾಬಾದ ಮಹಾಮಾರ್ಗದ ಮೇಲೆ ಇರುವ ಹುಮನಾಬಾದ ತಾಲೂಕಿನ ಒಂದು ಹಳ್ಳಿ.

ತಾಳ್ಸಿದ ಪಲ್ಯ (ನಾ)= ಎಣ್ಣೆಯಲ್ಲಿ ಹುರಿದು ಮಾಡಿದ ಪಲ್ಯ.

ತಾಳ್ಸು (ಕ್ರಿ)= ತಾಳಿಸು (ನೋಡಿರಿ).

ತಾಳ್ಹಾಕು (ಕ್ರಿ)= ತಾಳಬಾರಿಸು; ತಾಳ ಕುಟ್ಟು.

ತಿಂಗಳು (ನಾ)= ಎರಡು ಪಕ್ಷಗಳ ಅವಧಿ; ಮೂವತ್ತು ದಿನಗಳ ಕಾಲ; ಮಾಸ; ಮಹಿನಾ.

ತಿಂಗ್ತಿಂಗಳು (ಅ)= ಪ್ರತಿ ತಿಂಗಳು; ಮಾಹೆವಾರಿ; ಮಾಸಿಕ

ತಿಂಗ್ಳಾ ತಿಂಗ್ಳಾ (ದ್ವಿ)= ಪ್ರತಿ ತಿಂಗಳು; ಮಾಹೆವಾರಿ; ಮಾಸಿಕ.

ತಿಂಗ್ಳೊಪ್ಪತ್ತು (ನಾ)= ಒಂದು ತಿಂಗಳ ಅವಧಿ.

ತಿಂಡಿ (ನಾ)= ತಿನಿಸು; ಆಹಾರ; ಅಲ್ಪೋಪಹಾರ; ನಾಶ್ತಾ; ಕೂಳು; ತುರಿ; ಒಣತುರಿ.

ತಿಂಡಿಕುಡು (ಕ್ರಿ)= ತಿನ್ನಲು ಕೊಡು; ತುರಿಕೆ ಉಂಟಾಗು; ಒಣತುರಿ ಉಂಟಾಗು; ತುರುಸ ತೊಡಗು.

ತಿಂಡಿತಿನು (ಕ್ರಿ)= ಊಟಮಾಡು.

ತಿಂಡಿ ತೀರಿಸಿಕೊ (ಕ್ರಿ)= ನಾಶ್ತಾಮಾಡು; ಅಲ್ಪೋಪಹಾರ ಮುಗಿಸು; ಬಯಕೆ ಪೂರ್ತಿಗೊಳಿಸಿಕೊ; ಹಂಬಲ ಪೂರ್ತಿಗೊಳಿಸಿಕೊ; ಕಾಮಾತುರವನ್ನು ತೀರಿಸಿಕೊ.

ತಿಂತಣ್ಗಿ (ನಾ)= ಮಹಾಶರಣ ತಿಂತಿಣಿ ಮೌನೇಶ್ವರರ ತೀರ್ಥಕ್ಷೇತ್ರ.

ತಿಂತಾತಿಂತಾ (ದ್ವಿ)= ತಿನ್ನುತ್ತ ತಿನ್ನುತ್ತ; ತಿನ್ನುತ್ತಿರುವಂತೆಯೇ.

ತಿಂತಿಣಿ (ನಾ)= ತಿಂತಣ್ಗಿ (ನೋಡಿರಿ)

ತಿಂದೋಡಿ (ನಾ)= ಮೈಗಳ್ಳ; ಉಂಡು ಓಡಿ ಹೋಗುವವ; ಅಲ್ಲಿ ಇಲ್ಲಿ ತಿನ್ನುತ್ತ ಅಲೆದಾಡುವವ.

ತಿಂಬಲ್ದಾಂವ (ನಾ)= ಲಂಚಗುಳಿ ಅಲ್ಲದಂವ; ಸ್ವಚ್ಛ ಕೈಬಾಯಿ ಉಳ್ಳವ.

ತಿಂಬಾ (ವಿ.)= ತಿಂಬ; ತಿನ್ನುವ; ತಿಂಬುವ; ತಿನ್ನಲು ಯೋಗ್ಯವಾದ.

ತಿಂಬಾ ಆಶಿ (ನಾ)= ಲಂಚಗುಳಿತನ.

ತಿಂಬಾಟ್ಗೆ (ಅ)= ತಿನ್ನುವಷ್ಟರಲ್ಲಿ; ತಿಂದು ಮುಗಿಸುವಷ್ಟರಲ್ಲಿ.

ತಿಂಬಾಥನಾ (ಅ)= ತಿನ್ನುವ ತನಕ; ಹೊಟ್ಟೆ ತುಂಬುವ ತನಕ (ಜಾನಪದ ಗಾದೆ: ತಿಂಬಾಥನಾ ತಿಂದು ತುಂಬು ಖೈಂ ಅಂತಂತ!)

ತಿಂಬಾದಿನ್ಸು (ನಾ)= ತಿನ್ನುವ ವಸ್ತು; ತಿಂಡಿ; ಉಣ್ಣುವ ಆಹಾರ.

ತಿಂಬಾದ್ರಾಗೆ (ಅ)= ತಿನ್ನುವಷ್ಟರಲ್ಲಿಯೇ; ತಿನ್ನುವುದರೊಳಗಾಗಿಯೇ.

ತಿಂಬಾಥಂದ್ಯಾ (ನಾ)= ಲಂಚಗುಳಿತನ.

ತಿಂಬಾರುಚಿ (ನಾ)= ಲಂಚಗುಳಿತನದ ಹವ್ಯಾಸ; ಲಂಚದಾಸೆ; ಬಾಯಿರುಚಿ; ನಾಲಿಗೆ ರುಚಿ.

ತಿಂಬಾಲ (ನಿ)= ತಿನ್ನೊಲ್ಲ; ತಿನ್ನುವುದಿಲ್ಲ; ತಿಂಬುದಿಲ್ಲ

ತಿಕ್ಕಾಟಾ (ನಾ)= ತಿಕ್ಕಾಟ; ತಿಕ್ಕುವಿಕೆ; ಘರ್ಷಣೆ; ಹೊಡೆದಾಟ.

ತಿಕ್ಕಾತಿರುಗು= ಅತಿಕೋಪ ಉಂಟಾಗು; ಅತಿಸಿಟ್ಟು ಬರು.

ತಿಕ್ಕು (ಕ್ರಿ)= ಉಜ್ಜು; ಭಾಂಡೆ ಉಜ್ಜು; ಭಾಂಡೆ ಬೆಳಗು.

ತಿಖಟ (ನಾ)= ಖಾರ; ಅತಿಖಾರ; ಮೆಣಸಿನ ಪುಡಿ.

ತಿಗ್ಡಿಬಿಗ್ಡಿ (ನಾ)= ಅಡ್ಡತಿಡ್ಡ; ಅವ್ಯವಸ್ಥಿತ.

ತಿಜಾರತ (ನಾ) ಉ.= ವ್ಯಾಪಾರ.

ತಿಜೋರಿ (ನಾ) ಇಂ= ಟ್ರೆಜರಿ; ಹಣಕಾಸಿನ ಭದ್ರ ಪೆಟ್ಟಿಗೆ; ಖಜಾನೆ.

ತಿಟ್ಟ (ವಿ.)= ಅಟುಕ; ಉದ್ದಗಲ ಕಡಿಮೆಯುಳ್ಳ ಇಕ್ಕಟ್ಟಾದ.

ತಿಟ್ಟುಣ್ಕಿ (ನಾ)= ತಿಟ್ಟಣಿಕೆ; ಉದ್ದಗಲದ ಕೊರತೆ; ಒತ್ತೊತ್ತಾಗಿರುವಿಕೆ; ತಿಟ್ಟಾಗಿರುವಿಕೆ.

ತಿಣುಕಾಟಾ (ನಾ)= ತಿಣುಕುವಿಕೆ; ಟಿಣುಕುವಿಕೆ.

ತಿಣುಕು (ಕ್ರಿ)= ಟಿಣುಕು; ಕಕ್ಕಸ ಪಡು.

ತಿಥಿ (ನಾ)= ಶ್ರಾದ್ಧ; ಒಂದು ದಿನದ ಅವಧಿ.

ತಿದ್ಕೊ (ಕ್ರಿ)= ತಿದ್ದಿಕೊ; ಸರಿಪಡಿಸಿಕೊ.

ತಿದ್ದು (ಕ್ರಿ)= ತೀಡು; ಬರೆದಿದರ ಮೇಲೆ ಮತ್ತೆ ಮತ್ತೆ ಬರೆ; ಸರಿಪಡಿಸು.

ತಿನು (ಕ್ರಿ)= ತಿನ್ನು; ಮೆಲಿ; ಮೆಲಿದು ನುಂಗು; ಜಗಿ; ಜಗಿದು ನುಂಗು; ಲಂಚ ಪಡೆ.

ತಿನ್ಲಾಕ ()= ತಿನ್ನಲಿಕ್ಕೆ; ತಿನ್ನುವುದಕ್ಕೆ (ಹಾಡು: ನಮ್ಮಾವಾ ಕೊಟ್ಟ ಮಾಯಿನಕಾಯಿ। ಬಲುಸೋಯಿ। ತಿನ್ಲಾಕ ಇಲ್ಲೊ ಬಾಯಿ ॥)

ತಿಪರಾಂತ (ನಾ)= ಬಸವ ಕಲ್ಯಾಣ ನಗರಕ್ಕೆ ಹೊಂದಿಕೊಂಡಿರುವ ತ್ರಿಪುರಾಂತಕ ಕೆರೆ ಮತ್ತು ತ್ರಿಪುರಾಂತಕ ಊರು.

ತಿಪಾಯಿ (ನಾ)= ಮೂರು ಕಾಲಿನ ಮಣೆ; ಆಸನ; ಅಡ್ಡಣಿಗೆ.

ತಿಪ್ಪಟ್ಟು = ಮೂರುಪಟ್ಟು.

ತಿಪ್ಪಲು (ನಾ)= ಪ್ರಯತ್ನ; ಹೆಣಗಾಟ; ತಾಕಲಾಟ.

ತಿಪ್ಪಲು ಬಿಡು (ಕ್ರಿ)= ಪ್ರಯತ್ನ ಪಡು; ಕೋಶೀಶು ಮಾಡು; ಹೆಣಗಾಡು; ತಿಪ್ಪಲು ಬಿಡು.

ತಿಪ್ಪಿ (ನಾ)= ತಿಪ್ಪೆ; ಕಸದಗುಂಡಿ; ಕಾಂಪೋಸ್ಟ್ ಗೊಬ್ಬರ ಗುಂಡಿ.

ತಿಪ್ಪುರ್ಲಾಗ (ನಾ)= ತಿಪ್ರಿಲಾಗ (ನೋಡಿರಿ).

ತಿಪ್ಪುಲು (ನಾ)= ತಿಪ್ಪಲು (ನೋಡಿರಿ).

ತಿಪ್ರಿಲಾಗ (ನಾ)= ಅತಿಪ್ರಯತ್ನ; ಅತಿ ಹೆಣಗಾಟ.

ತಿಪ್ರಿಲಾಗಾ ಹೊಡಿ (ಕ್ರಿ)= ಅತಿಯಾಗಿ ಪ್ರಯತ್ನಿಸು; ಅತಿಯಾಗಿ ಹೆಣಗಾಡು.

ತಿಬ್ಬು (ನಾ)= ತೀವ್ರತೆ; ಕೊಬ್ಬು; ಸೊಕ್ಕು.

ತಿಮ್ಮಪ್ಪ (ನಾ)= ತಿರುಪತಿ ಗಿರಿವಾಸ ಶ್ರೀ ವೆಂಕಟೇಶ.

ತಿಮ್ಮುರು (ನಾ)= ತೀವ್ರತೆ; ತೀಬುರು; ತೀಬ್ರು.

ತಿಮ್ಮುರ್ನೋಡು (ಕ್ರಿ)= ತೀವ್ರತೆ ನೋಡು; ಅಬ್ಬರ ನೋಡು; ಸೊಕ್ಕುಗಮನಿಸು.

ತಿರಂಗಾ (ನಾ) ಹಿಂ= ಮೂರು ಬಣ್ಣದ ಭಾರತ ದೇಶದ ರಾಷ್ಟ್ರಧ್ವಜ (ರಾಷ್ಟ್ರ ಪ್ರೇಮ ಗೀತೆ: ವಿಜಯೀ ವಿಶ್ವತಿರಂಗಾ ಪ್ಯಾರಾ। ಝೆಂಡಾ ಊಂಚಾ ರಹೇಹಮಾರಾ ॥)

ತಿರುಗು (ಕ್ರಿ)= ವೃತ್ತಾಕಾರವಾಗಿ ಸುತ್ತು ಹೊಡೆ; ಹೊರಳು; ಮರಳಿ ಬಾ; ನಡೆದಾಡು.

ತಿರುಗೇಟು (ನಾ)= ಏಟಿಗೆ ಮರು ಏಟು; ಮರಳಿ ಹೊಡೆಯುವಿಕೆ; ಎದುರುತ್ತರ.

ತಿರುವು (ಕ್ರಿ)= ತಿರುಗುವಂತೆ ಮಾಡು; ಗಳೆತಿರುಗುವಂತೆ ಮಾಡು; ಸುತ್ತು ಹೊಡೆ.

ತಿರುವು ಮರುವು (ನಾ)= ಹಿಂದು ಮುಂದು ಆಗುವಿಕೆ.

ತಿರ್ಕ (ನಾ)= ತಿರುಕ; ಭಿಕ್ಷುಕ; ಬೇಡಿ ತಿನ್ನುವವ; ಅತಿಸಿಟ್ಟಿನವ; ಅತಿಹುಂಬ.

ತಿರ್ಕಾತಿರುಗು (ಕ್ರಿ)= ಅತಿಕೋಪಬರು; ಅತಿ ಸಿಟ್ಟೇರು.

ತಿರ್ಗಾಟ (ನಾ)= ತಿರುಗಾಟ; ಅಲೆದಾಟ; ಅಲೆದಾಡುವಿಕೆ; ಸುತ್ತಾಡುವಿಕೆ.

ತಿರ್ಗಿಮುರ್ಗಿ = ಮತ್ತೆ ಮತ್ತೆ; ಹೊರಳಿ ಹೊರಳಿ.

ತಿರುಗುಣಿ (ನಾ)= ತಿರುಗುವ ಕೀಲು; ಯಂತ್ರದ ತಿರುಗಣೆ; ತಿರುಗುಮೊಳೆ; ತಿರುಪು.

ತಿರ್ಗುಸು (ಕ್ರಿ)= ತಿರುಗಿಸು; ಚಕ್ರಾಕಾರವಾಗಿ ತಿರುಗುವಂತೆ ಮಾಡು; ಸುತ್ತು ಹೊಡೆಯಿಸು.

ತಿರ್ಪಟ (ನಾ)= ಉಪ್ಪಿನ ಮಡಿ ಆಟದಲ್ಲಿ ಎದುರಾಳಿಯನ್ನು ಸೋಲಿಸುವಿಕೆ; ಎದುರಾಟ ಹೂಡುವಿಕೆ.

ತಿರ್ಪತಿ (ನಾ)= ತಿರುಪತಿ ವ್ಯಂಕಟರಮಣ.

ತಿರ್ಪಾಳಿ (ನಾ)= ಮರುಪಾಳಿ; ಇನ್ನೊಂದು ಸಲ ದುಡಿಯುವಿಕೆ.

ತಿರ್ಫಳಾ (ನಾ)= ಅಳ್ಳಿಕಾಯಿ, ನೆಲ್ಲಿಕಾಯಿ ಹಾಗೂ ತಾರಿಕಾಯಿಗಳ ಮಿಶ್ರಹುಡಿ, ತ್ರಿಫಳಾ.

ತಿರ್ಬಡಿ (ನಾ)= ಭಿಕ್ಷುಕಿ; ತಿರಿದುಂಬುವವಳು. (ಬೈಗುಳ)

ತಿರ್ಬಡ್ಯಾ (ನಾ)= ತಿರಿದುಂಬುವುದನ್ನು ಮೆಚ್ಚಿದವನು; ಭಿಕ್ಷುಕ; ಭಿಕಾರಿ. (ಬೈಗುಳ)

ತಿರ್ಬಂದ್ರಿ (ನಾ)= ಸಂಚಾರಿ ಮಂಗನ ಗುಣದವನು(ಳು) (ಬೈಗುಳ)

ತಿರ್ಬೋಕಿ (ನಾ)= ಭಿಕ್ಷುಕ; ಯಾಚಕ (ಬೈಗುಳ).

ತಿರ್ಮುಕ (ನಾ)= ತ್ರಿಮುಖವುಳ್ಳವ; ಶಿವ.

ತಿರ್ಸಟ (ನಾ) ಮ.= ಅರವತ್ತೂ್ಮರು; ಎದುರು ಹಾಕಿಕೊಳ್ಳುವವನು; ಹುಂಬ.

ತಿರ್ಸಾಲ (ನಾ)= ಮತ್ತೊಂದನೆಯ ಸಲ; ಮರುಸಲ.

ತಿರ್ಸೂಲ (ನಾ)= ತ್ರಿಶೂಲ; ಶಿವನ ಕೈಯ ಆಯುಧ.

ತಿಲ್ಲಾಕ (ಅ)= ತಿನ್ನಾಕ; ತಿನ್ನಲಿಕ್ಕೆ; ತಿನ್ನುವುದಕ್ಕೆ.

ತಿವಿ (ಕ್ರಿ)= ಚುಚ್ಚು; ನೆಡುವಂತೆ ಮಾಡು; ಒಳಸೇರುವಂತೆ ಮಾಡು.

ತಿಸರಾ (ವಿ)= ಮೂರನೆಯ.

ತಿಸರಿ (ನಾ)= ಮೂರನೆಯ; ಮೂರನೇವರ್ಗ.

ತಿಳಿ (ವಿ)= ನಿರ್ಮಲ; ಸ್ವಚ್ಛ; ಶುದ್ಧ (ಹಾಡು: ತಿಳಿಬಾಳಿರಬೇಕೆ ನಿಂಗವ್ವ। ನಿನ ಅಂಗದ ಗುಣಗಳ ಅಳಿಯವ್ವ)

ತಿಳಿ (ಕ್ರಿ)= ಅರಿತುಕೊ; ಅರ್ಥಮಾಡಿಕೊ; ಅರ್ಥ ಹೇಳು; ವಿವರಿಸು.

ತಿಳಿಗೇಡಿ (ನಾ)= ಅಕ್ಕಲಗೇಡಿ; ಅವಿವೇಕಿ; ಬುದ್ಧಿಗೇಡಿ.

ತಿಳಿತುಪ್ಪ = ತಿಳಿಯಾದ ತುಪ್ಪ.

ತಿಳಿಬಾಳು (ನಾ) = ನಿರ್ಮಲ ಬದುಕು.

ತಿಳಿಬ್ಯಾಳಿ (ನಾ)= ನೀರಿನಂತೆ ತಿಳಿಯಾದ ಸಾರು; ತಿಳಿಯಾಗಿರುವ ಹುಳಿ ಬೇಳೆ ಸಾರು.

ತಿಳಿವಂತ (ನಾ)= ಬುದ್ಧಿವಂತ; ಜ್ಞಾನಿ; ಬಲ್ಲವ.

ತಿಳಿಸು (ಕ್ರಿ)= ವಿವರಿಸು; ತಿಳಿವಳಿಕೆ ಮೂಡಿಸು; ಅರಿತುಕೊಳ್ಳುವಂತೆ ಮಾಡು.

ತಿಳಿ ಹಾದಿ (ನಾ)= ಒಳ್ಳೆಯ ಹಾದಿ; ಒಳ್ಳೆಯ ನಡತೆ.

ತಿಳ್ಕೊ = ತಿಳಿದುಕೊ.

ತಿಳಿಹೇಳು (ಕ್ರಿ)= ತಿಳಿಸಿ ಹೇಳು; ವಿವರಿಸು; ಸಮಜಾಯಿಸು.

ತಿಳ್ಗೂಳ (ನಾ) ಮ.= ಎಳ್ಳುಬೆಲ್ಲ.

ತಿಳುವಳ್ಕಿ (ನಾ)= ತಿಳಿವಳಿಕೆ; ಅರಿವು; ಜ್ಞಾನ; ವಿವೇಕ.

ತಿಳ್ಯಾಕತಿ (ನಾ)= ಒಗಟಿನ ಕತೆ; ತಿಳಿಯುವ ಕತೆ; ಒಡ್ಗತೆ; ಸಮಸ್ಯೆಯ ಕತೆ; ಒಗಟು.

ತಿಳ್ಯಾದು (ಅ)= ತಿಳಿಯುವುದು.

ತೀಜು (ನಾ)= ಚೀಜು; ವಸ್ತು; ದಿನ್ನು; ಒಡವೆ; ದಾಗಿಣ.

ತೀಟಿ (ನಾ)= ತೀಟೆ; ತಿಂಡಿ; ತುರಿ; ಸೊಕ್ಕು.

ತೀಡು (ನಾ)= ಪ್ರಕಾರ; ನಮೂನೆ; ರೀತಿ. (ಉದಾ: ನೂರಾರು ತೀಡು ಅಕ್ಕಿ ಇರ್ತಾವ)

ತೀಡು (ಕ್ರಿ)= ತಿದ್ದು; ಸವರು; ಉಜ್ಜು; ತಿಕ್ಕು; ಬರೆದಿದ್ದರ ಮೇಲೆ ಮತ್ತೆ ಮತ್ತೆ ಬರೆ.

ತೀನ (ನಾ) ಹಿಂ.= ಮೂರು.

ತೀನ ತೇರಾನೌ ಅಠರಾ (ನುಡಿ) ಮ.= ಹಾಳು ಬೀಳು; ದಾರೋದಿಕ್ಕು ದಿಕ್ಕಾಪಾಲು.

ತೀನತ್ಯಾರ (ನಾ) ಮ.= ಹಾಳು ಬೀಳು; ತೀನತೇರಾ.

ತೀನಪಾರ (ನಾ) ಮ.= ಮೂರನೇ ಪ್ರಹರ; ಹಗಲು ಮೂರು ಗಂಟೆಯ ಸಮಯ; ಒಂಬಾತಾಸಿ; ಒಂಬತ್ತು ತಾಸಿ.

ತೀನಿ (ನಾ)= ಮೂಗು ಸ್ವಚ್ಛಗೊಳಿಸುವಿಕೆ; ಸುಂಬಳ ಕಳೆಯುವಿಕೆ; ಶಾಲೆಯ ಮಕ್ಕಳು ಸುಂಬಳ ಕಳೆಯಲು ಮಾಸ್ತರರಿಗೆ ಪರವಾನಿಗೆಯನ್ನು ಕೇಳುವಿಕೆ; ಮೂರು.

ತೀನ್ಮ್‌ಜಲಾ (ವಿ)= ಮೂರಂತಸ್ತುಳ್ಳ.

ತೀನ್ಸೈ = ಮುನ್ನೂರು.

ತೀನ್ಸೇ ಚಾರೀ (ನಾ)ಮ.= ಇಸ್ಪಿಟ್ಟಾಟದ ಒಂದು ಪ್ರಕಾರ.

ತೀನಸೇ ಸಾಟಿ ಮಾತು ಖರ್ಚು ಮಾಡು (ನುಡಿ)= ಅತಿ ಮಾತಾಡು; ಬಾಯಿಬಡಿ.

ತೀಬುರು (ನಾ)= ತಿಬ್ಬುರು; ತೀವ್ರತೆ; ತಿಮ್ಮುರು; ಸೊಕ್ಕು; ಅಬ್ಬರ.

ತೀಬುರು ನೋಡು (ಕ್ರಿ)= ಸೊಕ್ಕುಗಮನಿಸು.

ತೀರ್ (ನಾ)= ಬಾಣ.

ತೀರಕಮಾನ (ನಾ) ಹಿಂ.= ಬಾಣ ಮತ್ತು ಬಿಲ್ಲು.

ತೀರು (ಕ್ರಿ)= ಸಾಯಿ; ಸಾಯು; ತೀರಿಹೋಗು; ಮುಕ್ತಾಯಗೊಳ್ಳು; ಮುಗಿದು ಹೋಗು.

ತೀರ್ಕೊಂಡ (ಕ್ರಿ)= ಸತ್ತು ಹೋದ.

ತೀರ್ತ (ನಾ) ಸಂ.= ಪವಿತ್ರ ಜಲ; ಲಿಂಗಾಭಿಷೇಕದ ನೀರು; ದೇವರ ಅಭಿಷೇಕದ ನೀರು; ತೀರ್ಥ.

ತೀಸರಾ (ವಿ) ಹಿಂ.= ಮೂರನೆಯ

ತೀಸರಿ (ನಾ) ಹಿಂ.= ಮೂರನೇ ವರ್ಗ.

ತೀಸವಾ ಮೈನಾ (ನಾ) ಹಿಂ.= ಮೂವತ್ತು ದಿನಗಳ ತಿಂಗಳು.

ತೀಸು (ನಾ) ಹಿಂ.= ಮೂವತ್ತು.

ತೀಳ್ಗೂಳ (ನಾ) ಮ.= ಎಳ್ಳುಬೆಲ್ಲ; ತಿಳ್ಗೂಳ.

ತುಂಟ (ನಾ)= ಘೊಂಟ; ಹಟಮಾರಿ; ಕುಚೇಷ್ಟೇಗಾರ.

ತುಂಡಾಗು (ಕ್ರಿ)= ಮುರಿದು ತುಕಡಿಯಾಗು.

ತುಂಡು (ನಾ)= ತುಕಡಿ; ತುಣುಕು; ಚೂರು.

ತುಂಡು ಭೀಳು (ಕ್ರಿ)= ತುಕಡಿಯಾಗು; ತುಣುಕಾಗು; ಚೂರಾಗು.

ತುಂಬು (ನಾ)= ದೇಟು; ದೇಟಿನ ಬುಡ; ಜೋಳದ ದಂಟಿನ ಬುಡ. (ಗಾದೆ: ತಿಂಬಾಥನಾ ತಿಂದು, ತುಂಬು ಖ್ಯೆಂ ಅಂದ್ನಂತ।); ಕೆರೆಯ ತೂಬು; ಪುರುಷನ ಜನನೇಂದ್ರಿಯ; ಸೌತೆ ಅಥವಾ ಮಾವಿನ ಕಾಯಿಯ ದೇಟು.

ತುಂಬುಕಡಿ (ಕ್ರಿ)= ತುಂಬಿನಿಂದ ಮೆಣಸಿನ ಕಾಯಿಯನ್ನು ಬೇರ್ಪಡಿಸು.

ತುಂಬುಗಾಯಿ (ನಾ)= ತುಂಬು ಸಹಿತ ಇಲ್ಲವೆ ದೇಟು ಸಹಿತ ಮಾಡಿದ ಬದನೆಕಾಯಿಪಲ್ಲೆ.

ತುಂಬುಚ್ಚು (ಕ್ರಿ)= ಕಾಯಿಯನ್ನು ದೇಟಿನಿಂದ ಬೇರ್ಪಡಿಸು.

ತುಂಬು ತಿರುವು (ಕ್ರಿ)= ಕೆರೆಯ ನೀರು ಕಾಲುವೆಗೆ ಬಿಡು; ಕೆರೆಯ ನೀರಿನ ಹೊರ ಹರಿವನ್ನು ಬಂದು ಮಾಡು.

ತುಕಡಿ (ನಾ)= ತುಂಡು; ತುಣುಕು; ರೊಟ್ಟಿ ಚೂರು.

ತುಕಡಿ ಮಾಡು (ಕ್ರಿ)= ತುಂಡು ಗೊಳಿಸು; ಕಡಿದು ಚೂರು ಮಾಡು.

ತುಕಡ್ಯಾದಾಸ (ನಾ)= ಒಬ್ಬ ಮರಾಠಿ ಸಂತನ ಹೆಸರು.

ತುಕಾರಾಮ (ನಾ)= ಮಹಾರಾಷ್ಟ್ರದ ಒಬ್ಬ ಶ್ರೇಷ್ಠ ಸಂತನಾದ ತುಕಾರಾಮ ಮಹಾರಾಜ.

ತುಟಾರ (ನಾ)= ಕೊರತೆ; ಮುಗಿತಾಯದ ಅಂಚಿನಲ್ಲಿದ್ದದ್ದು.

ತುಟಾರ್ಕಬಾ (ಕ್ರಿ)= ಮುಗಿತಾಯಕ್ಕೆ ಸಮೀಪಿಸು; ಸಾವಿನ ಸಮಯಕ್ಕೆ ಸಮೀಪಿಸು.

ತುಟಾವಟಿ (ನಾ)= ಕಡಿಮೆ ಎಂಬ ಭಾವನೆ; ಕೊರತೆ; ಕಡಿಮೆ ಬೀಳುವಿಕೆ.

ತುಟಿ (ನಾ)= ಅಧರ; ಓಷ್ಠ (ಜಾನಪದ ಹಾಡು: ಅಳುವ ಕಂದನ ತುಟಿಯು। ಹವಳದ ಕುಡಿ ಹಂಗ। ಕುಡಿ ಹುಬ್ಬು ಬೇವಿನೆಸಳಂಗ); ಕೊರತೆ; ಕಮ್ಮಿ.

ತುಟಿ ಕಚ್ಚು (ಕ್ರಿ)= ಅಧರವನ್ನು ಹಲ್ಲಿನಿಂದ ಅದುಮು; ಬಿದ್ದ ಮನುಷ್ಯನ ತುಟಿ ಹಲ್ಲುಗಳಲ್ಲಿ ಸಿಗು; ಮೌನವಾಗಿ ತುಟಿಯನ್ನು ಹಲ್ಲಿನಿಂದ ಅದುಮಿ ಇಂಗಿತವನ್ನರುಹು; ಕೋಪದಿಂದ ಹಲ್ಲುಗಳಲ್ಲಿ ನಾಲಗೆಯನ್ನು ಜೋರಾಗಿ ಅದುಮು; ಆಶ್ಚರ್ಯಪಡು.

ತುಟಿ ಭೀಳು (ಕ್ರಿ)= ಕಡಿಮೆಯಾಗು; ಕೊರತೆಯಾಗು; ಅರೆಯಾಗು; ಅರೆಬೀಳು

ತುಟುಕು ಮುಟುಕು (ವಿ)= ಸಣ್ಣಪುಟ್ಟ; ತುಸುತುಸು; ಕ್ಷುಲ್ಲಕ; ಅಲ್ಪಸ್ವಲ್ಪ

ತುಟುಗೊ (ಕ್ರಿ)= ತೊಟ್ಗೊ; ತೊಡು; ತೊಟ್ಟುಕೊ; ಉಡು.

ತುಟ್ವಾದ (ಕ್ರಿ)= ಸುಟ್ವಾದ; ಸುಟ್ಟಿದೆ (ಬಾಲಭಾಷೆ)

ತುಟ್ಟುತು (ಕ್ರಿ)= ಸುಟ್ಟಿತು (ಬಾಲಭಾಷೆ)

ತುಡು (ಕ್ರಿ)= ಸುಡು (ಬಾಲಭಾಷೆ); ತೊಡು; ತೊಟ್ಟುಕೊ.

ತುಡುಂಖಾನ (ನಾ) ಉ.= ಶೂರ; ವೀರ; ಬಹಾದ್ದೂರ.

ತುಡುಗಾಣಿ (ನಾ)= ತುಡುಗುಣಿ; ಕಳ್ಳ; ಕಳ್ಳತನ ಮಾಡುವವನು

ತುಡುಗು (ವಿ.)= ಕಳವು; ಕಳ್ಳ ಗುಣದ.

ತುಡುಗುದನ (ನಾ)= ಕಳ್ಳದನ; ಮಾಲೀಕನ ಹಿಡಿತ ಮೀರಿದ ದನ.

ತುಡುಗು ಧಂದ್ಯಾ (ನಾ)= ಕಳ್ಳತನ.

ತುಣುಕು (ನಾ)= ತುಂಡು; ತುಕಡಿ; ಚೂರು.

ತುಣ್ಣಿ (ನಾ)= ಶಿಶ್ನ; ಪುರುಷನ ಜನನೇಂದ್ರಿಯ; ಗಂಡು ಪ್ರಾಣಿಯ ಜನನೇಂದ್ರಿಯ.

ತುತ್ತಿಕಾಯಿ (ನಾ)= ಸೆಹತೂತ ಹಣ್ಣು; ಹಿಪ್ಪುನೇರಳೆಕಾಯಿ.

ತುತ್ತು (ನಾ)= ಒಂದು ಸಲಕ್ಕೆ ನುಂಗಲು ಸಾಧ್ಯವಾಗುವಷ್ಟು ಆಹಾರ; ಕವಳ.

ತುತ್ತು ತುತ್ತಿಗೆ (ಅ)= ಪ್ರತಿ ತುತ್ತಿಗೆ.

ತುತ್ಯಾ (ನಾ)= ಮೈಲುತುತ್ಯ; ತಾಮ್ರದ ಸಲ್ಫೈಡು.

ತುದಿ (ನಾ)= ಕೊನೆ; ಅಂತ್ಯ.

ತುದಿಗಾಲು (ನಾ)= ಮುಂಗಾಲು; ಕಾಲಿನ ತುದಿ.

ತುದಿಗಾಲ್ಮ್ಯಾಲನಿಂತಾನ (ನು) = ತುರ್ತು ತಯಾರಿದ್ದಾನೆ; ಸಿದ್ಧನಾಗಿದ್ದಾನೆ.

ತುದಿಬಳ್ಳು (ನಾ)= ಬೆರಳಿನ ಕೊನೆ; ತುದಿಬೆರಳು.

ತುದಿಮಟ್ಟ (ಅ)= ಕೊನೆಯವರೆಗೆ; ತುತ್ತು ತುದಿಗೆ.

ತುದಿಮುಟ್ಟು (ಕ್ರಿ)= ಕೊನೆಗೆ ಮುಟ್ಟು; ಗುರಿಗೆ ತಲುಪು.

ತುನ್ ತುನಿ (ನಾ)= ಗೀಗೀಪದ ಹಾಡುವಾಗ; ಗೊಂದಳ ಹಾಕುವಾಗ ಬಳಸಲಾಗುವ ತಂತಿವಾದ್ಯ.

ತುನ್‌ತುನಿಭಾರ್ಸು (ನು) = ಬಾಲಬಡಿ; ನುಡಿದಂತೆ ನುಡಿ; ತಂತುವಾದ್ಯ ನುಡಿಸು.

ತುಪ್ಪ (ನಾ)= ಬೆಣ್ಣೆಕಾಸಿ ತೆಗೆದ ಸ್ನಿಗ್ಧ; ಘೃತ; ಜೇನು (ಗಾದೆ: ತುಪ್ಪದಾಗ ನೊಣಾ ಬಿದ್ರ ಹಿಪ್ಪಿ ಭೀಟಾಂವ)

ತುಪ್ಪದ್ಹೀರಿ (ನಾ)= ಒಂದು ಬಗೆಯ ತರಕಾರಿ ಬಳ್ಳಿ ಮತ್ತು ಅದರ ಕಾಯಿ.

ತುಪ್ಪದ್ಹೀಪ (ನಾ)= ಹಣತೆಯಲ್ಲಿ ತುಪ್ಪ ಮತ್ತು ಬತ್ತಿ ಹಾಕಿ ಉರಿಸಲಾಗುವ ಜ್ಯೋತಿ.

ತುಪ್ಪು (ನಾ)= ತುಪ್ಪ (ನೋಡಿರಿ)

ತುಬಾಕು (ನಾ)= ಟುಬಾಕು; ತುಪಾಕಿ; ಬಂದೂಕು.

ತುಬಾಕು ಹಾರ್ಸು (ಕ್ರಿ)= ಬಂದೂಕು ನಡೆಸು.

ತುಮಾರೆ ಮಾರಾಜಕೀಜಯ (ನುಡಿ) ಹಿಂ.= ನಿಮ್ಮಂತೆಯೇ ಆಗಲಿ; ನಿಮ್ಮ ಮಾತಿಗೆ ಒಪ್ಪಿಗೆ ಇದೆ.

ತುಮ್ಡಿ (ನಾ)= ತುಮ್ಮಡಿ; ಹುಣ್ಣಿನ ಕೀವನ್ನು ಬಾಯಿಯಿಂದ ಎಳೆದು ತೆಗೆಯಲು ಬಳಸುವ ಆಲಿಕೆಯಂತಹ ಉಪಕರಣ.

ತುಮ್ರಿ (ನಾ)= ಒಂದು ಪ್ರಕಾರದ ಕಾಡು ಸಸ್ಯ; ಅಂಗಳ ಕಸಗೂಡಿಸಲು ಬಳಸುವ ಕಾಡುಸಸ್ಯ.

ತುರಾ (ನಾ) ಉ.= ತುರಾಯಿ; ಗಂಡು; ಕಲ್ಗಿವಿರುದ್ಧ ಹಾಡುವ ತುರ್ರಾ ಹಾಡು;

ಕಿರೀಟ; ಹೂಗೊಂಚಲು; ನವಿಲಿನ ತಲೆ ಕಿರೀಟ.

ತುರಾಟ (ನಾ)ಮ.= ತೊಗರೆ ಕಡ್ಡಿಯಿಂದ ತಯಾರಿಸಿದ ಝಾಡು.

ತುರಾಯಿ (ನಾ)= ತುರಾ; (ನೋಡಿರಿ)

ತುರಿ (ನಾ)= ತುರಿಸುವಿಕೆ; ತಿಂಡೆ;

ತುರಿಸು (ನಾ)= ತಿಂಡಿಕೊಟ್ಟಲ್ಲಿ ಉಗುರಿನಿಂದ ಕೆವರು.

ತುರುಕ (ನಾ)= ತುರ್ಕ; ಮುಸಲ್ಮಾನ.

ತುರುಕು (ಕ್ರಿ)= ಒಳಗೆ ಸೇರಿಸು; ಒತ್ತಿ ತುಂಬು; ಒತ್ತು.

ತುರುಬು (ನಾ)= ತುರ್ಬು; ತಲೆಗೂದಲಿನ ಸುರುಳಿಗಂಟು; ಮುಡಿ.

ತುರುಸು (ಕ್ರಿ)= ತಿಂಡೆ ಕೊಟ್ಟಲ್ಲಿ ಉಗುರಿನಿಂದ ಕೆರೆ.

ತುರ್ಕ (ನಾ)= ತುರುಕ; ಮುಸಲ್ಮಾನ.

ತುರ್ಕಣಿ (ನಾ)= ತುರ್ಕಜನಾಂಗ; ತುರ್ಕಾಣಿ; ಮುಸಲ್ಮಾನ ಸಮಾಜ.

ತುರ್ಕಾಣಿ (ನಾ)= ತುರ್ಕಣಿ (ನೋಡಿರಿ)

ತುರ್ತು (ಅ)= ಈಗಿಂದೀಗ; ತಕ್ಷಣ

ತುರ್ಫೈ (ನಾ)= ಕೈಹೊಲಿಗೆ; ತುರ್ಫಿ; ತುರ್ಪೈ.

ತುರ್ಫೈ ಮಾಡು (ಕ್ರಿ)= ಕೈ ಹೊಲಿಗೆ ಹಾಕು.

ತುರ್ಬಿನ ಹುವ್ವ (ನಾ)= ತುರುಬಿನಲ್ಲಿ ಧರಿಸುವ ಬೆಳ್ಳಿ ಅಥವಾ ಬಂಗಾರದ ಹೂವು.

ತುರ್ಬು (ನಾ)= ತುರುಬು (ನೋಡಿರಿ).

ತುರ್ಮುಂಡಿ (ನಾ)= ಜೊರು; ಒತ್ತಡ.

ತುರ್ಮುಂಡಿಕುಡು (ಕ್ರಿ)= ಜೋರು ಹಚ್ಚು; ಒತ್ತಡ ಹೆಚ್ಚಿಸು; ಮೇಲೇರಿ ಹೋಗು.

ತುರ್ರಾ (ನಾ)= ತುರಾ (ನೋಡಿರಿ).

ತುರ್ರಾಬರು (ಕ್ರಿ)= ಗರ್ವಬರು.

ತುರ್ಸು (ಕ್ರಿ)= ತುರಿಸು (ನೋಡಿರಿ).

ತುಲಾಸು (ಕ್ರಿ)= ತೂಕ ಮಾಡು; ತೂಗು; ಭಾರ ನಿರ್ಧರಿಸು.

ತುಲ್ಲು (ನಾ)= ಸ್ತ್ರೀಜನನೇಂದ್ರಿಯ; ಯೋನಿ.

ತುವಾಲು (ನಾ)= ಸೆಲ್ಲೆ; ಟಾವೆಲ್ಲು.

ತುಸು (ವಿ.)= ಕೊಂಚ; ಸ್ವಲ್ಪ; ಥೋಡೆ.

ತುಳಸಿ (ನಾ)= ಪೂಜೆಗೊಳ್ಳುವ ಒಂದು ಪ್ರಕಾರದ ಗಿಡ.

ತುಳಿ (ಕ್ರಿ)= ಕಾಲಿಟ್ಟು ತಳಕ್ಕೆ ಅದುಮು; ಮೆಟ್ಟು; ನಾಶ ಮಾಡು.

ತುಳ್ಗಿ (ನಾ)= ತುಳಿಗೆ; ತುಳಿತ; ತುಳಿಯುವಿಕೆ; ಬಾಗಿಲಿನ ಕೆಳ ತೋಳು.

ತುಳ್ಜಾಪೂರು (ನಾ)= ಔರಾದ ತಾಲೂಕಿನ ಒಂದು ಹಳ್ಳಿ; ಮಹಾರಾಷ್ಟ್ರದಲ್ಲಿಯ ತುಳ್ಜಾ ಭವಾನಿಯ ತೀರ್ಥಕ್ಷೇತ್ರ.

ತುಳ್ಜಾ ಭವಾನಿ (ನಾ)= ಅಂಬಾ ಭವಾನಿ; ತುಳ್ಜಾ ಪೂರ ಕ್ಷೇತ್ರದ ಅಂಬಾ ಭವಾನಿ.

ತುಳ್ಸಿಕಟ್ಟೆ (ನಾ) = ತುಳಸಿಗಿಡದ ಗದ್ದುಗೆ.

ತುಳ್ಸಿ ಲಗ್ನ (ನಾ)= ತುಳ್ಸೀ ಗಿಡದ ಮದುವೆ; ತುಲಸೀ ಗಿಡದೊಂದಿಗೆ ವಿಷ್ಣುವಿನ ಮದುವೆ.

ತುಳ್ಸು (ಕ್ರಿ)= ತುಳಿಸು; ಎತ್ತುಗಳ ಹಂತಿ ಕಟ್ಟಿ ಸೆಜ್ಜೆ, ಜೋಳದ ತೆನೆಗಳನ್ನು ತುಳಿಸು.

ತೂಕ (ನಾ)= ತಕ್ಕಡಿಯಲ್ಲಿ ತೂಗಿ ವಸ್ತುವಿನ ಭಾರವನ್ನು ನಿರ್ಧರಿಸುವಿಕೆ; ಭಾರ; ಒಜ್ಜೆ; ವಜನು.

ತೂಕಾ (ನಾ)= ತೂಕ (ನೋಡಿರಿ).

ತೂಕಾ ಮಾಡು (ಕ್ರಿ)= ವಸ್ತುವನ್ನು ತಕ್ಕಡಿಯಲ್ಲಿಟ್ಟು ತೂಗಿ, ಅದರ ಭಾರವನ್ನು ನಿರ್ಧರಿಸು.

ತೂಕಾಹಾಕು (ನುಡಿ)= ವಿಚಾರ ಮಾಡು (ಹಾಡು : ತತ್ವಪದ ವ್ಯಾಖ್ಯಾ ಬಂದಗ್ಯಾರ್‍ಡಾರಾ ।ಮನಸಿಗೆ ತೂಕ ಹಾಕೊ ಜರಾ)

ತೂಕುಡ್ಕಿ (ನಾ)= ತೂಕಡಿಕೆ; ಮಂಪರು; ನಿದ್ದೆಯಿಂದ ಕುಳಿತಲ್ಲಿಯೇ ವಾಲಾಡುವಿಕೆ.

ತೂಕುಡ್ಕಿ ಹೊಡಿ (ಕ್ರಿ)= ಕುಳಿತಲ್ಲಿಯೇ ವಾಲಾಡುತ್ತ ನಿದ್ದೆಯನ್ನು ಅನುಭವಿಸು.

ತೂಕುಡ್ಸು (ಕ್ರಿ)= ತೂಕಡಿಸು; ನಿದ್ದೆಯಿಂದ ಕುಳಿತಲ್ಲಿಯೇ ವಾಲಾಡು.

ತೂಗಾಟ (ನಾ)= ಹೊಯ್ದಾಟ; ತೂಗಾಡುವಿಕೆ; ಅತ್ತಿತ್ತ ವಾಲುವಿಕೆ; ಡೋಲಾಯ ಮಾನ.

ತೂಗಾಮಂಚ (ನಾ)= ತೊಟ್ಟಿಲಂತೆ ತೂಗಾಡುವ ಮಂಚ.

ತೂಗು (ಕ್ರಿ)= ತೂಕಮಾಡು; ವಸ್ತುವನ್ನು ತಕ್ಕಡಿಯಲ್ಲಿ ತೂಗಿ ಭಾರ ನಿರ್ಧರಿಸು; ಉಯ್ಯಾಲೆಚಲಿಸುವಂತೆ ಮಾಡು.

ತೂಗ್ಸು (ಕ್ರಿ)= ತೂಗಿಸು; ತೂಕ ಮಾಡಿಸು.

ತೂಟಿ (ನಾ)= ಟೂಟಿ; ನಳ; ನಲ್ಲಿ.

ತೂಟಿ ತಿರುವು (ಕ್ರಿ)= ನಳತಿರುವಿ ನೀರು ಬರುವಂತೆ ಇಲ್ಲವೆ ಬರದಂತೆ ಮಾಡು.

ತೂತಾ (ನಾ)= ತೂತು; ರಂಧ್ರ.

ತೂತಾ ಭೀಳು (ಕ್ರಿ)= ರಂಧ್ರ ಉಂಟಾಗು.

ತೂತಾ ಹಾಕು (ಕ್ರಿ)= ರಂಧ್ರ ಕೊರೆ; ತೂತು ಬೀಳುವಂತೆ ಮಾಡು; ತಳವನ್ನು ಭೇದಿಸು.

ತೂತು (ನಾ)= ರಂಧ್ರ; ತೂತಾ (ಗಾದೆ: ಮಾತು ಮನಿ ಮುಣುಗುಸ್ತು; ತೂತು ದೋಣಿ ಮುಣುಗುಸ್ತು); ಯೋನಿ.

ತೂತುಗಲ್ಲ (ನಾ) = ಕುಳಿ ಬಿದ್ದ ಕೆನ್ನೆ.

ತೂತು ಭೀಳು (ಕ್ರಿ)= ರಂಧ್ರ ಉಂಟಾಗು.

ತೂತು ಹಾಕು (ಕ್ರಿ)= ರಂಧ್ರ ಕೊರೆ; ತಳವನ್ನು ಭೇದಿಸು.

ತೂಫಾನ್ (ನಾ) ಹಿಂ.= ಬಿರುಗಾಳಿ; ಚಂಡ ಮಾರುತ; ಅತಿವೇಗದ ಗಾಳಿ.

ತೂಮಾರ (ನು) ಹಿಂ.= ಮಿತಿ ಮೀರಿ ಹೊಡೆಯುವಿಕೆ.

ತೂಮಾರ್ ಮೈಮಾರ (ನು)= ಅನೇಕ ಜನರು ಸುತ್ತು ಹಾಕಿ ಹೊಡೆಯುವಿಕೆ.

ತೂರಾ ಬುಟ್ಟಿ (ನಾ)= ತೂರುವ ಬುಟ್ಟಿ; ಹೊಟ್ಟು ಮಿಶ್ರಿತ ಧಾನ್ಯವನ್ನು ಗಾಳಿಗೆ ಎದುರಾಗಿ ಸುರುವಿ ಧಾನ್ಯ ಮತ್ತು ಹೊಟ್ಟು ಬೇರ್ಪಡಿಸಲು ಬಳಸುವ ಲಕ್ಕಿಯ ಬುಟ್ಟಿ; ತಟ್ಟೆಯಂತೆ ಅಗಲ ತಳದ ಚಿಕ್ಕಬುಟ್ಟಿ.

ತೂರಿ ತೂರಿ ಹೋಗು (ನು)= ಮತ್ತೆ ಮತ್ತೆ ಮೇಲೇರಿ ಹೋಗು

ತೂರು (ಕ್ರಿ)= ಹೊಟ್ಟು ಮಿಶ್ರಿತ ಧಾನ್ಯವನ್ನು ಗಾಳಿಗೆ ಎದುರಾಗಿ ಹಿಡಿದು ಸುರುವಿ ಹೊಟ್ಟಿನಿಂದ ಬೇರ್ಪಡಿಸು (ಗಾದೆ: ಘಾಳಿ ಬಿಟ್ಟಾಗ ತೂರ್ಕೊಂಡವ್ನೆ ಜಾಣ).

ತೂರ್ಗಾಲು (ನಾ)= ವೇಗವಾದ ಓಟ; ನಾಗಾಲೋಟ; ಮೇಲೇರಿ ಹೋಗುವಿಕೆ.

ತೂರ್ಗಾಲು ಕುಡು (ಸು)= ಮೇಲೇರಿ ಹೋಗು; ಆಕ್ರಮಿಸು; ಅತಿವೇಗದಿಂದ ಓಡು.

ತೂರ್ತಾತೂರ್ತಾ (ದ್ವಿ)= ತೂರುತ್ತ ತೂರುತ್ತ; ತೂರುತ್ತಿರುವಂತೆಯೇ.

ತೂಲು (ವಿ.)= ತೋಲು; ಬಹಳ; ಅನಗಾಡ; ಬಕ್ಕ.

ತೆಂಡರ್ಕಿ (ನಾ)= ತೆಂಡರಿಕೆ; ತಿಣುಕುವಿಕೆ; ಮೂಲವ್ಯಾಧಿಯಿಂದ ಉಂಟಾದ ಅತಿ ತಿಣುಕುವಿಕೆ; ಗಬ್ಬದ ಆಕಳಿಗೆ ಹೋರಿ ಏರುವುದರಿಂದ ಉಂಟಾಗುವ ತಿಣುಕುವಿಕೆ.

ತೆಂಡುರ್ಕಿನ ಘಾಳಿ (ನಾ) = ತೂಫಾನದಿಂದ ಉಂಟಾದ ಶೀತ ವಾತಾವರಣ.

ತಂತೀಸು (ನಾ) ಮ. ಮೂವತ್ತು ಮೂರು

ತೆಂತೀಸ್ಕೋಟಿ ದೇವತ್ರು= ಮೂವತ್ಮೂರು ಕೋಟಿ ದೇವತೆಗಳು.

ತೆಕ್ಕಿ (ನಾ)= ತೆಕ್ಕೆ; ಅಪ್ಪುಗೆ; ಆಲಿಂಗನ; ಎರಡು ತೋಳುಗಳಲ್ಲಿ ಒತ್ತಿ ಹಿಡಿದು ಅಪ್ಪುವಿಕೆ; ಎರಡು ಕೈಗಳಲ್ಲಿ ಒತ್ತಿ ಹಿಡಿಯಬಹುದಾದ ಹುಲ್ಲು; ಕಣಿಕೆ ಇತ್ಯಾದಿ; ತೆಕ್ಕೆ ಭಾರ.

ತೆಕ್ಕಿಗ್ಬೀಳು (ಕ್ರಿ)= ಆಲಿಂಗಿಸು; ಅಪ್ಪು; ತೆಕ್ಕೆಯಲ್ಲಿ ಹಿಡಿ.

ತೆಕ್ಕಿ ತೆಕ್ಕಿ (ದ್ವಿ)= ತೆಕ್ಕೆಯ ಪ್ರಮಾಣದಲ್ಲಿ.

ತೆಕ್ಕಿಗಿ ಹಾಯ್ಕೊ (ಕ್ರಿ)= ಅಪ್ಪಿಕೊ.

ತೆಕ್ಕಿ ಘುಂಬ (ವಿ)= ತೆಕ್ಕೆಯಲ್ಲಿ ಆವರಿಸುವಷ್ಟು

ತೆಕ್ಕಿ ಸೋಮಣ್ಣ (ನಾ)= ತೆಕ್ಕೆ ತೆಕ್ಕೆ ಹೊತ್ತು ತರುವವ ಮತ್ತು ತೆಕ್ಕೆ ತೆಕ್ಕೆ ಕೂಳು ತಿನ್ನುವವ; ಹಿಡಿಹಿಡಿ ತಿಂದು ಇನ್ನೂ ಬೇಕೆನ್ನುವವ.

ತೆಕ್ಯಾ (ನಾ) ಉ.= ಮುಸಲ್ಮಾನ ಫಕೀರರ ವಸತಿ; ಸೂಫಿ ಸಂತರ ವಸತಿ; ಬೆನ್ನಾಸರೆ.

ತೆಗಿ (ಕ್ರಿ)= ತೆಗೆ; ಈ ಚೆಗೆ ತರು; ಮೇಲಕ್ಕೆತ್ತು ಹೊರಗೆಳೆ; ಕೀಳು; ಕಿತ್ತು ಹಾಕು; ಉಚ್ಚು.

ತೆಗಿಸು (ಕ್ರಿ)= ತೆಗೆಯಿಸು; ಹೊರಗೆಳೆಯಿಸು; ಮೇಲಕ್ಕೆ ಎತ್ತಿಸು; ಕಿತ್ತಿಸು; ಉಚ್ಚಿಸು; ಬ್ಯಾಂಕಿನಿಂದ ಹಣ ಹೊರಗೆ ತೆಗೆಯಿಸು.

ತೆಗ್ಕುಡು (ಕ್ರಿ)= ತೆಗೆದು ಕೊಡು; ಹೊರಗೆ ತೆಗೆದು ಕೊಡು.

ತೆಗ್ಗಾಗು (ಕ್ರಿ)= ತಗ್ಗು ಉಂಟಾಗು; ಕುಳಿಭೀಳು.

ತೆಗ್ಗಿನಾನ (ಅ)= ತಗ್ಗಿನಲ್ಲಿಯ; ಕುಳಿಯಲ್ಲಿಯ (ಒಗಟು: ತೆಗ್ಗಿನಾನ ಪಾರ ಬಗ್ಗಿ ಬಗ್ಗಿ ನೋಡ್ತಾದ–ಏತದ ಬಕ್ಕಣ).

ತೆಗ್ಗು (ನಾ)= ತಗ್ಗು; ಹಳ್ಳ; ಕುಣಿ (ಗಾದೆ: ತೆಗ್ಗಿಗಿ ಬಸುರಾಗತಾದ, ಹೊಡ್ಡಿಗಿ ಹಡಿತಾದ. ಏತದ ಬಕ್ಕಣ)

ತೆಗ್ಗುತೆವರು (ನಾ)= ತಗ್ಗು ದಿನ್ನೆ; ಹಳ್ಳ ಒಡ್ಡು.

ತೆಗ್ಗುಭೀಳು (ಕ್ರಿ)= ತಗ್ಗು ಉಂಟಾಗು; ಕುಳಿಯಾಗು; ಹಳ್ಳ ಉಂಟಾಗು.

ತೆಗ್ಗು ಹಾಕು (ಕ್ರಿ)= ತಗ್ಗು ತೋಡು; ನೆಲವನ್ನು ಅಗೆದು ಆಳಗೊಳಿಸು; ಕುಣಿ ತೋಡು.

ತೆತ್ತೀಸ್ ಕೋಟಿ ದೇವತರು (ನಾ)= ಮೂವತ್ತು ಮೂರು ಕೋಟಿ ದೇವತೆಗಳು.

ತೆನಿ (ನಾ)= ತೆನೆ; ಕಾಳು ತುಂಬಿದ ತೆನೆ; ಧಾನ್ಯದ ಹೊಡೆ.

ತೆನಿ ಹಾಕು (ಕ್ರಿ)= ಧಾನ್ಯದ ದಂಟಿನಿಂದ ತೆನೆ ಹೊರ ಬರು; ಹೊಡೆ ಹಾಕು.

ತೆನ್ಕಟ್ಟುಣ್ಣಿ (ನಾ)= ಹೊಸತಿಲಿಗೆ ತೆಗೆನಗಳ ತೋರಣ ಕಟ್ಟಿ ಪೂಜಿಸುವ ರೈತರ ಹುಣ್ಣಿಮೆ.

ತೆಪ್ಪ (ನಾ)= ಹರಿಗೋಲು; ನಾವೆ; ಪುಂಡಿ ಕಟ್ಟಿಗೆಯಿಂದ ಇಲ್ಲವೆ ಜೋಳದ ದಂಟಿನಿಂದ ಮಾಡಿದ ನೀರ ಮೇಲೆ ತೇಲುವ ತಡಿಕೆ.

ತೆಪ್ಪ ಬಿಡು (ಕ್ರಿ)= ಗಂಗಮ್ಮ ತಾಯಿಯ ಹೆಸರಿನಲ್ಲಿ ತೇಲುವ ತಡಿಕೆಯ ಮೇಲೆ ನೈವೇದ್ಯ, ದೀಪಾದಿಗಳನ್ನು ಇಟ್ಟು ನದಿಯಲ್ಲಿ ತೇಲಿ ಬಿಡು.

ತೆಬ್ಬ (ನಾ)= ದಪ್ಪ ಮೈಯುಳ್ಳವನು; ಡೊಳ್ಳು ಹೊಟ್ಟೆಯುಳ್ಳವನು (ಬೈಗುಳ).

ತೆಬ್ಬಿ (ನಾ)= ದಪ್ಪ ಮೈಯುಳ್ಳವಳು; ಡೊಳ್ಳು ಹೊಟ್ಟೆಯುಳ್ಳವಳು

ತೆರ (ನಾ) = ತರಹ; ರೀತಿ; ಪ್ರಕಾರ.

ತೆರಿ (ಕ್ರಿ)= ತೆರೆ; ತೆಗೆ; ಬಿಚ್ಚು; ಬಾಗಿಲು ತೆಗೆ; ಬೂಚು ಉಚ್ಚು.

ತೆರು (ನಾ)= ತೆರಿಗೆ; ಸುಂಕ; ಕಂದಾಯ; ತೆರುವು.

ತೆರ್ದಿಡು (ಕ್ರಿ)= ತೆರೆದಿಡು; ಬಿಚ್ಚಿಡು; ಬಯಲಿಗೆ ಬರುವಂತೆ ಮಾಡು; ರಹಸ್ಯ ಬಯಲಿಗೆ ತರು.

ತೆರ್ಬಾಯಿ (ನಾ)= ತೆರೆದ ಬಾಯಿ; ಒಡಕು ಬಾಯಿ; ಕಿಸುಬಾಯಿ; ರಹಸ್ಯ ಮುಚ್ಚಿಡಲಾರದವನು.

ತೆರ್ಮೈ (ನಾ)= ತೆರೆದ ಶರೀರ; ಬತ್ತಲೆ; ದಿಗಂಬರ.

ತೆಲಂಗಾಣ (ನಾ)= ಹೈದರಾಬಾದ ರಾಜ್ಯದ ತೆಲುಗು ಭೂ ಭಾಗ.

ತೆಲಗಾಣಿ (ನಾ)= ತೆಲಂಗಾಣ; ನಿಜಾಮ ಆಡಳಿತದಲ್ಲಿರುವ ಆಗಿನ ತೆಲುಗು ಭೂಭಾಗ.

ತೆಲಿ (ನಾ)= ತಲೆ; ನೆತ್ತಿ; ಶಿರಸ್ಸು; ಬುದ್ಧಿ; ಚಾತುರ್ಯ; (ನುಡಿಗಟ್ಟು: ತೆಲಿ ಅದಾನಾ ಒಲಿ ಅದಾ.)

ತೆಲಿ ಅದಾ (ಕ್ರಿ)= ಬುದ್ಧಿ ಇದೆ.

ತೆಲಿ ಅದಾನ ಒಲಿ ಅದಾ ? (ನು)= ಬುದ್ಧಿ ಇದೆಯೇ ? ಸಾಮಾನ್ಯ ಜ್ಞಾನ ಇದೆಯೇ ?

ತೆಲಿ ಎತ್ತು (ನು)= ಮುಖ ಮೇಲೆ ಮಾಡು; ಹುಟ್ಟು; ಮೇಲೇಳು; ಸೊಕ್ಕು ತೋರು; ಅಹಂಕಾರ ಪ್ರದರ್ಶಿಸು;

ತೆಲಿ ಓಡ್ಸು (ನು)= ವಿಚಾರ ಮಾಡು; ಚಿಂತನಶೀಲನಾಗು.

ತೆಲಿ ಕೆಡು (ನು)= ಬುದ್ಧಿ ತಪ್ಪು; ವಿಚಾರಗೇಡಿಯಾಗು.

ತೆಲಿ ಕೆಡ್ಸು (ನು)= ಬುದ್ಧಿ ತಪ್ಪುವಂತೆ ಮಾಡು; ಹಾದಿ ಬಿಡಿಸು; ದಾರಿ ತಪ್ಪಿಸು.

ತೆಲಿಗೂದ್ಲು (ನಾ)= ತಲೆಯ ಕೂದಲು; ಕೇಶ.

ತೆಲಿಚಿಟ್ಟುಹಿಡಿ (ನು)= ಬೇಸರ-ವುಂಟಾಗು; ಕಿರಿಕಿರಿಯುಂಟಾಗು.

ತೆಲಿಡೋಗಿ (ನಾ)= ತಲೆ ಬುರುಡೆ.

ತೆಲಿತಿನು (ನು)= ತಲೆ ಬೇಸರವುಂಟು ಮಾಡು; ಚಿಟ್ಟು ಹಿಡಿಸು;

ತೆಲಿ ತಿರುಗು (ನು)= ಬುದ್ಧಿ ಭ್ರಮಣೆಯಾಗು; ಕೋಪ ಉಂಟಾಗು; ಕೋಪ ನೆತ್ತಿಗೇರು.

ತೆಲಿ ತುರ್ಸು (ನು)= ಚಿಂತನ ಶೀಲನಾಗು; ವಿಚಾರಾಧೀನನಾಗು.

ತೆಲಿ ತೂಗು (ನು)= ಒಪ್ಪಿಗೆ ಸೂಚಿಸು; ಗುಂಗಾಗು; ತಲ್ಲೀನನಾಗು.

ತೆಲಿತೆಳ್ಗ (ಅ)= ಬುಡಮೇಲು (ಜಾನಪದ ಪ್ರಾಸ: ತೆಲಿ ತೆಳ್ಗ; ಕಾಲು ಮ್ಯಾಗ)

ತೆಲಿ ತೆಳ್ಗಾಗು (ನು)= ಅಪಮಾನಿತನಾಗು; ಲಜ್ಜಿತನಾಗು; ಮುಖ ಎತ್ತದಂತಾಗು.

ತೆಲಿ ಬೋಳ್ಸು (ಕ್ರಿ)= ತಲೆಯ ಕೇಶರಾಶಿಯನ್ನು ಕೈಗತ್ತಿಯಿಂದ ಕತ್ತರಿಸಿ ತೆಗೆ; ಕ್ಷೌರ ಮಾಡು; ಮುಂಡನ ಮಾಡು; (ನುಡಿ) ನಷ್ಟ ಉಂಟು ಮಾಡು; ಅವಮಾನಿಸು; ವಿಧವೆಯ ತಲೆಗೂದಲನ್ನು ಕೈಗತ್ತಿಯಿಂದ ಕೆತ್ತು (ತಲೆ ಬೋಳಿಸಿ; ತಲೆಗೆ ಸುಣ್ಣ ಬಳಿದು; ಕೊರಳಲ್ಲಿ ಉಳ್ಳಿಗಡ್ಡೆಸರ ಮತ್ತು ಚಪ್ಪಲಿ ಸರ ಹಾಕಿ, ಕತ್ತೆಯ ಮೇಲೆ ಕೂರಿಸಿ ಮೆರೆಸುವುದು ಕಠೋರ ಶಿಕ್ಷೆಯ ಪ್ರಕಾರವಾಗಿತ್ತು).

ತೆಲಿಬ್ಯಾನಿ (ನಾ)= ತಲೆಬೇನೆ; ತಲೆಶೂಲೆ; ಕಿರಿಕಿರಿ; ತಲೆ ಚಿಟ್ಟು.

ತೆಲಿಬ್ಯಾಸರ (ನಾ)= ತೆಲಿಬ್ಯಾನಿ; ತೆಲಿಚಿಟ್ಟು; ಕಿರಿಕಿರಿ; ತಲೆಚಿಟ್ಟು; ಕಿರಿಕಿರಿ; ತಲೆಬೇಸರ,

ತೆಲಿ ಭಾರ (ನಾ)= ಅತಿ ಕಷ್ಟ; ಅತಿಬೇಸರ; ಅಸಹ್ಯ.

ತೆಲಿ ಮಾರು (ನಾ)= ತಲೆಮಾರು; ಸಿಲ್ಸಿಲಾ; ಪರಂಪರೆ; ವಂಶಪರಂಪರೆಯ ಒಂದು ಹಂತ.

ತೆಲಿ ಮ್ಯಾಲ ಕಣ್ಣು ಬರು (ನು)= ಗರ್ವಉಂಟಾಗು; ಸೊಕ್ಕೇರು; ಯಾರೂ ಕಣ್ಣಿಗೆ ಕಾಣದಂತೆ ಅಹಂಕಾರ ಬರು.

ತೆಲಿಮ್ಯಾಲ ಕೂಡುಸ್ಕೊ (ನು) = ಸಲಿಗೆ ಕೊಡು.

ತೆಲಿ ಮ್ಯಾಲ ತುರ್‍ರಾಬರು (ನು)= ಗರ್ವಬರು; ಸೊಕ್ಕೇರು; ಅಹಂಕಾರ ಬರು; ಯಾರೂ ಕಣ್ಣಿಗೆ ಕಾಣದಂತಾಗು; ಮದವೇರಿ ಮೆರೆ.

ತೆಲಿ ಮ್ಯಾಲ ಕೈ ಇಡಾಂವ (ನು)= ನಾಪಿತ; ನಾಯಿಂದ ಕ್ಷೌರಿಕ; ಹಡಪಿಗ; ಹಡಪದ (ರಾತ್ರಿ ಸಮಯದಲ್ಲಿ ಹಡಪದರಿಗೆ ಈ ರೀತಿ ಹೆಸರಿಸುವುದು ಒಂದು ಸಾಮಾಜಿಕ ಕುರೀತಿ).

ತೆಲಿ ಹಾಕು (ಕ್ರಿ)= ತಲೆದೂಗು; ತಲೆಹಾಕು; ಒಪ್ಪಿಗೆ ಸೂಚಿಸು; ಒಳಸೇರು.

ತೆಲಿ ಹಿಡಿ (ನು)= ವ್ಯಭಿಚಾರಕ್ಕೆ ಸಹಕರಿಸು; ಕುಂಟಣಿ ತನವನ್ನು ಮಾಡು.

ತೆಲಿ ಹಿಡುಕ (ನಾ)= ಕುಂಟಣಿ; ಕುಂಟುಸ್ತನ ಮಾಡುವವನು.

ತೆಲಿ ಹೊಡಿ (ಕ್ರಿ)= ಕುತ್ತಿಗೆ ಕತ್ತರಿಸು; ಕೊಲ್ಲು; ಜೀವಘಾತ ಮಾಡು.

ತೆಲುಗ (ನಾ)= ತೆಲುಗು ಮಾತಾಡುವವನು; ತೆಲಂಗಾಣ ಪ್ರದೇಶದವನು.

ತೆಲ್ಗಾಣಿ (ನಾ)= ತೆಲಂಗಾಣದಿಂದ ಬಂದಿದ್ದು; ತೆಲಂಗಾಣಕ್ಕೆ ಸಂಬಂಧಿಸಿದ್ದು; ತೆಲಂಗಾಣ; ಹೈದರಾಬಾದ ರಾಜ್ಯದ ತೆಲುಗು ಭಾಷಿಕ ಭೂ ಭಾಗ.

ತೆಲುಗು (ನಾ)= ಐದು ದ್ರಾವಿಡ ಭಾಷೆಗಳಲ್ಲಿ ಒಂದು.

ತೆಲುಗು ಜೊಮ್ಮಯ್ಯ (ನಾ)= ಬಸವಾದಿ ಶರಣರ ಕಾಲದ ಒಬ್ಬ ಶರಣ.

ತೆವಳು (ಕ್ರಿ)= ಉರುಳುತ್ತ ಹೋಗು; ಪಾದಗಳ ಸಹಾಯವಿಲ್ಲದೆ ಮುಂದಕ್ಕೆ ಸಾಗು.

ತೆಳಕೇರಿ (ನಾ)= ಕೆಳಮಟ್ಟದ ನೆಲವುಳ್ಳ ಓಣಿ; ಕೆಳಗೇರಿ.

ತೆಳಗ (ಅ)= ಕೆಳಗೆ; ಕೆಳಭಾಗದಲ್ಲಿ; ಅಡಿಯಲ್ಲಿ; ಹಿಂದೆ; ಪೂರ್ವದಲ್ಲಿ.

ತೆಳಗಲ್ಲಿ (ನಾ)= ಕೆಳಮಟ್ಟದ ನೆಲವುಳ್ಳ ಕೇರಿ; ತೆಳಕೇರಿ; ಕೆಳಗೇರಿ (ಗೋರಂಟಿ ಊರಿನ ಭುಲಾಯಿ ಹಾಡುಗಾರರಾದ ವಿರುಪಾಕ್ಷಯ್ಯ- ನವರ ವಾಸದ ಕೇರಿ).

ತೆಳಗಾಗು (ಕ್ರಿ)= ಎತ್ತರ ಕಡಿಮೆಯಾಗು; ಕೆಳಮಟ್ಟದ್ದಾಗು.

ತೆಳಗಾಮ್ಯಾಗಾ ಆಗು (ನುಡಿ)= ಕೂಟ ಮಾಡು; ಒಂದಾಗು; ರತಿಕ್ರೀಡೆಯಾಡು.

ತೆಳಗಾಮ್ಯಾಲಾ ಮಾಡು (ಕ್ರಿ)= ಕಲಬೆರಕೆ ಮಾಡು; ಸೌಟು ಆಡಿಸು; ಕೆಳಗಿದ್ದುದನ್ನು ಮೇಲೆ ಮತ್ತು ಮೇಲಿದ್ದುದನ್ನು ಕೆಳಗೆ ತರು.

ತೆಳಗಿನ ಪಾರ್ಶಿ (ನಾ)= ಕೆಳಮಗ್ಗಲು; ಕೆಳಗಡೆಗೆ; ಕೆಳ ಬದಿಯಲ್ಲಿ.

ತೆಳಪ್ಯಾಟಿ (ನಾ)= ಕೆಳಪೇಟೆ; ಕೆಳಮಟ್ಟದಲ್ಲಿರುವ ಪೇಟೆ; ಕೆಳಮಟ್ಟದಲ್ಲಿರುವ ಪಟ್ಟಣ (ಹುಮ್ನಾಬಾದ ಊರಿನ ಕೆಳಪೇಟೆ).

ತೆಳ್ಳು (ನಾ)= ಗಟ್ಟಿ ಕಲ್ಲಿನಂತಹ ಭೂಮಿ; ಬಂಡೆಯಂತಹ ಭೂಮಿ.

ತೆಳ್ಳುನೆಲ (ನಾ)= ಗಟ್ಟಿಬಂಡೆ ತೇಲಿದ ನೆಲ; ಮಡ್ಡಿ.

ತೇಕು (ಕ್ರಿ)= ಏದುಸಿರು ಬಿಡು; ಉಬ್ಬಸ ಪಡು.

ತೇಕು (ನಾ)= ಏದುಸಿರು; ಮೇಲುಸಿರು; ತೇಕುವಿಕೆ.

ತೇಕುಣ್ಕಿ (ನಾ)= ತೇಕುವಿಕೆ; ಏದುಸಿರು ಬಿಡುವಿಕೆ.

ತೇಗಲ್ತಿಪ್ಪಿ (ನಾ)= ಮಲ್ಲಾಮಡಿ; ಗೊಂದಲ; ಒಂದು ಊರಿನ ಹೆಸರು.

ತೇಜ (ವಿ)= ಚೂಪು; ಕೂರು; ಕೂರಿತ್ತಾದ; ಚುರುಕು; ಪ್ರಿಯ; ಪಿರ್ಯಾ; ತುಟ್ಟಿ.

ತೇಜಾಗು (ಕ್ರಿ)= ತುಟ್ಟಿಯಾಗು; ಪ್ರಿಯವಾಗು; ಧಾರಣೆ ಮೇಲೇರು.

ತೇಜಾಪು (ನಾ)= ಆಮ್ಲ; ಆಸಿಡ್.

ತೇಜಿ (ನಾ)= ಕುದುರೆ; ಅಶ್ವ (ಗಾದೆ: ಕಾತ್ತಿಗಿ ಲತ್ತಿ ಪೆಟ್ಟು; ತೇಜಿಗಿ ಇಶಾರಿ ಪೆಟ್ಟು); ತುಟ್ಟಿ; ಬೆಲೆ ಏರಿಕೆ; ಪಿರ್ಯಾ; ಪ್ರಿಯತೆ.

ತೇಜಿಮಂದಿ (ನಾ)= ವಸ್ತುಗಳ ಬೆಲೆಗಳಲ್ಲಿಯ ಏರು ಮತ್ತು ಇಳಿತ.

ತೇಜು (ನಾ)= ತೇಜಿ; ತುಟ್ಟಿ; ಪ್ರಿಯ; ಪ್ರಿಯತೆ.

ತೇದಿ (ನಾ)= ದಿನಾಂಕ; ತಿಥಿ; ತಾರೀಕು.

ತೇರಾ (ನಾ)= ಹದಿಮೂರು; ತ್ರಯೋದಶ.

ತೇರಾಪತ್ತಾ (ನಾ)= ಹದಿಮೂರೆಲೆಯ ರಮ್ಮಿ ಎಂಬ ಇಸ್ಪೀಟಾಟ.

ತೇರಾಂವಾ (ವಿ.)= ಹದಿಮೂರನೇ (ಗಾದೆ: ದುಷ್ಕಾಳ್ದಾಗ ತೇರಾಂವಾ ಮೈನಾ).

ತೇಲ (ನಾ)= ತೈಲ; ಎಣ್ಣೆ.

ತೇಲಾಟ (ನಾ)= ನೀರಿನ ಮೇಲೆ ಇಲ್ಲವೆ ಗಾಳಿಯಲ್ಲಿ ಈಜಾಡುವಿಕೆ; ತೇಲುವಿಕೆ.

ತೇಲಿ (ನಾ)= ಘಾಣಿಗ; ಘಾಣಿಗ್ಯಾ; ಗಾಣಿಗ; ಎಣ್ಣೆ ಗಾಣ ನಡೆಸುವವ; ಎಣ್ಣೆ ಮಾರುವವ.

ತೇಲು (ಕ್ರಿ)= ಮುಳುಗದಿರು; ನೀರಿನ ಮೇಲೆ ಬೆಂಡಿನಂತೆ ಈಜಾಡು.

ತೇಲುಗಣ್ಣು (ನಾ)= ಕಣ್ಣಿನ ಬಿಳಿಗುಡ್ಡೆ ತೇಲುವಿಕೆ; ಸಾಯುವ ಮುನ್ನದ ಸೂಚನೆ.

ತೇಲು ಮುಣುಗು (ನಾ)= ನೀರಾಟ; ಈಜಲುಬಾರದವನು ಬದುಕಲು ಮಾಡುವ ಹೆಣಗಾಟ.

ತೇಲ್ಕಟ(ವಿ)= ಎಣ್ಣೆನುಂಗಿದ; ಎಣ್ಣೆಯಲ್ಲಿ ತಯಾರಾದ; ಎಣ್ಣೆಯಲ್ಲಿ ಕರಿದ ಇಲ್ಲವೆ ತಾಳಿಸಿದ.

ತೇಳು (ನಾ)= ಚೇಳು; ಒಂದು ಬಗೆಯ ವಿಷಜಂತು (ಒಗಟು: ಚುಟುಕು ಚುಂಗಿ; ಲೋಲೋಭಂಗಿ ಏನ್ತಿಳಿ? –ತೇಳು; ಚೇಳು).

ತೇಳು ಕಚ್ಚು (ಕ್ರಿ)= ಚೇಳಿನ ಕೊಂಡಿಯಿಂದ ವಿಷಬಾಧೆಯುಂಟಾಗು.

ತೇಳ್ಕೊಂಡಿ (ನಾ)= ಚೇಳಿನ ಕೊಂಡಿಯನ್ನು ಹೋಲುವ ದೇಟುಳ್ಳ ಒಂದು ಬಗೆಯ ಹೂವು; ಚೇಳ್ಕೊಂಡಿ ಹೂವು.

ತೈಟು (ವಿ)= ಟೈಟು; ಬಿಗಿಯಾದ; ಒತ್ತೊತ್ತಾದ.

ತೈನಾತಿ (ನಾ)= ವ್ಯವಸ್ಥೆ; ನೇಮಕ

ತೈನಾತಿಮಾಡು (ಕ್ರಿ)= ಸಿದ್ಧಗೊಳಿಸು; ವ್ಯವಸ್ಥೆಗೊಳಿಸು; ನೇಮಕಗೊಳಿಸು.

ತೈಯಕ ತರ್ಘುಣಿತಾ (ನು)= ಕೋಲಾಟದ ಮುಕ್ತಾಯದ ಗತ್ತು.

ತೈಯಾರ (ನಾ)= ತಯಾರು; ಸಿದ್ಧ.

ತೈಯಾರಿ (ನಾ)= ಸಿದ್ಧತೆ; ಅಣಿಗೊಳಿಸುವಿಕೆ.

ತೈಸೀಲು (ನಾ)= ತಹಸೀಲು; ಭೂಗಂದಾಯ.

ತೈಸೀಲ್ದಾರ (ನಾ)= ಭೂಗಂದಾಯದ ತಾಲೂಕಾ ಮಟ್ಟದ ಅಧಿಕಾರಿ.

ತೊಂಗುಳು (ನಾ)= ತಂಗುಳ; ಆರಿದ ಆಹಾರ; ನಿನ್ನೆ ಮಾಡಿದ ಅಡಿಗೆ; ತಂಗೂಳು.

ತೊಂಡಿ (ನಾ)= ತೊಂಡೆಕಾಯಿ; ಓತಿಕ್ಯಾತ; ಹಟ ಮಾಡುವಿಕೆ; ಬಾಯಿಪಾಠ; ಮೌಖಿಕ; ತೋಂಡಿ; ಕಂಠಪಾಠ.

ತೊಂಡಿಕಾಯಿ (ನಾ)= ಒಂದು ಬಗೆಯ ಬಳ್ಳಿ ಮತ್ತು ಅದರ ತರಕಾರಿ ಕಾಯಿ.

ತೊಂಡಿಲು (ನಾ)= ತೊಂಡ್ಲು; ಹೂವಿನ ಗೊಂಡೆ; ಬಾಸಿಂಗಕ್ಕೆ ಜೋತು ಬಿಡುವ ಹೂವಿನ ಗೊಂಚಲು.

ತೊಂಡುತನ (ನಾ)= ಹಟಮಾರಿತನ.

ತೊಂಬಾಕು (ನಾ)= ತಂಬಾಕು; ಹೊಗೆಸೊಪ್ಪು; ಗಾಂಜಾ.

ತೊಕೊ (ಕ್ರಿ)= ತೊಗೊ; ತೆಗೆದುಕೊ; ಸ್ವೀಕರಿಸು.

ತೊಗರಿ (ನಾ)= ತೊಗರೆ; ಒಂದು ಬಗೆಯ ದ್ವಿದಳ ಧಾನ್ಯ; ಒಂದು ಊರಿನ ಹೆಸರು.

ತೊಗರಿಬ್ಯಾಳಿ (ನಾ)= ತೊಗರೆಯ ಫಲಕ; ತೊಗರೆಯ ಕಾಳಿನದಳ; ಕುದಿಸಿದ ತೊಗರೆಬೇಳೆಯೊಂದಿಗೆ ಹುಳಿ, ಉಪ್ಪು, ಖಾರ, ಮಸಾಲಿ ಇತ್ಯಾದಿ ಬೆರೆಸಿ ಬಗಾರು ಹಾಕಿ ತಯಾರಿಸಿದ ಹುಳಿಸಾರು.

ತೊಗಲು (ನಾ)= ಚರ್ಮ; ತ್ವಚೆ.

ತೊಗುಲು (ನಾ)= ತೊಗಲು; ಚರ್ಮ; ತ್ವಚೆ

ತೊಗಲುಚ್ಚೆ= ಮೈಯ ತೊಗಲು ತೆಗೆದೇನು (ಬೈಗುಳ)

ತೊಗುಲ್ಸುಲಿ (ಕ್ರಿ)= ಸತ್ತದನಗಳ ಮೈಯ ಚರ್ಮವನ್ನು ಬೇರ್ಪಡಿಸು.

ತೊಗುಲ್ಸುಲ್ದೆ (ನು)= ಮೈಯ ಚರ್ಮ ಉಚ್ಚುವಂತೆ ಹೊಡೆದೇನು (ಬೈಗುಳ)

ತೊಗೊ (ಕ್ರಿ)= ತೊಕೊ; ತೆಗೆದುಕೊ.

ತೊಗ್ರಿ (ನಾ)= ಮಹಾರಾಷ್ಟ್ರದ ಒಂದು ಹಳ್ಳಿಯ ಹೆಸರು; ತೊಗರೆ ಎಂಬ ದ್ವಿದಳ ಧಾನ್ಯ.

ತೊಗ್ಲೂರು (ನಾ)= ಬಸವ ಕಲ್ಯಾಣ ತಾಲೂಕಿನಲ್ಲಿರುವ ಡೋಹರ ಕಕ್ಕಯ್ಯ ಶರಣರ ಊರು. ಸಾಹಿತಿ ಗುರುಲಿಂಗ ಧಬಾಲೆಯವರ ಹುಟ್ಟೂರು.

ತೊಟಕು (ನಾ)= ತಟಕು, ತುಸು; ಸ್ವಲ್ಪ.

ತೊಟಕೊ (ಕ್ರಿ)= ತೊಟ್ಟುಕೊ; ಉಡುಪು ಧರಿಸು.

ತೊಟಗುಟ್ಟು (ಕ್ರಿ)= ಹನಿಹನಿಯಾಗಿ ಉದುರು.

ತೊಟ್ಟುಲು (ನಾ)= ತೊಟ್ಟಿಲು; ಜೋಗುಳ; ಮಕ್ಕಳನ್ನು ಮಲಗಿಸಿ ತೂಗಲು ಸಿದ್ಧಗೊಳಿಸಿದ ಕಟ್ಟಿಗೆ ಅಥವಾ ಕಬ್ಬಿಣದ ಸಾಧನ.

ತೊಟ್ಟುಲು ತೂಗು (ನು)= ಸಂತಾನ ಹೊಂದು; ಸಂತಾನ ಪ್ರಾಪ್ತಿಯಾಗು; ಮಲಗಿದ ಕಂದನ ತೊಟ್ಟಿಲು ಹಿಂದೆ ಮುಂದೆ ತೂಗಾಡುವಂತೆ ಮಾಡು.

ತೊಟ್ಟುಲ್ಕಾಯಿ (ನಾ)= ಮುಳ್ಳುಗಳಿಂದ ಕೂಡಿದ ಬಳ್ಳಿಯ ಒಂದು ಬಗೆಯ ತರಕಾರಿ ಕಾಯಿ.

ತೊಟ್ಲಿಡು (ಕ್ರಿ)= ತೊಟ್ಟಿಲಲ್ಲಿ ಮಗುವಿಗೆ ಮಲಗಿಸಿ ಹೆಸರಿಡುವ ಕಾರ್ಯಕ್ರಮ ಮಾಡು; ನಾಮಕರಣ ಕಾರ್ಯಕ್ರಮ ಮಾಡು.

ತೊಟ್ಲು (ನಾ)= ತೊಟ್ಟಿಲು; ಮಗುವನ್ನು ಮಲಗಿಸಿ ತೂಗಲು ಮರ, ಬೆತ್ತ ಅಥವಾ ಲೋಹದಿಂದ ಮಾಡಿದ ಒಂದು ಸಾಧನ.

ತೊಟ್ಲುಬಟ್ಲು (ನಾ)= ನಾಮಕರಣ ಕಾರ್ಯಕ್ರಮಕ್ಕೆ ಬೇಕಾಗುವ ತೊಟ್ಟಿಲು, ಬಟ್ಟಲು ಇತ್ಯಾದಿ ಸಾಮಗ್ರಿ.

ತೊಡಿ (ನಾ)= ತೊಡೆ; ಕಾಲಿನ ಮೇಲರ್ಧ ಭಾಗ.

ತೊಡಿಭಾರ್ಸು (ಕ್ರಿ)= ತೊಡೆತಟ್ಟು; ಕುಸ್ತಿಕಣಕ್ಕೆ ಎದುರಾಳಿಯನ್ನು ಆಹ್ವಾನಿಸು.

ತೊಡುಕು (ಕ್ರಿ)= ತೊಡಕು; ಅಡ್ಡ ಬಾ; ಕಾಲಿಗೆ ಸಿಲುಕು; (ಗಾದೆ: ಹುಡ್ಕಾ ಬೆಳ್ಳಿ ಕಾಲಾಗ್ತೊಡ್ಕಿಧಾಂಗ!); ತೊಡ್ಕು; ಮೊಲೆಬೇನೆ ಉಂಟಾಗು.

ತೊಡಕು ಉಳಿಸು (ನು)= ಬಾಕಿ ಉಳಿಸು; ಸಿಲ್ಲಕು ಉಳಿಸು; ಅಧಮರ್ಧಸಾಲ ಪಾವ್ತಿ ಮಾಡು.

ತೊಡ್ಕು (ನಾ)= ಮೊಲೆಬೇನೆಯುಂಟಾಗು; ತೊಡಕು.

ತೊಡ್ಡಿನ ಬೀಜ (ನಾ)= ಅಂಡ; ತರಡು.

ತೊಡ್ಡು (ನಾ)= ತರಡು; ವೃಷಣ; ಅಂಡ; ಬೀಜ.

ತೊಡ್ಡು ಹುರಿ ಹೊಡಿ (ಕ್ರಿ)= ಗಂಡಿನ ಅಂಡಗಳನ್ನು ಹಗ್ಗದಂತೆ ಹುರಿ ಹೊಡೆದು ಪೀಡಿಸು.

ತೊಡ್ದು ಹೊಡಿ (ಕ್ರಿ)= ಹೋರಿ ಅಥವಾ ಕೋಣನ ಬೀಜೋತ್ಪತ್ತಿ ಶಕ್ತಿಯನ್ನು ನಾಶ ಮಾಡು.

ತೊತ್ತಿ (ನಾ)= ದಾಸಿ; ಸೇವಕಿ (ಗಾದೆ: ಪತ್ರೋಳ್ಗಿ ಎತ್ತೇ ತೊತ್ತಿ ಅಂದ್ರ ಉಂಡೋರೇ ಸ್ಮಂದಿ ಅಂತಂತ!).

ತೊತ್ತು (ನಾ)= ದಾಸ; ಸೇವಕ.

ತೊದುಲ (ನಾ)= ತೊದಲುವವನು; ತೊದ್ಲ್ಯಾ; ಜೊಜ್ಜು ಮಾತಾಡುವವನು; ಅಸ್ಪಷ್ಟ ಮಾತಾಡುವವನು.

ತೊದುಲಿ (ನಾ)= ತೊದಲುವವಳು; ತೊದ್ಲಿ; ಜೊಜ್ಜು ಮಾತಾಡುವವಳು; ಅಸ್ಪಷ್ಟ ಮಾತಾಡುವವಳು (ಬೈಗುಳ).

ತೊದುಲು (ಕ್ರಿ)= ತೊದಲು; ಮಾತಿನಲ್ಲಿ ತಡವರಿಸು; ಶಿಶುವಿನಂತೆ ಮಾತಾಡು; ಜೊಜ್ಜು ಮಾತಾಡು.

ತೊದುಲ್ಗೇಡಿ (ನಾ)= ತೊದಲು ಮಾತಿನಿಂದ ಕೆಟ್ಟವನು (ಳು).

ತೊದುಲ್ಮಾತು (ನಾ)= ತೊದಲುತ್ತ, ತಡವರಿಸುತ್ತ, ಶಿಶುವಿನಂತೆ ಆಡುವ ಅಸ್ಪಷ್ಟ ಮಾತು; ಜೊಜ್ಜು ಮಾತು.

ತೊದ್ಲ್ಯಾ (ನಾ)= ತೊದಲ; ತೊದಲುತ್ತ ಮಾತಾಡುವವನು; ಜೊಜ್ಜು ಮಾತಾಡು-ವವನು (ಬೈಗುಳ)

ತೊನ್ನಾಗು (ಕ್ರಿ)= ಮೈ ಬಿಳುಚಿಕೊಳ್ಳು; ಪಾಂಡು ರೋಗ ಉಂಟಾಗು.

ತೊನ್ನು (ನಾ)= ಚರ್ಮಬಿಳಿದಾಗುವ ರೋಗ; ಪಾಂಡುರೋಗ.

ತೊನ್ಯಾ (ನಾ)= ತೊನ್ನುರೋಗಿ; (ಬೈಗುಳ)

ತೊನ್ಸು (ನಾ)= ತೊನಸು; ತೊನಸೆ; ತೊಣಚಿ.

ತೊನ್ಸ್ಯಾ (ನಾ)= ಮೈಯೆಲ್ಲ ನೊಣ ಮೆತ್ತಿಕೊಂಡು ಇರುವವನು; (ಹೀನೈಸಿ ಬೈಯುವಿಕೆ).

ತೊಪ್ಲು (ನಾ)= ತಾಪ್ಲು; ತೊಪ್ಪಲು; ಮರಗಿಡ; ಬಳ್ಳಿಗಳ ಎಲೆ; ಸೊಪ್ಪು; ಸೊಪ್ಪೆ.

ತೊಯ್ (ಕ್ರಿ)= ಒದ್ದೆಯಾಗು; ಹಸಿಯಾಗು; ತೊಯ್ಯಿ; ನೀರಿನಲ್ಲಿ ನೆನೆ.

ತೊಯ್ಯಿ (ಕ್ರಿ)= ತೊಯ್ (ನೋಡಿರಿ)

ತೊಯ್ಸಿ ಹೊಡಿ (ಕ್ರಿ)= ಮೆಟ್ಟು ನೀರಲ್ಲಿ ತೊಯ್ಸಿಸಿ ಜೋರಾಗಿ ಹೊಡೆ; ಪೆಟ್ಟು ತಗಲುವಂತೆ ನುರಿಯಾಗಿ ಹೊಡೆ.

ತೊಯ್ಸು (ಕ್ರಿ)= ತೊಯ್ಯಿಸು; ನೆನೆಸು; ನೆನೆಹಾಕು; ಒದ್ದೆಗೊಳಿಸು.

ತೊರಿ (ನಾ)= ತೊರೆ; ವೇಗವಾಗಿ ಹರಿಯುವ ನದಿ; ಪಶುವಿನ ಸ್ಥನದಲ್ಲಿಯ ಹಾಲಿನ ರಭಸ.

ತೊರಿ (ಕ್ರಿ)= ತೊರೆ; ಬಿಡು; ತ್ಯಾಗಮಾಡು; ವಿರಕ್ತಿಯನ್ನು ಹೊಂದು; ಎಲ್ಲವನ್ನು ಬಿಟ್ಟು ಬಿಡು; ಪಶುವಿನ ಮೊಲೆಯಿಂದ ತ್ವರೆಯಿಂದ ಹಾಲು ಬರು.

ತೊರಿ ಬಿಡು (ಕ್ರಿ)= ದನಗಳ ಸ್ತನದಲ್ಲಿ ಹಾಲಿನ ತೀವ್ರತೆ ಉಂಟಾಗು; ತೀವ್ರತೆಯಿಂದ ಹಾಲು ತುಂಬು; ಚಿಮ್ಮು.

ತೊರುಬಿಡು (ಕ್ರಿ)= ತೊರಿಬಿಡು (ನೋಡಿರಿ)

ತೊರ್ಗ (ನಾ)= ತೊರೆದು ನಿಂತವನು; ಮಾನ ಮರ್ಯಾದೆಗಳನ್ನು ತೊರೆದವನು ಭಯ ಗೇಡಿ; ಭಯಬಿಟ್ಟವನು (ಬೈಗುಳ)

ತೊರ್ದುನಿಂತಾಂವ (ನು)= ಎಲ್ಲ ಬಿಟ್ಟು ನಿಂತವನು; ಎಲ್ಲ ಸಂಬಂಧ ಹರಿದು ನಿಂತವನು; ಮರ್ಯಾದೆ ಕಳೆದು ಕೊಂಡವನು.

ತೊರ್ದುನಿಂದ್ರು (ಕ್ರಿ)= ಸರ್ವಸಂಬಂಧ ಹರಿದು ಬಿಡು; ಆಶೆಯನ್ನು ಬಿಟ್ಟು ಬಿಡು; ಮಾನ ಮರ್ಯಾದೆ ಮರೆತು ಬಿಡು; ಭಯಬಿಟ್ಟು ನಿಲ್ಲು.

ತೊಲಿ (ನಾ)= ತೊಲೆ; ಮಾಳಿಗೆ ಕೆಳಗೆ ಆಧಾರವಾಗುವಂತೆ ಹಾಕುವ ದಪ್ಪವಾದ ಮರದ ತುಂಡು; ಬಂಗಾರದ ಬೆಳ್ಳಿಯ ತೂಕದ ಮಾನ.

ತೊಳಿ (ಕ್ರಿ)= ತೊಳೆ; ಸ್ವಚ್ಛಗೊಳಿಸು; ಜಳಜಳಗೊಳಿಸು; ಏನೂ ಇಲ್ಲದಂತೆ ಮಾಡು.

ತೊಳ್ಕೊ (ಕ್ರಿ)= ತೊಳೆದುಕೊ; ಪರಿಹಾರ ಮಾಡಿಕೊ; ಸ್ನಾನ ಮಾಡು; ಮೈ ತೊಳೆದು ಕೊ.

ತೊಳ್ಬಟ್ಲು (ನು)= ತೊಳೆದ ಬಟ್ಟಲಂತೆ ಏನೂ ಇಲ್ಲದಿರುವಿಕೆ; ಎಲ್ಲವನ್ನು ದೋಚಿ ಮನೆ ಖಾಲಿ ಮಾಡುವಿಕೆ; ಖಾಲಿ ಖಾಲಿಯಾದ ಮನೆ; ಬರಿದೋ ಬರಿದು; ಜಳಜಳ.

ತೊಳ್ಬಟ್ಲು ಮಾಡು (ನುಡಿ)= ಏನೂ ಇಲ್ಲದಂತೆ ಖಾಲಿ ಮಾಡು; ಮನೆ ಖಾಲಿ ಮಾಡು; ಬರಿದುಗೊಳಿಸು; ಜಳಜಳ ಮಾಡು; ದೋಚು; ಖಾಲಿ ಖಾಲಿ ಮಾಡು.

ತೊಳ್ಸು (ಕ್ರಿ)= ತೊಳೆಯಿಸು; ಜಳಜಳ ಮಾಡಿಸು; ಗಿಡಮೂಲಿಕೆ ತಿನಿಸಿ, ನೀರು ಕುಡಿಸಿ (ಹೊಟ್ಟೆ) ಖಾಲಿಯಾಗುವಂತೆ ವಾಂತಿ ಮಾಡಿಸು; ತೀರ್ಥ ಕ್ಷೇತ್ರದ ಕುಂಡವನ್ನು ಸ್ವಚ್ಛಗೊಳಿಸು.

ತೋಂಡ (ನಾ) ಮ.= ಮೋರೆ; ಬಾಯಿ; ಮುಖ.

ತೋಂಡಪಾಠ (ನಾ)ಮ.= ಬಾಯಿಪಾಠ; ಮುಖಪಾಠ; ಮುಖದ್ಗತ; ಕಂಠಪಾಠ.

ತೋಂಡಿ (ನಾ)= ಬಾಯಿ ಪಾಠ; ಮೌಖಿಕ; ಜಾನಪದ ಹಾಡುಗಾರಿಕೆಯ ಮೌಖಿಕ ಸಂಪ್ರದಾಯ.

ತೋಂಸಾರು (ಕ್ರಿ)= ಜಗಜ್ಜಾಹೀರು ಮಾಡು; ಬಹಿರಂಗ ಪಡಿಸು; (ಹಾಡು: ಆರುಸ್ಥಳ ಒಳಪಟ್ಟ। ಧೀರಶರಣರ ಮಹಿಮೆ। ಮೀರಿದ ಪ್ರಭು ತಾನೆ ಬಲ್ಲ। ಅಂಶಿಕ। ವೀರಶರಣರಿಗಿಲ್ಲವಲ್ಲ। ಬಹುದುಃಖ। ಘೋರ ಪಾತಕರರಿಯೋಣೆಲ್ಲ। ದೂರಿಕೊಂಡರು ಕಲಿತು। ಕೇರಿಕೇರಿಗೆ ಹಿಗ್ಗು। ಮಾರಿಕೊಂಡರು ಹೊಟ್ಟೆಗೆ। ತೋಂ ಸಾರಿದ।। –ಮರಕುಂದಿ ಬಸವಣ್ಣಪ್ಪ)

ತೋಟಾ (ನಾ)= ತೋಟ; ತ್ವಾಟಾ; ನೀರಾವರಿ ಬೆಳೆ ಬೆಳೆವ ಭೂಮಿ; ನುಕ್ಸಾನು; ಲುಕ್ಸಾನೆ; ಹಾನಿ; ಘಾಟಾ; ಕಾಡತೂಸು; ತೋಟ್ಯಾ.

ತೋಟಿ (ನಾ)= ನಲ್ಲಿ; ನಳ; ಟೂಟಿ; ನಳದ ಕಿವಿ.

ತೋಟಿ ತಿರುವು (ಕ್ರಿ)= ನಲ್ಲಿ ಚಾಲು ಮಾಡು ಇಲ್ಲವೆ ಬಂದು ಮಾಡು.

ತೋಟ್ಯಾ (ನಾ)= ತೋಟಾ; ಕಾಡತೂಸು; ಬಂದೂಕಿನ ಗೋಲಿ.

ತೋಡಿ (ನಾ)= ಜವಾಬು; ಪ್ರತ್ಯುತ್ತರ.

ತೋಡಿಗೆ ತೋಡಿ (ನಾ)= ಪ್ರತ್ಯುತ್ತರಕ್ಕೆ ಮರು ಉತ್ತರ.

ತೋಡು (ಕ್ರಿ)= ಕೆದರು; ಅಗೆ; ತಗ್ಗು ಮಾಡು.

ತೋಡ್ಯಾ (ನಾ)= ಬೆಳ್ಳಿಯ ಕಡಗ; ತೋಡಾ; ತೋಡ.

ತೋಫು (ನಾ)= ನೆಲದ ಮೇಲೆ ಅಥವಾ ವಾಹನದ ಮೇಲೆ ಇರಿಸಿ ಹಾರಿಸುವ ಅತಿ ದೊಡ್ಡದಾದ ಬಂದೂಕು.

ತೋಫುಖಾನಿ (ನಾ)= ತೋಫು ಇರುವ ಮನೆ; ತೋಫು ಹಾರಿಸಲು ಸಿದ್ಧಗೊಳಿಸಲಾದ ಭದ್ರಸ್ಥಾನ.

ತೋಬರಿ (ನಾ)= ಕುದುರೆಯ ಬಾಯಿಗೆ ಕಟ್ಟುವ ಚುನ್ನಿ ತುಂಬಿದ ಚೀಲ; ಕೂಳ; ಆಹಾರ; ಚಂದಿ.

ತೋಬಾ (ನಾ) ಉ.= ತಪ್ಪೊಪ್ಪುವಿಕೆ, ಪಶ್ಚಾತ್ತಾಪ ಪಡುವಿಕೆ.

ತೋಬಾತೋಬಾ (ದ್ವಿ)= ತಪ್ಪಾಯ್ತು ತಪ್ಪಾಯ್ತು; ಪಶ್ಚಾತ್ತಾಪ.

ತೋಬಾ ತೋಬಾ ಆಗು (ಕ್ರಿ)= ತಪ್ಪು ಮಾಡಿದ ಅರಿವಾಗು; ಪಶ್ಚಾತ್ತಾಪಾಗು.

ತೋಬಾ ತೋಬಾ ಮಾಡ್ಕೊ (ನುಡಿ)= ಗಲ್ಲಗಲ್ಲ ಬಡಿದುಕೊಂಡು ತಪ್ಪಾದುದನ್ನು ಒಪ್ಪಿಕೊ; ಪಶ್ಚಾತ್ತಾಪ ಪಡು.

ತೋಬಾ ಹಜರತ್ತಾಗು (ಕ್ರಿ)= ಬಹಳ ದೊಡ್ಡ ತಪ್ಪಾಯ್ತೆಂದು ಸಮ್ಮತಿಸು; ಪಶ್ಚಾತ್ತಾಪ ಪಡು.

ತೋಬ್ರಿ (ನಾ)= ತೋಬರಿ (ನೋಡಿರಿ)

ತೋರಣ (ನಾ)= ಔರಾದ ತಾಲೂಕಿನ ಒಂದು ಊರಿನ ಹೆಸರು. ಬೀದರ ನಗರದ ಒಂದು ಬಡಾವಣೆಯ ಹೆಸರು.

ತೋರು (ಕ್ರಿ)= ತೋರಿಸು; ಎದುರಿಗೆ ಇರಿಸು; ಅರ್ಪಿಸು; ನೈವೇದ್ಯ ಸಲ್ಲಿಸು.

ತೋರ್ಸು (ಕ್ರಿ)= ತೋರಿಸು; ಕಾಣಿಸುವಂತೆ ಮಾಡು; ಸಿದ್ಧಪಡಿಸು; ನೈವೇದ್ಯ ತೋರು.

ತೋಲಾಗು (ಕ್ರಿ)= ಅತಿಯಾಗು; ಹೆಚ್ಚಾಗು.

ತೋಲು (ವಿ)= ಅನಗಾಡ; ಭಾಳ; ಬಹಳ; ರಗಡ; ಹೆಚ್ಚು; ಕಂಡಾಬಟಿ; ಅತಿತೂಕದ್ದು; ಅತಿಭಾರವುಳ್ಳ.

ತೋಲೊಜ್ಜೆ (ನಾ)= ಅತಿಭಾರ; ಹೊರಲಾಗದಷ್ಟು ಭಾರ; ಎತ್ತಲು ಆಗದಷ್ಟು ಭಾರ.

ತೋಳ (ನಾ)= ನಾಯಿ ಜಾತಿಗೆ ಸೇರಿದ ಕಾಡು ಮೃಗ; ತ್ವಾಳಾ.

ತೋಳಾ (ನಾ)= ತೋಳ; ಬಂಗಾರ/ಬೆಳ್ಳಿ ತೂಗುವ ೧೨ ಮಾಸಿಯ ಒಂದು ಅಳತೆ ಮಾನ; ತೊಲ.

ತೋಳು (ನಾ)= ಭುಜ; ಬಾಹು; ರಟ್ಟೆ; ಕೈಸುತ್ತ ಇರುವ ಅಂಗಿಯ ಇಲ್ಲವೆ ಕುಪ್ಪಸದ ಭಾಗ.

ತೋಳೇರ್ಸು (ಕ್ರಿ)= ಅಂಗಿಯ ತೋಳನ್ನು ಮೇಲಕ್ಕೆ ಏರಿಸು; ಜಗಳಕ್ಕೆ ಸಿದ್ಧನಾಗು; ಕೆಲಸಕ್ಕೆ ಅಣಿಯಾಗು.

ತೋಳ್ಬಂದಿ (ನಾ)= ತೋಳಿಗೆ ಧರಿಸುವ ಒಡವೆ; ರಟ್ಟೆ ಗಡಗ; ಬಾಜೂ ಬಂದ; ದೊಡ್ಡಾಟದಲ್ಲಿ ರಾಣಿ ಮಹಾರಾಣಿಯರು ಧರಿಸುವ ರಟ್ಟೆ ಕಡಗ.

ತೌಡು (ನಾ)= ತವುಡು; ಧಾನ್ಯದ ಮೇಲ್ಪದರಿನ ರಾಶಿ; ಅಕ್ಕಿಯ ಸಿಪ್ಪೆ.

ತೌರವರು (ನಾ)= ತಾಯಿಯ ಮನೆಯವರು; ತೌರೂರಿನವರು; ತೌರು ಮನೆಯವರು.

ತೌರು (ನಾ)= ತವುರು; ಹುಟ್ಟಿದ ಮನೆ; ತಾಯಿ–ತಂದೆಯರ ಮನೆ.

ತೌರೂರು (ನಾ)= ಹುಟ್ಟಿದೂರು; ತಾಯಿತಂದೆಯರು ವಾಸಿಸುವ ಊರು-(ಹಾಡು: ತೌರೂರ ಮನೆನೋಡ ಬಂದೆ । ತಾಯಿ ನೆನಪಾಗಿ ಕಣ್ಣೀರ ತಂದೆ।)

ತೌರ್ಮನಿ (ನಾ)= ಹುಟ್ಟಿದ ಮನೆ; ತಾಯಿ ತಂದೆಯರ ಮನೆ; ತವುರು ಮನೆ.

ತ್ಚು ತ್ಚು (ಧ್ವಿ)= ನಾಯಿಗೆ ಕರೆಯುವ ಸಂಕೇತ; ತ್ಯು

ತ್ರಾಸು (ನಾ)= ಕಷ್ಟ; ತೊಂದರೆ.

ತ್ಯಗ್ಗು (ನಾ)= ತೆಗ್ಗು; ಟೆಗ್ಗು; ತಗ್ಗು; ಆಳಗುಂಡಿ.

ತ್ಯಳ್ಳು (ನಾ)= ತ್ಯಾಳ್ಳು; ತೆಳ್ಳು; ಬಂಡೆಗಲ್ಲಿನಂತಹ ಗಟ್ಟಿನೆಲ.

ತ್ಯಾಗಿ (ನಾ)= ಎಲ್ಲವನ್ನು ತ್ಯಜಿಸಿದವನು.

ತ್ರು (ನಾ)= ಎಮ್ಮೆಗಳಿಗೆ ನಡೆಯಲು ಇಲ್ಲವೆ ಹೊರಳಲು ಸೂಚಿಸುವ ಆದೇಶ ಧ್ವನಿ.

ತ್ಯಾಳ್ಳು (ನಾ)= ತ್ಯಳ್ಳು (ನೋಡಿರಿ)

ತ್ಯಾಳ್ಳುನೆಲಾ (ನಾ)= ಬಂಡೆಯಂಥ ಭೂಭಾಗ; ಹೊಲ.

ತ್ಯು (ನಾ)= ನಾಯಿಗೆ ಕರೆಯುವ ಧ್ವನಿ; ತ್ಚುತ್ಚು.

ತ್ವಾಟಾ (ನಾ)= ತೋಟ; ಮಳು; ಮಳಾ; ನೀರಾವರಿ ಬೆಳೆಯ ಹೊಲ; ತರಕಾರಿ ತೋಟ.

ತ್ವಾಟಿ (ನಾ)= ತೊಗಟೆ; ಕಟ್ಟಿಗೆಯ ಮೇಲ್ಪದರು; ಚರ್ಮ.

ತ್ವಾಟಿತೆಗಿ (ಕ್ರಿ)= ತೊಗಟೆ ಉಚ್ಚು; ಚರ್ಮಸುಲಿ.

ತ್ವಾಳಾ (ನಾ)= ತೋಳ; ಮದು ಮಕ್ಕಳ ಜತೆ ಇರುವ ಸಣ್ಣ ಮಕ್ಕಳು.

ತ್ವೊಂಡ್ಲ (ನಾ)= ತೊಂಡಲು; ತೊಂಡ್ಲು; ತಲೆಗೆ ಹಾಕುವ ದಂಡೆಗೆ ಜೋತು ಬೀಳುವ ಹೂವಿನ ಗೊಂಡೆ.

ತ್ವೊಗುಲು (ನಾ)= ತೊಗಲು ಚರ್ಮ.

ತ್ವೊಗ್ರಿ (ನಾ)= ತೊಗರೆ.

ತ್ವೊಡಿ (ನಾ)= ತೊಡೆ; ಸೊಂಟದಿಂದ ಮಂಡಿಯವರೆಗಿರುವ ಕಾಲಿನ ಭಾಗ; ಊರು.

ತ್ವೊಡಿಮುರಿ (ಕ್ರಿ)= ಊರು ಭಂಗ ಮಾಡು; ತೊಡೆಯ ಎಲುಬನ್ನು ಹೊಡೆದು ಮುರಿ; ತೊಡೆಯ ಎಲುಬು ತುಂಡಾಗು; ತುಂಡು ಮಾಡು.

ತ್ವೊಡ್ಡು (ನಾ)= ತೊಡ್ಡು; ತೊರಡು; ತರಡು; ಮಾನವನ ಅಥವಾ ದನಕರು, ನಾಯಿಗಳ ಅಂಡಾಶಯ.

ತ್ವೊನ್ಸು (ನಾ)= ತೊನಸು; ತೊನಸೆ; ಕುದುರೆ ಅಥವಾ ದನಗಳ ಮೈರಕ್ತ ಹೀರುವ ಹಾರಾಡುವ ಕ್ರಿಮಿ.

ತ್ವೊನ್ಸ್ಯಾ (ನಾ)= ತೊನಸೆ ಮುತ್ತಿದ ಪ್ರಾಣಿಯಂತೆ ಮೈಯೆಲ್ಲ ನೊಣ ಮೆತ್ತಿಕೊಂಡವನು (ಬೈಗುಳ)

ತ್ವೊರಿ (ನಾ)= ಮೊಲೆಯ ಹಾಲು ತೀವ್ರವಾಗಿ ಪ್ರವಹಿಸುವಿಕೆ; ತೀವ್ರವಾಗಿ ಹರಿವ ನದಿ; ಬಿಡುವಿಕೆ; ತೊರೆ.

ತ್ವೊರಿ ಬಿಡು (ಕ್ರಿ)= ಸ್ತನದಲ್ಲಿ ಹಾಲು ಒತ್ತೊತ್ತಾಗಿ, ವೇಗವಾಗಿ ಚಿಮ್ಮು.

ತ್ಪೋರ್ಗ (ನಾ)= ತೊರೆದು ನಿಂತವನು (ಳು); ಮೈ ಪರವೆ ಇಲ್ಲದವನು(ಳು;) ಲಜ್ಜೆ ಇಲ್ಲದವನು (ಳು) ಬೈಗುಳ.

ತ್ಪೋಳ್ಸು (ಕ್ರಿ)= ತೊಳಸು; ಜಳಜಳ ಮಾಡಿಸು; ಹೊಟ್ಟೆಯಲ್ಲಿಯ ವಿಷವನ್ನು ವಾಂತಿ ಮಾಡಿಸಿ ಹೊರ ಬರುವಂತೆ ಮಾಡು; ತೀರ್ಥ ಕುಂಡವನ್ನು ಸ್ವಚ್ಛಗೊಳಿಸು.

ಥ

ಥಂಡ (ನಾ)= ತಂಪು; ಶೀತಲತೆ; ಶೀತ.

ಥಂಡಕಾಳ (ನಾ)ಮ= ಚಳಿಗಾಲ; ಶೀತಕಾಲ.

ಥಂಡಗಾರ್ (ನಾ)= ಮಂಜಿನಂತೆ ತಂಪು; ಅತಿ ತಂಪು.

ಥಂಡಾಥಂಡಾ (ದ್ವಿ)= ಅತಿ ತಣ್ಣಗೆ; ಅತಿಶಾಂತ; ಚಟುವಟಿಕೆ ಇಲ್ಲದ; ಕ್ರಿಯಾ ರಹಿತ.

ಥಂಡಾ ಬರಫ್ (ನಾ) ಉ.= ಮಂಜಿನಲ್ಲಿ ತಯಾರಿಸಿದ ಸಿಹಿ ತಿಂಡಿ; ಆಯ್ಸ್ ಫ್ರೂಟ್; ಆಯ್ಸ್‌ಕ್ರೀಮ್.

ಥಂಡಿ (ನಾ)= ತಂಪು; ತಂಪುಕಾಲ; ಶೀತಲತೆ; ಶೀತ; ಸರ್ದಿ.

ಥಂಡಿ ಆಗು (ಕ್ರಿ)= ನೆಗಡಿ ಬೇನೆ ಬರು; ವಾತಾವರಣ ತಂಪು ಆಗು.

ಥಂಡಿ ಏರು (ಕ್ರಿ)= ತಂಪೇರು; ಶೀತ ಉಂಟಾಗು.

ಥಂಡ್ಗಾರ (ನಾ)= ಥಂಡಗಾರ್ (ನೋಡಿರಿ).

ಥುಂಬುಸು (ಕ್ರಿ)= ತುಂಬಿಸು; ತುಂಬುವಂತೆ ಮಾಡಿಸು; ಭರ್ತಿಮಾಡಿಸು; ತುಂಬಿ ಹೊರಸೂಸುವಂತೆ ಮಾಡಿಸು.

ಥಕಥಕ (ದ್ವಿ)= ತಕತಕ (ಹಾಡು: ಥಕ ಥಕ್ಕ ಥೈಥೈಯ ಕುಣಿಯೋಣು ಬಾರ। ದ.ರಾ. ಬೇಂದ್ರೆ)

ಥಕಾವಟ (ನಾ)ಹಿಂ.= ಆಯಾಸ; ದಣಿವು; ಪರಿಶ್ರಮದಿಂದ ಬಳಲುವಿಕೆ, ಸುಸ್ತಾಗುವಿಕೆ.

ಥಕಾಸು (ಕ್ರಿ)= ಆಯಾಸಗೊಳ್ಳು; ಪರಿಶ್ರಮದಿಂದ ಬಳಲು; ಸುಸ್ತಾಗು.

ಥಟ್ಟಂತ (ಅ)= ತಟ್ಟನೆ; ಟಪ್ಪಂತ; ತಕ್ಷಣ; ಆಗಿಂದಾಗ.

ಥಟ್ಟನೆ (ಅ)= ಥಟ್ಟಂತ (ನೋಡಿರಿ).

ಥಟ್ಟಾ (ನಾ)= ಥಟ್ಟೆ; ನಕರಿ; ಚೇಷ್ಟೆ; ನಗೆಚಾಟಿಕೆ; ಹಾಸ್ಯ.

ಥಟ್ಟಾ ಮಾಡು (ಕ್ರಿ)= ಥಟ್ಟೆ ಮಾಡು; ನಕರಿಯಾಡು; ನಗೆಚಾಟಿಕೆಯಾಡು; ಹಾಸ್ಯ ಮಾಡು.

ಥಟ್ಟೆ (ನಾ)= ಥಟ್ಟಾ (ನೋಡಿರಿ).

ಥಟ್ಟ್ಯಾ ಮಾಡು (ಕ್ರಿ)= ಥಟ್ಟಾಮಾಡು (ನೋಡಿರಿ).

ಥಟ್ಟಾ ಹಚ್ಚು (ಕ್ರಿ)= ಥಟ್ಟಾ ಮಾಡು (ನೋಡಿರಿ).

ಥಡಿ (ನಾ)= ಕುದುರೆಯ ಬೆನ್ನಮೇಲೆ ಹಾಕುವ ಜೀನು; ಎತ್ತಿನ ಬೆನ್ನ ಮೇಲೆ ಹಾಕುವ ಮುಟ್ಟು, ಹಾಸಿಗೆ; ಹಳ್ಳದ ಅಥವಾ ನದಿಯ ದಂಡೆ (ಉದಾ: ನಾರಂಜಿ ಥಡಿ ಜ್ವಾಳಾ ಭಾಳಮಸೂರ ಅವಾ).

ಥಣಸು (ನಾ)= ತಂಪು; ಹಸಿ; ಒದ್ದೆ.

ಥಣಸು ಹಿಡಿ (ಕ್ರಿ)= ತಂಪೇರು; ತೇವಗೊಳ್ಳು; ಹಸಿಹಿಡಿ; ಹಸಿಯೇರು.

ಥಣಸೇರು (ಕ್ರಿ)= ಥಣಸು ಹಿಡಿ (ನೋಡಿರಿ)

ಥಣಾಗ್ಗಾರ (ನಾ)= ಮಂಜಿನಷ್ಟು ತಂಪು.

ಥಣ್ಣಗ (ಅ)= ತಣ್ಣಗೆ; ತಂಪೇರಿದ; ತೇವವುಳ್ಳ.

ಥಣ್ಣಗಗಾರ (ನಾ)= ಅತಿ ತಂಪು; ಮಂಜಿನಂತೆ ತಂಪು.

ಥಣ್ಣೀರು (ನಾ)= ತಣ್ಣೀರು; ತಂಪು ಉದಕ; ತಂಪಾದ ಜಲ.

ಥಣ್ಣೀರು ಹಾಕು (ಕ್ರಿ)= ತಣ್ಣೀರೆರಚು; ತಣ್ಣಗೆ ಮಾಡು; ಶಾಂತಗೊಳಿಸು; ಥಮಾಸು.

ಥತ್ (ಅ)= ಛೀನಿನ; ಥೂನಿನ.

ಥತ್ತರ ಬತ್ತರ (ನಾ)= ತತ್ರ ಬತ್ರ; ದಾರಿ ತೋಚದಂತೆ ಮಾಡುವಿಕೆ.

ಥತ್ತುರ್ಸು (ಕ್ರಿ)= ಥರಥರ ನಡುಗು; ದಿಕ್ಕುತೋರದಂತಾಗು; ಏನೂ ಹೊಳೆಯದಂತಾಗು.

ಥಪ್ಪಡ (ನಾ) ಹಿಂ.= ಮೆಲುಕಿನಲ್ಲಿ ಕೊಡುವ ಏಟ; ಚಪರಾಕಿ.

ಥಪ್ಪಡ ಕುಡು (ಕ್ರಿ)= ಮೆಲುಕಿನಲ್ಲಿ ಏಟ ಹಾಕು; ಚಪರಾಕಿ ಹಾಕು.

ಥಪ್ಪಿ (ನಾ)= ಥಾಪಿ; ಒಂದರ ಮೇಲೊಂದು ಹೊಂದಿಸುವಿಕೆ.

ಥಪ್ಪಿ ಹಚ್ಚು (ಕ್ರಿ)= ಥಾಪಿ ಹೊಡಿ, ಹಚ್ಚು; ಒಂದರ ಮೇಲೊಂದು ಹೊಂದಿಸಿಡು.

ಥಮಾಸು (ಕ್ರಿ)= ತಡೆ; ನಿಲ್ಲಿಸು; ಶಾಂತಗೊಳಿಸು.

ಥರ (ನಾ)= ತರ; ಗೋಡೆಯ ಸಾಲುಗಲ್ಲು.

ಥರಗಲ್ಲು (ನಾ)= ಗೋಡೆಯ ಸಾಲುಗಲ್ಲು, ಗೋಡೆಯ ತರಕ್ಕೆ ಬಳಸುವ ಕಲ್ಲು.

ಥರಥರ ನಡುಗು (ಕ್ರಿ)= ಗದಗದ ನಡುಗು; ಕಂಪಿಸು

ಥರಾವರಿ (ಗು)= ತರಹೆವಾರಿ; ತರತರಹದ.

ಥರ್ಕಿ (ನಾ)= ನಡುಕ, ಕಂಪನ.

ಥರ್ಕಿಹುಗು (ಕ್ರಿ)= ನಡುಕಹುಗು; ಮೈಯಲ್ಲಿ ನಡುಕ ಉಂಟಾಗು.

ಥರ್ಗರಿ (ಕ್ರಿ)= ಥರಥರ ನಡುಗು; ಗದ್ಗದಿಸು; ನಡುಕ ಉಂಟಾಗು.

ಥರ್ಗುಟ್ಟು (ಕ್ರಿ)= ಥರ್ಗರಿ (ನೋಡಿರಿ).

ಥರ್ಮಾಸು (ನಾ)ಇಂ.= ಬಿಸಿ ಪಾನೀಯ ಆರದಂತೆ ಇಡುವ ಬಿಸಿಪಾತ್ರೆ.

ಥಳಥಳ (ದ್ವಿ)= ತಳತಳ; ಚಳಚಳ.

ಥಳಿ (ನಾ)= ತಳಿ; ಬೀಜದ ವಂಶಾವಳಿ.

ಥಳಿಸು (ಕ್ರಿ)= ಕುಟ್ಟು; ಧಾನ್ಯದ ಮೇಲ್ಪದರು ಉದುರುವಂತೆ ಕುಟ್ಟು; ಮೈ ಮೆತ್ತಗಾಗುವಂತೆ ಹೊಡೆ; ಪೆಟ್ಟು ಕೊಡು.

ಥಳ್ಸು (ಕ್ರಿ)= ಥಳಿಸು (ನೋಡಿರಿ).

ಥಾಂಡಾ (ನಾ)= ತಾಂಡಾ; ಥಾಂಡ್ಯಾ; ತಂಡ; ಲಮಾಣಿಗರ ವಸತಿ.

ಥಾಂಡ್ಯಾ (ನಾ)= ಥಾಂಡಾ (ನೋಡಿರಿ)

ಥಾಟಾಗು (ಕ್ರಿ)= ಸಿಂಗಾರಾಗು; ಡೌಲು ಪ್ರದರ್ಶಿಸು.

ಥಾಟು (ನಾ)= ಸಿಂಗಾರ; ಡೌಲುಪ್ರದರ್ಶನ.

ಥಾಣ್ಯಾ (ನಾ)= ಠಾಣಾ; ಠಾಣೆ; ಥಾಣೆ; ಪೋಲೀಸು ಠಾಣೆ.

ಥಾತ್ಪೀರಿ ( )= ಸಾವಕಾಶ; ಮೆಲ್ಲಗೆ; ಆತುರಪಡದೆ.

ಥಾನು (ನಾ)=. ಬಟ್ಟೆಯ ಸುರುಳಿ, ಚಚ್ಚೌಕ ಸುರುಳಿ

ಥಾನ್ಯಾ (ನಾ)= ಥಾಣ್ಯಾ (ನೋಡಿರಿ).

ಥಾಪಿ (ನಾ)= ಥಪ್ಪಿ; ಒಂದರ ಮೇಲೊಂದು ಹೊಂದಿಸಿದ ಚೀಲಗಳ ಏರು; ನೆಲವನ್ನು ಬಡಿದು ಗಟ್ಟಿಗೊಳಿಸುವ ಕಟ್ಟಿಗೆಯ ಸಾಧನ; ಧುಮ್ಮಸು ಬಡಿವ ಸಾಧನ; ಸಿಮೆಂಟ್ ಅಥವಾ ರೇತಿ ಮತ್ತು ಸಿಮೆಂಟ್ ಮಿಶ್ರಣವನ್ನು ಕಟ್ಟಡ ಕೆಲಸದಲ್ಲಿ ಬಳಿಯಲು ಬಳಸುವ ಉಪ್ಪಾರನ ಕೈಯ ಉಪಕರಣ; ಥ್ಯಾಪಿ; ತೇಪೆ.

ಥಾಪಿ ಹಚ್ಚು (ಕ್ರಿ)= ಚೀಲಗಳನ್ನು ಒಂದರ ಮೇಲೊಂದು ಹೊಂದಿಸು; ಥಾಪಿ ಹೊಡಿ.

ಥಾಪಿ ಹೊಡಿ (ಕ್ರಿ)= ಥಾಪಿ ಹಚ್ಚು (ನೋಡಿರಿ).

ಥಾಮಣಿ (ನಾ)= ತಡೆಗಟ್ಟುವಿಕೆ; ನಿಲ್ಲಿಸುವಿಕೆ; ಶಾಂತಿ; ಸಮಾಧಾನ; ಸೈರಣೆ.

ಥಾಮ್ನಿಬೀಳು (ಕ್ರಿ)= ಶಾಂತಿಯುಂಟಾಗು; ಸಮಾಧಾನ ಉಂಟಾಗು; ಸೈರಣೆ ಉಂಟಾಗು.

ಥಾರ್ಯಾ (ನಾ)= ಠಿಕಾಣೆ; ಜಾಗಾ; ಸ್ಥಿರತೆ.

ಥಾರ್ಯಾಕ ಹತ್ತು (ಕ್ರಿ)= ಒಂದು ಕಡೆ ಸ್ಥಿರವಾಗಿ ನೆಲೆಸು; ಬದುಕಿಗೊಂದು ಆಧಾರ ಕಂಡುಕೊ; ನೆಮ್ಮದಿ ಹೊಂದು.

ಥಾಲಿ (ನಾ)= ತಾಟು; ತಟ್ಟೆ; ಹಂಚು; ರೊಟ್ಟಿ ಹಂಚು; ಬೋಗೋಣಿ.

ಥಾಲಿಪೀಟ (ನಾ) ಮ.= ಒಂದು ಬಗೆಯ ರೊಟ್ಟಿ; ತಪ್ಪಲೆ ರೊಟ್ಟಿ; ಹಂಚಿನ ಮೇಲೆ ಎಣ್ಣೆಯಲ್ಲಿ ಬೇಯಿಸಿದ ಕಲಬೆರಕೆ ಹಿಟ್ಟಿನ ದಪ್ಪವಾದ ರೊಟ್ಟಿ; ಸೆಂಡಿಗೆ; ಸಂಡಿಗೆ.

ಥಾವ್ಲಿ (ಅ)= ಕಡೆ; ಸ್ಥಳ (ಉದಾ: ಅಂವಾ ಒಂದು ಥಾವ್ಲಿ ಕೂಡಾದಿಲ್ಲಾ, ನಿಂದ್ರಾದಿಲ್ಲಾ).

ಥಾಳಿ (ನಾ)= ಆಳವಾದ ತಗ್ಗಿನಲ್ಲಿ ದುಂಡಾಗಿ ಕುಳ್ಳುಗಳನ್ನು ಹೊಂದಿಸಿ; ಉರಿಹಚ್ಚಿ ಹಾಲು ಕಾಯಿಸುವ ಒಲೆ; ಸ್ಥಿರ ಅಗ್ಗಿಷ್ಟಿಕೆ; ಕುಳ್ಳಿನ ಒಲ್ಗುಣೆ.

ಥಿರ (ನಾ)= ಸ್ಥಿರ; ತರ; ತರಹ; ರೀತಿ (ಉದಾ: ಅವನ್ಮಾತು ಒಂದು ಥಿರ ಇರಾದಿಲ್ಲ).

ಥಿರಬುದ್ಧಿ (ನಾ)= ಸ್ಥಿರ ಬುದ್ಧಿ; ಸ್ಥಿರ ಮನಸ್ಸು.

ಥುಂಬಾ (ಅ)= ತುಂಬ; ತುಂಬಿದ; ಭರ್ತಿಯಾದ; ಪೂರ್ಣಗೊಂಡ.

ಥುಂಬಿ ಬರು (ಕ್ರಿ)= ಪೂರ್ತಿಯಾಗು; ಪೂರ್ಣಗೊಳ್ಳು; ಸಾವು ಸಮೀಪಿಸು; ಆಳ್ತಿ ಸರಿದು ಬರು; ಮುದ್ದತ್ತುಮುಗಿ.

ಥುಂಬಿ ಬಿಡು (ಕ್ರಿ)= ಪೂರ್ತಿಯಾಗಿ ತುಂಬು; ಪೂರ್ಣಗೊಳಿಸು; ಚೀಲದಲ್ಲಿ ಅಥವಾ ಬುಟ್ಟಿಯಲ್ಲಿ ಧಾನ್ಯ ಇಲ್ಲವೆ ವಸ್ತುಗಳನ್ನು ತುಂಬು; ಪಾತ್ರೆಯಲ್ಲಿ ನೀರು. ತೈಲ ಮೊದಲಾದ ದ್ರವ ವಸ್ತು ತುಂಬು; (ಗಾದೆ: ಥುಂಬಿದ್ಕೊಡಾ ತುಳುಕಾದಿಲ್ಲ).

ಥುಂಬುಸು (ಕ್ರಿ)= ತುಂಬಿಸು; ತುಂಬುವಂತೆ ಮಾಡಿಸು.

ಥುಂಬ್ಯಾದ (ಕ್ರಿ)= ತುಂಬಿದೆ; ಭರ್ತಿಯಾಗಿದೆ; ಪೂರ್ಣಗೊಂಡಿದೆ.

ಥುತ್ (ಅ)= ಥೂನಿನ; ಛೀನಿನ; ಧಿಕ್ಕಾರ.

ಥುತ್ತೇರಿ (ಕ್ರಿ)= ಥೂನಿನ; ಛೀನಿನ.

ಥುತ್ನಿನ್ಹಣ್ತೆ ಕಿತ್ನಿನ್ಸುಡ್ಸಿ (ನು)= ಹಲಗೆವಾದ್ಯ ಬಾರಿಸುವ ತಾಳ.

ಥೂ (ಅ)= ಥುತ್; ಛೀ; ಧಿಕ್ಕಾರ; ಥೂಕರಿಸುವಿಕೆ.

ಥೂಕದಾನ (ನಾ)= ಉಗಲ್ದಾನ; ಉಗುಳಲು ಬಳಸುವ ಪಾತ್ರೆ.

ಥೂ ಥೂ (ದ್ವಿ)= ಛೀಛೀ; ಛೀಥೂ ಹಾಕುವಿಕೆ; ಮತ್ತೆ ಮತ್ತೆ ಧಿಕ್ಕರಿಸುವಿಕೆ; ಅನೇಕರು ಧಿಕ್ಕರಿಸುವಿಕೆ.

ಥೆಂಬ್ಗಿ (ನಾ)= ತಂಬಿಗೆ; ನೀರು ಕುಡಿಯಲು ಬಳಸುವ ತಾಮ್ರ ಹಿತ್ತಾಳೆ ಅಥವಾ ಸ್ಟೀಲಿನ ಪಾತ್ರೆ; ಚರಿಗೆ; ಚರ್ಗಿ (ಜಾನಪದ ಪ್ರಾಸ: ಜಂಬಿಗಿ ತುಕಪ್ಪ। ಥೆಂಬ್ಗಿಕಳ್ಳ।)

ಥೆಂಬ್ಗಿ ತೊಗೊಂಡು ಹೋಗು (ನುಡಿ)= ತಂಬಿಗೆಯಲ್ಲಿ ನೀರು ತೆಗೆದುಕೊಂಡು ಬಯಲಿನತ್ತ ಹೋಗು; ಕಕ್ಕಸಕ್ಕೆ ಹೋಗು; ಬಯಲ್ಕಡೆಗೆ ಹೋಗು; ಮೈದಾನಕ್ಕೆ ಹೋಗು; ವಿಸರ್ಜನೆಗೆ ಹೋಗು.

ಥೆಳ್ಳಗ (ಅ)= ತೆಳ್ಳಗೆ; ತೆಳುವಾದ; ಸೊಟ್ಟಾದ.

ಥೆಳ್ಳನ (ಅ)= ತೆಳ್ಳಗಿನ; ತೆಳುವಾದ; ಸೊಟ್ಟಾದ (ಕೋಲಾಟದ ಹಾಡು: ಥೆಳ್ಳನ ಪೋರಿ ಭೆಳ್ಳನ ಕುಬುಸಾ। ಹಳ್ಳಕ ನಡದಾಳ ಒಗಿಲಾಕ।।).

ಥೆಳ್ಳನ್ರೊಟ್ಟಿ (ನಾ)= ಹಿಟ್ಟಿನಿಂದ ಸಿದ್ಧ ಗೊಳಿಸಿದ ತೆಳ್ಳಗಿನ ರೊಟ್ಟಿ.

ಥೇಂಬ (ನಾ) ಮ.= ಹನಿ; ನೀರಿನ ಹನಿ; ಎಣ್ಣೆಯ ಹನಿ; ದ್ರವವಸ್ತುಗಳ ಬಿಂದು.

ಥೇಟ್ (ಅ) ಮ.= ಹಾಗೆಯೇ; ಅದರಂತೆಯೇ ಹೂಬೇಹೂಬ; ಸೇಮ್; ತದ್ರೂಪವಾದ; ವ್ಯತ್ಯಾಸವಿಲ್ಲದ.

ಥೇರು (ನಾ)= ತೇರು; ರಥ; ದೇವರ ಮೆರವಣಿಗೆಗಾಗಿ ಬಳಸುವ ಗೋಪುರಾಕಾರದ ವಾಹನ.

ಥೇರೆಳಿ (ಕ್ರಿ)= ತೇರನ್ನು ಮುಂದಕ್ಕೆ ಸಾಗಿಸು; (ನು) ಹೆಣದ ವಾಹನವನ್ನು ಮುಂದಕ್ಕೆ ಸಾಗಿಸು; ಹೆಣವಾಗು; ಸಾಯು.

ಥೇರ್ಮೈದಾನ (ನಾ)= ತೇರೆಳೆಯುವ ಬಯಲು ಭೂಮಿ.

ಥೈಥೈ (ದ್ವಿ)= ಕುಣಿಯುವಿಕೆ; ನರ್ತಿಸುಇಕೆ; ಮನಬಂದಂತೆ ಕುಣಿದಾಡುವಿಕೆ.

ಥೈಲಿ (ನಾ)= ಕೈಚೀಲ; ಕೈಯಲ್ಲಿ ಹಿಡಿದುಕೊಂಡು ಹೋಗಲು ಬಳಸುವ ಕಸೆಯುಳ್ಳ ಚೀಲ; ಚೀಲ; ಪಿಶ್ವಿ.

ಥೊಂಟ (ನಾ)= ತುಂಟ; ತೊಂಟ; ಹಟಮಾರಿ; ಉದ್ಧಟ; ಹುಂಬ.

ಥೊಂಟ್ಗೈ (ನಾ)= ತೊಂಟಗೈ; ಬಳೆಯಿಲ್ಲದ ಕೈ; ವಿಧವೆಯ ಬಳೆಯಿಲ್ಲದ ಕೈ.

ಥೊಂಟತನ (ನಾ)= ತೊಂಟತನ.

ಥೊಪಾಸು (ಕ್ರಿ)= ಥೋಪಾಸು; ಮೆತ್ತು; ಸಾರಿಸು; ಅಂಟಿಸು; ಗೋಡೆಗೆ ಮಣ್ಣು ಅಥವಾ ಸಿಮೆಂಟ್ ಮಿಶ್ರಣ ಲೇಪಿಸುವರು.

ಥೋಡೆ (ವಿ.)= ಹಿಂ. ಸ್ವಲ್ಪ; ತುಸು; ಅಲ್ಪ; ಥ್ವಾಡೆ.

ಥೋಡೆದ್ರಾಗ ಗಾಡಾ (ನು)= ಅಲ್ಪಸುಖಿ; ಅಲ್ಪ ತೃಪ್ತ; ಅತಿಆಶೆಯನ್ನು ತೊರೆದವ.

ಥೋಡೆ ಭೌತ (ನಾ)= ಹೆಚ್ಚು ಕಡಿಮೆ; ಅಂದಾಜು, ಅಜಮಾಸು

ಥೋಪ್ಲಿ(ನಾ)= ಮೆತ್ತುವಿಕೆ; ಲೇಪಿಸುವಿಕೆ.

ಥೋಪ್ಲಿ ಮಾಡು (ಕ್ರಿ)= ಥೋಪಾಸು; ಮೆತ್ತು; ಲೇಪಿಸು; ಅಂಟಿಸು; ಸವರು.

ಥ್ಯಾಪಿ (ನಾ)= ತೇಪೆ; ಥಾಪಿ (ನೋಡಿರಿ)

ಥೋಬಾಡ (ನಾ) ಮ.= ಮೆಲುಕು; ಮುಖ.

ಥೋಬಾಡ್ದಾಗಕುಡು (ಕ್ರಿ)= ಮೆಲುಕಿನಲ್ಲಿ ಹೊಡೆ.

ಥ್ಯಾಳ್ಳಗ ()= ತೆಳ್ಳಗ; ಥೆಳ್ಳಗ (ನೋಡಿರಿ).

ಥ್ರೂ (ನಾ)= ಎಮ್ಮೆಕೋಣಗಳಿಗೆ ನಡೆಯಲು ಇಲ್ಲವೆ ಹೊರಳಲು ನೀಡುವ ಆದೇಶ, ಸಂದೇಶ

ಥ್ವಾಡೆ (ನಾ)= ಥೋಡೆ (ನೋಡಿರಿ)

ಥ್ವಾಡೆಭೌತ (ನಾ)= ಥೋಡೆಭೌತ (ನೋಡಿರಿ).

ದ

ದಂ (ನಾ)= ದಮ್ಮು; ಉಸಿರು; ಶಕ್ತಿ

ದಂಗಲ್ (ನಾ)= ಸುಣ್ಣ, ರೇತಿ, ನೀರನ್ನು ಬೆರೆಸಿ ನುರಿಸುವ ಗಾಣ; ಸುಣ್ಣದ ಗಾಣ; ಗಚ್ಚಿನ ಗಾಣ.

ದಂಗಾ (ನಾ)= ಬಂಡಾಯ; ಬಂಡು; ಪ್ರತಿಭಟನೆ; ಗದ್ದಲ; ಗೊಂದಲ; ದೊಂಬಿ.

ದಂಗಾಗು (ಕ್ರಿ)= ಆಶ್ಚರ್ಯಪಡು; ದಿಗಿಲುಗೊಳ್ಳು.

ದಂಗಾ ನಡ್ಸು (ಕ್ರಿ)= ದಂಗೆ ಹೂಡು; ಪ್ರತಿಭಟನೆ ನಡೆಸು; ಗದ್ದಲ ಎಬ್ಬಿಸು; ಗೊಂದಲ ಉಂಟುಮಾಡು.

ದಂಗಾಮಸ್ತಿ (ನಾ) ಉ.= ಜಗಳ; ಹೊಡೆದಾಟ; ಗದ್ದಲ ಗೊಂದಲ.

ದಂಗು (ನಾ)= ಆಶ್ಚರ್ಯ; ಗಾಬರಿಗೊಳ್ಳುವಿಕೆ.

ದಂಗು ಬಡಿ (ಕ್ರಿ)= ಆಶ್ಚರ್ಯಚಕಿತನಾಗು; ಗಾಬರಿಯಾಗು; ದಿಗಿಲುಗೊಳ್ಳು.

ದಂಟಾ (ನಾ)= ಡಂಟಾ; ಉದ್ದನೆಯ ಕೋಲು; ದಂಡಿಗೆ.

ದಂಡಾ (ನಾ)= ದಂಡ; ದಂಡನೆ; ಶಿಕ್ಷೆ; ಸಜಾ; ಸಜೆ.

ದಂಡಾಕುಡು (ಕ್ರಿ)= ಶಿಕ್ಷೆಯ ಹಣವನ್ನು ಸಲ್ಲಿಸು; ಶಿಕ್ಷೆಯನ್ನು ಭೋಗಿಸು.

ದಂಡಾಹಾಕು (ಕ್ರಿ)= ದಂಡ ಹೇರು; ಶಿಕ್ಷೆ ವಿಧಿಸು.

ದಂಡಾಹೇರು (ಕ್ರಿ)= ಶಿಕ್ಷಿಸು; ಶಿಕ್ಷೆ ವಿಧಿಸು.

ದಂಡಿ (ನಾ)= ಕತ್ತರಿಸಿದ ಕಬ್ಬಿನ ಮುಂತುದಿ, ಚೆಂಡಿ; ಸೊಪ್ಪುಳ್ಳ ಕಬ್ಬಿನ ಮುಂಭಾಗ; ಹಣೆಗೆ ಕಟ್ಟುವ ಹೂವಿನ ದಂಡೆ; ತಲೆ ಮುಚ್ಚುವಂಥ ಹೂವಿನ ಮಾಲೆ; ದಾಂಡಿ.

ದಂಡಿಕಟ್ಟ (ನು)= ಸಾಯಲಿ; ಹೆಣವಾಗಿ ಹೂಮಾಲೇಯಿಂದ ಸಿಂಗಾರಗೊಳ್ಳಲಿ (ಬೈಗುಳ)

ದಂಡಿಗಿ (ನಾ)= ದಂಡ್ಗಿ; ದಂಡಿಗೆ; ಉದ್ದನೆಯ ಕೋಲು.

ದಂಡಿಹರಿಲಿ (ನು)= ಮುತ್ತೈದೆತನ ಹೋಗಲಿ; ಗಂಡ ಸಾಯಲಿ, ವಿಧವೆಯಾಗಲಿ (ಬೈಗುಳ)

ದಂಡು (ನಾ)= ಸೈನ್ಯ (ಜಾನಪದ ಪ್ರಾಸ: ಸಂಗ್ಯಾನಿಂಗ್ಯಾ ಕೂಡಿ। ಕರ್ಕಿಹೊಲಾಮಾಡಿ। ದಂಡು ಬಂತೊ ಸಂಗ್ಯಾ। ಓಡಿಹೋಗೋ ನಿಂಗ್ಯಾ).

ದಂಡ್ಗಿ (ನಾ)= ದಂಡಿಗಿ (ನೋಡಿರಿ).

ದಂಡ್ಗಿ ಹೊಡಿ (ನು)= ತೂಕ ಮಾಡುವಲ್ಲಿ ಮೋಸ ಮಾಡು.

ದಂತ ಮಂಜನ (ನಾ)= ಹಲ್ಲು ಪುಡಿ; ಹಲ್ಲು ತಿಕ್ಕುವ ಚೂರ್ಣ; ದಾಂತ ಮಂಜನ; ದಾಚಿಣ.

ದಂತಿ (ನಾ)= ಜಂತಿ ಎಂಬ ದಪ್ಪ ಎಲೆಯ ಮುಳ್ಳುಗಿಡ.

ದಂಬ್ಡಿ (ನಾ)= ಕೈಯಲ್ಲಿ ಹಿಡಿದು ಬಾರಿಸುವ ಚರ್ಮವಾದ್ಯ.

ದಕ್ಕಿಸು (ಕ್ರಿ)= ಉಳಿಸು; ಉಳಿಸಿಕೊ; ಕಾಪಾಡು; ಪಾರು ಮಾಡು; ಗಂಡಾಂತರ ದೂರ ಮಾಡು.

ದಕ್ಕು (ಕ್ರಿ)= ಉಳಿದುಕೊ; ಪ್ರಾಣ ಉಳಿ; ಗಂಡಾಂತರ ತಪ್ಪು; ಜೀರ್ಣಾಗು; ಸಿಗು; ಪ್ರಾಪ್ತವಾಗು.

ದಕ್ಷಣಾ (ನಾ) ಸ.= ಗುರು ಹಿರಿಯರಿಗೆ, ಗೌರವಾನ್ವಿತರಿಗೆ, ಪೂಜಾರಿಗೆ, ಪುರೋಹಿತರಿಗೆ, ಅಳಿಯಗೆ ನೀಡುವ ಕಾಣಿಕೆ. (ಮಂತ್ರ: ದಕ್ಷಣಾಂ ಸಮರ್ಪಯಾಮಿ)

ದಗಡ (ನಾ) ಮ.= ಕಲ್ಲು; ಶಿಲೆ.

ದಗಡಿ (ನಾ) ಮ.= ದಗಡ; ಕಲ್ಲು;ಚಿಕ್ಕಗುಂಡುಗಲ್ಲು; ಉರಿಲಿಂಗದೇವರು ಉರಿಲಿಂಗ ಪೆದ್ದಿಗೆ ನೀಡಿದ ದಗಡಿಲಿಂಗ ಮತ್ತು ಮಂತ್ರ 'ಘೇದಗಡಿ; ಜಾದಗಡಿ'.

ದಗಲ್ಬಾಜ (ನಾ) ಹಿ.= ಮೋಸಗಾರ; ವಂಚಕ; ದ್ರೋಹಿ.

ದಗಲಬಾಜಿ (ನಾ) ಹಿಂ.= ಮೋಸಗಾರಿಕೆ; ವಂಚನೆ; ದ್ರೋಹ.

ದಗಾಬಾಜ (ನಾ) ಹಿಂ.= ದಗಲ್ಬಾಜ (ನೋಡಿರಿ).

ದಗಾಬಾಜಿ (ನಾ)= ಹಿಂ.= ದಗಲ್ಬಾಜಿ (ನೋಡಿರಿ).

ದಗಾ ಮಾಡು (ಕ್ರಿ)= ಮೋಸಮಾಡು; ವಂಚಿಸು; ದ್ರೋಹಬಗೆ.

ದಗ್ದಾ (ನಾ)= ಕೆಲಸ; ಕಾಯಕ; ಧಂದೆ.

ದಗ್ದಾ ಮಾಡು (ಕ್ರಿ)= ಕೆಲಸ ಮಾಡು; ಕಾಯಕ ಮಾಡು; ಧಂದೆ ಮಾಡು; ದುಡಿ ಪರಿಶ್ರಮಿಸು.

ದಟ್ಟುಣ್ಕಿ (ನಾ)= ದಟ್ಟಣಿಕೆ; ದಟ್ಟಣೆ; ಒತ್ತೊತ್ತಾಗಿರುವಿಕೆ.

ದಡ್ಡು (ನಾ)= ಕಾಯಿಗಟ್ಟಿದ್ದು; ಗಟ್ಟಿಯಾದದ್ದು; ಒರಟಾದದ್ದು; ಗಡ್ಡೆ ಗಟ್ಟಿದ್ದು.

ದಡ್ಡುಗಟ್ಟು (ಕ್ರಿ)= ಚರ್ಮವು ಒರಟಾಗು; ಕಾಯಿಗಟ್ಟು; ಗಟ್ಟಿಯಾಗು; ಗದಡುಗಟ್ಟು.

ದಡ್ಡು ಭೀಳು (ಕ್ರಿ)= ದಡ್ಡುಗಟ್ಟು (ನೋಡಿರಿ)

ದಣಿ (ನಾ)= ಧಣಿ; ಒಡೆಯ; ಯಜಮಾನ; (ಕ್ರಿ) ಆಯಾಸಪಡು; ಬಳಲು; ತಣಿ; ತೃಪ್ತಿಹೊಂದು; ಹೊಟ್ಟೆ ತುಂಬ ಉಣ್ಣು;

ತಿನ್ನು; ತೃಪ್ತಿಯಾಗುವಂತೆ ತಿನ್ನು; ಊಟಮಾಡು.

ದಣು (ನಾ)= ದಣಿವು; ಆಯಾಸ; ರೋಗ; ಬೇನೆ; ಬ್ಯಾನಿ; ಜಡ್ಡು.

ದಣು ಬರು (ಕ್ರಿ)= ಬೇನೆಬರು; ಜಡ್ಡುಂಟಾಗು; ರೋಗ ಉಂಟಾಗು.

ದಣುವಾಗು (ಕ್ರಿ)= ದಣಿವು ಉಂಟಾಗು; ರೋಗ ಬರು; ಬೇನೆ ಬರು.

ದತ್ತ (ನಾ)= ದೈವ; ಹಣೆಬರಹ; ವಿಧಿ (ಗಾದೆ: ಎತ್ತ ಹೋದ್ರ ಬೀ ದತ್ತ ತಪ್ಪಾಲ! ಮನಿಗಿ ಬಂದ್ರ ನುಚ್ಚು ತಪ್ಪಾಲ).

ದತ್ತದಿಗಂಬರ (ನಾ)= ಗಾಣಗಾಪುರದ ದತ್ತಾತ್ರೇಯರು; ನಾಥ ಸಂಪ್ರದಾಯದ ಪೂಜ್ಯರು; ಹಂಶಕವಿ ಹಣಮಂತಪ್ಪ ವಲ್ಲೆಪೂರೆಯವರ ವಚನಾಂಕಿತ.

ದತ್ತುಕ (ನಾ)= ದತ್ತಕ; ದತ್ತ ಪುತ್ರ; ಬೇರೆಯವರ ಮಗನನ್ನು ನಿಪುತ್ರಿಕರು ತನ್ನ ಮಗನಾಗಿ ಸ್ವೀಕರಿಸಿದ್ದು.

ದತ್ತುಕ ತೊಗೊ (ಕ್ರಿ)= ದತ್ತು ಪುತ್ರ ಸ್ವೀಕಾರ ಮಾಡು; ಅನ್ಯರ ಮಗನನ್ನು ತನ್ನ ಮಗನನ್ನಾಗಿ ಸ್ವೀಕಾರ ಮಾಡು.

ದನಾ (ನಾ)= ದನ, ಎಮ್ಮೆ, ಆಕಳು ಮೊದಲಾದ ಸಾಕು ಪ್ರಾಣಿಗಳು.

ದನಾಕರು (ನಾ)= ದನಗಳೂ ಕರುಗಳೂ; ಎಮ್ಮೆ, ಆಕಳು, ಅವುಗಳ ಕರುಗಳು ಒಟ್ಟಾಗಿ.

ದನಾಕಾಯಾಂವ (ನಾ)= ದನಗಾಹಿ; ತುರುಗಾಹಿ (ಉದಾ: ದನ ಕಾಯಾಂವ್ನ ಇದ್ದೋಟು ಬುದ್ಧಿ ಸಾಲಿ ಕಲ್ತೋರಿಗಿರಾಲ).

ದನ್ಯಾಸು (ಕ್ರಿ)= ಹೊಡೆ; ಗುದ್ದು; ಮುಂದುವರಿಸು.

ದನ್ವಾಪಾರ (ನಾ)= ದನ ಕರುಗಳ ಖರೀದಿ ವಿಕ್ರಿಕ್ರಿಯೆ.

ದನನನ (ಅ) = ಉರಿಯುವ ಕ್ರಮ; ದಹನ ಕ್ರಿಯೆ.

ದನ್ನಿ (ಗು)= ಜೋರಾಗಿ; ರಭಸವಾಗಿ.

ದನ್ನಿಮಳಿ (ನಾ)= ಭಯಂಕರ ಮಳೆ; ವಿಪರೀತ ಮಳೆ.

ದನ್ನಾ (ವಿ)= ದೊಡ್ಡ; ಭಯಾನಕ; ಭಯಂಕರ.

ದಪಾ (ನಾ)= ಕಾನೂನು; ಸಲ; ಸಾರೆ (ಉದಾ: ಇದೊಂದು ದಪಾಮಾಫ್ ಮಾಡ್ರೀ ಸಾಬ್ರೇ).

ದಪೇದಾರ (ನಾ)= ತಹಸೀಲ ಕಛೇರಿಯ ಓಲೆಕಾರ.

ದಪ್ತೂರು (ನಾ) ಉ.= ಧಫ್ತರ; ಕಚೇರಿಯ ಕಡತಗಳ ಕಟ್ಟು; ಮಕ್ಕಳ ಪುಸ್ತಕಗಳ ಗಂಟು; ಪುಸ್ತಕಗಳ ಚೀಲ.

ದಪ್ಪು (ನಾ)= ಡಪ್ಪು; ಡಪ್ಪಿ; ದಮ್ಡಿ; ಸಣ್ಣ ಆಕಾರದ ತೊಗಲು ವಾದ್ಯ.

ದಪ್ಲಿ (ನಾ) ಹಿಂ.= ಡಪ್ಲಿ; ಡಪ್ಪು; ದಮ್ಡಿ.

ದಫನ್ (ನಾ) ಉ.= ಶವದ ಹೂಳುವಿಕೆ; ಶವಸಂಸ್ಕಾರ; ಮಣ್ಣು ಗೂಡಿಸುವಿಕೆ.

ದಫನ್ ಮಾಡು (ಕ್ರಿ)= ಹೆಣವನ್ನು ಕುಣಿಯಲ್ಲಿಟ್ಟು ಮಣ್ಣು ಮುಚ್ಚು; ಮಣ್ಣು ಮಾಡು; ಅಂತ್ಯಕ್ರಿಯೆ ಮುಗಿಸು.

ದಬಾವು (ನಾ) ಹಿಂ.= ಒತ್ತಡ; ಪ್ರಭಾವ; ದಾಬು; ಅಂಜಿಕೆ; ಭಯ; ದರ್ಪ.

ದಬಾವು ಹಾಕು (ಕ್ರಿ)= ಒತ್ತಡ ಹೇರು.

ದಬಾಸು (ಕ್ರಿ)= ಒತ್ತು; ಬೆದರಿಸು; ಅಂಜಿಸು; ಭಯ ಪಡಿಸು; ದಬಾಯಿಸು.

ದಮ್ಡಿ (ನಾ)= ದಪ್ಪು; ಡಪ್ಲಿ; ಸಣ್ಣ ಆಕಾರದ ತೊಗಲಿನ ವಾದ್ಯ; ತಾಮ್ರದ ಅಥವಾ ಇತರ ಧಾತ್ತುವಿನಿಂದ ಮಾಡಿದ ಕನಿಷ್ಟ ನಾಣ್ಯ ಅಥವಾ ಸಿಕ್ಕಾ; ಒಂದು ದುಡ್ಡಿನ ೧/೪ ಭಾಗ (ಗಾದೆ: ದಮ್ಡಿ ದೇವ್ರಿಗಿ ದುಡ್ಡಿನ್ಲೋಬಾನ ಹಾಕಿದ್ರಂತ).

ದಮ್ಮಾ (ನಾ) ಹಿಂ.= ದಮ್ಮು; ಧಾಪು; ಧಾಪುಗೆಮ್ಮು.

ದಮ್ಮು (ನಾ)= ಧಾಪು; ದಮ್ಮಾ; ಏದುಸಿರು; ಮೇಲುಸಿರು; ಉಸಿರು; ಉಬ್ಬಸ; ತೇಕುವಿಕೆ; ಧಾಪಿಸುವಿಕೆ; ಧಾಪುಗೆಮ್ಮು.

ದಮ್ಮುಬಾ (ಕ್ರಿ)= ತೇಕು; ಧಾಪಿಸು; ವೇಗವಾಗಿ ಉಸಿರಾಟ ನಡೆಸು; ವೇಗವಾಗಿ ನಡೆದು ಉಬ್ಬಸ ಉಂಟಾಗು.

ದಮ್ಮುಬಿಡು (ಕ್ರಿ)= ತೇಕು; ಹಿಡಿದ ಉಸಿರು ಬಿಡು; ಕೊನೆಯುಸಿರು ಬಿಡು; ಸಾಯು; ಸಾವು ಉಂಟಾಗು.

ದಮ್ಮು ಹತ್ತು (ಕ್ರಿ)= ಉಸಿರುಗಟ್ಟು; ದಾಪುಬೇನೆ ಉಂಟಾಗು; ಗೂರಲು ರೋಗ ಉಂಟಾಗು; ಉಬ್ಬಸ ಬೇನೆ ಬರು.

ದಮ್ಮಳಿ (ಕ್ರಿ)= ಚುಟ್ಟದ ಹೊಗೆಯ ಝುರ್ಕಿ ಎಳೆ; ಗಾಂಜಾದ ಹೊಗೆಯ ಝುರ್ಕಿ ಎಳೆ.

ದಯವಾನ (ನಾ)= ದೈವಾನ; ದಯಾಳು; ದಯೆಯುಳ್ಳವ; ಧನಿಕ; ಶ್ರೀಮಂತ.

ದಯಾ (ನಾ) ಹಿ.= ದಯೆ; ಕರುಣೆ; ಕೃಪೆ; ಅನುಕಂಪ.

ದಯಾತೋರ್ಸು (ಕ್ರಿ)= ಕರುಣೆದೋರು; ಕಳಕಳಿ ತೋರಿಸು; ಕೃಪೆದೋರು.

ದಯಾಮಾಯಾ (ನಾ) ಸಂ.= ಕರುಣೆ; ಕಳಕಳಿ; ದಯೆ ಮತ್ತು ಮಮತೆ.

ದಯಾಳು (ನಾ) ಸಂ.= ಕರುಣಾಳು; ಕೃಪಾಳು; ಕಳಕಳಿಉಳ್ಳವನು (ಳು).

ದಯ್ಯಂ (ನಾ) ತೆ.=ದೆವ್ವ; ಭೂತ.

ದಯ್ಯಿ (ನಾ)= ದೈ; ದನ (ಬಾಲಭಾಷೆ).

ದರ (ನಾ)= ಬೆಲೆ; ಧಾರಣೆ; ಕಿಮ್ಮತ್ತು.

ದರಕಾರ (ನಾ) ಉ.= ಗಮನ; ಲಕ್ಷ್ಯ.

ದರಕಾರ ಹತ್ತು (ನು)= ಗೊತ್ತು ಗುರಿ ಸಿಗು; ವಿಚಾರಣೆಗೆ ಸಿಗು; ವಿಚಾರಿಸು; ನೆಲೆಸಿಗು; ಗೊತ್ತು ಹತ್ತು; ಖೂನ ಗೊತ್ತು ಗಮನಕ್ಕೆ ಬರು.

ದರದರನೆ (ಅ)= ಮೈಗೆ ತರಚುವಂತೆ ನೆಲದ ಮೇಲೆ ಎಳೆಯುವ ಕ್ರಿಯೆ; ಎಳೆದಾಟದಲ್ಲಿ ಉಂಟಾಗುವ ಕ್ರಿಯೆ.

ದರರರ (ಅ)= ದರದರನೆ (ನೋಡಿರಿ).

ದರಿದ್ರ (ನಾ) ಸಂ.= ಬಡವ; ಧನಹೀನ.

ದರೋಜಿ (ನಾ) ಹಿಂ.= ದರವಾಜಿ; ಬಾಗಿಲು.

ದರ್ಖಾಸ್ತು (ನಾ) ಉ.= ಅರ್ಜಿ; ವಿನಂತಿ ಪತ್ರ; ಮನವಿ; ಪ್ರಾರ್ಥನಾ ಪತ್ರ.

ದರ್ಗಾ (ನಾ) ಉ.= ಮುಸಲ್ಮಾನ ವಲಿಗಳ ಪವಿತ್ರ ಸಮಾಧಿ ಕ್ಷೇತ್ರ; ದರ್ಗಾಹ.

ದರ್ಜಿ (ನಾ) ಹಿಂ.= ಸಿಂಪಿಗ; ಸಿಂಪಿಗ್ಯಾ; ಟೇಲರ್; ಬಟ್ಟೆ ಹೊಲೆಯುವ ಕಾಯಕದವನು.

ದರ್ದಿ (ನಾ) ಹಿಂ.= ಕಳಕಳಿ; ಅನ್ಯರ ಬಗ್ಗೆ ಆತ್ಮೀಯತೆ.

ದರ್ದು (ನಾ) ಹಿಂ.= ನೋವು; ಬೇನೆ; ಬ್ಯಾನಿ; ದರದು.

ದರ್ಪ (ನಾ)= ಜರ್ಬು; ಪ್ರಭಾವ; ಬೆಳಕಿನ ಪ್ರಭಾವ.

ದರ್ಪು (ನಾ)= ದರ್ಪ; ಪ್ರಭಾವ; ಪ್ರಕಾಶ; ಅಬ್ಬರ; ಆರ್ಭಾಟ.

ದರ್ಪುಭೀಳು (ಕ್ರಿ)= ಪ್ರಭಾವವುಂಟಾಗು; ಬೆಳಕು ಬೀಳು.

ದರ್ಬಾರ (ನಾ) ಉ.= ಓಲಗ; ಆಡಂಬರ; ವೈಭವ.

ದರ್ಬಾರಿ (ನಾ) ಉ.= ದರಬಾರದ ಸದಸ್ಯ; ದಬಾರದಲ್ಲಿ ಪಾಲುಗೊಳ್ಳುವವನು.

ದರ್ವೇಸ (ನಾ) ಉ.= ಫಕೀರ; ಮುಸಲ್ಮಾನ ಸಂತ.

ದರ್ವೇಸಿ (ನಾ)= ಅಲೆಮಾರಿ ಅಥವಾ ಸಂಚಾರಿ ಫಕೀರ.

ದರ್ಶನ (ನಾ) ಸಂ.= ಭೇಟಿ; ನೋಡುವಿಕೆ; ಕಾಣುವಿಕೆ; ಎದುರುಗೊಳ್ಳುವಿಕೆ.

ದಲಸಿಂಗಿ (ನಾ)= ಜಲಸಂಗ ಎಂಬ ಚಾಲುಕ್ಯ ಆಡಳಿತ ಕಾಲದ ಒಂದು ಐತಿಹಾಸಿಕ ಊರು; ಇಲ್ಲಿ ಕಲ್ಮೇಶ್ವರ ಎಂಬ ದೇವಾಲಯವಿದೆ. ಆ ದೇವಾಲಯದ ಗೋಡೆಯ ಮೇಲೆ ಪತ್ರಲೇಖೆಯ ಚಿತ್ರ ಕಟೆಯಲಾಗಿದೆ. ಧರಿನಾಡು ಕನ್ನಡ ಸಂಘ ಕೇಂದ್ರ ಸಮಿತಿ ಬೀದರವು ಪತ್ರಲೇಖೆಯನ್ನು ತನ್ನ ಲಾಂಛನವಾಗಿ ಬಳಸಿದೆ.

ದಲಾಲ (ನಾ) ಹಿಂ.= ದಲ್ಲಾಲ; ದನಗಳ ಮಾರಾಟ ಮತ್ತು ಖರೀದಿಗಳನ್ನು ಕುದುರಿಸುವ ಮಧ್ಯಸ್ಥ (ಗಾದೆ: ದುಬಲ್ಲುಗಂಡಿದಲಾಲ, ಗಂಟ್ಬಿದ್ರ ಬಿಡಾಲ). ಅಡತಿ ಅಂಗಡಿ ನಡೆಸುವವ; ಖರೀದಿ ವಿಕ್ರಿದಾರನಾಗಿ ಲಾಭ ಸಂಪಾದಿಸುವವ; ಮನೆ ಖರೀದಿದಾರ ಮಾರಾಟಗಾರರ ಮಧ್ಯಸ್ಥ.

ದಲಾಲಿ (ನಾ)= ವ್ಯಾಪಾರ ಕುದುರಿಸುವ ಮಧ್ಯಸ್ಥ; ದಲಾಲನಿಗೆ ಸಿಗುವ ಮಧ್ಯಸ್ಥಿಕೆಯ ಲಾಭ.

ದಲಾಲಿ ಮಾಡು (ಕ್ರಿ)= ಖರೀದಿ, ವಿಕ್ರಿಯಲ್ಲಿ ಮಧ್ಯಸ್ಥಿಕೆ ವಹಿಸಿ ಲಾಭಗಳಿಸು.

ದಲಿತ (ನಾ) ಸಂ.= ತುಳಿಯಲ್ಪಟ್ಟ ಹೊಲೆಯ ಮತ್ತು ಮಾದಿಗ ಜನಾಂಗ; ತುಳಿಯಲ್ಪಟ್ಟವನು; ಶೋಷಿತನು; ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದೆ ತಳ್ಳಲ್ಪಟ್ಟವನು.

ದವಡಿ (ನಾ)= ದವಡೆ; ಕಪೋಲದ ಒಳಭಾಗದಲ್ಲಿರುವ ಒಸಡಿನಭಾಗ; ದಂತ ಪೀಠ.

ದವನ್ಹುಣ್ಣಿ (ನಾ)= ದವನದ ಹುಣ್ಣಿಮೆ; ಚೈತ್ರ ಮಾಸದ ಹುಣ್ಣಿಮೆ.

ದವಾ (ನಾ) ಹಿಂ.= ಔಷಧ; ಮದ್ದು.

ದವಾಖಾನಿ (ನಾ) ಹಿಂ.= ಆಸ್ಪತ್ರೆ; ವೈದ್ಯಶಾಲೆ.

ದವ್ಡಿ (ನಾ)= ದವಡಿ (ನೋಡಿರಿ).

ದವ್ಡಿ ಮುಷಾರಿ (ನಾ)= ಉಂಡಿದಕ್ಕೂ ದುಡಿದುದಕ್ಕೂ ಬರೋಬರಿ.

ದಶರಥ (ನಾ)= ಶ್ರೀರಾಮನ ತಂದೆ; ಶ್ರಾವಣ ಕುಮಾರನ ಕೊಂದ ರಾಜ.

ದಶಾವತಾರ (ನಾ) ಸಂ.= ಮಹಾವಿಷ್ಣುವಿನ ಹತ್ತು ಅವತಾರಗಳು (ದಶಾವತಾರಗಳು: ಮತ್ಸ್ಯ; ಕೂರ್ಮ; ವರಾಹ; ನರಸಿಂಹ; ವಾಮನ; ಪರಶುರಾಮ; ರಾಮ; ಕೃಷ್ಣ; ಬುದ್ಧ; ಕಲ್ಕಿ).

ದಶ್ಮಿ (ನಾ) ಸಂ.= ದಶಮಿ; ಪಕ್ಷದ ಹತ್ತನೇ ದಿನ; ಹಾಲು ಬೆರೆಸಿ ತಯಾರಿಸಿದ ಜೋಳದ ರೊಟ್ಟಿ.

ದಸಂಗು (ನಾ) ಸಂ.= ದಶಾಂಗ; ಧೂಪಹಾಕಲು ಬಳಸುವ ಹತ್ತು ಬಗೆಯ ಸುಗಂಧ ದ್ರವ್ಯಗಳ ಮಿಶ್ರಣ.

ದಸರತ (ನಾ)= ದಶರಥ; ಶ್ರೀರಾಮನ ತಂದೆ; ಶ್ರಾವಣಕುಮಾರನನ್ನು ಕೊಂದ ರಾಜ.

ದಸರಿ (ನಾ)= ದಸರೆಹಬ್ಬ; ವಿಜಯದಶಮಿ; ನವರಾತ್ರಿಯ ಮರುದಿನದ ಹಬ್ಬ.

ದಸರಿ ಮಾನಂಬಿ (ನಾ)= ದಸರೆ ಹಬ್ಬದ ಮುನ್ನಾದಿನವಾದ ಮಹಾನವಮಿ (ಹಾಡು: ದಸರಿ ಮಾನಂಬಿ ದಿನ। ಹಸನಾಗಿ ಸಣ್ಣ ಮಕ್ಕು। ಹಸ್ನಾಗಟ್ಟೀತೆ ಹಳಖೇಡ ಕೋಲೆ॥).

ದಸಿ (ನಾ)= ದೆಸೆ; ದಿಕ್ಕು; ಕಡೆಗೆ.

ದಸಿಂದ (ಅ)= ಸಲುವಾಗಿ; ಕಾರಣವಾಗಿ (ಅದರದಸಿಂದ ಅದರ ಸಲುವಾಗಿ).

ದಸಿವಂತ (ನಾ)= ಯಶವಂತ; ಜಸವಂತ; ಯಶ ಸಂಪಾದಿಸಿದವನು.

ದಸ್ಕಿ (ನಾ) ಸಂ.= ದಶಕ; ಕೈಲೆ.

ದಸ್ಕಿತಪ್ಪು (ನು)= ಲೆಕ್ಕತಪ್ಪು; ಕೈಲೆ ತೆಗೆದುಕೊಳ್ಳುವುದನ್ನು ಮರೆತು ಬಿಡು; ಕೆಲಸ ಕೆಡು.

ದಸ್ಕಿಫರಕ್ ಭೀಳು (ನು)= ದಸ್ಕಿ ತಪ್ಪು (ನೋಡಿರಿ).

ದಸ್ಖತ್ತು (ನಾ) ಉ.= ದಸ್ತಖತ್ತು; ಹಸ್ತಾಕ್ಷರ ಸಹಿ; ರುಜು; (ನು) ತುಪ್ಪ.

ದಸ್ತಾ (ನಾ) ಉ.= ಕೊಡಲಿ, ಸಲಿಕೆ, ಗುದ್ದಲಿ, ಇತ್ಯಾದಿಗಳ ಕಾವು; ೨೪ ಕಾಗದ ಹಾಳೆ; ಗಣಿತದಲ್ಲಿಯ ಕೈಲೆ.

ದಸ್ತಾವೀಜು (ನಾ) ಉ.= ಕರಾರುಪತ್ರ; ಎಕ್ರಾರನಾಮ; ಸಾಲಪತ್ರ.

ದಸ್ತಿ (ನಾ)= ಕರವಸ್ತ್ರ; ಕೈವಸ್ತ್ರ; ಪಾವಾಡು.

ದಸ್ತೀ ಬಾಂಬು (ನಾ)= ಕೈಬಾಂಬು.

ದಸ್ತೀಬಾಂಬ್ಹಾಕು (ಕ್ರಿ)= ಕೈಬಾಬು ಸ್ಫೋಟಿಸು.

ದಸ್ತೂರು (ನಾ) ಉ.= ಕೈ ಬರಹ; ಹಸ್ತಲೇಖನ; ಪದ್ಧತಿ; ರೀತಿ; ನೀತಿ.

ದಸ್ತೂರ್ಖುದ್ದ (ನಾ) ಉ.= ಸ್ವಂತ ಕೈ ಬರಹ.

ದಸ್ರಿ (ನಾ)= ದಸರೆಹಬ್ಬ; ವಿಜಯದಶಮಿ.

ದಸ್ರಿ ಅಮಾಸಿ (ನಾ)= ಮಹಾಲಯ ಅಮಾವಾಸ್ಯ; ಭಾದ್ರಪದ ಅಮಾವಾಸ್ಯ.

ದಸ್ಸು (ನಾ)= ಯಶಸ್ಸು; ಜಸ್ಸು; ಯಶ.

ದಳ (ನಾ) ಸಂ.= ದಲ; ಎಸಳು; ಹೂವಿನ ಪಕಳೆ; ತಂಡ; ಗುಂಪು; ಹುಚ್ಚು; ಹುಚ್ಚತನ.

ದಳ ಏಳು (ಕ್ರಿ)= ಹುಚ್ಚು ಹಿಡಿ; ದಳಾ ಏಳು.

ದಳಣ (ನಾ) ಮ.= ಬೀಸುವಿಕೆ; ಬೀಸುದಾಣೆ; ಬೀಸುವ ಧಾನ್ಯ.

ದಳಪತಿ (ನಾ)= ಗ್ರಾಮದಲ್ಲಿಯ ಪೊಲೀಸಧಿಕಾರಿ.

ದಳವೈ (ನಾ) ಮ.= ದಳಣ; ಬೀಸುವಿಕೆ; ಬೀಸುವ ದಾಣಿ; ಬೀಸಲು ಸಿದ್ಧಗೊಳಿಸಿದ ಧಾನ್ಯ.

ದಳಾ (ನಾ)= ದಳ (ನೋಡಿರಿ).

ದಳಾ ಏಳು (ಕ್ರಿ)= ದಳ ಏಳು; ಹುಚ್ಚು ಹಿಡಿ.

ದಳಾಸು (ಕ್ರಿ)= ಕಾಳನ್ನು ಬೀಸುಕಲ್ಲಿನ ಸಹಾಯದಿಂದ ಹಿಟ್ಟು ಮಾಡು.

ದಾ (ಕ್ರಿ)= ನಡೆ (ಎತ್ತುಗಳಿಗೆ ಮುನ್ನಡೆಯಲು ಸೂಚನೆ ಧ್ವನಿ).

ದಾಂಗುಡ್ಯಾ (ನಾ)= ದಾಂಗುಡಿಗ ಎಂಬ ಹೆಸರಿನ ಬಳ್ಳಿ; ಹುಲ್ಲು; ಕಣಿಕೆ; ಕಟ್ಟಿಗೆ ಇತ್ಯಾದಿಗಳ ಹೊರೆ ಕಟ್ಟಲು ಹಗ್ಗದಂತೆ ಬಳಸಲಾಗುವ ಒಂದು ಪ್ರಕಾರದ ಬಳ್ಳಿ ದಾಡ್ಯಾನ ಬಳ್ಳಿ.

ದಾಂಡಗ್ಯಾ (ನಾ)= ದಾಂಡಿಗ; ಕಟ್ಟು ಮಸ್ತಾದ ಆಳು; ಅಜಾನು ಬಾಹು ಮನುಷ್ಯ.

ದಾಂಡಿ (ನಾ)= ದಂಡಿ (ನೋಡಿರಿ).

ದಾಂಡಿ ಕಟ್ಟು (ನುಡಿ)= ಮದುವೆ ಮಾಡು; ಸಾವು ಬರು.

ದಾಂಡಿ ಕಟ್ಲಿ (ನು)= ದಂಡಿಕಟ್ಲಿ (ನೋಡಿರಿ).

ದಾಂಡು (ನಾ)= ದನಗಳ ಕೊರಳಲ್ಲಿ ಕಟ್ಟುವ ದಪ್ಪವಾದ ಗೋಪಿನ ಹಗ್ಗ; ಚಿಣಿ ಅಥವಾ ಚೆಂಡನ್ನು ಹೊಡೆಯಲು ಬಳಸುವ ಸಣ್ಣ ಕೋಲು ಅಥವಾ ಫಣಿ, ಬ್ಯಾಟು.

ದಾಂಡು ಹೆಣಿ (ಕ್ರಿ)= ತೊಗಲಿನ ಪಟ್ಟಿಗಳಿಂದ ಅಥವಾ ನಾರಿನ ದಾರಗಳಿಂದ ದನಗಳ ಕೊರಳ ಪಟ್ಟಿಯನ್ನು ಗೋಪು ಹಾಕಿ ತಯಾರಿಸು.

ದಾಂತ ಮಂಜನ (ನಾ)= ದಂತ ಮಂಜನ; ಹಲ್ಲುಜ್ಜುವ ಚೂರ್ಣ; ಹಲ್ಲುಪುಡಿ; ದಾತಮಂಜನ.

ದಾಂವಾ (ನಾ)= ದನಗಳನ್ನು ಕಟ್ಟಲು ಬಳಸುವ ಕೊರಳ ಹಗ್ಗ; ಕಣ್ಣಿ.

ದಾಂವಾಕಡ್ಕೊ (ಕ್ರಿ)= ಹಸು ಅಥವಾ ದನ ಕೊರಳ ಕಣ್ಣಿಯನ್ನು ಹರಿದುಕೊ.

ದಾಂವ್ಣಿ (ನಾ)= ದಾವಣಿ; ದನಗಳನ್ನು ಸಾಲಾಗಿ ಕಟ್ಟಿ ಮೇವು ತಿನ್ನುಸುವ ಜಾಗ; (ಗಾದೆ: ಹೆಣ್ಣು ಹುಟ್ಟುದ್ರ ಮನಿ ಖಾಲಿ; ಕ್ವಾಣಾ ಹುಟುದ್ರ ದಾವ್ಣಿ ಖಾಲಿ!).

ದಾಖಲ್ (ನಾ)= ಪ್ರವೇಶ; ಸೇರುವಿಕೆ; ಹಾಜರಾಗುವಿಕೆ; ಸೇರ್ಪಡೆ; ನೋಂದಣಿ.

ದಾಖಲಾಗು (ಕ್ರಿ)= ಪ್ರವೇಶಿಸು; ಸೇರು; ಸೇರ್ಪಡೆ ಹೊಂದು; ಹಾಜರಾಗು; ಹೆಸರು ನೋಂದಾಯಿಸು.

ದಾಖಲಾತಿ (ನಾ)= ಪ್ರವೇಶ; ಸೇರ್ಪಡೆ; ದಾಖಲು; ಹೆಸರು ನೋಂದಣಿ.

ದಾಗು (ನಾ) ಹಿಂ.= ಡಾಗು; ಕಲೆ; ಧಬ್ಬಾ.

ದಾಗ್ದಾರ (ನಾ) ಇಂ.= ಡಾಕ್ಟರ್; ವೈದ್ಯ; ರೋಗ ಚಿಕಿತ್ಸೆ ಮಾಡುವವ; ಡಾಗ್ದಾರ.

ದಾಗ್ದಾರ್ಕಿ (ನಾ)= ವೈದ್ಯಗಾರಿಕೆ.

ದಾಚಿಣ (ನಾ)= ಹೆಂಗಸರು ಬಳಸುವ ಹಲ್ಲು ಪುಡಿ. ಅದರ ಬಳಕೆಯಿಂದ ಹಲ್ಲು ಮತ್ತು ವಸಡುಗಳು ಕಪ್ಪು ಬಣ್ಣಕ್ಕೆ ತಿರುಗುತ್ತವೆ.

ದಾಟ (ವಿ.)= ದಟ್ಟ; ಒತ್ತೊತ್ತಾದ; ಧಾಟ್ಟ.

ದಾಡಿ (ನಾ)= ಗಲ್ಲ, ಗಟಾಯಿಗಳ ಮೇಲೆ ಬೆಳೆದ ಕೂದಲು; ಗಡ್ಡ.

ದಾಡಿ ಮಾಡುಸ್ಕೊ (ಕ್ರಿ)= ಮಾರಿಗಸ್ವಾ ಮಾಡಿಸಿಕೊ; ಗಡ್ಡ ಬೋಳಿಸಿಕೊ.

ದಾಡ್ಗಿ (ನಾ)= ಸಮೃದ್ಧ ಬಿಳಿ ಜೋಳ ಬೆಳೆವ ಭಾಲ್ಕಿ ತಾಲೂಕಿನ ಒಂದು ಊರು.

ದಾಡ್ಗೆನ ಬೆಳ್ಳಿ (ನಾ)= ದಾಂಗುಡಿಗನ ಬಳ್ಳಿ; ಹುಲ್ಲು ಹೊರೆ, ಕಟ್ಟಿಗೆ ಹೊರೆ ಕಟ್ಟಲುಬಳಸುವ ಬಳ್ಳಿ.

ದಾಣಿ (ನಾ)= ಧಾನ್ಯ (ಬೀಸುದಾಣಿ, ಮಣ್ಣು ದಾಣಿ ಇತ್ಯಾದಿ); ಕಾಳು; ಯೋನಿ; ಸ್ತ್ರೀಜನನೇಂದ್ರಿಯ.

ದಾಣಿಗಟ್ಟು (ಕ್ರಿ)= ಕಬ್ಬಿನ ಹಾಲು ಕುದ್ದು ಕುದ್ದು ಕಾಳುಗಟ್ಟು; ಕಾಳು ಕಾಳಾಗು; ಅಗಳಗಳಾಗು.

ದಾಣಿ ದಾಣಿ (ದ್ವಿ)= ಅಗಳಗಳು; ಕಾಳುಕಾಳು.

ದಾತಾ (ನಾ) ಸಂ.= ದಾತೃ; ದಾತ; ದಾನಿ; ಕೊಡುವವನು.

ದಾತ್ರಿ (ನಾ)= ಚಕ್ರದ ಇಲ್ಲವೆ ಕರಗಸದ ಹಲ್ಲುಗಳ ಸಾಲು.

ದಾತ್ರಿಮಸಿ (ಕ್ರಿ)= ಕರಗಸದ ಹಲ್ಲುಗಳನ್ನು ಹರಿತಗೊಳಿಸು.

ದಾದಾ (ನಾ)ಮ.= ಅಣ್ಣ; ಗುಂಡಾ; ಲಫಂಗ; ಪೋಲಿ.

ದಾದಾಗಿರಿ (ನಾ)ಮ.= ಗುಂಡಾಗಿರಿ; ದಬ್ಬಾಳಿಕೆ.

ದಾದಾಗಿರಿ ನಡ್ಸು (ಕ್ರಿ)ಮ.= ಗುಂಡಾಗಿರಿ ನಡೆಸು; ದಬ್ಬಾಳಿಕೆ ನಡೆಸು.

ದಾದಿ (ನಾ)ಹಿಂ.= ಅಜ್ಜಿ; ತಂದೆಯ ತಾಯಿ; ದಾಯಿ; ನರ್ಸು; ಸೇವಕಿ; ದಾಸಿ; ಆಯಾ.

ದಾದು (ನಾ)= ಖೂನ; ಗೊತ್ತು; ಪತ್ತೆ; ವಿಳಾಸ; ಕಳಕಳಿಯಿಂದ ವಿಚಾರಿಸುವಿಕೆ.

ದಾದು ಫಿರ್ಯಾದು (ನಾ)= ಕಷ್ಟ ನಷ್ಟ; ಸುಖದುಃಖ; ಅಹವಾಲು; ಕಳಕಳಿಯ ವಿಚಾರಣೆ; ಗೋಳು ಕೇಳುವಿಕೆ.

ದಾದು ಹತ್ತು (ಕ್ರಿ)= ಯಾರು, ಎಲ್ಲಿಯವರು, ಏನು ಬೇಕು ಎಂಬ ವಿಚಾರಣೆಯಾಗು; ಪತ್ತೆಗೊತ್ತಾಗು.

ದಾನಸೂರ (ನಾ)= ದಾನ ಮಾಡುವುದರಲ್ಲಿ ಮುಂದಾಳು.

ದಾನಸೂರ ಕರ್ಣ (ನಾ)= ದಾನ ಮಾಡುವುದರಲ್ಲಿ ಕರ್ಣನಂತೆ ಮುಂದಾಳುವಾದವನು.

ದಾನಾ (ನಾ)ಉ= ಸದ್ಗುಣಿ; ಒಳ್ಳೆದ; ಸಜ್ಜನ (ಗಾದೆ : ದಾನಾದುಸ್ಮನ್ನಿರಬೇಕು ನಾದಾನ ದೋಸ್ತ ಇರಬಾರ್ದು)

ದಾನಾ ಮಾಡು (ಕ್ರಿ)= ದಾನ ಕೊಡು; ನೀಡು; ಉಚಿತವಾಗಿ ಕೊಡು.

ದಾನಿ (ನಾ)= ದಾನ ಕೊಡುವವನು ಉಚಿತವಾಗಿ ಕೊಡುವವನು.

ದಾಬು (ನಾ)ಉ.= ದಬಾವು; ಪ್ರಭಾವ; ಭಯ; ಅಂಜಿಕೆ.

ದಾಬ್ಯಾ (ನಾ)ಮ.= ಚೌರಸ್ತೆ. ಒಂದು ಊರಿನ ಹೆಸರು.

ದಾಮು (ನಾ)= ದುಡ್ಡು; ಹಣ; ರೊಕ್ಕ; ಧನ.

ದಾಮು ಎಣ್ಸು (ಕ್ರಿ)= ದುಡ್ಡಿನ ಎಣಿಕೆ ಮಾಡು; ನಾಣ್ಯವನ್ನು ಎಣಿಸು; ನೋಟುಗಳ ಎಣಿಕೆ ಮಾಡು.

ದಾಯ್ (ನಾ)= ದಾಯಿ; ದಾಣಿ; ಕಾಳು; ಮಂಡಳ್ಳಿನ ಕಾಳು (ಬಾಲಭಾಷೆ).

ದಾಯಿ (ನಾ)= ದಾಯ್ (ನೋಡಿರಿ); ದಾದಿ; ನರ್ಸು; ಸಾಕು ತಾಯಿ.

ದಾಯಮ್ಮ (ನಾ)= ದಾದಿ; ದಾಯಿ; ಆಯಾ.

ದಾಯೆ (ಕ್ರಿ) ತೆ.= ಬಾರೆ, ಬಾರೊ, ಬಾರೆಲೆ.

ದಾರದು (ಸ.)= ಯಾರದು; ಅದುಯಾರು; ಯಾರವರು (ಬ್ರಾಹ್ಮಣ ಭಾಷೆ).

ದಾರಂಡದ್ದು (ಸ.)= ಯಾವ ಮುಂಡೆಗೆ ಹುಟ್ಟಿದ್ದು (ಬ್ರಾಹ್ಮಣರ ಬೈಗುಳ).

ದಾರು (ಸ.)= ಅದಾರು; ಯಾರು (ಹಾಡು: ನೀದಾರು ನನಗೆ ನಾದಾರು ನಿನಗೆ ನಾ ನೀನು ಅಂಬೋದು ಪ್ರಕೃತಿ ಸ್ವಭಾವಾ ಮಾಣಿಕ ಪ್ರಭು ಮಹಾರಾಜರು); (ನಾ) ಸೆರೆ; ಸರಾಯಿ.

ದಾರೋಗಾ (ನಾ)ಉ. = ದರ್ಗಾದ ಕಾವಲುಗಾರ.

ದಾರೋದಿಕ್ಕು (ನಾ)= ಹಾಳು ಬೀಳು.

ದಾಲ್ಚೀನಿ (ನಾ)= ಮಸಾಲಿ ಚಕ್ಕೆ.

ದಾಲ್ಮಿಲ್ (ನಾ)= ಬೇಳೆ ಕಾರಖಾನೆ.

ದಾವ (ಸ.)= ಅದಾವ; ಯಾವ; ಯಾವುದು.

ದಾವ ಪೇಚು (ನಾ)= ಕುಸ್ತಿಯ ಪಟ್ಟು.

ದಾವಾ (ನಾ)= ಕೋರ್ಟಿನಲ್ಲಿಯ ಖಟ್ಲೆ; ದಾಂವಾ; ದನಕರುಗಳನ್ನು ಕಟ್ಟುವ ಹಗ್ಗ.

ದಾವಾಗ (ಅ)= ಯಾವಾಗ; ಅದು ಯಾವಾಗ (ಬ್ರಾಹ್ಮಣಭಾಷೆ).

ದಾವಾಹಾಕು (ಕ್ರಿ)= ಖಟ್ಲೆ ಹೇರು; ಕೇಸು ಹಾಕು.

ದಾವೂರು (ಅ)= ಅದುಯಾವ ಊರು; ಯಾವ ಊರು.

ದಾವ್ದಿಮುಷಾರಿ (ನಾ)= ದವ್ದಿ ಮುಷಾರಿ; ದವಡೆ ವೇತನ; ಉಂಡಿದಕ್ಕೂ ದುಡಿದುದಕ್ಕೂ ಸರಿ ಎಂಬುವ ವೇತನ.

ದಾವ್ಣಿ (ನಾ)= ದನಗಳನ್ನು ಒಂದೆಡೆ ಕಟ್ಟಿ ಹಾಕುವ ಜಾಗ; ದಾವಣಿ; ಸಾಲು.

ದಾಸ (ನಾ)= ವ್ಯವಸಾಯ; ಸಾಗುವಳಿ; ಕೃಷಿಗಾರಿಕೆ; ಸೇವೆ; ಶ್ರಮ; ದುಡಿಮೆ; ಒಂದು ಜನಾಂಗ; ಮುಡಬಿವಾಡಿ, ಯಲ್ಲಮವಾಡಿ, ವಿಠಲಪುರ ಮೊದಲಾದ ಊರಿನ ಒಂದು ಜನಾಂಗ; ಸಾಧು; ಸಂತೆ (ಗಾದೆ; ಹಾಡಿದ್ದೇ ಹಾಡೋ ಕಿಸ್ಬಾಯಿ ದಾಸಾ).

ದಾಸಮಾಡು (ಕ್ರಿ)= ದುಡಿ; ಸೇವೆಮಾಡು; ಕೃಷಿ ಮಾಡು.

ದಾಸಿ (ನಾ)= ಸೇವಕಿ; ದಾಯಿ; ಮಾಳಿಗೆ ಸರದ ಮೇಲು ಭಾಗದಲ್ಲಿ ಹಾಸುವ ಅಡ್ಡ ಕಟ್ಟಿಗೆ.

ದಾಸು (ನಾ)= ದಾಸತನ; ಸೇವೆ.

ದಾಸುಣ್ಕಿ (ನಾ)= ದುಡಿಮೆ; ಸೇವೆ; ಪರಿಶ್ರಮ

ದಾಸು ಮಾಡು (ಕ್ರಿ)= ದಾಸಮಾಡು (ನೋಡಿರಿ).

ದಾಸೋಗ (ನಾ)= ದಾಸೋಹ; ಕಾಯಕ ಮತ್ತು ಅನುಭಾವದೊಂದಿಗೆ ಮುಪ್ಪುರಿಗೊಂಡ ದಾಸೋಹ; ನಿತ್ಯದ ದುಡಿಮೆಯಲ್ಲಿಯ ಉಂಡುಳಿದ ಭಾಗವನ್ನು ಸಮಾಜಕ್ಕೆ ಅರ್ಪಿಸುವುದು; ಹಸಿದು ಬಂದವರಿಗೆ ಕರೆದು ಉಣಿಸುವುದು.

ದಾಳೆಂಬ್ರ (ನಾ)= ದಾಳಿಂಬರ; ದಾಡಿಮ; ಮುತ್ತಿನಂತಹ ಕಾಳುಳ್ಳ ಒಂದು ಪ್ರಕಾರದ ತಿನ್ನುವ ಕಾಯಿ (ಉದಾ: ಹಲ್ಲು ದಾಳೆಂಬ್ರ ಬೀಜಾ ಆಗ್ಯಾವ್ನೋಡು).

ದಿಂಡಿ (ನಾ)= ದಿಂಡೆ; ನೀಚ ಹೆಂಗಸು; ದುಷ್ಟೆ; ದೀಬರದಿಂಡೆ; ಭಜನೆಯ ಮೇಳ; ಮೆರವಣಿಗೆ; ಸಣ್ಣ ಉತ್ಸವ.

ದಿಂಡಿ ಹೊರಡು (ಕ್ರಿ)= ಭಜನೆಯ ಮೇಳ, ಮೆರವಣಿಗೆ, ಉತ್ಸವ ಹೊರಡಿಸು.

ದಿಂಡು (ನಾ)= ಉದ್ದನೆಯ, ಗೋಡೆಯ ಕಲ್ಲು; ಪಲಗ, ತಾಳು ಇಲ್ಲದೆ ಇರುವ ಕುಂಟೆಯ ಮೇಲ್ಭಾಗ; ಹರುಕು ಸೀರೆ ಅಥವಾ ಧೋತರದ ಹರುಕು ಭಾಗವನ್ನು ಕತ್ತರಿಸಿ ಗಟ್ಟಿ ಭಾಗಗಳನ್ನು ಹೊಂದಿಸಿ ಹೊಲೆಯುವಿಕೆ (ಮಂಗಳ ಕಾರ್ಯಗಳಲ್ಲಿ ದಿಂಡು ಧೋತ್ರ, ದಿಂಡು ಸೀರೆ ಉಡುವಂತಿಲ್ಲ).

ದಿಂಡುಧೋತ್ರ (ನಾ)= ಹಳೆಯ ಧೋತ್ರದ ಹರುಕು ಭಾಗಗಳನ್ನು ಹರಿದು ತೆಗೆದು ಗಟ್ಟಿ ಭಾಗವನ್ನು ಹೊಂದಿಸಿ ಹೊಲೆದದ್ದು.

ದಿಂಡು ಸೀರಿ (ನಾ)= ಹಳೆಯ ಸೀರೆಯ ಹರುಕು ಭಾಗಗಳನ್ನು ಹರಿದು ತೆಗೆದು ಗಟ್ಟಿ ಭಾಗಗಳನ್ನು ಹೊಂದಿಸಿ ಹೊಲೆದದ್ದು.

ದಿಂಡು ಹಾಕು (ಕ್ರಿ)= ಸೀರೆ ಅಥವಾ ಧೋತ್ರದ ಹರಿದ ಭಾಗವನ್ನು ತೆಗೆದು ಗಟ್ಟಿ ಭಾಗವನ್ನು ಹೊಂದಿಸಿ ಹೊಲೆ.

ದಿಂಬು (ನಾ)= ತಲೆಗಿಂಬ; ಲೋಡು; ಬೆನ್ನಾಸರೆ.

ದಿಕ್ಕಾಪಾಲು (ಅ)= ದಿಕ್ಕುದಿಕ್ಕಿಗೆ; ಸಿಕ್ಕ ಕಡೆಗೆ.

ದಿಕ್ಕಾಪಾಲಾಗು (ಕ್ರಿ)= ದಿಕ್ಕು ದಿಕ್ಕಿಗೆ ಹರಡು; ಸಿಕ್ಕಿದ ಕಡೆ ಹರಡು.

ದಿಕ್ಕುಸು ತೊಗೊ (ಕ್ರಿ)= ದೀಕ್ಷೆಹೊಂದು; ಗುರುದೀಕ್ಷೆ ಪಡೆ.

ದಿಕ್ಕುಸು ಬಳ್ಕಿ (ನಾ)= ಲಿಂಗಾಯತರಲ್ಲಿ ಗುರುದೀಕ್ಷೆ ಹೊಂದಿದವರೆಂದು ಹೇಳಿ ಕೊಳ್ಳುವ ಒಂದು ಉಪ ಪಂಗಡ.

ದಿಖಾವಟ (ನಾ) ಹಿಂ.= ತೋರಿಕೆ; ಆಡಂಬರ; ದಿಖಾವಾ.

ದಿಖಾವಟಿ (ವಿ) ಹಿಂ.= ತೋರಿಕೆಯ; ಆಡಂಬರದ.

ದಿಖಾವಾ (ನಾ)= ತೋರಿಕೆ; ಆಡಂಬರ; ದಿಖಾವಟ.

ದಿಗಂಬರ (ನಾ)= ಬೆತ್ತಲೆಯಾಗಿರುವುದು; ನಗ್ನತೆ; ಬತ್ತಲೆಯಾಗಿರುವವನು; ನಗ್ನನಾದವನು.

ದಿಗಂಬರ ಕರಿಬಸವೇಶ್ವರ (ನಾ)= ಹುಮ್ನಾಬಾದ ತಾಲೂಕಿನ ಹುಡುಗಿ ಗ್ರಾಮದ ಪವಾಡ ಪುರುಷ ಹಾಗೂ ಸದಾ ನಗ್ನರಾಗಿರುತ್ತಿರುವವರು ಆದ ಗ್ರಾಮ-ದೇವತೆ. ದೇಶಾಂಶ ಹುಡಗಿಯವರ ವಚನಾಂಕಿತ.

ದಿಗಂಬರ ಮಾಣಿಕೇಶ್ವರ (ನಾ)= ಬೀದರ ತಾಲೂಕಿನ ಯರನಳ್ಳಿಯ ಗ್ರಾಮದೇವರು (ಕಲ್ಮೂಡದಲ್ಲಿಯೂ ಸ್ಥಾಪನೆ ಇದೆ).

ದಿಗಂಬರ ವಾಮದೇವ (ನಾ)= ಚಿಡಗುಂಪಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿದ್ದ ದಿಗಂಬರ ವಾಮದೇವ ಮಹಾರಾಜರು.

ದಿಗುಡು (ನಾ)= ಗಾಬರಿ; ಭಯ; ದಿಗಿಲು.

ದಿಗುಡುಭೀಳು (ನು)= ಗಾಬರಿಯಾಗು; ಭಯಗೊಳ್ಳು; ದಿಗಿಲುಗೊಳ್ಳು.

ದಿಗ್ಗನೆ (ಅ)= ತಕ್ಷಣ; ಕೂಡಲೆ; ದಿಗ್ಗಂತ.

ದಿಮಾಕ (ನಾ) ಉ.= ದಿಮಾಗ; ಮೆದುಳು; ವಿಚಾರ ಶಕ್ತಿ.

ದಿಗ್ಗೇಡಿ (ನಾ)= ಯಾರೂ ದಿಕ್ಕಿಲ್ಲದೆ ಕೆಟ್ಟವನು(ಳು). ದಿಕ್ಕು ತಪ್ಪಿದವನು(ಳು) ಭ್ರಮಿಷ್ಟನಾದವನು; ಅನಾಥ ನಾದವನು (ಳು).

ದಿಗ್ಮಲ್ (ವಿ.)= ದಿಗ್ದಿಗ್ಗಂತ ನಡೆಯುವ (ಹಾಡು: ದಿಗ್ಮಲ್ ದಿಗಲ್ ಹೆಣ್ತಿ ನೀನು ದೀಪಾ ಒಯ್ದು ಎಲ್ಲಿಟ್ಟೆ ।ಘಾಳಿಗೀಳಿಗಿ ಹೋದಾತಂತ ಮಾಳಿಗೆ ಮ್ಯಾಲಿಟ್ಟ ಗಂಡಪ್ಪ).

ದಿಗ್ಮಲಿ (ನಾ)= ಸಿಕ್ಕಸಿಕ್ಕತ್ತ ಸಂಚರಿಸುವವಳು; ದಿಗ್ಗ ದಿಗ್ಗಂತ ನಡೆವವಳು; ದೀಬರ ದಿಂಡೆ.

ದಿಡಾ (ನಾ)= ದೃಢತೆ; ಸ್ಥಿರತೆ; ಸತ್ಯ; ಧಿಡಾ.

ದಿಡ್ಗಿ (ನಾ)= ವೇಗದಿಂದ ವಾದ್ಯ ಬಾರಿಸುವಿಕೆ.

ದಿಡ್ಡಿ ಬಾಗ್ಲು (ನಾ)= ಮನೆಯ ಹಿಂಭಾಗದ ಹಿತ್ತಿಲು ಬಾಗಿಲು; ಹಿಂಬಾಗಿಲು; ಹೊರಬಾಗಿಲಿಗಿಂತ ಸಣ್ಣ ಬಾಗಿಲು.

ದಿನಗೂಲಿ (ನಾ)= ಒಂದು ದಿನದ ಕೆಲಸಕ್ಕೆ ಕೊಡುವ ಕೂಲಿ; ಪ್ರತಿ ದಿನ ಕೂಲಿ ಕೆಲಸ ಮಾಡುವವನು.

ದಿನಚರಿ (ನಾ)= ದಿನವಹಿ; ಡೈರಿ; ರೋಜನಾಮ್ಚಾ.

ದಿನಸು (ನಾ)= ಚೀಜು; ವಸ್ತು; ಪದಾರ್ಥ.

ದಿನಾ (ನಾ)= ದಿನ; ತಿಥಿ; ಪುಣ್ಯ ತಿಥಿ; ದಿವಸ.

ದಿನಾಚರಣೆ (ನಾ)= ಮುಖ್ಯವಾದ ದಿನಗಳನ್ನು ವಿಶೇಷವಾಗಿ ಆಚರಿಸುವಿಕೆ.

ದಿನಾಮಾಡು (ಕ್ರಿ)= ಪುಣ್ಯತಿಥಿ ಆಚರಿಸು.

ದಿನಾ ಏರು (ಕ್ರಿ)= ದಿನಗಳು ಪೂರ್ತಿಗೊಳ್ಳು; ನವಮಾಸ ಪೂರ್ತಿಗೊಳ್ಳು; ಗರ್ಭಧಾರಣೆ ಮಾಡು.

ದಿನ್ದಿನಸಿನ = ತರತರದ.

ದಿನ್ಮಾನ (ನಾ)= ಕಾಲಮಾನ; ದಿನಮಾನ; ಚಲಂತ್ರ.

ದಿನ್ಸಾವಾರಿ = ತರತರದ.

ದಿನ್ಸು (ನಾ)= ದಿನಸು; ಚೀಜು; ವಸ್ತು; ಒಡವೆ; ಪದಾರ್ಥ.

ದಿಪ್ಪ = ದಪ್ಪ; ಧಮ್ಮ; ಅತಿಗಾತ್ರದ.

ದಿಮ್ಡಿ (ನಾ)= ದಪ್ಪು; ಡಪ್ಪು; ಧಮ್ಡಿ; ಸಣ್ಣದಾದ ಚರ್ಮವಾದ್ಯ.

ದಿಮ್ಮು (ನಾ)= ಹೆಮ್ಮೆ; ಜಂಬ; ಸೊಕ್ಕು; ಗರ್ವ; ಅಹಂಕಾರ; ತಲೆ ತಿರುಗುವಿಕೆ; ತಲೆ ಸುತ್ತು.

ದಿಮ್ಮು ಹತ್ತು (ಕ್ರಿ)= ಉಸಿರಾಡದಂತಾಗು.

ದಿರಾ (ಕ್ರಿ)= ಧಿರಾ; ತಡೆ; ನಿಲ್ಲು.

ದಿರ್ವ್ಯಾ (ನಾ)= ದ್ರವ್ಯ; ದುಡ್ಡು ದುಗ್ಗಾಣಿ; ಬೆಳ್ಳಿ ಬಂಗಾರ.

ದಿಲ್ಗಿರಿ (ನಾ)= ದಿಲ್ಲಗಿ; ಮಜಾಖ; ಹಾಸ್ಯ; ಚೇಷ್ಟೆ; ಆಶ್ಚರ್ಯ.

ದಿಲ್ಲಗಿ (ನಾ)ಉ.= ದಿಲ್ಗಿರಿ (ನೋಡಿರಿ).

ದಿಲ್ಲಗಿ ಮಾಡು = ನಗೆಚಾಟಿಕೆ ಮಾಡು; ಹಾಸ್ಯ ಮಾಡು; ಮನರಂಜನೆಗಾಗಿ ನಗಿಸು.

ದಿವ್ಸ (ನಾ)= ದಿವಸ; ದಿನ.

ದಿವ್ಸಾ (ಅ)= ಪ್ರತಿದಿನ; ಪ್ರತಿದಿವಸ; ದಿನಾಲು.

ದಿವಾನಾ (ನಾ) ಉ.= ಹುಚ್ಚ; ಮರುಳ; ಮಳ್ಳ

ದಿವಾನಿ (ನಾ) ಉ.= ಹುಚ್ಚಿ; ಹುಚ್ಚ; ಸಿವಿಲ್ ಖಟ್ಲೆ.

ದಿವಾಳಖೋರ (ನಾ)= ದಿವಾಳಿ ಎದ್ದವನು; ಎಲ್ಲವನ್ನು ಕಳೆದುಕೊಂಡು ನಿರ್ಗತಿಕನಾದವನು; ಗತಿ ಗೆಟ್ಟವನು; ನಿರ್ಗತಿಕನಾದವನು.

ದಿವಾಳಿ (ನಾ)= ನಿರ್ಗತಿಕನಾಗುವಿಕೆ; ಎಲ್ಲವನ್ನು ಕಳೆದುಕೊಳ್ಳುವಿಕೆ; ಹಾಳಾಗುವಿಕೆ; ದೀಪಾವಳಿ ಹಬ್ಬ; ದೀವಳಿಗೆ.

ದಿವಾಳಿ ಎಬ್ಬಿಸು (ನು)= ಏನೂ ಇಲ್ಲದಂತೆ ಮಾಡು; ನಿರ್ಗತಿಕನಾಗಿಸು.

ದಿವಾಳಿ ಏಳು (ನು)= ನಿರ್ಗತಿಕನಾಗು; ಎಲ್ಲವನ್ನು ಕಳೆದುಕೊ; ಖಾಲಿಗೈಯವನಾಗು.

ದಿವಾಳಿಯಾಗು (ನು)= ದಿವಾಳಿ ಏಳು (ನೋಡಿರಿ).

ದಿವಾಳ್ಖೋರ (ನಾ)= ನಿರ್ಗತಿಕ; ಎಲ್ಲವನ್ನು ಕಳೆದುಕೊಂಡವ.

ದಿವುಟ್ಗಿ (ನಾ)= ದೀವಟಿಗೆ; ಪಂಜು.

ದಿವುಟ್ಯಾ (ನಾ)= ದೀವಟಿಗೆ ಹಿಡಿದುಕೊಳ್ಳುವವನು; ಅಂಬಾಬಾಯಿಯ ಗೊಂದಲ ಕಾರ್ಯಕ್ರಮದಲ್ಲಿ ದೀವಟಿಗೆಗೆ ಎಣ್ಣೆ ಸುರಿಯುವ ಹಾಗೂ ಸರಿಯಾಗಿ ಉರಿಯುವಂತೆ ನೋಡಿಕೊಳ್ಳುವವನು.

ದೀವುಳ್ಗಿ (ನಾ)= ದೀವಳಿಗೆ; ದೀಪಾವಳಿ.

ದೀವುಳ್ಗಿ ಅಮಾಸಿ (ನಾ)= ದೀಪಾವಳಿ ಅಮಾವಾಸ್ಯ; ಆಶ್ವಯುಜ ಅಮಾವಾಸ್ಯ.

ದಿವ್ಡಿ (ನಾ)= ಜೋಳದ ಹಿಟ್ಟಿನಿಂದ ತಯಾರಿಸಿದ ಕುದಿಸಿದ ಕಡುಬು.

ದಿವ್ಸಾ (ಅ)= ದಿನಾಲು; ಪ್ರತಿನಿತ್ಯ; ಪ್ರತಿದಿನ.

ದೀಕ್ಷ (ನಾ)= ದೀಕ್ಷೆ ಹೊಂದಿದವ; ಲಿಂಗಾಯತರಲ್ಲಿ ದೀಕ್ಷ ಎಂಬ ಒಳಪಂಗಡಕ್ಕೆ ಸಂಬಂಧಿಸಿದವನು.

ದೀಕ್ಷ ಬಳ್ಕಿ (ನಾ)= ಲಿಂಗಾಯತರಲ್ಲಿಯ ಒಂದು ಒಳಪಂಗಡ; ದಿಕ್ಕುಸು ಬಳಕೆ.

ದೀಕ್ಷಾ ಗುರು (ನಾ)= ದೀಕ್ಷೆಕೊಟ್ಟ ಗುರು; ಮಂತ್ರೋಪದೇಶಕ; ಲಿಂಗದೀಕ್ಷೆ ಕೊಟ್ಟಗುರು; ಬೋಧಕ.

ದೀಕ್ಷೆ ಹೊಂದು (ಕ್ರಿ)= ಗುರುವಿನಿಂದ ಲಿಂಗದೀಕ್ಷೆ ಪಡೆ; ಗುರುಬೋಧೆಯನ್ನು ಪಡೆ.

ದೀಡ ಪಂಡಿತ (ನಾ)= ಅರೆಹುಚ್ಚ; ಮೂರ್ಖ; ಜಾಣ ಮೂರ್ಖ.

ದೀಡಿ (ನಾ)= ಒಂದೂವರೆ; ಒಂದೂವರೆಮಾನ; ಒಂದೂವರೆಯ

ಮಗ್ಗಿ; ಅಣಕ; ಹೀಯಾಳಿಕೆ; ಮಣಕ್ಕೆ ಒಂದೂವರೆ ಮಣ ಪದ್ಧತಿ; ದೀಡಿಕರಾರಿನ ಪದ್ಧತಿ; ಒಂದೂವರೆ ಶೇಕಡಾ ಬಡ್ಡಿದರ.

ದೀಡಿ ಮಾತು (ನಾ)= ಅಣಕದ ಮಾತು; ಹೀಯಾಳಿಕೆ ಮಾತು.

ದೀಡು (ನಾ)= ಒಂದೂವರೆ; ೧ ೧/೨.

ದೀಡು ಬಡ್ಡಿ (ನಾ)= ಶೇಕಡಾ ಒಂದೂವರೆ ಬಡ್ಡಿ.

ದೀಡೋತ್ರಿ (ನಾ)= ಒಂದುವರೆ ಬಡ್ಡಿ ಕರಾರು.

ದೀಡ್ಯೇ (ನಾ)= ಒಂದೂವರೆ ನೂರು.

ದೀದಿ (ನಾ)= ಅಕ್ಕ; ಮೊದಲು ಹುಟ್ಟಿದವಳು; ಹಿರಿಯ ಸಹೋದರಿ.

ದೀನ್ ನಮಸ್ಕಾರ (ನಾ)= ಸಾಷ್ಟಾಂಗ ನಮಸ್ಕಾರ.

ದೀನ್ ನಮಸ್ಕಾರ ಹಾಕು (ಕ್ರಿ)= ಸಾಷ್ಟಾಂಗ ನಮಸ್ಕಾರ ಹಾಕು.

ದೀಪಾವಳಿ (ನಾ)= ದೀವಳಿಗೆ; ದಿವುಳ್ಗಿ.

ದೀಬರ್ದಿಂಡಿ (ನಾ)= ಗಂಡು ಬೀರಿ ಹೆಣ್ಣು; ತಿರ್ಬಡಿ ಹೆಣ್ಣು; ನೀಚ ಹೆಂಗಸು; ದುಷ್ಟೆ; ಅತಿದುಷ್ಟತನವುಳ್ಳ ಹೆಂಗಸು.

ದುಂಡಾಗಿದುಡಿ (ನು)= ಮನಸಾರೆ ಶ್ರಮಿಸು; ಚಿತ್ತ-ವಿಟ್ಟು ಕಾಯಕ ನೆರವೇರಿಸು.

ದುಂಡು (ನಾ)= ಗುಂಡು; ಗುಂಡುಕ; ಗೋಲಾಕಾರ.

ದುಂಡ್ಯಾ (ನಾ)= ಕುಂಟೆಯದಿಂಡು; ಯಡೆ; ಸಣ್ಣ ಕುಂಟೆ; ಕಳೆ ತೆಗೆಯುವ ಸಾಧನ.

ದುಕಾ (ನಾ)= ದುಃಖ ಸಂಕಟ (ಉ: ನಿನ್ನ್ ಕಾ ನೋಡ್ದುರ ನಂಗ ದುಕಾಬರ್ತಾದ.)

ದುಕಾನು (ನಾ)= ಅಂಗಡಿ; ವ್ಯಾಪಾರ ಮಳಿಗೆ.

ದುಕ್ಕಾ (ನಾ)= ದುಃಖ; ಸಂಕಟ; ಮನಸಿನ ತಾಪ.

ದುಗುಣಿ (ನಾ)= ದುಪ್ಪಟ್ಟು; ಎರಡು ಪಟ್ಟು; ಇಮ್ಮಡಿ.

ದುಗ್ಗಿ (ನಾ)= ಎರಡಂಕಿಯ ಇಸ್ಪೀಟೆಲೆ.

ದುಡ್ಡು (ನಾ)= ಒಂದು ರೂಪಾಯಿಯ ೧/೧೦೦ ಭಾಗ.

ದುಡ್ತಿ (ನಾ)= ದುಡಿತ; ಪರಿಶ್ರಮ; ಧಂದೆ; ಕಾಯಕ.

ದುಡ್ತಿ ಕುಡು (ಕ್ರಿ)= ದುಡಿ; ಪರಿಶ್ರಮಿಸು; ಧಂದೆ ಮಾಡು; ಕಾಯಕವನ್ನು ನೆರವೇರಿಸು.

ದುನಿಯಾ (ನಾ)= ಉ. ಜಗತ್ತು; ವಿಶ್ವ; ದುನ್ಯಾ.

ದುನಿಯಾದ್ದು (ಅ) ಉ.= ಬೇಕಷ್ಟು; ಸಾಕಷ್ಟು; ಮನಸ್ಸಿಗೆ ತೃಪ್ತಿಯಾಗುವಷ್ಟು.

ದುನ್ಯಾ (ನಾ)= ದುನಿಯಾ; ಜಗತ್ತು; ವಿಶ್ವ.

ದುನ್ಯಾದಾರಿ (ನಾ)= ಜಗತ್ತಿನ ರೀತಿ; ಲೋಕರೀತಿ-ನೀತಿ.

ದುನ್ಯಾದ್ದು = ದುನಿಯಾದ್ದು (ನೋಡಿರಿ).

ದುಪಾರ (ನಾ)= ಮಧ್ಯಾನ; ನಡು ಮಧ್ಯದ ದಿನ.

ದುಪಾರಿ (ನಾ)= ಮಧ್ಯಾನದಲ್ಲಿ; ಮಧ್ಯಾನೂಟ (ಉದಾ: ನ್ಯಾಯಾರಿ ಇಲ್ಲಾ ದುಪಾರಿ ಇಲ್ಲಾ; ನಡಿ ಮನಿಕಾಡಿ).

ದುಪ್ಪಟ್ಟು (ನಾ)= ದುಗುಣಿ; ಎರಡು ಪಟ್ಟು; ಇಮ್ಮಡಿ; ಡಬ್ಬಲ್ಲು.

ದುಬಲ್ಗುಂಡಿ (ನಾ)= ಹುಮನಾಬಾದ ತಾಲೂಕಿನಲ್ಲಿ, ದನಗಳ ಸಂತೆ ಜರುಗುವ ಒಂದು ಊರಿನ ಹೆಸರು (ಗಾದೆ: ದುಬಲ್ಗುಂಡಿದಲಾಲ, ಗಂಟ್ಬೆದ್ರ ಬಿಡಾಲ); ಪತ್ತೆಪೂರು ಶರಣಪ್ಪ ಎಂಬ ಶ್ರೀಮಂತನು ಪ್ರತಿ ನವರಾತ್ರಿ ದಿನಗಳಂದು ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ನಿರಂತರ ಅನ್ನದಾಸೋಹ ನಡೆಸಿದ ಊರು.

ದುಬಾರಾ (ನಾ)= ಎರಡನೇಸಲ; ಮರುಸಲ; ಮತ್ತೊಮ್ಮೆ.

ದುಬಾರಿ (ನಾ)= ಎರಡು ಪಟ್ಟು; ಅತಿ ತುಟ್ಟಿ; ಮಿತಿ ಮೀರಿದ.

ದುಬಾರಿ ಬಡ್ಡಿ (ನಾ)= ದುಪ್ಪಟ್ಟು ಬಡ್ಡಿ; ಮಿತಿಮೀರಿದ ಬಡ್ಡಿ.

ದುಬ್ಲಾ ಪತ್ಲಾ (ವಿ)= ಅತಿ ತೆಳಗಿನ; ಬಡಕಲು.

ದುರಂಕಾರ (ನಾ)= ದುರಹಂಕಾರ; ಕೆಟ್ಟ ಅಹಂಕಾರ.

ದುರುಗ (ನಾ)= ದುರ್ಗ; ಕೋಟೆ; ಕಿಲ್ಲೆ (ಹಂತಿ ಹಾಡು: ಅರ ಸಾವಿರ ಘಂಟಿ। ಮೂರ ಸಾವಿರ ಜಂಗ। ದೂರ ಕೇಳ್ಯಾವೊ ದುರುಗಕೊ। ನಮ್ಮೆತ್ತು ।ಧೂಳ। ಹಾರ್‍ಯಾದೋ ಗಗನಾಕೊ।।).

ದುರುಗುಟ್ಟು (ಕ್ರಿ)= ದಿಟ್ಟಿಸಿ ನೋಡು; ಘುರ್ಕಾಸಿ ನೋಡು; ಕಣ್ಣಲ್ಲಿ ಕಣ್ಣಿಟ್ಟು ನೋಡು.

ದುರುರುರು (ಅ)= ಸರಾಗವಾಗಿ; ವೇಗವಾಗಿ; ನಿರಂತರ; ನಿಲ್ಲದೆ.

ದುರಸ್ತಿ (ನಾ)= ಸರಿಪಡಿಸುವಿಕೆ; ರಿಪೇರಿ.

ದುರುಸ್ತಿಗೆಬಾ= ಸರಿಪಡಿಸುವುದು ಅಗತ್ಯವಾಗು; ರಿಪೇರಿ ಜರೂರಿಯಾಗು.

ದುರಸ್ತು ಮಾಡು (ಕ್ರಿ)= ಸರಿಪಡಿಸು; ರಿಪೇರಿ ಮಾಡು.

ದುರುಳ (ನಾ)= ದುಷ್ಟ; ನೀಚ; ಕೆಟ್ಟವನು.

ದುರುಳತನ (ನಾ)= ದುಷ್ಟತನ; ನೀಚತನ; ಕೆಟ್ಟತನ.

ದುರ್ಗ (ನಾ) ಸಂ.= ಕೋಟೆ; ಕಿಲ್ಲೆ; ದುರುಗ.

ದುರ್ಗಮ್ಮ (ನಾ)= ದುರ್ಗದ ದೇವಿ; ದುರ್ಗಿ.

ದುರ್ಗಿ (ನಾ)= ದುರ್ಗೆ; ದುರ್ಗಾದೇವಿ; ದುರ್ಗಮ್ಮ; ಶಕ್ತಿದೇವತೆಯ ಹೆಸರು.

ದುರ್ಜಣ (ನಾ)= ದುರ್ಜನ; ದುಷ್ಟ.

ದುರ್ಜಾಣ (ನಾ)= ದುರ್ಜಣ (ನೋಡಿರಿ).

ದುರ್ದೈವ (ನಾ)= ದೈವಬಲದ ಕೊರತೆ; ದೈವಬಲ ಕಡಿಮೆ ಇರುವಿಕೆ.

ದುರ್ದೈವಿ (ನಾ)= ದೈವಬಲ ಕಡಿಮೆ ಉಳ್ಳವನು (ಳು).

ದುರ್ನಾತ (ನಾ)= ದುರ್ವಾಸನೆ; ಕೆಟ್ಟ ನಾತ.

ದುಲ್ಹನ್ (ನಾ) ಉ.=ಮದುಮಗಳು; ವಧು.

ದುವ್ವಾ (ನಾ)= ದೂರ; ಅತಿದೂರ (ಬಾಲಭಾಷೆ).

ದುವ್ವಾಬಾ (ಕ್ರಿ)= ದೂರ ಹೋಗೋಣ ಬಾ (ಬಾಲ ಭಾಷೆ).

ದುವ್ವಾದಸಿ (ನಾ) ಸಂ.=ದ್ವಾದಸಿ; ಪಕ್ಷದ ಹನ್ನೆರಡನೇ ದಿನ.

ದುಶಾಲು (ನಾ)= ಉಣ್ಣೆಯ ದುಪ್ಪಟೆ; ಶಾಲು.

ದುಷ್ಕಾಳ (ನಾ)= ಬರಗಾಲ; ಅನಾವೃಷ್ಟಿಯಿಂದ ಉಂಟಾದ ಅನ್ನ ನೀರಿನ ಕೊರತೆ (ಗಾದೆ: ದುಷ್ಕಾಳ್ದಾಗ ತೇರಾಂಬಾ ಮೈನಾ).

ದುಷ್ಕಾಳಿ (ನಾ)ಮ.= ಬರಗಾಲದ ದಿನಗಳು; ಬರಗಾಲದಲ್ಲಿ ಹುಟ್ಟಿದವನು; ನಿರ್ಗತಿಕ.

ದುಸರಾ (ವಿ)= ಹಿಂ. ಎರಡನೆಯ; ಅನ್ಯ; ಇತರೆ.

ದುಸ್ಮನ (ನಾ) ಉ.= ದುಸ್ಮಾನ; ವೈರಿ.

ದುಸ್ಮನಿ (ನಾ)= ವೈರತ್ವ.

ದುಸ್ಮನಿ ಹಿಡಿ (ಕ್ರಿ)= ವೈರತ್ವ ಸಾಧಿಸು.

ದುಸ್ಮಾನ (ನಾ)= ದುಸ್ಮನ; ವೈರಿ; ಶತ್ರು (ಒಗಟು: ಭರ್‍ರಂತ್ಬಂತು। ಭಂಗಾರ್‍ಮನಿ ಕಟ್ತು। ದುಸ್ಮಾನ್ಬಂದ। ಕಸ್ಗೊಂಡ್ಹೋದ।= ಜೇನು).

ದುಸ್ಮಾನ್ಕಿ (ನಾ)= ವೈರತ್ವ; ದುಸ್ಮಾನಿಕೆ.

ದೂ (ನಾ)= ದೂರ (ಬಾಲ ಭಾಷೆ).

ದೂತಿ (ನಾ)= ದೂತೆ; ಸೇವಕಿ; ಸಂದೇಶ ಮುಟ್ಟಿಸುವವಳು; ಅರಮನೆಯ ಸೇವಕಿ.

ದೂದಖೀರ (ನಾ)= ಹಾಲಿನಿಂದ ತಯಾರಿಸಿದ ಪಾಯಸ.

ದೂಲಾ (ನಾ)= ಮದುಮಗ; ಮದುವಣಿಗ.

ದೂಲಾ ಹೈದೋಸ್ (ನಾ)= ಮೊಹರಂ ಹಬ್ಬದಲ್ಲಿ ಹಸನ-ಹುಸೇನ ಹೆಸರಿನಲ್ಲಿ ಮುಸಲ್ಮಾನರು ಹಾಕುವ ಜಯ ಘೋಷ; ಮದುಮಗನೇ, ಅಯ್ಯೋ ಮಿತ್ರನೇ' ಎಂಬರ್ಥದ ಜಯಘೋಷ; ದೂಲಾ ಹಾಯ್ ದೋಸ್ತ್.

ದೂಸ್ರೀ (ನಾ)= ಎರಡನೇ; ಎರಡನೇ ವರ್ಗ.

ದೆವ್ವಿಗೆ ಮಾಡು (ಕ್ರಿ)= ದೆವ್ವಿಗೆ ಶಾಂತಗೊಳಿಸಲು ಆಹಾರ ಇಡು.

ದೆವ್ವಿನ ಆರ (ನಾ)= ದೆವ್ವಿಗಾಗಿ ತಯಾರಿಸಿದ ಆಹಾರ; ದೆವ್ವಿಗೆ ಬೇಕಾಗುವಷ್ಟು ಆಹಾರ.

ದೆವ್ವು (ನಾ)= ದೆವ್ವ; ಭೂತ; ಪ್ರೇತ; ಪಿಶಾಚ.

ದೆವ್ವು ಘಾಳಿ (ನಾ)= ಭೀಕರವಾಗಿ ಸುರುಳಿಗೊಂಡು ಬೀಸುವ ಗಾಳಿ.

ದೆವ್ವುಜಾತಿ (ನಾ)= ದೆವ್ವಿನ ಗುಣದ ಜನ.

ದೆವ್ವು ತಿಂಡಿ (ನಾ)= ದೆವ್ವ; ಭೂತ; ಪಿಶಾಚಿಗಳಿಗಾಗಿ ತಯಾರಿಸಿದ ಆಹಾರ; ರಾಶಿರಾಶಿ ಆಹಾರ.

ದೆವ್ವು ಬಿಡಿಸು (ಕ್ರಿ)= ದೆವ್ವ, ಭೂತ, ಪಿಶಾಚಿ ಬಾಧೆಯನ್ನು ತಪ್ಪಿಸು.

ದೆವ್ವುರಂಡಿ (ನಾ)= ದೆವ್ವಿನಂತೆ ವರ್ತಿಸುವ ಹೆಣ್ಣು.

ದೆವ್ವು ಸೇರು (ಕ್ರಿ)= ದೆವ್ವ ಬಾಧೆಯುಂಟಾಗು.

ದೆವ್ವಹಿಡಿ (ಕ್ರಿ)= ಭೂತ; ಪಿಶಾಚಿಗಳ ಬಾಧೆಯುಂಟಾಗು.

ದೇಖಾದೇಖಿ (ಅ) ಹಿಂ.= ಒಬ್ಬರ ನೋಡಿ ಇನ್ನೊಬ್ಬರು.

ದೇಖ್ರೇಖ (ನಾ) ಉ.= ಮೇಲ್ವಿಚಾರಣೆ; ಉಸ್ತುವಾರಿ.

ದೇಗಲ್ಮಡಿ (ನಾ)= ಚಿಂಚೋಳಿ ತಾಲೂಕಿನಲ್ಲಿರುವ ಒಂದು ಊರಿನ ಹೆಸರು.

ದೇಗುಲ (ನಾ)= ದೇಗ್ಲ; ಪ್ರಾಚೀನ ದೇವಸ್ಥಾನ.

ದೇಗ್ಲ (ನಾ)= ದೇಗುಲ; ದೇವರ ಗುಡಿ; ಹಳೆಯ ಕಾಲದ ದೇವಾಲಯ.

ದೇಗ್ಲೂರು (ನಾ)= ಮೊದಲು ಬೃಹತ್ ಬೀದರ ಜಿಲ್ಲೆಯಲ್ಲಿದ್ದು ಈಗ ಮಹಾರಾಷ್ಟ್ರ ಸೇರಿರುವ ಕನ್ನಡ ಭಾಷಿಕರಿರುವ ತಾಲೂಕು ಕೇಂದ್ರವಾದ ಊರಿನ ಹೆಸರು.

ದೇಟು (ನಾ)= ಕಾಯಿಯ ಆಧಾರದ ಎಳೆ; ಕಾಯಿ ಮತ್ತು ಟೊಂಗೆ ನಡುವಿನ ಸಂಬಂಧದ ಎಳೆ (ಕವಿತೆ: ನಾವು ದೇವನ ದೇಟಿನ ಕಾಯಿಗಳು। ಒಂದೇ ದೇಟಿನ ಮಾವುಗಳು।).

ದೇಣೆ (ನಾ) ಮ.= ದೇಣ್ಯಾ; ಸಾಲ; ಬಾಕಿ; ಕರ್ಜು.

ದೇಣೆಘೇಣೆ (ನಾ) ಮ.= ಕೊಡುವ ತೆಗೆದುಕೊಳ್ಳುವ ಸಾಲದ ವ್ಯವಹಾರ.

ದೇಣಿಗಿ (ನಾ)= ದೇಣಿಗೆ; (ದೇಣ್ಗಿ ನೋಡಿರಿ).

ದೇಣ್ಗಿ (ನಾ)= ದೇಣಿಗೆ; ಕೊಡುಗೆ; ಚಂದಾ.

ದೇಣ್ಗಿಕುಡು (ಕ್ರಿ)= ಚಂದಾಕೊಡು; ಕಾಣಿಕೆ ಕೊಡು; ಕೊಡುಗೆ ನೀಡು.

ದೇಣ್ಯಾ (ನಾ)= ದೇಣೆ (ನೋಡಿರಿ).

ದೇರಿ (ನಾ) ಹಿಂ.= ತಡಮಾಡುವಿಕೆ.

ದೇವಕರಿ (ನಾ)= ದೇವಕಾರ್ಯ; ದೇವಪೂಜೆಯ ದಿನ.

ದೇವಕಿ (ನಾ)= ವಸುದೇವನ ಹೆಂಡತಿ ಮತ್ತು ಶ್ರೀ ಕೃಷ್ಣನ ತಾಯಿ.

ದೇವಡಿ (ನಾ)= ದೊಡ್ಡ ಮನೆ; ಅರಮನೆ.

ದೇವಣಿ (ನಾ)= ಮೊದಲು ಬೃಹತ್ ಬೀದರ ಜಿಲ್ಲೆಯಲ್ಲಿದ್ದು ಈಗ ಮಹಾರಾಷ್ಟ್ರ ಸೇರಿರುವ ಕನ್ನಡ ಮಾತಾಡುವ ತಾಲೂಕಿನ ಕೇಂದ್ರ; ದೇವಣಿ ಎಂಬ ಆಕಳು ಮತ್ತು ಹೋರಿಯ ತಳಿ; ಪಶುಗಳ ಸಂತೆಯ ಊರು; ದೇವಣಿ ಎಂಬ ಹೆಸರಿನ ನದಿ.

ದೇವಸಾನ ಚಿಮ್ಕೋಡೆ (ನಾ)= ಪ್ರಸಿದ್ಧ ಜಾನಪದ ಹಾಡುಗಾರ.

ದೇವರ್ (ನಾ) ಉ.=ಗಂಡನ ಅಣ್ಣ ಅಥವಾ ತಮ್ಮ; ಭಾವ; ಮೈದುನ.

ದೇವರು (ನಾ)= ಸರ್ವಶಕ್ತ ಪರಮಾತ್ಮ; ರಕ್ಷಕ.

ದೇವಿ (ನಾ)= ಹೆಣ್ಣುದೇವತೆ; ಪಾರ್ವತಿ; ಲಕ್ಷ್ಮಿ; ಸರಸ್ವತಿ; ಮೈಲಿಬೇನೆ; ಸಿಡುಬುರೋಗ.

ದೇವಿಟೀಕಾ (ನಾ)= ಸಿಡುಬು ರೋಗ ತಡೆವ ಲಸಿಕೆ ಹಾಕುವಿಕೆ.

ದೇವಿ ಬರು (ಕ್ರಿ)= ಮೈಯಲ್ಲಿ ದೇವಿ ಪ್ರವೇಶವಾಗು; ಸಿಡುಬು ರೋಗ ಉಂಟಾಗು; ಮೈಲಿ ಬೇನೆ ಉಂಟಾಗು.

ದೇವುಳ (ನಾ) ಮ.= ದೇವಾಲಯ; ದೇವರ ಗುಡಿ.

ದೇವ್ರಾಟ (ನಾ)= ದೇವರಾಟ; ದೇವನ ಲೀಲೆ.

ದೇವ್ರಾಣೆ (ನಾ)= ದೇವರ ಆಜ್ಞೆ; ದೇವರ ಹೆಸರಿನಲ್ಲಿ ಮಾಡುವ ಆಣೆ, ಪ್ರಮಾಣ.

ದೇವ್ರಿಗ್ಮಾಡು (ಕ್ರಿ)= ದೇವರ ಹೆಸರಿನಲ್ಲಿ ಅನ್ನದಾನ/ ಧನದಾನ ಇತ್ಯಾದಿಯನ್ನು ಮಾಡು.

ದೇವ್ರು (ನಾ)= ದೇವರು (ಗಾದೆ: ಅಡಿದೇವ್ರು ಬಂದು, ಗುಡಿದೇವ್ರಿಗ್ಹೊಡುದ್ನಂತ).

ದೇಶ (ನಾ)= ನಾಡು; ವಾಸಿಸುವ ಭೂಭಾಗ.

ದೇಶಪಾಂಡೆ (ನಾ)= ಪ್ರಾಂತದ ನಾಯಕ; ಪಾಳೆಯಗಾರ.

ದೇಶಮುಖ (ನಾ) ಸಂ.= ನಿಜಾಮನ ಕಾಲದ ಪರಗಣೆಯ ಮುಖ್ಯಸ್ಥ.

ದೇಶಾಂತ್ರ (ನಾ)= ದೇಶಾಂತರ; ದೇಶ ಸಂಚಾರ; ಪರದೇಶದ ಸಂಚಾರ.

ದೇಶಾಂಶ ಹುಡಗಿ (ನಾ)= ಬೀದರ ನಗರದ ಅಲ್ಲಮ ಪ್ರಭುನಗರದ ಹಿರಿಯ ಸಾಹಿತಿ.

ದೇಶಾ ಏರು (ಕ್ರಿ)= ಮನೆಬಿಟ್ಟು ಹೋಗು; ದೇಶ ಸಂಚಾರಿಯಾಗು.

ದೇಶಾದ್ಮ್ಯಾಲ ಹೋಗು (ಕ್ರಿ)= ಮನೆ ಮಾರು ಬಿಟ್ಟು ದೇಶ ಸಂಚಾರಿಯಾಗು; ಸನ್ಯಾಸಿಯಾಗು.

ದೇಶಾವರಿ (ಅ)= ನಾನಾತರಹದ.

ದೇಶಿ (ನಾ)= ದೇಶದಲ್ಲಿ ತಯಾರಾದ; ತನ್ನ ದೇಶದ.

ದೇಶ್ಪಾಂಡೆ (ನಾ)=ದೇಶಪಾಂಡೆ (ನೋಡಿರಿ).

ದೇಸಾಯಿ (ನಾ)= ಊರ ಕುಲ್ಕರ್ಣಿ; ದೇಶಮುಖ; ದೇಶಪಾಂಡೆ.

ದೇಸಿ (ವಿ.)= ಸ್ಥಳೀಯ ತಯಾರಿಕೆಯ; ಸ್ವದೇಶದ; ಜಾನಪದಕ್ಕೆ ಸಂಬಂಧಿಸಿದೆ.

ದೇಹಾ ಬಿಡು (ಕ್ರಿ)= ಸಾಯು; ದೇಹಾಂತವಾಗು.

ದೈ (ನಾ)= ದನ; ಹಸು; ಆಕಳು; ಎಮ್ಮೆ; ಎತ್ತು (ಬಾಲಭಾಷೆ).

ದೈತ್ಯಾ (ನಾ)= ದೈತ್ಯ; ದಿತಿಯ ಮಕ್ಕಳು; ಅತಿಬಲಶಾಲಿಯಾದ ವ್ಯಕ್ತಿ; ರಾಕ್ಷಸ.

ದೈಯಂ (ನಾ) ತೆ.= ದೆವ್ವ; ಭೂತ.

ದೈವದಾಟಾ (ನಾ)= ದೇವರ ಆಟ; ದೇವಲೀಲೆ.

ದೈವಾ (ನಾ)= ದೈವ; ದೇವಬಲ; ಲಲಾಟಲಿಖಿತ; ಹಣೆಬರಹ.

ದೈವಾ ಕೆಡು (ಕ್ರಿ)= ದೈವಬಲ ಕೊರತೆಯಾಗು.

ದೈವಾಕೆಡು (ಕ್ರಿ)= ದೈವಬಲ ಕೊರತೆಯಾಗು.

ದೈವಾತೆರಿ (ಕ್ರಿ)= ದೈವಕೃಪೆಯಾಗು.

ದೈವಾನ (ನಾ)= ದಯಾಳು; ದಯೆಯುಳ್ಳವನು; ಶ್ರೀಮಂತ.

ದೊಂಗಾ (ನಾ) ತೆ.= ಕಳ್ಳ; ಚೋರ.

ದೊಗ್ಗಾಲು (ನಾ)= ಡೊಗ್ಗಾಲು (ನೋಡಿರಿ).

ದೊಡ್ಡ (ವಿ.)= ಹಿರಿಯ; ಶ್ರೇಷ್ಠ; ವಿಶಾಲ.

ದೊಡ್ಡಿ (ನಾ)= ದೊಡ್ಡದಾದ ಅಂಗಳವುಳ್ಳ ವಿಶಾಲ ಮನೆ; ದನಕಟ್ಟುವ ಇಲ್ಲವೆ ಕುರಿ ರಾತ್ರಿ ಕಳೆವ ದೊಡ್ಡದಾದ ಮನೆ.

ದೊಡ್ರಾಶಿ (ನಾ)= ಮೊದಲನೇ ಸಲ ತುಳಿಗೆ ಮಾಡಿಸಿ ತೂರುವ ಜೋಳದ ರಾಶಿ.

ದೊಣ್ಣೆ (ನಾ)= ಡೊಪ್ಪೆ; ಮುತ್ತಲೆಲೆಯಿಂದ ಮಾಡಿದ ಬಟ್ಟಲು.

ದೊರ್ಸಾನಿ (ನಾ)=(ತ್ರೆ) ದೊರೆಸಾನಿ; ಯಜಮಾನಿ; ಒಡತಿ; ಸೂಳೆಯರ ಒಡತಿ.

ದೋ (ನಾ)= ಎರಡು.

ದೋಚು (ಕ್ರಿ)= ಕದಿ; ಲೂಟಿ ಮಾಡು.

ದೋಜಖ್ಖು (ನಾ) ಉ.= ದೋಜಖ್; ನರಕ.

ದೋಜರ್ಬಿ ಬಂದೂಕು (ನಾ) ಉ.= ಜೋಡು ನಳಿಕೆಯ ಬಂದೂಕು.

ದೋಟಿ (ನಾ)= ಕಾಯಿ; ಹೂವು; ಹಣ್ಣು ಮೊದಲಾದುವನ್ನು ಹರಿಯಲು ಅನುಕೂಲವಾಗುವಂತೆ ತುದಿಯಲ್ಲಿ ಕೊಕ್ಕು ಹಾಗೂ ಜಾಳಿಗೆ ಜೋಡಿಸಿದ ಕೋಲು.

ದೋಟಿ ಆಡ್ಸು (ಕ್ರಿ)= ದೋಟಿಯನ್ನು ಆಡಿಸು; ಕುಚೇಷ್ಟೆ ಮಾಡು; ಸತಾಯಿಸು; ತೊಂದರೆ ಕೊಡು; ಮಾವಿನ ಕಾಯಿ ಉದುರಿಸುವ ಆಟವಾಡು.

ದೋನಂಬರ್ (ವಿ.)= ಎರಡನೇ ದರ್ಜೆಯ; ನಕಲಿ; ಕಳವಿನ; ಕಲಬೆರಕೆಯಿಂದ ಕೂಡಿದ.

ದೋನಂಬ್ರಿ (ವಿ.)= ಎರಡನೇ ಮಟ್ಟದ; ಕಳ್ಳತನದ; ಮೊಸದ; ಕಲಬೆರಕೆಯ.

ದೋನಂಬ್ರಿ ಯಾಪಾರ (ನಾ)= ಕಳ್ಳ ವ್ಯಾಪಾರ; ಕಳ್ಳಸಂತೆ.

ದೋನಲ್ಲಿ ಬಂದೂಕು (ನಾ) ಉ.= ಎರಡು ನಳಿಕೆಯ ಬಂದೂಕು; ದೋಜರ್ಬಿ ಬಂದೂಕು.

ದೋನಿ (ನಾ)= ಮಲವಿಸರ್ಜನೆ; ಮೈದಾನ; ಹೊರ್ಕಡಿ; ಕಕ್ಕಸ.

ದೋನಿಗಿಬರು (ಕ್ರಿ)= ಮಲವಿಸರ್ಜನೆಯ ತ್ವರೆಯುಂಟಾಗು.

ದೋನ್ಸೇ = ಎರಡು ನೂರು.

ದೋಪಾರ್ಟಿ (ನಾ)= ಇಬ್ಬಣ; ಎರಡು ಪಕ್ಷ; ಒಡಕು.

ದೋಫಂಡ (ನಾ)= ದೋಪಾರ್ಟಿ; ಇಬ್ಬಣ; ಎರಡು ಪಕ್ಷ.

ದೋಫಂಡಾಗು (ಕ್ರಿ)= ಇಬ್ಬಣವಾಗು; ಒಡಕುಂಟಾಗು.

ದೋಮಜ್ಲಾ (ವಿ) ಉ.= ಎರಡು ಅಂತಸ್ತುಳ್ಳ.

ದೋಸಾ (ನಾ)= ದೋಸೆ; ದ್ವಾಸ್ಯಾ; ಅಕ್ಕಿ, ಉದ್ದುಗಳನ್ನು ನೆನಸಿ, ರುಬ್ಬಿ ತೆಳುವಾಗಿ ಹಂಚಿನ ಮೇಲೆ ಹೊಯ್ದು ತಯಾರಿಸುವ ಒಂದು ಬಗೆಯ ತಿನಿಸು.

ದೋಸ್ತ (ನಾ)= ಗೆಳೆಯ.

ದೋಸ್ತಾನ್ಕಿ (ನಾ) ಹಿಂ.= ಗೆಳೆತನ; ಮಿತ್ರತ್ವ; ದೋಸ್ತಿ.

ದೋಸ್ತಿ (ನಾ) ಹಿಂ.= ಗೆಳೆತನ; ಸ್ನೇಹ; ಗೆಳೆಯ; ಗೆಳತಿ; ಮಿತ್ರ; ಮಿತ್ರೆ.

ದೋಸ್ತಿ ಕಟ್ಟು (ಕ್ರಿ)= ಗೆಳೆತನ ಮಾಡು; ಮಿತ್ರತ್ವ ಬೆಳೆಸು.

ದೋಸ್ತಿಕಡ್ಕೊ (ಕ್ರಿ)= ಗೆಳೆತನ ಮುರಿ; ಮಿತ್ರತ್ವ ಭಂಗ ಗೊಳಿಸು.

ದೋಸ್ತಿ ಬಿಡು (ಕ್ರಿ)= ಗೆಳೆತನ ಹರಿದುಕೊ.

ದ್ರೋಣಾ (ನಾ) ಮ.= ಮುತ್ತಲೆಲೆಯಿಂದ ಇಲ್ಲವೆ ಬಾದಾಮಿ ಎಲೆಯಿಂದ ತಯಾರಿಸಿದ ಬಟ್ಟಲು; ದೊಪ್ಪೆ.

ದ್ರೋಣಾಚಾರಿ (ನಾ)= ಕೌರವ ಪಾಂಡವರಿಗೆ ಯುದ್ಧ ವಿದ್ಯ ಕಲಿಸಿದ ಗುರು; ಏಕಲವ್ಯನ ಬೆರಳು ಬೇಡಿದ ಅರ್ಜುನನ ಪಕ್ಷಪಾತಿಗುರು.

ದ್ರೋಪತಿ (ನಾ)= ಪಂಚಪಾಂಡವರ ಹೆಂಡತಿ ದ್ರೌಪದಿ; ದ್ರುಪದರಾಜನ ಮಗಳು.

ದೌಡ (ವಿ)= ಬೇಗ.

ದೌಡಾ ದೌಡ್ಕಿ (ನಾ)= ವೇಗಭರಿತ ಓಟ; ಅತಿರಭಸದ ಓಟ.

ದೌಡಾಸು (ಕ್ರಿ)= ಓಡಿಸು; ಓಡು.

ದೌಡಿ (ನಾ)= ದವಡೆ; ದಂಷ್ಟ್ರಾ.

ದೌಡು (ನಾ)= ಓಟ; ವೇಗ.

ದೌಡ್ದೌಡ (ದ್ವಿ)= ಬೇಗಬೇಗ.

ದೌತಿ (ನಾ)= ಮಸಿಕುಡಿಕೆ; ಶಾಯಿ ಬಾಟ್ಲಿ.

ದೌತಿಕುಳ್ಳಿ (ನಾ)= ಮಸಿ ಕುಡಿಕೆ.

ದೌಲತ್ತು (ನಾ)= ಸಿರಿಸಂಪತ್ತು; ಐಶ್ವರ್ಯ; ವೈಭವ.

ದೌಳಾಂವ (ನಾ)= ದಯೆಯುಳ್ಳವನು; ದಯಾಳು; ಸಿರಿವಂತ; ದಯವಾನ.

ದೌಳೋರು (ನಾ)= ಸಿರಿವಂತರು; ದಯೆಯುಳ್ಳವರು.

ದ್ಯಾಗೈ (ನಾ)= ಪ್ರಸಿದ್ಧ ಗೀಗೀ ಪದಕಾರ ಗುಂಡಪ್ಪಕವಿಯ ಹುಟ್ಟೂರು.

ದ್ಯಾವಪ್ಪ (ನಾ)= ದೇವಪ್ಪ ಹೆಸರು.

ದ್ಯಾವಮ್ಮ (ನಾ)= ದೇವಮ್ಮ; ಗ್ರಾಮದೇವಿಯ ಹೆಸರು.

ದ್ಯಾವ್ರಿಗ್ಬಿಡು (ಕ್ರಿ)= ದೇವರಿಗಾಗಿ ಮೀಸಲಿಡು.

ದ್ಯಾವ್ರು (ನಾ)= ದೇವರು.

ದ್ವಾದಶಿ (ನಾ)= ಪಕ್ಷದ ಹನ್ನೆರಡನೆಯ ದಿನ.

ದ್ವಾಮಿ (ನಾ)= ದೋಮೆ; ಸೊಳ್ಳೆ; ಚಿಕ್ಕಡ; ಚಿಕ್ಕಾಡು.

ದ್ವಾರ (ನಾ)= ಬಾಗಿಲು.

ದ್ವಾರ ಬಾಗ್ಲು (ನಾ)= ಹೊರಬಾಗಿಲು; ಮಹಾದ್ವಾರ; ಬಾಗಿಲು (ದೊಡ್ಡಾಟದ ಮಾತು).

ದ್ವಾಸ್ಯಾ (ನಾ)= ದೋಸಾ; ದೋಸೆ (ಗಾದೆ: ೧. ಎಲ್ಲೋರ ಮನ್ಯಾನದ್ವಾಸ್ಯಾ ಹುಳ್ಕೇ ಹುಳ್ಕು. ೨. ದ್ವಾಸ್ಯಾ ಉಂಡೂರಿ-ಗ್ಹೋದಾಂವ ದೇಶಾ ವಿರಾದು ಘಚ್ಚಿ).

ದ್ವಾಸ್ಯಾದ್ಮಾರ್ಯಾಂವ (ನಾ)= ಹುಳುಕು ಮೋರೆಯುಳ್ಳಾತ.

ದ್ವಾಸ್ಯಾಳ (ನಾ)= ದಾಸಿವಾಳ ಗಿಡ ಮತ್ತು ಅದರ ಹೂವು.

ಧ

ಧಂಗಲ್ (ನಾ)= ದಂಗಲ್, ಗರಸು ನುರಿಸುವ ಗಾಣ; ಗಚ್ಚಿನ ಗಾಣ; ಸುಣ್ಣ, ಮತ್ತು ರೇತಿಯನ್ನು ನುರಿಸಿ ಗಚ್ಚು ತಯಾರಿಸುವ ಗಾಣ.

ಧಂಟು (ನಾ)= ಜೋಳ, ಸಜ್ಜೆ, ನವಣಿ ಇತ್ಯಾದಿಗಳ ದಂಟು.

ಧಂಟ್ಲಿ (ನಾ)= ಸಣ್ಣ ದಂಟು.

ಧಂಡ (ನಾ)= ದೇಹ; ಧ್ಯಾಯ; ಶರೀರ (ತತ್ವಪದ:- ಧಂಡಕ ಜೀವಕ ಕೂಡಿತ್ತು ಗೆಳೆತಾನ। ಜೋಡನಿಲ್ಲದೆ ಹೋಗುತಿದ್ದಿ ಎಲೆ ಜೀವವೆ॥).

ಧಂಡದಾಗ ಜಿವಾ ಇರು (ನು)= ಜೀವಂತ ವಾಗಿರು; ಬದುಕಿರು; ಉಸಿರಾಡುತ್ತಿರು (ಗಾದೆ:- ಧಂಡದಾಗ ಜಿವಾ ಇರಾಥನಾ ಗಂಡಾಂತ್ರ ಬಂದೇ ಬರ್ತಾವ!)

ಧಂಡಾ (ನಾ)= ಧಂಡ, ಧ್ಯಾಯ; ದೇಹ; ಶರೀರ (ಗಾದೆ:- ಧಂಡಾ ಇರಾಥನಾ ಧಂದ್ಯಾ ತಪ್ಪಿದ್ದಲ್ಲ!).

ಧಂಡಾಖುಸುದ್ಧೀಳು (ಕ್ರಿ)= ಶರೀರವು ಕುಸಿದು ಬೀಳು, ಬಾಗು.

ಧಂಡಾಸುದ್ದಿರು (ನು)= ಶರೀರ ನಿರ್ಮಲ ವಾಗಿರು; ಗಟ್ಟಿ ಮುಟ್ಟಾಗಿರು; ನಿರೋಗಿ ಯಾಗಿರು; ಕ್ರಿಯಾಶೀಲವಾಗಿರು.

ಧಂಡಿ (ನಾ)= ದಂಡೆ; ಧಡ್ಡಿ; ನದಿನಾಲೆಗಳ ಇಬ್ಬದಿ; ಕೆರೆದಂಡೆ; ಸಮುದ್ರ ದಂಡೆ.

ಧಂದ್ಯಾ (ನಾ)= ಧಂದೆ; ಕೆಲಸ; ಕಾಯಕ; ದಗ್ದಾ. ಧಂದ್ಯಾ ಇಲ್ದಧಂದ್ಯಾ(ನು). ಫಲಕಾರಿ ಯಲ್ಲದ ಕೆಲಸ; ಮಾಡಬಾರದ ಕೆಲಸ; ವೃಥಾ ಪರಿಶ್ರಮದ ಕೆಲಸ.

ಧಂದ್ಯಾ ಕೆಡು (ಕ್ರಿ)= ಕೆಲಸ ಕೆಟ್ಟು ಹೋಗು; ಪರಿಶ್ರಮದ ಫಲ ಇಲ್ಲದಂತಾಗು.

ಧಂದ್ಯಾ ಹಿಡಿ (ಕ್ರಿ)= ಕೆಲಸ ಮಾಡಲು ಒಪ್ಪಿಕೊ.

ಧಂಪಾಧೂಳಿ (ನಾ)= ಹಾಳು ಬೀಳು.

ಧಂಪಾಧೂಳಿ ಮಾಡು(ನು)= ಹಾಳುಬೀಳು ಮಾಡು; ಹದಗೆಡಿಸು; ಕೆಲಸ ಕೆಡಿಸು; ಗೊಂದಲ ಎಬ್ಬಿಸು.

ಧಕ್ಕಂಧುಕ್ಕೀ (ನಾ)= ಗುಂಪಿನಲ್ಲಿ ಪರಸ್ಪರ ನೂಕಾಟ, ತಳ್ಳಾಟ, ಧಕ್ಕಾಮುಕ್ಕಿ.

ಧಕ್ಕಾಮುಕ್ಕಿ (ನಾ)= ನೂಕಾಟ; ತಳ್ಳಾಟ; ಗುದ್ದಾಟ; ಹೊಡೆದಾಟ.

ಧಕ್ಕಿ (ನಾ)= ಧಕ್ಕೆ; ತಳ್ಳುವಿಕೆ; ತಾಗುವಿಕೆ.

ಧಕ್ಕಿಯಾಗು (ಕ್ರಿ)= ಬಳೆ ಒಡೆದು ಚೂರಾಗು; ಕನ್ನಡಿ ಒಡೆದು ಚೂರಾಗು (ಮುತ್ತೈದೆಯರ ಬಳೆ ಧಕ್ಕೆಯಾಯಿತೆನ್ನುತ್ತಾರೆ. ಒಡೆಯಿತೆನ್ನು ವಂತಿಲ್ಲ)

ಧಕ್ಕಿ ಹತ್ತು (ಕ್ರಿ)= ತಾಗು, ಪೆಟ್ಟು ಹತ್ತು; ಕಷ್ಟದ ಅನುಭವವಾಗು.

ಧಗಧಗಿ (ನಾ)= ಉಬ್ಬಣಿಕೆ, ಸೆಕೆಯ ಹೆಚ್ಚಳ.

ಧಗಧಗಿಸು (ಕ್ರಿ)= ಉಬ್ಬಣೆಯಾಗು; ಬೆವರು ಬಿಡು.

ಧಗಿ (ನಾ)= ಧಗೆ; ಕಾವು; ಝಳ; ತಳಮಳ.

ಧಗ್ಗಾ (ನಾ)= ಢಂ ಢಂ ಸದ್ದು ಮಾಡುವ ತಬಲಾ ವಾದ್ಯ.

ಧಗ್ಗಿ (ನಾ)= ಸದಾ ಕೆಮ್ಮುವವಳು; ದಾಪು ಬೇನೆ ಉಳ್ಳವಳು.

ಧಗ್ಗು (ನಾ)= ಕೆಮ್ಮು (ಕ್ರಿ) ಕೆಮ್ಮು; ಕೆಮ್ಮಿಸು; ಖೆಮ್ಮು; ಖೆಮ್ಮಿಸು.

ಧಗ್ಗುಸೇರು (ನು)= ಕೆಮ್ಮು ಬೇನೆ ಉಂಟಾಗು.

ಧಗ್ಯಾ (ನಾ)= ದಾಪು ಜೀನೆಯುಳ್ಳವನು; ಸದಾ ಕೆಮ್ಮುವವನು.

ಧಚಕ (ನಾ)= ಭಯ, ಅಂಜಿಕೆ, ದಿಗಿಲು; ಎದೆಯೊಡೆಯುವಿಕೆ.

ಧಚ್ಕಾಸು (ಕ್ರಿ)= ಎದೆಯೊಡೆ; ದಿಗಿಲುಗೊಳ್ಳು, ಭಯಭೀತನಾಗು.

ಧಚ್ಕಿ (ನಾ) ಉ.= ದಿಗಿಲು; ಭಯ; ಅಂಜಿಕೆ; ಎದೆಯೊಡೆಯುವಿಕೆ.

ಧಚ್ಕಿ ಸೇರು (ಕ್ರಿ)= ಭಯವು ಮನೆ ಮಾಡು; ದಿಗಿಲುಗೊಂಡವನಾಗು.

ಧಜ್ಜಿ (ನಾ)= ಕಾಗದ ಅಥವಾ ಬಟ್ಟೆಯ ಚೂರು, ಚಿಂದಿ.

ಧಜ್ಜಿ ಉಡಾಸು (ಕ್ರಿ)= ಕಾಗದ ಚೂರಂತೆ ಚಿಂದಿ ಚಿಂದಿ ಮಾಡು; ಚಿಂದಿ ಹಾರಿಸು; ಚಿಂದಿಗೊಳಿಸಿ ಗಾಳಿಗೆ ತೂರು; ಅಪಮಾನಿಸು; ಅಗೌರವಿಸು; ಮಾನ ಮಾರಾಟ ಮಾಡು; ಛೀ ಫಜೀತಿ ಮಾಡು.

ಧಟ್ಟ (ನಾ)= ದಟ್ಟ; ಒತ್ತೊತ್ತಾದ ಮೊಳಕೆ; ಒತ್ತಡದ ಬೆಳೆ; ಒತ್ತೊತ್ತಾದ ಸಸಿ.

ಧಟ್ವಾಗು (ಕ್ರಿ)= ಮೊಳಕೆ ಒತ್ತಾಗು, ದಟ್ಟವಾಗು.

ಧಟ್ಟಿ (ನಾ)= ಬೆಲೆಬಾಳುವ ಬಟ್ಟೆ, ಮೊಹರಂ ಪೀರನ ಉಡುಗೆ.

ಧಟ್ಟಿ ಪಿತಾಂಬ್ರ (ನಾ)= ಬೆಲೆಬಾಳುವ ಬಂಗಾರ ಕುಸುರಿನ ಬಟ್ಟೆ.

ಧಟ್ಟುಣ್ಕಿ (ನಾ)= ದಟ್ಟಣಿಕೆ; ಒತ್ತೊತ್ತಾಗಿರುವಿಕೆ.

ಧಡಂ (ನಾ)= ನೀರೊಳಗೆ ವಸ್ತು ಬಿದ್ದಾಗ ಉಂಟಾಗುವ ಜೋರಾದ ಸದ್ದು.

ಧಡಂನೆ (ಅ)= ಧಡಮ್ಮೆಂದು ಸದ್ದಾಗುವಂತೆ.

ಧಡಕಾಸಿ (ಅ)= ಧsಡ್ ಎಂದು ಸದ್ದಾಗುವಂತೆ; ಧಡಕ್ಕನೆ; ಒಮ್ಮೇಲೆ; ಜೋಗಾಗಿ.

ಧಡಕಿ (ನಾ)= ಭಯ; ದಿಗಲು; ಗಾಬರಿ.

ಧಡಕ್ಕನೆ (ಅ)= ಧಡಕಾಸಿ; ಒಮ್ಮೇಲೆ; ಜೋರಾಗಿ.

ಧಡಧಡ (ದ್ವಿ)= ಎದೆ ಬಡೆಯುವಿಕೆ; ಡವಡವ; ಸಾಮಾನು ಎಸೆಯುವಿಕೆ.

ಧಡಲ್‌ಧುಡಲ್ (ನಾ)= ಮದ್ದು ಗುಂಡು ಹಾರುವ ಸದ್ದು (ಜಾನಪದ ಪ್ರಾಸ: ಹತ್ತಿಕಟ್ಗಿ। ಬತ್ತಿಕಟ್ಗೆ। ಬಾವ್ನೂರು। ಬಸವಾನೂರು। ಕೈ ಕೈ ಧೂಳ್ಳೈ। ಪಂಚಂಪಗಡಂ। ಎದಿಮ್ಯಾಲ್ಬುಕ್ಕಿ। ಧಡಲ್ ಧುಡಲ್। ಪಾವ್ಸೇರಡ್ಕಿ। ಏನ್‌ಬೇಕು ಬೀಡ್ಕಿ॥)

ಧಡಪುಡಮಾಡು (ಕ್ರಿ)= ಸದ್ದುಮಾಡು; ಪ್ರಯತ್ನಿಸು; ಆತುರ ಪಡು.

ಧಡಾ (ನಾ)= ಧಡ; ಪಾಠ; ದೃಢ; ಏಕಚಿತ್ತ; ಧಿಡಾ.

ಧಡಾಕಿ (ಅ)= ರಭಸವಾಗಿ; ವೇಗವಾಗಿ; ಅಬ್ಬರದಿಂದ (ನೀರಿನ ಮುನ್ನುಗ್ಗುವಿಕೆ).

ಧಡಿ (ನಾ)= ಧೋತ್ರ ಅಥವಾ ಸೀರೆಯ ಅಂಚು; ಲಕ್ಕಿ ಕಟ್ಟಿಗೆ ಅಥವಾ ಕಣಿಕೆಯಿಂದ ತಯಾರಿಸಿದ ಅಡ್ಡ ಆಸರೆ; ತಟಾರ; ತಡಿಕೆ; ಎರಡು ಪಂಚೇರು ತೂಕ; ಹತ್ತು ಸೇರಿನ ತೂಕ.

ಧಡಿಕಟ್ಟು (ಕ್ರಿ)= ಲಕ್ಕಿ ಕಟ್ಟಿಗೆ, ತೊಗರೆಕಟ್ಟಿಗೆ ಅಥವಾ ಕಣಿಕೆಯಿಂದ ಅಡ್ಡಾಸರೆ ನಿರ್ಮಿಸು; ಚಂದ್ರನ ಸುತ್ತ ವರ್ತುಳಗಟ್ಟು.

ಧಡಿತೂಕ (ನಾ)= ಹತ್ತು ಸೇರು ತೂಕ (ಹಳೆಯ ತೂಕ ಪದ್ಧತಿ).

ಧಡಿ ಘುಂಬು (ಕ್ರಿ)= ನಡೆನಡೆದು ಕಾಲು ಭಾರವಾಗು; ಊತ ಉಂಟಾಗು.

ಧಡಿಧೋತ್ರ (ನಾ)= ದೊಡ್ಡ ಅಂಚುಳ್ಳ ಧೋತರ, ಪಂಚೆ.

ಧಡೂತಿ (ನಾ)= ಗಟ್ಟಿಮುಟ್ಟಿ; ತಾಳಿಕೆ ಬರುವ; ಧಾಟಾಮೋಟಾ, (ಸೀರೆ, ಧೋತ್ರ ಇತ್ಯಾದಿ) ಒತ್ತಾಗಿ ನೆಯ್ದಿರುವುದು.

ಧಡ್ಡ (ನಾ)= ದಡ್ಡ; ಮದಡ; ಮಂದ ಬುದ್ಧಿ ಯುಳ್ಳವನು.

ಧಡ್ಡತಾನ (ನಾ)= ದಡ್ಡತನ ತಿಳುವಳಿಕೆ ಇಲ್ಲದಿರುವುದು; ಮೂರ್ಖತನ.

ಧಡ್ಡಾ (ಅ)= ಎಲೋ ದಡ್ಡನೇ.

ಧಡ್ಡಿ (ನಾ)= ದಡ್ಡೆ; ಮಂದ ಬುದ್ಧಿಯುಳ್ಳವಳು; ನದಿನಾಲೆಗಳ ಇಬ್ಬದಿ; ಧಂಡೆ.

ಧಡ್ಪುಡ್ಸು (ಕ್ರಿ)= ಚಡಪಡಿಸು; ಧಡಪಡಿಸು; ಪ್ರಯತ್ನಿಸು.

ಧಣಿ (ನಾ)= ಒಡೆಯ; ಯಜಮಾನ; ದಣಿ.

ಧತುರಿ (ನಾ)= ಧತ್ತೂರಿ; ಧತ್ರಿ; ತಿಂದರೆ ಮದವೇರಿಸುವ ಕನಕ ಎಂಬ ಒಂದು ಜಾತಿಯ ಸಸ್ಯ, ಮದ್ದುಗಣಿಕೆ ಗಿಡ.

ಧತ್ರಿ (ನಾ)= ಧತುರಿ (ನೋಡಿರಿ)

ಧದ್ದರ (ನಾ)= ಊತ.

ಧದ್ದುರ್ಗಟ್ಟು (ಕ್ರಿ)= ಊದು, ಬಾತುಕೊಳ್ಳು; ದದ್ದರಿಸು; ಉಬ್ಬು.

ಧದ್ದುರ್ಸು (ಕ್ರಿ)= ಮೈ, ಮುಖ, ಸ್ನಾಯು ಭಾಗದಲ್ಲಿ ಊತ ಉಂಟಾಗು; ಬಾವು ಉಂಟಾಗು.

ಧನ (ನಾ)= ಹಣ, ಸಂಪತ್ತು (ಭಜನೆ:- ಧನವು ಘಳಿಸಬೇಕೆಂಥಾದೋ। ಅದು। ಯಾರಿಗೂ ಸಿಗಬಾರದಂಥಾದೋ॥).

ಧನಗರ (ನಾ)= ಕುರುಬ; ಗೊಂಡ.

ಧನವಾನ (ನಾ)= ಶ್ರೀಮಂತ; ಸಾಹುಕಾರ; ದೈವಾನ.

ಧನಾಢ್ಯ (ನಾ)= ಶ್ರೀಯಂತ, ಧನವಾನ; ಧನ ಉಳ್ಳವನು.

ಧನಾಶ್ರೀ (ನಾ)= ಬೃಹತ್ ಬೀದರ ಜಿಲ್ಲೆಯ ಮೊದಲಿನ ಜಹೀರಾಬಾದ್ ತಾಲ್ಲೂಕಿನ ಒಂದು ಕನ್ನಡ ಹಳ್ಳಿ. ಪ್ರಸಿದ್ಧ ಕನ್ನಡ ಸಾಹಿತಿ ಮಾಣಿಕರಾವ ಧನಾಶ್ರೀಯವರ ಹುಟ್ಟೂರು. ಜಂಗಮರ ಮುಖಂಡ ರಾಚಯ್ಯ ಸ್ವಾಮಿಯವರ ಹುಟ್ಟೂರು.

ಧನಿ (ನಾ)= ಧ್ವನಿ; ಸದ್ದು; ರಾಗ; ಸ್ವರ.

ಧನಿ ಏಳು (ಕ್ರಿ)= ಎತ್ತರ ದನಿ ಉಂಟಾಗು; ಮಾತಾಡಲು ಬರುವಂತಾಗು.

ಧನಿಕುಡು (ಕ್ರಿ)= ಜೊತೆಯಲ್ಲಿ ಹಾಡು; ಪಲ್ಲವಿ ಹಾಡು;

ಧನಿಕೂಡು (ಕ್ರಿ)= ಮಾತಾಡಲು ಬರದಂತಾಗು (ಉದಾ:- ಧನಿ ಕುಂತ ಸಲ್ಯಾಕ ಮಾತಾಡ್ಲಾಕ ಬರಲ್ಧಾಂಗ ಆಗೆದ).

ಧನಿಯಾ (ನಾ)= ಕೊತಂಬ್ರಿಬೀಜ.

ಧಪಧಪ (ದ್ವಿ)= ರೊಟ್ಟಿ ಬಡಿವ ದಪದಪ ಸದ್ದು.

ಧಪಾಟಿ (ನಾ)= ಜೋಳ, ಬೇಳೆ, ಅಕ್ಕಿ, ಗೋಧಿ ಇತ್ಯಾದಿಗಳ ಕಲಬೆರಕೆ ಹಿಟ್ಟಿನಲ್ಲಿ ಖಾರ ಉಪ್ಪು ಬೆರೆಸಿ ಮಾಡಿದ ರೊಟ್ಟಿ; ಬೆರಕೆ ರೊಟ್ಟಿ.

ಧಪ್ಪನೆ (ಅ)= ದಪ್ಪೆಂದು ಸಪ್ಪಳಾಗುವಂತೆ.

ಧಬಧಬ (ದ್ವಿ)= ದಬದಬನೆ (ನೀರು ಬೀಳುವಿಕೆ)

ಧಬಧಬಿ (ನಾ)= ತಡಸಲು; ಜಲಪಾತ; ಭದಭದಿ .

ಧಬಾಲಿ (ನಾ)= ಸ್ಥೂಲ ಕಾಯದವಳು.

ಧಬಾಲ್ಗುಂಡಿ (ನಾ)= ದಪ್ಪತಿಗ ಉಳ್ಳವಳು.

ಧಬಾಲ್ಗುಂಡ್ಯಾ (ನಾ)= ದಪ್ಪತಿಗ ಉಳ್ಳುವನು. (ಬೈಗುಳ)

ಧಬಾಲ್ಯಾ (ನಾ)= ದಪ್ಪ ಗಾತ್ರದ ಶರೀರವುಳ್ಳವನು. (ಬೈಗುಳ)

ಧಬ್ಬಾ (ನಾ)= ಕಲೆ, ಡಾಗು, ಒಗೆದರೆ ಹೋಗಲಾರದ ಕಲೆ; ಕಲಂಕ.

ಧಮ್ಮ (ನಾ) ಪಾಲಿ= ಬೌದ್ಧಧಮ್ಮ; ಬುದ್ಧನ ಉಪದೇಶ; ಜೀವನ ಪದ್ಧತಿ (ಬುದ್ಧವಾಣಿ:- ಧಮ್ಮಂ ಶರಣಂ ಗಚಾಮಿ).

ಧಬ್ಬಾಹಚ್ಚು (ಕ್ರಿ)= ಕಲಂಕ ಹಚ್ಚು; ದೋಷ ಹೇರು.

ಧಬ್ಬ್ಯಾ (ನಾ)= ದಪ್ಪ ಗಾತ್ರದ ಶರೀರ ವುಳ್ಳವನು.

ಧಮ್ಕಿ (ನಾ)= ಬೆದರಿಕೆ; ಗದರಿಕೆ.

ಧಮ್ಕಿ ಕುಡು (ಕ್ರಿ)= ಬೆದರಿಸು; ಗದರಿಸು.

ಧಮ್ಮ (ನಾ)= ದಪ್ಪ; ತೆಳುವಲ್ಲದ (ಉದಾ:- ಸಣ್ಣ ಬಾಯ್ಲಿ ಧಮ್ಮ ಮಾತು ಆಡ್ಬಾರ್ದು.)

ಧಮ್ಮಾಧಮ್ಮಾ (ದ್ವಿ)= ದಪ್ಪ ದಪ್ಪ; ಅತಿದಪ್ಪ; ಅಸಹ್ಯಗಾತ್ರದ; ತಾಳಲಾಗದ (ರೈತರ ಪ್ರಾಸ:- ಯಾಕೋತಮ್ಮಾ ಮಾತನಾಡತಿ ಭಾಳ ಧಮ್ಮಾ ಧಮ್ಮಾ। ನಿನ್ನ ಕಾಲ್ಮುರ್ದು ಮಾಡೇನು ಕುಂಟಿರುಮ್ಮಾ ॥).

ಧಮ್ಮಾಧುಸ್ಕಾ (ಅ)= ಅವಡಸವಡ, ಪೂರ್ಣಬೇಯದ; ಹಸಿಬಿಸಿ; ಅರೆಬರೆ ಬೆಂದ; ಅಬ್ಬಡ ದುಬ್ಬಡ; ಅಡ್ಡತಿಡ್ಡ.

ಧಯ್ಯಂಡಿ (ನಾ)= ಮೊಸರಿನ ಗಡಿಗೆ; ಧೈಹಂಡಿ; ಕೃಷ್ಣ ಜನ್ಮಾಷ್ಟಮಿ ದಿನದಂದು ಒಡೆಯುವ ಮೊಸರಿನ ಗಡಿಗೆ.

ಧರಣಿ (ನಾ)= ಹಟ ಹಿಡಿದು ಕೂಡುವುದು; ಧರೆ; ಭೂಮಿ.

ಧರಮ್ರಾಜಾ= ಧರ್ಮರಾಜಾ

ಧರಮ್ಶಾಲಿ (ನಾ)= ಧರ್ಮ ಶಾಲೆ; ಉಚಿತ ಪ್ರವಾಸಿ ಮನೆ.

ಧರಿ (ನಾ)= ಧರೆ; ಭೂಮಿ; ಸಮುದ್ರ ಮಟ್ಟದಿಂದ ಎತ್ತರವಾಗಿರುವ ಬೀದರ ಜಿಲ್ಲೆಯ ಕೆಂಪು ಭೂಮಿ; ಅಟ್ಟಳೆನಾಡು, ಅಟೋಳಾ; ಕಲ್ಯಾಣಗಡ್ಡೆ; ಕಲ್ಯಾಣನಾಡು (ಗಾದೆ:- ಧರಿ ಭಂಗಾರದ ಗಿರಿ).

ಧರಿತೆಳಗ (ನಾ)= ಬೀದರ ಜಿಲ್ಲೆಯ ಭೂಮಿಗಿಂತ ಕೆಳಮಟ್ಟದಲ್ಲಿರುವ ಭೂಮಿ; ಕಲ್ಲಡವಿಯುಳ್ಳ ಭೂಮಿ.

ಧರಿನಾಡು (ನಾ)= ಧರಿ ಪ್ರಾಂತ; ಅಟ್ಟಳೆನಾಡು; ಅಟೋಳಾ; ಕಲ್ಯಾಣಗಡ್ಡೆ (ಗಾದೆ:- ಧರಿನಾಡಿನ ಹೆಣ್ಣು; ಮೈಯೆಲ್ಲ ಕಣ್ಣು).

ಧರಿನಾಡು ಕನ್ನಡ ಸಂಘ (ನಾ)= ಉದಯೋನ್ಮುಖ ಬರಹಗಾರರ ಮಾರ್ಗ ದರ್ಶನಕ್ಕಾಗಿ ೨೪-೧-೧೯೯೯ರಲ್ಲಿ ದೇಶಾಂಶ ಹುಡಗಿ ಅಧ್ಯಕ್ಷತೆಯಲ್ಲಿ, ಹಂಶಕವಿ ಕಾರ್ಯದರ್ಶಿತ್ವ ಹಾಗೂ ಶಂಭುಲಿಂಗವಾಲ್ದೊಡ್ಡಿ ಸಂಯೋಜಕತ್ವ-ದಲ್ಲಿ ಬೀದರಿನಲ್ಲಿ ಹುಟ್ಟಿಕೊಂಡ ಕನ್ನಡಪರ ಸಂಘಟನೆ.

ಧರಿಪ್ರಾಂತ (ನಾ)= ಧರಿ ನಾಡು (ನೋಡಿರಿ)

ಧರಿಮ್ಯಾಲ (ನಾ)= ಧರಿನಾಡು (ನೋಡಿರಿ)

ಧರಿ ಹಣಮಂದೇವರು (ನಾ)= ಔರಾದ ತಾಲೂಕಿನ ಒಂದು ದೇವಸ್ಥಾನ-ಯರ್ನಳ್ಳಿಯ ಮಾಣಿಕಪ್ರಭುಗಳು ಕುಂತ ನಿಂತ ಸ್ಥಳ.

ಧರ್ಮರಾಜಾ (ನಾ)= ಧರ್ಮರಾಯ; ಪಂಚಪಾಂಡವರಲ್ಲಿ ಹಿರಿಯನಾದವನು.

ಧರ್ಮರಾಯ (ನಾ)= ಧರ್ಮರಾಜಾ (ನೋಡಿರಿ).

ಧರ್ಮವಂತ (ನಾ)= ಧರ್ಮನಿಷ್ಟ; ಧರ್ಮ ಪಾಲಿಸುವವನು.

ಧರ್ಮಸಾಲಿ (ನಾ)= ಧರ್ಮಶಾಲೆ; ಧರ್ಮ ಛತ್ರ; ಉಚಿತ ವಸತಿ ಶಾಲೆ.

ಧರ್ಮಾಖರ್ಮಾ (ನಾ)= ಧರ್ಮಕರ್ಮ; ನ್ಯಾಯ ಅನ್ಯಾಯ; ಖರೆ ಖೋಟಿ (ಕಾಲಜ್ಞಾನ:- ಧರ್ಮಾವು ಕೆಟ್ಟೆತ್ತು। ಖರ್ಮಾವು ಹೆಚ್ಚೆತ್ತು ಕೇಳೀರಣ್ಣಾ। ನಿಮ್ಮ ವರ್ಮಾವು ಕೇಳಂಥ ವಸ್ತಾದ ಬರ್ತಾನ ನಿರ್ಮಾಳಿರಬೇಕಣ್ಣಾ।।).

ಧರ್ಮಾತ್ಮಾ (ನಾ)= ನ್ಯಾಯವಂತ; ನೀತಿವಂತ.

ಧರ್ಮಾರ್ತ (ನಾ)= ಧರ್ಮಾರ್ಥ; ಧರ್ಮಕ್ಕಾಗಿ; ಉಚಿತ; ಪುಕ್ಕಟೆ.

ಧರ್ಮಾ ಮಾಡು (ಕ್ರಿ)= ಧರ್ಮ ಕಾರ್ಯ ಮಾಡು; ದಾನ ಮಾಡು. (ಮಹಾರೋಗಿಗಳ ಹಾಡು:- ಧರ್ಮಾ ಮಾಡಿರಿ ಅವ್ವದೇರೆ। ಧರ್ಮಾ ಮಾಡಿರಿ ಅಪ್ಪದೇರೆ। ಧರ್ಮಾ ಮಾಡಿರಿ ತಾಯಿ ತಂಗೆಮ್ಮ। ಓಂ ಶಿವನೇ ಭಗವಂತಾ। ಕೈ ಕಾಲಿಲ್ಲದ ಪರದೇಶಮ್ಮ।।)

ಧಸ್ಸನು (ಕ್ರಿ)= ಗಾಬರಿಗೊಳ್ಳು; ಎದೆಯೊಡೆ.

ಧಸ್ಕಿ ಕುಂಡ್ರು (ಕ್ರಿ)= ಎದೆಯೊಡೆ; ಗಾಬರಿಯಾಗು.

ಧಸ್ಕಿ ಹತ್ತು (ಕ್ರಿ)= ಧಸ್ಕಿ ಕುಂಡ್ರು (ನೋಡಿರಿ).

ಧಾ (ನಾ)ಮ.= ಹತ್ತು; ದಹಾ; ದಶ.

ಧಾಂದಲಿ (ನಾ)ಮ.= ಧಾಂದ್ಲಿ; ಗಡಬಡ; ಗಲಾಟೆ; ಗದ್ದಲ; ಗೊಂದಲ.

ಧಾಂದಲಿ ಎಬ್ಬುಸು (ಕ್ರಿ)= ಧಾಂದ್ಲಿ ಮಾಡು; ಗಡಬಡ ಮಾಡು; ಗೊಂದಲ ಎಬ್ಬಿಸು.

ಧಾಂದಲ್ಖೋರ (ನಾ)= ಧಾಂದ್ಲ್ಯಾ; ಧಾಂದ್ಲಿ ಮಾಡುವವ; ಗದ್ದಲೆಬ್ಬಿಸುವ ಸ್ವಭಾವದವನು.

ಧಾಂದಲ್ಯಾ (ನಾ)= ಧಾಂದ್ಲ್ಯಾ; ಗೊಂದಲ ಎಬ್ಬಿಸುವವನು.

ಧಾಂದ್ಲಿ (ನಾ)= ಧಾಂದಲಿ (ನೋಡಿರಿ).

ಧಾಂದ್ಲಿಎಬ್ಬುಸು (ಕ್ರಿ)= ಧಾಂದಲಿ ಎಬ್ಬುಸು (ನೋಡಿರಿ).

ಧಾಂದ್ಲ್ಯಾ (ನಾ)= ಧಾಂದಲ್ಯಾ (ನೋಡಿರಿ).

ಧಾಂವತಿ (ನಾ)= ಧಂದೆ; ಕೆಲಸ; ಕಾರ್ಯ; ಕಾಯಕ.

ಧಾಂವತಿ ಮಾಡು (ಕ್ರಿ)= ಕೆಲಸಮಾಡು; ಕಾಯಕ ನಡೆಸು; ದುಡಿ.

ಧಾಕು (ನಾ)= ಅಂಜಿಕೆ; ಪ್ರಭಾವ; ದರ್ಪ.

ಧಾಕುಜಮಾಸು (ಕ್ರಿ)= ಅಂಜಿಸು; ಪ್ರಭಾವ ಬೀರು; ದರ್ಪದೋರು.

ಧಾಟಾ ಮೋಟಾ (ವಿ.)= ಒರಟಾದ; ನುಣುಪಲ್ಲದ; ಸಪಾಟಲ್ಲದ; ಗ್ರಾಮ್ಯ; ಅವ್ವಾಡಸವ್ವಾ; ಗಟ್ಟಿಮುಟ್ಟಿ.

ಧಾಟಾಮೋಟಾ ಧಂದ್ಯಾ (ನಾ)= ಒರಟು ಕೆಲಸ; ನುಣುಪಲ್ಲದ ಕೆಲಸ; ಅವ್ವಾಡಸವ್ವಾ ಕೆಲಸ.

ಧಾಟಿ (ನಾ)= ರಾಗ; ಸ್ವರ; ಹಾಡುಗಾರಿಕೆ.

ಧಾಟಿ ಕುಡು (ಕ್ರಿ)= ಧ್ವನಿ ಜೋಡಿಸು; ಜೊತೆಗೂಡಿ ಹಾಡು.

ಧಾಟಿಸು (ಕ)= ದಾಟಿಸು.

ಧಾಟಿಹೋಗು (ಕ್ರಿ)= ಆಚೆಗೆ ಹೋಗು

ಧಾಟಿ ಹಾಕು (ಕ್ರಿ)= ಹಾಡಿಗೆ ರಾಗವನ್ನು ಹೊಂದಿಸು.

ಧಾಟು (ಕ್ರಿ)= ದಾಟು; ಆಚೆಗೆ ಹೋಗು; ಈಚೆಗೆ ಬಾ; ನೀರು, ನಾಲೆ, ಹಳ್ಳಗಳನ್ನು ಹಾರಿ ಇಲ್ಲವೆ ನಡೆದು ಆಚೆಗೆ ಹೋಗು ಇಲ್ಲವೆ ಬಾ.

ಧಾಟ್ಟ (ಗು)= ದಟ್ಟ; ಧಟ್ಟ; ಒತ್ತೊತ್ತಾದ; ದಾಟ.

ಧಾಟ್ಟಬೆಳಿ (ನಾ)= ದಟ್ಟವಾದ ಬೆಳೆ; ಒತ್ತೊತ್ತಾದ ಬೆಳೆ, ಮೊಳಕೆ.

ಧಾಟ್ಟಿ (ನಾ)= ಧಟ್ಟಿ, ಪಿತಾಂಬರ,; ಪೀರನ ಬಟ್ಟೆ.

ಧಾಟ್ಟುಣ್ಕಿ (ನಾ)= ದಟ್ಟಣಿಕೆ; ದಟ್ಟವಾಗಿರುವಿಕೆ; ಒತ್ತೊತ್ತಾಗಿರುವಿಕೆ.

ಧಾಡಿ (ನಾ) ಮ.= ಬೇನೆ; ತೊಂದರೆ; ಕೇಡು; ಕೊರತೆ.

ಧಾಡಿಬಡಿ (ಕ್ರಿ)= ಬೇನೆ ಆವರಿಸು; ತೊಂದರೆ ಯಾಗು; ಕೇಡಾಗು.

ಧಾಡಿ ಬಡದಾದ (ನು)= ಬೇನೆ ಆವರಿಸಿದೆ; ಕೇಡಾಗಿದೆ (ಬೈಗುಳ)

ಧಾಡ್ಸಿ (ನಾ) ಮ.= ಧೈರ್ಯವಂತ; ಹಿಮ್ಮತ್ದಾರ.

ಧಾಣ್ಣಿ(ನಾ)= ಧಾರಣೆ; ದರ; ಬೆಲೆ; ಮೌಲ್ಯ.

ಧಾಣ್ಣಿಏರ್ಸು (ಕ್ರಿ)= ಬೆಲೆ ಏರಿಸು; ಬೆಲೆ ಹೆಚ್ಚಳ ಮಾಡು.

ಧಾಣ್ಣಿಚಡಾಸು (ಕ್ರಿ)= ಧಾರಣೆ ಹೆಚ್ಚಿಸು; ಬೆಲೆ ವೃದ್ಧಿಸು.

ಧಾಣ್ಣಿ ಬಿಟ್ಟು ಧಾಣ್ಣಿ (ನಾ)= ಅಸಮ್ಮತ ಧಾರಣೆ; ವಿಪರೀತ ಧಾರಣೆ.

ಧಾಣ್ಣಿಮಾಡು (ಕ್ರಿ)= ಧಾರಣೆ ಕಟ್ಟು; ಬೆಲೆ ನಿರ್ಧರಿಸು.

ಧಾತು (ನಾ)= ವೀರ್ಯ; ರೇತಸ್ಸು; ಲೋಹ.

ಧಾತುಪತ್ಲಾ ಆಗು (ಕ್ರಿ)= ವೀರ್ಯ ತರಲ ಗೊಳ್ಳು, ವೀರ್ಯದ ಸತ್ವ ಕಡಿಮೆಯಾಗು; ವೀರ್ಯ ಬೇಗ ಪತನವಾಗು.

ಧಾತ್ರ್ಯಾ (ನಾ)= ಆತುರ ತೋರುವವನು.

ಧಾನಸೂರ (ನಾ)= ದಾನ ಮಾಡುವದರಲ್ಲಿ ಮುಂದಾಳು.

ಧಾನಸೂರ ಕರ್ಣ (ನಾ)= ಕರ್ಣನಂತಹ ಮಹಾದಾನಿ.

ಧಾನಾ (ನಾ)= ದಾನ, ಕೊಡುವಿಕೆ; ನೀಡುವಿಕೆ; ಕಾಣಿಕೆ.

ಧಾನಾಕುಡು (ಕ್ರಿ)= ದಾನ ಮಾಡು

ಧಾನಾಧರ್ಮಾ (ನಾ)= ದಾನವೂ ಧರ್ಮವೂ

ಧಾನಾ ಧೂನಾ (ನಾ)= ದಾನವೂ ಧರ್ಮವೂ (ಶಿಶುಪ್ರಾಸ:- ಆಕಲಂದುಕಲಂ। ತೀನೀಚಾರಿ। ಚಮ್ಮನ ಬೇಟಾ। ಧಾನಾ ಧೂನಾ । ಕಿಸ್ತಿ ಮುಸ್ತಿ। ಪುಕಾಲ್ ।।)

ಧಾನಾಮಾಡು (ಕ್ರಿ)= ದಾನ ಕೊಡು; ನೀಡು.

ಧಾಪು (ನಾ)= ದಾಪು; ದಮ್ಮಾ; ಕೆಮ್ಮು; ದೂರ ದೂರದ (ಹೆಜ್ಜೆ).

ಧಾಪುಗಾಲು (ನಾ)= ದಾಪುಗಾಲು, ದೂರ ದೂರಕ್ಕೆ ಇಡುವ ಹೆಜ್ಜೆ.)

ಧಾಪುಸು (ಕ್ರಿ)= ಧಾಪಿಸು; ಮುಸುಗರೆ; ತೇಕು.

ಧಾಪೇರು (ಕ್ರಿ)= ದಾಪು ಉಂಟಾಗು; ಕೆಮ್ಮು ಸೇರು; ಉಸಿರಿನ ತೊಂದರೆಯಾಗು.

ಧಾಬಾ (ನಾ)= ರಾಜಮಾರ್ಗದಲ್ಲಿಯ ಹೋಟೆಲ್ಲು, ಚಹದಂಗಡಿ, ಖಾನಾವಳಿ.

ಧಾಬಿ (ನಾ)= ಮಣ್ಣಿನ ಯಾಳಿಗೆ; ಛತ್ತು.

ಧಾಬಿ ಹೇರು (ಕ್ರಿ)= ಮಾಳಿಗೆ ನಿರ್ಮಿಸು; ಮಾಳಿಗೆ ತಯಾರಿಸು; ಮಣ್ಣಿನ ಮುದ್ದೆ ಹೇರಿ ಮಾಳಿಗೆ ನಿರ್ಮಿಸು.

ಧಾಮ್ನಿ(ನಾ)= ಧಾಮಿನಿ ಜಾತಿಯ ಹಾವು.

ಧಾಮ್ಧೂಮ (ನಾ)= ಸಂಭ್ರಮ; ವೈಭವ; ಸಡಗರ; ಉತ್ಸಾಹ.

ಧಾರಾ (ನಾ)= ದಾರ; ನೂಲು; ಎಳೆ; ಸೂತ್ರ.

ಧಾರಾಕಡಿತು (ನು)= ಸತ್ತನು; ತೀರಿ ಕೊಂಡನು.

ಧಾರಾಘಟ್ಟಿ ಅದಾ (ನು)= ಸಾವು ಬಂದಿಲ್ಲ; ಮೃತ್ಯು ಸಮೀಪಿಸಿಲ್ಲ.

ಧಾರಾವಾಹಿ (ನಾ)= ನಿರ್ಧರಿತ ಸಮಯಕ್ಕೆ ಪ್ರತಿನಿತ್ಯ ಬರುವ ಆಕಾಶವಾಣಿ ಅಥವಾ ದೂರದರ್ಶನ ಕಾರ್ಯಕ್ರಮ.

ಧಾರಿ(ನಾ)= ದಾರಿ; ಮಾರ್ಗ; ನೀರು ಇಲ್ಲವೆ ತರಲ ಪದಾರ್ಥ ಧಾರೆಗಟ್ಟಿ ಸೋರುವಿಕೆ; ಧಾರೆ; ಪ್ರವಾಹ.

ಧಾರಿ ಎರಿ (ಕ್ರಿ)= ಕನ್ಯಾದಾನ ಮಾಡು; ಸಮರ್ಪಿಸು; ಧಾರೆ ಎರೆ; ಹೆಣ್ಣನ್ನು ಕಳಿಸಿ ಕೊಡುವ ಶಾಸ್ತ್ರ ಮಾಡು.

ಧಾರಿಕಾಯಿ (ಕ್ರಿ)= ಹಾದಿ ನೋಡು; ದಾರಿ ಕಾಯು; ಪ್ರತೀಕ್ಷಿಸು.

ಧಾರಿಕೊಡ (ನಾ)= ಮದುಮಗಳಿಗೆ ಧಾರೆ ಎರೆದು ಕೊಡಲು ಬಳಸುವ ನೀರಿನ ಕೊಡ.

ಧಾರಿಗಟ್ಟು (ಕ್ರಿ)= ಧಾರೆಯಾಗಿ ಸೋರು; ಧಾರಾಕಾರವಾಗಿ ಪ್ರವಹಿಸು.

ಧಾರಿ ತಪ್ಪು (ಕ್ರಿ)= ಹಾದಿ ಬಿಡು; ತಪ್ಪು ದಾರಿಯನ್ನು ಹಿಡಿ.

ಧಾರಿ ತುಳಿ (ಕ್ರಿ)= ನಡೆ; ಹೆಜ್ಜೆ ಇಡು. ಸಾಗು.

ಧಾರಿ ಪರಾತ (ನಾ)= ಕನ್ಯಾದಾನಕ್ಕಾಗಿ ಬಳಸುವ ತಾಬಂಡಿ.

ಧಾರಿ ತೋರ್ಸು (ಕ್ರಿ)= ಹಾದಿ ತೋರಿಸು; ಮಾರ್ಗದರ್ಶನ ಮಾಡು; ಉಪಾಯ ಹೇಳು.

ಧಾರಿ ಹಿಡಿ (ನು)= ಹಾದಿಗೆ ಹತ್ತು; ಸರಿದಾರಿಯಲ್ಲಿ ನಡೆ; ಹೊರಡು.

ಧಾರಿಹೊದ್ಕಿ (ನಾ)= ಧಾರೆಯೆರೆದವರಿಗೆ ಉಡಿಸುವ ಹೊಸ ಉಡುಗೆ.

ಧಾರೂರು (ನಾ)= ಕರ್ನಾಟಕದ ಬೀದರ ನಗರಕ್ಕೆ ಸಮೀಪದಲ್ಲಿಯ ಆಂಧ್ರದ ಒಂದು ಹಳ್ಳಿ ಇದ್ದು ಕ್ರೈಸ್ತರ ತೀರ್ಥ ಕ್ಷೇತ್ರವಾಗಿದೆ.

ಧಾರ್ಕರಿ (ನಾ)= ದಾದಾಗಿರಿ; ಗುಂಡಾಗಿರಿ; ದಾದಾಗಿರಿ ಮಾಡುವವನು.

ಧಾರ್ಣಿ (ನಾ)= ಧಾರಣೆ; ವಸ್ತುವಿನ ಬೆಲೆ; ಮೂಲ್ಯ.

ಧಾವತಿ (ನಾ)= ಧಂದೆ, ಕೆಲಸ; ಪರಿಶ್ರಮ.

ಧಾವತಿ ಮಾಡು (ಕ್ರಿ)= ಕೆಲಸ ಮಾಡು; ದುಡಿ; ಪರಿಶ್ರಮಿಸು; ಕಾಯಕ ಮಾಡು.

ಧಾವರಿ (ನಾ)= ಧಾವ್ರಿ; ಒಂದು ಪ್ರಕಾರದ ಗಡ್ಡೆ ಬೇನೆ.

ಧಾವಾ(ನಾ) ಹಿಂ.= ಆಕ್ರಮಣ; ಹಲ್ಲೆ; ಮೇಲೇರಿ ಹೋಗುವಿಕೆ.

ಧಾವಾ ಮಾಡು (ಕ್ರಿ)= ಆಕ್ರಮಿಸು; ಹಲ್ಲೆ ಮಾಡು; ಮೇಲೇರಿ ಹೋಗು.

ಧಾವು (ನಾ)= ಓಟ; ಓಡುವಿಕೆ.

ಧಾವ್ತಿ (ನಾ)= ಧಾವತಿ; ದುಡಿಮೆ; ಉದ್ಯೋಗ.

ಧಾವ್ರಿ (ನಾ)= ಧಾವರಿ (ನೋಡಿರಿ).

ಧಾವ್ವು(ಕ್ರಿ)= ಧಾವಿಸು; ಓಡು, ವೇಗವಾಗಿ ಹೆಜ್ಜೆ ಇಡು.

ಧಿಕ್‌ದಿಕ್ (ದ್ವಿ)= ಜೋರಾಗಿ ಹೆಜ್ಜೆ ಅಪ್ಪಳಿಸುವಿಕೆ; ದಿಗ್ಗದಿಗ್ಗನೆ (ಹೆಜ್ಜೆಯಿಡುವ ಸದ್ದು)

ಧಿಗ್‌ಧಿಗ್ (ದ್ವಿ)= ಧಿಕ್‌ಧಿಕ್ (ನೋಡಿರಿ)

ಧಿಟ್ಟ (ನಾ)= ದಿಟ್ಟ (ಗಾದೆ-ಧಿಟ್ಟರ್ಕುಲಾ ನೆಟ್ಟುಕ!)

ಧಿಟ್ಟಾದಿಧಿಟ್ಟ (ನಾ)= ಅತಿದಿಟ್ಟ ನಾದವ; ದಿಟ್ಟಾದಿ ದಿಟ್ಟ (ವಚನ: ಧಿಟ್ಟಾದಿಧಿಟ್ಟ। ವೀರಾಧಿವೀರ। ನಮ್ಮ ಅಂಬಿಗರ ಚೌಡಯ್ಯ। ನಿಜ ಶರಣ॥)

ಧಿಟ್ಟಿ ಆಗು (ಕ್ರಿ)= ದಿಟ್ಟಿ ತಗಲು; ದೃಷ್ಟಿ ತಗಲು.

ಧಿಟ್ಟಿ ಇಳ್ಸು (ಕ್ರಿ)= ದಿಟ್ಟಿ ತೆಗೆ; ದೃಷ್ಟಿ ಇಳಿಸು; ನಿವಾಳಿ ತೆಗೆ; ನಿವಾಳಿ ಇಳಿಸು.

ಧಿಟ್ಟಿ ತೆಗಿ (ಕ್ರಿ)= ನಿವಾಳಿತೆಗೆ, ಧಿಟ್ಟಿ ಇಳಿಸು (ಧಿಟ್ಟಿ ಇಳ್ಸು:- ನೋಡಿರಿ).

ಧಿಟ್ಟಿ ಮಾಡು (ಕ್ರಿ)= ದಿಟ್ಟಿ ತಗಲಿಸು; ದೃಷ್ಟಿ ತಗಲಿಸು.

ಧಿಟ್ಟಿಸಿ ನೋಡು (ಕ್ರಿ)= ಕಿಸುಗಣ್ಣು ಬಿಟ್ಟು ನೋಡು (ಗಾದೆ:- ಧಿಟ್ಟಿಸಿ ನೋಡ್ದುರ ಮನಿ ಹೆಣ್ತೆ ಕುಡ್ನಿ).

ಧಿಟ್ಟುಸು (ಕ್ರಿ)= ದಿಟ್ಟಿಸು; ಕಣ್ಣು ಕಿಸಿದ ನೋಡು.

ಧಿಡಾ (ನಾ)= ದೃಢವಾದುದು; ಬಲ ವಾದುದು; ದೃಢ.

ಧಿನಾ (ನಾ)= ತಿಥಿ; ಪುಣ್ಯತಿಥಿ; ಶ್ರಾದ್ಧ; ದಿನಾಲು; ದಿನ.

ಧಿನಾಏರು (ಕ್ರಿ)= ಗರ್ಭಿಣಿಯಾಗು; ಪ್ರಸವದ ದಿನ ಸಮೀಪಿಸು.

ಧಿನಾಘುಂಬು (ಕ್ರಿ)= ಗರ್ಭಧಾರಣವಾಗಿ ಒಂಭತ್ತು ತಿಂಗಳು ಪೂರ್ಣಗೊಳ್ಳು; ಪ್ರಸವದ ಅವಧಿ ಸಮೀಪಿಸು; ಸಾವಿನ ದಿನ ಸಮೀಪಿಸು.

ಧಿನಾ ಮಾಡು (ಕ್ರಿ)= ಸತ್ತವರ ನೆನಪಿನಲ್ಲಿ ಹಬ್ಬ ಆಚರಿಸು; ಶ್ರಾದ್ಧ ಮಾಡು; ಪುಣ್ಯ ತಿಥಿ ಆಚರಿಸು.

ಧಿನಕ್ಕೊಮ್ಮ (ಅ)= ಪ್ರತಿನಿತ್ಯ ಒಂದು ಸಲ.

ಧಿನ್ನಾ (ಅ)= ದಿನಾಲು; ಪ್ರತಿನಿತ್ಯ (ಗಾದೆ:- ಧಿನ್ನಾಸತ್ರ ಅಳಬೇಕ್ಯಾರು).

ಧಿನ್ನಾ ಧಿನ್ನಾ (ದ್ವಿ)= ಪ್ರತಿದಿನ; ನಿರಂತರ

ಧಿಮಾಕು (ನಾ)= ಸೊಕ್ಕು; ಅಹಂಕಾರ.

ಧಿಮಾಕುಗೇಡಿ (ನಾ)= ಅಹಂಕಾರದಿಂದ ಕೆಟ್ಟವನು; ಅಹಂಕಾರಿ. (ಬೈಗುಳ)

ಧಿಮುಕ (ನಾ)= ಏಟ; ಪೆಟ್ಟು; ಹೊಡೆತ (ಜೋಗುಳ : ಅತ್ತು ಕಾಡುವನಲ್ಲ। ಮತ್ತೆ ಬೇಡುವನಲ್ಲ। ಮೆತ್ತಾನ ಎರಡು ಧಿಮುಕವ। ಹಾಕಿದ್ರ। ಗಪ್ಪ ಚಿಪ್ಪಾಗಿ ಮನಗ್ಯಾನೆ।).

ಧಿಮ್ಕು (ನಾ)= ಧಿಮುಕ (ನೋಡಿರಿ)

ಧಿರಾ (ಕ್ರಿ)= ತಡೆ; ತಾಳು; ನಿಲ್ಲು.

ಧೀಪಕ್ಕಿಕ್ಕಿಲ್ಲಾಂವ (ನಾ)= ಸಂತಾನ ವಿಲ್ಲದವನು; ನಿಪುತ್ರಿಕನು.

ಧೀಪಕ್ಕಿಕ್ಕು (ನಾ)= ಸಂತಾನ; ಪುತ್ರ; ಮಗ.

ಧೀಪದ ಮ್ಯಾಲಿನ ಕುಡಿ (ನಾ)= ದೀಪ ಉರಿವಲ್ಲಿ ಉಂಟಾಗುವ ಕಿಡಿಯಂತಹ ವಸ್ತು (ಗಾದೆ:- ದೀಪದ ಮ್ಯಾಲಿನ ಕುಡಿ ಉದುರುತ್ಲೆ ಖರ್ರಗ).

ಧೀಪಾ (ನಾ)= ದೀಪ; ದೀವಿಗೆ.

ಧೀಪಾ ಅಡಗಲಿ= ದೀಪ ಆರಲಿ; ಸಂತಾನ ಇಲ್ಲದಾಗಲಿ; ನಿರ್ವಂಶವಾಗಲಿ (ಬೈಗುಳ).

ಧೀಪಾ ಆಡ್ಯಾಗಚ್ಲಿ (ಕ್ರಿ)= ಸತ್ತು ಸ್ಮಶಾನ ಸೇರಲಿ (ಬೈಗುಳ).

ಧೀಪಾ ಆರಲಿ (ಕ್ರಿ)= ದೀಪ ನಂದಲಿ; ವಂಶ ನಿಲ್ಲಲಿ (ಬೈಗುಳ).

ಧೀಪಾರತಿ (ನಾ)= ದೀಪಗಳ ಆರತಿ.

ಧೀಪಾಹಚ್ಚು (ಕ್ರಿ)= ದೀಪ ಬೆಳಗು; ವಂಶ ಬೆಳಸು.

ಧೀರ (ಅ)= ಸಾವಕಾಶ; ಮೆಲ್ಲಗೆ; ಮೆಲ್ಲಮೆಲ್ಲನೆ.

ಧೀರಿ (ನಾ)= ಜಿದ್ದು; ಸೊಕ್ಕು.

ಧೀರಿತಿರುವು (ಕ್ರಿ)= ಕಣ್ಣು ಕಿಸಿದು ಮೀಸೆ ತಿರುವಿ ಎದುರಾಳಿಯನ್ನು ಕೆಣಕು; ಸೊಕ್ಕು ತೋರು; ಜಿದ್ದು ತೋರು; ಜಿದ್ದು ಕಟ್ಟು.

ಧೀರ್ಯಾ ತಿರುವು (ಕ್ರಿ)= ಧೀರಿ ತಿರುವು (ನೋಡಿರಿ)

ಧುಂದಲಾ (ವಿ.)= ಮಬ್ಬು; ನಿಚ್ಚಳವಲ್ಲದ್ದು.

ಧುಂದು (ನಾ)= ನಶಾ; ಮಬ್ಬೇರುವಿಕೆ.

ಧುಂದೇರು (ಕ್ರಿ)= ನಶೆ ಏರು; ಮಬ್ಬೇರು; ಅಮಲುಂಟಾಗು.

ಧುಡಕಿ (ನಾ)= ಅಂಜಿಕೆ; ಭಯ.

ಧುಡಧುಡಕಿ (ನಾ)= ಅಂಜಿಕೆ; ಭಯ; ಅಂತರಂಗದ ಭಯ.

ಧುನ್ (ನಾ)= ಗುಂಗು; ರಾಗ.

ಧುನ್ ಹತ್ತು (ಕ್ರಿ)= ಗುಂಗೇರು; ರಾಗ ತಲೆಗೇರು.

ಧುನಿ (ನಾ)= ಅಗ್ನಿ ಕುಂಡ; ದೇವಸ್ಥಾನಗಳಲ್ಲಿ ಇರಿಸುವ ದುಂಡಗಿನ ಒಲೆ; ಒಲಗುಣಿ.

ಧುನಿ ಹೊತ್ಸು (ಕ್ರಿ)= ಧುನಿಯಲ್ಲಿ ಉರಿ ಹಚ್ಚು.

ಧುನ್ಪತ್ತು (ಕ್ರಿ)= ಗುಂಗಾಗು; ನಾದ ಉಂಟಾಗು.

ಧುಪ್‌ಧುಪ್ (ಧ್ವಿ)= ಗುದ್ದುವ ಸದ್ದು

ಧುಪತಮಾಗಾಂವ (ನಾ)= ಔರಾದ ತಾಲೂಕಿನ ಒಂದು ಹಳ್ಳಿಯ ಹೆಸರು. ಧೂಪದ ಮಾಗಾಂವ ಎಂಬುದರ ಇತ್ತೀಚಿನ ರೂಪ. ಗೊಗ್ಗವ್ವೆ ಶರಣೆಯ ಊರು.

ಧುಪಾಟ (ನಾ)= ದುಪ್ಪಟೆ; ಹಚ್ಚಡ.

ಧುಪಾರ (ನಾ)ಮ.= ಮಧ್ಯಾನ.

ಧುಪಾರಿ (ನಾ)ಮ.= ಮಧ್ಯಾನದ ಊಟ; ನ್ಯಾಯಾರಿ ನಂತರದ ಊಟ.

ಧುಮಾಳಿ (ನಾ)= ಓಟ; ಪಲಾಯನ.

ಧುಮಾಳಿಕಡಿ (ಕ್ರಿ)=- ಕಾಲುಕಿತ್ತು; ಓಡಿ ಹೋಗು.

ಧುಮಾಳೆ (ನಾ)= ಚಿಟುಗುಪ್ಪಾದ ಒಂದು ಪದ್ಮಶಾಲಿ ನೇಕಾರ ಮನೆತನದ ಹೆಸರು.

ಧುಮ್ಡಿ (ನಾ)= ಧಾಂಧ್ಲಿ; ಗಡಬಡ; ಗದ್ದಲ.

ಧುಮ್ಡಿ ಎಬ್ಬುಸು (ಕ್ರಿ)= ಧಾಂಧ್ಲಿ ಮಾಡು; ಗದ್ದಲ ಮಾಡು.

ಧುಮ್ಮನ್ಪೂರು (ನಾ)= ಹನ್ನೆರಡು ನೂರು ತತ್ವಪದಗಳನ್ನು ರಚಿಸಿದ ಪ್ರಸಿದ್ಧ ತತ್ವಪದ ಕಾರರಾದ ಸಿದ್ಧಪ್ರಭುಗಳು ಹುಟ್ಟಿದ ಊರು.

ಧುಮ್ಮುಸು (ನಾ)= ಧುಮ್ಮುಸ; ನೆಲವನ್ನು ಬಡಿದು ಗಟ್ಟಿಗೊಳಿಸುವಿಕೆ.

ಧುಮ್ಮುಸು ಬಡಿ (ಕ್ರಿ)= ನೆಲವನ್ನು ಬಡಿದು ಗಟ್ಟಿಗೊಳಿಸು.

ಧುಮ್ಮಾಪುರ (ನಾ)= ಬೀದರ ತಾಲೂಕಿನ ಒಂದು ಹಳ್ಳಿಯ ಹೆಸರು.

ಧುಮ್ಮಾಲ್ಗೋ್ಯ (ನಾ)= ಹೋಳಿ ಹುಣ್ಣಿಮೆಯ ಘೋಷಣೆ (ಹೋಳಿ ಹಾಡು:- ಧುಮ್ಮಾ ಸಾಲ್ ಲೌಡಿ ತಮ್ಮ। ಧುಮ್ಮಾ ಸಾಲ್ ಭಾಡೆನ ತಮ್ಮ। ಧುಮ್ಮಾ ಸಾಲ್ ಅನ್ನೀರೋ। ಹೋಳಿ ಆಡಾಮ್ಬನ್ನೀರೋ। ಧುಮ್ಮ್ಯಾಲ್ಗೋ್ಯ)

ಧುರಾಳಿ (ನಾ)= ಧೂಳಿ; ರಜ ತುಂಬಿದ ಗಾಳಿ.

ಧುರಾಳಿ ಉಡಾಸು (ಕ್ರಿ)= ಧೂಳೆಬ್ಬಿಸು; ಎದುರಾಳಿಗೆ ಮೆತ್ತಗೆ ಮಾಡು; ಧೂಳು ಹಾರುವಂತೆ ಮಾಡು.

ಧುರಾಳಿ ಎಬ್ಬುಸು (ಕ್ರಿ)= ಧೂಳುಂಟು-ಮಾಡು; ಧೂಳಿ ಹರಡುವಂತೆ ಮಾಡು.

ಧುರಾಳಿ ಕಡಿ (ಕ್ರಿ)= ಧೂಳೆಬ್ಬಿಸುತ್ತಾ ಓಡು; ಓಡಿ ಹೋಗು; ಓಟಕಿತ್ತು.

ಧುರಿ (ನಾ)= ಎಕ್ಸೆಲ್; ಬಂಡಿಗಾಲಿಯ ಅಡ್ಡದಂಡಿಗೆ; ವಾಹನದ ಗಾಲಿಯ ಅಡ್ಡದಂಡಿಗೆ; ಪಾಟಾ; ಅಚ್ಚು.

ಧುರುವ್ಚುಕ್ಕಿ (ನಾ)= ಧ್ರುವ ನಕ್ಷತ್ರ.

ಧುರ್ಪತಿ (ನಾ)= ದ್ರೌಪದಿ; ಪಂಚಪಾಂಡವರ ಹೆಂಡತಿ.

ಧೂಪ (ನಾ)= ಲೋಬಾನ, ಗುಗ್ಗುಳ, ದಶಾಂಗಾದಿಗಳನ್ನು ದೇವರೆದುರು ಸುಟ್ಟು ಎಬ್ಬಿಸಿದ ಹೊಗೆ.

ಧೂಪತ್ ಮಾಗಾಂವ (ನಾ)= ಔರಾಡ ತಾಲೂಕಿನ ಧೂಪದ ಮಹಾಗಾಂವದ ವಿಕಾರ ರೂಪ. ಗೊಗ್ಗವ್ವೆ ಶರಣೆಯ ಸ್ಮಾರಕವಿರುವ ಊರು. ಗೊಗ್ಗವ್ವೆ ಶರಣೆಯ ಮನೆಯೊಂದಿದ್ದು ಇಲ್ಲಿ ಗೊಗ್ಗವ್ವೆಯ ಪೂಜೆ ನಿತ್ಯ ನಡೆಯುತ್ತದೆ.

ಧೂಪಾರ್ತಿ (ನಾ)= ಧೂಪಾರತಿ; ದೂಪದಿಂದ ಮಾಡುವ ಆರತಿ; ಧೂಪ ಬೆಳಗಲು ಬಳಸುವ ಸಾಧನ.

ಧೂಮ್ (ನಾ)= ಮಜಾ; ಮೋಜು.

ಧೂಮೆಬ್ಬಿಸು (ಕ್ರಿ)= ಮೋಜು ಮಾಡು; ಮಜಾ ಮಾಡು.

ಧೂರ (ನಾ)= ದೂರ; ಹೊಗೆ.

ಧೂಲಾ ಹೈ ದೋಷ್ (ನಾ)= ಮದುಮಗನೇ, ಅಯ್ಯೋ ಗೆಳೇಯನೇ; ದೂಲಾ, ಹಾಯ್‌ದೋಸ್ತ್; ಮೊಹರಂ ಘೋಷಣೆ, ಜಯಘೋಷ.

ಧೂಸು (ನಾ)= ಧೂಳು; ಧೂಳಿ.

ಧೂಳಂಡಿ (ನಾ)= ಹೋಳಿ ಹುಣ್ಣಿಮೆಯ ಮರುದಿನ; ಓಕುಳಿಯಾಡುವ ದಿನ.

ಧೂಳಾಗು (ಕ್ರಿ)= ಕೊಳೆಯಾಗು; ಹೊಲಸಾಗು.

ಧೂಳಿ (ನಾ)= ಮಣ್ಣಿನ ಹುಡಿ; ಧೂಳು; ದೂಳು.

ಧೂಳಿ ಎಬ್ಬು (ಕ್ರಿ)= ದೂಳು ಹರಡುವಂತೆ ಮಾಡು; ದೂಳೆಬ್ಬಿಸು.

ಧೂಳಿ ಝಾಡ್ಸು (ಕ್ರಿ)= ಗುದ್ದಿ ಹಣ್ಣು ಮಾಡು; ಧೂಳಿ ಹಾರುವಂತೆ ಬಟ್ಟೆಯಿಂದ ಜಾಡಿಸು.

ಧೂಳಿ ಹಾರ್ಸು (ಕ್ರಿ)= ಹೊಡೆದು ಹಣ್ಣು ಮಾಡು; ನುಗ್ಗು ಮಾಡು.

ಧೂಳು (ನಾ)= ಮಣ್ಣಿನ ಹುಡಿ; ಧೂಳಿ; ದೂಳಿ.

ಧೂಳು ಪಾಕು (ನಾ)= ಜಂಗಮರ ಧೂಳಿಯಿಂದ ಕೂಡಿದ ಪಾದವನ್ನು ತೊಳೆದ ಪವಿತ್ರ ನೀರು.

ಧೂಳೆಬ್ಬು(ಕ್ರಿ)= ಧೂಳಿ ಎಬ್ಬು (ನೋಡಿರಿ)

ಧೂಳ್ಯಾ (ನಾ)= ಧೂಳಪ್ಪ ಹೆಸರನ್ನು ಕೆಡಿಸಿ ಸಂಬೋಧಿಸುವ ಪರಿ.

ಧೂಳ್ಯಾಗ (ಅ)= ಧೂಳಿಯಲ್ಲಿ; ದೂಳು ಇದ್ದಲ್ಲಿ.

ಧೇಡಂಬಿ (ನಾ)= ಹೊಲೆಯರ ಪೋರಿ; ಮಹಿಳೆ.

ಧೇಪ್ಯಾ (ನಾ)= ತೆಬ್ಬ; ಅಜಂಡ ಶರೀರವುಳ್ಳವನು; ಢೇಪ್ಯಾ (ಬೈಗುಳ)

ಧೇಲಿ (ನಾ)= ದೆಹಲಿ; ದಿಲ್ಲಿ.

ಧೈತ್ಯಾ (ನಾ)= ದೈತ್ಯ; ದೈತ್ಯ ಶಕ್ತಿಯುಳ್ಳವ.

ಧೈತ್ಯೇರು (ನಾ)= ದೈತ್ಯರು; ಅಕ್ರಾಳವಿಕ್ರಾಳ ಆಕಾರದವರು.

ಧೈಬುಟ್ಟಿ (ನಾ)= ಮೊಸರಿನ ಗಡಿಗೆ ಇಟ್ಟಿರುವ ಬುಟ್ಟಿ (ಶಿಶುಪ್ರಾಸ:- ಧೈಬುಟ್ಟಿ ಧೈ। ಆಚಿಮನಿಪೀ।).

ಧೈಯಂಡಿ (ನಾ)= ಮೊಸರಿನ ಗಡಿಗೆ; ಶ್ರೀ ಕೃಷ್ಣ ಜಯಂತಿಯಂದು ಬೀದಿಯಲ್ಲಿ ತೂಗು ಹಾಕಿ ಒಡೆಯುವ ಮೊಸರಿನ ಗಡಿಗೆ, ಒಂದು ಧಾರ್ಮಿಕ ಕಾರ್ಯಕ್ರಮ.

ಧೈಯಂತ (ಅ)= ಏಕದಂ; ಏಕಾಏಕಿ; ಗದ್ದಲವೆಬ್ಬಿಸುತ್ತಾ; ದಿಗ್ಗನೆ.

ಧೈರ್ಯಾ (ನಾ)= ಧೈರ್ಯ; ಎದೆಗಾರಿಕೆ; ಕೆಚ್ಚು.

ಧೈಲು (ನಾ)= ಅಂಜಿಕೆ; ಭಯ.

ಧೈಲುಹುಗು (ಕ್ರಿ)= ಅಂಜಿಕೆ ಸೇರು.

ಧೈಲು ಹುಗ್ಸು (ಕ್ರಿ)= ಅಂಜಿಕೆ ಹುಟ್ಟಿಸು.

ಧೈಲ್ಯಾ (ಕ್ರಿ)= ಹತ್ತು ಅಂಕಿಯ ಇಸ್ಪೀಟು.

ಧೈಹಂಡಿ (ನಾ)= ಧೈಯಂಡಿ (ನೋಡಿರಿ)

ಧೊಂಡ್ಯಾ (ನಾ)= ಧೋಂಡಾ; ಕಲ್ಲು; ಅಧಿಕ; ಹೆಚ್ಚಿನ; ಅಧಿಕಮಾಸ.

ಧೊಂಡ್ಯಾ ಏರು (ಕ್ರಿ)= ಅಧಿಕಮಾಸ ಉಂಟಾಗು.

ಧೊಂಡ್ಯಾದ ತಿಂಗಳು (ನಾ)= ಅಧಿಕಮಾಸ; ಹೆಚ್ಚುವರಿ ತಿಂಗಳು.

ಧೊಂಡ್ಯಾದಮಾಸಿ (ನಾ)= ಧೋಂಡೆ ತಿಂಗಳ ಅಮವಾಸ್ಯ; ಅಧಿಕಮಾಸದ ಅಮವಾಸ್ಯ; ಹೆಚ್ಚುವರಿ ತಿಂಗಳಿನ ಅಮಾವಾಸ್ಯ.

ಧೊಡಾಪ (ನಾ)= ದೊಡ್ಡಪ್ಪ

ಧೊಡಾವ (ನಾ)= ದೊಡ್ಡವ್ವ; ದೊಡ್ಡಮ್ಮ.

ಧೊಡ್ಕುಂಡಿ (ನು)= ಶ್ರೀಮಂತಿಕೆಯುಳ್ಳವ; (ವಿ) ಶ್ರೀಮಂತಿಕೆಯುಳ್ಳ.

ಧೊಡ್ಕುಂಡಿ ಮಂದಿ (ನಾ)= ಶ್ರೀಮಂತರು.

ಧೊಡ್ಡ (ವಿ)= ದೊಡ್ಡ; ಅತಿ ಗಾತ್ರದ.

ಧೊಡ್ಡಣ್ಣ (ನಾ)= ದೊಡ್ಡಣ್ಣ; ಹಿರಿಯಣ್ಣ

ಧೊಡ್ಡಪ್ಪ (ನಾ)= ದೊಡ್ಡಪ್ಪ; ಅಪ್ಪನ ಅಣ್ಣ; ದೊಡ್ಡವ್ವನ ಗಂಡ.

ದೊಡ್ಡಬ್ಯಾನಿ (ನಾ)= ಮಹಾರೋಗ.

ಧೊಡ್ಡಬ್ಯಾನಿ ಒಡಿಲಿ (ಕ್ರಿ)= ಮಹಾರೋಗ ಬರಲಿ (ಬೈಗುಳ)

ಧೊಡ್ಡಬ್ಯಾನಿ ಬರ್ಲಿ (ಕ್ರಿ)= ಮಹಾರೋಗ ಉಂಟಾಗಲಿ (ಬೈಗುಳ)

ಧೊಡ್ಡವ್ವ (ನಾ)= ದೊಡ್ಡವ್ವ; ದೊಡ್ಡಪ್ಪನ ಹೆಂಡತಿ; ಅವ್ವನ ಅಕ್ಕ.

ಧೊಡ್ಡಿ (ನಾ)= ದೊಡ್ಡಿ; ದೊಡ್ಡ ವಠಾರವುಳ್ಳ ಮನೆ; ಮೊದಲು ಹುಟ್ಟಿದ ಹೆಣ್ಣು.

ಧೊಡ್ಡುದು (ಅ)= ದೊಡ್ಡದ್ದು.

ಧೊಡ್ಡುಸ್ತನ್ಕಿ (ನಾ)= ದೊಡ್ಡಸ್ತನ; ದೊಡ್ಡಸ್ತಿಕೆ; ಠೀವಿ; ಜರ್ಬು.

ಧೊಡ್ಡೆತ್ತಿನ ಬಲಾಸತಿ (ನು)= ದೊಡ್ಡೆತ್ತಿದ್ದರೆ ಎಲ್ಲವೂ ಸಾಧ್ಯ.

ಧೊಡ್ಡೆತ್ತು (ನಾ)= ಬಲಶಾಲಿ ಎತ್ತು; ಬಲಶಾಲಿ ವ್ಯಕ್ತಿ; ಗಾತ್ರದಲ್ಲಿ ಅತಿಯಾದ ಎತ್ತು.

ಧೊಬ್ಬಂತ (ಅ)= ದೊಪ್ಪಂತ; ದೊಪ್ಪನೆ

ಧೊರಿ (ನಾ)= ದೊರೆ; ಒಡೆಯ; ಯಜಮಾನ; ಅರಸ.

ಧೊರ್ಗೋಳು (ನಾ)= ದೊರೆಗಳು; ಒಡೆಯರು; ಯಜಮಾನರು; ಅರಸರು.

ಧೊರ್ತಾನ (ನಾ)= ಒಡೆತನ; ಯಜಮಾನಿಕೆ.

ಧೊರ್ತಿ (ನಾ)= ಒಡತಿ; ಯಜಮಾನಿ; ರಾಣಿ; ಅರಸಿ.

ಧೊರ್ತಿನಾಹಡಾ (ಕ್ರಿ)= ಒಡತಿಯನ್ನು ಕೆಯ್ಯಾ (ಬೈಗುಳ).

ಧೊರ್ಸಾನಿ (ನಾ)= ಒಡತಿ; ಗೌಡತಿ; ದೊರೆಯನ ಹೆಂಡತಿ; ಅರಸಿ.

ಧೋಂಡ್ಯಾ (ನಾ)= ಧೊಂಡ್ಯಾ (ನೋಡಿರಿ)

ಧೋಂಡ್ಯಾ ಏರು (ಕ್ರಿ)= ಧೊಂಡ್ಯಾ ಏರು (ನೋಡಿರಿ)

ಧೋಂಡ್ಯಾದ ತಿಂಗಳು (ನಾ)= ಧೊಂಡ್ಯಾದ ತಿಂಗಳು (ನೋಡಿರಿ)

ಧೋಂಢ್ಯಾದಮಾಸಿ (ನಾ)= ಅಧಿಕ-ಮಾಸದ ಅಮಾವಾಸ್ಯ.

ಧೋಕಾ (ನಾ)= ಮೋಸ; ವಂಚನೆ; ಗಂಡಾಂತರ.

ಧೋಕಾಕುಡು (ಕ್ರಿ)= ಮೋಸ ಮಾಡು; ವಂಚಿಸು; ಗಂಡಾಂತರ ಒಡ್ಡು.

ಧೋಕಾಧಡಿ (ನಾ) ಹಿಂ.= ಮೋಸಗಾರಿಕೆ; ವಂಚನೆ; ಗಂಡಾಂತರ ಒಡ್ಡುವಿಕೆ.

ಧೋಕಾಬಾಜಿ (ನಾ) ಹಿಂ.= ಮೋಸದ ವರ್ತನ; ವಂಚನೆಯ ನಡತೆ.

ಧೋಕಾಮಾಡು (ಕ್ರಿ)= ಧೋಕಾಕುಡು (ನೋಡಿರಿ)

ಧೋತುರು (ನಾ)= ಧೋತ್ರ (ನೋಡಿರಿ)

ಧೋತ್ರ (ನಾ)= ಧೌತವಸ್ತ್ರ; ಧೋತರ; ಪಂಚೆ; ಪಂಜೆ. (ಗಾದೆ:- ಧೋತ್ರಿಗಿ ಹತ್ತಿದಾಂವಲ್ಲ, ಸೀರಿಗ್ಹತಿದಾಂವಲ್ಲ)

ಧೋಬಿ (ನಾ)= ಅಗಸ; ಬಟ್ಟೆ ಮಡಿ ಮಾಡುವ ಮಡಿವಾಳ.

ಧ್ಯಾನು (ನಾ)= ಧ್ಯಾಸ; ನೆನಪು; ಲಕ್ಷ್ಯ, ಸ್ಮರಣೆ, ಧ್ಯಾನ.

ಧ್ಯಾಯಾ (ನಾ)= ದೇಹ; ಶರೀರ; ಕಾಯ.

ದ್ಯಾಯಾಬಿಡು (ಕ್ರಿ)= ಶರೀರ ಬಿಡು; ಕಾಯ ತ್ಯಜಿಸು; ಮರಣ ಹೊಂದು; ಸ್ವರ್ಗಸ್ಥನಾಗು; ವೈಕುಂಟವಾಸಿಯಾಗು.

ಧ್ಯಾಸ (ನಾ)= ಧ್ಯಾನ; ಗಮನ; ಲಕ್ಷ್ಯ.

ಧ್ಯಾಸಿಡು (ಕ್ರಿ)= ಧ್ಯಾನಿಡು; ನೆನಪಿಡು; ಮನಸ್ಸಿನಲ್ಲಿ ಇಟ್ಟುಕೊ.

ಧ್ಯಾಸು (ನಾ)= ಧ್ಯಾಸ (ನೋಡಿರಿ).

ನ

ನಂಗ (ಅ)= ನನಗೆ (ಬಾಲಭಾಷೆ).

ನಂಗಾ (ನಾ)ಹಿಂ.= ಬತ್ತಲೆ.

ನಂಗಾನಿಂಗಾ (ಅ)= ನನಗೂ ನಿನಗೂ

ನಂಗ್ಕುಡು= ನನಗೆ ಕೊಡು (ಬಾಲಭಾಷೆ).

ನಂಜಾಗು (ಕ್ರಿ)= ವಿಷವಾಗು; ವಿಷ ಬಾಧೆಯಾಗು; ವಿಷ ಬಾಧೆಯುಂಟಾಗು.

ನಂಜು (ನಾ)= ರೋಗಿಗಳು ಉಣಬಾರದ ಆಹಾರ; ವಿಷಕಾರಿ ಆಹಾರ; ಅಪಥ್ಯ; ವಿಷ,.

ನಂಜು ದಿನುಸು (ನಾ)= ಉಣಬಾರದ ಆಹಾರ ವಸ್ತು; ವಿಷಕಾರಿ ಆಹಾರ ವಸ್ತು.

ನಂತರ= ಆಮೇಲೆ, ಅದಾದಮೇಲೆ

ನಂದನವನ (ನಾ)= ತೋಟ; ಉದ್ಯಾನವನ, ಸುಖದ ಆಗರ, ಬಗೀಚಾ.

ನಂದಾಧೀಪ (ನಾ)= ಆರದೆ ಇರುವ ದೀಪ (ಉ:- ಕಲಬುರ್ಗಿಯ ಶರಣಬಸಪ್ಪನ ಗುಡಿಯಲ್ಲಿಯ ಆರದೆ ಇರುವ ದೀಪ; ಹುಡಗಿ ಗ್ರಾಮದಯಂಕಮ್ಮ, ಮಡಿವಾಳಪ್ಪ, ಕರಿ ಬಸವೇಶ್ವರರ ಗುಡಿಯಲ್ಲಿರುವ ಆರದ ದೀಪ.

ನಂದಿ (ನಾ)= ವೃಷಭ; ಎತ್ತು; ಶಿವನ ವಾಹನ; ಬಸವ.

ನಂದಿಕೋಲು (ನಾ)= ತುದಿಯಲ್ಲಿ ನಂದಿ ಮೂರ್ತಿಯುಳ್ಳ ಕೋಲು; ನಂದಿ ಧ್ವಜವುಳ್ಳ ಕೋಲು.

ನಂದಿವಾಹನ (ನಾ)= ಶಿವ, ಪರಮಾತ್ಮ.

ನಂದಿಸು (ಕ್ರಿಂ)= ದೀಪ ಆರಿಸು; ಉರಿಯನ್ನು ಆರಿಸು.

ನಂದ್ಯಾಲ (ನಾ)= ಅರಳೆ ಮರ; ಆಲದ ಜಾತಿಯ ಒಂದು ಮರ. (ಹಾಡು= ಅದು ಬೆಟ್ಟ ಇದು ಬೆಟ್ಟವೋ । ನಂಜುಂಡ/ ನಂದ್ಯಾಲ ಗಿರಿ ಬೆಟ್ಟವೋ।।)

ನಂಬರ್ (ನಾ)ಇಂ.= ಸರ್ವೇ ನಂಬರ್; ಹೊಲ; ಹೋಡು.

ನಂಬರ್ ಒನ್ (ನಾ)ಇಂ.= ಅತ್ಯುತ್ತಮ; ಶ್ರೇಷ್ಠ; ಪ್ರಥಮ ದರ್ಜೆಯ.

ನಂಬಿಕಿ, ನಂಬ್ಕಿ (ನಾ)= ನಂಬಿಕೆ; ವಿಶ್ವಾಸ.

ನಂಬಿಯಣ್ಣ(ನಾ)= ಸೌಂದರ ನಂಬಿಯಣ್ಣ ನೆಂಬ ಶಿವಭಕ್ತ (ಭಜನೆ:- ಕುಂಬಾರ ಗುಂಡಯ್ಯ। ಕಂಬಳಿ ಭೋಗಯ್ಯ। ಅಂಬಿಗರ ಚೌಡಯ್ಯ! ಸೌಂದರ ನಂಬಿಯಣ್ಣನಾಳಾಗೋ ಶಿವ ಶಿವ।)

ನಂಬು (ಕ್ರಿ)= ನಂಬಿಕೆ ಇಡು; ವಿಶ್ವಾಸವಿಡು.

ನಂಬ್ರಿ (ನಾ)= ಚಾಲು; ಚಪ್ಪ; ಚುರುಕು; ಅಸಲು; ಅಸ್ಲಿ.

ನಂಬ್ಸು (ಕ್ರಿ)= ನಂಬಿಸು; ರಮಿಸು; ಸಮಾಧಾನಪಡಿಸು.

ನಕರಿ (ನಾ)= ನಕ್ರಿ; ನಖರಾ; ಚೇಷ್ಟೆ; ಹಾಸ್ಯ.

ನಕರಿಯಾಡು (ಕ್ರಿ)= ಚೇಷ್ಟೆ ಮಾಡು; ಹಾಸ್ಯ ಮಾಡು.

ನಕರಿ ಹಚ್ಚು (ಕ್ರಿ)= ನಗೆಚಾಟಿಯಾಡು; ಹುಡುಗಾಟಿಕೆ ಮಾಡು; ಥಟ್ಟಾ ಮಾಡು.

ನಕಲಿ (ನಾ)= ನೈಜವಲ್ಲದ; ಮೂಲವಲ್ಲದ; ಕೃತ್ರಿಮ.

ನಕಲ್(ನಾ)= ಪ್ರತಿ; ಝಿರಾಕ್ಸ್ ಪ್ರತಿ; ಪ್ರತಿ ಲಿಪಿ; ನಿಜಪ್ರತಿ.

ನಕಲು (ನಾ)= ನಕಲ್ (ನೋಡಿರಿ)

ನಕಲು ಮಾಡು (ಕ್ರಿ)= ಇದ್ದುದ್ದಿದ್ದಂತೆ ಇಳಿಸು; ಕಾಪಿಮಾಡು; ನೋಡಿ ಬರೆ.

ನಕಾಶಾ (ನಾ)= ನಕ್ಷೆ; ಕಟ್ಟಡ ರಚನೆಯ ನಕ್ಷೆ; ಕಟ್ಟಡ ಯೋಜನೆ; ಭೂಪಟ; ನೀಲಿ ನಕಾಶೆ.

ನಕ್ಕಿ (ನಾ) ಮ.= ಖಂಡಿತ; ನಿಶ್ಚಿತ; ಪಕ್ಕಾ.

ನಕ್ಕಿ ಆಗು (ಕ್ರಿ)= ಠರಾವಾಗು; ಖಚಿತವಾಗು.

ನಕ್ಕುನು/ಳು (ಕ್ರಿ)= ನಕ್ಕನು; ನಕ್ಕಳು.

ನಕ್ಕು ಮನಿತೋಗೊಮಾವ (ನು)= ನಗುನಗುತಾ ಮೋಸ ಮಾಡುವವ.

ನಕ್ರಿ (ನಾ)= ನಕರಿ (ನೋಡಿರಿ)

ನಕ್ರೋರ್ಹಲ್ಲು ಕಾಣಸ್ತಾವ (ನು)= ನಕ್ಕರೆ ಅವರ ಹಲ್ಲೇ ಕಾಣುತ್ತವೆ; ಅವರದೇ ಅಪಮಾನ ಆಗುತ್ತದೆ; ಮನಸ್ಸಿಗೆ ಹಚ್ಚಿಕೊಳ್ಳಬೇಡ.

ನಕ್ಯಾ (ನಾ)= ಮುಕ್ಕಡ.

ನಕ್ಸಲೇಟ್ (ನಾ)= ನಕ್ಸಲೀಯ.

ನಖರಾ (ನಾ)= ನಕರಿ (ನೋಡಿರಿ)

ನಗದಿ (ನಾ)= ಹಣ; ಆಗಿಂದಾಗ ಕೊಡುವ ವ್ಯಾಪಾರದ ಹಣ (ಉದಾ: ನಗದಿ ಇದ್ರ ಮುಂದುಕಬಾ, ಉದ್ರಿ ಇದ್ರ ಹಿಂದಕ್ಸರಿ).

ನಗದಿಖಾತಾ (ನಾ)= ಹಣಕಾಸು ವ್ಯವಹಾರದ ಲೆಕ್ಕದ ಪುಸ್ತಕ.

ನಗರ (ನಾ)= ದೊಡ್ಡ ಊರು; ವ್ಯಾಪಾರದ ಊರು; ಸಂತೆಯ ಊರು.

ನSಗ (ನಾ)= ಲಾಟ್; ಗುಂಪು; ಖೇಪು; ರಾಶಿ.

ನಗಾರಿ (ನಾ)= ಒಂದು ಬಗೆಯ ದೊಡ್ಡ ಚರ್ಮ ವಾದ್ಯ.

ನಗಾರಿ ಭಾರ್ಸು (ಕ್ರಿ)= ಢಂ ಢಂ ಸದ್ದು ಮಾಡುವ ದೊಡ್ಡ ಚರ್ಮ ವಾದ್ಯವನ್ನು ನುಡಿಸು.

ನಗು (ಕ್ರಿ)= ಮುಖದ ಹಾವಭಾವದಿಂದ ಹಿಗ್ಗು, ಹಾಸ್ಯ, ಅಪಹಾಸ್ಯಗಳನ್ನು ಧ್ವನಿ ಪೂರ್ವಕ ಅಭಿವ್ಯಕ್ತಿಸು.

ನಗುಮಾರಿ (ನಾ)= ನಗೆ ಮುಖ; ಹಸನ್ಮುಖ.

ನಗುಸು (ಕ್ರಿ)= ನಗುವಂತೆ ಮಾಡು; ನಗಿಸು; ವಿನೋದಗೊಳಿಸು.

ನಗೆಮಾರಿ ತಂದೆ (ನಾ)= ಹನ್ನೆರಡನೆಯ ಶತಮಾನದ ನಗಿಸುವ ಕಾಯಕದ ಒಬ್ಬ ಶರಣ.

ನಗ್ಘಡಿ (ನಾ)= ಅಪಹಾಸ್ಯ; ಹಾಸ್ಯ; ಟೀಕೆ.

ನಜರಾಣಿ (ನಾ) ಹಿಂ.= ನಜರಾನಾ; ಕಾಣಿಕೆ; ಕೊಡುಗೆ.

ನಜರಾಣಿಕುಡು (ಕ್ರಿ)= ನಜರಾಣಿ ಒಪ್ಪಿಸು; ಕಾಣಿಕೆ ಕೊಡು.

ನಜರು (ನಾ) ಹಿಂ.= ದೃಷ್ಟಿ; ನಿಗಾ.

ನಜರು ಇಡು (ಕ್ರಿ)= ನೋಡು; ನಿಗಾವಹಿಸು; ಮೇಲ್ವಿಚಾರಣೆ ಮಾಡು.

ನಜರು ಹತ್ತು (ಕ್ರಿ)= ದಿಟ್ಟಿ ತಗಲು; ದೃಷ್ಟಿಯಾಗು.

ನಟ್ಟನಡು (ಅ)= ನಡುಮಧ್ಯ; ಮಧ್ಯದಲ್ಲಿ.

ನಟ್ಟಾವ (ಕ್ರಿ)= ನೆಟ್ಟಿದೆ; ಚುಚ್ಚಿದೆ.

ನಟ್ಟು (ನಾ)= ಹುಲ್ಲಿನ ಒಂದು ಪ್ರಕಾರ; ಆಳವಾಗಿ ಬೇರಿಳಿವ ಒಂದು ಪ್ರಕಾರದ ಹುಲ್ಲು; ಕಳೆ

ನSಡಭೀಳು (ಕ್ರಿ)= ನ್ಯೂನತೆ ಉಂಟಾಗು; ಕೊರತೆ ಬೀಳು; ಕುಂಠಿತವಾಗು.

ನಡವಳಿಕಿ (ನಾ)= ನಡವಳಿಕೆ; ನಡಾವಳಿ; ಆಚಾರ ವಿಚಾರ; ರೂಢಿ.

ನಡತಿ(ನಾ)= ನಡಾವಳಿ; ರೂಢಿ; ಪದ್ಧತಿ.

ನಡಾವಳಿ (ನಾ)= ನಡತೆ; ಆಚಾರ; ರೂಢಿ.

ನಡಿ (ಕ್ರಿ)= ನಡೆ; ಮುಂದೆ ಸಾಗು; (ನಾ)=ನಡತೆ

ನಡು (ಕ್ರಿ)= ಚುಚ್ಚು; ಒಳಸೇರು (ಮುಳ್ಳು ನೆಡು ಇತ್ಯಾದಿ); (ನಾ)=ಮಧ್ಯ

ನಡುರಾತ್ರಿ (ನಾ)= ಸರಿ ರಾತ್ರಿ; ಮಧ್ಯರಾತ್ರಿ.

ನಡ್ಗಿ (ನಾ)= ನಡಿಗೆ; ಚಲಿಸುವಿಕೆ; ಆಚಾರ.

ನಣ್ಣತ್ತಿ (ನಾ)= ನೆತ್ತಿಯ ಮಧ್ಯಭಾಗ (ಉದಾ:- ಉಂಗುಟು ಹಿಡ್ದು ನಣ್ಣತ್ತಿ ತನಕಾ ಸಿಟ್ಟು ಏರಿದೆ); ನಳ್ನೆತ್ತಿ.

ನತ್ತಿ (ನಾ)= ನೆತ್ತಿ; ತಲೆ.

ನತ್ತಿ ಮ್ಯಾಲ ಕೈ ಇಡಾಂವ (ನಾ)= ಕ್ಷೌರಿಕ, ಹಜಾಮ; ಹಡಪದ; ನಾಪಿತ; ನಾಯಿಂದ; ನಾವುದ (ಸ್ವಾತಂತ್ರ್ಯ ಪೂರ್ವದಲ್ಲಿ ಜನರು ರಾತ್ರಿ ಹೊತ್ತು ಹಡಪದನ ಹೆಸರು ಹೇಳದೆ ನೆತ್ತಿ ಮ್ಯಾಲ ಕೈ ಇಡಾಂವ ಎಂದು ಹೇಳಿ ಹಡಪದರನ್ನು ಅವಮಾನಿಸುತ್ತಿದ್ದರು.).

ನತ್ತು (ನಾ)= ಮೂಗಿನ ಒಡವೆ; ಮೂಗುತಿ.

ನದರಾಗು (ಕ್ರಿ)= ದಿಟ್ಟಿಯಾಗು; ದೃಷ್ಟಿ ತಗಲು.

ನದರಿಗಿ ಭೀಳು (ಕ್ರಿ)= ಕಣ್ಣಿಗೆ ಕಾಣಿಸು.

ನದರು (ನಾ)= ನದುರು; ದೃಷ್ಟಿ; ನೋಟ; ನಿಗಾ.

ನದರುತೇಜಾಗು (ಕ್ರಿ)= ದೃಷ್ಟಿ ಚುರುಕಾಗು.

ನದಾಪ (ನಾ) ಉ.= ಪಿಂಜಾರ; ಹತ್ತಿ ಹಿಂಜುವ ಕಾಯಕದವನು.

ನದಿ (ನಾ) ಸಂ.= ಹೊಳೆ; ತೊರೆ.

ನದುರು (ನಾ)= ನಜರು; ನದರು; ನೋಟ; ನಿಗಾ; ದೃಷ್ಟಿ.

ನಫಾ (ನಾ) ಹಿಂ.= ಲಾಭ; ಆದಾಯ; ಮುನಾಫಾ.

ನಬಾಬಸಾಬ (ನಾ)= ನವಾಬಸಾಬ (ಗಾದೆ: ಇದ್ದಾಗ ನವಾಬ ಸಾಬ, ಇಲ್ಲದಾಗ ಫಕೀರ ಸಾಬ).

ನಮಕ್ (ನಾ) ಹಿಂ.= ಉಪ್ಪು; ಉಪ್ಪಿನ ಮಡಿಯ ಆಟ.

ನಮಕ್ ಹರಾಮ (ನಾ) ಹಿಂ.= ಉಂಡ ಮನೆಗೆ ಎರಡು ಬಗೆವವ; ಕೃತಘ್ನ.

ನಮಸ್ಕಾರ (ನಾ) ಸಂ.= ನಮಸ್ಕಾರ; ಶರಣಾರ್ಥಿ; ವಂದನೆ.

ನಮಾಜು (ನಾ) ಉ.= ಮುಸಲ್ಮಾನರು ಸಲ್ಲಿಸುವ ಪ್ರಾರ್ಥನೆ.

ನಮೂನಾ (ನಾ)= ರೀತಿ; ಮಾದರಿ; ಪ್ರಕಾರ.

ನಮೂನಿ (ನಾ)= ವಿಚಿತ್ರ; ಎಲ್ಲರಂತಲ್ಲದ.

ನಯಾ ಪೈಸಾ (ನಾ) ಹಿಂ.= ಹೊಸ ದುಡ್ಡು.

ನಯೀ ಕಮಾನ (ನಾ) ಉ.= ಬೀದರಿನ ನಗರ ಕೋಟೆಯ ಬಿದ್ದು ಹೋದ ಒಂದು ಅಗಸೆಯ ಹೆಸರು.

ನಯ್ಯಣ್ಣಿ (ನಾ)= ಮದುಮಕ್ಕಳು ಮೀಯು ವುದಕ್ಕಾಗಿ ಬಳಸಲಾಗುವ ಒಳ್ಳೆಣ್ಣೆ.

ನರ (ನಾ)= ಮನುಷ್ಯ; ತಂತು; ಅಂಗಾಂಗದ ಸಂದೇಶಗಳನ್ನು ಮೆದುಳಿಗೆ ಮುಟ್ಟಿಸುವ ತಂತು.

ನರಕ (ನಾ)= ಪಾಪಿಗಳಿಗೆ ಮೃತ್ಯು ನಂತರ ಶಿಕ್ಷಿಸುವ ಮರ್ತ್ಯಲೋಕ (ಕಾಲ್ಪನಿಕ).

ನರಕ ಚತುರ್ದಶಿ (ನಾ)= ದೀಪಾವಳಿಯ ಪ್ರಾರಂಭದ ದಿನ.

ನರಕ ಸೇರು (ಕ್ರಿ)= ಸತ್ತು ಹೋಗು; ಕಷ್ಟದೊಳಗಾಗು.

ನರಮ್ (ವಿ)ಉ.= ಮೆತ್ತಗಿನ; ದುರ್ಬಲವಾದ.

ನರಮಿ (ನಾ)= ಮೃದುತ್ವ.

ನರಮ್ದಿಲ್ (ವಿ)= ಮೃದುಮನಸ್ಸಿನ; ಕೋಮಲ ಹೃದಯಿ.

ನರಸಿಂಹ (ನಾ)= ಬೀದರಿನ ಝುರಣಿಯ ನರಸಿಂಹನೆಂಬ ದೇವರು; ಶ್ರೀ ವಿಷ್ಣುವಿನ ಅವತಾರ; ಹಿರೋಡಾ ಎಂಬ ಹೆಣ್ಣು ಮಕ್ಕಳು ಹರಕೆ ಹೊರುವ ದೇವರು.

ನರಿ(ನಾ)= ಒಂದು ಕಾಡುಪ್ರಾಣಿ; ಜಂಬುಕ (ಗಾದೆ:- ಹುಲಿಬಣ್ಣ ನೋಡಿ ನರಿ ಮೈ ಸುಟ್ಕೊಂಡ್ತಂತ); ವಂಚನೆ ಗುಣದವ.

ನರಿಗುಣ (ನಾ)= ಠಕ್ಕುಗುಣ.

ನರಿಬಾಲ (ನಾ)= ನರಿ ಎಂಬ ಕಾಡು ಪ್ರಾಣಿಯ ಬಾಲ; ಪೊರಕೆಯಂತಿರುವ ಒಂದು ಪ್ರಕಾರದ ಹುಲ್ಲು ಜಾತಿ.

ನರಿಮಾನವ (ನಾ)= ಠಕ್ಕುಮನುಜ.

ನರುಲಿ (ನಾ)= ಚರ್ಮದ ಮೇಲೆ ಉಂಟಾಗುವ ಕಪ್ಪಗಿನ ಗಂಟು.

ನಲದುರ್ಗ (ನಾ)= ಮುಂಬೈ-ಹೈದರಾಬಾದ್ ಮಾರ್ಗದಲ್ಲಿರುವ ಒಂದು ಕೋಟೆ ಇರುವ ಊರು. ೧೯೪೮ರಲ್ಲಿ ನಲದುರ್ಗದ ಮಾರ್ಗದಿಂದಲೇ ಭಾರತ ಸರಕಾರದ ಅರೆಸೇನಾ ಪಡೆಯು ನಿಜಾಮ ಸರಕಾರ ಹಾಗೂ ರಜಾಕಾರ ಲೂಟಿಗರ ಮೇಲೆ ಆಕ್ರಮಣ ಮಾಡಿತು.

ನಲ್ಲ (ನಾ)= ಗಂಡ; ಪತಿ; ಇನಿಯ.

ನಲ್ಲಿ (ನಾ)= ಕೊಳಾಯಿ; ನಳ (ಗಾದೆ:- ಗಲ್ಲಿಗಿ ಬಂದಾಕಿ ನಲ್ಲಿ ನೀರಿಗಿ ಬಂದೇ ಬರ್ತಾಳ!)

ನಲ್ಲಿ ಚಾಲು ಮಾಡು (ಕ್ರಿ)= ನಲ್ಲಿ ತಿರುವಿ ನೀರು ಬರುವಂತೆ ಮಾಡು; ನಳಕ್ಕೆ ನೀರು ಬಿಡು.

ನವಣಿ (ನಾ)= ನವಣೆ; ಸಣ್ಣ ಕಾಲುಳ್ಳ ಏಕದಳ ಧಾನ್ಯ. ಈ ಕಾಳುಗಳನ್ನು ಒರಳಲ್ಲಿ ಥಳಿಸಿದರೆ ಅಕ್ಕಿ ಕಾಳುಗಳು ಒದಗುತ್ತವೆ (ಸರ್ವಜ್ಞವಚನ:- ನವಣೆಯಾ ಬೋನಕ್ಕೆ। ಹವಣುಳ್ಳ ತೊಗೆಯಾಗೆ। ಕವಣೆಗಲ್ಲಷ್ಟು ಬೆಣ್ಣೆಯಾಗೆ। ಪಕ್ವಾನ್ನ ಕಿಂಗಳಿಕ್ಕೆಂದ ಸರ್ವಜ್ಞ!।).

ನವಣೆಕ್ಕಿ (ನಾ)= ನವಣೆ ಥಳಿಸಿ ತಯಾರಿಸಿದ ಅಕ್ಕಿ.

ನವಣೆನ ಭಾಯಿ (ನಾ)= ಸಾರ್ವಜನಿಕರ ಹಿತಕ್ಕಾಗಿ, ನವಣೆ ಎಂಬ ಸಿರಿವಂತನೊಬ್ಬ, ಕೂಲಿಕಾರರಿಗೆ ಬಮ್ಮನ ನವಣೆ ಕಾಳಿನ ಕೂಲಿ ಕೊಟ್ಟು ತೋಡಿಸಿದ ಬಾವಿ.

ನವಮಿ (ನಾ)= ಚಾಂದ್ರಮಾನ ಪದ್ಧತಿಯ ಪಕ್ಷದ ಒಂಭತ್ತನೆಯ ದಿನ.

ನವರಾತ್ರಿ (ನಾ)= ಮಹಾನವಮಿ; ಒಂಭತ್ತು ದಿನಗಳ ಅಂಬಾ ಭವಾನಿಯ ಹಬ್ಬ; ಆಶ್ವಯುಜ ಶುದ್ಧ ಪ್ರತಿ ಪದೆಯಿಂದ ನವಮಿವರೆಗಿನ ಒಂಭತ್ತು ರಾತ್ರಿಗಳ ದೇವಿ ಹಬ್ಬ.

ನವಸಾಗರ (ನಾ)= ಹಿತ್ತಾಳೆ ಅಥವಾ ತಾಮ್ರದ ಪಾತ್ರೆಗಳಿಗೆ ಕಲಾಯಿ ಮಾಡಲು ಬಳಸುವ ಒಂದು ಬಗೆಯ ಕ್ಷಾರ ಪದಾರ್ಥ.

ನವಾಬ (ನಾ)ಉ.= ಮುಸಲ್ಮಾನ ದೊರೆ; ಜಮೀನುದಾರ.

ನವಾಬಗಿರಿ (ನಾ)= ನವಾಬತನದ ಬಿಗುಮಾನ; ನವಾಬನ ಅಧಿಕಾರ.

ನವಾಬಸಾಬ (ನಾ)= ನವಾಬ (ನೋಡಿರಿ). (ಗಾದೆ:- ಇದ್ದಾಗ ನವಾಬಸಾಬ, ಇಲ್ದಾಗ ಫಕೀರ ಸಾಬ).

ನವಾಬಿ (ನಾ)ಉ.= ನವಾಬನ ದರ್ಪ, ಅಧಿಕಾರ ಇತ್ಯಾದಿ.

ನವಾರ (ನಾ)= ಮಂಚಕ್ಕೆ ಹೆಣೆಯಲು ಬಳಸುವ ಅಗಲ ಹಾಗೂ ದಪ್ಪನೆಯ ಬಟ್ಟೆಯ ಪಟ್ಟಿ; ನವಾರು.

ನವಾರು (ನಾ)= ನವಾರ (ನೋಡಿರಿ)

ನವಾರು ನೆಯ್ಯು (ಕ್ರಿ)= ಮಂಚಕ್ಕೆ ಅಥವಾ ತೊಟ್ಟಿಲಿಗೆ ನವಾರು ಹೆಣೆ.

ನವಿ (ಕ್ರಿ)= ನವೆ; ಸವೆ; ಸೊರಗು; ಕೃಶವಾಗು.

ನವಿಬ್ಯಾನಿ (ನಾ)= ನವೆಬೇನೆ, ಕೃಷಗೊಳ್ಳುವ ಬೇನೆ

ನವ್ತಿ (ವಿ)= ನೂತನವಾದ; ನೌತಿ; ಹೊಸದು, (ನಾ) ತರುಣ.

ನವ್ವುಹೋಗು (ಕ್ರಿ)= ಸವೆದು ಹೋಗು; ಬಡಕಲಾಗು; ಸೊರಗು; ಕೃಶವಾಗು.

ನವುಲು (ನಾ)= ನವಿಲು; ಮಯೂರ.

ನವುಲ್ಯಾ (ನಾ)= ಒಂಭತ್ತು ಅಂಕಿಯುಳ್ಳ ಇಸ್ಪೀಟೆಲೆ.

ನಶಾ (ನಾ)= ನಶೆ; ಅಮಲು;ಮಾದಕ ದ್ರವ್ಯ ಸೇವನೆಯಿಂದ ಉಂಟಾಗುವ ಸೊಕ್ಕು.

ನಶಾ ಇಳ್ಸು (ಕ್ರಿ)= ಸೊಕ್ಕು ಇಳಿಸು; ಗರ್ವ ಹರಣ ಮಾಡು.

ನಶಾ ಏರು (ಕ್ರಿ)= ಮಾದಕ ಪದಾರ್ಥ ಸೇವನೆಯಿಂದ ಅಮಲೇರು.

ನಶಾಪಾನಿ (ನಾ)= ಮದ್ಯಪಾನ ಮಾಡುವಿಕೆ.

ನಸರಾಣಿ (ನಾ)= ಅಲ್ಪ; ತುಚ್ಛ; ಹೀನ; ಲುಚ್ಛಾ; ಲಫಂಗ; ಲಜ್ಜೆಯಿಲ್ಲದವ (ಬೈಗುಳ)

ನಸಲು (ನಾ) ಹಿಂ.= ತಳಿ; ಬೀಜ; ವಂಶಾವಳಿ.

ನಸೀಬು (ನಾ) ಹಿಂ.= ಹಣೆಬರಹ; ಅದೃಷ್ಟ; ದೈವಲಿಖಿತ.

ನಸೀಯತ್ತು (ನಾ) ಹಿಂ.= ನೀತಿಪಾಠ; ಉಪದೇಶ; ಹಿತೋಪದೇಶ.

ನಸುಕಾಗು (ಕ್ರಿ.೦)= ಸೂರ್ಯೋದಯ ಪೂರ್ವದ ನಸು ಬೆಳಕು ಉಂಟಾಗು; ಸೂರ್ಯಾಸ್ತ ನಂತರದ ನಸು ಮಬ್ಬು ಗತ್ತಲೆಯಾಗು.

ನಸುಕು (ನಾ)= ಬೆಳಗಿನ ಜಾವ; ಮುಂಜಾವು; ನಸುಕು, ನಸ್ಕು; ನಸುಗತ್ತಲೆ.

ನಸ್ಕು (ನಾ)= ನಸುಕು (ನೋಡಿರಿ)

ನಸ್ಸಾಗು (ಕ್ರಿ)= ಸಂತಾನ ಕ್ಷೀಣಿಸು; ವಂಶ ನಾಶವಾಗು; ನಿಸ್ಸಂತಾನವಾಗು.

ನಳಾ (ನಾ)= ನಳ್ಳು; ನಲ್ಲಿ; ನೀರಿನ ಕೊಳವೆ.

ನಳ್ಕಿ (ನಾ)= ನಳಿಕೆ; ನಳಿಗೆ; ಬಂಡಿಗಾಲಿಯ ಎಣ್ಣೆ ತುಂಬಿಡುವ ಬಿದಿರಿನ ನಳಿಕೆ, ನಳ್ಗಿ; ಗುದದ್ವಾರ.

ನಳ್ಗಿ (ನಾ)= ನಳ್ಕಿ (ನೋಡಿರಿ) ಗಾದೆ:- ಸಲ್ಗಿ ಕೊಟ್ಟ ನಾಯಿ ನಳ್ಗಿ ಮುಸಿ ನೋಡ್ತಂತ!

ನಳ್ನತ್ತಿ (ನಾ)= ತಲೆಯ ಮೇಲಿನ ನಡುಭಾಗ; ನಣ್ಣತ್ತಿ.

ನಳ್ಳಿ (ನಾ)= ನಳಾ; ನಳ್ಳು; ನೀರಿನ ನಲ್ಲಿ.

ನಳ್ಳು (ನಾ)= ನಳ್ಳಿ (ನೋಡಿರಿ).

ನಾ (ಸ)= ನಾನು (ಉದಾ: ಸ್ವರ್ಗಕ್ಕೆ 'ನಾ' ಹೋದರೆ ಹೋಗುತ್ತೇನೆ. ಅಹಂ ಹೋದರೆ ಹೋಗುತ್ತೇನೆ.

ನಾಂಗ (ಅ)= ನನಗೆ

ನಾಂದಿ (ನಾ)= ನಾಟಕ ಶುಭಾರಂಭದ ಹಾಡು.

ನಾಂದಿ ಹಾಡು (ನಾ)= ನಾಟಕಾರಂಭ ಸೂಚನೆಯ ಹಾಡು.

ನಾಂದು (ಕ್ರಿ)= ಹಿಟ್ಟನ್ನು ನೀರಿನಿಂದ ತೊಯ್ಸಿ, ಕಿವುಚಿ, ಜಿಗಿಹುಟ್ಟುವಂತೆ ಮಾಡು; (ಅ) ನನ್ನದು.

ನಾ ಇನ್ಸಾಫಿ (ನಾ) ಹಿಂ.= ಅನ್ಯಾಯ

ನಾ ಇಲಾಜು (ನಾ)= ನಿರುಪಾಯ; ಚಿಕಿತ್ಸೆ ಇಲ್ಲದ.

ನಾಕಾ (ನಾ) ಹಿಂ.= ಪೋಲಿಸ ಠಾಣೆ; ಗ್ರಾಮೀಣ ಕಚೇರಿ.

ನಾಕಾಬಂದಿ (ನಾ) ಹಿಂ.= ನಾಕೆಯ ವ್ಯಾಪ್ತಿಯಲ್ಲಿ ಕಡಕ ಬಂದೊಬಸ್ತು; ಬಿಗಿ ಕಾವಲು.

ನಾಕಮ್ (ನಾ) ಹಿಂ.= ನಾಪಾಸು; ಅನುತ್ತೀರ್ಣ; ಫೇಲು; ಕೆಲಸಕ್ಕೆ ಬಾರದ್ದು.

ನಾಕಿಪ್ಪತ್ತು (ನಾ)= ಎಂಭತ್ತು; ಅಷ್ಟಾದಶ.

ನಾಕು (ನಾ)= ನಾಲ್ಕು.

ನಾಕು ಮಂದಿ (ನಾ)= ಸಾರ್ವಜನಿಕರು.

ನಾಕೆಕರೆ (ನಾ)= ನಾಲ್ಕು ಎಕರೆ ಭೂವಿಸ್ತಾರ.

ನಾಕೆತ್ತಿನ ಆರು (ನಾ)= ನಾಲ್ಕು ಎತ್ತುಗಳ ಗಳೆ; ನಾಲ್ಕು ಎತ್ತು ದುಡಿಯುವಷ್ಟು ಕೃಷಿ ಭೂಮಿ.

ನಾಕೆತ್ತಿನಗಳೆ (ನಾ)= ನಾಕೆತ್ತಿನ ಆರು. (ನೋಡಿರಿ)

ನಾಕೇದಾರ (ನಾ) ಹಿಂ.= ಪೋಲೀಸ ನಾಕೆಯ ಮೇಲಧಿಕಾರಿ.

ನಾಗಣ್ಣ (ನಾ)= ನಾಗರಹಾವು; ಮನುಷ್ಯನಿಗಿಟ್ಟ ಹೆಸರು.

ನಾಗಣ್ಣಗ ಹಾಲೆರೆ (ನು)= ನಾಗರ ಪಂಚಮಿ ಯಂದು ಕಲ್ಲಿನ ನಾಗರಕ್ಕೆ ಹಾಲಿನ ಅಭಿಷೇಕ ಮಾಡು.

ನಾಗಭೂಷಣ (ನಾ)= ನಾಗರ ಹಾವನ್ನು ಕೊರಳ ಹಾರ ಮಾಡಿಕೊಂಡ ಶಿವ, ಪರಮಾತ್ಮ. ಮುಚಳಂಬದ ನಾಗಭೂಷಣ ಶಿವಯೋಗಿಗಳು.

ನಾಗನಾಥ (ನಾ)= ನಾಥ ಸಂಪ್ರದಾಯದ ದೇವರು; ಮನುಷ್ಯನಿಗಿಟ್ಟ ಹೆಸರು; ಹಳಿಖೇಡ (ದೊಡ್ಡ)ದ ಸೀಮಿನಾಗಣ್ಣ ದೇವರು.

ನಾಗರ (ನಾ)= ಅಗಲ ಹಣೆಯುಳ್ಳ ನಾಗ ಜಾತಿಯ ಹಾವು, ನಾಗ.

ನಾಗರ ಪಂಚಮಿ (ನಾ)= ನಾಗರ ಹಾವನು (ಕಲ್ಲನಾಗರವನ್ನು) ಪೂಜಿಸುವ, ಮಹಿಳೆಯರ ಹಬ್ಬ (ಹಾಡು:- ನಾಗರ ಪಂಚಮಿ। ನಾಡಿಗೆ ಧೊಡ್ಡದು। ನಾರೇರ ಹಬ್ಬ ಏನ್ಹಬ್ಬ। ಕೋಲೆಣ್ಣ ಕೋಲೆ॥)

ನಾಗರಮಾಸಿ (ನಾ)= ನಾಗರಮಾವಾಸ್ಯ; ನಾಗರಪಂಚಮಿಗೆ ಮುನ್ನ ಬರುವ ಆಷಾಢದ ಅಮಾವಾಸ್ಯ.

ನಾಗಾಯಿ (ನಾ)= ಚಿತಾಪೂರು ತಾಲೂಕಿನ ಒಂದು ಸುಕ್ಷೇತ್ರ ಸ್ಥಳ.

ನಾಗಿಣಿ (ನಾ)= ನಾಗಿನಿ; ನಾಗಮ್ಮ; ಕ್ರೂರ ಸ್ವಭಾವದ ಹೆಣ್ಣು; ಹಾವಿನಂಥ ಹೆಣ್ಣು; ನಾಗ ಕನ್ನಿಕೆ.

ನಾಗ್ಯ (ನಾ)= ನಾಲ್ಕು ಕೊಳಗ ಧಾನ್ಯ;

ನಾಚಿಕಿ (ನಾ)= ನಾಚಿಕೆ; ಲಜ್ಜೆ.

ನಾಚಿಗ್ಗೇಡಿ (ನಾ)= ನಾಚಿಕೆ ಇಲ್ಲದವನು(ಳು); ನಾಚಿಕೆ ಬಿಟ್ಟು ಕೆಟ್ಟವನು(ಳು).

ನಾಚು (ನಾ)= ನರ್ತನ; ಕುಣಿತ; ಡಾನ್ಸು; ತಾಳ; ಲಯಪೂರಿತ ನರ್ತನ (ಗಾದೆ:- ನಾಚು ಬರಲ್ದಾಕಿ ಅಗಳ ಒಂಕಂದ್ಯಂತ!)

ನಾಚು (ಕ್ರಿ)= ಸಂಕೋಚ ಪಡು; ನಾಚಿಕೆಗೊಳ್ಳು; ಲಜ್ಜೆಗೊಳ್ಳು.

ನಾಜ (ನಾ) ಉ.= ಗರ್ವ; ಅಭಿಮಾನ.

ನಾಜರ (ನಾ)ಉ.= ತನಿಖಾಧಿಕಾರಿ.

ನಾಜಾಯಜ (ವಿ)ಉ.= ಅನ್ಯಾಯದ; ಅಸಮ್ಮತವಾದ; ನ್ಯಾಯ ಸಮ್ಮತವಲ್ಲದ.

ನಾಜೂಕಿ (ನಾ)ಉ।= ಸೂಕ್ಷ್ಮತೆ; ಕೋಮಲತೆ.

ನಾಜೂಕು (ವಿ)= ಸೂಕ್ಷ್ಮವಾದ; ಕೋಮಲವಾದ; ನಯವಾದ.

ನಾಟ (ನಾ) ಹಿಂ.= ಮರದ ಉದ್ದ, ದಪ್ಪವಾದ ತುಂಡು; ಕೊರಡು; ತೊಲೆ.

ನಾಟಕ (ನಾ)= ಅಭಿನಯ ಪ್ರಧಾನವಾದ ದೃಶ್ಯ ಕಾವ್ಯ; ಅಭಿನಯ; ರೂಪಕ ಬಣ್ಣ ಬಳಿದುಕೊಂಡು ಆಡುವ ಆಟ.

ನಾಟಕ ಮಾಡು (ಕ್ರಿ) = ನಟಿಸು; ನಟನೆ ಮಾಡು; ಪಾತ್ರವನ್ನು ನಿರ್ವಹಿಸು.

ನಾಟಿಕಿ (ನಾ)= ಸಸಿ; ಎಳೆಗಿಡ; ಅಗೆ.

ನಾಟು (ಕ್ರಿ)= ಒಳಹೋಗು; ಬೀಜ ಮೊಳೆ; ಮುಳ್ಳು ಚುಚ್ಚು; ಒಳಗೆ ಸೇರಿಕೊಳ್ಳು.

ನಾಟು (ನಾ)= ನಾಟ (ನೋಡಿರಿ).

ನಾಡಾ (ನಾ)= ನಾಡಿ; ಬಟ್ಟೆಯ ಉದ್ದ ಪಟ್ಟಿ; ಉಡುಪಿನ ಝುರ್ಕಿಯ ಪಟ್ಟಿ.

ನಾಡಿ (ನಾ)= ಶರೀರದಲ್ಲಿ ರಕ್ತಚಲನೆಗಾಗಿ ಇರುವ ಕೊಳವೆಯಾಕಾರದ ರಚನೆ; ಧಮನಿ, ನರ; ರಕ್ತಚಲನೆಯ ಮಿಡಿತ; ನಾಡಾ; ಉಡುಪಿನ ಝುರ್ಕಿಯ ಪಟ್ಟಿ.

ನಾಡಿ ಚಾಲು ಇರು (ಕ್ರಿ)= ನರದ ಬಡಿತ ನಡೆಯುತ್ತಿರು.

ನಾಡಿ ನಿಂತು ಬಿಡು (ಕ್ರಿ)= ರಕ್ತ ಸಂಚಾರ ನಿಂತು ಹೋಗು.

ನಾಡಿ ನೋಡು (ಕ್ರಿ)= ನಾಡಿ ಬಡಿತ ಪರೀಕ್ಷಿಸು; ನರದ ಮಿಡಿತವನ್ನು ಪರೀಕ್ಷಿಸು; ನಾಡಿ ಪರಕ ಮಾಡು.

ನಾಡಿ ಪರಕ ಮಾಡು (ಕ್ರಿ)= ರಕ್ತನಾಳದ ಮಿಡಿತ ಪರೀಕ್ಷಿಸು.

ನಾಡಿ ಬಂದು ಆಗು (ಕ್ರಿ)= ರಕ್ತನಾಳದ ಮಿಡಿತ ನಿಂತುಹೋಗು; ಸತ್ತುಹೋಗು; ನಿರ್ಜೀವವಾಗು; ಅಡ್ಡಿಯಾಗು.

ನಾಡಿ ಬಡಿ (ಕ್ರಿ)= ರಕ್ತನಾಳದಲ್ಲಿ ಮಿಡಿತ ನಡೆಯುತ್ತಿರು.

ನಾಡಿ ಹಾರು (ಕ್ರಿ)= ರಕ್ತನಾಳದ ಬಡಿತ ಮುಂದುವರಿ.

ನಾಡು (ನಾ)= ಜನವಸತಿ ಪ್ರದೇಶ; ಭೂಭಾಗ.

ನಾಡು ತಹಸಿಲ್ದಾರ (ನಾ)= ವಲಯ ಮಟ್ಟದ ತಹಸಿಲ್ದಾರ; ಕಂದಾಯ ಅಧಿಕಾರಿ.

ನಾಡು ಬಿಟ್ಟು ನಾಡು (ನು)= ಬೇರೆ ನಾಡು.

ನಾಡ್ದ (ನಾ)= ನಾಳೆಯ ಆಚೆಯ ದಿನ, ನಾಡಿದ್ದು.

ನಾಡ್ಯಾ (ನಾ)= ನಾಡು (ಜಾನಪದ ಒಗಟು: ಸುರ್ಸುರ್ಬತ್ತಿ। ಸುರಂಗಬತ್ತಿ। ನಾಡ್ಯಾಕೆಲ್ಲಾ ಒಂದೇ ಬತ್ತಿ).

ನಾಡ್ಯಾ ಮ್ಯಾಲ ಹೋಗು (ನು)= ಮನೆ ಮಾರು ತೊರೆದು ಸಂಚಾರಿಯಾಗು.

ನಾಣ್ (ನಾ)= ಒಂದು ಪ್ರಕಾರದ ಕೊರಳ ಒಡವೆ; ಚಿನ್ನದ ಕಂಠಾಭರಣ.

ನಾಣಪುರ (ನಾ)= ನವಾಬರ ಆಡಳಿತ ಕಾಲದಲ್ಲಿ ನೆಲಸಮಗೊಳಿಸಲಾದ ದೇವಾಲಯಗಳ ಊರು. ಬಸವ ಕಲ್ಯಾಣ ಸಮೀಪದ ಐತಿಹಾಸಿಕ ಊರು.

ನಾತ (ನಾ)= ನಾತಾ; ದುರ್ವಾಸನೆ; ದುರ್ನಾತ.

ನಾತಾ (ನಾ)= ನಾತ (ನೋಡಿರಿ)

ನಾತಾ (ನಾ) ಹಿಂ.= ಸಂಬಂಧ.

ನಾತಿ (ನಾ)= ನಂಟುತನ; ಸಂಬಂಧ; ಬಾಂಧವ್ಯ.

ನಾತಿ ಆಗು (ಕ್ರಿ)= ಸಂಬಂಧ ಜಮಾಸು; ಸಂಬಂಧ ಹೊಂದು; ಒಂದೇ ಬಣದವರಾಗು.

ನಾಥ (ನಾ) ಸಂ.= ಗಂಡ; ವಲ್ಲಭ; ಪತಿ.

ನಾಥಾ (ಅ)= ಹೇ ವಲ್ಲಭನೇ, ಹೇ ಪ್ರಾಣ ನಾಥನೇ (ಬಯಲಾಟದ ಮಾತು:- ಆಹೇ ನಾಥಾ, ಪ್ರಾಣಕಾಂತಾ, ಮತ್ತಾದರು ಹೇಳುತ್ತೇನೆ, ಕೇಳುವಂಥವನಾಗು)

ನಾಥೂರಾಮ (ನಾ)= ಮಹಾತ್ಮಾ ಗಾಂಧೀಜಿಯ ಹಂತಕನಾದ ನಾಥೂರಾಮ ಗೋಡ್ಸೆ.

ನಾದಾ (ನಾ)= ನಾದ; ಚಟ; ಹವ್ಯಾಸ; ನಶೆ; ರುಚಿ; ಗುಂಗು.

ನಾದಾನ (ವಿ.) ಹಿಂ.= ಹೀನ; ಕೀಳು (ಗಾದೆ:- ದಾನಾದುಸ್ಮನ್ ಇರಬೇಕು; ನಾದಾನ ದೋಸ್ತ ಇರಬಾರ್ದು. (ನಾ) ಹೀನನಾದವನು(ಳು).

ನಾದಾನಿ (ನಾ)= ಹೀನತನ; ಕೀಳುಗುಣ; ದುರ್ಬುದ್ಧಿ.

ನಾದಾನಗಿರಿ (ನಾ) ಹಿಂ.= ಹೀನ ನಡತೆ; ಕೀಳು ಗುಣ ಪ್ರದರ್ಶನ.

ನಾದಿನಿ (ನಾ)= ನಾದುನಿ (ನೋಡಿರಿ)

ನಾದು (ಕ್ರಿ)= ಹಿಟ್ಟನ್ನು ನೀರಲ್ಲಿ ತೊಯ್ಸಿ ಚೆನ್ನಾಗಿ ಮಿದಿ) ಹೊಡೆ; ಕುಟ್ಟು; ಥಳಿಸು.

ನಾದುನಿ (ನಾ)= ಗಂಡನ ತಂಗಿ ಇಲ್ಲವೆ ಅಕ್ಕ (ಗಾದೆ:- ನಡ್ಯಾ ಮನಿಗಿ ನಾದುನಿ ಮೂಲ); ನಾದಿನಿ.

ನಾದ್ನಿ (ನಾ)= ನಾದುನಿ (ನೋಡಿರಿ).

ನಾನ್ (ಸ) = ನಾನು; ಅಹಮ್.

ನಾನಕ ಝುರಾ (ನಾ)= ಬೀದರ ನಗರದಲ್ಲಿರುವ ಸಿಖ್ಖರ ಧರ್ಮಗುರು, ಗುರುನಾನಕ ಸಾಹೇಬರ ಪವಿತ್ರಕ್ಷೇತ್ರ.

ನಾನು (ಸ)= ನಾನ್; ಅಹಮ್.

ನಾಪ್ (ನಾ)= ಉದ್ದಗಲದ ಅಳತೆ; ಮಾಪನ.

ನಾಪ್ ತೊಗೊ (ಕ್ರಿ)= (ಸಿಂಪಿಗನು) ಅಳತೆ ತೆಗೆದುಕೊ. ಉಡುಪು ತಯಾರಿಸಲು ಶರೀರದ ಅಳತೆ ತೆಗೆದುಕೊ.

ನಾಪತಾ (ನಾ) ಹಿಂ= ಕಾಣದಂತಾಗುವಿಕೆ, ಕಳೆದುಹೋಗುವಿಕೆ.

ನಾಪ್‌ತೋಲ್ (ನಾ) ಹಿಂ.= ಉದ್ದಗಲದ ಅಳತೆ ಮತ್ತು ಭಾರದ ತೂಕ ಮಾಡುವಿಕೆ.

ನಾಪಾಸ್ (ನಾ)= ಅನುತ್ತೀರ್ಣ; ನಾಕಾಮ್; ಫೇಲು; ಅಪಯಶ.

ನಾಪ್ತೋಲ್ (ನಾ) ಹಿಂ.= ನಾಪ್‌ತೋಲ್ (ನೋಡಿರಿ).

ನಾಬತ್ತು (ನಾ)= ಕಲ್ಲುಸಕ್ಕರೆ; ಖಡೀ ಸಾಖರ

ನಾಬಾಲಿಗ (ನಾ) ಉ.= ಅಪ್ರಾಪ್ತ ವಯಸ್ಕ; ಅಪ್ರಬುದ್ಧ; ೧೮ ವರ್ಷ ವಯಸ್ಸು ಮೀರಲಾರದವನು (ಳು).

ನಾಬೀ (ಅ)= ನಾನೂ; ನಾನು ಕೂಡ

ನಾಮ (ನಾ)= ಹೆಸರು (ದಾಸರ ಹಾಡು:- ನೀನ್ಯಾಕೋ ನಿನ್ನ ಹಂಗ್ಯಾಕೋ। ನಿನ್ನ ನಾಮದ ಬಲವೊಂದಿದ್ದರೆ ಸಾಕೋ।।)

ನಾಮರ್ದ (ನಾ) ಉ.= ಷಂಡ; ನಪುಂಸಕ; ಹಿಜಡ್ಯಾ; ಜಾಣ್ಯಾ.

ನಾಮಾ (ನಾ)= ಹಣೆಯ ಮೇಲೆ ಗಂಧ ಕುಂಕುಮಾದಿಗಳನ್ನು ಅಡ್ಡ ಅಥವಾ ಉದ್ದವಾಗಿ ಧರಿಸುವಿಕೆ.

ನಾಮಾಂಕಿತ (ನಾ) ಸಂ.= ಹೆಸರು ಮತ್ತು ಗುರುತು (ದೊಡ್ಡಾಟದ ಮಾತು:- ನಿನ್ನ ನಾಮಾಂಕಿತವೇನೆಂದು ಹೇಳಲೆ ಸಾರಥಿ, ಅತಿ ಜಾಗ್ರತಿ)

ನಾಮಾವಳಿ (ನಾ) ಸಂ.= ಹೆಸರಿನ ಪಟ್ಟಿ; ಸಾಲು ಹೆಸರುಗಳು (ಹರನಾಮಾವಳಿ; ವಿಷ್ಣು ನಾಮಾವಳೀ; ಬಸವ ನಾಮಾವಳಿ ಇತ್ಯಾದಿ.

ನಾಮ್ನಿಶಾನ (ನಾ) ಉ.= ಗುರುತು; ಚಿನ್ಹೆ; ಪತ್ತಾ; ಖೂನಗೊತ್ತು.

ನಾಮ್ಯಾ (ನಾ)= ಪ್ರಸಿದ್ಧಿ; ಹೆಸರಿನ ಖ್ಯಾತಿ.

ನಾಯಿ (ನಾ)= ಶ್ವಾನ; ಶುನಕ; ಹೀನ; ತುಚ್ಛ (ಗಾದೆ:- ನಾಯಿ ಬಾಲಾ ನಳ್ಯಾಗ ಹಾಕ್ದುರ್ಬಿ ಖಡೀ ಆಗಾಲ.)

ನಾಯಿ ಕಾಶೀಗೆ ಹೊಂಥಂಗ= ನಾಯಿ ಮುಂದೆ ಹತ್ತು ಹೆಜ್ಜೆ ಇಟ್ಟರೆ ಹಿಂದಕ್ಕೆ ಇಪ್ಪತ್ತು ಹೆಜ್ಜೆ ಇಡುವದಂತೆ! ಹೀಗಾಗಿ ನಾಯಿ ಕಾಶೀಗೆ ತಲುಪಲಾರದು.

ನಾಯಿಕೆಮ್ಮು (ನಾ)= ನಾಯಿಯಂತೆ ಖೊಕ್ ಖೊಕ್ ಎಂದು ಕೆಮ್ಮುವಿಕೆ.

ನಾಯಿ ಛತ್ತುರ್ಕಿ (ನಾ)= ನಾಯಿ ಕೊಡೆ; ಗೊಬ್ಬರದ ಗುಂಡಿ, ಹುತ್ತ, ತಿಪ್ಪೆ, ಕೊರಡುಗಳ ಮೇಲೆ ಮಳೆಗಾಲದಲ್ಲಿ ಹುಟ್ಟಿ ಬೆಳೆಯುವ ಕೊಡೆಯಾಕಾರದ ಒಂದು ಬಗೆಯ ಸಸ್ಯ; ಮಸ್ರೂಮ್.

ನಾಯಿನಡ್ಗಿ (ನಾ)= ನಾಯಿಯಂತೆ ಮುಂದೆ ಹೋಗಿ ಹಿಂದೆ ಬರುವಿಕೆ.

ನಾಯಿನ್ಯಾಲ್ಗಿ (ನಾ)= ಎರೆಹುಳು; ನಾಯಿಯ ನಾಲಗೆಯಂತಿರುವ ಎರೆಹುಳು.

ನಾಯಿಬಾಲಾ (ನು)= ಡೊಂಕುತನ; ತಿದ್ದಲಾಗದ್ದು (ಗಾದೆ:- ನಾಯಿ ಬಾಲಾ ಡೊಂಕು).

ನಾಯಿ ಬಾಳ್ಯಾ (ನಾ)= ನಾಯಿಯಂತೆ ಹೀನವಾಗಿ ಬಾಳುವಿಕೆ.

ನಾಯ್ಮರಿ (ನಾ)= ನಾಯಿಯ ಮರಿ; ನಾಯಿಯ ಕುನ್ನಿ; ನಾಯಿಯ ಕೂಸು.

ನಾರಂಗಿ (ನಾ)= ಸಂತ್ರಾ; ಸಂತ್ರಾಬಣ್ಣ.

ನಾರಾ (ನಾ) ಉ.= ಜಯಘೋಷ (ಉದಾ:- ನಾರಾಇ-ತದಬೀರ। ಅಲ್ಲಾಹೋ ಅಕಬರ್।)

ನಾರಾ ಹೊಡಿ (ಕ್ರಿ)= ಜಯಘೋಷ ಮಾಡು.

ನಾರಾಜ (ನಾ) ಉ.= ಒಪ್ಪಿಗೆ ಇಲ್ಲದಿರುವಿಕೆ; ಇನ್ಕಾರ.

ನಾರಾಜಗಿ (ನಾ) ಉ. = ತಿರಸ್ಕಾರ; ಇನ್ಕಾರ.

ನಾರಾಜಾಗು (ಕ್ರಿ)= ತಿರಸ್ಕರಿಸು; ಇನ್ಕಾರ ಮಾಡು.

ನಾರಾಯಣ (ನಾ)= ಶ್ರೀವಿಷ್ಣು.

ನಾರಾಯಣ ಖೇಡ (ನಾ)= ಆಂಧ್ರದ ಒಂದು ತಾಲೂಕು ಮತ್ತು ತಾಲೂಕು ಕೇಂದ್ರದ ಊರು; ನಾಲಚೆರು ಎಂಬುದು ನಾರಾಯಣ ಖೇಡ ಆಗಿದೆ ಎಂಬ ಐತಿಹ್ಯವಿದೆ.

ನಾರಿ (ನಾ)= ಹೆಣ್ಣು; ಹೆಂಗಸು; ಮಹಿಳೆ; ಸ್ತ್ರೀ (ವಚನ:- ನಾರಿ ಸ್ವರ್ಗದ ದಾರಿ। ನಾರಿ ಸಕಲ ಹಿತಕಾರಿ। -ಸರ್ವಜ್ಞ).

ನಾರು (ನಾ)= ಸಣಬು ಅಥವಾ ಪುಂಡಿ ದಂಟಿನ ಮೇಲ್ಪದರಿನ ಯಟ್ಟೆ, ಜಟ್ಟೆ, ನಾರಿನ ಎಳೆ; ನಾರು ಎಂಬ ಹೆಸರುಳ್ಳ ನೀರಿನ ಮುಖಾಂತರ ಹರಡುವ ರೋಗ, ದಾರದೆಳೆಯಂಥ ಒಂದು ಕ್ರಿಮಿಯು ಮೈಯೊಳಗೆ ಸೇರಿ ಉಂಟಾಗುವ ಬೇನೆ (ಹಾಡು:- ಗೊರ್ನಳ್ಳಿ ಊರು। ನೀರು ಕೊಂಡ್ರ ಆಗೆವ ನಾರು।)

ನಾರು (ಕ್ರಿ)= ದುರ್ವಾಸನೆಯನ್ನು ಹರಡು; ದುರ್ನಾತ ಬೀರು.

ನಾರೇರು (ನಾ)= ನಾರಿಯರು; ಹೆಂಗಸರು; ಮಹಿಳೆಯರು.

ನಾರ್‍ಯಾಣ (ನಾ)= ನಾರಾಯಣ (ಗಾದೆ:- ನಾರ್‍ಯಾಣನ ಮಗ ಸೂರ್ಯಾ ಬಂದ ಮ್ಯಾಲ ಏಳೋರು).

ನಾಲತ್ತು (ನಾ)= ನಲವತ್ತು; ಎರಡಿಪ್ಪತ್ತು.

ನಾಲತ್ವಾಟ (ನಾ)= ನಲವತ್ತು ತೋಟಗಳು (ಎಣ್ಣೆ ಹಾಡು:- ಸುರಗಿಯಾ ಸುತ್ತಟ್ಗೆ। ಸಿರಿ ಬಾಗುಲ್ಗಿ ಬಿಸುಲ್ಬಂದೆ। ನಾಲತ್ವಾಟದ ಎಲಿ ಬಂದೆ। ಹರಹರ ನಮ್ಮಿವಗೆ ನೈಯೆಣ್ಣೆ).

ನಾಲಾ (ನಾ) ಉ.= ನಾಲೆ; ಜುಳು ಜುಳು ಹರಿವ ನಿಸರ್ಗದ ನೀರು; ಬಾಂಗು.

ನಾಲಾಯಕ್ (ನಾ) ಉ.= ಲಾಯಕ್ಕು ಅಲ್ಲದವನು; ಅಯೋಗ್ಯ (ಬೈಗುಳ)

ನಾಲಾ (ನಾ)= ಚರಂಡಿ, ಕೊಳಚೆ ನೀರಿನ ಕಾಲುವೆ.

ನಾಲಿಗಿ (ನಾ)= ನಾಲಗೆ; ನಾಲ್ಗಿ; ಜಿವ್ಹೆ (ಗಾದೆ:- ನಾಲಿಗಿ ಛಂದಿದ್ರ ನಾಡೆಲ್ಲ ಛಂದ).

ನಾಲು (ನಾ)= ಎತ್ತು ಅಥವಾ ಕುದುರೆಗಳ ಖುರಗಳಿಗೆ ಕೂಡಿಸುವ ಕಬ್ಬಿಣದ ಪಟ್ಟಿ.

ನಾಲೋರು (ನಾ)= ನಾಲ್ವರು; ನಾಲ್ಕು ಜನರು.

ನಾಲ್ಗಿ (ನಾ)= ನಾಲಿಗಿ (ನೋಡಿರಿ)

ನಾಲ್ಗಿ ಏಳು (ನು)= ಮಾತಾಡು; ಹೇಳು; ನುಡಿ.

ನಾಲ್ಗಿ ಕಿತ್ತೆ (ನು)= ಮಾತಾಡದಂತೆ ಮಾಡೆ (ಬೈಗುಳ)

ನಾಲ್ಗಿ ಕೆಡು (ನು)= ನಾಲಗೆಗೆ ಹುಣ್ಣಾಗು.

ನಾಲ್ಗಿ ಕೊಡ್ಡಾಗು (ನು)= ನಾಲಗೆ ಸ್ವಾದ ತಪ್ಪು, ರುಚಿ ಇಲ್ಲದಂತಾಗು.

ನಾಲ್ಗಿ ಬದ್ಲಾಸು (ನು)= ಕೊಟ್ಟ ಮಾತನ್ನು ನಡೆಸದಿರು; ವಚನ ಭ್ರಷ್ಟನಾಗು; ಮಾತು ಬದಲಾಯಿಸು.

ನಾಲ್ಗಿ ಬಿಗಿ ಹಿಡಿ (ನು)= ತೂಕ ತಪ್ಪಿ ಮಾತಾಡಬೇಡ; ಬಾಯಿ ಸಡಿಲು ಬಿಡಬೇಡ.

ನಾಲ್ಗಿ ಭೀಳು (ನು)= ಮಾತಾಡಲು ಬಾರದಂತಾಗು; ಉತ್ತರ ಇಲ್ಲದಂತಾಗು.

ನಾಲ್ಗಿರುಚಿ (ನಾ)= ನಾಲಗೆಯ ಸ್ವಾದ; ಬಾಯಿ ರುಚಿ.

ನಾಲ್ಗಿ ಸವರು (ನು)= ತೊದಲು ಮಾತ ನಾಡು; ಉತ್ತರ ಇಲ್ಲದಂತಾಗು; ನಿರುತ್ತರ ನಾಗು.

ನಾವದಗಿ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿ. ಕ್ರಾಂತಿಕಾರಿ, ಗಣಾಚಾರಿ ರೇವಪ್ಪಯ್ಯ ಶರಣರ ತೀರ್ಥಕ್ಷೇತ್ರ.

ನಾವಾರಿಷ (ನಾ) ಉ.= ಉತ್ತರಾಧಿಕಾರಿ ಇಲ್ಲದವನು(ಳು); ದಿಕ್ಕು ಇಲ್ಲದವನು(ಳು); ಅನಾಥ.

ನಾವು (ನಾ)= ನೌಕೆ; ದೋಣಿ; ಚಿಕ್ಕ ಹಡಗು; ಟೋಕ್ರಿ; ನಾನು ಎಂಭುದರ ಬಹುವಚನ.

ನಾವ್ದ (ನಾ)= ನಾಯಿಂದ; ನಾವುದ; ಹಡಪದ; ಕ್ಷೌರಿಕ (ಗಾದೆ:- ಅಗಸನ ಅಂಗೈದಾಗುಣಬೇಕು; ನಾವ್ದನ ಅಂಗಳ್ದಾಗುಣಬಾರ್ದು).

ನಾವ್ದಗೇರಿ (ನಾ)= ಸಾಹಿತಿ ಡಾ॥ ಜಗನ್ನಾಥ ಹೆಬ್ಬಾಳೆ ವಾಸಿಸುವ ಊರು.

ನಾವ್ಬೀ (ಅ)= ನಾವೂ; ನಾವುಕೂಡ; ನಾವುಬೀ.

ನಾಸ (ನಾ)= ಹಾಳು; ನಾಶ.

ನಾಸಾಗು (ಕ್ರಿ)= ಹಾಳಾಗು; ಕೆಟ್ಟು ಹೋಗು; ಕೆಲಸಕ್ಕೆ ಬಾರದಂತಾಗು.

ನಾಸಿ (ನಾ)= ನಸ್ಯ; ಮೂಗಿನಲ್ಲೇರಿಸುವ ತಂಬಾಕಿನ ಹುಡಿ (ಜಾನಪದ ಪ್ರಾಸ:- ಕುಡ್ಡ ಕುನಾಸಿ। ಮೂಗಿನಾಗ ನಾಸಿ॥).

ನಾಸಿಕಾಯಿ (ನಾ)= ನಸ್ಯದ ಡಬ್ಬಿ.

ನಾಸಿಗಾರ (ನಾ)= ನಾಸಿ ವ್ಯಾಪಾರಿ; ನಸ್ಯ ಮಾರಾಟಗಾರ. ಸಂಗಮೇಶ ನಾಸಿಗಾರ ಎಂಬ ಸಮಾಜ ಕಾರ್ಯಕರ್ತ.

ನಾಸೂರು (ನಾ) ಉ.= ಜಲ್ಲಡಿ ಹುಣ್ಣು; ಕ್ಯಾನ್ಸರ್.

ನಾಸ್ತಾ (ನಾ) ಹಿಂ.= ನ್ಯಾಯಾರಿ; ಅಲ್ಪೋಪಹಾರ.

ನಾಳ (ನಾ)= ನಾಳೆ; ಮರುದಿನ; ಇಂದಿನ ತರುವಾಯದ ದಿನ; (ಗಾದೆ:- ನಾಳಂದಾವ್ನ ಮನಿ ಹಾಳುಬೀಳು)

ನಾಳಾ ನಾಡ್ದ (ನಾ)= ನಾಳೆ ಇಲ್ಲವೆ ನಾಡಿದ್ದು.

ನಾಳಾವ್ನ (ಅ.)= ನಿನ್ನ ಆಳ್ದವ್ನ; ನಿನ್ನ ಒಡೆಯನ (ಬೈಗುಳ).

ನಾಳಿಗಿ (ಅ)= ನಾಳೆಗೆ; ಇಂದಿನ ತರುವಾಯದ ದಿನದಂದು.

ನಾಳ್ಕಿ (ನಾ)= ನಾಳಿಕೆ; ಲಾಳ್ಕಿ; ಲಾಳಿಕೆ.

ನಿಂಗ (ನಾ)= ಲಿಂಗ; ಇಷ್ಟಲಿಂಗ (ಹಾಡು:- ಗಂಡಾಹೆಂಡರ ಝಗಳ। ಘಂದಾ ತೀಡೀಧಂಗ। ನಿಂಗಕ್ಕ ನೀರು ಎರೆಧಾಂಗ॥) (ಅ)= ನಿನಗೆ.

ನಿಂಗದ್ಕಾಯಿ (ನಾ)= ಲಿಂಗ ಇಡುವ ಗುಂಡು ಗಡಿಗೆ; ಕರಡಿಗೆ.

ನಿಂಗನ್ಯೊದ್ಯಾ (ನಾ)= ಲಿಂಗಕ್ಕೆ ತೋರುವ ನೈವೇದ್ಯ; ತುತ್ತು; ತುತ್ತಿನಷ್ಟು.

ನಿಂಗವಂತ (ನಾ)= ಲಿಂಗವಂತ; ಲಿಂಗಾಯತ; ಕೊರಳಲ್ಲಿ ಲಿಂಗವನ್ನು ಧರಿಸಿದಾತ.

ನಿಂಗಾ (ನಾ)= ನಿಂಗ; ಲಿಂಗ; ಇಷ್ಟಲಿಂಗ; ಕೊರಳಲ್ಲಿಯ ಲಿಂಗ; ಸ್ಥಾವರಲಿಂಗ (ಅ) ನಿನಗ; ನಿನಗೂ; ನಿನಗಬೀ (ಗಾದೆ:- ನಿಂಗಾನಂಗಾ ಜಮಾಸಾಲ। ನಿಂಗ ಬಿಟ್ಟು ಕರ್ಮಾಸಾಲ).

ನಿಂಗಾಬೆಳಕೊ (ಕ್ರಿ)= ಲಿಂಗ ಪೂಜೆ ಮಾಡಿಕೊ; ಮಹಾಶಿವರಾತ್ರಿಯ ದಿನ ವಿಶೇಷ ಲಿಂಗಪೂಜೆಯನ್ನು ನೆರವೇರಿಸಿಕೊ.

ನಿಂಗಾಯತ (ನಾ)= ಲಿಂಗಾಯತ; ಲಿಂಗವಂತ; ಎದೆಯ ಮೇಲೆ ಇಷ್ಟಲಿಂಗ ಉಳ್ಳವ.

ನಿಂಗ್ವಾಗಾಗು (ಕ್ರಿ)= ಲಿಂಗೈಕ್ಯನಾಗು; ಶರೀರ ದಿಂದ ಜೀವ ಇಲ್ಲದಾಗು; ಶಿವೈಕ್ಯನಾಗು.

ನಿಂಗ್ದೀಕ್ಷಾ (ನಾ)= ಲಿಂಗದೀಕ್ಷೆ; ಗುರುವಿನಿಂದ ಲಿಂಗಧಾರಣ ಮಾಡಿಕೊಳ್ಳುವಿಕೆ ಮತ್ತು ಗುರೂಪದೇಶ ನೀಡುವಿಕೆ.

ನಿಂಗ್ಪೂಜಿ (ನಾ)= ಲಿಂಗಪೂಜೆ (ಹಾಡು:- ನಿಂಗಪೂಜಿಯಾಗುತಾದಣ್ಣ। ಯಾವಾಗ ನೋಡಲು। ನಿಂಗಪೂಜಿಯಾಗುತಾದಣ್ಣ।)

ನಿಂತನಾ (ಅ)= ನಿನ್ನತನಕ; ನಿನ್ನ ಹತ್ತಿರದ ವರೆಗೆ

ನಿಂತು ನಿಂತು (ದ್ವಿ)= ತಡೆತಡೆದು; ಮೆಲ್ಲ ಮೆಲ್ಲಗೆ.

ನಿಂತು ನೀರು ಕುಡಿದಿಲ್ಲ (ಮ)= ಒಂದು ಕ್ಷಣ ಕೂಡ ನಿಂತಿಲ್ಲ; ತಡೆಯಲಿಲ್ಲ; ತಕ್ಷಣವೇ.

ನಿಂಥನಾ (ಅ)= ನಿಂತನಾ (ನೋಡಿರಿ)

ನಿಂದಕ (ನಾ)= ನಿಂದೆಯಾಡುವವ.

ನಿಂದಾ (ನಾ)= ನಿಂದೆ; ಚಾಡಿ; ಪರರ ದೋಷದ ವಿವರಣೆ; ದೋಷವನ್ನು ಆಡಿ ಕೊಳ್ಳುವಿಕೆ; ತೆಗಳಿಕೆ.

ನಿಂದಿ (ನಾ)= ನಿದ್ದೆ; ನಿದ್ರೆ (ಬಾಲ ಭಾಷೆ)

ನಿಂದಿ ಮಾಡು (ಕ್ರಿ)= ನಿದ್ರೆ ಹೋಗು (ಬಾಲಭಾಷೆ)

ನಿಂದು (ಅ)= ನಿನ್ನದು; ನಿನಗೆ ಸಂಬಂಧಿಸಿದ್ದು.

ನಿಂದುರು (ಕ್ರಿ)= ನಿಂದಿರು; ನಿಲ್ಲು; ಹೆಜ್ಜೆ ಇಡಬೇಡ; ತಡೆ.

ನಿಂದುರ್ಕಿ (ನಾ)= ನಿಂದರಿಕೆ; ಬಂದು ನಿಲ್ಲುತ್ತಿರುವಂತೆಯೇ; ಬಂದ ತಕ್ಷಣ.

ನಿಂದುರ್ಕಿಲೆ (ಅ)= ಬಂದು ನಿಲ್ಲುತ್ತಲೆ; ಬರುತ್ತೆ.

ನಿಂದೇ (ಅ)= ನಿನ್ನದೇ; ನಿನಗೆ ಸಂಬಂಧಿಸಿದ್ದೇ.

ನಿಂದ್ರಾನಿಂದುರ್ಕಿ (ಅ)= ಬಂದು ನಿಲ್ಲುತ್ತಿರು ವಂತೆ; ಬಂದ ಕೂಡಲೆ; ಬರುತ್ತಿರು ವಂತೆಯೇ.

ನಿಂಬಿ (ನಾ)= ನಿಂಬೆ; ಲಿಂಬೆ; ಈಳೆ ಜಾತಿಗೆ ಸೇರಿದ ಕಾಯಿ ಮತ್ತು ಅದರ ಹಣ್ಣು (ಕೋಲಿನ ಹಾಡು:- ನಿಂಬಿಯಾ ಬನದವಳೇ ರಂಗ। ರಂಭಿನಾ ಒಬ್ಬವಳೇ ರಂಗ।).

ನಿಕಮ್ಮಾ (ಪ.)ಉ.= ಹೀನ; ಕೀಳು; ಕೀಳು ವಿಚಾರದ.

ನಿಕಾ (ನಾ)ಉ.= ನಿಕಾಹ; ಮುಸಲ್ಮಾನ ಪದ್ಧತಿ ಯಂತೆ ನಡೆಯುವ ವಿವಾಹ, ಮದುವೆ; ಶಾದಿ.

ನಿಕಾಲ್ (ನಾ)= ಮುಕ್ತಾಯ; ಮುಗಿಯುವಿಕೆ.

ನಿಕಾಲ್ ಮಾಡು (ಕ್ರಿ)= ಮುಕ್ತಾಯಗೊಳಿಸು; ಮುಗಿಸು; ಕೊಲ್ಲು (ಉದಾ:- ಉಂಡು ನಿಕಾಲ ಮಾಡು; ಕಡ್ದು ನಿಕಾಲ ಮಾಡು ಇತ್ಯಾದಿ)

ನಿಕ್ಕಾ (ವಿ.)= ಅಸ್ಲಿ; ಕಲಬೆರಕೆ ಇಲ್ಲದ (ಉದಾ:- ನಿಕ್ಕಾ ಹಾಲು; ನಿಕ್ಕಾ ತುಪ್ಪ ಇತ್ಯಾದಿ)

ನಿಕ್ಕಿ (ಅ)= ಖಂಡಿತವಾಗಿ; ನಿಶ್ಚಯವಾಗಿ.

ನಿಗರಾಣಿ (ನಾ)= ಮೇಲ್ವಿಚಾರಣೆ; ರೇಖದೇಖ; ಉಸ್ತುವಾರಿಕೆ.

ನಿಗರಾಣ್ಕಾರ (ನಾ)= ಮೇಲ್ವಿಚಾರಕ; ಉಸ್ತುವಾರಿ ವಹಿಸಿಕೊಂಡಾತ.

ನಿಗಾ (ನಾ)= ದೃಷ್ಟಿ; ನೋಟ; ಗಮನ; ಹೊಣೆ; ದಿಟ್ಟಿ.

ನಿಗಾ ಇಡು (ಕ್ರಿ)= ನೋಡುತ್ತಿರು; ಲಕ್ಷ್ಯವಿಡು; ಹೊಣೆ ಹೊರು.

ನಿಗಾಕ ಭೀಳು (ಕ್ರಿ)= ಕಾಣಿಸು; ಗೋಚರಿಸು.

ನಿಗಾ ಕಮ್ಮಾಗು (ಕ್ರಿ)= ದೃಷ್ಟಿ ಮಾಂದ್ಯ ಉಂಟಾಗು.

ನಿಗಾತಪ್ಪು (ಕ್ರಿ)= ದೃಷ್ಟಿ ತಪ್ಪು; ಕಾಣದಿರು.

ನಿಗಾದಾಗ ತಾ (ಕ್ರಿ)= ಲಕ್ಷ್ಯಕೊಡು.

ನಿಗಾ ಹಾಕು (ಕ್ರಿ)= ನೋಡು; ದೃಷ್ಟಿ ಹಾಯಿಸು.

ನಿಗಿನಿಗಿ (ದ್ವಿ)= ಅತ್ಯಂತ ಹೊಳೆಯುವ (ಕೆಂಡ)

ನಿಗುರಿಸು (ಕ್ರಿ)= ಸೆಟೆಯಿಸು; ನೇರಗೊಳಿಸು; ಉಬ್ಬಿಸು; ಬಿರುಸುಗೊಳಿಸು.

ನಿಗುರು (ಕ್ರಿ)= ಸೆಟೆ; ಬಿರುಸಾಗು; ಉಬ್ಬು.

ನಿಗುರ್ಸು (ಕ್ರಿ)= ನಿಗುರಿಸು (ನೋಡಿರಿ).

ನಿಚಿಂತ (ನಾ)= ನಿಶ್ಚಿಂತನಾದವನು(ಳು).

ನಿಚಿಂತಿ (ನಾ)= ನಿಶ್ಚಿಂತೆ; ಚಿಂತಾರಾಹಿತ್ಯ.

ನಿಚಿಂತಿ ಆಗು (ಕ್ರಿ)= ನಿಶ್ಚಿಂತನಾಗು.

ನಿಚ್ಚಾ (ಅ)= ನಿತ್ಯ; ಸದಾ; ನಿರಂತರ; ಸ್ಥಿರ (ಗಾದೆ:- ನಿಚ್ಚಾ ಬರಾನೆಂಟ ನುಚ್ಚಿನ ಸಮಾನ)

ನಿಚ್ಚುಕನಿಚ್ಚಾ (ಅ)= ಪ್ರತಿನಿತ್ಯ; ನಿತ್ಯಾನು ಕಾಲ.

ನಿಚ್ಚತ್ಲೆ (ವಿ.)= ನಿಸ್ಬತ್ಲೆ; ಬರಿ ಬತ್ತಲೆ; ಬತ್ತಲೆ

ನಿಚ್ಚಳ (ವಿ)= ಸ್ಪಷ್ಟವಾಗಿರುವುದು; ನಿರಾಳ ವಾಗಿರುವುದು.

ನಿಜಲಿಂಗ ಭದ್ರೇಶ್ವರ (ನಾ)= ಬೀದರ ಜಿಲ್ಲೆಯ ಒಬ್ಬ ಶರಣರು. ಹಿಂದು ಮುಸ್ಲಿಂ ಐಕ್ಯಮತ್ಯಕ್ಕಾಗಿ ದುಡಿದವರು. ನಿಡವಂಚಿ ಗ್ರಾಮದವರು.

ನಿಜಾ (ನಾ)= ನಿಜ; ಖರೆ; ಸತ್ಯ; ದಿಟ; ಇದ್ದಿದ್ದಂತೆ.

ನಿಜಾಮ (ನಾ) ಉ.= ಸ್ವಾತಂತ್ರ್ಯ ಪೂರ್ವದ ಹೈದರಾಬಾದ್ ರಾಜ್ಯದ ಅರಸು ಮನೆತನದ ಹೆಸರು; ನಿಜಾಮರಾಜ.

ನಿಜಾಮುಶಾಹಿ (ನಾ)= ನಿಜಾಮ ಮನೆತನ; ನಿಜಾಮ ಆಡಳಿತದ ನಿಜಾಮುಲ್‌ಮುಲ್ಕ್

ಆಸಫ್‌ಜಾ ಅವ್ವಲ್; ನಿಜಾಮ ಮನೆತನದ ಮೊದಲನೇ ಅರಸನ ಹೆಸರು.

ನಿಜಾಮುಲ್ಮುಲ್ಕ್ (ನಾ)= ನಿಜಾಮ ಮನೆತನದ ಮೊದಲ ಅರಸ.

ನಿಜಾಮಿಯಾ (ವಿ)= ನಿಜಾಮಗೆ ಸಂಬಂಧಿಸಿದ.

ನಿಟಾಕ (ಅ)= ನೇರವಾಗಿ; ನೆಟ್ಟಗೆ; ಡೊಂಕಿಲ್ಲದೆ.

ನಿಟ್ಟುಕ (ನಾ)= ನೆಟ್ಟಗೆ; ನೇರ; ಸೀದಾ

ನಿಟ್ಟಾಕ (ನಾ)= ಛಟಾಕಿಗಿಂತ ಸಣ್ಣದಾದ ಮಾಪು.

ನಿಟ್ಟೂರು (ನಾ)= ಬೀದರ ಜಿಲ್ಲೆಯಲ್ಲಿ ಎರಡು ನಿಟ್ಟೂರು ಇವೆ. ಒಂದು ಭಾಲ್ಕಿ ತಾಲೂಕಿನ ದೊಡ್ಡ ನಿಟ್ಟೂರು. ಇನ್ನೊಂದು ಔರಾದ ತಾಲೂಕಿನ ಸಣ್ಣ ನಿಟ್ಟೂರು. ಮಜಗೆಪ್ಪ ಮಹಾರಾಜರು ವಾಸಿಸಿದ ಊರು ದೊಡ್ಡ ನಿಟ್ಟೂರು.

ನಿಟ್ಟೆಲು (ನಾ)= ನಿಡಿದಾದ ಎಲುಬು; ನೆಟ್ಟಗಿನ ಎಲುಬು.

ನಿಟ್ಟೆಲುಮುರ್ದೆ(ನು)= ಎಲುವು ಬುಕಣಿ ಯಾಗುವಂತೆ ಹೊಡೆದೇನು (ಬೈಗುಳ).

ನಿಡವಂಚಿ (ನಾ)= ಬೀದರ ಜಿಲ್ಲೆಯ ಒಂದು ಹಳ್ಳಿ. ನಿಜಲಿಂಗಭದ್ರೇಶ್ವರ ಕವಿ ಹಾಗೂ ಶರಣನ ವಾಸದ ಊರು (ತತ್ವಪದ:- ನಿಡವಂಚಿ ಗ್ರಾಮದ ಪೋರಿ। ಅದು ಸೀರೆಂವ್ಗ ಸಿಂತರಿಸಿ ಬಂದಂಥ ನಾರಿ॥)

ನಿತುರ್ಸು (ಕ್ರಿ)= ನಿತ್ತರಿಸು; ಸಹಿಸು; ತಾಳಿ ಕೊಳ್ಳು; ನಿಭಾಯಿಸು; ದಾಟಿಸು.

ನಿತ್ಯ (ಅ)= ಪ್ರತಿದಿನ; ಪ್ರತಿದಿವಸ; ದಿನಾಲು.

ನಿತ್ಯಾನ್ಕಾಲ (ಅ)= ಪ್ರತಿನಿತ್ಯ; ದಿನಾಲು ತಪ್ಪದೆ.

ನಿತ್ರಾಣ (ನಾ)= ತ್ರಾಣಹೀನತೆ; ಶಕ್ತಿಹೀನತೆ; ದುರ್ಬಲತೆ; ಸಾವಿನ ಸಾಮೀಪ್ಯದ ಲಕ್ಷಣ.

ನಿದಾನ (ನಾ)= ನಿಧಾನ; ಸಾವಕಾಶ; ಮೆಲ್ಲಗೆ.

ನಿದ್ದಿ (ನಾ)= ನಿದ್ದೆ; ನಿದ್ರೆ; ಮಲಗುವಿಕೆ.

ನಿದ್ದಿಗಟ್ಟು (ಕ್ರಿ)= ನಿದ್ದೆ ಮಾಡದಿರು; ನಿದ್ದೆಗೆಡು.

ನಿದ್ದಿಗಣ್ಣು(ನಾ)= ನಿದ್ದೆ ಆವರಿಸಿದ ಕಣ್ಣು.

ನಿದ್ದಿಬಡಕ (ನಾ)= ಸದಾಕಾಲ ನಿದ್ದೆಗಾಗಿ ಹೆಣಗುವವನು(ಳು).

ನಿನ್ನ (ನಾ)= ನಿನ್ನೆ; ಇಂದಿನ ಹಿಂದಿನ ದಿನ;

ನಿನ್ನ (ಅ)= ನಿನ್ನದಾಗಿರುವ;

ನಿನ್ನಾಮನ್ನೆ (ಅ)= ನಿನ್ನೆ ಮೊನ್ನೆಯೆ

ನಿನ್ನಾಣಿ (ನಾ)= ನಿನ್ನಾಣೆ; ನಿನ್ನ ಪ್ರಮಾಣ.

ನಿಪುಣ (ನಾ)= ಜಾಣ; ಪ್ರವೀಣ; ಪಾರಂಗತ.

ನಿಪ್ಪಟನೀರು (ನಾ)= ನೀರಿನಂತೆ ತಿಳಿ ಯಾದದ್ದು; ನೀರು ಬೆರೆಸಲ್ಪಟ್ಟದ್ದು (ಉದಾ:- ಹಾಲು ನಿಪ್ಪಟ ನೀರು ಆಗ್ಯಾವ)

ನಿಬ್ಬು (ನಾ)= ಲೇಖಣಿಯ ಪತ್ತಿ; ಪೆನ್ನಿನ ಪತ್ತಿ.

ನಿಬ್ಬುರು (ಗು.)= ನಿಬ್ಬರ; ಬಿರುಸಾದದ್ದು; ದಪ್ಪ; ಕಠಿಣ; ಗಟ್ಟಿ.

ನಿಬ್ರ (ಗು)= ನಿಬ್ಬುರು (ನೋಡಿರಿ)

ನಿಭಾವಣಿ (ನಾ)= ನಿಭಾವಣೆ; ನಿಭಾಯಿ- ಸುವಿಕೆ; ನಿರ್ವಹಿಸುವಿಕೆ.

ನಿಭಾಸು (ಕ್ರಿ)= ನಿರ್ವಹಿಸು; ಸಂಭಾಳಿಸು.

ನಿಮಿತಿ (ನಾ)= ನಿಮಿತ್ತ; ನೆಪ; ಕಾರಣ; ಉದ್ದೇಶ; ನಿಮಿತ್ಯ; ಅಪವಾದ; ಆರೋಪ.

ನಿಮಿಷ (ನಾ)= ಮಿನಿಟು; ಅರವತ್ತು ಸೆಕೆಂಡುಗಳು.

ನಿಮ್ಮಾ (ನಾ)= ಅರ್ಧಭಾಗ; ೧/೨ ಭಾಗ.

ನಿಯತ್ತು (ನಾ)= ಮನಸ್ಸು, ಗುಣ (ಗಾದೆ:- ಹ್ಯಾಂಗ ನಿಯತ್ತ್ಹೋ ಹಾಂಗ ಬರ್ಕತ್ತು)

ನಿರಂಕಾರ (ನಾ)= ಅಹಂಕಾರ ರಹಿತನಾದವನು; ಬೇಮಳಖೇಡದ ನಿರ್ಹಂಕಾರ ಬಂಡಿಯೆಂಬ ಯುವ ಕಾರ್ಯಕರ್ತ ಮತ್ತು ಲೇಖಕ.

ನಿರಂಕಾರ ಕೂಡು (ಕ್ರಿ)= ಉಪವಾಸ ಆಚರಿಸು; ಅನ್ನ ನೀರು ತೊರೆ.

ನಿರಂಜನ (ನಾ)= ನಿರ್ಲಿಪ್ತ; ವಿರಕ್ತ; ಅಂಜನದ ಲೇಪ ಇಲ್ಲದವನು.

ನಿರಂಜನ (ನಾ)= ರಘುನಾಥ ಹಡಪದ ಎಂಬ ತತ್ತ್ವಪದಕಾರರ ಕಾವ್ಯನಾಮ; ವಿರಕ್ತ ಮಠಾಧೀಶರ ಉಪಾಧಿ.

ನಿರಾರ (ನಾ)= ನಿರಾಹಾರ; ಆಹಾರ ಸೇವಿಸದೇ ಇರುವಿಕೆ; ಉಪವಾಸ.

ನಿರಾರ ಇರು (ಕ್ರಿ)= ಆಹಾರ ತೊರೆ; ಉಪವಾಸಿರು.

ನಿರಾರ ಬಿಡು (ಕ್ರಿ)= ಉಪವಾಸ ತೊರೆ; ಆಹಾರ ಸೇವಿಸು; ಉಪವಾಸ ವ್ರತ ತ್ಯಜಿಸು.

ನಿರಾಸ (ನಾ)= ನಿರಾಶೆ.

ನಿರಾಳ (ನಾ)= ನಿರ್ಮಲವಾದವನು; ನಿಶ್ಚಿಂತವಾದವನು.

ನಿರುಂಬ್ಳ (ವಿ.)= ನಿಶ್ಚಿಂತನಾದ.

ನಿರುಂಬ್ಳಿ (ನಾ)= ನಿರುಮ್ಳಿ; ನಿಶ್ಚಿಂತತೆ; ನಿಚಿಂತಿ.

ನಿರುಮ್ಳಾಗು (ಕ್ರಿ)= ನಿಶ್ಚಿಂತನಾಗಿರು; ಸುಖವಾಗಿರು.

ನಿರುಮ್ಳಿ (ನಾ)= ನಿರುಂಬ್ಳಿ (ನೋಡಿರಿ)

ನಿರ್ಜೀವ (ಗು)= ಜೀವವಿಲ್ಲದ; ಶಕ್ತಿ ಗುಂದಿದ.

ನಿರ್ಜೀವಾಗು (ಕ್ರಿ)= ಸಾಯಲಣಿ ಆಗು; ಸಾಯು.

ನಿರ್ಣಾ(ನಾ)= ನಿಣ್ಣೆ ಎಂಬ ಊರಿನ ಹೆಸರು ಇತ್ತೀಚಿನ ವರ್ಷಗಳಲ್ಲಿ ನಿರ್ಣಾ ಎಂದು ಬದಲಾಗಿದೆ (ಕೆ.ಎಸ್. ಅಮೃತ ಎಂಬ ಸಾಹಿತಿಯ ಹುಟ್ಟೂರು).

ನಿರ್ಣ್ಯಾ (ನಾ)= ನಿರ್ಣಯ; ತೀರ್ಮಾನ; ನಿರ್ಧಾರ.

ನಿರ್ಣ್ಯಾ ಮಾಡು (ಕ್ರಿ)= ನಿರ್ಣಯಿಸು; ತೀರ್ಮಾನಿಸು.

ನಿರ್ಧಾರ (ನಾ)= ನಿಶ್ಚಯ; ತೀರ್ಮಾನ.

ನಿರ್ನಾಮ (ನಾ)= ಹೆಸರಿಲ್ಲದುದು; ನಾಶ; ಅಳಿವು.

ನಿರ್ನಾಮ ಮಾಡು (ಕ್ರಿ)= ಕೊಲ್ಲು; ಹೆಸರಿಲ್ಲದಂತೆ ಮಾಡು, ನಾಶಮಾಡು.

ನಿರ್ಬ್ಯೆಲು (ನಾ)= ಏನೂ ಇಲ್ಲದ ಅವಸ್ಥೆ; ನಿರ್ಬಯಲು, ಪರಮಾತ್ಮ.

ನಿರ್ಭಿಡ್ಯಾ (ಗು)= ನಿಸ್ಸಂಕೋಚ; ನಿರ್ದಾಕ್ಷಿಣ್ಯ; ಭಿಡೆ ಇಲ್ಲದ; ಹಂಗಿಲ್ಲದ.

ನಿರ್ಮಾಳ (ನಾ) = ನಿರ್ಮಳ; ಪರಿಶುದ್ಧ. (ಕಾಲಜ್ಞಾನ:- ನಿಮ್ಮ ವರ್ಮಾವ ಕೇಳ್ವಂಥ ವಸ್ತಾದ ಬರ್ತಾನ। ನಿರ್ಮಾಳಿರಬೇಕಣ್ಣ).

ನಿರ್ಲಜ್ಜ(ನಾ)= ನಾಚಿಕೆ ಇಲ್ಲದವನು(ಳು); ಲಜ್ಜೆ ಇಲ್ಲದವನು(ಳು):

ನಿರ್ವಾಹ (ನಾ)= ನಿವಾರಣೋಪಾಯ; ಬೇರೆಯ ದಾರಿ.

ನಿರ್ವಾಹಕ (ನಾ) ಸಂ.= ಕಂಡಕ್ಟರ್.

ನಿಲಿ (ನಾ)= ನಿರಿಗೆ; ನೀಲಿ.

ನಿಲುಕು (ಕ್ರಿ)= ಕೈಗೆ ಎಟಕು; ಕೈಗೆ ಸಿಕ್ಕು.

ನಿಲುಕುಸು (ಕ್ರಿ)= ನಿಲುಕುವಂತೆ ಮಾಡು; ಕೈಗೆ ಎಟಕುವಂತೆ ಮಾಡು.

ನಿಲ್ಗನ್ನಡಿ (ನಾ)= ನಿಲುವುಗನ್ನಡಿ; ಎದುರು ನಿಂತು ಇಡೀ ಶರೀರ ನೋಡಿಕೊಳ್ಳಲು ಸಾಧ್ಯ ವಾಗುವಂತಹ ಕನ್ನಡಿ.

ನಿಲ್ಗಿ (ನಾ)= ನಿರಿಗೆ; ಸೀರೆ ಅಥವಾ ಧೋತರದ ನಿರಿಗೆ, ಮಡಿಕೆ.

ನಿಲ್ಲು (ಕ್ರಿ)= ನಿಂದಿರು; ನಿಂತಿರು; ಚಲಿಸದಿರು; ನಡೆಯದಿರು; ಸ್ಥಿರವಾಗಿರು.

ನಿವದ್ಯಾ (ನಾ)= ನೈವೇದ್ಯ; ದೇವರಿಗಾಗಿ ಮೀಸಲಿಟ್ಟ ಎಡೆ.

ನಿವಾಂತ (ನಾ)= ಶಾಂತಿಯಿಂದ ಕೂಡಿರುವಿಕೆ; ನೆಮ್ಮದಿಯನ್ನು ಹೊಂದಿರುವಿಕೆ; ನಿಶ್ಚಿಂತವಾಗಿರುವಿಕೆ.

ನಿವಾಂತಾಗಿರು (ಕ್ರಿ)= ಶಾಂತಿಯಿಂದಿರು; ನೆಮ್ಮದಿಯಿಂದಿರು; ನಿಶ್ಚಿಂತನಾಗಿರು.

ನಿವಾಳಿ (ವಾ)= ದೃಷ್ಟಿ ತೆಗೆಯುವಿಕೆ; ದೃಷ್ಟಿ ದೋಷ ನಿವಾರಣೆಗಾಗಿ ಇಳಿಸಿ ಎಸೆವ ವಸ್ತು.

ನಿವಾಳಿ ಇಳಿಸು (ಕ್ರಿ)= ದಿಟ್ಟಿ ತೆಗೆ, ದೃಷ್ಟಿ ತೆಗೆ.

ನಿವಾಳಿ ತೆಗೆ (ಕ್ರಿ)= ನಿವಾಳಿ ಇಳಿಸು (ನೋಡಿರಿ).

ನಿವಾಳಿಸು (ಕ್ರಿ)= ನಿವಾಳಿ ಇಳಿಸು (ನೋಡಿರಿ).

ನಿವಾಳ್ಸು (ಕ್ರಿ)= ನಿವಾಳಿಸು, ನಿವಾಳಿತೆಗೆ; ದೃಷ್ಟಿ ಇಳಿಸು.

ನಿವುಚು (ಕ್ರಿ)= ಅಗಲ ಮಾಡು; ಅಗಲವಾಗು.

ನಿವ್ವಳ (ವಿ)= ವೆಚ್ಚ ಕಳೆದ ಬಳಿಕ ಉಳಿಯುವ; ಖರ್ಚು ಕಳೆದ ಉಳಿತಾಯವಾಗುವ.

ನಿಶಾ (ನಾ)= ನಶೆ; ಅಮಲು.

ನಿಶಾ ಏರು (ಕ್ರಿ)= ಅಮಲಏರು.

ನಿಶಾಣ (ನಾ)= ಗುರುತು; ಧ್ವಜ (ಹಾಡು:- ನಮ್ಮದು ಕ್ರಾಂತಿ ನಿಶಾಣ। ಸಹೋದರಾ। ನಮ್ಮದು ಕ್ರಾಂತಿ ನಿಶಾಣ ದೇವೇಂದ್ರ ಕಮಲ.)

ನಿಶಾನಾ (ನಾ) ಹಿಂ.= ಗುರಿ.

ನಿಶಾನಾ ಕಟ್ಟು (ಕ್ರಿ)= ಗುರಿಕಟ್ಟು.

ನಿಶಾನಿ (ನಾ)= ಗುರುತು; ಝೆಂಡಾ; ಚಿಹ್ನೆ; ಬಾವುಟ (ಭಜನೆ:- ಕಾವಿನಿಶಾನಿ ಕೈದೊಳಗಾ। ಸಿದ್ಧನ ಭಜನಿ ಮನದಾಗಾ॥).

ನಿಶ್ಚಯ (ನಾ)= ನೆಂಟಸ್ತನ; ನಂಟುತನ; ಸಂಬಂಧ ಹೊಂದಿಸುವಿಕೆ.

ನಿಶ್ಚಯ ಮಾಡು(ಕ್ರಿ)= ನೆಂಟಸ್ತನ ಘಟ್ಟಿಮಾಡು; ನಂಟುತನ ಕುದುರಿಸು.

ನಿಷ್ಟಿ (ನಾ)= ನಿಷ್ಠೆ; ಭಕ್ತಿ; ನಂಬಿಕೆ.

ನಿಸ್ತಾ (ನಾ)ಮ.= ಕೇವಲ; ಸಿರಿಪ್.

ನಿಸ್ಪಾಪ (ವಿ)= ಪಾಪ ಮಾಡದ.

ನಿಷ್ಫಿ (ನಾ)= ಅರ್ಧ; ತಲಾಗರ್ಧ.

ನಿಸ್ಬತ್ತು (ನಾ)= ಕಾರಣ.

ನಿಸ್ಬತ್ಲೆ (ನಾ)= ಸಂಪೂರ್ಣ ಬತ್ತಲೆ; ದಿಗಂಬರ.

ನಿಸ್ಬಿ (ನಾ)= ಅರ್ಧ ಪಾಲು.

ನೀ (ಸ.)= ನೀನು.

ನೀಗು (ಕ್ರಿ)= ಕಳೆ; ನಿವಾರಿಸು; ತ್ಯಜಿಸು; ಪರಿಹರಿಸಿಕೊ; ಮುಕ್ತನಾಗು.

ನೀಚ (ವಿ) ಸಂ= ತುಂಟ; ಹರಾಮ; ಕೀಳಾದುದು; ದುಷ್ಟತನದಿಂದ ಕೂಡಿದ್ದು.

ನೀಚಗುಣ (ನಾ)= ತುಂಟತನ; ಕೀಳುತನ; ದುಷ್ಟತನ.

ನೀಟ (ನಾ)ಮ.= ನೆಟ್ಟಗೆ; ಖಡಿ; ನೇರ; ಉದ್ದ.

ನೀಡು (ಕ್ರಿ)= ಬಡಿಸು; ಎಡೆಮಾಡು; ಎಡೆಹಚ್ಚು.

ನೀಡ್ಕಿ (ನಾ)= ನೀರಡಕೆ; ಬಾಯಾರಿಕೆ.

ನೀಡ್ಕಿಸಾವಾಗು (ಕ್ರಿ)= ಅತಿನೀರಡಿಕೆ-ಯಾಗು.

ನೀಡ್ಸು (ಕ್ರಿ)= ನೀರಡಿಸು; ನೀಡಿಸು; ಊಟ ಕೊಡಿಸು.

ನೀತಿ (ನಾ) ಸಂ= ಒಳ್ಳೆಯ ನಡತೆ; ಧರ್ಮಪರ ವಾದದ್ದು; ನ್ಯಾಯಯುತವಾದದ್ದು.

ನೀತಿನೇಯಾ (ನಾ)= ಸಮಾಜದ ರೀತಿ ನೀತಿ; ರೂಢಿ.

ನೀದಾರು= ನೀನಾರು; ನೀಯಾರು (ಹಾಡು:- ನೀದಾರು ನನಗೆ। ನಾದಾರು ನಿನಗೆ। -ಮಾಣಿಕ ಪ್ರಭು ಮಹಾರಾಜರು)

ನೀನಾ ನಾನೀ (ನು)= ಕಚ್ಚಾಟ; ಜಗಳ; ಹೊಡೆದಾಟ.

ನೀರಾ (ನಾ)= ತಾಳೆ ಅಥವ ಈಚಲು ಮರದಿಂದ ತೆಗೆದ ಹುಳಿಗೊಳ್ಳದ ರಸ.

ನೀರಾಗು (ಕ್ರಿ)= ಕರಗು; ಮರುಕ ಪಡು; ಕನಿಕರದೋರು.

ನೀರಾಟ (ನಾ)= ನೀರಲ್ಲಿ ಆಡುವಾಟ; ಜಲ ಕ್ರೀಡೆ.

ನೀರಾಡು (ಕ್ರಿ)= ಹೊಲವೆಲ್ಲ ನೀರು ಹರಡು; ನೀರುಣ್ಣು; ನೀರುಕುಡಿ.

ನೀರಿನ ನೆಲಿ (ನಾ)= ನೀರಿನ ಆಳ ಮತ್ತು ಅಂತ (ಗಾದೆ:- ನೀರಿನ್ನೆಲಿ ಹೆಣ್ಣಿನ್ನೆಲಿ ಯಾರಿಗ್ಬೀ ತಿಳ್ದಿಲ್ಲ).

ನೀರಿಳುಸು (ಕ್ರಿ)= ಸೊಕ್ಕಡಗಿಸು.

ನೀರು (ನಾ)= ಜಲ; ಉದಕ.

ನೀರುಡ್ಕಿ (ನಾ)= ನೀರಡಿಕೆ; ಬಾಯಾರಿಕೆ.

ನೀರು ತೋರಿಸು (ಕ್ರಿ)= (ದನಗಳಿಗೆ) ನೀರು ಕುಡಿಸು; ಬಾವಿ ತೋಡಲು ನೀರಿರುವ ಜಾಗ ತೋರು.

ನೀರು ಘುಂಬಾ ಧಿನಾ (ನು)= ನೀರು ತುಂಬುವ ದಿನ; ದೀಪಾವಳಿ ಚತುರ್ದಶಿಯ ಮುನ್ನಾ ದಿನ.

ನೀರು ಮುಟ್ಟು (ಕ್ರಿ)= ಗುದ ಪ್ರಕ್ಷಾಲನ ಮಾಡಿಕೊ.

ನೀರು ಹಾವು (ನಾ)= ನೀರಲ್ಲಿ ವಾಸಿಸುವ ವಿಷಕಾರಿಯಲ್ಲದ ಹಾವು.

ನೀರು ಹೊಯ್ಕೊ (ಕ್ರಿ)= ಮುಟ್ಟಾಗು; ರಜಸ್ವಲೆಯಾಗು; ಗರ್ಭಧಾರಣ ಮಾಡು.

ನೀರೂಡು (ಕ್ರಿ)= ಹೊಲದಲ್ಲಿಯ ಬೆಳೆಗಳ ಮಡಿಗಳಿಗೆ ನೀರು ಕುಡಿಸು.

ನೀರೆರಿ (ಕ್ರಿ)= ನೀರೆರೆ; ನೀರು ಕುಡಿಸು; ಹೊಲಕ್ಕೆ ನೀರೂಡು (ವಚನ:- ಬುಡಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತು ನೋಡಾ).

ನೀರ್ಕುಡ್ಸು (ಕ್ರಿ)= ಚಿನ್ನಕ್ಕೆ ಪುಟ ಕೊಡು, ನೀರು ಕುಡಿಸು.

ನೀರ್ಗುದ್ದಲಿ (ನಾ)= ಹೊಲಕ್ಕೆ ನೀರೂಡಲು ಬಳಸುವ ಗುದ್ದಲಿ.

ನೀರ್ಪಾಲಾ (ನಾ)= ನೀರಿನಲ್ಲಿ ಮುಳುಗುವಿಕೆ.

ನೀರ್ಪಾಲಾಗು (ಕ್ರಿ)= ನೀರು ಪಾಲಾಗು; ನೀರಿನಲ್ಲಿ ಮುಳುಗು; ನೀರಿನಲ್ಲಿ ಕೊಚ್ಚಿಕೊಂಡು ಹೋಗು.

ನೀರ್ಹೂಡು (ಕ್ರಿ)= ಹೊಲದ ಮಡಿಗಳಿಗೆ ನೀರೂಡು.

ನೀರ್ಹೊಯ್ಕೊ (ಕ್ರಿ)= ಮುಟ್ಟಾದ ಮೇಲೆ ತಲೆಸ್ನಾನ ಮಾಡು; ಗರ್ಭಿಣಿಯಾಗು.

ನೀರ್ಹೊಯ್ಕೊಂಡಾಳ (ಕ್ರಿ)= ಮುಟ್ಟಾಗಿದ್ದಾಳೆ; ಗರ್ಭಿಣಿಯಾಗಿದ್ದಾಳೆ.

ನೀಲಂನಳ್ಳಿ (ನಾ)= ಭಾಲ್ಕಿ ತಾಲೂಕಿನ ಒಂದು ಊರಿನ ಹೆಸರು. ಅನ್ಯ ಭಾಷಿಕರು ಅದಕ್ಕೆ ನಿರ್ಮನಳ್ಳಿ ಎಂದು ಕರೆಯುತ್ತಾರೆ. (ಹಂತಿ ಹಾಡು: ಹಾಲಳ್ಳಿ ಬ್ಯಾಲಳ್ಳಿ। ನಡುವ ನೀಲಮನಳ್ಳಿ। ತೆಗ್ಗಿನಾಗಾದಾ ಮೈಲಾರ ಮಲ್ಲಯ್ಯ। ಹುಬ್ಬಿನಾಗಾದ ಸಿರಿಗಂಧ॥)

ನೀಲಕಾಯಿ (ನಾ)= ನೀಲಿ ಬಣ್ಣದ ಕಾಯಿ ಕೊಡುವ ನೇರಲೆ ಗಿಡ ಮತ್ತು ಅದರ ಹಣ್ಣು.

ನೀಲಗಾರ (ನಾ)= ಬಟ್ಟೆಗೆ ನೀಲಿ ಬಣ್ಣ ಹಾಕುವವನು; ಬಣ್ಣಗಾರ; ವೃತ್ತಿಗಾಯಕ ತಂಡದವನು; ನೀಲ ಹಣ್ಣು ಮಾರುವವನು. (ನಾವದಗಿಯ ಪೂಜ್ಯ ರೇವಪ್ಪಯ್ಯ ಸ್ವಾಮಿಗಳ ಶಿಷ್ಯ ನೀಲಗಾರ ಚಿಂತಪ್ಪನ ಕಥೆ)

ನೀಲಗಿರಿ ಎಣ್ಣೆ (ನಾ)= ನೀಲಗಿರಿಯೆಂಬ ಮರದ ಎಲೆಗಳಿಂದ ತೆಗೆಯಲಾದ ಎಣ್ಣೆ; ತಲೆ ನೋವಿಗೆ ಪರಿಹಾರವಾಗಿ ಬಳಸುವ ಎಣ್ಣೆ.

ನೀಲಮ್ಮ (ನಾ)= ಕಲ್ಯಾಣದ ಬಸವಣ್ಣನ ಹೆಂಡತಿ; ಒಬ್ಬ ವಚನಕಾರ್ತಿ. (ಕುಟ್ಟುವ ಹಾಡು:- ನಮ್ಮಪ್ಪಾ ಬಸವಣ್ಣ। ನಮ್ಮವ್ವಾ ನೀಲಮ್ಮ। ನಮ್ಮ ಬಳಗ ಶಿವಶರಣರೆ। ಬಸವಣ್ಣನವ್ವ-ಶರಣ ಕವಿ ಮಹಾಗಾಂವ)

ನೀಲಿ (ನಾ)= ನೀಲ ವರ್ಣ; ಅತಿ ಕಂದು ಬಣ್ಣ; ಸೀರೆ ಅಥವಾ ಧೋತರದ ನಿರಿಗೆ; ಮಡಿಕೆ; ಪದರು.

ನೀಲಿಹೊತ್ಗಿ (ನಾ)= ನೀಲಿ ಬಟ್ಟೆ ಸುತ್ತಿ ದೇವರ ಜಗಲಿ ಮೇಲಿಟ್ಟು ಪೂಜಿಸುವ ಹೊತ್ತಗೆ.

ನೀಲ್ಗಾರ (ನಾ)= ನೀಲಗಾರ (ನೋಡಿರಿ).

ನೀಲ್ಚುಕ್ಕಿ (ನಾ)= ನೀಲಿ ಬಣ್ಣದ ಚುಕ್ಕಿ (ಸೀಗಿ ಹಾಡು: ಹಾಲ್ಚುಕ್ಕಿ ನೀಲ್ಚುಕ್ಕಿ। ಹೂವ ತಂದಿದಾ। ಗವರಮ್ಮ। ಹುಣ್ಣಿ ಮಾಡಿ ಖಳ ಕೊಟ್ಟಿದ॥)

ನೀಳಿ (ನಾ)= ನೀಲಿ; ನೀಲಿ ಬಣ್ಣ; ಬಿಳಿ ಬಟ್ಟೆಗೆ ಹಾಕುವ ನೀಲಿ ಬಣ್ಣ.

ನುಂಗಣ್ಣ (ನಾ)= ಮೋಸಗಾರ; ಕಬಳಿಸುವವನು; ವಂಚಕ.

ನುಂಗಪ್ಪ (ನಾ)= ನುಂಗಣ್ಣ (ನೋಡಿರಿ)

ನುಂಗಿ ಬಿಡು (ಕ್ರಿ)= ಬಾಯಿಯಿಂದ ಗಂಟಲಿಗೆ ಜಾರಿಸು; ಕಬಳಿಸು.

ನುಂಗು (ಕ್ರಿ)= ಆಹಾರ, ಕುಡಿಯುವ ವಸ್ತು ಇತ್ಯಾದಿಯನ್ನು ಬಾಯಿಯಿಂದ ಗಂಟಲಿಗೆ ಜಾರಿಸು; ಕಬಳಿಸು; ತಿನ್ನು; ಸೇವಿಸು; ಮೆಲಿಯದೆ ಸೇವಿಸು.

ನುಂಗುಸು (ಕ್ರಿ)= ನುಂಗಿಸು; ನುಂಗುವಂತೆ ಮಾಡು.

ನುಂಗ್ದ (ಕ್ರಿ)= ನುಂಗಿದ; ಕಬಳಿಸಿದ (ಭೂತಕಾಲ).

ನುಕ್ಸಾನ (ನಾ) ಹಿಂ= ಲುಕ್ಸಾನೆ; ಹಾನಿ; ನಷ್ಟ.

ನುಕ್ಸಾನಾಗು (ಕ್ರಿ)= ಹಾನಿಯಾಗು; ನಷ್ಟವಾಗು; ಹಾಳಾಗು.

ನುಕ್ಸ (ನಾ) ಉ= ಕೊರತೆ; ದೋಷ; ಕುಂದು.

ನುಗ್ಗಿ (ನಾ)= ಬಳ್ಳಿ ಜಾತಿಯ ಸಸ್ಯ ಮತ್ತು ಅದರ ಮುಳ್ಳು; ಒಂದು ಬಗೆಯ ತರಕಾರಿ ಸೊಪ್ಪು ಹಾಗೂ ಕಾಯಿಯ ಗಿಡ.

ನುಗ್ಗು (ನಾ)= ಪುಡಿ; ಹುಡಿ; ಚೂರುಚೂರು.

ನುಗ್ಗು ಮಾಡು (ಕ್ರಿ)= ಪುಡಿ ಮಾಡು; ಹುಡಿಗೊಳಿಸು; ಚೂರು ಚೂರು ಮಾಡು.

ನುಗ್ಗು ನುಗ್ಗು ಮಾಡು (ಕ್ರಿ)= ಚೂರು ಚೂರುಗೊಳಿಸು.

ನುಚ್ಚು (ನಾ)= ದಪ್ಪದಪ್ಪವಾಗಿ ಬೀಸಿದ ಹಿಟ್ಟು; ರವೆ; ಹುಳಿ ನುಚ್ಚು, ಇಲ್ಲವೆ ಸಪ್ಪಗಿನ ನುಚ್ಚು; ಝುರಿನುಚ್ಚು; ಸಪ್ಪನ್ನುಚ್ಚು ಇತ್ಯಾದಿ

ನುಚ್ಚುನೂರು ಮಾಡು (ಕ್ರಿ)= ಚಚ್ಚು; ಚಿದಿಗುಟ್ಟು; ಸಣ್ಣ ಸಣ್ಣ ಚೂರು ಮಾಡು; ಚೂರ್ಚೂರ ಮಾಡು; ನಾಶ ಮಾಡು.

ನುಚ್ಚೊಡಿ (ಕ್ರಿ)= ಕಾಳು ಬೀಸಿ ರವೆ ಮಾಡು.

ನುಚ್ಚಿನ ಪುಂಡಿ ಪಲ್ಯಾ (ನಾ)= ನುಚ್ಚು ಬೆರೆಸಿ ಮಾಡಿದ ಪುಂಡಿ ಪಲ್ಲೆ.

ನುಚ್ನುಚ್ಚು (ದ್ವಿ)= ದಪ್ಪಗಿನ ಹಿಟ್ಟು; ದಪ್ಪ ದಪ್ಪ.

ನುಡಿ (ನಾ)= ಹಾಡಿನ ಚರಣ; ಹಾಡಿನ ಭಾಗ; ವಚನ; ಮಾತು; ಭಾಷೆ; ಪ್ರತಿಜ್ಞೆ (ಭಜನೆ:- ನುಡಿ ನುಡಿ ನುಡಿ ನುಡಿ। ನುಡಿಯಂತೆ ನೀ ನಡಿನಡಿ).

ನುಡಿ (ಕ್ರಿ)= ಮಾತಾಡು; ವಚನ ಕೊಡು; ಹೇಳು; ಉಚ್ಚರಿಸು. (ಗಾದೆ:- ನುಡಿದಂತೆ ನಡಿ; ಇದೇ ಜನ್ಮ ಕಡಿ).

ನುಡಿ ಕೇಳು (ಕ್ರಿ)= ಮಾತು ಕೇಳು; ಹಾಡು ಕೇಳು; ಹಾಡಿನ ಭಾಗ ಕೇಳು.

ನುಡಿ ತಪ್ಪು (ನಾ)= ಮಾತು ತಪ್ಪು; ವಚನ ಭ್ರಷ್ಟನಾಗು; ಹಾಡಿನ ಸಾಲು ತಪ್ಪು.

ನುಡುಸು (ಕ್ರಿ)= ನುಡಿಸು; ಮಾತಾಡಿಸು; ಹೇಳಿಸು; ವೀಣೆಯ ತಂತಿಯನ್ನು ಮೀಟು; ಕೊಳಲು ಬಾರಿಸು; ಹಾರ್ಮೋನಿಯಂ ಬಾರಿಸು.

ನುಣುಪಾಗು (ಕ್ರಿ)= ನುಣ್ಣಗಾಗು; ಒರಟುತನ ಇಲ್ಲವಾಗು.

ನುಣುಪು (ನಾ)= ನಯವಾದದ್ದು; ಒರಟಿಲ್ಲದುದು; ಸಾಪು.

ನುಣ್ಣಾಗಿ (ಅ)= ನಯವಾಗಿ; ನಾಜೂಕಾಗಿ; ನುಣುಪಾಗಿ (ತ್ರಿಪದಿ:- ನುಣ್ಣಾಗಿ ಹೋಗುವುದು। ಸಣ್ಣಾಗಿ ಬರುವುದು। ಕಣ್ಣಿದ್ದ ಮಗನ ತರುವುದು। -ಸರ್ವಜ್ಞ)

ನುಣ್ಣುಗ (ಅ)= ನುಣ್ಣಗೆ; ನಯವಾದ; ನುಣುಪಾದ.

ನುಣ್ಣುಗಾಗು (ಕ್ರಿ)= ನುಣ್ಣಗೆ ಕಾಣುವಂತಾಗು; ಮೈತುಂಬಿಕೊ; ಆರೋಗ್ಯವಂತನಾಗು; ಸಾಪಾಗು; ನಯವಾಗು.

ನುಮಾಯಸ್ (ನಾ)ಉ.= ವಸ್ತು ಪ್ರದರ್ಶನ.

ನುರಿ (ಕ್ರಿ)= ತರಬೇತಿ ಹೊಂದು; ನುಗ್ಗಾಗು; ಪುಡಿ ಪುಡಿಯಾಗು; ಹುಡಿಯಾಗು.

ನುರಿತ (ಕ್ರಿ)= ತರಬೇತಿ ಹೊಂದಿದ.

ನುರಿ ಮಾಡು (ಕ್ರಿ)= ಪುಡಿ ಪುಡಿ ಮಾಡು; ಸಣ್ಣಗೆ ಮಾಡು; ಥಳಿಸು; ಹೊಡೆ.

ನುರಿಯಾಗಿ (ಅ)= ಸಣ್ಣಾಗಿ; ಒತ್ತೊತ್ತಿ.

ನುರಿಯಾಗಿ ಹಿಂಡು (ಕ್ರಿ)= ಒತ್ತಿ ಹಿಂಡಿ ಒದ್ದೆಬಟ್ಟೆಯೊಳಗಿನ ನೀರು ತೆಗೆ; ಚೆನ್ನಾಗಿ ಹಿಂಡು.

ನುರುಗು (ನಾ)= ಬೇಳೆ ಕಾಳು, ಪುಂಡಿ, ಕುಸುಬೆ, ಸೇಂಗಾ, ಹುರುಳಿ ಇತ್ಯಾದಿಗಳನ್ನು ಬೆರೆಸಿ, ಬೀಸಿ ತಯಾರಿಸಿದ ದನಗಳ ಆಹಾರ.

ನುರುಸು (ಕ್ರಿ)= ತರಬೇತಿ ನೀಡು; ಸಣ್ಣಗೊಳಿಸು; ಪಳಗಿಸು; ಮನನವಾಗುವಂತೆ ಮಾಡು; ಪುಡಿಗೊಳಿಸು.

ನುಲಿ (ನಾ)= ಮದಿಹುಲ್ಲು, ಸಣಬಿನ ಇಲ್ಲವೆ ಪುಂಡಿ ನಾರು ಹೊಸೆದು ತಯಾರಿಸಿದ ಹೊರಸಿನ ಹೆಣಿಕೆಯ ಹುರಿ.

ನುಲಿಕೆ (ನಾ)= ನುಲಿ (ನೋಡಿರಿ).

ನುಲಿ ಚಂದಯ್ಯ(ನಾ)= ನುಲಿಕೆ ಹೊಸೆವ ಕಾಯಕದ ಒಬ್ಬ ಶಿವಶರಣ. ಕಾಯಕ ತಪ್ಪಿಸಿದ ಲಿಂಗಯ್ಯನಿಗೆ ದುಡಸಿದ ಶರಣ.

ನುಸಿ (ನಾ)= ಧಾನ್ಯಗಳನ್ನು ಹಾಳು ಮಾಡುವ ಒಂದು ಬಗೆಯ ಹುಳು.

ನುಸಿ ಹತ್ತು (ಕ್ರಿ)= ಧಾನ್ಯದಲ್ಲಿ ಹುಳು ವುಂಟಾಗು; ಕಾಳಿನಲ್ಲಿ ಹುಳು ಉಂಟಾಗಿ ಕೊರೆ.

ನುಸ್ಕಾ (ನಾ)= ಮದ್ದು; ಔಷಧಿ

ನುಸ್ತಾ ()= ನುಸ್ತ; ಕೇವಲ; ನಿಸ್ತಾ; ಸಿರ್ಫ್.

ನೂಕಪ್ಪ (ನಾ)= ನೂಕುವವನು; ಮೋಸಗಾರ.

ನೂಕಾ (ನಾ)= ನೂಕಪ್ಪ; ನೂಕುವವನು (ಗಾದೆ:- ಕಾಕಾ ಭಾಯ್ದಾಗನೂಕಾ)

ನೂಕಾಟ (ನಾ)= ನೂಕುವಿಕೆ; ತಳ್ಳುವಿಕೆ; ದಬ್ಬುವಿಕೆ.

ನೂಕು (ಕ್ರಿ)= ದಬ್ಬು; ತಳ್ಳು; ಹೊಡಿ; ಬಡಿ; ಒತ್ತು; ಕೆಡಹು; ದೂರ ಸರಿಸು.

ನೂಕ್ಯಾಕು (ಕ್ರಿ)= ನೂಕಿ ಹಾಕು; ನೂಕಿ ಬಿಡು; ತಳ್ಳಿ ಬಿಡು; ಕೊಲ್ಲಿ ಬಿಡು.

ನೂತಿದ್ದೆಲ್ಲಾ ಹಂಜಿ (ನು)= ಮಾಡಿದ್ದೆಲ್ಲಾ ಹಾಳು ಬೀಳು.

ನೂತ್ನ (ನಾ)= ನೂತನ; ಹೊಸತನದಿಂದ ಕೂಡಿದ್ದು, ನಾಜೂಕು ನೆಯ್ಗೆವುಳ್ಳದ್ದು.

ನೂರಖಾಂ ತಾಲೀಂ (ನಾ)= ಬೀದರ ನಗರದ ಒಂದು ಓಣಿ.

ನೂರಾರು (ನಾ)= ನೂರರ ಮೇಲೆ ಆರರ ಸಂಖ್ಯೆ; ಅನೇಕ; ಬಹಳ.

ನೂರಿ (ನಾ)= ಮಹಿಳೆಯರ ಒಂದು ಪ್ರಕಾರದ ಉಡುಗೆ.

ನೂರು (ನಾ)= ಒಂದು ಸಂಖ್ಯೆ; ಶತಕ; ಶಂಭರ; ನೂರಾ ಒಂದರ ಹಿಂದಿನ ಸಂಖ್ಯೆ; ಐದಿಪ್ಪತ್ತು.

ನೂರೆಂಟು (ನಾ)= ಒಂದು ಸಂಖ್ಯೆ; ನೂರರ ಮೇಲೆ ಎಂಟರ ಸಂಖ್ಯೆ;

ನೂರೆಂಟು ನಾಮಾವಳಿ (ನಾ)= ಒಂದೇ ದೇವರ ನೂರಾ ಎಂಟು ನಾಮಗಳ ಪಟ್ಟಿ; ಹರ ನಾಮಾವಳಿ, ಶಕ್ತಿ ನಾಮಾವಳಿ ಇತ್ಯಾದಿ.

ನೂರೊಂದು (ನಾ)= ಒಂದು ಸಂಖ್ಯೆ; ನೂರರ ಮೇಲೆ ಒಂದು.

ನೂರೊಂದು ಬಾನ (ನಾ)= ನೂರೊಂದು ಜಂಗಮರಿಗೆ ಅನ್ನ ಸಂತರ್ಪಣೆ.

ನೂರೊಂದ್ಯಾ (ನಾ)= ಹೀನಗುಣದವ (ಬೈಗುಳ).

ನೂಲಾಸು (ನಾ)= ಜೇಡಹೆಣೆದ ಬಲೆ; ಜೇಡನ ಮನೆ.

ನೂಲು (ನಾ)= ಸೂತ್ರ; ಎಳೆ; ದಾರ; ಹತ್ತಿಯ ದಾರ; ಕುರಿಯ ಉಣ್ಣೆಯ ದಾರ.

ನೂಲು (ಕ್ರಿ)= ರಾಟಿ ತಿರುವಿ, ಹಂಜಿ ಹೊಸೆದು, ದಾರವನ್ನು ತಯಾರಿಸು; ತಕಲಿಯಿಂದ ಹಂಜಿ ಹೊಸೆದು ದಾರ ತಯಾರಿಸು (ಉದಾ:- ನೂಲಲ್ಯಾಕೆ ಚೆನ್ನಿ ನೂಲಲ್ಯಾಕೆ ಚೆನ್ನಿ। ರಾಟಿ ಇಲ್ಲೊ ಜಾಣಾ ರಾಟಿ ಇಲ್ಲೊ ಜಾಣ॥).

ನೂಲು ತೆಗೆ (ಕ್ರಿ)= ಹಂಜಿಯಿಂದ ದಾರವನ್ನು ಹೊಸೆ; ಚರಕ ಅಥವಾ ತಕಲಿಯ ಸಹಾಯದಿಂದ ಹಂಜಿ ಬಳಸಿ ದಾರ ಹೊಸೆ.

ನೂಲು ಹುಣ್ಣಿ (ನಾ)= ನೂಲು ಹುಣ್ಣಿವೆ; ರಾಖೀ ಪೌರ್ಣಿಮೆ; ರಕ್ಷಾಬಂಧನ; ಶ್ರಾವಣ ಮಾಸದ ಹುಣ್ಣೀಮೆ.

ನೂಲೆಳಿ (ನಾ)= ಹತ್ತಿಯಿಂದ ಹೊಸೆದ ದಾರ; ನೂಲಿನ ಎಳೆ.

ನೆಂಕಿ (ನಾ)= ಲೆಂಕಿ; ವಟಾಣೆಯಂಥ ಬಳ್ಳಿ ಹಾಗೂ ಅದರಕಾಯಿ.

ನೆಂಕಿಟ್ಟು (ನಾ)= ಲೆಂಕಿಯ ಹಿಟ್ಟು; ಪಿಟ್ಲಾ; ಕಡಲೆಹಿಟ್ಟಿನ ಪಲ್ಲೆ.

ನೆಂಟ (ನಾ)= ಬಂಧು ಬಳಗದ ಸಂಬಂಧಿಕ (ಗಾದೆ:- ನೆಂಟಾದ್ರ ಉಂಡ್ಹೋಗು; ಲೆಕ್ಕದ ಬಂದಿದು ಕೊಟ್ಟು ಹೋಗು); ಹೆಣ್ಣು ಕೊಟ್ಟವನು ಇಲ್ಲವೆ ಪಡೆದವನು; ಬೀಗ.

ನೆಂಟತಿ (ನಾ)= ಬಂಧು ಬಳಗದ ಸಂಬಂಧಿಕ ಮಹಿಳೆ. ಬೀಗತಿ; ಹೆಣ್ಣು ಕೊಟ್ಟವಳು; ಹೆಣ್ಣು ಒಯ್ದವಳು.

ನೆಂಟುಸ್ತಾನ (ನಾ)= ನೆಂಟಸ್ತನ; ನೆಂಟಸ್ತಿಕೆ; ಹೆಣ್ಣು ಕೊಡು-ಕೊಳ್ಳುವ ಸಂಬಂಧ ಕುದುರಿಸುವಿಕೆ.

ನೆಂಟುಸ್ತಾನ ಘಟ್ಟಿ ಮಾಡು (ನು)= ಸಂಬಂಧ ಕುದುರಿಸು; ಬೀಗತನ ಜಮಾಯಿಸು.

ನೆಂಟ್ರು (ನಾ)= ನೆಂಟರು; ಬೀಗರು; ಸಂಬಂಧಿಕರು (ಗಾದೆ:- ನಾಕು ಕಾಲಿನ ನಾಪ್ಪ, ನೆಂಟ್ರು ಬಂದ್ರು ಬಾಗಪ್ಪ).

ನೆಂಪು (ನಾ)= ನೆನಪು; ಸ್ಮರಣ.

ನೆಂಪು ಮಾಡು (ಕ್ರಿ)= ನೆನಪಿಸು; ಸ್ಮರಿಸು.

ನೆಂಬು (ಕ್ರಿ)= ನಂಬು; ಭರಸೆ ಮಾಡು.

ನೆಂಬ್ಗಿ (ನಾ)= ನಂಬಿಗೆ; ಭರವಸೆ.

ನೆಕ್ಕು (ಕ್ರಿ)= ನಾಲಗೆಯಿಂದ ಸವರು; ಸೀಪು; ಚೀಪು.

ನೆಕ್ಕುಸು (ಕ್ರಿ)= ನಾಲಿಗೆಯಿಂದ ಸವರುವಂತೆ, ಸೀಪುವಂತೆ, ಚೀಪುವಂತೆ ಮಾಡು.

ನೆಕ್ತು (ಕ್ರಿ)= ನೆಕ್ಕಿತು; ನಾಲಗೆಯಿಂದ ಸವರಿತು; ಸೀಪಿತು; ಚೀಪಿತು.

ನೆಕ್ಯಾದ (ಕ್ರಿ)= ನೆಕ್ಕಿದೆ; ನಾಲಗೆಯಿಂದ ಸವರಿದೆ.

ನೆಗೆಣಿ (ನಾ)= ನೆಗಣ್ಣೆ; ಗಂಡನ ತಮ್ಮ ಅಥವಾ ಅಣ್ಣನ ಹೆಂಡತಿ.

ನೆಗೆಣ್ಣೆ (ನಾ)= ಗಂಡನ ತಮ್ಮ ಅಥವಾ ಅಣ್ಣನ ಹೆಂಡತಿ.

ನೆಗ್ಗು (ಕ್ರಿ)= ಕುಗ್ಗು; ಕುಸಿ; ಜಜ್ಜಿ ತಗ್ಗಾಗು; ಕುಳಿ ಬೀಳು (ಭಾಂಡೆ ಬರ್ತನಗಳಲ್ಲಿ ತಗ್ಗು ಬೀಳುವಿಕೆ (ಉದಾ:- ಥೆಂಬ್ಗಿ ಕೈಯಾಂದ್ಬಿದ್ದು ನೆಗ್ಯಾದ).

ನೆಗ್ಡಿ (ನಾ)= ನೆಗಡಿ; ಶೀತ ಬಾಧೆ.

ನೆಗ್ಡಿ ಬರು (ಕ್ರಿ)= ನೆಗಡಿ ಬಾಧೆಯಾಗು; ಶೀತಬಾಧೆಯುಂಟಾಗು.

ನೆಟಕಿ (ನಾ)= ಲಟಕಿ; ಬೆರಳುಗಳ ಕೀಲುಗಳನ್ನು ಮೆಲುಕಿಗೆ ಒತ್ತಿ ಶಬ್ದ ಬರುವಂತೆ ಮಾಡುವಿಕೆ; ಪ್ರೀತಿ ಅಭಿವ್ಯಕ್ತಿಸುವಿಕೆ; ದ್ವೇಷ ತೋರಿಸುವಿಕೆ.

ನೆಟಕಿ ಮುರಿ (ಕ್ರಿ)= ಲಟಿಕೆ ಮುರಿ; ಬೆರಳುಗಳ ಕೀಲುಗಳನ್ನು ಮೆಲುಕಿಗೆ ಬತ್ತಿ ಶಬ್ದ ಉಂಟು ಮಾಡು; ಪ್ರೀತಿ ಅಭಿವ್ಯಕ್ತಿಸು; ದ್ವೇಷ ತೋರಿಸು.

ನೆಟೆನಿಗುರು (ಕ್ರಿ)= ಸತ್ತುಹೋಗು.

ನೆಟ್ಟಗ (ಅ)= ನೇರ; ಸೀಧಾ; ಖಡಿ.

ನೆಟ್ಟಗಾಗು (ಕ್ರಿ)= ನೇರವಾಗು; ಸೀದಾ ಆಗು; ಖಡಿ ಆಗು; ರೋಗದಿಂದ ಮುಕ್ತನಾಗು; ಆರೋಗ್ಯವಂತನಾಗು.

ನೆಟ್ಟನ್ಮೂಗು (ನಾ)= ನೇರವಾದ ಮೂಗು, ನಾಸಿಕ (ಜಾನಪದ ಪ್ರಾಸ:- ಥಾಟಾನ ಥಾಟಗಿತ್ತಿ। ನೆಟ್ಟನ್ಮೂಗಿನ ಮಾರಾಯ್ತಿ.)

ನೆತ್ತಿ (ನಾ)= ನತ್ತಿ; ತಲೆ; ನಡುತಲೆ.

ನೆತ್ತುರು (ನಾ)= ನೆತ್ತರ; ರಕ್ತ; ಮನುಷ್ಯ ಮತ್ತು ಪ್ರಾಣಿಗಳ ನರನಾಡಿಗಳಲ್ಲಿ ಹರಿದಾಡುವ ಕೆಂಪು ದ್ರವ.

ನೆತ್ತುರ್ಸೋರು= ರಕ್ತ ಒಸರು.

ನೆತ್ತುರ್ಕಾಲಿ (ನಾ)= ರಕ್ತದ ಕಾಲುವೆ (ಉದಾ:- ಗ್ವಾರಟ್ಟೆ ಊರಾಗ ರಜಾಕಾರರು ಹಿಂದೂ ಮಂದಿದು ನೆತ್ತುರ್ಕಾಲಿ ಹರ್ಸುದ್ರು.)

ನೆತ್ರು (ನಾ)= ನೆತ್ತರು; ರಕ್ತ.

ನೆದುರಾಗು (ಕ್ರಿ)= ನದುರಾಗು; ದೃಷ್ಟಿ ತಗಲು; ದೃಷ್ಟಿ ದೋಷವುಂಟಾಗು.

ನೆದರು (ನಾ)= ನಜರು; ದೃಷ್ಟಿ; ಲಕ್ಷ್ಯ

ನೆನಗಚ್ಚು (ನಾ)= ನೆನೆಗಚ್ಚು; ಅರೆಬೆಂದದ್ದು; ಅರೆಕುದ್ದದ್ದು.

ನೆನಗಚ್ಚು ಭೀಳು (ಕ್ರಿ)= ಅಪೂರ್ತಿ ಕುದಿ; ಅರೆ ಕುದಿಯುಂಟಾಗು, ಅರ್ಧಮರ್ಧ ಬೇಯು.

ನೆನಿ (ಕ್ರಿ)= ನೆನೆ; ಸ್ಮರಿಸು; ನೆನಪು ಮಾಡಿಕೊ; ನೀರಲ್ಲಿ ತೊಯ್ಯು; ನೀರುಣ್ಣು; ಒದ್ದೆಯಾಗು; ನೀರು ಹೀರಿ ಉಬ್ಬು.

ನೆನುಪು (ನಾ)= ನೆನಪು; ನೆನಕೆ; ಸ್ಮರಣೆ; ಜ್ಞಾಪಕ; ಗುರುತು.

ನೆನುಪು ಬಂತು (ಕ್ರಿ)= ನೆನಪಾಯಿತು; ಸ್ಮರಣೆಗೆ ಬಂದಿತು.

ನೆನುಪು ಹಾರು (ಕ್ರಿ)= ಮರೆವಾಗು; ಮರವೆಯಾಗು; ಮರೆತು ಹೋಗು; ಸ್ಮರಣೆಗೆ ಬಾರದಿರು.

ನೆನುಸು (ಕ್ರಿ)= ನೆನಪು ಮಾಡಿಕೊ; ಜ್ಞಾಪಿಸಿಕೊ; ನೀರಿನಲ್ಲಿ ಹಾಕಿಡು.

ನೆನ್ಯಾಕು (ಕ್ರಿ)= ನೀರಿನಲ್ಲಿ ಹಾಕಿಡು; ಬಟ್ಟೆ, ಕಾಳು ಇತ್ಯಾದಿ ನೀರಲ್ಲಿ ದೀರ್ಘ ಕಾಲವಿಡು.

ನೆಪ (ನಾ)= ನೆವನ.

ನೆಪ್ಪು (ನಾ)= ನೆನಪು; ಜ್ಞಾಪಕ; ಸ್ಮರಣೆ; ಗುರುತು.

ನೆಯ್ (ನಾ)= ತುಪ್ಪ

ನೆಯ್ಕಾರ (ನಾ)= ನೇಕಾರ; ಬಟ್ಟೆ ನೆಯ್ಯುವವನು.

ನೆಯ್ಗಿ (ನಾ)= ನೆಯ್ಗೆ; ಬಟ್ಟೆ ನೆಯ್ಯುವಿಕೆ; ಬಟ್ಟೆ ನೆಯ್ಯುವ ರೀತಿ.

ನೆಯ್ಯು (ಕ್ರಿ)= ಬಟ್ಟೆಯನ್ನು ಮಗ್ಗದಿಂದ ತಯಾರಿಸು.

ನೆಯ್ಯೆಣ್ಣಿ(ನಾ)= ಮದುಮಕ್ಕಳು ಮೀಯಲು ಬಳಸುವ ಒಳ್ಳೆಣ್ಣೆ (ಮದುವೆ ಹಾಡು:- ಕೆಂಚೆಣ್ಣೆ ಮಂಚೆಣ್ಣೆ। ಬಟಲಾಗ ನೆಯೆಣ್ಣೆ)

ನೆರಿ (ಕ್ರಿ)= ಮೈನೆರಿ; ಪ್ರಥಮ ಋತುಮತಿಯಾಗು; ಪ್ರಥಮ ರಜೋದರ್ಶನವಾಗು; ದೊಡ್ಡವಳಾಗು; ಒಟ್ಟುಗೂಡು; ಗುಂಪುಗೂಡು.

ನೆರಿ (ವಿ.)= ನೆರೆ; ಮಗ್ಗುಲಿನ; ಸಮೀಪದ; ಹತ್ತಿರದ.

ನೆರಿ ಹೊರಿ (ನಾ)= ನೆರೆಹೊರೆ; ಅಕ್ಕ ಪಕ್ಕದವರು.

ನೆರಿಹೊಲ (ನಾ)= ನೆರೆಗಟ್ಟೆಯ ಹೊಲ.

ನೆರುವಾಗು (ಕ್ರಿ)= ನೆರವಾಗು; ಸಹಕರಿಸು; ಸಹಾಯ ಮಾಡು.

ನೆರುವು (ನಾ)= ಸಹಾಯ; ಬೆಂಬಲ; ನೆರವು; (ಕ್ರಿ) ಒಂದೆಡೆ ಇಡು; ಸಂಗ್ರಹಿಸು; ಒಟ್ಟುಗೂಡಿಸು.

ನೆರೂರು (ನಾ)= ಪಕ್ಕದ ಊರು; ನೆರೆಯೂರು.

ನೆರ್ಗಟ್ಟಿ (ನಾ)= ಎರಡು ಹೊಲಗಳ ಮಧ್ಯದ ಕಟ್ಟೆ, ಬಂದಾರಿ.

ನೆರ್ಮನಿ (ನಾ)= ಪಕ್ಕದಮನೆ; ನೆರೆಯ ಮನೆ (ಗಾದೆ:- ನೆರ್ಮನಿ ಹಾಳಾದ್ರ, ಹೊರ್ಕಡಿಗಿ ಜಾಗಾ ಆಯ್ತು ಅಂದ್ರಂತ!)

ನೆರ್ಸು (ಕ್ರಿ)= ಜನರನ್ನು ಒಟ್ಟುಗೂಡಿಸು ಕರೆಸು; ಸಭೆ ಸೇರಿಸು.

ನೆಲ (ನಾ)= ಭೂಮಿ, ಭೂಭಾಗ; ಮಣ್ಣು; ಜಮೀನು.

ನೆಲಅಳಿ (ನು)= ಮನೆಯಿಂದ ದೇವಾಲಯದ ವರೆಗೆ ಸಾಷ್ಟಾಂಗ ನಮಸ್ಕಾರ ಹಾಕುತ್ತ ಹೋಗು.

ನೆಲ ಆಲ್ಬು (ನಾ)= ಬಳ್ಳಿಯಂತಿರುವ ಒಂದು ಪ್ರಕಾರದ ಹುಲ್ಲು ಸಸ್ಯ; ಹಯನದ ದನಗಳಿಗೆ ಅದು ಸೂಕ್ತ ಆಹಾರ.

ನೆಲಕಾಣಲ್ದು (ಸು)= ಗರ್ವ ಬಂದಿದೆ; ಮದವೇರಿದೆ.

ನೆಲಗನ್ನಿಕೆ (ನಾ)= ನೆಲ್ಗನ್ನಿಕೆ; ಕಾಲ್ಪನಿಕನ್ನೆ; ದೇವಗನ್ನಿಕೆ.

ನೆಲಗುಳ್ಳದ ಕಾಯಿ (ನಾ)= ದನಗಳ ಕಣ್ಣುನೋವಿಗೆ ಬಳಸುವ ಔಷಧಿ ಫಲ.

ನೆಲಭುರ್ಸಿ (ವಿ.)= ನೆಲಕ್ಕೆ ಹತ್ತಿದ; ನೆಲ ಬಳಿವಂತೆ ಇರುವ.

ನೆಲ ಮನಿ (ನಾ)= ನೆಲಮಟ್ಟದಿಂದ ಕೆಳಗಿರುವ ಮನೆ; ಭುಂಯ್ಯಾರ; ಸುರಂಗಮನೆ.

ನೆಲಮಾಳ್ಗಿ (ನಾ)= ನೆಲಮನೆಯ ಮಾಳಿಗೆ.

ನೆಲಸಮ (ನಾ)= ಸಮತಳ; ಭೂಮಿ ಮಟ್ಟಕ್ಕೆ ಉಳ್ಳದ್ದು.

ನೆಲಸಮ ಮಾಡು (ಕ್ರಿ)= ಇಲ್ಲದಂತೆ ಮಾಡು; ನಾಶಮಾಡು.

ನೆಲಿ (ನಾ)= ನೆಲೆ; ಆಶ್ರಯ; ಆಧಾರ; ಗುಟ್ಟು; ರಹಸ್ಯ.

ನೆಲಿಗಳ್ಳ (ನಾ)= ಎಲ್ಲ ಗುಟ್ಟು ಬಲ್ಲ ಕಳ್ಳ; ರಹಸ್ಯ ಅರಿತಕಳ್ಳ; ನೆಲೆ ಬಲ್ಲ ಕಳ್ಳ.

ನೆಲಿ ಸಿಗು (ಕ್ರಿ)= ಗುಟ್ಟು ಬಯಲಾಗು; ರಹಸ್ಯ ಗೊತ್ತಾಗು.

ನೆಲು (ನಾ)= ನೆಲುವು; ಪಾತ್ರೆಗಳನ್ನು ಇಡಲು ತೊಲೆಯಿಂದ ಇಳಿಬಿಡುವ ಹಗ್ಗದ ಸಿಂಬಿ ಹಾಗೂ ಜಾಳಿಗೆಯುಳ್ಳ ಸಾಧನ. (ಗಾದೆ:- ಬಲಬಂದ ಇಲಿ ನೆಲುವಿಗೆ ಹಾರ್ತಂತ!)

ನೆಲುಪ್ಪು (ನಾ)= ನೆಲದ ಮೇಲೆ ಉಪ್ಪು, ನೀರು ಹಾಕಿ ಬೆರೆಸಿ ತಯಾರಿಸಿದ ಔಷಧಿ; ಮೈಕೈಗೆ ಒಳಪೆಟ್ಟಾದ ಜಾಗದಲ್ಲಿ ಬಳಿವ ಮಣ್ಣು+ ಉಪ್ಪು+ನೀರಿನ ಮಿಶ್ರಣ.

ನೆಲ್ಗನ್ನಿಕಿ (ನಾ)= ಜಾನಪದ ಕಥೆಗಳಲ್ಲಿಯ ಕಾಲ್ಪನಿಕ ಹೆಣ್ಣು; ನೆಲದ ಮನೆಯಲ್ಲಿ ವಾಸಿಸುವವಳು.

ನೆಲ್ಲತ್ತಿ (ನಾ)= ನೆಲತ್ತಿ; ಬುಡದಲ್ಲಿ ಕಾಯಿ ಗಳನ್ನು ಹೊಂದುವ ಒಂದು ಪ್ರಕಾರದ ಅತ್ತಿ ಗಿಡ.

ನೆಲ್ಲಿ ಕಾಯಿ (ನಾ)= ಒಂದು ಬಗೆಯ ಒಗರು ಒಗರಾಗಿರುವ ಕಾಯಿ; ಚಟ್ನಿ ಕುಟ್ಟಲು ಬಳಸುವ ಕಾಯಿ. (ನೆಲ್ಲಿಕಾಯಿ ತಿಂದು ನೀರು ಕುಡಿದರೆ ಬಾಯಿ ಸ್ವಾದಿಷ್ಟವಾಗುತ್ತದೆ.)

ನೆಲ್ಲುಪ್ಪು (ನಾ)= ನೆಲುಪ್ಪು (ನೋಡಿರಿ)

ನೆಲ್ವಾಡ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿಯ ಹೆಸರು.

ನೆವ (ನಾ)= ನೆವನ; ಕಾರಣ; ಕಪಟ; ಮೋಸ; ನೆಪ.

ನೆವದ್ಯಾ (ನಾ)= ನೈವೇದ್ಯ; ದೇವರ ಎಡೆ.

ನೆವನ (ನಾ)= ನೆಪ; ಕಾರಣ; ಕಪಟ; ಮೋಸ.

ನೆವನಾ (ನಾ)= ನೆವನ (ನೋಡಿರಿ)

ನೆವನಾಹೇಳು (ಕ್ರಿ)= ನೆಪ ತೋರು; ಸಬೂಬು ಹೇಳು; ಇಲ್ಲದ ಕಾರಣ ಹೇಳು.

ನೆವರಿಸು (ಕ್ರಿ)= ನೆವುರ್ಸು; ನಂಬಿಸು; ಫುಸಲಾಯಿಸು; ನೇವರಿಸು; ಒಪ್ಪಿಸು.

ನೆವುರ್ಸು (ಕ್ರಿ)= ನೆವರಿಸು (ನೋಡಿರಿ).

ನೆವ್ದ್ಯಾ (ನಾ)= ನೈವೇದ್ಯ; ದೇವರ ಎಡೆ.

ನೆವ್ನಾ (ನಾ)= ನೆವನ; ಇಲ್ಲದ ಕಾರಣ.

ನೆವ್ಳಾ (ನಾ)= ನೇರಿಲೆ; ನೇಲ; ನೇರಿಲೆ ಗಿಡ ಮತ್ತು ಅದರ ಕಾಯಿ.

ನೆಳ್ಳು (ನಾ)= ನೆರಳು; ಛಾಯೆ; ಆಸರೆ.

ನೆಳ್ಳು (ಕ್ರಿ)= ನರಳು; ಒರಲು; ಮಲಗು, ಬೇನೆಯಿಂದ ಬಳಲು.

ನೆಳ್ಳು ಬಡಿ (ನು)= ಪ್ರಭಾವ ಉಂಟಾಗು; ಪ್ರಭಾವಕ್ಕೊಳಗಾಗು. (ನೆಹರೂಗ ಗಾಂಧೀಜಿದು ನೆಳ್ಳು ಬಡ್ಡಿತ್ತು)

ನೇಕ (ನಾ)= ಪ್ರಾಮಾಣಿಕ; ಸತ್ಯವಂತ.

ನೇಕಾರ (ನಾ)= ನೆಯ್ಕಾರ; ಬಟ್ಟೆ ನೆಯ್ಯುವವ.

ನೇಕಿ (ನಾ)= ಪ್ರಾಮಾಣಿಕತೆ.

ನೇಗುಲ್ಕರಿ (ನಾ)= ನೇಗಿಲಿನ ಹಲ್ಲು; ಕಬ್ಬಿಣದ ಹಲ್ಲು.

ನೇಗುಲು (ನಾ)= ನೇಗಿಲು; ನೇಗ್ಲು; ಭೂಮಿಯನ್ನು ಉಳುವ ಸಾಧನ.

ನೇಗ್ಲು (ನಾ)= ನೇಗಿಲು.

ನೇಗ್ಲು ಹೂಡು (ಕ್ರಿ)= ನೇಗಿಲು ಹೊಡೆಯಲು ಸಿದ್ಧಮಾಡು; ನೇಗಿಲು ನಡೆಸು.

ನೇಗ್ಲುಹೊಡಿ (ಕ್ರಿ)= ಹೊಲವನ್ನು ಉಳು.

ನೇಟು (ನಾ)= ಸುಂಬಳ; ಸಿಂಬಳ; ಮೂಗಿನ ಹೊಲಸು.

ನೇತಾ (ನಾ)= ನಾಯಕ; ಮುಖಂಡ; ಮುಂದಾಳು.

ನೇತಾಜಿ (ನಾ)= ನೇತಾಜಿ ಸುಭಾಷಚಂದ್ರ ಬೋಸ್; ಮುಖಂಡ; ಮುಂದಾಳು.

ನೇತು (ನಾ)= ನಿಯತ್ತು; ಮನಸ್ಸು.

ನೇತು ಛಂದಿರು (ಕ್ರಿ)= ನಿಯತ್ತು ನಿರ್ಮಳ ವಾಗಿರು; ಮನಸ್ಸು ಜಳಜಳವಾಗಿರು.

ನೇಮ (ನಾ)= ಸಂಯಮ; ಮನಸ್ಸಿನ ನಿಯಂತ್ರಣ: ವ್ರತ; ನಿಯಮ.

ನೇಮಾನಿಷ್ಟಿ (ನಾ)= ನಿಯಮ; ಭಕ್ತಿ.

ನೇಮುಸು (ಕ್ರಿ)= ನೇಮಿಸು; ನಿಯಮಿಸು; ನಿಶ್ಚಯಿಸು.

ನೇಲ (ನಾ)= ನೇರಿಳೆ; ಒಂದು ಬಗೆಯ ಮರ ಮತ್ತು ಅದರ ಹಣ್ಣು; ನೇರಿಲೆ ಹಣ್ಣು ತಿಂದರೆ ನಾಲಗೆ ನೀಲ ವರ್ಣಕ್ಕೆ ತಿರುಗುತ್ತದೆ.

ನೇಳ (ನಾ)= ನೇಲ (ನೋಡಿರಿ)

ನೇಳಕಾಯಿ (ನಾ)= ನೇರಿಳೆ ಹಣ್ಣು.

ನೇಳ್ಗಿ (ನಾ)= ನೆಲುವು; ಅಡಿಗೆ ವಸ್ತು ನೇತು ಹಾಕುವ ಸಾಧನ; ಬಂಡಿಗಾಲಿಗೆ ಹಚ್ಚಲು ಬಳಸುವ ಎಣ್ಣೆ ತುಂಬಿ ನೇತು ಹಾಕುವ ಬಿದಿರಿನ ನಳಿಕೆ; ಭಾಲ್ಕಿ ತಾಲೂಕಿನ ಒಂದು ಹಳ್ಳಿಯ ಹೆಸರು.

ನೇಳ್ದಣ್ಣು (ನಾ)= ನೇರಿಳೆ ಹಣ್ಣು.

ನೇಳಬಣ್ಣ (ನಾ)= ನೇರಿಳೆ ಬಣ್ಣ; ರಂಗು.

ನೈಕರ್ (ನಾ)= ನಿಕ್ಕರ್; ಚಡ್ಡಿ; ಚಣ್ಣ; ಚಲ್ಲಣ.

ನೈಟಿ (ನಾ)ಇಂ.= ಮಹಿಳೆಯರ ರಾತ್ರಿ ಉಡುಪು, ಮನೆಯುಡುಪು.

ನೈಯೆಣ್ಣಿ (ನಾ)= ಮುತ್ತೈದೆಯರು ಕಂಚಿನ ಬಟ್ಟಲ ಮಿಂಚೆಣ್ಣೆ ತೊಕ್ಕೊಂಡು ಮದು ಮಕ್ಕಳಿಗೆ ಮೀಯುವ ಮೊದಲೇ ಬಳಿಯುವ ಎಣ್ಣೆ, ನೆಯ್ಯೆಣ್ಣೆ.

ನೊಗ (ನಾ)= ಬಂಡಿ, ನೇಗಿಲು, ಗಾಣ ಇತ್ಯಾದಿಗಳನ್ನು ಎಳೆಯಲು ಎತ್ತು ಕೋಣ ಮೊದಲಾದವುಗಳ ಹೆಗಲಿನ ಮೇಲೆ ಇಡುವ ಅಡ್ಡದಿಂಡು.

ನೊಣ (ನಾ)= ಒಂದು ಬಗೆಯ ರೆಕ್ಕೆಯುಳ್ಳ ಕೀಟ; ಮಕ್ಷ. ಮಕ್ಷಿಕ. (ಒಗಟು:- ಆರ್ಕಾಲಾಂವ। ಡ್ವಾರ ಮೀಸ್ಯಾಂವ । ಉಪ್ಪು ತರಲ್ದಾಂವ । ಸಪ್ಪಂದುಂಬಲ್ದಾಂವ। ಮನಿ ಕಟ್ಟಲ್ದಾಂವ। ಮಳಿಗಿ ಅಂಜಲ್ದಾಂವ।। -ನೊಣ)

ನೊಣಧುಲಿ (ನಾ)= ನೊಣಗಳ ಬೇಟೆಯಾಡುವ ಕೀಟ; ನೊಣದ ಹುಲಿ.

ನೊಣಾರುಘಾಡ್ಸು (ಕ್ರಿ)= ಎಡೆ, ಆಹಾರ ಇಲ್ಲವೆ ಹೆಣ ಇತ್ಯಾದಿಗಳ ಮೇಲೆ ನೊಣ ಕುಳಿತುಕೊಳ್ಳದಂತೆ ಬಟ್ಟೆಯಿಂದ ಜಾಡಿಸಿ ಓಡಿಸು.

ನೊಯ್ಯಿ (ಕ್ರಿ)= ನೋವಾಗು; ಬೇನೆಯಾಗು.

ನೊಯ್ಸು (ಕ್ರಿ)= ನೋವಾಗುವಂತೆ ಮಾಡು; ಬೇನೆಯುಂಟುಮಾಡು.

ನೊರಜು (ನಾ)= ಸಣ್ಣಗೆ ಸೊರಗಿದ ಬೆಳೆ; ಕಿಳ್ಳು; ಒಣಗಿದ ಬೆಳೆ.

ನೋಕ್ (ನಾ)= ಚೂಪಾದ ತುದಿ; ಸೀಸು ಕಡ್ಡಿ ಇಲ್ಲವೆ ಸೂಜಿಯ ಚೂಪಾದ ತುದಿ.

ನೋಟು (ನಾ)= ಕಾಗದದ ನಾಣ್ಯ.

ನೋಟ್ಮಾಡ್ಕೊ (ಕ್ರಿ)= ಬರೆದುಕೊ; ಟಿಪ್ಪಣೆ ತೆಗೆದುಕೊ

ನೋಡ ನೋಡುತ್ತ (ಅ)= ನೋಡುತ್ತಿರುವಂತೆಯೇ; ಸ್ವಲ್ಪೇ ಸಮಯದಲ್ಲಿಯೇ, ಕ್ಷಣಾರ್ಧದಲ್ಲಿಯೇ. (ಹಾಡು: ಈಗ ಏನು ಪೇಳಲಿ ಗುರುರಾಯಾ। ನೋಡ ನೋಡುತ್ತ ಕಳೆದೆಲ್ಲ ಮಾಯಾ।। -ಮಾಣಿಕ ಪ್ರಭು)

ನೋಡಾಮಿ (ಕ್ರಿ)= ನೋಡುತ್ತೇನೆ; ನೋಡೋಣ.

ನೋಡಾರಿ (ಕ್ರಿ)= ನೋಡೋಣ; ನೋಡೋಣವಂತೆ.

ನೋಡು (ಕ್ರಿ)= ಕಾಣು; ಈಕ್ಷಿಸು; ಪರೀಕ್ಷಿಸು; ದೃಷ್ಟಿ ಹಾಕು.

ನೋದ್ಯಾ (ನಾ)= ನೈವೇದ್ಯ; ದೇವರ ಎಡೆ.

ನೋದ್ಯಾತೋರು (ಕ್ರಿ)= ದೇವರಿಗೆ ನೈವೇದ್ಯ ಅರ್ಪಿಸು.

ನೋವಾಗು (ಕ್ರಿ)= ನೋಯು, ಬಾಧಿಸು.

ನೋವು (ನಾ)= ಬಾಧೆ; ಬೇನೆ.

ನೌ (ನಾ)ಹಿಂ.= ಒಂದು ಅಂಕೆ; ಹತ್ತರ ಹಿಂದಿನ ಅಂಕಿ; ನವಂ.

ನೌಕರ (ನಾ)= ವೇತನ ಪಡೆದು ದುಡಿಯುವವನು; ನೌಕರದಾರ; ಆಳು; ಆಳು ಮನುಷ್ಯ; ಆಳ್ಮಗ.

ನೌಕರಿ (ನಾ)= ವೇತನ ಪಡೆದು ದುಡಿಯುವ ಉದ್ಯೋಗ.

ನೌಜವಾನ (ನಾ)= ನವಯುವಕ; ತರುಣ.

ನೌಟಾಕ (ನಾ)= ಛಟಾಕು; ೫೦ ಐವತ್ತು ಗ್ರಾಮು.

ನೌತಿ (ನಾ)= ಹೊಸತು; ಎಳೆಯದು; ನೂತನ; ತರುಣ (ನೌತಿ ಸೀರಿ, ನೌತಿ ಹುಡುಗ ಇತ್ಯಾದಿ).

ನೌತಿ ಪಾರ (ನಾ)= ಎಳೆಯ ಹುಡುಗ, ನವ ತರುಣ.

ನೌತಿ ಪೋರಿ (ನಾ)= ಎಳೆಯ ಹುಡುಗಿ, ನವ ತರುಣೆ.

ನೌದಿ (ನಾ)= ನೌದ್ಯಾ; ನೈವೇದ್ಯ.

ನೌದ್ಯಾ (ನಾ)= ನೈವೇದ್ಯ; ದೇವರಿಗೆ ತೋರಲು ಮೀಸಲಿಟ್ಟ ಆಹಾರ. (ಕ್ರಿ) ನೌದ್ಯಾ ತೋರು=ನೈವೇದ್ಯ ಅರ್ಪಿಸು.

ನೌನಾಥರು (ನಾ)= ಒಂಬತ್ತು ಮಂದಿ ನಾಥರು; ನವನಾಥರು.

ನೌಬತ್ತು (ನಾ)= ಒಂದು ಬಗೆಯ ಚರ್ಮ ವಾದ್ಯ; ದೇವಾಲಯಗಳಲ್ಲಿ ಪೂಜೆಯ ಸಮಯದಲ್ಲಿ ಬಾರಿಸುವ ವಾದ್ಯ; ಸಂಕಟ ಗಂಡಾಂತರ ಕೆಟ್ಟ ಸಮಯ.

ನೌಬಾದ (ನಾ)= ಬೀದರ ನಗರದ ಒಂದು ಬಡಾವಣೆ ಹಳ್ಳಿ. ಸಾಹಿತಿ ಪ್ರೇಮಾಸಿರ್ಸೆಯವರ ವಾಸದ ಊರು.

ನೌಬ್ಯಾನಿ (ನಾ)= ನವೆಯುವ ಬೇನೆ; ಸೊರಗುವ ಅಥವಾ ಕೊರಗುವ ಬೇನೆ.

ನೌಮಿ (ನಾ)= ನವಮಿ; ಪಕ್ಷದ ಒಂಬತ್ತನೇ ದಿನ.

ನೌಮೈನ್ಯಾ (ನಾ)= ಒಂಬತ್ತು ತಿಂಗಳು.

ನಾಮೈನ್ಯಾ ಭರ್ತಿಯಾಗು (ಕ್ರಿ)= ಒಂಬತ್ತು ತಿಂಗಳು ಪೂರ್ಣವಾಗು; ನವಮಾಸ ಪೂರ್ತಿಯಾಗು; ಹೆರಿಗೆ ದಿನ ಸಮೀಪಿಸು.

ನೌಮಿ (ನಾ)= ನವಮಿ; ಪಕ್ಷದ ಒಂಭತ್ತನೇ ದಿನ.

ನೌಲು (ನಾ)= ನವಿಲು; ಮಯೂರ.

ನೌಲು ಕುಣ್ತಿ (ನಾ)= ನವಿಲಿನ ನರ್ತನ.

ನೌಲು ಫರಿ (ನಾ)= ನವಿಲಿನ ರೆಕ್ಕೆ.

ನೌಲ್ಯಾ (ನಾ)= ಒಂಬತ್ತಂಕಿಯ ಇಸ್ಪೀಟೆಲೆ; ನವಿಲು.

ನೌವಾರಿ (ನಾ)= ಒಂಬತ್ತು ವಾರ ಅಳತೆಯದು (ಸೀರೆ, ಧೋತ್ರ ಇತ್ಯಾದಿ).

ನೌಸೆ (ನಾ)= ಒಂಬತ್ತು ನೂರು.

ನೃತ್ರು (ನಾ)= ನೆತ್ತರು; ರಕ್ತ.

ನೃವ್ದಿ (ನಾ)= ನೈವೇದ್ಯ.

ನ್ಯಾಯಾ (ನಾ)= ಜಗಳ; ತಂಟೆ; ವಾದ; ನ್ಯಾಯ, ನೀತಿ, ನಿಯಮ, ಧರ್ಮ.

ನ್ಯಾಯಾರಿ (ನಾ)= ನ್ಯಾರಿ; ಮುಂಜಾನೆಯ ಊಟ; ನಾಶ್ತಾ; ಅಲ್ಪೋಪಹಾರ; ಫಲಾಹಾರ.

ನ್ಯಾಯಾರ್ಯಾಳಿ (ನಾ)= ಅಲ್ಪೋಪ ಹಾರದ ಸಮಯ.

ನ್ಯಾಯಾಹೇಳು (ಕ್ರಿ)= ನ್ಯಾಯ ನಿರ್ಣಯ ಮಾಡು; ಜಗಳ ಬಿಡಿಸು. (ಕೋಲಾಟದ ಹಾಡು:- ಗೋಪೆಮ್ಮಾ ನಿನ ಮಗನಾ ಗುಣಗಳ। ನ್ಯಾಯಾ ಹೇಳಮ್ಮಾ ಸಖಿಯೇ।।)

ನ್ಯಾರಿ (ನಾ)= ನ್ಯಾಯಾರಿ (ನೋಡಿರಿ)

ನ್ಯಾಲ್ಗಿ (ನಾ)= ನಾಲಿಗೆ (ಗಾದೆ:- ನ್ಯಾಲ್ಗಿ ಒಳ್ಳೆದಾದ್ರ, ನಾಡೆಲ್ಲಾ ಒಳ್ಳೇದು).

ನ್ಯಾಲ್ಗಿ ಕಿತ್ತೆ (ಕ್ರಿ)= ಮಾತಾಡಲು ಬರದಂತೆ ಮಾಡೆ (ಬೈಗುಳ).

ನ್ಯಾಲ್ಗಿ ತಪ್ಪು (ಕ್ರಿ)= ಕೊಟ್ಟ ಮಾತನ್ನು ಮೀರು; ವಚನ ಭ್ರಷ್ಟನಾಗು.

ನ್ಯಾಲ್ಗಿ ಸವು (ಸು)= ಮಾತಾಡಲು ತಡವರಿಸು.

ನ್ಯಾಲ್ಗಿ ಸೀಳು (ಸು)= ಮಾತಾಡಲು ಬರದಂತೆ ಮಾಡು; ನಾಲಗೆ ತುಂಡು-ಗೊಳಿಸು.

ನ್ಯಾಳ್ಳು (ನಾ)= ನೆರಳು; ಛಾಯೆ;

ನ್ಯಾಳ್ದು ಬಡಿ (ಕ್ರಿ)= ಪರಿಣಾಮ ಉಂಟಾಗು.

ನ್ಯಾಳ್ಳು ಭೀಳು (ನಾ)= ಛಾಯೆ ಉಂಟಾಗು.

ನ್ಯೋದಿ (ನಾ)= ನೈವೇದ್ಯ; ದೇವರಿಗಾಗಿ ಮೀಸಲಿಟ್ಟ ಆಹಾರ.

ನ್ಯೊದಿತೋರ್ಸು (ಕ್ರಿ)= ದೇವರಿಗೆ ಎಡೆ ಅರ್ಪಿಸು.

ಪ

ಪಂಕ್ತಿ (ನಾ)= ಪಂಗ್ತಿ; ಪಂತಿ; ಹಂತಿ; ಸಾಲು.

ಪಂಖಾ (ನಾ)= ಪಂಖ; ಬೀಸಣಿಕೆ.

ಪಂಚ (ನಾ)= ಪಂಚಾಯತದ ಸದಸ್ಯ; ದೇವಾಲಯ, ಮಠ ಮಂದಿರಗಳ ಸಮಿತಿಯ ಸದಸ್ಯ.

ಪಂಚ ಕಳ್ಸಾ (ನಾ)= ಐದು ಕಲಶ; ಐದು ಕಳಸ ಇರಿಸಿ ಮದುಮಕ್ಕಳಿಗೆ ಮೀಯಿಸುವಿಕೆ.

ಪಂಚ ಕಳ್ಸಾ ಹೂಡು (ಸು)= ಐದು ಕಳಸಗಳನ್ನು ಇರಿಸಿ ಅವುಗಳ ಸುತ್ತ ದಾರ ಸುತ್ತಿ, ಮದುಮಕ್ಕಳಿಗೆ ಮೀಯುವ ವ್ಯವಸ್ಥೆ ಮಾಡು.

ಪಂಚಖಜ್ಜಾ (ನಾ)= ಐದು ಪ್ರಕಾರದ ಕಜ್ಜಾಯ; ದೇವರ ನೈವೇದ್ಯಕ್ಕಾಗಿ ತಯಾರಿಸುವ ಮಂಡಳ್ಳು, ಬೆಲ್ಲ, ಕೊಬ್ಬರಿ, ಪುಟಾಣಿ ಮತ್ತು ಎಳ್ಳುಗಳ ಮಿಶ್ರಣ; ಸಿಹಿ ತಿಂಡಿ.

ಪಂಚತ್ರಿ (ನಾ)= ಫಲಗಳನ್ನು ಎಣಿಸಿ ಮಾರುವಾಗ ನೂರರ ಮೇಲೆ ಐದು ಕಾಯಿ ಹೆಚ್ಚಿಗೆ ಕೊಡುವಿಕೆ (ಕೆಟ್ಟ ಹಣ್ಣುಗಳು ಹಾನಿ ತರಬಾರದೆಂದು ಖರೀದಿದಾರನಿಗೆ ಐದು ಫಲ ಹೆಚ್ಚಿಗೆ ಕೊಡುವಿಕೆ.

ಪಂಚನಾಮಾ (ನಾ)= ಪಂಚನಾಮೆ; ಪಂಚ ಜನರ ಸಮಕ್ಷಮದಲ್ಲಿ ಸರಕಾರಿ ಅಧಿಕಾರಿಗಳು ತನಿಖೆ ಮಾಡಿ ಬರೆದ ವರದಿ.

ಪಂಚ ಪರಾಣ (ನಾ)= ಅತಿಪ್ರಿಯವಾದ್ದು.

ಪಂಚಮಸಾಲಿ (ನಾ)= ಲಿಂಗಾಯತ ಧರ್ಮ ದಲ್ಲಿಯ ಒಂದು ಒಳ ಪಂಗಡ.

ಪಂಚಮಿ (ನಾ)= ಪಕ್ಷದ ಐದನೇ ದಿನ; ನಾಗರ ಪಂಚಮಿ. ಸಿರಿಯಾಳ ಷಷ್ಠಿಯ ಮುನ್ನಾ ದಿನ.

ಪಂಚಮುಖಿ (ನಾ)= ಐದು ಮುಖವುಳ್ಳ ರುದ್ರಾಕ್ಷಿ.

ಪಂಚಶೀಲ (ನಾ)= ಮಹಾತ್ಮಾ ಬುದ್ಧ ಬೋಧಿಸಿದ ಐದು ಶೀಲಗಳು.

ಪಂಚಶೀಲಗವಾಯಿ (ನಾ)= ರಾಷ್ಟ್ರಕವಿ ಎಂದು ಹೆಸರು ಮಾಡಿದ ಹಿಲಾಲಪೂರ ಮೂಲದ ಅಂಧ ಕವಿ ಕಾಶೀನಾಥ.

ಪಂಚಾಂಗ (ನಾ)= ಹೊತ್ಗಿ; ತಿಥಿ, ವಾರ, ನಕ್ಷತ್ರ ಇತ್ಯಾದಿ ತಿಳಿಸುವ ಪುಸ್ತಕ.

ಪಂಚಾಕ್ಷರಿ (ನಾ)= ಬಸವ ಕಲ್ಯಾಣದ ಪಂಚಾಕ್ಷರಿ ಹಿರೇಮಠ ಎಂಬ ಕವಿ;

ಗೌಡ್ಗಾಂವ (ಆರ್.) ಗ್ರಾಮದ ಪಂಚಾಕ್ಷರಿ ಎಂಬ ದೇಸಿ ಕವಿ; ಬೀದರ ನಗರದ ಕುಂಬಾರಗೇರಿಯ ಪಂಚಾಕ್ಷರಿ ಪುಣ್ಯ ಸೆಟ್ಟಿಯೆಂಬ ಹಿರಿಯ ಸಾಹಿತಿ.

ಪಂಚಾತಿ (ನಾ)= ಪಂಚೇತಿ; ತಂಟೆ; ತಕರಾರು.

ಪಂಚಾಯತ್ (ನಾ)= ಚುನಾಯಿತ ಗ್ರಾಮೀಣ ಸದಸ್ಯರ ಆಡಳಿತ ಮಂಡಳಿ.

ಪಂಚಾಳ (ನಾ)= ಪಾಂಚಾಳ; ಬಡಿಗ, ಕಮ್ಮಾರ, ಅಕ್ಕಸಾಲಿಗ, ಮೊದಲಾದ ಐದು ಜನಾಂಗದ ಸಾಮಾನ್ಯ ಹೆಸರು.

ಪಂಚೀಸು (ನಾ)= ಇಪ್ಪತ್ತೈದರ ಸಂಖ್ಯೆ

ಪಂಚು (ನಾ)= ಕುತಂತ್ರ; ಜಾಣ; ಚಾಲು.

ಪಂಚೇತಿ (ನಾ)= ಪಂಚಾತಿ (ನೋಡಿರಿ).

ಪಂಚೇತಿ ಭೀಳು (ಕ್ರಿ)= ತಕ್ರಾರು, ಉದ್ಭವಿಸು, ಸಮಸ್ಯೆ ಎದುರಾಗು.

ಪಂಚೇರು (ನಾ)= ಐದು ಸೇರು.

ಪಂಚೇರುಗಟ್ಟೆ (ಅ)= ಪಂಚೇರು ತೂಕದಷ್ಟು.

ಪಂಜಾ (ನಾ)= ಪೀರನ ಹಸ್ತ; ಹುಲಿ, ಸಿಂಹ, ಚಿರತೆ, ಬೆಕ್ಕುಗಳ ಉಗುರುಗಳು; ಐದು ಅಂಕಿಯ ಇಸ್ಪೀಟೆಲೆ;

ಪಂಜಾಬಿ ಆಳು (ನಾ)= ಗಟ್ಟಿಮುಟ್ಟಾದ ಎತ್ತರದ ವ್ಯಕ್ತಿ.

ಪಂಜಿ (ನಾ)= ಧೋತರ; ಲುಂಗಿ.

ಪಂಜಿ ಉಡು (ಕ್ರಿ)= ಧೋತರ ಉಟ್ಟುಕೊ; ಲುಂಗಿ ಸುತ್ತಿಕೊ.

ಪಂಡಾಚಾಚು (ಕ್ರಿ)= ಉದ್ದಾಗಿ ಕಾಲು ಚಾಚಿ ಮಲಗು; ಚಿರನಿದ್ರೆ ಹೋಗು; ಸಾಯು.

ಪಂತಾ (ನಾ)= ಪಂತ; ಪ್ರತಿಜ್ಞೆ; ಶಪಥ; ಹಟ; ಛಲ; ಜಿದ್ದು; ಪಣ.

ಪಂತಾಕಟ್ಟು (ಕ್ರಿ)= ಪ್ರತಿಜ್ಞೆಮಾಡು; ಪಣ ತೊಡು.

ಪಂತಿ (ನಾ)= ಪಂಕ್ತಿ; ಪಂಗ್ತಿ; ಹಂತಿ; ಸಾಲು (ಗಾದೆ:- ಪಂತಿದಾಗಿಂದೇಳಂದ್ರ, ಕಂಚಿನ ಗಂಗಾಳದಾನಂದು ಅಂತಂತ! -ಪಂತಿದಾಗ ಪರ್ಪಂಚ ಮಾಡ್ಬಾರ್ದು)

ಪಂತಿದಾಗ ಪರ್ಪಂಚ ಮಾಡು (ನು)= ಊಟದ ಪಂಕ್ತಿಯಲ್ಲಿ ನನ್ನವರು ತನ್ನವರು ಎಂಬ ಭೇದ ಭಾವ ಮಾಡು.

ಪಂದ್ರಾ (ನಾ)= ಹದಿನೈದು.

ಪಂದ್ರೋಡಿ (ನಾ)= ಹದಿನೈದು ದಿನಗಳ ಅವಧಿ; ಪಕ್ಷ.

ಪಂಪು (ನಾ)= ನೀರೆತ್ತುವ ಯಂತ್ರ; ವಾಹನಗಳ ಗಾಲಿಗಳಿಗೆ ಗಾಳಿ ತಂಬುವ ಸಾಧನ, ಯಂತ್ರ.

ಪಂಪು ಹೊಡಿ (ಕ್ರಿ)= ಉಬ್ಬಿಸು; ಕಿವಿ ತುಂಬು; ವಾಹನಗಳ ಗಾಲಿಗಳಿಗೆ ಗಾಳಿ ತುಂಬು.

ಪಕಡ (ನಾ)= ಹಿಡಿತ; ಭದ್ರತೆ; ಬಿಗಿ.

ಪಕಾಡ್ಯಾ (ನಾ)= ಮಕ್ಕಳಿಗೆ ಭಯಪಡಿಸಲು ಬಳಕೆಯಾಗುವ ಕಾಲ್ಪನಿಕ ವ್ಯಕ್ತಿ.

ಪಕಾಲಿ (ನಾ)= ಎಮ್ಮೆ, ಕೋಣ, ಬಂಡಿ, ಲಾರಿಗಳ ಮೇಲೆ ಸೇಂದಿಯನ್ನು ಸಾಗಿಸಲು ಬಳಕೆಯಾಗುವ ತೊಗಲಿನ ದೊಡ್ಡದಾದ ಚೀಲ.

ಪಕಾವು (ನಾ)= ಪಕ್ವ; ಹಣ್ಣಾದದ್ದು. ಕಳಿತದ್ದು.

ಪಕಾಸು (ಕ್ರಿ)= ಕುದಿಸು.

ಪಕೋಡಾ (ನಾ)= ಪಕೋಡಿ; ಕಡಲೆ ಹಿಟ್ಟಿಗೆ ಈರುಳ್ಳಿ; ಪಾಲಕ ಇತ್ಯಾದಿಯೊಂದಿಗೆ ಖಾರ, ಉಪ್ಪು ಸೇರಿಸಿ ಕರಿದು ಮಾಡಿದ ತಿಂಡಿ; ಉಳ್ಳಾಗಡ್ಡಿ ಪಕೋಡಿ, ಪಾಲಕ ಪಕೋಡಿ ಇತ್ಯಾದಿ.

ಪಕೋಡಿ (ನಾ)= ಪಕೋಡಾ (ನೋಡಿರಿ)

ಪಕ್ಕಡ (ನಾ)= ಇಕ್ಕಳ, ಹಿಡಿಕೆ, ಹಿಡಿತ; ಬಿಗು.

ಪಕ್ಕಡದಾಗ ಸಿಗು (ಕ್ರಿ)= ಹಿಡಿತಕ್ಕೆ ಸೇರು.

ಪಕ್ಕಾ (ವಿ)= ಪಕಾವು; ಬೆರಕೆ ಇಲ್ಲದ; ಮೂಲ; ಅಸ್ಲಿ; ಖಚಿತ; ಘಚ್ಚಿ; ಘಟ್ಟಿ.

ಪಗಡಿ (ನಾ)= ರುಮಾಲು; ಮುಂಡಾಸಿ; ಕವಡೆಯಾಟ. (ಗಾದೆ:- ಶಿರಸ್ಸು ಸುರಕ್ಷಿತ ವಾಗಿದ್ದರೆ ಸಾವಿರ ಪಗಡಿ ಸುತ್ತಬಹುದು)

ಪಗಡಿ ಆಟಾ (ನಾ)= ಜೂಜಾಟ; ಪಗ್ಡಿ; ಕವಡೆಯಾಟ.

ಪಗಾರ (ನಾ)= ವೇತನ; ತನಖಾ; ಸಂಬಳ.

ಪಗ್ಡಿ (ನಾ)= ಪಗಡಿ (ನೋಡಿರಿ)

ಪಗ್ಡಿಲಪಟಾಸು (ಕ್ರಿ)= ರುಮಾಲು ಸುತ್ತಿಕೊ.

ಪಗ್ಸಿ (ನಾ)= ಪಕ್ಷಿ

ಪಚಾಸು (ಕ್ರಿ)= ಪನ್ನಾಸು; ಐವತ್ತು ೫x೧೦=೫೦.

ಪಚಾಸು (ಕ್ರಿ)= ಪಚನವಾಗು; ಅರಗು; ಜೀರ್ಣವಾಗು, ಅರಗಿಸಿಕೊ.

ಪಚ್ಚಾತಾಪ (ನಾ)= ಪಶ್ಚಾತಾಪ; ಕೆಟ್ಟ ಕೆಲಸ ಮಾಡಿ ನಂತರ ಮರಗುವಿಕೆ.

ಪಚ್ಚಿಮ (ನಾ)= ಪಶ್ಚಿಮ; ಪಡುವಣ; ಹೊತ್ತು ಮುಳುಗುವ ದಿಕ್ಕು.

ಪಚ್ಚು (ನಾ)= ಅಂತರಂಗದ ವಿರೋಧ; ಒಳಸಿಟ್ಟು.

ಪಚ್ಚುರು (ನಾ)= ಬಿಗಿ ಉಂಟುಮಾಡಲು ಸಡಿಲು ಜಾಗದಲ್ಲಿ ಜಡಿಯುವ ಕಟ್ಟಿಗೆಯ ಚೂರು ಅಥವಾ ಚಕ್ಕೆ.

ಪಚ್ಪಾತ (ನಾ)= ಪಕ್ಷಪಾತ.

ಪಟಕಾ (ನಾ)= ಪಟಕ; ಸ್ಫಟಿಕ; ರುಮಾಲು.

ಪಟಾಯಿಸು (ಕ್ರಿ)= ಒಪ್ಪಿಸು; ಮನಸ್ಸಿಗೆ ಒಪ್ಪಿಗೆ ಯಾಗುವಂತೆ ಮಾಡು.

ಪಟಾಸು (ನಾ)= ಅಗಲಬಾಯಿಯ ಕಟ್ಟಿಗೆ ಕೊರೆವ ಉಳಿ; (ಕ್ರಿ) ಪಟಾಯಿಸು; ಒಪ್ಪುವಂತೆ ಮಾಡು; ಒಪ್ಪಿಸು.

ಪಟೇಲ (ನಾ)= ಗೌಡ; ಪಾಟೀಲ.

ಪಟೇಲ್ತಿ (ನಾ)= ಗೌಡತಿ; ಪಾಟ್ಲಿಣಬಾಯಿ.

ಪಟ್ಟಂತ (ಅ)= ಪಟ್ಟನೆ; ಥಟ್ಟಂತ; ಥಟ್ಟನೆ.

ಪಟ್ಟಣ (ನಾ)= ಪತ್ತನ; ನಗರ; ಪುರ.

ಪಟ್ಟಣ ಸೇರು (ಕ್ರಿ)= ಹಳ್ಳಿ ಬಿಟ್ಟು ನಗರಕ್ಕೆ ಹೋಗು.

ಪಟ್ಟಾ (ನಾ)= ಸಿಂಹಾಸನ; ಗದ್ದುಗೆ; ಕಿರೀಟ; ಪೀಠ; ಅಧಿಕಾರ; ಪದವಿ; ಮದುವೆಯಾದ ಹೆಣ್ಣು ಅಥವಾ ಗಂಡಿನ ಮರು ಮದುವೆ; ಉಡುಕಿ; ಕೂಡಿಕೆ (ಗಾದೆ:- ಸ್ವಾಮಾರ ಪಟ್ವಾ; ಮಂಗ್ಳಾರ ಇಟ್ವಾ; ಬುಧವಾರ ಬಿಟ್ವಾ).

ಪಟ್ಟಾ ಏರು (ಕ್ರಿ)= ಸಿಂಹಾಸನಾರೂಢ ನಾಗು.

ಪಟ್ಟಾ ಕಟ್ಟು (ಕ್ರಿ)= ಪೀಠಾಧಿಕಾರ ಕೊಡು (ಉದಾ:- ಪಟ್ಟವ ಕಟ್ಟಿದ ಬಳಿಕ ಲಕ್ಷಣವನ ರಸಿದುದುಂಟೆ? -ಬಸವಣ್ಣ)

ಪಟ್ಟಾ ಜಮೀನು (ನಾ)= ಸರ್ವೇ ನಂಬರು; ಒಬ್ರ ಹೆಸರಿಗೆ ನೋಂದಣಿಯಾದ ಜಮೀನು.

ಪಟ್ಟಾ ಮಾಡ್ಕೊ (ಕ್ರಿ)= ಮರುಮದುವೆ ಮಾಡಿಕೊ; ಉಡ್ಕಿ ಅಥವಾ ಕೂಡಿಕೆ ಮಾಡಿಕೊ; ಜಮೀನು ಖರೀದಿ ಮಾಡಿಕೊ.

ಪಟ್ಟಾ ಮಾರು (ಕ್ರಿ)= ತನ್ನ ಜಮೀಣನ್ನು ಇತರರಿಗೆ ಮಾರು; ಸರ್ವೇ ನಂಬರು ಮಾರು; ಹೊಲ ಮಾರು.

ಪಟ್ಟಿ (ನಾ)= ಚಂದಾ; ದೇಣಿಗೆ; ಅಗಲ ಕಡಿಮೆ ಇದ್ದು ಉದ್ದ ಹೆಚ್ಚಾಗಿರುವ ಬಟ್ಟೆ, ಕಾಗದ, ಮರ, ಹೊಲ ತಗಡು ಇತ್ಯಾದಿ; ಗಾಯದ ಸುತ್ತ ಕಟ್ಟುವ ಉದ್ದ ಬಟ್ಟೆ; ವಸ್ತುವಿನ ಇಲ್ಲವೆ ಮನುಷ್ಯರ ಹೆಸರನ್ನು ಕ್ರಮವಾಗಿ ಬರೆದ ಕಾಗದ; ಯಾದಿ; ಪೋರಿ; ಹುಡುಗಿ; ಪೊಟ್ಟಿ.

ಪಟ್ಟುರ್ಕಿ (ನಾ)= ಪಟ್ಟರಿಕೆ; ಪೊಟ್ಟರಿಕೆ; ದಂಟಿನಲ್ಲಿ ಮೂಡಿದ ಎಳೆತೆನೆ.

ಪಟ್ಟುರ್ಕಿ ಬಿಡು (ಕ್ರಿ)= ಪೊಟ್ಟರಿಕೆ ಹಾಕು; ದಂಟಿನ ಸುಳಿಯಲ್ಲಿ ಎಳೆಯ ತೆನೆ ಮೂಡು; ಹೊಡೆ ಮೂಡು.

ಪಟ್ಟೇದಾರ (ನಾ)= ಜಮೀನಿನ ಕಾನೂನು ಬದ್ಧ ಅಧಿಕಾರ ಹೊಂದಿದವನು; ಭೂಮಿಯ ಮಾಲೀಕ.

ಪಟ್ಯಾತ್ಯ (ನಾ)= ಹುಡುಗ; ಪಾರ; ಪೋರ.

ಪಟ್ಯಾದ ಹುಲಿ (ನಾ)= ಮೈಮೇಲೆ ಕರಿ ಪಟ್ಟಿಗಳುಳ್ಳ ಹುಲಿ, ವ್ಯಾಘ್ರ.

ಪಟ್ರಿ (ನಾ)= ರೈಲಿನ ಹಳಿ: ಇಂಚು ಪಟ್ಟಿ; ಅಳತೆ ಪಟ್ಟಿ.

ಪಟ್ಲೋನ್ (ನಾ)= ಪಾದದವರೆಗಿನ ಚಣ್ಣ.

ಪಡಖಾನಿ (ನಾ)= ಝುಳಜಿ; ಹೊರಬಾಗಿಲಿಗೆ ಹತ್ತಿ ಇರುವ ಬೈಠಕ ಖಾನೆ; ಪಡಖಾನೆ; ಪಟಶಾಲೆ.

ಪಡಗಲ್ಪಂಚಿ (ನಾ)= ಪದ್ಮಾಸನ.

ಪಡಗಲ್ಪಂಚಿ ಹೊಡಿ (ನಾ)= ಪದ್ಮಾಸನ ಹಾಕು.

ಪಡಸಾಲಿ (ನಾ)= ಪಟಸಾಲೆ; ಬೈಠಕ ಖಾನೆ.

ಪಡಾಪಡಾ (ದ್ವಿ)= ರಪ್ಪ ರಪ್ಪನೆ; ರೊಪ್ಪ ರೊಪ್ಪನೆ.

ಪಡಾವು (ನಾ)= ಬೀಳು; ಸಾಗುವಳಿ ಇಲ್ಲದುದು.

ಪಡಾವು ಭೀಳು (ಕ್ರಿ)= ಸಾಗುವಳಿ ಇಲ್ಲದಂತಾಗು.

ಪಡಾವು ಭೂಮಿ (ನಾ)= ಬೀಳು ಬಿದ್ದ ಹೊಲ; ಸಾಗುವಳಿ ಇಲ್ಲದ ಹೊಲ; ಪಡೀತ ಭೂಮಿ.

ಪಡಿ (ನಾ)= ಮುಳ್ಳು ಕಂಟಿ; ಗಿಡಗಂಟಿಗಳ ಗುಂಪು (ಉದಾ:- ಯಕ್ಕಿಪಡಿ, ನಾಗರಪಡಿ, ಲಕ್ಕಿಪಡಿ ಇತ್ಯಾದಿ); ಪಡಾವು ಬಿದ್ದ ಭೂಮಿ; ಅನ್ನ; ಪಾಲು. ಉದಾ:- ಯಾರ್ಪಡಿ ಅವ್ರ ಪದ್ರಾಗ, ಯಾರನ್ನ ಅವ್ರ ಉಡಿಯಾಗ).

ಪಡಿತ (ನಾ)= ಬೀಳು ಭೂಮಿ; ಸಾಗುವಳಿ ಕಾಣದೆ ಭೂಮಿ.

ಪಡಿ ಭೂಮಿ (ನಾ)= ಬೀಳು ಭೂಮಿ.

ಪಡೀತ (ನಾ)= ಬೀಳು ಬಿದ್ದ ಭೂಮಿ; ಕೃಷಿ ಕಾಣದ ಭೂಮಿ.

ಪಡು (ನಾ)= ಹಗ್ಗ ಹೊಸೆಯಲು ಹುರಿಗೊಳಿಸಿ ಇಟ್ಟ ಪುಂಡಿ ಇಲ್ಲವೆ ಸೆಣಬಿನ

ನಾರು, ದಪ್ಪ ನಾರಿನ ದಾರ (ಕ್ರಿ)= ಹೊಂದು; ಪಡೆ.

ಪಡುಹಾಕು (ಕ್ರಿ)= ಪುಂಡಿಯ ಇಲ್ಲವೆ ಸಣಬಿನ ನಾರಿನಿಂದ ದಾರ ಇಲ್ಲವೆ ಹುರಿಯನ್ನು ಹೊಸೆ.

ಪಡೇಚು (ನಾ)= ಪಡಿಯಚ್ಚು; ಪ್ರತಿರೂಪ; ಸಾಚಾ; ಹೂಬೇಹೂಬು; ಅದೇ ತರಹದ.

ಪಡೋಳ್ಕಾಯಿ (ನಾ)= ಪಡುವಳ ಎಂಬ ಬಳ್ಳಿಯ ತರಕಾರಿ ಕಾಯಿ.

ಪಡ್ಡಿ (ನಾ)= ಪರಡಿ; ಗೋಧಿ ಹಿಟ್ಟಿನಿಂದ ತಯಾರಿಸಿದ ಚಪ್ಪಟೆಯಾದ ಹಾಗೂ ಗೋಲಾಕಾರದ ಒಣಗಿಸಿಟ್ಟ ಪಾಯಸದ ಕಾಳು; ತಕ್ಕಡಿಯ ಆಚೆ ಈಚೆಯ ಬಟ್ಟಲು.

ಪಡ್ಸಾ (ನಾ) ಮ.= ನೆಗಡಿ; ಶೀತ; ಸರ್ದಿ (ಉದಾ:- ಪ್ರೇಮಕ್ಕ ಪಡ್ಸಾಬೀ ಬರ್ತಾದ ನೋಡ್ರಿ).

ಪಡ್ಸಾಲಿ (ನಾ)= ಪಟಶಾಲೆ; ಬೈಠಕ ಖಾನೆ; ಪಡಸಾಲೆ.

ಪಣಾ (ನಾ)= ಜಿದ್ದು; ಪಂಥ; ಹಟ; ಷರ್ತಿ; ಪಣ.

ಪಣಾಕಟ್ಟು (ಕ್ರಿ)= ಜಿದ್ದು ಕಟ್ಟು; ಷರ್ತಿ ಕಟ್ಟು; ಪಣಒಡ್ಡು.

ಪಣ್ಜಾ (ನಾ)= ಪಣಜ; ಅಣಜನ ತಂದೆ; ಅಜ್ಜನ ಇಲ್ಲವೆ ಅಜ್ಜಿಯ ತಾತ; ಮುತ್ತಾತನ ತಂದೆ.

ಪತಂಗ (ನಾ)= ಗಾಳಿಪಟ; ದೀಪದ ಹುಳು.

ಪತಂಗೇರ್ಸು (ಕ್ರಿ)= ಗಾಳಿಪಟ ಹಾರಿಸು.

ಪತಡಿ (ನಾ)= ಪತ್ಡಿ; ನೆಲ ಸಾರಿಸಲು ಬಳಸುವ ಬಟ್ಟೆ; ಮಣ್ಣೊಣಲೆ ಸಾರಿಸುವ ಬಟ್ಟೆ; ಸೆಗಣಿಯ ಮುದ್ದೆ.

ಪತಡಿ ಪತಡಿ (ದ್ವಿ)= ಮುದ್ದೆ ಮುದ್ದೆ.

ಪತಾ (ನಾ)= ವಿಳಾಸ; ಪತ್ತೆ; ಗೊತ್ತು ಗುರಿ;

ಪತಿ (ನಾ)= ಗಂಡ; ಒಡೆಯ; ಯಜಮಾನ (ಬೈಲಾಟದ ಮಾತು : ಪತಿದೇವಾ, ಮತ್ತಾದರೂಹೇಳ್ತೀನಿ,ಕೇಳುವಂಥವನಾಗು; ಅದೇನಿರುವುದು ಭೇಗನೆ ಭೊಗುಳು-ವಂಥವಳಾಗು.)

ಪತಿಪುರುಷ (ನಾ)= ಗಂಡ; ಪತಿ; ವಿಧಿ ವತ್ತಾಗಿ ಮದುವೆಯಾದವನು.

ಪತಿವರ್ತಾ (ನಾ)= ಪತಿವ್ರತಾ; ಗಂಡನನ್ನುಳಿದು ಅನ್ಯಪುರುಷನನ್ನು ಕನಸು ಮನಸಿನಲ್ಲಿಯೂ ಬಯಸದವಳು. (ಹಾಡು:- ಪತಿವರ್ತ ಬಾಲೆರಿಗೆ ಪತಿ ಗುರು ದೇವನು। ಪತಿ ಪಾದ ಸೇವೆ ಮಾಡಮ್ಮಾ। ಮುಕ್ತಿಯ ಪಡಿಯಮ್ಮಾ॥)

ಪತ್ತಾ (ನಾ)= ಎಲೆ; ಇಸ್ಪೀಟೆಲೆ; ಜೂಜಾಟದ ಎಲೆ; ವಿಳಾಸ.

ಪತ್ತಾ ಇಲ್ಲ (ಕ್ರಿ)= ಠಾವು ಠಿಕಾಣೆ ಇಲ್ಲ; ಗೊತ್ತು ಗುರಿ ಇಲ್ಲ.

ಪತ್ತಾ ಹಚ್ಚು (ಕ್ರಿ)= ಶೋಧ ಮಾಡು; ಕಂಡು ಹಿಡಿ.

ಪತ್ತಿ (ನಾ) ಉ.= ಬ್ಲೇಡು; ಪೆನ್ನಿನ ಮೂಗು; ಬಟ್ಟೆಯ ಚೂರು; ಉದ್ದಾದ ಬಟ್ಟೆ.

ಪತ್ತಿಡು (ಕ್ರಿ)= ನಂಬು; ನಂಬುಗೆದೋರು; ವಿಶ್ವಾಸ ಹೊಂದು.

ಪತ್ತು (ನಾ)= ನಂಬುಗೆ; ವಿಶ್ವಾಸ; ಘನತೆ; ಗೌರವ.

ಪತ್ತುರಿ (ನಾ)= ಪತ್ರಿ; ಬಿಲ್ವಪತ್ರೆ. (ಹಾಡು: ಗವರಮ್ಮ ಸೆಲ್ಲೆ ಮುಡಿದು ಬಿಲ್ವ ಪತ್ತುರಿ)

ಪತ್ತುರು (ನಾ)= ಪತ್ರ; ಓಲೆ; ಕಾರ್ಡು

ಪತ್ಯಾ (ನಾ)= ಪಥ್ಯ; ವೈದ್ಯರ ಸಲಹೆಯಂತೆ ಆಹಾರಸೇವನೆ ಮಾಡುವಿಕೆ; ಆಹಾರ ಸೇವನೆ ಯಲ್ಲಿ ಅನುಸರಿಸಬೇಕಾದ ನಿಯಮ.

ಪತ್ಯಾಕಿಲ್ಲ (ಕ್ರಿ)= ಪಥ್ಯಕ್ಕೆ ಬೇಕಾದರೂ ಇಲ್ಲ.

ಪತ್ಯಾ ಮಾಡು (ಕ್ರಿ)= ವೈದ್ಯರ ಸಲಹೆಯಂತೆ ಆಹಾರ ಸೇವನೆಯ ನಿಯಮ ಪಾಲಿಸು.

ಪತ್ರಾ (ನಾ)= ಮನೆಯ ಛಾವಣಿಗಾಗಿ ಬಳಸುವ ತಗಡು.

ಪತ್ರಿ (ನಾ)= ಬಿಲ್ವ ಪತ್ರೆ.

ಪತ್ರಿ ಕಾಯಿ (ನಾ)= ಬಿಲ್ವದ ಕಾಯಿ.

ಪತ್ರಿ ಬಿನ್ನಾ (ನಾ)= ಜಂಗಮರ ಮೂಲಕ ಪತ್ರಿದಳ ಕೊಟ್ಟು ನೀಡುವ ಊಟದ ಆ ಮಂತ್ರಣ.

ಪತ್ರೆ ಸರಕಾರ (ನಾ)= ರಜಾಕಾರರ ವಿರುದ್ಧ ಹೋರಾಡಿದ ನಾನಾ ಪಾಟೀಲೆಂಬ ಸ್ವಾತಂತ್ರ್ಯ ಹೋರಾಟಗಾರ (ರಜಾಕಾರರ ಅಂಗಾಲಲ್ಲಿ ಕಬ್ಬಿಣದ ಲಾಲು ಜಡಿಯುತ್ತಿದ್ದ ಹೋರಾಟ ಗಾರ).

ಪತ್ರೋಳ್ಳಿ (ನಾ)= ಪತ್ರಾವಳಿ; ಊಟದೆಲೆ (ಗಾದೆ:- ಪತ್ರೋಳ್ಳಿ ಎತ್ತೇ ತೊತ್ತಿ ಅಂದ್ರ ಉಂಡೋರೇಸ್ಮಂದಿ ಅಂತಂತ!)

ಪತ್ರೋಳ್ಳಿ ಹಚ್ಚು (ಕ್ರಿ)= ಊಟದ ಎಲೆ ತಯಾರಿಸು; ಸಾಲಾಗಿ ಪತ್ರಾವಳಿ ಇರಿಸು.

ಪತ್ತುಲು (ನಾ)= ಪತ್ತಲ; ಪತ್ತಳ.

ಪತ್ಲಾ (ನಾ)= ತರಲವಾದದ್ದು; ಸಡಿಲಾಗಿ ದ್ದದ್ದು; ತಿಳಿ; ತೆಳುವು; ತೆಳ್ಳಗೆ.

ಪದಕಾ (ನಾ)= ಬಿಲ್ಲೆ.

ಪತ್ತುಳು, ಪತ್ತು (ನಾ)= ಪತ್ತುಲು (ನೋಡಿರಿ)

ಪದರ್ಗಲ್ಲು (ನಾ)= ಪದರು ಪದರು ಇರುವ ಕಲ್ಲು.

ಪದಾ (ನಾ)= ಪದ; ಹಾಡು; ಗಾನ; ಗಾಯನ.

ಪದಾ ಹಾಡು (ಕ್ರಿ)= ಹಾಡು ಹೇಳು; ರಾಗ ಬದ್ಧವಾಗಿ ಹಾಡು ಹೇಳು.

ಪದಿ, ಪಾದಿ (ನ್ಯಾ)= ಪದವಿ; ಅಹಂಕಾರ; ಘನತೆ; ಗೌರವ.

ಪದರು (ನಾ)= ಪದರು; ಉಡಿ; ಸೆರಗು.

ಪದುರ್ಪದುರು(ದ್ವಿ)= ಪದರು ಪದರು.

ಪದ್ದತು (ನಾ)= ಪದ್ಧತಿ; ರೂಢಿ; ರಿವಾಜು; ತರೀಖಾ; ಕ್ರಮ; ರೀತಿ.

ಪದ್ರು (ನಾ)= ಪದರು (ನೋಡಿರಿ).

ಪನಾಳಿ (ನಾ)= ಪನೋಳಿ; ಮಾಳಿಗೆ ಮೇಲೆ ಬಿದ್ದ ಮಳೆ ನೀರು ಹರಿದುಕೊಂಡು ಹೋಗಲು ಬಿಟ್ಟ ಹಾದಿ ಮತ್ತು ಕೊಳಾಯಿ (ಒಗಟು:- ಅಂತಪ್ಪನ ಕುದುರಿ ನಿಂತು ಉಚ್ಚಿ ಹೊಯಾದ -ಪನಾಳಿ).

ಪನೋಳಿ (ನಾ)= ಪನಾಳಿ (ನೋಡಿರಿ)

ಪನ್ನಾ (ನಾ)= ಬಟ್ಟೆಯ ಅಗಲಳತೆ.

ಪನ್ನಾಸು (ನಾ)= ಒಂದು ಸಂಖ್ಯೆ; ಐವತ್ತು ೫x೧೦=೫೦.

ಪನ್ನಿ (ನಾ) = ಚಪ್ಪಲಿಯ ಉಂಗುಟ ಮತ್ತು ಇತರೆ ಮೇಲ್ದೊಗಲು.

ಪನ್ನಿಕಡ್ದಾದ= ಚಪ್ಪಲಿಯ ಮೇಲ್ದೊಗಲು ಹರಿದು ಹೋಗಿದೆ.

ಪನ್ಸಾಲ್ ತಾಲೀಂ (ನಾ)= ಬೀದರ ನಗರದ ಒಂದು ಗರಡಿಮನೆ ಮತ್ತು ಅದರ ಓಣಿಯ ಹೆಸರು.

ಪಪ್ಪಳಕಾಯಿ= ಒಂದು ಬಗೆಯ ತಿನ್ನುವ ಕಾಯಿ; ಪಪ್ಪಾಯಿ.

ಪಪ್ಪಾ (ನಾ)ಇಂ.= ಅಪ್ಪ; ತಂದೆ. ಬಾಬಾ; ಮಪ್ಪ.

ಪಪ್ಪಾಯಿ (ನಾ)= ಪಪ್ಪಳ್ಕಾಯಿ (ನೋಡಿರಿ)

ಪಪ್ಪಿ (ನಾ)= ಮುದ್ದು; ಉಪ್ಪಾ; ಉಮ್ಮಾ; ಚುಂಬನ, (ಬಾಲಭಾಷೆ).

ಪಪ್ಪಿ ಕುಡು (ಕ್ರಿ)= ಮುದ್ದು ಕೊಡು; ಚುಂಬಿಸು (ಬಾಲಭಾಷೆ).

ಪಪ್ಪುಳ್ಕಿ (ನಾ)= ಪಪ್ಪಳಿಕೆ; ಹಪ್ಪಳಿಕೆ; ಮೇಲ್ಪದರು; ಹಕ್ಕಳಿಕೆ.

ಪಪ್ಪುಳ್ಕಾಯಿ (ನಾ)= ಪಪ್ಪಾಯಿ.

ಪಯಣಾ (ನಾ)= ಪಯಣ; ಪ್ರಯಾಣ.

ಪಯ್ಣಾ (ನಾ)= ಪಯಣ; ಪ್ರಯಾಣ.

ಪಯ್ಯಾ (ನಾ)= ವಾಹನದ ಗಾಲಿ, ಚಕ್ರ.

ಪಯ್ಯಾ ಪುಸ್ಸನು (ಕ್ರಿ)= ವಾಹನದ ಚಕ್ರದ ಗಾಳಿ ಜೋರಾಗಿ ಹೊರಬರು. (ಸೈಕಲ್ ಪೈಯಾ ಪುಸ್ಸಂತು : ಡಾ. ವಿಕ್ರಮ ವಿಸಾಜಿ.)

ಪರ(ವಿ)= ಬೇರೆ (ಹಾಡು:- ಪರಪುರುಷನ ಮ್ಯಾಲಾ। ಇಡಬ್ಯಾಡವ ಖ್ಯಾಲಾ॥); ಅನ್ಯ; ಪರಕೀಯ.

ಪರಂಚಾ (ನಾ)= ಗೋಡೆಯ ಪ್ಲಾಸ್ಟರ ಕೆಲಸಕ್ಕೆ ಬಳಸುವ ಕಟ್ಟಿಗೆಯ ಅಟ್ಟ; ಗಾಗ್ಗಿ.

ಪರಂತು= ಆದರೆ, ಆದಾಗ್ಯೂ.

ಪರಕ (ನಾ)= ಪರೀಕ್ಷೆ, ಒರೆಗಿಡುವಿಕೆ.

ಪರಕ ಮಾಡು (ಕ್ರಿ)= ಪರೀಕ್ಷಿಸು; ಒರೆಗಿಡು.

ಪರಕಾರ= ಚಿಕ್ಕ ಹುಡುಗಿಯರ ಉಡುಪು; ಲಂಗಾ.

ಪರಖ (ನಾ)= ಪರಕ; ಪರೀಕ್ಷೆ; ಒರೆಗಿಕ್ಕುವಿಕೆ.

ಪರಖ ಮಾಡು (ಕ್ರಿ)= ಪರೀಕ್ಷಿಸು; ಪರಕ ಮಾಡು; ಒರೆಗಿಡು.

ಪರಖಾನಿ (ನಾ)= ಪಡಖಾನೆ; ಝುಳಜಿ; ಧೇಲಜ.

ಪರಟಿ (ನಾ)= ಪರಟೆ; ತೆಂಗಿನ ಮೇಲ್ಪದರಿನ ಚಿಪ್ಪು; ಮೊಳಕಾಲಿನ ಬಟ್ಟಲು.

ಪರಡಿ (ನಾ)= ಪಡ್ಡಿ; ತಕ್ಕಡಿಯ ಆಚೆ-ಈಚೆಯ ಬಟ್ಟಲು.

ಪರದಿ (ನಾ)= ಪರದೆ; ಪರ್ದಿ; ಪರ್ದಾ.

ಪರದೇಶಿ (ನಾ)= ದಿಕ್ಕಿಲ್ಲದವನು; ಅನಾಥ; ನಿರ್ಗತಿಕ; ಬೇರೆ ದೇಶದವನು (ಬೈಗುಳ)

ಪರನಾರಿ (ನಾ)= ಅನ್ಯರ ಮನೆಯ ಹೆಣ್ಣು (ಭಜನೆ:- ಪರನಾರಿ ಸಂಗಾ। ಒಳ್ಳೆದಲ್ಲೊ ಮಂಗಾ। ಅಭಿಮಾನ ಭಂಗಾ। ತಿಳಿತಿಳಿ॥ -ಸಿದ್ಧ ಪ್ರಭು)

ಪರಪುರುಷ (ನಾ)= ಅನ್ಯ ಗಂಡು; ಗಂಡನಲ್ಲ ದವನು (ಭಜನೆ:- ಪರಪುರುಷನ ಮ್ಯಾಲಾ। ಇಡು ಬ್ಯಾಡವ ಖ್ಯಾಲಾ॥ -ಸಿದ್ಧ ಪ್ರಭು)

ಪರಭಾರಿ= ಪರಭಾರೆ; ಪ್ರಶಸ್ತ.

ಪರಮಾತ್ಮಾ (ನಾ)= ದೇವರು.

ಪರವಂಚಾ (ನಾ) ಮ.= ಸಾಮೂಹಿಕವಾಗಿ ಮಗ್ಗಿ ಓದುವಿಕೆ.

ಪರವಾನ್ಗಿ (ನಾ)= ಪರವಾನಿಗಿ; ಅನುಮತಿ; ಸಮ್ಮತಿ; ಒಪ್ಪಿಗೆ.

ಪರವಿ (ನಾ)= ಪರಿವೆ; ಪರ್ವಾ.

ಪರಸೊದ್ಯಾಣ (ನಾ)= ಪರಸ್ವಾಧೀನ; ಪರಾಧೀನ (ಗಾದೆ:- ಪರಸೊದ್ಯಾಣ, ಊಟಕ್ಮದ್ಯಾಣ).

ಪರಳಿ ವೈಜನಾಥ ಲಿಂಗ (ನಾ)= ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾ-ರಾಷ್ಟ್ರದ ಪರಳಿಯ ಜ್ಯೋತಿರ್ಲಿಂಗ.

ಪರಾಟಾ (ನಾ)= ಪರೋಟಾ, ಚಪಾತಿ, ಗೋಧಿ ಹಿಟ್ಟಿನ ರೊಟ್ಟಿ.

ಪರಾಣ (ನಾ)= ಪ್ರಾಣ; ಹರಣ; ಜೀವ.

ಪರಾಣ ತೆಗಿ (ಕ್ರಿ)= ಕೊಲ್ಲು.

ಪರಾಣ ಬಿಡು (ಕ್ರಿ)= ಜೀವ ಬಿಡು; ಸಾಯು.

ಪರಾಣಿ (ನಾ)= ಪ್ರಾಣಿ; ಜೀವಿ; ಪಶು; ಮೂಕಜೀವ.

ಪರಾತ (ನಾ)= ದೊಡ್ಡ ಗಾತ್ರದ ಸ್ಟೀಲ್ ಅಥವಾ ಹಿತ್ತಾಳೆಯ ತಟ್ಟೆ; ಪರ್ವತ; ಶ್ರೀಶೈಲ (ಜಾನಪದ ಪ್ರಾಸ:- ಪಟ್ಟಟ ಪಾರಿ। ನವಣಿ ಝಾರಿ। ಪಾರಿಗಂಡ। ಪರಾತಕ್ಹೋದ। ಪಾರೀ ಆದುಳು। ಪರ್ದೇಶಿ).

ಪರಾಯ (ನಾ)= ಪ್ರಾಯ; ಹರೆಯ

ಪರಾಯಾ (ವಿ.) ಉ.= ಅನ್ಯರಿಗೆ ಸಂಬಂಧಿಸಿದ; ಹೆರವರ.

ಪರಾಯಿ (ವಿ.) ಉ.= ಅನ್ಯರಿಗೆ ಸಂಬಂಧಿಸಿದ; ಹೆರವರಿಗೆ ಸಂಬಂಧಿಸಿದ.

ಪರಿ (ಅ)= ಆವಾಗ, ಆಗ (ಹೋಗಾಪರಿ, ಬರಾಪರಿ ಎಂದರೆ ಹೋಗುವಾಗ, ಬರುವಾಗ ಎಂದಂತೆ)**ಪರಿ (ನಾ)=** ರೀತಿ; ರಿವಾಜು, ಕ್ರಮ, ಸ್ಥಿತಿ; ಪಾಡು (ಈ ಪರಿ ಆ ಪರಿ ಎಂಬಂತೆ), (ಉರ್ದು) ದೇವಗನ್ನಿಕೆ.

ಪರಿಕ್ಶ್ಯಾ (ನಾ)= ಪರೀಕ್ಷೆ; ಇಮ್ತ್ಯಾನ.

ಪರಿಕ್ಶ್ಯಾ ಮಾಡು (ಕ್ರಿ)= ಪರೀಕ್ಷಿಸು, ಒರೆಗಿಡು.

ಪರಿಪಾಟ (ನಾ)= ಪರಿಪಾಠ; ವಾಡಿಕೆ; ರೂಢಿ; ಪದ್ಧತಿ; ಅಭ್ಯಾಸ.

ಪರಿಪಾಟ ಮಾಡ್ಕೊ (ಕ್ರಿ)= ರೂಢಿಗತ ಗೊಳಿಸಿಕೊ; ಅಭ್ಯಾಸ ಮಾಡಿಕೊ.

ಪರಿಯಾಣ (ನಾ)= ಪರಿವಾಣ; ಹರಿವಾಣ; ದೊಡ್ಡ ತಟ್ಟೆ (ಗಾದೆ:- ಜಪೋ ನಾರಾಯಣ। ತೊಕೊ ಪರಿಯಾಣ)

ಪರೀಟ (ನಾ)= ಮಡಿವಾಳ; ಅಗಸ; ಧೋಬಿ.

ಪರುಷ (ನಾ)= ಪರುಸು (ನೋಡಿರಿ)

ಪರುಸು (ನಾ)= ಪರುಷ; ಮುಟ್ಟಿದ್ದೆಲ್ಲವನ್ನು ಹೊನ್ನುಗೊಳಿಸುವ ಧಾತು.

ಪರೇಗಾ (ನಾ)= ಪ್ರಯಾಗಾ ಎಂಬ ಹೆಸರಿನ ಇನ್ನೊಂದು ರೂಪ.

ಪರೇಡು (ನಾ) ಇ.= ಕವಾಯತ್ತು.

ಪರೇಲ್ (ನಾ)= ಮೂರೆಲೆ ಆಟ.

ಪರೇಲಾಡು (ಕ್ರಿ)= ಮೂರೆಲೆ ಆಟವನ್ನು ಆಡು; ಜುವ್ವಾ ಆಡು.

ಪರೇಶಾನ (ನಾ) ಉ.= ತೊಂದರೆ; ಕಷ್ಟ; ಸಂಕಟ.

ಪರೇಶಾನ ಹಾಲತ್ತು (ನಾ) ಉ.= ಕೆಟ್ಟ ಪರಿಸ್ಥಿತಿ.

ಪರೇಶಾನಿ (ನಾ)= ತೊಂದರೆಯ ಅವಸ್ಥೆ.

ಪರೋಟಾ (ನಾ)= ಪರಾಟಾ; ಚಪಾತಿ; ಗೋಧಿ ರೊಟ್ಟಿ.

ಪರೋಪ್ಗಾರ (ನಾ)= ಪರೋಪಕಾರ; ಪರರಿಗೆ ಮಾಡುವ ಸಹಾಯ.

ಪರ್ಕಾರ (ನಾ)= ಪ್ರಕಾರ; ವಿಧ; ರೀತಿ; ವಿಧಾನ; ಬಗೆ.

ಪರ್ಕಾಶ (ನಾ)= ಪ್ರಕಾಶ; ಬೆಳಕು.

ಪರ್ಚಾ (ನಾ)= ಪೇಪರು; ಕರಪತ್ರ; ಪರೀಕ್ಷಾ ಪತ್ರ.

ಪರ್ಚಾರ (ನಾ)= ಪ್ರಚಾರ; ಹರಡುವಿಕೆ.

ಪರ್ಜಾಪತಿ (ನಾ)= ಪುರುಷನ ಜನನೇಂದ್ರಿಯ.

ಪರ್ಜಾರಾಜ (ನಾ)= ಪ್ರಜಾರಾಜ್ಯ; ಗಣ ತಂತ್ರ.

ಪರ್ಜಾವಾಣಿ (ನಾ)= ಪ್ರಜಾವಾಣಿ ಎಂಬ ದಿನ ಪತ್ರಿಕೆ.

ಪರ್ಟಿ (ನಾ)= ಪರಟೆ; ತೆಂಗಿನ ಚಿಪ್ಪು.

ಪರ್ಣಾಮ (ನಾ)= ಪರಿಣಾಮ; ಪ್ರಣಾಮ.

ಪರ್ತಗಿರಿ (ನಾ)= ಪರ್ವತಗಿರಿ; ಶ್ರೀಶೈಲ. (ಭಜನೆ:- ಪರ್ತಗಿರಿಮ್ಯಾಲ ನಂದೀಕೋಲ್। ಮೆರೆಯುತ ಹೊಂಟವ ಸಾಲಿಗ್ಸಾಲ್॥)

ಪರ್ತಮಲ್ಲಯ್ಯ (ನಾ)= ಶ್ರೀಶೈಲ ಮಲ್ಲಿಕಾರ್ಜುನ.

ಪರ್ತಿಪದಾ (ನಾ)= ಪ್ರತಿಪದಾ; ಪಕ್ಷದ ಮೊದಲ ದಿನ; ಪಾಡ್ಯಾ.

ಪರ್ದಾ (ನಾ) ಉ.= ಪರದೆ; ಮುಸುಕು; ಇತ್ಯಾದಿ.

ಪರ್ದಾಖಾನಿ (ನಾ) ಉ.= ಪರದೆಯ ಮನೆ.

ಪರ್ದಿ (ನಾ)= ಪರದೆ; ಮುಸುಕು; ಪರ್ದಾ,

ಪರ್ದಿಲಂಗೋಟಿ (ನಾ)= ನಡಕ್ಕೆ ಲಂಗೋಟಿ ಬಿಗಿದು, ಎದುರು ಭಾಗದಲ್ಲಿ ತೊಡೆ ಮುಚ್ಚುವಂತೆ ಬಟ್ಟೆಯನ್ನು ಜೋತುಬಿಡುವಿಕೆ; ಒಂದು ಬಗೆಯ ಲಂಗೋಟಿ.

ಪರ್ಧಾನಿ (ನಾ)= ಪ್ರಧಾನಿ; ಪ್ರಧಾನಮಂತ್ರಿ

ಪರ್ಪಂಚ (ನಾ)= ಪ್ರಪಂಚ; ಸಂಸಾರ; ಜಗತ್ತು; ಲೋಕ

ಪರ್ಪಂಚ ಮಾಡು (ಕ್ರಿ)= ಸಂಸಾರ ನಡೆಸು.

ಪರ್ಭಾತ ಫೇರಿ (ನಾ)= ರಾಷ್ಟ್ರೀಯ ಹಬ್ಬಗಳಂದು ಮುಂಜಾನೆ ಹೊತ್ತು ಹಾಕುವ ಗ್ರಾಮದ ಫೇರಿ, ಪ್ರದಕ್ಷಿಣೆ.

ಪರ್ಭಾರೆ (ನಾ)= ಪ್ರಶಸ್ತ; ವಿಸ್ತಾರ; ಬೇರೆಯಾಗಿ.

ಪರ್ಬುದ್ಧ (ನಾ)= ಪ್ರಬುದ್ಧ; ಜ್ಞಾನಿ; ವಿದ್ವಾಂಸ.

ಪರ್ಭುನ್ಕಟ್ಟಿ (ನಾ)= ಮಾಣಿಕ ಪ್ರಭುವಿನ ಮಾಣಿಕ ನಗರದ ಇನ್ನೊಂದು ಹೆಸರು.

ಪರ್ಮಾಣ (ನಾ)= ಪ್ರಮಾಣ; ನಿರ್ಧಾರಿತ; ಲಿಖಿತ.

ಪ್ರಮಾಣ ಪೂರ್ತೆ= ಪ್ರಮಾಣ ಪೂರ್ವಕವಾಗಿ.

ಪರ್ಮಾಣ ಮಾಡು (ಕ್ರಿ)= ಆಣೆ ಮೂಡು.

ಪರ್ಮಾತುಮಾ (ನಾ)= ಪರಮಾತ್ಮ

ಪರ್ಮಿ (ನಾ)= ಪ್ರಮೇಹ; ಮೂತ್ರಕೋಶ ದಲ್ಲಿ ಕಲ್ಲುಂಟಾಗುವ ರೋಗ; ಸಕ್ಕರೆ ಬೇನೆ.

ಪರ್ಯಾಣ (ನಾ)= ಪರಿಯಾಣ; ಹರಿವಾಣ; ದೊಡ್ಡ ತಟ್ಟೆ.

ಪರ್ವಂಚಾ (ನಾ)= ಪರವಂಚ; ಸಾಮೂಹಿಕ ಮಗ್ಗಿ ಪಾಠ; ತಾರಸಿ ಕೆಲಸಕ್ಕಾಗಿ ಕಟ್ಟಿದ ಕಟ್ಟಿಗೆಯ ಅಟ್ಟ.

ಪರ್ವರಿಶ್ (ನಾ) ಉ.= ಪಾಲನ ಪೋಷಣ

ಪರ್ಸಂಗ= ಪ್ರಸಂಗ.

ಪರ್ಸಗಟ್ಟಿ (ನಾ)= ಪರುಷಕಟ್ಟೆ; ಬಸವಣ್ಣ ನವರು ಸಾರ್ವಜನಿಕರ ಅಹವಾಲು ಕೇಳಲು ಕುಳಿತುಕೊಳ್ಳುತ್ತಿರುವ ಕಟ್ಟೆ; ಗದ್ದುಗೆ (ಹಾಡು:- ಪರುಷ ಕಟ್ಟೆಯ ಮೇಲೆ ಪಶುಗಳ। ಕತ್ತು ಕೊರೆಯುವ ನೋಟವು।। -ಶರಣ ಕವಿ ಮಹಾಗಾಂವ)

ಪರ್ಸಬಟ್ಲು= ಪರುಷ ಬಟ್ಟಲು; ಸವೆಯ ಲಾರಗ ನಿಧಿ ಕೊಡುವ ಬಟ್ಟಲು; ಸವೆಯ ಲಾರದ ಅನ್ನ ಕೊಡುವ ಅಕ್ಷಯಪಾತ್ರೆ.

ಪರ್ಸಲ್ಲು (ನಾ)= ಪ್ರಸಾದ; ದೇವರೆದುರಿನ ಧುನಿಯ ಬೂದಿ.

ಪರ್ಸಲ್ಲು ಹಚ್ಚು (ಕ್ರಿ)= ದೇವರೆದುರಿನ ಧುನಿಯ ಇಲ್ಲವೆ ಧೂಪಾರತಿಯ ಭಸ್ಮವನ್ನು ಲೇಪಿಸು; ಹಣೆಗೆ ಭಸ್ಮ ಹಚ್ಚು.

ಪರ್ಸಾದ (ನಾ)= ಪ್ರಸಾದ; ದೇವರಿಗೆ ನೈವೇದ್ಯ ತೋರಿದ ನಂತರ ವಾಪಸ್ಸು ಬಂದದ್ದು; ಶರಣ ಮಾರ್ಗಿಗಳು ಉಂಡು ಮಿಕ್ಕದ್ದು.

ಪರ್ಸಾದಿಕ (ನಾ)= ಪ್ರತಿಯೊಂದು ಭೋಜ್ಯವನ್ನು ಲಿಂಗಾರ್ಪಿತ ಮಾಡಿ ಸೇವಿಸುವವನು.

ಪರ್ಸಿದ್ದ (ನಾ)= ಪ್ರಸಿದ್ಧ.

ಪರ್ಳಿ (ನಾ)= ಪರಳಿ; ಜೋತಿರ್ಲಿಂಗ ಇರುವ ಊರು.

ಪರ್ಳ್ಯಾ (ನಾ)= ಪ್ರಳಯ; ವಿನಾಶ ಕಾಲ.

ಪರ್ಸಿ (ನಾ)= ಪ್ರವಾಸಿ; ತೀರ್ಥಯಾತ್ರೆಗೆ ಹೊರಟ ಭಕ್ತರ ತಂಡ.

ಪರ್ಸು (ನಾ)ಇಂ.= ದುಡ್ಡಿಡುವ ಕಿರುಕೈಚೀಲ.

ಪಲಂಗು (ನಾ)= ಪಲ್ಲಂಗು; ಮಂಚ.

ಪಲಕ (ನಾ)= ಒಡೆದ ತೊಗರೆ, ಕಡಲೆ, ಚಣಗಿ, ಹುಣಸೆ ಬೀಜದ ಬೇಳೆ.

ಪಲಗ (ನಾ)= ಕುಂಟೆಯ (ಗಳೆದ) ಜೋಡು ತಾಳುಗಳಿಗೆ ಜೋಡಿಸಲಾಗುವ ಕಬ್ಬಿಣದ ಉಪಕರಣ.

ಪಲ್ಕಾ (ನಾ)= ಪಲಕ (ನೋಡಿರಿ).

ಪಲ್ಕಿ (ನಾ)= ಪಾಲಕಿ; ಪಲ್ಲಕ್ಕಿ; ಮೇಣೆ.

ಪಲ್ಟಾಸು (ಕ್ರಿ)= ಒಂದು ಚೀಲದಿಂದ ಮತ್ತೊಂದು ಚೀಲಕ್ಕೆ ಸುರುವು; ಬದಲಾಸು; ಒಳಮಗ್ಗುಲನ್ನು) ಮೇಲು ಮಗ್ಗುಲನ್ನಾಗಿ ಮಾಡು; ಹೊರಳಿಸು.

ಪಲ್ಟಿ (ನಾ)= ತಲೆ ಕೆಳಗಾಗುವಿಕೆ; ಚೀಲದಿಂದ ಚೀಲಕ್ಕೆ ಅನಾಜು ಸುರುಹುವಿಕೆ; ಲಾಗ.

ಪಲ್ಟಿ ಮಾಡು (ಕ್ರಿ)= ಒಂದು ಚೀಲದ ಧಾನ್ಯವನ್ನು ಇನ್ನೊಂದು ಚೀಲಕ್ಕೆ ಸುರುವು; ಬರುಕು; ಹೊರಳಿಸು.

ಪಲ್ಟಿ ಹೊಡಿ (ಕ್ರಿ)= ಚೀಲದಿಂದ ಚೀಲಕ್ಕೆ ಧಾನ್ಯವನ್ನು ಸುರುವು; ಪಲ್ಟಾಯಿಸು; ಚೀಲ ಬದಲಾಯಿಸು, ಲಾಗ ಹೊಡಿ. ಚೀಲದ ಮೇಲೆ ಚೀಲ ಹೊಂದಿಸು.

ಪಲ್ಯಾ (ನಾ)= ಪಲ್ಲೆ; ತರಕಾರಿ; ಕಾಯಿಪಲ್ಲೆ; ಮಾಂಸ.

ಪಲ್ಲಾ (ನಾ)= ಪಲ್ಲ; ಧಾನ್ಯದ ಒಂದು ತೂಕದ ಮಾನ; ನೂರು ಸೇರಿನ ತೂಕ.

ಪಲ್ಲಕ್ಕಿ (ನಾ)= ಪಾಲಕಿ; ಪಲ್ಕಿ; ಮೇಣೆ (ಹಂತಿಯ ಹಾಡು:- ಚಾರಿಗಲೇರಿಯ ಸುತ್ತ। ಚಂಡಮಾವಿನ ಗಿಡ। ಗುಂಡದ ಸುತ್ತಾ ಗಿಳಿ ಹಿಂಡು। ವೀರಯ್ನ। ಪಲ್ಲಕ್ಕಿ ಸುತ್ತಾ ಪರಿಮಳ।।)

ಪಲ್ಲಟ (ನಾ)= ಬದಲಾವಣೆ; ಮಾರ್ಪಾಟು.

ಪಲ್ಲೆ (ನಾ)= ಪಲ್ಯಾ; ಪಲ್ಲೆ; ತರಕಾರಿ; ಮಾಂಸ. (ಜಾನಪದ ಪ್ರಾಸ:- ಎಂದು ಇಲ್ದ ಗಂಡಾ। ಫುಂಡಿಪಲ್ಲೆ ತಂದ। ಫುಂಡೀ ಪಲ್ಲೆ ಕುಪ್ಪಿಲ್ಹೋದ್ರ। ಕುಂಡಿ ಕುಂಡಿ ಒದ್ದಾ। ನೋಡ್ನೋಡೆಕ್ಕಾ। ನೋಡಿವ್ನ ಸೊಕ್ಕಾ।।)

ಪವಾಡ (ನಾ)= ಆಶ್ಚರ್ಯಕರವಾದ; ಶರಣರ ಬದುಕಿನಲ್ಲಿ ಜರುಗಿದ ಘಟನೆ; ಅಘಟಿತ ಘಟನೆ; ಅತಿಮಾನುಷ ಕಾರ್ಯ, ಪಾವುಡ.

ಪವಾಡ ಪುರ್ಸ್ಯಾ (ನಾ)= ಪವಾಡ ಪುರುಷ; ಅಘಟಿತ ಘಟನೆ ಮೆರೆದ ವ್ಯಕ್ತಿ (ಹಾಡು:- ಪವಾಡ ಪುರ್ಸ್ಯಾ। ಭವಭಯನಾಶಾ। ಕಾಯೋ ಭುವನೇಶಾ। ವಂದಿಪೆ ಹುಡಗಿಪುರ ಈಶಾ।।-ದೇಶಾಂಶ ಹುಡಗಿ)

ಪವಾಡಾ (ನಾ)= ಮರಾಠಿಯ ಜೀಜೀ ಎಂಬ ಪಲ್ಲವಿಯುಳ್ಳ ಹಾಡು; ಮರಾಠಿಯ ಲಾವಣಿ ಪದ.

ಪವಿತ್ತುರ (ನಾ)= ಪವಿತ್ರವಾದದ್ದು; ಶುದ್ಧ ವಾದದ್ದು; ನಿರ್ಮಲವಾದದ್ದು.

ಪಸಂದ ನಾಪಸಂದ (ನಾ) ಉ.= ಬೇಕು ಬೇಡ; ಒಪ್ಪಿಗೆ ತಿರಸ್ಕಾರ.

ಪಸಂದಾಗು (ಕ್ರಿ)= ಮನಸ್ಸಿಗೆ ಒಪ್ಪಿಗೆಯಾಗು; ಬೇಕೆನ್ನಿಸು.

ಪಸಾರ (ನಾ)= ಹರಡಿಟ್ಟದ್ದು; ಪಸಾರಾ; ಅಂಗಡಿ; ಅಂಗಡಿಯ ಸರಕು; ಸರಕನ್ನು ಜನರ ಕಣ್ಣಿಗೆ ಕಾಣುವಂತೆ ಓರಣವಾಗಿ ಹೊಂದಿಸಿಡುವಿಕೆ.

ಪಸಾರಾ (ನಾ)= ಪಸಾರ (ನೋಡಿರಿ).

ಪಸೀನಾ (ನಾ)= ಬೆವರು, ಘಾಮು.

ಪಸೀನಾ ಪಸೀನಾ ಆಗು (ಕ್ರಿ)= ಮೈಯೆಲ್ಲಾ ಬೆವೆತುಹೋಗು.

ಪಸೀನಾ ಬಿಡು (ಕ್ರಿ)= ಬೆವರುಂಟಾಗು.

ಪಸು (ನಾ)= ಪಶು; ಪ್ರಾಣಿ; ಆಕಳು; ಎಮ್ಮೆ-ಎತ್ತು.

ಪಸೇರಿ (ನಾ)= ಪಂಚೇರು; ಐದು ಸೇರು.

ಪಸ್ತಖೋಮ (ನಾ)= ಸ್ವಾತಂತ್ರ್ಯ ಪೂರ್ವದಲ್ಲಿ ರಜಾಕಾರರೆಂಬ ಭಯೋತ್ಪಾದಕರ ಜತೆ ಸೇರಿಸಿಕೊಂಡು ಹಿಂದುಗಳ ಮೇಲೆ ಅತ್ಯಾಚಾರವೆಸಗಲು ಸಹಕರಿಸಿದ ದಲಿತರ ತಂಡ.

ಪಸ್ತಹಿಮ್ಮತ್ತಾಗು (ಕ್ರಿ)= ಅಧೈರ್ಯ ತಾಳು; ಹಿಂಜರಿ; ಭಯದಿಂದ ಹಿಂದಕ್ಕೆ ಸರಿ.

ಪಸ್ತ ಹಿಮ್ಮತ್ತು (ನಾ)= ಅಧೈರ್ಯ, ಹಿಂಜರಿಕೆ; ಧೈರ್ಯಗೆಡುವಿಕೆ.

ಪಸ್ತಾಗು (ಕ್ರಿ)= ಹಿಂಜರಿ; ಮೆತ್ತಗೆ ಬೀಳು.

ಪಹಣಿ (ನಾ)ಮ.= ಪಾಣಿ; ಬೆಳೆಯ ಗುರುತಿಸು ವಿಕೆ; ಬೆಳೆಯ ಅಂದಾಜನ್ನು ಗುರುತಿಸುವಿಕೆ; ತಲಾಟಿಯ ಹತ್ತಿರ ಇರುವ ಖಾತೆದಾರನ ಭೂ ವಿವರ.

ಪಹಣೀ ನಕಲು (ನಾ)= ಪಾಣಿ ನಕಲು; ಖಾತೆದಾರನ ಭೂಮಿಗೆ ಸಂಬಂಧಿಸಿದ ವಿವರದ ನಕಲು.

ಪಹಿಲಾ (ಕ್ರಿ)= ಒಂದನೆಯದು; ಪ್ರಥಮ.

ಪಹಿಲಿ (ನಾ)= ಒಂದನೇ ವರ್ಗ.

ಪಹಿಲೆ (ಅ)= ಪ್ರಥಮ; ಮೊದಲಿಗೆ (ಹಾಡು:- ಪಹಿಲೆ ಪ್ರತಮದಲ್ಲಿ। ಯಾರೀಗಿ ನೆನೆಯಾಲಿ। ಕಲಬುರ್ಗಿ ಶರಣಾ ಬಸ್ಸಪ್ಪನಾ. ಶಿಶುಪ್ರಾಸ:- ಪೈಲೆ ಪಂಚ। ಹೊಟ್ಯಾನ ಜಂತ। ಕಟ್ಟಿ ಹಣಮಂತ ಬಿಟ್ಟಿ ಹೊಲ್ಯಾ।।)

ಪಳಳಳ (ನಾ)= ಕಾಳು, ನೀರು ಇತ್ಯಾದಿಗಳ ಒಸರುವಿಕೆ.

ಪಳಾ (ನಾ)= ಪಲಾಯನ; ಓಡಿ ಹೋಗುವಿಕೆ; ಹೈಕೈ ಕಡಿಯುವಿಕೆ; ಫರಾರ ಆಗುವಿಕೆ.

ಪಳಾ ಆಗು (ಕ್ರಿ)= ಓಡಿಹೋಗು; ಕಾಲು ಕಿತ್ತು; ಪಲಾಯನ ಮಾಡು.

ಪಳ್ದ್ಯಾ (ನಾ)= ಪಳದ್ಯ; ಮೊಸರು ಅಥವಾ ಮಜ್ಜಿಗೆಯಿಂದ ತಯಾರಿಸಿದ ಸಾರು; ಮಜ್ಜಿಗೆಯಾಂಬ್ರ (ಬ್ರಾಹ್ಮಣರ ಭಾಷೆ).

ಪಳ್ಳಿ (ನಾ)= ಹಳ್ಳಿ; ಸಣ್ಣ ಊರು; (ಉದಾ:- ಬೋರಂಪಳ್ಳಿ; ತಾಲಂಪಳ್ಳೀ; ಘೋಡಂಪಳ್ಳಿ, ಗಾರಂಪಳ್ಳಿ, ಚರಕಪಳ್ಳಿ; ಎಂಪಳ್ಳಿ; ಪೆಂಚ್ಪಳ್ಳಿ; ನಾಗ್ಮಾರಪಳ್ಳಿ; ಚಂಡ್ರಂಪಳ್ಳಿ ಇತ್ಯಾದಿ)

ಪಾ (ನಾ)= ಮುತ್ತು; ಚುಂಬನ (ಬಾಲ ಭಾಷೆ).

ಪಾಂಕ (ನಾ)= ವಾಹನದ ಎಚ್ಚರಿಕೆ ಸದ್ದು.

ಪಾಂಚ (ನಾ) ಉ= ಐದು.

ಪಾಂಚಪಾಂಡೋರು (ನಾ)= ಐದು ಮಂದಿ ಪಾಂಡವರು.

ಪಾಂಚಾಳ (ನಾ)= ಬಡಿಗ, ಕಮ್ಮಾರ, ಅಕ್ಕಸಾಲಿಗ ಮೊದಲಾದ ವರ್ಗಕ್ಕೆ ಸೇರಿದವರು; ರೈತರ ಆಯದ ಹಕ್ಕುದಾರರು.

ಪಾಂಚ್ಸೇರು (ನಾ)= ಐದು ಸೇರು.

ಪಾಂಡು (ನಾ)= ಪಾಂಡವ; ಪಾಂಡುರಾಜ.

ಪಾಂಡುರಂಗ (ನಾ)= ಪಂಢರಪುರದ ದೇವರು; ದಾಸವರ್ಯ ಪುರಂದರ ದಾಸರ ಆರಾಧ್ಯ ದೇವರು.

ಪಾಂಡೋರು (ನಾ)= ಪಾಂಡವರು (ಹಾಡು:- ಕಲ್ಲ ಕಡ್ಬವ ಮಾಡಿ। ಮುಳ್ಳ ಸ್ಯಾವಿಗಿ ಮಾಡಿ। ಬನ್ನಿ ಎಲಿಯಾ ಪತರೋಳಿ। ಪಾಂಡೋರು। ಉಂಡ ಹೋಗ್ಯಾರ ವನವಾಸಾ।।)

ಪಾಂಡೋರ್ವನ್ವಾಸ (ನಾ)= ಐದು ಮಂದಿ ಪಾಂಡವರು ಮತ್ತು ದ್ರೌಪದಿ ಕೂಡಿ ಅನುಭವಿಸಿದ ಅರಣ್ಯವಾಸದ ಕಷ್ಟನಷ್ಟ (ಗಾದೆ:- ಪಾಂಡೋರ್ವನವಾಸ, ನಮ್ಮ ವನವಾಸ ಒಂದಾಯ್ತು).

ಪಾಂಡ್ಯಾ (ನಾ)= ಪಾಂಡು; ಪಾಂಡವ; ಎತ್ತುಗಳಿಗೆ ಇಡುವ ಹೆಸರು.

ಪಾಕ್ ಸಾಪ್ (ವಿ) ಉ.= ಸ್ವಚ್ಛವಾದ; ಜಳಜಳ.

ಪಾಕಿ (ನಾ)= ದುಡ್ಡು; ಹಣ; ರೊಕ್ಕ (ಜಾನಪದ ಗಾದೆ:- ಪಾಕಿ ಕೊಟ್ರ ಪಾಶಾನ್ನ ಗಳ್ಗೀ ಬರ್ತಾಳ).

ಪಾಕಿಸ್ತಾನ್ಕ ಹೋದ (ಕ್ರಿ)= ಸತ್ತು ಹೋದನು.

ಪಾಕೀಜ (ವಿ.) ಉ.= ಸ್ವಚ್ಛ; ಜಳಜಳ; ಪಾಕ್ ಸಾಫ್.

ಪಾಕೀಜಗಿ (ನಾ) ಉ.= ಸ್ವಚ್ಛತೆ.

ಪಾಕೀಟು (ನಾ) ಇಂ= ಹಣದ ಚಂಚಿ; ಪರ್ಸು.

ಪಾಕೀಟು ಹೊಡಿ (ಕ್ರಿ)= ಹಣದ ಸಂಚಿಯನ್ನು ಕಳವು ಮಾಡು.

ಪಾಕು (ನಾ)= ಬೆಲ್ಲದ ಕಡಾಯಿಯಲ್ಲಿ ಕುದಿಯುತ್ತಿರುವ ಕಬ್ಬಿನ ರಸದ ಪಾಕ; ಬೆಲ್ಲ ಅಥವಾ ಸಕ್ಕರೆಯನ್ನುಕುದಿಸಿ ತಯಾರಿಸಿದ ಗಾಢವಾದ ದ್ರಾವಣ.

ಪಾಕ್ಕಿ (ನಾ)= ಪಕ್ಕು; ಪಕ್ಕೆ; ಪ್ರಾರಂಭಾವಸ್ಥೆಯ ಹಣ್ಣು.

ಪಾಕ್ಕಿ ಆಗು (ಕ್ರಿ)= ಪಕ್ಕೆಯುಂಟಾಗು.

ಪಾಗಲ್ (ನಾ) ಉ.= ಹುಚ್ಚ.

ಪಾಗಲ್ಖಾನಿ (ನಾ) ಉ.= ಹುಚ್ಚರ ಮನೆ, ಆಸ್ಪತ್ರೆ.

ಪಾಗಲ್ಲಾಗು (ಕ್ರಿ)= ಹುಚ್ಚಾಗು.

ಪಾಗಾ (ನಾ) ಉ.= ಪಾಗ, ಕುದುರೆಯ ಲಾಯ, ಅಶ್ವ ಶಾಲೆ.

ಪಾಗಾದುಕ್ಕುದ್ರಿ (ನಾ)= ವ್ಯವಸ್ಥಿತವಾಗಿ ಸಾಕಲ್ಪಟ್ಟ ಕುದುರೆ.

ಪಾಚಾ(ಶಾ)ಮಿಯ್ಯಾ (ನಾ)= ಸ್ವಾತುತ್ತ ಸಂಗ್ರಾಮ ಕಾಲದಲ್ಲಿ ರಜಾಕಾರ ವಿರುದ್ಧ ಹುಡುಗಿ ಗ್ರಾಮದ ಹಿಂದುಗಳ ಸಂರಕ್ಷಣೆಗಾಗಿ ಹೋರಾಡಿ ಮಡಿದ ಸ್ವಾತಂತ್ರ್ಯ ವೀರ.

ಪಾಚು (ನಾ) ಮ.= ಐದು; ಪಾಂಚ.

ಪಾಚೇಲಿ (ನಾ)= ಪಾತೇಲಿ; ಅಗಲ ಬಾಯಿಯ ಮಡಕೆ; ಬೆಣ್ಣೆ ಮುದ್ದೆಗಳನ್ನಿಡುವ ಮಡಕೆ.

ಪಾಚ್ಚುರು (ನಾ)= ಪಚ್ಚುರು; ಪಚ್ಚರ್; ಕಟ್ಟಿಗೆಯ ಸಂದಿನಲ್ಲಿ ಇಲ್ಲವೆ ಕೊಡಲಿ, ಸಲಿಕೆ, ಗುದ್ದಲಿ ಇತ್ಯಾದಿಗಳ ಕಾವುಗಳ ಸಂದುಗಳಲ್ಲಿ ಬಿಗಿಗೊಳಿಸುವ ಕಟ್ಟಿಗೆ ಚೂರು ಅಥವಾ ಚಕ್ಕೆ.

ಪಾಟಾ (ನಾ) ಹಿಂ.= ಬಂಡಿ, ವಾಹನಾದಿಗಳ ಧುರಿಯ ಮೇಲ್ಭಾಗದಲ್ಲಿ ಹೊಂದಿಸುವ ಉಕ್ಕಿನ ಪಟ್ಟಿ.

ಪಾಟಾಮುರಿ (ಕ್ರಿ)= ಧುರಿಯ, ಮೇಲ್ಭಾಗದ ಕಬ್ಬಿಣದ ಪಟ್ಟಿಯು ತುಂಡಾಗು.

ಪಾಟ (ನಾ)= ಕಪ್ಪು ಹಲಗೆ; ನಾಮಫಲಕ; ಬೋರ್ಡು; ಸ್ಲೇಟು (ಶಿಶುಪ್ರಾಸ:- ಪಾಟಿ ಒಡಿತು। ಸಾಲಿ ಬಿಟ್ಟು। ಅವ್ವಾ ನನ್ನ ಹಸುವಾಯ್ತು!)

ಪಾಟೀಲ (ನಾ)= ಪಟೇಲ; ಗೌಡ.

ಪಾಟೀಲ್ಕಿ (ನಾ)= ಗೌಡಿಕೆ; ಪಟೇಲಗಿರಿ.

ಪಾಟೋಳ್ಕಾಯಿ (ನಾ)= ಒಂದು ಪ್ರಕಾರದ ಬಳ್ಳಿಯ ಚಪ್ಪಟೆಯೂ, ಉದ್ದವೂ ಆಗಿರುವ ತರಕಾರಿಯ ಕಾಯಿ.

ಪಾಟ್ಲಿ (ನಾ)= ದಪ್ಪವಾದ ಚಿನ್ನದ ಕೈಬಳೆ; ಬಿಲವಾರ; ಕೈಬಳೆ; ಪಟ್ಟೆ ಬಳೆ.

ಪಾಟ್ಲೆಪ್ಪ (ನಾ)= ವ್ಯಕ್ತಿಗೆ ಇಡುವ ಒಂದು ಹೆಸರು.

ಪಾಠಾ (ನಾ)= ಪಾಠ; ಓದುವಿಕೆ; ಕಲಿಯುವ ಅಭ್ಯಾಸ.

ಪಾಠಾ ಓದು (ಕ್ರಿ)= ಅಭ್ಯಾಸ ಮಾಡು.

ಪಾಠಾ ಓದ್ಸು (ಕ್ರಿ)= ಕಲಿಸು; ಅಭ್ಯಾಸ ಮಾಡಿಸು.

ಪಾಠ್ಮಾಡು (ಕ್ರಿ)= ಅಭ್ಯಾಸ ಮಾಡು; ಬಾಯಿ ಪಾಠ ಮಾಡು; ಕಂಠಗತ ಮಾಡು.

ಪಾಡ್ (ನಾ) ಉ.= ಪಹಾಡ; ಗುಡ್ಡ; ದಿನ್ನೆ ಉದಾ:- ಕೊಳ್ಳೂರು ಪಾಡ ಎಂಬ ಬಸವ ಕಲ್ಯಾಣ ತಾಲೂಕಿನ ಕೊಳ್ಳೂರಿನ ಗುಡ್ಡದ ಊರು ಮತ್ತು ದರ್ಗಾ.

ಪಾಡಗಾಯಿ (ನಾ)= ಮರದ ಮೇಲೆ ಹಣ್ಣಾದ ಮಾವು.

ಪಾಡವಾ (ನಾ)= ಗುಡಿ ಪಾಡವಾ; ಯುಗಾದಿ ಹಬ್ಬ.

ಪಾಡಾಗು (ಕ್ರಿ)= ಒಳ್ಳೆಯದಾಗು; ಚೆನ್ನಾಗು; ಕಾಯಿಯು ಹಣ್ಣಿನ ಹದಕ್ಕೆ ಬರು; ಮಾಗು; ಪಕ್ವವಾಗು; ಮರದ ಮೇಲೆಯೇ ಮಾವು ಹಣ್ಣಿಗೆ ಬರು. (ಗಾದೆ:- ಊರಿಗಿ ಕೇಡಾದ್ರ ಲೌಡಿಗಿ ಪಾಡಾಯ್ತು.).

ಪಾಡು (ನಾ)= ಗಿಡದ ಮೇಲೆ ಹಣ್ಣಾದ ಮಾವು.

ಪಾಡು ಭೀಳು= ಹಣ್ಣಾದ ಮಾವು ಮರದಿಂದ ಕೆಳಗುದುರು; ಹಣ್ಣು ಮಾವುದೇಟು ಬಿಟ್ಟು ಕೆಳಗೆ ಬೀಳು.

ಪಾಡ್ಯಾ (ನಾ)= ಪಾಡ್ಯಮಿ; ಪ್ರತಿಪದಾ; ಪಕ್ಷದ ಮೊದಲನೇ ದಿನ; ದೀಪಾವಳಿ ಪಾಡ್ಯಮಿ.

ಪಾಣಿ (ನಾ)= ಪಹಣಿ; ಬೆಳೆಯ ಇಳುವರಿಯ ಅಂದಾಜನ್ನು ಗುರುತಿಸಿ ಬರೆದದ್ದು; ತಲಾಟಿಯ ಹತ್ತಿರ ಇರುವ ಖಾತೆದಾರನ ಭೂಮಿಯ ವಿವರ.

ಪಾಣಿಪೂರಿ (ನಾ)= ಗಪ್ ಚಿಪ್, ಹುಳಿಸಾರು, ಕರಿದ ಹಪ್ಪಳ, ಕುದಿಸಿದ ಬೇಳೆ ಕಾಳು ಒಟ್ಟಾಗಿಸಿ ತಿನ್ನುವ ತಿಂಡಿ.

ಪಾತರಗಿತ್ತಿ (ನಾ)= ಪತಂಗ; ಬಣ್ಣ ಬಣ್ಣದ ರೆಕ್ಕೆ ಗಳುಳ್ಳ ಚಿಟ್ಟೆ; ಪಾತ್ರದವಳು; ವೇಶ್ಯ; ಸೂಳೆ.

ಪಾತಾಳ (ನಾ)= ನೀರಿನಲ್ಲಿ ಕಣ್ಣಿಗೆ ಕಾಣದಷ್ಟು ಆಳದಲ್ಲಿರುವ ಭೂಮಿಯ ತಳ; ಅತಳ, ವಿತಳ, ಸುತಳ, ಪಾತಾಳವೆಂಬ ಏಳು ಲೋಕ ಗಳಲ್ಲಿ ಒಂದಾದದ್ದು. ಪ್ರಾಸಬದ್ಧ ಮಾತು. (ಉದಾ:- ಆ ಪಾತಾಳ ಲೋಕವಂ ಬಿಟ್ಟು ಈ ಭೂಲೋಕಕ್ಕೆ ಬರಲು ಕಾರಣವೇನು ತಾಯೆ ನೀ ಎನ್ನ ಮಾಯೆ.)

ಪಾತಾಳ್ಗಂಗಾ (ನಾ)= ಶ್ರೀಶೈಲ ಬೆಟ್ಟದಡಿ ಹರಿವ ಒಂದು ನದಿ.

ಪಾತಾಳ್ಗಡ್ಡಿ (ನಾ)= ಪಾತಾಳಗರುಡ; ಬಾವಿ, ಕೆರೆಗಳಾದಿಯಲ್ಲಿ ಬಿದ್ದು ಮುಳುಗಿದ ವಸ್ತುಗಳನ್ನು ಮೇಲೆತ್ತಲು ಬಳಸುವ ಕೊಂಡಿಗಳುಳ್ಳ ಕಬ್ಬಿಣದ ಸಾಧನ.

ಪಾತುರಿ (ನಾ)= ಪಾತ್ರೆ.

ಪಾತುರ್ಗಲ್ಲಿ (ನಾ)= ವೇಶ್ಯೆಯರ ಓಣಿ.

ಪಾತುರ್ನಾಚು (ನಾ)= ವೇಶ್ಯೆಯ ನರ್ತನ; ನಿರಂತರ ನಡೆದಾಟ.

ಪಾದಗಟ್ಟಿ (ನಾ)= ಪಾದುಕೆಗಳನ್ನಿರಿಸಿದ ಗದ್ದುಗೆ; ಬೀದರ್ ತಾಲ್ಲೂಕಿನ ಅಷ್ಟೂರಿನ ವ್ಯಾಪ್ತಿಯಲ್ಲಿ ಬರುವ ಅಲ್ಲಮ ಪ್ರಭು ಪಾದಗಟ್ಟಿ ಮತ್ತು ಬಸವ ಜ್ಯೋತಿ ಪಾದಗಟ್ಟಿ.

ಪಾದಾ (ನಾ)= ಪಾದ; ಅಡಿ; ಕಾಲು; ಚರಣ.

ಪಾದಾಚಾಚ್ರಿ (ಕ್ರಿ)= ಪಾದ ಮುಂದೆ ಇಡಿರಿ; ಪಾದಕ್ಕೆ ವಂದಿಸಲು ಅವಕಾಶ ಕೊಡಿರಿ.

ಪಾದಾ ಹಾಕ್ರಿ (ಕ್ರಿ)= ಮನೆಯಲ್ಲಿ ಪ್ರವೇಶಿಸಿರಿ; ಪಾದ ಬೆಳೆಸಿರಿ; ಹೆಜ್ಜೆ ಇರಿಸಿರಿ.

ಪಾದೋದಕ (ನಾ)= ಜಂಗಮರ ಪಾದ ತೊಳೆದಿದ ನೀರು; ಗುರುಪಾದ ತೊಳೆದಿದ ನೀರು.

ಪಾದ್ರಿ (ನಾ)= ಪಾದರಿ; ಕ್ರೈಸ್ತರ ಧರ್ಮಗುರು.

ಪಾನ್ (ನಾ)= ಎಲೆ; ವೀಳೆದೆಲೆ; ಕಾಗದದ ಹಾಳೆ; ಪುಸ್ತಕದ ಹಾಳೆ.

ಪಾನಕ (ನಾ)= ಸಕ್ಕರೆಯೊಂದಿಗೆ ನೀರು ಮತ್ತು ನಿಂಬೆ ಮೊದಲಾದವುಗಳನ್ನು ಸೇರಿಸಿ ಮಾಡಿದ ಪಾನೀಯ, ಷರಬತ್ತು.

ಪಾನವಟ (ನಾ)= ಪಾಣಿವಟ್ಟ; ಲಿಂಗದ ಜಲಹರಿ.

ಪಾನವಟ ಲಿಂಗಾ (ನಾ)= ನೆಲದ ಮೇಲೆ ಸ್ಥಾಪಿಸಿರುವ ಪಾಣಿವಟ್ಟ ಲಿಂಗ.

ಪಾನಾ (ನಾ)= ಮಲ್ಲೂಸ್ತ್ರವನ್ನು (ಬಿರಡಿಯನ್ನು) ಬಿಗಿಗೊಳಿಸುವ ಸಾಧನ.

ಪಾನು (ನಾ)= ಹಾಳೆ; ಪುಸ್ತಕದ ಪುಟ.

ಪಾನು ತಿರುವು (ಕ್ರಿ)= ಪುಟ ಬದಲಾಯಿಸು.

ಪಾನ್ಡಬ್ಬಾ (ನಾ)= ಎಲೆಯಂಗಡಿ.

ಪಾನ್ತಿರುವು (ಕ್ರಿ)= ಪುಸ್ತಕ ಪುಟ ಬದಲಾಯಿಸು.

ಪಾನ್ದಾನ್ (ನಾ) ಉ.= ವೀಳ್ಯದೆಲೆ, ಕಾಚು, ಸುಣ್ಣ, ಅಡಕೆ, ಅಡಕತ್ತು, ಲವಂಗಾದಿಗಳನ್ನು ಇರಿಸುವ ಡಬ್ಬ.

ಪಾನ್ಪಟ್ಟಿ (ನಾ) ಹಿಂ.= ವೀಳ್ಯ.

ಪಾನ್ಪಟ್ಟಿದುಕಾನು (ನಾ) ಹಿಂ.= ಎಲೆಯಂಗಡಿ.

ಪಾನ್ಸೇ (ನಾ) ಮ.= ಐದುನೂರು.

ಪಾಪ (ನಾ)= ಕೆಟ್ಟ ಕೆಲಸ; ದುರಾಚಾರ; ದುರಾಚಾರದ ಫಲ; ತಪ್ಪು; ಅಪರಾಧ.

ಪಾಪಡ (ನಾ)= ಹಪ್ಪಳ.

ಪಾಪಾ (ಅ)= ಅಯ್ಯೋ; ಅಯ್ಯಯ್ಯೋ.

ಪಾಪಾ (ನಾ)= ಕಣ್ಣು ಗುಡ್ಡೆ; ಸಣ್ಣಕೂಸು; ಪಾಪ; ಕೆಟ್ಟಕಾರ್ಯ.

ಪಾಪಾಸು (ನಾ)= ಬೂಟು; ಪಾದರಕ್ಷೆ; ಜೋಡಾ; ಮಚ್ಚೆ.

ಪಾಪಾಸ್ಗಳ್ಳಿ (ನಾ)= ನಾಗರಪಡಿ; ನಾಗರ ಹೆಡೆಯಂತೆ ಎಲೆಯುಳ್ಳ, ಮೈಯೆಲ್ಲ ಮುಳ್ಳುಳ್ಳ ಕಳ್ಳಿ.

ಪಾಪಾಸ್ಪೂಜಿ (ನಾ)= ಪಾಪಾಸಿನಿಂದ ಪೂಜೆ ಮಾಡುವಿಕೆ; ಪಾಪಾಸಿನಿಂದ ಹೊಡೆಯುವಿಕೆ; ಪಾದುಕಾ ಪ್ರಹಾರ (ಗಾದೆ:- ಸಮ್ಗಾರ ದೇವ್ರಿಗಿ ಪಾಪಾಸ್ಪೂಜಿ)

ಪಾಪಿ (ನಾ)= ಪಾಪದ ಕೆಲಸ ಮಾಡಿದವನು; ಪಾಪಿಷ್ಟ; ದುರುಳ; ದುಷ್ಟ.

ಪಾಪ್ಡಿ (ನಾ) = ಪಾಪಡ; ಹಪ್ಪಳ.

ಪಾಬಂದ (ನಾ)= ಕಾನೂನು ಬದ್ಧವಾದದ್ದು; ಕ್ರಮವಾದ್ದು; ಕ್ರಮಬದ್ಧವಾದದ್ದು; ತ್ರುಟಿ ಇಲ್ಲದ್ದು.

ಪಾಮೂರ (ನಾ)= ಶಕ್ತಿಶಾಲಿ; ಶೂರ; ಬಹದ್ದೂರ; ಪಾಮರ; ಹುಂಬ.

ಪಾಮೂರಹನಾ= ಶಕ್ತಿಶಾಲಿ ಇದ್ದಾನೆ; ಶೂರ ನಿದ್ದಾನೆ; ಬಹದ್ದೂರನಿದ್ದಾನೆ.

ಪಾಯಾ (ನಾ)= ಪಾಯ; ಅಡಿಪಾಯ; ಬುನಾದಿ; ಅಡಿ; ಚರಣ.

ಪಾಯಾಕೆದುರು (ಕ್ರಿ)= ಅಡಿಪಾಯ ಹಾಕಲು ತಗ್ಗು ತೋಡಿ ಸಿದ್ಧಗೊಳಿಸು.

ಪಾಯಾದ (ಕ್ರಿ)= ಸತ್ತುಹೋದ.

ಪಾಯಾಥುಂಬು (ಕ್ರಿ)= ಬುನಾದಿಗಾಗಿ ಅಗೆದ ತಗ್ಗಿನಲ್ಲಿ ಕಾಂಕ್ರೀಟು, ರೇತಿ, ಸಿಮೀಟು ಇತ್ಯಾದಿ ನೀರಿನೊಂದಿಗೆ ಬೆರೆಸಿ ತುಂಬು.

ಪಾಯಾಹಾಕು (ಕ್ರಿ)= ಪದ್ಧತಿ ಪ್ರಾರಂಭಿಸು; ರೂಢಿಗೊಳಿಸು; ಬುನಾದಿ ಸಿದ್ಧಗೊಳಿಸು.

ಪಾಯ್ಗಾ (ನಾ)= ನಿಜಾಮ ಆಡಳಿತ ಕಾಲದಲ್ಲಿಯ ನವಾಬರ ಆಡಳಿತದ ಭೂಭಾಗ.

ಪಾಯ್ಜಾಮಾ (ನಾ)= ಅಗಳ ಪಗಳ ಇರುವ ಪ್ಯಾಂಟು; ಸಡಿಲು ಸಡಿಲಾದ ಪ್ಯಾಂಟು.

ಪಾಯ್ತಾಬು (ನಾ)= ಪೈತಾಬು; ಕಾಲುಚೀಲ.

ಪಾಯ್ಬಂದ (ವಿ.) ಮ.= ಕಾಲು ಕಟ್ಟಲ್ಪಟ್ಟ

ಪಾಯ್ಬಂದ ಕುದುರಿ (ನಾ)= ಕಾಲು ಕಟ್ಟಲ್ಪಟ್ಟ ಕುದುರೆ; ಪಾಗಾದಾಗಿನ ಕುದುರೆ.

ಪಾರ (ನಾ)= ಪೋರ; ಹುಡುಗ; ಪಟ್ಯಾ; ಪೊಟ್ಯಾ; ಮೂರು ತಾಸಿನ ಅವಧಿ; ಪ್ರಹರ (ಉದಾ:- ತೀನಪಾರ ಯಾಳ್ಯಾಕ.)

ಪಾರಾಗು (ಕ್ರಿ)= ದಾಟು; ತಪ್ಪಿಸಿಕೊ; ಗಂಡಾಂತರದಿಂದ ಉಳಿದುಕೊ.

ಪಾರಾಟ (ನಾ)= ಪಾರ್ಟು; ನಾಟಕದಲ್ಲಿಯ ಪಾತ್ರ; ಪಾತ್ರದ ನಿರ್ವಣೆ.

ಪಾರಾಟಗಿ (ನಾ)= ಪೋರಾಬಟ್ಟೆತನ; ಹುಡುಗಾಟಿಕೆ; ಅಭಿನಯಿಸುವಿಕೆ.

ಪಾರಾಬಟ್ಟಿ (ನಾ)= ಪೋರಾಬಟ್ಟೆ; ಹುಡುಗಾಟಿಕೆಯ ಸ್ವಭಾವದವನು.

ಪಾರಿ (ನಾ)= ಪಾರ್ಬತಿ; ಪಾರ್ವತಿ; ಪಾರಮ್ಮ ಹೆಸರಿನ ಹೀನ ರೂಪ (ಶಿಶು ಪ್ರಾಸ:- ಪಟಪಟ ಪಾರಿ। ನವ್ಲಿ ಝೂರಿ। ಪಾರಿ ಗಂಡ। ಪರಾತಕ್ಹೋದ। ಪಾರಿ ಆದುಳು। ಪರ್ದೇಶಿ।).

ಪಾರು (ನಾ)= ಆಚೆಯ ದಡ; ಅಂಚು; ಕೊನೆ; ಪಾರ್ವತಿ ಹೆಸರಿನ ಸಂಕ್ಷಿಪ್ತ ರೂಪ.

ಪಾರ್ಕು (ನಾ)= ಪಾರ್ಕ್; ಉದ್ಯಾನವನ.

ಪಾರ್ಜು (ನಾ)= ಪಾದರಸ.

ಪಾರ್ಟಿ (ನಾ)ಇಂ.= ಪಕ್ಷ; ಔತಣಕೂಟ; ಪರಟೆ; ತೆಂಗಿನ ಒಡೆದ ಮೇಲ್ಕವಚ.

ಪಾರ್ಟಿ ಬಾಜಿ (ನಾ)= ಪಕ್ಷ ಪಕ್ಷಗಳಲ್ಲಿಯ ಮೇಲಾಟ; ಎರಡು ಪಕ್ಷಗಳಲ್ಲಿ ಘರ್ಷಣೆ.

ಪಾರ್ಟು (ನಾ)= ಪಾರ್ಟ್; ನಾಟಕದಲ್ಲಿಯ ಪಾತ್ರ; ಪಾತ್ರದ ನಿರ್ವಹಣೆ.

ಪಾರ್ದಿ (ನಾ)= ಪರದೆ.

ಪಾರ್ದಿ ಏರ್ಸು (ಕ್ರಿ)= ಪರದೆ ಎತ್ತು.

ಪಾರ್ದಿ ಬಿಡು (ಕ್ರಿ)= ಪರದೆ ಇಳಿಸು.

ಪಾರ್ಥಿ (ನಾ)= ಘಾಸಿಪಾರ್ಥಿ ಎಂಬ ಒಂದು ಜನಾಂಗ.

ಪಾರ್ಬತಿ (ನಾ)= ಪಾರ್ವತಿ; ಪರ್ವತರಾಜನ ಮಗಳು; ಗಿರಿಜೆ.

ಪಾರ್ಯಾಳ (ನಾ)= ಪಾರಿವಾಳ.

ಪಾರ್ಸಿ (ಅ)= ಮಗ್ಗುಲಿಗೆ (ಒಳಪಾರ್ಸಿ-ಒಳ ಮಗ್ಗುಲಿಗೆ; ಹೊರ ಪಾರ್ಸಿ= ಹೊರ ಮಗ್ಗುಲಿಗೆ ಎಂಬಂತೆ.)

ಪಾಲಕ (ನಾ)= ಒಂದು ಬಗೆಯ ತರಕಾರಿ ಸೊಪ್ಪು.

ಪಾಲಕಾರ (ನಾ)= ಪಾಲುದಾರ; ಭಾಗಿದಾರ; ಹಣಕೊಟ್ಟು, ಸಾಗುವಳಿ ಮಾಡಿದ ಹೊಲದಲ್ಲಿಯ ತನ್ನ ಭಾಗವನ್ನು ಪಡೆಯುವವನು.

ಪಾಲಾ (ನಾ)= ಪಾಲು; ಸೇಂಗಾ ಅಥವಾ ನೆಲಗಡಲೆ ಆಯ್ದುವರ ಕೂಲಿಯ ಪಾಲು; ತಕ್ಸೀಮು; ಭಾಗ.

ಪಾಲಾ ಮಾಡು (ಕ್ರಿ)= ವಿಭಾಗಿಸು; ಭಾಗ ಮಾಡು; ತಕ್ಸೀಮು ಮಾಡು.

ಪಾಲಾಹಾಕು (ಕ್ರಿ)= ಖೌದಿ ಹೊಲಿಗೆಗಾಗಿ ಹಳೆಯ ಬಟ್ಟೆಗಳನ್ನು ಹೊಂದಿಸು.

ಪಾಲಿಷ್ (ನಾ)ಇಂ.= ಬೂಟು, ಚಪ್ಪಲಿ ಆದಿಗಳಿಗೆ ಮಿರುಗುವಂತೆ ಮಾಡುವ ಬಣ್ಣ;

ಪಾಲಿಷ್ ಮಾಡು (ಕ್ರಿ)= ಮಿರುಗುವಂತೆ ಮಾಡು.

ಪಾಲ್ಕಾರ (ನಾ)= ಪಾಲಕಾರ (ನೋಡಿರಿ).

ಪಾಲ್ಕಿ (ನಾ)= ಪಾಲಕಿ; ಪಲ್ಲಕ್ಕಿ.

ಪಾಲ್ತಾ (ನಾ)ಮ.= ಬೋರಳು; ಉಲ್ಟಾ; ಡಬ್ಬು.

ಪಾಲ್ತಾ ಹಾಕು (ಕ್ರಿ)= ಬೋರಳು ಹಾಕು; ಡಬ್ಬು ಹಾಕು; ಉಲ್ಟಾ ಮಾಡು.

ಪಾಲ್ಸಿ (ನಾ) ಇಂ.= ತಂತ್ರ; ಕುತಂತ್ರ; ಕುಟಿಲಾಟ.

ಪಾಲ್ಸಿ ಧಂಧ್ಯಾ (ನಾ)= ಕುತಂತ್ರದ ಕೆಲಸ; ಕುತಂತ್ರ ನಡೆಸುವಿಕೆ.

ಪಾವಾಡ (ನಾ)= ಪವಾಡ (ಹಾಡು:- ಕಲ್ಯಾಣ ಪುರದೋಳು। ಬಸವ ರಾಜೇಂದ್ರನು। ನಿಲ್ಲದೆ ಪಾವಾಡ ಮೆರೆದಿಹನು। ಅಲ್ಲಿಕೊಂಡಿ ಮಿಂಚಣ್ಣರು ಇರುತಿಹರು। ಶಂಭುವೇ ಶಂಭುಲಿಂಗವೇ।।); ಚಚ್ಚೌಕವಾದ ಬಟ್ಟೆ; ವಸ್ತ್ರ; ತಲೆಗೆ ಸುತ್ತುವ ವಸ್ತ್ರ; ಬುತ್ತಿ ಕಟ್ಟುವ ಬಟ್ಟೆ.

ಪಾವಾಣಿ (ನಾ)= ಒಂದಾಣೆಯ ಕಾಲು ಭಾಗ; ಹಾಲಿ ಒಂದೂವರೆ ದುಡ್ಡು; ಕಲ್ದಾರ ಒಂದು ದುಡ್ಡು.

ಪಾವು (ನಾ)= ಕಾಲು ಸೇರು.

ಪಾವುಣಾ (ನಾ) ಮ.= ನೆಂಟ; ಬೀಗ.

ಪಾವ್ಲಿ (ನಾ)= ಪಾವುಲಿ; ನಾಲ್ಕಾಣೆ; ಇಪ್ಪತ್ತೈದು ಪೈಸೆ; ರೂಪಾಯಿಯ ಕಾಲು ಭಾಗದ ನಾಣ್ಯ.

ಪಾವ್ಸೇರು (ನಾ)= ಕಾಲು ಸೇರು; ಪಾವು (ಶಿಶು ಪ್ರಾಸ:- ಹತ್ತಿಕಟ್ಗಿ ಬತ್ತಿಕಟ್ಗಿ। ಬಾವನೂರು ಬಸವಾನೂರು। ಕೈ ಕೈ ಧೂಳ್ಕೈ। ಪಂಚಂ ಪಗಡಂ। ಎದಿಮ್ಯಾಲ್ಬುಕ್ಕಿ। ಧಡಲ್ಧುಡಲ್ ಪಾವ್ಸೇರಡ್ಕಿ। ಏನ್ಬೇಕ್ ಬೀಡಕಿ।।).

ಪಾಶಾ (ನಾ) ಉ.= ರಾಜ; ಅರಸ (ಗಾದೆ:- ಪಾಕಿ ಕೊಟ್ರ ಪಾಶಾನ್ಮ ಗಳ್ಬೀ ಬರ್ತಾಳ).

ಪಾಶಾಣ (ನಾ)= ಕಲ್ಲು; ವಿಷ (ಉದಾ:- ಎದಿಪಾಶಾಣಾಗೆದ).

ಪಾಸಂಗ (ನಾ)= ತಕ್ಕಡಿಯ ತಟ್ಟೆಗಳು ಸಮ ಸಮವಾಗಿ, ಸಮತೂಕವಾಗಿ ನಿಲ್ಲುವಂತೆ ಮಾಡಲು ಬಳಸುವ ಭಾರ; ತಕ್ಕಡಿಯಲ್ಲಿ ಪೇರು ಕಟ್ಟುವ ಕಾಣಿ; ಪಾಸಂಗು.

ಪಾಸಂಗು (ನಾ)= ಪಾಸಂಗ (ನೋಡಿರಿ)

ಪಾಸರಿ (ನಾ)= ಪಂಚೇರು; ಐದು ಸೇರು; ಅರ್ಧಧಡಿಯ ತೂಕ.

ಪಾಸು (ನಾ)= ಸ್ತ್ರೀಯ ರೇತಸ್ಸು; ಪಿಸುರು; ಯೋನಿದ್ರವ.

ಪಾಸು, ಪಾಸ್ (ನಾ) ಇಂ.= ಪರವಾನಿಗೆ; ರಹದಾರಿ; ನಾಟಕ ಮಂದಿರ, ಸಿನೇಮಾ ಮಂದಿರಗಳಲ್ಲಿ ಪ್ರವೇಶಿಸಲು ನೀಡುವ ಪರವಾನಿಗಿ ಚೀಟಿ.

ಪಾಸ್ಬುಕ್ಕು (ನಾಂ) ಇಂ.= ಪಾವ್ತಿ ಪುಸ್ತಕ.

ಪಾಳಿ (ನಾ)= ಸರದಿ, ಕ್ರಮ.

ಪಾಳಿ ಹಚ್ಚು (ಕ್ರಿ)= ಸಾಲಾಗಿ ನಿಲ್ಲು; ಕ್ರಮವಾಗಿ ಹೊಂದಿಕೊಂಡು ನಿಲ್ಲು; ಒಬ್ಬರ ನಂತರ ಒಬ್ಬರು ಬರು.

ಪಿಂಚನ್ (ನಾ)= ಪೆನ್ಷನ್; ಪಿಂಚಣಿ; ನಿವೃತ್ತಿ ವೇತನ; ಕೆಲಸದಿಂದ ನಿವೃತ್ತನಾದ ಮೇಲೆ ಪಡೆವ ವೇತನ.

ಪಿಂಜರಿ (ನಾ)= ಪಂಜರ.

ಪಿಂಜಳ (ನಾ)= ಎಳೆಎಳೆಯಾಗಿರುವ ಬಟ್ಟೆ; ಅಗಲಗಲ ಎಳೆಯುಳ್ಳ ಬಟ್ಟೆ; ದಪ್ಪವಲ್ಲದ ಬಟ್ಟೆ.

ಪಿಂಜಾರ (ನಾ)= ಹತ್ತಿ ಹಿಂಜುವ ಕಾಯಕದವನು (ಗಾದೆ:- ಊರ್ಮಂದಿಗೆಲ್ಲಾ ಸರ್ದಾರ, ಮನಿ ಹೆಣ್ತಿಗ್ಪಿಂಜಾರ!).

ಪಿಂಜುರಿ (ನಾ)= ಪಂಜರ.

ಪಿಂಜ್ರ (ನಾ)= ಪಂಜರ.

ಪಿಂಡ (ವಿ)= ದಪ್ಪವಾದ.

ಪಿಂಡಂದು (ಅ)= ದಪ್ಪವಾದದ್ದು.

ಪಿಂಡಾ (ನಾ)= ಪಿಂಡ; ಲಿಂಗ; ಮಹಾದೇವನ ಲಿಂಗ; ಶಿವಲಿಂಗ; ಗರ್ಭದಲ್ಲಿ ಮೂಡಿದ ಭ್ರೂಣ.

ಪಿಂಡಾಗು (ಕ್ರಿ)= ದಪ್ಪವಾಗು; ಮೈಹಿಡಿ; ಮೈಯುಬ್ಬು.

ಪಿಂಡಾ ಮೂಡು (ಕ್ರಿ)= ಗರ್ಭಧಾರಣೆಯಾಗು, ಭ್ರೂಣ ಮೂಡು.

ಪಿಕಾಸು (ನಾ)= ಪಿಕಾಸಿ; ನೆಲವನ್ನು ಅಗೆಯುವ ಒಂದು ಬಗೆಯ ಸಾಧನ; ಎರಡು ಕಡೆ ಕೆದರುವ ಬಾಯಿಯುಳ್ಳ ಜೋಡು ಗುದ್ದಲಿ.

ಪಿಚಾಸಿ (ನಾ)= ಪಿಶಾಚಿ; ಪಿಶಾಚ.

ಪಿಚಿಪಿಚಿ (ಧ್ವಿ)= ಕೆಸರಿನ ನೆಲದಲ್ಲಿಯ ನಡಿಗೆಯ ಧ್ವನಿ.

ಪಿಚಿಪಿಚಿ ಉಗುಳು (ಕ್ರಿ)= ಪಿಚ್ಚಪಿಚ್ಚನೆ ಬಾಯಿಯ ಹೊಲಸನ್ನು ಹೊರದೂಡು.

ಪಿಚ್ಕಾರಿ (ನಾ)= ಓಕುಳಿಯಾಡುವ ಸಾಧನ; ಚುಚ್ಚು ಮದ್ದು ಕೊಡುವ ಸಾಧನ; ಸಿರೀಂಜು.

ಪಿಚ್ಚಗಣ್ಣು (ನಾ)= ಸಿಳ್ಳುಗಣ್ಣು; ಪಿಸುರುಗಣ್ಣು.

ಪಿಚ್ಗಾರಿ (ನಾ)= ಪಿಚ್ಕಾರಿ (ನೋಡಿರಿ).

ಪಿಚ್ಚರ (ನಾ) ಇಂ.= ಚಲನ ಚಿತ್ರ; ಸಿನೇಮ.

ಪಿಚ್ಚು (ನಾ)= ಕಣ್ಣಿನ ಕೊಳೆ; ಸಿಳ್ಳು; ಪಿಸುರು; ಗೀಜು.

ಪಿಚ್ಚೊರಸು (ಕ್ರಿ)= ಕಣ್ಣಿನ ಪಿಚ್ಚನ್ನು ಕೈ ಅಥವಾ ಬಟ್ಟೆಯಿಂದ ಸವರಿ ತೆಗೆ, ಸಿವುಟು.

ಪಿಚ್ಛಾಸು (ಕ್ರಿ)= ಹಿಂದೆ ಬೀಳು; ಹಿಂದಕ್ಕೆ ಸರಿ; ಹಿಂಜರಿ.

ಪಿಚ್ಡಿ (ನಾ)= ಪಿಚ್ಚುಗಣ್ಣುಳ್ಳವಳು. (ಬೈಗುಳ).

ಪಿಚ್ಯಾ (ನಾ)= ಪಿಚ್ಚುಗಣ್ಣುಳ್ಳವನು. (ಬೈಗುಳ).

ಪಿಟಕಸು (ಕ್ರಿ)= ಪಿಟ್ಟೆನ್ನು; ಪ್ರತಿಕ್ರಿಯೆ ತೋರು.

ಪಿಟಪಿಟಿ (ನಾ)= ಸೀಮೆ ಎಣ್ಣೆ ದೀಪದ ಬುರುಡಿ; ಚಿಮಣಿ.

ಪಿಟಾರಿ (ನಾ) ಹಿಂ.= ಬುಟ್ಟಿ; ಅಗಲತಳ ಹಾಗೂ ಸಣ್ಣ ಬಾಯಿಯುಳ್ಳ ಲಕ್ಕೆಯ ದೊಡ್ಡ ಬುಟ್ಟಿ; ಹಾವಿನ ಬುಟ್ಟಿ.

ಪಿಟಾರಿ ಬುಟ್ಟಿ (ನಾ)= ಪಿಟಾರಿ (ನೋಡಿರಿ)

ಪಿಟಾಸು (ಕ್ರಿ)= ಹೊಡೆ; ಬಡಿ; ಏಟ ಹಾಕು.

ಪಿಟ್ಯಾ (ನಾ)= ನಾಯಿಗಳ ಕೂಟ; ಪಿಟ್ಯಾ.

ಪಿಟ್ಟು (ನಾ)= ಅಭ್ಯಾಸಿಗ; ವ್ಯಸನಿ.

ಪಿಟ್ವಾ (ನಾ)= ನಾಯಿಕೂಟ; ಪಿಟ್ವಾ.

ಪಿಟ್ಲಂ (ನಾ)= ನಾರಾಯಣ ಖೇಡ ತಾಲೂಕಿನ ಒಂದು ಹಳ್ಳಿ.

ಪಿಟ್ಲಾ (ನಾ)= ಕಡ್ಲೆ ಹಿಟ್ಟು ಅಥವಾ ಲೆಂಕಿ ಹಿಟ್ಟಿನಿಂದ ತಯಾರಿಸಿದ ಪಲ್ಯ; ಲೆಂಕಿಟ್ಟು; ಒಣಗಿ; ನೆಂಕಿಟ್ಟು.

ಪಿತಳಿ (ನಾ)= ಹಿತ್ತಾಳೆ; ಹಿತ್ತಾಳೆಯ ತಂಬಿಗೆ.

ಪಿತಾಂಬುರು (ನಾ)= ಪೀತಾಂಬ್ರ (ನೋಡಿರಿ).

ಪಿತಾಂಭ್ರ (ನಾ)= ಜರದಿಂದ ಕೂಡಿದ ರೇಷ್ಮೆ ಸೀರೆ; ಪೀತಾಂಬರ; ಬಂಗಾರ ಇಲ್ಲವೆ ಬೆಳ್ಳಿ ಕುಸುರಿಯ ಸೀರೆ.

ಪಿತ್ತಾ (ನಾ)= ಪಿತ್ತ; ಕೋಪ; ಪೈತ್ಯ.

ಪಿತ್ತಾಗು (ಕ್ರಿ)= ಪಿತ್ತ ಹೆಚ್ಚಾಗು; ಪೈತ್ಯ ಉಂಟಾಗು.

ಪಿತ್ತಾ ನೆತ್ತಿಗೇರು (ನು)= ಪೈತ್ಯ ಹೆಚ್ಚಾಗು; ಅತಿ ಸಿಟ್ಟು ಉಂಟಾಗು.

ಪಿತ್ಳಿ (ನಾ)= ಪಿತಳಿ (ನೋಡಿರಿ)

ಪಿತ್ಳಿಥೆಂಬ್ಗಿ (ನಾ)= ಹಿತ್ತಾಳೆಯ ತಂಬಿಗೆ.

ಪಿನ್ಸಿ (ನಾ)= ಮೂಗಿನಲ್ಲಿಯ ಹುಣ್ಣು; ಫಿನ್ಸಿ.

ಪಿನ್ಸಿ ಆಗು (ಕ್ರಿ)= ಮೂಗಿನ ಒಳ ಪದರಲ್ಲಿ ಹುಣ್ಣಾಗು.

ಪಿಪಾಯಿ (ನಾ)= ಎಣ್ಣೆ, ಅನಾಜು ಇತ್ಯಾದಿ ಗಳನ್ನು ತುಂಬಿಡುವ ತಗಡಿನ ಡಬ್ಬ; ಸಣ್ಣ ಬಾಯಿಯ ತಗಡಿನ ಡಬ್ಬ, ಡ್ರಮ್ಮು.

ಪಿರಾವೇಟ (ಲ)= ಪ್ರೈವೇಟ್; ಖಾಸಗಿ.

ಪಿರಿಪಿರಿ (ದ್ವಿ)= ಒಂದೇ ಸಮನೆ (ತಿರುಗುವಿಕೆ)

ಪಿರೇಮ= ಪ್ರೇಮ.

ಪಿರ್ತಿ (ನಾ)= ಪ್ರೀತಿ; ಪ್ರೇಮ. ಪ್ಯಾರ.

ಪಿರ್ತಿಮಾಡು (ಕ್ರಿ)= ಪ್ರೀತಿಸು.

ಪಿರ್ಯಾ (ನಾ)= ಪ್ರಿಯ; ತುಟ್ಟಿ.

ಪಿರ್ಯಾ ಆಗು (ಕ್ರಿ)= ಪ್ರಿಯವಾಗು; ತುಟ್ಟಿಯಾಗು; ತೇಜಿಯಾಗು; ಧಾರಣಿ ಏರು.

ಪಿರ್ಯಾದ ಕಾಲ (ನಾ)= ತುಟ್ಟಿಯ ಇಲ್ಲವೆ ತೇಜಿಯ ದಿನ ಮಾನ.

ಪಿರ್ಯಾದಾಕಿ (ನಾ)= ನಾನು ಎಲ್ಲರಿಗಿಂತ ಮೀರಿದವಳೆಂದು ಜಂಬ ಮಾಡುವವಳು; ತನ್ನ ಸಮಾನ ಯಾರೂ ಇಲ್ಲೆಂಬುವವಳು; ನಾ ಮೀರಿ ಎನ್ನುವವಳು; ಅತಿ ತುಟ್ಟಿ ಮಾರುವ ಅಂಗಡಿ ಒಡತಿ.

ಪಿರ್ಯಾದಾಂವ (ನಾ)= ಅತಿ ತುಟ್ಟಿಯಾಗಿ ಮಾರುವ ವ್ಯಾಪಾರಿ; ಉನ್ನತ ಮಟ್ಟದವನು; ನಾನು ಎಲ್ಲರಿಗೆ ಮೀರಿ ಎಂದು ಜಂಬ ಮೆರೆವವನು.

ಪಿರ್ಯಾದ್ದು (ನಾ)= ಪ್ರಿಯವಾದದ್ದು; ತುಟ್ಟಿಯಾದದ್ದು (ಬೈಗುಳ).

ಪಿರ್ಯಾಮುದ್ದಿ (ನಾ)= ಅತಿ ಪ್ರಿಯವಾದದ್ದು; ಅತಿ ತುಟ್ಟಿಯಾದದ್ದು.

ಪಿಲ್ಯಾನು (ನಾ) ಇಂ.= ಪ್ಲ್ಯಾನು ಯೋಜನೆ.

ಪಿಲ್ಲಾ (ನಾ)ತೆ.= ಕೂಸು; ಹೆಣ್ಣು ಕೂಸು; ಮರಿ.

ಪಿಲ್ಲಿ (ನಾ)= ಬೆಕ್ಕಿನ ಮರಿ; ಕೂಸು; ಪಿಲ್ಯಾ

ಪಿಲ್ಯಾ (ನಾ)= ಪಿಲ್ಲಿ; ಹೆಂಗಸರು ಕಾಲು ಬೆರಳಿಗೆ ಇರಿಸುವ ಬೆಳ್ಳಿಯ ಒಡವೆ.

ಪಿಶಾಸಿ (ನಾ)= ಪಿಶಾಚಿ; ದೆವ್ವ; ಭೂತ.

ಪಿಶ್ತಾ (ನಾ)= ಒಂದು ಬಗೆಯ ಪೌಷ್ಠಿಕವಾದ ಎಣ್ಣೆ ಕಾಳು, ಪಿಸ್ತಾ.

ಪಿಶ್ವಿ (ನಾ)= ಪಿಸ್ವಿ; ಚೀಲ; ಕೈಚೀಲ. (ಗಾದೆ:- ಕಿಸ್ಯಾದ ಘುಂಬಾ ರುಪ್ಪೈ ಒಯ್ಯುದ್ದರ; ಪಿಶ್ವಿ ಘುಂಬಾ ಜ್ವಾಳಾ ಇಲ್ಲ).

ಪಿಸವೈ (ನಾ)= ಬೀಸುವಿಕೆ; ಕಾಳಿಂದ ಹಿಟ್ಟು ಮಾಡುವಿಕೆ; ಬೀಸುದಾಣಿ; ಬೀಸುವ ಕಾಳು; ಬೀಸಲು ಹಸನುಗೊಳಿಸಿಟ್ಟ ಧಾನ್ಯ.

ಪಿಸಾಸು (ಕ್ರಿ)= ಬೀಸು; ಬೀಸಿಸು; ಧಾನ್ಯದಿಂದ ಹಿಟ್ಟನ್ನು ಮಾಡು.

ಪಿಸಿಯಾಗಿ ಬೆನ್ನು ಹತ್ತು (ನು)= ಪಿಶಾಚಿಯಂತೆ ಬೆನ್ನು ಹತ್ತಿ ಕಾಡು; ಸತಾಯಿಸು; ಪೀಡಿಸು.

ಪಿಸುರಿ (ನಾ)= ಪಿಸುರುಗಣ್ಣವಳು; ಪಿಚ್ಚು ಗಣ್ಣವಳು; ಸಿಳ್ಳುಗಣ್ಣವಳು; ಸದಾ ಗಂಡು ಗಳಿಗಾಗಿ ಚಡಪಡಿಸುವವಳು.

ಪಿಸುರು (ನಾ)= ಸಿಳ್ಳು; ಪಿಚ್ಚು; ದೇಹದ ಕೊಳೆ; ಹೆಣ್ಣಿನ ರೇತಸ್ಸು.

ಪಿಸುರ್ಯಾ (ನಾ)= ಪಿಚ್ಚುಗಣ್ಣಿನವನು; ಸಿಳ್ಳು ಗಣ್ಣಿನವನು; ಕೊಳಕಾಗಿರುವವನು; ಹೆಣ್ಣಿಗ; ಹೆಂಗಸರ ಹಿಂದೆ ಸುತ್ತಾಡುವವನು. (ಬೈಗುಳ)

ಪಿಸ್ತಾ (ನಾ)= ಪಿಶ್ತಾ (ನೋಡಿರಿ)

ಪಿಸ್ತೋಲು (ನಾ)= ಪಿಸ್ತೂಲು; ಸಣ್ಣ ತುಪಾಕಿ ಅಥವಾ ಬಂದೂಕು.

ಪಿಸ್ತೋಲು ಚಲಾಸು (ಕ್ರಿ)= ಕಿರು ಬಂದೂಕನ್ನು ಹಾರಿಸು.

ಪಿಸ್ರ್ಯಾ (ನಾ)= ಪಿಸುರ್ಯಾ (ನೋಡಿರಿ).

ಪಿಸ್ವಿ (ನಾ)= ಪಿಶ್ವಿ (ನೋಡಿರಿ)

ಪಿಸ್ವೈ (ನಾ)= ಬೀಸುವಿಕೆ; ಬೀಸುವ ಕಾಳು; ಬೀಸುದಾಣಿ; ಬಿಸ್ದಾಣಿ; ಬೀಸುವ ಕಾಯಕ; ಬೀಸಿದ ಕೂಲಿ.

ಪೀಂಕ (ನಾ)= ವಾಹನದ ಸೀಟಿಯಸದ್ದು.

ಪೀಕಲಾಟ (ನಾ)= ಪೇಚು; ತೊಂದರೆ; ತೊಳಲಾಟ.

ಪೀಕಿದ (ಕ್ರಿ)= ಸತ್ತುಹೋದ.

ಪೀಕು (ಕ್ರಿ)= ಸಾಯು; ಸತ್ತುಹೋಗು; (ನಾ) ಬೆಳೆ; ಫಸಲು.

ಪೀಕ್ದ (ಕ್ರಿ)= ಪೀಕಿದ; ಸತ್ತು ಹೋದ.

ಪೀಕ್ದಾನ (ನಾ)= ಉಗಲ್ದಾನ; ಉಗುಳಲು ಬಳಸುವ ಹಿತ್ತಾಳೆ ಅಥವಾ ಕಬ್ಬಿಣದ ತಗಡಿನ ಪಾತ್ರೆ; ಉಗುಳಲು ಬಳಸುವ ಬೂದಿ ತುಂಬಿಟ್ಟ ಮಣ್ಣಿನ ಮುಚ್ಚಳ.

ಪೀಛಾಛೀಳು (ಕ್ರಿ)= ಬೆನ್ನು ಹತ್ತು; ದುಂಬಾಲು ಬೀಳು; ಪೀಛಾ ಮಾಡು.

ಪೀಛಾ ಮಾಡು (ಕ್ರಿ)= ಪೀಛಾ ಛೀಳು; ಬೆನ್ನು ಹತ್ತು; ದುಂಬಾಲು ಬೀಳು; ಹಿಂಬಾಲಿಸು.

ಪೀಡಾ (ನಾ)= ಪೀಡೆ; ಕಾಟ; ಕೀಟಲೆ.

ಪೀಡಾನಪೀಡಿ (ಅ)= ಪೀಳಿಗೆಯಿಂದ ಪೀಳಿಗೆವರೆಗೆ.

ಪೀಡಾಸುತ್ತು (ಕ್ರಿ)= ಪೀಡೆ ಆವರಿಸು.

ಪೀಡಿ (ನಾ)= ಪೀಳಿಗೆ; ಪರಂಪರೆ; ವಂಶಾವಳಿ.

ಪೀಣಿ (ನಾ)= ಪೀಣೆ; ಪೀಡೆ; ದೀಪಾವಳಿ ಸಂದರ್ಭದಲ್ಲಿ ದನಗಳಿಗೆ ದೀಪ ಬೆಳಗುವ ಹಾಡು; ಪೀಡೆ ಕಳೆಯಲು ದನಗಳಿಗೆ ದೀಪ ಬೆಳಗುವ ಆಣಿಪೀಣಿ ಹಾಡು. ಉದಾ:- ಆ ಗುಡ್ಡ ನೋಡು। ಈ ಗುಡ್ಡ ನೋಡು। ಗುಡ್ಡದ ಮ್ಯಾಲ್। ಆನಿ ನೋಡು। ಆನಿ ಮ್ಯಾಲ ಅಂಬಾರಿ ನೋಡು। ಅಂಬಾರಿ ದಾಗ। ಅರಸ ನೋಡು। ಅರಸನ ಕೈದಾಗ ಕುಡ್ಗಿಲು ನೋಡು। ಮಾರ್ಮಾರು ಹುಲ್ಲು। ಸೇರ್ಸೇರ್ ಹಾಲು। ಕೆನಿ ಕೆನಿ ಮಸುರು। ಕಣ್ಣಿ ಕಣ್ಣಿ ಬೆಣ್ಣಿ। ಬೆಣ್ಣಿ ಕಾಸಿದು ತುಪ್ಪಾ। ನೀ ಏನ್ ಹೊಡಿತೀ ಸಣ್ಣಾ ಪಾರಾ। ನಾನೇ ಹೊಡಿತಾ ಧೊಡ್ಡಾ ಪಾರಾ॥ ಆಣಿಪೀಣಿ ಜಾವಂದೆ। ಸೇರ್ಖೊಬ್ರಿಬೀರಂದೆ।)

ಪೀಪಾ (ನಾ)= ಪಿಪಾಯಿ (ನೋಡಿರಿ).

ಪೀಪಿ (ನಾ)= ಸೀಟಿ; ಸಿಳ್ಳು ಹಾಕುವ ತಗಡಿನ ಇಲ್ಲವೆ ಪ್ಲಾಸ್ಟಿಕ್ಕಿನ ಸಾದನ; ಮಕ್ಕಳ ಆಟಿಕೆ.

ಪೀರ (ನಾ) ಉ.= ದೇವರು; ಮುಸಲ್ಮಾನರು ಮೊಹರಂ ತಿಂಗಳಲ್ಲಿ ಸ್ಥಾಪಿಸಿ ಪೂಜಿಸುವ ದೇವರು.

ಪೀರನ್ಮುದ್ರಿ (ನಾ)= ಪೀರನು ಮೈಮೇಲೆ ಬರುವ ವ್ಯಕ್ತಿ; ಪೀರನನ್ನು ಹೊತ್ತು, ಸವಾರಿಗೊಂಡು, ಹೇಳಿಕೆಮಾಡುವ ವ್ಯಕ್ತಿ.

ಪೀರನ್ಥಟ್ವಿ (ನಾ)= ಮುಸಲ್ಮಾನರ ಪೀರನಿಗೆ ಉಡಿಸುವ ಹೊಸ ಬಟ್ಟೆ.

ಪೀರನ ಪಂಜಾ (ನಾ)= ಮುಸಲ್ಮಾನ ಪೀರನ ಹಸ್ತ; ಪೀರನ ಸಂಕೇತ.

ಪೀರಪ್ಪ, ಪೀರವ್ವ (ನಾ)= ಪೀರನ ನಾಮಾಂಕಿತ ಹೊಂದಿದ ವ್ಯಕ್ತಿಗಳು.

ಪೀರಪಾಶಾ ಬಂಗ್ಲಾ (ನಾ)= ಬಸವ ಕಲ್ಯಾಣ ದಲ್ಲಿಯ ಪೀರಪಾಶಾ ಎಂಬ ಸಂತನ ದರ್ಗಾ.

ಪೀರು ಕೂಡ್ಸು (ಕ್ರಿ)= ಪೀರನ ಸ್ಥಾಪನೆ ಮಾಡು.

ಪೀರ್ಹಿಂಡಿ (ಕ್ರಿ)= ಪೀರು ಪುಜಾ ಹೊತ್ತುಕೊ.

ಪೀಲಾಪತ್ತಿ ಜರ್ದಾ (ನಾ)= ಅರಿಷಿಣ ಬಣ್ಣ ಹೊಂದಿದ, ತಿನ್ನಲು ಬಳಸುವ, ಸುವಾಸಿಕ ಗೊಳಿಸಿದ ತಂಬಾಕು.

ಪೀವಟ (ನಾ) ಉ.= ಕುಡುಕ; ಮದ್ಯ ವ್ಯಸನಿ; ಸುರಾವ್ಯಸನಿ.

ಪೀಸು (ನಾ) ಇಂ.= ತುಕ್ಡಿ; ತುಂಡು; ತುಣುಕು; ರೊಟ್ಟಿಯ ತುಂಡು; ಚಪಾತಿಯ ತುಂಡು.

ಪೀಳ್ಗಿ (ನಾ)= ಪೀಳಿಗೆ; ಪೀಡಿ; ವಂಶಪರಂಪರೆ.

ಪುಂಗಿ (ನಾ)= ಹಾವಾಡಿಗರು ಊದುವ, ಕುಂಬಳದಿಂದ ತಯಾರಿಸಿದ ಮುಖವಾದ್ಯ; ಸೊನಾಯಿ; ಶಹನಾಯಿ.

ಪುಂಗಿ ಊದು (ಕ್ರಿ)= ಸೊನಾಯಿ ಬಾರಿಸು; ಮುಖವಾದ್ಯ ಬಾರಿಸು.

ಪುಂಗಿ ಬಂದ ಮಾಡು (ನು)= ಆಟ ನಡೆಯದಂತೆ ಮಾಡು; ಅಡ್ಡಿ ಉಂಟು ಮಾಡು.

ಪುಂಗಿ ಬಂದಾಗು (ನು)= ಆಟ ನಡೆಯ ದಂತಾಗು.

ಪುಂಡ (ನಾ)= ಮರ್ದ; ಗಂಡಸು; ವೀರ; ತುಂಟ; ಲಫಂಗ.

ಪುಂಡರೀಕ (ನಾ)= ದೇವರ ಹೆಸರು (ಹಾಡು:- ಪುಂಡರೀಕ ಪರಮಾತ್ಮ। ಧಂಡದಲ್ಲಿ ಇರುವತನಕ। ಕಂಡ ಕಂಡ ದೇವ್ರಿಗಿ। ನೆನೆವುದೇನು ಕಾರಣ।).

ಪುಂಡಾಟ (ನಾ)= ವೀರತನ; ಲಫಂಗತನ; ತುಂಟತನ.

ಪುಕಳಿ (ನಾ)= ಸ್ತ್ರೀಯ ಜನನೇಂದ್ರಿಯ; ಯೋನಿ.

ಪುಕಳಿ ಬೆದರು (ಕ್ರಿ)= ಮೊಟ್ಟ ಮೊದಲ ಸಲ ರಜಸ್ವಲೆಯಾಗು; ಪ್ರಥಮ ರಜೋದರ್ಶನವಾಗು; ಮೈನೆರೆ; ದೊಡ್ಡಾಕೆಯಾಗು; ಪುಷ್ಪವತಿಯಾಗು.

ಪುಕಾರಾ (ನಾ)= ಪುಕಾರು; ಕೂಗು; ಕೂಗಾಟ; ಗಲಾಟೆ; ಗದ್ದಲ; ಅಪವಾದ; ಆಡಿಕೆ ಮಾತು; ಪ್ರಚಾರ.

ಪುಕಾರಿ ಎಬ್ಬುಸು (ಕ್ರಿ)= ಬಾಯಿ ಮಾಡು; ಪ್ರಚಾರ ಮಾಡು; ಬೊಬ್ಬಿಡು.

ಪುಕಾರು ಮಾಡು (ಕ್ರಿ)= ಪ್ರಚಾರ ಮಾಡು; ಕರೆ; ಜೋರಾಗಿ ಕೂಗು; ಹಕಾರಿ ಹೊಡೆ; ನ್ಯಾಯಾಲಯದಲ್ಲಿ ಸಿಪಾಯಿ ಕೂಗು ಹಾಕು.

ಪುಕ್ಕ (ನಾ)= ಅಂಜುಬುರುಕ; ಹೆದರು ವವನು; ಪುಕ್ಕಲು.

ಪುಕ್ಕಲ್ಗೇಡಿ (ನಾ)= ಅಂಜುಬುರುಕ-ತನದಿಂದ ಕೆಟ್ಟವನು(ಳು).

ಪುಕ್ಕು (ನಾ)= ಹೆದರುವವನು(ಳು); ಅಂಜು ವವನು(ಳು); ಪುಕ್ಕಲ್ಗೇಡಿ.

ಪುಗ್ಸೆಟೆ (ವಿ.)= ಪುಕ್ಕಟೆ; ಫುಗಟ; ಉಚಿತ (ಗಾದೆ:- ಪುಗ್ಸೆಟೆ ಪುರಾಣಾ, ಉಂಡು ಹೋಗೋ ಗುರಣ್ಣಾ)

ಪುಗಸೆಟ್ಟೆ (ವಿ.)= ಪುಗ್ಸೆಟೆ (ನೋಡಿರಿ).

ಪುಚ್ಚಿ (ನಾ)= ಹೆಣ್ಣಿನ ಜನನೇಂದ್ರಿಯ; ಯೋನಿ; ಚೆಂಡುಫಣಿ ಆಟ ಇಲ್ಲವೆ ಚಿಣಿ

ಫಣಿ ಆಟಕ್ಕಾಗಿ ಚೆಂಡು-ಚಿಣಿ ಈಚಲು (ಚೀಕಲು) ಮಾಡಿದ ಕುಳಿ, ಬೋದು.

ಪುಟಾಣಿ (ನಾ)= ಫುಟಾಣಿ; ಹುರ್ಗಡ್ಲೆ ಬೇಳೆ.

ಪುಟಾಣಿಗಲ್ಲು (ನಾ)= ಹಳದಿ ಬಣ್ಣದ ಬೇಳೆಯಂತೆ ಚುಕ್ಕೆಗಳನ್ನು ಹೊಂದಿದ, ಗೋಡೆ ಕಟ್ಟಲು ಬಳಸುವ ಕೆಂಪುಗಲ್ಲು.

ಪುಟಿ (ಕ್ರಿ)= ನೆಗೆ; ನೆಲಕ್ಕೆ ಅಪ್ಪಳಿಸಿದ ಚೆಂಡು ಮರಳಿ ಮೇಲಕ್ಕೆ ಬರು; ಚೆಂಡಿನಂತೆ ಜಿಗಿ.

ಪುಟು ತೊಗೊ (ಕ್ರಿ)= ಒಲೆ ಹೊತ್ತು; ಉರಿಯುವಂತಾಗು.

ಪುಟುಮಾಡು (ಕ್ರಿ)= ಒಲೆ ಹೊತ್ತಿಸು.

ಪುಟುವಿನ ಖಡ್ಡಿ (ನಾ)= ಒಲೆ ಹೊತ್ತಿಸಲು ಬಳಸುವ ತೊಗರೆ ಪುಂಡಿ, ಸಣಬು ಮೊದಲಾದವುಗಳ ಕಡ್ಡಿ, ಕಸ.

ಪುಟುಸು (ಕ್ರಿ)= ಚೆಂಡನ್ನು ನೆಲಕ್ಕೆ ಅಪ್ಪಳಿಸಿ ಮೇಲೆ ಬರುವಂತೆ ಮಾಡು; ಪುಟಿಸು.

ಪುಟೆದಕಾಯಿ (ನಾ)= ತುಂಬುಚ್ಚಿದ ಹಣ್ಣು ಸೌತೆಕಾಯಿ; ಹಣ್ಣಾದ ಸೌತೆಕಾಯಿ.

ಪುಟ್ಕಿ (ನಾ)= ಪುಟಿಯುವಿಕೆ.

ಪುಟ್ಗುಳಿ (ನಾ)= ಭಜಿ; ಕಡ್ಲೆ ಹಿಟ್ಟಿನ ಜತೆ ಉಳ್ಳಿಗಡ್ಡಿ, ಖಾರ, ಉಪ್ಪು, ಅಡಿಗೆ ಸೋಡ, ನೀರು ಇತ್ಯಾದಿ ಬೆರೆಸಿ, ಎಣ್ಣೆಯಲ್ಲಿ ಕರಿದು ತಯಾರಿಸಿದ ಒಂದು ಬಗೆಯ ತಿಂಡಿ.

ಪುಟ್ಗುಳಿ ಆಟಾ(ನಾ)= ಚೆಂಡನ್ನು ಪುಟಿಸಿ, ಫಣಿಯಿಂದ ಹೊಡೆದು ಆಡುವ ಆಟ.

ಪುಡಿ (ನಾ)= ಹುಡಿ; ಚೂರ್ಣ; ಅಂಗಡಿ ಯವನು ಕಿರಾಣಿ ವಸ್ತುವನ್ನು ಕಾಗದದಲ್ಲಿ ಇಟ್ಟು ಕಟ್ಟಿದ ಕಟ್ಟು.

ಪುಡಿ ಕಟ್ಟು (ಕ್ರಿ)= ವಸ್ತುವನ್ನು ಕಾಗದದಲ್ಲಿ ಸುತ್ತಿ ಭದ್ರಗೊಳಿಸು.

ಪುಡಿ ಖಾರಾ (ನಾ)= ಒಣಗಿದ ಮೆಣಸಿನ ಕಾಯಿಯನ್ನು ಕುಟ್ಟಿ ತಯಾರಿಸಿದ ಹುಡಿ.

ಪುಡಿ ಮಾಡು (ಕ್ರಿ)= ಅರೆದು ಇಲ್ಲವೆ ಕುಟ್ಟಿ ಹಿಟ್ಟಿನಂತೆ ಸಣ್ಣ ಮಾಡು; ಹುಡಿಗೊಳಿಸು; ಚೂರ್ಣಗೊಳಿಸು.

ಪುಢಾರಿ (ನಾ)= ನಾಯಕ; ಮುಂಬೆಕಾರ; ಮುಂದಾಳು.

ಪುಣ್ಯಸ್ತ್ರೀ= ಪುಣ್ಯವಂತೆ; ಶರಣೆ; ಸಾಧ್ವಿ.

ಪುಣ್ಯಾ (ನಾ)= ಪುಣ್ಯ; ಸತ್ಕರ್ಮ ಫಲ' ಸುಕೃತ.

ಪುಣ್ಯಾಕ (ಅ)= ಪುಣ್ಯಗಳಿಸಲು; ಪುಕ್ಕಟೆ ಯಾಗಿ (ಗಾದೆ:- ಪುಣ್ಯಾಕ ಪುಟಾಣಿ ಕೊಟ್ರ, ಇನ್ನೊಬ್ರು ಮನ್ಯಾಗ ಹರಾ ಅಂತಂತ!)

ಪುಣ್ಯಾತ್ಗಿತ್ತಿ (ನಾ)= ಪುಣ್ಯವಂತಿ; ಪುಣ್ವಂತಿ; ಪುಣ್ಯ ಮಾಡಿದವಳು; ಪುಣ್ಯ ಮಾಡ ಬಯಸುವವಳು.

ಪುಣ್ಯಾತ್ಮಾ (ನಾ)= ಪುಣ್ಯವಂತ; ಪುಣ್ಯಾತ್ಮ; ಪುಣ್ಯಾಕಾಂಕ್ಷಿ.

ಪುಣ್ವಂತ (ನಾ)= ಪುಣ್ಯವಂತ; ಪುಣ್ಯಾತ್ಮ; ಪುಣ್ಯಾಕಾಂಕ್ಷಿ.

ಪುಣ್ವಂತಿ (ನಾ)= ಪುಣ್ಯಾತ್ಗಿತ್ತಿ; ಪುಣ್ಯವಂತಿ; ಪುಣ್ಯಮಾಡಿದವಳು; ಪುಣ್ಯಾಕಾಂಕ್ಷಿಣಿ.

ಪುಣ್ವಾನ (ನಾ)= ಪುಣ್ಯವಂತ.

ಪುತ್ತರ (ನಾ)= ಪುತ್ರ; ಮಗ.

ಪುತ್ಳಾ (ನಾ)= ಪುತ್ಥಳಿ; ಮೂರ್ತಿ; ಗೊಂಬೆ.

ಪುತ್ಥಾನಿಂದುರ್ಸು (ಕ್ರಿ)= ಪುತ್ಥಳಿಯನ್ನು ಸ್ಥಾಪಿಸು; ಪ್ರತಿಮೆಯನ್ನು ನಿಲ್ಲಿಸು.

ಪುದಿನಾ (ನಾ) ಹಿಂ.= ಅಡುಗೆಗೆ ಬಳಸುವ ಕಟು ವಾಸನೆಯುಳ್ಳ ಒಂದು ಬಗೆಯ ಬಳ್ಳಿಯ ಸೊಪ್ಪು; ಔಷಧಿ ಸಸ್ಯ; ಹೊಟ್ಟೆ ನೋವು ಕಳೆವ ಸಸ್ಯ.

ಪುನಾ (ಅ)= ಪುನಃ; ಮತ್ತೆ.

ಪುನಾಪುನಾ (ದ್ವಿ)= ಪುನಃ ಪುನಃ; ಮತ್ತೆ ಮತ್ತೆ.

ಪುನ್ನಾಟೋಪಿ (ನಾ) ಉ.= ರೂಮಿ ಟೋಪಿ; ಸ್ವಾತಂತ್ರ್ಯಪೂರ್ವ ಅಂದರೆ, ನಿಜಾಮ ಆಡಳಿತ ಕಾಲದಲ್ಲಿ ಮುಸಲ್ಮಾನರು ಧರಿಸುತ್ತಿದ್ದ ಟೋಪಿ; ಸೇರ್ಗೋಲಾ ಹೆಸರಿನ ಟೋಪಿ.

ಪುನ್ಯಾ (ನಾ)= ಪುಣ್ಯ; ಮಹಾರಾಷ್ಟ್ರದ ಪುಣೆ ನಗರ.

ಪುನ್ಯಾತ್ಗಿತ್ತಿ (ನಾ)= ಪುಣ್ಯವಂತಿ; ಪುಣ್ವಂತಿ; ಪುಣ್ಯಾತಗಿತ್ತಿ.

ಪುರ (ನಾ)= ಊರು; ಪಟ್ಟಣ; ನಗರ; ಊರುಗಳ ಹೆಸರಿನ ಉತ್ತರ ಪದ (ಉದಾ:- ಡೋಣ್ಗಾಪುರ; ಮಾಳ್ಚಾಪುರ; ಖಾನಾಪುರ; ಧರ್ಮಾಪುರ; ಕಾಳ್ಗಾಪುರ; ಉಮಾಪುರ; ಗಣೇಶಪುರ; ಶಿವಪುರ; ಬಸವಪುರ; ನಾಣಪುರ; ಸಿರ್ಗಾಪುರ; ಸಸ್ತಾಪುರ; ಮುಸ್ತಾಪುರ; ಖಾಸಿಂಪುರ; ಇಸ್ಲಾಂಪುರ; ಯಾಕತಪುರ; ಯದ್ಲಾಪುರ ಇತ್ಯಾದಿ).

ಪುರಂತಯ್ಯ (ನಾ)= ಧಾರ್ಮಿಕ ಸಮಾರಂಭ, ಮದುವೆ ಮೊದಲಾದ ಕಾರ್ಯಕ್ರಮಗಳಲ್ಲಿ ವೀರಭದ್ರ ದೇವರ ಒಡಬು, ಶರಣರ ವಚನ ಇತ್ಯಾದಿಗಳನ್ನು ವೀರಾವೇಷದಿಂದ ಓದುವ ಶಸ್ತ್ರಧಾರಿ ಗಣಾಚಾರಿ ಅಯ್ಯನವರು; ಹಾಲ್ಗುಗ್ಗುಳ ಒಯ್ಯುವ ಸಮಯದಲ್ಲಿ ಮದು ಮಕ್ಕಳೆದುರು ಮೈ ತುಂಬಿ ಕುಣಿವ ಶಸ್ತ್ರಧಾರಿ. ಗಣಾಚಾರಿ ಅಯ್ಯನವರು; ಮೈ,ಕೈ ಗಲ್ಲಗಳಲ್ಲಿ ಶಸ್ತ್ರ ಚುಚ್ಚಿಕೊಂಡು ಕುಣಿವ ಗಣಾಚಾರಿ ಅಯ್ಯನವರು.

ಪುರಂತಗ್ಯಾ (ನಾ)= ಪುರಂತಯ್ಯ (ನೋಡಿ)

ಪುರಂತೋದು (ಕ್ರಿ)= ಒಡಬುಗಳನ್ನು ಹೇಳು.

ಪುರಂದರ ದಾಸರು (ನಾ)= ಕನ್ನಡದ ದಾಸ ಶ್ರೇಷ್ಠರು; ಮಹಾರಾಷ್ಟ್ರದ ಪಂಢರಪುರದ ವಿಠ್ಠಲನ ದಾಸರು.

ಪುರಸೊತ್ಗಿ (ನಾ)= ಪುರುಸೊತ್ತಿಗೆ; ಪುರುಸೊತ್ತು; ಬಿಡುವು; ವಿರಾಮ.

ಪುರಾಣ (ನಾ)= ದೇವರುಗಳ ಕತೆ; ದೇವರುಗಳ ಕುರಿತ ಕಥಾವಾಚನ (ಗಾದೆ:- ಪುಗ್ಸೆಟೆ ಪುರಾಣಾ, ಉಂಡು ಹೋಗೋ ಗುರಣಾ)

ಪುರಾತ್ರು (ನಾ)= ಪುರಾತನರು, ಅರವತ್ಮೂರು ಮಂದಿ ಪುರಾತನರು.

ಪುರಾವಟಿ (ನಾ)= ಪೂರೈಕೆ; ಒದಗಿಸುವಿಕೆ.

ಪುರಾವಾ (ನಾ)= ಪುರಾವೆ; ಸಾಕ್ಷಿ; ಪ್ರಮಾಣ; ಆಧಾರ.

ಪುರಾಸು (ಕ್ರಿ)= ಪೂರೈಸು; ಒದಗಿಸು; ಸಂಬಾಳಿಸು.

ಪುರುಷ (ನಾ)= ಗಂಡು; ಗಂಡ; ವಿಧಿವತ್ತಾಗಿ ಹೆಣ್ಣಿನ ಕೈಹಿಡಿದವನು. (ಹಾಡು:- ನಿನ್ನ ಪುರುಷಾಗಾ ಹೇಳು ತರುತಾನೆ ಸುವ್ವಯ್ಯ ಲಿಂಗ ಸುವ್ವಯ್ಯ)

ಪುಷ್ಕಳ (ನಾ)ಮ.= ಬಹಳ; ಅನಗಾಡ; ತೋಲು; ಹೇರಳ; ವಿಪುಲ

ಪುಷ್ಪಾವತಿ ಕನಕಾ (ನಾ)= ಬೀದರ ನಗರದ ಶಿವನಗರದ ಆಧುನಿಕ ವಚನಕಾರ್ತಿ.

ಪುಸ್ತುಕು (ನಾ)= ಪುಸ್ತಕ; ಹೊತ್ತಗೆ

ಪುಸ್ಯಾ (ನಾ)= ಪುಷ್ಯಾ ಎಂಬ ಮಳೆಯ ನಕ್ಷತ್ರ (ಗಾದೆ:- ಪುಸ್ಯಾನ ಮಳಿ ಪುಸು ಪುಸು ಬರ್ತಾದ!).

ಪೂಜಾ (ನಾ)= ಪೂಜೆ; ದೇವರ ಪೂಜೆ; ಲಿಂಗ ಪೂಜೆ; ಶಿವಪೂಜೆ.

ಪೂಜಾ ಮಾಡು (ಕ್ರಿ)= ಪೂಜಿಸು; ಆರಾಧಿಸು; ದೇವರ ಪೂಜೆ ಮಾಡು.

ಪೂಜಾರಿ (ನಾ)= ದೇವಸ್ಥಾನದಲ್ಲಿ ದೇವರ ಅರ್ಚಕ, ಅರ್ಚಿಸುವವನು.

ಪೂಜಿ (ನಾ)= ಪೂಜೆ; ಸೊನ್ನೆ; ನಿಶ್ಶೇಷ, ಆಳ್ಳು; ಏನೂ ಉಳಿದಿಲ್ಲ.

ಪೂಜಿಗಿ ಪೂಜಿ (ಅ)= ಸೊನ್ನೆಗೆ ಸೊನ್ನೆ; ಆಳ್ಳಿಗೆ ಆಳ್ಳು; ಏನೇನೂ ಉಳಿದಿಲ್ಲದಿರುವಿಕೆ.

ಪೂಜೆರಿ (ನಾ)= ಪೂಜಾರಿ (ನೋಡಿರಿ)

ಪೂಣಾ (ನಾ)= ಪುಣೆ ಎಂಬ ಮಹಾರಾಷ್ಟ್ರದ ಒಂದು ದೊಡ್ಡ ಶಹರದ ಇನ್ನೊಂದು ಹೆಸರು.

ಪೂನಾ (ನಾ)= ಪೂಣಾ (ನೋಡಿರಿ)

ಪೂರಾ (ವಿ.)= ಪೂರ್ಣ ತುಂಬಿದ; ತುಂಬಿಸಿದ; ಪೂರ್ತಿಯಾಗಿ.

ಪೂರಿ (ನಾ)= ಗೋಧಿ ಹಿಟ್ಟನ್ನು ನಾದಿ, ರೊಟ್ಟಿಯಂತೆ ಗೋಲಾಕಾರವಾಗಿ ತಯಾರಿಸಿ ಕರಿದ ಸಣ್ಣ ಸಣ್ಣ ಚಪಾತಿ.

ಪೂರ್ತಿ (ನಾ)= ಪೂರ್ಣವಾದದ್ದು; ಸಂಪೂರ್ಣವಾದದ್ದು.

ಪೂರ್ವ (ನಾ)= ಮೂಡಣ; ಉದಯ; ಉದ್ಯಾವಾಲ.

ಪೂಲು (ನಾ)= ಸೇತುವೆ; ಪೂಲು; ಬ್ರಿಡ್ಜ.

ಪೆಂಗ (ವಿ.)= ಪೆದ್ದ; ದಡ್ಡ; ಲಜ್ಜೆ; ಖಜೀಲ.

ಪೆಂಗಾಗು (ಕ್ರಿ)= ಖಜೀಲಾಗು; ಲಜ್ಜೆಗೊಳ್ಳು; ಲಜ್ಜಿತನಾಗು.

ಪೆಂಗು (ನಾ)= ದಡ್ಡತನ; ಮೂರ್ಖತನ; ಲಜ್ಜಿತ.

ಪೆಂಟಿ (ನಾ)= ಹೆಂಟೆ; ಮಣ್ಣಿನ ಮುದ್ದೆ; ಬೆಲ್ಲದ ಹೆಂಟೆ; ಪೆಟ್ಟೆ; ಮುದ್ದೆ.

ಪೆಂಟಿಪಂಟಿ (ದ್ವಿ)= ಮುದ್ದೆ ಮುದ್ದೆ

ಪೆಂಡಾಲ (ನಾ) ಇಂ.= ಮಂಟಪ; ವೇದಿಕೆ.

ಪೆಂಡಿ (ನಾ)= ಹೊರೆ; ಗಂಟು; ಸಾಲದ ಹೊರೆ; ಭಾರ.

ಪೆಟಾರಿ (ನಾ)= ಪಿಟಾರಿ; ಪಿತಾರಿ; ಲಕ್ಕೆಯಿಂದ ತಯಾರಿಸಿದ ಸಣ್ಣ ಬಾಯಿಯ ದೊಡ್ಡ ಬುಟ್ಟಿ; ಹಾವಿನ ಬುಟ್ಟಿ.

ಪೆಟ್ಗಿ (ನಾ)= ಪೆಟ್ಟಿಗೆ; ಪೇಟಿ; ಸಂದೂಕು.

ಪೆಟ್ಟಿ (ನಾ)= ಪೆಂಟೆ; ಹೆಂಟೆ; ಮುದ್ದೆ; ಘೆಟ್ಟೆ.

ಪೆಟ್ಟು (ನಾ)= ಏಟ; ಹೊಡೆತ; ಕೈಯಿಂದ ಗುದ್ದುವಿಕೆ.

ಪೆಟ್ಟುಕುಡು (ಕ್ರಿ)= ಏಟು ಹಾಕು; ಹೊಡೆತ ಕೊಡು; ಗುದ್ದು; ಎಟೆ.

ಪೆಟ್ಟುಹಾಕು (ಕ್ರಿ)= ಏಟುಕೊಡು; ಹೊಡೆ; ಗುದ್ದು.

ಪೆಠಾರಿ (ನಾ) ಹಿಂ.= ಪೆಟಾರಿ (ನೋಡಿರಿ)

ಪೆಡ್ಸಾಗು (ಕ್ರಿ)= ಗಟ್ಟಿಯಾಗು; ಬಿರುಸಾಗು; ಕಠಿಣವಾಗು.

ಪೆಡ್ಸು (ವಿ.)= ಗಟ್ಟಿ; ಬಿರುಸು; ಕಠಿಣ; ನಿಷ್ಠುರ.

ಪೆಣ್ಸಲ್ (ನಾ) ಪೆನ್ಸಿಲ್; ಬಳಪ; ಸೀಸುಕಡ್ಡಿ.

ಪೆದ್ದಣ್ಣ (ನಾ)= ಉರಿಲಿಂಗ ಪೆದ್ದಿ ಶರಣರ ಮೂಲ ಹೆಸರು. ಇವರು ಆಂಧ್ರದಿಂದ ಬಂದು ಮಹಾರಾಷ್ಟ್ರದ ನಂದವಾಡದಲ್ಲಿ (ನಾಂದೇಡದಲ್ಲಿ) ನೆಲೆಸಿ, ದಲಿತನಾದರೂ ಲಿಂಗದೀಕ್ಷೆ ಹೊಂದಿ, ಲಿಂಗಾಯತ ಮಠಾಧೀಶ ನಾದವರು.

ಪೆನ್ನು (ನಾ) ಇಂ.= ಲೇಖಣಿ; ಲೆಕ್ಕಣಿಕೆ (ಗನ್ನಿಗಿಂತಲೂ ಪೆನ್ನು ಮೇಲು).

ಪೆಪ್ಸಿ ಪಾಕಿಟ್ (ನಾ)= ಸಾರಾಯಿ ಪೌಚು.

ಪೆಯ್ಲೆ (ಅ)= ಪೈಲೆ; ಮೊದಲಿಗೆ.

ಪೇಂಟರ್ (ನಾ)ಇಂ.= ಬಣ್ಣ ಬಳಿವವ; ಭಿತ್ತಿಯ ಮೇಲೆ ಚಿತ್ರ ಬರೆವವನು. ಚಿಡಗುಪ್ಪಾದ ಪೇಂಟರ್ ಭುತಾಳೆ ಈ ಭಾಗದ ಪ್ರಸಿದ್ಧ ಹಳೆಯ ಚಿತ್ರಕಾರ.

ಪೇಂಟಿಂಗ್ (ನಾ)ಇಂ.= ಬಣ್ಣ ಬಳಿಯುವಿಕೆ; ಭಿತ್ತಿ ಚಿತ್ರಗಾರಿಕೆ.

ಪೇಂಟು (ನಾ)ಇಂ.= ಬಣ್ಣ; ಬಣ್ಣದ ಲೇಪನ.

ಪೇಂಟು ಮಾಡು (ಕ್ರಿ)= ಬಣ್ಣ ಲೇಪಿಸು; ಬಣ್ಣ ಬಳಿ.

ಪೇಂಟು ಹಚ್ಚು (ನಾ)= ಪೇಂಟು ಮಾಡು (ನೋಡಿರಿ).

ಪೇಂಡ (ನಾ)= ಕೆಸರು; ಗಂಟು; ನಿಧಿ; ಪೆಂಡಿ; ಸಾಲ; ಸಾಲದ ಹೊರೆ.

ಪೇಂಡಖಜ್ರಿ (ನಾ)= ಪೇಂಡಖಜೂರು; ಮುದ್ದೆ ಮಾಡಿದ ಖರ್ಜೂರ; ಮುದ್ದೆ ಗೊಳಿಸಿದ ಉತ್ಪತ್ತಿ.

ಪೇಂಡು (ನಾ)= ಪೇಂಡ (ನೋಡಿರಿ).

ಪೇಂಡು ಮೆತ್ತು (ಕ್ರಿ)= ಕೆಸರು ಅಂಟು.

ಪೇಚು (ನಾ)= ಸಿಕ್ಕು; ತೊಡಕು; ತೊಂದರೆ; ಕುಸ್ತಿಯಾಟದ ಪಟ್ಟು, ಹಿಡಿತ, ಡಾವು, ಟೂಕು, ಗುಟ್ಟು, ರಹಸ್ಯ.

ಪೇಚು ಭೀಳು (ಕ್ರಿ)= ತೊಡಕಾಗು; ಸಿಕ್ಕು ಗೊಳ್ಳು; ತೊಂದರೆಯುಂಟಾಗು, ಕುಸ್ತಿಯ ಪಟ್ಟು ಉಂಟಾಗು.

ಪೇಚು ಹಾಕು (ಕ್ರಿ)= ಕುಸ್ತಿಯ ಪಟ್ಟು ಹೂಡು, ಹಿಡಿತ ಸಾಧಿಸು; ಡಾವು ಸಾಧಿಸು; ಗೊಂದಲ ಉಂಟುಮಾಡು.

ಪೇಜು (ನಾ) ಇಂ.= ಪುಟ; ಹಾಳೆಯ ಒಂದು ಮಗ್ಗಲು.

ಪೇಜುಕಟ್ಟು (ಕ್ರಿ)= ಪುಟದ ಉದ್ದಗಲವನ್ನು ನಿರ್ಧರಿಸು; ಮುದ್ರಣಕ್ಕೆ ಅಣಿಗೊಳಿಸು.

ಪೇಜುವಾರು (ಅ)= ಪುಟಗಳ ಅನುಕ್ರಮ ದಂತೆ.

ಪೇಟಿ (ನಾ) ಹಿಂ.= ಪೆಟ್ಟಿಗೆ; ಹಾರ್ಮೋನಿಯಂ; ಶ್ರುತಿ ಪೆಟ್ಟಿಗೆ; ಸಂದೂಕು.

ಪೇಡಾ (ನಾ)= ಪೇಡೆ; ಪೇಡ್ಯಾ, ಒಂದು ಬಗೆಯ ಸಿಹಿ ತಿಂಡಿ.

ಪೇಡ್ಯಾ (ನಾ)= ಪೇಡಾ (ನೋಡಿರಿ).

ಪೇಣ್ಸಲ್ಲು (ನಾ) ಇಂ.= ಪೆನ್ಸಿಲ್ಲು; ಸೀಸು ಕಡ್ಡಿ; ಬಳಪ.

ಪೇಣ್ಸು (ಕ್ರಿ)= ಪೇಣಿಸು; ಪವಣಿಸು. ಕೋ.

ಪೇಪರ್ಮೆಂಟ್ (ನಾ) ಇಂ.= ಪೆಪ್ಪರ್ಮೆಂಟ್; ಕಾಗದದಲ್ಲಿ ಸುತ್ತಿಟ್ಟ ಮಕ್ಕಳ ಸಿಹಿತಿಂಡಿ; ಚಾಕ್ಲೇಟ್.

ಪೇಲೆ (ಅ)= ಪೈಲೆ; ಪಹಿಲೆ, ಮೊದಲು, ಪ್ರಥಮದಲ್ಲಿ.

ಪೇಲೇಕ (ಅ)= ಮೊದಲಿಗೆ; ಮೊಟ್ಟ ಮೊದಲು.

ಪೇಶ (ನಾ)ಉ.= ಪ್ರಸ್ತುತ; ಹಾಜರು.

ಪೇಶ ಮಾಡು (ಕ್ರಿ)= ಪ್ರಸ್ತುತಪಡಿಸು; ಹಾಜರು ಗೊಳಿಸು.

ಪೇಶಾಗು (ಕ್ರಿ)= ಪ್ರಸ್ತುತನಾಗು; ಹಾಜ್ರರಾಗು.

ಪೇಶಿ (ನಾ) ಉ.= ಖಟ್ಲೆಯ ವಿಚಾರಣೆ ದಿನ.

ಪೇಶಿಮಾಮ (ನಾ)= ಮಸೀದಿಯ ಮೇಲ್ವಿಚಾರಕ.

ಪೇಷ್ಕಾರ (ನಾ) ಉ.= ಕಾರಕೂನರ ಮುಖ್ಯಸ್ಥ.

ಪೇಸ್ಗಿ (ನಾ) ಉ.= ಇಶಾರಿ; ಮುಂಗಡ; ಅಡ್ವಾನ್ಸ್.

ಪೇಸ್ಗಿಕುಡು (ಕ್ರಿ)= ಮುಂಗಡ ಒಪ್ಪಿಸು.

ಪೈ (ವಿ.)= ಬೇರೆ; ಅನ್ಯ; ಇತರೆ, ತನ್ನದಲ್ಲದ.

ಪೈ (ನಾ)= ಹಿಂದೆ ಚಲಾವಣೆಯಲ್ಲಿದ್ದ ನಿಜಾಮ ಕಾಲದ ದುಡ್ಡಿನ ಅರ್ಧ ಬೆಲೆಯ ನಾಣ್ಯ; ಬ್ರಿಟಿಷ್ ಕಾಲದ ಒಂದು ದುಡ್ಡಿನ ಮುಕ್ಕಾಲು ಬೆಲೆಯ ನಾಣ್ಯ. ಆಗ ಪೈ, ದುಡ್ಡು, ಅಣೆ, ದೋ ನಾಣೆ, ಚಾರಾಣೆ, ಆಟಾಣೆ, ರುಪ್ಪೈ ಎಂಬ ನಾಣ್ಯಗಳು ಜಾರಿಯಲ್ಲಿದ್ದವು.

ಪೈಕಿ (ವಿ)= ಸಂಬಂಧಿಸಿದ; ಸೇರಿದ.

ಪೈಕುಲ (ನಾ)= ಅನ್ಯ ಜಾತಿ; ಬೇರೆ ಜಾತಿ

ಪೈಕ್ಯಾ (ನಾ)ತೆ.= ಪೈಕಂ; ಪೈಸೆ; ದುಡ್ಡು; ಹಣ; ಕಾಸು.

ಪೈಖಾನಿ (ನಾ)= ಕಕ್ಕಸ; ಸಂಡಾಸು.

ಪೈಗಂಬರ (ನಾ)= ಪ್ರವಾದಿ; ದೇವರ ಸಂದೇಶವನ್ನು ಸಾರುವವನು; ಹಜರತ ಮಹ್ಮದ ಪೈಗಂಬರರು.

ಪೈಜಲುಮಾ (ನಾ)= ಬೇರೆ ಜನ್ಮ; ಅನ್ಯ ಜನ್ಮ; ಪುನರ್ಜನ್ಮ

ಪೈಜಾತಿ (ನಾ)= ಅನ್ಯಕುಲ; ಬೇರೆ ಕುಲ; ತನ್ನದಲ್ಲದ ಕುಲ.

ಪೈಜಾಮಾ (ನಾ)ಉ.= ಪಾಯಜಾಮಾ; ನಡದಿಂದ ಅಡಿಯವರೆಗೆ ಇರುವ ಸಡಿಲು ಉಡುಗೆ; ಇಜಾರ; ಷರಾಯಿ.

ಪೈಜಾಮು (ನಾ)= ಪೈಜಣ; ಅಡಿಯೊಡವೆ.

ಪೈತಾಬು (ನಾ) ಹಿಂ.= ಕಾಲುಚೀಲ.

ಪೈತ್ಯಾ (ನಾ)= ಪೈತ್ಯ; ಪಿತ್ತ ಸಂಬಂಧವಾದ ದೋಷ; ಪಿತ್ತ ವಿಕಾರ.

ಪೈತ್ರಾ (ನಾ)= ಹೆಜ್ಜೆ; ಕುಣಿತದ ಹೆಜ್ಜೆ.

ಪೈತ್ರಾನಾಚ (ನು) ಹಿಂ.= ನಿಂತೂ ನಿಲ್ಲದಂತೆ ನಡೆದಾಡುವಿಕೆ; ಅವಿಶ್ರಾಂತ ತಿರುಗಾಟ; ನರ್ತನ; ತಾಳಬದ್ಧ ಕುಣಿತ.

ಪೈದಲ್ (ನಾ) ಹಿಂ. = ಕಾಲ್ನಡಿಗೆ; ಪಾದ ಯಾತ್ರೆ.

ಪೈದಾ (ನಾ) ಹಿಂ.= ಹುಟ್ಟು; ಜನ್ಮ

ಪೈದಾ ಆಗು (ಕ್ರಿ)= ಹುಟ್ಟುಹೊಂದು; ಜನ್ಮ ತಾಳು.

ಪೈದಾವಾರ (ಕ್ರಿ)= ಬೆಳೆ; ಬೆಳೆಯ ಉತ್ಪನ್ನ.

ಪೈದಾಯ್ಷಿಶಿ (ನಾ) ಹಿಂ.= ಹುಟ್ಟಿನಿಂದ ಬಂದದ್ದು; ಹುಟ್ಟುಗುಣ.

ಪೈ ಧಂದ್ಯಾ (ನಾ)= ಬೇರೆ ಉದ್ಯೋಗ; ಅನ್ಯ ಕೆಲಸ; ಬೇರೆ ಕಾಯಕ.

ಪೈಪು (ನಾ) ಇಂ.= ಕೊಳವೆ.

ಪೈಮನ್ಸ್ಯಾ (ನಾ)= ಅನ್ಯ ವ್ಯಕ್ತಿ; ಬೇರೆಯವನು; ಬೇರೆ ಮನುಷ್ಯ.

ಪೈಮಾನಾ (ನಾ) ಉ.= ಅಳತೆ ಸಾಧನ; ಅಳತೆ ಉಪಕರಣ.

ಪೈಮಾಯಿಷ (ನಾ) ಉ.= ಭೂಮಿಯನ್ನು ಅಳೆಯುವಿಕೆ; ಮೋಜಣಿ; ಸರ್ವೇ.

ಪೈಯಾ (ನಾ) ಹಿಂ.= ಪಯ್ಯಾ; ವಾಹನಗಳ ಗಾಲಿ.

ಪೈಯಾಪುಸ್ಸನ್ನು (ನು)= ವಾಹನದ ಗಾಲಿಯ ಗಾಳಿ ಇಳಿದು ಹೋಗು, ಹೊರ ಹೋಗು.

ಪೈಯಾ ಬಸ್ಸಾಗು (ಕ್ರಿ)= ವಾಹನದ ಗಾಲಿಯ ಟ್ಯೂಬು ಒಡೆದುಹೋಗು.

ಪೈರೆದಾರ (ನಾ) ಉ.= ಪಹರೆದಾರ; ಕಾವಲುಗಾರ; ಕಾವಲಿಗ.

ಪೈರ‍್ಯಾ (ನಾ) ಉ.= ಪಹರೆ; ಕಾವಲು.

ಪೈರ್ವಿ (ನಾ). ಉ.= ವ್ಯಾಜ್ಯದ ಉಸ್ತುವಾರಿಕೆ.

ಪೈರ್ವಿಕಾರ (ನಾ) ಉ.= ವ್ಯಾಜ್ಯದ ಉಸ್ತುವಾರಿಕಾರ; ಪೈರ್ವಿ ಮಾಡುವವನು.

ಪೈರ್ವಿಮಾಡು (ಕ್ರಿ)= ವ್ಯಾಜ್ಯಗಳ ಉಸ್ತುವಾರಿ ವಹಿಸು.

ಪೈಲವಾನ (ನಾ) ಹಿಂ.= ಪಹಲವಾನ; ಕುಸ್ತಿಗಡಿ.

ಪೈಲಾ (ವಿ.) ಉ.= ಮೊದಲನೆಯ.

ಪೈಲಾಸವಾಲ (ನಾ) ಉ.= ಮೊದಲನೆಯ ಪ್ರಶ್ನೆ.

ಪೈಲಿ (ನಾ) ಉ.= ಮೊದಲನೇ ತಾರೀಖು; ಒಂದನೇ ತೇದಿ; ಒಂದನೇ ವರ್ಗ.

ಪೈಸ (ವಿ.)= ಅಗಲ; ವಿಸ್ತೃತ; ಅಗಳಪಗಳ.

ಪೈಸಾ (ನಾ) ಹಿಂ.= ದುಡ್ಡು; ಕಾಸು; ನಿಜಾಮ ಕಾಲದ ಒಂದಾಣೆಯ ಆರನೇ ಒಂದು ಬೆಲೆಯ ನಾಣ್ಯ; ಬ್ರಿಟಿಷ್ ಕಾಲದ ಒಂದಾಣೆಯ ನಾಲ್ಕನೆ ಒಂದು ಬೆಲೆಯ ನಾಣ್ಯ; ಭಾರತ ಸರಕಾರದ ಒಂದು ರೂಪಾಯಿಯ ನೂರನೇ ಒಂದು ಬೆಲೆಯ ನಾಣ್ಯ.

ಪೈಸೆ (ನಾ)= ಪೈಸಾ (ಬಹುವಚನ).

ಪೊಂಗಾ (ನಾ) ಹಿಂ.= ಧ್ವನಿವರ್ಧಕ; ಲೌಡ್ ಸ್ಪೀಕರ್; ಬೊಂಗಾ.

ಪೊಂಗಾ ಹಚ್ಚು (ಕ್ರಿ)= ಧ್ವನಿವರ್ಧಕವನ್ನು ಅಳವಡಿಸು.

ಪೊಕ್ಕಾ (ನಾ)= ರಂಧ್ರ; ದೊಡ್ಡ ರಂಧ್ರ; ತೂತು.

ಪೊಕ್ಕ್ಯಾಗ (ಅ)= ರಂಧ್ರದಲ್ಲಿ; ಯೋನಿಯಲ್ಲಿ; ತೂತಿನಲ್ಲಿ (ಬೈಗುಳ)

ಪೊಖ್ತಾ (ನಾ) ಉ.= ಪೊಗ್ತಾ; ಪಕ್ಕಾ; ಸರಿಯಾದದ್ದು.

ಪೊಗ್ತಾ (ನಾ)= ಪೊಖ್ತಾ (ನೋಡಿರಿ).

ಪೊಟ್ಟಿ (ನಾ)= ಪೋರಿ; ಹುಡುಗಿ; ಬಾಲಕಿ; ಪಟ್ಟಿ.

ಪೊಟ್ಯಾ (ನಾ)= ಪೋರ; ಹುಡುಗ; ಪಟ್ಯಾ.

ಪೊಟ್ಯಾಗೊಳ್ (ನಾ)= ಪೊಟ್ಟಿ, ಪೊಟ್ಯಾಗಳ ಬಹುವಚನ ರೂಪ.

ಪೊಪ್ಪುಳ್ಕಾಯಿ (ನಾ)= ಪಪ್ಪಾಯಿ.

ಪೊಪ್ಪುಳ್ಕಿ (ನಾ)= ಮೇಲ್ಪದರು; ಪೊಪ್ಪಳಿಕೆ.

ಪೋಂಚ (ನಾ)= ತಲುಪುವಿಕೆ; ಗುರಿಗೆ ಮುಟ್ಟುವಿಕೆ; ಪೋಚ; ಒಟ್ಟುಗೂಡುವಿಕೆ.

ಪೋಂಚಾಗು (ಕ್ರಿ)= ತಲುಪು; ಮುಟ್ಟು; ಒಟ್ಟಾಗು.

ಪೋಕಳ (ನಾ)ಮ.= ಢೀಲಾ; ಸಡಿಲು;

ಪೋಗರ (ನಾ)= ಗೋಡೆಗೆ ರಂಧ್ರ ಕೊರೆವ ಮೊಳೆ.

ಪೋಗು (ಕ್ರಿ)= ಹೋಗು (ಬಯಲಾಟದ ಮಾತು:- ಪೋಗಿ ಬರುವೆನು ಅಪ್ಪಾ। ಬ್ಯಾಗನೇ ಪೋಗಿ ಬರುವಂಥವನಾಗು ಮಗನೇ।).

ಪೋಚ (ನಾ)= ಪೋಂಚ; ತಲುಪುವಿಕೆ; ಗುರಿಗೆ ಮುಟ್ಟುವಿಕೆ; ಒಟ್ಟುಗೂಡು.

ಪೋಚಮ್ಮ (ನಾ)= ಪ್ಲೇಗು ಅಥವಾ ಗಡ್ಡೆ ಬೇನೆಯ ದೇವತೆ.

ಪೋಚಾಗು (ಕ್ರಿ)= ಪೋಂಚಾಗು; ತಲುಪು; ಗುರಿಗೆ ಮುಟ್ಟು; ಒಟ್ಟುಗೂಡು (ಉದಾ:- ಗಲ್ಲ್ಯಾಗಿನ ಮಂದಿಯೆಲ್ಲಾ ಪೋಚಾಗಿ ಕಳ್ಳುಗ ಹಿಡ್ದು ಬಿಟ್ರು).

ಪೋಜು ಹೊಡಿ (ಕ್ರಿ)= ಪ್ರಭಾವ ಬೀರು; ಛಾಯಾಚಿತ್ರದಲ್ಲಿ ಮುಖ ತೋರು.

ಪೋಟ್ಗಿ (ನಾ)= ಪೋಟಗಿ; ವರ್ಷಾಶನ; ಜೀವನಾಧಾರ; ಜೀವನಾಂಶ.

ಪೋಟ್ಲಿ (ನಾ)= ಧಾನ್ಯವನ್ನು ಇಲ್ಲವೆ ವಸ್ತುಗಳನ್ನು ಬಟ್ಟೆ, ಚೀಲ, ಕುಂಚಿ, ಕಂಬಳಿ, ಪಿಸ್ವಿ ಇತ್ಯಾದಿಗಳಲ್ಲಿ ಹಾಕಿ ಕಟ್ಟಿದ ಗಂಟು.

ಪೋಣಾ (ನಾ)= ನಾಲ್ಕನೇ ಮೂರು ಭಾಗ; ಮುಕ್ಕಾಲು ಭಾಗ.

ಪೋಣಾಶೆ (ನಾ)= ಎಪ್ಪತ್ತೈದು.

ಪೋಣೆ ಆಟ (ನಾ) ಮ.= ಷಂಡ; ನಪುಂಸಕ; ಹಿಜಡ್ಯಾ; ಹಿಜ್ಜ; ಖೊಜ್ಜಾ; ಜಾಣ್ಯಾ; ಗಂಡಸುತನ ಇಲ್ಲದವನು; ಮಂಗಳಮುಖಿ.

ಪೋಣ್ಸು (ಕ್ರಿ)= ಪವಣಿಸು; ಪೋಣಿಸು; ಕೋ.

ಪೋತ್ಯಾ (ನಾ)= ದೇವಿಯ ಎದುರು ಹೋತ ಟಗರಾದಿಗಳ ಕತ್ತನ್ನು ಬಾಯಿಯಿಂದ ಕತ್ತರಿಸಿ ಬಲಿ ಕೊಡುವವನು; ಪೋತ್ರಾಜ.

ಪೋತ್ರಾಜ (ನಾ)= ಪೋತ್ಯಾ (ನೋಡಿರಿ).

ಪೋಥಿ (ನಾ) ಹಿಂ.= ಹೊತ್ತಗೆ; ಧರ್ಮಗ್ರಂಥ.

ಪೋನು (ನಾ) ಇಂ.= ಫೋನು; ದೂರವಾಣಿ.

ಪೋನ್ಮಾಡು (ಕ್ರಿ) = ದೂರವಾಣಿ ಸಂಪರ್ಕಿಸು.

ಪೋಯಾ(ನಾ)= ಮ.= ಪೋಹೆ; ಅವಲಕ್ಕಿ.

ಪೋರ (ನಾ)ಮ.= ಹುಡುಗ; ಬಾಲಕ.

ಪೋರಖೇಳ (ನಾ) ಮ.= ಹುಡುಗಾಟಿಕೆ; ಪೋರಾಬಟ್ಟಿತನ.

ಪೋರಗಿ (ನಾ) ಮ.= ಹುಡುಗಿ; ಬಾಲಕಿ; ಪೋರಿ.

ಪೋರಾಬಟ್ಟ (ವಿ.)= ಹುಡುಗಾಟಿಕೆಯ; ಪಾರಾ ಬಟ್ಟೆಗುಣದ.

ಪೋರಿ (ನಾ)= ಪೋರಗಿ; ಹುಡುಗಿ.

ಪೋರ್ಖೇಳ (ನಾ)= ಪೋರಖೇಳ (ನೋಡಿರಿ)

ಪೋಲಕಾ (ನಾ)= ಒಂದು ಬಗೆಯ ರವಿಕೆ; ಕುಪ್ಪಸ.

ಪೋಲಿಸ (ನಾ) ಇಂ.= ಆರಕ್ಷಕ.

ಪೋಲೀಸ್ಗೌಡ (ನಾ)= ಗ್ರಾಮ ಮಟ್ಟದ ಪೋಲೀಸು ಅಧಿಕಾರಿ; ಪೋಲೀಸ್ ಪಾಟೀಲ; ಕೋತವಾಲಿ ಪಾಟೀಲ.

ಪೋಲೇಸಿ (ನಾ)= ಪೋಲಿಸು; ಆರಕ್ಷಕ.

ಪೋಲೇಸಿ ಜವಾನ (ನಾ)= ಪೋಲೀಸ ಪೇದೆ.

ಪೋಷಾಕು (ನಾ)= ಸಮವವಸ್ತ್ರ ಉಡುಗೆ ತೊಡುಗೆ.

ಪೋಹ್ಯಾ (ನಾ) ಮ.= ಅವಲಕ್ಕಿ

ಪೋಳ (ನಾ)= ಹೋರಿ

ಪೋಳಾ (ನಾ) ಮ.= ಹೋಳಾ; ಹ್ವಾಳಾ; ಕಾರು ಹುಣ್ಣಿವೆ ನಂತರ ಬರುವ ಅಮಾವಾಸ್ಯ ದಂದು ದನ, ಕರು, ಹೋರಿಗಳನ್ನು ಮೈ ತೊಳೆದು, ಸಿಂಗರಿಸಿ, ಪೂಜಿಸುವ ಮರಾಠಿಗರ ಹಬ್ಬ.

ಪೋಳಿ (ನಾ) ಮ.= ಹೋಳಿಗೆ; ಹೂರಣ ಹೋಳಿಗೆ.

ಪೋಳ್ಯಾ (ನಾ) ಮ.= ಹೋಳಿಗೆ; ಪುರಣ ಪೋಳಿ (ಪೋಳಿ ಪದದ ಬಹುವಚನ ಸ್ವರೂಪ).

ಪೌಂಕ್‌ಪೌಂಕ್ (ಧ್ವಿ)= ವಾಹನದ ಎಚ್ಚರಿಕೆ ಕರೆ.

ಪೌಂಚಾಗು (ಕ್ರಿ)= ಒಟ್ಟಾಗು; ಒಟ್ಟುಗೂಡು; ತಲುಪು.

ಪೌಂಚಾಸು (ಕ್ರಿ)= ಮುಟ್ಟು; ತಲುಪು; ಮುಟ್ಟಿಸು; ತಲುಪಿಸು.

ಪೌಲಾ (ನಾ)= ನಾಲ್ಕನೇ ಒಂದು ಭಾಗ; ಕಾಲು ಭಾಗ.

ಪ್ಯಾಂಟು (ನಾ) ಇಂ.= ನಡದಿಂದ ಅಡಿಯ ವರೆಗಿರುವ ಚಲ್ಲಣದ ತರಹದ ಉಡುಪು.

ಪ್ಯಾಟಿ (ನಾ)= ಪೇಟೆ (ಹುಮ್ನಾಬಾದ ನಗರದ ತೆಳಪ್ಯಾಟಿ)

ಪ್ಯಾರ (ನಾ)= ಪ್ರೀತಿ; ಪ್ರೇಮ.

ಪ್ಯಾರ ಮಾಡು (ಕ್ರಿ)= ಪ್ರೀತಿಸು; ಪ್ರೇಮಿಸು.

ಪ್ಯಾರಾ (ವಿ)= ಪ್ರಿಯವಾದ; ಮುದ್ದಾದ.

ಪ್ಯಾರಿ (ನಾ)= ಪ್ರಿಯೆ.

ಪ್ಯಾಲಾ (ನಾ) ಹಿಂ.= ಪ್ಯಾಲಿ; ಜಾಮು; ಗ್ಲಾಸು; ಚೊಂಬು; ಲೋಟ.

ಪ್ಯಾಲಿ (ನಾ)= ಪ್ಯಾಲಾ; ಜಾಮು; ಗ್ಲಾಸು; ಚೊಂಬು; ಲೋಟ; ಹುಚ್ಚ; ಹುಚ್ಚು ಪ್ಯಾಲಿ.

ಪ್ರಭು ಶೆಟ್ಟಿ ಕೆಂಚಾ (ನಾ)= ಚಿಕ್ಕಾಲೂರನ ಶರಣ ಮಡಿವಾಳ ಶೆಟ್ಟಿ ಕೆಂಚಾ ಅವರ ಬಂಧು.

ಪ್ರಾಣೇಶ್ವರ (ನಾ)= ಗಂಡ; ಪತಿ; ಕೈಹಿಡಿದ ಗಂಡ (ಬಯಲಾಟದಲ್ಲಿ ಬಳಕೆಯಾಗುವ ಮಾತು).

ಪ್ರಾಣೇಶ್ವರಿ (ನಾ)= ಹೆಂಡತಿ; ಪತ್ನಿ; ವಿಧಿವತ್ತಾಗಿ ಮದುವೆಯಾದ ಮಹಿಳೆ; ಬಯಲಾಟದ ಮಾತು.

ಪ್ರೇಮಳ (ವಿ.) ಮ.= ಪ್ರೀತಿಯ; ಒಲವಿನ.

ಪ್ರೇಮುಣ್ಕಿ (ನಾ)= ಪ್ರೇಮ, ಪ್ರೇಮಿಸು ವಿಕೆ; ಪ್ರೀತಿ.

ಫ

ಫಂಕಾ (ನಾ)= ಪಕ್ಷಿಯ, ವಿಮಾನದ, ಹೆಲಿಕಾಪ್ಟರಿನ ರೆಕ್ಕೆ; ಫಕ್ಕಾ; ಪಕ್ಕ; ಬೀಸಣಿಕೆ; ವಿದ್ಯುಚ್ಚಾಲಿತ ಬೀಸಣಿಕೆ. (ಗಾದೆ:- ಫಂಕಾ ಬಂದ ಪಗ್ಸಿ ಹಾರಲ್ದೆ ಇರ್ತದಾ?)

ಫಂಕಾಕಿತ್ತಿದ ಹಕ್ಕಿ (ನು)= ಅಸಹಾಯಕ.

ಫಂಕಾಕಿತ್ತು (ಕ್ರಿ)= ಹಕ್ಕಿಯ ರೆಕ್ಕೆ ಕೀಳು; ಅಸಹಾಯಕನಾಗಿ ಮಾಡು; ಹಾರದಂತೆ ಮಾಡು.

ಫಂಕಾಬರು (ಕ್ರಿ)= ರೆಕ್ಕೆ ಮೂಡು; ಹಾರಲು ಬರುವಂತೆ ರೆಕ್ಕೆ ಬಲಿ; ಬಲ ಹೊಂದು; ಬಲಿಷ್ಠನಾಗು.

ಫಂಕಾ ಬೀಸು (ಕ್ರಿ)= ಬೀಸಣಿಕೆ ಹಾಕು; ಫ್ಯಾನು ಹಾಕು.

ಫಂಟಿ (ನಾ)= ಫಂಟ್ಯಾ; ಟೊಂಗೆ; ಶಾಖೆ; ಶಿಶ್ನ.

ಫಂಟಿ ಒಡಿ (ಕ್ರಿ) = ಮಗ್ಗಲು ಟೊಂಗೆ ಚಿಗಿ.

ಫಂಟಿ ಹೊಡಿ (ನು)= ಆಗುವ ಕೆಲಸ ಆಗದಂತೆ ಮಾಡು; ಕೆಲಸ ಕೆಡಿಸು.

ಫಂಟ್ಯಾ (ನಾ)= ಫಂಟಿ (ನೋಡಿರಿ)

ಫಂಟ್ಯಾ ಹೊಡಿ (ಕ್ರಿ)= ಟೊಂಗೆ ಕತ್ತರಿಸು; (ನು) ಅಡ್ಡಿ ಉಂಟು ಮಾಡು; ಕೆಲಸ ಕೆಡು.

ಫಂಡಿಗಿ ಫಂಡು (ಅ)= ಹಿಂಡುಗಟ್ಟಲೆ; ಹಿಂಡು ಹಿಂಡಾಗಿ.

ಫಂಡು (ನಾ)= ಗುಂಪು; ಒಂದು ಗುಂಪಿನ ಜನ; ಚಂದಾ; ನಿಧಿ; ಧನಸಂಗ್ರಹ.

ಫಂಡು ಜಮಾಸು (ಕ್ರಿ)= ಚಂದಾಹಣ ಸಂಗ್ರಹಿಸು.

ಫಂದು (ನಾ)= ಮೋಸ; ಮೋಸಗಾರ; ವಂಚನೆ; ವಂಚಕ; ಕುಂತತ್ರ; ಕುತಂತ್ರದ ಜಾಲ ಬೀಸುವವನು.

ಫಂದುಮಾಡು (ಕ್ರಿ)= ಮೋಸ್ತ ಮಾಡು; ವಂಚಿಸು; ಕುತಂತ್ರಮಾಡು.

ಫಕಾತ (ಅ)= ಫಕ್ತ; ಕೇವಲ; ಬರೆ.

ಫಕಾ ಫಕಾ ಬುಕ್ಕು (ಕ್ರಿ)= ಆತುರಾತುರದಿಂದ ತಿನ್ನು, ಬಕಬಕ ತಿನ್ನು.

ಫಕಾಲಿ (ನಾ)= ಪಕಾಲಿ; ಸಿಂಧಿ ತುಂಬಲು ಬಳಸುವ ತೊಗಲಿನ ಚೀಲ.

ಫಕೀರ (ನಾ)= ಮುಸಲ್ಮಾನ ಸಾಧು, ಸನ್ಯಾಸಿ, ಭಿಕ್ಷುಕ.

ಫಕೀರಾಬಾದಿ (ನಾ)= ಫಕೀರ; ಫಕೀರನ ವಂಶದವ; ಫಕೀರ ವೃತ್ತಿಯನ್ನು ಅನುಸರಿಸುವವನು; ಫಕೀರರ ವಸತಿಯವನು.

ಫಕ್ಕಾ (ನಾ)= ರೆಕ್ಕೆ; ಪಕ್ಷ; ಪಂಕ.

ಫಕ್ಕಿ (ನಾ)= ಕೈ ಬೆರಳುಗಳಲ್ಲಿ ಹಿಡಿಸುವಷ್ಟು ಕಾಳು; ಪಕ್ಕೆ; ಪಕ್ಕೆಲುಬು.

ಫಕ್ಕಿಬ್ಯಾನಿ (ನಾ)= ಪಕ್ಕೆ ನೋವು; ಫಸ್ಲೀ ಬೇನೆ; ಮಗ್ಗಲು ಬೇನೆ.

ಫಕ್ಕಿ ಹೊಡಿ (ಕ್ರಿ)= ತಿನ್ನು; ಬುಕ್ಕು.

ಫಕ್ತ (ವಿ.)= ಬರೀ; ಕೇವಲ; ಮುಕ್ತಾಯ, ಮುಗಿದುದು.

ಫಜೀತಿ (ನಾ)= ಅವಮಾನ; ಹೀನೈಸುವಿಕೆ (ಗಾದೆ:- ಜಿವಾ ಇರಾತನಕಾ ಫಜೀತಿಗೇನು ಕಮ್ಮಿ ?)

ಫಟಫಟಿ (ನಾ)= ಇಗ್ಗಾಲಿ; ಮೋಟರ್‌ಬೈಕ್; ದ್ವಿಚಕ್ರವಾಹನ.

ಫಟಾಕಿ (ನಾ)= ಪಟಾಕಿ ಮಕ್ಕಳಾಟದ ಸ್ಫೋಟಕ.

ಫಟಾ ಫಟ್ (ಅ)= ವೇಗವಾಗಿ; ಚುರುಕಾಗಿ, ತ್ವರಿತವಾಗಿ.

ಫಟಿಂಗ (ನಾ)= ಅಸಭ್ಯ; ಉದ್ಧಟ; ಲಫಂಗ.

ಫಟ್ಕಾ (ನಾ)= ಒಂದು ಬಗೆಯ ರಸಾಯನ ಗಟ್ಟಿ; ಹರಿದದ್ದು.

ಫಟ್ಕಾಸು (ಕ್ರಿ)= ಜಾಡಿಸು; ಜಬರಿಸು; ಬೆದರಿಸು.

ಫಡ್ಕಿ (ನಾ)= ಗೋಣಿ ಚೀಲ; ಹರಿದ ಗೋಣಿ ಚೀಲ, ಸೀರೆ; ಲಂಗಾ; ಧೋತ್ರ ಇತ್ಯಾದಿ.

ಫಡ್ಕಿ ಹಾರ್ಸು (ನು)= ಒತ್ತಾಯದಿಂದ ಸೀರೆ ಅಥವಾ ಧೋತ್ರ ಕಳೆದು ಅವಮಾನಿಸು; ಹೆಣ್ಣಿಗೆ ಅವಮಾನಿಸು.

ಫಡ್ಕಿ ಹೊಡಿ (ಕ್ರಿ)= ಧಾನ್ಯದ ರಾಶಿಯ ಮೇಲಿನ ಹೊಟ್ಟನ್ನು ಗೋಣಿಚೀಲ ಬೀಸಿ ದೂರಗೊಳಿಸು. (ಅಡತಿ ಅಂಗಡಿಗಳಲ್ಲಿ ಈ ಕಾರ್ಯ ನಡೆಯುತ್ತದೆ).

ಫಡತೂಸು (ವಿ.)= ಕೆಲಸಕ್ಕೆ ಬಾರದ; ನಿರುಪಯುಕ್ತ; ಅಪ್ರಯೋಜಕವಾದ.

ಫಡಾ (ನಾ)= ಕಬ್ಬು ಕಡಿದು ಒಟ್ಟಿದ ರಾಶಿ; ಕಬ್ಬಿನ ಬೆಳೆ.

ಫಡಾನೆ (ಅ)= ರಪ್ಪನೆ.

ಫಡಾಫಡಾ (ದ್ವಿ)= ರಪ್ಪರಪ್ಪನೆ

ಫಣಿ (ನಾ)= ಕೋಲಿನ ತುಂಡು; ಚೆಂಡಿ ನಾಟಕ್ಕಾಗಿ ಬಳಸುವ ಕೋಲು; ಚಿಣಿ ಆಟಕ್ಕಾಗಿ ಬಳಸುವ ಕೋಲು; ಬ್ಯಾಟು.

ಫತಡಿ (ನಾ)= ಸಾರಣೆಗಾಗಿ ಬಳಸುವ ಬಟ್ಟೆ; ಪತಡಿ; ಮಣ್ಣೊಲೆ ಸಾರಿಸಲು ಬಳಸುವ ಚಿಂದಿ ಬಟ್ಟೆ.

ಫತಾ (ನಾ)= ವಿಜಯ; ಗೆಲುವು.

ಫತ್ತುರು (ನಾ)= ಮೈಮೇಲೆ ಕಲ್ಲಿನ ತರಹ ಉಂಟಾದ ಗಡ್ಡೆ.

ಫತ್ತುರು ಹುಟ್ಬು (ಕ್ರಿ)= ಗಡ್ಡೆಯಾಗು; ಗಡ್ಡೆ ಗಟ್ಟು.

ಫತ್ತೆದರವಾಜಾ= ಬೀದರ ನಗರಕೋಟೆಯ ವಿಜಯ ದ್ವಾರ. ರಜಾಕಾರರ ವಿರುದ್ಧ ಕೇಂದ್ರ ಅರೆಸೈನ್ಯ ಪಡೆ ಪ್ರವೇಶ ಮಾಡಿದ ಮಹಾದ್ವಾರ.

ಫತ್ತೆಪುರ (ನಾ)= ಅಹ್ಮದ ಶಾವಲಿ ಬಹಮನಿಯು ತನ್ನ ಚಿಕ್ಕಪ್ಪ ಫಿರೋಜ ಷಾಹನ ವಿರುದ್ಧ ಜಯಗಳಿಸಿದ ಊರು; ಬೀದರ ತಾಲೂಕಿನ ಅಷ್ಟೂರು ಸಮೀಪದ ಊರು.

ಫದಿ (ನಾ)= ಪೊದೆ; ಪೊಳ್ಳು ಕಂಟಿ.

ಫನಾರ (ಎ)= ಅಗಲ; ವಿಸ್ತಾರ; ಹರವಾದ.

ಫನಾರ ಮೂಗು (ನಾ)= ಅಗಲವಾದ ಮೂಗು.

ಫನಾರಿ (ನಾ)= ಅಗಲ ಮೂಗುಳ್ಳವಳು (ಬೈಗುಳ).

ಫನಾರ್‍ಯಾ (ನಾ)= ಅಗಲವಾದ ಮೂಗುಳ್ಳವ (ಬೈಗುಳ).

ಫಪ್ಪುಸು (ವಿ.)= ಟೊಳ್ಳು; ಪೊಳ್ಳು.

ಫಯ್ಲಿ (ನಾ)= ತುಂಟ; ಘಟಿಂಗ; ಲಫಂಗ.

ಫರಕಾಗು (ಕ್ರಿ)= ವ್ಯತ್ಯಾಸವಾಗು.

ಫರಕು (ನಾ)= ವ್ಯತ್ಯಾಸ; ಅಂತರ; ವ್ಯತ್ಯಯ.

ಫರಾಕಾತ (ಅ) ಉ.= ನಿಶ್ಚಿಂತವಾಗಿ.

ಫರಾಕಾತಿ (ನಾ) ಉ.= ಫಾರಿಕುತಿ; ಸೋಡಚೀಟಿ; ಘಟಸ್ಫೋಟ.

ಫರಾರಾಗು (ಕ್ರಿ)= ಓಡಿ ಹೋಗು; ಮೋರೆ ತಪ್ಪಿಸಿಕೊ.

ಫರಾರಿ (ನಾ)= ಓಡಿಹೋಗುವಿಕೆ; ನಾಪತ್ತೆ; ಕಾಗದದ ತೋರಣ.

ಫರ್ಕಿ (ನಾ)= ಪೊರಕೆ; ಮುತ್ತಲ ಅಥವಾ ಸಿಂಧಿ ಪೊರಕೆ; ಝಾಡು; ಕಸಬರಿಗೆ.

ಫರ್ಜಮಾಡು (ಕ್ರಿ)= ಕಲ್ಪಿಸು; ಊಹಿಸು.

ಫರ್ಜಿ (ವಿ)= ಕಾಲ್ಪನಿಕ.

ಫರ್ದಿ (ನಾ)= ಯಾದಿ; ಪಟ್ಟಿ; ಕ್ರಮವಾಗಿ ಬರೆದದ್ದು.

ಫರ್ದಿ ಇಳಿಸು (ಕ್ರಿ)= ಪಟ್ಟಿ ಇಳಿಸು; ಕ್ರಮವಾಗಿ ಬರೆ.

ಫರ್ಫರಿ (ನಾ)= ಫರಾರಿ; ಕಾಗದದ ತೋರಣ.

ಫರ್ಮಾಯಿಷ್ (ನಾ) ಉ.= ಅಭಿಲಾಷೆ, ಮೆಚ್ಚುಗೆ.

ಫರ್ಮಾಯಿಷಿ (ವಿ) ಉ.= ಮೆಚ್ಚುಗೆಯ; ಅಭಿಲಾಷೆಯ.

ಫರ್ಮಾಸು (ಕ್ರಿ) ಉ.= ಅಭಿಲಾಷಿಸು; ಮೆಚ್ಚುಗೆ ಸೂಚಿಸು.

ಫರ್ಶಿ (ನಾ) ಉ.= ನೆಲಕ್ಕೆ ಹಾಸುವ ಶಾಬಾದಿ ಚಪ್ಪಡಿಕಲ್ಲು.

ಫಲಾ (ನಾ)= ಕಾಯಿ; ಹಣ್ಣು; ಬೆಳೆ; ಸಂತಾನ; ಇಂಥ; ಇಂಥವನು.

ಫಲಾಕುಡು (ಕ್ರಿ)= ಕಾಯಿಬಿಡು; ಫಲ ಕೊಡು; ಸಂತಾನ ದಯಪಾಲಿಸು.

ಫಲಾಣಿ (ವಿ) ಉ.= ಇಂಥ; ಇಂಥ ವಿಳಾಸದ; ಇಂಥ ನಾಮಾಂಕಿತದ.

ಫಲಾ ಬಿಡು (ಕ್ರಿ)= ಫಲ ಕೊಡು; ಸಂತಾನ ಹೊಂದು.

ಫವ್ಡಿ (ನಾ) ಉ.= ಸಲಿಕೆ; ಬುಟ್ಟಿಯಲ್ಲಿ ಮಣ್ಣು, ಮರಳು, ಸಿಮೆಂಟು, ಕಾಂಕ್ರೀಟು ಇತ್ಯಾದಿ ಬಳಿದು ತುಂಬುವ ಸಾಧನ; ಫಾವ್ಡಿ.

ಫಸಲು (ನಾ) ಉ.= ಬೆಳೆ.

ಫಸಾಸು (ಕ್ರಿ)= ಮೋಸಮಾಡು; ವಂಚಿಸು.

ಫಸಿ (ನಾ)= ಮೋಸ; ಮೋಸಗಾರಿಕೆ.

ಫಸಿಭೀಳು (ಕ್ರಿ)= ಮೋಸಹೋಗು; ವಂಚನೆಗೊಳಗಾಗು.

ಫಸಿಮಾಡು (ಕ್ರಿ)= ಮೋಸಗೊಳಿಸು; ವಂಚಿಸು.

ಫಸ್ಕಿ (ನಾ)= ಅಡತಿಗಳಲ್ಲಿಯ ಹಮಾಲರು ರೈತರಿಂದ ತೆಗೆದುಕೊಳ್ಳುವ ಚಾರಿ ಅಥವಾ ಕುಡ್ತಿ ಅಳತೆಯ ಸಂಭಾವನೆ.

ಫಸ್ಕೋಮ್ (ನಾ) ಉ.= ಫಸ್ತಬೌಮ್; ಕೆಳಜಾತಿ; ಹೈದರಾಬಾದ್ ರಾಜ್ಯದಲ್ಲಿಯ ರಜಾಕಾರ ಉಪಟಳ ಕಾಲದಲ್ಲಿ ಅವರೊಂದಿಗೆ ಸಹಕರಿಸಿ ಅತ್ಯಾಚಾರವೆಸಗಿದ ದಲಿತ ಸಂಘಟನೆ; ಇತ್ತೆಹಾದುಲ್ ಹರಿಜನ ಸಂಘಟನೆ.

ಫಸ್ಲಿ (ನಾ)= (ಉ)= ಪಕ್ಕೆ; ಪಕ್ಕೆಲುಬು; ಮಗ್ಗಲು; ಉರ್ದು ವರ್ಷ ಗಣನೆ.

ಫಸ್ಲಿಬ್ಯಾನಿ (ನಾ)= ಪಕ್ಕೆಲುಬಿನ ನೋವು; ಮಗ್ಗಲು ನೋವು.

ಫಳಾರ (ನಾ)= ಫಲಾಹಾರ, ನಾಶ್ತಾ; ಉಪಾಹಾರ; ನ್ಯಾಯಾರಿ.

ಫಳಿ (ನಾ)= ಮರದ ಹಲಗೆ; ಫಣಿ; ದಾಂಡು; ಬ್ಯಾಟು.

ಫಳ್ಳಿ (ನಾ)= ಫಳ್ಯಾ; ಕಿತ್ತಿದ ನೆಲಗಡಲೆಯ ದಂಟು; ಕಿತ್ತಿದ ಸೇಂಗದ ಬಳ್ಳಿ; ಕಡಲೆಯ ದಂಟು; ತೊಗರೆಯ ದಂಟು.

ಫಳ್ಯಾ (ನಾ)= ಫಳ್ಳಿ (ನೋಡಿರಿ).

ಫಾಂಕಾ (ನಾ) ಉ.= ಪಂಖ; ರೆಕ್ಕೆ; ಬೀಸಣಿಕೆ.

ಫಾಂಕಾ ಹೊಡಿ (ಕ್ರಿ)= ಬೀಸಣಿಕೆ ಹಾಕು.

ಫಾಂಟಿ (ನಾ)= ಫಂಟ್ಯಾ; ಟೊಂಗೆ; ರೆಂಬೆ; ಶಾಖೆ; ಶಿಶ್ನ.

ಫಾಂಟಿ ಹೊಡಿ (ಕ್ರಿ)= ಅಡ್ಡಿಯುಂಟು ಮಾಡು; ಟೊಂಗೆ ಕತ್ತರಿಸು.

ಫಾಂಸಿ (ನಾ) ಉ.= ಉರುಳು; ಗಲ್ಲು.

ಫಾಂಸಿ ಸಜಾ (ನಾ) ಉ.= ಗಲ್ಲು ಶಿಕ್ಷೆ; ಉರುಳಿನ ಶಿಕ್ಷೆ.

ಫಾಂಸಿಗೇರ್ಸು (ಕ್ರಿ)= ಗಲ್ಲು ಶಿಕ್ಷೆ ವಿಧಿಸು; ಶೂಲಕ್ಕೇರಿಸು.

ಫಾಜಾ (ನಾ) ಉ.= ಗುರಿ; ಮಜಲು; ಮುಟ್ಟಬೇಕಾದ ಸ್ಥಳ; ಚೆಂಡು ತಲುಪಬೇಕಾದ ಜಾಗ; ಮರಕೋತಿ ಆಟದ ಫಣಿ ಇರಬೇಕಾದ ಜಾಗ.

ಫಾಜಾಕ ಮುಟ್ಟು (ಕ್ರಿ)= ಗುರಿಗೆ ತಲುಪು; ಮಜಲಿಗೆ ತಲುಪು.

ಫಾಜಾ ಮಾಡು (ಕ್ರಿ)= ಜಾಗ ನಿರ್ಧರಿಸು.

ಫಾಜ್ಯಾ (ನಾ)= ಫಾಜಾ (ನೋಡಿರಿ).

ಫಾಟಿಂಪೂಟಿ (ನಾ)= ಒಡಕು; ಛಿದ್ರಗೊಳ್ಳುವಿಕೆ; ಭೇದಹುಟ್ಟುವಿಕೆ. (ಕ್ರಿ) ಫಾಟಂ ಪೂಟಾಗು; ಒಡಕಾಗು; ಒಳಭೇದ ಉಂಟಾಗು.

ಫಾಟಕ (ನಾ)= ಮುಖ್ಯದ್ವಾರ; ಸುತ್ತು ಗೋಡೆಯ ಬಾಗಿಲು.

ಫಾಟಭೀಳು (ಕ್ರಿ)= ಅಂತರ ಉಂಟಾಗು; ಬಯಲಾಗು; ಇಲ್ಲದಂತಾಗು.

ಫಾಡಿ (ನಾ)= ಮರದ ಅಗಲವಾದ ಚಕ್ಕೆ; ಕಲ್ಲುಬಂಡೆಯ ಚಪ್ಪಡಿ.

ಫಾಡಿ ಫಾಡಿ (ದ್ವಿ)= ಅಗಲಗಲವಾದ ಮರದ ಚಕ್ಕೆಗಳು.

ಫಾಣಿ (ನಾ)= ಫೋಣಿ; ಬಗಾರ.

ಫಾಣ್ಯಾಕುಡು (ಕ್ರಿ)= ಫೋಣ್ಣೆಹಾಕು; ಬಗಾರು ಹಾಕು; ಕಾಯ್ದ ಎಣ್ಣೆ ಜೀರಿಗೆ, ಸಾಸಿವೆ, ಮೆಣಸಿನ ಬೀಜ, ಉಳ್ಳಿಗಡ್ಡೆ ಇತ್ಯಾದಿ ಬೆರೆಸಿ ತರಕಾರಿ ಇಲ್ಲವೆ ಸಾರಿಗೆ ಸ್ವಾದ ಬರುವಂತೆ ಮಾಡು.

ಫಾಣ್ಯಾಹಾಕು (ಕ್ರಿ)= ಫಾಣ್ಯಾ ಕುಡು (ನೋಡಿರಿ).

ಫಾತ್ಯಾ (ನಾ) ಉ.= ಮುಸಲ್ಮಾನರು ಓದುವ ಪ್ರಾರ್ಥನಾ ಮಂತ್ರ; ಫಾತೆಹ.

ಫಾತ್ಯಾ ಓದು (ಕ್ರಿ)= ಕಲ್ಮಾ ಹೇಳು.

ಫಾತ್ಯಾ ಕುಡು (ಕ್ರಿ)= ಕಲ್ಮಾ ಹೇಳು; ಫಾತ್ಯಾ ಓದು.

ಫಾದರ (ನಾ)= ಕ್ರಿಶ್ಚಿಯನ್ ಧರ್ಮ ಗುರುಗಳು.

ಫಾಮು (ನಾ)= ಮೈಮೇಲಿನ ಎಚ್ಚರ;

ಫಾಯಾ (ನಾ) ಉ.= ಹಿಂಜಿದ ಹತ್ತಿ.

ಫಾಯಾ ಇಟ್ಕೊ (ಕ್ರಿ)= ಗಂಧೆಣ್ಣೆಯಲ್ಲಿ ತೋಯ್ಸಿದ ಹತ್ತಿಯನ್ನು ಕಿವಿಯಲ್ಲಿ ಇರಿಸಿಕೊ.

ಫಾಯ್ದಾ (ನಾ) ಉ.= ಫಾಯ್ದೆ; ಲಾಭ; ಪ್ರಯೋಜನ.

ಫಾಯ್ದೆ (ನಾ) ಉ.= ಫಾಯ್ದಾ (ನೋಡಿರಿ)

ಫಾರ (ನಾ)ಉ.= ಬಹಳ; ಬಾಳಿಕೆ; ತಾಳಿಕೆ.

ಫಾರಂ (ನಾ)= ಫಾರ್ಮು; ನಮೂನೆ.

ಫಾರಾಗು (ಕ್ರಿ)= ಬಾಳಿಕೆಯಾಗು; ತಾಳಿಕೆ ಯಾಗು; ಬಹಳವಾಗು.

ಫಾರಿನ್ (ನಾ) ಇಂ.= ವಿದೇಶ; ಅನ್ಯದೇಶ; ಬೇರೆ ದೇಶ.

ಫಾರೀಕತಿ (ನಾ) ಉ.= ಫರಾಕತಿ; ಸೋಡಚೀಟಿ; ಘಟಸ್ಫೋಟ; ತಲಾಕ್; ತಾಳಿ ಹರಿದುಕೊಳ್ಳುವಿಕೆ.

ಫಾರೀಕತಿ ಕುಡು (ಕ್ರಿ)= ಸೋಡಚೀಟಿ ಕೊಡು; ತಲಾಕ್ ಕೊಡು.

ಫಾರ್ಕಿ (ನಾ)= ಪೊರಕೆ; ಝಾಡು; ಕಸಬರಿಗೆ.

ಫಾಲ್ತು (ವಿ) ಉ.= ಬೇಕಾರ; ಕೆಲಸಕ್ಕೆ ಬಾರದ; ನಿರುಪಯುಕ್ತ.

ಫಾವರ್ಗಿ (ನಾ)= ಕುಡಿಯುವ ನೀರಿನ ಬಾವಿಯ ನೀರೆತ್ತುವ ಸೇದಿ; ಫಾವ್ರಾ; ಫಾವ್ರ್ಯಾ.

ಫಾವ್ಡಾ (ನಾ) ಉ.= ಸಲಿಕೆ; ಫವಡಿ; ಸಿಮೇಟು, ಕಾಂಕ್ರೀಟು, ರೇತಿ ಇತ್ಯಾದಿಗಳನ್ನು ಬುಟ್ಟಿಗೆ ತುಂಬುವ ಉಪಕರಣ.

ಫಾವ್ಡಿ (ನಾ) ಉ.= ಫಾವ್ಡಾ (ನೋಡಿರಿ).

ಫಾವ್ರಾ (ನಾ)= ಫಾವರ್ಗಿ (ನೋಡಿರಿ).

ಫಾಸಿ (ನಾ) ಉ.= ಉರುಳು; ಗಲ್ಲು; ಫಾಂಸಿ.

ಫಾಸಿಕಾರ (ನಾ)= ಮೋಸಗಾರ, ವಂಚಕ.

ಫಾಸಿಪಾರ್ಧಿ (ನಾ)= ಒಂದು ಜನಾಂಗದ ಹೆಸರು.

ಫಾಸಿ ಭೀಳು (ಕ್ರಿ)= ಮೋಸಹೋಗು.

ಫಾಸಿ ಮಾಡು (ನಾ)= ಮೋಸಮಾಡು; ವಂಚಿಸು.

ಫಾಸಿ ಹಾಕು (ಕ್ರಿ)= ಉರುಳುಹಾಕು; ಉರುಳುಹಾಕಿ ಕೊಲ್ಲು; ಗಲ್ಲಿಗೇರಿಸು; ವಂಚಿಸು.

ಫಾಸ್ಲಾ (ನಾ) ಉ.= ದೂರ; ಅಂತರ; ಪ್ರಯಾಣಿಸುವ ಮಾರ್ಗದ ಅಂತರ.

ಫಾಳ್ಯಾ (ನಾ) ಮ.= ಕಿತ್ತಿದ ನೆಲಗಡಲೆ ಇಲ್ಲವೆ ಕಡಲೆಯ ದಂಟು; ತೊಗರೆಯ ದಂಟು; ಫಳ್ಯಾ; ಫಳ್ಳಿ.

ಫಾಳ್ಸು (ಕ್ರಿ)= ಚರ್ಮದ ಮೇಲ್ಪದರನ್ನು ಕಿತ್ತು; ಮರವನ್ನು ಕೆತ್ತು; ತೊಗಟೆಯನ್ನು ಉಚ್ಚು.

ಫಿಕರ್ (ನಾ) ಉ.= ಚಿಂತೆ; ಫಿಕಿರಿ.

ಫಿಕರ್ ಮಾಡು (ಕ್ರಿ)= ಚಿಂತೆಮಾಡು; ಚಿಂತೆ ಹಚ್ಚಿಕೊ.

ಫಿಕಿರ್ (ನಾ) ಉ.= ಫಿಕರ್; ಚಿಂತೆ; ಮನಸಿನ ನೋವು.

ಫಿಕ್ಕಾ (ವಿ) ಉ.= ತಿಳಿಯಾದ; ಸಪ್ಪಗಿರುವ.

ಫಿಕ್ಕಾಫಿಕ್ಕಾ (ದ್ವಿ) ಉ.= ಸಪ್ಪಗಿನ; ಅತಿಸಪ್ಪಗಿನಲ ರುಚಿ ತಪ್ಪಿದ.

ಫಿಕ್ಕಿದಾಲ್ (ನಾ)= ತಿಳಿಬೇಳೆ; ಹುಳಿಬೇಳೆ; ಹುಳಿಸಾರು; ಬೇಳೆಕಾಳು ಕಡಿಮೆ ಇರುವ ತಿಳಿಸಾರು.

ಫಿಕ್ಸ್ ಮಾಡು (ಕ್ರಿ)= ನೆಂಟಸ್ತನ ಘಟ್ಟಿ ಮಾಡು; ಸಂಬಂಧ ಜಮಾಯಿಸು.

ಫಿಕ್ಸಾಗು (ಕ್ರಿ)= ನಿರ್ಧಾರಗೊಳ್ಳು; ಖಚಿತಗೊಳ್ಳು.

ಫಿಟ್ (ವಿ) ಇಂ.= ಬಿಗಿಯಾದ; ತಕ್ಕುದಾದ; ಯೋಗ್ಯವಾದ.

ಫಿಟ್ಟುಂಫಿಟ್ಟ (ಅ)= ಬರೋಬರಿಯಾದ; ಸಮಸಮವಾದ; ಸರಿಸರಿಯಾದ.

ಫಿಟ್ಟಿಯಾಗು (ಕ್ರಿ)= ಸರಿಯಾಗು; ಬರೋಬರಿಯಾಗು.

ಫಿತರತ್ತು (ನಾ)= ಹುಟ್ಟುಗುಣ; ಸ್ವಭಾವ.

ಫಿದಾ (ವಿ.) ಉ. = ಮರುಳು.

ಫಿದಾ ಆಗು (ಕ್ರಿ)= ಮರುಳಾಗು; ಮೊರೆಹೋಗು.

ಫಿನ್ನಿ (ನಾ) ಉ.= ಪಿನ್ನಿ; ಮೂಗಿನಲ್ಲಿಯ ಬೊಕ್ಕೆ, ಹುಣ್ಣು.

ಫಿರಿ (ವಿ) ಇಂ.= ಫ್ರೀ; ಪುಕ್ಕಟೆಯಾಗಿ; ಉಚಿತವಾಗಿ.

ಫಿರೇಮು (ನಾ) ಇಂ.= ಛಾಯಾಚಿತ್ರದ ಚೌಕಟ್ಟು.

ಫಿರ್ಕಾ (ನಾ) ಉ.= ಜಾತಿ; ಕುಲ.

ಫಿರ್ಕಿ (ನಾ)= ಚಕ್ರ; ತಿರುಗಣೆ; ಭಿರ್ಕಿ; ಆಟಿಗೆಯ ಚಕ್ರ, ಗಾಲಿ.

ಫಿರ್ಕಿ ಹೊಡಿ (ಕ್ರಿ)= ಸುತ್ತು ಹೊಡಿ; ತನ್ನ ಸುತ್ತ ತಾ ಸುತ್ತಾಡು.

ಫಿರ್ಭೀ (ಅ) ಉ.= ಆದರೂ; ಆದುರ್ಬೀ; ಹೀಗಿದ್ದರೂ.

ಫಿರ್ಯಾದಿ (ನಾ) ಉ.= ದೂರು; ಅಹವಾಲು.

ಫಿರ್ಯಾದಿ ಹೋಗು (ಕ್ರಿ)= ದೂರು ಕೊಡು; ದೂರು ದಾಖಲಿಸು.

ಫಿಲ್‌ಹಾಲ್ (ಅ) ಉ.= ಸಧ್ಯ; ಸರೇದಸ್ತ; ಈಗಿದ್ದಂತೆ.

ಫಿಶಾಸಿ (ನಾ)= ಪಿಶಾಚ, ಪಿಶಾಚಿ.

ಫಿಸಲ್ಬಂಡಿ (ನಾ)ಉ.= ಮಕ್ಕಳಾಟದ ಜಾರುಬಂಡೆ.

ಫಿಸ್ಕಾಸು (ನಾ) ಉ.= ಕಿತ್ತು ಹೋಗು; ಹರಿದು ಹೋಗು; ಗಟ್ಟಿತನ ಇಲ್ಲದಂತಾಗು.

ಫಿಸ್ಲಾಸು (ಕ್ರಿ) = ಜಾರು; ಜಾರಿಸು; (ನು)= ಹಾದಿತಪ್ಪು; ಶೀಲಗೆಡು.

ಫಿಸ್ಸ್= ತಿರಸ್ಕಾರ; ಛೀ; ಥೂ.

ಫೀ (ಅ).ಉ.= ಪ್ರತಿಯೊಬ್ಬ; ಪ್ರತಿಯೊಂದು. (ನಾ) ಇಂ. ಫೀಸು; ಶುಲ್ಕ

ಫೀಕಾ (ವಿ.)= ತರಲವಾದ; ತಿಳಿಯಾದ; ಸಪ್ಪಗಿನ; ಪತಲಾ.

ಫೀಕಾಭೀಳು (ನು)= ಮೆತ್ತಗಾಗು; ಹಿಂಜರಿ; ಗಾಢತೆ ಇಲ್ಲದಾಗು.

ಫೀಟು (ನಾ)= ಅಡಿ (ಅಡಿಗಳು).

ಫೀಸು (ನಾ) ಇಂ.= ಶುಲ್ಕ.

ಫ್ರೀ (ವಿ)= ಪುಕ್ಕಟ್ಟೆ; ಉಚಿತ; ಫಿರಿ

ಫುಂಕಾಸು (ಕ್ರಿ)= ಬಂದೂಕಿನ ಗುಂಡು ಹಾರಿಸು; ಗುಂಡು ಹಾರಿಸಿ ಕೊಲ್ಲು.

ಫುಂಕ್ಣಿ (ನಾ)= ಕೊಳವೆ; ಪೂಂಕ್ಣಿ.

ಫುಂಕ್ಣಿ ಊದು (ಕ್ರಿ)= ಉರಿ ಹೊತ್ತಿಸಲು ಪೂಂಕ್ಣಿಗೆ ಬಾಯಿ ಹಚ್ಚಿ ಜೋರಾಗಿ ಗಾಳಿಯನ್ನು ತಳ್ಳು.

ಫುಂಡಿ (ನಾ)= ಒಂದು ಬಗೆಯ ಗಿಡ ಮತ್ತು ಅದರ ತರಕಾರಿಯ ಸೊಪ್ಪು; ಪುಂಡಿ.

ಫುಂಡಿನಾರು (ನಾ)= ಪುಂಡಿದಂಟಿನಿಂದ ತೆಗೆದು ಹದಗೊಳಿಸಿದ ತೊಗಟೆ; ನೀರಲ್ಲಿ ನೆನೆಸಿದ ಪುಂಡಿ ದಂಟಿನಿಂದ ಸುಲಿದ ತೊಗಟೆ, ಜೆಟ್ಟೆ, ಎಳೆ.

ಫುಂಡಿಪಲ್ಯ (ನಾ)= ಪುಂಡಿಗಿಡದ ಸೊಪ್ಪು, ತರಕಾರಿ ಸೊಪ್ಪು.

ಫುಂಡಿಹಗ್ಗ (ನಾ)= ಪುಂಡಿಯ ನಾರಿನಿಂದ ದಪ್ಪವಾದ ಮೂರೆಳೆಯ ಹುರಿ.

ಫುಂಡಿಹುರಿ (ಣಾ)= ಪಂಡಿನಾರಿನಿಂದ ಹೊಸೆದು ತಯಾರಿಸಿದ ದಪ್ಪ ದಾರ.

ಫುಂಡೆಗ್ಗ (ನಾ)= ಪುಂಡಿನಾರಿನ ಮೂರೆಳೆಯ ದಪ್ಪ ಹುರಿ; ಪುಂಡಿಯ ಹಗ್ಗ.

ಫುಕಟ (ವಿ.)= ಪುಕ್ಕಟೆ; ಉಚಿತ; ಪುಗ್ಸೆಟೆ.

ಫುಕಾಸು (ಕ್ರಿ)= ಗುಂಡಿಕ್ಕಿ ಕೊಲ್ಲು.

ಫುಗ್ಗಾ (ನಾ)= ಬಲೂನು.

ಫುಗ್ಸೆಟೆ (ವಿ.)= ಪುಕ್ಕಟೆ; ಉಚಿತ; ಫುಕಟ (ಗಾದೆ:- ಫುಗ್ಸೆಟೆ ಪುರಾಣ, ಉಂಢೋಗೋ ಗುರಣಾ).

ಫುಜೂಲ್ (ವಿ)= ಕಾರಣವಿಲ್ಲದ; ಬೇಕಾರ; ಕೆಲಸಕ್ಕೆ ಬಾರದ.

ಫುಟಾಣಿ (ನಾ)= ಹುರಿಗಡಲೆ ಬೇಳೆ; ಕಡಲೆಪುರಿ.

ಫುಟ್ಕಾ (ವಿ.)= ಒಡೆದ; ಒಡಕು.

ಫುಟ್ಟಾ (ನಾ)= ರಟ್ಟು; ದಪ್ಪಗಿನ ಕಾಗದದಂಥ ವಸ್ತು; ಪುಸ್ತಕದ ಮೇಲ್ಕವಚ.

ಫುಟ್ಟ್ಯಾ (ನಾ)= ಫುಟ್ಟಾ; ರಟ್ಟು; ಪುಸ್ತಕದ ಮೇಲ್ಕವಚ.

ಫುರ್ತಿ(ನಾ) ಉ.= ಸ್ಫೂರ್ತಿ; ಉತ್ಸಾಹ; ಹುರುಪು.

ಫುರ್ಮಾಣಾ (ಅ) = ಬೇಕಂತಲೇ; ಇಚ್ಛಾ ಪೂರ್ವಕವಾಗಿ; ಫುರ್ಮಾಸಿ.

ಫುರ್ಮಾಸಿ (ಅ)= ಫುರ್ಮಾಣಾ; ಬೇಕಂತಲೇ; ಇಚ್ಛಾಪೂರ್ವಕವಾಗಿ.

ಫುರ್ರಂತ (ಅ)= ಫುರ್ರನೆ; ಬುರ್ರನೆ.

ಫುಲಾರಿ (ನಾ) ಮ.= ಹೂಗಾರ; ಹೂವಾಡಿಗ; ಶೈವ; ಸೈವ. ಕಸಬರಿಗೆಗಾಗಿ ಬಳಸುವ ಒಂದು ಕಾಡು ಗಿಡ.

ಫುಲ್ (ವಿ) ಇಂ.= ತುಂಬಿದ; ಭರ್ತಿಯಾದ.

ಫುಲಾಸು (ಕ್ರಿ)= ಉಬ್ಬಿಸು; ಉಬ್ಬು; ಉಲ್ಲಾಸ ಪಡುವಂತೆ ಮಾಡು; ಕಿವಿತುಂಬು.

ಫುಲ್ಕಾ (ನಾ) ಹಿಂ.= ಭಟ್ಟಿಯಲ್ಲಿ ತಯಾರಿಸಿದ ಗೋಧಿ ರೊಟ್ಟಿ.

ಫುವ್ವಾರಾ (ನಾ) ಉ.= ಕಾರಂಜಿ; ಜೋರಾಗಿ ಗಗನದತ್ತ ಚಿಮ್ಮುವ ನೀರು.

ಫುಸುಫುಸು (ದ್ವಿ)= ಬುಸುಬುಸು; ಜಿಣಿಜಿಣಿ, ಜಿಟಿಜಿಟಿ; ಮಳೆಹನಿ ಸಣ್ಣಾಗಿ ಉದುರುವಿಕೆ ಕ್ರಮ.

ಫುಸ್ಯಾ (ನಾ)= ಪುಷ್ಯ ನಕ್ಷತ್ರದ ಮಳೆ; ಪುಷ್ಯ ನಕ್ಷತ್ರ.

ಫುಸ್ಯಾನ ಮಳಿ ಹಂಗ (ನು)= ಪುಷ್ಯ ನಕ್ಷತ್ರದ ಮಳೆಯಂತೆ ಸೀರ್ಹನಿ ಉದುರುವಿಕೆ; ಬೆನ್ನು ಹತ್ತುವಿಕೆ.

ಫ್ಲುಸ್ಲಾಸು (ಕ್ರಿ)= ನಂಬಿಸು; ಬೆಣ್ಣೆ ಹಚ್ಚು; ಮನಸನ್ನು ಪರಿವರ್ತಿಸು.

ಫುಸ್ಸು (ನಾ)= ಟ್ಯೂಬಿನಿಂದ ಗಾಳಿ ಹೊರಹೋಗುವಿಕೆ; ಕುಕ್ಕರಿನ ಉಗಿ ಅಥವಾ ಫುಟಬಾಲಿನ ಗಾಳಿಯ ಹೊರ ಹೋಗುವಿಕೆ (ಉದಾ:- ಪೈಯಾ ಫುಸ್ಸು- ಡಾ।। ವಿಕ್ರಮ ವಿಸಾಜಿ).

ಫೂಕ್ಣಿ (ನಾ)= ಒಲೆ ಊದುವ ಕೊಳವೆ; ಭರ್ಮಾರ ಬಂದೂಕು; ಮದ್ದುಗುಂಡು ಮೇಲಿಂದ ತುಂಬಿ, ಕುಳ್ಳಿನ ತುಂಡು ಜಡಿದು ಹಾರಿಸುವ ಬಂದೂಕು.

ಫೂಟು (ನಾ)= ಅಡಿ ಎಂಬ ಅಳತೆಗೋಲು; ಒಡಕು.

ಫೂಟಾಗು (ಕ್ರಿ)= ಒಡಕಾಗು, ಭೇದ ಉಂಟಾಗು.

ಫೂಟು ಕುಡು (ಕ್ರಿ)= ಬಂಗಾರ ಅಥವಾ ತಂಬಾಕಿಗೆ ಪುಟ ಕೊಡು.

ಫೂಲು (ನಾ)= ಫೂಲು; ಸೇತುವೆ.

ಫೂಲು ಕಟ್ಟು (ಕ್ರಿ)= ಸೇತುವೆ ನಿರ್ಮಿಸು.

ಫೂಲು ಧಾಟು (ಕ್ರಿ)= ಸೇತುವೆಯ ಆಚೆ ಅಥವಾ ಈಚೆಗೆ ಹೋಗು.

ಫೆಂಟಿ (ನಾ)= ಪೆಂಟೆ; ಹೆಂಟೆ; ಮುದ್ದೆ; ಬೆಲ್ಲದ ಪೆಂಟೆ.

ಫೆಟ್ಟಿ (ನಾ)= ಫೆಂಟಿ; ಪೆಂಟೆ; ಮುದ್ದೆ; ಹೆಣ್ಣು ಕೋಳಿ.

ಫೇಕು (ನಾ) ಉ.= ತಲವಾರ; ಖಡ್ಗ; ಕತ್ತಿ.

ಫೇಕುತಿರುವು (ಕ್ರಿ)= ತಲವಾರು ತಿರುವು; ತನ್ನ ಮೈ ಸುತ್ತೆಲ್ಲ ತಲವಾರ ತಿರುಹುವ ವೇಗದ ಚಮತ್ಕಾರ ತೋರಿಸು.

ಫೇಡಿ= ಬರಾಬರಿ; ಚುಕ್ತಾ; ಸಟ್ಟಾ ಬಟ್ಟಾ; ಬೇಬಾಕ್.

ಫೇಡಿ ಆಗು (ಕ್ರಿ)= ಬರಾಬರಿ ಆಗು; ಚುಕ್ತಾ ಆಗು; ಸಟ್ಟಾ ಬಟ್ಟಾ ಆಗು; ಬೇಬಾಕ್ ಆಗು.

ಫೇಣಿ (ನಾ)= ಸಿಹಿ ತಿಂಡಿ.

ಫೇಪ್ರಿ (ನಾ)= ಸೆಟೆಬೇನೆ.

ಫೇಮಸ್ಸು (ವಿ.)= ಪ್ರಸಿದ್ಧಿ ಹೊಂದಿದ; ಪ್ರಸಿದ್ಧ.

ಫೇರಾಗು (ಕ್ರಿ)= ಸುತ್ತುದಾರಿಯಾಗು; ಫರಕು ಬೀಳು.

ಫೇರಿ (ನಾ)= ಸುತ್ತು.

ಫೇರಿ ಆಗು (ಕ್ರಿ)= ಸುತ್ತಾಗು; ದೂರಾಗು.

ಫೇರಿ ಹಾಕು (ಕ್ರಿ)= ಸುತ್ತು ಹೊಡೆ; ಬರು ಹೋಗು ಮಾಡು; ಸುತ್ತ ಮುತ್ತ ಸುಳಿದಾಡು.

ಫೇರು (ವಿ.)= ಸುತ್ತು; ಫರಕು.

ಫೇರ್ಬದಲ್ (ನಾ) ಉ.= ಬದಲಾವಣೆ

ಫೇಲಾಗು (ಕ್ರಿ)= ಅನುತ್ತೀರ್ಣನು; ಸೋಲು; ಅಪಯಶ ಹೊಂದು.

ಫೇಲು (ನಾ) ಇಂ.= ನಪಾಸು; ಅನುತ್ತೀರ್ಣ.

ಫೇಸು (ನಾ)= ನೊರೆ; ಬಾಯಿಗೆ ಬಂದ ನೊರೆ; ಬುರಗು.

ಫೈಟರ್ (ನಾ)ಇಂ.= ಮಲ್ಲ; ಜಟ್ಟಿ; ಕುಸ್ತಿಗಾರ.

ಫೈಟು (ನಾ) ಇಂ.= ಜಗಳ; ಕುಸ್ತಿ; ಮಲ್ಲಯುದ್ಧ.

ಫೈಟು ಮಾಡು (ಕ್ರಿ)= ಜಗಳವಾಡು; ಕುಸ್ತಿಯಾಡು; ಮಲ್ಲಯುದ್ಧವಾಡು.

ಫೈರ್ (ನಾ) ಇಂ.= ಬಂದೂಕು ಹಾರಿಸುವಿಕೆ, ಗೋಲಿಬಾರು.

ಫೈರಿಂಗ್ (ನಾ) ಇಂ.= ಗೋಲಿಬಾರು ಮಾಡುವಿಕೆ.

ಫೈರಿಂಗ್ ಮಾಡು (ಕ್ರಿ)= ಗುಂಡು ಹಾರಿಸು; ಗೋಲಿಬಾರು ಮಾಡು.

ಫೈಲಾವು (ನಾ) ಉ.= ಹರಡುವಿಕೆ.

ಫೈಲಾಸು (ಕ್ರಿ)= ಹರಡು; ವ್ಯಾಪಿಸು.

ಫೈಲಿ (ನಾ)= ಚಾಲು; ಚಪ್ಪಳ; ಕುತಂತ್ರ.

ಫೈಲು (ನಾ)= ಕಡತ.

ಫೈಸಲಾ (ನಾ) ಉ.= ನ್ಯಾಯನಿರ್ಣಯ; ಫೈಸಲು; ಜಜಮೆಂಟು.

ಫೈಸಲಾಮಾಡು (ಕ್ರಿ)= ನಿರ್ಣಯಿಸು; ನಿರ್ಣಯ ಮಾಡು.

ಫೈಸಲಾ ಹೊಡಿ (ಕ್ರಿ)= ನಿರ್ಣಯ ಮಾಡು; ನ್ಯಾಯ ನಿರ್ಣಯ ಮಾಡು.

ಫೋಂಡೇಶನ್ (ನಾ) ಇಂ.= ಪಾಯಾ; ಅಡಿಪಾಯ; ಬುನಾದಿ.

ಫೋಕಾ (ನಾ) ಮ.= ಛಡಿ; ಬೆತ್ತದ ಛಡಿ; ಬೆತ್ತ (ಲಕ್ಕಿ ಪೋಕಾ; ಬಿದಿರು ಪೋಕಾ ಇತ್ಯಾದಿ.)

ಫೋಕಾಬಿಡುಸು (ಕ್ರಿ)= ಬೆತ್ತದ ಛಡಿಯನ್ನು ಗಿಡದಿಂದ ಬಿಡಿಸು.

ಫೋಟು (ನಾ) ಇಂ.= ಛಾಯಾಚಿತ್ರ.

ಫೋಟು ಇಳ್ಸು (ಕ್ರಿ)= ಛಾಯಾಚಿತ್ರತೆಗೆ.

ಫೋಡಣಿ (ನಾ)= ಹಂಚುವಿಕೆ.

ಫೋಡಾಗು (ಕ್ರಿ)= ಹುಣ್ಣಾಗು.

ಫೋಡಿ (ನಾ)= ಹಂಚಿಕೆ; ಒಡಕು; ಹಂಚುವಿಕೆ.

ಫೋಡು (ನಾ)= ಕೀವು ತುಂಬಿದ ಹುಣ್ಣು.

ಫೋಡು ಹುಟ್ಟು (ಕ್ರಿ)= ಹುಣ್ಣಾಗು; ಹುಣ್ಣಿನ ಬಾಧೆಯಾಗು.

ಫೋಣ್ಯಾ (ನಾ)= ಬಗಾರು; ಘಾಣ್ಯಾ; ಘಾಣಿ; ವಗರಾಣಿ.

ಫೋಣ್ಯಾ ಕುಡು (ಕ್ರಿ)= ಬಗಾರು ಹಾಕು; ಫೋಣ್ಯಾ ಹೊಡಿ; ಘಾಣಿ ಹಾಕು.

ಫೋಣ್ಯಾದಾಣಿ (ನಾ)= ಫೋಣಿದ ಕಾಳುಗಳಾದ ಜೀರಗಿ, ಸಾಸಿ, ಮೆಣಸಿನ ಬೀಜ, ಮೆಂತೆ ಇತ್ಯಾದಿ.

ಫೋಣ್ಯಾ ಹಾಕು (ಕ್ರ)= ಫೋಣ್ಯಾ ಕುಡು (ನೋಡಿರಿ).

ಫೋಣ್ಯಾ ಹೊಡಿ (ಕ್ರಿ)= ಫೋಣ್ಯಾ ಕುಡು (ನೋಡಿರಿ).

ಫೋತಾ (ನಾ) ಮ.= ಅಂಡಾಶಯ; ತೊರಡು; ಪೋತಿ, ತೊಡ್ಡು.

ಫೋತಿ (ನಾ) ಮ.= ಅಂಡಾಶಯ, ಪೋತಾ; ತೊರಡು; ತೊಡ್ಡು.

ಫೋನು (ನಾ) ಇಂ.= ದೂರವಾಣಿ.

ಫೋನು ಹಚ್ಚು (ಕ್ರಿ)= ದೂರವಾಣಿ ಕರೆಯ ನಂಬರು ಜೋಡಿಸು; ದೂರವಾಣಿ ಕರೆ ಮಾಡು.

ಫೋನು ಹೊಡಿ (ಕ್ರಿ)= ದೂರವಾಣಿ ಕರೆ ಮಾಡು.

ಫೋಟರ್ೋಂಟಿ (ಕ್ರಿ)= ಲಫಂಗ; ಲುಚ್ಚಾ; ಫಟಿಂಗ; ನಾನೂರಿಪ್ಪತ್ತು.

ಫೋಸು (ವಿ)= ಪೊಳ್ಳು; ಹೊಳ್ಳು; ಟೊಳ್ಳು.

ಫೌಜಿ (ವಿ) ಉ.= ಸೈನ್ಯಕ್ಕೆ ಸಂಬಂಧಿಸಿದ.

ಫೌಜು (ನಾ) ಉ.= ಸೈನ್ಯ; ದಂಡು; ಮಿಲ್ಟ್ರಿ.

ಫೌಜ್ದಾರಿ (ನಾ) ಉ.= ಪೋಲೀಸ ಖಟ್ಲೆ.

ಫೌಡಾ (ನಾ) ಉ.= ಫವಡಿ; ಸಲಿಕೆ.

ಫೌಡಿ (ನಾ) ಉ.= ಫವಡಾ; ಸಲಿಕೆ; ಮಣ್ಣು ಮತ್ತು ನೀರನ್ನು; ಸಿಮೆಂಟು, ರೇತಿ, ಕಾಂಕ್ರೀಟು, ನೀರನ್ನೂ ಬೆರೆಸಲು ಬಳಸುವ ಸಾಧನ.

ಫೌರನ್ (ಅ) ಉ.= ತಕ್ಷಣವೇ; ಆಕ್ಷಣವೇ; ಆಗಿಂದಾಗ.

ಫೌವಾರಾ (ನಾ) ಉ.= ಕಾರಂಜಿ; ಚಿಲುಮೆ; ಬುಗ್ಗೆ.

ಫೌವ್ರ್ಯಾ (ನಾ) ಉ.= ಸೇದಿ; ಫಾವರಿಗೆ; ಫಾವ್ರ್ಯಾ.

ಫೌಳಿ (ನಾ)= ಸುತ್ತುಗೋಡೆ; ಗುಂಡುಗಲ್ಲಿನ ಸುತ್ತು ಗೋಡೆ; ಆವಾರು; ಕಂಪೌಂಡ್ ಗೋಡೆ.

ಫ್ಯಾನು (ನಾ) ಇಂ.= ವಿದ್ಯುತ್ತು ಚಾಲಿತ ಬೀಸಣಿಕೆ; ಬೀಸಣಿಕೆ.

ಫ್ಯಾನು ಹಾಕು (ಕ್ರಿ)= ಬೀಸಣಿಕೆ ಚಲಿಸುವಂತೆ ಮಾಡು.

ಫ್ಯಾನ್ಸಿ ಮನ್ಶ್ಯಾ (ನಾ)= ಹೊಸ ಪದ್ಧತಿಯ ಮನುಷ್ಯ.

ಫ್ಯಾಮಿಲಿ (ನಾ)ಇಂ.= ಕುಟುಂಬ.

ಫ್ರೀ (ವಿ.)= ಪುಕ್ಕಟೆ; ಉಚಿತ.

ಫ್ರೇಮು (ನಾ) ಇಂ.= ಛಾಯಾಚಿತ್ರದ ಚೌಕಟ್ಟು.

ಫ್ರೇಮು ಹಾಕು (ಕ್ರಿ)= ಚಿತ್ರಕ್ಕೆ ಚೌಕಟ್ಟು ಜೋಡಿಸು.

ಬ

ಬಂಕಿ (ನಾ)= ಬಂಕೆ; ಬಯಕೆ; ಗರ್ಭಿಣಿಯ ಬಯಕೆ.

ಬಂಕಿವೂಟಾ (ನಾ)= ಬಂಕೆಯೂಟ; ಮೊದಲ ಸಲ ಗರ್ಭಿಣಿಯಾದ ಸತಿಯಳಿಗೆ ಕೊಡುವ ಬಯಕೆ ಊಟ ಮತ್ತು ಅದಕ್ಕೆ ಸಂಬಂಧಿಸಿದ ಸಮಾರಂಭ, ಶಾಸ್ತ್ರ.

ಬಂಕಿವೂಟಾಕುಡು (ಕ್ರಿ)= ಮೊದಲ ಸಲ ಬಸಿರೆಯಾದ ಸತಿಯಳಿಗೆ ಬಯಕೆಯೂಟ ಕೊಡುವ ಸಮಾರಂಭ ಏರ್ಪಡಿಸು.

ಬಂಕು (ನಾ) ಮ.= ಬೈಠಕ ಖಾನೆ; ಹೊರಬಾಗಿಲಿಗೆ ಹೊಂದಿ ಇರುವ ಝುಳಜಿ, ಪಡಖಾನೆ.

ಬಂಗಲಾ (ನಾ) ಇಂ.= ಬಂಗ್ಲೆ; ದೊಡ್ಡ ಮನೆ.

ಬಂಗಲ್ಯಾ (ನಾ) ಇಂ.= ಬಂಗಲಾ (ನೋಡಿರಿ).

ಬಂಗಾಲಿ (ನಾ)= ಕುಹಕ ಗುಣದವಳು; ಶೀಲಗೆಟ್ಟವಳು; ಬಂಗಾಲಿ ಗುಣವುಳ್ಳವಳು; ಮೋಸಗಾರ್ತಿ (ಹಾಡು:- ಬಂಗಾಲಿ ಸಂತಿ ಭಾಳ ಗಡಿಬಿಡಿ। ಸುಳ್ಳಿ। ಭ್ರಾಂತಿಗೆಟ್ಟು ತಿರುಗಭ್ಯಾಡೆಲೊಖೋಡಿ॥)

ಬಂಗಾಲ್ಯಾ (ನಾ)= ಬಂಗಾಲಿ ಗುಣದವನು; ಕುಹಕಿ; ಮೋಸಗಾರ. (ಬೈಗುಳ)

ಬಂಗ್ಲಾ (ನಾ) ಇಂ.= ಬಂಗಲಾ; ಬಂಗಲೆ; ಬಂಗ್ಲೆ; ದೊಡ್ಡಮನೆ.

ಬಂಗ್ಲ್ಯಾ (ನಾ) ಇಂ.= ಬಂಗ್ಲಾ (ನೋಡಿರಿ)

ಬಂಜರಾಗು (ಕ್ರಿ)= ಬೀಳುನೆಲವಾಗು; ಪಾಳು ನೆಲವಾಗು.

ಬಂಜರು (ನಾ) ಹಿಂ = ಬೀಳು ನೆಲ; ಪಾಳು ಭೂಮಿ.

ಬಂಜಾರಾ (ನಾ)= ಲಂಬಾಣಿ ಜನಾಂಗ ದವನು; ಲಂಬಾಣಿ.

ಬಂಜಿ (ನಾ)= ಬಂಜೆ; ನಿಸ್ಸಂತಾನೆ; ವಂಧ್ಯಾ; ಸಂತಾನ ಪಡೆಯಲಾರದವಳು; ಗೊಡ್ಡಿ.

ಬಂಜೋಳು (ನಾ) ತೆ.= ಬಣಜಿಗರು; ಬಣಜಿಗ.

ಬಂಡಿ (ನಾ)= ಬಂಡೆ; ಬಂಡೆಗಲ್ಲು

ಬಂಡು (ನಾ)= ಹಳ್ಳ ಅಥವಾ ನದಿ ತನ್ನ ಹರಿವಿನೊಂದಿಗೆ ತಂದುಬಿಟ್ಟ ಮಣ್ಣು ಮತ್ತು ಕಸಪಟ್ಟು.

ಬಂಡೆಗಲ್ಲು (ನಾ)= ದೊಡ್ಡ ಗಾತ್ರದ ಕಲ್ಲು; ಬಂಡ್ಯಾಗಲ್ಲು; ಬಡ್ಯಾಗಲ್ಲು.

ಬಂಡ್ಯಾಗಲ್ಲು (ನಾ)= ಬಂಡೆಗಲ್ಲು (ನೋಡಿರಿ)

ಬಂತು (ಕ್ರಿ)= ಬಂದಿತು; ಆಗಮಿಸಿತು.

ಬಂದ (ನಾ)= ರೋಕು; ಮುಷ್ಕರ; ಹರ್ತಾಲ. (ಕ್ರಿ) ಬಂದನು.

ಬಂದವರ ಓಣಿ (ನಾ)= ಬಾಂಧವರ ಓಣಿ; ೧೨ನೇ ಶತಮಾನದಲ್ಲಿ ಬಸವಕಲ್ಯಾಣಕ್ಕೆ ಹೊರಗಿನಿಂದ ಬಂದ ಶರಣರು ಮೊಟ್ಟ ಮೊದಲು ತಂಗುತ್ತಿದ ಪವಿತ್ರ ತೀರ್ಥಸ್ಥಾನ (ಈಗಿನ ವಿದ್ಯಾ ಪೀಠದ ಕೆಳಬದಿಯಲ್ಲಿದೆ)

ಬಂದಾನ (ಕ್ರಿ)= ಬಂದಿದ್ದಾನೆ.

ಬಂದಾರ (ಕ್ರಿ)= ಬಂದಿದ್ದಾರೆ.

ಬಂದಾರಿ (ನಾ)= ಎರಡು ಹೊಲಗಳ ನಡುವಿನ ಸೀಮೆ ಕಟ್ಟೆ; ಬದು; ಕಟ್ಟೆ; ಒಡ್ಡು.

ಬಂದಾವ (ಕ್ರಿ)= ಬಂದಿವೆ; ಬಂದಿದ್ದಾರೆ. (ಉ. ಏಸ್ಮಂದಿ ಬಂದಾವಾ? ಧಿಗಾರಿಧಿಗಾರಿ ಬಂದಾವ!)

ಬಂದಿ (ನಾ)= ದೋನಾಣೆ, ಚಾರಾಣೆ, ಪಂಚೀಸ್ ಪೈಸೆ, ಪನ್ನಾಸಪೈಸೆ ಎಂಬ ನಾಣ್ಯ.

ಬಂದಿಷ (ನಾ)= ಕಟ್ಟಣಿಕೆ; ಕಟ್ಟಡ ನಿರ್ಮಾಣದ ರೀತಿ; ಕಟ್ಟುವಿಕೆ.

ಬಂದುರು (ಕ್ರಿ)= ಬಂದರು.

ಬಂದೂಕು (ನಾ) ಉ.= ತುಪಾಕಿ; ಕೋವಿ; ಟುಬಾಕು.

ಬಂದೂಕು ಹಾರ್ಸು (ಕ್ರಿ)= ಕೋವಿಯನ್ನು ಹಾರಿಸು.

ಬಂದೇನವಾಜ (ನಾ)= ಕಲಬುರ್ಗಿಯ ಸೂಫಿ ಸಂತನಾದ ಹಜರತ ಖಾಜಾ ಬಂದೇನವಾಜ ಗೇಸೂದರಾಜ.

ಬಂದೋಬಸ್ತು (ನಾ) ಉ.= ಭದ್ರ ಪೋಲೀಸ್ ವ್ಯವಸ್ಥೆ; ವ್ಯವಸ್ಥೆ; ಇಂತೆಜಾಮು.

ಬಂಧ್ರಿ (ನಾ) ಉ.= ಕೋಡಂಗಿ ಗುಣದವನು.

ಬಂದ್ರಿ ಕುಲದವ (ನಾ)= ಕೋತಿಯ ಇಲ್ಲವೆ ಕೋಡಂಗಿಯ ಗುಣ ಉಳ್ಳವನು.

ಬಂದ್ರಿಚಾಲು (ನಾ)= ಕೋತಿಯ ಗುಣ, ನಡತೆ.

ಬಂದ್ರಿ ಹೆಸರು (ನಾ)= ದ್ವಿದಳ ಧಾನ್ಯವಾದ ಹೆಸರಿನ ಒಂದು ತಳಿ; ಒಂದು ವಿಶೇಷವಾದ ಮಿಂಚುವ ತಳಿಯ ಹೆಸರು.

ಬಂದ್ರಿ ಧಂದ್ಯಾ (ನು)= ಹಾಳುಗೆಡಿಸುವ ಕೆಲಸ.

ಬಂದ್ರು (ಕ್ರಿ)= ಬಂದರು; ಆಗಮಿಸಿದರು.

ಬಂಬಳಗಿ (ನಾ)= ಬೀದರ ಜಿಲ್ಲೆಯ ಒಂದು ಊರು.

ಬಂಬಾಟ (ವಿ)= ಅತ್ಯುತ್ತಮ; ಭಾರಿ.

ಬಂಬಾರಿ (ನಾ)= ಬಾಂಬು ಪ್ರಯೋಗ; ಬಾಂಬು ಸ್ಫೋಟ.

ಬಂಬು (ನಾ)= ಬಿದಿರು; ಬಿದಿರಿನ ಭಾಲೆ; ಬಿದಿರಿನ ಉದ್ದವಾದ ಕೋಲು; ಧಾನ್ಯದ ಚೀಲದಿಂದ ತುಸು ಕಾಳು ಹೊರ ತೆಗೆದು ನೋಡಲು ಬಳಸುವ ಸಾಧನ.

ಬಂಬು ಹೊಡಿ (ಕ್ರಿ)= ಧಾನ್ಯದ ಚೀಲಕ್ಕೆ ಬಂಬು ಚುಚ್ಚಿ ಕಾಳು ಹೊರತೆಗೆ.

ಬಂಬೈ (ನಾ)= ಮಹಾರಾಷ್ಟ್ರದ ಮುಂಬೈ ಶಹರ.

ಬಕರಾ (ನಾ) ಉ.= ಹೋತ; ಮೂರ್ಖ; ದಡ್ಡ; ಬಲಿಪ್ರಾಣಿ.

ಬಕಾಸು (ಕ್ರಿ)= ಒದರು; ಅತಿಮಾತಾಡು; ಒಟಗುಟ್ಟು. (ನಾ) ರಸ ಹಿಂಡಿ ತೆಗೆದ ಮೇಲೆ ಉಳಿದ ಕಬ್ಬಿನ ಹುಡಿ, ಹೊಟ್ಟು.

ಬಕಾಸೂರ (ನಾ) ಉ.= ಬಕಾಸುರ; ಸಿಕ್ಕಾಪಟ್ಟೆ ತಿನ್ನುವವನು.

ಬಕ್ಕ (ನಾ)= ಹಲ್ಲಿಲ್ಲದವನು; ಹಲ್ಲು ಬಿದ್ದವನು (ಹಾಡು : ಕಾರಿಯ ಕಂಟ್ಯಾಗಾ। ಕುಂತಾರ ಮೂವ್ವೋರು ಕಳ್ಳರು ॥ ಒಬ್ಬ ಬಕ್ಕ। ಇಬ್ರಗಿ ಹಲ್ಲೇ ಇಲ್ಲ ॥)

ಬಕ್ಕಂತ (ಅ)= ಬಕ್ಕನೆ; ರೊಪ್ಪನೆ.

ಬಕ್ಕಂತ ಬಾಳಿ ಭೀಳು (ಕ್ರಿ)= ಕೆಳಮುಖ ಮಾಡಿ ರೊಪ್ಪನೆ ಬೀಳು.

ಬಕ್ಕಣ (ನಾ)= ನೀರಾವರಿ ಬಾವಿಯಿಂದ ನೀರೆತ್ತುವ ತೊಗಲಿನ ಚೀಲ.

ಬಕ್ಕಬಾಯಿ (ನಾ)= ಹಲ್ಲು ದುರಿದಮುಖ (ಶಿಶು ಪ್ರಾಸಃ ಬಕ್ಕಬಾಯಿ। ಬೆಕ್ಕಿನತಾಯಿ। ಏನಹಡ್ದಿ। ಕೂಸಿನ್ತಾಯಿ।)

ಬಕ್ಕಳ, ಬಕ್ಕಾಳ (ವಿ)= ಬಕ್ಕುಳ; ಬಹಳ; ಅನಗಾಡ; ತೋಲು; ಭಾಳ, ಅತಿಶಯ.

ಬಕ್ಕುಳ (ವಿ)= ಬಕ್ಕಳ (ನೋಡಿರಿ)

ಬಕ್ಸೀಸು (ನಾ)= ಇನಾಮು; ಬಹುಮಾನ.

ಬಕ್ಳ, ಬSಕ್ಳ (ವಿ)= ಬಕ್ಕಳ (ನೋಡಿರಿ)

ಬಕ್ಳಾಗು (ಕ್ರಿ)= ಹೆಚ್ಚಾಗು; ಅತಿಯಾಗು; ಬಹಳವಾಗು.

ಬಗಲ (ಅ)= ಬೇರೆ; ಬೇರೆಡೆ; ಅನ್ಯತ್ರ; ಇತರೆಡೆ.

ಬಗಲ ಒಲಿಹೂಡು (ನು)= ಬೇರೆಡೆ ಸಂಸಾರ ಮಾಡು.

ಬಗಲಾಗು (ಕ್ರಿ)= ಬೇರೆಯಾಗು; ಬೇರೆ ಸಂಸಾರ ಹೂಡು; ಅವಿಭಕ್ತವಾದುದನ್ನು ವಿಭಕ್ತಗೊಳಿಸು.

ಬಗಲಿರು (ಕ್ರಿ)= ಬೇರೆ ಸಂಸಾರ ಹೂಡು.

ಬಗಲು (ನಾ) ಉ.= ಕಂಕುಳ; ಕೊಂಕುಳ; ಪಕ್ಕ; ಬೇರೆ (ಅ) ಬೇರೆಡೆಗೆ; ಅನ್ಯತ್ರ; ಇತರೆಡೆಯಲ್ಲಿ.

ಬಗಸು (ಕ್ರಿ)= ಬಯಸು; ಇಷ್ಟ ಪಡು; ಹಂಬಲಿಸು. (ಗಾದೆ:- ಬಗಸಿ ಭಾವಗ ಹೋದ್ರ, ಕಿಸ್ಗಗಲ್ಮ ಗಾ ಹುಟ್ತಂತ।)

ಬಗಾರು (ನಾ)= ಫೋಣ್ಯಾ; ವಗಾರಾಣಿ.

ಬಗಾರ್ದಾಣಿ (ನಾ)= ಫೋಣೆದ ಕಾಳಾದ ಜೀರಿಗೆ, ಸಾಸಿವೆ; ಮೆಂತ್ಯ, ಮೆಣಸಿನ ಬೀಜ ಇತ್ಯಾದಿ.

ಬಗಿ (ಕ್ರಿ)= ಬಗೆ; ಕರೆ; ಸತ್ಕರಿಸು; ಸನ್ಮಾನಿಸು.

ಬಗಿಚಾ (ನಾ) ಉ.= ಕೈ ತೋಟ; ಉಪವನ.

ಬಗಿಹರಿ (ಕ್ರಿ)= ಬಗೆಹರಿ; ಸಮಸ್ಯೆಯ ಪರಿಹಾರವಾಗು; ಅಂತಿಮಗೊಳ್ಳು.

ಬಗಿಹರ್ಸು (ಕ್ರಿ)= ಪರಿಹರಿಸು; ತೀರ್ಮಾನಿಸು; ಅಂತಿಮಗೊಳಿಸು; ಬಿಕ್ಕಟ್ಟು ಸಡಿಲಗೊಳಿಸು.

ಬಗ್ಗಡ (ನಾ)= ಹೊಲಸು; ರಾಡಿ; ಒರಟು.

ಬಗ್ಗಡ ಧಂದ್ಯಾ (ನಾ)= ಒರಟು ಕೆಲಸ; ಹೊಲಸು ಕೆಲಸ; ಹೀನಕಾರ್ಯ.

ಬಗ್ಗಾಳ (ನಾ)= ಗಾಡವಾದದ್ದು; ದಟ್ಟವಾದದ್ದು; ಭಯಾನಕವಾದದ್ದು. (ಉದಾ: ಕತ್ತಲ ಬಗ್ಗಾಳ ಆಗೆದ.)

ಬಗ್ಗಿ (ನಾ)= ಒಂಟೆತ್ತಿನ ಬಂಡಿ; (ಕ್ರಿ) ಬಾಗಿ.

ಬಗ್ಗಿಸು (ಕ್ರಿ)= ಬಾಗಿಸು; ಬಾಗುವಂತೆ ಮಾಡು; ದುಡಿಸು.

ಬಗ್ನು (ಕ್ರಿ)= ಬಾಗು; ಕೆಳಮುಖವಾಗು; ದುಡಿ.

ಬಗ್ನುಸು (ಕ್ರಿ)= ಬಗ್ಗಿಸು (ನೋಡಿರಿ).

ಬಗ್ನು (ಕ್ರಿ)= ಬಗ್ಗಿಸು (ನೋಡಿರಿ)

ಬಚಪನ (ನಾ) ಉ.= ಬಾಲ್ಯ.

ಬಚಪನಾ (ನಾ) ಉ.= ಹುಡುಗುತನ; ಹುಡುಗಾಟಿಕೆ.

ಬಚಾಯಿಸು (ಕ್ರಿ)= ಉಳಿಸು; ಕಾಪಾಡು.

ಬಚಾವಾಗು (ಕ್ರಿ)= ಉಳಿದುಕೊ; ಪಾರಾಗು; ಜೀವದಿಂದಿರು.

ಬಚಾವು (ನಾ) ಉ.= ಉಳಿವು; ರಕ್ಷಣೆ; ಪಾರಾಗುವಿಕೆ.

ಬಚಾಸು (ಕ್ರಿ)= ಉಳಿ; ಉಳಿಸು; ನಿಭಾಯಿಸು.

ಬಚ್ಚ (ನಾ)= ಬಕ್ಕ.

ಬಚ್ಚ ಬಾಯಿ (ನಾ)= ಬಕ್ಕಬಾಯಿ; ಹಲ್ಲುದುರಿದ ಮುಖ.

ಬಚ್ಚಮಲಿ (ನಾ)= ಹಾಲು ಬಾರದ ಮೊಲೆ; ಚಪ್ಪಟೆ ಮೊಲೆ.

ಬಚ್ಚಲು (ನಾ)= ಸ್ನಾನದ ಮನೆ; ಬಚ್ಚುಲು; ಬಚ್ಲು, ಯೋನಿ. (ಕಾವ್ಯ:- ಬಚ್ಚಲುದಕಂ ತಿಳಿದಾದೊಡಂ ಆರಮೀಹಕ್ಕೆ ಯೋಗ್ಯಂ -ರಾಘವಾಂಕ)

ಬಚ್ಚಾ (ನಾ) ಉ.= ಹುಡುಗ; ಪಾರ; ಪೋರ.

ಬಚ್ಚಿ (ನಾ)= ಕಾಳುಹಿಡಿಯದ ತೆನೆ; ಗೊಡ್ಡು ತೆನೆ; ನಿರುಪಯುಕ್ತ; ಗೊಡ್ಡು.

ಬಚ್ಚಿ (ನಾ) ಹಿಂ.= ಪೋರಿ; ಹುಡುಗಿ.

ಬಚ್ಚಿಡು (ಕ್ರಿ)= ಮುಚ್ಚಿಡು; ಅಡಗಿಸಿಡು; ಕಾಣದಂತಿಡು.

ಬಚ್ಚು (ನಾ)= ಬೆಚ್ಚು; ಬೆದರು; ಬೆದರು ಬೊಂಬೆ; ಬೆಳೆಗಳಲ್ಲಿ ಕಾಡು ಪ್ರಾಣಿಗಳಿಗೆ ಬೆದರಿಸಲು ನಿಲ್ಲಿಸಿದ ಮನುಷ್ಯಾಕೃತಿ.

ಬಚ್ಚು ಬಡಿ (ಕ್ರಿ)= ಬಿದ್ದು ಚಪ್ಪಟೆಗೊಳ್ಳು; ಮಡಿಚಿ ಮುದ್ದೆಯಾಗು; ಜಜ್ಜಲ್ಪಟ್ಟು ಚಪ್ಪಟೆಯಾಗು.

ಬಚ್ಚುಬಾಯಿ (ನಾ)= ಬಚ್ಚಬಾಯಿ (ನೋಡಿರಿ)

ಬಚ್ಚುಲು (ನಾ)= ಬಚ್ಚಲು; ಬಚ್ಚು; ಸ್ನಾನದ ಮನೆ.

·**ಬಚ್ಚುಲುಮನಿ** (ನಾ)= ಸ್ನಾನದ ಮನೆ; ಸ್ನಾನ ಗ್ರಹ; ಬಾಥರೂಮು.

ಬಚ್ಚನ (ನಾ) ಉ.= ಬಾಲ್ಯ; ಹುಡುಗುತನ.

ಬಚ್ಚನಾ (ನಾ) ಉ.= ಹುಡುಗಾಟಿಕೆ; ಪೋರಾಬಟ್ಟೆತನ.

ಬಜಂತ್ರಿ (ನಾ)= ಒಂದು ಬಗೆಯ ಚರ್ಮವಾದ್ಯ.

ಬಜಾಗು (ಕ್ರಿ)= ಮಗ್ಗುಲಾಗು; ಹೋಳಾಗು; ಜರುಗು; ಸರಿ.

ಬಜಾನಾ (ನಾ)= ಬಾರಿಸುವಿಕೆ; ವಾದ್ಯ ನುಡಿಸುವಿಕೆ.

ಬಜಾರಿ (ನಾ) ಉ.= ಮಾರಾಟಗೊಳ್ಳುವವಳು; ಶರೀರ ವ್ಯಾಪಾರದವಳು; ಸೂಳೆ; ಮಾನ ಗೆಟ್ಟವಳು; ಬಾಯಿಬಡಕಿ; (ಬೈಗುಳ).

ಬಜಾರು (ನಾ) ಉ.= ಬಾಜಾರು; ಸಂತೆ; ಪೇಟೆ; ಮಾರುಕಟ್ಟೆ.

ಬಜಾಸು (ಕ್ರಿ)= ವಾದ್ಯ ಬಾರಿಸು; ಹೊಡೆ; ಬಾರಿಸು.

ಬಜಿ (ನಾ)= ಬಜೆ; ಒಂದು ಪ್ರಕಾರದ ಗಿಡದ ವಾಸನೆಯ ಮೂಲಿಕೆ.

ಬಜಿ ಹೆಚ್ಚು ಹಾಕ್ಯಾಳ (ನು)= ಶೈಶವದಲ್ಲಿ ತಾಯಿ ಬಜೆ ಹೆಚ್ಚು ಊಡಿ, ಹೆಚ್ಚು ಮಾತಾಡುವಂತೆ ಮಾಡಿದ್ದಾಳೆ.

ಬಜ್ಜಾತ (ನಾ)ಉ.= ಬದ್ ಜಾತಿ; ಕೀಳು ಜಾತಿ; ಹೀನಜಾತಿ.

ಬಜ್ಜು(ನಾ)= ಮೈಮೇಲೆ ಗಡ್ಡೆಗಟ್ಟಿದ ಜಾಗ.

ಬಜ್ಜುಗಟ್ಟು (ಕ್ರಿ)=ಪೆಟ್ಟು ಬಡಿದು ಗಡ್ಡೆಯುಂಟಾಗು; ಮೈಯ ಮೇಲು ಭಾಗ ಗಟ್ಟಿ ಕಲ್ಲಂತಾಗು; ಕಂದುಬಣ್ಣಕ್ಕೆ ತಿರುಗು.

ಬಟನ್ (ನಾ) ಇಂ.= ಅಂಗಿ ಇಲ್ಲವೆ ಪ್ಯಾಂಟುಗಳ ಗುಂಡಿ; ವಿದ್ಯುತ್ತಿನ ಗುಂಡಿ.

ಬಟವಾ (ನಾ) ಮ.= ಎಲೆ ಚಂಚಿ; ಎಲೆ ಚೀಲ.

ಬಟವಾಡಾ (ನಾ)= ಹಂಚಿಕೆ; ವಿತರಣೆ; ವೇತನದ ಹಂಚುವಿಕೆ.

ಬಟಾಣಿ (ನಾ)= ವಟಾಣಿ; ಒಂದು ಪ್ರಕಾರದ ಬೇಳೆಕಾಳು.

ಬಟಾಯಿ (ನಾ)= ಪಾಲುದಾರಿಕೆ.

ಬಟುವಾ (ನಾ)ಮ.= ಬಟವಾ (ನೋಡಿರಿ)

ಬಟ್ಟ ಬಯಲು (ನಾ)= ಎಲ್ಲ ಕಡೆ ಬಯಲು; ಬರಿ ಬಯಲು.

ಬಟ್ಟಲು (ನಾ)= ಗುಂಡಗಿರುವ ಸಣ್ಣ ತಟ್ಟೆ.

ಬಟ್ಟಲುಗಣ್ಣು (ನಾ)= ಬಟ್ಟಲಂತೆ ಅಗಲ ವಾದ ಕಣ್ಣು.

ಬಟ್ಟಾ (ನಾ) ಉ.= ಕಲಂಕ; ಕುಂದು; ಕಮೀಷನ್; ಕೀಳರಿಮೆಯ ಹೇರಿಕೆ.

ಬಟ್ಟಾಹಚ್ಚು (ಕ್ರಿ)= ಕುಂದು ಉಂಟುಮಾಡು; ಕಲಂಕ ಹಚ್ಚು; ಕಲೆ ಹಚ್ಚು.

ಬಟ್ಟಿ (ನಾ)= ಬಟ್ಟೆ; ಅರಿವೆ.

ಬಟ್ಟು (ನಾ)= ಬೆರಳು; ತೂಕದ ಕಲ್ಲು; ಬೊಟ್ಟು.

ಬಟ್ಟು ಕಚ್ಚು (ನು)= ಆಶ್ಚರ್ಯಪಡು; ಆಶ್ಚರ್ಯಚಕಿತನಾಗು.

ಬಟ್ಟುತೋರ್ಸು (ನು)= ತಪ್ಪು ತೋರಿಸು.

ಬಟ್ಟು ಮಾಡು (ನು)= ಬೆರಳಾಡಿಸು; ಕೈಯಾಡಿಸು; ಕೆಡಿಸು.

ಬಟ್ಟೆ ಬಾಜಿ (ನಾ)= ಮೋಸಗಾರಿಕೆ, ಅನ್ಯಾಯ.

ಬಡಕಾಸು (ಕ್ರಿ)= ಹೆಚ್ಚಾಗು; ಹೆಚ್ಚಿಸು; ಅತಿಯಾಗು; ವೃದ್ಧಿಸು.

ಬಡಗಿ (ನಾ)= ಬಡಿಗೆ; ಲಟ್ಟು; ಕೋಲು; ಲಾಠಿ.

ಬಡಿಗಿ ಪೆಟ್ಟು (ನಾ)= ಕೋಲಿನಿಂದ ಹಾಕುವ ಏಟ.

ಬಡಗಿ ಹಚ್ಚಿ ಹೊಡಿ (ಕ್ರಿ)= ಕೋಲಿನಿಂದ ಪೆಟ್ಟು ಹಾಕು.

ಬಡಗ್ಯಾ (ನಾ)= ಬಡಿಗ; ಮರದ ಕಾಯಕದವನು; (ಪ್ರಾಸ:- ಬಡಗ್ಯಾ ಬಡಗ್ಯಾ ಬಾಚಿ। ಬಡಗ್ಯಾನ ಹೆಂಡ್ತಿರಾಚಿ। ಬಡಗ್ಯಾ ಹೋದ ಮಣ್ಣಾಕ। ಹಾವ್ರಾಣಿ ಹೊಯ್ತು ಗ್ವಾಡ್ಯಾಕ).

ಬಡಾಯಿ (ನಾ) ಉ.= ದೊಡ್ಡಸ್ತಿಕೆ; ಒಣಹೆಮ್ಮೆ; ಜಂಬ ಕೊಚ್ಚುವಿಕೆ.

ಬಡಾಯಿ ಕೊಚ್ಚು (ಕ್ರಿ)= ದೊಡ್ಡಸ್ತಿಕೆ ಹೇಳಿಕೊ.

ಬಡಾಸು (ಕ್ರಿ)= ಕಳಿಸು; ಬೆಳೆಸು; ಹೆಚ್ಚಿಸು; ಎತ್ತರಿಸು.

ಬಡಿ (ಕ್ರಿ)= ಹೊಡೆ; ಪೆಟ್ಟು ಹಾಕು; ಕಾಯ್ದ ಕಬ್ಬಿಣವನ್ನು ಸುತ್ತಿಗೆಯಿಂದ ಚಚ್ಚು; ತೊಗಲು ವಾದ್ಯ ಬಾರಿಸು.

ಬಡಿವರ್ಕಿ (ನಾ)= ಬಡಿವಾರಿಕೆ; ಬಡಿವಾರ; ಬಡಾಯಿ; ಒಣಜಂಬ;

ಬಡಿವಾರ (ನಾ)= ಬಡಾಯಿ; ಬಡಿವಾರಿಕೆ; ಒಣಜಂಬ (ತತ್ವಪದ:- ಸುಳ್ಳೆ ಯಾಕೊ ಬಡಿವಾರಾ। ಖಾಲೀ ಆದೊ ಸಂಸಾರಾ)

ಬಡಿವ್ಯಾರ (ನಾ)= ಬಡಿವಾರ (ನೋಡಿರಿ).

ಬಡಿವ್ಯಾರ ಹೇಳ್ಕೊ (ಕ್ರಿ)= ಬಡಿವಾರ ಕೊಚ್ಚಿಕೊ; ದೊಡ್ಡಸ್ತಿಕೆ ಹೇಳಿಕೊ.

ಬಡಿಸು (ಕ್ರಿ)= ಊಟಕ್ಕೆ ನೀಡು (ಬ್ರಾಹ್ಮಣ ಭಾಷೆ)

ಬಡು (ನಾ)= ಬಡವ; ದೀನ; ದರಿದ್ರ (ಗಾದೆ:- ಬಡೂರ್ಭಕ್ತಿ ಭಂಡಿ ಘುಂಬಾ! ಬಡೂನ್ಸಿಟ್ಟು ದವಡಿಗ್ಮೂಲ!)

ಬಡುಭಾರ್ಗಿ (ನಾ)= ಬಾರಿಗೆಯಂತೆ ಸವೆದು ಬಡಕಲಾದವನು; ಸವೆದು ಸವೆದು ಸಣ್ಣಾದವನು; ದುಡಿದು ಬದುಕುವವನು; ಕಡುಬಡವನು.

ಬಡೆಸಾಬ (ನಾ) ಉ.= ದೊಡ್ಡ ಅಧಿಕಾರಿ; ಹಿರಿಯ ಅಧಿಕಾರಿ; ಮೇಲಧಿಕಾರಿ.

ಬಡೋರ್ಕಿ (ನಾ)= ಬಡಿವರ್ಕಿ (ನೋಡಿರಿ).

ಬಡ್ಡಿ (ನಾ)= ಸಾಲದ ಮೇಲೆ ವಸೂಲಾಗುವ ಮಾಹೇವಾರಿ ಇಲ್ಲವೆ ವಾರ್ಷಿಕವಾಗಿ, ಹೆಚ್ಚುವರಿಯಾಗಿ ವಸೂಲಾಗುವ ಹಣ; ಸೂಳೆ; ಹಾದರ್ಗಿತ್ತಿ.

ಬಡ್ಡಿಮಗ (ನಾ)= ಸೂಳೆಮಗ; ಹಾದರಿಗ ಇಲ್ಲವೆ ಹಾದರಗಿತ್ತಿಯ ಮಗನು.

ಬಡತಾನ (ನಾ)= ಬಡತನ; ದಾರಿದ್ರ್ಯ (ಹಾಡು:- ಬಡತಾನ ಬಂದಾಗ ನೆಂಟರ ಬಾಗಿಲು ಸೇರಬಾರದು)

ಬಡ್ತಿ (ನಾ)= ಹುದ್ದೆಯ ಏರಿಕೆ; ಸಂಬಳದಲ್ಲಿ ಹೆಚ್ಚಳ; ವಾರ್ಷಿಕ ಮುಂಬಡ್ತಿ; ಹೊಡೆಯುವಿಕೆ; ಬಡಿಯುವಿಕೆ; ಥಳಿಸುವಿಕೆ.

ಬಡ್ತಿ ಮಾಡು (ಕ್ರಿ)= ವೃದ್ಧಿಸು; ಹೆಚ್ಚಿಸು; ಹೊಡಿಬಡಿ ಮಾಡು; ಥಳಿಸು.

ಬಡಬಡಾಸು (ಕ್ರಿ)= ಬಡಬಡಿಸು; ಕನವರಿಸು; ನಿದ್ದೆಯಲ್ಲಿ ಮಾತಾಡು.

ಬಣಕಾರ= ಬಣಗಾರ; ರಂಗಾರೆ; ಬಟ್ಟೆಗೆ ಬಣ್ಣ ಹಾಕುವವ.

ಬಣಗಾರ (ನಾ)= ಬಟ್ಟೆಗೆ ಬಣ್ಣ ಹಾಕುವವನು; ಬಣಕಾರ; ರಂಗಾರೆ.

ಬಣಗಾರ್ತಿ (ನಾ)= ಬಣಗಾರರ ಮನೆಯ ಮಹಿಳೆ; ಬಟ್ಟೆಗೆ ಬಣ್ಣ ಹಾಕುವವಳು.

ಬಣಗಾರ್ಯಾ (ನಾ)= ಬಣಗಾರ (ಹೀನೈಸಿ ಸಂಭೋಧಿಸುವಿಕೆ)

ಬಣಜಗ್ಯಾ (ನಾ)= ಬಣಜಿಗ; ಲಿಂಗಾಯತ; ವ್ಯಾಪಾರಿ. (ಗಾದೆ : ಹಾರೂ ಮಾಡಾದು ಹೊಟ್ಟೆಗಿ । ಬಣಜಗ್ಯಾ ಮಾಡಾದು ಕಟ್ಟೇಗಿ।)

ಬಣಜಗೇರ್ಮಾತು (ನಾ)= ಕನ್ನಡನುಡಿ; ಕನ್ನಡಮಾತು; ವಾಣಿಗೋಷ್ಠ (ಗಾದೆ:- ಬಣಜಗ್ಯಾ ಭಕ್ತ ಅಲ್ಲ! ಖಟುಕ ದಯಾಳು ಅಲ್ಲ)

ಬಣ್ಕಾರ (ನಾ)= ಬಣಕಾರ, ಬಣಗಾರ.

ಬಣ್ಣದ್ಮಾತು (ನಾ)= ಮರುಳುಗೊಳಿಸುವ ಮಾತು.

ಬಣ್ಣಾ (ನಾ)= ವರ್ಣ; ಬಣ್ಣ; ರಂಗು.

ಬಣ್ಣಾ ಬಯಲಾಗು (ನು)= ಮೋಸಗಾರಿಕೆ ಗೊತ್ತಾಗು; ನಿಜಸ್ವರೂಪ ಹೊರಬೀಳು.

ಬಣ್ಣಾಬಳ್ಕೊ (ಕ್ರಿ)= ರಂಗಭೂಮಿಯ ಪಾತ್ರ ನಿರ್ವಹಿಸು.

ಬಣ್ಣಾಯೇರು (ಕ್ರಿ)= ಸೌಂದರ್ಯ ವೃದ್ಧಿಯಾಗು; ಕಳೇಯೇರು.

ಬಣ್ಣಾ ಹಚ್ಚು (ಕ್ರಿ)= ರಂಗಭೂಮಿಯ ಪಾತ್ರಧಾರಿಯನ್ನು ಸಿಂಗರಿಸು; ಭಿತ್ತಿಗೆ ಬಣ್ಣ ಬಳೆ; ಚಿತ್ರಿಸು; ಬಣ್ಣ ಬಳಿದು ಸಿಂಗರಿಸು.

ಬತಾಶಾ (ನಾ) ಉ.= ಸಕ್ಕರೆಯ ಬಿಲ್ಲೆ; ಬತ್ತಾಸು; ಮೂಗಿನಿಂದ ಉದುರಿದ ಸಿಂಬಳದ ಮುದ್ದೆ.

ಬತ್ಯೆ (ನಾ) ಉ.= ಚಾಕು; ಕತ್ತಿ; ತರಕಾರಿ ಕತ್ತರಿಸುವ ಕತ್ತಿ.

ಬತ್ತರ (ವಿ)= ಬತ್ರ; ಅತಿಕೆಟ್ಟ; ಒಳ್ಳೆಯದಲ್ಲದ.

ಬತ್ತಲೆ (ವಿ)= ಬತಲೆ ಬತ್ಲೆ; ದಿಗಂಬರ; ನಿರ್ವಸ್ತ್ರ.

ಬತ್ತಿ (ನಾ)= ದೀಪಕ್ಕಾಗಿ ಬಳಸುವ ಹತ್ತಿಯ ಎಳೆ; ಹುರಿಗೊಳಿಸಿದ ಹತ್ತಿಯ ಎಳೆ; ಎಳಗೂಸು.

ಬತ್ರ (ವಿ.) ಉ.= ಬತ್ತರ, ಅತಿಕೆಟ್ಟ.

ಬತ್ಲೆ (ವಿ)= ಬತ್ತಲೆ; ಬತಲೆ; ದಿಗಂಬರ; ನಿರ್ವಸ್ತ್ರ; (ಗಾದೆ:- ಜಾಡ್ನ ಹೆಣ್ತೆ ಬತ್ಲೆ.)

ಬತ್ಲೆ ಬುರ್ಕ (ನಾ)= ಬತ್ತಲೆ ಸಂಚರಿಸುವವನು; ದಿಗಂಬರ ಸಂಚಾರಿ.

ಬತ್ಲೆಬುರ್ಕಿ (ನಾ)= ದಿಗಂಬರೆ; ನಿರ್ವಸ್ತ್ರೆ; ಬತ್ತಲೆ ಸಂಚರಿಸುವವಳು (ಜಾನಪದ ಪ್ರಾಸ:- ಬತ್ಲೆ ಬುರ್ಕಿ। ಖೌದೀ ಹರ್ಕಿ। ಜಾಡ ಮಲ್ಲಪ್ನ ಹಿರಿಹೆಣುತಿ।)

ಬತ್ಲೆಬುರ್ಕ್ಯಾ (ನಾ)= ಬತ್ಲೆಬುರ್ಕ (ಬೈಗುಳ)

ಬದಲಾ (ನಾ) ಹಿಂ.= ಸೇಡು;

ಬದನಾಮಿ= ಕೆಟ್ಟ ಬೆಸರು.

ಬದನಿ= ಬದನೆ.

ಬದನೇಕಿ (ನಾ) ಉ.= ಅಪ್ರಾಮಾಣಿಕತನ.

ಬದಲಾಮಿ (ನಾ) ಹಿಂ.= ಬದ್ನಾಮಿ; ಕೆಟ್ಟ ಹೆಸರು; ಅಪಕೀರ್ತಿ.

ಬದಲಿ (ನಾ) ಹಿಂ.= ತಬಾದಲಾ; ವರ್ಗಾವಣೆ.

ಬಧಲು ಮಾಡು (ಕ್ರಿ)= ಬದಲಾಯಿಸು; ಒಂದರ ಜಾಗದಲ್ಲಿ ಇನ್ನೊಂದಿಡು.

ಬದಿ (ನಾ)= ಕೆಟ್ಟ ಭಾವನೆ (ಗೌರಿ ಹಾಡು:- ಕುಕ್ಕೆನ್ನೂವಕ। ಭಾಳಪರಿಯ ಮಾಡಿದ। ಯಾಕೊ ರಂಗಯ್ಯ। ನಿಮ್ಮ ಕಾಕ ಬದಿಗಳು। ಸಾಕ ನಡಿನಡಿ। ಸರಿಯೆ ಸವತಿ ಮನಿಕಡಿ। ಹರಿಯ ಹಾಯಲೆ। ಧೊಡ್ಡ ಮಡುವ ಡುಮುಕಲೆ).

ಬದು (ನಾ)= ಕಟ್ಟೆ; ಬಂಧಾರಿ; ಎರಡು ಹೊಲಗಳ ನಡುವಿನ ಸೀಮೆ ಕಟ್ಟೆ.

ಬದುಕು (ಕ್ರಿ) ಜೀವಿಸು; ಜೀವನ ನಡೆಸು.

ಬದ್ (ವಿ) ಉ.= ಕೆಟ್ಟ; ಹೀನ; ಕೀಳು.

ಬದ್ ಜಾತಿ (ನಾ)= ಹೀನಜಾತಿ.

ಬದ್ನಾಮಿ (ನಾ) ಉ.= ಕೆಟ್ಟ ಹೆಸರು.

ಬದ್ನಿ= ಬದನೆಕಾಯಿ (ಗಾದೆ:- ಆಚಾರ ಹೇಳಾವ ಬದ್ನಿಕಾಯಿ ತಿಂದ್ನಂತ!)

ಬದ್ನೇಕಿ (ನಾ)= ಅಪ್ರಮಾಣಿಕತನ.

ಬದ್ನೇತು (ನಾ)= ಹೀನ ವಿಚಾರ.

ಬದ್ಖೂ (ನಾ)= ಕೆಟ್ಟನಾತ; ದುರ್ನಾತ; ದುರ್ವಾಸನೆ.

ಬದ್ಮಾಷ್ (ನಾ) ಉ.= ಕೆಟ್ಟವರ್ತನೆಯವ; ಹೀನ (ಬೈಗುಳ)

ಬದ್ಲಾ (ನಾ) ಉ.= ಸೇಡು; ಮುಯ್ಯಿಗೆ ಮುಯ್ಯಿ.

ಬದ್ಲಾಸು (ಕ್ರಿ)= ಬದಲು ಮಾಡು.

ಬದ್ಲಾಮು (ನಾ)= ಕೆಟ್ಟ ಹೆಸರು.

ಬದ್ಲಿ (ನಾ)= ಬದಲಿ; ತಬಾದಲಾ; ವರ್ಗಾವಣೆ.

ಬದ್ಲಿ ಮಾಡು (ಕ್ರಿ)= ವರ್ಗಾಯಿಸು.

ಬನ (ನಾ)= ವನ; ಉಪವನ; ಬಾಳೆಬನ; ಮಾವಿನಬನ (ಕೋಲಿನ ಹಾಡು:- ಬಾಳಿಯಾ ಬನದೋಳೆ ರಂಗ। ಬಾಲಿನಾ ಒಬ್ಬವಳೆ ರಂಗ। ಕಾಯ್ಕಡಿ ಭ್ಯಾಡಾ। ಘೊಲ್ಲೆ ಮುಡಿಬ್ಯಾಡ। ಯಶೋದಾನಿನ ಬಾಲಾರಂಗ)

ಬನಾ (ನಾ)= ಬನ (ನೋಡಿರಿ).

ಬನಾರಸಿ (ವಿ)= ಬನಾರಸದಲ್ಲಿ ತಯಾರಾದ; ಬನಾರಸದವನು.

ಬನಾವಟಿ (ನಾ) ಉ.= ರಚನೆ; ತಯ್ಯಾರಿ.

ಬನಾವಟ (ವಿ) ಉ.= ನಕಲಿ; ಮೂಲವಲ್ಲದ.

ಬನಾಸು (ಕ್ರಿ)= ಠಕ್ಕಿಸು; ಮೋಸಗೊಳಿಸು; ಚೇಷ್ಟೆ ಮಾಡು.

ಬನೀನು (ನಾ) ಇಂ.= ಒಳ ಅಂಗಿ.

ಬನ್ದಹುಣ್ಣಿ (ನಾ)= ಬನದ ಹುಣ್ಣಿವೆ; ವನ ಚಿಗುರುವ ಹುಣ್ಣಿಮೆ; ಪೌಷ್ಯ ಮಾಸದ ಹುಣ್ಣಿಮೆ.

ಬನ್ನಿಗಿಡಾ (ನಾ)= ಶಮೀವೃಕ್ಷ; ದಸರೆಯ ದಿನ ಸೀಮೋಲ್ಲಂಘನ ಮಾಡಿ ಪೂಜಿಸುವ ಮರ; ಆರೆಯ ಮರ.

ಬನ್ನಿಮುಡಿ (ಕ್ರಿ)= ದಸರೆ ಹಬ್ಬದ ದಿನ ಶಮೀವೃಕ್ಷದ ಪೂಜೆ ಮಾಡಿ ಅದರ ಎಲೆ ತರು.

ಬನ್ಸಿ ಘೋಧಿ (ನಾ)= ಗೋಧಿಯ ಒಂದು ತಳಿಯ ಹೆಸರು.

ಬಬಲಿ (ನಾ)= ಬೊಬ್ಬುಳಿ; ಜಾಲಿ; ಬಬ್ಳಿ; ಒಂದು ಬಗೆಯ ಮುಳ್ಳು ಮರ.

ಬಮ್ನಿ (ವಿ)= ಭ್ರಾಹ್ಮಣ್ಯ; ಬ್ರಾಹ್ಮಣರ

ಬಮ್ಮನ್ (ನಾ)= ಬ್ರಾಹ್ಮಣ (ರಜಾಕಾರ ಹಾಡು:- ಬಮ್ಮನ್ಕು ಕಾಟೊ। ಬನಿಯಾಕು ಲೂಟೊ। ಆಪಸ್ಮೆ ಬಾಟೊ। ರಝ್ವೋ ಧ್ಯಾನ।)

ಬಯಾನಾ (ನಾ) ಉ.= ಹೇಳಿಕೆ; ವಚನ; ಇಶಾರಿ; ಮುಂಗಡ; ಅಡ್ವಾನ್ಸ.

ಬಯಾನ್ಮಾಡು (ಕ್ರಿ)= ಕೋರ್ಟಿನಲ್ಲಿ ಹೇಳಿಕೆ ನೀಡು.

ಬಯ್ಗೋಳು (ನಾ)= ಬೈಗಳು; ಹೀನ ತೆಗಳುವಿಕೆ; ಅಶ್ಲೀಲ ಬೈಯುವಿಕೆ, ಬೈಗುಳ.

ಬಯ್ನಾ (ನಾ) ಉ.= ಬಯಾನಾ (ನೋಡಿರಿ)

ಬಯ್ನಾಮಾ (ನಾ)= ಖರೀದಿ ಪತ್ರ.

ಬಯ್ (ಕ್ರಿ)= ಬಯ್ಯು; ಬೈ; ಮೂದಲಿಸು; ಹೀಗಳೆ.

ಬಯ್ಯನ (ನಾ) ಉ.= ಬಯಾನಾ; ಹೇಳಿಕೆ.

ಬಯ್ಯಿ (ಕ್ರಿ)= ಬಯ್ (ನೋಡಿರಿ)

ಬಯ್ಲಾಗು (ಕ್ರಿ)= ಬರಿದಾದ ಜಾಗವಾಗು; ಏನೂ ಇಲ್ಲದಾಗು.

ಬಯ್ಲಾಟಾ (ನಾ)= ಟಿಕೆಟ್ವಿಲ್ಲದೆ ಬಯಲಿನಲ್ಲಿ ಆಡುವ ಆಟ; ಅಟ್ಟಣೆ ಹೂಡಿ ಆಡುವ ನಾಟಕ; ದೊಡ್ಡಾಟ.

ಬಯ್ಲಿಗಿಬಾ (ಕ್ರಿ)= ಬೀದಿಗೆ ಬಾ; ಕದ್ದು ಮುಚ್ಚಿ ಇರಬೇಡ; ಎದುರಿಗೆ ಬಾ.

ಬಯ್ಲು (ನಾ)= ಬರಿದಾದ ಜಾಗ; ಬೈಲು; ಮೈದಾನ; ಬಯಲು.

ಬರ (ನಾ)= ಕ್ಷಾಮ; ದುರ್ಭಿಕ್ಷ್ಯ.

ಬರಖಾಸ್ತು (ನಾ) ಉ.= ಕೊನೆ; ಮುಕ್ತಾಯ; ವಿಸರ್ಜನೆ.

ಬರಗಾಲ (ನಾ)= ದುರ್ಭಿಕ್ಷ ಕಾಲ; ದುಷ್ಕಾಳ.

ಬರಗಾಲ್ದಾಗ ಹುಟ್ಟಿದಾಂವ (ನಾ)= ನಿರ್ಗತಿಕ; ಬಡವ.

ಬರಗಾಲ್ದಾನ ಹೆಣಾ (ನು)= ಬಡಕಲು ಶರೀರ.

ಬರಗಾಲ್ಯಾ (ನಾ)= ಬಡವ; ನಿರ್ಗತಿಕ (ಬೈಗುಳ).

ಬರದಾನ ಹೆಣಾ (ನಾ)= ಬಡಕಲು ಶರೀರ; ಎಲು ತೇಲಿದ ಶರೀರ; ಬರಗಾಲದಲ್ಲಿ ಅನ್ನ ಕಾಣದೆ ಬಡಕಲಾದ ಶರೀರ; ಎಲುಬಿನ ಹಂದರ.

ಬರಗಿನಕ್ಕಿ (ನಾ)= ಬರಗು ಥಳಿಸಿ ತಯಾರಿಸಿದ ಅಕ್ಕಿ.

ಬರಗು (ನಾ)= ಒಂದು ಬಗೆಯ ಏಕದಳ ಧಾನ್ಯ; ಒಂದು ಬಗೆಯ ಅಕ್ಕಿಯ ಕಾಳು.

ಬರಭೀಳು (ಕ್ರಿ)= ಕ್ಷಾಮ ಉಂಟಾಗು; ದುಷ್ಕಾಳವುಂಟಾಗು.

ಬರಮಿ (ನಾ)= ಕಟ್ಟಿಗೆ ಅಥವಾ ಲೋಹಗಳಲ್ಲಿ ರಂಧ್ರ ಕೊರೆವ ಉಪಕರಣ; ಬೈರಿಗೆ.

ಬರಲು (ನಾ)= ಒಣಗಿದ ಕಡ್ಡಿ; ಬರಳು; ಒಣಗಿದ ಸಣ್ಣ ಶಾಖೆ.

ಬರಳು (ನಾ)= ಒಣಗಿದ ಕಡ್ಡಿ; ಒಣಗಿದ ಸಣ್ಣ ಶಾಖೆ; ಬರಲು.

ಬರಾ (ನಾ)= ಬರ; ಬರಗಾಲ.

ಬರಾಂಡಿ (ನಾ)ಇಂ.= ಬ್ರ್ಯಾಂಡಿ; ಬೆಲೆಬಾಳುವ ಸೆರೆ.

ಬರಾಭೀಳು (ಕ್ರಿ)= ಬರಭೀಳು (ನೋಡಿರಿ)

ಬರಿ (ಕ್ರಿ)= ಬರೆ; ಲೇಖಿಸು; ತಿದ್ದು; ತೀಡು.

ಬರಿ ಎಳಿ (ಕ್ರಿ)= ಕಾಯ್ದ ಕಬ್ಬಿಣದಿಂದ ಮೈಮೇಲೆ ಬರೆ ಮೂಡಿಸು;

ಬರು (ನಾ)= ಲೇಖಣಿ ತಯಾರಿಕೆಗಾಗಿ ಬಳಕೆಯಾಗುವ ಪೊಳ್ಳು ಹುಲ್ಲುಕಡ್ಡಿ.

ಬರು (ಕ್ರಿ)= ಬಾ; ಆಗಮಿಸು.

ಬರುಕು (ಕ್ರಿ)= ಬರ್ಕು; ಸುರುವು; ಒಂದು ಪಾತ್ರೆ ಅಥವಾ ಚೀಲದಿಂದ ಮತ್ತೊಂದಕ್ಕೆ ಸುರುವು; ಪಲ್ಟಿ ಮಾಡು; ನೆಲದ ಮೇಲೆ ಹಾಕು.

ಬರೆ (ಅ)= ಬರಿಯ; ಕೇವಲ (ಗಾದೆ:- ಖರೆ ಮಾತಿಗಿ ಬರೆ ಮಾತು ಯಾತ್ಕ?); ಖಾಲಿ.

ಬರ್ಕತ್ತು (ನಾ)= ಧಾನ್ಯ ಅಳೆಯುವಾಗ 'ಒಂದು ಅಂಕಿಯ ಬದಲು ಬಳಸುವ ಪದ.' ಅಂದರೆ ಲಾಭ ಎಂದು ಅರ್ಥ. ಉದ್ಧಾರ ಆಗಲಿ ಎಂದರ್ಥ.

ಬರ್ಕು (ಕ್ರಿ)= ಬರುಕು; ಸುರುವು; ನೆಲದ ಮೇಲೆ ಹಾಕು.

ಬರ್ಖಾಸ್ತು (ನಾ)= ಬಿಟ್ಟು ಬಿಡುವಿಕೆ; ಹೋಗಲು ಆದೇಶ ನೀಡುವಿಕೆ; ವಿಸರ್ಜನೆ.

ಬರ್ಗಾಲ (ನಾ)= ಬರಗಾಲ; ಕ್ಷಾಮಕಾಲ.

ಬರ್ತಾಬರ್ತಾ (ದ್ವಿ)= ಬರು ಬರುತ್ತ.

ಬರ್ಚಿ (ನಾ)= ಚೂಪಾದ ಸಣ್ಣ ಕತ್ತಿ; ಚೂರಿ.

ಬರ್ಚು (ಕ್ರಿ)= ಸವರು; ಟೊಂಗೆಯ ಎಲೆಗಳನ್ನು ಎಳೆದು ತೆಗೆ; ತರಚು; ಚರಚು.

ಬರ್ತಾ (ಕ್ರಿ)= ಬರುತ್ತೇನೆ.

ಬರ್ತಾವ (ನಾ) ಉ.= ನಡಾವಳಿ; ನಡತೆ.

ಬರ್ತಾವ (ಕ್ರಿ)= ಬರುತ್ತವೆ; ಬರುತ್ತಾರೆ (ಉದಾ:- ಒಂಟಿ ಮ್ಯಾಲ ನೆಂಟುರು ಬರ್ತಾವ)

ಬರ್ದಾಂವ (ನಾ)= ಓದು ಬರಹ ಬಲ್ಲವನು.

ಬರ್ದಾನ್ಹೆಣಾ (ನಾ)= ಬರದಾನ ಹೆಣಾ (ನೋಡಿರಿ)

ಬರ್ದಾಪೂರು (ನಾ)= ಬೀದರ ಜಿಲ್ಲೆಯ ಒಂದು ಹಳ್ಳಿಯ ಹೆಸರು.

ಬರ್ಫಿ (ನಾ) ಉ.= ಒಂದು ಪ್ರಕಾರದ ಸಿಹಿ ತಿಂಡಿ.

ಬರ್ಫು (ನಾ)= ಮಂಜುಗಡ್ಡೆ.

ಬರ್ಬಾದಾಗು (ಕ್ರಿ)= ಹಾಳುಬೀಳಾಗು; ಕೆಟ್ಟುಹೋಗು.

ಬರ್ಬಾದಿ (ನಾ) ಉ.= ಹಾಳುಬೀಳು; ಹಾಳಾಗುವಿಕೆ.

ಬರ್ಬಾದು (ವಿ) ಉ.= ಹಾಳು.

ಬಲತ್ಕಾರ (ನಾ)= ಬಲಾತ್ಕಾರ; ಅತ್ಯಾಚಾರ; ಒತ್ತಾಯದಿಂದ ಶೀಲಹರಣಗೈಯುವಿಕೆ.

ಬಲಾ (ವಿ)= ಬಲ; ಬಲಿಷ್ಟ; ಬಲಶಾಲಿ (ಉದಾ:- ಈ ಎತ್ತು ಅದ್ಕಾ ಬಲಾ ಅದಾ); (ನಾ) ಅಪವಾದ.

ಬಲಾಬಂದದ (ನು)= ಬಲಪ್ರಾಪ್ತಿಯಾಗಿದೆ; ಸಮಯ ಕೂಡಿ ಬಂದಿದೆ (ಬುಡುಬಡುಕನ ಮಾತು)

ಬಲಿ (ಕ್ರಿ)= ಬಿರುಸಾಗು; ಗಟ್ಟಿಯಾಗು.

ಬಲಿ (ನಾ)= ಹರಕೆಯ ಪ್ರಾಣಿ; ಜಾಲ; ಬಲೆ.

ಬಲಿಕುಡು (ಕ್ರಿ)= ಪ್ರಾಣಿಯನ್ನು ದೇವರೆದುರು ವಧಿಸು.

ಬಲಿತ (ಅ)= ಬಲಗೊಂಡ; ಬಿರುಸಾದ; ಉನ್ನತ.

ಬಲೂತಿ (ನಾ)= ಭೂಗಂದಾಯ; ಭೂಮಿ ತೆರಿಗೆ.

ಬಲೂನು (ನಾ)= ಫುಗ್ಗಾ.

ಬಲ್ಕ, ಬಾಲ್ಕ (ಅ)= ಬಲಗೈ ಕಡೆಗೆ; ಬಲ ಮಗ್ಗುಲಿಗೆ. (ಬಲ್ಕxಎಡ್ಕ)

ಬಲ್ಕೆ (ಅ)= ಪ್ರಸಂಗ ಬಿದ್ದರೆ; ಕೂಡಿ ಬಂದರೆ.

ಬಲ್ಗಂ= ಕಫ

ಬಲ್ಗಾಲು (ನಾ)= ಬಲಕಿನ ಕಾಲು; ದಕ್ಷಿಣ ಪಾದ. (ಬಲ್ಗಾಲುxಎಡ್ಗಾಲು)

ಬಲ್ಗೈ (ನಾ)= ಉಂಬಾಗೈ; ದಕ್ಷಿಣ ಹಸ್ತ; ಬಲಗೈಯಂತೆ ಸಹಾಯಕನಾಗಿರುವವನು. (ಬಲ್ಗೈxಎಡ್ಗೈ)

ಬಲ್ದಾಮಿ (ನಾ)= ಬದನಾಮಿ; ಕೆಟ್ಟ ಹೆಸರು.

ಬಲ್ದಾಮ ಮಾಡು (ಕ್ರಿ)= ಬದನಾಮ ಮಾಡು; ಕೆಟ್ಟ ಹೆಸರು ತರು.

ಬಲ್ದಾಯಿ (ನಾ)= ಬದನಾಯಿ; ಕೆಟ್ಟ ಹೆಸರು.

ಬಲ್ಲಾಂಗ (ಅ)= ಬಲ್ಲಂತೆ; ಮನಸಿಗೆ ಬಂದಂತೆ.

ಬಲ್ಲಾಂವ (ನಾ)= ತಿಳಿದವನು; ಬಲಿಷ್ಠ ನಾದವನು; ತಾಕತ್ತುಳ್ಳವನು; ಅರಿತವನು.

ಬಲ್ಲಾಕುಡು (ಕ್ರಿ)= ಮುದ್ದುಕೊಡು (ಬಾಲ ಭಾಷೆ); ಕೂಸಿಗೆ ಒಲವಿಂದ ಮುದ್ದಾಡು.

ಬಲ್ಲಿ (ಅ)= ಹತ್ತಿರ; ಮಗ್ಗುಲಲ್ಲಿ; ಸನಿಹಕ್ಕೆ (ಭಜನೆ: ಎಲ್ಹಾನೋ ಶಿವ ಎಲ್ಹಾನೋ। ಬಲ್ಲಂಥವರಿಗೆ ಬಲ್ಲಿಹಾನೊ)

ಬಲ್ಲಿ ಬಾ (ಕ್ರಿ)= ಹತ್ತಿರಕ್ಕೆ ಬರು.

ಬಲ್ಲೂರು (ನಾ)= ಸಾಹಿತಿ ಬಸವ ರಾಜ ಬಲ್ಲೂರರ ಹುಟ್ಟೂರು.

ಬಲ್ಲೆ (ಅ)= ಹತ್ತಿರದಲ್ಲೆ; ಸನಿಹದಲ್ಲೆ; ಬಳಿಯಲ್ಲೆ.

ಬಲ್ಲ್ಯಾಕ (ಅ)= ಹತ್ತಿರದಲ್ಲೆ; ಮಗ್ಗುಲಲ್ಲಿ; ಸನಿಹದಲ್ಲಿ.

ಬಲ್ಹಾನಾ (ಕ್ರಿ)= ಹತ್ತಿರದಲ್ಲಿದ್ದಾನೆ.

ಬವಾಸಿರ (ನಾ) ಉ.= ಮೂಲಾದಿ; ಮೂಲವ್ಯಾಧಿ.

ಬವ್ವಾ (ನಾ)= ಬೌ, ಬವ್ವ; ಹುಳು (ಬಾಲ ಭಾಷೆ).

ಬವ್ವ (ನಾ)= ಬವ್ವಾ (ನೋಡಿರಿ)

ಬವ್ವ ಬಿಡು (ನು)= ಜಗಳ ಹಚ್ಚು; ಭೇದ ಹುಟ್ಟಿಸು.

ಬಸ್ (ಕ್ರಿ)= ಸಾಕು; ಸಾಕುಮಾಡು.

ಬಸ್ ಬಸ್ (ದ್ವಿ)ಉ.= ಸಾಕುಸಾಕು.

ಬಸರಿಗಿಡ (ನಾ)= ಒಂದು ಬಗೆಯ ಮರ.

ಬಸವ (ನಾ)= ವಿಶ್ವ ಗುರು ಬಸವಣ್ಣನವರು; ಲಿಂಗಾಯತ ಧರ್ಮ ಸ್ಥಾಪಕ.

ಬಸವ ಜಯಂತಿ (ನಾ)= ಬಸವಣ್ಣನವರ ಹುಟ್ಟು ಹಬ್ಬದ ದಿನವಾದ ವೈಶಾಖ ಶುದ್ಧ ಅಕ್ಷಯ ತೃತಿಯಾ.

ಬಸವ ಭೂಮಿ (ನಾ)= ಮಹಾಗಾಂವದ ಶರಣ ಕವಿ ಶರಣಯ್ಯನವರು ಬಸವಣ್ಣನವರ ಕ್ರಾಂತಿ ಕುರಿತು ರಚಿಸಿದ ಕೃತಿ.

ಬಸವಲಿಂಗ ನಾಮಾವಳಿ (ನಾ)= ಬಸವಣ್ಣನವರನ್ನು ಕುರಿತ ೧೦೮ ನಾಮಾವಳಿ.

ಬಸವಲಿಂಗ ಪಟ್ಟದ್ದೇವರು (ನಾ)= ಭಾಲ್ಕಿ ಹಿರೇಮಠದ ಪಟ್ಟಾಧ್ಯಕ್ಷರು. ನಡೆದಾಡುವ ದೇವರು, ಕನ್ನಡದ ಪಟ್ಟದ್ದೇವರೆಂದೇ ಖ್ಯಾತರಾದ ಶ್ರೀ ಮ.ಘ.ಚ. ಡಾ|| ಚೆನ್ನಬಸವ ಪಟ್ಟಾಧ್ಯಕ್ಷರ ಉತ್ತರಾಧಿ-ಕಾರಿಗಳು; ಶಿಕ್ಷಣ ಪ್ರೇಮಿಗಳು.

ಬಸವಿ (ನಾ)= ದೇವದಾಸಿ; ಜಾರೆ; ವೇಶ್ಯೆ; ಬೀದಿ ಸೂಳೆ.

ಬಸಳಿ (ನಾ)= ಒಂದು ಪ್ರಕಾರದ ತರಕಾರಿ ಸೊಪ್ಪಿನ ಬಳ್ಳಿ.

ಬಸಿ (ಕ್ರಿ)= ಒಸರು; ಒಸರಿಸು; ಸೋರು; ಸೋರಿಸು; ಜಾನು; ಸ್ರವಿಸು; ಸೋಸು.

ಬಸುರಾಗು (ಕ್ರಿ)= ಗರ್ಭಿಣಿಯಾಗು; ಗರ್ಭಧಾರಣ ಮಾಡು.

ಬಸುರಿ (ನಾ)= ಬಸಿರೆ; ಗರ್ಭಿಣಿ.

ಬಸುರು (ನಾ)= ಗರ್ಭ; ಬಸಿರು.

ಬಸ್ತಾ (ನಾ) ಉ.= ಪುಸ್ತಕಗಳ ಕಟ್ಟು; ದಪ್ತುರು.

ಬಸ್ತಾನಿ (ನಾ)= ವ್ಯವಸ್ಥೆ; ಮೈನುಗ್ಗಾಗುವಂತೆ ಹೊಡೆಯುವಿಕೆ.

ಬಸ್ತಾನಿ ಮಾಡು (ಕ್ರಿ)= ವ್ಯವಸ್ಥೆ ಮಾಡು; ಮೈ ನುಗ್ಗಾಗುವಂತೆ ಹೊಡೆ.

ಬಸ್ತಿ (ನಾ)= ವಸತಿ; ಜನವಸತಿ; ಆಬಾದಿ; ಊರು.

ಬಸ್ರಿ (ನಾ)= ಬಸುರಿ; ಗರ್ಭಿಣಿ; ಒಂದು ಜಾತಿಯ ಮರ.

ಬಸ್ವಾ (ನಾ)= ಬಸವಾ.

ಬಸ್ಸು (ನಾ)= ದೊಡ್ಡ ಸಂಚಾರಿ ವಾಹನ ಬಸವ ಹೆಸರಿನ ಸಂಕ್ಷಿಪ್ತ ರೂಪ.

ಬಹಸ್ (ನಾ)= ಚರ್ಚೆ; ಸಂವಾದ; ಸಂಭಾಷಣೆ; ನ್ಯಾಯಾಧೀಶನೆದುರು ಚರ್ಚೆ.

ಬಹಳ (ನಾ)= ಅತಿಶಯ; ಹೆಚ್ಚು; ಬಕ್ಕಳ.

ಬಹಾನಾ (ನಾ) ಉ.= ನೆವನ; ನೆಪ; ಕಾರಣ.

ಬಹಾನಾ ಮಾಡು (ಕ್ರಿ)= ನೆಪ ಕಂಡುಕೊ; ನೆವನ ಕಂಡುಕೊ.

ಬಹುತೇಕ (ಅ)= ಬಹುಶಃ ಬಹಳ ಮಾಡಿ; ಪ್ರಾಯಶಃ

ಬಹುರೂಪಿ (ನಾ)= ಭೈರೂಪಿ; ಜಾತಕಾರ

ಬಹುರೂಪಿ ಚೌಡಯ್ಯ (ನಾ)= ಬೀದರ ಜಿಲ್ಲೆಯ ರೇಕಳಿಕೆ (ರೇಕುಳ್ಗಿ) ಎಂಬ ಊರಿನ ಒಬ್ಬ ಶರಣನ ಹೆಸರು.

ಬಳಕಿ (ನಾ)= ಬಳಕೆ; ರಕ್ತ ಸಂಬಂಧದ ಗುಂಪು; ಧರ್ಮ ಅಥವಾ ಜಾತಿಯ ಒಳಪಂಗಡ. (ಆದಿ, ದೀಕ್ಷ, ಶೀಲವಂತ ಇತ್ಯಾದಿ).

ಬಳಕೋ (ಕ್ರಿ)= ಚೆಲ್ಲಿದ ಕಾಳನ್ನು ಕೈಯಲ್ಲಿ ತುಂಬಿಕೊ; ಸವರಿಕೊ; ಚೆಲ್ಲಿದ್ದನ್ನು ಬಳಿದುಕೊ.

ಬಳಗಾ (ನಾ)= ಬಳಗ; ರಕ್ತ ಸಂಬಂಧಿಕರ ಗುಂಪು; ಎತ್ತು ಹೆಗಲ ನೊಗವನ್ನು ಕಳಚುವಿಕೆ.

ಬಳಗಾರ (ನಾ)= ಬಳೆ ಮಾರುವವನು (ಕೋಲಿನ ಹಾಡು:- ಬಳಗಾರಾ ಬಂದಾನಾ। ಎಲಾ। ಬೀದ್ಯಾಗಾ ಇಳುದಾನ। ಹಸುರಾ ದೊಂದ್ಹನ್ನೊಂದು। ಮ್ಯಾಲ್। ಕುಸುರಾದೊಂದ್ಮೂವತ್ತು!)

ಬಳಗಾ ಹಾಕೋ (ಕ್ರಿ)= ಎತ್ತು ಹೆಗಲ ಮೇಲಿನ ನೊಗವನ್ನು ಕಳಚು, ಕೆಡಹು (ಭಂಡಿ ಎತ್ತು ಬಳಗಾ ಹಾಕೊಂಡಾದ ಎಂಬಂತೆ!)

ಬಳಾಗಡ್ಡಿ (ನಾ)= ಬಳ್ಳೊಳ್ಳಿ.

ಬಳಿ (ಕ್ರಿ)= ಸವರು; ಸಾರಿಸು.

ಬಳಿ (ನಾ)= ಬಳೆ; ಕಂಗನ್.

ಬಳಿ ಇಟ್ಗೊ (ಕ್ರಿ)= ಹೆಂಗಸಂತೆ ಬಳೆ ಧರಿಸು; ಹೆಂಗಸಾಗು; ಬಳೆ ತೊಡಿಸಿಕೊ.

ಬಳಿ ಇಡು (ಕ್ರಿ)= ಬಳೆ ತೊಡಿಸು.

ಬಳಿ ಕುಬ್ಸಾ ಮಾಡು (ನು)= ಬಳೆ ಕುಪ್ಪುಸಗಳಿಂದ ಮನೆಗೆ ಬಂದ ಮುತ್ತೈದೆಗೆ ಸನ್ಮಾನಿಸು.

ಬಳುಸ್ಕೊ (ಕ್ರಿ)= ಸಣ್ಣ ಸೌಟು ಇಲ್ಲವೆ ತಟ್ಟೆಯಿಂದ ದೊಡ್ಡ ಪಾತ್ರೆಯ ಅನ್ನವನ್ನು ತೆಗೆದುಕೊ.

ಬಳೊಳಿ (ನಾ)= ಬಳುವಳಿ; ತೌರುಮನೆಯವರು ಮಗಳಿಗೆ ಕೊಟ್ಟ ಆಕಳು, ಎಮ್ಮೆ.

ಬಳ್ಕಿ (ನಾ)= ಬಳಕೆ (ನೋಡಿರಿ)

ಬಳ್ಕೊ (ಕ್ರಿ)= ಬಳಿದುಕೊ; ಸವರಿಕೊ.

ಬಳ್ಗಾ (ನಾ)= ಬಳಗಾ (ನೋಡಿರಿ).

ಬಳ್ಗಾರ (ನಾ)= ಬಳೆಗಾರ (ಕೋಲಿನ ಹಾಡು:- ಕಂಚ್ಗಾರ್ಗ ಕಾಲ್ಕೊಟ್ಟ। ಬಳ್ಗಾರ್ಗ ಕೈಕೊಟ್ಟ। ಸಿಂಪಿಗ್ಯಾನ ತೋಳ್ಮ್ಯಾಲ ಮಲಗಿದೆನಾ ಕೊಲಕೋಲೆ।।)

ಬಳ್ಜಬರಿ (ನಾ)ಮ.= ಜಬರ್ದಸ್ತಿ; ಒತ್ತಾಯ.

ಬಳ್ಜಬರಿ ಮಾಡು (ಕ್ರಿ)= ಜಬರ್ದಸ್ತಿ ಮಾಡು; ಒತ್ತಾಯಿಸು.

ಬಳ್ಸು (ಕ್ರಿ)= ಬಳುಸ್ಕೊ (ನೋಡಿರಿ)

ಬಳ್ಳಾಡ್ಸು (ಕ್ರಿ)= ಬೆರಳಾಡಿಸು; ಬೆರಳಿನಿಂದ ಕಲಕು; ಕೆಡಿಸು.

ಬಳ್ಳು (ನಾ)= ಬೆರಳು.

ಬಳ್ಳು ಮಾಡು (ನು)= ಬಳ್ಳಾಡಿಸು; ಕೆಡಿಸು; ನಿಂದೆ ಹೇಳು; ಕಿವಿಯೂದು; ಚುಚ್ಚು; ಚಾಡಿ ಹೇಳು.

ಬಳ್ಳೊಳ್ಳಿ (ನಾ)= ಬಳ್ಳಾಗಡ್ಡಿ; ಈರುಳ್ಳಿಯ ಜಾತಿಗೆ ಸೇರಿದ, ಬಿಳಿಯ ಬಣ್ಣದಿಂದ

ಕೂಡಿದ ಒಂದು ಬಗೆಯ ಗಡ್ಡೆ; ಲಶುನ, ಬೆಳ್ಳುಳ್ಳಿ.

ಬಾ (ಕ್ರಿ)= ಬರು; ಆಗಮಿಸು; ಸಮೀಪಿಸು.

ಬಾಂ (ನಾ) ಇಂ.= ಬಾಂಬು.

ಬಾಂಗು (ನಾ)= ನಾಲೆ; ಓಡ್ಯಾ.

ಬಾಂದು (ನಾ) ಹಿಂ.= ಒಡ್ಡು; ಏರಿ.

ಬಾಂದ್ಕಾಮು (ನಾ) ಹಿಂ.= ಕಟ್ಟಡ ಕೆಲಸ.

ಬಾಂಧವರೋಣಿ (ನಾ)= ಬಸವಕಲ್ಯಾಣದ ವಿದ್ಯಾಪೀಠದ ಹತ್ತಿರದಲ್ಲಿರುವ ಐತಿಹಾಸಿಕ ಸ್ಥಳ. ಹೊಸದಾಗಿ ಬರುವ ಶರಣರು ಮೊದಲು ಇಲ್ಲಿ ತಂಗಿ, ನಂತರ ಕಲ್ಯಾಣ ಪ್ರವೇಶ ಮಾಡುತ್ತಿದ್ದರು. ಇದಕ್ಕೆ ಬಂದವ ರೋಣಿ ಎಂತಲೂ ಕರೆಯುವುದುಂಟು.

ಬಾಂಬು (ನಾ) ಇಂ.= ಧೊಡ್ಡ ಪಟಾಕಿ, ಸ್ಫೋಟಕ; ವಿನಾಶಕಾರಿ ಸ್ಫೋಟಕ.

ಬಾಂಸುರಿ, ಬಾಂಸ್ರಿ (ನಾ)ಹಿಂ.= ಕೊಳಲು.

ಬಾಕಾ (ನಾ)= ಅತ್ಯುತ್ತಮ; ಬಹಳಚಂದ; ಚಂದ.

ಬಾಕಿ (ನಾ)= ಸಾಲ; ಉಳಿದದ್ದು; ಮಿಕ್ಕಿದ್ದು; ಶಿಲ್ಕು; ಉಳಿದ; ಇತರ.

ಬಾಕ್ಲು (ನಾ)= ಬಾಗಿಲು.

ಬಾಗ್ (ನಾ) ಉ.= ತೋಟ ಉಪವನ; ಬಗೀಚಾ.

ಬಾಗs (ಕ್ರಿ)= ಬಾರೆಲೆ; ಬಾರೊ; ಬಾನೆ.

ಬಾಗಾನ (ನಾ) ಉ.= ಬಾಗ್ವಾನ; ತೋಟಗಾರ; ತರಕಾರಿ ವ್ಯಾಪಾರಿ.

ಬಾಗಾಯತು (ನಾ) ಉ.= ನೀರಾವರಿ.

ಬಾಗಾಯ್ತಿ (ನಾ)= ನೀರಾವರಿ ಭೂಮಿ; ತೋಟಗಾರಿಕೆ.

ಬಾಗಾಲು (ನಾ)= ದನಗಳು ಬಾಗಿ ನಡೆಯುವಿಕೆ; ಕುಂಟುತ್ತ ನಡೆಯುವಿಕೆ; ತುಡುಗು ದನಗಳು ಓಡಿಹೋಗದಂತೆ ಅವುಗಳ ಕೊರಳಿನ ಕಣ್ಣಿಯನ್ನು ಮುಂಗಾಲೊಂದಕ್ಕೆ ಕಟ್ಟಿ, ಬಾಗಿ ನಡೆಯುವಂತೆ ಮಾಡುವಿಕೆ.

ಬಾಗಿಣ, ಬಾಗಿನ (ನಾ)= ಮುತ್ತೈದೆಯರಿಗೆ ಕೊಡುವ ಕಾಣಿಕೆ; ವೀಳ್ಯ ಅಡಕೆ ಕೊಟ್ಟು ಮಾಡುವ ಸನ್ಮಾನ; ಬಾಗಿಣ.

ಬಾಗಿಣ ಕುಡು, ಬಾಗಿನ ಕುಡು (ನು)= ಸನ್ಮಾನಿಸು; ಗೌರವಿಸು; ಗೌರವಪೂರ್ವಕ ಆಮಂತ್ರಿಸು.

ಬಾಗಿನಡಿ (ಕ್ರಿ)= ವಿನಯಶೀಲನಾಗಿ ವರ್ತಿಸು (ಹಾಡುತ:- ಸಂಕೋಚ ಗುಣವನು ತ್ಯಾಗುತಾ। ಬಾಗಿನಡಿ ಶರಣಾಗುತಾ।)

ಬಾಗು (ಕ್ರಿ)= ಬಗ್ಗು; ಮಣಿ; ವಂದಿಸು; ನಮಸ್ಕರಿಸು; ಪರಿಶ್ರಮಿಸು; ದುಡಿ.

ಬಾಗುಲು (ನಾ)= ಬಾಗಿಲು; ದ್ವಾರ

ಬಾಗುಲು ಕಾಯಾಂವ (ನಾ)= ಕುಂಟಿಣಿ; ಕುಂಟಿಣಿತನ ಮಾಡುವವ; ತಲೆಹಿಡುಕ.

ಬಾಗ್ಡೋರ್ (ನಾ) ಉ.= ಲಗಾಮು; ಸಾರಥ್ಯ.

ಬಾಗ್ಲಿಗ್ಮುಳ್ಳು ಬಡಿಲಿ (ನು)= ಮನೆಯಲ್ಲಿ ಸಾವು ಸಂಭವಿಸಲಿ; ಯಾರೂ ಮನೆ ಸೇರದಂತೆ ಬಾಗಿಲೆದುರು ಮುಳ್ಳು ಬೇಲಿ ಹಚ್ಚಲಿ (ಶಾಪ; ಬೈಗುಳ); ಮನೆ ಮಸಣವಾಗಲಿ.

ಬಾಗ್ಲು (ನಾ)= ಬಾಗಿಲು; ದ್ವಾರ.

ಬಾಗ್ಲು ಧಾಟು (ಕ್ರಿ)= ಮನೆ ಹೊರಗೆ ಹೋಗು; ಗಂಡನ ಆಜ್ಞೆ ಮೀರಿ ಹೊರ ಹೋಗು;

ಬಾಗ್ಸಾಯಿ (ನಾ) ಉ.= ಬಾಗೇಶಾಹಿ; ಅರಸರಿಗೆ ಸಂಬಂಧಿಸಿದ ತೋಟ.

ಬಾಗ್ಸು (ಕ್ರಿ)= ಬಾಗಿಸು; ಬಗ್ಗಿಸು; ಮಣಿಸು; ಹಣಿಸು.

ಬಾಗ್ಸೈ (ನಾ)ಉ.= ಬಾಗ್ಸಾಯಿ (ನೋಡಿರಿ)

ಬಾಚಿ (ನಾ) ಉ.= ಮರವನ್ನು ಕೆತ್ತಲು ಬಳಸುವ ಅಗಲ ಬಾಯಿಯ ಉಕ್ಕಿನ ಸಾಧನ (ಜಾನಪದ ಪ್ರಾಸ:- ಬಡಗ್ಯಾ ಬಡಗ್ಯಾ ಬಾಚಿ। ಬಡಗ್ಯಾನ್ಹೆಣ್ತಿ ರಾಚಿ। ಬಡಗ್ಯಾಹೋದ ಮಣ್ಣಾಕ। ಹಾವ್ರಾಣಿ ಹೋಯ್ತು ಗ್ವಾಡ್ಯಾಕ।)

ಬಾಚಿ ಕಾಯಕ (ನಾ)= ಬಡಿಗತನ.

ಬಾಚಿಕಾಯುಕದ ಬಸವಣ್ಣ (ನಾ)= ಬಸವ ಯುಗದ ಪ್ರಸಿದ್ಧ ಶರಣ ಹಾಗೂ ವಚನಕಾರ.

ಬಾಚಿ ಹಲ್ಲು (ನಾ)= ಬಾಚಿಯಂತಿರುವ ದಂತ ಪಂಕ್ತಿ.

ಬಾಜಾಬಜಂತ್ರಿ (ನಾ)= ವಾದ್ಯ ಸಾಮಗ್ರಿ; ವಾದ್ಯಮೇಳ; ಹಲಗೆ ಬಾಜಿ ಮೇಳವಾದ್ಯ.

ಬಾಜಾಬ್ತಾ (ನಾ)= ಕಾನೂನು ಪ್ರಕಾರ.

ಬಾಜಿ (ನಾ) ಉ.= ವ್ಯಸನ; ಜೂಜು; ಜಿದ್ದು; ಪಣ; ಹಟ; ಜುವ್ವಾಬಾಜಿ; ದಗಲಬಾಜಿ; ರಂಡಿಬಾಜಿ; ನಶಾಬಾಜಿ; ಧೋಕಾಬಾಜಿ; ಬಾಜಾ-ಬಜಂತ್ರಿ.

ಬಾಜಿಭಾರ್ಸು (ಕ್ರಿ)= ವಾದ್ಯ ನುಡಿಸು.

ಬಾಜು (ನಾ)= ಮಗ್ಗಲು; ಪಕ್ಕ; ತೋಳು; ಭುಜ.

ಬಾಜು ಬಂದ (ನಾ) ಉ.= ರಟ್ಟೆ ಕವಚ; ವಂಕಿ; ರಟ್ಟೆಯ ಆಭರಣ.

ಬಾಟಿ (ನಾ)= ಜೋಳದ ಬೆಳೆಯಲ್ಲಿಯ ನೊರಜು ಬೆಳೆ; ಸೊರಗಿದ ಬೆಳೆ; ಕಿಳ್ಳು.

ಬಾಡಗಿ (ನಾ)= ಬಾಡಿಗೆ; ಅನ್ಯರಗೆ ಇರಲು ಕೊಟ್ಟ ಮನೆಯ ಕಿರಾಯ; ಬಾಡ್ಗಿ.

ಬಾಡಿ (ನಾ) ಇಂ.= ಹೆಂಗಸರ ಒಳಕುಪ್ಪಸ.

ಬಾಡಿ ಬತ್ತಿಯಾಗು (ಕ್ರಿ)= ತರಕಾರಿಯ ಲವಲವಿಕೆ ಇಲ್ಲದಂತಾಗು; ಮೋರೆಯ ಮೇಲೆ ಕಳೆ ಇಲ್ಲದಂತಾಗು; ಬಡಕಲಾಗು.

ಬಾಡು (ಕ್ರಿ)= ಮುದುಡು; ಒಣಗು; ಲವಲವಿಕೆಯನ್ನು ಕಳೆದುಕೊ, (ನಾ)= ಮಾಂಸ; ತರಕಾರಿ; ಕಾಯಿ ಪಲ್ಯ.

ಬಾಡು ಮಾರು (ಕ್ರಿ)= ಮಾಂಸಮಾರು; ತರಕಾರಿ ಮಾರು.

ಬಾಡ್ಡಿ (ನಾ)= ಮರದ ಅಥವಾಗಿಡದ ಬುಡ; ಬೊಡ್ಡೆ.

ಬಾಣತಾನ (ನಾ)= ಬಾಣಂತನ; ನವಜಾತ ಶಿಶು ಮತ್ತು ತಾಯಿಯ ಶುಶ್ರೂಷೆ.

ಬಾಣತಾನ ಮಾಡು (ಕ್ರಿ)= ಬಾಣತಿಯ ಶುಶ್ರೂಷೆ ಮಾಡು.

ಬಾಣತಿ (ನಾ)= ಬಾಣಂತಿ; ಹೆರಿಗೆಯಾದ ಹೆಣ್ಣು; ನವಜಾತ ಶಿಶುವಿನ ತಾಯಿ; ಬಾಣ್ತಿ.

ಬಾಣಿ (ನಾ)= ಮಂಥಣಿ, ಮುಸುರೆಯ ಹೌದು; ಕಬ್ಬಿನ ಗಾಣದ ಕೆಳಗಿರುವ ಹಾಲು

ಶೇಖರಣೆಯ ಹೌದು; ಬಾಣ್ಣಿ! ನಾಲ್ಕು ದುಡ್ಡು; ಗಂಡೆ.

ಬಾಣು(ನಾ)=ಬಾಣ.

ಬಾಣ್ಣಿ (ನಾ)= ನಾಲ್ಕು ದುಡ್ಡು; ಎತ್ತಿನ ಕೊರಳಿನ ಜತ್ತಿಗೆ.

೪ ದುಡ್ಡು = ೧ ಬಾಣ್ಣಿ
೨೪ ಬಾಣ್ಣಿ = ೯೬ ಪೈಸೆ
ನಿಜಾಮ ನಾಣ್ಯ
೧೬ ಬಾಣ್ಣಿ=೬೪ ಪೈಸೆ
ಬ್ರಿಟಿಷ್ ನಾಣ್ಯ.

ಬಾಣ್ತಿ (ನಾ)= ಬಾಣತಿ; ಬಾಣಂತಿ; ಹೆರಿಗೆಯಾದ ಹೆಣ್ಣು.

ಬಾಣ್ತಿ ಕಾಡಾ (ನಾ)= ಬಾಣಂತಿಗೆ ಕೊಡುವ ಕಷಾಯ;

ಬಾತಲ್ (ನಾ)= ಕೆಟ್ಟುಹೋದದ್ದು; ಕೆಲಸಕ್ಕೆ ಬಾರದ್ದು.

ಬಾತಲ್ಲಾಗು (ಕ್ರಿ).= ಬೇಕಾರಾಗು; ಕೆಲಸಕ್ಕೆ ಬಾರದಂತಿರು; ಕೆಟ್ಟುಹೋಗು.

ಬಾತ್ಕೋಳಿ (ನಾ)= ಬಾತುಕೋಳಿ; ನೀರ ಕೋಳಿ.

ಬಾದ (ಅ)= ನಂತರ; ಆಮೇಲೆ; ಬೇಕಾರ; ವ್ಯರ್ಥ.

ಬಾದಾಗು (ಕ್ರಿ)= ಬೇಕಾರಾಗು; ವ್ಯರ್ಥವಾಗು.

ಬಾದಾಮು (ನಾ)= ಒಂದು ಪ್ರಕಾರದ ಮರ ಮತ್ತು ಅದರ ಕಾಯಿ.

ಬಾದಾಮೆಣ್ಣಿ (ನಾ)= ಬಾದಾಮಿ ಬೀಜದಿಂದ ಹೀರಿದ ಎಣ್ಣೆ.

ಬಾದು (ನಾ)= ವ್ಯರ್ಥ; ಬೇಕಾರ.

ಬಾದ್ಮಿ ಅಮಾಸಿ (ನಾ)= ಅಗತಾದಿ ಅಮಾವಾಸ್ಯೆಯ ನಂತರ ಬರುವ ಅಮಾವಾಸ್ಯ; ಹಿಂದೂ ಪಂಚಾಂಗದ ಪ್ರಕಾರ ವರ್ಷದ ಎರಡನೇ ಅಮಾವಾಸ್ಯ.

ಬಾದ್ಲಿ (ನಾ)= ಬಕಿಟು.

ಬಾನಾ (ನಾ)= ಬೋನ; ಕಳವೆಯಕ್ಕಿ ಅಥವಾ ನವಣೆಕ್ಕಿಯನ್ನು ಕುದಿಸಿ ತಯಾರಿಸಿದ ಅನ್ನ.

ಬಾನಾ ಸೋಲಾಪೂರೆ (ನಾ)= ಬಾಲಕ ಕಾವ್ಯ ನಾಮದ ಕಮಲನಗರ ಗ್ರಾಮದ ಒಬ್ಬ ಸಾತ್ವಿಕ ಕವಿ, ಶರಣಮಾರ್ಗಿ.

ಬಾನೆ (ಕ್ರಿ)= ಬಾರೆ.

ಬಾನೊ (ಕ್ರಿ)= ಬಾರೊ.

ಬಾಪಾ (ಕ್ರಿ)= ಬಾರಪ್ಪಾ.

ಬಾಪ್ರೆ (ಅ)= ಅಪ್ಪಾ! ಅಯ್ಯಪ್ಪಾ! ಏಯಪ್ಪಾ ಎಂಬಂತೆ.

ಬಾಬತ್ (ನಾ)= ಸಂಬಂಧಿಸಿದ್ದು; ಸಂಬಂಧಿಸಿದಂತೆ; ವಿಷಯ; ಸಂಗತಿ.

ಬಾಬಾ (ನಾ)= ಅಪ್ಪ; ತಾತಾ

ಬಾಬಾಸಾಹೇಬ (ನಾ)= ಭೀಮರಾವ್ ಅಂಬೇಡ್ಕರರ ಗೌರವದ ಹೆಸರು.

ಬಾಬು (ನಾ)= ಗಂಡುಮಗುವಿಗೆ ಪ್ರೀತಿ ಯಿಂದ ಕರೆಯುವ ಹೆಸರು; ಕಲಮು; ಆಕ್ಡಾ.

ಬಾಬ್ಡಿ (ನಾ)= ತೊಯ್ದು ಕೆಟ್ಟ ಉದ್ದು, ಹೆಸರು.

ಬಾಮಾ (ಕ್ರಿ)= ಬಾ ಅಮ್ಮಾ; ಬಾರೆ; (ಹೀನ ಸಂಬೋಧನೆ- ಬೈಗುಳ).

ಬಾಯಾಡ್ಸು (ಕ್ರಿ)= ಬಾಯಿ ಆಡಿಸು; ಮೆಲಿ; ಬಾಯಲ್ಲಿ ಆಹಾರವನ್ನು ಜಗಿ.

ಬಾಯಾರ್ಕಿ (ನಾ)= ಬಾಯಾರಿಕೆ; ನೀರಡಿಕೆ.

ಬಾಯಾರ್ಕಿ ಆಗು (ಕ್ರಿ)= ನೀರಡಿಕೆಯಾಗು; ನೀರಡಿಸು.

ಬಾಯಿ (ನಾ)= ಬಾಯ್; ವಕ್ತ್ರ.

ಬಾಯಿ ಬಂಬಯಿ (ನಾ)= ಬಾಯ್ಬಡುಕತನ; ಅತಿ ಮಾತಾಡುವಿಕೆ; ಅರಚುವಿಕೆ; ಜೋರಾಗಿ ಮಾತಾಡುವಿಕೆ.

ಬಾಯ್ಕಟ್ಟು (ನು)= ಬಾಯಿ ಮುಚ್ಚು; ಮಾತಾಡದಂತೆ ಮಾಡು; ಪಥ್ಯ ಮಾಡು.

ಬಾಯ್ಗಿ ಬಲ್ಲಂಗ= ಮನಸ್ಸಿಗೆ ಬಂದಂತೆ; ಸಡಿಲು ಬಾಯಾಗಿ.

ಬಾಯ್ತಪ್ಪಿ (ಅ)= ಫರಕ ಬಿದ್ದು.

ಬಾಯ್ತಿಂಡಿ (ನಾ)= ಬಾಯ್ತೀಟೆ; ವಾಚಾಳಿತನ; ಮಾತಿನ ಚಟ.

ಬಾಯ್ತಿಂಡಿ ತೀರುಸ್ಕೊ (ಕ್ರಿ)= ವಾಚಾಳಿತನ ತೋರು; ಬಾಯ್ತೀಟೆ ಪ್ರದರ್ಶಿಸು.

ಬಾಯ್ಥುಂಬ (ವಿ)= ಬಾಯಿ ರುಚಿಗೆ ತಕ್ಕಷ್ಟು; ಪ್ರೀತಿಪೂರ್ವಕ (ಮಾತಾಡುವಿಕೆ) ಉದಾ:- ಬಾಯ್ಥುಂಬಾ ಉಪ್ಪು ಖಾರಾ ಹುಳಿ ಹಾಕುದ್ರ, ಅಡಗಿ ಖಮ್ಮಗ ಆಗ್ತಾದ.

ಬಾಯ್ದಾಗ ಕಲ್ಲು (ನು)= ಬಾಯಿಯಲ್ಲಿ ಕಲ್ಲು ಬೀಳಲಿ (ಬೈಗುಳ).

ಬಾಯ್ದಾಗ ಮಣ್ಣು(ನು)= ಬಾಯಿಯಲ್ಲಿ ಮಣ್ಣು ಬೀಳಲಿ (ಬೈಗುಳ).

ಬಾಯ್ಪಾಠ (ನಾ)= ಕಂಠಗತ; ಉರು ಹೊಡೆಯುವಿಕೆ; ತೋಂಡಪಾಠ.

ಬಾಯ್ಬಡಿ (ಕ್ರಿ)= ಇತರರಿಗೆ ಮಾತಾಡಲು ಅವಕಾಶ ನೀಡದಿರು; ಅತಿ ಮಾತಾಡು.

ಬಾಯ್ಬಡ್ಕ (ನಾ)= ಮಾತು ಹೆಚ್ಚು ಆಡುವವನು.

ಬಾಯ್ಬರು (ಕ್ರಿ)= ಬಾಯಿ ಕೆಂಪಾಗು; ಮುಳ್ಳು ಮುಳ್ಳಾಗು; ದನಗಳಿಗೆ ಬಾಯಲ್ಲಿ ಮುಳ್ಳು ಬರು.

ಬಾಯ್ಬಿಡು (ಕ್ರಿ)= ಮಾತಾಡು; ಹೇಳು.

ಬಾಯ್ಬೆಲ್ಲ (ನಾ)= ರುಚಿಮಾತು.

ಬಾಯ್ಮಾಡು (ಕ್ರಿ)= ಕೂಗಾಡು; ಚೀರಾಡು; ಗದ್ದಲ ಮಾಡು; ರಂಪ ಮಾಡು;

ಬಾಯ್ಮುಚ್ಚು (ಕ್ರಿ)= ಮಾತಾಡದಿರು; ಶಾಂತವಾಗಿರು.

ಬಾಯ್ರುಚಿ (ನಾ)= ತಿನ್ನುವ ಹಂಬಲ; ಚಟ.

ಬಾಯ್ವಟಾಳಿ (ನಾ)= ಲಗಾಮು ಬದಲಾಗಿ ಕುದುರೆ ಬಾಯಿಗೆ ಬಳಸುವ ಬಗ್ಗ; ಮೋರ್ಕಿ.

ಬಾರ್ (ನಾ) ಇಂ.= ಕುಡುಕರ ಮನೆ.

ಬಾರಳ್ಳಿ ಔರಾದ= ತಾಲೂಕು ಕೇಂದ್ರವಾದ ಔರಾದ (ಬಿ) ಎಂಬ ಊರು. ಅಮರೇಶ್ವರ ದೇವಾಲಯವಿರುವ ಊರು. ಅಮರವಾಡಿ.

ಬಾರಾ (ನಾ)= ಹನ್ನೆರಡು.

ಬಾರಾಣೆ (ನಾ)= ಹನ್ನೆರಡಾಣೆ

ಬಾರಾಬಂದಿ (ನಾ) ಮ.= ಹನ್ನೆರಡು ಕಸೆಯ ಅಂಗಿ.

ಬಾರಾ ಭಾನಗಡಿ (ನಾ)= ಹನ್ನೆರಡು ಗೊಂದಲ; ಅನೇಕ ಗೊಂದಲ; ಕಿರ್ಕಿರಿ;

ಜಗಳದ ಸ್ಥಿತಿ; ಅಚಾತುರ್ಯ; ಅನಾವಶ್ಯಕ ಕಿರಿಕಿರಿ.

ಬಾರಾಭಾರ್ಸು (ಕ್ರಿ)= ಹನ್ನೆರಡು ಗಂಟೆ ಯಾಗು.

ಬಾರಾಮಾಸಿ (ನಾ) ಮ. = ಹನ್ನೆರಡು ಮಾಸಿ; ಮರಾಠರಲ್ಲಿಯ ಒಂದು ಒಳಪಂಗಡ; ಮೂಲ; ಅಸ್ಲಿ.

ಬಾರಾಮೈನೆ (ನಾ)= ಹನ್ನೆರಡು ತಿಂಗಳು.

ಬಾರಾಸಿಂಗಿ (ನಾ) ಮ.= ಹನ್ನೆರಡು ಕೊಂಬಿನ ಚಿಗರೆ.

ಬಾರಾಹಮೇಶಾ (ಅ) ಉ.= ಯಾವಾಗಲೂ.

ಬಾರಿ (ನಾ)= ಪಾಳಿ; ಸರದಿ.

ಬಾರೀಕ (ವಿ)= ಸಣ್ಣದಾದ; ಹಿಟ್ಟಿನಂತೆ ಪುಡಿ ಪುಡಿಯಾದ.

ಬಾರೀಕಾಯಿ (ನಾ)= ಬೋರೆಕಾಯಿ; ಹಣ್ಣು (ಶಿಶುಪ್ರಾಸ:- ಚಂದಾಮಾಮಾ ಬಾರೀಕಾಯಿ। ಬಟ್ಟಲ ತುಂಬಾ ಬಾರೀ ಕಾಯಿ। ನಮ್ಮತ್ತಿ ಬೇಡ್ತಾಳ ಇನ್ನೊಂದ್ಕಾಯಿ।

ಬಾರೀಕಿ (ನಾ)= ಸಣ್ಣತನ; ಕ್ಷುಲ್ಲಕತನ; ಜಿಪುಣತನ; ಜಿಬ್ಬುತನ; ಜೀನತನ.

ಬಾರು (ನಾ)= ತೊಗಲಿನ ಪಟ್ಟಿ; ಸ್ಫೋಟ; ಕುಡುಕರ ಅಂಗಡಿ.

ಬಾರು ಮಾಡು (ಕ್ರಿ)= ಸ್ಫೋಟಿಸು; ಬಂದೂಕನ್ನು ಸಿಡಿಸು.

ಬಾರುಹಾಕು (ಕ್ರಿ)= ಸ್ಫೋಟದ ಸಿದ್ಧತೆ ಮಾಡು; ಸ್ಫೋಟಿಸು.

ಬಾರೂದು (ನಾ)ಉ.= ಬಂದೂಕಿನ ಮದ್ದು.

ಬಾರ್ಕೋಲು (ನಾ)= ಚಾವಟಿ; ಚಬಕಾ; ಹಂಟರ್.

ಬಾರ್ದಾನಿ (ನಾ)= ಗಳೆ ಸಾಮಾನು; ಹಗ್ಗ; ಕಣ್ಣಿ; ನೊಗ; ಪಲಗ ಇತ್ಯಾದಿ ಕೃಷಿ ಸಂಬಂಧಿ ಸಾಮಾನು.

ಬಾರ್ಬಾರ್ (ದ್ವಿ)= ಮತ್ತೆ ಮತ್ತೆ.

ಬಾರ್ವಿ (ನಾ)= ಹನ್ನೆರಡನೇ; ದ್ವಾದಸಿ; ಪಕ್ಷದ ಹನ್ನೆರಡನೇ ದಿನ.

ಬಾರ್ಶಿ (ನಾ)= ಚೈತ್ರ ಶುದ್ಧ ದ್ವಾದಸಿ, ಮಹಾದೇವನ ಹಬ್ಬದ ದಿನ.

ಬಾಲ (ನಾ)= ಬಾಲಕ; ಮಗ, ದನಕರುಗಳ ಪುಚ್ಛ (ಹಾಡು:- ಗೋಪಿನಿನ ಕಂದಾ। ಬಾಲ ಮುಕುಂದಾ। ಹಾಲ ಕೆನಿ ಮೊಸರು ತಿಂದಾನೆ।। -ಮಾಣಿಕ ಪ್ರಭು ಮಹಾರಾಜರು).

ಬಾಲಚುಕ್ಕಿ (ನಾ)= ಉದ್ದ ಬಾಲದಂತಹ ಬೆಳಕು ಹೊಂದಿರುವ ಚುಕ್ಕೆ; ಧೂಮಕೇತು.

ಬಾಲಬಡ್ಕ (ನಾ)= ಬಾಲಬಡಿವವನು; ಹಿಂಬಾಲಕನು; ಸ್ವಾರ್ಥಕ್ಕಾಗಿ ಎಲ್ಲದಕ್ಕೂ ಹೌದೆನ್ನುವವನು.

ಬಾಲಾ (ನಾ)= ಬಾಲ; ಮಗ; ಪುಚ್ಛ.

ಬಾಲಾ ಆಡ್ಸು (ಕ್ರಿ)= ಪುಚ್ಛವನ್ನು ಅಲ್ಲಾಡಿಸು; ಯಜಮಾನನ ಇಚ್ಛೆಯಂತೆ ವರ್ತಿಸು; ಹಂಗಿನ ವರ್ತನೆ ತೋರು; ಸ್ವಾರ್ಥಕ್ಕಾಗಿ ಎಲ್ಲಕ್ಕೂ ಹೌದೆನ್ನು.

ಬಾಲಾಬಡಿ (ನು)= ಬಾಲ ಅಲ್ಲಾಡಿಸು.

ಬಾಲಿ (ನಾ)= ಹುಡುಗಿ; ಹೆಣ್ಣು ಮಗು; ಹೆಣ್ಣು; ಹೆಂಗಸು; ಬಾಲೆ; ಯುವತಿ (ಕೋಲಿನ ಹಾಡು:- ಬಾಳಿಯಾ ಬನ ದೋಳೇರಂಗ। ಬಾಲಿನಾ ಒಬ್ಬವಳೇ ರಂಗ।)

ಬಾಲ್ಯಾ (ನಾ)= ಕೋಡಂಗಿ; ವಾನರ; ವಾನೆರಿ.

ಬಾಲ್ವುಳಾ (ನಾ)= ನೀರಲ್ಲಿ ಹುಟ್ಟಿದ ಬಾಲವುಳ್ಳ ಹುಳು, ಕ್ರಿಮಿ, ಕೀಟ.

ಬಾವಂಚಿ (ನಾ)= ಒಂದು ಪ್ರಕಾರದ ಕಾಡು ಸಸ್ಯ; ಕೇಶಶುದ್ಧಿಗಾಗಿ ಬಳಕೆಯಾಗುವ ಔಷಧಿ ಬೀಜವುಳ್ಳ ಸಸ್ಯ.

ಬಾವಾ (ನಾ) .= ಅಪ್ಪ; ಫಕೀರ; ಬೈರಾಗಿ; ಮಕ್ಕಳಿಗೆ ಭಯಪಡಿಸಲು ಕಲ್ಪಿಸಲಾದ ವ್ಯಕ್ತಿ.

ಬಾವು (ನಾ)= ಊತ; ಉಬ್ಬು; ಮೈಮೇಲೆ ಪೆಟ್ಟು ತಗುಲಿ ಉಂಟಾದ ಊತ; ಗಡ್ಡೆ.

ಬಾವುಗ (ನಾ)= ಗಂಡು ಬೆಕ್ಕು; ಬಾವ್ಗ.

ಬಾವುಲಿ (ನಾ)=ತೊಗಲು ಬಾವಲಿ; ಬಾವ್ಲಿ.

ಬಾವ್ಗಿ (ನಾ)= ಭದ್ರೇಶ್ವರ ದೇವರ ತೀರ್ಥ ಕ್ಷೇತ್ರವಾದ ಊರು.

ಬಾವ್ಲಿ (ನಾ)= ಬಾವಲಿ; ತೊಗಲು ಬಾವಲಿ; ಬಾವುಲಿ;

ಬಾಶಾ (ನಾ) ಉ.= ಬಾದಷಹ; ರಾಜಾ.

ಬಾಸಾಣ (ನಾ)= ಭಾಂಡೆಬರ್ತನ್.

ಬಾಸಾಣ ತಿಕ್ಕು (ಕ್ರಿ)= ಭಾಂಡೆ ಉಜ್ಜಿ ಸ್ವಚ್ಛ ಮಾಡು.

ಬಾಸಿ (ವಿ)= ತಂಗುಳಾದ; ಹಳಸಿದ.

ಬಾಸುಂದಿ (ನಾ)= ಹಾಲು ಕಾಸಿ ಅಟ್ಟಿಸಿ ತಯಾರಿಸಿದ ಸೀಕರಣೆ.

ಬಾಸ್ಕಿಟ್ (ನಾ) ಇಂ.= ಕೈಬುಟ್ಟಿ; ಬುಟ್ಟಿ.

ಬಾಸ್ರಿ (ನಾ) ಹಿಂ.= ಬಾಂಸರಿ; ಬಾಂಸುರಿ; ಕೊಳಲು.

ಬಾಹತ್ತರ ಬರಗಾಲ (ನಾ)= ಹತ್ತೊಬತ್ತೂರಾ ಎಪ್ಪತ್ತೆರಡರ ಕ್ಷಾಮಕಾಲ.

ಬಾಳ (ನಾ)= ಬಾಲ; ಬಾಲಕ; ಮಗು; ಕೂಸು (ಜೋಗುಳ ಹಾಡು:- ಹಡಿಡಿಡಿ ಬಾಳಾ। ದುಡ್ಡಿಗೊಮ್ಮನ ಜ್ವಾಳಾ। ಕಲಬುರ್ಗಿ ಸಂತ್ಯಾಗ ಕರಿತಾಳಾ।।)

ಬಾಳಕ (ನಾ)= ಒಣಗಿಸಿಟ್ಟ ತರಕಾರಿ; ಒಣಗಿಸಿಟ್ಟ ಮಾಂಸ.

ಬಾಳಬೋಧ (ನಾ)= ಮರಾಠಿ ಭಾಷೆ.

ಬಾಳ ಸಂತೋಷಿ (ನಾ)= ಒಂದು ಜನಾಂಗ.

ಬಾಳಾ (ನಾ)= ಬಾಳ (ನೋಡಿರಿ)

ಬಾಳಿ (ನಾ)= ಬಾಳೆಗಿಡ; ಬಾಳೆಕಾಯಿ.

ಬಾಳಿ (ವಿ.)= ಬೋರಲು; ಬೆನ್ನು ಮೇಲೆ ಮಾಡಿದ; ತಳ ಮೇಲೆ ಮಾಡಿದ.

ಬಾಳಿಕಾಯಿ (ನಾ)= ಬಾಳೆಹಣ್ಣು (ಗಾದೆ:- ಬಾಳಿಕಾಯಿ ತಿಂಬಾವ್ನ ಬಾಯಿ ನೊಯ್ಯಾಲ!); ಪುರುಷನ ಜನನೇಂದ್ರಿಯ.

ಬಾಳಿಬನ (ನಾ)= ಬಾಳೆಯ ತೋಟ (ಕೋಲಾಟದ ಹಾಡು:- ಬಾಳಿಯಾ ಬನದೊಳೆ ರಂಗ। ಬಾಲಿನಾ ಒಬ್ಳೋಳೆ ರಂಗ। ಕಾಯಿಕಡಿ ಭ್ಯಾಡಾ। ಘೊಲ್ಯಾ ಮುರಿಬ್ಯಾಡ।।)

ಬಾಳು (ಕ್ರಿ)= ಬದುಕು; ಸಂಸಾರ ಸಾಗಿಸು.

ಬಾಳೂರು (ನಾ)= ಹಳೆಂಬ್ರ ವೀರಭದ್ರ ದೇವಸ್ತಾನ ಇರುವ ಊರು. ಆಧುನಿಕ ವಚನಕಾರ ಕಾಶೀನಾಥ (ಜಗನ್ನಾಥ) ಕರಂಜೆ ಇರುವ ಊರು.

ಬಾಳೆಲಿ (ನಾ)= ಬಾಳೆಲೆ.

ಬಾಳೋಬಾ (ನಾ)= ಚಿಟಗುಪ್ಪಾದ ಒಬ್ಬ ಗೌಳಿಗರ ಸಂತ.

ಬಾಳ್ಕ (ನಾ)= ಬಾಳಕ (ನೋಡಿರಿ)

ಬಾಳ್ಕಿ (ನಾ)= ಬಾಳಿಕೆ; ತಾಳಿಕೆ; ಬಳಕೆ.

ಬಾಳ್ಕಿ ಬರು (ಕ್ರಿ)= ದೀರ್ಘಾವಧಿವರೆಗೆ ಬಳಕೆಯಾಗು; ತಾಳಿಕೆಯಾಗು.

ಬಾಳ್ಯಾ (ನಾ)= ಬಾಳು; ಬಾಳುವೆ; ಸಂಸಾರ; ಜಿಂದಗಿ; ಕಿವಿಯೋಲೆ.

ಬಾಳ್ಯಾ ಮಾಡು (ಕ್ರಿ)= ಬಾಳು ಸಾಗಿಸು.

ಬಾಳ್ಸು (ಕ್ರಿ)= ಬಾಡಿಸಿಕೊಳ್ಳು ನಂಜಿಸಿಕೊಳ್ಳು.

ಬಿ (ಅ)= ಭೀ; ಕೂಡ (ಉ:- ಅಂವಾಬಿ, ಇಂವಾಬಿ, ನಾಬಿ, ನೀಬಿ ಎಂಬಂತೆ)

ಬಿಂಗಾ (ವಿ)= ಅಡ್ಡ; ಒಂಕ; ಓರೆ.

ಬಿಂಗಾಟಿಂಗಾ (ವಿ)= ಅಂಕಡೊಂಕ (ಉದಾ:- ಬಿಂಗಾಟಿಂಗಾ; ಧಂದ್ಯಾ ಮಾಡಿ ಬಾಯ್ಗಿ ಬಂಧಾಂಗ ಬೈಸ್ಕೊಂಡ.)

ಬಿಂಡಿ (ನಾ)= ಬಂಡಲ್; ಕಟ್ಟು.

ಬಿಂದಲಿ (ನಾ)= ಚಿಕ್ಕ ಮಕ್ಕಳ ಕೈಯಲ್ಲಿರಿಸುವ ಬಳೆಯಂಥ ಬಂಗಾರದ ಆಭರಣ; ಬಿಂದ್ಲಿ; ಬಂಗಾರ ಬಳೆ; ಪಾಟ್ಲಿ.

ಬಿಂದಗಿ, ಬಿಂದ್ಗಿ (ನಾ)= ಬಿಂದಿಗೆ; ಸಣ್ಣಕೊಡ; ಕಳಸಿ (ಹಾಡು:- ತಾರಕ್ಕ ಬಿಂದಗಿ ನಾ ನೀರಿಗ್ಹೋಗುವೆ। ತಾರೇ ಬಿಂದಗಿಯಾ।)

ಬಿಕ್ಕಟ್ಟು (ನಾ)= ಕಷ್ಟ; ತೊಂದರೆ; ಸಂದಿಗ್ಧ ಪರಿಸ್ಥಿತಿ; ಇಕ್ಕಟ್ಟು.

ಬಿಕ್ಕು (ನಾ)= ಬಿಕ್ಕಳಿಕೆ; ಬಿಕ್ಕುವಿಕೆ. (ಕ್ರಿ) ಬಿಕ್ಕಳಿಸು; ಮೇಲುಸಿರು ಬಿಡು.

ಬಿಕ್ಕು ಹತ್ತು (ಕ್ರಿ)= ಬಿಕ್ಕು ಪ್ರಾರಂಭವಾಗು; ಉಣ್ಣುವಾಗ ಬಿಕ್ಕುಂಟಾಗು; ಸಾಯುವಾಗ ಬಿಕ್ಕು.

ಬಿಕ್ರಿ (ನಾ)= ವಿಕ್ರಿ; ಮಾರಾಟ.

ಬಿಕ್ರಿ ಮಾಡು (ಕ್ರಿ)= ವಿಕ್ರಯಿಸು; ಮಾರಾಟ ಮಾಡು.

ಬಿಗಾರಿ (ನಾ)= ಪುಕ್ಕಟೆ ದುಡಿಮೆ; ಬಿಟ್ಟಿ ದುಡಿಮೆ; ನಿಜಾಮ ಆಡಳಿತ ಕಾಲದಲ್ಲಿ ದಲಿತರು ಫಲಪ್ರಾಪ್ತಿ ಇಲ್ಲದೆ ಮಾಡುವ ದುಡಿಮೆ.

ಬಿಗಿ (ನಾ)= ಬಿರಿ; ಭದ್ರಗೊಂಡದ್ದು; ಕಠಿಣ; ಒತ್ತಿ ಕಟ್ಟಿದ್ದು;

ಬಿಗಿ (ಕ್ರಿ)= ಎಳೆದೆಳೆದು ಬಿಗಿಯಾಗಿ ಕಟ್ಟು; ಚುಟ್ಟ, ಬೀಡಿ, ಸಿಗರೇಟು, ಗಾಂಜಾ ಇತ್ಯಾದಿಯನ್ನು ಸೇದು; ಹೊಗೆಬತ್ತಿ ಸೇದು (ಚುಟ್ಟಾಬಿಗಿ; ಬೀಡಿ ಬಿಗಿ ಎಂಬಂತೆ).

ಬಿಗಿ ಬಂದೋಬಸ್ತ್ (ನಾ)= ಭದ್ರ ಪೋಲಿಸು ವ್ಯವಸ್ಥೆ.

ಬಿಗುಡಾವ (ನಾ)= ಖರಾಬಿ; ಭೇದ; ಕೇಡು.

ಬಿಗುಡಾಸು (ಕ್ರಿ)= ಸಿಟ್ಟಾಗು; ಕೆಡು; ಕೆಡಿಸು; ಖರಾಬಾಗು; ಬಿಗ್ಡಾಸು.

ಬಿಗುತಾರ (ನಾ)= ಬಿಗಿಯಾದದ್ದು; ಬಿಗಿಯುಳ್ಳದ್ದು.

ಬಿಗುತಾರಿ (ನಾ)= ಬಿಗಿಯಾಗಿರುವಿಕೆ; ಬಿಗಿತನ; ಜರ್ಬು; ಪ್ರಭಾವ; ಒತ್ತಡ.

ಬಿಗುಲ್ಬಾಜಿ (ನಾ)= ವಾದ್ಯಮೇಳ.

ಬಿಗ್ಡಾಸು (ನಾ)= ಬಿಗುಡಾಸು; ಕೆಡು; ಕೆಡಿಸು.

ಬಿಗ್ಯಾ (ನಾ)= ಹೊಲ ಅಳತೆಯ ಒಂದು ಮಾನ (ಒಂದೂ ಕಾಲು ಬಿಗ್ಯಾ= ೧ ಎಕರೆ)

ಬಿಚಾರಿ (ನಾ) ಉ.= ದಿಕ್ಕಿಲ್ಲದವನು; ಅನ್ನ ಕಾಣದವನು.

ಬಚಾರ್‍ಯಾ (ನಾ) ಉ.= ದಿಕ್ಕಿಲ್ಲದವನು; ಅನ್ನ ಕಾಣದವನು.

ಬಿಚ್ಕ್ಯಾಸು (ಕ್ರಿ)= ಸರಿದು ನಿಲ್ಲು; ಜಾರು; ತಪ್ಪಿಸಿಕೊ.

ಬಿಚ್ಗತ್ತಿ (ನಾ)= ಬರೆಯಿಂದ ಹೊರಸೆಳೆದ ಕತ್ತಿ; ಬಿಚ್ಚುಗತ್ತಿ.

ಬಿಚ್ಚು (ಕ್ರಿ)= ಬೇರೆ ಮಾಡು; ವಿಭಾಗಿಸು; ಇಬ್ಭಾಗವಾಗು; ಅರಳು; ಬಿರಿ; ತೆರೆ; ಮಡಿಕೆ ಬಿಡಿಸು.

ಬಿಚ್ಚುಗತ್ತಿ (ನಾ)= ಬಿಚ್ಗತ್ತಿ; ಒರೆಯಿಂದ ಹೊರಸೆಳೆದ ಕತ್ತಿ.

ಬಿಚ್ಚು ಮನ್ಸು (ನಾ)= ಸರಳ ಮನಸ್ಸು; ನೇರ ಮನಸ್ಸು; ಮುಚ್ಚುಮರೆ ಇಲ್ಲದ ಮನಸ್ಸು.

ಬಿಚ್ಚುವ್ವಾ (ನಾ)= ಬಿಡಿ ಹೂವು; ಮಾಲೆ ಗೈಯದ ಹೂ; ಅರಳಿದ ಹೂ.

ಬಿಚ್ನಿ (ನಾ)= ತುಂಟ; ಚುರುಕು ಬುದ್ಧಿಯವನು; ಕುಹಕಿ; ನೀಚ.

ಬಿಜಲಿ (ನಾ) ಹಿಂ.= ಪ್ರಖರ ಬೆಳಕಿನ ಖಂದೀಲು; ಪೆಟ್ರೋಮ್ಯಾಕ್ಸ್.

ಬಿಜ್ಜಳ (ನಾ)= ಕಲ್ಯಾಣದ ಕಲಚೂರಿ ಮನೆತನದ ರಾಜ.

ಬಿಜ್ನೆಸ್ (ನಾ)= ವ್ಯಾಪಾರ.

ಬಿಜ್ನೆಸ್ ಮಾಡು (ಕ್ರಿ)= ವ್ಯಾಪಾರ ಮಾಡು.

ಬಿಜಲೋಟು (ನಾ) ಹಿಂ.= ಸಣ್ಣ ಬಂದೂಕು; ಬಂದೂಕಿನಂತೆ ಹಾರಾಡುವವನು.

ಬಿಟ್ಟಿಧಂದ್ಯಾ (ನಾ)= ಬಿಗಾರಿ ಕೆಲಸ; ಬಿಟ್ಟಿ ದುಡಿಮೆ; ನಿಜಾಮನ ಆಡಳಿತ ಕಾಲದಲ್ಲಿ ದಲಿತರ ಪುಕ್ಕಟೆ ದುಡಿಮೆ; ಪ್ರತಿಫಲವಿಲ್ಲದ ದುಡಿಮೆ.

ಬಿಟ್ಟಿ ಬೇಗಾರಿ (ನಾ)= ಬಿಟ್ಟಿಧಂದ್ಯಾ (ನೋಡಿರಿ)

ಬಿಟ್ಟಿ ಹೊರು (ಕ್ರಿ)= ಕೂಲಿ ಇಲ್ಲದೆ ಹಮಾಲಿ ಮಾಡು.

ಬಿಟ್ಟುಬಿಡು (ಕ್ರಿ)= ಹೋಗಲಿ ಬಿಡು; ಕ್ಷಮಿಸು; ತ್ಯಜಿಸು; ಕಟ್ಟಿದ ದನದ ಕಣ್ಣಿ ಉಚ್ಚು.

ಬಿಡದನಾ (ನಾ)= ಬಿಡಾಡಿದನ; ಚುಕಾರಿದನ; ತುಡುಗು ದನ; ಹಾದಿ-ಬೀದಿ ಸರಗಾಡುವ ದನ.

ಬಿಡಸ್ಯಾಕು (ಕ್ರಿ)= ಭೀಟು; ಬಿಸಾಕು; ಎಸೆ.

ಬಿಡಾಡಿ (ನಾ)= ಸಂಚಾರಿ; ಅಲೆಮಾರಿ; ಚುಕಾರಿ; ತುಡುಗು.

ಬಿಡಾಲ (ನಿ)= ಬಿಡುವುದಿಲ್ಲ.

ಬಿಡಿಸು (ಕ್ರಿ)= ಕಳಚು; ಸಡಿಲಿಸು; ನಿವಾರಿಸು; ಹೋಗಲಾಡಿಸು; ಬಿಡುಗಡೆ ಮಾಡು.

ಬಿಡು (ಕ್ರಿ)= ತೊರೆ; ತ್ಯಜಿಸು; ಇಳಿಬಿಡು; ಜೋಲಾಡಿಸು; ಹೆಂಡತಿಯನ್ನು ಅಥವಾ ಗಂಡನನ್ನು ತೊರೆ.

ಬಿತಾಸು (ಕ್ರಿ) = ಸಂಭವಿಸು; ಭೋಗಿಸು; ಅನುಭವಿಸು; ದಿನಗಳೆ.

ಬಿತ್ತು (ಕ್ರಿ)= ಬೀಜಹಾಕು; ಬುಕ್ಕ ಅಥವಾ ಕೂರಿಗೆಯಿಂದ ಬೀಜವನ್ನು ನೆಲದಲ್ಲಿ ಸೇರಿಸು.

ಬಿತ್ತುಣ್ಕಿ (ನಾ)= ಬಿತ್ತಣಿಕೆ; ಬೀಜ ಬಿತ್ತುವಿಕೆ; ಭೂಮಿಗೆ ಬೀಜ ಸೇರಿಸುವಿಕೆ.

ಬಿತ್ತುಣ್ಕೆ ಚಾಗು (ಕ್ರಿ)= ಬೀಜ ಬಿತ್ತುವಿಕೆ ಸಾಗು, ಪ್ರಾರಂಭವಾಗು, ಮುಹೂರ್ತ ಗೊಳ್ಳು.

ಬಿತ್ತುಣ್ಕೆ ಬೆಳೀತು (ಕ್ರಿ)= ಬೀಜ ಬಿತ್ತುವಿಕೆ ಸಮಾರೋಪಗೊಂಡಿತು; ಮುಕ್ತಾಯ ಗೊಂಡಿತು.

ಬಿತ್ತುಣ್ಕೆ ಸಾವಡಿ (ನಾ)= ಬಿತ್ತಣಿಕೆ ಕಾರ್ಯದಲ್ಲಿ ಪಾಲುದಾರಿಕೆ.

ಬಿತ್ರಾಸು (ಕ್ರಿ)= ತಿರುಗಿಬೀಳು.

ಬಿದಾಯಿ (ನಾ) ಉ.= ಅಗಲುವಿಕೆ.

ಬಿದುರು (ನಾ)= ಬೊಂಬಿನ ಮರ ಮತ್ತು ಬೊಂಬು.

ಬಿದುರು ಕ್ವಾಟ (ನಾ)= ಬೀದರ ನಗರ ಹಾಗೂ ಬೀದರ ಕೋಟೆ.

ಬಿದ್ದು ಬಾ (ಕ್ರಿ)= ಮಲಗಿ ಬಾ; ಅಡ್ಡಬಿದ್ದು ಬಾ; ಹಾದರ ಮಾಡಿ ಬಾ.

ಬಿದ್ದುರ್ಬೀ (ಅ)= ಬಿದ್ದರೂ; ನೆಲಕಂಡರೂ; ಅಂಗಾತ ಬಿದ್ದರೂ (ಗಾದೆ:- ಬಿದ್ದುರ್ಬೀ ಮೂಗು ಖಿಡಿ ಅಂಬಾಂವ। ಬಿದ್ದುರ್ಬೀ ಮೀಸಿಗಿ ಮಣ್ಣಾಗಿಲ್ಲಂಬಾಂವ!).

ಬಿದ್ದೇಶಿ (ನಾ)= ಬೇರೆ ದೇಶದವನು (ಳು); ದಿಕ್ಕಿಲ್ಲದವನು (ಳು), ನೆಲೆ ಇಲ್ಲದವನು/ಳು (ಬೈಗಳು).

ಬಿನ್ನಾ (ನಾ)= ಬಿನ್ನಹ; ಔತಣಕೂಟದ ಆಮಂತ್ರಣ; ಜಂಗಮರಿಗೆ ಔತಣಕೂಟದ ಆಮಂತ್ರಣ.

ಬಿಬ್ಬಿಬಾಚಯ್ಯ (ನಾ)= ಒಬ್ಬ ಶರಣನ ಹೆಸರು.

ಬಿಮ್ಮು (ನಾ)= ಗರ್ವ; ಅಹಂಕಾರ; ಸೊಕ್ಕು.

ಬಿಯ್ಯಾ (ನಾ)= ಭಯ್ಯಾ; ಬಂಧು. (ಲಂಬಾಣಿ ಭಾಷೆ)

ಬಿರಗೊಂಡ (ನಾ)= ಬೀರಗೊಂಡ; ವೀರ ಗೊಂಡ; ಗೊಂಡ (ಧನಗರ) ಸಮಾಜದ ಮಹಾಪುರುಷ.

ಬಿರಡಿ (ನಾ)= ಮಲ್ಲೂಸ್ತ್ರವುಳ್ಳ ಮೊಳೆ; ಬಿರ್ಡಿ.

ಬಿರಾಕು (ನಾ)= ಬ್ರೇಕು; ತಡೆ.

ಬಿರಾಡ (ನಾ)= ಭೂಗಂದಾಯ; ತಸೀಲು. (ಜಾನಪದ ಪ್ರಾಸ:- ಸಂಗ್ಯಾ ನಿಂಗ್ಯಾ ಕೂಡಿ। ಕರ್ಕಿ ಹೊಲಾ ಮಾಡಿ। ಬಿರಾಡ ಬಂತೊ ಸಂಗ್ಯಾ। ಓಡಿ ಹೋಗೋ ನಿಂಗ್ಯಾ।।)

ಬಿರಾದಾರ (ನಾ)= ಅಣ್ಣ; ತಮ್ಮ; ಭಾಗಾದಿ ಗೌಡನ ಭಾಗಾದಿ.

ಬಿರಾದರಿ (ನಾ)= ಅಣ್ಣತಮ್ಮಿಕೆ; ಭಾಗಾದಿ; ಭಾಗಾದಿತನ.

ಬಿರಿ (ವಿ)= ಕಠಿಣ; ಬಿಗಿದು ಕಟ್ಟಿದ; ಬಿಗಿದ; ಬಿಗಿಯಾದ.

ಬಿರುಡಿ (ನಾ)= ಬಿರಡಿ; ಬಿರ್ಡಿ ಮಲ್ಲೂಸ್ತ್ರ ವುಳ್ಳ ಮೊಳೆ.

ಬಿರೆಡ್ಡು (ನಾ) ಇಂ.= ಬ್ರೆಡ್ಡು, ಡಬಲ್ ರೊಟ್ಟಿ.

ಬಿರೇಂಜಿ (ನಾ)= ಬಿರ್ಯಾನಿ; ಬಗಾರನ್ನ; ಪೋಣಿದನ್ನ; ಮಾಂಸ ಸೇರಿಸಿದ ಬಗಾರನ್ನ.

ಬಿರೇಕು (ನಾ) ಇಂ.= ಬ್ರೇಕು; ಓಡುವ ವಾಹನವನ್ನು ತಡೆಯುವ ಸಾಧನ.

ಬಿರೇಕು ಹಾಕು (ಕ್ರಿ)= ಓಡುವ ವಾಹನವನ್ನು ತಡೆ.

ಬಿರ್ಕಾಸಿ (ಅ)= ಬಿರ್ರನೆ; ಬಿರ್ರೆಂದು ಸಪ್ಪಳ ಬರುವಂತೆ; ಬೀಸಿ.

ಬಿರ್ಗಣ್ಣು (ನಾ)= ಬಿರುಗಣ್ಣು; ದಿಟ್ಟಿಸಿ ನೋಡುವ ಕಣ್ಣು.

ಬಿರ್ಘಾಳಿ (ನಾ)= ಬಿರುಗಾಳಿ; ಬಿರುಸಾಗಿ ಬೀಸುವ ಗಾಳಿ.

ಬಿರ್ಡಿ (ನಾ)= ಬಿರಡಿ (ನೋಡಿರಿ)

ಬಿರ್ಯಾನಿ (ನಾ) ಉ.= ಬಿರೇಂಜಿ; ಬಗಾರನ್ನ; ಮಾಂಸ ಮಿಶ್ರಿತ ಬಗಾರನ್ನ.

ಬಿಲವಾರ (ನಾ)= ಚಿನ್ನದ ಬಳೆ; ಬಿಲ್ವಾರ; ಬಿಂದಲಿ.

ಬಿಲಾಕ (ನಾ)= ಕಪ್ಪು ವ್ಯವಹಾರ; ಕಳ್ಳಸಂತೆ.

ಬಿಲೇಡು (ನಾ) ಇಂ.= ಬ್ಲೇಡು; ರೇಜರ್ ಪತ್ತಿ.

ಬಿಲ್ಕುಲ್ (ಅ) ಉ.= ಖಚಿತವಾಗಿ; ಪೂರ್ಣವಾಗಿ; ಪೂರ್ಣಶಃ; ಬರೋಬರಿ; ಪೂರ್ತಿಯಾಗಿ.

ಬಿಲ್ಡಿಂಗ್ (ನಾ) ಇಂ.= ಕಟ್ಟಡ; ಬಂಗಲೆ.

ಬಿಲ್ಪತ್ರಿ (ನಾ)= ಬಿಲ್ವ ಪತ್ರೆ; ಬಿಲ್ವದ ಎಲೆ.

ಬಿಲ್ಲಾ (ನಾ)= ಪದಕ; ಹುದ್ದೆಯ ಗುರುತಾಗಿ ಧರಿಸುವ ಲಾಂಛನ.

ಬಿಲ್ಲಾಗು (ಕ್ರಿ)= ಬಾಗು; ಬಗ್ಗು; ಮಣಿ; ಮುದಿಯಾಗು.

ಬಿಲ್ಲು (ನಾ)= ಬಾಣಹೂಡಿ ಎಸೆವ ಸಾಧನ; ಧನುಸ್ಸು.

ಬಿಲ್ವಾರ (ನಾ)= ಚಿನ್ನದ ಬಳೆ; ಬಿಲವಾರ; ಬಿಂದಲಿ.

ಬಿಶಾತು (ನಾ)= ಧೈರ್ಯ; ಹಿಮ್ಮತ್ತು (ಉದಾ:- ನನಗ ಕೆಣಕಾದು ಅವುಂದೇನು ಬಿಶಾತು?).

ಬಿಸಾಕಲ್ಘೂಟ (ನಾ)= ಬೀಸುವ ಕಲ್ಲಿನ ಕೈಹಿಡಿಕೆಯ ಗೂಟ, ಗುಂಜಿ.

ಬಿಸಾಕು (ಕ್ರಿ)= ಎಸೆ.

ಬಿಸಾತು (ನಾ) ಉ.= ಬಿಶಾತು; ಹಿಮ್ಮತ್ತು (ಬಿಶಾತು-ನೋಡಿರಿ).

ಬಿಸಿ (ನಾ)= ಕಾವು; ಸೆಕೆ; ಶಾಖ; ಶಾಖದಿಂದ ಕೂಡಿದ್ದು.

ಬಿಸಿ ನೀರು (ನಾ)= ಕಾಯಿಸಿದ ನೀರು; ಸುಡುವ ನೀರು.

ಬಿಸಿಬಿಸಿ ಹೋಳ್ಗಿ (ನು)= ಜೋರಾದ ಏಟು; ಬಲವಾದ ಪೆಟ್ಟು; ಸುಡು ಸುಡು ಹೋಳಿಗೆ.

ಬಿಸಿ ಮಾಡು (ಕ್ರಿ)= ಕಾಯಿಸು; ಬಿಸಿಗೊಳಿಸು.

ಬಿಸಿರಕ್ತ (ನು)= ಉತ್ಸಾಹ; ಹುರುಪು; ಯೌವನ.

ಬಿಸಿಹತ್ತು (ಕ್ರಿ) = ಸೆಕೆ ತಟ್ಟು.

ಬಿಸುದಾಣಿ (ನಾ)= ಕೇರಿ, ಸ್ವಚ್ಛಗೊಳಿಸಿ, ಬೀಸಲಿಕ್ಕೆ ಅಣಿಗೊಳಿಸಿದ ಕಾಳು.

ಬಿಸುಲು (ನಾ)= ಬಿಸಿಲು; ಸೂರ್ಯನ ಸುಡುಸುಡುವ ಬಿಸಿಲು.

ಬಿಸುಲೇರಿ (ಅ)= ಸೂರ್ಯನು ಮೇಲೇರಿ.

ಬಿಸುಲ್ಗುದುರಿ (ನಾ)= ಬಿಸಿಲೆಂಬ ಕುದುರೆ; ಮೃಗಜಲ.

ಬಿಸುಲ್ಪಣ್ಣು (ನಾ)= ಬಿಸಿಲಿನ ತಾಪ.

ಬಿಸುಲ್ಹಣ್ಣುಣು (ಕ್ರಿ)= ಬಿಸಿಲಿನ ತಾಪವನ್ನು ಅಭಿಭವಿಸು.

ಬಿಸ್ಕಲ್ಲು (ನಾ)= ಕಾಳು ಬೀಸುವ ಕಲ್ಲು.

ಬಿಸ್ಕೋಟು (ನಾ) ಇಂ.= ಬಿಸ್ಕತ್ತು.

ಬಿಸ್ವಾಕು (ಕ್ರಿ)= ಬಿಸಾಕು; ಎಸೆ (ಬ್ರಾಹ್ಮಣ ಭಾಷೆ)

ಬಿಸ್ದಾಣಿ (ನಾ)= ಬಿಸುದಾಣಿ (ನೋಡಿರಿ); ಬೀಸಲು ಅಣಿಗೊಳಿಸಿದ ಕಾಳು.

ಬಿಸ್ಮಿಲ್ಲಾ ಖಾನಿ (ನಾ)= ಶಾಲೆಯ ಓದಿನ ಪ್ರಾರಂಭೋತ್ಸವ.

ಬಿಳಿ (ವಿ)= ಬಿಳುಪಾದ; ಬೆಳ್ಳಗಿನ ಬಣ್ಣದ.

ಬಿಳಿಜ್ವಾಳಾ (ನಾ)= ಬಿಳಿಬಣ್ಣದ ಜೋಳ.

ಬಿಳಿಜ್ವಾಳ್ದಾಗ ಕಾಡ್ಗಿಜ್ವಾಳಾ (ಗಾದೆ)= ಸಜ್ಜನರ ಮಧ್ಯ ದುಷ್ಟವ್ಯಕ್ತಿ.

ಬಿಳಿ ಸೆರಗು (ನಾ)= ಸ್ತ್ರೀಯರಿಗೆ ಬಿಳಿಬಣ್ಣದ ಸ್ರಾವ ಉಂಟಾಗುವಿಕೆ.

ಬಿಳುಚು (ಕ್ರಿ)= ಕಾಂತಿಯನ್ನು ಕಳೆದುಕೊ (ಉದಾ:- ಯಾಕೋ ತಮ್ಮಾ, ಮಾರಿ ಬಿಳುಚ್ಯಾದ?)

ಬಿಳುಪಾಗು (ಕ್ರಿ)= ಬೆಳ್ಳಗಾಗು.

ಬಿಳುಪು (ನಾ)= ಬಿಳಿಯ ಬಣ್ಣ.

ಬೀ, ಭೀ, (ಅ)= ಕೂಡ; ಭೀ (ನಾಬೀ, ನೀಬೀ, ಅಂವಾಬೀ, ಇಕಿಬೀ ಎಂಬಂತೆ)

ಬೀಂ, (ವಾ)= ತೊಲೆ; ಸರ.

ಬೀಗ (ನಾ)= ಕೀಲಿ; ಮಕ್ಕಳ ಮದುವೆ ಮುಖಾಂತರ ಸಂಬಂಧ ಬೆಳೆಸಿದವನು; ಅಳಿಯ ಅಥವಾ ಸೊಸೆಯ ತಂದೆ; ನೆಂಟ.

ಬೀಗತಾನ (ನಾ)= ಬೀಗತನ; ನೆಂಟಸ್ತಿಕೆ.

ಬೀಗತಾನ ಮಾಡು (ಕ್ರಿ)= ಹೆಣ್ಣು-ಗಂಡು ಕೊಡು-ತರುವ ಮೂಲಕ ಸಂಬಂಧ ಜೋಡಿಸು; ನೆಂಟಸ್ತನ ಕುದುರಿಸು.

ಬೀಗತಿ (ನಾ)= ಅಳಿಯ ಅಥವಾ ಸೊಸೆಯ ತಾಯಿ; ನೆಂಟತಿ.

ಬೀಜ (ನಾ)= ಧಾನ್ಯದ ಕಾಳು; ಬಿತ್ತಲು ಕಾದಿರಿಸಿದ ಧಾನ್ಯದ ಕಾಳು; ಮೂಲ; ವೀರ್ಯ; ಸಂತಾನ.

ಬೀಜದ ತೆನಿ (ನಾ)= ಉತ್ತಮ ಕಾಳುಳ್ಳ, ಬೀಜಕ್ಕಾಗಿ ಕಾದಿರಿಸಿದ ಜೋಳದ ತೆನೆ.

ಬೀಜದ ಹೋರಿ (ನಾ)= ತರಡಿನ ಬೀಜ ತೆಗೆಯದ, ಕಾದಿರಿಸಿದ, ಆಕಳಿನ ಗಂಡು ಸಂತಾನ.

ಬೀಜಧಾಂಗ ಬೆಳಿ (ನ)= ಮೂಲ ಕಾಳಿನಂತೆ ಮುಂದಿನ ಬೆಳೆ; ತಂದೆಯಂತೆ ಮಗ; ತಾಯಿಯಂತೆ ಮಗಳು; ಗುರುವಿನಂತೆ ಶಿಷ್ಯ ಇತ್ಯಾದಿ.

ಬೀಜಮಂತ್ರ (ನಾ)= ರಹಸ್ಯವಾದ ಮಾತು; ರಹಸ್ಯವಾದ ಅರ್ಥವುಳ್ಳ ಮಂತ್ರ.

ಬೀಜಾಭರಣಾ (ನಾ)= ಬೀಜ ಮತ್ತು ಬಿತ್ತುವಿಕೆಯ ಇತರ ಸಾಮಗ್ರಿ.

ಬೀಡಾ (ನಾ)= ಪಾನಬಿಡಾ; ಕಾಚು; ಸುಣ್ಣ; ಅಡಕೆ, ಇತ್ಯಾದಿ ಹಾಕಿ ಸಿದ್ಧಪಡಿಸಿದ ವೀಳ್ಯದೆಲೆ.

ಬೀಡಿ (ನಾ)= ಭೂಮಿಯ ಬಿರುಕು; ಎಲೆ ಯಿಂದ ತಯಾರಿಸಿದ ಹೊಗೆಬತ್ತಿ; ಚುಟ್ಟ.

ಬೀಡಿಕಿ (ನಾ)= ಬೀಡ್ಕಿ; ಮದುವೆ, ಶೋಭನಾದಿ ಮಂಗಳ ಕಾರ್ಯಕ್ಕೆ ಬಂದ

ಬೀಗರು-ಬಿಜ್ಜರು ಬೀಡು ಬಿಟ್ಟಮನೆ; ಅತಿಥಿ ಗ್ರಹ; ಬೀಗರು; ಬಿಡಾರ; ಶಿಬಿರ (ಶಿಶುಪ್ರಾಸ:- ಹತ್ತಿಕಟ್ಗಿ। ಬತ್ತಿಕಟ್ಗೆ। ಬಾವ್ನೂರು। ಬಸವಾ ನೂರು। ಕೈ ಕೈ। ಧೂಳಗೈ। ಪಂಚಂ। ಪಗಡಂ। ಎದಿಮ್ಯಾಲ್ ಚುಕ್ಕಿ। ಧಡಲ್‌ಧುಡಲ್। ಫಾಮ್ಗೇ ರಡಕ್। ಏನ್‌ಬೇಕ್। ಬೀಡಿಕಿ।)

ಬೀಡ್ಕಿ (ನಾ)= ಬೀಡಿಕಿ (ನೋಡಿರಿ)

ಬೀಡಿಬಿಗಿ ಕ್ರಿ)= ಚುಟ್ಟ ಸೇದು; ಹೊಗೆ ಬತ್ತಿ ಸೇದು; ಧೂಮ್ರಪಾನ ಮಾಡು.

ಬೀಡಿ ಬಿಡು (ಕ್ರಿ)= ಬಿರುಕುಂಟಾಗು. (ಉದಾ:- ಜ್ವಾಳದ್ಸಾಲಿನಾಗೆಲ್ಲಾ ಬೀಡಿ ಬಿಟ್ಟಾವ).

ಬೀದರ (ನಾ)= ಐತಿಹಾಸಿಕ ಬೀದರ ನಗರಕೋಟೆ; ಬೀದರ ನಗರ; ಬಿದುರುಕ್ವಾಟಿ.

ಬೀದಿಧೀಪಾ (ನಾ)= ಬೀದಿಯಲ್ಲಿ ಕಂಭಕ್ಕೆ ತೂಗುಹಾಕಿದ ದೀಪ; ಕಂಭದ ವಿದ್ಯುದ್ದೀಪ.

ಬೀದಿಪಾಲಾ (ನಾ)= ಬೀದಿಪಾಲು; ಚೆಲ್ಲುವಿಕೆ; ಹರಿಹಂಚುವಿಕೆ; ಕಾಳು; ಹಾಲು; ನೀರು ಇತ್ಯಾದಿ ಬೀದಿಯಲ್ಲಿ ಚೆಲ್ಲಾಪಿಲ್ಲಿಯಾಗುವಿಕೆ, ಹರಡುವಿಕೆ.

ಬೀದಿಪಾಲಾಮಾಡು (ಕ್ರಿ)= ಚೆಲ್ಲು; ಬೀದಿಯಲ್ಲಿ ಕಾಳು, ಹಾಲು, ನೀರು ಇತ್ಯಾದಿ ಚೆಲ್ಲಿ ಹೋಗು; ಬೀದಿಯಲ್ಲಿ ಚೆಲ್ಲಿ ಹೋಗು; ಚೆಲ್ಲಾಪಿಲ್ಲಿಯಾಗು.

ಬೀದಿ ಬಸವಿ (ನಾ)= ಸ್ವಚ್ಛಂದ ಹೆಂಗಸು; ಸೂಳೆ.

ಬೀದಿಭಿಕಾರಿ (ನಾ)= ಬೇಡಿ ತಿಂಬುವವನು; ಭಿಕ್ಷುಕ (ಬೈಗುಳ).

ಬೀಬಾ (ನಾ) ಉ.= ಗೇರು ಕಾಯಿ ಮತ್ತು ಬೀಜ; ಗೇರು ಬೀಜ; ಕಾಜು; ಕ್ಯಾರಾಳ ಮತ್ತು ಅದರ ಬೀಜ; ಕಾಡುಗೇರು.

ಬೀಬಿ (ನಾ) ಉ.= ಹೆಂಡತಿ; ಪತ್ನಿ.

ಬೀಮು (ನಾ) ಉ.= ಮಾಳಿಗೆಗೆ ಬಳಸುವ ಕಬ್ಬಿಣದ ಸರ; ಆರ್ಸಿಸಿ ಸರ.

ಬೀಯಂ (ನಾ) ತೆ.= ಬೀಜ; ಅಕ್ಕಿ.

ಬೀರಗೊಂಡ (ನಾ)= ಕುರುಬ (ಧನಗರ) ಸಮಾಜದ ಮಹಾ ಪುರುಷನ ಹೆಸರು; ಬೀರಾದೇವ್ರು.

ಬೀರಾದೇವ್ರು (ನಾ)= ಬೀರಗೊಂಡ (ನೋಡಿರಿ).

ಬೀರು (ಕ್ರಿ)= ಹಂಚು; ವಿತರಣೆ ಮಾಡು; ಮನೆ ಮನೆ ತಿರುಗಿ ಗುಗ್ಗರಿ, ಬೆಲ್ಲ, ಮುದ್ದಿ ಇತ್ಯಾದಿಯನ್ನು ಹಂಚು; ಪ್ರಸಾದ ವಿತರಣೆ ಮಾಡು.

ಬೀಸ್ (ನಾ)= ಇಪ್ಪತ್ತು.

ಬೀಸಾಕಲ್ಲು (ನಾ)= ಕಾಳು ಅರೆದು ಹಿಟ್ಟು ಮಾಡುವ ಜೋಡಿ ಕಲ್ಲು.

ಬೀಸಾಕಲ್ಗೂಟ (ನಾ)= ಬೀಸುವ ಕಲ್ಲಿನ ಹಿಡಿಕೆ ಆಧಾರದ ಗುಂಜಿ, ಗೂಟ.

ಬೀಸೀ (ನಾ) ಇಂ.= ಪಾಲುದಾರಿಕೆಯ ಲೇವಾದೇವಿ.

ಬೀಸು (ಕ್ರಿ)= ಧಾನ್ಯದ ಕಾಳುಗಳನ್ನು ಬೀಸುವ ಕಲ್ಲಿನಿಂದ ಅರೆದು ಹಿಟ್ಟುಮಾಡು; ಕತ್ತಿ; ಕೋಲು; ಕವಣೆ ಇತ್ಯಾದಿಯನ್ನು ತನ್ನ ಸುತ್ತ, ಸುತ್ತು ಹೊಡೆಸು; ಎಸೆ; ಬಿಸುಡು; ಗಾಳಿ ಹಾಕು.

ಬೀಸುಣ್ಕಿ (ನಾ)= ಬೀಸಣಿಕೆ; ಗಾಳಿ ಬೀಸಿ ಕೊಳ್ಳುವ ಸಾಧನ; ಫಂಖಾ; ಬೀಸುವಿಕೆ; ಕಾಳು ಬೀಸುವಿಕೆ.

ಬೀಸುಣ್ಕಿ ಹಾಕು (ಕ್ರಿ)= ಗಾಳಿ ಬೀಸುವಂತೆ ಮಾಡು.

ಬೀಸುದಾಣಿ (ನಾ)= ಬೀಸಲು ಹಸನು ಗೊಳಿಸಿಟ್ಟ ಕಾಳು.

ಬೀಸುಳಿ (ನಾ)= ಕಬ್ಬಿನ ಗಾಣದ ದಂಡ ಕೋಲು, ಸುತ್ತು ಹೊಡೆವ ಕೋಲು; ಗಾಣಕ್ಕೆ ಹೊಂದಿಸಿದ ಉದ್ದನೆಯ ಕೋಲು.

ಬೀಳು (ಕ್ರಿ)= ಕುಸಿ; ಮಣಿ; ಉದುರು; ಸಿಡಿಲು ಬಡಿ; ಜಿಗಿ; ಎರಗು.

ಬೀಳು ಭೀಳು (ಕ್ರಿ)= ಕೃಷಿ ಭೂಮಿ ಹುಲ್ಲು ಬೆಳೆದು ಸಾಗುವಳಿಗೆ ಬಾರದಂತಾಗು.

ಬೀಳ್ಸೊಪ್ಪ (ನಾ)= ಬೀಳಿನ ಹುಲ್ಲು; ಅಗ್ಗದ್ದು; ಹೀನವಾದದ್ದು (ಬೈಗುಳ).

ಬೀಳ್ಹೊಲ (ನಾ)= ಸಾಗುವಳಿ ಮಾಡಲಾರದ ಹೊಲ; ಪಡಾವು ಬಿದ್ದ ಹೊಲ.

ಬುಂದಿ (ನಾ)= ಕಡಲೆಹಿಟ್ಟು, ನೀರನ್ನು ಬೆರೆಸಿ ಕರಿದ ಉಂಡಿಯ ಕಾಳು.

ಬುಕಣಿ (ನಾ)= ಪುಡಿ; ಹುಡಿ; ಚೂರ್ಣ.

ಬುಕಣಿ ಖಾರ (ನಾ)= ಮೆಣಸಿನಪುಡಿ; ಪುಡಿಖಾರ.

ಬುಕಣಿಮಾಡು (ನಾ)= ಪುಡಿಮಾಡು; ಹುಡಿಗೊಳಿಸು; ಅರೆದು ಸಣ್ಣಗೊಳಿಸು.

ಬುಕಿಟ್ಟು (ನಾ)= ಬುಕ್ಕಿಟ್ಟು (ನೋಡಿರಿ)

ಬುಕ್ಕಾ (ನಾ)= ಬೀಜ ಬಿತ್ತುವ ಉಪಕರಣ; ಖಾಲಿ ಮುಷ್ಟಿ.

ಬುಕ್ಕಿ (ನಾ) ಇಂ.= ಮಟ್ಕಾಜೂಜಿನ ನಂಬರು ಬರೆದುಕೊಳ್ಳುವವನು; ನೋಂದಣಿ ಮಾಡಿ ಕೊಳ್ಳುವವನು.

ಬುಕ್ಕಿಗಾರ (ನಾ)= ಕುಂಕುಮ, ಬುಕ್ಕಿಟ್ಟು ಇತ್ಯಾದಿಗಳ ಮಾರಾಟಗಾರ;

ಬುಕ್ಕಿಟ್ಟು (ನಾ)= ಉತ್ಸವ ಸಮಾರಂಭಾದಿ ಗಳಲ್ಲಿ ಉಪಯೋಗಿಸಲ್ಪಡುವ ಒಂದು ಬಗೆಯ ಸುಗಂಧಿ ಪುಡಿ.

ಬುಕ್ಕಿ ನೀರ್ಕುಡಿ (ನು)= ತಿಂದು ದಾಹ ತೀರಿಸಿಕೊ; ಗಬಗಬ ನುಂಗಿ ಗಟಗಟ ನೀರು ಕುಡಿ; ತಿಂದು ತೇಗು (ಬೈಗುಳ)

ಬುಕ್ಣಿ (ನಾ)= ಬುಕಣಿ; ಹುಡಿ; ಪುಡಿ; ಚೂರ್ಣ.

ಬುಕ್ಣಿ ಖಾರಾ (ನಾ)= ಪುಡಿಖಾರಾ; ಅರೆದ ಮೆಣಸಿನ ಹುಡಿ.

ಬುಕ್ಣಿಮಾಡು (ಕ್ರಿ)= ಅರೆದು ಸಣ್ಣ ಮಾಡು; ಚೂರ್ಣಗೊಳಿಸು; ಪುಡಿಗೊಳಿಸು.

ಬುಗುಟಿ (ನಾ)= ಭುಗುಟಿ; ಪೆಟ್ಟಿನಿಂದ ಹಣೆ ಅಥವಾ ತಲೆಯ ಮೇಲೆ ಉಂಟಾದ ಬಾವು, ಊತ.

ಬುಗುಟಿ ಬರು (ಕ್ರಿ)= ಪೆಟ್ಟು ಬಡಿದು ಬುಗುಟ ಉಂಟಾಗು.

ಬುಗುಡಿ (ನಾ)= ಭುಗುಡಿ; ಕಿವಿಯ ಆಭರಣ (ಗಾದೆ:- ನೆಗಡಿ ಬ್ಯಾನಿ ಅಲ್ಲ; ಬುಗುಡಿ ವಸ್ತಾ ಅಲ್ಲ!)

ಬುಗ್ಗಿ (ನಾ)= ಬುಗ್ಗೆ; ನೀರಿನ ಚಿಲುಮೆ; ಒರತೆ.

ಬುಟ್ಟಿ (ನಾ)= ಲಕ್ಕೆ, ಸಿಂಧಿ ಅಥವಾ ಬಿದಿರಿನಿಂದ ತಯಾರಿಸಿದ, ಕಾಳು ಇತ್ಯಾದಿ ತುಂಬಿಡುವ ಬುಟ್ಟಿ.

ಬುಡ (ನಾ)= ಮರದ ಅಡಿಭಾಗ; ಬುಟ್ಟಿಯ ಕೆಳಭಾಗ; ವಸ್ತುವಿನ ತಳಭಾಗ.

ಬುಡ ಘೂಟಾ (ನಾ)= ಬೀಸು ಕಲ್ಲಿನ ಮಧ್ಯದ ಗೂಟ; ಹೊಕ್ಕುಳ ಗೂಟ.

ಬುಡದಾಗ= ಬುಡದಲ್ಲಿ.

ಬುಡಾ (ನಾ)= ಬುಡ; ಬೊಡ್ಡೆ.

ಬುಡಾ ಇಲ್ದ ಗಿಡ (ನು)= ಮನುಷ್ಯ.

ಬುಡಾಸು (ಕ್ರಿ)= ಮುಳುಗಿಸು; ಡುಬಾಸು; ನೀರಿನಿಂದ ಮೇಲೆ ಬರದಂತೆ ಮಾಡು; ಸಾಲವನ್ನು ಹಿಂತಿರುಗಿಸದಿರು.

ಬುಡುಕ (ಅ)= ಕೆಳಗೆ; ತೆಳಗೆ; ತಳದಲ್ಲಿ; ಬುಡದಲ್ಲಿ.

ಬುಡುಕ್ಬುಡುಕ್ (ನಾ)= ನೀರನ್ನು ಕೊಡ ಮುಳುಗಿಸಿ ತುಂಬುವ ಕ್ರಿಯೆಯ ಸದ್ದು.

ಬುಡುದೆತ್ತು (ನಾ)= ಬುಡ್ತಿ ಎತ್ತು; ಬಂಡಿ ಅಥವಾ ಗಳೆಗೆ ಹೂಡಿದ ನುರಿತ ಎತ್ತು.

ಬುಡು ಬುಡುಕಿ (ನಾ)= ಸಂಚಾರಿ ಜೋಯಿಸರ ಕೈಯಲ್ಲಿರುವ ಚಿಕ್ಕ ವಾದ್ಯ, ಡಮರು.

ಬುಡು ಬುಡುಕ್ಯಾ (ನಾ)= ಡಮರು ಬಾರಿಸುತ್ತ ರಾತ್ರಿ ಸಮಯದಲ್ಲಿ ಮನೆ ಮನೆ ಸುತ್ತಾಡಿ ಭವಿಷ್ಯ ಹೇಳುವ ಸಂಚಾರಿ ಜೋಯಿಸ. (ಗಾದೆ:- ಬುಡುಬುಡುಕ್ಯಾ ನ್ಮಾತು ಬುಡದಾಗೆ ಸುಳ್ಳು.)

ಬುಡ್ಕ (ಅ)= ಬುಡುಕ (ನೋಡಿರಿ)

ಬುಡ್ಡ (ನಾ)= ಗಿಡ್ಡ; ಕುಳ್ಳ; ಎತ್ತರ ಕಡಿಮೆ ವುಳ್ಳವನು.

ಬುಡ್ಡಾ (ನಾ) ಉ.= ಮುದುಕ.

ಬುಡ್ಡಿ (ನಾ)= ಗಿಡ್ಡಿ; ಕುಳ್ಳೀ; ಕಡಿಮೆ ಎತ್ತರದವಳು; ಮುದುಕಿ; ಉದುರಿದ ಕಡಲೆಕಾಯಿ.

ಬುಡ್ತಿ (ವಿ)= ಬುಡದ; ತಳದ; ಮೂಲದ; ಬುನಾದಿಯ.

ಬುಡ್ತಿ ಎತ್ತು (ನಾ)= ನುರಿತ ಎತ್ತು; ಗಳೆಕ್ಕೆ ಹೂಡಿದ ಬುಡದೆತ್ತು.

ಬುಡ್ತಿಲಿಂದ (ಅ)= ತಳದಿಂದ; ಬುಡದಿಂದ; ಮೂಲದಿಂದ; ಪ್ರಾರಂಭದಿಂದ; ಮೊದಲಿನಿಂದ.

ಬುತ್ತಿ (ನಾ)= ಹೊಲಕ್ಕೆ ಅಥವಾ ಊರಿಗೆ ಹೊರಟಾಗ ಸಂಗಡ ಒಯ್ಯುವ ರೊಟ್ಟಿ ಗಂಟು, ಊಟದ ಗಂಟು. (ಗಾದೆ:- ಚುಕ್ಕಿ ಹೊಂಡ್ರಾಟ್ಗೆ ಬುತ್ತಿ ಕಟ್ಟುದ್ಬರ್ಬೀ ನಿಚ್ಚದ ಯಾಳ್ಯಾ ತಪ್ಪಾಂಗಿಲ್ಲ); ಚಿಮ್ಮಲಾದ ಚೆಂಡನ್ನು ಅಥವಾ ಚಿಣಿಯನ್ನು ಬೊಗಸೆ ಬಡ್ಡಿ ಹಿಡಿಯುವಿಕೆ.

ಬುತ್ತಿ ಹಿಡಿ (ಕ್ರಿ)= ಚಿಮ್ಮಲಾದ ಚೆಂಡನ್ನು ಅಥವಾ ಚಿಣಿಯನ್ನು ಕೆಳಗೆ ಬೀಳದಂತೆ ಬೊಗಸೆ ಒಡ್ಡಿ ಹಿಡಿದುಕೊ.

ಬುತ್ಯಾ (ನಾ)= ಬುತ್ತಿ ಹಿಡಿಯುವವನು; ಕ್ರಿಕೆಟ್ಟಿನ ಚೆಂಡನ್ನು ಬೊಗಸೆಯಲ್ಲಿ ಹಿಡಿಯುವವನು; ಚಿಣಿಯನ್ನು ಬೊಗಸೆಯಲ್ಲಿ ಹಿಡಿಯುವವನು.

ಬುದಾರ (ನಾ)= ಬುಧವಾರ; ಒಂದು ಹಳ್ಳಿಯ ಹೆಸರು.

ಬುದುವಾರ (ನಾ)= ಬುಧವಾರ.

ಬುದ್ಗೇಡಿ (ನಾ)= ಬುದ್ಧಿಗೇಡಿ; ತಿಳಿಗೇಡಿ; ಬುದ್ಧಿ ಇಲ್ಲದವನು.

ಬುದ್ದಲಿ (ನಾ)= ಬುದ್ಲಿ; ಪ್ರಾಚೀನ ಕಾಲದಲ್ಲಿ ಒಳ್ಳೆಣ್ಣೆ ತುಂಬಲು ಬಳಸುತ್ತಿದ್ದ

ತೊಗಲಿನ ಸಾಧನ. (ವಚನ:- ನಮ್ಮ ಬಸವಣ್ಣನ ತೊಗಲು ಏನೇನಾಯಿತು? ತುಪ್ಪಕ್ಕೆ ಸಿದ್ಧಿಯಾಯಿತು! ಎಣ್ಣೆಗೆ ಬುದ್ದಲಿಯಾಯಿತು! -ಅಂಬಿಗರ ಚೌಡಯ್ಯ)

ಬುದ್ವಿ (ನಾ)= ಬುದ್ಧಿ; ಹಿರಿಯರನ್ನು, ಪೂಜ್ಯರನ್ನು ಗೌರವದಿಂದ ಸಂಬೋಧಿಸುವ ಪದ.

ಬುದ್ವಿವಂತ (ನಾ)= ಬುದ್ಧಿವಂತ; ಬುದ್ಧಿಯುಳ್ಳವನು.

ಬುದ್ಧ (ನಾ)= ಮಹಾತ್ಮಾ ಗೌತಮ ಬುದ್ಧ; ಬೌದ್ಧ ಧರ್ಮ ಸಂಸ್ಥಾಪಕ; ತಿಳಿದವನು; ಜಾಣನು.

ಬುದ್ಧಂ ಶರಣಂ ಗಚ್ಛಾಮಿ= ಬುದ್ಧನಿಗೆ ಶರಣು ಹೋಗುತ್ತೇನೆ.

ಬುದ್ಧೂ (ನಾ)= ಬುದ್ಧಿಗೇಡಿ; ತಿಳಿಗೇಡಿ; ಅರಿವುಗೇಡಿ.

ಬುದ್ಲಿ (ನಾ)= ಬುದ್ದಲಿ; ಪ್ರಾಚೀನ ಕಾಲದ ಎಣ್ಣೆ ತುಂಬುವ ತೊಗಲಿನ ಸಾಧನ (ಬುದ್ದಲಿ ನೋಡಿರಿ)

ಬುಧಾರ (ನಾ)= ಬುದಾರ; ಬುಧುವಾರ; ಬುಧಾರ ಹೆಸರಿನ ಒಂದು ಊರು.

ಬುನಾದಿ (ನಾ)= ಪಾಯಾ; ಅಡಿಪಾಯ; ಗೋಡೆ ಅಥವಾ ಕಟ್ಟಡದ ಅಡಿ.

ಬುನಾದಿ ಹಾಕು (ಕ್ರಿ)= ಕಟ್ಟಡಕ್ಕೆ ಭದ್ರ ಅಡಿಪಾಯ ಹಾಕು.

ಬುರುಗಿನ ಕಾಯಿ (ನಾ)= ಸಾಬೂನಿನಂತೆ ನೊರೆ ಕೊಡುವ, ಮಹಿಳೆಯರು ತಲೆ ತೊಳೆದು ಕೊಳ್ಳಲು ಬಳಸುವ ಕಾಯಿ; ಕುಂಕುಡಕಾಯಿ.

ಬುರುಗು (ನಾ)= ನೊರೆ.

ಬುರುಗುಬಸಪ್ಪ (ನು)= ಸೇಂದಿ; ಸಿಂದಿ; ಹೆಂಡ; ಶಿಶ್ನ.

ಬುರುಜು (ನಾ) ಉ.= ಗುಮ್ಮಟ; ಗುಂಬಜ; ಶಿಶ್ನ; ಪುರುಷನ ಜನನೇಂದ್ರಿಯ (ಜಾನಪದ ಗಾದೆ:- ಆಯತ್ನನ್ಗರ್ಜು, ಹಿಡಿನನ್ಬುರ್ಜು.)

ಬುರುಡಿ ಬಿಡು (ಕ್ರಿ)= ಹುಸಿ ಮಾತು ಹೇಳು; ಇಲ್ಲದ್ದನ್ನು ಇದ್ದಂತೆ ಹೇಳು.

ಬುರ್ಬುರ ಪೋಚಮ್ಮ (ನಾ)= ಮದ್ದಳೆಯಂತಹ ವಾದ್ಯವನ್ನು ಕೊರಳಿಗೆ ಹಾಕಿಕೊಂಡು, ಬುರ್ರ್ ಬುರ್ರ್ ಸದ್ದು ಮಾಡುತ್ತ, ಬೀದಿ ಸಂಚಾರ ಮಾಡಿ ಪೋಚಮ್ಮ ದೇವಿಯ ಹೆಸರಲ್ಲಿ ಭಿಕ್ಕೆ ಬೇಡುವ ಮಹಿಳೆ.

ಬುಲಾವಾ (ನಾ) ಉ.= ಕರೆ; ಆಮಂತ್ರಣ.

ಬುಲ್ಬುಲ್ (ನಾ)ಉ.= ಒಂದು ಬಗೆಯ ಸಣ್ಣ ಹಕ್ಕಿ; ಇಂಪಾದ ಸ್ವರದ ಚಿಕ್ಕಹಕ್ಕಿ.

ಬುಲ್ಲಾಕಾಯಿ (ನಾ)= ಬುಲ್ಲಿ; ಶಿಶ್ನ; ಪುರುಷನ ಜನನೇಂದ್ರಿಯ.

ಬುಲ್ಲಿ (ನಾ)= ಪುರುಷನ ಜನನೇಂದ್ರಿಯ; ಬುಲ್ಲಾ; ಶಿಶು.

ಬುವ್ವಾ (ನಾ)ತೆ.= ಬಾನ; ಬೋನ; ನೆಲ್ಲಕ್ಕಿ ಅನ್ನ (ಬಾಲಭಾಷೆ).

ಬುಳುಬುಳು (ಅ.)= ಒಂದೊಂದಾಗಿ ಉದುರುವಿಕೆ ಕ್ರಮ.

ಬುಳು ಬುಳು ಅಳು (ನು)= ಬಾಯಿ ಮಾಡದೆ ಮೌನವಾಗಿ ಕಣ್ಣೀರುದುರಿಸು.

ಬುಳು ಬುಳು ಮಾತಾಡು (ಕ್ರಿ)= ಪಿಸು ಮಾತಾಡು; ಇತರರು ಕೇಳದಂತೆ ಮಾತಾಡು.

ಬುಳುಳುಳು (ಅ)= ನಿರಂತರವಾಗಿ ನೀರು, ಎಣ್ಣೆ, ಕಾಳು, ಕುರಿಹಕ್ಕಿ ಇತ್ಯಾದಿ ಸೋರುವ ಕ್ರಿಯೆಯ ಕ್ರಮ.

ಬುಳ್ಳುಬುಳ್ಳು (ಧ್ವಿ)= ಸಡಿಲುಗೊಂಡ ಮಂಚದ ಮೇಲೆ ಕುಳಿತಾಗ, ಮಲಗಿದಾಗ ಇಲ್ಲವೆ ಹೊರಳಾಡಿದಾಗ ಉಂಟಾಗುವ ಸದ್ದು (ಹೋಳಿಹಾಡು:- ಹೊರ್ಸಿನ್ಯಾಲ್ಬುಳ್ಳು ಬುಳ್ಳು ಕೈಯಾನ ಬಳಿ ಘುಳ್ಳು ಘುಳ್ಳು).

ಬೂಂದಿ (ನಾ)= ಬುಂದಿ; ಕಡಲೆಹಿಟ್ಟಿನ ಕರಿದ ಕಾಳು; ಕಡಲೆ ಹಿಟ್ಟಿನ ಕರಿದ ಕಾಳಿನಿಂದ ತಯಾರಿಸಿದ ಉಂಡಿ.

ಬೂಚು (ನಾ)= ಬಾಟಲಿಯ ಬಿರಡೆ; ಮುಚ್ಚಳ; ಮುಚ್ಚಣಿಕೆ; ಬೆಣೆ.

ಬೂಜು (ನಾ)= ಮರ್ಯಾದೆ; ಇಜ್ಜತ್ತು; ಗೌರವ (ಕ್ರಿ) ಬೂಜಿಡು; ಮರ್ಯಾದೆ ಕಾಯು; ಮಾನ ಉಳಿಸು.

ಬೂಟಾ (ನಾ) ಉ.= ಬುಟ್ಟಾ; ಬೇಲ ಬೂಟಾ; ಕುಸುರಿ ಕೆಲಸ.

ಬೂಟಿನ್ರುಚಿ (ನಾ)= ಪಾಪಾಸಿನ ಏಟ; ಪಾದರಕ್ಷೆ ಪ್ರಹಾರ.

ಬೂಟಿನ್ರುಚಿತೋರ್ಸು (ಕ್ರಿ)= ಪಾಪಾಸು ಪೆಟ್ಟು ಹಾಕು; ಪಾದರಕ್ಷೆ ಪ್ರಹಾರ ಮಾಡು.

ಬೂಟು (ನಾ) ಇಂ.= ಪಾಪಾಸು; ಮಚ್ಚಿ.

ಬೂಟ್ಬಚ್ಚಿ ಹೊಡಿ (ಕ್ರಿ)= ಪಾಪಾಸು ಅಥವಾ ಮಚ್ಚಿಯಿಂದ ಹೊಡೆ.

ಬೂಥು (ನಾ) ಇಂ.= ಮತಗಟ್ಟೆ; ಮತದಾನ ಕೇಂದ್ರ.

ಬೂದಿ (ನಾ)= ಕಟ್ಟಿಗೆ, ಕುಳ್ಳು, ಕಸ ಇತ್ಯಾದಿ ಸುಟ್ಟ ಮೇಲೆ ಉಳಿವ ವಸ್ತು; ಭಸ್ಮ; ವಿಭೂತಿ; ಭೂತಿ.

ಬೂದಿಬಡಕ (ನಾ)= ಮೈಯೆಲ್ಲಾ ಬೂದಿ ಬಡಿದುಕೊಂಡು ಇರುವವನು; ಶಿವ; ಸನ್ಯಾಸಿ.

ಬೂದಿ ಬಣ್ಣ (ನಾ)= ಬೂದಿಯ ವರ್ಣ, ಭಸ್ಮ ವರ್ಣ.

ಬೂದುಗುಂಬಳ (ನಾ)= ಬೂದಿ ಬಣ್ಣದ ದೊಡ್ಡ ಕುಂಬಳ; ಸೆಂಡಿಗೆಗೆ ಬಳಸುವ ಕುಂಬಳ.

ಭೆ (ಅ) ಉ.= ಅಬೆ; ಎಲೆಗೆ; ಯಾಕಲೆ; ಯಾಕ್ಗ; ಯಾಕೊ.

ಬೆಂಕು (ನಾ) ಇಂ.= ಬ್ಯಾಂಕು.

ಬೆಂಚಿ (ನಾ)= ಬೆಂಚೆ; ಹರಿಯುವ ಹಳ್ಳದ ಮಗ್ಗುಲಲ್ಲಿ ಕೈಯಿಂದ ತೋಡಿ ಮಾಡಿದ ನೀರಿನ ಕುಂಡ.

ಬೆಂದಡಿ (ನಾ)= ಗೋಡೆಯ ಒಳಗೆ ತುಂಬುವ ಸಡಿಲು ಕೆಸರು ಸಣ್ಣ ಕಲ್ಲುಗಳ ಚಿಂಪು ಗರಸು ಇತ್ಯಾದಿ.

ಬೆಂದಾಡಿ (ನಾ)= ಬೆಂದಡಿ (ನೋಡಿ)

ಬೆಂದಿ (ನಾ)= ಭೂಮಿಯ ಒಂದು ಪ್ರಕಾರ.

ಬೆಕ್ಕಿನ್ಕುಲ್ಡಾಂವ (ನಾ)= ಬೆಕ್ಕಿನಂತೆ ಕಳ್ಳ ಗುಣ ವುಳ್ಳವನು.

ಬೆಕ್ಕು (ನಾ)= ಮಾರ್ಜಾಲ; ಹುಲಿ ವರ್ಗಕ್ಕೆ ಸೇರಿದ ಮಾಂಸಾಹಾರಿ ಪ್ರಾಣಿ; ಇಲಿ ಮಾಂಸ ಪ್ರೇಮಿ.

ಬೆಕ್ಕು ಅಡ್ಡ ಬಾ (ನು)= ಅಪಶಕುನ-ವುಂಟಾಗು; ಕೆಲಸ ಕೆಡು.

ಬೆಚ್ಚು (ನಾ)= ಬಚ್ಚು; ಹೊಲಗದ್ದೆಗಳಲ್ಲಿ ಹಕ್ಕಿ ಮತ್ತು ಕಾಡು ಪ್ರಾಣಿಗಳನ್ನು ಭಯಪಡಿಸಲು

ನಿಲ್ಲಿಸುವ ಮನುಷ್ಯಾಕಾರದ ಬೆದರು ಬೊಂಬೆ.

ಬೆಟಾ (ನಾ)ಉ.= ಮಗು; ಮಗ.

ಬೆಟ್ವಾವ್ರಿ (ನಾ)= ಬೆಟ್ಟದವರೆ; ಕಾಡು ತಾವರೆ.

ಬೆಡಗು (ನಾ)= ನೀರ್ಗುದ್ದಲಿ; ಹೊಲ ಕಸಿ ಮಾಡಲು ಬಳಸುವ ಅಗಲ ಬಾಯಿಯ ಚಿಕ್ಕ ಗುದ್ದಲಿ; ಒಂದು ಪ್ರಕಾರದ ಕಳೆ ತೆಗೆವ ಎಡೆ.

ಬೆಡ್ಸು (ನಾ) ಇಂ.= ಹಾಸಿಗೆ

ಬೆಡ್ರೂಮು (ನಾ)ಇಂ.= ಮಲಗುವ ಕೋಣೆ.

ಬೆಣಚ್ಗಲ್ಲು (ನಾ) ಇಂ.= ನುಣ್ಣಗಿನ ಮಿಂಚುವ ಕಲ್ಲು; ಪ್ರವಾಹದಲ್ಲಿ ಸವೆದು ಸವೆದು ನುಣ್ಣಗಾದ ಕಲ್ಲು; ಬೆಣ್ಣೆಯಂತೆ ನುಣುಪುಗೊಂಡ ಕಲ್ಲು.

ಬೆಣ್ಣಿ (ನಾ)= ಬೆಣ್ಣೆ; ನವನೀತ; ಮಸ್ಕಾ.

ಬೆಣ್ಣಿ ಕಾಸು (ಕ್ರಿ)= ಬೆಣ್ಣೆಯನ್ನು ಶಾಖ ಕೊಟ್ಟು ತುಪ್ಪ ಮಾಡು.

ಬೆಣ್ಣಿಕೊಯ್ಯಾ ಚಾಕು (ಸು.)= ಮೊಂಡು ಚಾಕು.

ಬೆಣ್ಣಿ ತಿಂದ ಬೆಕ್ಕು (ನಾ)= ಕದ್ದೂ ಕದಿಯ ದಂತಿರುವ ವ್ಯಕ್ತಿ.

ಬೆಣ್ಣಿತೆಗಿ (ಕ್ರಿ)= ಮಜ್ಜಿಗೆಯಿಂದ ಬೆಣ್ಣೆಯನ್ನು ಬೇರ್ಪಡಿಸು.

ಬೆಣ್ಣಿ ಬಳಪಾ (ನಾ)= ಬೆಣ್ಣೆಯಂತೆ ಮೆತ್ತಗಿರುವ, ಕಪ್ಪು ಹಲಗೆ (ಪಾಟಿ) ಮೇಲೆ ಬರೆಯಲು ಬಳಸುವ ಮೃದುವಾದ ಬಳಪ.

ಬೆಣ್ಣಿಹಂತಾ ಮಾತು (ನಾ)= ನಂಬಿಸುವ ಮಾತು; ಪುಸಲಾಯಿಸುವ ಮಾತು; ನಯವಾದ ಮಾತು.

ಬೆಣ್ಣಿ ಹಚ್ಚು (ಕ್ರಿ)= ಪುಸಲಾಯಿಸು; ನೇವರಿಸು; ರಮಿಸು; ನಂಬಿಸು.

ಬೆತ್ತ (ನಾ)= ಸಣ್ಣ ಮತ್ತು ಮೆತ್ತಗಿನ ಬಿದಿರು; ಸಣ್ಣ ಕೋಲು; ಛಡಿ; ಫೋಕಾ.

ಬೆದಿ (ನಾ)= ಬೆದೆ; ಬಿತ್ತಣಿಕೆಯ ಹದದ ಕಾಲ; ದನಗಳ ಬೆದೆಯ ಕಾಲ.

ಬೆದಿಗಿ ಬಾ (ಕ್ರಿ)= ಎಮ್ಮೆ, ಆಕಳು, ಆಡು, ಕುರಿ ಇತ್ಯಾದಿ ಪ್ರಾಣಿಗಳಿಗೆ ಕಾಮದ ಹಂಬಲ ವುಂಟಾಗು.

ಬೆದಿ ಬಿಸುಲು (ನಾ)= ಬೆದೆಗಾಲದ ಬಿಸಿಲು; ಬಿತ್ತಣಿಕೆ ಬಿಸಿಲು.

ಬೆದುರು (ಕ್ರಿ)= ಅಂಜಿ ಹಾರಿ ಭೀಳು (ಉದಾ:- ಮೋಟರು ಬರಾದ್ನೋಡಿ ಎತ್ಗೋಳು ಬೆದುರಿದುವು)

ಬೆದುರಿ ಭೀಳು (ಕ್ರಿ)= ಅಂಜಿ ಹಾರಿಬೀಳು.

ಬೆದುರ್ಸು (ಕ್ರಿ)= ಬೆದರಿಸು; ಅಂಜಿಸು; ಭಯಪಡಿಸು.

ಬೆನ್ನು (ನಾ)= ಮನುಷ್ಯನ ಹಿಂಭಾಗ; ಪೃಷ್ಠ.

ಬೆನ್ನು ಕುಡು (ಕ್ರಿ)= ಸೋಲು (ಗಾದೆ:- ಹೆಣ್ಮೊಟ್ಯಾ್ಯಲ ಬೆನ್ನು ಕುಡ್ಲೇ ಬೇಕು)

ಬೆನ್ನು ಚಪ್ಪುರ್ಸು (ಕ್ರಿ)= ಹುರಿದುಂಬಿಸು; ಪ್ರೋತ್ಸಾಹಿಸು.

ಬೆನ್ನಾನೆಲು ಮುರಿ (ಕ್ರಿ)= ಬೆನ್ನೆಲುಬು ಮುರಿಯುವಂತೆ ಬೆನ್ನ ಮೇಲೆ ಹೊಡೆ.

ಬೆನ್ನುಗ್ವಾಡಿ (ನಾ)= ಹಿಂಬದಿಯ ಗೋಡೆ.

ಬೆನ್ನು ತಿರುಗು/ವು (ಕ್ರಿ)= ಬೆನ್ನ ಹಿಂದಿನಿಂದ ಬೆಂಕಿ ಒಯ್ಯುವಾಗ ಬೆನ್ನು ತಿರುಗು/ವು ಎಂದು ಸೂಚಿಸುವ ಪದ್ಧತಿ ಇದೆ.

ಬೆನ್ನು ತುಳಿ (ಕ್ರಿ)= ಬೆನ್ನನ್ನು ಕಾಲಿನಿಂದ ತುಳಿದು ನೋವು ಕಡಿಮೆಗೊಳಿಸು.

ಬೆನ್ನುಮ್ಯಾಲ ಹೊಡಿ (ನು)= ಶಿಕ್ಷಿಸು; ಬೆನ್ನ ಮೇಲೆ ಪೆಟ್ಟು ಹಾಕು (ಗಾದೆ:- ಬೆನ್ನುಮ್ಯಾಲ ಹೊಡಿಬೇಕು, ಹೊಟ್ಟಿಮ್ಯಾಲ ಹೊಡಿ ಬಾರ್ದು.)

ಬೆನ್ನು ಹತ್ತು (ಕ್ರಿ)= ಬೆನ್ನ ಹಿಂದೆ ಹೋಗು; ಹಿಂಬಾಲಿಸು.

ಬೆನ್ನು ಹುರಿ (ನಾ)= ಬೆನ್ನಿನ ಮಣಿಕಟ್ಟು.

ಬೆನ್ನೆಲು (ನಾ)= ಬೆನ್ನೆಲುಬು; ಬೆನ್ನ ಮೂಳೆ.

ಬೆನ್ನೆಲು ಮುರಿ (ಕ್ರಿ)= ಬೆನ್ನು ಮೂಳೆ ಮುರಿವಂತೆ ಹೊಡೆ, ಪೆಟ್ಟು ಹಾಕು.

ಬೆಯಿಸು (ಕ್ರಿ)= ಬೇಯಿಸು; ಹಂಚಿನ ಮೇಲೆ ಬಿಸಿಗೊಳಿಸು; ಪಕ್ವ ಮಾಡು. ಬಯ್ಯುವಂತೆ ಮಾಡು.

ಬೆರಸು (ಕ್ರಿ)= ಬೆರೆಸು; ಬೆರಕೆ ಮಾಡು; ಕೂಡಿಸು; ಮಿಶ್ರಗೊಳಿಸು.

ಬೆರಿ (ಕ್ರಿ)= ಬೆರೆ; ಕೂಡು; ಸೇರು; ಮಿಶ್ರವಾಗು; ಒಂದಾಗು.

ಬೆರ್ಕಿ (ವಿ.)= ಬೆರಕೆಯಾದ; ಅನ್ಯರಿಗೆ ಹುಟ್ಟಿದ; ಜಾಣ.

ಬೆರ್ಕಿ ರೊಟ್ಟಿ (ನಾ)= ಜೋಳ, ಗೋಧಿ, ಕಡಲೆಬೇಳೆ, ಅಕ್ಕಿ ಮೊದಲಾದ ಮಿಶ್ರ ಹಿಟ್ಟಿನಲ್ಲಿ ಖಾರ, ಉಪ್ಪು, ಅರಿಶಿಣ ಇತ್ಯಾದಿ ಬೆರೆಸಿ ತಯಾರಿಸಿದ ರೊಟ್ಟಿ; ಧಪಾಟಿ.

ಬೆರ್ಕಿ ಹಿಟ್ಟು (ನಾ)= ನಾನಾ ಧಾನ್ಯಗಳನ್ನು ಬೀಸಿ, ರೊಟ್ಟಿ ತಯ್ಯಾರಿಸಲು ಅಣಿಗೊಳಿಸಿದ ಹಿಟ್ಟು; ಗಾಣಕ್ಕೆ ಬಳಸಲು ತಯಾರಿಸಿದ ವಿವಿಧ ಎಣ್ಣೆಕಾಳುಗಳ ಪುಡಿ (ಒಗಟು:- ಅರ್ಕಿ ಬೆರ್ಕಿ ಹಿಟ್ಟು। ಅಳ್ಯಾನೊಣ್ಕಗಿ ಕಟ್ಟು। ಅತ್ತಿ ಒಳ್ಳಾಗ ಹೆಟ್ಟು -ಎಣ್ಣೆಗಾಣ)

ಬೆಲ್ಬೆಲ್ಲ (ದ್ವಿ)= ಬೆಲ್ಲದಂತೆ ಸಿಹಿಸಿಹಿ ಯಾದದ್ದು.

ಬೆಲ್ಲ (ನಾ)= ಕಬ್ಬಿನ ರಸವನ್ನು ಕುದಿಸಿ ಗಟ್ಟಿ ಗೊಳಿಸಿದ ಮುದ್ದೆ ರೂಪದ ಸಿಹಿ ವಸ್ತು.

ಬೆಲ್ಲಣ್ಗಿ (ನಾ)= ಬೆಲ್ಲಣಿಗೆ; ಲಟ್ಟಣಿಗೆ; ಚಪಾತಿ, ಪೂರಿ, ಹೋಳಿಗೆ, ಹಪ್ಪಳ ಇತ್ಯಾದಿಗಳನ್ನು ಲಟ್ಟಿಸುವ ಕಟ್ಟಿಗೆಯ ಸಾಧನ.

ಬೆಲ್ಲಂತರ (ನಾ)= ಬಿಲ್ವದ ಮರ, ಅದರ ಎಲೆ ಮತ್ತು ಕಾಯಿ.

ಬೆಲ್ಲಂತರ ಕಾಯಿ (ನಾ)= ಬಿಲ್ವದ ಕಾಯಿ.

ಬೆಲ್ಲದಂಥ ಮಾತು (ನಾ)= ರುಚಿ ರುಚಿ ನುಡಿ; ಹಿತವೆನಿಸುವ ನುಡಿ.

ಬೆಲ್ಲು (ನಾ) ಇಂ.= ಗಂಟೆ.

ಬೆಲ್ಲು ಹೊಡಿ (ಕ್ರಿ)= ಗಂಟೆ ಬಾರಿಸು.

ಬೆಲ್ಲುಣ್ಗಿ (ನಾ)= ಬೆಲ್ಲಣ್ಗಿ (ನೋಡಿರಿ).

ಬೆವುರು (ನಾ)= ಬೆವರು; ಪಸೀನಾ; ಘಾಮು; ರೋಮರಂಧ್ರದಿಂದ ಹೊರಸೂಸುವ ನೀರು.

ಬೆವುರ್ಸಾಲ್ಲಿ (ನಾ)= ಬೆವರ ಸಾಲೆ; ಬಿಸಿಲಿನ ತಾಪದಿಂದ ಚರ್ಮದ ಮೇಲೆ ಹುಟ್ಟುವ ಗುಳ್ಳೆಗಳು; ಬೆವರುಗುಳ್ಳೆ.

ಬೆವು (ನಾ)= ಬೆವರು.

ಬೆವ್ವು (ನಾ)= ಬೇವು; ಯುಗಾದಿ ದಿನದಂದು ತಿನ್ನಲು ಬೇವು ಬೆಲ್ಲ ಸೇರಿಸಿ ತಯಾರಿಸಿದ, ಕಹಿಸಿಹಿ ಸೂಚಕ ಆಹಾರ.

ಬೆವ್ವು ಕಚ್ಚು (ಕ್ರಿ)= ಬೇವು ಬೆಲ್ಲ ಸೇವಿಸಿ ಅದರ ಸವಿಯನ್ನು ಅನುಭವಿಸು.

ಬೆಸಿ (ನಾ)= ಬೆಸ; ವಿಷಮಸಂಖ್ಯೆ; ಮದು ಮಕ್ಕಳು ಆಡುವ ಸರಿXಬೆಸಿ ಆಟದ ಸಂಖ್ಯೆ.

ಬೆಸಿ (ಕ್ರಿ)= ಬೆಸೆ; ಜೋಡಿಸು; ಕಬ್ಬಿಣದ ತುಂಡುಗಳನ್ನು ಮತ್ತು ಸಂದುಗಳನ್ನು ಹಿತ್ತಾಳೆಯಿಂದ ಇಲ್ಲವೆ ಸತುವಿನಿಂದ ಹೊಂದಿಸು.

ಬೆಸ್ಕಿ (ನಾ)= ಬೆಸ್ಗಿ; ಬೆಸುಗೆ.

ಬೆಸ್ಗಿ (ನಾ)= ಬೆಸುಗೆ; ಜೋಡಣೆ; ಹೊಂದಿಸುವಿಕೆ.

ಬೆಸ್ಗಿ ಬಿಡು (ಕ್ರಿ)= ಬೆಸುಗೆಯ ಜಾಗದಲ್ಲಿ ಬಿರುಕುಂಟಾಗು.

ಬೆಸ್ಗಿ ಹಾಕು (ಕ್ರಿ)= ಬೆಸೆ; ಜೋಡಿಸು; ಹೊಂದಿಸು.

ಬೆಸ್ಗೊಳ್ರಿ (ಕ್ರಿ)= ಬೇಡಿಕೊಳ್ಳಿರಿ; ಕೇಳಿಕೊಳ್ಳಿರಿ; ಹರಕೆ ಹೊತ್ತು ಕೊಳ್ಳಿರಿ, (ಜೊಕುಮಾರನ ಹಾಡು:- ಅಟಮಿಧೀನ ಹುಟಿದಾನೆ ಕೊಮರಾಯಾ। ಶಟೇರ್ಕರ್ದು ಬೆಸ್ಗೊಳ್ರೀ ಜೊಕುಮಾರಾ).

ಬೆಸ್ತ (ನಾ)= ಮೀನುಗಾರ; ಬೋವಿ.

ಬೆಳಕುಣಿ (ನಾ)= ಔರಾದ ತಾಲೂಕಿನ ಒಂದು ಹಳ್ಳಿ.

ಬೆಳಕು (ನಾ)= ಪ್ರಕಾಶ; ಸೂರ್ಯಚಂದ್ರ, ನಕ್ಷತ್ರ, ದೀಪಾದಿಗಳ ಪ್ರಕಾಶ.

ಬೆಳಾರ್ (ನಾ)= ಭೆಳಾರ್; ಬೆಳಕು, ಸೂರ್ಯೋದಯ ಮುನ್ನ; ಮೂಡಲ.

ಬೆಳಿ (ಕ್ರಿ)= ವೃದ್ಧಿಯಾಗು; ದೊಡ್ಡದಾಗು; ಉದ್ದವಾಗು; ಬೆಳೆ; ಏಳಿಗೆ ಹೊಂದು; ತೀರು; ಮುಗಿ; ಮುಕ್ತಾಯವಾಗು (ಉದಾ:- ಬಿತ್ತುಣ್ಗಿ ಬೆಳೀತು ಅಂದರೆ ಬಿತ್ತಣಿಕೆ ಮುಕ್ತಾಯ ವಾಯಿತು).

ಬೆಳೆಂಬಗಿ (ನಾ)= ಬೀದರ ಜಿಲ್ಲೆಯ ಸೀಮೆಗೆ ಹೊಂದಿರುವ ಕಲಬುರ್ಗಿ ಜಿಲ್ಲೆಯ ಒಂದು ಹಳ್ಳಿ. ದೇಗಯಿ ಗುಂಡಪ್ಪನ ಊರು.

ಬೆಳೊಳಿ (ನಾ)= ಬಳ್ಳೊಳ್ಳಿ ಗಡ್ಡೆ; ಬಳುವಳಿ.

ಬೆಳ್ಕು (ನಾ)= ಬೆಳಕು (ನೋಡಿರಿ).

ಬೆಳ್ಕು ಬಿಡು (ಕ್ರಿ)= ಬೆಳಕಿನೆದುರಿನಿಂದ ಅತ್ತ ಸರಿ; ಬೆಳಕು ಬರುವಂತೆ ಮಾಡು.

ಬೆಳ್ಕೇರಿ (ನಾ)= ಬೀದರ ಜಿಲ್ಲೆಯ ಒಂದು ಹಳ್ಳೀ. (ಹಾಡು:- ಬಕ್ಕಪ್ಪನ ಬಾಯಿಗಿ ಬೆಕ್ಕು ಕಚ್ಚೆದೊ ಬೆಳ್ಕೇರಿ ಊರಾಗಾ).

ಬೆಳ್ಕಿಂಡಿ (ನಾ)= ಬೆಳಕು ಬರುವ ಕಿಂಡಿ.

ಬೆಳ್ಗಾಗು (ಕ್ರಿ)= ಬೆಳಕು ಹರಡು; ಭೆಳಗಾಗು; ಸೂರ್ಯೋದಯವಾಗು.

ಬೆಳ್ಗಾನಾ (ಅ)= ಬೆಳಗಾಗುವವರೆಗೆ; ಇಡೀ ರಾತ್ರಿ; ಸಂಜೆಯಿಂದ ಮುಂಜಾನೆವರೆಗೆ.

ಬೆಳ್ಗು (ನಾ)= ಬೆಳ್ಕು; ಬೆಳಕು; ಪ್ರಕಾಶ; ಅರಿವು; ತಿಳಿವಳಿಕೆ; (ಕ್ರಿ)= ಬೆಳಕು ಹರಡು;

ಪ್ರಕಾಶಿಸು; ಮಿಂಚುವಂತೆ ಮಾಡು; ಹೊಳೆಯುವಂತೆ ಮಾಡು; ತಿಕ್ಕಿ ತೊಳೆ; ಭಾಂಡೆ ಉಜ್ಜಿ ಹೊಳೆಯುವಂತೆ ಮಾಡು; ಆರತಿ ಬೆಳಗು.

ಬೆಳ್ಗಸು (ಕ್ರಿ)= ಬೆಳಗಿಸು; ಪ್ರಕಾಶಿಸುವಂತೆ ಮಾಡಿಸು.

ಬೆಳ್ಚುಕ್ಕಿ (ನಾ)= ಬೆಳ್ಳಿ ಚುಕ್ಕಿ; ಶುಕ್ರಗ್ರಹ; ಸೂರ್ಯೋದಯ ಸೂಚಿಸುವ ಚುಕ್ಕಿ (ಗಾದೆ:- ಬೆಳ್ಚುಕ್ಕಿ ಮೂಡಾಟ್ಗೆ ಬುತ್ತಿ, ಕಟ್ದುರ್ಬಿ ನಿಚ್ಚದ ಯಾಳ್ಯಾ ತಪ್ಪಾಂಗಿಲ್ಲ)

ಬೆಳ್ತನಕ (ಅ)= ಬೆಳಗಾಗುವವರೆಗೆ; ಸಂಜೆಯಿಂದ ಮುಂಜಾನೆವರೆಗೆ.

ಬೆಳ್ದಿಂಗ್ಳು (ನಾ)= ಬೆಳದಿಂಗಳು; ಚಂದ್ರನ ಬೆಳಗು.

ಬೆಳ್ಸು (ಕ್ರಿ)= ಬೆಳೆಸು; ಗಿಡಮರಾದಿಗಳು ಬೆಳೆಯುವಂತೆ ನೀರು, ಗೊಬ್ಬರಾದಿಗಳನ್ನು ಎರೆ; ಮಕ್ಕಳನ್ನು ಪೋಷಿಸು.

ಬೆಳ್ಳಿ (ನಾ)= ಬಿಳಿಬಣ್ಣದ ಒಂದು ಲೋಹ; ರಜತ; ನೆಲದ ಮೇಲೆ, ಗಿಡದ ಮೇಲೆ, ಹಂದರದ ಮೇಲೆ ಹಬ್ಬುವ ಬಳ್ಳಿ.

ಬೆಳ್ಳಿ ಚುಕ್ಕಿ (ನಾ)= ಬೆಳ್ಚುಕ್ಕಿ (ನೋಡಿರಿ)

ಬೆಳ್ಳೆತ್ತು (ನಾ)= ಬಿಳಿಯ ಬಣ್ಣದ ಎತ್ತು.

ಬೆಳ್ಯಾ (ನಾ)= ಬಿಳಿಬಣ್ಣದ ಎತ್ತಿಗೆ ಸಂಬೋಧಿಸುವ ರೂಢಿಯ ಹೆಸರು.

ಬೇಂಬ್ರಿ (ನಾ)= ಔರಾದ ತಾಲೂಕಿನ ಒಂದು ಊರಿನ ಹೆಸರು. ಬ್ಯಾಂಬ್ರಿ, ಬೇಂಬ್ರಾ ಎಂತಲೂ ಕರೆಯುತ್ತಾರೆ.

ಬೇಕರಿ (ನಾ) ಇಂ.= ವಿವಿಧ ಆಹಾರ ಬೇಯಿಸಿ ಕೊಡುವ ಅಡುಗೆ ಅಂಗಡಿ.

ಬೇಕಸೂರು (ನಾ) ಉ.= ನಿರಪರಾಧಿ; ತಪ್ಪು ಮಾಡದವನು.

ಬೇಕಾಗು (ಕ್ರಿ)= ಇಷ್ಟವಾಗು; ಅಗತ್ಯವಾಗು.

ಬೇಕಾರ (ವಿ) ಉ.= ನಿರುಪಯೋಗಿ, ನಿರುಪಯುಕ್ತ; ಕೆಲಸಕ್ಕೆ ಬಾರದ.

ಬೇಕು (ನಾ)= ಅವಶ್ಯಕತೆ; ಅಗತ್ಯ. (ಕ್ರಿ)= ಅವಶ್ಯಕವಿದೆ; ಅಗತ್ಯವಿದೆ.

ಬೇಕೂಫ್ (ನಾ)= ಭಯಗೇಡಿ; ಮೂರ್ಖ; ತಿಳಿಗೇಡಿ; ಅವಿವೇಕಿ.

ಭೇಖಟ್ಕಾ (ಅ)= ಭಯರಹಿತವಾಗಿ; ನಿರ್ಭಯವಾಗಿ.

ಬೇಗಂ (ನಾ) ಉ.= ಮಹಿಳೆ; ಹೆಂಡತಿ; ನವಾಬನ ಹೆಂಡತಿ.

ಬೇಗಂ ಬಜಾರ (ನಾ)= ಹೈದರಾಬಾದ್ ನಗರದ ಒಂದು ಓಣಿ.

ಬೇಗಾನಾ (ನಾ)= ಇಡೀ ಹಗಲು; ಮುಂಜಾವಿಂದ ಸಂಜೆಯವರೆಗೆ.

ಬೇಗಿಂದ ಬೇಗ (ಅ)= ಬೇಗಾನಾ (ನೋಡಿರಿ)

ಬೇಗೂ ಬೆಳಗೂ (ಅ)= ಹಗಲಲ್ಲೂ ರಾತ್ರಿಯಲ್ಲೂ.

ಬೇಚಿ (ನಾ) ಉ.= ಮಾರಾಟ; ಬಿಕ್ರಿ.

ಬೇಚಿಮಾಡು (ಕ್ರಿ)= ಮಾರಾಟ ಮಾಡು; ವಿಕ್ರಯಿಸು.

ಬೇಚಿರಾಗ (ವಿ) ಉ= ನಿರ್ಜನ; ದೀಪ ಕಾಣದ, ಸಂತಾನವಿಲ್ಲದ.

ಬೇಚಿರಾಗಾಗು (ಕ್ರಿ) = ದೀಪಕ್ಕೆ ದಿಕ್ಕಿಲ್ಲದಂತಾಗು; ಸಂತಾನವಿಲ್ಲದಂತಾಗು; ಮನೆ ಅಥವಾ ಊರು ಹಾಳುಬೀಳು.

ಬೇಚಿರಾಗೂರು (ನಾ)= ದೀಪ ಕಾಣದ ಊರು; ಜನರಿಲ್ಲದ ಊರು (ಉದಾ:- ಭಾಲ್ಕಿ ತಾಲೂಕಿನ ಗುಬ್ಯಾಳ ಹಾಗೂ ಮೈಲಾರವೆಂಬ ಹಾಳು ಬಿದ್ದ ಊರುಗಳು.)

ಬೇಚೈನ (ವಿ)= ಚಿಂತಾತುರನಾದ; ಅಸಮಾಧಾನಗೊಂಡ.

ಬೇಚೈನಾಗು (ಕ್ರಿ)= ಚಿಂತಾತುರನಾಗು; ಅಸಮಾಧಾನ ಹೊಂದು.

ಬೇಚೈನಿ (ನಾ)ಉ.= ಚಿಂತೆ; ಅಸಮಾಧಾನ; ನೆಮ್ಮದಿ ಇಲ್ಲದಿರುವಿಕೆ.

ಬೇಜಬಾನ (ವಿ) ಉ.= ನಾಲಿಗೆ ಇಲ್ಲದ; ಮೂಕನಾದ.

ಬೇಜವಾಬ್ದಾರಿ (ನಾ) ಉ.= ಜವಾಬ್ದಾರಿ ಇಲ್ಲದಿರುವಿಕೆ; ಕರ್ತವ್ಯ ಪ್ರಜ್ಞೆ ಇಲ್ಲದಿರುವಿಕೆ; ಹೊಣೆಗೇಡಿತನ.

ಬೇಜಾ (ನಾ) ಉ.= ಅನ್ಯಾಯ; ಕೇಡು; ಅನುಚಿತವಾದದ್ದು.

ಬೇಜಾಬ್ತಾ (ವಿ)= ಕಾನೂನುಬಾಹಿರವಾದ.

ಬೇಜಾರ (ನಾ)= ನಿರುತ್ಸಾಹ; ಬೇಸರ.

ಬೇಟಾ (ನಾ)= ಮಗ; ಮಗು; ಬೆಟಾ.

ಬೇಡ (ಅ)= ಬೇಕಿಲ್ಲ; ಸಲ್ಲದು; ಕೂಡದು (ನಾ) ಬೇಟೆಗಾರ.

ಬೇಡರ ಕಣ್ಣಪ್ಪ (ನಾ)= ಶಿವನಿಗೆ ಕಣ್ಣು ಕೊಟ್ಟ ಪುರಾತನ ಶರಣ.

ಬೇಡಾಗ (ನಾ)ಉ.= ಬೇದಾಗ; ಕಲೆ ಇಲ್ಲದುದು.

ಬೇಡಿ (ನಾ= ಕೈದಿಯ ಕಾಲಿಗೆ ಮತ್ತು ಕೈಗೆ ಹಾಕಿದ ಕಬ್ಬಿಣದ ಬಳೆ.

ಬೇಡಿಕಿ (ನಾ)= ಬೇಡಿಕೆ; ಬೇಡುವಿಕೆ; ಯಾಚನೆ; ಕೋರಿಕೆ.

ಬೇಡಿ ಹಾಕು (ಕ್ರಿ)= ಕೈದಿಯ ಕೈಕಾಲುಗಳಿಗೆ ಕಬ್ಬಿಣದ ಬಳೆಗಳನ್ನು ಹೊಂದಿಸು; ಬೇಡಿ ಜಡಿ.

ಬೇಡು (ಕ್ರಿ)= ಬಯಸು; ಆಶಿಸು; ಕೇಳು; ಯಾಚಿಸು; ಇಚ್ಛಿಸು; ಹರಾಜಿನಲ್ಲಿ ದರ ಏರಿಸು; ಬೆಲೆ ಏರಿಸು; ಬೋಲಿ ಹೇಳು.

ಬೇತು (ನಾ) ಮ.= ಹಂಚಿಕೆ; ಯುಕ್ತಿ; ಉಪಾಯ; ಉದ್ದೇಶ; ಧ್ಯೇಯ.

ಬೇತ್ಮಾಡು (ಕ್ರಿ)= ಹಂಚಿಕೆ ಮಾಡು; ಯುಕ್ತಿ ಹೂಡು; ಉಪಾಯ ಹೂಡು; ನಿರ್ಧರಿಸು.

ಬೇತ್ರೀನ್ (ನಾ) ಉ.= ಉತ್ತಮವಾದದ್ದು; ಅತ್ಯುತ್ತಮವಾದದ್ದು.

ಬೇತ್ಲು (ನಾ)= ಬೈತಲೆ; ಕೂದಲನ್ನು ಬಾಚಿ ಇಬ್ಭಾಗ ಮಾಡುವಿಕೆ; (ಒಗಟು:- ಕರಿ ಹೊಲ್ದಾಗ ಬಿಳಿ ಥೂರಿ -ಬೇತ್ಲು)

ಬೇದಾನಾ (ನಾ)= ಕಾಳಿಲ್ಲದ; ಕಾಳಿಲ್ಲದ ದ್ರಾಕ್ಷಿ.

ಬೇನಾಮಿ (ವಿ) ಉ.= ಹೆಸರಿಲ್ಲದ; ಅನಾಮ ಧೇಯವಾದ; ಅನ್ಯರ ಹೆಸರಿನ.

ಬೇಪರವಾ (ನಾ) ಉ.= ಪರಿವೆ ಇಲ್ಲದಿರುವಿಕೆ; ಬೇಪರವಾಹ.

ಬೇಪಾರ (ನಾ) ಉ.= ವ್ಯಾಪಾರ; ಕೊಳ್ಳುವ ಮಾರುವ ವ್ಯವಹಾರ.

ಬೇಪಾರಿ (ನಾ) ಉ.= ವ್ಯಾಪಾರಿ; ವ್ಯಾಪಾರ ನಡೆಸುವವನು.

ಬೇಫಾಮ್ (ನಾ) ಉ.= ಮೈ ಮರೆವು; ಎಚ್ಚರ ಹೀನತೆ.

ಬೇಫಿಕರ್ (ನಾ)= ನಿಶ್ಚಿಂತವಾದದ್ದು.

ಬೇಫಿಕರಾಗು (ಕ್ರಿ)= ನಿಶ್ಚಿಂತನಾಗು.

ಬೇಫಿಕ್ರಿ (ನಾ) ಉ.= ನಿಶ್ಚಿಂತತೆ.

ಬೇಬಾಕ್ (ನಾ)= ಬಾಕಿ ಇಲ್ಲದಿರುವಿಕೆ; ಚುಕ್ತಾ, ಸಟ್ಟಾ ಬಟ್ಟಾ; ಸಿರ್ಸಾಲ.

ಬೇಬಿ (ನಾ) ಇಂ.= ಹುಡುಗಿ.

ಬೇಬಿಟ್ಟಿ (ನಾ)= ನಿರ್ಲಕ್ಷ್ಯ; ನಿಷ್ಕಾಳಜಿತನ; ಬೇಕಾಬಿಟ್ಟಿ.

ಬೇಭರೋಸಾ (ನಾ)= ಅಪನಂಬಿಗೆ;

ಬೇಭಾನ್ (ನಾ)= ಎಚ್ಚರ ತಪ್ಪಿರುವಿಕೆ.

ಬೇಭಾನಾಗು (ಕ್ರಿ)= ಎಚ್ಚರದಪ್ಪು; ಎಚ್ಚರ ಇಲ್ಲದಾಗು.

ಬೇಮಳಖೇಡ (ನಾ)= ಹುಮನಾಬಾದ ತಾಲೂಕಿನ ಒಂದು ಊರು; ಉರಿ ಲಿಂಗ ಪೆದ್ದಿ ಮಠವಿರುವ ಊರು; ದಲಿತ ಕವಿ ಚಂದ್ರಪ್ಪಾ ಹೆಬ್ಬಾಳಕರ ಅವರ ಹುಟ್ಟೂರು.

ಬೇಮಾನ್ (ನಾ) ಉ.= ಅಪ್ರಮಾಣಿಕ; ದೇವದ್ರೋಹಿ.

ಬೇಮಾನಿ (ನಾ) ಉ.= ಅಪ್ರಮಾಣಿಕತನ, ದ್ರೋಹ.

ಬೇಮಾನಿಮಾಡು (ಕ್ರಿ)= ಅಪ್ರಾಮಾಣಿಕನಾಗು; ದ್ರೋಹಬಗೆ.

ಬೇಮಾರ (ನಾ) ಉ.= ರೋಗಿ; ಬೇನೆ ಬಿದ್ದವನು/ಳು.

ಬೇಮಾರನಹನಾ (ಕ್ರಿ)= ಬೇನೆ ಬಿದ್ದಿದ್ದಾನೆ.

ಬೇಮಾರಿ (ನಾ) ಉ.= ಬೀಮಾರಿ; ಬೇನೆ; ಗಡ್ಡೆ ಬೇನೆ; ಕಾಲರಾ ಬೇನೆ.

ಬೇಮಾರಿ ಬರ್ಲಿ (ಕ್ರಿ)= ಬೇನೆ ಬರಲಿ; ಗಡ್ಡೆ ಬೇನೆ ಉಂಟಾಗಲಿ; ಕಾಲರಾಬೇನೆ ಬರಲಿ (ಬೈಗುಳ).

ಬೇರ್ (ನಾ)= ಬೇರು; ಮರಗಿಡ ಬಳ್ಳಿಗಳ ತಳಭಾಗ; ಬುಡ; ನೆಲದಲ್ಲಿ ಚಾಚಿದ ಗಿಡದ ಭಾಗ.

ಬೇರಿಳಿ (ಕ್ರಿ)= ಭದ್ರವಾಗಿ ತಳವೂರು; ವಸತಿ ಮಾಡು; ಭೂಮಿಯಲ್ಲಿ ಬುಡವನ್ನು ಚಾಚು.

ಬೇರೀಜು (ನಾ) ಮ.= ಕೂಡು ಲೆಕ್ಕ; ಜಮಾ ಲೆಕ್ಕ; ಸಂಕಲನ; ಒಟ್ಟು ಮೊತ್ತ.

ಬೇರೀಜು ಮಾಡು (ಕ್ರಿ)= ಕೂಡಿಸು; ಸಂಕಲಿಸು.

ಬೇರು (ನಾ)= ಮರ, ಗಿಡ, ಬಳ್ಳಿಗಳ ಅಡಿ ಭಾಗ; ಮೂಲ; ಜಡ; ಉಗಮ.

ಬೇರು ತೇಲು (ಕ್ರಿ)= ಮರ ಬೀಳುವಂತಾಗು.

ಬೇರುಬಿಡು (ಕ್ರಿ)= ಭೂಮಿಯಲ್ಲಿ ಬುಡವನ್ನು ಚಾಚು; ಬುಡ ಆಳದಲ್ಲಿ ಇಳಿ; ನೆಲೆಸು; ತಳವೂರು.

ಬೇರೂರು (ಕ್ರಿ)= ತಳವೂರು; ನೆಲೆಸು; ಅಲ್ಲಾಡದಂತೆ ಆಗು; ನೆಲೆ ನಿಲ್ಲು; ಬೇರು ಆಳದಲ್ಲಿ ಇಳಿ; ಭೂಮಿಯಲ್ಲಿ ಬುಡವನ್ನು ಚಾಚು.

ಬೇರೆ (ಅ)= ಪ್ರತ್ಯೇಕ; ಮತ್ತೊಂದು; ಇತರೆ; ಅಲಾಕ್; ಬೇರೆ.

ಬೇರೆಬೇರೆ (ದ್ವಿ)= ಪ್ರತ್ಯೇಕ ಪ್ರತ್ಯೇಕ; ಬ್ಯಾರೆ ಬ್ಯಾರೆ; ಅಲಾಕಲಾಕ; ಬಿಡಿಬಿಡಿ.

ಬೇಲ್ ಬೂಟಾ (ನಾ) ಉ.= ಕುಸುರಿ ಕೆಲಸ.

ಬೇಲಿ (ನಾ)= ಹೊಲ, ತೋಟ ಇತ್ಯಾದಿಗಳ ಸುತ್ತ ಊರಿದ ಮುಳ್ಳುಪೊದೆಗಳ ಸಾಲು; ಅಡ್ಡತಂತಿ; ಆವರಣ; ಸುತ್ತುಗೋಡೆ (ಗಾದೆ:- ಬೇಲಿನೇ ಎದ್ದು ಹೊಲಾಮೆಯ್ತುಂತ!)

ಬೇಲಿ ಇಲ್ದ ಹೊಲಾ (ನು)= ಕಾವಲು ಇಲ್ಲದ್ದು; ರಕ್ಷಣೆ ಇಲ್ಲದ್ದು.

ಬೇಲಿ ಮ್ಯಾಲಿನ ಹುವ್ವಾ (ನಾ)= ತಾನಾಗೇ ಬೆಳೆದ ಕಾಡು ಹೂವು; ಪರಿಶ್ರಮ ಇಲ್ಲದೆ ಬೆಳೆದದ್ದು; ಬೆಲೆ ಇಲ್ಲದು (ಹಂತಿ ಹಾಡು:- ಬೇಲಿ ಮ್ಯಾಲಿನ ಹೂವು। ಏನಿದ್ದರೇನಾಯ್ತು। ಮಲ್ಲಿಗ್ಹೂವಿನಂಥ ಮನೆಗಂಡ। ನಾ ಬಿಟ್ಟು। ಅನ್ಯಪುರುಷಾಗಾ ಒಲಿಬೇಡ।).

ಬೇಲೂರು (ನಾ)= ಉರಿಲಿಂಗ ಪೆದ್ದಿ ಮಠ ವಿರುವ ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿ.

ಬೇಲೋಸ್ (ನಾ) ಉ.= ನಿಷ್ಪಾಪ; ಮುಗ್ಧ ನಾದವನು; ಸರಳನು.

ಬೇಲ್ದಾರ (ವಿ)= ಬಳ್ಳಿಯ ಕುಸುರ ಹೊಂದಿದ.

ಬೇವಾ (ನಾ) ಉ.= ವಿಧವೆ; ಗಂಡ ಸತ್ತವಳು.

ಬೇವಾರ್ಸಿ (ವಿ)= ಅನಾಥ; ದಿಕ್ಕಿಲ್ಲದ; ಉತ್ತರಾಧಿಕಾರಿ ಇಲ್ಲದ.

ಬೇವು (ನಾ)= ಔಷಧಿ ಗುಣ ಹೊಂದಿರುವ ಕಹಿ ಎಲೆ ಹೊಂದಿರುವ ಒಂದು ಮರ (ಹಾಡು:- ಬ್ಯಾಸಗಿ ದಿವ್ಸಕ ಬೇವಿನ ಮರ ತಂಪು...; ಬೇವು ಬೆಲ್ಲದೊಳಿಡಲೇನು ಫಲ -ಪುರಂದರದಾಸರು).

ಬೇವು ಬೆಲ್ಲ (ನಾ)= ಉಗಾದಿ ಹಬ್ಬದ ವಿಶೇಷ ಭಕ್ಷ್ಯ.

ಬೇವೂರು (ನಾ)= ಬೇರೆ ಊರು.

ಬೇಶಕ್ (ಅ) ಉ.= ನಿಃಸಂಶಯ.

ಬೇಸನ್ (ನಾ)= ಕಡಲೆಹಿಟ್ಟು.

ಬೇಸನ್ನುಂಡಿ (ನಾ)= ಕಡ್ಲೆಹಿಟ್ಟು, ಸಕ್ಕರೆ, ತುಪ್ಪ ಇತ್ಯಾದಿ ಸೇರಿಸಿ ತಯಾರಿಸಿದ ಲಡ್ಡುಗೆ.

ಬೇಶಿಸ್ತು (ನಾ) ಮ.= ಶಿಸ್ತು ಇಲ್ಲದಿರುವಿಕೆ.

ಬೇಸು (ನಾ)ಉ.= ಅಗಸೆ ಬಾಗಿಲು

ಬೇಸುಮಾರ್ (ಅ)ಉ.= ಎಣಿಕೆಗೆ ಮೀರಿದ; ಅಳತೆ ಮೀರಿದ; ಅಗಣಿತ.

ಬೇಷೆರತ್ತು (ವಿ.)= ಯಾವ ಷರತ್ತುಇಲ್ಲದ; ಬೇಷರತ್.

ಬೆಸೆರಮ್ (ನಾ) ಉ.= ನಾಚಿಕೆಗೇಡಿ; ಲಜ್ಜೆಗೇಡಿ; ಸೆರಮ್ಗೇಡಿ.

ಬೇಶೆರ್ಮಿ (ನಾ) ಉ.= ಒಂದು ಪ್ರಕಾರದ ಬಳ್ಳಿಯಂತೆ ಹರಡುವ, ಪ್ರಾಣಿಗಳು ತಿನ್ನದ ಸಸ್ಯ.

ಬೇಸ್ಮಿಟ್ (ನಾ)ಇಂ.= ಬೇಸ್ಮೆಂಟ್; ಕಟ್ಟಡದ ಅಡಿಪಾಯದ ಮೇಲು ಹಂತ.

ಬೇಹದ (ವಿ) ಉ.= ಮಿತಿ ಇಲ್ಲದ; ಮೇರೆ ಮೀರಿದ; ಸೀಮಾತೀತ; ಅತಿ; ಅಪಾರ.

ಬೇಹುದಾ (ನಾ) ಉ.= ನಾಲಾಯಕ್, ಮೂರ್ಖ; ಬುದ್ಧಿಗೇಡಿ; ಬೇಕೂಫ.

ಬೇಹುಷಾರಿ (ನಾ)= ಎಚ್ಚರಗೇಡಿತನ; ನಿರ್ಲಕ್ಷ್ಯ; ಮೈಮರೆವು.

ಬೇಹೋಷ್ (ಅ)ಉ.= ಎಚ್ಚರ ತಪ್ಪಿದ; ಪ್ರಜ್ಞೆಇಲ್ಲದ; ಮೂರ್ಛೆ ಹೋದ.

ಬ್ಯೆ (ಕ್ರಿ)= ಬ್ಯೆಯು; ಅಶ್ಲೀಲವಾಗಿ ಸಂಬೋಧಿಸು, ಸರಾಪಿಸು; ಹೀನ್ಯೆಸು.

ಬ್ಯೆಗೋಳು (ನಾ)= ಬ್ಯೆಗುಳ.

ಬ್ಯೆಠಕ್ (ನಾ)= ಸಭೆ; ಸಭೆ ಸೇರುವಿಕೆ; ಒಂದೆಡೆ ಕುಳಿತುಕೊಳ್ಳುವಿಕೆ.

ಬ್ಯೆಠಕ್‌ಖಾನಿ (ನಾ)= ಕುಳಿತುಕೊಳ್ಳುವ ಮನೆ; ಪಡಖಾನಿ; ಝುಳಜಿ.

ಬ್ಯೆತ್ಲ (ನಾ)= ಬೇತ್ಲ; ಬೇತಲು; ಬ್ಯೆತಲು. (ಗಾದೆ:- ಕರಿಹೊಲ್ದಾಗ ಬಿಳಿ ಘೂರಿ- ಬ್ಯೆತ್ಲ)

ಬ್ಯೆಬಲ್ಲ್ (ನಾ) ಇಂ.= ಕ್ರಿಶ್ಚಿಯನ್ನರ ಪವಿತ್ರ ಧರ್ಮಗ್ರಂಥ.

ಬ್ಯೆಮಾನ (ನಾ) ಉ.= ಬೇಮಾನ ಅಪ್ರಮಾಣಿಕ.

ಬ್ಯೆಮಾನಿ (ನಾ) ಉ.= ಅಪ್ರಮಾಣಿಕತನ; ಬೇಮಾನಿ.

ಬ್ಯೆರ (ನಾ)= ವ್ಯೆರ; ವ್ಯೆರತ್ವ.

ಬ್ಯೆರ ಬರು (ಕ್ರಿ)= ವ್ಯೆರತ್ವ ಉಂಟಾಗು.

ಬ್ಯೆಲಾ (ನಾ) ಇಂ.= ಉಪನಿಯಮಾವಳಿ.

ಬ್ಯೆಲಾಟ (ನಾ)= ಜಾನಪದ ನಾಟಕ; ಬಯಲಾಟ; ನಾಟಕದ ಒಂದು ಪ್ರಕಾರ.

ಬ್ಯೆಲಿಗಿಬಾ (ಕ್ರಿ)= ಹೊರಗೆ ಬಾ, ಎದುರಿಗೆ ಬಾ, ಮುಚ್ಚಿರಬೇಡ.

ಬ್ಯೆಲು (ನಾ)= ಬಯಲು; ಮ್ಯೆದಾನ.

ಬ್ಯೆಲ್ಕಡಿ (ನಾ)= ಹೊರ್ಕಡಿ; ಮ್ಯೆದಾನ; ಕಕ್ಕಸ.

ಬ್ಯೆಲ್ಗಂಬಾರ (ನಾ)= ಬ್ಯೆಲಲ್ಲಿ ಡೇರೆ ಹೊಡುವ ಸಂಚಾರಿ ಕಂಬಾರ; ಘಿಸಾಡೆ.

ಬ್ಯೆಲ್ಭಂಡಿ (ನಾ) ಹಿಂ.= ಎತ್ತಿನ ಬಂಡಿ; ಚಕ್ಕಡಿ.

ಬ್ಯೆಸಾಕ (ನಾ)= ಬ್ಯೆಲು; ಬಯಲು; ವಿಸ್ತೃತ ಜಾಗ.

ಬ್ಯೆಸು (ಕ್ರಿ)= ಬಯಸು; ಬಯಕೆ ಪಡು; ಬಯ್ಯಿಸು; ಬ್ಯೆಗುಳ ಕೇಳಿಸು; ಅನ್ಯರಿಂದ ಬ್ಯೆಯಲು ಹಚ್ಚು.

ಬೊಂಗಾ (ನಾ)= ಕಾರ್ಖಾನೆಯ ಸೀಟಿ, ಪೊಂಗಾ, ಧ್ವನಿವರ್ಧಕ.

ಬೊಂಡಾ (ನಾ) ಮ.= ಕಡುಬು; ಕರ್ಜಿಕಾಯಿ; ಆಲೂಬೋಂಡಾ.

ಬೊಂತಾ (ನಾ) ಮ.= ಬೊಂತೆ; ಚಿಂದಿ ಬಟ್ಟೆಗಳಿಂದ ತಯಾರಿಸಿದ ಕೌದಿ; ಹಚ್ಚಡ; ಬೊಂತಿ.

ಬೊಂತಾಹೊಲಿ (ಕ್ರಿ)= ಚಿಂದಿಗಳನ್ನು ಜೋಡಿಸಿ ಹೊಲಿದು ಖೌದಿಯನ್ನು ಸಿದ್ಧ ಗೊಳಿಸು.

ಬೊಂತಿ (ನಾ)= ಬೊಂತಾ (ನೋಡಿರಿ)

ಬೊಂದಾ (ನಾ)= ಹುಡುಗ; ಪಾರ; ಪೋರ.

ಬೊಂದಿ (ನಾ)= ಹುಡುಗಿ; ಪೋರಿ; ಇಲಿ ಅಥವಾ ಹೆಗ್ಗಣದ ಗುದ್ದ.

ಬೊಂದಿ ಹಾಕು (ಕ್ರಿ)= ಗುದ್ದಕೊರೆ; ಬಿಲ ತಯಾರಿಸು.

ಬೊಂಬಡಿ (ನಾ)= ಬೋಂಬಡಿ; ಬೊಬ್ಬೆ; ಕೂಗಾಟ.

ಬೊಂಬಡಿ ಹೊಡಿ (ಕ್ರಿ)= ಬೊಬ್ಬಿಕ್ಕು; ಬೊಬ್ಬೆ ಹೊಡಿ; ಕೂಗಾಡು; ಹೊಯ್ಕೊ.

ಬೊಂಬಾಟ (ವಿ.)= ಭಾರಿ; ಅತ್ಯುತ್ತಮ.

ಬೊಂಬು (ನಾ)= ಪೊಳ್ಳಾದ ಉದ್ದನೆಯ ಬಿದಿರು; ಗಳು; ಕೊಳವೆ; ನಳಿಗೆ.

ಬೊಂಬುಳ್ಳಿ (ನಾ)= ಬೀದರ ಜಿಲ್ಲೆಯ ಒಂದು ಹಳ್ಳಿ.

ಬೊಗದಲ (ನಾ)= ವಗದಾಳ ಎಂಬ ಊರಿನ ವಿಕೃತ ಉರ್ದು ಸ್ವರೂಪ; ನಿಜಾಮ ಆಡಳಿತದಲ್ಲಿ ವಗದಾಳ ಕೆಟ್ಟು ಬಗದಲ್, ಬೊಗದಲ್ ಎಂದಾಗಿದೆ.

ಬೊಗ್ಗು (ಕ್ರಿ)= ಬಗ್ಗು; ಬಾಗು; ಮಣಿ; ಸೋಲು.

ಬೊಚ್ಚು (ವಿ.)= ಬಚ್ಚು; ಬಕ್ಕ; ಹಲ್ಲಿಲ್ಲದ.

ಬೊಚ್ಚುಬಾಯಿ (ನಾ)= ಹಲ್ಲು ಮೂಡದಬಾಯಿ; ಹಲ್ಲುದುರಿದ ಮುದುಕರ ಬಾಯಿ; ಹಲ್ಲುದುರಿದ ಬಾಯಿ.

ಬೊಟ್ಟು (ನಾ)= ಬಟ್ಟು; ಬೆರಳು; ಅಂಗುಲಿ; ಕಾಲಿನ ಅಥವಾ ಕೈಯ ಬೆರಳು.

ಬೊಟ್ಟು ಕಚ್ಚು (ಕ್ರಿ)= ಬಟ್ಟು ಕಚ್ಚು; ಆಶ್ಚರ್ಯ ಪಡು; ಚಕಿತನಾಗು.

ಬೊಟ್ಟು ಮಾಡು (ಕ್ರಿ)= ಬಟ್ಮಾಡಿಸು; ಬೆರಳಾಡಿಸು; ಕೆಡಿಸು.

ಬೊಡ್ಡಿ (ನಾ)= ಬೊಡ್ಡೆ; ಗಿಡದ ಬುಡ; ಸೂಳೆ.

ಬೊಡ್ಡಿ ಮಗ (ನಾ)= ಸೂಳೆಮಗ.

ಬೊಬ್ಬಾಟ (ನಾ)= ಕೂಗಾಟ; ಚೀರಾಟ; ಅಬ್ಬರ; ಅರ್ಭಾಟ.

ಬೊಬ್ಬಾನಬೊಬ್ಬಿ (ದ್ವಿ)= ರಾದ್ಧಾಂತವೋ ರಾದ್ಧಾಂತ

ಬೊಬ್ಬಿ (ನಾ)= ಬೊಬ್ಬಿಕ್ಕುವಿಕೆ; ಹೊಯ್ಕೊಳ್ಳುವಿಕೆ; ಚೀರಾಟ; ಕೂಗಾಟ; ಅಬ್ಬರ; ಆರ್ಭಟ.

ಬೊಬ್ಬಿ ಮಾಡು (ಕ್ರಿ)= ಚೀರಾಡು; ಕೂಗಾಡು; ಜಾಹೀರು ಮಾಡು.

ಬೊಬ್ಬಿ ಹೊಡಿ (ಕ್ರಿ)= ಹೊಯ್ಕೊ; ಚೀರಾಡು; ಬೊಬ್ಬಿಕ್ಕು.

ಬೋಳಾಸ್ಗಡ್ಡಿ (ನಾ)= ಹೊಲದಲ್ಲಿ ಥಾಳಿಯೊಟ್ಟಿ ಉರಿ ಹೊತ್ತಿಸಿ ತೊಗರೆ ಅಥವಾ ಅವರೆ ಕಾಳನ್ನು ಗಡಿಗೆಯಲ್ಲಿ ಕುದಿಸಿ ತಯಾರಿಸಿದ ಗುಗ್ಗರಿ.

ಬೋಂಡಾ (ನಾ)= ಕಡ್ಲೆ ಹಿಟ್ಟಿನಿಂದ ತಯಾರಿಸಿದ ಕರಿಗಡುಬು.

ಬೋಂದ್ಯಾ (ನಾ)= ಬೂಂದಿ ಲಾಡು; ಕಡಲೆಹಿಟ್ಟು; ನೀರನ್ನು ಬೆರೆಸಿ ಕರಿದು ತಯಾರಿಸಿದ ಕಾಳಿನ ಉಂಡಿ.

ಬೋಂಬಡಿ (ನಾ)= ಜೋರಾಗಿ ಕೂಗಿ ಬಾಯಿ ಬಡಿದುಕೊಳ್ಳುವಿಕೆ; ಬೊಬ್ಬಿಡುವಿಕೆ; ಹೊಯ್ಕೊಳ್ಳುವಿಕೆ.

ಬೋಂಬಡಿ ಹೊಡಿ (ಕ್ರಿ)= ಬೊಬ್ಬೆ ಹೊಡೆ; ಬೊಬ್ಬಿಕ್ಕು.

ಬೋಕಿ (ನಾ)= ಒಡೆದ ಮಡಿಕೆಯ ಚೂರು.

ಬೋಗಸ್ (ವಿ) ಇಂ.= ನಕಲಿ; ಸುಳ್ಳು; ಅಸಲಿ ಅಲ್ಲದ; ಮೂಲವಲ್ಲದ.

ಬೋಗಿ (ನಾ) ಇಂ.= ರೈಲು ಬಂಡಿಯ ಬಿಡಿಗಾಡಿ, ಬಿಡಿಡಬ್ಬಿ.

ಬೋಜಾ (ನಾ)= ಭಾರ; ಒಜ್ಜಿ.

ಬೋಜುವಾರ ಮಸಾಲಿ (ನಾ) ಹಿಂ= ಮಸಾಲೆ ಪದಾರ್ಥಗಳ ಮಿಶ್ರಣ.

ಬೋಡುಕು ನೆತ್ತಿ (ನಾ)= ಬೋಳಿಸಿದ ತಲೆ; ಬರಿತಲೆ; ಕೂದಲುದುರಿದ ತಲೆ.

ಬೋದು (ನಾ)= ಸಣ್ಣ ಕುಳಿ, ತಗ್ಗು; ಚೆಂಡು ಅಥವಾ ಚಿಣಿ ಈಚಲು ಬಳಸುವ ಕುಳಿ, ತಗ್ಗು.

ಬೋಧಿಗಿಡ (ನಾ)= ಗೌತಮ ಬುದ್ಧನು ಜ್ಞಾನೋದಯ ಹೊಂದಲು ಆಶ್ರಯಿಸಿದ ಆಲದಮರ.

ಬೋಧು (ನಾ)= ಬೋಧಿಸುವವನು; ಹಾದಿಗೆ ಹಚ್ಚುವವನು; ಹಾದಿ ಬಿಡಿಸುವವನು.

ಬೋನ (ನಾ)= ಬಾನ; ಅನ್ನ; ಕಳವೆ ಅಥವಾ ನವಣೆಯ ಅಕ್ಕಿಯನ್ನು ಕುದಿಸಿ ತಯಾರಿಸಿದ ಆಹಾರ.

ಬೋಮ್ಡಿ (ನಾ)= ಬೋಂಬ್ಡಿ; ಬೋಂಬ್ಡಾ; ಹೊಯ್ಕೊಳ್ಳುವಿಕೆ.

ಬೋಯಿ (ನಾ)= ಅಂಬಿಗ; ಮೀನುಗಾರ; ಬೆಸ್ತರವನು.

ಬೋಯಿತಿ (ನಾ)= ಅಂಬಿಗರ ಮಹಿಳೆ; ಬೆಸ್ತರವಳು; ಮೀನುಗಾರ್ತಿ (ವಚನ:- ವ್ಯಾಸ ಬೋಯಿತಿಯ ಮಗ ಮಂಡೋದರಿ ಕಪ್ಪೆಯ ಮಗಳು -ಬಸವಣ್ಣನವರು)

ಬೋರ್ (ನಾ)= ಇಂ.= ಬೇಸರ; ಬೇಜಾರು; ತಲೆಚಿಟ್ಟು.

ಭೋರ (ವಿ.)= ಬಲಿತ; ದಪ್ಪಾದ; ಬಿರುಸಾದ.

ಬೋರಾಗು (ಕ್ರಿ)= ಬಲಿ; ದಪ್ಪವಾಗು; ಬಿರುಸಾಗು.

ಬೋರಾಗು (ಕ್ರಿ) ಇಂ.= ಬೇಸರವಾಗು; ಬೇಜಾರಾಗು.

ಬೋರಿ ಕಾಯಿ (ನಾ)= ಬೋರೆಹಣ್ಣು.

ಬೋರ್ಮಾಳಸರ (ನಾ)= ಚಿನ್ನದ ಗುಂಡಿನ ಮಾಲೆ.

ಬೋಲ್‌ಚಾಲ್ (ನಾ)= ಮಾತು ಮತ್ತು ರೀತಿ; ನಡಾವಳಿ; ನೀತಿನಿಯಮ.

ಬೋಲ್ ಬಾಲಾ (ನಾ) ಉ.= ಸಮೃದ್ಧಿ; ವೈಭವ; ಸಂಭ್ರಮ; ಸಂತಸ.

ಬೋಲಿ (ನಾ)= ಹರಾಜಿನಲ್ಲಿ ಬೆಲೆ ಏರಿಸುವಿಕೆ.

ಬೋಳ, ಬೋಳಾ (ನಾ)= ಕೂಸುಗಳಿಗೆ ಮೊಲೆ ಹಾಲಿನಲ್ಲಿ ಬೆರೆಸಿ ಕುಡಿಸುವ ಕಹಿ ಕಹಿಯಾದ ಮದ್ದು.

ಬೋಳಿ (ನಾ)= ಕೋಡು ಕೆಳಮುಖವಾಗಿ ಜೋತು ಬಿದ್ದಿರುವ ಆಕಳು, ಎಮ್ಮೆ, ಹೋರಿ ಇತ್ಯಾದಿಗಳಿಗೆ ಸಂಬೋಧಿಸುವ ರೂಢಿಯ ಹೆಸರು; ತಲೆ ಬೋಳಿಸಿಕೊಂಡ ಬ್ರಾಹ್ಮಣ ವಿಧವೆ, ತಲೆಬೋಳಿಸಿ ಕೊಂಡವಳು.

ಬೋಳಿಹಿರೆಪ್ಪ (ನಾ)= ಹಿರಿಯ; ಒಡೆಯ; ವಿಧವೆಯ ಗಂಡ; ತಲೆಬೋಳಿಸಿಕೊಂಡವನು.

ಬೋಳೆಪ್ಪ (ನಾ)= ಹಿರಿಯ; ವಿಧವೆಯ ಗಂಡ; ತಲೆಬೋಳಿಸಿಕೊಂಡವನು.

ಬೋಳ್ಯಾ (ನಾ)= ತಲೆಬೋಳಿಸಿ ಕೊಂಡವನು; ಹಿರಿಯ.

ಬೋಳ್ಸು (ಕ್ರಿ)= ಬೋಳಿಸು; ಕತ್ತಿಯಿಂದ ತಲೆಯ ಕೂದಲನ್ನು ತೆಗೆದು ನುಣ್ಣಗೆ ಮಾಡು; ಗಡ್ಡದ ಕೂದಲನ್ನು ಇಲ್ಲದಂತೆ ಮಾಡು. (ನು)=ಜೇಬಿಗೆ ಕತ್ತರಿ ಹಾಕು; ಹಣವನ್ನು ಕೀಳು.

ಬೌ (ನಾ)= ಬವ್ವ; ಹುಳು; ಕ್ರಿಮಿ (ಬಾಲಭಾಷೆ).

ಬೌದ್ಧ (ನಾ)= ಬುದ್ಧನ ಅನುಯಾಯಿ; ಬುದ್ಧನಿಗೆ ಸಂಬಂಧಿಸಿದುದು.

ಬೌ ಬಿಡು (ನು)= ಕಿವಿತುಂಬು; ತಪ್ಪು ದಾರಿಗಳೆ; ಜಗಳ ಹಚ್ಚು; ಭೇದ ಹುಟ್ಟಿಸು.

ಬೌವ್ವಾ (ನಾ)= ಬವ್ವ; ಹುಳು; ಕ್ರಿಮಿ; ಕೀಟ (ಬಾಲಭಾಷೆ.)

ಬ್ಯಾಂಬ್ರಿ (ನಾ)= ಔರಾದ ತಾಲೂಕಿನ ಬೇಂಬ್ರಿ ಎಂಬ ಊರು; ಪರಭಾಷಿಕರು ಬಾಯಲ್ಲಿ ಬೇಂಬ್ರಾ ಎಂದಾಗಿದೆ.

ಬ್ಯಾಟಿ (ನಾ)= ಬೇಟೆ; ಶಿಕಾರಿ.

ಬ್ಯಾಟಿಯಾಡು (ಕ್ರಿ)= ಬೇಟೆಯಾಡು; ಕಾಡಿನ ಪಶುಪಕ್ಷಿಗಳನ್ನು ಹೊಡೆ; ಬಂಧಿಸು.

ಬ್ಯಾಟ್ರಿ (ನಾ) ಇಂ.= ತೂರುದೀಪ; ಟಾರ್ಚು.

ಬ್ಯಾಡ (ನಾ)= ಬೇಡರವನು; ಬೇಟೆಗಾರ; ಬೇಡ (ನಿಷೇಧ)

ಬ್ಯಾಡತಿ (ನಾ)= ಬೇಡರವಳು.

ಬ್ಯಾಡಾಗು (ಕ್ರಿ)= ಬೇಡವಾಗು; ಒಲ್ಲದಾಗು.

ಬ್ಯಾನಿ (ನಾ)= ಬೇನೆ; ರೋಗ.

ಬ್ಯಾನಿ ಬೆಕ್ಕು (ನು)= ಬೇನೆ ಬಿದ್ದ ಬೆಕ್ಕಿನಂತೆ ಮೈ ಎಲುಬು ತೇಲಿದವ; ರೋಗಿಷ್ಟ; ಬಡಕಲು ಮೈಯವನು(ಳು). (ಕ್ರಿ) ಬ್ಯಾನಿ ಬೆಕ್ಕಾಗು= ಬಡಕಲು ಶರೀರದವನಾಗು; ಬಡಕಲಾಗು; ಎಲುಬಿನ ಹಂದರದಂತಾಗು; ಬರಗಾಲದ ಹೆಣದಂತಾಗು.

ಬ್ಯಾರೆ (ಅ)= ಬೇರೆ; ಅಲಾಕ.

ಬ್ಯಾರೆಬ್ಯಾರೆ (ದ್ವಿ)= ಬೇರೆಬೇರೆ; ಅಲಾಕಲಾಕ

ಬ್ಯಾರೆ ಮನಿಮಾಡು (ಕ್ರಿಉ)= ಬೇರೆ ಕಡೆ ಸಂಸಾರ ಮಾಡು; ಬೇರೆಯಾಗು.

ಬ್ಯಾಲಳ್ಳಿ (ನಾ)= ಭಾಲ್ಕಿ ತಾಲೂಕಿನ, ಕಾರಂಜಾ ಅಣೆಕಟ್ಟಿಗೆ ಹೊಂದಿದ ಒಂದು ಹಳ್ಳಿ (ಹಂತಿಹಾಡು:- ಹಾಲಳ್ಳಿ ಬ್ಯಾಲಳ್ಳಿ। ನಡುವ ನೀಲಂನಳ್ಳಿ। ತೆಗ್ಗಿನಾಗಾದ ಮೈಲಾರ। ಮಲ್ಲಯ್ನ। ಹುಬ್ಬಿನಾಗಾದಾ ಸಿರಿಗಂಧ); ಲೇಂಗ್ಟಿ ಕರಿಬಸವೇಶ್ವರರ ಕಾಯಕ ಕ್ಷೇತ್ರ.

ಬ್ರಮ್ಮಗಂಟು (ನಾ) ಸಂ.= ಬ್ರಹ್ಮಗಂಟು; ಸತಿಪತಿಗಳ ವಿವಾಹ ಬಂಧನ.

ಬ್ರಮ್ಮದಂಡಿ (ನಾ)= ಬ್ರಹ್ಮದಂಡಿ; ಒಂದು ಬಗೆಯ ಹೂವುಳ್ಳ ಮುಳ್ಳು ಸಸ್ಯ.

ಬ್ರಮ್ಮೂಪ್ರ (ನಾ)= ಬೀದರ ನಗರದ ಒಂದು ಬಡಾವಣೆ; ಕಲಬುರ್ಗಿಯ ಒಂದು ಬಡಾವಣೆ.

ಬ್ರಮ್ಮ (ನಾ)= ಬ್ರಹ್ಮ.

ಬ್ರಮ್ಮಿ (ನಾ)= ಭ್ರಮೆ.

ಬ್ರಮ್ಮಿಲಿಖಿತ (ನಾ)= ಬ್ರಹ್ಮ ಬರಹ; ಬ್ರಹ್ಮ ಲಿಖಿತ.

ಬ್ರಾಂಡಿ (ನಾ)= ಬ್ರ್ಯಾಂಡಿ; ಅತಿ ಬೆಲೆಯ ಸೆರೆ.

ಬ್ರಾಮ್ಮಣ (ನಾ)= ಬ್ರಾಹ್ಮಣ; ಹಾರುವ.

ಬ್ರುಂದಾವನ (ನಾ)= ಬೃಂದಾವನ; ವೃಂದಾವನ; ರಾಘವೇಂದ್ರ ಸ್ವಾಮಿಗಳ ತೀರ್ಥ ಕ್ಷೇತ್ರವಾದ ಆಂಧ್ರದ ಮಂತ್ರಾಲಯ.

ಬ್ರೆಂಚು (ನಾ) ಇಂ.= ಬೆಂಚು; ಬಹಳ ಜನ ಸಾಲಾಗಿ ಕುಳಿತುಕೊಳ್ಳುವ ಆಸನ.

ಬ್ರೇಕು (ನಾ) ಇಂ.= ಅಡ್ಡಿ; ತಡೆ; ರೋಕು; ಓಡುವ ವಾಹನವನ್ನು ನಿಲ್ಲಿಸುವ ಸಾಧನ.

ಬ್ರೇಕು ಹಾಕು (ಕ್ರಿ)= ವಾಹನ ಓಡದಂತೆ ತಡೆಯೊಡ್ಡು; ನಿಲ್ಲಿಸು; ಓಡದಂತೆ ಮಾಡು.

ಬ್ಲೇಡು (ನಾ)= ರೇಜರ್ ಪತ್ತಿ; ಕ್ಷೌರದ ಕತ್ತಿ; ಕರಗಸದ ಹಲ್ಲು.

ಬ್ಲೌಜು (ನಾ) ಇಂ. = ಕುಪ್ಪಸ.

ಬ್ಲ್ಯಾಕು (ನಾ) ಇಂ.= ಕಪ್ಪು; ಕಪ್ಪು ವ್ಯವಹಾರ; ಕಳ್ಳ ಸಂತೆ.

ಬ್ಲ್ಯಾಕ್‌ದಂಧೆ (ನಾ)= ಕಳ್ಳಸಂತೆ.

ಭ

ಭಂಕಡ (ವಿ)= ಡೊಂಕು.

ಭಂಕಡಗಾಲು (ನಾ)= ಕಿಸುಗಾಲು; ಡೊಂಕು ಗಾಲು.

ಭಂಕಡಿ (ವಿ)= ಅಂಕಡೊಂಕ; ಒಂಕಟಂಕ; ಸೊಟ್ಟ; (ನಾ)= ಸೊಟ್ಟಾದದ್ದು; ಡೊಂಕಾದದ್ದು. ಡೊಂಕುಗಾಲಿನವಳು.

ಭಂಕಡ್ಯಾ (ನಾ)= ಅಂಕು ಡೊಂಕು ಕೈಕಾಲಿನವನು. (ಬೈಗುಳ)

ಭಂಗ (ನಾ)= ಹೋಳಿ ಹುಣ್ಣಿಮೆಯಂದು ಕುಡಿವ ಗಾಂಜಾ ಮಿಶ್ರಿತ ನಶೆ ತರುವ ಪೇಯ.

ಭಂಗಾ (ನಾ)= ದೊಡ್ಡ ರಂಧ್ರ; ಆಳ ಕುಳಿ; ತಗ್ಗು.

ಭಂಗಾಗು (ಕ್ರಿ)= ಒಡೆ; ಚೂರಾಗು; ತುಂಡಾಗು; ಭಗ್ನವಾಗು (ಉದಾ:- ರಜಾಕಾರ ಯಾಳ್ಯಾಕ ಏಸೋ ಮೂರ್ತಿ ಭಂಗಾದುವು).

ಭಂಗಾರ (ನಾ)= ಹೊನ್ನು; ಚಿನ್ನ; ಬಂಗಾರ.

ಭಂಗಾರಿ (ನಾ)= ಬಂಗಾರ ವರ್ಣದವಳು; ಚಿನ್ನದಂತೆ ಮುದ್ದಾದವಳು; ಬಂಗಾರದಂಥ ಗುಣದವಳು.

ಭಂಗಿ (ನಾ)= ಹೋಳಿ ಹುಣ್ಣಿಮೆಯಂದು ಕುಡಿವ ಗಾಂಜಾ ಬೆರೆಸಿದ ನಶೆ ತರುವ ಪೇಯ; ಭಂಗ; ಗಾಂಜಾ; (ಹಾಡು:- ಭಂಗಿ ಕುಡಿದು ನೀ ಗುಂಗಿನಾಗ ಕುಂತಿದಿ। ತಂಗಿ ತಾಯಿಯೆಂಬ ಖೂನ ಮರೆತಿದಿ।); ಕಕ್ಕಸ ತೊಳೆವವನು;

ಭಂಗು (ನಾ)= ನೀಲಕಂಠ ಪಕ್ಷಿ; ಭಂಗ.

ಭಂಗೂರು (ನಾ)= ಮುಂಬೈ ಹೈದ್ರಾಬಾದ್ ಮಹಾಮಾರ್ಗದಲ್ಲಿ ಇರುವ ಒಂದು ಹಳ್ಳಿ ಅದಕೀಗ ಭಂಗೂರಾ ಎಂತಲೂ ಕರೆಯುತ್ತಿದ್ದಾರೆ. ಹರ್ಡೇಕರ ಮಂಜಪ್ಪನವರ ಆಧುನಿಕ ವಚನಗಳು ಇಲ್ಲಿ ಸಿಕ್ಕಿವೆ.

ಭಂಡಾಫೋಡ (ನಾ) ಹಿಂ.= ಗುಟ್ಟುರಟ್ಟಾಗುವಿಕೆ.

ಭಂಡಾ ಫೋಡಾಗು (ಕ್ರಿ)= ಗುಟ್ಟು ರಟ್ಟಾಗು; ರಹಸ್ಯ ಬಯಲಾಗು.

ಭಂಡಾರ (ನಾ)= ಖಜಾನೆ; ಹಿಟ್ಟು; ಕುಂಕುಮ; ಅರಿಷಿಣ; ಅಂಬಾಬಾಯಿಯ ಅರಿಷಿಣ.

ಭಂಡಾರಿ (ನಾ)= ಕಹಳೆ ಊದುವವನು; ಸಿಂಗು ಊದುವವನು; ಸಿಂಗ್ಯಾ; ಸಿಂಗೇರು.

ಭಂಡಾರ್ಖಾನಿ (ನಾ)= ಕೋಟಾಖಾನೆ; ಗೋದಾಮು.

ಭಂಡಿ (ನಾ)= ಎತ್ತಿನಗಾಡಿ; ಬಂಡಿ (ಒಗಟು:- ಭಂಡಿ ಓಡ್ತಾದ। ಭಂಡಾರ ಛೆಲ್ತಾದ।। -ಬೀಸು ಕಲ್ಲು ಮತ್ತು ಬೀಸಿದ ಹಿಟ್ಟು.)

ಭಂಡಿ ಹೊಡಿ (ಕ್ರಿ)= ಎತ್ತಿನ ಬಂಡಿ ನಡೆಸು; ಬಂಡಿಯ ಮೂಲಕ ಸಾಗಣೆ ಉದ್ಯೋಗ ನಡೆಸು.

ಭಕ್ಕರಿ (ನಾ) ಮ.= ಭಕ್ರಿ; ಭಾಕರ; ರೊಟ್ಟಿ (ಬ್ರಾಹ್ಮಣಭಾಷೆ)

ಭಕ್ಕಾ (ನಾ)= ಭೊಕ್ಕಾ; ರಂಧ್ರ; ತಗ್ಗು; ಕುಳಿ.

ಭಕ್ತ (ನಾ)= ಭಗ್ತ; ಪೂಜಿಸುವವನು; ಭಕ್ತಿ ಇಟ್ಟವನು; ಆರಾಧಿಸುವವನು.

ಭಕ್ತ ಕುಂಬಾರ (ನಾ)= ಗೋರಾ ಕುಂಬಾರ ಎಂಬ ಮಹಾರಾಷ್ಟ್ರದ ಒಬ್ಬ ಸಂತ (ಹಾಡು:- ಭಕ್ತಿ ಇಟ್ಟು ಅವಭಜನಿ ಮಾಡುತಿದ ಭಕ್ತಾ ಕುಂಬಾರಾ। ಆತನ ಭಾವಭಕ್ತಿಗೆ ಪ್ರತ್ಯಕ್ಷ ನಾದನು ವಿಠೋಬ ದೇವರಾ।।)

ಭಕ್ತವಾರ (ನಾ)= ಚಿಂಚೋಳಿ ತಾಲೂಕಿನ ಗಾರಂಪಳಿ ಗ್ರಾಮದ ಒಬ್ಬ ಶರಣ ಹಾಗೂ ತತ್ವ ಪದಕಾರ.

ಭಕ್ತಿ (ನಾ)= ಭಗ್ತಿ; ಗುರುಹಿರಿಯರು ಮತ್ತು ದೇವರಲ್ಲಿ ತೋರುವ ಪೂಜ್ಯ ಭಾವನೆ.

ಭಕ್ರಿ (ನಾ) ಯ.= ಭಕ್ಕರಿ; ಭಾಕರ; ರೊಟ್ಟಿ (ಬ್ರಾಹ್ಮಣ ಭಾಷೆ)

ಭಕ್ರಿ ಬಡಿ (ಕ್ರಿ)= ರೊಟ್ಟಿ ಸಿದ್ಧಗೊಳಿಸು (ಬ್ರಾಹ್ಮಣ ಭಾಷೆ)

ಭಗಭಗ (ದ್ವಿ)= ಉರುಪಿನ ಪರಿ.

ಭಗಭಗನು (ಕ್ರಿ)= ಉರುಪಿಡು.

ಭಗವಂತ (ನಾ)= ದೇವರು; ಪರಮಾತ್ಮ; ಪರಶಿವ.

ಭಗವಾ (ನಾ)= ಕಾವಿಬಣ್ಣ; ಕೇಸರಿಬಣ್ಣ.

ಭಗವಾನ (ನಾ)= ದೇವರು; ಪರಮಾತ್ಮ; ಪರಶಿವ; ಭಗವಂತ.

ಭಗಾಡ (ನಾ)= ದೊಡ್ಡದಾದ ರಂಧ್ರ; ಕುಳಿ; ತಗ್ಗು.

ಭಗಾಡಿ (ನಾ)= ಭಗಾಡ (ನೋಡಿರಿ).

ಭಗಾಡಿ ಭೀಳು (ಕ್ರಿ)= ದೊಡ್ಡ ರಂಧ್ರ ಉಂಟಾಗು; ಕುಳಿ ಉಂಟಾಗು; ತಗ್ಗು ಉಂಟಾಗು.

ಭಗಾಸು (ಕ್ರಿ)= ಓಡಿಸು; ಭಾಗಿಸು.

ಭಗುಳು (ಕ್ರಿ)= ಬೊಗಳು; ಹೇಳು; ಬಾಯ್ಬಿಡು.

ಭಗ್ಗಂತ (ಅ)= ಭಗ್ಗನೆ; ಬಗ್ಗನೆ.

ಭಗ್ಗರ್ಗಿ (ನಾ)= ಬಗ್ಗರಿಗೆ; ಒಡಕು ಗಡಿಗೆ; ಬೋಕಿ.

ಭಗ್ಗಾಳ (ನಾ)= ಗಾಢ ಕತ್ತಲೆ.

ಭಗ್ತ (ನಾ)= ಭಕ್ತ (ನೋಡಿರಿ).

ಭಗ್ತಿ (ನಾ)= ಭಕ್ತಿ (ನೋಡಿರಿ).

ಭಗ್ತಿವಂತ (ನಾ)= ಭಕ್ತಿವಂತ; ಭಕ್ತಿಯುಳ್ಳವನು;

ಭಗ್ತಿವಂತಿ (ನಾ)= ಭಕ್ತಿವಂತೆ; ಭಕ್ತಿ ಯುಳ್ಳವಳು.

ಭಗ್ಯಾ (ನಾ)= ಭಾಗ್ಯ; ಬ್ರಹ್ಮಲಿಖಿತ.

ಭಜನಿ (ನಾ)= ಭಜ್ನಿ; ಭಜನೆ; ತಾಳ ಕುಟ್ಟುತ್ತ ದೇವರ ನಾಮಸ್ಮರಣೆ ಮಾಡುವಿಕೆ; ಹೊಡೆ ಯುವಿಕೆ; ಥಳಿಸುವಿಕೆ. (ಹಾಡು : ಭಜನಿ ಎಂಬುದು ಭೆಂಕಿಯಮಟ್ಟಿ । ಭಜನ್ಯಾಗ ನಿಂತು ನಂಗಬಾರದೊ ।)

ಭಜನಿ ಮಾಡು (ಕ್ರಿ)= ಭಜ್ನಿ ನೆರವೇರಿಸು; ಭಜನೆ ಮಾಡು; ತಾಳಕುಟ್ಟುತ್ತ ದೇವರ ನಾಮ ಸ್ಮರಣೆ ಮಾಡು; ಮೈಮೇಲೆ ಚೆನ್ನಾಗಿ ಥಳಿಸು, ಹೊಡೆ (ಭಜನೆ:- ಭಜನಿಯ ಮಾಡಿರೋ। ಸಾಂಬನ। ಭಜನಿಯ ಮಾಡಿರೋ।।)

ಭಜಾ (ನಾ)= ಭಜಿ; ಪುಟಗುಳಿ; ಕಡ್ಲೆ ಹಿಟ್ಟಿನಿಂದ ತಯಾರಿಸಿದ ಕರಿದ ತಿಂಡಿ.

ಭಜಿ (ನಾ)= ಭಜಾ (ನೋಡಿರಿ).

ಭಜಿ ಹಾಕು (ಕ್ರಿ)= ಭಜಿ ತಯಾರಿಸು; ಕಡಲೆ ಹಿಟ್ಟು, ಖಾರ್ಪುಡಿ, ಅರಿಷಿಣ, ಉಳಿಗಡ್ಡಿ, ನೀರು ಬೆರೆಸಿ ಪುಟ್ಟ ಪುಟ್ಟ ವಡೆಯ ಗಾತ್ರದಲ್ಲಿ ತಿಂಡಿ ತಯಾರಿಸು; ಪುಟಗುಳಿ ಕರಿ.

ಭಜ್ಜಿ (ನಾ)= ಯಳ್ಳಮವಾಸ್ಯೆಯಂದು ಭೂಮಿ ತಾಯಿಯ ಬಂಕೆಯೂಟಕ್ಕೆಂದು ತಯಾರಿಸಿದ ವಿಶೇಷ ಪಲ್ಲೆ; ಕಡ್ಲೆ ಹಿಟ್ಟು, ನಾನಾಪ್ರಕಾರದ ತರಕಾರಿ ಸೊಪ್ಪು, ಹಲವು ಬಗೆಯ ದ್ವಿದಳ ಕಾಳು, ಹುಳಿ, ಖಾರ, ಉಪ್ಪು, ಎಣ್ಣೆ ಕಾಳು ಇತ್ಯಾದಿ ಬೆರೆಸಿ ಭೂಮಿತಾಯಿಗಾಗಿ ತಯಾರಿಸಿದ ಬಂಕೆಯೂಟದ ವಿಶೇಷ ಪಲ್ಯ.

ಭಜ್ನಿ (ನಾ)= ಭಜನಿ (ನೋಡಿರಿ).

ಭಜ್ನಿ ಮಾಡು (ಕ್ರಿ)= ಭಜನಿ ಮಾಡು (ನೋಡಿರಿ).

ಭಟಾರ (ನಾ)= ಸಣಬಿನಿಂದ ತಯಾರಿಸಿದ ಖಾಲಿ ಚೀಲ; ಅನಾಜು ತುಂಬುವ ಸಣಬಿನ ಚೀಲ; ಗಲ್ತಾನಿ ಚೀಲ.

ಭಟ್ಟ (ನಾ)= ಬ್ರಾಹ್ಮಣ; ಅಡುಗೆ ಮಾಡುವವನು; ಅರ್ಚಕ; ಪೂಜಾರಿ.

ಭಟ್ಟಿ (ನಾ)= ಸೆರೆ ತಯಾರಿಸಲು ಬಳಸುವ ಒಂದು ಹಬೆಯ ಸಾಧನ; ಮಂಡಳ್ಳು; ಕಡ್ಲೆ ಪುಟಾಣಿ ಇತ್ಯಾದಿಗಳನ್ನು ತಯಾರಿಸುವ ಒಲೆ ಮತ್ತು ಕಾರ್ಖಾನೆ; ಕುದಿಸಿ ಶೋಧಿಸಿ, ಸಾರ ತೆಗೆವ ಒಲೆ ಮತ್ತು ಕಾರ್ಖಾನೆ.

ಭಟ್ಟಿ ಇಳ್ಸು (ಕ್ರಿ)= ಕಾಸಿ, ಕುದಿಸಿ, ಶೋಧಿಸಿ ಸಾರ ತೆಗೆ.

ಭಟ್ಟಿ ಕೆಡು (ನು)= ಹಾಳಾಗು; ಕೆಟ್ಟುಹೋಗು.

ಭಟ್ಟಿ ಬಿಗಡಾಸು (ನು)= ರೀತಿ ತಪ್ಪು; ಹದಗೆಡು.

ಭಡಕ್ನೆ (ಅ)= (ನೀರು, ಹಾಲು, ಎಣ್ಣೆ ಇತ್ಯಾದಿ ಗಳನ್ನು) ರಭಸದಿಂದ ಸುರಿಯುವಿಕೆಯ ಕ್ರಮ.

ಭಡಭಡ (ದ್ವಿ)= ಬೇಗ ಬೇಗ (ಜಾನಪದ ಪ್ರಾಸ:- ಭಡಭಡ ಬಂದ। ಭೆಂಡಿ ಕಾಯಿ ತಂದ। ಪಲ್ಯ ಮಾಡಂದ। ಮಾಡಾಲಂದ। ಝಾಡಿಸಿ ಒದ್ದ। ಕಡ್ಕೊಂಡ್ಬಿದ್ದ।।).

ಭಡಾನೆ (ಅ)= ಬೇಗನೆ.

ಭಡಾಭಡಾ (ದ್ವಿ)= ಭಡಭಡ; ಬೇಗಬೇಗ.

ಭಡ್ಕುಳಿ (ನಾ)= ಸಂಸಾರದ ಅಗತ್ಯ; ಸಂಸಾರದ ಆಶೆ ಆಕಾಂಕ್ಷೆ.

ಭಡ್ಡಿ (ನಾ)= ಭರಡಿ; ನವಣೆ, ಬರಗು, ಸ್ಯಾವಿ, ನೆಲ್ಲು ಮೊದಲಾದುವನ್ನು ಥಳಿಸುವ ಮೊದಲು ಬೀಸು ಕಲ್ಲಿನಿಂದ ಹೊಟ್ಟುದುರುವಂತೆ ಮಾಡಿದ್ದು.

ಭಣಭಣ (ದ್ವಿ)= ಬಿಕೋ ಎನಿಸುವಿಕೆ.

ಭಣಮಿ (ನಾ)= ಬಣವೆ; ಕಣಿಕೆ, ಕುಳ್ಳು, ಹುಲ್ಲು ಇತ್ಯಾದಿಗಳ ಒಟ್ಟಿಲು.

ಭಣಮಿ ಒಟ್ಟು (ಕ್ರಿ)= ಕಣಿಕೆ ಸೂಡು; ಹುಲ್ಲು ಸೂಡು, ಕುಳ್ಳು ಇತ್ಯಾದಿ ವ್ಯವಸ್ಥಿತವಾಗಿ ರಾಶಿಗೊಳಿಸು.

ಭಣಮಿ ಒಟ್ಲಿ(ಬೈಗಳು)= ಕುಳ್ಳು ಕಟ್ಟಿಗೆಗಳ ಚಿತೆ ಒಟ್ಟಿ ಸುಟ್ಟು ಬಿಡಲಿ; ಸುಟ್ಟುಗೊಂಡು ಸಾಯಲಿ. (ಬೈಗುಳ)

ಭಣಮ್ಯಾಗಿಕ್ಲಿ(ಬೈಗಳು)= ಕುಳ್ಳು ಬಣವೆಯಲ್ಲಿಟ್ಟು ಸುಟ್ಟು ಬಿಡಲಿ. (ಬೈಗುಳ)

ಭತ್ತ (ನಾ)= ನೆಲ್ಲು; ಕಳವೆ.

ಭತ್ತಮುರ್ಗಿ (ನಾ)= ಭಾಲ್ಕಿ ತಾಲೂಕಿನ ಒಂದು ದೊಡ್ಡ ಊರು. ಅದು ಈಗ ಭಾತಂಬ್ರಾ ಆಗಿದೆ.

ಭತ್ತಾ (ನಾ)= ದಿನದ ಖರ್ಚು; ಪ್ರಯಾಣ ಮತ್ತು ಇತರೆ ಭತ್ತೆ.

ಭದ್ದಾ (ವಿ)= ವಿಕಾರಗೊಂಡ; ಅಂದಗೆಟ್ಟ.

ಭದ್ದುರ್ಗೇಡಿ (ನಾ)= ಬಂಗಾಲ ಭದ್ರಿ, ನಂಬಿಕೆ ಕಳೆದುಕೊಂಡವನು/ಳು; ಅವಕಳೆ (ಬೈಗುಳ).

ಭದ್ಬದಿ (ನಾ)= ನೀರ್ಬೀಳ್; ಜಲಪಾತ.

ಭಪ್ರೆ (ಅ)= ಭಲಲೆ; ಶಾಬ್ಬಾಷ.

ಭಬ್ಕಿ (ನಾ)= ಹುಸಿ ಬಡಿವಾರ; ಸುಳ್ಳು ಭರವಸೆ.

ಭಬ್ಕಿ ಒತ್ತು (ಕ್ರಿ)= ಹುಸಿ ಬಡಿವಾರ ಹೇಳು; ಒಡ್ಡು ಹೇಳು.

ಭಬ್ರುವಾನ (ನಾ)= ಬಭ್ರುವಾಹನ; ಮಹಾ ಭಾರತದ ಒಂದು ಪಾತ್ರ.

ಭಯಾಣ (ವಿ.)= ಭಯಾನಕ; ಭಯ ಹುಟ್ಟಿಸುವ.

ಭಯಾನಕ (ವಿ)= ಭಯ ಹುಟ್ಟಿಸುವ.

ಭಯ್ಯಾ (ನಾ) ಹಿಂ.= ಭೈಯ್ಯಾ; ಅಣ್ಣ; ತಮ್ಮ.

ಭರಂ (ನಾ)= ಭರಮು; ಬಡಿವಾರ; ದೊಡ್ಡಸ್ತಿಕೆ; ಒಡ್ಡು. (ಗಾದೆ:- ಭರಂಭಾರಿ, ಕಿಶಾಖಾಲಿ).

ಭರಗುಡಿ (ನಾ)= ಒಂದು ಪ್ರಕಾರದ ಹುಲ್ಲು ಜಾತಿಯ ಏಕದಳ ಧಾನ್ಯ.

ಭರಡಿ (ನಾ)= ಭಡ್ಡಿ; ಭಾಡ್ಡಿ; ಬೀಸು ಕಲ್ಲಿನಿಂದ ಭತ್ತ, ನವಣೆ, ಬರಗು ಇತ್ಯಾದಿಗಳನ್ನು ಥಳಿಸುವ ಮೊದಲು ಬೀಸಿ ಹೊಟ್ಟುದುರಿಸಿದ್ದು.

ಭರಣಿ (ನಾ)= ಜೇಡಿಮಣ್ಣಿನ ಇಲ್ಲವೆ ಗಾಜಿನ ಪಾತ್ರೆ; ಉಪ್ಪಿನಕಾಯಿ ತುಂಬಿಡುವ ಜೇಡಿ ಮಣ್ಣಿನ ಇಲ್ಲವೆ ಗಾಜಿನ ಪಾತ್ರೆ.

ಭರತಿ (ವಿ)= ತಂಬಿದ; ಸಂಪೂರ್ಣವಾದ; ಭರ್ತಿ.

ಭರತಿ ಮಾಡು (ಕ್ರಿ)= ತುಂಬು; ಪೂರ್ಣ ಮಾಡು; ಪೂರ್ಣಗೊಳಿಸು; ಭರ್ತಿಗೊಳಿಸು.

ಭರತಿಯಾಗು (ಕ್ರಿ)= ಭರ್ತಿಯಾಗು; ಪೂರ್ಣ ವಾಗು; ತುಂಬವಾಗು.

ಭರಪೂರ (ವಿ)= ಸಂಪೂರ್ಣವಾಗಿ ತುಂಬಿದ; ಪೂರ್ತಿಯಾಗಿ ತುಂಬಿದ.

ಭರಭರ (ದ್ವಿ)= ಸರಸರ; ಬೇಗ ಬೇಗ.

ಭರಾಂತಿ (ನಾ)= ಭ್ರಾಂತಿ.

ಭರಾಟಿ (ಅ)= ವೇಗವಾಗಿ; ರಭಸದಿಂದ; ವೈಭವದಿಂದ.

ಭರಾಭರಾ (ದ್ವಿ)= ಬೇಗಬೇಗ; ವೇಗದಿಂದ; ರಭಸದಿಂದ.

ಭರಾಸಿ (ನಾ)= ಭರವಸೆ; ನಂಬುಗೆ; (ಕ್ರಿ) ತುಂಬಿ.

ಭರಾಸು (ಕ್ರಿ)= ತುಂಬು; ಭರ್ತಿಮಾಡು; ಶಕ್ತಿ ತುಂಬು; ಮಂತ್ರ ಬಲ ನೀಡು;

ಭರಿ ಹಾಕು (ಕ್ರಿ)= ತುಂಬು; ಭರ್ತಿಮಾಡು.

ಭರೋಸಾ (ನಾ) ಹಿಂ= ಭರವಸೆ; ನಂಬುಗೆ.

ಭರೋಸಾ ಮಾಡು (ಕ್ರಿ)= ನಂಬು; ಭರವಸೆ ಮಾಡು.

ಭರ್ಗುಟ್ಟು (ಕ್ರಿ)= ಭರ್‍ರೆಂದು ಸದ್ದು ಮಾಡು.

ಭರ್ಜವಾನಿ (ನಾ) **ಹಿಂ.**= ತುಂಬು ಯೌವನ.

ಭರಡಾ (ನಾ) **ಮ.**= ಕಡಲೆ ಹಿಟ್ಟಿನಿಂದ ತಯಾರಿಸಿದ ಉದುರುದುರು ಪಲ್ಲೆ.

ಭರ್ಡಿ (ನಾ)= ಭರಡಿ (ನೋಡಿರಿ)

ಭರ್ತ (ನಾ)= ಬೆಂಡೆಕಾಯಿ; ಹಸಿ ಮೆಣಸಿನ ಕಾಯಿ, ಹಸಿ ಉಳ್ಳಿಗಡ್ಡೆ, ಉಪ್ಪು ಇತ್ಯಾದಿ ಬೆರೆಸಿ ಅರೆದ ಚಟ್ನಿ (ಜಾನಪದ ಪ್ರಾಸ:- ಭೆಂಡಿಕಾಯಿ ಭರ್ತಾ। ಒಳಗಿನಾಕಿಗಿ ಮರ್ತಾ। ಹೊರ್ಗಿನಾಕಿಗಿ ಬೆರ್ತಾ)

ಭರ್ತಾ ಕುಟ್ಟು (ಕ್ರಿ)= ಬೆಂಡೆಕಾಯಿ ಚಟ್ನಿ ಅರೆ.

ಭರ್ತಿ (ನಾ)= ತುಂಬಿದ್ದು; ಹೂಳಿಕೆ; ಬಾವಿಯ ತಳದಲ್ಲಿ ಭರ್ತಿ ಬಿದ್ದ ಕಲ್ಲು ಮಣ್ಣು ಇತ್ಯಾದಿ.

ಭರ್ತಿ ಭೀಳು (ಕ್ರಿ)= ಬಾವಿಯ ತಳದಲ್ಲಿ ಕಲ್ಲು ಮಣ್ಣು ಇತ್ಯಾದಿ ಮೇಲಿನಿಂದ ಬೀಳು.

ಭರ್ತಿ ಹಾಕು (ಕ್ರಿ)= ಪೂರ್ಣ ಮಾಡು; ಕೊರತೆ ಪೂರೈಸು.

ಭರ್ಮಾರ (ನಾ)= ಪ್ರತಿ ಸಲ ಮೇಲಿನಿಂದ ಮದ್ದುಗುಂಡು ಸೇರಿಸಿ ಹಾರಿಸುವ ಬಂದೂಕು.

ಭರ್ಮು (ನಾ)= ಭರಮು; ಭರಂ; ಒಡ್ಡು; ಆಡಂಬರ.

ಭಲೆ (ಅ)= ಭೇಷ್; ಶಾಬ್ಬಾಶ.

ಭಲೆಭಲೆ (ಅ)= ಭೇಷ್‌ಭೇಷ್ (ದೊಡ್ಡಾಟದ ನಕಲು:- ಭಲೆ ಭಲೆ ಸಾರಥಿ। ನೊಣಾ ತಿಂದು ಕಾರುತಿ। ಟಣಾಟಣಾ ಹಾರುತಿ।)

ಭಲೇರೇ (ಅ)= ಶಬ್ಬಾಶ್; ವಾಹವ್ವಾ (ಗಾದೆ:- ಭಲೇರೇ ಘಾಣ್ಗೆತ್ತಿ ಅಂದ್ರ ಎಣ್ಣೆಲಿಂದೇ ನಿರ್ಮುಟ್ಟುದ್ಭಂತ!)

ಭಲ್ಕಿ (ನಾ)= ಭಲ್ಲುಂಕೆ ಎಂಬ ಪ್ರಾಚೀನ ಹೆಸರಿನ ಊರು ಈಗ ಭಲ್ಕಿ, ಭಾಲ್ಕಿ ಎಂದಾಗಿದೆ. ಐತಿಹಾಸಿಕ ಬಾಲ್ಕೇಶ್ವರ, ಕುಂಭೇಶ್ವರ ದೇವಾಲಯಗಳ ಭಾಲ್ಕಿ. ಚನ್ನಬಸವ ಪಟ್ಟದ್ದೇವರ ಹಿರೇಮಠ ಭಾಲ್ಕಿ. ಸ್ವಾತಂತ್ರ್ಯ ಹೋರಾಟಗಾರ ಭೀಮಣ್ಣಾ ಖಂಡ್ರೆಯವರ ಹುಟ್ಟೂರು ಭಾಲ್ಕಿ. ಡಾ॥ ಜಿ.ಬಿ. ವಿಸಾಜಿ, ವಿಕ್ರಮವಿಸಾಜಿ, ವೀರಶೆಟ್ಟಿ ಬಾವುಗೆ, ಮಲ್ಲಮ್ಮ ಪಾಟೀಲ, ಮುಕ್ತುಂಬಿ, ಬಾಬೈಟ್ಟಿ ಮಂತಾಳಕರ, ಕಾಶೀನಾಥ ಚೆಲುವಾ, ಡಾ॥ ವಿ.ಜಿ. ಭಂಡೆ, ಡಾ॥ ಸೋಮನಾಥ ನುಚ್ಚಾ ಮೊದಲಾದ ಸಾಹಿತಿಗಳ ಕಾಯಕ ಕ್ಷೇತ್ರ. ಶಿಕ್ಷಣ ಶಿಲ್ಪಿ ಡಾ॥ ಬಸವಲಿಂಗ ಪಟ್ಟದ್ದೇವರ ಕಾಯಕಭೂಮಿ. ರಾಯ ಕಾಶೀರಾಯ ದೇಶಮುಖರ ಹುಟ್ಟೂರು.

ಭಲ್ತೆ (ಅ)= ಭಾರಿ; ಭಾರವಾದ; ಅತಿ ತೂಕದ; ದೊಡ್ಡ; ದಪ್ಪಗಿನ; ಬೆಲೆಯುಳ್ಳ.

ಭಲ್ತೆ ಭಲ್ತೆ (ದ್ವಿ)= ಭಾರಿಬಾರಿ; ಬಲ್ಲ ಬಲ್ಲೆ.

ಭಲ್ಲುಂಕೆ (ನಾ)= ಭಾಲ್ಕಿಯ ಐತಿಹಾಸಿಕ ಹೆಸರು.

ಭವರಿ (ನಾ) ಮ.= ಭೌರಿ; ಭವ್ರಿ; ಬೊಗರೆ.

ಭವಳ್ಯಾ (ನಾ)= ಭೋಳೆ ಸ್ವಭಾವದವನು; ಮುಗ್ಧನಾದವನು.

ಭವಳ್ಯಾ ಶಂಕರ (ನಾ)= ಭೋಲೇನಾಥ ಶಿವನು.

ಭವಾನಿ (ನಾ)= ಶಿವನ ಹೆಂಡತಿ ಪಾರ್ವತಿ.

ಭವಾನಿ ಬಿಜ್ಜಲಗಾಂವ = ಔರಾದ ತಾಲೂಕಿನ ಒಂದು ಹಳ್ಳಿ.

ಭವಿ (ನಾ)= ಧರ್ಮಮಾರ್ಗ ಬಿಟ್ಟವನು; ಭಕ್ತನಲ್ಲದವನು; ಕಾಫಿರ; ಶಿವಮಾರ್ಗ ಹಿಡಿಯದವನು.

ಭವ್ರಿ (ನಾ) ಮ.= ಭವರಿ; ಭೌರಿ; ಬೊಗರೆ

ಭಸ್ಮ (ನಾ)= ವಿಭೂತಿ; ಭಸಿತ.

ಭಳಭಳ (ದ್ವಿ)= ಬಳಬಳ; ಭಳಳಳ; ದ್ರವ ಹರಿವ ರಭಸ.

ಭಳಳಳ (ಅ)= ಬಳಬಳ; ಭಳಭಳ; ರಕ್ತ ಹರಿವ ರಭಸ.

ಭಾಂಕ್ಡಿ (ವಿ)= ಅಂಕಡೊಂಕ; ನೇರವಲ್ಲದ

ಭಾಂಗ (ನಾ)= ಗಾಂಜಾ; ನಶೆಯ ಪೇಯ; ಭಂಗಿ; ಭಂಗು.

ಭಾಂಡಿ (ನಾ)= ಭಾಂಡೆ; ಪಾತ್ರೆ; ಭಾಂಡೆ ಸಾಮಾನು; ಭಾಂಡ್ಯಾ.

ಭಾಂಡೋಲು (ನಾ)= ಭಾಂಡವಲು; ಮುಂಗಡ ತೊಡಗಿಸುವಿಕೆ.

ಭಾಂಡ್ಯಾ (ನಾ)= ಭಾಂಡಿ; ಭಾಂಡೆ; ಪಾತ್ರೆ; ಗುದ ಇಲ್ಲವೆ ಯೋನಿಯಿಂದ ಹೊರಬಿದ್ದ ಮಾಂಸದ ಮುದ್ದೆ.

ಭಾಂಡ್ಯಾ ಹೊರ್ಗ ಭೀಳು (ಕ್ರಿ)= ಗುದದ್ವಾರ ಇಲ್ಲವೆ ಯೋನಿಯಿಂದ ಮಾಂಸದ ಮುದ್ದೆ ಹೊರಗೆ ಬರು; (ನು) ಮುಚ್ಚಿ ಉಳಿದದ್ದು ಬಿಚ್ಚಿ ಬಯಲಾಗು; ಗುಟ್ಟುರಟ್ಟಾಗು.

ಭಾಕ್ರಿ (ನಾ) ಮ.= ರೊಟ್ಟಿ. (ಬ್ರಾಹ್ಮಣ ಭಾಷೆ)

ಭಾಗ (ನಾ)= ಪೂರ್ಣವಾದ ಪದಾರ್ಥದ ಒಂದು ಅಂಶ.

ಭಾಗಂಭಾಗಿ (ನಾ)= ಬಿದ್ದೆದ್ದ ಖಬರಿಲ್ಲದೆ ಓಟ ಕಿತ್ತುವಿಕೆ.

ಭಾಗ ಮಾಡು (ಕ್ರಿ)= ಭಾಗಿಸು; ವಿಭಜಿಸು; ಭಾಗ ಹೊಡಿ.

ಭಾಗ ಹೊಡಿ (ಕ್ರಿ)= ಭಾಗಿಸು; ವಿಭಜಿಸು; ಭಾಗ ಮಾಡು.

ಭಾಗಾದಿ (ನಾ)= ವಂಶ ಪಾರಂಪರ್ಯದ ಪಾಲುದಾರ; ದಾಯಾದಿ; ರಕ್ತ ಸಂಬಂಧದ ಬಂಧು.

ಭಾಗಿಲ್ಲ (ನಿ)= ನಿರ್ವಾಹವಿಲ್ಲ.

ಭಾಗೀರಥಿ (ನಾ)= ಪಂಢರಪುರದ ಚಂದ್ರಭಾಗಾ ನದಿ.

ಭಾಗ್ಗುರ್ಗಿ (ನಾ)= ಒಡಕು ಗಡಿಗೆ; ಬೋಕಿ.

ಭಾಗ್ಯ (ನಾ)= ಹಣೆಬರಹ; ವಿಧಿ.

ಭಾಗ್ಯವಂತಿ (ನಾ)= ಭಾಗ್ಯವಂತೆ; ಪುಣ್ಯವಂತೆ; ಕಲಬುರ್ಗಿ ಜಿಲ್ಲೆಯ ಘತ್ತರಗಿಯ ಭಾಗಮ್ಮ ದೇವಿ.

ಭಾಜಿ, ಭಾಜಿಪಾಲಾ (ನಾ)ಮ.= ತರಕಾರಿ; ಕಾಯಿಪಲ್ಯ.

ಭಾಟಿ (ನಾ)= ಗೋಡೆಗೆ ಹೊಂದಿಕೊಂಡು ತಲೆಮಟ್ಟಕೆ ತಯಾರಿಸಲಾದ ಗಜ ಅರ್ಧಗಜ ಅಗಲದ ಅಟ್ಟ; ಲೆಂಟಲ್.

ಭಾಡಖೌ (ನಾ)= ಮನೆಯ ಹೆಂಗಸರನ್ನು ವೇಶ್ಯಾ ವ್ಯವಹಾರಕ್ಕಿಳಿಸಿ ಜೀವನವನ್ನು ನಡೆಸುವವನು; ಹೆಂಗಸರ ಮೈ ಮಾರಾಟದ ಗಳಿಕೆ ಉಣ್ಣುವವನು; ಕುಂಟಿಣಿ ತನದ ಗಳಿಕೆ ಉಣ್ಣುವವನು.

ಭಾಡು (ನಾ)= ಹೆಂಗಸರ ಮೈ ಮಾರಾಟದ ಗಳಿಕೆ; ಉಣ್ಣುವವನು.

ಭಾಡ್ಡಿ (ನಾ)= ಭಡ್ಡಿ; ಭರಡಿ; ಬೀಸು ಕಲ್ಲಿನಿಂದ ಭತ್ತ, ನವಣೆ, ಬರಗು, ಸ್ವಾವೆ ಇತ್ಯಾದಿಗಳನ್ನು ಥಳಿಸುವ ಮುನ್ನ ಬೀಸಿ ಅಣಿಗೊಳಿಸಿದ್ದುದು.

ಭ್ಯಾಡಾ (ನಾ)= ಭಾಡು; ಹೆಂಗಸರ ಮೈ ಮಾರಾಟದ ಬಾಡಿಗೆಯಿಂದ ಬದುಕು ನಡೆಸುವವ (ಬೈಗುಳ)

ಭಾಡ್ಸಂಗಿ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿ; ಭಾಟ್ಸಂಗಿ ಎಂತಲೂ ಕರೆಯುತ್ತಾರೆ.

ಭಾತಂಬ್ರಾ (ನಾ)= ಭಾಲ್ಕಿ ತಾಲೂಕಿನ ಭತ್ತ ಮುರ್ಗಿ ಎಂಬ ಊರಿನ ಹೆಸರಿನ ಇನ್ನೊಂದು ರೂಪ.

ಭಾತಾ (ನಾ)= ಶ್ರುತಿ ಪೆಟ್ಟಿಗೆಗೆ ಗಾಳಿ ತುಂಬುವ ಸಾಧನ; ಕಮ್ಮಾರನ ತಿದಿ.

ಭಾತಾ ಹಾಕು (ಕ್ರಿ)= ಶ್ರುತಿಪೆಟ್ಟಿಗೆಗೆ ಗಾಳಿ ತುಂಬು; ಕಮ್ಮಾರನ ತಿದಿಯನ್ನು ನಡೆಸು.

ಭಾದೂರ (ನಾ) ಉ.= ಬಹಾದ್ದೂರ; ವೀರ; ಶೂರ.

ಭಾನ (ನಾ)= ಪ್ರಜ್ಞೆ; ಪರಿವೆ; ಎಚ್ಚರ; ಅರಿವು.

ಭಾನಗಡಿ (ನಾ)= ತೊಡಕು; ಗೊಂದಲ; ಜಟಿಲತೆ; ಅಚಾತುರ್ಯ; ಮಾಡಬಾರದ ಕಾರ್ಯ.

ಭಾನತಪ್ಪು (ಕ್ರಿ)= ಬೇಭಾನಾಗು; ಎಚ್ಚರ ತಪ್ಪು; ಮೈಮರೆ.

ಭಾನಾ (ನಾ)= ಕುಳ್ಳು, ಕಣಿಕೆ, ಹುಲ್ಲು ಇತ್ಯಾದಿಗಳ ವ್ಯವಸ್ಥಿತ ಒಟ್ಟಿಲು, ಬಣವೆ.

ಭಾನಾಮತಿ (ನಾ) ಮ.= ಯಕ್ಷಿಣಿ; ಮಾಟ ಮೊದಲಾದ ತಾಂತ್ರಿಕ ವಿದ್ಯೆ; ಜಾದೂಗಾರಿಕೆ.

ಭಾನಾಮತ್ಯಾ (ನಾ)= ಮಾಟ ಮಾಡುವವನು. ಹುಡಗಿ ಗ್ರಾಮದಲ್ಲಿ ಕೊಲೆಯಾದ ಭಾನಾಮತಿಗಾರ.

ಭಾನ್ಗೇಡಿ (ನಾ)= ಮೈಮೇಲೆ ಎಚ್ಚರವಿಲ್ಲದವನು/ಳು; ಎಚ್ಚರಗೇಡಿ.

ಭಾಬಿ (ನಾ) ಹಿಂ.= ಅತ್ತಿಗೆ; ವೈನಿ.

ಭಾಮಟ್ಯಾ (ನಾ) ಮ.= ಮೋಸಗಾರ; ವಂಚಕ; ಠಕ್ಕ; ಹುಸಿಕ.

ಭಾಮಟ್ಯಾಗಿರಿ (ನಾ)= ಮೋಸಗಾರಿಕೆ; ವಂಚನೆ; ಹುಸಿಕತನ.

ಭಾಯಿ (ನಾ)= ಬಾವಿ; ಕೂಪ; ಬಂಧು; ಅಣ್ಣ; ತಮ್ಮ.

ಭಾಯಿಭರಿ (ನಾ)= ಬಾವಿಯಲ್ಲಿ ಬಿದ್ದ ಹೂಳಿಕೆ.

ಭಾಯಿಭಾಯಿ (ನಾ)= ಅಣ್ಣತಮ್ಮ (ಉದಾ:- ಹಿಂದೀ ಚೀನೀ ಭಾಯಿಭಾಯಿ)

ಭಾಯಿ ಹೊಡಿ (ಕ್ರಿ)= ಬಾವಿ ತೋಡು.

ಭಾಯಿ ಹೊಡ್ಸು (ಕ್ರಿ)= ಬಾವಿ ತೋಡಿಸು.

ಭಾರಾ (ನಾ)= ಹೊರೆ; ತೂಕ; ಹೊಣೆಗಾರಿಕೆ; ಜವಾಬ್ದಾರಿ; ಒಜ್ಜೆ; ವಸಂತ ಋತು; ತುಂಬು ಯೌವನ (ಗಾದೆ:- ಹೆಣ್ತೆ ಭಾರಿಗಿ ಬಂದುಳು, ಗಂಡಗೋರಿಗಿ ನಡ್ದ!)

ಭಾರುಂಭಾಯಿ (ನಾ)= ಸುತ್ತಲೂ ಮೆಟ್ಟಿಲಿರುವ ಹೊಕ್ಕು ತುಂಬುವ ನೀರಿನ ಬಾವಿ.

ಭಾರತ (ನಾ)= ಹಿಂದೂದೇಶ; ಹಿಂದೂಸ್ಥಾನ; ಇಂಡಿಯಾ.

ಭಾರ (ನಾ)= ಭಾರ್ಯಾ; ಹೊರೆ; ತಲೆಹೊರೆ; ಹುಲ್ಲು; ಕಣಿಕೆ, ಕಟ್ಟಿಗೆ, ತೊಗರೆದಂಟು ಇತ್ಯಾದಿಗಳ ಹೊರೆ.

ಭಾರಾ ಹೊತ್ಗೊ (ಕ್ರಿ)= ಹೊರೆ ಹೊತ್ತುಕೊ; ನಿರ್ವಹಿಸು.

ಭಾರಿ (ನಾ)= ಭಾರವಾದುದು; ತೂಕವಾದುದು; ದೊಡ್ಡದಾದುದು; ದಪ್ಪವಾದುದು; ಉತ್ತಮವಾದುದು; ಅತಿಯಾದದ್ದು.

ಭಾರಿ ಖೈಇಾ್ (ನಾ)= ಅತಿ ಕೆಟ್ಟ ಗುಣದವನು; ಅತಿ ಕೇಡಿಗ; ಅತಿ ಕುಹಕಿ; ಅತಿ ಕಹಿ.

ಭಾರೀ (ನಾ)= ಭಾರಿ (ನೋಡಿರಿ)

ಭಾರೀ ಮನ್ಶಾ (ನಾ)= ದೊಡ್ಡ ಮನುಷ್ಯ; ಒಳ್ಳೆಯ ಮನುಷ್ಯ.

ಭಾರೂಡ (ನಾ) ಮ.= ಭಜನೆಯ ಒಂದು ಪ್ರಕಾರ; ವೃತ್ತಾಕಾರದಲ್ಲಿ ಸುತ್ತು ಹೊಡೆಯುತ್ತ ತಾಳ ಕುಟ್ಟುತ್ತ ಮಾಡುವ ಭಜನೆ; ಮರಾಠಿ ಪದ್ಧತಿಯ ಭಜನೆ.

ಭಾರ್ಗಿ (ನಾ)= ಭಾರಿಗೆ; ಬಾರಿಗೆ; ಕಸಬರಿಗೆ; ರಜಗೀಲು; ಝಾಡು; ಪೊರಕೆ.

ಭಾರ್ಗಿಹಳಿಭಾರ್ಗಿ (ನು)= ಬರಿಬಾರಿಗೆ ಲ್ಹಪ್ಟೇ ಅಲ್ಲ, ಹಳೆಯ ಬಾರಿಗೆ (ಬೈಗುಳ)

ಭಾರ್‍ಯಾ, ಭಾರಾ (ನಾ)= ಹುಲ್ಲು, ಕಣಿಕೆ, ಕಟ್ಟಿಗೆ ಇತ್ಯಾದಿಗಳ ಹೊರೆ.

ಭಾರ್ಶಿ (ನಾ)= ಚೈತ್ರ ಶುದ್ಧ ದ್ವಾದಶಿಯ ದಿನದ ಮಹಾದೇವನ ಹಬ್ಬ; ಪಕ್ಷದ ಹನ್ನೆರಡನೇ ದಿನ.

ಭಾರ್ಸು (ಕ್ರಿ)= ಬಾರಿಸು; ತೊಗಲು ವಾದ್ಯ ಬಾರಿಸು; ಬಡಿ; ಹೊಡೆ.

ಭಾಲ್ಯಾ (ನಾ)= ಭಲ್ಲೆ; ಬಿದಿರಿನ ತಲೆಮಟ್ಟದ ಗಟ್ಟಿ ದಪ್ಪಕೋಲು; ತುದಿಯಲ್ಲಿ ಭರ್ಜಿ ಇರುವ ಬಿದಿರಿನ ಕೋಲು.

ಭಾಲ್ಕಿ (ನಾ)= ಭಲ್ಲುಂಕೆ, ಭಲ್ಕಿ ಎಂದು ಕರೆಯಲ್ಪಡುವ ತಾಲೂಕು ಕೇಂದ್ರದ ಊರು; ನಡೆದಾಡುವ ದೇವರೆಂದೂ, ಕನ್ನಡದ ಪಟ್ಟದ್ದೇವರೆಂದೂ ಖ್ಯಾತರಾಗಿರುವ ಡಾ|| ಚೆನ್ನಬಸವ ಪಟ್ಟದ್ದೇವರ ಕಾಯಕ ಕ್ಷೇತ್ರ; ಕುಂಬಾರ ಗುಂಡಯ್ಯ ಶರಣರು ಬದುಕಿ ಬಾಳಿದ ಊರು. ೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ಅಂತಿಮ ಘಟ್ಟದ ಹೋರಾಟದ ಊರು; ಕುಂಭೇಶ್ವರ ಭಾಲ್ಕೇಶ್ವರ ದೇವಾಲಯವಿರುವ ಊರು.

ಭಾವ (ನಾ)= ಸೋದರಿಯ ಗಂಡ; ಅಕ್ಕ ಅಥವಾ ತಂಗಿಯ ಗಂಡ; ಗಂಡನ ಅಣ್ಣ; ಸೋದರ ಮಾವನ ಮಗ; ಹೆಂಡತಿಯ ಅಣ್ಣ; ಸೋದರತ್ತೆಯ ಮಗ; ದರ; ವಿಚಾರ; ಅಭಿಪ್ರಾಯ; ಇಂಗಿತ.

ಭಾವಜಿ (ನಾ)= ಭಾವನಿಗೆ ಗೌರವ ಸೂಚಕ ಸಂಬೋಧನೆ.

ಭಾವನಾ (ನಾ)= ಭಾವನೆ; ಅಭಿಪ್ರಾಯ; ಆಶ್ರಯ.

ಭಾವಮೈದುನ (ನಾ)= ಮೈದುನ; ಗಂಡನ ತಮ್ಮ; ಭಾವಮೈದ.

ಭಾವಿ (ನಾ)= ಬಾವಿ; ವಾಪಿ; ಕೂಪ.

ಭಾವು (ನಾ) ಮ.= ಅಣ್ಣ; ತಮ್ಮ.

ಭಾವ್ಕಿ (ನಾ) ಮ.= ಅಣ್ಣ ತಮ್ಮಿಕೆ; ಬಾಗಾಧಿ ಸಂಬಂಧಿ.

ಭಾಷಣ (ನಾ)= ಸಭೆ ಮೊದಲಾದ ಕಡೆಗಳಲ್ಲಿ ಮಾತನಾಡುವಿಕೆ.

ಭಾಸಿಂಗ (ನಾ)= ಮದುಮಕ್ಕಳ ಹಣೆಗೆ ಕಟ್ಟುವ ಮುತ್ತಿನಿಂದ ತಯಾರಿಸಿದ ಪಟ್ಟಿ; ಬಾಸಿಗ; ಭಾಸಿಂಗ.

ಭಾಸಿಂಗ ಕಟ್ಟು (ಕ್ರಿ)= ಹಣೆಗೆ ಬಾಸಿಗ ಬಿಗಿ; ಮದುವೆಗೆ ಅಣಿ ಮಾಡು.

ಭಾಸಿಂಗ ಬಲ (ನಾ)= ಮದುವೆಯ ಯೋಗ.

ಬಾಸಿಂಗ ಬಲ ಬರು (ಕ್ರಿ)= ಮದುವೆಯ ಯೋಗ ಕೂಡಿ ಬರು. ಮದುವೆ ಹಾಡು:- ಭಾಸಿಂಗ ಕಟ್ಟಾ ಬಲ ಬಂದೆ। ಹರಹರ ನಮ ಶಿವಗೆ ನೈಯೆಣ್ಣೆ।)

ಭಾಸಿಂಗ ಹರಿಲಿ (ಕ್ರಿ)= ಮದುವೆ ಮುರಿದು ಹೋಗಲಿ; ಮದುವೆ ಕಡತಂತ್ರ ಆಗಲಿ; ಮದುವೆ ನೆರವೇರದಿರಲಿ (ಬೈಗುಳ)

ಭಾಸುಣ್ಕಿ (ನಾ)= ಮದುವೆಗೆ ಮುಂಚೆ ಹೆಣ್ಣಿನವರ ಮನೆಯಲ್ಲಿ ಜರುಗುವ ಪೂರ್ವ ಭಾವಿ ಕಾರ್ಯಕ್ರಮ.

ಭಾಸುಣ್ಕಿ ಹಾಕು (ಕ್ರಿ)= ಮದುವೆಗೆ ಮುನ್ನ ಹೆಣ್ಣಿನವರ ಮನೆಯಲ್ಲಿ ಪೂರ್ವಭಾವಿ ಕಾರ್ಯಕ್ರಮವನ್ನು ಜರುಗಿಸು.

ಭಾಳ (ನಾ)= ಬಹಳ; ತೋಲು; ಅನಗಾಡ; ಬಕ್ಕ; ಅಧಿಕ; ಅತಿ (ತತ್ವ ಪದ : ಭಾಳತಿಕ್ಬೇಕ್ರಿ ಈ ಭಾಂಡ್ಯಾಕ ತಿಕ್ಕಿತೊಳ್ದರ ಆಗ್ತಾದ ಥಳಕ-ದೇಶಾಂಶ ಹುಡಗಿ)

ಭಾಳಾಗು (ಕ್ರಿ)= ಹೆಚ್ಚಾಗು; ತೋಲಾಗು; ಅತಿಯಾಗು; ಅಧಿಕವಾಗು.

ಭಿ (ಅ)= ಬಿ; ಬೀ; ಕೂಡ (ಉ: ನಾಭಿ ಬರ್ತಾ, ನೀಭಿ ಬಾ, ಆಕಿಭಿ ಬರ್ತಾಳ).

ಭಿಂಗ್ಯಾ (ನಾ)= ಹಾಸ್ಯಗಾರ; ನಗಿಸುವವನು; ಜೋಕರ್.

ಭಿಂದ್ಗಿ (ನಾ)= ಬಿಂದಿಗೆ; ಕಳಸಿ; ಸಣ್ಣ ಕೊಡ; ಮಣ್ಣಿನ ಸಣ್ಣ ನೀರ್ಬಿಂದಿಗೆ.

ಭಿಂದ್ಲಿ (ನಾ)= ಬಿಂದಲಿ; ಮುಂಗೈ ಒಡವೆ.

ಭಿಕ್ಕಿ (ನಾ)= ಭಿಕ್ಕೆ; ಭಿಕ್ಷೆ.

ಭಿಕ್ಕಿ ಬೇಡು (ಕ್ರಿ)= ಭಿಕ್ಷಾಟನ ಮಾಡು.

ಭಿಕ್ಕಿ ಸೋಬ್ತಿ (ನಾ)= ಭಿಕ್ಷಾಟನದ ಬದುಕು; ಭಿಕ್ಷೆಯ ಆಸರೆ, ಒಡನಾಟ.

ಭಿಕ್ನಾಸಿ (ನಾ)= ಭಿಕ್ಷೆಯನ್ನು ಆಶ್ರಯಿಸಿ ಕೆಟ್ಟವನು (ಖು). ಪುರಂದರದಾಸರ ಹಾಡು:
ಮಡಿ ಮಡಿ ಎಂದು
ಮೂರ್ಮಾರ್ಹಾರುತಿ ।
ಮಡಿ ಎಲ್ಲಿ ಬಂತೇ ಭಿಕ್ನಾಸಿ ।
ಮಡಿಯೂ ನೀನೇ ಮೈಲಿಗೆ ನೀನೇ।
ಸುಡಲಿ ನಿನ್ನ ಮಡಿ ಭಿಕ್ನಾಸಿ ॥

ಭಿಕ್ಷಾ (ನಾ)= ಭಿಕ್ಷೆ; ಬಿಕ್ಕೆ (ಗಾದೆ: ಭಿಕ್ಷಾ ಅಂದರೆ ಲಕ್ಷ); ಇನ್ನೊಬ್ಬರಿಗೆ ಬೇಡುವಿಕೆ.

ಭಿಗಾರಿ (ನಾ)= ಬಿಗಾರಿ; ಬಿಟ್ಟಿದುಡಿಮೆ; ಆದಾಯವಿಲ್ಲದ ದುಡಿಮೆ.

ಭಿಟ್ಯಾಕು (ಕ್ರಿ)= ಎಸೆದು ಬಿಡು.

ಭಿಡಾಸು (ಕ್ರಿ)= ಭೇಟಿ ಮಾಡಿಸು; ಕೂಡಿಸು; ಒಂದಾಗಿಸು; ಕುಂಟಿಣಿತನ ಮಾಡು.

ಭಿಡು (ನಾ)= ಕುಂಟಿಣಿ; ಹೆಣ್ಣುಗಂಡಿನ ಕೂಟಕ್ಕೆ ಸಹಕಾರಿಯಾಗುವವನು; ಮಧ್ಯಸ್ಥ; ತಲೆ ಹಿಡುಕ.

ಭಿಡ್ಯಾ (ನಾ)= ಭಿಡೆ; ಮುಲಾಜು; ದಾಕ್ಷಿಣ್ಯ; ಸಂಕೋಚ (ಗಾದೆ: ಭಿಡ್ಯಾಕ ಬಸುರಾಗಿ ಹಡೆಲ್ದೆ ನಿಂತಿದ್ರಂತ!).

ಭಿಡ್ಸಿ ಬಿಡು (ಕ್ರಿ)= ಎಸೆದು ಬಿಡು; ಆಚೆಗೆ ಎಸೆ.

ಭಿಡ್ನ್ಯಾಕು (ಕ್ರಿ)= ಎಸೆದು ಬಿಡು; ಆಚೆಗೆ ಎಸೆ.

ಭಿತ್ರಿ (ನಾ) ಮ.= ಅಂಜುಬುರುಕಿ; ಭಯಪಡುವವಳು.

ಭಿತ್ರ್ಯಾ (ನಾ) ಮ.= ಅಂಜುಬುರುಕ; ಭಯಪಡುವವನು.

ಭಿನ್ನ (ನಾ)= ತುಂಡು; ಚೂರು; ಒಡೆದದ್ದು.

ಭಿನ್ನ ಮಾಡು (ಕ್ರಿ)= ಒಡೆದು ಚೂರು ಮಾಡು; ಸೀಳುವಂತೆ ಮಾಡು; ನಾಶಮಾಡು (ಉದಾ: ನಿಜಾಮ್ನ ಹುಕೂಮತದಾಗ ಏಸೋ ಮೂರ್ತಿ ಭಿನ್ನ ಮಾಡ್ದೂರು).

ಭಿನ್ನಾ (ನಾ)= ಬಿನ್ನಹ; ಔತಣ.

ಭಿನ್ನಾಗು (ಕ್ರಿ)= ಒಡೆದು ಚೂರಾಗು; ಸೀಳು; ಬಿರುಕಾಗು (ಉದಾ: ಭಿನ್ನಾಗಿದ್ಲಿಂಗಾ ಪೂಜಾಕ್ಬರಾಲ).

ಭಿಯ್ಯಾ (ನಾ)= ಭಯ್ಯಾ; ಅಣ್ಣ (ಲಮಾಣಿ ಭಾಷೆ).

ಭಿರಿ ಭಿರಿ (ದ್ವಿ)= ಭಿರ್‍್ರ ಭಿರ್‍್ರ; ಬಿರಿಬಿರಿ; ಬೇಗ ಬೇಗ.

ಭಿರ್ಕಾಸಿ (ಅ)= ಬೀಸಿ; ಬಿರ್‍ರೆಂದು ಸದ್ದಾಗುವಂತೆ; ಜೋರಾಗಿ, (ಉದಾ : ಕವಣೆಗಲ್ಲು ಭಿರ್ಕಾಸಿ ಬಂದು ಬೆನ್ನಾಗ ಬಡಿತು) .

ಭಿರ್ಕಾಸು (ಕ್ರಿ)= ಬಿರ್‍ರನೆ ಎಸೆ; ಹೊಡೆ.

ಭಿರ್ಕಿ (ನಾ)= ಚಕ್ರ; ಸುತ್ತು ಹೊಡೆವ ಆಟಿಕೆ; ಫಿರ್ಕಿ.

ಭಿರ್ಕಿಹೊಡಿ (ಕ್ರಿ)= ಸುತ್ತು ಹೊಡೆ.

ಭಿರ್‍ ಭಿರ್‍ (ದ್ವಿ)= ಬಿರಿಬಿರಿ; ಬೇಗ ಬೇಗ.

ಭಿಲ್ಲಾ (ನಾ)= ಭಿಲ್ಲೆ; ಪದಕ.

ಭಿಲ್ಲಾ ಹಚ್ಗೊ (ಕ್ರಿ)= ಪದಕವನ್ನು ಅಂಗಿಗೆ ಹೊಂದಿಸಿಕೊ.

ಭಿಲ್ಲಿ (ನಾ)= ಬಿಲ್ಲಿ; ಚಿಕ್ಕದಾದ ದಪ್ಪ ರೊಟ್ಟಿ.

ಭೀ (ಅ)= ಭಿ; ಕೂಡ.

ಭೀಂ (ನಾ)= ಬೀಮು; ಕಬ್ಬಿಣ ಅಥವಾ ಕಟ್ಟಿಗೆಯ ತೊಲೆ; ಸರ.

ಭೀಕ್ರ (ನಾ)= ಭಯಂಕರ; ಭೀಕರ.

ಭೀಟಿ ಬಿಡು (ಕ್ರಿ)= ಎಸೆದು ಬಿಡು; ಬೀಳಿಸು.

ಭೀಟು (ಕ್ರಿ)= ಎಸೆ; ಹಾರ್‍ಹೊಡೆ.

ಭೀಡ, ಭೀಡು (ನಾ) ಹಿಂ.= ಜನದಟ್ಟಣೆ.

ಭೀತಿ (ನಾ)= ಭಯ; ಹೆದರಿಕೆ; ಅಪಾಯ; ಅಂಜಿಕೆ.

ಭೀಮ (ನಾ)= ಪಂಚ ಪಾಂಡವರಲ್ಲಿ ಎರಡನೆಯವನು; ಬಸವ ಪುರಾಣ ಬರೆದ ಭೀಮಕವಿ; ಭೀಮನ ಬಲವುಳ್ಳವನು.

ಭೀಮ ಬಾಬಾ (ನಾ)= ಭೀಮರಾವ ಅಂಬೇಡ್ಕರ.

ಭೀಮರಾವ (ನಾ)= ಭೀಮರಾವ ಅಂಬೇಡ್ಕರ.

ಭೀಮರಾವ ಪಟವರ್ಧನ (ನಾ)= ಚಿಟಗುಪ್ಪಾ ಪಟ್ಟಣದ ಒಬ್ಬ ಸ್ವಾತಂತ್ರ್ಯ ಹೋರಾಟಗಾರ.

ಭೀಮವಂದನಾ (ನಾ)= ಬಾಬಾಸಾಹೇಬ ಅಂಬೇಡ್ಕರರಿಗೆ ನಮನ.

ಭೀಮಶಾ (ನಾ)= ಭೀಮಸೇನ; ಗೋರಂಪಳ್ಳಿ ಗ್ರಾಮದ ಭೀಮಶಾಯರ-ಬಾಗಿ ಎಂಬ ರಂಗ ಕಲಾವಿದ.

ಭೀಮಸೇನರಾವ ತಾಳಿಕೋಟೆ (ನಾ)= ಬೀದರ ಜಿಲ್ಲೆಯಲ್ಲಿ ಕನ್ನಡ ಕಟ್ಟಿದವರು.

ಭೀಳು (ಕ್ರಿ)= ಬೀಳು; ನೆಲಕ್ಕುರುಳು; ಕುಸಿ; ಮಣಿ; ನಮಸ್ಕರಿಸು.

ಭೀಳ್ಸು (ಕ್ರಿ)= ಬೀಳಿಸು; ಕೆಡಹು; ನೆಲಕ್ಕುರುಳಿಸು.

ಭುಂಯ್ಯೂಂಗ (ನಾ)= ಸೇಂಗ; ಸೇಂಗದ ಕಾಯಿ; ನೆಲಗಡಲೆ.

ಭುಂಯ್ಯಾರ (ನಾ)= ನೆಲಮನೆ; ಸುರಂಗ ಮಾರ್ಗ; ತಳಮನೆ; ಗುಲಬರ್ಗಾ ಜಿಲ್ಲೆಯ ಒಂದು ಹಳ್ಳಿ.

ಭುಕ್ಕಡ (ನಾ)ಹಿಂ= ಅನ್ನ ಕಾಣದವನು; ಹಸಿದವನು; ಭುಕ್ಕಾ; ಹಸಿವೆಯಿಂದ ಬಳಲುವವನು.

ಭುಕ್ಕಾ (ನಾ)= ಹಸಿದವನು; ಖಾಲಿ ಹೊಟ್ಟೆಯವನು; ಭುಕ್ಕಡ.

ಭುಗುಟಿ (ನಾ)= ಬುಗುಟ; ಪೆಟ್ಟು ಬಡಿದು ಹಣೆ ಅಥವಾ ತಲೆಯ ಉಬ್ಬಿದ ಭಾಗ.

ಭುಗುಡಿ (ನಾ)= ಕಿವಿಯೋಲೆ (ಗಾದೆ: ಭುಗುಡಿ ವಸ್ತಾ ಅಲ್ಲಾ, ನೆಗಡಿ ಬ್ಯಾನಿ ಅಲ್ಲ).

ಭುಗುಭುಗು (ದ್ವಿ)= ಭಗಭಗನೆ; ಭುರುಭುಗುಎನೆ (ಕಾವ್ಯ ಅರರೇ ಭುರುಭುಗು, ಭಾಪುರೇ ಭುಗುಭುಗು, ಪ್ರಜ್ವಾಲೆ ಮಜ್ಜಯ್ಯದೇವುರೇ-ಗಿರಿಜಾ ಕಲ್ಯಾಣ-ಹರಿಹರ).

ಭುಗ್ಗಿ (ನಾ)= ಬುಗುಟ; ತಲೆಗೆ ಅಥವಾ ಹಣೆಗೆ ಪೆಟ್ಟು ಬಡಿದು ಉಂಟಾದ ಊತ.

ಭುಗ್ತಾಸು (ಕ್ರಿ)= ಭೋಗಿಸು; ಅನುಭವಿಸು.

ಭುಜಾ (ನಾ)= ಭುಜ; ಬಾಹು; ತೋಳು; ರಟ್ಟೆಯ ಮೇಲ್ತುದಿ.

ಭುಜಾ ಎತ್ತು (ಕ್ರಿ)= ಹೆಗಲೇರಿಸು; ಭುಜವನ್ನು ಎತ್ತರಿಸು.

ಭುಟ್ಟಾ (ನಾ)= ತೆನೆ; ಮೆಕ್ಕೆತೆನೆ; ಪುರುಷನ ಜನನೇಂದ್ರಿಯ; ಶಿಶ್ನ.

ಭುತಾಳಿ (ನಾ)= ಬುತಾಳಿ; ಮುಳ್ಳಿನ ಸುಂಕುಳ್ಳ ಬಿರುಸು ಗಣಿಕೆಯುಳ್ಳ ಹುಲ್ಲು.

ಭುತಾಳೆ (ನಾ)= ಪೆಂಟರ್ ಭುತಾಳೆ ಎಂಬ ಚಿಟಗುಪ್ಪಾದ ಪ್ರಸಿದ್ಧ ಚಿತ್ರಕಲಾವಿದ, ರಂಗ ಕಲಾವಿದ ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರ.

ಭುನಾಸು (ಕ್ರಿ)= ಹಂಚಿನ ಮೇಲೆ ಹಾಕಿ ಹುರಿ; ಬೆಂಕಿಯ ಮೇಲೆ ಹಿಡಿದು ಸುಡು.

ಭುಯ್ಮೂಂಗು (ನಾ) ಮ.= ನೆಲಗಡಲೆ; ಸೇಂಗಾಕಾಯಿ.

ಭುಯ್ಮೂಂಗ್ಯಾ (ನಾ)= ಭುಯ್ಮೂಂಗು; ನೆಲಗಡಲೆ; ಸೇಂಗಾಕಾಯಿ.

ಭುಯ್ಯಾರ (ನಾ)= ಭುಂಯಾರ; ನೆಲಮನೆ; ಚಿಂಚೋಳಿ ತಾಲೂಕಿನ ಒಂದು ಹಳ್ಳಿಯ ಹೆಸರು.

ಭುರು ಭುರು ದ್ವಿ)= ಭುಗು ಭುಗು (ನೋಡಿರಿ).

ಭುರುಳಿ (ನಾ)= ಬುರುಲೆ; ಪುರಲೆಹಕ್ಕಿ; ಒಂದು ಬಗೆಯ ಹಕ್ಕಿ.

ಭುರುಸು (ನಾ)= ಬ್ರಷ್ಷು; ಕುಂಚ; ತಂಗುಳ ಆಹಾರ ವಸ್ತುಗಳ ಮೇಲೆ ಉಂಟಾಗುವ ಬಿಳಿ ಪೊರೆ.

ಭುರುಸುಗಟ್ಟು (ಕ್ರಿ)= ಹಳಸು; ಅನ್ನದ ಮೇಲೆ ಬಿಳಿ ಪೊರೆಯಾಗು.

ಭುರ್ಕಾ (ನಾ) ಉ.= ಭುರ್ಕಿ; ಮುಸುಕು.

ಭುರ್ಕಿ (ನಾ)= ಭುರ್ಕಾ; ಮುಸುಕು.

ಭುರ್ಕಿನವಣಿ (ನಾ)= ಮುಸುಕುನವಣೆ; ಒಂದು ಜಾತಿಯ ನವಣೆ.

ಭುರ್ಕಿಹಾಯ್ಕೊ (ಕ್ರಿ)= ಮೈಮೇಲೆ ಮುಸುಕು ತೊಟ್ಟುಕೊ.

ಭುರ್ಗು (ನಾ)= ಬುರುಗು; ನೊರೆ.

ಭುರ್ಗುಬರು (ಕ್ರಿ)= ನೊರೆಯುಂಟಾಗು.

ಭುರ್ಸು (ನಾ)= ಭುರುಸು; ಬ್ರಷ್ಷು; ಕುಂಚ; ತಂಗುಳ ಇಲ್ಲವೆ ತೇವದಿಂದ ಕೂಡಿದ ಆಹಾರ ವಸ್ತುಗಳ ಮೇಲೆ ಉಂಟಾದ ಬಿಳಿಪೊರೆ.

ಭುರ್ಸುಗಟ್ಟು (ಕ್ರಿ)= ಬೂಷ್ಟಾಗು; ಬೂಷ್ಟು ಹಿಡಿ; ಬುರುಸುಗಟ್ಟು.

ಭುಲಾಯಿ (ನಾ)= ನಾಗರ ಪಂಚಮಿಯದಿನ ಮಹಿಳೆಯರು ವೃತ್ತಾಕಾರವಾಗಿ ಗುಂಪುಗೂಡಿ ಹಾಡುವ ಹಾಡು (ಉದಾ: ಕಲ್ಯಾಣಂಬಾದು ಪ್ಯಾಟಿ। ಕಲಿಯುವರಲ್ಲಿ ಲಾಠಿ। ಹುಡುಗರಿರುವರು ಜತಿ। ಕೋಲೆಣ್ಣಕೋಲೆ).

ಭುಲಾಸು (ಕ್ರಿ)= ಮರೆ; ಮರೆತು ಬಿಡು; ನೆನಪಿಡದಿರು.

ಭುವನೇಶ್ವರಿ (ನಾ)= ಶಕ್ತಿ ದೇವತೆ; ಆದಿಶಕ್ತಿ; ಕನ್ನಡಮ್ಮ; ಕನ್ನಡ ತಾಯಿ.

ಭುಸಾರ (ನಾ)= ಭೂಸಾರ; ದಾನ್ಯ; ಕಾಳು.

ಭುಸಾರಿ (ವಿ.)= ಧಾನ್ಯಕ್ಕೆ ಸಂಬಂಧಿಸಿದ.

ಭುಸಾರಿದುಕಾನ (ನಾ)= ಧಾನ್ಯದ ಅಂಗಡಿ.

ಭುಸ್ಕಿ (ನಾ)= ಬಾಯಿಯ ಒಳ ಚರ್ಮದ ಪದರು; ಯುಗಾದಿಯಂದು ಕಾಲಡಿಯಲ್ಲಿ ಇಟ್ಟುಕೊಂಡು ಸ್ನಾನ ಮಾಡಲು ಬಳಸುವ ಒಂದು ಬಗೆಯ ಹುಲ್ಲು.

ಭುಸ್ಕಿಉಚ್ಚು (ಕ್ರಿ)= ಬಾಯಿಯ ಒಳ ಚರ್ಮವುಪದರು ಪದರಾಗಿ, ಎಳೆ ಎಳೆಯಾಗಿ ಕಿತ್ತು ಬರು.

ಭುಸ್ಗುಟ್ಟು (ಕ್ರಿ)= ಬುಸುಗುಡು; ಭುಸ್ಸೆಂದು ಶಬ್ದ ಮಾಡು; ರೋಷದಿಂದ ವೇಗವಾಗಿ ಉಸುರು ಬಿಡು; ತೇಕು.

ಭುಸ್ಸು (ನಾ)= ಹಾವಿನ ಅಬ್ಬರ.

ಭೂಕಂಪ (ನಾ)= ನೆಲದ ನಡುಗುವಿಕೆ (ಉದಾ: ಖಿಲಾರಿದಾಗ ಭೂಕಂಪಾದ್ರ ಬೀದರ ನಗರ ಗದಗದ ನಡುಗ್ತು).

ಭೂಕ್ಮಾರಿ (ನಾ) ಹಿಂ.= ಉಪವಾಸ ಸಾಯುವಿಕೆ.

ಭೂಗೋಳ (ನಾ)= ಭೂಗೋಲ; ಗೋಲಾಕಾರದ ಭೂಮಿ.

ಭೂಟುಕ (ನಾ)= ಸುಳ್ಳ; ವಂಚಕ; ಮೋಸಗಾರ; ಬೂಟುಕ.

ಭೂತ (ನಾ)= ದೆವ್ವ; ಪಿಶಾಚಿ.

ಭೂತಾಳಿ (ನಾ)= ಭುತಾಳಿ; ಬೂತಾಳೆ; ನಾರಿನ ಜಾತಿಯ ಹುಲ್ಲು.

ಭೂತೇರ ಹಾಡು (ನಾ)= ಅಂಬಾ ಭವಾನಿಯ ಬಗ್ಗೆ ದೇವಿಯ ಸೇವಕ ಸೇವಕಿಯರು ಹಾಡುವ ಭಕ್ತಿಗೀತ.

ಭೂತ್ಯಾ (ನಾ)= ಅಂಬಾಬಾಯಿಯ ಭಕ್ತ, ಆರಾಧಕ; ಅಂಬಾಬಾಯಿಗೆ ಬದುಕು ಸಮರ್ಪಿಸಿದವನು.

ಭೂಪ (ನಾ)= ರಾಜ; ದೊರೆ; ಬಾಧೂರ; ವೀರ.

ಭೂಮ (ನಾ)= ಭೂಮಿ; ನೆಲ; ಧರೆ.

ಭೂಮಪೂಜಿ (ನಾ)= ಭೂಮಿತಾಯಿಯ ಪೂಜೆ; ಭೂಮವ್ವನ ಪೂಜೆ.

ಭೂಮವ್ವ (ನಾ)= ಭೂಮಿತಾಯಿ; ಭೂದೇವಿ.

ಭೂಮಾ (ನಾ)= ಭೂಮ; ಭೂಮಿತಾಯಿ; ಮದುವೆಯ ಸಂದರ್ಭದಲ್ಲಿ ಭೂಮಿತಾಯಿಯ ಹೆಸರಿನಲ್ಲಿ ಅನ್ನದ ರಾಶಿಯನ್ನು ಒಟ್ಟಿ ಪೂಜಿಸುವಿಕೆ.

ಭೂಮಾದೇವಿ (ನಾ)= ಭೂಮಿ ದೇವತೆ (ಮುಡಬಿಯ ಭೂಮಾದೇವಿ).

ಭೂಮಿ (ನಾ)= ನೆಲ; ಹೊಲ; ಗದ್ದೆ; ತೋಟ; ಜಮೀನು..

ಭೂಮ್ತಾಯಿ (ನಾ)= ಭೂದೇವಿ; ನೆಲದಮ್ಮ.

ಭೂರಾ (ಅ)= ಬೂದುಬೂದು.

ಭೂರಾಸಕ್ರಿ (ನಾ)= ಬೂದು ಬಣ್ಣದ ಸಕ್ಕರೆ; ಸ್ವಾತಂತ್ರ್ಯ ಪೂರ್ವದಲ್ಲಿ ಕನಕಟ್ಟ ಮತ್ತು ಬೋಧನ ಎಂಬ ಊರುಗಳಲ್ಲಿ ತಯಾರಾಗುತ್ತಿದ ಬೂದು ಬಣ್ಣದ ಸಕ್ಕರೆ.

ಭೂಲಾಗು (ಕ್ರಿ)= ತಪ್ಪಾಗು; ಮರೆವಾಗು.

ಭೂಲಾಯಿ (ನಾ)= ನಾಗರ ಪಂಚಮಿ ಸಂದರ್ಭದಲ್ಲಿ ಮಹಿಳೆಯರು ಗುಂಪುಗೂಡಿ, ವೃತ್ತಾಕಾರವಾಗಿ ಕುಳಿತು ಹಾಡುವ ಜಾನಪದ ಹಾಡು; ಸಾಂಪ್ರದಾಯಿಕ ಹಾಡು; ಭುಲಾಯಿ ಹಾಡು (ಉದಾ: ಸರಸ್ವತಿ ದಯಾನಂದಾ। ಮರಿಲಾರೆ ನಿಮ್ಮ ಪಾದಾ। ಆರ್ಯಧರ್ಮ ನಮ್ಮ ದಾದಾ। ಕೋಲೆಣ್ಣ ಕೋಲೆ।).

ಭೂಲು (ನಾ) ಹಿಂ.= ತಪ್ಪು; ಮರೆವು.

ಭೂಲ್ಚೂಕ (ನಾ)= ತಪ್ಪು ತಡೆ; ಕಣ್ತಪ್ಪಿ ಆದ ತಪ್ಪು.

ಭೂಸಾ (ನಾ)= ಕಾಳಿನ ಮೇಲು ಪದರಿನ ಹೊಟ್ಟು;

ಭೂಸಾರ (ನಾ)= ಧಾನ್ಯ; ಅನಾಜು; ಕಾಳು.

ಭೂಸಾರ್ದುಕಾನ (ನಾ)= ಭುಸಾರ ಅಂಗಡಿ; ಕಾಳು ಕಡಿಯ ಅಂಗಡಿ; ಹೊಟ್ಟು; ಚುನ್ನಿ; ನುರುಗು ಇತ್ಯಾದಿಗಳ ಮಾರಾಟದ ಅಂಗಡಿ.

ಭೂಸು (ನಾ)= ಧೂಸು; ಧಾನ್ಯದ ಹೊಟ್ಟು; ಧೂಳಿ; ಹೂಸು; ಹೂಂಸು; ಅಪಾನ ವಾಯು.

ಭೂಸುಗಟ್ಟು (ಕ್ರಿ)= ತಂಗುಳ ಆಹಾರದ ಮೇಲೆ ಬಿಳಿದಾದ ಪೊರೆವುಂಟಾಗು.

ಭೂಸುಣ (ನಾ)= ಭೂಷಣ; ಶೃಂಗಾರ.

ಭೂಸುಣ್ಗಿ (ನಾ)= ಮಹಾಗಾಂವ ಹತ್ತಿರದ ಒಂದು ಹಳ್ಳಿ.

ಭೂಸು ಬಿಡು (ಕ್ರಿ)= ಹೂಸು ಹೊಡಿ; ಅಪಾನ ವಾಯು ವಿಸರ್ಜಿಸು.

ಭೆಂಕಿ (ನಾ)= ಬೆಂಕಿ; ಅಗ್ನಿ; ಉರಿ.

ಭೆಂಕಿ ಆರು (ಕ್ರಿ)= ಉರಿನಂದು; ಶಾಂತವಾಗು.

ಭೆಂಕಿ ಆರ್ಸು (ಕ್ರಿ)= ಉರಿ ಆರಿಸು; ಶಾಂತಗೊಳಿಸು.

ಭೆಂಕಿ ಕಾರು (ಕ್ರಿ)= ಬೆಂಕಿಯನ್ನು ಉಗುಳು; ಬಹಳ ಕೋಪವನ್ನು ಪ್ರದರ್ಶಿಸು; ಸಿಟ್ಟಿಗೇಳು; ಕೋಪಾತಿರೇಕದೋರು.

ಭೆಂಕಿಕಿಡಿ (ನು)= ಚತುರ; ಚುರುಕು ಬುದ್ಧಿಯುಳ್ಳವನು.

ಭೆಂಕಿಖೆಂಡಾ ಆಗು (ನು)= ಅತಿಕೋಪ ತಾಳು; ಕೋಪಾವಿಷ್ಟ ನಾಗು; ಕೋಪೋದ್ರಿಕ್ತನಾಗು.

ಭೆಂಕಿಹಚ್ಚು (ಕ್ರಿ)= ಉರಿತಗುಲಿಸು; ಸುಟ್ಟು ಬಿಡು; ಭೇದ ಹುಟ್ಟಿಸು; ಏನಾದರೂ ಮಾಡು.

ಭೆಂಕು (ನಾ) ಇಂ.= ಬ್ಯಾಂಕು.

ಭೆಂಡಿ (ನಾ)= ಬೆಂಡೆ; ಬೆಂಡೆಯಗಿಡ ಮತ್ತು ಅದರ ಕಾಯಿ; ಒಂದು ಪ್ರಕಾರದ ತರಕಾರಿಫಲ.

ಭೆಂಡಿಕಾಯಿ (ನಾ)= ಒಂದು ಬಗೆಯ ತರಕಾರಿ ಕಾಯಿ.

ಭೆಂಡಿಕಾಯಿ ಭರ್ತ (ನಾ)= ಬೆಂಡೆಕಾಯಿ ಚಟ್ನಿ; (ಜಾನಪದ ಪ್ರಾಸ: ಭೆಂಡಿಕಾಯಿ ಭರ್ತ। ಒಳಗಿನಾಕಿಗಿ ಮರ್ತ। ಹೊರ್ಗಿನಾಕಿಗಿ ಬೆರ್ತ।).

ಭೆಂಡಿ ನಾರು (ನಾ)= ಬೆಂಡೆಯ ದಂಟುಗಳಿಂದ ತೆಗೆದ ಎಳೆ ಎಳೆಯಾದ ನಾರು. ಮತಾಟಿ ತಯಾರಿಕೆಗೆ ಬಳಸುವ ನಾರು.

ಭೆಂಡು (ನಾ)= ಬೆಂಡು; ಜೋಳದ ದಂಟಿನ ಒಳಭಾಗ; ತಿರುಳಿಲ್ಲದ ದಂಟು; ಸಕ್ಕರೆಯಿಂದ ಮಾಡಿದ ಬೆರಳಗಾತ್ರದ ತಿಂಡಿ.

ಭೆಂಡು ಬತಾಶಾ (ನಾ)= ಬೆಂಡಿನಂತೆ ಮತ್ತೆ ಬಿಲ್ಲೆಯಂತೆ ತಯಾರಿಸಿದ ಸಕ್ಕರೆಯ ತಿಂಡಿ.

ಭೆಂಡೊಡಿ (ಕ್ರಿ)= ಸತ್ವಹೀನವಾಗು; ದುರ್ಬಲವಾಗು; ತಿರುಳಿಲ್ಲದಂತಾಗು; ರಸಹೀನವಾಗು; ಕಬ್ಬಿನಲ್ಲಿ ಅಥವಾ ಜೋಳದ ದಂಟಿನಲ್ಲಿ ರುಚಿ ಇಲ್ಲದಂತಾಗು.

ಭೆಂಡೋಲಿ (ನಾ)= ಬೆಂಡೋಲೆ; ಒಂದು ಬಗೆಯ ಕಿವಿಯ ಆಭರಣ.

ಭೆಂಡ್ಯಾ ಕಾಯಿ (ನಾ)= ಬೆಂಡೆ ಕಾಯಿ.

ಭೆಚ್ಚಗ (ಅ)= ಬೆಚ್ಚಗೆ; ಬಿಸಿಯಾದ; ನೆಮ್ಮದಿಯಾಗಿ.

ಭೇಟ (ನಾ)= ಭೆಟ್ಟಿ; ಭೇಟಿ; ಎದುರುಗೊಳ್ಳುವಿಕೆ.

ಭೆಟಿಕುಡು (ಕ್ರಿ)= ಭೆಟ್ಟಿಯಾಗು; ಎದುರುಗೊಳ್ಳು.

ಭೆಟ್ಟಿ (ನಾ)= ಭೇಟಿ; ಪರಸ್ಪರ ಸಂಧಿಸುವುದು; ಎದರುಗೊಳ್ಳುವುದು.

ಭೆಟ್ಟಿ ಆಗು (ಕ್ರಿ)= ಭೇಟಿ ಮಾಡು; ಪರಸ್ಪರ ಸಂದಿಸು.

ಭೆಲ್ಲ (ನಾ)= ಬೆಲ್ಲ; ಕಬ್ಬಿನ ರಸವನ್ನು ಕಾಯಿಸಿ ತಯಾರಿಸಿದ ಸಾಚಾ, ಮುದ್ದೆ ಇತ್ಯಾದಿ.

ಭೆವುಟು (ನಾ)= ಬೂದಿ.

ಭೆವುರ್ಸಲ್ಗಿ (ನಾ)= ಮೈಯೆಲ್ಲುಂಟಾಗುವ ಬೊಕ್ಕೆಗಳು.

ಭೆವ್ರು (ನಾ)= ಬೆವರು; ಪಸೀನಾ.

ಭೆಳಗು (ನಾ)= ಬೆಳಗು; ಮುಂಜಾವು.

ಭೆಳತನಕ (ಅ)= ಇಡೀ ರಾತ್ರಿ; ಇರುಳೆಲ್ಲ; ರಾತ್ರಿಯೆಲ್ಲ.

ಭೆಳಾರ (ನಾ)= ಬೆಳಕು; ಬೆಳಗು; ಮುಂಜಾವು; ಸೂರ್ಯದರ್ಶನದ ಮೊದಲಿನ ಸಮಯ.

ಭೆಳಾರಾಗು (ಕ್ರಿ)= ಬೆಳಗಾಗು; ಮುಂಜಾವಾಗು; ಸೂರ್ಯದರ್ಶನದ ಸಮಯ ಬರು.

ಭೆಳ್ತಾನಾ (ಅ)= ಬೆಳಗಾಗುವವರೆಗೆ.

ಭೆಳ್ಳಕ್ಕಿ (ನಾ)= ಬೆಳ್ಳಕ್ಕಿ; ಒಂದು ಜಾತಿಯ ಜಲಚರ ಪಕ್ಷಿ.

ಭೆಳ್ಳಗ (ವಿ.)= ಬೆಳ್ಳಗೆ; ಬಿಳಿದಾಗಿರುವ; ಬೆಳ್ಳನೆಯ.

ಭೆಳ್ಳಗ ಮಾಡು (ಕ್ರಿ)= ಉಜ್ಜಿ ತೊಳೆದು ಹೊಳೆವಂತೆ ಮಾಡು.

ಭೆಳ್ಳಿ (ನಾ)= ಬೆಳ್ಳಿ; ಒಂದು ಬಗೆಯ ಬಿಳಿಯ ಲೋಹ; ಬಿಳಿ ಬಣ್ಣದ ಆಕಳು.

ಭೆಳ್ಳೆತ್ತು (ನಾ)= ಬಿಳಿ ಬಣ್ಣದ ಎತ್ತು.

ಭೆಳ್ಳ್ಯಾ (ನಾ)= ಬಿಳಿ ಬಣ್ಣದ ಹೋರಿ ಅಥವಾ ಎತ್ತು.

ಭೇಗೊನಾ (ಅ)= ದಿನವಿಡೀ.

ಭೇಗಿ (ಅ)= ಬೇಗ; ಬೇಗನೆ.

ಬೇಗಿ ಬೇಗಿ (ದ್ವಿ)= ಬೇಗ ಬೇಗ; ತೀವ್ರ ಗತಿಯಿಂದ.

ಭೇಗಿ ಭೇಗಿ ಬಾ (ಕ್ರಿ)= ತೀವ್ರಗತಿಯಿಂದ ಆಗಮಿಸು.

ಭೇಜಾ (ನಾ)ಉ.= ಮೆದುಳು; ಬುದ್ಧಿ (ಉದಾ: ನಿಂದೇನ್ ಭೇಜಾ ಅದಾನಾ, ಹೆಂಡಿ ಬುಟ್ಟಿ ಅದಾ?).

ಭೇಟ್ (ನಾ) ಮ.= ಭೇಟಿ; ಭೆಟ್ಟಿ; ಗಂಟು ಬೀಳುವಿಕೆ.

ಭೇಟಿ (ನಾ)= ಭೆಟ್ಟಿ; ಗಂಟು ಬೀಳುವಿಕೆ; ಎದುರಾಗುವಿಕೆ.

ಭೇಟಿ ತೊಗೊ (ಕ್ರಿ)= ಎದುರಾಗು; ಮಿಲಾಸು; ಭೇಟಿಯಾಗು.

ಭೇತುಲು (ನಾ)= ಬೈತಲೆ.

ಭೇತ್ರೀನ್ (ನಾ)= ಅತ್ಯುತ್ತಮವಾದದ್ದು.

ಭೇದ (ನಾ)= ಒಡಕು; ಬಿರುಕು; ಛಿದ್ರ; ಗುಟ್ಟು; ರಹಸ್ಯ.

ಭೇದಭಾವ (ನಾ)= ಪಕ್ಷಪಾತ ಬುದ್ಧಿ; ಒಡಕುನೀತಿ.

ಭೇದ ಮಾಡು (ಕ್ರಿ)= ಎರಡು ಬಗೆ (ಉದಾ: ಪಂಗ್ತ್ಯಾಗ ಎಂದು ಬೀ ಭೇದ ಮಾಡಬಾರ್ದು).

ಭೇಲ್ ಪೂರಿ (ನಾ) ಹಿಂ.= ಒಂದು ಪ್ರಕಾರದ ಮಿಶ್ರ ತಿಂಡಿ.

ಭೇಸು (ನಾ)= ಒನಪು; ವೈಯಾರ; ಸೋಗು; ಸೋಂಗು; ನಟನೆ.

ಭೇಸು ಮಾಡು (ಕ್ರಿ)= ಒನಪು ಮಾಡು; ವೈಯಾರ ಮಾಡು; ವೇಷತಾಳು.

ಭೇಸ್ಗಳ್ಳಿ (ನಾ)= ವೈಯಾರಿ; ಸೋಗುಲಾಡಿ (ಬೈಗುಳ).

ಭೇಸ್ಗಳ್ಯಾ (ನಾ)= ವೈಯಾರ ಮಾಡುವಾತ; ಸೋಗು ಮಾಡುವಾತ (ಬೈಗುಳ).

ಭೇಸ್ವಾರ (ನಾ)= ಗುರುವಾರ; ಬ್ರಹಸ್ಪತಿವಾರ; ಬುಧವಾರದ ನಂತರದ ವಾರ.

ಭೇಸ್ಯಾ (ನಾ)= ವೈಯಾರ ಮಾಡುವವನು; ನಟನೆ ಮಾಡುವವನು. (ಬೈಗುಳ)

ಭೈಮೂಂಗು (ನಾ) ಮ.= ನೆಲಗಡಲೆ; ಸೇಂಗಾ; ಭುಯ್ಮೂಂಗ.

ಭೈಯಾ (ನಾ) ಹಿಂ.= ಅಣ್ಣ; ತಮ್ಮ.

ಭೈರಾಮಡಗಿ (ನಾ)= ಒಂದು ಊರಿನ ಹೆಸರು.

ಭೈರೂಪಿ (ನಾ)= ಬಹುರೂಪಿ; ಜಾತಗಾರ; ವೇಷಗಾರ; ಬೀದಿನಾಟಕಕಾರ.

ಭೈರೂಪಿ ಚೌಡಯ್ಯ (ನಾ)= ಬೀದರ ಜಿಲ್ಲೆಯ ರೇಕುಳ್ಗಿ (ರೇಕಳಿಕೆ) ಎಂಬ ಊರಿನ ಬಹುರೂಪಿ ಚೌಡಯ್ಯನೆಂಬ ಬಸವಕಾಲೀನ ಶರಣ.

ಭೈಯರ್ಾ (ನಾ) ಮ.= ಬಧಿರ; ಕಿವುಡ; ಕಿವಿಕೇಳಿಸಲಾರದವನು (ಬೈಗುಳ)

ಭೈಸ್ಕಾರ (ನಾ)= ಬಹಿಷ್ಕಾರ.

ಬೈಸ್ಕಾರ ಹಾಕು (ಕ್ರಿ)= ಬಹಿಷ್ಕರಿಸು; ಧಿಕ್ಕರಿಸು.

ಭೊಂಗಾ (ನಾ). ಮ.= ಕಾರಖಾನೆ ಅಥವಾ ಗಿರಣಿಯ ಎತ್ತರ ದನಿಯ ಸೀಟಿ; ಕೂಗು ಹಾಕುವ ಸಾಧನ; ಧ್ವನಿವರ್ಧಕ; ಪೊಂಗಾ.

ಭೊಂಗಾ ಊದು (ಕ್ರಿ)= ಸೀಟಿ ಹೊಡೆ; ಮಿಲ್ಲಿನ ಯಂತ್ರ ಜೋರಾಗಿ ಕೂಗು.

ಭೊಕ್ಕಾ (ನಾ) ಮ.= ರಂಧ್ರ; ತೂತು; ಯೋನಿ.

ಭೊಕ್ಕಾಭೀಳು (ಕ್ರಿ)= ದೊಡ್ಡ ರಂಧ್ರ ಉಂಟಾಗು; ದೊಡ್ಡ ಕೊರೆತ ಉಂಟಾಗು.

ಭೊಗುಳು (ಕ್ರಿ)= ಬೊಗುಳು; ಹೇಳು; ತಿಳಿಸು; ಬೊಗಳು.

ಭೊಗೋಣಿ (ನಾ)= ಹಿತ್ತಾಳೆ; ಜರ್ಮನ ಸಿಲ್ವರ ಅಥವಾ ಸ್ಟೀಲಿನಿಂದ ತಯಾರಿಸಿದ ಅಡಿಗೆ ಪಾತ್ರೆ.

ಭೊಬ್ಕಿ (ನಾ) ಮ.= ಸುಳ್ಳು ಭರವಸೆ ನೀಡುವಿಕೆ; ಒಡ್ಡು; ಭಬ್ಕಿ; ಬಡಿವಾರ.

ಭೊಬ್ಕಿ ಒತ್ತು (ಕ್ರಿ)= ಸುಳ್ಳು ಭರವಸೆಕೊಡು; ಒಡ್ಡು ಹೇಳು; ಬಡಿವಾರ ಕೊಚ್ಚು.

ಭೋಂಗಾ (ನಾ) ಮ.= ಭೊಂಗಾ; ಬೊಂಗಾ; ಕಾರಖಾನೆಯ ಸೀಟಿ.

ಭೋಕು (ನಾ) ಮ.= ರಂಧ್ರ; ತೂತು.

ಭೋಕು ಭೀಳು (ಕ್ರಿ)= ರಂಧ್ರ ಉಂಟಾಗು.

ಭೋಗ (ನಾ)= ದೈವ; ಕರ್ಮಫಲ; ಸುಖ; ಸೌಖ್ಯ.

ಭೋಗಿ (ನಾ)= ಸಂಕ್ರಾಂತಿ ಮುನ್ನಾ ದಿನದ ಹೆಂಗಸರ ಹಬ್ಬ; ಸಂಕ್ರಾತಿ ದಿನದ ಗಂಡಸರ ಹಬ್ಬ; ಭೋಗಿಸುವವನು; ಸಂಸಾರಿ.

ಭೋಗುಸು (ಕ್ರಿ)= ಭೋಗಿಸು; ಅನುಭವಿಸು; ಸುಖಪಡು; ಕಷ್ಟ ಹೊಂದು.

ಭೋಣಿ, ಭೋಣ್ಗಿ (ನಾ)= ವ್ಯಾಪಾರ ಪ್ರಾರಂಭದ ಪ್ರಥಮ ಗಿರಾಕಿ; ಪ್ರಥಮ ಗ್ರಾಹಕ ಕೊಟ್ಟ ನಗದಿ ಹಣ.

ಭೋದಾ (ನಾ)= ಬೋಧೆ; ಉಪದೇಶ; ದೀಕ್ಷೆ.

ಭೋದು (ನಾ)= ಕಿವಿ ತುಂಬುವವನು; ಕಲಹ ಹುಟ್ಟಿಸುವವನು; ಬೋಧಿಸುವವನು.

ಭೋದುಧಂದ್ಯಾ (ನಾ)= ಕಲಹ ಹುಟ್ಟಿಸುವ ಕೆಲಸ.

ಭೋಪಾಳಗಡ (ನಾ)= ಔರಾದ ತಾಲೂಕಿನ ಒಂದು ಹಳ್ಳಿ.

ಭೋಪ್ಯಾ (ನಾ) ಮ.= ಕುಂಬಳ; ಕೂಷ್ಮಾಂಡ; ಸೋರೆಕಾಯಿ.

ಭೋಯಿ (ನಾ)= ಬೋಯಿ; ಅಂಬಿಗ.

ಭೋಯಿಗಲ್ಲಿ (ನಾ)= ಬೀದರ ನಗರದ ಭೋಯಿ ಜನಾಂಗದ ಒಂದು ಓಣಿ.

ಭೋಸಡಾ (ನಾ) ಹಿಂ.= ಹೆಂಗಸಿನ ಜನನೇಂದ್ರಿಯ; ಯೋನಿ.

ಭೋಸಡಾಧಂದ್ಯಾ (ನಾ)= ಹಾದರ; ಸೂಳೆಗಾರಿಕೆ.

ಭೋಸಡಿ (ನಾ) ಹಿಂ.= ಸೂಳೆ; ಹಾದರಗಿತ್ತಿ (ಬೈಗುಳ).

ಭೋಸಡಿಕೆ (ಅ)= ಸೂಳೆಗೆ ಹುಟ್ಟಿದವನೇ (ಬೈಗುಳ).

ಭೋಸುಡ್ಕೆ (ಅ)= ಭೋಸಡಿಕೆ (ನೋಡಿರಿ).

ಭೋಳಾ ಶಂಕರ (ನಾ)= ಶಿವ; ಶಂಕರ; ಏನೂ ಅರಿಯದವನು; ಮುಗ್ಧ.

ಭೋಳೆ (ನಾ)= ಭೋಳ್ಯಾ; ಮುಗ್ಧ; ಸಾಧು ಸ್ವಭಾವದವನು.

ಭೋಳ್ಯಾ (ನಾ)= ಭೋಳೆ (ನೋಡಿರಿ).

ಭೋಳ್ಯಾಶಂಕರ (ನಾ)= ಭೋಳಾ ಶಂಕರ (ನೋಡಿರಿ).

ಭೌ (ವಿ.)= ಬಹು; ಬಹಳ.

ಭೌತ (ವಿ.)= ಹಿಂ.= ಬಹುತ; ಬಹಳ.

ಭೌತೇಕ (ಅ)= ಬಹಳಷ್ಟು.

ಭೌಭೌ (ಧ್ವಿ)= ನಾಯಿಯ ಬಗುಳುವಿಕೆ.

ಭೌಮಂದಿ (ನಾ)= ಬಹಳ ಮಂದಿ; ಬಹಳ ಜನ.

ಭೌರಿ (ನಾ) ಮ.= ಬೊಗರೆ; ನೀರಿನ ಸುಳಿ.

ಭೌಳಾ (ನಾ) ಮ.= ಭೋಳೆ (ನೋಡಿರಿ).

ಭೌಳಾಶಂಕರ (ನಾ)= ಭೋಳಾ ಶಂಕರ (ನೋಡಿರಿ).

ಭ್ಯಾಡ (ನಾ)= ಬೇಡ; ಸಲ್ಲದು; ಕೂಡದು; ಬೇಕಾಗಿಲ್ಲ; ಅಪೇಕ್ಷೆ ಇಲ್ಲ (ನಿಷೇಧಾರ್ಥ).

ಭ್ರಾಂಬ್ರು (ನಾ)= ಬ್ರಾಹ್ಮಣರು.

ಮ

ಮಂಕಿಕಾಲ ಹಣಮಂತಪ್ಪ (ನಾ)= ಚಿಟಿಗುಪ್ಪಾದ ಒಬ್ಬ ಶ್ರೇಷ್ಠ ತತ್ವ ಪದಕಾರ.

ಮಂಕಿ (ನಾ) ಇಂ.= ಮಂಗ; ಕೋತಿ; ಕೋಡಂಗಿ.

ಮಂಕೊ (ಕ್ರಿ)= ಮಲಗಿಕೊ; ಮಲಗು; ನಿದ್ದೆ ಹೋಗು.

ಮಂಗ (ನಾ)= ಕೋತಿ; ಕಪಿ; ಕುರೂಪಿ.

ಮಂಗಲಾಕಪ್ರೆ (ನಾ)= ಚಿಟುಗುಪ್ಪ ಮೂಲದ ಕನ್ನಡ ಹಿಂದಿ ಉಭಯ ಭಾಷಾ ಕವಯತ್ರಿ.

ಮಂಗಳಾರ (ನಾ)= ಮಂಗಳವಾರ.

ಮಂಗಳಾರ್ತಿ(ನಾ)= ಮಂಗಳಾರತಿ; ಪೂಜೆಯ ಮುಕ್ತಾಯದಲ್ಲಿ ಹಾಡುವ ಮಂಗಳಕರ ಆರತಿ ಹಾಡು. ಉದಾ : ಜಯಜಯ ಮಂಗಳಾರರ್ತಿ । ಕರಬಸಪ್ಪ ಗುರು ಮೂರ್ತಿ ॥.

ಮಂಗಳ್ಸೂತ್ರ (ನಾ)= ಮಂಗಳಸೂತ್ರ; ತಾಳಿ; ಗುಳ್ಡಾಳಿ.

ಮಂಗಾಪರಿ (ಅ)= ಮಲಗುವಾಗ.

ಮಂಗಿ (ನಾ)= ಹೆಣ್ಣುಕೋತಿ (ಬೈಗುಳ).

ಮಂಗು (ಕ್ರಿ)= ಮಲಗು; ನಿದ್ರೆ ಹೋಗು; ಒರಗು.

ಮಂಗುಸು (ಕ್ರಿ)= ಮಲಗಿಸು; ನಿದ್ರೆ ಹತ್ತಿಸು.

ಮಂಗ್ನಿ (ನಾ) ಹಿಂ.= ಹೆಣ್ಣನ್ನು ಬೇಡಲು ಹೋಗುವಿಕೆ.

ಮಂಗ್ಯಾ (ನಾ)= ಕೋತಿ; ಕೋತಿ ಗುಣದವನು (ಬೈಗುಳ).

ಮಂಗ್ಯಾನ್ಮಾರಿ (ನಾ)= ವಾನರ ಮುಖ; ವಾನರ ಮೋರೆಯವನು (ಬೈಗುಳ).

ಮಂಗ್ವಾರ (ನಾ)= ಮಂಗಳವಾರ. (ಗಾದೆ : ಆಯ್ತಾರ ಪಟ್ವಾ । ಸ್ವಾಮಾರಾ ಇಟ್ವಾ। ಮಗ್ವಾರ ಬಿಟ್ವಾ।।).

ಮಂಗ್ಳಾರ್ತಿ (ನಾ)= ಮಂಗಳಾರತಿ; ಪೂಜೆಯ ಕೊನೆಯಲ್ಲಿ ಬತ್ತಿ, ಕರ್ಪೂರಾದಿಗಳನ್ನು ಉರಿಸಿ ಬೆಳಗುವಿಕೆ.

ಮಂಗ್ಳೂರು (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಹಳ್ಳಿಯ ಹೆಸರು.

ಮಂಚಗಿ, ಮಂಚ್ಗಿ (ನಾ)= ಮಂಚಿಗೆ; ಹೊಲಕಾಯಲು ನಾಲ್ಕು ಕಂಭ ಹೂಳಿ ಕಟ್ಟಿರುವ ಕಟ್ಟಿಗೆಯ ಅಂಟ; ಅಟ್ಟ; ಅಟ್ಟಣೆ.

ಮಂಚಾ (ನಾ)= ಮಂಚ; ಪಲ್ಲಂಗ; ಮಲಗಲು ಉಪಯೋಗಿಸುವ ನಾಲ್ಕು ಕಾಲುಗಳುಳ್ಳ ಮರದ ಅಥವಾ ಲೋಹದ ಸಾಧನ. (ಗಾದೆ: ಲಂಚಾತಿಂದಾಂವ ಮಂಚಾ ಏರ್ದ).

ಮಂಚಾ ಏರು (ಕ್ರಿ)= ಮಂಚಹತ್ತು; ಮಂಚದ ಮೇಲೆ ಮಲಗು; ಶ್ರೀಮಂತನಾಗು.

ಮಂಜ (ವಿ)= ಮಂದ; ಮಬ್ಬು.

ಮಂಜನ (ನಾ)= ಹಲ್ಲು ಪುಡಿ; ಹಲ್ಲುಜ್ಜಿ ಕೊಳ್ಳಲು ಬಳಸುವ ಪುಡಿ.

ಮಂಜಪತ್ರಿ (ನಾ)= ಒಂದು ಬಗೆಯ ಕಹಿಸ್ವಾದದ ಸಸ್ಯ ಮತ್ತು ಅದರ ಎಲೆ; ಹೊಟ್ಟೆ ನೋವು ನಿವಾರಕ ಎಲೆಯ ಸಸ್ಯ.

ಮಂಜಪ್ಪ ಹರ್ಡೇಕರ (ನಾ)= ಕರ್ನಾಟಕದ ಗಾಂಧಿ ಎಂದು ಹೆಸರು ಮಾಡಿದ ಸ್ವಾತಂತ್ರ್ಯ ಹೋರಕಾಟಗಾರ. ಬೀದರ ಜಿಲ್ಲೆಯ ಕ್ರಾಂತಿ ಎಬ್ಬಿಸಿದ ವೀರ.

ಮಂಜಾಗು (ಕ್ರಿ)= ಕಣ್ಣು ಸರಿಯಾಗಿ ಕಾಣದಂತೆ ಮಂದವಾಗು, ಮಬ್ಬಾಗು.

ಮಂಜಾಳಾಗು (ಕ್ರಿ)= ಹಾಳಾಗು.

ಮಂಜಾಳಾಗ್ಲಿ (ಕ್ರಿ)= ಹಾಳಾಗಲಿ (ಬೈಗುಳ).

ಮಂಜಿ (ನಾ)= ಮಜ್ಜಿಗೆ (ಬಾಲಭಾಷೆ).

ಮಂಜೀರಾ (ನಾ)= ಮಾಂಜ್ರಾ ನದಿಯ ಮತ್ತೊಂದು ಹೆಸರು. ಮಹಾರಾಷ್ಟ್ರ ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿ ಹರಿವ ಗೋದಾವರಿ ನದಿಯ ಉಪನದಿ ಮಾಂಜ್ರಾ.

ಮಂಜು (ನಾ)= ಇಬ್ಬನಿ; ಹಿಮ; ಹಿಮ ಮುಸುಕು; ಹನಿಹುಲ್ಲು.

ಮಂಜುಗಣ್ಣು (ನಾ)= ಚೆನ್ನಾಗಿ ಕಾಣದ ಕಣ್ಣು; ಮಬ್ಬುಗಣ್ಣು; ಮಂದಗಣ್ಣು.

ಮಂಜುಭೀಳು (ಕ್ರಿ)= ಬೆಳೆಗೆ ರೋಗ ಬೀಳು; ವಾತಾವರಣದಲ್ಲಿ ಬಿಳಿ ಹಿಮ ಹರಡು; ವಾತಾವರಣದಲ್ಲಿ ಬಿಳುಪು ಆವರಿಸಿ ಕಾಣದಂತಯಾಗು.

ಮಂಜೂರಿ (ನಾ)= ಒಪ್ಪಿಗೆ; ಅನುಮತಿ.

ಮಂಜೂರು ಮಾಡು (ಕ್ರಿ)= ಒಪ್ಪಿಗೆ ನೀಡು.

ಮಂಜ್ಗಣ್ಣು (ನಾ)= ಮಂಜುಗಣ್ಣು; ಮಬ್ಬುಗಣ್ಣು.

ಮಂಜ್ಮಂಜಾಗು (ಕ್ರಿ)= ಮಂಜು ಕವಿದಂತಾಗು; ಸರಿಯಾಗಿ ಕಾಣದಂತಾಗು.

ಮಂಟಾಪ (ನಾ)= ಮಂಟಪ; ಚಪ್ಪರದಾಕಾರದ ಕಲ್ಲಿನ ಛಾವಣಿ; ಮದುವೆಯ ಚಪ್ಪರ; ಸಭಾ ವೇದಿಕೆ (ಉದಾ: ಲಗ್ನ ಮಂಟಪ; ಗುಡಿಯ ಮಂಟಪ; ಸಭಾ ಮಂಟಪ, ಬಸವ ಮಂಟಪ ಇತ್ಯಾದಿ).

ಮಂಠಾಳ (ನಾ) = ಬಸವಕಲ್ಯಾಣ ತಾಲೂಕಿನಲ್ಲಿರುವ, ಮಠಗಳ ಊರೆಂದೇ ಖ್ಯಾತಿ ಮಾಡಿದ ಊರು. ಮಠಾಲಾ ಎಂದೂ ಕರೆಯುತ್ತಾರೆ. ಸಾಹಿತಿ ವೀರಣ್ಣ ಮಂಠಾಳಕರರ ಹುಟ್ಟೂರು.

ಮಂಡ (ನಾ)= ಮೊಂಡು; ಚೂಪಲ್ಲದುದು; ಉದ್ಧಟ.

ಮಂಡ ಗುಣಾ (ನಾ)= ಉದ್ಧಟತನ; ಮೊಂಡುತನ.

ಮಂಡಪ (ನಾ) ಮ.= ಮಂಟಪ (ಮಂಟಾಪ ನೋಡಿರಿ).

ಮಂಡಳಿ (ನಾ)= ಗುಂಪು; ಸಮೂಹ; ಮಂಡಳ; ಮಂಡಲಿ.

ಮಂಡಹಡಿ (ನಾ)= ಅತಿಮೊಂಡು; ಅತಿ ಉದ್ಧಟ; ಅತಿಹುಂಬ.

ಮಂಡಳ್ಳು (ನಾ)= ಮಂಡಕ್ಕಿ; ಚುರ್ಮುರಿ; ಅಳ್ಳು.

ಮಂಡಾಗು (ಕ್ರಿ)= ಚೂಪುತನ ಇಲ್ಲದಂತಾಗು; ಹರಿತ ಇಲ್ಲದಂತಾಗು; ಉದ್ಧಟನಾಗು.

ಮಂಡಾಲ (ನಾ)= ಮಂಡಲ; ವರ್ತುಳ (ಗೌರಿ ಹಾಡು: ಒಂದ್ಸೇರಕ್ಕಿ ತಂದಿದಾ। ಗವರಮ್ಮ ಒಂದೇ ಮಂಡಾಲ ಬರ್ದಿದ। ಹಾಲ್ವುಕ್ಕಿ ನೀಲ್ಬುಕ್ಕಿ। ಹೂವ ತಂದಿದಾ। ಗವರಮ್ಗ ಹುಣ್ಣೆ ಮಾಡಿ। ಖಳಕೊಟ್ಟಿದಾ॥).

ಮಂಡಿ (ನಾ)= ಮೊಣಕಾಲು; ಮೊಳಕಾಲುಡಬ್ಬಿ.

ಮಂಡಿಬ್ಯಾನಿ (ನಾ)= ಮೊಳಕಾಲು ನೋವು; ಮೊಳಕಾಲು ಅಲ್ಲಾಡದಂತೆ ಹಿಡಿದುಕೊಳ್ಳುವ ಒಂದು ಪ್ರಕಾರದ ವಾತರೋಗ.

ಮಂತಣಿ, ಮಂತ್ನಿ (ನಾ)= ಮುಸುರೆ ಹಾಕಲು ಬಳಸುವ ಸಣ್ಣ ತಳ, ಅಗಲ ಬಾಯಿಯುಳ್ಳ ಮಣ್ಣಿನ ಇಲ್ಲವೆ ಕಲ್ಲಿನ ಪಾತ್ರೆ; ಮಂಥಣಿ.

ಮಂತುರು (ನಾ)= ಮಂತ್ರ; ದೇವರ ಧ್ಯಾನದ ವಾಕ್ಯ ಸಮೂಹ.

ಮಂತುರ್ಶಕ್ತಿ (ನಾ)= ಮಂತ್ರಬಲ.

ಮಂತುರ್ಸು (ಕ್ರಿ)= ಮಂತ್ರಿಸು; ಮಂತ್ರ ಹೇಳು; ಮಂತ್ರ ಹಾಕು.

ಮಂತ್ರಿ (ನಾ)= ಸಚಿವ.

ಮಂದ (ವಿ)= ಮಂಜ; ಮಬ್ಬು; ನಿಧಾನಗತಿಯುಳ್ಳದ್ದು; ಚುರುಕಾಗಿಲ್ಲದ್ದು; ದಡ್ಡ; ತಿಳಿಗೇಡಿ.

ಮಂದತೆಲಿ (ನಾ)= ಮಂದಬುದ್ಧಿ; ಅಲ್ಪಬುದ್ಧಿ; ದಡ್ಡ.

ಮಂದಮ್ಮು (ನಾ)= ಗಾತ್ರ; ದಪ್ಪತನ.

ಮಂದಾಗು (ಕ್ರಿ)= ಮಂಜಾಗು; ಮಬ್ಬಾಗು; ಕಾಣದಂತಾಗು.

ಮಂದಿ (ನಾ)= ಜನ; ಜನಸಮೂಹ; ಅಗ್ಗ; ಸೋವಿ; ಧಾರಣೆಯಲ್ಲಿ ಇಳಿತ (ಗಾದೆ : ಮಂದಿ ಮಾತ್ಕೇಳಿ ರಾಮ ಮಡ್ಡಿಗ್ಬಿಟ್ನಂತ)

ಮಂದಿ ಮಕ್ಳು (ನಾ)= ಅಳಗಬಳಗ; ಬಂದುಬಳಗ; ಸಂಬಂಧಿಕರು.

ಮಂದಿರ (ನಾ)= ದೇವಾಲಯ; ಗುಡಿ (ಹಾಡು: ಮನುಹಾರ ಪ್ರಿಯಾ ಮಂದಿರದೋಳು ಆಡಿದ।).

ಮಕಮೀಸಿ (ನಾ)= ಚಿಗುರು ಮೀಸೆ; ಎಳೆಮೀಸೆ; ಮೋರೆ ಮೇಲೆ ಮೂಡಿದ ಕೇಶ.

ಮಕಮೀಸೆ ಒಡಿ (ಕ್ರಿ)= ಎಳೆಮೀಸೆ ಚಿಗುರು.

ಮಕಾ (ನಾ)= ಮುಖ; ಮೋರೆ.

ಮಕಾ ನೋಡು (ಕ್ರಿ)= ಮೋರೆಯನ್ನು ವೀಕ್ಷಿಸು; ಮೋರೆ ಸರಿ ಇಲ್ಲ ಎಂಬ ಅಣಕವಾಡು.

ಮಕ್ಕಾ (ನಾ)= ಅರಬಸ್ತಾನದಲ್ಲಿರುವ ಮುಸಲ್ಮಾನರ ತೀರ್ಥ ಕ್ಷೇತ್ರ.

ಮಕ್ಯಾ (ನಾ)= ಮಕ್ಕಾ (ನೋಡಿರಿ).

ಮಕ್ಯಾಕ ಹೋಗು (ಕ್ರಿ)= ಮಕ್ಕಾಯಾತ್ರೆ ಮಾಡು; ಸಾಯು; ಜನ್ನತ್ ಸೇರು.

ಮಖಮಲ್ (ನಾ)= ಒಂದು ಬಗೆಯ ನಯವಾದ ಬಟ್ಟೆ.

ಮಖಮಲ್‌ಟೋಪಿ (ನಾ)= ಮೋಸಗಾರಿಕೆ; ಮೆದು ಬಟ್ಟೆಯಿಂದ ಮಾಡಿದ ಟೋಪಿ.

ಮಖಮಲ್ ಟೋಪಿ ಹಾಕು (ಕ್ರಿ)= ಮೋಸಮಾಡು; ವಂಚಿಸು.

ಮಖರಾರ (ನಾ)ಉ.= ನೇಮಕ.

ಮಖರಾರ ಮಾಡು (ಕ್ರಿ).= ನೇಮಕ ಮಾಡು.

ಮಖಾ (ನಾ)= ಮಕಾ; ಮುಖ; ಮೋರೆ; ಮೋತಿ; ಧಾತುವಿನಿಂದ ತಯಾರಿಸಿದ ಮುಖದ ಪ್ರತಿಮೆ.

ಮಖಾಬಿಲಾ (ನಾ) ಉ.= ಹೋರಾಟ; ಮುಖಾಮುಖಿ ಹೊಡೆದಾಟ; ಗುದ್ದಾಟ; ಮುಖಾಮುಖಿ ಭೇಟಿ.

ಮಖಾ ಬಿಲಾ ಮಾಡ್ಸು (ಕ್ರಿ)= ಭೇಟಿ ಮಾಡಿಸು.

ಮಖಾಮು (ನಾ) ಉ.= ವಸತಿ; ವಾಸಸ್ಥಳ; ವಾಸ; ಮುಕ್ಕಾಮು.

ಮಗ (ನಾ)= ಗಂಡು ಸಂತಾನ; ಪುತ್ರ; ತನುಜ.

ಮಗಡಾ (ನಾ)= ಲಪಾಟಿ; ಮೇಲೆತ್ತಿ ಕಟ್ಟಿದ ಧೋತ್ರ; ಮೊಣಕಾಲ ಮೇಲೇರಿಸಿ ಕಟ್ಟಿದ ಪಂಚೆ; ದನದ ಮುಖ ಬಂಧನ; ಮೋರ್ಕಿ.

ಮಗಡಾ ಹಾಯ್ಕೊ (ಕ್ರಿ)= ಲಪಾಟಿ ಹೊಡೆ; ಧೋತ್ರವನ್ನು ಮೊಳಕಾಲ ಮೇಲೆತ್ತಿ ಕಟ್ಟು.

ಮಗರೂರಿ (ನಾ) ಉ.= ಉದ್ಧಟತನ; ಹುಂಬತನ; ಗರ್ವ.

ಮಗಾ (ಅ)= ಮಗೂ; ಮಗನೇ; ಮಗ.

ಮಗಿ (ನಾ)= ದಪ್ಪಗಿನ ಮಣ್ಣಿನ ಮಡಕೆ.

ಮಗಿಮಳಿ (ನಾ)= ಮಘಾ ನಕ್ಷತ್ರದ ಮಳೆ; ಮಗಿಯಿಂದ ನೀರು ಸುರಿದಂತೆ ಬೀಳುವ ಮಳೆ.

ಮಗುಂ (ನಾ)= ಖಚಿತತೆ ಇಲ್ಲದ್ದು; ಲೆಕ್ಕ ಬರೆಯಲಾರದ್ದು; ತೋರಲಾಗದ್ದು.

ಮಗುಚು (ಕ್ರಿ)= ಘಾಡುಸು; ಕುದಿಸಿದ ಬೇಳೆಯನ್ನು ಹುಟ್ಟಿನಿಂದ ಗುದ್ದಿ ಸಣ್ಣಗೆ ಮಾಡು; ರಗಡಾಸು; ರಗಡಿಸು; ಗುದ್ದು; ಘೊಟಾಸು; ಘೋಟ್ನಿಯಿಂದ ನುರಿಗೊಳಿಸು.

ಮಗುಳು (ನಾ)= ಮಗಳು; ಪುತ್ರಿ; ತನುಜೆ.

ಮಗ್ಗಾ (ನಾ)= ಮಗ್ಗ; ಬಟ್ಟೆಯನ್ನು ನೇಯುವ ಸಾಧನ; ನೆಯ್ಗೆಯಂತ್ರ; ಸಟೇಲು.

ಮಗ್ಗಾ ನಡ್ಸು (ಕ್ರಿ)= ಮಗ್ಗಕ್ಕೆ ಚಾಲನೆಕೊಡು; ಬಟ್ಟೆನೆಯ್ಯು.

ಮಗ್ಗಿ (ನಾ)= ಮೊಗ್ಗು; ಅರಳಲಾರದ್ದು; ಅಂಕಿಗಳ ಪಟ್ಟಿ.

ಮಗ್ಗು (ನಾ)= ಹಿಡಿಕೆಯುಳ್ಳ ದೊಡ್ಡ ಬಟ್ಟಲು.

ಮಗ್ಗುಲು (ನಾ)= ಮಗ್ಗಲು; ಪಕ್ಕ; ಬದಿ; ಪಾರ್ಶ್ವ; ಹತ್ತಿರ; ಸಮೀಪ.

ಮಗ್ಗುಲು ಮುರಿ (ಕ್ರಿ)= ಪಕ್ಕೆಲುಬು ಮುರಿಯುವಂತೆ ಥಳಿಸು; ಹೊಡೆ; ಏಟ ಹಾಕು.

ಮಗ್ಗುಲು ಹಚ್ಚು (ಕ್ರಿ)= ಮಲಗು; ವಿಶ್ರಾಂತಿ ಮಾಡು.

ಮಗ್ಚು (ಕ್ರಿ)= ಮಗುಚು (ನೋಡಿರಿ).

ಮಗ್ದಾಳ (ನಾ)= ಬೀದರ ಜಿಲ್ಲೆಯ ಮೊಗದಾಳ ಎಂಬ ಊರು ಈಗ ಮೊಗದಲ್ ಎಂಬ ವಿಕಾರ ರೂಪವನ್ನು ತಾಳಿದೆ.

ಮಚುರು (ನಾ)= ಮೊಸರು (ಬಾಲಭಾಷೆ).

ಮಚ್ಚಿ; ಮಾಚ್ಚಿ (ನಾ)= ಮಚ್ಚೆ; ಪಾಪಾಸು; ಬೂಟು; ಜನ್ಮ ದಿಂದಲೇ ಚರ್ಮದ ಮೇಲೆ ಉಂಟಾದ ಕಪ್ಪು ಚುಕ್ಕೆ ಅಥವಾ ಕಪ್ಪು ಬಣ್ಣ.

ಮಚ್ಚಿ ಆಡ್ಸು (ಕ್ರಿ)= ಮಚ್ಚೆ, ಬೂಟು ಅಥವಾ ಪಾಪಸಿನಿಂದ ಏಟ ಹಾಕು; ಹೊಡೆ; ಬಾರಿಸು; ಥಳಿಸು.

ಮಚ್ಚಿ ತೋರ್ಸು (ಕ್ರಿ)= ಬೂಟು ತೋರಿಸಿ ಅದರಿಂದಲೇ ಹೊಡೆವೆನೆಂದು ಸೂಚಿಸು.

ಮಚ್ಚಿಪೂಜಿ (ನಾ)= ಬೂಟಿನಿಂದ ಹೊಡೆಯುವಿಕೆ.

ಮಚ್ಚಿ ಪೆಟ್ಟು (ನಾ)= ಬೂಟಿನ ಏಟ; ಪಾದರಕ್ಷೆ ಪ್ರಹಾರ

ಮಚ್ಚೇಂದ್ರ ಅಣಕಲ್ (ನಾ)= ಮುಡಬಿ ಗ್ರಾಮದ ಸಮೀಪದ ಶರಣನಗರದ ಕ್ರಾಂತಿಕಾರಿ ಯುವ ಬರಹಗಾರ, ಸಣ್ಣ ಕತೆಗಾರ.

ಮಚ್ಛರ್ದಾನ (ನಾ) ಉ.= ಸೊಳ್ಳೆ ಪರದೆ.

ಮಜಬೂತು (ವಿ)= ಹಿಂ. ಗಟ್ಟಿ; ಬಲಿಷ್ಠ; ಧಡೂತಿ; ಬಲವಾದ.

ಮಜಬೂರಿ (ನಾ) ಹಿಂ.= ಅಸಹಾಯಕತೆ.

ಮಜಮಜಾ (ದ್ವಿ)= ರುಚಿರುಚಿ.

ಮಜಲು (ನಾ)= ಗುರಿ; ಅಂತರ; ದೂರ; ಹಂತ; ಘಟ್ಟ.

ಮಜಾ (ನಾ) ಉ.= ಮೋಜು; ಗಮ್ಮತ್ತು; ತಮಾಷೆ; ವಿನೋದ.

ಮಜಾನೋಡು (ಕ್ರಿ)= ರುಚಿ ಪರೀಕ್ಷಿಸು; ಸ್ವಾದ ತಿಳಿಸು.

ಮಜೂರಿ (ನಾ) ಉ.= ಕೂಲಿ; ದಿನಗೂಲಿ; ಸಂಬಳ.

ಮಜ್ಗಿ (ನಾ)= ಮಜ್ಜಿಗೆ; ಮೊಸರನ್ನು ಕಡೆದು ತಯಾರಿಸಿದ ಪಾನೀಯ (ಗಾದೆ: ಮಜ್ಜಿಗಿ ಬಂದೋರ್ಕೈಲಿ ಮನಿ ಸಾರುಸ್ಕೊಂಡ್ರಂತ! ಮಜ್ಜಿಗಿಗಿ ಬಂದು ಮಗಿ ಮುಚ್ಗೊಂಡು ಕುಂತಿದ್ದುರಂತ!).

ಮಜ್ಯಾಂಬ್ರ (ನಾ)= ಮಜ್ಜಿಗೆಯಿಂದ ತಯ್ಯಾರಿಸಿದ ಅಂಬ್ರ.

ಮಜ್ಜಿಗಿ (ನಾ)= ಮಜ್ಜಿಗೆ; ಮೊಸರನ್ನು ಕಡೆದು ಬೆಣ್ಣೆ ತೆಗೆದ ಮೇಲೆ ಉಳಿದ ದ್ರವ.

ಮಜ್ನೂ (ನಾ)= ಲೈಲಾ ಎಂಬವಳ ಪ್ರಿಯಕರ.

ಮಜ್ನೂ ಕುಣ್ತಿ (ನಾ)= ಅಲಾವಿ ಕುಣಿತ; ಮೊಹರಂ ಕುಣಿತ.

ಮಜ್ಬೂತ (ನಾ)ಉ.= ಗಟ್ಟಿ ಮುಟ್ಟಿ.

ಮಟಕಾ (ನಾ)= ಅಂಕಿಗೆ ಪಣ ಒಡ್ಡಿ ಆಡುವ ಜೂಜಾಟ.

ಮಟಮಟ ಮಧ್ಯಾನ (ನಾ)= ನಡುಮಧ್ಯಾನ; ಬಿರುಬಿಸಿಲಿನ ಮಧ್ಯಾನ.

ಮಟಾ (ನಾ)= ಮಠ; ಶಾಲೆ; ಸನ್ಯಾಸಿಗಳವಾಸಸ್ಥಾನ; ಹೊಟ್ಟೆ; ಉದರ; ಯೋನಿ; ಸ್ತ್ರೀಯ ಗುಪ್ತಾಂಗ.

ಮಟಾಥುಂಬು (ಕ್ರಿ)= ಹೊಟ್ಟೆ ಭರ್ತಿಯಾಗು; ಹಸಿವೆ ದೂರಾಗು; ಕಾಮ ಶಮನಗೊಳ್ಳು.

ಮಟಾನೊಯ್ಯು (ಕ್ರಿ)= ಹೊಟ್ಟೆ ಬೇನೆ ಉಂಟಾಗು; ತೀಟೆಯುಂಟಾಗು; ಕಾಮಾತುರಗೊಳ್ಳು (ಬೈಗುಳ).

ಮಟಾಮಸ್ದಿ (ಅ)= ಮಠವೂ ಮಸೀದಿಯೂ.

ಮಟಾ ಸೇರು= ಸಂಸಾರ ತೊರೆದು ಸನ್ಯಾಸಿಯಾಗು.

ಮಟ್ಟಮಾಯ (ನಾ)= ಸಂಪೂರ್ಣ ಮಾಯ.

ಮಟ್ಟ ಮಾಯಾಗು (ಕ್ರಿ)= ಪೂರ್ಣಕಾಣದಂತಾಗು; ಇಲ್ಲದಂತಾಗು; ಏಕಾಏಕಿ ಕಾಣದಂತಾಗು.

ಮಟ್ಟಿ, ಮಾಟ್ಟಿ (ನಾ)= ಎತ್ತುಗಳಿಂದ ನೀರೆತ್ತಿ ಹೊಲಕ್ಕೆ ನೀರೂಡುವ ಸಾಧನ.

ಮಟ್ಟಿಹೊಡಿ (ಕ್ರಿ)= ಎತ್ತುಗಳಿಂದ ಏತ ನೀರಾವರಿಯನ್ನು ನಡೆಸು. (ಗಾದೆ : ಅಟ್ಬುಂಬವ್ನ ಮಡ್ಡಿ ಆಗ್ಬಾರ್ದು; ಮಟ್ಟಿ ಹೊಡ್ಯಾವ್ನ ಆಳಾಗ್ಬಾರ್ದು).

ಮಠ; ಮಠಾ (ನಾ)= ಸನ್ಯಾಸಿಗಳ ಮನೆ; ವಿರಕ್ತರ ಮನೆ; ಶಾಲೆ; ಮಟ; ಮಟಾ; ಹೊಟ್ಟೆ; ಯೋನಿ.

ಮಠದಾನ ಬೆಕ್ಕು (ನಾ)= ಸನ್ಯಾಸಿಗಳ ಮಠದಲ್ಲಿ ಸೇರಿದ ದುರ್ಗುಣಿ; ದುರಾಚಾರಿ; ಮಠದಲ್ಲಿ ವಾಸಿಸುವ ಬೆಕ್ಕು.

ಮಠಾ ಮಸ್ದಿ ಆಗ್ಲಿ (ನು)= ವಾಸಿಸುವ ಮನೆಯು ಮಠ-ಮಸೀದಿಯ ಪಾಲಾಗಲಿ; ಮನೆ ಹಾಳಾಗಲಿ; ನಿಸ್ಸಂತಾನವಾಗಲಿ; ದೀಪಕ್ಕೆ ದಿಕ್ಕಿಲ್ಲದಾಗಲಿ (ಬೈಗುಳ).

ಮಠ್ಠಾ (ನಾ) ಹಿಂ.= ಮಜ್ಜಿಗೆ.

ಮಡಕಿಲ (ನಾ)= ಮಡಿಕೆಗಳ ಕರ್ಬನ್ನು; ಒಂದರ ಮೇಲೆ ಒಂದು ಏರಿಸಿಟ್ಟ ಮಡಿಕೆ ಸಾಲು (ಹಾಡು: ಅದರ ಮ್ಯಾಲೊಂದಡಕಿಲ ಮಡಕಿಲ ಮಂಚಾ ಹಾಕಿದ!).

ಮಡದಿ (ನಾ)= ಹೆಂಡತಿ; ಪತ್ನಿ; ವಿಧಿ ವತ್ತಾಗಿ ಕೈ ಹಿಡಿದವಳು.

ಮಡಮಡಾ (ದ್ವಿ)= ಮೈಗಳ್ಳತನ.

ಮಡ ಮಡಾ ಅನು (ಕ್ರಿ)= ಮೈಗಳ್ಳತನ ಉಂಟಾಗು; ಆಲಸ್ಯ ತೋರು.

ಮಡಾ (ನಾ)= ಮಠ; ಮಠಾ; ಹೊಟ್ಟೆ; ಯೋನಿ.

ಮಡಾನೊಯ್ಯು (ಕ್ರಿ)= ಮಟಾನೊಯ್ಯು (ನೋಡಿರಿ)

ಮಡಿ (ಕ್ರಿ)= ಸಾಯು; ಸತ್ತು ಹೋಗು.

ಮಡಿ (ನಾ)= ಹೊಲಕ್ಕೆ ನೀರು ಕುಡಿಸಲು ತಯಾರಿಸಿದ ಮಣ್ಣಿನ ಕಟ್ಟೆ; ಶೀಲ ಆಚರಣೆ; ಶೀಲ ಮಡಿ.

ಮಡಿಪಂಜಿ (ನಾ)= ಒಗೆದು ಶುಚಿಗೊಳಿಸಿದ ಧೋತ್ರ; ಮೈಲಿಗೆಯಾಗದ ಧೋತ್ರ.

ಮಡಿಪಿತಾಂಬ್ರ (ನಾ)= ಮಡಿಕೆ ಮುರಿಯಲಾರದ ಜರದ ಸೀರೆ.

ಮಡಿಮಾಡು (ಕ್ರಿ)= ಶೀಲ ಪಾಲಿಸು; ಪೂಜೆಯ ಸಮಯದಲ್ಲಿ ಸ್ನಾನ ಮಾಡಿ ಶುಚಿರ್ಭೂತನಾಗಿರು; ಬಟ್ಟೆಯನ್ನು ಒಗೆದು ಇಸ್ತ್ರಿ ಮಾಡು, ಮಡಿಕೆ ಹಾಕು; ಬೆಳೆಯಸುತ್ತ ನೀರು ನಿಲ್ಲುವಂತೆ ಮಣ್ಣಿನ ಕಟ್ಟೆ ಕಟ್ಟು.

ಮಡಿಯಾಗು (ಕ್ರಿ)= ಸ್ನಾನಮಾಡಿ ಶುಚಿರ್ಭೂತನಾಗು; ಮಡಿ ಬಟ್ಟೆಯನ್ನು ಧರಿಸು.

ಮಡಿವಂತ (ನಾ)= ಶೀಲವಂತ; ಶೀಲ ಮಡಿ ಪಾಲಿಸುವವನು; ಆಚಾರವಂತ; ಸಂಪ್ರದಾಯವನ್ನು ಪಾಲಿಸುವವನು.

ಮಡಿವಳ (ನಾ)= ಮಡಿ ಕಾಯಕದವನು; ಮಡಿವಾಳ; ಅಗಸರವನು.

ಮಡಿವಾಳ ಮಾಚಿದೇವ (ನಾ)= ಹನ್ನೆರಡನೇ ಶತಮಾನದ ಬಸವಯುಗದ ಮಡಿಕಾಯಕದ ಗಣಾಚಾರಿ ಶರಣ, ಕಲ್ಯಾಣ ಕ್ರಾಂತಿಯ ಮುಂದಾಳು ಶರಣ.

ಮಡಿವಾಳಪ್ಪ (ನಾ)= ಚಿಟಗುಪ್ಪ ಮತ್ತು ಹುಡಗಿ ಗ್ರಾಮಗಳಲ್ಲಿ ವಾಸವಾಗಿದ್ದ ದಿಗಂಬರ ಕರಿಬಸವೇಶ್ವರರ ಅನುಯಾಯಿ- ಯಾದ ಖಡ್ಗ ಚಿಂಚೋಳಿಯ ಕಡಗಂಚಿ ಮಡಿವಾಳಪ್ಪ.

ಮಡಿವಾಳ ಶೆಟ್ಟಿ ಕೆಂಚಾ (ನಾ)= ಮದನೂರಿನ ಸಿದ್ಧಲಿಂಗೇಶ್ವರರ ಶಿಷ್ಯ ಹಾಗೂ ತನ್ನ ಗುರುವಿನ ಭಜನೆ ರಚಿಸಿದ, ಚಿಕ್ಕಾಲೂರಿನ ಒಬ್ಬ ಶರಣನು.

ಮಡಿಸೀರಿ (ನಾ)= ಗಳಿಗೆ ಮುರಿಯದ, ಮೈಲಿಗೆಯಾಗದ ಸೀರೆ.

ಮಡು (ನಾ)= ಆಳವಾದ ನೀರಿನ ಡಬರಿ; ನದಿಯಲ್ಲಿ ಆಳವಾಗಿ ನಿಂತಿರುವ ನೀರು (ಸೀಗಿಹಾಡು: ಹರಿಯ ಹಾಯಲೆ ದೊಡ್ಡ ಮಡುವ ಡುಮುಕಲೆ).

ಮಡುಗಟ್ಟು (ಕ್ರಿ)= ತಗ್ಗಿನಲ್ಲಿ ನೀರು ಸಂಗ್ರಹವಾಗು; ಯುದ್ಧದಲ್ಲಿ ಸತ್ತವರ ರಕ್ತ ಒಂದೆಡೆ ಸಂಗ್ರಹವಾಗು (ಉದಾ: ಗೋರ್ಟಾಗ್ರಾಮದಲ್ಲಿ ರಜಾಕಾರರು ಹಿಂದೂಗಳ ಸಾಮೂಹಿಕ ಹತ್ಯಾಕಾಂಡ ನಡೆಸಿದಾಗ ರಕ್ತವು ಓಣಿ ಓಣಿಯೆಲ್ಲಾ ಹರಿದು ಮಡುಗಟ್ಟಿತು).

ಮಡುದು ಹೋಗ್ಲಿ (ಕ್ರಿ)= ಸತ್ತು ಹೋಗಲಿ; ಮಡಿದು ಹೋಗಲಿ (ಬೈಗುಳ).

ಮಡುವು (ನಾ)= ಮಡು (ನೋಡಿರಿ).

ಮಡುಸು (ಕ್ರಿ)= ಮಡಿಯುವಂತೆ ಮಾಡು; ಸಾಯಿಸು; ಕೊಲ್ಲು; ಜೀವತೆಗೆ (ಬೈಗುಳ).

ಮಡುಸ್ಲಿ (ಕ್ರಿ)= ಮಡಿಯುವಂತೆ ಮಾಡಲಿ; ಸಾಯಿಸಲಿ; ಕೊಲ್ಲಿಸಲಿ; ಜೀವ ತೆಗೆಯಿಸಲಿ (ಬೈಗುಳ).

ಮಡ್ಕಿ (ನಾ)= ಮಡಿಕೆ; ಪದರು; ಗಡಿಗೆ.

ಮಡ್ಕಿ ಹಾಕು (ಕ್ರಿ)= ಮಡಿಕೆ ಉಂಟು ಮಾಡು; ಮಡಿಚು.

ಮಡ್ಚು (ಕ್ರಿ)= ಮಡಿಚು; ಮಡಿಕೆ ಬೀಳುವಂತೆ ಮಾಡು; ನಿರಿಗೆ ಹಾಕು.

ಮಡ್ಡಾ (ನಾ) ತೆ.= ಶಿಶ್ನ; ಪುರುಷನ ಜನನೇಂದ್ರಿಯ.

ಮಡ್ಡಿ, ಮಾಡ್ಡಿ (ನಾ)= ದಿಣ್ಣೆ; ಗುಡ್ಡ; ಕಠಿಣ ಭೂಮಿ; ದ್ರವ ಪದಾರ್ಥದ

ತಳದಲ್ಲುಂಟಾದ ರಬಡಿ, ಗಸಿ ಇತ್ಯಾದಿ; ಗಾಢವಾದ ಸೇಂಧಿ; ಎಣ್ಣೆಯ ಗಸಿ; ನೀರಿನ ರಬಡಿ.

ಮಣ್ **(ನಾ)=** ಮಣ್ಣು; ಮುಣ್ಣು; ಮೃತ್ತಿಕೆ; ಮಿಟ್ಟೆ.

ಮಣ **(ನಾ)=** ಹತ್ತು ಕಿಲೋ ಗ್ರಾಮ ತೂಕ.

ಮಣಕಾ **(ನಾ)=** ಮಣಕ; ಪ್ರಾಯಕ್ಕೆ ಬರುತ್ತಿರುವ ಎಮ್ಮೆ ಅಥವಾ ಆಕಳು; ಮಣ್ಕಾ.

ಮಣಕಾಲು **(ನಾ)=** ಮೊಳಕಾಲು (ಹಂತಿ ಹಾಡು: ಯಾಕೋ ಬಸವಾ ಮೆಲ್ಲಾಗ ನಡದೋ। ತೆಳಕಾಲಿನ ಮದನಾ ಮಣಕಾಲಿಗಿ ಬಂತೋ).

ಮಣಗಟ್ಲೆ **(ಅ)=** ಮಣಭಾರದಷ್ಟು; ಮಣತೂಕದಷ್ಟು.

ಮಣಿ **(ಕ್ರಿ)=** ಬಾಗು; ಬಗ್ಗು; ದುಡಿ; ಸೋತು ಹೋಗು; ಸೊಕ್ಕು ಅಡಗು; ಒಪ್ಪು; ಸಮ್ಮತಿಸು (ನಾ) ಕರ್ಮಣೆ; ಮುತ್ತು; ಹವಳ; ಮಣೆ; ಚೌಕಿ; ಪೀಠ; ಆಸನ (ಹಾಡು: ಕುಂಡ್ರಲು ಹಾಕ್ಯಾರೆ ಮಣಿ ಚೌಕಿ ಕೋಲೆ।).

ಮಣ್ಕಾಲ್ಮಂಡಿ **(ನಾ)=** ಮೊಳಕಾಲಿನಲ್ಲಿ ಉಂಟಾಗುವ ಕೀಲು ನೋವು, ಬಾಧೆ.

ಮಣಿ ಹಾಕು **(ಕ್ರಿ)=** ಕುಳಿತುಕೊಳ್ಳಲು ಆಸನ ಹಾಕು.

ಮಣ್ಕಾ **(ನಾ)=** ಮಣಕಾ (ನೋಡಿರಿ).

ಮಣ್ಗಾರ **(ನಾ)=** ಮಣಿಗಾರ; ಮಣಿಗಳನ್ನು ಮಾರುವವನು.

ಮಣ್ಣಾಗಿಡು **(ಕ್ರಿ)=** ಹೆಣವನ್ನು ಕುಣಿಯಲ್ಲಿಟ್ಟು ಮಣ್ಣು ಮುಚ್ಚು; ಹೂಳು; ಸಮಾಧಿ ಮಾಡು (ಬೈಗುಳ).

ಮಣ್ಣು **(ನಾ)=** ಮುಣ್ಣು; ಮೃಣ್; ಮೃತಿಕೆ; ಮಿಟ್ಟೆ.

ಮಣ್ಣುಕುಡು **(ಕ್ರಿ)=** ಹೆಣವನ್ನು ಮಣ್ಣಲ್ಲಿ ಮುಚ್ಚು, ಮಣ್ಣು ಮುಚ್ಚು; ಹೂಳು; ಸಮಾಧಿ ಮಾಡು.

ಮಣ್ಣು ಬುಕ್ಕಾ ಹಾಂವು **(ನಾ)=** ಮಣ್ಣುತಿಂದು ಬದುಕುವ ಹಾವು.

ಮಣ್ಣು ಬುಕ್ಕು **(ಕ್ರಿ)=** ಮಣ್ಣನ್ನು ಆಹಾರದಂತೆ ತಿನ್ನು (ಬೈಗುಳ).

ಮಣ್ಣು ಮಾಡು **(ಕ್ರಿ)=** ಶವವನ್ನು ಕುಣಿಯಲ್ಲಿಟ್ಟು ಮಣ್ಣು ಮುಚ್ಚು; ಹೂಳು; ಸಮಾಧಿ ಮಾಡು.

ಮಣ್ಣೆತ್ತಿನ ಮಾಸಿ **(ನಾ)=** ಮಣ್ಣಿನ ಎತ್ತು ತಯಾರಿಸಿ ಪೂಜಿಸುವ ರೈತರ ಅಮಾವಾಸ್ಯ; ಜ್ಯೇಷ್ಠ ಮಾಸದ ಅಮಾವಾಸ್ಯ.

ಮಣ್ದಾಣಿ **(ನಾ)=** ಮಣ್ಣು ಬೆರೆತ ಧಾನ್ಯ; ರಾಶಿ ಮಾಡಿ ಸಾಗಿಸಿದ ಮೇಲೆ ಉಳಿದ ಕಣಗುಡಿಸಿದ, ಮಣ್ಣು ಸೇರಿದ ಧಾನ್ಯ; ಮಳ್ಳಂತಿಯ ಧಾನ್ಯ (ಗಾದೆ: ಮಾಸುಲ್ದಾರನ್ಕಣ್ಣು ಮಣ್ದಾಣಿ ಮ್ಯಾಲ).

ಮಣ್ಮಾಡು **(ಕ್ರಿ)=** ಮಣ್ಣು ಮಾಡು (ನೋಡಿರಿ).

ಮಣ್ಸು **(ಕ್ರಿ)=** ಮಣಿಸು; ಬಗ್ಗಿಸು; ಬಾಗಿಸು; ಮಣಿವಂತೆ ಮಾಡು; ಕಣದಲ್ಲಿಯ ರಾಶಿಯನ್ನು ಹಿಂದಕ್ಕೆ ಸರಿಸು.

ಮತಲಬಿ **(ನಾ)** ಉ.= ಗುಟ್ಟು ಬಿಡಲಾರದ ವ್ಯಕ್ತಿ; ಸ್ವಾರ್ಥಿ; ಖುದ್ಗರ್ಜಿ ವ್ಯಕ್ತಿ.

ಮತಲಬು (ನಾ) ಉ.= ಅರ್ಥ; ಅಭಿಮತ; ಅಭಿಪ್ರಾಯ.

ಮತಾಟಿ (ನಾ)= ಎತ್ತು; ಆಕಳು, ಎಮ್ಮೆ, ಹೋರಿ, ಕೋಣ ಇತ್ಯಾದಿ ಪ್ರಾಣಿಗಳ ಹಣೆಗಳಿಗೆ ಕಾರುಣ್ಣಿವೆ ಮತ್ತು ಹ್ವಾಳಾ (ಹೋಳಾ–ಪೋಳಾ) ಹಬ್ಬದಂದು ಕಟ್ಟುವ ಬಾಸಿಂಗ.

ಮತಾಟಿಹೆಣಿ (ಕ್ರಿ)= ದನಕರುಗಳ ಹಣೆಯ ಒಡವೆಯನ್ನು ಸಿದ್ಧಗೊಳಿಸು.

ಮತಿ (ನಾ)= ಬುದ್ಧಿ; ತಿಳುವಳಿಕೆ.

ಮತಿಗೇಡಿ (ನಾ)= ಅರಿವುಗೇಡಿ; ದಡ್ಡ.

ಮತ್ತಿ (ನಾ)= ಒಂದು ಬಗೆಯ ಕಾಡುಮರ.

ಮತ್ಲಬಿ (ನಾ) ಉ.= ಮತಲಬಿ (ನೋಡಿರಿ).

ಮತ್ಲಬು (ನಾ)= ಮತಲಬು (ನೋಡಿರಿ).

ಮದ (ನಾ)= ಸೊಕ್ಕು; ಅಹಂಕಾರ; ಗರ್ವ.

ಮದಡ (ನಾ)= ದಡ್ಡ; ಬುದ್ಧಿ ಹೀನ; ಮಂದಮತಿ.

ಮದನಾ (ನಾ)= ಅಂಬಾಬಾಯಿಯ ಘಟಸ್ಥಾಪನೆಗಾಗಿ ಬಳಸುವ ಮಣ್ಣು ಮತ್ತು ಐದು ಪ್ರಕಾರದ ಧಾನ್ಯ. ಹಂತಿ ತುಳಿಸಿದ ಕಣದಲ್ಲಿಯ ರಾಶಿ; ಕೃಷಿಗಾಗಿ, ರಬ್ಬಿ ಬೆಳೆಗಾಗಿ ಕಾಯ್ದಿಟ್ಟ ಬಿತ್ತಲಾರದ ಜಮೀನಿನ ಮಣ್ಣು(ಹಂತಿ ಹಾಡು: ಯಾಕೋ ಬಸವಾ ಮೆಲ್ಲಾಗ ನಡದ್ಯೋ। ತೆಳಕಾಲಿನ ಮದನಾ ಮಣಕಾಲಿಗಿ ಬಂತೋ।).

ಮದನೂರು (ನಾ)= ಸಿದ್ಧಲಿಂಗೇಶ್ವರ ಶರಣರ ಕಾಯಕ ಕ್ಷೇತ್ರವಾದ ಊರು.

ಮದರಗ್ಯೆ, ಮದರಗಾಂವ (ನಾ)= ಐತಿಹಾಸಿಕ ಮಲ್ಲಿಕಾರ್ಜುನ ದೇವಸ್ಥಾನವಿರುವ ತೀರ್ಥಕ್ಷೇತ್ರ; ಈ ಭಾಗದವರು ಶ್ರೀ ಶೈಲ ಮಲ್ಲಿಕಾರ್ಜುನ ಯಾತ್ರೆ ಮುಗಿಸಿಕೊಂಡು ಬರುವಾಗ, ಮದರಗ್ಯೆ ಮಲ್ಲಿಕಾರ್ಜುನ ದರ್ಶನ ತಪ್ಪದೇ ಮಾಡುವ ರೂಢಿ ಇದೆ.

ಮದರಸಾ (ನಾ)= ಉರ್ದೂಪಾಠ ಶಾಲೆ; ಬೀದರ ನಗರದಲ್ಲಿ, ಬಹಮನಿ ಆಡಳಿತ ಕಾಲದಲ್ಲಿ, ಖಾಜಾ ಮಹಮೂದಗವಾನನು ಕಟ್ಟಿಸಿದ ವಿಶ್ವ ವಿದ್ಯಾಲಯ.

ಮದಾ (ನಾ)= ಮದ (ನೋಡಿರಿ).

ಮದಾರಿ (ನಾ) ಉ.= ಒಂಟೆಯ ಬೆನ್ನಮೇಲಿನ ಉಬ್ಬಿದ ಭಾಗ; ಒಂಟೆಯ ಡುಬ್ಬ; ಡುಬರಿ.

ಮದಿ (ನಾ)= ಮದುವೆ; ಲಗ್ನ; ಶುಭ ವಿವಾಹ; ಒಂದು ಪ್ರಕಾರದ ಹುಲ್ಲು.

ಮದಿಮಂಟಾಪ (ನಾ)= ಮದುವೆ ಹಂದರ, ಕಲ್ಯಾಣ ಮಂಟಪ.

ಮದಿಮನಿ (ನಾ)= ವಿವಾಹ ಕಾರ್ಯಕ್ರಮ ಜರುಗುವ ಮನೆ.

ಮದಿಮಾಡು (ಕ್ರಿ)= ಮದುವೆ ಕಾರ್ಯಕ್ರಮ ಏರ್ಪಡಿಸು; (ನು) ಥಳಿಸು; ಹೊಡೆದು ಮೈ ಮೆತ್ತಗೆ ಮಾಡು; ಭಾರಿಗೆಯ ಹಿಂಬದಿಯ ತುಂಬನ್ನು ಸುಡುವ ಶಾಸ್ತ್ರ ಮಾಡು.

ಮದಿಹಂದ್ರ (ನಾ)= ಮದುವೆಯ ಹಂದರ; ಲಗ್ನ ಮಂಟಪ.

ಮದಿಹುಲ್ಲು (ನಾ)= ಕಸಬರಿಗೆಗಾಗಿ ಬಳಕೆಯಾಗುವ ಹುಲ್ಲು.

ಮದುಮಗ (ನಾ)= ಮದುವಣಿಗ; ವರ.

ಮದುಮಗಳು (ನಾ)= ಮದುವಣಗಿತ್ತಿ; ವಧು.

ಮದ್ಗುಣಿಕ್ಯಾ (ನಾ)= ಮದ್ಗುಣಿಕೆ; ಮರ್ದುಗುಣಿಕೆ; ಒಂದು ಪ್ರಕಾರದ ಔಷಧಿ ಸಸ್ಯ.

ಮದ್ದು (ನಾ)= ಔಷಧ; ವಿಷ; ಬಾರೂದು; ಸಿಡಿಮದ್ದು.

ಮದ್ಯಾಣ (ನಾ)= ಮಧ್ಯಾನ; ನಡುಹಗಲು (ಗಾದೆ: ಪರ ಸೊದ್ಯಾಣ, ಊಟಕ್ಮದ್ಯಾಣ).

ಮದ್ಳಿ (ನಾ)= ಮದ್ದಳೆ; ಮದ್ದಲೆ; ಒಂದು ಬಗೆಯ ಚರ್ಮವಾದ್ಯ (ಕ್ರಿ) ಮದ್ಳಿಭಾರ್ಸು= ಮದ್ದಳೆ ನುಡಿಸು.

ಮನ (ನಾ)= ಮನಸ್ಸು (ರಂಗಗೀತೆ: ಸಾಬಾಶಾಮಾ ಇಬ್ಬರು ಕೂಡಿ ಇಟ್ವಾರವ್ವಾಮನ। ಗರತಿ ಎಂಬುವುದು ನಾನು ತೋರುವೆ ಮುಂದವರಿಗೆ ಒಂದಿನ).

ಮನಕೊ (ಕ್ರಿ)= ಮಲಗು.

ಮನಗು (ಕ್ರಿ)= ಮಲಗು; ನಿದ್ದೆ ಮಾಡು; ನಿದ್ದೆ ಹೋಗು.

ಮನಸಿಗಿ ತೂಕ ಹಾಕು (ನು)= ವಿಚಾರ ಮಾಡು; ವಿಚಾರ ಮಾಡಿ ನೋಡು; (ತತ್ವಪದ: ವ್ಯಾಳ್ಯಾ ಬಂದಗ್ಯಾರ್ದ್ಹಾರಾ । ಮನಸಿಗಿ ತೂಕ ಹಾಕೊ ಜರಾ। ಗುರುವಿನ ಮುಂದ ಪಿಡಿ ಪದರಾ। ಮುಕ್ತಿ ದೊರೆಯುತದೊ ಪೂರಾ॥).

ಮನಸಿನಾಗ ಕತ್ರಿ (ನು)= ಕಪಟವುಳ್ಳ ಮನಸ್ಸು.

ಮನಾ ಮಾಡು (ಕ್ರಿ)ಉ.= ಒಪ್ಪದಿರು; ವಿರೋಧಿಸು.

ಮನಾರ (ನಾ)= ಮನವಾರೆ; ಬೇಕಾದಷ್ಟು; ಬಹಳ; ಸಾಕಷ್ಟು.

ಮನಾಸು (ಕ್ರಿ)= ಆಚರಿಸು.

ಮನಿ (ನಾ)= ಮನೆ; ವಸತಿಯ ಜಾಗ.

ಮನಿ ಅಳ್ಯಾ (ನಾ)= ಮನೆಯಳಿಯ; ಅತ್ತೆ ಮಾವಂದಿರ ಮನೆಯಲ್ಲಿ ನೆಲೆಸಿದ ಅಳಿಯ.

ಮನಿಗುರು (ನಾ)= ಮನೆತನದ ಪರಂಪರಾಗತ ಗುರು.

ಮನಿತಾನ (ನಾ)= ಮನೆತನ; ಖಾಂದಾನು.

ಮನಿತಾನ್ಕಿ (ನಾ)= ಮನೆಯ ಪರಂಪರಾಗತ ಪದ್ಧತಿ.

ಮನಿದೇವರು (ನಾ)= ಮನೆ ದೇವರು; ವಂಶ ಪರಂಪರೆಯಿಂದ ಪೂಜಿಸುತ್ತ ಬಂದ ದೇವರು.

ಮನಿ ಮಸ್ಜಿ ಆಗಲಿ (ನು)= ಮನೆಯು ಮಸೀದಿಯಾಗಿ ಹೋಗಲಿ; ಮನೆಯು ಹಾಳಾಗಲಿ; ನಿಸ್ಸಂತಾನವಾಗಲಿ; (ಬೈಗುಳ).

ಮನಿ ಮಾಡು (ಕ್ರಿ)= ಮನೆಕಟ್ಟು; ನೆಲೆನಿಲ್ಲು.

ಮನಿ ಮಾತು (ನಾ)= ಮನೆಮಾತು; ಮನೆತನಕ್ಕೆ ಸಂಬಂಧಿಸಿದ ಮಾತು.

ಮನಿಮುರಿ (ಕ್ರಿ)= ಮನೆತನವನ್ನು ಹಾಳು ಮಾಡು; ನಾಶಮಾಡು.

ಮನಿಮುರ್ಕ (ನಾ)= ಮನೆಮುರುಕ; ಮನೆಹಾಳು ಮಾಡುವವನು.

ಮನಿಶಾಂತಿ (ನಾ)= ಮನೆಹಬ್ಬ; ಗೃಹ ಪ್ರವೇಶದ ಹಬ್ಬ.

ಮನಿಸಾರ್ಸು (ಕ್ರಿ)= ಸಗಣಿಯನ್ನು ನೀರೊಡನೆ ಬೆರೆಸಿ ಮನೆಯ ನೆಲದ ಮೇಲೆ ಸವರಿ ನುಣ್ಣಗಾಗಿಸು.

ಮನಿಹಬ್ಬ (ನಾ)= ಗೃಹ ಪ್ರವೇಶದ ಹಬ್ಬ; ಮನೆ ಶಾಂತಿ.

ಮನ್ನ, ಮೊನ್ನ (ನಾ)= ನಿನ್ನೆಯ ಹಿಂದಿನ ದಿನ; ಮೊನ್ನೆ.

ಮನ್ಮನ್ನ (ದ್ವಿ)= ಮೊನ್ನೆ ಮೊನ್ನೆ.

ಮನ್ನಾ (ನಾ) ಉ.= ಮಾಫಿ; ವಿನಾಯ್ತಿ; ರದ್ದು.

ಮನ್ನಾ ಮಾಡು (ಕ್ರಿ)= ಮಾಫಿ ಮಾಡು; ವಿನಾಯ್ತಿ ನೀಡು; ರದ್ದುಗೊಳಿಸು.

ಮನ್ಮಾನೆ (ಬಿ.) ಉ.= ಅತಿಯಾಗಿ; ಹೆಚ್ಚಾಗಿ; ಮನಸ್ಸಿಗೆ ಬಂದಷ್ಟು.

ಮನ್ಮಾನೆ ಮಾಡು (ಕ್ರಿ)= ಅತಿಯಾಗಿಸು; ಹೆಚ್ಚಳಗೊಳಿಸು; ಮನ ಬಂದಂತೆ ವರ್ತಿಸು.

ಮನ್ಯಾ (ನಾ)= ಮನುಷ್ಯ.

ಮನ್ಶಾ (ನಾ)= ಉ.= ಉದ್ದೇಶ; ವಿಚಾರ.

ಮನ್ಶಾ ಆಗು (ನು)= ಒಳ್ಳೆಯವನಾಗು; ಶ್ರೀಮಂತನಾಗು; ದೊಡ್ಡವನಾಗು.

ಮನ್ನಿವಾಯ (ಅ)= ಮನಸ್ಸು ಬಯಸಿದಷ್ಟು ಬೇಕಾದಷ್ಟು; ಸಾಕಷ್ಟು.

ಮನ್ಸು (ನಾ)= ಮನಸ್ಸು.

ಮನ್ಸು ಮಾಡು (ಕ್ರಿ)= ಇಷ್ಟ ಪಡು; ಬಯಸು.

ಮನ್ಸೂಬ (ನಾ) ಉ.= ಗುಪ್ತಯೋಜನೆ; ಗುಟ್ಟಾದ ಸಿದ್ಧತೆ.

ಮನ್ಸೇರ್ದಾಗಿಲ್ದಾಂವ (ನಾ)= ಷಂಡ; ನಪುಂಸಕ; ಹುಚ್ಚ.

ಮಪ್ಪಾ (ನಾ)= ಅಪ್ಪ (ಬಾಲಭಾಷೆ).

ಮಬ್ಬು (ನಾ)= ನಸುಗತ್ತಲೆ; ಮಸುಕು; ಸ್ವಚ್ಛವಲ್ಲದ.

ಮಮ್ಮ, ಮೊಮ್ಮ (ನಾ)= ತಾಯಿಯ ಅಣ್ಣ ಅಥವಾ ತಮ್ಮ; ಸೋದರ ಮಾಂವ; ಮಾಂವ.

ಮಮ್ಮಗ (ನಾ)= ಮೊಮ್ಮಗ; ಮಗನ ಅಥವಾ ಮಗಳ ಮಗ.

ಮಮ್ಮಗಳು (ನಾ)= ಮಗನ ಮಗಳು ಇಲ್ಲವೆ ಮಗಳ ಮಗಳು.

ಮಮ್ಮಾ (ಅ)= ಅಮ್ಮಾ; ನನ್ನಮ್ಮಾ; ಮೊಮ್ಮಾ; ಮಾಮಾ.

ಮಮ್ಮಿ (ನಾ)= ತಾಯಿ; ಅಮ್ಮ; ಅವ್ವ (ಶಿಶು ಪ್ರಾಸ: ಮಮ್ಮೀ ಮಮ್ಮೀ । ಏನ್ಮಗಳೇ। ಪಪ್ಪಾ ಹೊಡ್ದೂರು ಹ್ಯಾಂಗ ಹೊಡ್ದೂರು। ಟ್ಯುಂಟುಂಟು। ಟ್ಯುಂಟುಂಟು).

ಮಯ್ದುನ (ನಾ)= ಗಂಡನ ಅಥವಾ ಹೆಂಡತಿಯ ತಮ್ಮ; ಮೈದುನ.

ಮರ (ನಾ)= ದೊಡ್ಡದಾದ ಗಿಡ; ವೃಕ್ಷ; ತರು; ಕಾಳು ಹಸನುಗೊಳಿಸುವ ಬೆತ್ತದ ಸಾಧನ; ಬೀಸುಕಲ್ಲಿನ ಹೊಟ್ಟೆಯಲ್ಲಿ ಹಾಸುವ ಚರ್ಮದ ಮೊರ (ಬೀಸುಕಲ್ಲಿನ ಹೊಟ್ಟೆಯಲ್ಲಿ ಚರ್ಮವನ್ನು ಹಾಸಿ ನವಣೆ, ಬರಗು, ಸಾವೆ, ಹಾರಕ್ಕ ಮೊದಲಾದುವುನ್ನು) ಅವುಗಳ ಮೇಲ್ಪದರು ಉಚ್ಚುವಂತೆ ಮಾಡಿ ಭರಡಿ ತಯಾರಿಸುತ್ತಾರೆ).

ಮರಕುಂದಿ (ನಾ)= ಶ್ರೀನಿವಾಸ ಸರಡಗಿಯ ಬಸವಣ್ಣಪ್ಪ ಕವಿ ವಾಸಿಸಿದ ಊರು. ಶಿವಕುಮಾರ ನಾಗವಾರ ಎಂಬ ಪ್ರಸಿದ್ಧ ಕತೆಗಾರರ ಊರು.

ಮರಕುಂದಿ ಬಸವಣ್ಣಪ್ಪ (ನಾ)= ಮೂಲ ಶ್ರೀನಿವಾಸ ಸರಡಗಿಯ ಬಸಣ್ಣಪ್ಪ ಕವಿ ನಂತರ ಮರಕುಂದಿ ಬಸವಣಪ್ಪ ಕವಿಯಾದರು.

ಮರಣಾ (ನಾ)= ಮರಣ; ಸಾವು; ಮೃತ್ಯು (ಹಾಡು: ಕರುಣಾ ಬಂದರೆ ಕಾಯೊ। ಮರಣಾ ಬಂದರೆ ಒಯ್ಯೊ॥).

ಮರಬು (ನಾ)= ಕಲ್ಲುಮಿಶ್ರಿತ ಮಣ್ಣು.

ಮರಮು (ನಾ)= ಮರಬು (ನೋಡಿರಿ).

ಮರವು (ನಾ)= ಮರೆವು; ಎಚ್ಚರಿಲ್ಲದ ಸ್ಥಿತಿ; ಜ್ಞಾಪಕ ವಿಲ್ಲದಿರುವಿಕೆ.

ಮರಾ (ನಾ)= ಮರ (ನೋಡಿರಿ).

ಮರಾಟಾ (ನಾ)= ಮರಾಠಾ; ಮರಾಠಿಗ; ಮಹಾರಾಷ್ಟ್ರದವನು.

ಮರಾಠಿ (ನಾ)= ಮಹಾರಾಷ್ಟ್ರದ ರಾಜಭಾಷೆ.

ಮರಾಷ್ಟಿ (ನಾ)= ಮರಾಠಿ ಭಾಷೆ; ಮರಾಠಿಗೆ ಸಂಬಂಧಿಸಿದ್ದು.

ಮರಿ (ನಾ)= ನಾಯಿ, ಬೆಕ್ಕು, ಕುರಿ, ಕೋಳಿ, ಹುಲಿ, ನರಿ ಮೊದಲಾದವುಗಳ ಕೂಸು; ಎಳಗೂಸು, ಕರು, ಕುನ್ನಿ ಇತ್ಯಾದಿ; ಮಠದ ಉತ್ತರಾಧಿಕಾರಿಯಾಗಲಿರುವ ಶಿಷ್ಯ; (ಕ್ರಿ)= ಮರೆ; ನೆನಪು ಹಾರು.

ಮರಿಮಾಡು (ಕ್ರಿ)= ಕಣ್ಣಿಗೆ ಕಾಣದಂತೆ ಮಾಡು.

ಮರಿಮೊಮ್ಮಗ (ನಾ)= ಮೊಮ್ಮಗನ ಇಲ್ಲವೆ ಮೊಮ್ಮಗಳ ಮಗ.

ಮರಿಮೊಮ್ಮಗಳು (ನಾ)= ಮೊಮ್ಮಗಳ ಇಲ್ಲವೆ ಮೊಮ್ಮಗನ ಮಗಳು.

ಮರಿಯಾದಿ (ನಾ)= ಮರ್ಯಾದೆ; ಗೌರವ; ಮನ್ನಣೆ; ಮುಚ್ಚಿ ಇರುವಿಕೆ.

ಮರಿಹಾಕು (ಕ್ರಿ)= ಈಯು, ಕರುಕೊಡು; ಕರು ಹಾಕು; ಮರಿಯನ್ನು ಹೆರು.

ಮರುಗ (ನಾ)= ಸುವಾಸನೆಯ ಎಲೆಯುಳ್ಳ ಒಂದು ಬಗೆಯ ಸಸ್ಯ; ಮರ್ಗು.

ಮರ್ಕಲ್ (ನಾ)= ಬೀದರ ತಾಲೂಕಿನ ಒಂದು ಹಳ್ಳಿಯ ಹೆಸರು.

ಮರ್ಕಾ (ನಾ)= ಮರುಕ; ದಯೆ; ಕರುಣೆ.

ಮರ್ಗಿ (ನಾ)= ಗಡ್ಡೆ ಬೇನೆ; ಪ್ಲೇಗು.

ಮರ್ಗಿಬರ್ಲಿ (ಕ್ರಿ)= ಗಡ್ಡೆಬೇನೆ ಬರಲಿ; ಪ್ಲೇಗು ಬರಲಿ (ಬೈಗುಳ).

ಮರ್ಗಿಬಾ (ಕ್ರಿ)= ಗಡ್ಡೆ ಬೇನೆ ಬರು; ಪ್ಲೇಗು ಬೇನೆ ಬರು.

ಮರ್ಗೆಮ್ಮ (ನಾ)= ಗಡ್ಡೆ ಬೇನೆಯ ದೇವತೆ.

ಮರ್ಗೇಡಿ (ನಾ)= ಮರೆವಿನಿಂದ ಕೆಟ್ಟವನು/ಳು; ಮರೆವುಗೇಡಿ (ಬೈಗುಳ).

ಮರ್ಚಿಲ (ನಾ)= ಮೊದಲನೇ ಮಗುವಿನ ನಂತರ ಹುಟ್ಟಿದ ಮಗು.

ಮರ್ಜಿ (ನಾ) ಉ.= ಇಷ್ಟ; ಆಸಕ್ತಿ; ಮುಲಾಜು; ಇಚ್ಛೆ.

ಮರ್ಜಿಕಾಯ್ಕೊ (ಕ್ರಿ)= ಮನಸ್ಸು ಗೆದಿ; ಮುಲಾಜು ಕಾಯ್ದುಕೊ.

ಮರ್ಣಾ (ನಾ)= ಮರಣ; ಸಾವು (ಹಾಡು: ಕರ್ಣಾಬಂದರೆ ಕಾಯೊ ಮರ್ಣಾ ಬಂದರೆ ಒಯ್ಯೊ).

ಮರ್ತಮೈಲಿ (ನಾ)= ಎಚ್ಚರ ತಪ್ಪಿ; ಮರವೆಯಲ್ಲಿ.

ಮರ್ತ್ಯಾ (ನಾ)= ಮರ್ತ್ಯ; ಜಗತ್ತು; ಭೂಮಂಡಲ; ಭೂಮಿ; ಮೃತ್ಯುಲೋಕ (ಹಾಡು: ಬಸವ ಬಂದಾರ ಕೇಳಿರೇ। ಮರ್ತ್ಯಾಕ ಚೆನ್ನ। ಬಸವ ಬಂದಾರ ಕಾಣಿರೇ॥).

ಮರ್ದ (ನಾ) ಉ.= ಗಂಡು; ಗಂಡ; ವೀರ; ಪರಾಕ್ರಮಿ; ಪರಿಶ್ರಮಿ.

ಮರ್ದನ್ಮಗ (ನಾ)= ದುಡಿವವನ ಮಗ; ವೀರಪುತ್ರ; ವೀರ.

ಮರ್ದಾನಕಿ (ನಾ)= ಗಂಡಸುತನ; ವೀರತನ; ಪರಾಕ್ರಮ.

ಮರ್ದಿನ (ನಾ)= ಮರುದಿನ; ಮಾರನೆಯದಿನ; ಮುಂದಿನದಿನ.

ಮರ್ದುಂಸುಮಾರಿ (ಕ್ರಿ) ಉ.= ಜನಗಣತಿ.

ಮರ್ಧಿನ (ನಾ)= ಮರುದಿನ; ಮಾರನೆಯದಿನ; ಮುಂದಿನ ದಿನ.

ಮರ್ನಾಗಿ (ನಾ)= ಮೈಯೆಲ್ಲ ಬಾಣದಂತಹ ಮುಳ್ಳುಳ್ಳ ಪ್ರಾಣಿ; ಕೋಳಿಯಂತಿರುವ ಮುಳ್ಳುಹಂದಿ; ಕೋಡಂಗಿ ತರಹದ ಪ್ರಾಣಿ.

ಮರ್ಮು (ನಾ)= ಮರ್ಮ; ಅಂತರಾಳ; ಗೂಢಾರ್ಥ; ಗುಟ್ಟು.

ಮರ್ಯಾದಿ (ನಾ)= ಮರ್ಯಾದೆ; ಗೌರವ; ಮನ್ನಣೆ; ಕಣ್ಣಿಗೆ ಕಾಣದಂತಿರುವಿಕೆ; ಭಯಭಕ್ತಿ.

ಮರ್ಸು (ಕ್ರಿ)= ಮರೆಸು; ಮರೆಯುವಂತೆ ಮಾಡು; ಮರೆವು ಹುಟ್ಟಿಸು.

ಮಲಕು (ನಾ)= ದಾರ ಮತ್ತು ಹಗ್ಗದಲ್ಲಿ ಉಂಟಾದ ಕುಡುಪು, ಗಂಟು, ಹುರಿ, ಸಿಕ್ಕು ಇತ್ಯಾದಿ.

ಮಲಕುಭೀಳು (ಕ್ರಿ)= ಸಿಕ್ಕುಂಟಾಗು; ಗಂಟು ಗಂಟಾಗು; ಹುರಿಗೊಳ್ಳು.

ಮಲಜರಿ= ಮಲ್ಜರಿ; ಊದು ಬೇನೆ.

ಮಲಣ್ಣ (ನಾ)= ತಾಯಿಯ ಸವತಿಯಿಂದ ಹುಟ್ಟಿದ ಅಣ್ಣ.

ಮಲಕೊ (ಕ್ರಿ)= ಮಲಗು; ಮಲಗಿಕೊ.

ಮಲಾಮು (ನಾ)= ಲೇಪ; ಲೇಪಿಸುವ ಮದ್ದು.

ಮಲಿ (ನಾ)= ಮೊಲೆ; ಕುಚ (ಗಾದೆ: ಮಲಿ ಬಂದಾಕಿಗಿ ನೆಲಾ ಕಾಣ್ಸಾಲ.)

ಮಲಿ ಕುಡ್ಸು (ಕ್ರಿ)= ಮೊಲೆಯೂಡು; ಎದೆಹಾಲು ಕುಡಿಸು.

ಮಲ್ಕಂಬ (ನಾ)= ಮಲ್ಲಕಂಭ; ಕುಸ್ತಿ ಪಟುಗಳು ಮತ್ತು ಶರೀರ ಸೌಷ್ಠವ ಬಯಸುವವರು ಏರು-ಇಳಿ ಮಾಡಿ ಅಭ್ಯಾಸಿಸುವ ಮರದ ಕಂಭ.

ಮಲ್ಗು (ಕ್ರಿ)= ಮಲಗು; ನಿದ್ದೆ ಹೋಗು; ಬೇನೆ ಬೀಳು; ಅನಾರೋಗ್ಯ ಉಂಟಾಗು.

ಮಲ್ಗುಸು (ಕ್ರಿ)= ಮಲಗಿಸು; ಮಲಗುವಂತೆ ಮಾಡು.

ಮಲ್ಜರಿ (ನಾ)= ಕೈ, ಕಾಲು, ಮೈ ಉಬ್ಬುವಿಕೆ.

ಮಲ್ತನೀರು (ನಾ)= ಮಲೆತನೀರು; ಪಾಚಿಗಟ್ಟಿದ ನೀರು.

ಮಲ್ತಮ್ಮ (ನಾ)= ತಾಯಿಯ ಸವತಿಯಿಂದ ಹುಟ್ಟಿದ ತಮ್ಮ.

ಮಲ್ತಂದಿ (ನಾ)= ಮಲತಂದೆ; ತಾಯಿಯ ಮತ್ತೊಬ್ಬಗಂಡ.

ಮಲ್ತಾಯಿ (ನಾ)= ಅಪ್ಪನ ಅನ್ಯ ಹೆಂಡತಿ; ತಾಯಿಯ ಸವತಿ.

ಮಲ್ನಾಗರ (ನಾ)= ಮೂರ್ಛೆರೋಗ; ಅಪಸ್ಮಾರ.

ಮಲ್ಮಗ (ನಾ)= ಮಲಮಗ; ಸವತಿಯ ಮಗ; ತನ್ನ ಹೆಂಡತಿಯ ಮೊದಲ ಗಂಡನ ಮಗ.

ಮಲ್ಮಗಳು (ನಾ)= ಗಂಡನ ಬೇರೆ ಹೆಂಡತಿಯ ಇಲ್ಲವೆ ಹೆಂಡತಿಯ ಬೇರೊಬ್ಬ ಗಂಡನ ಮಗಳು, ಮಲಮಗಳು; ಬಲ ಮಗಳು.

ಮಲ್ಮಲ್ (ನಾ)= ಉ.= ಒಂದು ಬಗೆಯ ಮೆದುವಾದ ಬಟ್ಟೆ; ಮಸ್ಲಿನ್ ಬಟ್ಟೆ.

ಮಲ್ರೋಗ (ನಾ)= ಮಲನಾಗರ ರೋಗ; ಮಲರೋಗ (ಗಾದೆ: ಕರ್ರ್ದು ಮಗಳಿಗ್ಕೊಟ್ರ ಅಳ್ಯಾಗ ಮಲ್ರೋಗಾ ಬಂದಿತಂತ).

ಮಲ್ಲಪ್ಪ ಚಾಮರಡ್ಡಿ (ನಾ)= ಖಡ್ಗ ಚಿಂಚೋಳಿಯ ಒಬ್ಬ ತತ್ವ ಪದಕಾರ (ಮಾಣಿಕ ಪ್ರಭುಗಳ ಸಮಕಾಲೀನ ತತ್ವಪದಕಾರ).

ಮಲ್ಲಯ್ಯ (ನಾ)= ಶ್ರೀಶೈಲ, ಮೈಲಾರ ಮತ್ತು ಮದರ್ಗೈಯಿ ಕ್ಷೇತ್ರದ ಮಲ್ಲಿಕಾರ್ಜುನ ದೇವರು.

ಮಲ್ಲಾಡ (ನಾ)= ಮಲೆನಾಡು (ಗಾದೆ: ಮಲ್ಲಾಡ್ದಾಗ ದುಡ್ಡಿಗೊಂದು ಟೆಂಗು).

ಮಲ್ಲಾಡಿಕ (ನಾ)= ಕಾಡು ಔಡಲ; ಎಲೆ ಅಥವಾ ಟೊಂಗೆ ಕಡಿದರೆ ಹಾಲು (ರಸ) ಒಸರುವ ಗಿಡ.

ಮಲ್ಲಾಡಿಕ್ಯಾ (ನಾ)= ಮಲ್ಲಾಡಿಕ (ನೋಡಿರಿ).

ಮಲ್ಲಾರಡ್ಡಿ ಪಾಟೀಲ (ನಾ)= ಮುಡಬಿ ಗ್ರಾಮವನ್ನು ಅಭಿವೃದ್ಧಿಗೊಳಿಸಿದ ದಿ. ಮಾಜಿ ಸರಪಂಚ.

ಮಲ್ಲಿಕಾರ್ಜುನ ಕವಿ (ನಾ)= ಬಸವಕಲ್ಯಾಣ ತಾಲೂಕಿನ ಧನ್ನೂರು (ಅರ್) ಗ್ರಾಮದ ಒಬ್ಬ ಯುವ ಕವಿ.

ಮಲ್ಲಿಕಾರ್ಜುನ (ನಾ)= ಶ್ರೀ ಶೈಲ ಮಲ್ಲಿಕಾರ್ಜುನ. ಮದರಗಾಂವ ಮಲ್ಲಿಕಾರ್ಜುನ.

ಮಲ್ಲಿಗಿ (ನಾ)= ಮಲ್ಲಿಗೆ; ಒಂದು ಬಗೆಯ ಸುಗಂಧಯುಕ್ತ ಬಿಳಿಯ ಹೂವು; ಮೈಲಿಗೆ. (ಕ್ರಿ) ಮಲ್ಲಿಗಿ ಭೀಳು= ಮೈಲಿಗೆ ಯಾಗು; ಹುಣ್ಣಿನಲ್ಲಿ ಹುಳು ಹುಟ್ಟು.

ಮಲ್ಯಾ (ನಾ)= ಮಲ್ಯ ಎಂಬ ಹೆಸರಿನ ಹುಲ್ಲು ಜಾತಿ; ಮಲ್ಲಯ್ಯನ ಮಲ್ಲಿಕಾರ್ಜುನ ಹೆಸರಿನ ಬೈಗುಳ ರೂಪ, ವಿಕಾರ ರೂಪ.

ಮಲ್ಲೇಶ್ವರಿ ಉದಯಗಿರಿ (ನಾ)= ಔರಾದ (ಬಿ) ತಾಲೂಕಿನ ದೊಡ್ಡ ಮುಧೋಳಗ್ರಾಮದ ಕನ್ನಡ ಹಿಂದಿ ಉಭಯ ಭಾಷಾ ಕವಯತ್ರಿ.

ಮಲ್ಸೂತ್ರ (ನಾ)= ಮಲಸೂತ್ರ; ತಿರುಪು; ತಿರುಗಣಿ.

ಮವ್ವ (ನಾ)= ಅವ್ವ; ನನ್ನ ಅವ್ವ; ಮೋಹ.

ಮವ್ವದ ಗಿಣಿ (ನಾ)= ಮೋಹದ ಗಿಳಿ; ಪ್ರೀತಿಯಗಿಳಿ; ಮುದ್ದು ಮುದ್ದಾದವಳು.

ಮವ್ವು (ನಾ)= ಮೋಹ; ಪ್ರೀತಿ.

ಮವ್ವು ಬರು (ಕ್ರಿ)= ಪ್ರೀತಿಯುಂಟಾಗು.

ಮವ್ವು ಮಾಡು (ಕ್ರಿ)= ಪ್ರೀತಿಸು; ಪ್ರೀತಿದೋರು.

ಮಷಾಣ (ನಾ)= ಮಸಣ; ಮಸುಟಿಗಿ; ಸ್ಮಶಾನ.

ಮಷಾಲು (ನಾ)= ದೀವಟಿಗೆ; ಪಂಜು.

ಮಸಡಿ (ನಾ)= ಮೊಸಡೆ; ಮುಸುಡು; ಮುಖ.

ಮುಸಡಿ ತಿರುವು (ಕ್ರಿ)= ಮುಖ ತಿರುವು.

ಮುಸರು (ನಾ)= ಮೊಸರು (ಕೋಲಾಟದ ಹಾಡು: ಮುಸರ ಮಾರುತ ಬಂದಾಳಿವಳೊ। ಕುಸುರದ ನಾಮದ ಗೊಲ್ಲರ ಪೋರಿ।).

ಮುಸಳಿ (ನಾ)= ಮೊಸಳೆ.

ಮುಸಳಿ ಮೂರ್ಯಾಂವ (ನಾ)= ಮೊಸಳೆಯಂತೆ ವಿಕಾರ ಮುಖವುಳ್ಳವನು.

ಮುಸಳಿ ಮೂರ್ಯಾಕಿ (ನಾ)= ಮೊಸಳೆಯಂತೆ ವಿಕಾರ ಮುಖವುಳ್ಳವಳು.

ಮುಸಾಜ (ನಾ) ಉ.= ವಿಶೇಷ ಎಣ್ಣೆಯಿಂದ ಮೈ-ಕೈ ಕಾಲುಗಳನ್ನು ತಿಕ್ಕುವಿಕೆ, ಒರೆಸುವಿಕೆ.

ಮುಸಾಜ ಮಾಡು (ಕ್ರಿ)= ವಿಶೇಷ ಎಣ್ಣೆಯಿಂದ ಮೈ ಕೈ ಕಾಲುಗಳನ್ನು ತಿಕ್ಕು; ಗಟ್ಟಿಯಾಗಿ ಒರೆಸು.

ಮುಸಾಬ್ತಿ (ನಾ)= ಮುಸೋಬಾನಂತೆ ಮುಖವುಳ್ಳವಳು.

ಮುಸಾಲಿ (ನಾ)= ಮಸಾಲೆ; ಆಹಾರ ಪದಾರ್ಥಗಳನ್ನು ರುಚಿಗೊಳಿಸಲು ಉಪಯೋಗಿಸುವ ಮೆಣಸು, ಜೀರಿಗೆ, ಕೊತಂಬ್ರಿ ಬೀಜ, ಚಕ್ಕೆ ಇತ್ಯಾದಿಗಳನ್ನು ಹುರಿದು ಕುಟ್ಟಿದ ಪುಡಿ; ಯಚ್ಚ; ಸೆಲ್ಲು; ವಿದ್ಯುತ್ಕೋಶ; ಬ್ಯಾಟರಿ.

ಮುಸಿ (ನಾ)= ಕರಿಯ ಬಣ್ಣ; ಇದ್ದಲಿ ಪುಡಿ; (ಕ್ರಿ)= ಮುಸೆ; ಚೂಪುಗೊಳಿಸು; ಹರಿತಗೊಳಿಸು.

ಮುಸಿ ಬಳಿ (ಕ್ರಿ)= ಮೋರೆಗೆ ಕರಿಯ ಬಣ್ಣ ಸವರು; ಅಪಮಾನಿಸು; ಕಳಂಕ ಉಂಟು ಮಾಡು.

ಮುಸಿ ಹಚ್ಚು (ಕ್ರಿ)= ಮುಸಿ ಬಳಿ (ನೋಡಿರಿ).

ಮುಸುಕು (ನಾ)= ನಸುಕು; ಮಬ್ಬುಗತ್ತಲೆ.

ಮುಸುಟ್ಗಿ (ನಾ)= ಮುಸಣಿ; ಸ್ಮಶಾನ; ಕುಣಿಗೇರಿ.

ಮುಸುಟ್ಗಿಸೇರು (ಕ್ರಿ)= ಸತ್ತು ಕುಣಿ ಸೇರು; ಚಿತೆಯೇರು (ಬೈಗುಳ).

ಮುಸುಟ್ಯಾಗಿಡ್ಲಿ (ಕ್ರಿ)= ಮುಸಣಿ ಸೇರಿಸಲಿ; ಕುಣಿಕಾಣಲಿ; ಮಣ್ಣು ಮಾಡಲಿ (ಬೈಗುಳ).

ಮುಸುದಿ (ನಾ)= ಮಸೀದಿ; ಮುಸಲ್ಮಾನರ ಪ್ರಾರ್ಥನಾ ಮಂದಿರ.

ಮುಸುರು (ನಾ)= ಮಸರು; ಮೊಸರು.

ಮುಸೂದಿ (ನಾ)= ಮಸೀದಿ; ಮುಸಲ್ಮಾನರ ಪ್ರಾರ್ಥನಾ ಮಂದಿರ (ಬೈಗುಳ : ಮನಿ, ಮಠಾ ಮುಸೂದಿ ಆಗ್ಲಿ).

ಮುಸೂರ (ನಾ)ಉ.= ಪ್ರಸಿದ್ಧ; ಖ್ಯಾತಿವಂತ; ಕೀರ್ತಿಶಾಲಿ.

ಮುಸೂರಿ ಮಳಿ (ನಾ)= ಬಾರೀಕ ಮೊಳೆ.

ಮುಸೂರು (ನಾ)ಹಿಂ.= ಚಣಗಿ; ಚೆನ್ನಂಗಿ; ಒಂದು ಪ್ರಕಾರದ ಬೇಳೆ ಕಾಳು.

ಮುಸೂರ್ದಾಳ (ನಾ) ಮ.= ಚಣಗಿ ಬೇಳೆ.

ಮುಸೋಬಾ (ನಾ)= ಮಹಿಷೋಬಾ; ಮಹಿಳೆಯರು ಪೂಜಿಸುವ ಸಾಂಪ್ರದಾಯಿಕ ದೇವರು; ಮೊಸೋಬಾ.

ಮುಸೋಬಾನ್ಮಾರ್ಯಾಂವ (ನಾ)= ವಿಕಾರ ಮುಖ ಉಳ್ಳವನು (ಬೈಗುಳ).

ಮುಸೋಬ್ತಿ (ನಾ)= ಮುಸೋಬನಂತೆ ಮೋರೆಯುಳ್ಳವಳು; ಮುಸಾಬ್ತಿ (ಬೈಗುಳ).

ಮುಸ್ಕರಾ (ನಾ) ಉ.= ನಗೆ ಚಾಟಿಕೆ; ಕುಚೇಷ್ಟೆ (ಉದಾ: ಮುಸ್ಕರಾ ಮಾಡ್ಲಾತಿದೇನು= ಕುಚೇಷ್ಟೆ ಮಾಡುತ್ತಿರುವೆ ಏನು ?).

ಮಸ್ಕಲ್ (ನಾ)= ಮಸ್ಗಲ್ಲು; ಕತ್ತಿ, ಕುಡಗೋಲು, ಕೊಡಲಿ, ಚಾಕು ಇತ್ಯಾದಿಗಳನ್ನು ಹರಿತಗೊಳಿಸಲು ತಿಕ್ಕಲು ಬಳಸುವ ಕಲ್ಲು; ಔರಾದ ತಾಲೂಕಿನ ಒಂದು ಹಳ್ಳಿ.

ಮಸ್ಕಾ ಹಚ್ಚು (ನು)= ಬೆಣ್ಣೆ ಹಚ್ಚು; ನಂಬಿಸು.

ಮಸ್ಗಲ್ಲು (ನಾ)= ಕುಡಗೋಲು; ಖುರ್ಪಿ, ಕೊಡಲಿ, ಕತ್ತಿ ಚಾಕು ಇತ್ಯಾದಿಗಳನ್ನು ತಿಕ್ಕಿ ಹರಿತ ಗೊಳಿಸಲು ಬಳಸುವ ಉಜ್ಜುಗಲ್ಲು; ಮಸ್ಕಲ್ಲು.

ಮಸ್ತ (ಅ)= ಬೇಕಾದಷ್ಟು; ಸಾಕಾಗುವಷ್ಟು.

ಮಸ್ತಾಗು (ಕ್ರಿ)= ಹೆಚ್ಚಾಗು; ಮಗ್ನನಾಗು; ಗುಂಗಾಗು.

ಮಸ್ತಿ (ನಾ)= ಸೊಕ್ಕು; ಗರ್ವ; ಅಹಂಕಾರ; ಮದಾಂಧತೆ.

ಮಸ್ತಿ ಇಳ್ಸು (ಕ್ರಿ)= ಸೊಕ್ಕು ಅಡಗಿಸು; ಗರ್ವಹರಣ ಮಾಡು; ಮದಾಂಧತೆಯನ್ನು ಅಳಿಸು.

ಮಸ್ತಿ ಏರು (ಕ್ರಿ)= ಸೊಕ್ಕು ಹೆಚ್ಚಾಗು; ಗರ್ವ ಅತಿಯಾಗು.

ಮಸ್ಜಿ (ನಾ)= ಮಸೀದಿ; ಮುಸಲ್ಮಾನರ ಪ್ರಾರ್ಥನಾ ಮಂದಿರ.

ಮಸ್ಣಿಸೇರ್ಲಿ (ನು)= ಹಾಳಾಗಲಿ.

ಮಸ್ರೇಜ (ನಾ)= ನಾಜೂಕಾದ ಹತ್ತಿ ಬಟ್ಟೆ; ಮಿಲ್ಲಿನಲ್ಲಿ ತಯಾರಿಸಲಾದ ನಾಜೂಕು ಬಟ್ಟೆ.

ಮಹಾ (ನಾ)= ಮಹತ್ತೆ; ದೊಡ್ಡದ್ದು; ಘನವಾದದ್ದು (ಉ: ಅದೇನು ಮಹಾ?).

ಮಹಾಕಾಳಿ (ನಾ)= ಮಾಂಕಾಳಿ.

ಮಹಾಗ (ನಾ) ಮ.= ತುಟ್ಟಿ; ಪ್ರಿಯ.

ಮಹಾನೌಮಿ (ನಾ)= ಮಾನಂಬಿ; ದಸರೆ ಹಬ್ಬದ ಮುನ್ನಾದಿನ; (ವಚನ: ಮರಣವೇ ಮಹಾನೌಮಿ).

ಮಹಿಂಗಾ (ನಾ)ಉ.= ತುಟ್ಟಿ; ಪ್ರಿಯ; ಬೆಲೆ ವೃದ್ಧಿ.

ಮಹಿಂಗಾಯಿ (ನಾ)ಉ.= ಬೆಲೆ ಏರಿಕೆ.

ಮಹಿಮಾನ (ನಾ)ಉ.= ಅತಿಥಿ.

ಮಹಿಲು (ನಾ)ಉ.= ವಿಶಾಲವಾದ ಕಟ್ಟಡ; ಸೌಧ; ಭವನ.

ಮಳಕಿ (ನಾ)= ಮೊಳಕೆ; ಅಂಕುರ; ಕುಡಿ; ಪ್ರಾರಂಭ.

ಮಳಕಿವೊಡಿ (ಕ್ರಿ)= ಬೀಜದಲ್ಲಿ ಮೊಳಕೆಯುಂಟಾಗು.

ಮಳಮಳ ಆಗು (ಕ್ರಿ)= ತಳಮಳವಾಗು; ಸಂಕಟವಾಗು; ಓಕರಿಕೆ ಬಂದಂತಾಗು; ಹೊಟ್ಟೆಯಲ್ಲಿ ಕಸಿವಿಸಿಯಾಗು.

ಮಳಚಾಪೂರ (ನಾ)= ಮಾಳ್ಳಾಕಾಂತ ಮೈಲಾರ ಮಲ್ಲಯ್ಯನ ಊರು; ಭಾಲ್ಕಿ ತಾಲೂಕಿನ ಮೈಲಾರ ಮಲ್ಲಯ್ಯನ ಊರು.

ಮಳಾ (ನಾ)= ನೀರಾವರಿ ಹೊಲ; ತೋಟ; ಮೊಳ (ಉದ್ದ).

ಮಳಾ ಮಾಡು (ಕ್ರಿ)= ತೋಟಗಾರಿಕೆ ಕೃಷಿ ಮಾಡು.

ಮಳಿ (ನಾ)= ಮಳೆ; ಮೋಡದಿಂದ ಉದುರುವ ಹನಿಹನಿ ನೀರು; ಕಬ್ಬಿಣದ ಮೊಳೆ.

ಮಳಿ ಇಳಿ (ಕ್ರಿ)= ಮಳೆ ಕಾಲೂರು; ಮಳೆ ಹನಿ ಉದುರು.

ಮಳಿ ಕಾಲೂರು (ಕ್ರಿ)= ಮಳೆ ಬೀಳುವ ದೃಶ್ಯಕಾಣು; ಮೋಡದಿಂದ ನೆಲದವರೆಗೆ ಮಳೆಧಾರಾಕಾರವಾಗಿ ಬೀಳು.

ಮಳಿ ಭೀಳು (ಕ್ರಿ)= ಮಳೆಯಾಗು; ಮೋಡದಿಂದ ನೀರಿನ ಹನಿ ಹನಿ ಉದುರು.

ಮಳಿಮೂಡಾ (ನಾ)= ಮಳೆ ತರುವ ಮೋಡ.

ಮಳು (ನಾ)= ಮಳಾ; ತೋಟ.

ಮಳೆರಾಯ (ನಾ)= ಮಳೆತರುವ ದೇವರು; ಮಳೆರಾಜ; ವರುಣ ದೇವ (ಹಾಡು: ಕಪ್ಪಿ ಕಾಲಿಗಿ ಮುಕ್ಮುಕು ನೀರಿಲ್ಲ! ಬಾರೊ ಬಾರೊ ಮಳೆರಾಯ).

ಮಳ್ಕಾಲು (ನಾ)= ಮೊಣಕಾಲು.

ಮಳ್ಕಾಲ್ಡಬ್ಬಿ(ನಾ)= ಮೊಣಕಾಲಿನ ಕೀಲು.

ಮಳ್ಕಾಲ್ಮಂಡಿ (ನಾ)= ಮೊಣಕಾಲಿನ ಕೀಲು ರೋಗ.

ಮಳ್ಕೈ (ನಾ)= ಮೊಣಕ್ಕೆ.

ಮಳ್ಕೈ ಆಳ್ತಿ (ನಾ)= ಮೊಳಕೈ ಅಳತೆ; ಮೊಳ ಕೈಯಷ್ಟು ಉದ್ದಳತೆ.

ಮಳ್ಗಾಲ (ನಾ)= ಮಳೆಗಾಲ.

ಮಳ್ಗಿ (ನಾ)= ಮಳಿಗೆ; ಅಂಗಡಿ; ಗೋದಾಮು.

ಮಳ್ಗೇಡಿ (ನಾ)= ಮರುಳಗೇಡಿ; ಮರುಳತನದಿಂದ ಕೆಟ್ಟವನು.

ಮಳ್ಜಾತಿ (ನಾ)= ಮರುಳ ಜನ; ವಿವೇಕ ವಿಲ್ಲದ ಜನಾಂಗ.

ಮಳ್ಳ (ನಾ)= ಮರುಳ; ದಡ್ಡ; ಹುಚ್ಚ.

ಮಳ್ಳಂತಿ (ನಾ)= ಮರಳಿ ಹೂಡಿದ ಕಂಕೆ ತುಳಿಸುವ ಎತ್ತುಗಳ ಹಂತಿ; ಎತ್ತುಗಳಿಂದ ಕಂಕೆ ತುಳಿಸುವ ಹಂತಿ.

ಮಳ್ಳಿ (ನಾ)= ಮಳ್ಳೆ; ಮರುಳೆ; ಹುಚ್ಚಿ; ಒಂದು ಪ್ರಕಾರದ ಗಿಡ ಮತ್ತು ಅದರ ಕಾಯಿ; ಒಂದು ಪ್ರಕಾರದ ಹಾರುವ ಕೀಟ.

ಮಳ್ಳಿಕಾಯಿ (ನಾ)= ಮಳ್ಳಿ ಎಂಬ ಕಾಡು ಗಿಡದ ಕಾಯಿ.

ಮಳ್ಳು (ನಾ)= ಹುಚ್ಚು; ಮರುಳ; ಹುಚ್ಚತನ; ಮರುಳತನ; ಹುಚ್ಚರಿ; ನರಿಜಾತಿಯ ಒಂದು ಪ್ರಾಣಿ.

ಮಳ್ಳೇಳು (ಕ್ರಿ)= ಹುಚ್ಚು ಹಿಡಿ.

ಮಳ್ಳು ಹಿಡಿ (ಕ್ರಿ)= ಹುಚ್ಚು ಹಿಡಿ; ಹುಚ್ಚೇರು.

ಮಳ್ಳೇರು (ಕ್ರಿ)= ಹುಚ್ಚು ಹಿಡಿ; ಮರುಳತನ ಉಂಟಾಗು. (ನಾ)= ಮಹಿಳೆಯರು; ಮರುಳೆಯರು; ಹುಚ್ಚಿಯರು.

ಮಳ್ಳ್ಯಾ (ನಾ)= ಮರುಳನಂತೆ ನಟಿಸುವವ; ಮರುಳ; ಮಳ್ಳ (ಬೈಗುಳ).

ಮಾ (ನಾ)= ಮಹಾನ; ದೊಡ್ಡದು; ಅಮ್ಮ.

ಮಾ (ಅ)= ಮತ್ತೆ; ಬೇಡವೆಂಬುದನ್ನು ಸೂಚಿಸುವ ಅವ್ಯಯ; ಹೀನೈಸುವಿಕೆ; (ಜಾನಪದಸರಸ: ಯಾರಮಾ ಪೋರಿ। ಅವ್ರಿಯಾ ಬೆಳ್ಳ್ಯಾಗಾ। ಯಾಕ್ರೀ ಭಾವಾ ಸ್ವಾದ್ರತ್ತಿ ಮಗಳು).

ಮಾಂಗ (ನಾ)= ಮಾದಿಗ; ಮಹಾದಿಗ.

ಮಾಂಗ (ನಾ) ಹಿಂ.= ಬೇಡಿಕೆ; ಇಷ್ಟ; ಇಚ್ಛೆ; ಸವಾಲು; ದಲಿತ ಸಮಾಜದ ಒಂದು ಗುಂಪು, ಮಾದಿಗ; ಬೈತಲೆ; ಬೇತ್ಲ.

ಮಾಂಗಾಯಿ (ನಾ)= ಮಾಗಾಯಿ; ಮಾವಿನ ಕಾಯಿ (ತೊಟ್ಟಿಲ ಹಾಡು: ಅರಳೆಲಿ ಮಾಗಾಯಿ। ಬೆರಳಿಗುಂಗುರವಿಟ್ಟು। ಸರಸ ಹೊನ್ನುಂಗೂರವರು ತೂಗೀರೇ।).

ಮಾಂಗಾರೂಡಿ (ನಾ)= ಒಂದು ಜನಾಂಗದ ಹೆಸರು.

ಮಾಂಜಾ (ನಾ) ಹಿಂ.= ಪತಂಗ ಹಾರಿಸಲು ಬಳಸುವ, ಗಾಜಿನ ಹುಡಿ ಲೇಪಿಸಿ ತಯಾರಿಸಿದ ದಾರ.

ಮಾಂಡಿ (ನಾ) ಮ.= ಮಂಡೆ; ತೊಡೆ.

ಮಾಂತ, ಮಾಹಾಂತ (ನಾ)= ಮಹಂತ; ಮಠದ ಅಧಿಕಾರಿ (ಭಜನೆ: ಸತ್ವರಜ ತಮಗುಣಗಳ ಅಳಿದವನೆ ತ್ಯಾಗಿ। ಮಡಿವಾಳಪ್ಪನೆ ಯೋಗಿ। ಚಿಂಚೋಳಿ ಪುಟಬಿಟ್ಟು ಬಂದಾ ಶಿವಯೋಗಿ। ಮಾಹಂತ ಹಟಯೋಗಿ।।).

ಮಾಗ (ನಾ)= ಮಹಾಗ; ತುಟ್ಟಿ; ಪ್ರಿಯ; ಅತಿಬೆಲೆ.

ಮಾಗಾಯಿ (ನಾ)= ಮಾಂಗಾಯಿ; ಕೂಸಿನ ಒಡವೆ; ಮಾವಿನ ಕಾಯಿಯಂತಹ ಒಡವೆ (ಹಾಡು: ಅರಳೆಲಿಮಾಗಾಯಿ ಬೆರಳಿ-ಗುಂಗುರವಿಟ್ಟು ಸರಸ ಹೊನ್ನುಂಗೂರವರು ತೂಗೀರೇ).

ಮಾಗಿ (ನಾ)= ಮಾಘ; ಶಿಶಿರ ಋತು; ಚಳಿಗಾಲ.

ಮಾಗಿ ಬಿಸುಲು (ನಾ)= ಚಳಿಗಾಲದ ಬಿಸಿಲು; ಬೆದೆಬಿಸಿಲು.

ಮಾಗಿಬೆಳೆ (ನಾ)= ಚಳಿಗಾಲದಲ್ಲಿ ಪ್ರಾಪ್ತವಾಗುವ ಬೆಳೆ ಮತ್ತು ಧಾನ್ಯ.

ಮಾಚಿದೇವ (ನಾ)= ಹನ್ನೆರಡನೇ ಶತಮಾನದಲ್ಲಿ ಆಗಿ ಹೋದ ಒಬ್ಬ ಗಣಾಚಾರಿ ಶರಣ. ಮಡಿವಾಳ ಮಾಚಿದೇವ; ಮಡಿಕಾಯಕದ ಶರಣ.

ಮಾಚಿದೇವರ ಹೊಂಡ (ನಾ)= ಮಾಚಿದೇವ ಮಡಿವಾಳ ಶರಣರು, ಶರಣರ ಬಟ್ಟೆ ತೊಳೆಯುತಿದ್ದ ನೀರಿನ ಕುಂಡ, ಗುಂಡ.

ಮಾಟಾ (ನಾ)= ಮಾಟ; ಸಿದ್ಧಗೊಳಿಸಿದ ರೂಪ, ರಚನೆ; ನಿರ್ಮಾಣ; ಮಾಡಿದ ಕೆಲಸ ಇತ್ಯಾದಿ; ಇಂದ್ರಜಾಲ; ಮಂತ್ರ ತಂತ್ರದಿಂದ ಮಾಡುವ ಕೇಡು; ಜಾದು; ಭಾನಾಮತಿ.

ಮಾಟ್ಟಿ (ನಾ)= ಮಟ್ಟಿ; ಕಂಬಳಿಯಲ್ಲಿ ಇಲ್ಲವೆ ಗಲ್ತಾನಿ ಚೀಲದಲ್ಲಿ ತುಂಬಿದ ಧಾನ್ಯದ ಹೊರೆ, ಭಾರ; ಎತ್ತುಗಳಿಂದ ನಡೆಸಲಾಗುವ ಏತ ನೀರಾವರಿ (ಗಾದೆ: ಅಟ್ಟುಂಬಾವ್ನ ಹೆಣ್ತಿ ಆಗ ಬಾರದು; ಮಾಟ್ಟಿ ಹೊಡೆವ್ನ ಆಳಾಗಬಾರದು).

ಮಾಡಾ (ನಾ)= ಮೋಡ; ಗೋಡೆಯಲ್ಲಿಯ ಗೂಡು; ವಸ್ತುಗಳನ್ನಿಡಲು ಗೋಡೆಯಲ್ಲಿ ಬಿಟ್ಟ ಜಾಗ.

ಮಾಡಿ ಮಟ್ಟಿ (ಅ)= ದುಡಿದ ಮೇಲೂ (ಗಾದೆ: ಮಾಡಿ ಮಟ್ಟಿ ಮಾಕೂ ಚೋದ್ಯೂ).

ಮಾಡು (ಕ್ರಿ)= ಕೆಲಸವನ್ನು ನಿರ್ವಹಿಸು, ನಡೆಸು, ನೆರವೇರಿಸು, ನಿರ್ಮಿಸು, ಕಟ್ಟಿಸು (ತತ್ವ ಪದ: ನೀ ಮಾಡುವೆನೆಂದರೆ। ಮಾಡಿ ನೋಡೆಲವೊ ಮನುಜ। ಊರ ಮುಂದಿನ ತ್ವಾಟಾ ಸರಕಾರದೋ।।).

ಮಾಡ್ಕೊ (ಕ್ರಿ)= ಮಾಡಿಕೊ; ಮದುವೆಯಾಗು.

ಮಾಡ್ಯಾ (ನಾ)= ಮಹಡಿ; ಮೇಲಂತಸ್ತು; ಮೇಲುಪ್ಪರಿಗೆ.

ಮಾಡ್ಯಾದ್ಮವಿ (ನಾ)= ಮೇಲಂತಸ್ತಿನ ಮನೆ; ಮಹಡಿ ಮನೆ.

ಮಾಡ್ಯಾಳ (ನಾ)= ಮಡಿಹಾಳ ಎಂಬ ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಒಂದು ಊರು; ಇಲ್ಲಿಯ ಪೂಜಾರರು-ಲಿಂಗಾಯತ ಮುಜಾವಾರರು-ಪ್ರತಿವರ್ಷ ಬೀದರ ಸಮೀಪದ ಅಷ್ಟೂರಿನಲ್ಲಿರುವ ಅಲ್ಲಮಪ್ರಭು ಅಷ್ಮದಷಾವಲಿ ಬಹಮನಿ ಕ್ಷೇತ್ರಕ್ಕೆ ಬಂದು ಜಾತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾರೆ.

ಮಾಣಿಕ (ನಾ)= ಹುಮನಾಬಾದ ತಾಲೂಕಿನ ಮಾಣಿಕನಗರ (ಪ್ರಭುನಕಟ್ಟಿ) ಊರಿನ ಒಬ್ಬ ದತ್ತ ಸಂಪ್ರದಾಯದ ಸಂತರು. (ಭಜನೆ: ಹರಮಾಣಿಕ ಹರಿ ಮಾಣಿಕ । ಗುರುಮಾಣಿಕ ಪ್ರಭುಮಾಣಿಕ । ಸನ್ಮಾಣಿಕ ಚಿನ್ಮಾಣಿಕ); ಸಕಲ ಮತ ಸ್ಥಾಪಕ ಸದ್ಗುರು ಮಾಣಿಕ ಪ್ರಭು ಮಹಾರಾಜರು.

ಮಾಣಿಕಗಂಗನಪಳ್ಳಿ (ನಾ)= ಬೀದರ ನಗರದ ಒಬ್ಬ ಪ್ರಸಿದ್ಧ ಸಾಹಿತಿ.

ಮಾಣಿಕದೇಶಪಾಂಡೆ (ನಾ)= ಬೀದರ ನಗರದ ಒಬ್ಬ ಪ್ರಸಿದ್ಧ ಸಾಹಿತಿ.

ಮಾಣಿಕನಗರ (ನಾ)= ಮಾಣಿಕ ಪ್ರಭು ಮಹಾರಾಜರ ದಿವ್ಯಕ್ಷೇತ್ರವಿರುವ ಊರು; ಪ್ರಭುನ ಕಟ್ಟಿ.

ಮಾಣಿಕ ಪ್ರಭು (ನಾ)= ಮಾಣಿಕ (ನೋಡಿರಿ).

ಮಾಣಿಕೇಶ್ವರ (ನಾ)= ಬೀದರ ತಾಲೂಕಿನ ಯರ್ನಳ್ಳಿ ಗ್ರಾಮದ ಒಬ್ಬ ದಿಗಂಬರ ಸಂತ. ಕಲ್ಬುರ್ಗಿ ಜಿಲ್ಲೆಯ ಕಮಲಾಪುರ ಸಮೀಪದ ಕಲ್ಮುಡದಲ್ಲಿ ಲಿಂಗೈಕ್ಯರಾದ ದಿಗಂಬರ ಸಂತರಾದ ಮಾಣಿಕೇಶ್ವರ ಮಹಾರಾಜರು.

ಮಾತ (ಅ)= ಮತ್ತು; ಮತ್ತೆ; ಅಲ್ಲದೆ; ಅದಲ್ಲದೆ.

ಮಾತಾಜಿ (ನಾ)= ಮಾತೆ ಮಹಾದೇವಿ; ಬಸವಣ್ಣನವರ ಹಾಗೂ ಇತರ ಶರಣ ಶರಣೆಯರ ವಚನಾಂಕಿತ ತಿದ್ದಿದ ಮಹಿಳಾ ಜಗದ್ಗುರು. ಯಾನಾಗುಂದಿಯ ಮಾತೆ ಮಾಣಿಕೇಶ್ವರಿ ತಾಯಿಗೆ ಗೌರವ ಸಂಬೋಧನೆ.

ಮಾತಾಡು (ಕ್ರಿ)= ಮಾತು ಹೇಳು; ಮಾತಿನ ಮೂಲಕ ಅಭಿಪ್ರಾಯ ವ್ಯಕ್ತ ಪಡಿಸು.

ಮಾತಿಕ್ಕು (ಕ್ರಿ)= ಅಪವಾದ ಹೇರು; ಷರತ್ತು ಹಾಕು; ಕಲಂಕ ಹಚ್ಚು; ಬಟ್ಟಾ ಹಚ್ಚು.

ಮಾತಿಡು (ಕ್ರಿ)= ಮಾತಿಕ್ಕು (ನೋಡಿರಿ).

ಮಾತಿಗ್ಬಂದ್ರ (ನು)= ನ್ಯಾಯ ಹೇಳುವ ಪ್ರಸಂಗ ಬಂದರೆ.

ಮಾತಿನಾವ (ನಾ)= ಮಾತು ನಿಭಾಯಿಸುವವನು.

ಮಾತಿನ್ಮಲ್ಲಿ (ನಾ)= ಮಾತು ಹೇಳುವವಳು; ಬಾಯಿ ಬಡುಕಿ; ಮಾತುಗಾತಿ; ಹರಟೆಮಲ್ಲೆ (ಬೈಗುಳ).

ಮಾತಿನ್ಮಲ್ಯಾ (ನಾ)= ಮಾತುಗಾರ; ಹರಟೆಮಲ್ಲ (ಬೈಗುಳ).

ಮಾತಿನ್ಮನ್ಯಾ (ನಾ)= ಕೊಟ್ಟ ಮಾತನ್ನು ನಡೆಸುವವನು.

ಮಾತಿನಾಕಿ (ನಾ)= ಮಾತು ನಿಭಾಯಿಸುವವಳು.

ಮಾತು (ನಾ)= ನುಡಿ; ಹೇಳಿಕೆ; ಭಾಷೆ; ಸಂಗತಿ; ಸಂಭಾಷಣೆ; ಪ್ರತಿಜ್ಞೆ (ಗಾದೆ: ಮಾತು ಮನಾರ, ಧಂದ್ಯಾ ಸುಮಾರ).

ಮಾತುಕತಿ (ನಾ)= ಸಂಭಾಷಣೆ; ನೆಂಟಸ್ತನ ನಿರ್ಧಾರ.

ಮಾತು ಕುಡು (ಕ್ರಿ)= ಭಾಷೆಯನ್ನು ಕೊಡು; ವಚನ ಕೊಡು; ವಾಗ್ದಾನ ಮಾಡು.

ಮಾತುಗಾರ (ನಾ)= ಹರಟೆ ಹೊಡೆವವನು.

ಮಾತುಗೇಡಿ, ಮಾತ್ಗೇಡಿ (ನಾ)= ಮಾತು ತಪ್ಪುವವನು; ಮಾತು ನಿಭಾಯಿಸದೆ ಕೆಡುವವನು.

ಮಾತುತಪ್ಪು (ಕ್ರಿ)= ವಚನ ಭ್ರಷ್ಟನಾಗು.

ಮಾತುತರು (ಕ್ರಿ)= ನಿಂದೆಯನ್ನು ತರು; ಅಪವಾದಕ್ಕೆ ಗುರಿಮಾಡು.

ಮಾತು ಬಂದಾಗು (ಕ್ರಿ)= ಮಾತಾಡಲು ಬಾರದಾಗು; ಸಾವು ಸಮೀಪಿಸು.

ಮಾತು ಬಿಟ್ಟು ಮಾತಾಡು (ಕ್ರಿ)= ಮಾತು ಬದಲಾಯಿಸು; ಸಾಯುವ ಸಮಯದಲ್ಲಿ ತಪ್ಪು ತಪ್ಪು ಮಾತಾಡು; ಬಡಬಡಿಸು.

ಮಾತು ಮೀರು (ಕ್ರಿ)= ಮಾತುತಪ್ಪು; ವಚನ ಭ್ರಷ್ಟನಾಗು; ಕರಾರಿನಂತೆ ನಡೆಯದಿರು.

ಮಾತು ಹಾರಿಸು (ಕ್ರಿ)= ವಿಷಯ ಬದಲಿಸಿ ಮಾತಾಡು.

ಮಾತೆ ಮಹಾದೇವಿ (ನಾ)= ಒಬ್ಬ ಮಹಿಳಾ ಜಗದ್ಗುರು; ಬಸವಣ್ಣನವರ ಹಾಗೂ ಇತರೆ ಶರಣ-ಶರಣೆಯರ ವಚನಾಂಕಿತ ತಿದ್ದಿಲೋಕನಿಂದೆಗೆ ಗುರಿಯಾದ ಮಹಿಳಾ ಜಗದ್ಗುರು.

ಮಾತ್ಮಾ (ನಾ)= ಮಹಾತ್ಮಾ; ಮಹಾತ್ಮೆ; ಪವಾಡ; ಅಘಟಿತ ಘಟನೆ (ಭಜನೆ: ಮಾತ್ಮಾ ಮಾಡಿ ಚಿಡಗುಂಪಿ ಊರ। ಭಕ್ತಿ ನಿರ್ಮ್ಯಾಲಿಕ್ಕುತ ಪೂರ।).

ಮಾತ್ಮಿಕರು (ನಾ)= ಮಹಾತ್ಮೆ ಮೆರೆದವರು; ಪವಾಡ ಪುರುಷರು.

ಮಾದರಸ (ನಾ)= ಬಸವಣ್ಣನವರ ತಂದೆಯ ಹೆಸರು; ಮಾದಿರಾಜ).

ಮಾದಲಾಂಬಾ (ನಾ)= ಬಸವಣ್ಣನವರ ತಾಯಿಯ ಹೆಸರು; ಮಾದಲಾಂಬಿಕೆ.

ಮಾದಾರ (ನಾ)= ಮಾದಿಗ ಜಾತಿಗೆ ಸೇರಿದವನು (ವಚನ: ಅಯ್ಯಗಳ ಅಯ್ಯನು ನಮ್ಮ ಮಾದಾರ ಚೆನ್ನಯ್ಯನು-ಬಸವಣ್ಣ).

ಮಾದಾರ ಚೆನ್ನಯ್ಯ (ನಾ)= ಬಸವ ಯುಗದ ಒಬ್ಬ ಶರಣನು.

ಮಾದಿಗ (ನಾ)= ಮಾದಾರ; ದಲಿತರಲ್ಲಿಯ ಒಂದು ಒಳಪಂಗಡ.

ಮಾದಿರಾಜ (ನಾ)= ಹನ್ನೆರಡನೇ ಶತಮಾನದ ಮಹಾನುಭಾವಿ ಬಸವಣ್ಣನವರ ತಂದೆ (ಹಿಂದಿ ಹಾಡು: ಮಾದಿರಾಜ ಶಿವಭಕ್ತ ಹಿ ತಾತ। ಮಾದಲಾಂಬ ಪತಿವರ್ತಹಿ ಮಾತ। ಬನೆಗುರು ಸಂಗಮ ದೇವ। -ಶರಣ ಕವಿ ಶರಣಯ್ಯ ಸ್ವಾಮಿ ಮಹಾಗಾಂವ -ಸ್ವಾತಂತ್ರ್ಯ ಹೋರಾಟಗಾರ).

ಮಾದುಗ (ನಾ)= ಮಾದಿಗ (ನೋಡಿರಿ).

ಮಾದುಗ್ತಿ (ನಾ)= ಮಾದಗಿತ್ತಿ; ಮಾದಿಗ ಮಹಿಳೆ.

ಮಾದುಸು (ನಾ)= ಮಾದಿಸು; ಮೋಸ ಮಾಡು.

ಮಾದೇವ (ನಾ)= ಮಹಾದೇವ; ಶಿವ; ಈಶ್ವರ (ವಚನ ಆದೇವ ಈದೇವ। ಮಾದೇವನೆನಬೇಡ–ಸರ್ವಜ್ಞ।).

ಮಾದೇವಿ (ನಾ)= ಮಹಾದೇವಿ; ಪಾರ್ವತಿ.

ಮಾನಂಬಿ (ನಾ)= ಮಹಾನವಮಿ; ಮಾನೋಮಿ; ದಸರೆ ಹಬ್ಬದ ಮುನ್ನಾದಿನದ ಹಬ್ಬ; ಅಶ್ವಯುಜ ಶುದ್ಧ ಮಹಾನವಮಿ.

ಮಾನಕಾಯಿ (ನಾ)= ಮಾವಿನ ಕಾಯಿ; ಇಷ್ಟಲಿಂಗದ ಕರಡಿಗೆ; ಚೌಕಾ; ಗುಂಡುಗಡಿಗೆ. (ಕ್ರಿ)= ಮಾನಕಾಪಾಡು.

ಮಾನಗೇಡಿ (ನಾ)= ಮಾನ ಮರ್ಯಾದೆಯನ್ನು ಕಳೆದು ಕೊಂಡವನು; ಮಾನಗೆಟ್ಟವನು (ಗಾದೆ: ಮಾನವಂತ್ರು ಮಾನಕ್ಕಂಜ್ತುದ್ರ ಮಾನಗೇಡಿ ತನಗೇ ಅಂಜುದ್ರಂತಂತ!, ಹಾಡು: ಮಾನಗೇಡಿ ಮಂದಿ ಹುಟ್ಟಿ। ಮತ್ರ್ಯಾಕೆ ಕೆಡಿಸ್ಯಾರೊ।).

ಮಾನಭಂಗ (ನಾ)= ಅವಮಾನ; ಅತ್ಯಾಚಾರ.

ಮಾನ ಮಾರಾಟ ಮಾಡು (ನು)= ಅವಮಾನಿಸು; ಅಪಮಾನ ಮಾಡು.

ಮಾನವಂತ (ನಾ)= ಮಾನ ಉಳ್ಳವನು; ಮರ್ಯಾದಸ್ತನು (ಗಾದೆ: ಮಾನವಂತ್ರು ಮಾನಕ್ಕಂಜ್ತುದ್ರ, ಮಾನಗೇಡಿ ತನಗೇ ಅಂಜುದ್ರರಂತಂತ).

ಮಾನವಂತಿ (ನಾ)= ಮರ್ಯಾದಸ್ತಳು.

ಮಾನಾ (ನಾ)= ಮಾನ; ಮರ್ಯಾದೆ; ಗೌರವ; ಒಂದು ಅಳತೆಯ ಪ್ರಮಾಣ; ನಾಲ್ಕು ಸೇರು; ಅಳತೆಯ ಪಾತ್ರೆ.

ಮಾನಾತೆಗಿ (ಕ್ರಿ)= ಅವಮಾನಿಸು; ಅಪಮಾನ ಮಾಡು.

ಮಾನೋಮಿ (ನಾ)= ದಸರೆ ಹಬ್ಬದ ಮುನ್ನಾದಿನ; ಅಶ್ವಯುಜ ಶುದ್ಧ ಮಹಾನವಮಿ ಹಬ್ಬ.

ಮಾನೌಮಿ (ನಾ)= ಮಾನೋಮಿ (ನೋಡಿರಿ).

ಮಾನ್ಗೇಡಿ (ನಾ)= ಮಾನಗೇಡಿ (ನೋಡಿರಿ).

ಮಾಪಾಳ (ನಾ) ಮ.= ಮಾಯಫಳ; ಮಾಪುಳಕಾಯಿ.

ಮಾಪಿಯಾ (ನಾ)= ಆಕಾಶಬುಟ್ಟಿ; ದೀಪಾವಳಿಯ ದೀಪದ ಬುಟ್ಟಿ.

ಮಾಮಲಾತಿ, ಮಾಮ್ಲಾತಿ (ನಾ)= ಆಡಳಿತಾಧಿಕಾರ; ಘನ ವಸ್ತು; ಅಧಿಕಾರ ವ್ಯಾಪ್ತಿ.

ಮಾಪು (ನಾ)= ಧಾನ್ಯ, ದ್ರವವಸ್ತು ಇತ್ಯಾದಿಗಳನ್ನು ಅಳೆಯಲು ಸರಕಾರ ನಿರ್ಧರಿಸಿದ ಗಾತ್ರದ ಪಾತ್ರೆ.

ಮಾಪುಳಕಾಯಿ (ನಾ)= ಮಾಪಾಳ (ನೋಡಿರಿ).

ಮಾಫ ಮಾಡು (ಕ್ರಿ)= ಕ್ಷಮಿಸು; ಮನ್ನಿಸು.

ಮಾಫಿ (ನಾ) ಉ.= ಕ್ಷಮೆ; ಮನ್ನಣೆ.

ಮಾಫಿನಾಮಾ (ನಾ)ಉ.= ಕ್ಷಮಾಪತ್ರ.

ಮಾಭಾರತ (ನಾ)= ಮಹಾಭಾರತ; ಕೌರವ ಪಾಂಡವರ ಕತೆ.

ಮಾಮನೆ (ನಾ)= ಕಲ್ಯಾಣ ಪಟ್ಟಣದಲ್ಲಿರುವ ಬಸವಣ್ಣನವರ ಮಹಾಮನೆ, ಅರುಹಿನ ಮನೆ.

ಮಾಮಾ (ನಾ)= ಸೋದರ ಮಾವ; ಸೋದರತ್ತೆಯ ಗಂಡ (ಶಿಶುಪ್ರಾಸ:

ಮಾಮಾ ಮಾಮಾ ಮಾತಾಡು। ಮಾವಿನ ಗಿಡ್ಡ ಜೋತಾಡು। ಮಾವಿನ ಘಂಟ್ಯಾ ಮುರಿತು।ಮಾಮಾನ ಪ್ಯಾಂಟು ಹರಿತು।).

ಮಾಮಾಯಿ (ನಾ)= ಮಹಾಮಾಯೆ.

ಮಾಮಾರಿ (ನಾ)= ಮಹಾಮಾರಿ ಬೇನೆ.

ಮಾಮಿ (ನಾ)= ಸೋದರ ಮಾವನ ಹೆಂಡತಿ; ಸೋದರತ್ತೆ; ಅತ್ತೆ.

ಮಾಮೂಲಿ (ನಾ) ಉ.= ಸಾಧಾರಣ; ಕ್ಷುಲ್ಲಕ.

ಮಾಮೂಲು (ನಾ) ಉ.= ಲಂಚ; ಗಿಂಬಳ; ಸಂಬಳ ಅಲ್ಲದೆ ಇತರೆ ಅನ್ಯಾಯದ. ಆದಾಯ.

ಮಾಯ್ (ನಾ) ಮ.= ತಾಯಿ; ಅವ್ವ; ಅಮ್ಮ; ಹಡೆದಮ್ಮ. **(ಕ್ರಿ)=** ಹುಣ್ಣು ಇಲ್ಲದಂತಾಗು.

ಮಾಯಾ (ನಾ)= ಮಾಯೆ; ಗಾರುಡಿ; ಇಂದ್ರಜಾಲ; ಮಾಟ.

ಮಾಯಾದ್ಲೆ (ಅ)= ಗೊತ್ತಾಗದಂತೆ.

ಮಾಯಾ ಮಾಡು (ಕ್ರಿ)= ಪ್ರೀತಿಸು; ಪ್ರೀತಿ ದೋರು.

ಮಾಯಾಗು (ಕ್ರಿ)= ಕಾಣದಂತಾಗು; ಮರೆಯಾಗು.

ಮಾಯಿ (ಕ್ರಿ)= ಮಲಗು; ನಿದ್ದೆಮಾಡು (ಬಾಲಭಾಷೆ;) (ನಾ)=ತಾಯಿ; ಹಡೆದಮ್ಮ.

ಮಾಯಿನ್ಕಾಯಿ (ನಾ)= ಮಾವು; ಮಾವಿನಕಾಯಿ; ಮಾವಿನ ಹಣ್ಣು (ತತ್ವಪದ; ನಮ್ಮಾವಾ ಕೊಟ್ಟ ಮಾಯಿನ್ಕಾಯಿ । ಬಲು ಸೋಇಯಿ । ತಿನುಲಾಕ ಇಲ್ಲೊ ಬಾಯಿ).

ಮಾಯು (ಕ್ರಿ)= ಗಾಯ, ಹುಣ್ಣು ಮುಂತಾದುವು ಗುಣವಾಗು; ವಾಸಿಯಾಗು.

ಮಾಯ್ಲಾರ್ದ ಘಾಯ (ನಾ)= ಮರೆಯಲಾಗದ ಘಟನೆ, ಪ್ರಸಂಗ, ಮಾತು ಇತ್ಯಾದಿ,

ಮಾರ್ಕೆಟ್ (ನಾ)= ಮಾರ್ಕೆಟ್ಟು; ಮಾರುಕಟ್ಟೆ; ವ್ಯಾಪಾರ ವಹಿವಾಟಿನ ಕೇಂದ್ರ.

ಮಾರಮ್ಮ (ನಾ)= ಮಾರಿದೇವತೆ; ಸಾಂಕ್ರಾಮಿಕ ರೋಗಗಳ ಅಧಿದೇವತೆ.

ಮಾರವಾಡಿ (ನಾ)= ರಾಜಸ್ಥಾನದ ಮಾರ್ವಾಡ ಭಾಗದವನು; ಮಾರವಾಡದ ವ್ಯಾಪಾರಿ.

ಮಾರವಾಡಿ ಬಡ್ಡಿ (ನಾ)= ತೀರಲಾರದ ಬಡ್ಡಿ.

ಮಾರಾಜ (ನಾ)= ಮಹಾರಾಜ.

ಮಾರಾಟ (ನಾ)= ಹಣ ಪಡೆದು ವಸ್ತುವನ್ನು ಕೊಡುವುದು; ವಿಕ್ರಯ; ಬೇಚಿ.

ಮಾರಾಣಿ (ನಾ)= ಮಹಾರಾಣಿ; ಪಟ್ಟದರಸಿ.

ಮಾರಾಮಾರಿ (ನಾ) ಹಿಂ.= ಪರಸ್ಪರ ನಡೆವ ತೀವ್ರ ಹೊಡೆದಾಟ; ಹೊಡಪೆಟ್ಟು.

ಮಾರಾಯ (ನಾ)= ಮಹಾರಾಜ.

ಮಾರಾಯ್ತಿ (ನಾ)= ಮಹಾರಾಣಿ.

ಮಾರಾಷ್ಟ್ರ (ನಾ)= ಮಹಾರಾಷ್ಟ್ರ ರಾಜ್ಯ.

ಮಾರಿ (ನಾ)= ಮೋರೆ; ಮುಖ; ಚೆಹರೆ.

ಮಾರಿ ಇಲ್ಲ (ನು)= ಮೋರೆ ಇಲ್ಲ; ಭೇಟಿ ಇಲ್ಲ; ಕಂಡು ಬಂದಿಲ್ಲ .

ಮಾರಿ ಉಳ್ದಿಲ್ಲ (ನು)= ಮರ್ಯಾದೆ ಉಳಿದಿಲ್ಲ.

ಮಾರಿ ಕುಡು (ನು)= ಸುಳಿವು ಸಿಗು; ಮಾರ್ಗಸುಗಮಗೊಳಿಸು; ಅವಕಾಶ ಒದಗಿಸು; ಅನುಕೂಲ ಮಾಡಿಕೊಡು.

ಮಾರಿಗಲ್ಲು (ನಾ)= ಕಟ್ಟಡದ ಗೋಡೆಯ ಹೊರ ಮಗ್ಗುಲಿಗೆ ಬಳಸಲಾಗುವ ಕಲ್ಲು.

ಮಾರಿಗಪ್ಪಾ (ನಾ)= ಮುಖಕ್ಷೌರ; ದಾಡಿ ಬೋಳಿಸುವಿಕೆ.

ಮಾರಿತೋರ್ಸು (ನು)= ದರ್ಶನ ಕೊಡು; ಭೇಟಿಯಾಗು.

ಮಾರಿಧೂರಾಗು (ನು)= ದರ್ಶನ ಇಲ್ಲದಂತಾಗು.

ಮಾರಿಫತ್ತು (ಅ) ಉ.= ಮೂಲಕವಾಗಿ; ಮುಖಾಂತರವಾಗಿ.

ಮಾರಿಮಾರಿ ಹೊಡಿ (ಕ್ರಿ)= ಮುಖದ ಮೇಲೆ ಮತ್ತೆ ಮತ್ತೆ ಬಲ್ಲಂತೆ ಹೊಡೆ.

ಮಾರು (ಕ್ರಿ)= ಹಣಪಡೆದು ವಸ್ತುವನ್ನು ಕೊಡು; ವಿಕ್ರಯಿಸು; ಬೇಚಿಯನ್ನು ಮಾಡು.

ಮಾರು (ನಾ)= ಎರಡುಗಜಗಳ ಅಳತೆ; ನಾಲ್ಕು ಮೊಳಗಳ ಉದ್ದಳತೆ; ಎರಡೂ ಕೈಗಳನ್ನು ಭುಜದ ಮಟ್ಟದಲ್ಲಿ ಚಾಚಿದಾಗ ಉಂಟಾಗುವ ಉದ್ದಳತೆ.

ಮಾರುಗಾಲು, ಮಾರ್ಗಾಲು (ನಾ)= ದೂರದೂರಕೆ ಹಾಕುವ ಹೆಜ್ಜೆ.

ಮಾರುದ್ದ (ನಾ)= ಮಾರಳತೆವುಳ್ಳದ್ದು.

ಮಾರ್ಗದಶಾ (ನಾ)= ಕಾಲ್ಗುಣ; ಹಿಡಿದ ಹಾದಿ.

ಮಾರ್ತಾಂಡ ಮಾಣಿಕ ಪ್ರಭು (ನಾ)= ಹುಮನಾಬಾದ ತಾಲೂಕಿನ ಮಾಣಿಕನಗರದ ಮಾಣಿಕಪ್ರಭುಗಳ ಉತ್ತರಾಧಿಕಾರಿ.

ಮಾರ್ತಿ (ನಾ)= ಮಾರುತಿ; ವಾಯುಪುತ್ರ; ಹನೂಮಂತ.

ಮಾರ್ಮಾರು (ಅ)= ಉದ್ದುದ್ದಾದ; ಎತ್ತರೆತ್ತರ ವಾದ; ಅತಿ ಎತ್ತರವಾದ; ಅತಿ ಉದ್ದವಾದ; ಅನೇಕ ಮಾರು ಉದ್ದವಾದ (ಮಾರು-ನೋಡಿರಿ). (**ಪೀಣೆ ಹಾಡು:** ಆ ಗುಡ್ಡ ನೋಡೀ ಗುಡ್ಡ ನೋಡು। ಗುಡ್ಡ ದ್ಮ್ಯಾಲಾನಿನೋಡು। ಆನಿ ಮ್ಯಾಲಂಬಾರಿ ನೋಡು। ಅಂಬಾರಿದಾಗರಸ ನೋಡು। ಅರಸನ ಕೈದಾಗ ಕುಡಗಿಲು ನೋಡು। ಮಾರ್ಮಾರ್ಧುಲ್ಲು ಸೇರ್ಸೇರ್ವಾಲು॥).

ಮಾಲಕ (ನಾ) ಹಿಂ.= ಒಡೆಯ; ಯಜಮಾನ; ಮಾಲಿಕ.

ಮಾಲಕ್ಷ್ಮಿ (ನಾ)= ಮಹಾಲಕ್ಷ್ಮಿ.

ಮಾಲಾಮಾಲ್ಮಾಡು (ಕ್ರಿ) = ಸಂತೃಪ್ತಿಯಾಗುವಂತೆ ಕೊಡು; ಸಂತೃಪ್ತಗೊಳಿಸು.

ಮಾಲಿ (ನಾ) ಹಿಂ.= ಮಾಲಾ; ಮಾಲೆ; ತೋಟದ ಒಡೆಯ; ಬಾಗವಾನ.

ಮಾಲಿಕ (ನಾ) ಹಿಂ.= ಒಡೆಯ; ಮಾಲಕ; ಯಜಮಾನ.

ಮಾಲಿಗೌಡ (ನಾ)= ಗ್ರಾಮ ಮಟ್ಟದ ಕಂದಾಯಾಧಿಕಾರಿ.

ಮಾಲಿಷ್ (ನಾ) ಉ.= ಮಾಲೀಸು; ಉಜ್ಜುವಿಕೆ; ತಿಕ್ಕುವಿಕೆ; ಎಣ್ಣೆ ಹಚ್ಚಿ ತಲೆಯನ್ನು ತಿಕ್ಕುವಿಕೆ; ಮಸಾಜ.

ಮಾಲಿಷ್ ಮಾಡು (ಕ್ರಿ)= ಎಣ್ಣೆ ಹಚ್ಚಿ ತಲೆಯನ್ನು ಉಜ್ಜು; ವಿಶಿಷ್ಟ ಎಣ್ಣೆಬಳಿದು ಮೈಕೈಕಾಲುಗಳನ್ನು ಜೋರಾಗಿ ತಿಕ್ಕು; ಮಸಾಜ ಮಾಡು.

ಮಾಲು (ನಾ) ಹಿಂ.= ಸರಕು; ಸಾಮಗ್ರಿ; ಅನಾಜಿನ ರಾಶಿ; ಬಂಡಿ ಅಥವಾ ಲಾರಿಯಲ್ಲಿ ತುಂಬಿದ ವಸ್ತು.

ಮಾಲುಗಂಭ, ಮಾಲ್ಗಂಭ = ಮಲ್ಲಕಂಬ.

ಮಾಲು ಮಸಾಲಿ, ಮಾಲ್ಮಸಾಲಿ (ನಾ) ಉ.= ಮಸಾಲೆ ಸಾಮಾಗ್ರಿ.

ಮಾಲೋದಿ, ಮಾಲದಿ (ನಾ) ಉ.= ದಪ್ಪದಪ್ಪಾದ ಗೋಧಿ ರೊಟ್ಟಿಗಳನ್ನು ಬೆಲ್ಲದೊಂದಿಗೆ ಇಲ್ಲವೆ ಸಕ್ಕರೆಯೊಂದಿಗೆ ಕುಟ್ಟಿ ಯಾಲಕ್ಕಿ ಇತ್ಯಾದಿ ಬೆರೆಸಿ ತಯಾರಿಸುವ ಆಹಾರ; ಮುಸಲ್ಮಾನರ ಪೀರನ ನೈವೇದ್ಯದ ಆಹಾರ. ಅದಕ್ಕೆ ಮಲೊತಾ ಎಂದೂ ಅನ್ನುವರು.

ಮಾಲ್ಗಾರ (ನಾ)= ಮಾಲೆಕಾರ; ಮಾಲೆಕಟ್ಟುವವನು; ಹೂಗಾರ; ತೋಟಗಾರ.

ಮಾಲ್ಗುಜಾರಿ (ನಾ)ಉ.= ಭೂಗಂದಾಯ; ಕಂದಾಯ; ಬಲೂತಿ.

ಮಾಲ್ದಿ (ನಾ)= ಮಾಲೋದಿ, ಮಾಲದಿ (ನೋಡಿರಿ).

ಮಾಸಿ (ನಾ)= ಎಂಟುಗುಂಜಿಗಳ ಒಂದು ತೂಕ ಒಂದು ತೊಲಿ ತೂಕದ ೧/೧೨ ಭಾಗ, ಈಗ ೧/೧೦ ಭಾಗ.

ಮಾಸಿಸು (ಕ್ರಿ)= ಕಾಂತಿಗುಂದಿಸು; ಮಸುಕಾಗಿಸು; ಮಲಿನ ಗೊಳಿಸು; ಕೆಡಿಸು.

ಮಾಸು (ಕ್ರಿ)= ಮಲಿನವಾಗು; ಕೊಳೆಯಾಗು; ಹೊಲಸಾಗು.

ಮಾಸು (ನಾ)= ಮಗುವಿನ ಜನನದೊಂದಿಗೆ ಬರುವ ಮಾಂಸದ ಪೊರೆ; ಕರುವಿನ ಜನನದೊಂದಿಗೆ ಬರುವ ಮಾಂಸದ ಕವಚ.

ಮಾಸುಲ್ದಾರ (ನಾ) ಉ.= ಭೂಗಂದಾಯ ವಸೂಲಿಯ ಗ್ರಾಮೀಣ ನೌಕರ (ಒಗಟು: ಠಣ್ ಠಣ್ ಕುದುರಿ। ಠಾಣೇದಾರ। ಮಗಡಂಪಳ್ಳಿ। ಮಾಸುಲ್ದಾರ। ಟೊಂಕಾಸಣ್ಣಾ। ನಾಗರ ಬಣ್ಣಾ। ಹಿಡಿಲಾಕ ಹೋದುರ। ಕಡಿಲಾಕ ಬರ್ತದ=ಕಡಜುರಿ ಹುಳು, ಕಣಗಿಲೆ ಹುಳು).

ಮಾಸ್ತರ (ನಾ)= ಅಧ್ಯಾಪಕ; ಉಪಾಧ್ಯಾಯ; ಮೇಷ್ಟ್ರು; ಶಿಕ್ಷಕ.

ಮಾಸ್ತರಿಣಿ (ನಾ)= ಉಪಾಧ್ಯಾಯಿನಿ; ಅಧ್ಯಾಪಕಿ; ಮಾಸ್ತರ್ತಿ; ಮಾಸ್ತರನ ಹೆಂಡತಿ.

ಮಾಸ್ತರಿಣ್ಬಾಯಿ (ನಾ)= ಮಾಸ್ತರತಿ; ಮಾಸ್ತರನ ಹೆಂಡತಿ.

ಮಾಸ್ತರ್ಕಿ (ನಾ)= ಮಾಸ್ತರಿಕೆ; ಅಧ್ಯಾಪಕವೃತ್ತಿ; ಮಾಸ್ತರಗಿರಿ.

ಮಾಸ್ತರ್ಗಿರಿ (ನಾ)= ಮಾಸ್ತರ್ಕಿ (ನೋಡಿರಿ)

ಮಾಸ್ತರ್ತಿ (ನಾ)= ಮಾಸ್ತರನ ಹೆಂಡತಿ; ಮಾಸ್ತರಿಕೆ ಮಾಡುವ ಮಹಿಳೆ.

ಮಾಹಿತಿ (ನಾ)= ಅರಿವು; ತಿಳಿವಳಿಕೆ; ವಿವರಣೆ; ಸಮಾಚಾರ.

ಮಾಳ (ನಾ)= ಬಯಲು ಪ್ರದೇಶ; ಮೈದಾನ; ಹಾರ.

ಮಾಳಾ (ನಾ)= ಜಪಮಾಲೆ; ರುದ್ರಾಕ್ಷಿ ಮಾಲೆ; ಹೂವಿನ ಹಾರ.

ಮಾಳಾಹಾಯ್ಕೊ (ಕ್ರಿ)= ಮಾಲೆಧರಿಸು; ರುದ್ರಾಕ್ಷಿ ಮಾಲೆ ಧರಿಸು; ಕವಡೆ ಸರ ಧರಿಸು; ಭೂತ್ಯಾ ಆಗು; ದೇವಿಯ ಆರಾಧಕನಾಗು; ಪಂಢರಿನಾಥನ ಭಕ್ತನಾಗು.

ಮಾಳ್ಗಿ (ನಾ)= ಮಾಳಿಗೆ; ಮನೆ ಮೇಲಿನ ಮಣ್ಣಿನ ಹೊದಿಕೆ; ಗೋಡೆಗಳ ಮೇಲೆ ಹಾಕಿದ ಸಿಮೀಟು, ರೇತಿ ಮತ್ತು ಕಾಂಕ್ರೀಟಿನ ಹೇರಿಕೆ; ಆಶ್ರಯ.

ಮಾಳ್ಗಿಮನಿ (ನಾ)= ಮಾಳಿಗೆ ಮನೆ; ಗೋಡೆಗಳ ಮೇಲೆ ಮಣ್ಣಿನ ಹೇರಿಕೆಯುಳ್ಳಮನೆ; ಕಾಂಕ್ರೀಟ ಛತ್ತುಳ್ಳ ಮನೆ.

ಮಾಳ್ಗಿ ಹಬ್ಬ(ನಾ)= ಹೊಸದಾಗಿ ಮಾಳಿಗೆ ಹೇರಿಕೆ ಮಾಡಿದ ಮೇಲೆ ಮಾಡುವ ಸಮಾರಂಭ.

ಮಾಳ್ಚಾಪೂರ (ನಾ)= ಮಳಚಾಪೂರ (ನೋಡಿರಿ).

ಮಾಳ್ಸಾಕಾಂತ (ನಾ)= ಮೈಲಾರ ಮಲ್ಲಯ್ಯ; ಮಾಳ್ಚಾಪೂರ ಸಮೀಪದ ಮೈಲಾರ ಮಲ್ಲಯ್ಯ.

ಮಿಂಚಾ (ನಾ)= ಮಿಂಚುವ ವಸ್ತು; ಹೊಳೆಯುವ ಪದಾರ್ಥ; ಚಮ್ಕಿ.

ಮಿಂಚಾಗು (ಕ್ರಿ)= ಹೊಳೆಯುವಂತಾಗು; ಪ್ರಕಾಶಿಸು; ಲವಲವಿಕೆ ಹೊಂದು.

ಮಿಂಚು (ನಾ)= ಮೋಡಗಳ ಘರ್ಷಣೆಯಿಂದ ಉಂಟಾಗುವ ಬೆಳಕು; ಕನ್ನಡಿಯಿಂದ ಪ್ರತಿ ಫಲನ ಗೊಳ್ಳುವ ಬೆಳಕು; ಹೊಳಪು; ಕಾಂತಿ; ಮೆರುಗು; (ಕ್ರಿ)= ಹೊಳೆ; ಪ್ರಕಾಶಿಸು; ಕಾಂತಿದೋರು.

ಮಿಂಚುಳಾ (ನಾ)= ಮಳೆಗಾಲದ ರಾತ್ರಿಗಳಲ್ಲಿ ಕಂಡು ಬರುವ ಮಿಂಚುವ ಹುಳು; ಹೊನ್ನಿಹುಳು.

ಮಿಂಚೆಣ್ಣಿ (ನಾ)= ಮಿಂಚುವ ಎಣ್ಣೆ; ಕಂಚಿನ ಬಣ್ಣದ ಎಣ್ಣೆ; ಮದು ಮಕ್ಕಳು ಮೀಯಲು ಬಳಸುವ ಸೈಯೆಣ್ಣೆ; ಒಳ್ಳೆಣ್ಣೆ (ಮದುವೆ ಹಾಡು: ಕಂಚೆಣ್ಣಿ ಮಿಂಚೆಣ್ಣಿ। ಬಟ್ಟಲಾಗಾ ಒಳ್ಳೆಣ್ಣಿ। ಅಯ್ಯಪ್ಪ ಶೆಟ್ಟರ ಮಗಳಾ ಗವರಮ್ಮಗ। ಎಣ್ಣಿಹಚ್ಚಾ ಬನ್ನೀರೆ॥).

ಮಿಂಡ (ನಾ)= ಉಪಪತಿ; ಜಾರ; ಹಾದರಿಗ; ವೀರ; ಶೂರ; ಪ್ರಾಯದ (ಹಾಡು: ಮಿಂಡ ಜಂಗಮರನ್ನು ದಂಡಾಳು ಮಾಡ್ಯಾನ। ತಂಡತಂಡಾಗಿ ಕಳಿಸ್ಯಾನ ಬಸವಣ್ಣನವ್ವ).

ಮಿಂಡಕಿ (ನಾ)= ಮೆಂಡು; ಬಾಟಲಿಯ ಮುಚ್ಚಣಿಕೆ; ಬಾಟಲಿಯನ್ನು ಮುಚ್ಚುವ ಮರ ಅಥವಾ ಜೋಳದ ದಂಟಿನ ಸಾಧನ; ದಟ್ಟಾ; ಢಕ್ಕನ್; ಬೂಚು; ಮಿಂಡಗಾರಿಕೆ.

ಮಿಂಡಗಾರ (ನಾ)= ಪ್ರಿಯಕರ; ಯೌವನಸ್ಥ; ಜಾರ; ವಿಟ; ಹಾದರಿಗ; ಉಪಪತಿ; ಸೂಳೆಗಾರಿಕೆ ಮಾಡುವವನು.

ಮಿಂಡ ಜಂಗಮ (ನಾ)= ತರುಣ ಜಂಗಮ; ಅಯ್ಯ, ಸ್ವಾಮಿ (ಮಿಂಡ-ನೋಡಿರಿ).

ಮಿಂಡಾ (ನಾ)= ಮಿಂಡಕಿ (ನೋಡಿರಿ).

ಮಿಂಡಿ (ನಾ)= ಮಿಂಡೆ; ಯೌವನಸ್ಥೆ; ಪ್ರೇಯಸಿ; ಯುವತಿ; ಉಪಪತ್ನಿ; ಸೂಳೆ; ಮಿಂಡನನ್ನು ಇಟ್ಟುಕೊಂಡವಳು.

ಮಿಂಯ್ಯಾ (ನಾ) ಉ.= ಪತಿ; ಗಂಡ; ವಿಧಿವತ್ತಾಗಿ ಕೈ ಹಿಡಿದವನು. (ಗಾದೆ: ಮಿಯ್ಯಾಬೀಬೀರಾಜೀ ಆದ್ರ ಏನ್ಮಾಡ್ತಾ-ನ್ಖಾಜಿ?).

ಮಿಕಾ (ನಾ)= ಮಿಕ; ಕಾಡುಪ್ರಾಣಿ; ಹಿಂಸ್ರ ಪ್ರಾಣಿ; ಕಾಡು ಮೃಗ.

ಮಿಕ್ಕಿದ್ದು (ನಾ)= ಹೆಚ್ಚಾದದ್ದು; ಜಾಸ್ತಿಯಾದದ್ದು; ಉಳಿದದ್ದು; (ಗಾದೆ: ಉಂಡಿದ್ದೆಲ್ಲಾ ಆಸ್ತಿ, ಮಿಕ್ಕಿದ್ದೆಲ್ಲಾ ಜಾಸ್ತಿ).

ಮಿಕ್ಕು (ಕ್ರಿ)= ಮೀರು; ಉಳಿ; ಬಾಕಿಯಿರು; ಹೆಚ್ಚಾಗು (ಗಾದೆ: ಒಂದು ಎರಡೂ ಆಸ್ತಿ; ಮಿಕ್ಕಿದ್ದೆಲ್ಲಾ ಜಾಸ್ತಿ).

ಮಿಕ್ಸ್ (ನಾ) ಇಂ.= ಕಲಬೆರಕೆಯಾದದ್ದು; ಬೆರೆಸಿದ್ದು.

ಮಿಕ್ಸ್ ಮಾಡು (ಕ್ರಿ)= ಕಲಬೆರಕೆಗೊಳಿಸು; ಯಂತ್ರದಿಂದ ಅರೆ; ಕೂಡಿಸು; ಬೆರೆಸು.

ಮಿಕ್ಸ್‌ಚರ್ (ನಾ) ಇಂ.= ಬೆರಕೆಮಾಡಿದ್ದು; ಸೇವು, ಪಾಪ್ಡಿ, ಚೂಡಾಗಳ ಮಿಶ್ರಣ.

ಮಿಕ್ಸರ್ (ನಾ) ಇಂ.=ಮಿಕ್ಸಿ (ನೋಡಿರಿ).

ಮಿಕ್ಸಿ (ನಾ) ಇಂ.= ಬೆರಕೆ ಮಾಡುವ ಯಂತ್ರ; ಅರೆಯುವ ಯಂತ್ರ.

ಮಿಜಾಜು (ನಾ) ಉ.= ಪ್ರಕೃತಿ; ಆರೋಗ್ಯ.

ಮಿಜಾಜು ಕೆಡು (ಕ್ರಿ)= ಆರೋಗ್ಯ ಕೆಡು; ಅನಾರೋಗ್ಯ ಉಂಟಾಗು.

ಮಿಜಾಜು ಖರಾಬಾಗು (ಕ್ರಿ) ಉ.= ಆರೋಗ್ಯ ಕೆಡು; ಅನಾರೋಗ್ಯ ಉಂಟಾಗು.

ಮಿಟಾಸು (ಕ್ರಿ)= ಅಳಿಸು; ಕೆಡಿಸು; ಒರೆಸು; ಕಾಣದಂತೆ ಮಾಡು; ಜಗಳ ಬಿಡಿಸು (ಉದಾ: ಊರ ಪಂಚರೆಲ್ಲಾ ಕೂಡಿ, ನಮ್ಮಿಬ್ಬರ್ದು ಝಗಡಾ ಮಿಟಾಸಿ ಬಿಟ್ಟರು).

ಮಿಟಿ ಮಿಟಿ ಕಣ್ಣು ಬಿಡು (ನು)= ಅಸಹಾಯಕನಾಗಿ ನೋಡು.

ಮಿಟ್ಟಲ್ (ನಾ) ಇಂ.= ಮೆಟಲ್; ಕಲ್ಲು ಚೂರುಗಳ ರಾಶಿ.

ಮಿಟ್ಟಲ್ ರೋಡು (ನಾ) ಇಂ.= ಮೆಟಲು ರೋಡು; ಕಲ್ಲು ಚಿಂಪು ಹಾಸಿ ಗಟ್ಟಿಗೊಳಿಸಿದ ಮಾರ್ಗ.

ಮಿಟ್ಟಿ (ನಾ)= ಮಣ್ಣು; ಮಣ್ಣ ಮುದ್ದೆ; ಮಿಟ್ಟೆ (ವಚನ: ಕೂಡಲ ಸಂಗನ ಶರಣರ ಉದಾಸೀನವ ಮಾಡಿದಡೆ, ಕಲ್ಲು ತಾಗಿದ ಮಿಟ್ಟೆಯಂತಪ್ಪರಯ್ಯಾ).

ಮಿಠಾಯಿ (ನಾ)= ಒಂದು ಬಗೆಯ ಸಿಹಿ ತಿಂಡಿ.

ಮಿಠಾಯಿಗಾರ (ನಾ)= ಸಿಹಿ ತಿಂಡಿ ತಯಾರಿಸಿ ಮಾರುವವನು.

ಮಿಡಚಿ (ನಾ)= ಒಂದು ಬಗೆಯ ಹಾರುವ ಹುಳು; ಮಿಡಿತೆ; ಶಿವನ ಕುದುರೆ.

ಮಿಡಿ (ನಾ)= ಕಸುಗಾಯಿ; ಹೀಚು; ಚಿಕ್ಕಗಾತ್ರದ ಎಳೆ ಮಾವಿನ ಕಾಯಿ (ಶತಕ: ಮಿಡಿ ಪಣ್ಣಾಗದೆ ದೈವದೊಲುಮೆ ಇರಲು ಸೋಮೇಶ್ವರ ಶತಕ).

ಮಿಡಿಗಾಯಿ (ನಾ)= ಎಳಗಾಯಿ; ಇನ್ನೂ ಬಲಿಯದ ಕಾಯಿ.

ಮಿಡಿನಾಗರ (ನಾ)= ನಾಗರ ಹಾವಿನ ಮರಿ; ಮರಿನಾಗರ; ನಾಗ ಜಾತಿಯ ಸಣ್ಣ ಹಾವು; ಕಿಡಿಗೇಡಿ ಅಳಿಯ; ವಿಷಕಾರುವ ಅಳಿಯ.

ಮಿಡಿನಾಗರ ಹರಿಲಿ (ನು) = ವಿಷಕಾರಿಯಾದ ಹಾವು ಕಚ್ಚಿ ಮರಣ ಹೊಂದಲಿ (ಬೈಗುಳ).

ಮಿಡ್ಡಿ (ನಾ)= ಮಿಡಚಿ; ಮಿಡಿತೆ; ಶಿವನ ಕುದುರೆ.

ಮಿಡ್ಡಿ (ನಾ) ಇಂ.= ಮಹಿಳೆಯರ ಮೊಳಕಾಲ ಮೇಲಿನ ಉಡುಗೆ; ಅರ್ಧಮರ್ಧ ಉಡುಗೆ; ಅರೆಯುಡುಪು.

ಮಿಣಿ (ನಾ)= ಮಿಳಿ; ಹಲವು ಹಗ್ಗಳನ್ನು ಹೊಂದಿಸಿ ಹೊಸೆಯಲಾದ ದಪ್ಪ ಹಗ್ಗ; ತೊಗಲಿನ ಪಟ್ಟಿಗಳನ್ನು ಹೊಂದಿಸಿ ಹೊಸೆದು ಮಾಡಿದ ದಪ್ಪ ಹಗ್ಗ.

ಮಿಣುಕು (ಕ್ರಿ)= ಹೊಳೆ;ಪ್ರಕಾಶಿಸು; ಕ್ಷಣಬಿಟ್ಟುಕ್ಷಣ ಪ್ರಕಾಶಿಸು; ಮಿಂಚು, ಮಂದವಾಗಿ ಹೊಳೆ; (ವಿ.)= ಮಿಂಚುವ; ಪ್ರಕಾಶಿಸುವ; ಹೊಳೆಯುವ.

ಮಿಣುಕು ಧೀಪಾ (ನಾ)= ಮಂದ ಬೆಳಕು ಕೊಡುವ ದೀಪ; ಮಂಕಾದ ದೀಪ.

ಮಿಣದಿ (ನಾ)= ಮಿಂಡೆ; ಮಿಂಡ; ಮುಲಾಜುಳ್ಳವಳು/ನು.

ಮಿತಿ (ನಾ)= ಎಲ್ಲೆ; ಮೇರೆ; ತಿಥಿ; ವಾರ, ನಕ್ಷತ್ರ ಇತ್ಯಾದಿ (ಉದಾ: ಮಿತಿ ವೈಶಾಖ ಶುದ್ಧ ಅಕ್ಷಯ ತೃತೀಯಾ ಶ್ರೀ ಬಸವೇಶ್ವರ ಜಯಂತಿಯ ಶುಭದಿನದಂದು ಎಂಬಂತೆ).

ಮಿತಿಮೀರು (ಕ್ರಿ)= ಅತಿಯಾಗು; ಎಲ್ಲೆಯನ್ನು ಮೀರು; ತೋಲಾಗು; ಜಾಸ್ತಿಯಾಗು; ನಡಾವಳಿ ತಪ್ಪು.

ಮಿತಿ ಹಾಕು (ಕ್ರಿ)= ತಿಥಿ ಬರೆ; ತಾರೀಖು ಬರೆ; ಕಟ್ಟಪ್ಪಣೆ ವಿಧಿಸು.

ಮಿತ್ರ (ನಾ)= ಗೆಳೆಯ; ಸ್ನೇಹಿತ.

ಮಿತ್ರಿ (ನಾ)= ಮಿತ್ರೆ; ಗೆಳತಿ; ಸ್ನೇಹಿತೆ.

ಮಿತ್ರೇರು (ನಾ)= ಮಿತ್ರೆಯರು; ಗೆಳತಿಯುರು; ಸ್ನೇಹಿತೆಯರು; ಸುವಾಸಿನಿಯರು; ಸುಮಂಗಲೆಯರು (ಉದಾ: ಮೈನೆರ್ದಿದ ಪೋರೀಗಿ ಮಿತ್ರೇರೆಲ್ಲೋರು ಕೂಡಿ ಆರ್ತಿ ಬೆಳ್ಗಿದರು).

ಮಿದಿ (ಕ್ರಿ)= ನಾದು; ಅಮುಕು; ನುಣ್ಣಗಾಗಿಸು; ತೊಯ್ಸಿದ ಹಿಟ್ಟನ್ನು ನಾದಿ ಜಿಗಿಗೊಳಿಸು.

ಮಿದು (ವಿ.)= ಮೃದು; ಮೆತ್ತಗೆ.

ಮಿದುಮಾಡು (ಕ್ರಿ)= ಮೃದುಗೊಳಿಸು; ಮೆತ್ತಗಿಸು; ಹಿಟ್ಟನ್ನು ನಾದಿ ಜಿಗಿಗೊಳಿಸು.

ಮಿದುಳು (ನಾ)= ಮೆದುಳು.

ಮಿಷ್ಪು (ಕ್ರಿ)= ನಾದು; ನುಣ್ಣಗೆ ಮಾಡು.

ಮಿಯ್ಯಣ್ಣಿ (ನಾ)= ಮದುಮಕ್ಕಳು ಮೀಯಲು ಬಳಸುವ ಒಳ್ಳೆಣ್ಣೆ, ಕಂಚೆಣ್ಣೆ, ಮಿಂಚೆಣ್ಣೆ, ಇತ್ಯಾದಿ; ಮಿಂಚೆಣ್ಣೆ (ನೋಡಿರಿ).

ಮಿರಾಶಿ (ನಾ)= ಗ್ರಾಮ ಮಟ್ಟದ ಸೇವಕರಿಗೆ ಸ ರ ಕಾ ರ ದ ವ ರ ು ಕೊಟ್ಟ,ತಲತಲಾಂತರದಿಂದ ಬಂದ ಹೊಲ, ವಿಶೇಷ ಸಂಭಾವನೆ; ಮಿರಾಸು.

ಮಿರಿ ಮಿರಿ ಮಿಂಚು (ಕ್ರಿ)= ಥಳಥಳ ಹೊಳೆ; ಅತಿಯಾಗಿ ಪ್ರಕಾಶಿಸು.

ಮಿರುಗು (ಕ್ರಿ)= ಹೊಳೆ; ಪ್ರಕಾಶಿಸು; ಥಳಥಳ ಹೊಳೆ; ಥಳಥಳಿಸು; ಕಂಗೊಳಿಸು; ಶೋಭಿಸು (ನಾ)= ಕಾಂತಿ; ಹೊಳಪು; ಸೊಬಗು; ಮೆರುಗು.

ಮಿರ್ಗ, ಮಿರ್ಗು (ನಾ)= ಮೃಗ ನಕ್ಷತ್ರದ ಮಳೆ.

ಮಿರ್ಗು (ಕ್ರಿ)= ಮಿರುಗು (ನೋಡಿರಿ).

ಮಿರ್ಗುಮಿಂಚು (ಕ್ರಿ)= ಮೃಗಾ ನಕ್ಷತ್ರದ ಮಳೆ ಪ್ರವೇಶವಾಗು.

ಮಿರ್ಚಿ (ನಾ) ಹಿಂ.= ಮೆಣಸಿನ ಕಾಯಿ, ಅದರ ಪುಡಿ.

ಮಿರ್ಚಿಭಜಿ (ನಾ)= ಮೆಣಸಿನ ಕಾಯಿ ಸೇರಿಸಿ ಕರಿದು ಮಾಡಿದ ಕಡ್ಲೆ ಹಿಟ್ಟಿನ ತಿಂಡಿ.

ಮಿಲನ (ನಾ) ಹಿಂ.= ಭೇಟಿ; ಕೂಟ; ಆಲಿಂಗನ; ಒಂದಾಗುವಿಕೆ.

ಮಿಲಾಪ (ನಾ) ಹಿಂ.= ಮಿಲನ (ನೋಡಿರಿ).

ಮಿಲಾಯಿಸು (ಕ್ರಿ)= ಮಿಲಾಸು; ಬೆರೆಸು; ಸೇರಿಸು; ಒಂದು ಗೂಡಿಸು; ಜಗಳ ಬಗೆ ಹರೆಸು.

ಮಿಲಾವಟ (ನಾ)ಹಿಂ.= ಕಲಬೆರಕೆ.

ಮಿಲಾಸು (ಕ್ರಿ)= ಮಿಲಾಯಿಸು (ನೋಡಿರಿ).

ಮಿಲ್ಕಿಯತ್ತು (ನಾ) ಉ.= ಮಾಲೀಕತ್ವದ ವಸ್ತು; ಆಸ್ತಿ.

ಮಿಲ್ಲು (ನಾ)= ಗಿರಣಿ; ಬೃಹತ್ ಕಾರಖಾನೆ.

ಮಿಶ್ರಿ (ನಾ) ಹಿಂ.= ಕಲ್ಲು ಸಕ್ಕರೆ.

ಮಿಸಳ (ನಾ)= ಮಿಶ್ರಣ; ಕಲಬೆರಕೆಯ ಸೇವು, ಪಾಪಡಿ ಚೂಡಾ ಇತ್ಯಾದಿ.

ಮಿಸಾಲ (ನಾ)= ಉದಾಹರಣೆ.

ಮಿಸುಕಾಡು (ನಾ)= ಅಲುಗಾಡು; ಚಲಿಸು.

ಮಿಸುಕು (ಕ್ರಿ)= ಕದಲು; ಅಲುಗು; ಅಲ್ಲಾಡು; ಚಲಿಸು; ನಡೆದಾಡು.

ಮಿಷೆನ್ (ನಾ) ಇಂ.= ಯಂತ್ರ.

ಮಿಸ್ನರಿ (ನಾ)= ಯಾಂತ್ರಿಕಸಂಬಂಧ; ಧರ್ಮಪ್ರಚಾರದ ತಂಡ.

ಮಿಳಿ (ನಾ)= ಮಿಣಿ; ಹಲವು ಹಗ್ಗಗಳಿಂದ ಹೊಸೆದು ತಯಾರಿಸಿದ ದಪ್ಪ ಹಗ್ಗ; ಹಲವು ತೊಗಲಿನ ಪಟ್ಟಿಗಳಿಂದ ಹೊಸೆದು ತಯಾರಿಸಿದ ದಪ್ಪ ಹಗ್ಗ.

ಮಿಳ್ಳಿ (ನಾ)= ಸಣ್ಣಗಿಂಡಿ; ತುಪ್ಪದ ಗಿಂಡಿ; ನೀರು ಕುಡಿಯಲು ಬಳಸುವ ಲೋಹದ ಸಣ್ಣ ಪಾತ್ರೆ.

ಮೀ (ಕ್ರಿ)= (ಮದುಮಕ್ಕಳು) ಸ್ನಾನ ಮಾಡು.

ಮೀಂಜಾಳ್ಗಿ (ನಾ)= ಮೀನಿನ ಜಾಲ, ಬಲೆ; ಪಿಂಜಳ ಬಟ್ಟೆ.

ಮೀಠಾ (ನಾ)= ಸಿಹಿ; ಸಿಹಿ ತಿಂಡಿ.

ಮೀಠಾಮೀಠಾ (ದ್ವಿ) ಹಿಂ.= ಗಾಡ ಸ್ನೇಹ; ಸಿಹಿಸಿಹಿ.

ಮೀಠಾಮೀಠಾ ಆಗು (ಕ್ರಿ)= ರುಚಿರುಚಿಯಾಗು; ಅತಿಸ್ನೇಹ ಹೊಂದು.

ಮೀಣಗಾರ (ನಾ)= ಮೀನಗಾರ; ಮೀನ ಹಿಡಿದು ಮಾರಿ ಬದುಕುವವ; ಅಂಬಿಗ.

ಮೀಣಾ (ನಾ)= ಮೀಣ; ಮೀನ; ಮತ್ಸ್ಯ.

ಮೀಣಿನೆಣ್ಣಿ (ನಾ)= ಮೀನಿನ ಕೊಬ್ಬು.

ಮೀಣ್ಗಾರ (ನಾ)= ಮೀನಗಾರ; ಮೀನು ಹಿಡಿದು ಮಾರಿ ಬದುಕು ನಡೆಸುವವನು; ಅಂಬಿಗ.

ಮೀಣ್ಗಾರ್ತಿ (ನಾ)= ಮೀನಗಾರನ ಹೆಂಡತಿ; ಮೀನಗಾರ ಮಹಿಳೆ.

ಮೀಪಣ (ನಾ) ಮ.= ಅಹಂಕಾರ; ನಾನೆಂಬ ಅಹಮು.

ಮೀಯು (ಕ್ರಿ)= (ಮದುಮಕ್ಕಳು) ಸ್ನಾನ ಮಾಡು; ಮೀ.

ಮೀಯೆಣ್ಣಿ (ನಾ)= ಮೀಯುವ ಮುನ್ನ ಮೈಗೆ ಹಚ್ಚಿಕೊಳ್ಳುವ ಎಣ್ಣೆ; ಮದುಮಕ್ಕಳ ಮೀಹಕ್ಕೆ ಬಳಸುವ ಒಳ್ಳೆಣ್ಣೆ.

ಮೀರು (ಕ್ರಿ)= ಉಲ್ಲಂಘಿಸು; ದಾಟು; ಹೆಚ್ಚಾಗು; ಅತಿಯಾಗು; ಅತಿಕ್ರಮಿಸು.

ಮೀಸಲು (ನಾ)= ಮುಡಿಪು; ಕಾಯ್ದಿಟ್ಟದ್ದು; ದೇವರಿಗಾಗಿ ಕಾಯ್ದಿಟ್ಟದ್ದು; ಪ್ರತ್ಯೇಕ ಇಟ್ಟದ್ದು.

ಮೀಸಲ್ತುಪ್ಪ (ನಾ)= ದೇವರಿಗಾಗಿ ಪ್ರತ್ಯೇಕ ತೆಗೆದಿಟ್ಟ ತುಪ್ಪ.

ಮೀಸಿ (ನಾ)= ಮೀಸೆ; ಗಂಡಸರಿಗೆ ತುಟಿಯ ಮೇಲೆ ಬೆಳೆವ ಕೂದಲು (ಗಾದೆ: ಮೀಸಿ ಬಂದವ್ಗ ದೇಶಾ ಕಾಣ್ಸಾಲ!).

ಮೀಸಿಕಿತ್ತೆ (ಕ್ರಿ)= ಮೀಸೆ ಕಿತ್ತೇನು ಜೋಕೆ ಎಂಬ ಎಚ್ಚರಿಕೆ (ಬಯ್ಗುಳ).

ಮೀಸಿತಿರುವು (ಕ್ರಿ)= ಜಗಳಕ್ಕಾಗಿ ಎದುರಾಳಿಯನ್ನು ಪ್ರಚೋದಿಸು.

ಮೀಸಿ ಬಿಟ್ಟಗಂಡಸು (ನಾ)= ವೀರ; ಗಟ್ಟಿಗ; ಸಾಹಸಿಗ.

ಮೀಸಿ ಬಿಡು (ಕ್ರಿ)= ಮೀಸೆ ಬೆಳೆಸು; ಮೀಸೆ ಬೋಳಿಸದಂತಿರಿಸು; ಮೀಸೆ ಕಾಯ್ದಿರಿಸು.

ಮೀಸಿ ಬೋಳ್ಸು (ನು)= ಮೀಸೆ ಬೋಳಿಸಿ ಅವಮಾನಿಸು.

ಮೀಸೆ ಬೊಳ್ಕೊ (ಕ್ರಿ)= ಹೇಡಿಯಾಗು.

ಮೀಸಿ ಮಣ್ಣಾಗು (ನು)= ಸೋತು ಹೋಗು; ಅವಮಾನಿತನಾಗು; ಗರ್ವಭಂಗಾಗು.

ಮೀಸಿಮ್ಯಾಲ್ಕೈ ಹಾಕು (ನು)= ಸೊಕ್ಕು ತೋರಿಸು; ತನ್ನ ಸೊಕ್ಕನ್ನು ಪ್ರದರ್ಶಿಸು (ಹಾಡು: ಮೀಸಿಮ್ಯಾಲ್ಕೈನಾ ಹಾಕುತಿರಬೇಕ। ಹೆಂಡತಿ ಖಿಲು ಖಿಲು ನಗುತಿರಬೇಕ - ಹುಕೇರಿ ಬಾಳಪ್ಪ).

ಮೀಸಿ ಹುರಿ ಹೊಡಿ (ನು)= ಮೀಸಿ ತಿರುವು; ಜಗಳಕ್ಕಾಗಿ ಎದುರಾಳಿಯನ್ನು ಪ್ರಚೋದಿಸು.

ಮೀಸುಲು (ನಾ)= ಮೀಸಲು (ನೋಡಿರಿ).

ಮೀಸ್ಯಾಂವ (ನಾ)= ಮೀಸೆಯುಳ್ಳವನು.

ಮೀಸ್ಯಾಗನಾ ಹಾಟು (ನಾ)= ಹೆಂಗಸರ ಬೈಗುಳ.

ಮೀಸ್ಲ (ನಾ)= ಮೀಸಲು (ನೋಡಿರಿ).

ಮೀಸ್ಲಿಡು (ಕ್ರಿ)= ಕಾಯ್ದಿಡು; ಮುಡಿಪಾಗಿಡು.

ಮುಂಗಡಿ, ಮುಂಗುಡಿ (ನಾ)= ಕಳೆಕಿತ್ತಿ ತೆಗೆವ ಯೆಡೆ; ಮುಂಗ್ಡಿ.

ಮುಂಗಯ್, ಮುಂಗೈ (ನಾ)= ಕೈಯ ಮುಂಭಾಗ; ಕೈಯತುದಿ.

ಮುಂಗಲಿ, ಮುಂಗುಲಿ (ನಾ)= ಮುಂಗುಸಿ; ಸರ್ಪನ ವೈರಿ.

ಮುಂಗಾರಿ (ನಾ)= ಮುಂಗಾರು; ಮೊದಲ ಮಳೆಗಾಲ; ಮೊದಲಮಳೆ; ಮುಂಗಾರು ಬೆಳೆ.

ಮುಂಗಾಲ್, ಮುಂಗಾಲು (ನಾ)= ಕಾಲಿನ ಮುಂಭಾಗ; ಕಾಲಿನ ತುದಿಭಾಗ.

ಮುಂಗಾಲ್ಪುಟ್ಕಿ (ನಾ)= ಮುಂಗಾಲು ಬಲದ ಮೇಲೆ ಕುಣಿಯುವಿಕೆ; ತುದಿಗಾಲ

ಮೇಲೆ ಕುಣಿಯುವಿಕೆ; ಕಾತರತೆ ಪ್ರದರ್ಶಿಸುವಿಕೆ.

ಮುಂಗ್ಡಿ (ನಾ)= ಮುಂಗಡಿ; ಮುಂಗುಡಿ; ಕಳೆಕಿತ್ತಿ ತೆಗೆವ ಎಡೆ.

ಮುಂಗ್ಲಿ (ನಾ)= ಮುಂಗಲಿ; ಮುಂಗುಲಿ; ಮುಂಗುಸಿ; ಸರ್ಪನ ವೈರಿ.

ಮುಂಚ, ಮುಂಚೆ (ಅ)= ಮೊದಲು; ಮೊದಲಿಗೆ; (ಉ: ಮುಂಚ ಬಂದಾಂವ ಮುಂದೇ ಇರ್ತಾನ).

ಮುಂಚಾಕ (ಅ)= ಮೊದಲಿಗೆ; ಮೊದಲೇ.

ಮುಂಚು (ಅ)= ಮುಂಚಿನದು; ಮುಂದಿನದು.

ಮುಂಜಾನಾತ (ನಾ)= ಮುಂಜಾನೆ ಹೊತ್ತು; ಮುಂಜಾನೆ.

ಮುಂಜಿ (ನಾ)= ಯಜ್ಞೋಪವಿತ ಧಾರಣ ಕ್ರಿಯೆ ಮತ್ತು ಅದರ ಅಂಗವಾಗಿ ನಡೆಸುವ ಸಮಾರಂಭ; ಉಪನಯನ.

ಮುಂಜಿ ಮಾಡು (ಕ್ರಿ)= ಜನಿವಾರ ಧಾರಣ ಕ್ರಿಯೆ ಮಾಡು, ಮಾಡಿಸು.

ಮುಂಜೇಳಿ, ಮುಂಜಾಳಿ (ನಾ)= ಮುಂಜಾನೆ; ಮುಂಜಾಳೆ; ಮುಂಜಾವಿನ ವೇಳೆ (ಗಾದೆ: ಮುಂಜೇಳಿ ಬಂದ ಮಳಿ, ಛಂಜಿಗಿ ಬಂದ ನೆಂಟ; ಝುಲ್ದಿ ಹೋಗಾಲ!).

ಮುಂಝೋಲಿ (ನಾ)= ಮುಂದಕ್ಕೆ ವಾಲುವಿಕೆ; ಮುಂಭಾಗದಲ್ಲಿ ಬಾಗುವಿಕೆ; ಮುಂಭಾಗಕ್ಕೆ ತೂಕ ತಪ್ಪುವಿಕೆ.

ಮುಂಝೋಲಿಗಿ ಬಂದಾನ (ನು)= ಕೂಡು ಬೀಳುವಂತೆ ಆಗಿದ್ದಾನೆ.

ಮುಂಡಾ ಮೋಚು (ಕ್ರಿ)= ಹೆಣಕ್ಕಿಡು; ಹೆಣಕ್ಕೆ ಸಲ್ಲಿಸು; ಮನಸಿಲ್ಲದ ಮನಸ್ಸಿನಿಂದ ಕೊಡು; ವಂಚಿಸಿದವನಿಗೆ ಹಣ ನೀಡು; ಬೋಳಿಸು (ಬೈಗುಳ).

ಮುಂಡಾರಿ (ನಾ)= ಗೋಡೆ ಮೇಲಿನ ಕುಂಬಿ.

ಮುಂಡಾರಿ ಕಟ್ಟು (ಕ್ರಿ)= ಗೋಡೆ ಮೇಲೆ ಕುಂಬಿ ಏರಿಸು.

ಮುಂಡಾಸಿ (ನಾ)= ತಲೆಯುಡಿಗೆ; ರುಮಾಲು.

ಮುಂಡಾಸಿ ಕಟ್ಗೊ (ಕ್ರಿ)= ರುಮಾಲು ತಲೆಗೆ ಸುತ್ತಿಕೊ.

ಮುಂಡಾಸಿ ಕಡಿಲಿ (ಕ್ರಿ)= ರುಮಾಲು ಅಥವಾ ತಲೆಯುಡುಪು ಹರಿಯಲಿ; ಸತ್ತು ಹೋದವನ ಮುಂಡಾಸು ಹರಿದು ಉತ್ತರಾಧಿಕಾರಿಯ ಉಡಿಯಲ್ಲಿಡಲಿ (ಬೈಗುಳ).

ಮುಂಡಾಸು (ಕ್ರಿ)= ಬೋಳಿಸು; ಕ್ಷೌರ ಮಾಡು. **(ನಾ)=** ಮುಂಡಾಸಿ

ಮುಂಡೇಗಂಡ (ನಾ)= ಮುಂಡೆ ಅಥವಾ ವಿಧವೆಯನ್ನು ಮದುವೆಯಾದವನು.

ಮುಂಡೇದು (ನಾ)= ಗಂಡ ಸತ್ತವಳ ಅನೈತಿಕ ಸಂತಾನ. (ಬೈಗುಳ)

ಮುಂಡೇ ಮಗ, ಮುಂಡ್ಯಾ ಮಗ (ನಾ)= ವಿಧವೆಯ ಅನೈತಿಕ ಸಂತಾನ (ಗಾದೆ: ಮುಂಡೇಮಗನ ಮದ್ಯಾಗ, ಉಂಡ್ಹೋದವ್ನೆ ಜಾಣ).

ಮುಂಡ್ಯಾಹೊಡಿ (ಕ್ರಿ)= ರಟ್ಟೆ; ತೊಡೆಗಳನ್ನು ತಟ್ಟಿ ಎದುರಾಳಿಯನ್ನು ಕುಸ್ತಿಗೆ ಆಹ್ವಾನಿಸು.

ಮುಂದ (ಅ)= ಮುಂದೆ; ಮುನ್ನ; ಮೊದಲಿಗೆ; ಮುಂದುಗಡೆ.

ಮುಂದಾಕ (ಅ)= ಮುಂದಕ್ಕೆ (ಹಾಡು: ಯಾತಗಿರಿ ಜಾತರಿಗಿ ಹೋಗಾಮ್ನಡಿ। ನಾವಿಬ್ರೋರ್ಕೂಡಿ। ಸಾಲಿ ಬರ್ಸಿ ಬರುತಿನಿ ಮಧ್ಯಾಣ್ಮಾಡಿ। ಜರ ಮುಂದಾಕ ನಡಿ।।).

ಮುಂದಾಗು (ಕ್ರಿ)= ಎಲ್ಲಕ್ಕೂ ಮೊದಲಲ್ಲಿರು; ಮುಖಂಡನಾಗು; ಮುಂಬೆಕಾರನಾಗು.

ಮುಂದಾಗೆ (ನಾ)= ಮುಂಚೆಯೇ; ಮೊದಲೇ.

ಮುಂದಿಡು (ಕ್ರಿ)= ಎದುರಿಗೆ ಇರಿಸು; ಎದುರಾಗಿ ಒಡ್ಡು; ಮುಂದೆತರು.

ಮುಂದು (ಅ)= ಮುಂಭಾಗ; ಮುಂದುಗಡೆ; ಮೊದಲು.

ಮುಂದುಕಾಗು (ಕ್ರಿ)= ಮುಂದೆ ನಡೆ; ಪ್ರಗತಿಯಾಗು; ಅಭಿವೃದ್ಧಿ ಹೊಂದು.

ಮುಂದು ಬಾ (ಕ್ರಿ)= ಏಳಿಗೆ ಹೊಂದು; ಅಭಿವೃದ್ಧಿ ಹೊಂದು; ಮುಂದುವರಿ.

ಮುಂಬು (ನಾ)= ಹೊಲದಲ್ಲಿಯ ಕಳೆತೆಗೆವ, ಕೊಯ್ಯುವ ಬೆಳೆಯ ಸಾಲು; ಮುಂಭಾಗ; ಚೂಣಿ.

ಮುಂಬು ಕಡಿಗ್ಹಚ್ಚು (ಕ್ರಿ)= ಬೆಳೆಸಾಲಿನ ಕಳೆಯನ್ನು ಪ್ರಾರಂಭದಿಂದ ಕೊನೆಯವರೆಗೆ ತೆಗೆದುಹಾಕು.

ಮುಂಬು ಹಿಡಿ (ಕ್ರಿ)= ಸಾಲು ಹತ್ತು; ಸಾಲಿನಲ್ಲಿ ಕೆಲಸಕ್ಕೆ ತೊಡಗು.

ಮುಂಬು ಮುಗುಸು (ಕ್ರಿ)= ಹೊಲದಲ್ಲಿಯ ಬೆಳೆಯಸಾಲಿನ ಕೆಲಸವನ್ನು ಮುಗಿಸು.

ಮುಂಬೆಕಾರ (ನಾ)= ಮುಖಂಡ; ಮುಂದಾಳು (ಉದಾ: ನಮ್ಮೂರಿನ್ಮುಂಬೆಕಾರ ಅಂವ್ನೇ ಹನಾ).

ಮುಂಬೆಕಾರನಾಗು (ಕ್ರಿ)= ಮುಖಂಡನಾಗು; ಮುಂದಾಳಾಗು.

ಮುಂಬೈ (ನಾ)= ಮಹಾರಾಷ್ಟ್ರದ ರಾಜಧಾನಿ; ಮೊದಲಿನ ಬಂಬೈ.

ಮುಕ, ಮುಕಾ (ನಾ)= ಮುಖ; ಮೋರೆ; ಮಕಾ.

ಮುಕಾಟ್ಲೆ (ಅ)= ಮೌನವಾಗಿ; ಮಾತನಾಡದೆ.

ಮುಕಾಮು (ನಾ)= ವಾಸ; ಠಿಕಾಣಿ.

ಮುಕಾರತಿ (ನಾ)= ಭಿಡೆ; ದಾಕ್ಷಿಣ್ಯ.

ಮುಕಾರೇರು (ನಾ)= ನಿಜಾಮರಾಜ್ಯಾಡಳಿತ ಕಾಲದಲ್ಲಿ ಇರಾನಿ ಜನರಿಗೆ ಮುಕಾರೇರು ಎನ್ನುತ್ತಿದ್ದರು.

ಮುಕಾರ್ಯಾ (ನಾ)= ಇರಾನಿ; ಇರಾನ ದೇಶದವನು.

ಮುಕುಡಿ (ನಾ)= ಮುಕ್ಕಡ ಮೂಗಿನವಳು (ಪ್ರಾಸ: ಕುಂಬಾರ ಕುಕುಡಿ। ನಿಮ್ಮಾಯಿ ಮುಕುಡಿ).

ಮುಕುಡ್ಯಾ (ನಾ)= ಮುಕ್ಕಡ ಮೂಗಿನವನು.

ಮುಕ್ಕಾ (ನಾ)= ಮುದ್ದು; ಚುಂಬನ.

ಮುಕ್ಕಾ (ನಾ)ಹಿಂ.= ಮೂಕ; ಮಾತಾಡಲು ಬಾರದವನು.

ಮುಕ್ಕಾ ಕುಡು (ಕ್ರಿ)= ಚುಂಬಿಸು; ಮುದ್ದುಕೊಡು; ಮುದ್ದಿಸು.

ಮುಕ್ಕಾಗು (ಕ್ರಿ)= ಮಡಿಕೆಯ ಅಂಚು ಮುರಿದು ಹೋಗು; ಗಡಿಗೆಗೆ ಊನವುಂಟಾಗು.

ಮುಕ್ಕಾಮು (ನಾ)= ತಳ ಊರುವಿಕೆ; ಬೀಡು ಬಿಡುವಿಕೆ; ವಾಸ ಮಾಡುವಿಕೆ; ವಾಸ; ವಿಳಾಸ.

ಮುಕ್ಕು (ನಾ)= ತುಸು; ಸ್ವಲ್ಪ; ಮಡಿಕೆಯ ಅಂಚು ತುಸು ಮುರಿದದ್ದು; ಮುಕ್ಕಾದದ್ದು; ಮುಷ್ಟಿಯಲ್ಲಿ ಹಿಡಿಸುವಷ್ಟು ಕಾಳು, ಸಕ್ಕರೆ, ನೀರು, ಬೀಸುಕಲ್ಲಿಗೆ ಹಾಕುವ ಮುಷ್ಟಿ ತುಂಬ ಕಾಳು (ಹಾಡು: ಕಪ್ಪೀ ಕಾಲಿಗಿ। ಮುಕ್ಕು ಮುಕ್ಕು ನೀರಿಲ್ಲ। ಬಾರೋ ಬಾರೋ। ಮಳಿರಾಜಾ ಮಳಿರಾಜಾ).

ಮುಕ್ಕುಡ (ವಿ)= ಮುಕ್ಕಡ; ಮೂಗಿಲ್ಲದ; ತಗ್ಗಿದ ಮೂಗಿನ. (ಹಾಡು : ಮುಕ್ಕುಡ ಮೂಗಿನ । ಮಗಳೆಂದು ಮಾವಯ್ಯ । ತಕ್ಕಡಿ ಹೊನ್ನು ಸುರುವ್ಯಾನ ।। -ದೇಶಾಂಶ ಹುಡಗಿ)

ಮುಕ್ಕುಳ್ಸು (ಕ್ರಿ)= ಬಾಯಿಯಲ್ಲಿ ನೀರನ್ನು ನಾಲ್ಕೂ ಕಡೆ ಸುತ್ತಾಡಿಸು.

ಮುಕ್ಡ (ವಿ)= ಮುಕ್ಕಡ; ಮೂಗಿಲ್ಲದ; ತಗ್ಗಿದ ಮೂಗು. (ಗಾದೆ: ಮುಕ್ಡಮೂಗಿಗಿ ತಕ್ಡಿ ಭಂಗಾರ).

ಮುಕ್ಡಿ (ನಾ)= ಮೂಗಿಲ್ಲದವಳು; ತಗ್ಗಿದ ಮೂಗಿನವಳು.

ಮುಕ್ಡಾ (ನಾ)= ಮೂಗಿಲ್ಲದವನು; ತಗ್ಗಿದ ಮೂಗಿನವನು.

ಮುಕ್ತಾಗು (ಕ್ರಿ)= ಬಿಡುಗಡೆ ಹೊಂದು.

ಮುಕ್ತಾಯಕ್ಕ (ನಾ)= ಹನ್ನೆರಡನೇ ಶತಮಾನದ ಒಬ್ಬ ಶರಣೆ; ಶರಣ ಅಜಗಣ್ಣನ ತಂಗಿ.

ಮುಕ್ತಿ (ನಾ)= ಬಿಡುಗಡೆ; ಮೋಕ್ಷ (ತತ್ವಪದ: ಗುರುವಿನ ಮುಂದೆ ಪಿಡಿ ಪದರಾ। ಮುಕ್ತಿ ದೊರೆಯುತದ ಪೂರಾ).

ಮುಕ್ಮುಕು (ದ್ವಿ)= ತುಸು ಮಾತ್ರವೂ; ತುಸುವೂ (ಹಾಡು: ಕಪ್ಪಿ ಕಾಲಿಗಿ ಮುಕ್ಮುಕು ನೀರಿಲ್ಲ ಬಾರೋ ಬಾರೋ ಮಳೆರಾಯಾ ಮಳೆರಾಯಾ।).

ಮುಕ್ರಿ (ನಾ)= ಮಡಿ; ಬೆಳೆಯ ಸುತ್ತ ಮುತ್ತ ನೀರು ನಿಲ್ಲುವಂತೆ ಮಾಡಿದ ಸಾಲುತಗ್ಗು.

ಮುಕ್ರಿ ಕೊಯ್ಯಿ (ಕ್ರಿ)= ನೀರು ನಿಲ್ಲುವಂತೆ ಹೊಲದಲ್ಲಿ ಮಡಿಗಳನ್ನು ಸಿದ್ಧಗೊಳಿಸು; ಚಿಕ್ಕಚಿಕ್ಕ ಏರಿಗಳನ್ನು ಸಾಲಾಗಿ, ನೀರು ನಿಲ್ಲುವಂತೆ ಸಿದ್ಧಗೊಳಿಸು.

ಮುಖಂಡ (।ನಾ)= ಮುಂದಾಳು; ನಾಯಕ.

ಮುಖರರ (ನಾ)ಉ।= ನೇಮಕ.

ಮುಖರರ ಮಾಡು (ಕ್ರಿ) = ನೇಮಕ ಮಾಡು.

ಮುಖಾ (ನಾ)= ಮುಖ; ಬಾಯಿ; ಮೊಗ; ಮೋರೆ.

ಮುಖಾಬ್ಲಾ (ನಾ) ಉ.= ಹೋರಾಟ; ಭೇಟಿ; ಸಂದರ್ಶನ.

ಮುಖಾಬ್ಲಾ ಮಾಡು (ಕ್ರಿ)= ಹೋರಾಟಮಾಡು; ಭೇಟಿ ಮಾಡು.

ಮುಖಾಮು (ನಾ) ಉ.= ವಾಸ; ಇರುವಿಕೆ; ಮುಕ್ಕಾಮು.

ಮುಖ್ತೆಸರ (ವಿ.) ಉ.= ಸಂಕ್ಷಿಪ್ತ; ಸಣ್ಣದಾಗಿ ಮಾಡಿದ; ಸಾರಾಂಶ; ಒಟ್ಟುಗೂಡಿಸಿದ.

ಮುಖ್ತೆಸರದಾಗ ಹೇಳು (ಕ್ರಿ)= ಸಂಕ್ಷಿಪ್ತದಲ್ಲಿ ತಿಳಿಸು; ಸಾರಾಂಶ ತಿಳಿಸು.

ಮುಖ್ಯ (ವಿ.)= ಮೊದಲನೆಯ; ಶ್ರೇಷ್ಠ.

ಮುಖ್ಯಮಂತ್ರಿ (ನಾ)= ರಾಜ್ಯದ ಹಿರಿಯ ಮಂತ್ರಿ.

ಮುಗಿ (ಕ್ರಿ)= ತೀರು; ಬರಿದಾಗು; ಖಾಲಿಯಾಗು; ಮುಕ್ತಾಯವಾಗು.

ಮುಗಿನಾಗೆ ನಗು (ಕ್ರಿ)= ಮೂಗಿನಲ್ಲೇ ನಗೆ ಸೂಸು; ಮುಗುಳ್ನಗೆ ದೋರು.

ಮುಗುದ (ನಾ)= ಮುಗ್ಧ; ಮೌನವಾಗಿದ್ದು ಎಲ್ಲವನ್ನು ಸಾಧಿಸುವವನು (ಬೈಗುಳ).

ಮುಗುದಿ (ನಾ)= ಮುಗುದೆ; ಮುಗ್ಧೆ; ಮೌನವಾಗಿದ್ದು ಎಲ್ಲವನ್ನು ಸಾಧಿಸುವವಳು (ಬೈಗುಳ).

ಮುಗುದ್ಯಾ (ನಾ)= ಮುಗುದ; ಮುಗ್ಧ; ಮೌನವಾಗಿದ್ದು ಎಲ್ಲವನ್ನು ಸಾಧಿಸುವವನು (ಬೈಗುಳ).

ಮುಗುರಾಣಿ (ನಾ)= ಮೂಗುರಾಣಿ; ಮೂಗುದಾಣ.

ಮುಗುಸು (ಕ್ರಿ)= ಮುಗಿಸು; ಬರಿದಾಗಿಸು; ಕೊನೆಗೊಳಿಸು; ಹಾಳು ಮಾಡು; ನಾಶಮಾಡು; ಪ್ರಸಾದ ಮುಗಿಸು.

ಮುಗುಳಿ (ನಾ)= ಹುಡಗಿ ಗ್ರಾಮದ ಪ್ರಸಿದ್ಧ ಶರಣ, ಚಿತ್ರ ಕಲಾವಿದ ಬಸವ ರಾಜ ಶರಣಪ್ಪ ಮುಗುಳಿ; ಕಲಬುರ್ಗಿ ಜಿಲ್ಲೆಯ ಒಂದು ಹಳ್ಳಿ.

ಮುಗುಳು (ನಾ)= ಮೊಗ್ಗು; ಕುಡಿ; ಬಳ್ಳಿಯ ತುದಿ.

ಮುಗುಳ್ಬಾಚು (ಕ್ರಿ)= ಮುಂದುವರಿ; ಬಳ್ಳಿ ಮುಂದಕ್ಕೆ ಬೆಳೆ; ವಂಶ ಅಥವಾ ಸಂತಾನ ವೃದ್ಧಿಯಾಗು.

ಮುಗುಳ್ನಗು ತೋರು (ಕ್ರಿ)= ಮಂದಹಾಸ ಬೀರು; ಮುಗುಳ್ನಗೆ. ತೋರು (ನಾ) ಮಂದಹಾಸ; ಮುಗುಳ್ನಗೆ.

ಮುಗ್ಗು (ಕ್ರಿ)= ದೀರ್ಘಾವಧಿಯ ಕಾಳಿನಲ್ಲಿ ದುರ್ಗಂಧ ಹುಟ್ಟು.

ಮುಗ್ಗುಲ್ಗೇಡಿ (ನಾ)= ಮೈಗಳ್ಳ; ಅಂಗಚೋರ.

ಮುಗ್ತಿ (ನಾ)= ಮುಕುತಿ; ಮುಕ್ತಿ; ಬಿಡುಗಡೆ.

ಮುಗ್ಸು (ಕ್ರಿ)= ಮುಗಿಸು; ಮುಕ್ತಾಯಗೊಳಿಸು.

ಮುಚಳಂಬಿ (ನಾ)= ಬಸವಕಲ್ಯಾಣ ತಾಲೂಕಿನ ಒಂದು ಹಳ್ಳಿ; ರಜಾಕಾರರಿಂದ ಅತ್ಯಾಚಾರಕ್ಕೊಳಗಾದ ಊರು; ಸಾಹಿತಿಗಳಾದ ಡಾ. ಕಾಶೀನಾಥ ಅಂಬಲ್ಗೆ ಮತ್ತು ಪ್ರೊ. ಆರ್. ಕೆ. ಹುಡುಗಿ (ರಾಹು) ಅವರ ಹುಟ್ಟೂರು ಲಾವಣಿಕಾರ ರಾಮಲಿಂಗಪ್ಪ ಅಂಬಲ್ಗೆಯವರ ಹುಟ್ಟೂರು.

ಮುಚ್ಚಾಳ (ನಾ)= ಮುಚ್ಚಳ; ಮಣ್ಣಿನ ತಟ್ಟೆ.

ಮುಚ್ಚು (ಕ್ರಿ)= ಮರೆಮಾಡು; ಹೊದಿಸು; ಬಾಗಿಲು ಹಾಕು; ಬಂದ್ ಮಾಡು.

ಮುಚ್ಚುಣ್ಕಿ (ನಾ)= ಮುಚ್ಚಣಿಕೆ; ಮುಚ್ಚಳ.

ಮುಚ್ಚುಮರಿ (ನಾ)= ಮುಚ್ಚು ಮರೆ; ಗುಟ್ಟು; ರಹಸ್ಯ.

ಮುಜಾವರ (ನಾ)ಉ.= ಮುಸ್ಲಿಂ ಪೂಜಾರಿ; ದರ್ಗಾದಲ್ಲಿ ಫಾತೆಹ ಕೊಡುವ ಪೂಜೆ ನೆರವೇರಿಸುವ ಕಾಯಕದವನು; ಅಷ್ಟೂರಿನ ಅಲ್ಲಮ ಪ್ರಭು ಅಹ್ಮ ಷಾವಲಿ ಬಹಮನಿಯ ದರಗಾಹದ ಉಸ್ತುವಾರಿ ನೋಡಿಕೊಳ್ಳಲು ಲಿಂಗಾಯತ ಮುಜಾವರ ಹಾಗೂ ಮುಸ್ಲಿಂ ಮುಜಾವಾರ ಇಬ್ಬರೂ ಇದ್ದಾರೆ.

ಮುಟ್ಗಿ (ನಾ)= ಮುಟ್ಟಿಗೆ; ಮುಷ್ಟಿಕೆ.

ಮುಟ್ಗಿಕಡುಬು (ನಾ)= ಮಣ್ಣೆತ್ತಿನ ಅಮಾವಾಸ್ಯದ ದಿನ ಕಡ್ಲೆ ಹಿಟ್ಟು, ಜೋಳದ ಹಿಟ್ಟು ಖಾರ ಉಪ್ಪು ಇತ್ಯಾದಿ ನೀರಿನೊಂದಿಗೆ ಬೆಳೆಸಿ, ಮುಟ್ಟಿಗೆಯಲ್ಲಿ ಅದುಮಿ ತಯಾರಿಸಿದ ಕಡುಬು.

ಮುಟ್ಗಿಪಲ್ಯ (ನಾ)= ಮುಟ್ಗಿ ಕಡುಬಿನಲ್ಲಿ ಬೆರೆಸಲಾಗುವ ಕಾಡು ತರಕಾರಿ ಸೊಪ್ಪು.

ಮುಟ್ಗಿ ಮಾಡು (ಕ್ರಿ)= ಮುಷ್ಟಿಯಲ್ಲಿ ಮುದ್ದೆಮಾಡು.

ಮುಟ್ಟಾಗು (ಕ್ರಿ)= ರಜಸ್ವಲೆಯಾಗು; ಮಾಸಿಕ ರಜೋದರ್ಶನವಾಗು; ಹೊರಗಾಗು; ಸೆರಗಾಗು; ಹೊರಗೆ ಕೂಡು; ಬಹಿಷ್ಟೆಯಾಗು (ಗಾದೆ: ಆನಿ ಮುಟ್ಟಾದ್ರ ಅರ್ಬಿಪತ್ತಿ ತುರ್ಕಿದ್ರಂತ!).

ಮುಟ್ಟಾಟ (ನಾ)= ಒಬ್ಬರಿಗೊಬ್ಬರು ಮುಟ್ಟಿ ಆಡುವ ಆಟ.

ಮುಟ್ಟಿ (ನಾ)= ಮುಷ್ಟಿ; ಮುಚ್ಚಿದ ಅಂಗೈ; ಹಿಡಿ; ಹಿಡಿಕೆ.

ಮುಟ್ಟಿದರ ಮೂರ್ಸೇಣಿ ತೊಗೊಮಾವ/ಕಿ (ನಾ)= ಕೆಣಕಿದವರಿಗೆ ಸುಮ್ಮನೆ ಬಿಡಲಾರದವನು (ಳು.).

ಮುಟ್ಟಿಲಿ ಮೂರು (ನಾ)= ಕೇವಲ ಮೂರು; ಮೂರೇ ಮೂರು; ಮೂರು ಮಾತ್ರ.

ಮುಟ್ಟು (ಕ್ರಿ)= ಸೇರು; ತಲುಪು; ಹತ್ತಿರಬರು; ಸ್ಪರ್ಶಿಸು; ಕೈ ಹಚ್ಚು.

ಮುಟ್ಟು (ನಾ)= ಸ್ತ್ರೀಯ ಮಾಸಿಕ ರಜೋದರ್ಶನ.

ಮುಟ್ಟುವರ್ಾಗಾ (ನಾ)= ಮುರುಟುರೋಗ; ಮೈಲಿರೋಗ; ದೇಹದ ಅಂಗಾಂಗಗಳು ಸೊಟ್ಟಾಗುವ ರೋಗ.

ಮುಡಬಿ (ನಾ)= ಪ್ರಸಿದ್ಧ ಶಾಸಕ ಗೋಪಾಳರಾವ ಪಾಟೀಲ ಮತ್ತು ಮಾಜಿ ಸರಪಂಚ ಮಲ್ಲಾರಡ್ಡಿ ಪಾಟೀಲರ ಹುಟ್ಟೂರು. ವಲಯ ಕೇಂದ್ರದ ಊರು. ಐತಿಹಾಸಿಕ ಪ್ರಾಚೀನ ಊರು.

ಮುಡಿ (ಕ್ರಿ)= ಧರಿಸು; ಸೂಡು; ಮುಡಿಯಲ್ಲಿರಿಸಿಕೊ.

ಮುಡಿ (ನಾ)= ತಲೆಗೂದಲು; ನಾರಿನಗಂಟು; ತುರುಬು.

ಮುಡಿಚೆಟ್ಟು (ನಾ)= ಮೈಲಿಗೆ; ಮುಟ್ಟಿದರೆ ಮೈಲಿಗೆ ಯಾಯಿತೆಂಬ ಭಾವನೆ; ಮುಟ್ಟಿ ತಟ್ಟಿ ಎಂಬ ಅಸಹ್ಯ ರೂಢಿಯ ಆಚರಣೆ: (ಕುಟ್ಟುವ ಹಾಡು: ಜಾತಿಸೂತಕವಿಲ್ಲ। ಮುಟ್ಟು ಮೈಲಿಗಿಯಿಲ್ಲ। ಮುಡಿಚೆಟ್ಟು ಮೊದಲೇ। ಇಲ್ಲೆಂದ ಬಸವಣ್ಣನವ್ವ। –ಮಹಾಗಾಂವ ಶರಣಕವಿ).

ಮುಡುಪು (ನಾ)= ಮುಡಿಪು; ಮೀಸಲು; ದೇವರಿಗಾಗಿ ಪ್ರತ್ಯೇಕ ತೆಗೆದಿರಿಸಿದ ಹಣ.

ಮುಡುಬಿ, ಮುಡುಂಬ (ನಾ)= ಬಸವಕಲ್ಯಾಣ ತಾಲೂಕಿನ ಚಾಲೂಕ್ಯರ

ಕಾಲದ ಒಂದು ಐತಿಹಾಸಿಕ ಹಳ್ಳಿ; ಮುಡಬಿ (ನೋಡಿರಿ).

ಮುಡ್ಚೆಟ್ಟು (ನಾ)= ಮುಡಿಚೆಟ್ಟು (ನೋಡಿರಿ).

ಮುಡ್ಚೇಟು (ನಾ)= ಮುಡಿಚೆಟ್ಟು (ನೋಡಿರಿ).

ಮುಡ್ಚೇಟು (ನಾ)= ಮುಡಿಚೆಟ್ಟು (ನೋಡಿರಿ).

ಮುಣ್, ಮುಣ್ಣು (ನಾ)= ಮೃಣ್; ಮಣ್; ಮಣ್ಣು.

ಮುಣಿ (ಕ್ರಿ)= ಮುನಿ; ಸಿಟ್ಟಾಗು; ಮುನಿಸುದೋರು; ಅಂತರಂಗದಲ್ಲಿ ಕೋಪ ತಾಳು.

ಮುಣುಗು, ಮಣ್ಗು (ಕ್ರಿ)= ಮುಳುಗು; ನೀರಿನಲ್ಲಿ ಅಡಗಿ ಹೋಗು; ನೀರಿನ ಆಳಕ್ಕೆ ಸೇರು.

ಮುಣ್ಣಾಗಿಕ್ಲಿ (ಕ್ರಿ)= ಕೊಲ್ಲಿ ಮಣ್ಣು ಮುಚ್ಚಲಿ; ಕುಣಿಯಲ್ಲಿಟ್ಟು ಮಣ್ಣು ಮುಚ್ಲಿ (ಬೈಗುಳ).

ಮುಣ್ಣು (ನಾ)= ಮಣ್ಣು; ಮೃಣ್; ಮೃತ್ತಿಕೆ

ಮುಣ್ಣು ಮಾಡು (ಕ್ರಿ)= ಮಣ್ಣಲ್ಲಿಡು; ಶವವನ್ನು ಕುಣಿಯಲ್ಲಿಟ್ಟು ಮಣ್ಣು ಮುಚ್ಚು; ದಫನ ಮಾಡು; ಹೂಳು; ಮಣ್ಣಲ್ಲಡಗಿಸು.

ಮುಣ್ಣೇರ್ಸು (ಕ್ರಿ)= ಕೈಗೂಡಿಸು; ಕೈಕಲೆಸು ಶವದ ಕುಣಿಯ ಮಣ್ಣನ್ನು ನಾಲ್ಕಾರು ಜನ ಸೇರಿ ಕೈಗೂಡಿ ಶಂಕುವಿನಾಕಾರ ಮಾಡು; ಮಣ್ಣನ್ನು ಶಂಕ್ವಾಕಾರಗೊಳಿಸು.

ಮುತ್ತಯ್ದಿ (ನಾ)= ಮುತ್ತೈದೆ; ಸುಮಂಗಲೆ; ಸುವಾಸಿನಿ; ಸಧವೆ.

ಮುತ್ತಲ, ಮುತ್ತುಲ (ನಾ)= ಮುತ್ತು; ಪಲಾಶ; ಒಂದು ಬಗೆಯ ಅಗಲೆಲೆಯ ಮರ. (ಗಾದೆ: ಎಲ್ಲಿ ಹೋದುಬರ್ೀ ಮುತ್ತಲ ಗಿಡಕ ಮೂರೇ ಎಲಿ).

ಮುತ್ತು (ನಾ)= ಮುದ್ದು; ಚುಂಬನ; ನವರತ್ನಗಳಲ್ಲಿ ಒಂದು (ಹಾಡು: ಮುತ್ತು ಒಂದು ಕಳಧೊಯ್ತು। ನನ। ಮುತ್ತಿನ ಸುದ್ದಿ ಯಾರಿಗಾದ ಗೊತ್ತು ।।ಪ।। ಮುತ್ಯಾಂಗ ಕಳಧೊಯ್ತು। ನಿನ ಮುತ್ತಿನ ಸುದ್ಧಿನ ಮಗೇನದ ಗೊತ್ತು।।).

ಮುತ್ತೈದಿ (ನಾ)= ಮುತ್ತೈದೆ; ಸುಮಂಗಲೆ; ಸುವಾಸಿನಿ; ಸಧವೆ; ಗಂಡನುಳ್ಳವಳು.

ಮುತ್ತೈದಿತಾನ (ನಾ)= ಮುತ್ತೈದೆತನ; ಸುಮಂಗಲೆಯಾಗಿರುವಿಕೆ; ಸುವಾಸಿನಿ ಯಾಗಿರುವಿಕೆ; ಸಧವೆತನ.

ಮುತ್ತೈದಿತಾನ್ಕಡಿಲಿ (ಕ್ರಿ) ನು.= ಮಂಗಲಸೂತ್ರ ಹರಿಯಲಿ; ಗಂಡ ಸತ್ತು ವಿಧವೆಯಾಗಲಿ, ಮುಂಡೆಯಾಗಲಿ.

ಮುತ್ಯಾ್ಯತ (ನಾ)= ತಾತ; ಅಜ್ಜ; ಅವ್ವನ ಇಲ್ಲವೆ ಅಪ್ಪನ ಅಪ್ಪ (ಶಿಶು ಪ್ರಾಸ: ಮುತ್ಯಾ ಮುತ್ಯಾ ಮುಗ್ರಾಣಿ। ಮುತ್ಯಾನ್ಮುಗಿನಾಗ ಹಾವ್ರಾಣಿ).

ಮುದಿ (ನಾ)= ಮುದುಕ; ಮುದುಕಿ; (ಗು)= ಮುಪ್ಪಿನ; ವಯಸ್ಸಾದ.

ಮುದಿಗೊಡ್ಡು (ನಾ)= ಸಂತಾನ ಪ್ರಾಪ್ತಿಯ ಶಕ್ತಿ ಕಳೆದುಕೊಂಡ ಮುದುಕ ಅಥವಾ ಮುದುಕಿ.

ಮುದಿತಾನ (ನಾ)= ಮುದಿತನ; ಮುಪ್ಪು; ಇಳಿ ವಯಸ್ಸು.

ಮುದುಕ (ನಾ)= ಮುದಿಯಾದವನು; ವಯಸ್ಸಾದವನು; ವೃದ್ಧ.

ಮುದುಕಿ (ನಾ)= ಮುದಿಯಾದವಳು; ವಯಸ್ಸಾದವಳು; ವೃದ್ಧೆ (ಗಾದೆ: ಹಲ್ಬಿದ್ಮುದುಕಿ ಎಲ್ಲಿ ಬಿದ್ದರೇನು? ವಚನ: ಮುದುಕಿ ಮಿಂಡಗ ಮೆಚ್ಚಿ ಕದಿವುದಕೆ ಬಳಗಾಗಿ –ಸರ್ವಜ್ಞ).

ಮುದುಡಿ (ನಾ)= ಮುದುಡೆ; ಮುದ್ದೆ; ಮುದುಕಿ (ಬೈಗುಳ).

ಮುದುಡಿಯಾಗು (ಕ್ರಿ)= ಸುಕ್ಕುಗಟ್ಟು; ಮುದುಡು; ಮುದ್ದೆಯಾಗು; ಬಾಡು.

ಮುದುಡ್ಯಾ (ನಾ)= ಮುದುಡಿ ಮುದ್ದೆಯಾದವನು; ಮುದುಕ; ವೃದ್ಧ (ಬೈಗುಳ).

ಮುದ್ದತ್ತು (ನಾ)ಉ.= ಗಡುವು; ಕಾಲಾವಧಿ.

ಮುದ್ದತ್ತು ಮೀರು (ಕ್ರಿ)= ಮಾಡಿಕೊಂಡ ಕರಾರಿನ ಪ್ರಕಾರ ಸಮಯವನ್ನು ಪಾಲಿಸದಿರು.

ಮುದ್ದಾಂ (ಅ)= ಉದ್ದೇಶ ಪೂರ್ವಕ; ಬೇಕೆಂತಲೇ.

ಮುದ್ದಾಟ (ನಾ)= ಮುದ್ದು ಕೊಡುವಿಕೆ; ಪರಸ್ಪರ ಮುತ್ತು ಕೊಡುವಿಕೆ; ಚುಂಬನ ಕ್ರಿಯೆ

ಮುದ್ದಾಡು (ಕ್ರಿ)= ಮುತ್ತಿಡು; ಮುದ್ದು ಕೊಡು; ಚುಂಬಿಸು; ಪರಸ್ಪರ ಚುಂಬನ ಕ್ರಿಯೆ ನಡೆಸು.

ಮುದ್ದಿ (ನಾ)= ಮುದ್ದೆ; ಹಿಟ್ಟು; ತರಕಾರಿ, ಬೇಳೆಕಾಳು ಇತ್ಯಾದಿ ನೀರಿನೊಂದಿಗೆ ಬೆರೆಸಿ, ಕುದಿಸಿ, ತಯಾರಿಸಿದ ಮುದ್ದೆ; (ಕ್ರಿ) ಮುದ್ದಿ ಬೀರು ಮೇಲೆ ಸೂಚಿಸಿದಂತೆ ತಯಾರಿಸಿದ ಮುದ್ದೆಗಳನ್ನು ಮನೆ ಮನೆಗೆ ಹೋಗಿ ಹಂಚಿ ಬರು; ಮನೆಮನೆ ತಿರುಗಾಡಿ ಬಾ (ಬೈಗುಳ).

ಮುದ್ದಿ ಮಾಡು (ಕ್ರಿ)= ಒಟ್ಟುಗೂಡಿಸು; ಒಂದು ಕಡೆ ಸೇರಿಸು; ಮುದ್ದೆಗೊಳಿಸು.

ಮುದ್ದು (ನಾ)= ಮುತ್ತು; ಚುಂಬನ; ಸಲುಗೆ; ಲಾಡಿಕೆ; ಅತಿ ಪ್ರೀತಿ.

ಮುದ್ದುಕುಡು (ಕ್ರಿ)= ಮುದ್ದಿಸು; ಮುದ್ದಿಕ್ಕು; ಚುಂಬಿಸು; ಮುದ್ದಾಡು.

ಮುದ್ದು ಮಾಡು (ಕ್ರಿ)= ಪ್ರೀತಿಸು; ಅತಿ ಪ್ರೀತಿದೋರು; ವಾತ್ಸಲ್ಯ ತೋರು; ಅತಿ ಸಲುಗೆ ದೋರು.

ಮುದ್ರಾದ ಕುದುರಿ (ನಾ)= ಉಂಡಿಗೆ ಒತ್ತಿದ ಕುದುರೆ; ಜೀವಾತ್ಮ; ಜೀವ ಮತ್ತು ಆತ್ಮ (ತತ್ವಪದ ಸುದ್ರಾಸಿ ಕೂಡ್ರೆಪ್ಪ। ಮುದ್ರಾದ ಕುದುರಿ ಮ್ಯಾಲ। ಹಾರಿದ್ರ ಝೋಕು ಹೋದತ್ತು।).

ಮುಧೋಳ (ಬ)= ಔರಾದ ತಾಲೂಕಿನ ದೊಡ್ಡ ಮುಧೋಳ ಎಂಬ ಊರು. ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರಿಗೆ ಪ್ರಸಾದ ದೀಕ್ಷೆಯನ್ನು ನೀಡಿದ ವಿರಕ್ತ ಮಠಾಧೀಶ ಶ್ರೀ ಶಿವಲಿಂಗೇಶ್ವರರ ಮಠವಿರುವ ಊರು.

ಮುನಶಿ (ನಾ) ಉ.= ಕಾರಕೂನ; ಗುಮಾಸ್ತ; ಹಳ್ಳಿ ಊರಿನ ಅಂಚೆ ಮಾಸ್ತರ.

ಮುನಸಾಫ್ (ನಾ) ಉ.= ಕೆಳದರ್ಜೆ ನ್ಯಾಯಾಲಯದ ನ್ಯಾಯಾಧೀಶ.

ಮುನಾಫಾ (ನಾ)ಉ.= ಮುನಾಫೆ; ಲಾಭ; ಫಾಯ್ದೆ.

ಮುನಾಫಾಕಮಾಸು (ಕ್ರಿ) ಉ.= ಲಾಭಗಳಿಸು; ಫಾಯ್ದೆ ಹೊಂದು.

ಮುನಾಫಾಖೋರಿ (ನಾ)ಉ.= ಲಾಭಗಳಿಕೆಯ ಸ್ವಾರ್ಥದ ಧಂದೆ.

ಮುನ್ನಾ, ಮುನ್ಯಾ (ನಾ) ಉ.= ಬಾಲಕರಿಗೆ ಪ್ರೀತಿಯಿಂದ ಕರೆಯುವ ಹೆಸರು; ಲಾಡಿಕೆಯ ಹೆಸರು.

ಮುನ್ನಿ (ನಾ)= ಬಾಲಕಿಯರಿಗೆ ಪ್ರೀತಿಯಿಂದ ಕರೆವ ಹೆಸರು.

ಮುನ್ಯಾ (ನಾ)= ಮುನ್ನಾ (ನೋಡಿರಿ).

ಮುನ್ಷಿ (ನಾ) ಉ.= ಮುನಶಿ (ನೋಡಿರಿ).

ಮುನ್ಸಿಪಾಲ್ಟಿ (ನಾ) ಇಂ.= ನಗರ ಸಭೆ.

ಮುಪ್ಪು (ನಾ)= ಮುದಿತನ; ವೃದ್ಧಾಪ್ಯ.

ಮುಫತ್ತು (ನಾ) ಉ.= ಪುಕ್ಕಟೆ; ಪುಗಸೇಟೆ.

ಮುಮ್ಯಾಳ (ನಾ)= ಮುಮ್ಮೇಳ; ಮುಂದೆ ಹಾಡುವವರ ಗುಂಪು.

ಮುಯ್ಯ (ನಾ)= ಉಡುಗೊರೆ; ಕಾಣಿಕೆ; ನಜರಾಣೆ; ಮುಯ್ಯಾ; ಜಾಗಂಪೂಜೆ.

ಮುಯ್ಯ ಮಾಡು (ಕ್ರಿ)= ಉಡುಗೊರೆಕೊಡು; ಉಡಿಸು; ಕಾಣಿಕೆ ಕೊಡು (ತತ್ವಪದ: ಮುಯ್ಯ ಮಾಡಿದರು ಪಾಟಿಯ ಪೂಜಿಗಾ। ಗುರುನಾಥನ ಸಾಲ್ಯಾಗಾ।।); ಜಾಗಂ ಪೂಜೆ ಮಾಡು.

ಮುಯ್ಯಾ (ನಾ)= ಮುಯ್ಯ (ನೋಡಿರಿ).

ಮುರಬ್ಬಾ (ನಾ) ಉ.= ಅಲ್ಲದೊಂದಿಗೆ, ಮಾವಿನೊಂದಿಗೆ ಇಲ್ಲವೆ ನೆಲ್ಲಿಕಾಯಿಯೊಂದಿಗೆ ಬೆಲ್ಲ ಸೇರಿಸಿ ತಯಾರಿಸಿದ ಒಂದು ಪ್ರಕಾರದ ತಿಂಡಿ.

ಮುರವ್ವತ್ತು (ನಾ) ಉ.= ಹಂಗು; ದಾಕ್ಷಿಣ್ಯ; ಮುಜುಗರ.

ಮುರಿ (ಕ್ರಿ)= ತುಂಡು ಮಾಡು; ತುಂಡರಿಸು; ತುಂಡಾಗು.

ಮುರು (ನಾ)= ಕಿವಿಯ ಆಭರಣ.

ಮುರು ಊರು (ಕ್ರಿ)= ಕಿವಿಗೆ ಆಭರಣ ವಿಡಲು ಬರುವಂತೆ ತಾಮ್ರದ ತಂತಿ ಚುಚ್ಚಿ ರಂಧ್ರ ಉಂಟು ಮಾಡು (ಗಾದೆ: ಅಗ್ಸಲ್ಲ ಮುರು ಊರ್ದರ ಬ್ಯಾನಿ ಆಗಾಲ!).

ಮುರುಕಾ, ಮುರ್ಕಾ (ನಾ)= ಬಿಂಕ, ಬಿನ್ನಾಣ; ವೈಯಾರ; ವಗಾಲು; ಡೌಲು.

ಮುರುಕಾಮಾಡು; ಮುರ್ಕಾಮಾಡು (ಕ್ರಿ)= ವೈಯಾರ ಮಾಡು; ಬಿನ್ನಾಣ ದೋರು.

ಮುರುಕು (ವಿ)= ಮುರಿದು ಹೋದ.

ಹಾಳಾದ; (ವಿ)= ಮುರಿದ, ಹಾಳಾದ.

ಮುರುಚುಚ್ಚು (ಕ್ರಿ)= ಕಿವಿಗೆ ತಾಮ್ರದ ತಂತಿ ಚುಚ್ಚಿ, ಆಭರಣಕಾಗಿ ರಂಧ್ರ ಉಂಟು ಮಾಡು.

ಮುರುಳಿ (ನಾ)= ಮುರುಳೆ; ದೇವದಾಸಿ; ದೇವರಿಗೆ ಬಿಡಲ್ಪಟ್ಟವಳು.

ಮುರ್ಗಿ (ವಿ)= ಹುರಿಗೊಂಡ; ಹುರಿ ಹುರಿಯಾದ; ಹಗ್ಗದಂತೆ ಹುರಿಹುರಿಯಾದ.

ಮುರ್ತುಜಾ ಹುಸೇನ (ನಾ)= ಮೃತ್ಯುಂಜಯ ಸ್ವಾಮಿಯವರ ಇನ್ನೊಂದು ಹೆಸರು. ಇವರು ಬಸವಕಲ್ಯಾಣದ ಸದಾನಂದ ಸ್ವಾಮಿಗಳ ಪರಮ ಶಿಷ್ಯರು ಸರ್ವಧರ್ಮ ಸಮನ್ವಯಕಾರರು. ನಾರಾಯಣಪುರದ ಕೆರೆಯ ದಂಡೆಯ ಮೇಲೆ ಸಮಾಧಿ ಇದೆ.

ಮುರ್ಗಿಬಡ್ಗಿ (ನಾ)= ಹುರಿಹುರಿಯಾದ ಊರುಗೋಲು.

ಮುರ್ದಾ (ನಾ)ಉ.= ಹೆಣ; ಶವ.

ಮುರ್ದಾಬಾದ (ನಾ) ಉ.= ಹೆಣವಾಗಲೆಂಬ ಜಯಘೋಷ; ಜಿಂದಾಬಾದ ಎಂಬುದರ ವಿರುದ್ಧ ಪದ.

ಮುಲಾಖಾತ (ನಾ) ಉ.= ಭೇಟಿ; ಸಂದರ್ಶನ.

ಮುಲಾಜಿ (ನಾ) ಉ.= ದಾಕ್ಷಿಣ್ಯ ಭಿಡೆ; ಹಂಗು.

ಮುಲುಕು, ಮುಲ್ಕು (ನಾ) ಉ.= ದೇಶ; ಭೂಭಾಗ.

ಮುಲ್ಕಿ (ವಿ.) ಉ.= ದೇಶೀಯ; ಸ್ಥಳೀಯ.

ಮುಲ್ಲಂಗಿ (ನಾ)= ಮೂಲಂಗಿ; ಒಂದು ಪ್ರಕಾರದಗಡ್ಡೆ ಮತ್ತು ಸೊಪ್ಪುಳ್ಳ ತರಕಾರಿ ಸಸ್ಯ.

ಮುಲ್ಲಂಗಿ ಕಾಯಿ (ನಾ)= ಒಂದು ಬಗೆಯ ತರಕಾರಿಕಾಯಿ.

ಮುಲ್ಲಾ (ನಾ)= ಮುಸಲ್ಮಾನರ ಮಸೀದಿಯ ವ್ಯವಸ್ಥಾಪಕ; ಮೌಲ್ವಿ (ಗಾದೆ: ೧) ಮುಲ್ಲಾ ಓಡಾದು ಮಸ್ದಿತನಕಾ ೨) ಗಂಡಗಂಜಿ ಮುಲ್ಲಾನ್ನ ನಿಗ್ಗೋದ್ರ, ಮುಲ್ಲಾ ಬೆಳ್ಗಾನಾ ಮುಳ್ಳಾಡುಸ್ದಂತ!).

ಮುಲ್ಲಾಜಾಬು (ನಾ) ಉ.= ಮಸೀದಿಯಲ್ಲಿ ಮುಲ್ಲಾ ಹಾಕುವ ಕೂಗು, ಹಕಾರಿ.

ಮುಲ್ಲಾಮಾರಿ (ನಾ)= ಬೀದರ ಜಿಲ್ಲೆಯಲ್ಲಿ ಹರಿಯುವ ಒಂದು ನದಿ..

ಮುವ್ವತ್ತು (ನಾ)= ಮೂರು ಹತ್ತು; ಮೂವತ್ತು; ಒಂದು ಸಂಖ್ಯೆ.

ಮುಷಾರಿ (ನಾ)= ಮಾಸಿಕ ವೇತನ; ತನಖಾ; ಪಗಾರು (ಗಾದೆ: ಚಾಂದ ನೋಡಿ ಮುಷಾರಿ ಎತ್ತಾಂವ).

ಮುಷ್ಟಿಫಂಡು (ನಾ)= ಭಾಲ್ಕಿಯ ಹಿರೇಮಠದ ಚೆನ್ನಬಸವ ಪಟ್ಟದ್ದೇವರು ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಅಭಿವೃದ್ಧಿಗಾಗಿ ಮೋರಗಿ ಎಂಬ ಗ್ರಾಮದಲ್ಲಿ ಪ್ರಪ್ರಥಮ ಪ್ರಾರಂಭಿಸಿದ ಮುಷ್ಠಿ-ಮುಷ್ಠಿ ಕಾಳಿನ ಚಂದಾ ನಿಧಿ. ಬೀಸುವ ಮುನ್ನ ಮನೆ ಮನೆಯ ಮಹಿಳೆಯರು ಮುಷ್ಠಿ ಫಂಡಿಗಾಗಿ ಇರುವ ಕೈಚೀಲದಲ್ಲಿ ಒಂದೊಂದು ಮುಷ್ಠಿಕಾಳು ಹಾಕುತ್ತಿದ್ದರು.

ಮುಸಿ ನೋಡು (ಕ್ರಿ)= ಮೂಸಿ ನೋಡು; ಮೂಗಿನಿಂದ ವಾಸನೆಯನ್ನು ಗ್ರಹಿಸು.

ಮುಸುಕಿ, ಮುಸ್ಕಿ (ನಾ)= ಆಹಾರ ತಿನ್ನಲು ಬಾರದಂತೆ ದನಗಳ ಬಾಯಿಗೆ ಹಾಕಿದ ಜಾಳಿಗೆ, ಹಗ್ಗದ ಜಾಲದ ಕವಚ.

ಮುಸುಕು (ನಾ)= ಬಾಯಿ ತೆರೆಯಲು ಬಾರದಂತೆ, ಮೋರೆ ಕಾಣದಂತೆ ಹಾಕುವ ಸಾಧನ.

ಮುಸುಕುಗಟ್ಟು (ಕ್ರಿ)= ಉಸಿರುಗಟ್ಟು; ಶ್ವಾಸೋಛ್ವಾಸ ನಿಲ್ಲು.

ಮುಸುಡಿ (ನಾ)= ಮುಸುಡೆ; ಮೊಸಡೆ; ಮೋರೆ; ಮುಖ.

ಮುಸುರಿ, ಮುಸ್ರಿ (ನಾ)= ಮುಸುರೆ; ತಟ್ಟೆಯಲ್ಲಿಯ ಶೇಷ ಎಂಜಲು ಆಹಾರ; ಹಳಸಿದ ಆಹಾರ; ಪಾತ್ರೆಗೆ ಮೆತ್ತಿ ಉಳಿದ, ದನಗಳಿಗಾಗಿ ಕಲಗಂಚಿಗೆ ಚೆಲ್ಲಿದ ಆಹಾರ.

ಮುಸುಲ್ಮಾನ (ನಾ)= ಮುಸಲ್ಮಾನ; ತುರುಕ; ಇಸ್ಲಾಂ ಧರ್ಮೀಯ; ಮಹ್ಮದೀಯ.

ಮುಸ್ಕಿ ಹಾಕು (ಕ್ರಿ)= ದನವು ಆಹಾರ ತಿನ್ನದಂತೆ ಅದರ ಬಾಯಿಯನ್ನು ಜಾಳಿಗೆಯಿಂದ ಬಂಧಿಸು; ಮೋರ್ಕಿಯಿಂದ ಬಾಯಿಯನ್ನು ಬಂಧಿಸು.

ಮುಸ್ಗರಿ (ಕ್ರಿ)= ಮುಸ್ ಮುಸ್ ಎನ್ನುತ್ತ ಉಸಿರು ಬಿಡು; ಆಯಾಸ ಅಥವಾ ಸಿಟ್ಟಿನಿಂದ ಮುಸುಮುಸು ಶಬ್ದ ಮಾಡು.

ಮುಸ್ತರಿ (ನಾ)= ಹುಮ್ನಾಬಾದ ತಾಲೂಕಿನ ಚಿಟಗುಪ್ಪ ಹತ್ತಿರದ ಒಂದು ಹಳ್ಳಿ.

ಮುಸ್ರಿ (ನಾ)= ಮುಸುರಿ (ನೋಡಿರಿ).

ಮುಸ್ರಿತಿನು (ಕ್ರಿ)= ಎಂಜಲು ತಿನ್ನು, ಸೇವಿಸು; ಇಟ್ಟುದ್ದನ್ನು ಸೇವಿಸು; ಎಂಜಲಿಗಾಗಿ ಆಸೆಪಡು.

ಮುಸ್ರಿ ಬಳಿ (ಕ್ರಿ)= ಎಂಜಲೆತ್ತು; ಪತ್ರಾವಳಿ ಅಥವಾ ತಟ್ಟೆ ಬಟ್ಟಲನ್ನು ಎತ್ತು.

ಮುಳ್ (ನಾ)= ಮುಳ್ಳು (ನೋಡಿರಿ).

ಮುಳುಗು, ಮುಳ್ಗು (ಕ್ರಿ)= ಮುಣುಗು; ನೀರಿನಲ್ಲಿ ಅಡಗು.

ಮುಳುಗ್ಸು (ಕ್ರಿ)= ಮುಳುಗಿಸು; ನೀರ ಆಳಕ್ಕೆ ತಳ್ಳು; ಮೋಸಮಾಡು.

ಮುಳೆದಿ (ನಾ)= ಮೂಲವ್ಯಾಧಿ; ಮೂಲಾದಿ.

ಮುಳ್ಕಂಟಿ (ನಾ)= ಮುಳ್ಳುಗಳಿಂದ ಕೂಡಿದ ಕಾಡುಗಿಡ ಮತ್ತು ಅವುಗಳ ಸಮೂಹ.

ಮುಳ್ಗು (ಕ್ರಿ)= ಮುಳುಗು (ನೋಡಿರಿ).

ಮುಳ್ಚುಚ್ಚು (ಕ್ರಿ)= ಮೈ, ಕೈ, ಕಾಲುಗಳಲ್ಲಿ ಮುಳ್ಳು ಸೇರು; ಮುಳ್ಳನ್ನು ಸೇರಿಸು.

ಮುಳ್ನಡು (ಕ್ರಿ)= ಮೈ ಕೈ ಕಾಲುಗಳಲ್ಲಿ ಮುಳ್ಳು ಸೇರು; ಮುಳ್ಳಿನ ಬಾಧೆಯಾಗು.

ಮುಳ್ಬದ್ನಿ= ದೇಟು ಮತ್ತು ತುಂಬಿನ ಸುತ್ತ ಮುಳ್ಳುಳ್ಳ ಒಂದು ಬಗೆಯ ತರಕಾರಿ ಕಾಯಿ.

ಮುಳ್ಬರು (ಕ್ರಿ)= ನವಿರೇಳು ರೋಮಾಂಚನ- ವುಂಟಾಗು.

ಮುಳ್ಬೇಲಿ (ನಾ)= ಮುಳ್ಳುಗಳಿಂದ ನಿರ್ಮಿಸಿದ ತಡೆ ಬೇಲಿ.

ಮುಳ್ಭೆಂಡಿ (ನಾ)= ಮುಟ್ಟಿದರೆ ಮುಳ್ಳಂಟಿಸುವ ಬೆಂಡೆಕಾಯಿ ಮತ್ತು ಅದರ ಗಿಡ.

ಮುಳ್ಸೌತಿ (ನಾ)= ಮುಳ್ಳು ಸೌತೆ; ಸೌತೆ ಜಾತಿಯ ಒಂದು ಬಳ್ಳಿ ಮತ್ತು ಅದರ ಕಾಯಿ.

ಮುಳ್ಳಾಡ್ಸು (ಕ್ರಿ)= ಸವೆದ ಬೀಸುಕಲ್ಲನ್ನು ಉಳಿಯಿಂದ ಕಟೆದು ಮತ್ತೆ ಮೊನಚುಮಾಡಿಸು; ಒರಟಾಗುವಂತೆ ಮಾಡಿಸು; ಸಂಭೋಗಿಸು (ಗಾದೆ: ಗಂಡಗಂಜಿ ಮುಲ್ಲಾನ್ಮನಿಗಿ ಹೋದ್ರ, ಮುಲ್ಲಾ ಬೆಳ್ತಾನಾ ಮುಳ್ಳಾಡ್ಸುದ್ದನಂತ!).

ಮುಳ್ಳು (ನಾ)= ಗಿಡದಲ್ಲಿ ಸೂಜಿಯಂತೆ ಹುಟ್ಟಿಕೊಳ್ಳುವ ಚೂಪಾದ ವಸ್ತು (ಜಾಲಿ, ಬೋರೆ, ಕಾರೆ, ಜಂತಿ, ಸಿಂಧಿ ಮೊದಲಾದವುಗಳ ಚೂಪಾದ ಸಸ್ಯಾಂಶ) ಗಡಿಯಾರದ ಸಮಯ ಸೂಚಕ ಕಡ್ಡಿ; ಬೀಗದ ಕೈ; ಕೀಲಿ ಕೈ).

ಮುಳ್ಳುಕಂಟಿ (ನಾ)= ಮುಳ್ಳಿನ ಪೊದೆ, ಝುಡ್ಡು, ಹೊದರು.

ಮುಳ್ಳು ಬರು (ಕ್ರಿ)= ಮುಳ್ಬರು (ನೋಡಿರಿ).

ಮುಳ್ಳು ಸೌತಿ (ನಾ)= ಸೌತೆ ಜಾತಿಯ ಒಂದು ಬಳ್ಳಿ ಮತ್ತು ಅದರ ಕಾಯಿ.

ಮುಳ್ಳುಹಂದಿ (ನಾ)= ಬಾಣದಂತಿರುವ ಮೈಮೇಲಿನ ಮುಳ್ಳುಗಳನ್ನು ವೈರಿಯತ್ತ ಎಸೆವ ಒಂದು ಬಗೆಯ ಕಾಡು ಪ್ರಾಣಿ; ಯಾಯಕ್ಕಿ.

ಮುಳ್ಹಂದಿ (ನಾ)= ಮುಳ್ಳು ಹಂದಿ (ನೋಡಿರಿ).

ಮುಳ್ಳು ಹೆಟ್ಟ (ನಾ)= ಮುಳ್ಳಿನ ಟೊಂಗೆಗಳನ್ನು ಒಂದರ ಮೇಲೆ ಒಂದನ್ನು ಹೇರಿ ಎಳೆದೊಯ್ಯಲು ತಯಾರಿಸಿದ ಹೊರೆ.

ಮುಳ್ಳೇಳು (ಕ್ರಿ)= ರೋಮಾಂಚನಗೊಳ್ಳು; ಮೈನವಿರೇಳು; ಮುಳ್ಬರು; ಮುಳ್ಳುಬರು.

ಮೂಕ (ನಾ)= ಮಾತಾಡಲು ಬಾರದವನು; ಮೂಗ; (ಗಾದೆ: ೧) ಮೂಕಬೆಲ್ಲಾ ತಿಂದಂಗ! ೨) ಮೂಕನ ಮಾತು ಮೂಕನ ತಾಯಿಗೇ ಗೊತ್ತು ೩) ಮೂಕಮನ್ಯಾನ ಸಂಗಾಟ ನಾಕ್ಮಂದಿ ಸತ್ರಂತ!).

ಮೂಕ ಜನಿವರ (ನಾ)= ಮೂಕಪ್ರಾಣಿ; ಮಾತಾಡಲು ಬಾರದ ದನಕರು; ಅಬೋಧ ಜೀವಿ.

ಮೂಕಿ (ನಾ)= ಮೂಗಿ, ಮಾತಾಡಲು ಬಾರದವಳು (ಬೈಗುಳ).

ಮೂಕ್ಯಾ (ನಾ)= ಮೂಕ; ಮೂಗ; ಮಾತಾಡಲು ಬಾರದವನು (ಬೈಗುಳ).

ಮೂಗಳ (ನಾ)= ಮೂರು ಕೊಳಗಗಳ ಕಾಳಿನ ಒಂದು ಅಳತೆ.

ಮೂಗು (ನಾ)= ನಾಸಿಕ; ವಾಸನೆಯನ್ನು ಗ್ರಹಿಸುವ ಇಂದ್ರಿಯ. (ಗಾದೆ: ಮೂಗು ಇಲ್ಲದಾಕಿ, ಮೂಗ್ತಿ ಬೇಡಿ ಕಾಲು ತಿಕ್ಕಿದ್ಹಂತ!).

ಮೂಗುತಿ, ಮೂಗ್ತಿ (ನಾ)= ಮೂಗಿನ ಆಭರಣ; ನತ್ತು (ಹಾಡು: ಮೂಗುತಿ ಕಳಿತವ್ವಾ। ನಂದೊಂದು ಮೂಗುತಿ ಕಳಿತವ್ವಾ।).

ಮೂಗು ತುರುಕು (ನು)= ಮತ್ತೊಬ್ಬರ ವಿಷಯದಲ್ಲಿ ತಲೆಹಾಕು; ಇನ್ನೊಬ್ಬರ ವಿಷಯದಲ್ಲಿ ಬಾಯಿ ಹಾಕು.

ಮೂಗು ಮುರಿ (ನು.)= ಅವಮಾನಿಸು; ತಿರಸ್ಕರಿಸು; ಅಸಮ್ಮತಿಸು; ಮೂಗು ಹೊರಳಿಸು.

ಮೂಗು ಹಾಕು (ನು)= ಮೂಗುಚಾಚು; ಮತ್ತೊಬ್ಬರ ವಿಷಯದಲ್ಲಿ ತಲೆ ಹಾಕು, ಸೇರಿಸು.

ಮೂಗೆಳಿ (ಕ್ರಿ)= ಸೋಲು; ಸೋಲು ಒಪ್ಪು.

ಮೂಗೋರು (ನಾ)= ಮೂವರು; ಮೂರು ಜನರು.

ಮೂಗ್ರಾಣಿ (ನಾ)= ಮೂಗ್ದಾಣ; ದನಗಳ ಮೂಗಿಗೆ ಹಾಕಿದ ದಪ್ಪನೆಯ ದಾರ; ಪ್ರಾಣಿಯ ಮೂಗಿಗೆ ಪೋಣಿಸಿದ ದಾರ.

ಮೂಜಗ (ನಾ)= ಮೂರುಲೋಕ; ಸ್ವರ್ಗ, ಮರ್ತ್ಯ, ಪಾತಾಳ ಜೋಗುಳ ಹಾಡು: ಜೋಜೋ ಎಂದು ಜನ್ಮಕ್ಕ ಬಂದು। ನಿಜಗುರು ಕರುಣಾದಿ ಬೋಧವ ಪಡೆದು। ಮೂಜಗದೊಡೆಯನ ಮೂಲವ ತಿಳಿದು। ಬೀಜ। ಮಂತ್ರದಿಂದೆ ಜೋಗುಳ ಪಾಡೀರೆಂದು ಜೋಜೋ।। –ಗುರು ಶಾಂತ ಕಂಬಳೇಶ).

ಮೂಜೋರಿ (ನಾ)= ಜಬರ್ಧಸ್ತಿ; ಒತ್ತಾಯ.

ಮೂಜೋರಿ ಮಾಡು (ಕ್ರಿ)= ಜಬರ್ದಸ್ತಿ ಮಾಡು; ಒತ್ತಾಯಿಸು.

ಮೂಡು (ಕ್ರಿ)= ಹುಟ್ಟು; ಜನ್ಮತಾಳು; ಗರ್ಭನಿಲ್ಲು; ಉದಯಿಸು.

ಮೂಡುಲ, ಮೂಡ್ಲ (ನಾ)= ಮೂಡಣ; ಪೂರ್ವ; ಸೂರ್ಯೋದಯದ ಮುನ್ನ ಸಮಯ; ಸೂರ್ಯೋದಯ ಸೂಚನೆಯ ಸಮಯ.

ಮೂಡುಲ ಮಾರಿ, ಮೂಡ್ಲ ಮಾರಿ (ನಾ)= ಪೂರ್ವ; ಸೂರ್ಯನುದಯಿಸುವ ದಿಕ್ಕು.

ಮೂಡ್ಲಯಾಳ್ಯಾ (ನಾ)= ಮುಂಜಾವು.

ಮೂಢಾ (ನಾ)= ಮೂಢ; ಮೂರ್ಖ; ತಿಳಿಗೇಡಿ.

ಮೂಣು (ನಾ)= ಸ್ತ್ರೀ ಜನನೇಂದ್ರಿಯ; ಯೋನಿ.

ಮೂಣು ಬೆದುರು (ಕ್ರಿ)= ಬಾಲಕಿಗೆ ಪ್ರಥಮ ರಜೋದರ್ಶನವಾಗು; ಮೈನೆರೆ; ದೊಡ್ಡವಳಾಗು; ಪುಷ್ಪವತಿಯಾಗು.

ಮೂತಿ (ನಾ)= ಮೋತಿ; ಮೋರೆ; ಮುಖ; ಮುಸುಡು.

ಮೂತ್ರ (ನಾ)= ಕಾಲ್ಮಡಿ; ಶರೀರದಿಂದ ಹೊರಬೀಳುವ ಕಶ್ಮಲ ಜಲ; ಉಚ್ಚೆ.

ಮೂಬದಲಿ (ನಾ)= ಹೆಚ್ಚುವರಿಯಾದದ್ದು; ಅತಿರಿಕ್ತವಾದದ್ದು; ಇನ್ನೊಂದು; ಮುಂಗಡ (ವಿ) ಹೆಚ್ಚುವರಿ; ಅತಿರಿಕ್ತ.

ಮೂರಾಭೆಂಜಿ (ನಾ)= ಮುಸ್ಸಂಜೆ; ರಾತ್ರಿಯ ಮೊದಲ ಪ್ರಹರ.

ಮೂರಾದಿ (ನಾ)= ಮೂರುಹಾದಿ; ಮೂರುಹಾದಿ ಕೂಡುವ ಜಾಗ.

ಮೂರಾದಿ ಮಣ್ಣು (ನಾ)= ಮೂರು ಹಾದಿಯಲ್ಲಿಯ ಮಣ್ಣು; ಯಾವ ಉಪಯೋಗಕ್ಕೂ ಬಾರದ ನಿರುಪಯುಕ್ತ ಮಣ್ಣು (ಬೈಗುಳ) ಉದಾ: ಮೂರಾದಿ ಮಣ್ಣುಬೀ ಕೈಗಿ ಹತ್ತಲಿಲ್ಲ.

ಮೂರಾಬಟ್ಟಿ (ನಾ)= ಮೂರಾಬಟ್ಟೆ; ಹಾಳು ಬೀಳು; ಚದುರಿದ್ದು.

ಮೂರಿಪ್ಪತ್ತು (ನಾ)= ಅರವತ್ತು; ಆರುಹತ್ತು.

ಮೂರು (ನಾ)= ಎರಡರ ನಂತರ ಬರುವ ಅಂಕಿ.

ಮೂರುದುಡ್ಡು (ನಾ)= ಉಸ್ಮಾನಿಯಾ ನಾಣ್ಯ ಒಂದಾಣೆಯ ೧/೨ ಭಾಗ. ಬ್ರಿಟಿಷ್‌ನಾಣ್ಯದ ೩/೪ ಅಣೆ. ಭಾರತೀಯ ರೂಪಾಯಿಯ ೩/೧೦೦ ಭಾಗ.

ಮೂರೆಲಿ (ನಾ)= ಮೂರೆಲೆ; ಪರೆಲ್; ಇಸ್ಪಿಟ್ಟಿನ ಮೂರೆಲೆಯ ಆಟ.

ಮೂರೆಳಿ (ನಾ)= ಮೂರು ಎಳೆಯುಳ್ಳದ್ದು; ಮೂರು ಎಳೆಗಳಿಂದ ಹೊಸೆದ ದಾರ. (ಗೌರಿ ಹಾಡು: ಮೂರೆಳಿ ಸರವು ನಿನಗ। ಗಂಧದ ಬಟ್ಟಲು ನನಗ).

ಮೂರೇ (ಅ)= ಮೂರು ಮಾತ್ರ.

ಮೂರ್ಕ (ನಾ)= ಮೂರ್ಖ; ತಿಳಿಗೇಡಿ; ಅವಿವೇಕಿ; ಮೋರ್ಕ.

ಮೂರ್ತ (ನಾ)= ಮೋರ್ತ; ಮುಹೂರ್ತ.

ಮೂರ್ತಮಾಡು (ಕ್ರಿ)= ಪ್ರಾರಂಭಿಸು.

ಮೂರ್ಮೂಲಿ (ನಾ)= ಮೂರು ದಾರಿಗಳು ಕೂಡುವ ಜಾಗ; ಮೂರಾದಿ; ಮೂರು ಹಾದಿ.

ಮೂರ್ಮ್ಯ್ರ (ನಾ)= ಮೂರು ಮಗ್ಗಲು.

ಮೂಲ (ನಾ)= ಬೇರು; ಗಡ್ಡೆ; ಗೆಣಸು; ಬುಡ; ಉಗಮ; ಕಾರಣ.

ಮೂಲಂಗಿ (ನಾ)= ಗಡ್ಡೆ ಮತ್ತು ಸೊಪ್ಪು ಎರಡೂ ತರಕಾರಿಯಾಗಿ ಬಳಕೆಯಾಗುವ ಸಸ್ಯ; ಮುಲ್ಲಂಗಿ.

ಮೂಲಂಗಿಕಾಯಿ (ನಾ)= ಮುಲ್ಲಂಗಿ ಸಸ್ಯದ ಕಾಯಿ (ಬಂದು ಪ್ರಕಾರದ ತರಕಾರಿ ಕಾಯಿ).

ಮೂಲಾದಿ (ನಾ)= ಮೂಲವ್ಯಾಧಿ; ಗುದದ್ವಾರಕ್ಕೆ ಸಂಬಂಧಿಸಿದ ಬೇನೆ.

ಮೂಲಾಸಕಡಿ (ಕ್ರಿ)= ಬೇರು ಸಹಿತ ಕಿತ್ತು ಹಾಕು; ಮೂಲಕಡಿ; ನಾಶಮಾಡು; ಕಿರ್ಕಿರಿ ತಪ್ಪಿಸು; ಕುದಿ ಹಿಂದಾಗು.

ಮೂಲಸ ಕಡಿತು (ಕ್ರಿ)= ಕಿರ್ಕಿರಿ ತಪ್ಪಿತು.

ಮೂಲಿ (ನಾ)= ಮೂಲೆ; ಎರಡು ಗೋಡೆಗಳು ಒಂದು ಕಡೆ ಸೇರುವ ಸ್ಥಳ; ಕುಂಚಿ, ಕಂಬಳಿ ಇತ್ಯಾದಿಗಳ ಮೂಲೆ; ಕೋನ; ಎರಡು ದಿಕ್ಕುಗಳು ಸೇರುವ ಸ್ಥಾನ.

ಮೂಲಿಗಲ್ಲು(ನಾ)= ಗೋಡೆಯ ಕೋನದ ಮೇಲೆ ಸ್ಥಾಪಿಸಲ್ಪಡುವ ಕಲ್ಲು; ಉದ್ದವಾದ ಕಲ್ಲು; ಬಾಲಗಲ್ಲು; ಮೂಲೆಯ ಮೇಲೆ ಬರುವ ಕಲ್ಲು.

ಮೂಲಿ ಹಿಡಿ (ಕ್ರಿ)= ಮೂಲೆ ಮುದ್ದೆಯಾಗು; ಕೈಕಾಲು ಬಲ ಹೋಗಿ ಕೂಡು ಬೀಳು.

ಮೂವತ್ತು (ನಾ)= ಮೂರು ಹತ್ತು; ಮುವ್ವತ್ತು.

ಮೂವ್ಹೋರು (ನಾ)= ಮೂವರು; ಮೂರು ಜನರು.

ಮೂಸಿ (ನಾ)= ಮೂಸೆ; ಚಿನ್ನ; ಬೆಳ್ಳಿ ಮುಂತಾದುವನ್ನು ಕರಗಿಸುವ ಎರಕದ ಪಾತ್ರೆ.

ಮೂಳ (ನಾ)= ಮೂಢ (ಗಾದೆ: ಅಲ್ಲ ಮೂಳ ಅಂದ್ರ ಮನಿಹಿಂದಾರೆ ಭಾರುಸ್ತಿನಂತಂತ!); ಮೂಲ; ಬೇರು.

ಮೂಳೆದಿ (ನಾ)= ಮೂಲವ್ಯಾದಿ.

ಮೂಳ್ಗೇಡಿ (ನಾ)= ಮೂಢತನದಿಂದ ಕೆಟ್ಟವನು (ಳು).

ಮೃತ್ಯುಂಜಯಸ್ವಾಮಿ (ನಾ)= ಸರ್ವಧರ್ಮ ಸಮನ್ವಯಕಾರರಾದ ನಾರಾಯಣ ಪುರದ ಮುರ್ತುಜಾ ಹುಸೇನರ ಇನ್ನೊಂದು ಹೆಸರು. ಇವರು ಸದಾನಂದ ಸ್ವಾಮಿಯ ಶಿಷ್ಯರು.

ಮೆಂಕಿ (ನಾ)= ಮೆಕ್ಕೆ ಜೋಳದ ದಂಟು, ತೆನೆ ಮತ್ತು ಕಾಳು.

ಮೆಂಕಿಕಾಯಿ (ನಾ)= ತೊಗರೆಸಾಲಿನಲ್ಲಿ ಬೆಳೆಸಲಾಗುವ ಸೌತೆ ಜಾತಿಯ ಸಣ್ಣ ಬಳ್ಳಿ ಮತ್ತು ಅದರ ಕಾಯಿ; ಗುಡುಮಿನ ಕಾಯಿ; ತರಕಾರಿ ಮತ್ತು ಚಟ್ನಿಗೆ ಬಳಸಲಾಗುವ ಕಾಯಿ.

ಮೆಂಕಿತೆನಿ (ನಾ)= ಮೆಕ್ಕೆತೆನೆ.

ಮೆಂಟಲ್ (ನಾ) ಇಂ.= ಹುಚ್ಚ; ಹುಚ್ಚಿ.

ಮೆಂಡಾ (ನಾ)= ಮೆಂಡು; ಬೂಚು; ಬಾಟಲಿಯ ಮುಚ್ಚಣಿಕೆ.

ಮೆಂಡು (ನಾ)= ಮೆಂಡಾ (ನೋಡಿರಿ).

ಮೆಂತಿ (ನಾ)= ಮೆಂತೆ; ಮೆಂತ್ಯಾ.

ಮೆಂತಿ ಪಲ್ಯಾ (ನಾ)= ಒಂದು ಬಗೆಯ ತರಕಾರಿ ಸೊಪ್ಪು.

ಮೆಂತ್ಯಾ (ನಾ)= ಮೆಂತೆ (ಗಾದೆ: ಹಂತಾದ್ದೆದ್ದ ಬೇಕು ಮೆಂತ್ಯಾದ ಕಡುಬು).

ಮೆಂಬರ (ನಾ) ಇಂ.= ಸದಸ್ಯ; ಪ್ರತಿನಿಧಿ.

ಮೆಕಳ್ಯಾ (ನಾ)= ಮಿಡಿತೆ; ಮಿಡಚಿ.

ಮೆಕ್ಕಡು (ನಾ)= ಒಣಗಿದ ಸಿಂಬಳ.

ಮೆಕ್ಕಿಜ್ವಾಳ (ನಾ)= ಮೆಕ್ಕೆ ಜೋಳ.

ಮೆಚ್ಗಾರ್ಕಿ (ನಾ)= ಮೆಚ್ಚಿಕೆ; ಪ್ರೀತಿ; ಪ್ರೇಮ; ಒಲವು.

ಮೆಚ್ಗಿ (ನಾ)= ಮೆಚ್ಚಿಗೆ; ಮೆಚ್ಚುಣಕಿ.

ಮೆಚ್ಚು (ಕ್ರಿ)= ಒಲಿ; ಪ್ರೀತಿಸು; ಇಷ್ಟವಾಗು; ಸೇರು.

ಮೆಟ್ಟಲಿ ಹೊಡಿ (ಕ್ರಿ)= ಚಪ್ಪಲಿಯಿಂದ ಬಾರಿಸು; ಪಾದರಕ್ಷೆ ಪ್ರಯೋಗ ಮಾಡು.

ಮೆಟ್ಟು (ನಾ)= ಪಾದರಕ್ಷೆ; ಚಪ್ಪಲಿ.

ಮೆಟ್ನಲ್ಗಿ (ನಾ)= ರಾಶಿತೂರಲು ಮೆಟ್ಟನಿಂತು ಬಳಸುವ ಮೂರು ಕಾಲಿನ ಎತ್ತರದ ಕಟ್ಟಿಗೆಯ ಅಡ್ಡಣಿಗೆ.

ಮೆಣ್ಸಿಕಾಯಿ (ನಾ)= ಅಡುಗೆಯಲ್ಲಿ ಖಾರಕ್ಕಾಗಿ ಬಳಸುವ ಒಂದು ಬಗೆಯ ತರಕಾರಿ ಕಾಯಿ.

ಮೆಣ್ಸು (ನಾ)= ಒಂದು ಬಗೆಯ ಬಳ್ಳಿ ಮತ್ತು ಖಾರವಾದ ಕಪ್ಪಾದ ಅದರ ಕಾಳು; ಮೆಣಸು.

ಮೆತ್ಗಿ (ನಾ)= ಮೆತ್ತಿಗೆ; ಬೂದಿ ಬೆರೆಸಿದ ಬೀಜದ ಕಾಳನ್ನು ಲಕ್ಕಿಯ ಬುಟ್ಟಿಯಲ್ಲಿ ಹಾಕಿ ಅದರ ಮೇಲೆ ಹುಲ್ಲುಹಾಸಿಗೆ ಹಾಕಿ, ಅದರ ಮೇರೆ ಮಣ್ಣು ಮತ್ತು ಸೆಗಣಿ ಬೆರೆಸಿ ಸಾರಣೆ ಮಾಡಿ ಸಂರಕ್ಷಿಸುವಿಕೆ.

ಮೆತ್ತಗ (ಅ)= ಮೆತ್ತಗೆ; ಮೃದುವಾಗಿ.

ಮೆತ್ತಿಗಿ (ನಾ)= ಮೆತ್ಗಿ (ನೋಡಿರಿ).

ಮೆತ್ತು (ಕ್ರಿ)= ಸವರು; ಲೇಪಿಸು; ತುರುಕು; ಅಂಟಿಸು.

ಮೆತ್ತುಸು (ಕ್ರಿ)= ಕೆಸರನ್ನು ಇಲ್ಲವೆ ಗರಸನ್ನು ಗೋಡೆಗೆ ಸವರಿಸು.

ಮೆದಿ (ನಾ)= ಮೆದೆ; ಜೋಳದ ಸೂಡುಗಳ ಸಾಲು.

ಮೆದಿಹಾಕು (ಕ್ರಿ)= ಕಾಳಿನ ಸೂಡುಗಳನ್ನು ಸಾಲಾಗಿ ಹೊಂದಿಸು; ಹುಲ್ಲಿನ ಸೂಡುಗಳನ್ನು ಸಾಲಾಗಿ ಹೊಂದಿಸು; ಸೂಡುಗಳನ್ನು ಒಟ್ಟು.

ಮೆಯ್ (ಕ್ರಿ)= ತಿನ್ನು; ಬಾಯಿಯಿಂದ ಹುಲ್ಲನ್ನು ಹರಿದು ತಿನ್ನು.

ಮೆಯ್ತೊಳ್ಕೊ (ಕ್ರಿ)= ಸ್ನಾನ ಮಾಡು; ಜಳಕ ಮಾಡು; ಮೈತೊಳೆದುಕೊ.

ಮೆಯ್ಯಿ(ನಾ)= ಶರೀರ; ದೇಹ; ಕಾಯ.

ಮೆಯ್ಯಿ (ಕ್ರಿ)= ಮೇವು ತಿನ್ನು; ಮೆಯ್ಯು.

ಮೆಯ್ಸು (ಕ್ರಿ)= ಮೇಯಿಸು; ಮೆಯ್ಯುವಂತೆ ಮಾಡು; ಉಣಿಸು; ತಿನಿಸು; ತಿನ್ನುವಂತೆ ಮಾಡು.

ಮೆರಿ (ಕ್ರಿ) = ಮೆರೆ; ಜಂಭದಿಂದ ತಿರುಗಾಡು; ಶೋಭಿಸು; ಕಾಣಿಸಿಕೊಳ್ಳು (ಗಾದೆ: ಉರ್ದೋರೂರಾಗಿರಾಲ, ಮೆರ್ದೋರ್ಕೇರ್ಯಾಗಿರಾಲ!).

ಮೆರುಣ್ಗಿ (ನಾ)= ಮೆರವಣಿಗೆ; ಸುತ್ತಾಟ; ಸಂಭ್ರಮದ ಸುತ್ತಾಟ.

ಮೆರುಣ್ಗಿ ತೆಗಿ (ಕ್ರಿ)= ಮೆರವಣಿಗೆ ಹೊರಡಿಸು; ಸಂಭ್ರಮದ ಸುತ್ತಾಟ ನಡೆಸು; ತಿರುಗಾಡಿಸು; ತೋರ್ಪಡಿಸು; ಪ್ರದರ್ಶಿಸು.

ಮೆರ್ಸು (ಕ್ರಿ)= ಮೆರೆಸು; ಮೆರವಣಿಗೆ ಹೊರಡಿಸು; ಸಂಭ್ರಮದ ಸುತ್ತಾಟ ನಡೆಸು; ತಿರುಗಾಡಿಸು; ತೋರ್ಪಡಿಸು; ಪ್ರದರ್ಶಿಸು.

ಮೆಲಿ (ಕ್ರಿ)= ತಿನು; ಉಣು; ಮೇಯು; ಆಹಾರವನ್ನು ಹಲ್ಲಿನಿಂದ ಜಗಿ, ಚಗಳಿಸು, ಚೂರುಗೊಳಿಸು.

ಮೆಲ್ಕ್ಯಾಡ್ಸು (ಕ್ರಿ)= ಮೆಲುಕು ಹಾಕು; ಹಲ್ಲಿನಿಂದ ಆಹಾರವನ್ನು ಅರೆ; ಮೆಯ್ದು ಆದ ಮೇಲೆ (ಪ್ರಾಣಿಗಳು) ಹೊಟ್ಟೆಯಲ್ಲಿಯ ಆಹಾರದ ಕವಳವನ್ನು ಬಾಯಿಗೆ ತಂದು ನುರಿಗೊಳಿಸು.

ಮೆಲ್ಕಿನಾಗ ಕುಡು (ಕ್ರಿ)= ಕಪಾಳಕ್ಕೆ ಹೊಡೆ; ಗಲ್ಲದ ಮೇಲೆ ಏಟ ಹಾಕು.

ಮೆಲ್ಕು (ನಾ)= ಮೆಲುಕು; ಕಪಾಳ.

ಮೆಲ್ಕುಹಾಕು (ಕ್ರಿ)= ಮೆಲ್ಕ್ಯಾಡ್ಸು (ನೋಡಿರಿ).

ಮೆಲ್ಲಗ (ಅ)= ಮೆಲ್ಲಗೆ; ನಿಧಾನವಾಗಿ; ಸಾವಕಾಶವಾಗಿ.

ಮೆವ್ವು (ನಾ)= ಮೇವು; ದನಗಳ ಆಹಾರ.

ಮೆಹಂದಿ (ನಾ) ಉ.= ಮೇಂದಿ; ಕೈಕಾಲುಗಳ ಮೇಲೆ ಕಲಾವಂತಿಕೆಯಿಂದ ಬಳಿದುಕೊಳ್ಳಲು ಬಳಸುವ ಗಿಡವೊಂದರ ಎಲೆಗಳಿಂದ ತಯಾರಿಸಿದ ಶೃಂಗಾರಿಕ ಸಾಧನ.

ಮೆಹನತ್ತು (ನಾ) ಉ.= ಮೈನತ್ತು; ಪರಿಶ್ರಮ; ಪ್ರಯತ್ನ; ದುಡಿಮೆ.

ಮೆಳಿ (ನಾ)= ಮೆಳೆ; ಪೊದೆ; ಪೊದರು; ಕುಂಜ; ಗಿಡಗಳ ಗುಂಪು; ಝುಡ್ಡು.

ಮೆಳ್ಳ (ನಾ)= ಓರೆಗಣ್ಣಿನವ; ಯಾಸಿಗಣ್ಣಿನವ; ಹೊರಳುವ ಕಣ್ಣುಳ್ಳವ.

ಮೆಳ್ಳಿ (ನಾ)= ಮೆಳ್ಳೆಗಣ್ಣುಳ್ಳವಳು; ಓರೆಗಣ್ಣಿನವಳು; ಯಾಸಿ ಗಣ್ಣಿನವಳು; ಹೊರಳುವ ಕಣ್ಣುಳ್ಳವಳು (ಬೈಗುಳ).

ಮೆಳ್ಳುಗಣ್ಣು (ನಾ)= ಓರೆಗಣ್ಣು; ಯಾಸಿಗಣ್ಣು; ಹೊರಳುಗಣ್ಣು; (ವಚನ: ಹಳ್ಳದಾಹೊಲವಾಗಿ ಬೆಳ್ಳನೆರಡೆತ್ತಾಗಿ। ಮೆಳ್ಳುಗಣ್ಣವಳು। ಸೊಸೆಯಾದ। ರಾಮನೆಗೆ ಬಳ್ಳದಲಿ ಹೊನ್ನು ಸರ್ವಜ್ಞ॥).

ಮೆಳ್ಯಾ (ನಾ)= ಮೆಳ್ಳಗಣ್ಣಿನವನು; ಓರೆಗಣ್ಣಿನವ; ಹೊರಳುವ ಕಣ್ಣುಳ್ಳವನು (ಬೈಗುಳ).

ಮೇಂದಿ (ನಾ) ಉ.= ಮೆಹಂದಿ; ಒಂದು ವಿಶೇಷವಾದ ಎಲೆ (ಮಹಿಳೆಯರು ಮೆಹಂದಿ ಗಿಡದ ಎಲೆಯ ರಸವನ್ನು ಕೈಕಾಲುಗಳಿಗೆ ಅತ್ಯಂತ ಕಲಾವಂತಿಕೆಯಿಂದ ಬಳಿದುಕೊಳ್ಳುತ್ತಾರೆ) ಒಂದು ಪ್ರಕಾರದ ಗಿಡ ಮತ್ತು ಅದರ ಎಲೆ; ಶೃಂಗಾರಿಕ ಗಿಡಗಸರು ಸಾಧನ.

ಮೇಜವಾನಿ (ನಾ) ಉ.= ಪಕ್ವಾನ್ನ; ಮೃಷ್ಟಾನ್ನ ಭೋಜನ.

ಮೇಜಾನು (ನಾ) ಉ.= ಮಿಜಾನು; ಒಟ್ಟು.

ಮೇಜು (ನಾ) ಉ.= ನಾಲ್ಕು ಕಾಲುಳ್ಳ ಮರ, ಕಬ್ಬಿಣ, ಪ್ಲಾಸ್ಟಿಕ್ ಇತ್ಯಾದಿಗಳಿಂದ ಮಾಡಿದ, ಕುರ್ಚಿಯ ಮುಂದಿಟ್ಟುಕೊಂಡು ಬರೆಯಲು ಉಪಯೋಗಿಸುವ ಎತ್ತರದ ಚೌಕಿಮಣೆ, ಟೇಬಲ್ಲು.

ಮೇಟಿ (ನಾ)= ನಡುಗಂಭ; ಕೇಂದ್ರದ ಕಂಭ; ತೆನೆತುಳಿಸುವ ಕಣದ ಮಧ್ಯಬಿಂದುವಿನಲ್ಲಿ ಹೂಳಲಾದ ಕಂಬ.

ಮೇಟಿ ವಿದ್ಯ (ನಾ)= ಕೃಷಿಗೆ ಸಂಬಂಧಿಸಿದ ಜ್ಞಾನ; ಕೃಷಿ ವಿಜ್ಞಾನ (ವಚನ: ಕೋಟಿ

ವಿದ್ಯಗಳಿಗಿಂತ। ಮೇಟಿ ವಿದ್ಯಯು ಲೇಸು। -ಸರ್ವಜ್ಞ).

ಮೇಣ (ನಾ)= ಮಯಣ; ಒಂದು ತರಹದ ಅಂಟು; ಮ್ಯಾಣಾ; ಜೇನು ಗೂಡಿನಿಂದ ತಯಾರಿಸಿದ ಅಂಟು ದ್ರವ್ಯ; ಮಹಿಳೆಯರು ಹಣೆಗೆ ಕುಂಕುಮ ಹಚ್ಚಿಕೊಳ್ಳಲು ಬಳಸುವ ಅಂಟುದ್ರವ್ಯ; ಚರ್ಮ ಅಂಟಿಸಲು ಸಮಗಾರರು ಬಳಸುವ ಅಂಟುದ್ರವ್ಯ.

ಮೇಣ್ಣಬಟಿ (ನಾ)= ಮೇಣ ಲೇಪಿಸಿದ ಬಟ್ಟೆ; ತಾಡಪತ್ರಿ; ಲಾರಿ ತುಂಬಿದ ಸಾಮಾನು ತೊಯ್ಯದಂತೆ ಮುಚ್ಚುವ ಮೇಣ್ಬಟ್ಟೆ.

ಮೇಣ್ಬತ್ತಿ (ನಾ)= ಮೇಣದಿಂದ ಸಿದ್ಧಗೊಳಿಸಲಾದ ದೀಪದ ಬತ್ತಿ.

ಮೇಥಕೂಟ (ನಾ) ಮ.= ಮೆಂತೆ ಕಾಳನ್ನು ಕುಟ್ಟಿ ತಯಾರಿಸಿದ ಹಿಟ್ಟು.

ಮೇಥಿ (ನಾ)= ಮೆಂತ್ಯ.

ಮೇಥಿಮೆಳ್ಕುಂದಿ (ನಾ)= ಭಾಲ್ಕಿ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರಾದ ಅಂಬಾದಾಸರಾವ ಕುಲ್ಕರ್ಣಿ ಹಾಗೂ ರಾಮರಾಮ ಕುಲ್ಕರ್ಣಿ ಬಂಧುಗಳ ಹುಟ್ಟೂರು; ಮೆಂತಿ ಮೆಳಕುಂದಿ.

ಮೇದಕ (ನಾ)= ಬೀದರ ಜಿಲ್ಲೆಗೆ ಅಂಟಿ ಕೊಂಡಂತಿರುವ ಮೆತುಕ ಎಂಬ ಊರು ಹಾಗೂ ಜಿಲ್ಲಾ ಕೇಂದ್ರದ ಊರು. ಈ ಜಿಲ್ಲೆಯ ಜಹೀರಾಬಾದ ಮತ್ತು ನಾರಾಯಣಖೇಡ ತಾಲೂಕುಗಳು ಸಂಪೂರ್ಣ ಕನ್ನಡ ಮಯವಾಗಿದ್ದರೂ, ಕನ್ನಡಿಗರ ಮಂದ ಬುದ್ಧಿಯಿಂದಾಗಿ ಅವು ಆಂಧ್ರಕ್ಕೆ ಸೇರಿವೆ.

ಮೇದಾರ (ನಾ)= ಮೇದರ; ಮೇದ; ಮ್ಯಾದ; ಮ್ಯಾದಾರ; ಬಿದಿರಿನ ಬುಟ್ಟಿ, ಮೊರ, ಚಾಪೆ, ಜಿಬುಲ್ಕಿ ಇತ್ಯಾದಿ ಹೆಣೆವ ವೃತ್ತಿಯ ಜನಾಂಗ.

ಮೇದಾರ ಕೇತಯ್ಯ (ನಾ)= ಮೇದಾರ ಜನಾಂಗದಲ್ಲಿ ಆಗಿ ಹೋದ ಬಸವಯುಗದ ಒಬ್ಬ ಶರಣ.

ಮೇರಿ (ನಾ)= ಮಾತೆಮೇರಿ; ಜಡೆ; ಹೆಳಲು; ಹೆಣಲು; ವೇಣಿ.

ಮೇರ್ಬಾನಿ (ನಾ) ಉ.= ಮೆಹೆರ್ಬಾನಿ; ಕೃಪೆ; ದಯೆ.

ಮೇಲಾ (ನಾ) ಹಿಂ.= ಮೇಳ; ಮ್ಯಾಳ; ಜಾತ್ರೆ.

ಮೇಲಾಟ (ನಾ)= ಪೈಪೋಟಿ; ಸ್ಪರ್ಧೆ; ಏರಾಟ; ನಾಮೇಲು ನೀಮೇಲು ಎಂಬ ಜಿದ್ದಾಟ.

ಮೇಲು ಮಂಟಪ (ನಾ)= ಶಿವಲೋಕ; ಕೈಲಾಸ; ವೈಕುಂಠ (ಬಯಲಾಟದ ಮಾತು: ಆ ಮೇಲು ಮಂಟಪವನ್ನು ಬಿಟ್ಟು ಈ ಭೋಲೋಕಕ್ಕೆ ಬರಲು ಕಾರಣವೇನು ಸ್ವಾಮಿ। ನೀ ಎನ್ನ ದ್ವಾಮಿ।).

ಮೇಲ್ಮುದ್ದಿ (ನಾ)= ಮೇಲು ಮುದ್ದೆ; ಮಾಳಿಗೆಯ ಮೇಲೆ ಹಾಕುವ ನೀರು ಕಲಸಿದ ಮಣ್ಣು ಮುದ್ದೆಯ ಮೆತ್ತಿಗೆ (ಗಾದೆ: ಅಕ್ಕಿಕಾಳು ಹಾಕ್ಲಾಕಾ, ಮಣ್ಣು ಮಾಡ್ಲಾಕಾ, ಮೇಲ್ಮುದ್ದಿ ಹಾಕ್ಲಾಕಾ ಒಲ್ಲ ಅನಬಾರದು).

ಮೇಲ್ಯಾ (ನಾ) ಮ.= ಹೆಣಗೇಡಿ; ಹೆಣ ಭಾರವಾದವನು; ನೆಲ ಭಾರವಾದವನು.

ಮೇಳಾ (ನಾ)= ಮ್ಯಾಳಾ; ತಂಡ; ಸಂಗೀತಗಾರರು, ಭಜನ ಮಾಡುವವರು ಮೊದಲಾದವರ ಹಿಂಡು, ತಂಡ, ಗುಂಪು.

ಮೇಳಾವಾ (ನಾ) ಮ.= ಜಾತ್ರೆ; ಉರುಸು; ಸಮ್ಮೇಳನ.

ಮೈ (ನಾ)= ಮೆಯ್; ಮೆಯ್ಯಿ; ದೇಹ; ಶರೀರ.

ಮೈಂದ (ನಾ)= ಮೈದ; ಮೋಸಗಾರ; ಒಳಗುಟ್ಟಿನವನು.

ಮೈಂದರ್ಗಿ (ನಾ)= ಒಂದು ನಾಟ್ಯ ಕಂಪನಿಯುಳ್ಳ ಊರು.

ಮೈಕಾಯು (ಕ್ರಿ)= ಜ್ವರ ಉಂಟಾಗು; ಮೈಯಲ್ಲಿ ಶಾಖ ಹೆಚ್ಚಾಗು; ಉರಿಬರು.

ಮೈಕು (ನಾ) ಇಂ.= ಧ್ವನಿವರ್ಧಕ; ಸ್ಪೀಕರ್.

ಮೈಕೈ ನೋಡ್ಕೊ (ಕ್ರಿ)= ಅಂಗಾಂಗಗಳ ಕಡೆ ಲಕ್ಷ್ಯವಿಡು; ಸ್ವಚ್ಛವಾಗಿರು.

ಮೈಕೈ ಹೊಡಿ (ಕ್ರಿ)= ಮೈ, ಕೈ, ಕಾಲುಗಳಲ್ಲಿ ನೋವುಂಟಾಗು; ಅಂಗಾಂಗಗಳಲ್ಲಿ ನೋವಿನ ಅನುಭವವಾಗು.

ಮೈಗಳ್ಳ (ನಾ)= ಸೋಮಾರಿ.

ಮೈಗಿ ಬಾ (ಕ್ರಿ)= ಒರಟನಾಗು; ಉದ್ಧಟತನ ತೋರು.

ಮೈಗಿ ಬಂದಾಂವ (ನಾ)= ಒರಟ; ಉದ್ಧಟ; ಹುಂಬ.

ಮೈಘಾಳಿಉಣು (ಕ್ರಿ)= ಮೈಗಳ್ಳತನ ಅತಿಯಾಗು; ಆಲಸ್ಯ ಅತಿಯಾಗು.

ಮೈಛಳಿ (ನಾ)= ಶರೀರದಲ್ಲಿಯ ನಡುಕ; ಸಂಕೋಚ; ದಾಕ್ಷಿಣ್ಯ.

ಮೈಛಳಿ ಬಿಡು (ಕ್ರಿ)= ನಡುಕ ಮಾಯವಾಗು; ಭಯ ಇಲ್ಲದಂತಾಗು; ಸಂಕೋಚ ತೊರೆ.

ಮೈಜುಮ್ಮನು (ಕ್ರಿ)= ನವಿರೇಳು; ರೋಮಾಂಚನವುಂಟಾಗು; ಮೈಜುಮ್ಮೆನು.

ಮೈತೊಳ್ಕೊ (ಕ್ರಿ)= ಜಳಕ ಮಾಡು; ಸ್ನಾನ ಮಾಡು; ಮುಖ, ಎದೆ, ಬೆನ್ನು, ಕಾಲುಗಳನ್ನು ತೊಳೆದುಕೊ.

ಮೈದ (ನಾ)= ಮೈಂದ; ಒಳಗುಟ್ಟಿನವ; ಮೋಸಗಾರ; ಅರಿತೂ ಅರಿಯದಂತಿರುವವ.

ಮೈದಾನ (ನಾ)ಉ.= ಸಮತಟ್ಟಾದ ಭೂಮಿ; ಬಯಲು; ಕಕ್ಕಸದ ಜಾಗ; ಶೌಚಕ್ಕಾಗಿ ಮೀಸಲಾದ ಬಯಲು; ಕಕ್ಕಸ; ಮಲವಿಸರ್ಜನೆ; ಹೊರ್ಕಡಿ; ಬಯಲ್ಕಡಿ.

ಮೈದಾನಕ ಹೋಗು (ಕ್ರಿ)= ಬಯಲಿನಲ್ಲಿ ವಿಸರ್ಜನೆಗೆ ಹೋಗು; ಮಲವಿಸರ್ಜನೆಗೆ ಹೊರಹೋಗು; ಬಯಲ್ಕಡಿಗೆ ಹೋಗು; ಕಕ್ಕಸಕ್ಕೆ ಹೋಗು.

ಮೈದುನ (ನಾ)= ಗಂಡ ಅಥವಾ ಹೆಂಡತಿಯ ತಮ್ಮ.

ಮೈನತ್ತು (ನಾ)ಉ.= ಮಹಿನತ್ತು; ಪರಿಶ್ರಮ; ದುಡಿಮೆ.

ಮೈನಳ್ಳಿ (ನಾ)= ಭಾಲ್ಕಿ ತಾಲೂಕಿನ ಒಂದುಹಳ್ಳಿ. ಭಾಲ್ಕಿಯ ಹಿರೇಮಠದ ಮೂಲಗುರುವಿನ ಸಮಾದಿಯುಳ್ಳ ನಾರಾಯಣ ಖೇಡ ತಾಲೂಕಿನ ಮೈನಳ್ಳಿ ಎಂಬ ಪುಣ್ಯ ಕ್ಷೇತ್ರ.

ಮೈನಾ (ನಾ)= ಬೀದರ ಜಿಲ್ಲೆಯಲ್ಲಿ ಲೆಂಡ್ಯಾ ಎಂದು ಕರೆಯಲಾಗುವ ಪಕ್ಷಿ; ಗೊರವಂಕ ಜಾತಿಗೆ ಸೇರಿದ ನಾಸೀ ಬಣ್ಣದ, ಹಳದಿ ರೆಪ್ಪೆಗಳುಳ್ಳ ಒಂದು ಪಕ್ಷಿ; ಮಾತಾಡುವ ಪಕ್ಷಿ.

ಮೈನಾ (ನಾ) ಉ.= ಮಹಿನಾ; ತಿಂಗಳು.

ಮೈನಾವಾರಿ (ವಿ)ಉ.= ಮಾಹೆವಾರಿ; ಪ್ರತಿ ತಿಂಗಳಿನ; (ನಾ) ತಿಂಗಳಿಗೊಮ್ಮೆ ಬರುವ ಮಾಸಿಕ ಪತ್ರಿಕೆ.

ಮೈನೆರಿ (ಕ್ರಿ)= ಮೈನೆರೆ; ಪ್ರಥಮ ರಜೋದರ್ಶನ ಹೊಂದು; ಪುಷ್ಪವತಿಯಾಗು; ದೊಡ್ಡವಳಾಗು; ಪುಕಳಿ ಬೆದರು.

ಮೈಭಾರ (ನಾ)= ಶರೀರದ ತೂಕ.

ಮೈಮರಿ (ಕ್ರಿ)= ಮೈಮರೆ.

ಮೈಮಾ (ನಾ)= ಮಹಿಮೆ; ಮೈಮೆ; ಶ್ರೇಷ್ಠತೆ; ಔನ್ನತ್ಯ; ಮಹಾತ್ಮೆ.

ಮೈಉಣು (ಕ್ರಿ)= ಮೈಯೆಲ್ಲ ವ್ಯಾಪಿಸು; ಅಭ್ಯಾಸವಾಗು; ರೂಢಿಯಾಗು.

ಮೈಮುರಿ (ಕ್ರಿ)= ಶರೀರವನ್ನು ಮಣಿಸು; ದುಡಿ; ಪರಿಶ್ರಮಿಸು.

ಮೈಯಾಗ ದೇವ್ರು ಬರು (ಕ್ರಿ)= ಮೈ ಮೇಲೆ ದೇವರ ಸವಾರಿಯಾಗು; ಸವಾರಿ ಏಳು.

ಮೈಯೆಲ್ಲಾ ಉರಿ (ಕ್ರಿ)= ದೇಹದ ತುಂಬ ಶಾಖ ಹೆಚ್ಚಾಗು; ತಾಪ ಹೆಚ್ಚಾಗು; ಕೋಪವುಂಟಾಗು.

ಮೈಲಗಲ್ಲು (ನಾ)= ದಾರಿಯ ದೂರಳತೆಯನ್ನು ಸೂಚಿಸಲು ಹುಗಿದಿರುವ ಬಾಲಗಲ್ಲು; ಪ್ರತಿಯೊಂದು ಫರ್ಲಾಂಗು ದೂರಕ್ಕೊಂದರಂತೆ ಹುಗಿದಿರುವ ಬಾಲಗಲ್ಲು.

ಮೈಲಾ (ನಾ) ಹಿಂ.= ಕೊಳೆ; ಹೊಲಸು; ಮಲಿನತೆ; ಮೈಲಿಗೆ.

ಮೈಲಾ ತೆಗಿ (ಕ್ರಿ)= ಸ್ವಚ್ಛಮಾಡು; ತಲೆಯ ಕೊಳೆತೆಗೆ; ಕಿವಿಯಲ್ಲಿಯ ಕೂಗುಣ ಅಥವಾ ಗೂಬಿ ಹೊರತೆಗೆ.

ಮೈಲಾರ (ನಾ)= ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಮಲ್ಲಯ್ಯನ ತೀರ್ಥ ಕ್ಷೇತ್ರವಿರುವ ಹಾಳೂರು. ಗಾಯ್ಮುಖ ಕ್ಷೇತ್ರವಿರುವ ಹಾಳೂರು.

ಮೈಲು (ನಾ) ಹಿಂ.= ದೂರವನ್ನು ಅಳೆಯುವ ಒಂದು ಮಾನ, ಅಳತೆಗೋಲು; ಎಂಟು ಫರ್ಲಾಂಗು.

ಮೈಲೂರು (ನಾ)= ಬೀದರ ನಗರದ ಭಾಗವಾಗಿರುವ ಒಂದು ಹಳ್ಳಿಯ ಹೆಸರು.

ಮೈಲ್ಗಿ (ನಾ)= ಮೈಲಿಗೆ; ಮುಡಿಚೆಟ್ಟು.

ಮೈಲ್ಗಿಯಾಗು (ಕ್ರಿ)= ಮಡಿಗೆಡು; ಹೊಲಸಾಗು; ಮುಟ್ಟಾಗು.

ಮೈಲುತ್ತ್ಯ (ನಾ)= ಒಂದು ಬಗೆಯ ಖನಿಜ ಲವಣ.

ಮೈಸೂರ್ಪಾಕು (ನಾ)= ಕಡ್ಲೆ ಹಿಟ್ಟು, ತುಪ್ಪ, ಸಕ್ಕರೆಗಳಿಂದ ತಯಾರಿಸಿದ ಒಂದು ಬಗೆಯ ಸಿಹಿ ತಿಂಡಿ.

ಮೈಸೋಬಾ (ನಾ)= ಮಹಿಷೋಬಾ; ಮಸೋಬಾ; ಜಾನಪದ ದೇವರು.

ಮೈ ಹಿಡಿ (ಕ್ರಿ)= ದಪ್ಪವಾಗು; ಪಿಂಡಾಗು; ಧಮ್ಮ ಆಗು.

ಮೊಂಡ (ವಿ)= ಮಂಡ; ಚೂಪಿಲ್ಲದ; ಹರಿತವಿಲ್ಲದ; ಉದ್ಧಟ; ಹಟಮಾರಿ.

ಮೊಂಡಗುಣ (ನಾ)= ಹಟಮಾರಿತನ; ಉದ್ಧಟತನ.

ಮೊಂಡತಾನ (ನಾ)= ಹಟಮಾರಿತನ; ಉದ್ಧಟತನ; ಮೊಂಡುತನ.

ಮೊಕ (ನಾ)= ಮುಖ; ಮೋರೆ; ಮೊಗ; ಮುಸುಡಿ; ಮೋತಿ.

ಮೊಕದ್ದಮಾ (ನಾ) ಉ.= ನ್ಯಾಯಾಲಯದಲ್ಲಿಯ ವ್ಯಾಜ್ಯ; ಖಟ್ಲೆ.

ಮೊಕಮೀಸಿ (ನಾ)= ಮೇಲ್ತುಟಿಯ ಮೇಲೆ ಮೂಡಿದ ಕೂದಲು.

ಮೊಕ್ತೆದಾರ (ನಾ) ಉ.= ತೋಟದ ಮನೆಯುಳ್ಳವನು.

ಮೊಖಾಬಿಲಾ (ನಾ) ಉ.= ಹೋರಾಟ; ಮುಖಾ ಮುಖಿ ಭೇಟಿ.

ಮೊಗಲಾಯಿ (ನಾ)= ಮೊಗಲಿಯಾ; ಮೊಗಲ ಕಾಲದ್ದು; ಹಳೆ ಪದ್ಧತಿಯದು; ಹೈದರಾಬಾದ ಆಡಳಿತಕ್ಕೆ ಸಂಬಂಧಿಸಿದ್ದು.

ಮೊದಲೆಣ್ಣೆ (ನಾ)= ಮದುಮಕ್ಕಳಿಗೆ ಮೀಯಿಸುವ ಮುನ್ನ ಸಲ್ಲುವ ಮೀಹದ ಎಣ್ಣೆ (ಎಣ್ಣೆ ಹಚ್ಚುವ ಹಾಡು: ದೇವದೇವರಿಗೆಣ್ಣೆ। ಎಲ್ಲಾ ದೇವರಿಗೆಣ್ಣೆ। ಮೊದಲ ಸಂಗಯ್ಯಗ ಮೊದಲೆಣ್ಣೆ। ಹರಹರ ನಮ್ಮಿವಗೆ ನೈಯೆಣ್ಣೆ।।).

ಮೊಮ್ಮ (ನಾ)= ಅವ್ವನ ಅಣ್ಣ ಅಥವಾ ತಮ್ಮ; ಸೋದರ ಮಾಂವ; ಮಾಂವ.

ಮೊಮ್ಮಗ (ನಾ)= ಮಗನ ಮಗ; ಮಗಳ ಮಗ; ಸೋದರ ಸೊಸೆಯ ಮಗ; ಸೋದರಳಿಯನ ಮಗ.

ಮೊಮ್ಮಗಳು (ನಾ)= ಮಗನ ಮಗಳು; ಮಗಳ ಮಗಳು; ಸೋದರಸೊಸೆ, ಸೋದರಳಿಯನ ಮಗಳು.

ಮೊರಂಬಿ (ನಾ)= ಮಹಾದೇವಪ್ಪ ಶರಣರು ನಿರ್ಮಿಸಿದ ಶರಣ ಬಸವೇಶ್ವರ ದೇವಾಲಯವಿರುವ ಭಾಲ್ಕಿ ತಾಲೂಕಿನ ಒಂದು ಹಳ್ಳಿ, ಭಂಗಾರ ಬಸಪ್ಪನ ಊರು.

ಮೊಸಡಿ (ನಾ)= ಮುಸುಡೆ; ಮೋರೆ; ಮುಖ.

ಮೊಸೋಬಾ (ನಾ)= ಮಹಿಸೋಬಾ; ಮಸೋಬಾ; ಜಾನಪದ ದೇವರು.

ಮೊಹರಂ (ನಾ) ಉ.= ಅಲಾಯಿ ಹಬ್ಬ; ಮುಸಲ್ಮಾನರ ಪಂಚಾಂಗದ ಪ್ರಕಾರ ಮೊದಲನೆ ತಿಂಗಳು.

ಮೊಹರ (ನಾ) ಮ.= ಸಿಕ್ಕಾ; ಮುದ್ರೆ; ಸ್ಟ್ಯಾಂಪು.

ಮೊಹರಿ = ಮೋರಿ; ಬಚ್ಚಲ ನೀರಿನ ಹಾದಿ.

ಮೊಹಲ್ಲಾ (ನಾ) ಉ.= ಗಲ್ಲಿ; ಬಡಾವಣೆ; ಊರಿನ ಒಂದು ಭಾಗ.

ಮೊಳಾ (ನಾ)= ಮೊಳ; ಮೊಳಕೈಯಿಂದ ಹಸ್ತದ ತುದಿವರೆಗಿನ ಅಳತೆ; ಎರೆಡುಗೇಣು.

ಮೊಳಿ (ನಾ)= ಮೊಳೆ.

ಮೊಳ್ಕಿ (ನಾ)= ಮೊಳಕೆ; ಅಂಕುರ; ಕುಡಿ; ಪ್ರಾರಂಭ.

ಮೊಳ್ಕಿಒತ್ತು (ಕ್ರಿ)= ಮೊಳಕೆ ಒತ್ತು; ಮೊಳಕೆದೋರು; ಅಂಕುರ ಚಾಚು; ಕುಡಿದೋರು.

ಮೊಳ್ಕಾಲು (ನಾ)= ಮೊಣಕಾಲು.

ಮೊಳ್ಕೈ (ನಾ)= ಮೊಣಕೈ,

ಮೊಳ್ಳಿ (ನಾ)= ಒಂದು ಪ್ರಕಾರದ ಕಾಡುಮರ ಮತ್ತು ಅದರ ಕಾಯಿ.

ಮೊಳ್ಳಿ ಬೀಜ (ನಾ)= ಮೊಳ್ಳೆಯ ಬೀಜ; ಮಳ್ಳಿ ಬೀಜ; ಮೊಳ್ಳಿಯ ಮೇಲ್ಪದರು ತಿಂದ ಮೇಲೆ ಉಳಿವ ಕಾಯಿ ಮತ್ತು ಅದರ ತಿರುಳು.

ಮೋಂ (ನಾ)= ಮೋಮು; ಮೇಣ; ಮಯಣ.

ಮೋಂಬತ್ತಿ (ನಾ)= ಮೇಣಬತ್ತಿ; ಮೇಣದಿಂದ ಸಿದ್ಧಗೊಳಿಸಲಾದ ದೀಪದ ಬತ್ತಿ.

ಮೋಕಾ (ನಾ) ಉ.= ಮೌಕಾ; ಸಮಯ; ಅವಕಾಶ.

ಮೋಕು (ನಾ)= ಎತ್ತರದ ಜಾಗ; ಒಡ್ಡು; ಹೊಡ್ಡು; ದಿನ್ನೆ; ಏರಿ; ಟೇಕಣೆ; ಟೇಕಡಿ; ದಿನ್ನೆ (ಉದಾ: ಕಮಲಾಪುರದ ಹತ್ತಿರದ ಕುದ್ರಿ ಮೋಕು).

ಮೋಚಿ (ನಾ)= ಸಮಗಾರ; ಮಚ್ಚಿಗಾರ; ಚಮ್ಮಾರ.

ಮೋಚು (ನಾ)= ಮನಸಿಲ್ಲದ ಮನಸ್ಸಿನಿಂದ ಕೊಡು; ಹಾಳು ಮಾಡು; ನಾಶಮಾಡು.

ಮೋಚುತಿನು (ಕ್ರಿ)= ಕಾಲು; ಕೈ ಹೊರಳಿ ನೋವಾಗು.

ಮೋಜಣಿ (ನಾ)= ಭೂಮಿಯ ಅಳತೆ ಮಾಡುವಿಕೆ; ಪೈಮಾಯಷ್; ಸರ್ವೆ ಮಾಡುವಿಕೆ.

ಮೋಜಣಿದಾರ (ನಾ)= ಪೈಮಾಯಷ್‌ದಾರ; ಸರ್ವೇಯರ; ಭೂಮಿ ಅಳತೆ ಮಾಡುವವನು.

ಮೋಜು (ನಾ)= ಮಜಾ; ವಿನೋದ; ತಮಾಷೆ; ವಿಲಾಸ.

ಮೋಟಾ (ವಿ)= ದಪ್ಪ; ಧಮ್ಮ; ಪಿಂಡ.

ಮೋಡಿ (ನಾ)= ಸರಪಳಿ ಬರೆವಣಿಗೆ; ಸಂಕ್ಷಿಲಿಪಿ; ಹಳಗನ್ನಡ ಬರೆವಣಿಗೆ.

ಮೋಡು (ನಾ)= ತಿರುವು ದಾರಿ; ಮಣಿಸಿದ್ದು; ಮಡಿಚಿದ್ದು.

ಮೋತಿ (ನಾ)= ಮೋರೆ; ಮುಖ.

ಮೋತೆಬರಿ (ನಾ) ಉ.= ದೊಡ್ಡಸ್ತಿಕೆ; ಬಡಿವಾರ.

ಮೋತ್ರ (ನಾ)= ಮುಹೂರ್ತ; ಮೋರ್ತ; ಶುಭಾರಂಭ.

ಮೋದಕ (ನಾ)= ಗಣಪತಿ ಬಯಸುವ ಕಡುಬು; ಗಣಪತಿಯ ನೈವೇದ್ಯದ ಕಡುಬು.

ಮೋಪಾಗು (ಕ್ರಿ) ಮ.= ಬಹಳವಾಗು; ಘಾರಾಗು.

ಮೋಪಿಗೆ ಮೋಪು (ಅ)= ಕೀಲಿಗೆ ಕೀಲು; ಸಂಧಿಗೆ ಸಂದು; ಹೊಂದಿಕೆ.

ಮೋಪು (ನಾ)= ಹೊಂದಿಕೆ; ಕೀಲು ಹೊಂದಿಕೆ; ಸಂದುಹೊಂದಿಕೆ; ಬಹಳ; ಅತಿಶಯ.

ಮೋಪ್ರಿ (ನಾ)= ಅಪವಾದ; ನಿಂದೆ.

ಮೋಪ್ರಿ ಆಗು (ಕ್ರಿ)= ಅಪವಾದಕ್ಕೆ ಗುರಿಯಾಗು; ನಿಂದೆಗೆ ಗುರಿಯಾಗು.

ಮೋಪ್ರಿಮಾಡು (ಕ್ರಿ)= ಅಪವಾದಕ್ಕೆ ಗುರಿ ಮಾಡು; ನಿಂದೆಗೆ ಗುರಿ ಮಾಡು.

ಮೋರ (ನಾ) ಉ.= ಮುಹರು; ಮುದ್ರೆ; ಉಂಡಿಗೆ; ಠಸ್ಸಾ; ಮಯೂರ.

ಮೋರಿ (ನಾ)= ಮೊಹರಿ; ನಾಲಿ; ಚರಂಡಿ; ಬಚ್ಚಲ ನೀರಿನ ಹಾದಿ.

ಮೋರ್ಕ (ನಾ)= ಮೂರ್ಖ; ದಡ್ಡ; ಹೆಡ್ಡ.

ಮೋರ್ಖಂಡಿ (ನಾ)= ಬಸವಕಲ್ಯಾಣ ತಾಲೂಕಿನ ಮಯೂರ ಖಂಡಿ ಎಂಬ ಐತಿಹಾಸಿಕ ಊರು.

ಮೋರ್ತ (ನಾ)= ಮುಹೂರ್ತ.

ಮೋರ್ತಮಾಡು (ಕ್ರಿ)= ಮುಹೂರ್ತಗೊಳಿಸು; ಪ್ರಾರಂಭಿಸು; ಚಾಲನೆ ನೀಡು.

ಮೋರ್ತಿ (ನಾ)= ಮೂರ್ತಿ; ಪುತ್ಥಳಿ; ಪ್ರತಿಮೆ.

ಮೋಲಿಸಾಬ (ನಾ) ಉ.= ಮೌಲ್ವಿಸಾಬ; ಮಾಸ್ತರ; ಶಿಕ್ಷಕ.

ಮೋಸ (ನಾ)= ಮಾಂಸ; ಮೌಂಸ; ಖಂಡ; ವಂಚನೆ; ಕಪಟ.

ಮೋಸಂ (ನಾ) ಉ.= ಋತು; ಸುಗ್ಗಿ; ಕಾಲ; ಸಮಯ.

ಮೋಸಂಬಿ (ನಾ)= ನಿಂಬೆಜಾತಿಯ ಒಂದು ಗಿಡ ಮತ್ತು ಅದರ ಹಣ್ಣು.

ಮೋಸಂ ಬಿಗಡಾಸು (ಕ್ರಿ)= ವಾತಾವರಣ ಕೆಡು.

ಮೋಸಮ್ಮು (ನಾ)= ವಾತಾವರಣ; ಋತು; ಸುಗ್ಗಿ.

ಮೋಳಕೇರಿ (ನಾ)= ಮೋಳಿಗೆಯ ಮಾರಯ್ಯ ಶರಣರು ಹಾಗೂ ಅವರ ಸತಿ ಮೋಳಿಗೆ ಮಹಾದೇವಿ ಶರಣೆಯರು ವಾಸಿಸಿದ ಊರು.

ಮೋಳಿ (ನಾ)= ಮೊಳೆ; ಕಬ್ಬಿಣದ ಚೂಪಾದ ಉದ್ದತುಂಡು.

ಮೋಳಗಿ (ನಾ)= ಕಟ್ಟಿಗೆ; ಉರುವಲು; ಸೌದೆ.

ಮೋಳಗಿಮಹಾದೇವಿ (ನಾ)= ಶರಣ ಮೋಳಿಗೆ ಮಾರಯ್ಯನವರ ಧರ್ಮ ಪತ್ನಿ.

ಮೋಳಗಿ ಮಾರಯ್ಯ (ನಾ)= ಕಾಶ್ಮೀರ ರಾಜ್ಯದ ಸವಾಪಾದ ಲಕ್ಷದ ರಾಜನಾದ ಮಹಾದೇವ ಭೂಪಾಲ ಹನ್ನೆರಡನೆಯ ಶತಮಾನದ ಬಸವಕ್ರಾಂತಿಯ ಸಮಯದಲ್ಲಿ ಬಸವ ಕಲ್ಯಾಣಕ್ಕೆ ಬಂದು ಮೋಳಿಗೆ ಅಂದರೆ ಉರುವಲು ಕಟ್ಟಿಗೆ ಮಾರಿ ಬದುಕಿದ ಕಾರಣ ಮೋಳಗಿ ಮಾರಯ್ಯನಾದನು.

ಮೋಳಿ ಜಡಿ (ಕ್ರಿ)= ಗೋಡೆ, ನೆಲ ಅಥವಾ ಕಟ್ಟಿಗೆಯಲ್ಲಿ ಮೊಳೆಯನ್ನು ನೆಡು.

ಮೌಂಸ (ನಾ)= ಮಾಂಸ; ಖಂಡ.

ಮೌಕಾ (ನಾ) ಉ.= ಮೋಕಾ; ಅವಕಾಶ.

ಮೌಜೆ (ನಾ) ಉ.= ಹಳ್ಳಿ; ಗ್ರಾಮ.

ಮೌತ್ (ನಾ)= ಸಾವು; ಮರಣ.

ಮೌತಾ (ನಾ) ಉ.= ಶವಸಂಸ್ಕಾರ; ಅಂತಿಮ ಸಂಸ್ಕಾರ; ಶವವನ್ನು ಮಣ್ಣಿನಲ್ಲಿ ಹೂಳುವಿಕೆ.

ಮೌನ (ನಾ)= ಸುಮ್ಮನಿರುವಿಕೆ; ಮಾತಾಡದಿರುವಿಕೆ.

ಮೌಲಾಲಿ (ನಾ) ಉ.= ಒಬ್ಬ ಮುಸಲ್ಮಾನ ಪೀರನ ಹೆಸರು.

ಮೌಲಿಸಾಬ (ನಾ)= ಮಾಸ್ತರ; ಶಿಕ್ಷಕ; ಮುಸಲ್ಮಾನರ ಧರ್ಮಗುರು.

ಮೌಸಿ (ನಾ) ಮ.= ಚಿಕ್ಕಮ್ಮ; ತಾಯಿಯ ತಂಗಿ ಅಥವಾ ಅಕ್ಕ.

ಮ್ಯಾಕ (ಅ)= ಮೇಲಕ್ಕೆ; ಮೇಲ್ಗಡೆಗೆ.

ಮ್ಯಾಗ (ಅ)= ಮೇಲಕ್ಕೆ; ಮೇಲ್ಗಡೆಗೆ; ಮೇಲೆ.

ಮ್ಯಾಚ್ (ನಾ) ಇಂ.= ಆಟದ ಸ್ಪರ್ಧೆ; ಪಂದ್ಯ; ಮ್ಯಾಚು.

ಮ್ಯಾಚಿಂಗ್ (ನಾ) ಇಂ.= ಹೊಂದಾಣಿಕೆ.

ಮ್ಯಾಚು (ನಾ)= ಮ್ಯಾಚ್ (ನೋಡಿರಿ).

ಮ್ಯಾಟು (ನಾ)= ಚಾಪೆ.

ಮ್ಯಾಟ್ನಿ ಶೋ (ನಾ)ಇಂ.= ಹಗಲು ಸಿನೇಮ ಪ್ರದರ್ಶನ.

ಮ್ಯಾಡಂ (ನಾ) ಇಂ.= ಸಾಹೇಬ್ತಿ; ಅಧಿಕಾರಿಣಿ.

ಮ್ಯಾಣಾ (ನಾ)= ಮೇಣ; ಮಯಣ; ಒಂದು ತರಹದ ಅಂಟು; ಜೇನುಗೂಡಿನಿಂದ ತಯಾರಿಸಿದ ಅಂಟು ದ್ರವ್ಯ; ಮಹಿಳೆಯರು ಹಣೆಗೆ ಕುಂಕುಮ ಹಚ್ಚಿಕೊಳ್ಳಲು ಬಳಸುವ ಅಂಟು ದ್ರವ್ಯ; ಚರ್ಮ ಅಂಟಿಸಲು ಸಮಗಾರರು ಬಳಸುವ ಅಂಟು ದ್ರವ್ಯ.

ಮ್ಯಾಣ್ಣಬಟ್ಟಿ (ನಾ)= ಮೇಣ್ಣಚ್ಚಿ; ಮೇಣ ಸವರಿದ ಬಟ್ಟೆ; ತಾಡ ಪತ್ರಿ.

ಮ್ಯಾಣ್ಯಾ (ನಾ)= ಮೇಣೆ; ಪಲ್ಲಕ್ಕಿ; ಮನುಷ್ಯರು ಹೊರುವ ವಾಹನ; ಜಗದ್ಗುರುಗಳ ವಾಹನವಾದ ಅಡ್ಡ ಪಲ್ಲಕ್ಕಿ.

ಮ್ಯಾಣ್ಯಾ ಏರು (ಕ್ರಿ)= ಪಲ್ಲಕ್ಕಿಯನ್ನು ಹತ್ತು.

ಮ್ಯಾದರು (ನಾ)= ಮೇದ; ಮೇದಾರ; ಬಿದಿರಿನ ಬುಟ್ಟಿ, ಕಾಳು ಕೇರುವ ಮೊರ, ಚಾಪೆ, ಇತ್ಯಾದಿ ಹೆಣೆವ ವೃತ್ತಿಯ ಜನಾಂಗ.

ಮ್ಯಾದಾರ (ನಾ)= ಮ್ಯಾದರು (ನೋಡಿರಿ).

ಮ್ಯಾದಾರ ಕೇತಯ್ಯ (ನಾ)= ಹನ್ನೆರಡನೆಯ ಶತಮಾನದ ಬಸವಯುಗದ ಬೆತ್ತದ ಕಾಯಕದ ಒಬ್ಬ ಶರಣ.

ಮ್ಯಾನು (ನಾ) ಹಿಂ.= ತಲವಾರ ಇಲ್ಲವೆ ಚೂರಿಯ ಒರೆ, ಕವಚ.

ಮ್ಯಾಪು (ನಾ) ಇಂ.= ನಕಾಶ; ನಕ್ಷೆ.

ಮ್ಯಾರೇಜು (ನಾ) ಇಂ.= ಮದುವೆ; ವಿವಾಹ.

ಮ್ಯಾರೇಜು ಪಾರ್ಟಿ (ನಾ)ಇಂ.= ಮದುವೆಯ ಔತಣ ಕೂಟ.

ಮ್ಯಾಲ (ಅ)= ಮೇಲೆ (ಗಾದೆ: ಮ್ಯಾಲ ಝಗ ಝಗ, ಒಳ್ಗ ಭಗಭಗ).

ಮ್ಯಾಲ ಭೀಳು (ಕ್ರಿ)= ಜಗಳ ತೆಗೆ; ತಂಟೆ ಹೂಡು; ತಕ್ರಾರುತೆಗೆ.

ಮ್ಯಾಲಾಗು (ಕ್ರಿ)= ವಿಜಯಿಯಾಗು; ದೊಡ್ಡವನೆನಿಸು; ಮೈಮೇಲೆ ಎರಗು.

ಮ್ಯಾಲಾಮ್ಯಾಲ (ದ್ವಿ)= ಮೇಲಿಂದ ಮೇಲೆ.

ಮ್ಯಾಲಿಕ್ಕು (ಕ್ರಿ)= ಮೇಲ್ಭಾಗದಲ್ಲಿ ಇರಿಸು; ಮೇಲೆ ಇಡು.

ಮ್ಯಾಲಿನ ಖರ್ಚು (ನಾ)= ಚಿಲ್ಲರೆ ಖರ್ಚು; ಇತರೆ ಖರ್ಚು; ಕಿರಕೋಳ ಖರ್ಚು.

ಮ್ಯಾಲಿನ ಫಳ್ಕಿ (ನಾ)= ಹೆಚ್ಚುವರಿಗಳಿಕೆ; ಲಂಚ.

ಮ್ಯಾಲೇರು (ಕ್ರಿ)= ಮೇಲೆ ಹತ್ತು; ಮೇಲೇರು.

ಮ್ಯಾಲ್ಕ (ಅ)= ಮೇಲಕ್ಕೆ; ಮೇಲ್ಗಡೆಗೆ.

ಮ್ಯಾಲ್ಗೈ (ನಾ)= ಗೆಲುವಿನ ಕೈ; ಗೆಲುವು; ಹೆಚ್ಚುಗಾರಿಕೆ; ಮೇಲ್ಗೈ.

ಮ್ಯಾಲ್ಗೈ ಆಗು (ಕ್ರಿ)= ಗೆಲ್ಲು; ಗೆಲುವು ಸಾಧಿಸು.

ಮ್ಯಾಲ್ಜಾತಿ (ನಾ)= ಮೇಲು ಜಾತಿ; ಉನ್ನತ ಜಾತಿ.

ಮ್ಯಾಲ್ಪದರು (ನಾ)= ಮೇಲ್ಪದರು; ಮೇಲಿನ ಪದರು.

ಮ್ಯಾಲ್ಮ್ಯಾಲ್ಸಾರ್ಸು (ಕ್ರಿ)= ಮರೆ ಮಾಡಿ ಹೇಳು; ಮುಚ್ಚಿಡು; ರಹಸ್ಯ ಬಯಲಿಗೆ ಬರದಂತೆ ನೋಡಿಕೊ; ಸತ್ಯವನ್ನು ಮರೆಮಾಚು.

ಮ್ಯಾಳಾ (ನಾ)= ಮೇಳ; ಭಜನಿಯ ತಂಡ; ಹಾಡುಗಾರರ ತಂಡ.

ಮ್ಯಾಳ್ಗಿ (ನಾ)= ಮಾಳಿಗೆ.

ಮ್ಯಾಳ್ಗಿಮನಿ (ನಾ)= ಮೇಲ್ಮುದ್ದಿ ಹಾಕಿದ ಇಲ್ಲವೆ ಆರ್ಸಿಸಿ ಹೇರಿದ ಮನೆ.

ಮ್ಯಾಳ್ಗಿಹೇರು (ಕ್ರಿ)= ಮೇಲ್ಮುದ್ದಿ ಹಾಕಿ ಇಲ್ಲವೆ ಆರ್ಸಿಸಿ ಹಾಕಿ ಮಾಳಿಗೆಯನ್ನು ತಯಾರಿಸು.

ಯ

ಯಂಕಟ್ರಮಣ (ನಾ)= ತಿರುಪತಿಯ ತಿಮ್ಮಪ್ಪ ದೇವರು.

ಯಂಕಮ್ಮ (ನಾ)= ಹುಮ್ನಾಬಾದ ತಾಲೂಕಿನ ಹುಡುಗಿ ಗ್ರಾಮದ ದಿಗಂಬರ ಕರಿಬಸವೇಶ್ವರರ ಶಿಷ್ಯೆಯಾದ ಶರಣೆ ಯಂಕಮ್ಮ ತಾಯಿ.

ಯಂಕಿ (ನಾ)= ಮೆಳ್ಳೆಗಣ್ಣಿನವಳು; ಓರೆಗಣ್ಣಿನವಳು; ಯಾಸಿಗಣ್ಣಿನವಳು (ಗಾದೆ: ಯಂಕಿಗೆಂಕಮ್ಮಂದ್ರೇ ಬಾಳ್ಯಾ ಹಸ್ನ).

ಯಂಗಣ್ಣು (ನಾ)= ಮೆಳ್ಳೆಗಣ್ಣು; ಓರೆಗಣ್ಣು; ಯಾಸಿಗಣ್ಣು.

ಯಂಗಾಗು (ಕ್ರಿ)= ಕೊರತೆಯಾಗು; ಕಡಿಮೆ ಬೀಳು; ತ್ರುಟಿಯಾಗು.

ಯಂಗು (ನಾ)= ಕೊರತೆ; ತ್ರುಟಿ.

ಯಂಗುಭೀಳು (ಕ್ರಿ)= ಕೊರತೆಯಾಗು; ಕಡಿಮೆ ಭೀಳು; ತ್ರುಟಿಯಾಗು.

ಯಂಡಿ (ನಾ)= ಏಂಡಿ; ಏಡಿ.

ಯಂಥಾ (ಅ)= ಎಂಥ; ಎಂತಹ.

ಯಂದ (ಅ)= ಎಂದು; ಯಾವಾಗ.

ಯಕಾಡಿ (ಅ)= ಯಾವ ಕಡೆಗೆ; ಯಾವ ದಿಕ್ಕಿಗೆ; ಯಾವ ಮಗ್ಗುಲಿಗೆ.

ಯಕಮಾಯಿ, ಯಕ್ಮೈ (ನಾ)= ಹುಚ್ಚಿ; ಹುಚ್ಚಮ್ಮ.

ಯಕ್ಕ (ಅ)= ಏ ಅಕ್ಕಾ; ಅಕ್ಕಾ.

ಯಕ್ಕಿ (ನಾ)= ಹೊರಸು ಅಥವಾ ಮಂಚದ ಅಡ್ಡ ಮತ್ತು ಉದ್ದ ದಂಡ; ನೆಟಿಗೆ; ಲಟಿಕೆ; ಅರ್ಕ; ಅಕ್ಕದ ಗಿಡ.

ಯಕ್ಕಿ ಗಿಡ (ನಾ)= ಅರ್ಕದ ಗಿಡ; ಎಕ್ಕೆಗಿಡ.

ಯಕ್ಕಿಗಿಡಕ ಮದಿ ಮಾಡು (ನು)= ಮದುವೆಯಾಗದೆ ಸತ್ತವರ ಮಗ್ಗುಲಲ್ಲಿ ಎಕ್ಕೆ-ಅರ್ಕದ ದಂಟು ಇಟ್ಟು ಮದುವೆ ಶಾಸ್ತ್ರ ಮುಗಿಸು.

ಯಕ್ಕಿ ಮುರಿ (ನು)= ನೆಟಿಕೆ ಮುರಿ; ಶಪಿಸು; ದ್ವೇಷ ಪ್ರದರ್ಶಿಸು.

ಯಚ್ಚಾ (ನಾ)= ಯಚ್ಚ; ಅಡಿಗೆಗೆ ಬಳಸುವ ಉಸಾಲೆ ಸಾಮಗ್ರಿ; ಅಡಿಗೆ ಸಾಹಿತ್ಯ. (ಗಾದೆ: ಯಚ್ಚಾ ಇದ್ರ ಹುಚ್ಚಿಬೀ ಅಡ್ಗಿ ಮಾಡ್ತಾಳ!).

ಯಜಮಾನ (ನಾ)= ಗಂಡ; ಪತಿ; ಒಡೆಯ; ಮಾಲಕ.

ಯಜಮಾನಿ (ನಾ)= ಒಡತಿ; ಹೆಂಡತಿ.

ಯಜಮಾನ್ಕಿ (ನಾ)= ಯಜಮಾನಿಕೆ; ಒಡೆತನ.

ಯಜಮಾನ್ಕಿ ನಡ್ಸು (ಕ್ರಿ)= ಯಜಮಾನಿಕೆ ಮಾಡು; ಒಡೆತನ ನಡೆಸು.

ಯಜಮಾನ್ತಿ (ನಾ)= ಯಜಮಾನಿ; ಒಡತಿ; ಹೆಂಡತಿ; ಮಾಲಕ್ತಿ.

ಯಟ್ಟಿ (ನಾ)= ಎಳೆ; ನಾರಿನ ಜೆಟ್ಟಿ.

ಯಟ್ಟಿ ಹಚ್ಚು (ಕ್ರಿ)= ನಾರೆಳೆ ಹೊಂದಿಸಿ ಹಗ್ಗ ಹೊಸೆವುದನ್ನು. ಮುಂದುವರಿಸು (ನು) ಮಾತು ಮುಂದುವರಿಸು; ಅಲ್ಲಸಲ್ಲದುದನ್ನು ಆಡು; ಕೇಳು.

ಯಡಚ (ನಾ)= ತೊಡಕು; ತೊಂದರೆ; ಅಡ್ಡಿ; ಆತಂಕ; ಮುಂದಾಗಿ ಎಡಗೈ ಬಳಸುವವನು.

ಯಡಚಿ (ನಾ)= ಎಡಗೈ ಮುಂದಾಗಿ ಬಳಸುವವಳು.

ಯಡೆಚ್ಚ (ವಿ.)= ಎಡಚೆಚ್ಚ; ಎಡೆಚ್ಚ; ಅಡ್ಡಿಯಿಂದ ಕೂಡಿದ.

ಯಡ್ಚೆಚ್ಚ (ಅ)= ಯಡೆಚ್ಚ (ನೋಡಿರಿ).

ಯಡ್ಡ (ನಾ)= ಎಡ್ಡ; ದಡ್ಡ; ಮೂಢ; ಮೂರ್ಖ.

ಯಣ್ಣ, ಯಣ್ಣಾ (ಅ)= ಎಲೆ ಅಣ್ಣಾ; ಏ ಅಣ್ಣಾ.

ಯೆಣ್ಣಿ, ಯಾಣ್ಣಿ (ನಾ)= ಎಣ್ಣೆ; ಒಳ್ಳೆಣ್ಣೆ; ಘಾಸ್ಲೇಟ ಎಣ್ಣೆ.

ಯತಾರ್ತ (ನಾ)= ಯಥಾರ್ಥ; ಸರಳ; ನೇರ.

ಯತ್ನಾ (ನಾ)= ಪ್ರಯತ್ನ; ಪ್ರಯಾಸ; ಶಕ್ತಿ.

ಯತ್ನಾಮೀರು (ಕ್ರಿ)= ಸ್ವಾಧೀನ ತಪ್ಪು; ಪ್ರಯತ್ನಕ್ಕೆ ನಿಲುಕದಂತಾಗು.

ಯತ್ಯಾಸ, ಯತ್ತೆಸ (ನಾ)= ವ್ಯತ್ಯಾಸ; ಫರಕು.

ಯದು (ಅ)= ಯಾವುದು; ಯಾವಾದು.

ಯದ್ಕ (ಅ)= ಯಾವುದಕ್ಕೆ; ಯಾತಕ್ಕೆ.

ಯದ್ಲಾಪೂರ (ನಾ)= ಬೀದರ ತಾಲೂಕಿನ ಒಂದು ಹಳ್ಳಿಯ ಹೆಸರು. ಕನ್ನಡಾಭಿಮಾನಿ ಲಿಂ. ಭದ್ರಪ್ಪ ಕಟ್ಟೆಯವರ ಹುಟ್ಟೂರು.

ಯಪ್ಪ (ನಾ)= ಏಯಪ್ಪಾ; ಅಪ್ಪಾ; ಅಯ್ಯಾ.

ಯಪ್ಪಗೆ (ಅ)= ಎಲೆಯಪ್ಪಾ; ಏಯಪ್ಪಾ.

ಯಪ್ಪೋ (ಅ)= ಏಯಪ್ಪೋ; ಎಲೆಯಪ್ಪೋ; ಎಲೆ ಅಪ್ಪಂದಿರರೇ.

ಯಬಿಚಾರ (ನಾ)= ವ್ಯಭಿಚಾರ; ವಿಷಯ ಲಂಪಟತನ; ಹಾದರ.

ಯಬಿಚಾರಿ (ನಾ)= ವ್ಯಭಿಚಾರಿ; ಹಾದರಿಗ; ವಿಷಯ ಲಂಪಟ.

ಯಬಿಚಾರಿಣಿ (ನಾ)= ವ್ಯಭಿಚಾರಿಣಿ; ಹಾದರಗಿತ್ತಿ; ಸೂಳೆ.

ಯಮ, ಯಮಾ (ನಾ)= ಸಾವು ತರುವ ದೇವರು (ತತ್ವಪದ: ನಿಲ್ಲಗುಡದೆಯೆನ್ನ। ಯಮನೆಳೆದು ಒಯ್ವಾಗ। ನಿನಗೂಡ್ಯಾತರ ಮಾತು ಖಾಯವೇ। ನಿನಗೂಡ್ಯಾತರ ಮಾತು ಜೀವವೇ।।).

ಯಮದೂತ (ನಾ)= ಸಾವಿನ ದೇವರ ದೂತ; ಯಮನ ಸೇವಕ.

ಯಮದೈತ್ಯ (ನಾ)= ದೈತ್ಯಾಕಾರದ ಯಮ; ಯಮದೂತ.

ಯಮಧೂತ (ನಾ)= ಯಮದೇವನಿಂದ ಕಳಿಸಲ್ಪಟ್ಟ ಜೀವ ಸೆಳೆಯುವ ದೂತ.

ಯಮ ಭಾರ (ನಾ)= ಅತಿ ಭಾರ ವಾದದ್ದು; ಹೆಚ್ಚು ತೂಕ ಉಳ್ಳದ್ದು.

ಯಮ್ಲೋಕ (ನಾ)= ಯಮದೇವನಿರುವ ಸ್ಥಳ, ಜಾಗ.

ಯಮ್ಲೋಕಕ್ಹೋಗು (ಕ್ರಿ)= ಸತ್ತುಹೋಗು; ಜೀವಬಿಡು.

ಯಮ್ಲೋಕ ಸೇರು (ಕ್ರಿ)= ಪ್ರಾಣ ತ್ಯಜಿಸು; ಸತ್ತು ಹೋಗು.

ಯಮ್ಮ (ಅ)= ಏ ಅಮ್ಮಾ; ಏ ಅವ್ವಾ; ಏತಾಯಿ.

ಯಮ್ಮಣ್ಕಾ (ನಾ)= ಎಮ್ಮೆಯ ಮಣಕಾ; ಹರೆ ಕಾಣುತ್ತಿರುವ ಎಳೆಯದಾದ ಎಮ್ಮೆ.

ಯಮ್ಮಾ (ಅ)= ಏಯಮ್ಮ; ಎಲೆಯಮ್ಮಾ; ಎಲೆ ಅವ್ವಾ.

ಯರನಳ್ಳಿ (ನಾ)= ಕಲ್ಮೂಡದ ದಿಗಂಬರ ಮಾಣಿಕೇಶ್ವರರ ಹುಟ್ಟೂರು. ಯರ್ನಳ್ಳಿ (ಪಿ) ಮತ್ತು ಯರ್ನಳ್ಳಿ (ಡಿ) ಎಂಬ ಬೀದರ ಜಿಲ್ಲೆಯ ಬೀದರ ತಾಲೂಕಿನ ಒಂದು ಹಳ್ಳಿ.

ಯರ್ಕಾ (ನಾ)= ಎರಕ; ಬೆಸೆಯುವಿಕೆ.

ಯರ್ಜಾರಿ (ನಾ) ಮ.= ಹೋಗುಬರು ಮಾಡುವಿಕೆ.

ಯರ್ತ (ನಾ)= ವ್ಯರ್ಥ; ನಿರುಪಯೋಗಿ; ನಿರರ್ಥಕ.

ಯರ್ತಾಗು (ಕ್ರಿ)= ವ್ಯರ್ಥವಾಗು; ನಿರುಪಯೋಗಿಯಾಗು; ನಿರರ್ಥಕವಾಗು.

ಯರ್ರಾಗೊಲ್ಲ (ನಾ)= ದಾಸ ಜನಾಂಗದ ಒಂದು ಒಳ ಪಂಗಡ. ಈ ಪಂಗಡದವರು ಮುಡಬಿವಾಡಿ, ಯಲ್ಲಮ್ಮ ವಾಡಿ, ಕಿಣಿಗಿವಾಡಿ, ವಿಠಲಪೂರ ಮುಂತಾದೆಡೆ ವಾಸವಾಗಿದ್ದಾರೆ; ಯಾದವಗೊಲ್ಲ.

ಯಲ್ಲಪ್ಪ ಮಾರಾಜ (ನಾ)= ಯಲ್ಲಾಲಿಂಗ ಮಹಾರಾಜರು; ಹಾಲುಮತಸ್ಥರ ಗುರುಗಳು.

ಯಲ್ಲಮ್ಮ (ನಾ)= ಬಗದೂರಿ, ಉಡುಬಾಳ ಮೊದಲಾದ ಕ್ಷೇತ್ರಗಳಲ್ಲಿರುವ ಯಲ್ಲಮ್ಮ ದೇವತೆ.

ಯವಸಾಯ (ನಾ)= ಬೇಸಾಯ; ಒಕ್ಕಲುತನ.

ಯವಸ್ತಾ (ನಾ)= ವ್ಯವಸ್ಥೆ.

ಯವಸ್ತಾಪಕ (ನಾ)= ವ್ಯವಸ್ಥಾಪಕ.

ಯವಾ (ಅ)= ಏ ಅವ್ವಾ.

ಯವಿ (ನಾ)= ಕಣ್ಣರೆಪ್ಪೆಯ ಕೂದಲು; ಜವೆಗೋದಿ ತೆನೆಯ ಸುತ್ತಮುತ್ತಲಿನ ಕಡ್ಡಿಗಳು; ಕುದುರೆಯ ಬಾಲದ ಕೂದಲು; ಜವೆ.

ಯವಿತೂಕ (ನಾ)= ಕಣ್ಣರೆಪ್ಪೆಯ ಕೂದಲಿನ ತೂಕ.

ಯವೊತ (ಅ)= ಯಾವೊತ್ತು; ಯಾವಾಗ; ಎಂದು.

ಯವ್ವ (ಅ)= ಏ ಅವ್ವಾ.

ಯವ್ವಗೆ (ಅ)= ಏಯವ್ವಾ; ಎಲೆಯವ್ವಾ.

ಯವ್ವಾರ (ನಾ)= ವ್ಯವಹಾರ; ಉದ್ಯೋಗ; ಕಾರ್ಯಭಾರ; ದಿನ ನಿತ್ಯದ ಕೆಲಸ; ಕಾಯಕ.

ಯವ್ವಿ (ಅ)= ಏಅವ್ವಿ; ಏಕೂಸು; ಏ ಮಗು; ಹೆಣ್ಣುಗೂಸುಗಳಿಗೆ ಹುಡುಗಿಯರಿಗೆ, ವಾತ್ಸಲ್ಯ ಸಂಬೋಧನೆಯ ಒಂದು ರೀತಿ.

ಯವ್ವೋ (ಅ)= ಏ ಅವ್ವಾ; ಏಯವ್ವೋ; ಏಯಮ್ಮೋ.

ಯಶ (ನಾ)= ಜಯ; ಜಸ್ಸು; ಗೆಲುವು.

ಯಶವಂತ (ನಾ)= ಗೆಲ್ಲುವವ; ವಿಜಯಿ.

ಯಶೋದಾ (ನಾ)= ಕೃಷ್ಣನ ತಾಯಿ (ಕೋಲಾಟದ ಹಾಡು: ಯಶೋದಾ ನಿನ ಬಾಲಾರಂಗ। ಯಶೋದಾ ನಿನ್ನ ಬಾಲಾ ಎಸಳಿನ ಮಲ್ಲಿಗ್ಹೂವ। ಯಶೋದಾ ನಿನ ಬಾಲಾರಂಗ॥).

ಯಸನ (ನಾ)= ವ್ಯಸನ; ಚಟ; ಚಾಳಿ.

ಯಸಳು (ನಾ)= ಎಸಳು; ಪಕಳೆ; (ಕೋಲಿನ ಹಾಡು: ಯಶೋದ ನಿನ ಬಾಲ ಯಸಳಿನ ಮಲ್ಲಿಗ್ಹೂವ।).

ಯಳ್ಕೊದಲಿ (ನಾ)= ಎಳ್ಳಿನ ದಂಟು; ಎಳ್ಳಿನ ದಂಟುಗಳ ಸೂಡು.

ಯಳ್ಗಂದಿ (ನಾ)= ಹೊಸದಾಗಿ ಈದ ಹಸು ಅಥವಾ ಎಮ್ಮೆಯ ಹಯನ; ಎಳಗಂದಿ.

ಯಳ್ನಾಗರ (ನಾ)= ಎಳನಾಗರ; ಶರೀರದ ಮೇಲೆ ಬಾವು ಬಂದು ಬೇನೆ ಉಂಟಾದ ಜಾಗ.

ಯಳ್ವಂತ್ಗೀ (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಹಳ್ಳಿ.

ಯಳ್ಳಾ ಮಾಸಿ (ನಾ)= ಎಳ್ಳಮವಾಸ್ಯ; ಚಟ್ಟಿ ಅಮಾವಾಸ್ಯದ ನಂತರ ಬರುವ ಅಮಾವಾಸ್ಯ; ಭೂಮಿ ತಾಯಿಯ ಬಂಕಿಯ ಹಬ್ಬ; ಹೊಲದಲ್ಲಿ ಚರಗ ಚೆಲ್ಲುವ ಅಮಾವಾಸ್ಯ.

ಯಳ್ಳಿ (ನಾ)= ಎರಳೆ; ಚಿಗರೆ; ಜಿಂಕೆ (ಗಾದೆ: ಆರ್ಹೋಡೆಂವ್ಗ ಯಳ್ಳಿ ತೋರ್ಸಿದ್ರಂತ!).

ಯಳ್ಳು (ನಾ)= ಎಳ್ಳು; ಎಣ್ಣೆ ಕಾಳಿನ ಒಂದು ಜಾತಿ; ಬಿಳಿ ಎಳ್ಳು, ಕರಿ ಎಳ್ಳು ಇತ್ಯಾದಿ (ಜಾನಪದ ಪ್ರಾಸ: ಯಳ್ಳು ಬೆಲ್ಲಾ ತಿಂದು ಒಳ್ಳೊಳ್ಳೆ ಮಾತಾಡು).

ಯಳ್ಳು ಬೆಲ್ಲ ಆಗು (ನು)= ರುಚಿ ರುಚಿಯಾಗು; ಸ್ವಾದಿಷ್ಟವಾಗು.

ಯಳ್ಳು ಭಣಿಮಿ (ನಾ)= ಎಳ್ಳಿನ ದಂಟುಗಳನ್ನು ಕೊಯ್ದು ಒಣಗಿಸಿ ಸೂಡು ಕಟ್ಟಿ ವ್ಯವಸ್ಥಿತವಾಗಿ ಒಟ್ಟಿದ ರಾಶಿ.

ಯಳ್ಳೆಣ್ಣಿ (ನಾ)= ಎಳ್ಳಿನಿಂದ ತೆಗೆದ ಎಣ್ಣೆ.

ಯಾ (ಅ)= ಯಾವ. ಉದಾ: ಯಾ ಹೊಲ, ಯಾಮನೆ ಎಂಬಂತೆ; ಯವ್ವಾ; ಏ ಅವ್ವಾ; ಅವ್ವಾ; ಅಮ್ಮಾ.

ಯಾಂವ (ಸ)= ಯಾವನು; ಯಾವನವನು (ಕೋಲಿನ ಹಾಡು: ಯಾಂವಂಗೆ ಕಾಲು ಕೊಟ್ಟೆ। ಯಾಂವಂಗೆ ಕೈಕೊಟ್ಟೆ। ಯಾಂವಾನ ತೋಳಮ್ಯಾಲ ಮಲಗಿದಿ ಮಾ। ಕೊಲೆ ಕೊಲೆ).

ಯಾಂವ ಹನಾ = ಯಾವನಿದ್ದಾನೆ.

ಯಾಕ (ಅ)= ಏಕೆ; ಏನು ಕಾರಣ.

ಯಾಕೆ (ಅ)= ಏಕೆ; ಏನು ಕಾರಣ; (ಸ್ತ್ರೀ) ಏನೇ; ಏನು ಕಾರಣ ಹೇಳೆ.

ಯಾಕೋ (ಅ)= ಏನು ಕಾರಣವೋ; ಯಾವ ಸಲುವಾಗಿಯೋ. (ಹಂತಿ ಹಾಡು: ಯಾಕೊ ಬಸವಾ । ಮೆಲ್ಲಾಗ ನಡದೋ । ತೆಳಕಾಲಿನ ಮದನಾ । ಮೊಳಕಾಲಿಗ್ಬಂತೋ॥)

ಯಾಕ್ಗ (ಅ)= ಯಾಕೇ; ಯಾಕೋ.

ಯಾಗ (ಅ)= ಯಾವಾಗ; ಯಾವವೇಳೆಗೆ; ಯಾವ ದಿನ; ಎಂದು.

ಯಾಗಿಂದಾಗ (ಅ)= ಯಾವಾಗಿಂ-ಧಾವಾಗ; ಆಗಿಂದಾಗ; ಆಗಲೇ; ಅದೇಕ್ಷಣ; ತಕ್ಷಣ.

ಯಾಡಾ ಉಂದಿ (ನಾ) ತೆ.= ತಕರಾರು; ಕಿರಿಕಿರಿ; ವಾದ.

ಯಾಡಾ ಉಂದಿ ಹಚ್ಚು (ನು)ತೆ= ತಕರಾರು ಮಾಡು; ಕಿರಿಕಿರಿ ಮಾಡು; ವಾದಕ್ಕಿಳಿ.

ಯಾಡಿ (ನಾ)= ಅವ್ವ; ಅಮ್ಮ (ಲಮಾಣಿ ಭಾಷೆ).

ಯಾಡ್ದು (ಅ)= ಎರಡು; ೧+೧=೨.

ಯಾಡ್ಡೆಳಿ (ನಾ)= ಎರಡೆಳೆ; ಎರಡು ಪದರು.

ಯಾಡ್ಡೇಳಿ (ನಾ)= ಎರಡು ವೇಳೆ; ಎರಡು ಸಲ.

ಯಾಣ್ಣಿ (ನಾ)= ಎಣ್ಣೆ; ಒಳ್ಳೆಣ್ಣೆ; ಯೆಣ್ಣೆ.

ಯಾಡ್ಮೂರೇಳಿ (ನಾ)= ಎರಡು ಮೂರು ವೇಳೆ; ಎರಡು ಮೂರು ಸಲ.

ಯಾತ (ಸ)= ಯಾವಾತ; ಯಾರಂವ; ಯಾರಂವನು; ಯಾರು.

ಯಾತಕ, ಯಾತಕಾ (ಅ)= ಏತಕ್ಕೆ; ಯಾವ ಸಲುವಾಗಿ, ಯಾವ ಕಾರಣಕ್ಕೆ.

ಯಾತಗಿರಿ (ನಾ)= ಯಾದಗಿರಿ ಜಿಲ್ಲಾ ಕೇಂದ್ರದ ನಗರ; ಮಲ್ಲಯ್ಯನ ಯಾದಗಿರಿ (ಕೋಲಿನ ಹಾಡು: ಯಾತಗಿರಿ ಜಾತ್ರಿಗಿ ಹೋಗಾಮ್ನಡಿ ನಾವಿಬ್ರೋಕರ್ೂಡಿ। ನಾವಿಬ್ರೋ ಕರ್ೂಡಿ। ಸಾಲಿ ಬರ್ಸಿ ಬರುತೀನಿ ಮಧ್ಯಾಣ್ಮಾಡಿ। ಜರ ಮುಂದಾಕ ನಡಿ).

ಯಾದವ (ನಾ)= ಶ್ರೀಕೃಷ್ಣ (ಹಾಡು: ಯಾದವ ನೀಬಾ ಯದುಕುಲ ನಂದನ। ಮಾಧವ ಮಧುಸೂದನ ಬಾರೋ॥).

ಯಾದವ ಗೊಲ್ಲ (ನಾ)= ಗೊಲ್ಲ ಅಥವಾ ದಾಸ ಜನಾಂಗದ ಒಂದು ಉಪಪಂಗಡ; ಯರ್ರಾಗೊಲ್ಲ ಈಜನಾಂಗವು ಬೀದರ ಜಿಲ್ಲೆಯ ಮುಡಬಿವಾಡಿ, ಯಲ್ಲಮ್ಮವಾಡಿ, ಕಿಣಗಿ ವಾಡಿ, ಧನಗರವಾಡಿ, ವಿಠಲ ಪೂರ ಮೊದಲಾದ ಊರುಗಳಲ್ಲಿ ನೆಲೆಸಿದೆ.

ಯಾದಿ (ನಾ)= ಹೆಸರು, ಕಿರಾಣಿ ವಸ್ತು ಇತ್ಯಾದಿಗಳ ಪಟ್ಟಿ.

ಯಾನು (ಸ)= ಏನು; ಏನದು.

ಯಾನೆ (ಅ)= ಅಂದರೆ; ಹಾಗಂದರೆ.

ಯಾನ್ಗ (ಅ)= ಏನಲೆ; ಏನ್ಗ; ಏನೆ; ಏನೋ.

ಯಾನ್ಬೀ (ಅ)= ಏನೂ; ಏನು ಕೂಡ.

ಯಾಪಾರ (ಅ)= ವ್ಯಾಪಾರ.

ಯಾಪಾರಿ (ನಾ)= ವ್ಯಾಪಾರಿ.

ಯಾಯಾಮ (ನಾ)= ವ್ಯಾಯಾಮ; ಸಾಮು; ಕಸರತ್ತು.

ಯಾರಿಗಿ (ಅ)= ಯಾರಿಗೆ; ಎಂಥವರಿಗೆ (ತತ್ವಪದ: ಯಾರಿಗಿ ಯಾರುಂಟು। ಯರವಿನ ಸಂಸಾರ। ನೀರ ಮ್ಯಾಲಿನ ಗುಳ್ಳಿ ನಿಜವಾಯ್ತು ಹರಿಯೇ॥).

ಯಾರು (ಅ)= ಎಂಥವರು; ಯಾರವರು.

ಯಾರ್ಪಾಪ (ಅ)= ಯಾರ ಪಾಪ; ಯಾರು ಮಾಡಿದ ಪಾಪ (ಗಾದೆ: ಯಾರ್ಪಾಪಾ ಅವ್ರುಡ್ಯಾಗ).

ಯಾರ್ಬಲ್ಲಿ (ಅ)= ಯಾರ ಹತ್ತಿರ; ಯಾರ ಸ್ವಾಧೀನ.

ಯಾಲಾಕಾಯಿ (ನಾ)= ಯಾಲಕ್ಕಿ; ಏಲಕ್ಕಿ; ಇಲೈಚಿ; ಇಲಾಚಿ; ಸುವಾಸನೆಯ ಕಾಳುಳ್ಳ ಕಾಯಿ.

ಯಾಲಕ್ಕಿ (ನಾ)= ಯಾಲಾಕಾಯಿ; ಯಾಲಕ್ಕಿ; ಏಲಕ್ಕಿ; ಇಲೈಚಿ; ಇಲಾಚಿ; ಸುವಾಸನೆಯ ಕಾಳುಳ್ಳ ಕಾಯಿ.

ಯಾವಾಗ (ಅ)= ಯಾವ ಸಮಯದಲ್ಲಿ; ಎಷ್ಟು ಹೊತ್ತಿಗೆ.

ಯಾವಾಗ್ಬೀ (ಅ)= ಯಾವಾಗಲೂ; ಸದಾ; ಹಮೇಶಾ; ತಾಗಾನ್ತಿ; ನಿರಂತರ.

ಯಾವಾತ (ಸ.)= ಯಾರು ಆತ; ಯಾರವರು.

ಯಾವಾದು (ಸ.)= ಯಾವುದು; ಎಂಥಾದ್ದು.

ಯಾವಾದ್ಬೀ (ಅ)= ಯಾವುದೂ; ಯಾವುದು ಕೂಡ.

ಯಾವಾರ (ನಾ)= ತಕರಾರು; ಜಗಳ.

ಯಾವಾರತೆಗಿ (ಕ್ರಿ)= ತಕರಾರು ಹೂಡು; ಜಗಳ ಮಾಡು.

ಯಾವಾರ ಗುಂಡಿ (ನಾ)= ತಕರಾರುವಾದಿ; ಕಿರಿಕಿರಿ ಮಾಡುವವ.

ಯಾಸ, ಯಾಸಿ (ನಾ)= ಓರೆ; ಡೊಂಕು.

ಯಾಸಮುನಿ (ನಾ)= ವ್ಯಾಸಮುನಿ; ವೇದವ್ಯಾಸ.

ಯಾಸಿಗಣ್ಣು (ನಾ)= ಓರೆಗಣ್ಣು; ಡೊಂಕುಗಣ್ಣು; ಮೆಳ್ಳೆಗಣ್ಣು.

ಯಾಸ್ಗಣ್ಣು (ನಾ)= ಯಾಸಿಗಣ್ಣು; ಮೆಳ್ಳೆಗಣ್ಣು; ಡೊಂಕುಗಣ್ಣು.

ಯಾಳಿ (ನಾ)= ವೇಳೆ: ಸಮಯ.

ಯಾಳಿ ಬರು (ಕ್ರಿ)= ನಿರ್ಧರಿತ ಸಮಯ ಕೂಡಿ ಬರು; ಕಷ್ಟ ಉಂಟಾಗು.

ಯಾಳ್ಯಾ (ನಾ)= ವೇಳೆ; ಸಮಯ; ಹೊತ್ತು; ವ್ಯಾಳ್ಯಾ (ಹಾಡು: ಯಾಳ್ಯಾ ಬಂದಗ್ಯಾರ್ಧಾರಾ।ಮನಸಿಗಿ ತೂಕ ಹಾಕೊಜರಾ॥).

ಯಾಳ್ಯಾ ಇಲ್ದ ಯಾಳ್ಯಾ (ನಾ)= ಅಪವೇಳೆ; ಅಸಮಯ (ಗಾದೆ: ಯಾಳ್ಯಾ ಇಲ್ದ್ಯಾಳ್ಯಾ ಘೂಳಿ ಮೈನೆರಿತಂತ).

ಯಾಳ್ಯಾಕ (ಅ)= ವೇಳೆಗೆ: ಸಮಯಕ್ಕೆ.

ಯಾಳ್ಯಾಕಾಗು (ಕ್ರಿ)= ಕಷ್ಟ ಕಾಲದಲ್ಲಿ ಬೆಂಬಲವಾಗು; ಸಂಕಟ ಸಮಯದಲ್ಲಿ ಒದಗಿಬರು.

ಯಾಳ್ಯಾ ಬಂದಾಗ (ನಾ)= ಸಂಕಟಕಾಲದಲ್ಲಿ.

ಯಾಳ್ಯಾ ಬಿಟ್ಟು ಯಾಳ್ಯಾ (ನು)= ಅಸಮಯ; ಅಡ್ಡಾರ ವೇಳೆ.

ಯಾಳ್ಯಾ ಹೊತ್ತು (ನಾ)= ಸಮಯಾಸಮಯ; ಹೊತ್ತು ಗೊತ್ತು.

ಯೇಗಿ (ನಾ)= ಯೋಗಿ; ಶಿವಯೋಗಿ.

ಯೇಜಮಾನ (ನಾ)= ಯಜಮಾನ; ಒಡೆಯ; ಪತಿ; ಮಾಲಕ.

ಯೇಜಮಾನಿ (ನಾ)= ಯಜಮಾನ್ತಿ; ಒಡತಿ; ಹೆಂಡತಿ.

ಯೇಟು (ನಾ)= ಎಷ್ಟು; ಪೆಟ್ಟು; ಏಟ.

ಯೇದ (ನಾ)= ವೇದ.

ಯೇದಾಂತ (ನಾ)= ವೇದಾಂತ.

ಯೇಬರಾಸಿ (ನಾ)= ಏಬರಾಸಿ; ಅವಕಳೆಯುಳ್ಳವನು (ಳು); ಕೆಲಸಕ್ಕೆ ಬಾರದವನು (ಳು); ಅವಿವೇಕಿ; ರಾಕ್ಷಸ; ರಾಕ್ಷಸಿ; ವಿಕಾರಮುಖವುಳ್ಳವನು (ಳು).

ಯೇಮಳ್ಳ (ನಾ)= ಪೂರ್ಣ ಮರುಳ.

ಯೇಶಾ (ನಾ)= ವೇಷ.

ಯೇಸಾನ (ನಾ)= ಉ. ಐಸಾನ; ಉಪಕಾರ; ಅಹಸಾನ.

ಯೇಸು (ವಿ)= ಎಷ್ಟು (ಬಹುವಚನ) (ಹಾಡು: ಕೂಸಿನ ತೊಟ್ಟಿಲ್ಗಿ ಯೇ ಸಗ್ಗನೆರವಲಿ। ಕೂಸಿನ ಮಾವ ನನ್ನಣ್ಣ। ಸೋಸಿದ ಬೆಳ್ಳಿ ಸರ್ಪಳಿ। ಮಾಡಿಸಿಕೊಟ್ಟ। ಕೂಸು ಸೂರಣ್ಣ ತೂಗಾಡಿ।।).

ಯೇಸೂ (ನಾ)= ಯೇಸುಕ್ರಿಸ್ತ; ಯೇಸೂಸ್ವಾಮಿ; ಜೀಜಸ್ ಕ್ರೈಸ್ತ.

ಯೇಸೂಸ್ವಾಮಿ (ನಾ)= ಮಹಾತ್ಮಾ ಯೇಸೂ ಕ್ರಿಸ್ತ.

ಯೇಸೇಳಿ (ಅ)= ಎಷ್ಟು ಸಲ; ಎಷ್ಟುಸಾರೆ; ಎಷ್ಟು ವೇಳೆ.

ಯೇಸ್ಯಾ (ನಾ)= ವೇಷ; ನಾಟಕದ ವೇಷ ಭೂಷಣ.

ಯೇಸ್ಯಾ ಹಾಯ್ಕೊ (ಕ್ರಿ)= ಉಡುಪು ಧರಿಸು; ನಾಟಕದ ಪಾತ್ರಧಾರಿಯ ಉಡುಪು ಧರಿಸು.

ಯೇಳಾಟ್ಗೆ (ಅ)= ಏಳು ವಷ್ಷರಲ್ಲಿಯೇ.

ಯೇಳು (ನಾ)= ಏಳರ ಅಂಕಿ (ಹಾಡು: ಯೇಳು ಸುತ್ತಿನ ಕ್ವಾಟಿ। ಅದರಾಗ। ಯೇಳೆ ಕುಂತಾನೆ ಬಸವ। ಬಸವಗ ಬಸವೆನಿರೇ। ಬಸವನ ಪಾದಕ ಶರಣೆನಿರೆ।).

ಯೇಳೂರು ಸರಪಂಚ (ನಾ)= ಶ್ರೇಷ್ಠ ಕಥೆಗಾರ ಶಿವಕುಮಾರ ನಾಗವಾರರ ಒಂದು ಕಥಾಸಂಕಲನದ ಹೆಸರು.

ಯೇಳೆಂಟು (ನಾ)= ಏಳು ಇಲ್ಲವೆ ಎಂಟು.

ಯೋ (ಅ)= ಹೀಯಾಳಿಕೆಯ ಸಂಬೋಧನೆ.

ಯೋಗಾಸನ (ನಾ)= ಯೋಗಾಭ್ಯಾಸ ಮಾಡುವಾಗ ಕುಳಿತು ಕೊಳ್ಳುವ ವಿಶೇಷ ಭಂಗಿ.

ಯೋಜನಾ (ನಾ)= ಯೋಜನೆ.

ಯೋಯಪ್ಪ (ಅ)= ಅಯ್ಯೋ ತಂದೆ; ಎಲೆಯಪ್ಪ.

ಯೋಯೋ (ದ್ವಿ)= ಹೀಯಾಳಿಸುವಿಕೆ; ಹೀಯಾಳಿಕೆಯ ಸಂಭೋಧನೆ.

ರ

ರಂ (ನಾ)= ಬೆಲೆ ಬಾಳುವ ಸೆರೆ; ಸಿರಿವಂತರು ಮತ್ತು ಕಳ್ಳ ಗಳಿಕೆಯವರು ಸೇವಿಸುವ ಸೆರೆ.

ರಂಗ (ನಾ)= ಶ್ರೀಕೃಷ್ಣ; ಗೋಪಿ ಲೀಲಾ ಲೋಲ.

ರಂಗತಾಲೀಮು (ನಾ)= ನಾಟಕಾಭ್ಯಾಸ; ಹಾಡಕ್ಕಿ.

ರಂಗಮಂದಿರ (ನಾ)= ಬೀದರ ನಗರದಲ್ಲಿ ರಂಗ ಪ್ರದರ್ಶನಕಾಗಿ ಕಟ್ಟಿಸಲಾದ ನಾಟ್ಯ ಶಾಲೆ; ರಂಗಶಾಲೆ.

ರಂಗೀನ ಮಹಲ್ (ನಾ)= ಬೀದರ ಕೋಟೆಯಲ್ಲಿರುವ ಒಂದು ಹಳೆಯ ಅರಮನೆ.

ರಂಗು (ನಾ)= ಬಣ್ಣ.

ರಂಗೇರು (ಕ್ರಿ)= ಬಣ್ಣವೇರು; ಕಳೆಗಟ್ಟು; ರಂಜಿಸು; ರಸೋತ್ಪತ್ತಿಯಾಗು.

ರಂಗೋಲಿ (ನಾ)= ರಂಗವಲ್ಲಿ; ನೆಲದ ಮೇಲೆ ಬರೆವ ಅಲಂಕಾರ ಮತ್ತು ಅದಕ್ಕೆ ಬಳಸುವ ಮಿಂಚುಗಲ್ಲಿನ ಹಿಟ್ಟು; ಬಣ್ಣದ ಪುಡಿ ಇತ್ಯಾದಿ.

ರಂಜಾಗು (ಕ್ರಿ)= ದುಃಖವಾಗು; ಮನಸ್ಸಿಗೆ ನೋವಾಗು.

ರಂಜಾನ (ನಾ) ಉ.= ಮುಸಲ್ಮಾನರ ರೋಜಾ ತಿಂಗಳು; ಮುಸಲ್ಮಾನ ಪಂಚಾಂಗದ ಒಂಭತ್ತನೇ ತಿಂಗಳು.

ರಂಜು (ನಾ) ಉ.= ದುಃಖ; ಮನಸ್ಸಿನ ನೋವು.

ರಂಜುಣ್ಗಿ (ನಾ)= ರಂಜಣಿಗೆ; ನೀರು ತುಂಬಲು, ನೆಲದಲ್ಲಿ ಹೊನ್ನು ಹುದುಗಿಸಿಡಲು ಬಳಸುವ ಮಣ್ಣಿನ ದೊಡ್ಡ ಪಾತ್ರೆ; ಕಾಳು ತುಂಬಿಡಲು ಬಳಸುವ ಮಣ್ಣಿನ ದೊಡ್ಡ ಮಡಿಕೆ; ರಾಂಜಣ.

ರಂಜೇರಿ (ನಾ)= ಐತಿಹಾಸಿಕ ಮಹತ್ವದ ಊರು ರಂಜೇರುವಿನ ಈಗಿನ ರೂಪ; ರಂಜೇರುವಿನ ನಾಗವಂಶದ ಸಿಂಧರು ಆಳಿದ ಊರು. ಅಟ್ಟಳೆ ನಾಡಿನ ಆಡಳಿತ ಕೇಂದ್ರ ರಂಜೇರು; ಈಗ ರಂಜೋಲ, ರಂಜೋಲ ಖೇಣಿ ಎಂತಲೂ ರೂಢಿಗೊಂಡಿದೆ. ಖೇಣಿ ಮನೆತನದ ಮೂಲ ಊರು.

ರಂಜೇರುವಿನ ಸಿಂಧರು (ನಾ)= ರಂಜೇರಿ ಎಂಬ ಊರಿನಲ್ಲಿ ಅಟ್ಟಳೆನಾಡನ್ನು ಆಳಿದ ನಾಗವಂಶದ ಸಿಂಧರು.

ರಂಜೋಲಖೇಣಿ (ನಾ)= ಖೇಣಿ ಮನೆತನದವರು ಇರುವ ಐತಿಹಾಸಿಕ ರಂಜೇರುವಿನ ಇತ್ತೀಚಿನ ರಂಜೇರಿ, ರಂಜೋಲ ಖೇಣಿ ಎಂದಾಗಿದೆ.

ರಂಡಾಗು (ಕ್ರಿ)= ಗಂಡ ಅಥವಾ ಹೆಂಡತಿಗೆ ಸಾವುಂಟಾಗು.

ರಂಡಿ (ನಾ)= ರಂಡೆ; ವಿಧವೆ; ಗಂಡ ಸತ್ತವಳು; ಸೂಳೆ.

ರಂಡಿಮಗ (ಅ)= ಸೂಳೆಯ ಮಗ; ಸೂಳೆಯ ಅನೈತಿಕ ಸಂತಾನ (ಗಾದೆ: ರಂಡಿಮಗ ರಾಜಕುಮಾರ).

ರಂಡೆಗಂಡ (ನಾ)= ಸೂಳೆಯೊಡನೆ ಮದುವೆಯಾದವನು (ಬ್ರಾಹ್ಮಣ ಭಾಷೆ).

ರಂಡೆಮಗ (ನಾ)= ಸೂಳೆಮಗ; ಸೂಳೆಯ ಅನೈತಿಕ ಮಗ (ಬ್ರಾಹ್ಮಣ ಭಾಷೆ).

ರಂಡ್ಕಿ (ನಾ)= ರಂಡೆ; ವಿಧವೆ; ಸೂಳೆ; ಮಿಂಡಗಿಟ್ಟವಳು.

ರಂಡ್ಯಾ (ನಾ)= ರಂಡೆ ಅಥವಾ ವಿಧವೆಯ ಸಂಗತಿ ಮಾಡಿದವನು; ರಂಡೆಗಿಟ್ಟವನು; ಸೂಳೆಗಾರಿಕೆಗಿಳಿದವನು.

ರಂದಾ (ನಾ)= ಉಜ್ಜುಗೊರಡು; ಗಿಲಾವಾ ಸಲುವಾಗಿ ಬಳಸುವ ಮರದ ಚಪ್ಪಟೆಯಾದ ಉದ್ದನೆಯ ಪಟ್ಟಿ.

ರಂದಾ ಹೊಡಿ (ಕ್ರಿ)= ಉಜ್ಜುಗೊರಡಿನಿಂದ ತಿಕ್ಕಿ ಮರದ ತುಂಡನ್ನು ನುಣುಪುಗೊಳಿಸು.

ರಂಪಾ (ನಾ)= ರಂಪ; ರಗಳೆ; ಗದ್ದಲ; ರಾದ್ಧಾಂತ.

ರಂಪಾ ನಡ್ಸು (ಕ್ರಿ)= ಗದ್ದಲವೆಬ್ಬಿಸು; ಹಟತೆಗೆ; ಕಿರಿಕಿರಿ ಮಾಡು.

ರಂಬುಸು (ಕ್ರಿ)= ರಮಿಸು ಸಮಾಧಾನ ಪಡಿಸು.

ರಂಭಿ (ನಾ)= ರಂಭೆ; ಹೆಂಡತಿ; ಸುಂದರಿ; ಚೆಲುವೆ; ಸೂಳೆ.

ರಂಭೇರು (ನಾ)= ರಂಭೆಯರು; ಸುಂದರಿಯರು; ಸುಮಂಗಲೆಯರು; (ಹಂತಿ ಹಾಡು: ಬಸವ ಭಂಡಿಯನೇರಿ। ಶಿವನು ನಂದಿಯನೇರಿ। ಪಾರ್ವತಿದೇವಿ ರಥವನೇರಿ। ಬರುವಾಗ। ರಂಭೇರಾರುತಿ ಬೆಳಗ್ಯಾರೊ॥).

ರಕಮು (ನಾ) ಉ.= ಹಣ; ಹಣದ ರಾಶಿ

ರಕ್ತಾ (ನಾ)= ರಕ್ತ; ನೆತ್ತರು.

ರಕ್ತಾ ಕಾರು, ರಗ್ತಾ ಕಾರು (ಕ್ರಿ)= ನೆತ್ತರ ಕಕ್ಕು; ನೆತ್ತರಿನ ವಾಂತಿ ಮಾಡಿಕೊ.

ರಕ್ತಾಕುಡಿ (ಕ್ರಿ)= ರಕ್ತಹೀರು; ಶೋಷಿಸು.

ರಕ್ತಾ ಭೀಳು (ಕ್ರಿ)= ರಕ್ತ ಒಸರು; ರಕ್ತದ ವಾಂತಿಯಾಗು; ಗುದದ್ವಾರದಿಂದ ರಕ್ತ ಒಸರು.

ರಗುತಾ, ರಗ್ತಾ (ಕ್ರಿ)= ರಕ್ತ; ನೆತ್ತರ.

ರಗ್ಗು (ನಾ)= ಕಂಬಳಿ; ಉಣ್ಣೆಯ ಹಚ್ಚಡ.

ರಗ್ಗಿ (ನಾ)= ರಗಟೆ; ಹರಿದ ಬಟ್ಟೆ; ಕೊಳಕು ಬಟ್ಟೆ; ಚಿಂದಿ ಬಟ್ಟೆ.

ರಗ್ಯಾ (ನಾ)= ಹೊಲಸು ಮೈಯುಳ್ಳವನು; ಹೊಲಸು ಉಡುಪನ್ನು ಧರಿಸುವವನು.

ರಗ್ಡಾಸಿ (ಅ)= ತಿಕ್ಕಿ, ನುರಿಯಾಗಿ ಒತ್ತಿ.

ರಗ್ಡಾಸಿ ಹಿಂಡು (ಕ್ರಿ)= ತಿಕ್ಕಿ ನುರಿಯಾಗಿ ಒತ್ತಿ, ನೀರು ಬಟ್ಟೆಯಿಂದ ಹೊರ ಹೋಗುವಂತೆ ಮಾಡು.

ರಗ್ಡಾಸು (ಕ್ರಿ)= ತಿಕ್ಕು; ಒತ್ತಿ ಹಿಂಡು; ನುಣ್ಣಗಾಗುವಂತೆ ಅರೆ; ಒರೆಸು.

ರಗ್ತಾ (ನಾ)= ರಕ್ತ; ರಕುತ; ರಗುತ; ನೆತ್ತರು.

ರಘುನಾಥ ಹಡಪದ (ನಾ)= ಬೀದರ ತಾಲೂಕಿನ ಚಿಟ್ಟಾವಾಡಿಯ ತತ್ವ ಪದಕಾರ ಮತ್ತು ಆಧುನಿಕ ವಚನಕಾರ.

ರಘುಶಂಖ ಭಾತಂಬ್ರಾ (ನಾ)= ಸಾಹಿತಿ, ಡಾ॥ ರಘುನಾಥ ಶಂಕರೆಪ್ಪ ಬರಾಟೆ ಭಾತಂಬ್ರಾ ಇವರ ಸಂಕ್ಷಿಪ್ತ ಕಾವ್ಯನಾಮ. ಸಾಹತಿಗಳ ಸೇವೆಗಾಗಿ ತೊಡಗಿಸಿಕೊಂಡವರು.

ರಜ, ರಜಾ (ನಾ)= ಕಸ; ಧೂಳು.

ರಜಗೀಲು (ನಾ)= ಕಸಬಾರಿಗೆ; ಝಾಡು; ಬಾರಿಗೆ; **(ಕ್ರಿ)=** ರಜಗೀಲಾಡ್ಸು; ಕಸಗೂಡಿಸು; ಉಡುಗು.

ರಜಯಿ (ನಾ) ಹಿಂ.= ಮೆತ್ತಗಿನ ಹಾಸುಗೆ; ಮೇಲು ಹೊದಿಕೆ.

ರಜಾ (ನಾ)= ರಜೆ; ಸೂಟಿ; ಬಿಡುವು.

ರಜಾಕಾರ (ನಾ) ಉ.= ಸ್ವಯಂಸೇವಕ; ನಿಜಾಮ ಆಡಳಿತದಲ್ಲಿ ಹಿಂದುಗಳನ್ನು ಪೀಡಿಸಲು, ಸಂಹರಿಸಲು, ಮುಸಲ್ಮಾನ ಬಾಹುಲ್ಯ ಸ್ಥಾಪಿಸಲು ಹೊರಟ ಜಹಾದಿಗಳ ತಂಡದ ಸದಸ್ಯ; ಅತ್ಯಾಚಾರಿ; ನರಹಿಂಸಕ; ರಜವಿಯ ಅನುಯಾಯಿ.

ರಜಾಕಾರ್ರು (ನಾ)ಉ.= ರಜಾಕಾರದ ಬಹು ವಚನ; ಸ್ವಯಂ ಸೇವಕರು; ಹಿಂದೂಗಳ ಸಂಹಾರದ ಪಣ ತೊಟ್ಟವರು.

ರಜಾಕಾರ ಟೋಳಿ (ನಾ)= ಲೂಟಿಗಾರರ ತಂಡ; ಅತ್ಯಾಚಾರಿಗಳ ತಂಡ.

ರಜಾಮಂದಿ (ನಾ) ಉ.= ಒಪ್ಪಿಗೆ; ಸಹಮತಿ.

ರಟಾಸು (ನಾ)= ಸೆಟೆ; ನಿಗುರು; ಕಂಠಪಾಠ ಮಾಡು; ಬಾಯಿಪಾಠ ಮಾಡು.

ರಟ್ಕಲ್ (ನಾ)= ರೇವಣಸಿದ್ಧೇಶ್ವರರ ತೀರ್ಥಕ್ಷೇತ್ರವಾದ ರೇವೋಗ್ಗಿ ಎಂಬ ಕಲ್ಬುರ್ಗಿ ಜಿಲ್ಲೆಯ ಒಂದು ಊರು.

ರಟ್ಟಿ, ರಾಟ್ಟಿ (ನಾ)= ರಟ್ಟೆ; ತೋಳು; ತೋಳಿನ ಸಂದು (ಗಾದೆ: ಹೊಟ್ಯಾಗಿನ ಸಿಟ್ಟು ರಟ್ಯಾಗಿಲ್ಲ).

ರಟ್ಟು (ನಾ)= ಪುಸ್ತಕದ ರಕ್ಷಾಪುಟ; ದಪ್ಪವಾದ ಕಾಗದದಂಥ ಕವಚ.

ರಡ್ಡಿ (ನಾ)= ಒಂದು ಜಾತಿ (ಉ: ಪಾಕನಾಕ ರಡ್ಡಿ, ಎಲ್ಲಮ್ಮ ರಡ್ಡಿ; ಶಿವರಡ್ಡಿ; ಎಲುಮರಡ್ಡಿ; ಮುನ್ನೂರು ಇತ್ಯಾದಿ).

ರಡ್ಡೇರು (ನಾ)= ರಡ್ಡಿ ಜನರು.

ರಣಗುಟ್ಟು (ಕ್ರಿ)= ತೀಕ್ಷ್ಣವಾಗು; ಉಗ್ರವಾಗು; ಭಯಾನಕ ವೆನಿಸು.

ರಣಬಿಸುಲು (ನಾ)= ಉಗ್ರವಾದ ಬಿಸಿಲು; ಭಯಾನಕ ಬಿಸಿಲು.

ರಣರಣ ಅನು (ಕ್ರಿ)= ಬಿಸಿಲು ತೀಕ್ಷ್ಣವೆನಿಸು.

ರಣರಣ ಬಿಸುಲು (ನಾ)= ಅತಿಭಯಾನಕ ಬಿಸಿಲು.

ರಣಹದ್ದು (ನಾ)= ಹೆಣಗಳನ್ನು ಹರಿದು ತಿನ್ನುವ ಒಂದು ಬಗೆಯ ದೊಡ್ಡ ಹದ್ದು; ಯುದ್ಧಭೂಮಿಯಲ್ಲಿ ಗೋಚರವಾಗುವ, ಹೆಣಗಳನ್ನು ತಿನ್ನುವ ಒಂದು ಬಗೆಯ ದೊಡ್ಡ ಹದ್ದು (ಬೈಗುಳ: ಹಳಿಹದ್ದು, ರಣ ಹದ್ದು ಎಂಬಂತೆ!).

ರತನಪುರುಷ (ನಾ)= ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುವ ಒಂದು ಬಗೆಯ ಚಿಕ್ಕದಾದ ಔಷಧಿ ಸಸ್ಯ (ಹಿಂದೀ ಗಾದೆ: ರತನ ಪುರುಷ, ಬಾಪ್ ಖಾಯೇ ಬೇಟಾದುರುಸ್ತ!).

ರತಿ (ನಾ)= ದೈವ ಬಲ; ಇಚ್ಛಾಬಲ; ರತಿದೇವಿ; ಕಾಮನ ಹೆಂಡತಿ.

ರತುನ (ನಾ)= ರತ್ನ (ಜಾನಪದ ಪ್ರಾಸ: ನನ್ನ ಮುತ್ತ। ನನ್ನವಳಾ। ನನ್ನರತುನ। ನನ್ನೂಕಸ।).

ರತ್ನ (ನಾ)= ರತುನ (ನೋಡಿರಿ).

ರತ್ನ ಪುರುಷ (ನಾ)= ರತನ ಪುರುಷ (ನೋಡಿರಿ).

ರತ್ನಾಲು (ನಾ)= ಗೆಣಸು; ತಿನ್ನಲು ಉಪಯೋಗವಾಗುವ ಸಿಹಿಯಾದ ಗಡ್ಡೆ.

ರಥ, ರಥಾ = ತೇರು; ದೇವರಿಗೆ ಹರಕೆ ಸಲ್ಲಿಸಲು ಎಳೆವ ತೇರು.

ರಥಾ ಎಳಿ (ಕ್ರಿ)= ತೇರೆಳೆ; ತೇರೆಳೆವ ಹರಕೆ ತೀರಿಸು.

ರದ್ದಾಗು (ಕ್ರಿ)= ರದ್ದಿಯಾಗು; ರದ್ದುಗೊಳಿಸಲ್ಪಡು.

ರದ್ದಿ (ನಾ)= ಕೆಲಸಕ್ಕೆ ಬೇಕಾಗದ ಹಳೆಯದಾದ ಕಾಗದ; ಹಳೆಯದಾದ ವರ್ತಮಾನ ಪತ್ರಿಕೆ; ರದ್ದುಗೊಳಿಸಲ್ಪಟ್ಟದ್ದು.

ರದ್ದಿಕಾಗುದು = ಹಳೆಯದಾದ, ಕೆಲಸಕ್ಕೆ ಬೇಕಾದ ಕಾಗದ; ಹಳೆಯ ವರ್ತಮಾನ ಪತ್ರಿಕೆ; ರದ್ದುಗೊಳಿಸಿದ ಕಾಗದ.

ರದ್ದು ಮಾಡು (ಕ್ರಿ)= ತೆಗೆದು ಹಾಕು; ವಜಾಗೊಳಿಸು.

ರನ್ನ (ನಾ)= ರತ್ನ; ರತುನ; ಚಿನ್ನ; ಚೆಲುವ; ಸುಂದರ (ಮಹಿಳೆಯರ ಪ್ರಾಸ: ನನ್ರನ್ನ ನನ್ಚಿನ್ನ ನನ್ಹವಳಾ ನನ್ಮುತ್ತು ಎಂಬಂತೆ).

ರಫ್ (ನಾ) ಇಂ.= ಒರಟಾದದ್ದು; ಒರಟು ಕಾಗದವುಳ್ಳದ್ದು.

ರಫು (ನಾ) ಉ.= ಹರಿದ ಬಟ್ಟೆಯನ್ನು ಸರಿ ಪಡಿಸುವಿಕೆ.

ರಫು ಮಾಡು (ಕ್ರಿ)= ಹರಿದ ಬಟ್ಟೆ ಅಥವಾ ತೂತು ಬಿದ್ದ ಬಟ್ಟೆಯನ್ನು ಹೊಲಿಗೆ ಹಾಕಿ ಸರಿಪಡಿಸು.

ರಫ್ತಾರ (ನಾ)ಉ.= ವೇಗ; ಚಲಿಸುವ ತೀವ್ರತೆ.

ರಫ್ತಾರಫ್ತಾ (ದ್ವಿ)ಉ.= ಬರಬರುತ್ತ.

ರಬಡಿ (ನಾ)= ರಾಡಿ; ಮಣ್ಣು ಬೆರೆತ ನೀರು.

ರಬ್ಬಲ್ (ನಾ)= ರಬ್ಬರು.

ರಮಣಿ (ನಾ)= ಹೆಣ್ಣು, ಹೆಂಡತಿ (ಕೋಲಿನ ಹಾಡು: ಎಳ್ಳು ಭಣಮಿಲಿಂದ ನಾ ಎದ್ದು ಬರುವಾಗ। ನೀ ಎಲ್ಲಿ ಗ್ಹೋಗಿದಿ ಎಲೆ ರಮಣಿ ಕೊಲ ಕೋಲೆ॥).

ರಮಿಸು (ಕ್ರಿ)= ನಂಬಿಸು; ಸಂತೈಸು.

ರಮ್ಮಿ (ನಾ) ಇಂ.= ಹದಿಮೂರಲೆಯ ಇಸ್ಪೀಟಾಟ.

ರವದಿ (ನಾ)= ಜೋಳ; ನವಣೆ; ಸಜ್ಜೆ ಇತ್ಯಾದಿಗಳ ಒಣಗಿದ ಎಲೆ; ಸೊಪ್ಪೆ; ಕಣಿಕೆಯ ಮೇಲಿನ ಎಲೆ.

ರವಾ (ನಾ)= ರವೆ; ಸೋಜಿ.

ರವಾದುಂಡಿ (ನಾ)= ರವೆ ಮತ್ತು ಸಕ್ಕರೆ ಬೆರೆಸಿ ತಯಾರಿಸಲಾದ ಉಂಡಿ, ಲಡ್ಡುಗೆ.

ರವಾನಾ (ನಾ) ಉ.= ಕಳಿಸುವಿಕೆ; ಸಾಗಿಸುವಿಕೆ; ಹೊರಡುವಿಕೆ.

ರವಾನಾ ಆಗು (ಕ್ರಿ)= ಹೊರಡು; ಪ್ರಯಾಣ ಬೆಳೆಸು.

ರವಾನಾ ಮಾಡು (ಕ್ರಿ)= ಕಳಿಸು; ಸಾಗಿಸು.

ರವಾನಿಸು (ಕ್ರಿ)= ಕಳಿಸು; ಸಾಗಿಸು; ಹೊರಡಿಸು.

ರವಿವಾರ (ನಾ) ಸಂ.= ಭಾನುವಾರ; ಆದಿತ್ಯವಾರ; ಆಯ್ತಾರ.

ರಸಗುಲ್ಲಾ (ನಾ) ಹಿಂ.= ಹಾಲನ್ನು ಒಡೆಸಿ, ಅದರ ಗಿಣ್ಣದಿಂದ ತಯಾರಿಸುವ ಒಂದು ಪ್ರಕಾರದ ಸಿಹಿ ಭಕ್ಷ್ಯ, ತಿಂಡಿ.

ರಸನಾ (ನಾ)= ಒಂದು ತರಹದ ಸಿಹಿಪಾನಕದ ಪುಡಿ ಮತ್ತು ಅದರಿಂದ ತಯಾರಿಸುವ ಪಾನಕ.

ರಸಪುರಿ (ನಾ)= ಒಂದು ಬಗೆಯ ಅತಿ ಸಿಹಿಯಾದ ಮಾವು.

ರಸಾ (ನಾ)= ರಸ; ಗಿಡ, ಮರ, ಕಬ್ಬು, ಹಣ್ಣು, ಮೊದಲಾದವುಗಳಿಂದ ತೆಗೆದ ದ್ರವ, ಸಾರ, ರಸಿಕೆ.

ರಸೀದಿ (ನಾ) ಉ.= ರಸೀತಿ; ಪಾವತಿ.

ರಸೀದಿ ಬಂತು (ನು)= ಡೇಕರಿಕೆ ಬಂತು; ಹೊಟ್ಟೆ ತುಂಬಿದ ಸೂಚನೆ ಬಂತು.

ರಸ್ಕಿ (ನಾ)= ಹುಣ್ಣಿನಿಂದ ಒಸರುವ ತಿಳಿದ್ರವ ಇಲ್ಲವೆ ಕೀವು.

ರಸ್ಕಿ ಒಡಿ (ಕ್ರಿ)= ರಸ ಒಸರು; ಹುಣ್ಣಿನಿಂದ ತಿಳಿದ್ರವ ಇಲ್ಲವೆ ಕೀವು ಒಸರುವಂತಾಗು.

ರಸ್ಕಿ ಒಡ್ದಾದ (ಕ್ರಿ)= ರಸವು ಒಸರಿದೆ; ಹುಣ್ಣಿನಿಂದ ತಿಳಿದ್ರವ, ಕೀವು ಸೋರಿದೆ.

ರಸ್ತಾ (ನಾ) ಹಿಂ.= ರಸ್ತೆ; ಹಾದಿ; ಮಾರ್ಗ.

ರಸ್ತಾರೋಕೊ (ಕ್ರಿ) ಹಿಂ.= ತಿರುಗಾಟಕ್ಕೆ ಹಾದಿಯಲ್ಲಿ ಅಡ್ಡಿಯುಂಟು ಮಾಡು; ಮುಷ್ಕರ ಮಾಡು.

ರಸ್ತಾರೋಕೊ ಹರ್ತಾಲ (ನಾ)= ಸಂಚಾರ ತಡೆವ ಚಳವಳಿ.

ರಹದಾರಿ (ನಾ)= ಪರವಾನಿಗೆ; ಸರಕು ಸಾಗಿಸುವ ಪರವಾನಿಗೆ.

ರಹಿತಾಗು (ಕ್ರಿ)= ತಡೆಯಾಗು; ರೋಕಾಗು.

ರಹಿವಾಸಿ (ನಾ)= ಇರುವವ; ವಾಸಿಸುವವ.

ರಾದಾರಿ (ನಾ)= ರಹದಾರಿ (ನೋಡಿರಿ).

ರಾದಾರಿ ಕುಡು (ಕ್ರಿ)= ಹಾದಿ ಬಿಡು; ಪರವಾನಿಗೆ ಕೊಡು.

ರಾಂಗಾಗು (ಕ್ರಿ)= ತಪ್ಪಾಗು.

ರಾಂಗು (ನಾ)= ತಪ್ಪು.

ರಾಂಜಣ (ನಾ) ಮ.= ರಂಜಣಿಗೆ; ನೀರು ತುಂಬುವ ಮಣ್ಣಿನ ದೊಡ್ಡ ಪಾತ್ರೆ.

ರಾಂಜಣ್ಗಿ (ನಾ)= ರಂಜಣಿಗೆ; ನೀರು ತುಂಬುವ ಮಣ್ಣಿನ ದೊಡ್ಡ ಪಾತ್ರೆ.

ರಾಂಡಿ (ನಾ)= ರಂಡ್ಕಿ; ರಂಡೆ; ವಿಧವೆ. (ಗಾದೆ: ರಾಂಡಿ ಮಗಾ ರಾಜಕುಮಾರ).

ರಾಂಡಿಗಿಡು (ಕ್ರಿ)= ರಂಡೆಯ ಸಹವಾಸ ಮಾಡು; ವೇಶ್ಯೆಯನ್ನು ಇಟ್ಟುಕೊ.

ರಾಂಡಿಮಗ (ನಾ)= ಸೂಳೆಮಗ; ವಿಧವೆಯ ಮಗ (ಗಾದೆ: ರಾಂಡಿ ಮಗಾ ರಾಜಕುಮಾರ).

ರಾಕ್ಷಿ (ನಾ)= ರಾಕ್ಷಸ; ದಕ್ಷಿಣ ದಿಕ್ಕು; ತೆಂಕಣ.

ರಾಕ್ಷಿಮಾರಿ (ನಾ)= ತೆಂಕಣದಿಕ್ಕು; ದಕ್ಷಿಣ ದಿಕ್ಕು.

ರಾಕ್ಷೇಸ (ನಾ)= ರಾಕ್ಷಸ; ರಕ್ಕಸ.

ರಾಕ್ಷೇಸಾಗ್ಯಾನ (ಕ್ರಿ)= ರಾಕ್ಷಸನಂತಿದ್ದಾನೆ.

ರಾಖ (ನಾ)= ಬೂದಿ.

ರಾಖೀ = ಅಕ್ಕ ತಂಗಿಯರು ಅಣ್ಣ ತಮ್ಮರಿಗೆ ನೂಲು ಹುಣ್ಣಿಮೆಯಂದು ಕಟ್ಟುವ ನೂಲೆಳೆ.

ರಾಖೀ ಹುಣ್ಣಿ (ನಾ)= ನೂಲು ಹುಣ್ಣಿಮೆ.

ರಾಗಾ (ನಾ)= ರಾಗ; ಅಳುವು; ರೋದನ.

ರಾಗಾತೆಗಿ (ಕ್ರಿ)= ಅಳು; ರೋದಿಸು; ಹಟಮಾಡು.

ರಾಗಿ (ನಾ)= ಒಂದು ಬಗೆಯ ಏಕದಳಧಾನ್ಯ; ತವದಿ.

ರಾಗಿ ಮುದ್ದಿ (ನಾ)= ತವದೆಯ ಕಡುಬು.

ರಾಜಕಾರಣಿ (ನಾ)= ರಾಜಕಾರಣದಲ್ಲಿ ಸೇರಿದವನು.

ರಾಜಗಿರಿ (ನಾ)= ಒಂದು ಬಗೆಯ ಕೆಂಪು ಬಣ್ಣದ ತರಕಾರಿ ಸೊಪ್ಪು. ಬೀದರ ತಾಲೂಕಿನ ಒಂದು ಹಳ್ಳಿ. ಅದು ರಾಜಗಿರಾ ಎನಿದಾಗಿದೆ.

ರಾಜಧಾನಿ (ನಾ)= ದೇಶದ ಅಥವಾ ರಾಜ್ಯದ ಮುಖ್ಯ ಪಟ್ಟಣ.

ರಾಜಾ (ನಾ) ಸಂ.= ರಾಜ; ಅರಸ; ಪಾಶಾ; ಬಾದಷಹ.

ರಾಜಾರೋಷ (ಅ)= ಎಲ್ಲರಿಗೂ ತಿಳಿವಂತೆ; ಬಹಿರಂಗವಾಗಿ.

ರಾಜಿಖುಷಿ (ನಾ)= ಸ್ವಸಮ್ಮತಿ; ಸಮ್ಮತಿ; ಒಪ್ಪಿಗೆ.

ರಾಜೀನಾಮಾ (ನಾ)ಉ.= ತಾನಾಗಿಯೇ ಯಾವುದೇ ಹುದ್ದೆಯಿಂದ ಬಿಡುಗಡೆ ಹೊಂದಲು ಸಮ್ಮತಿಸುವಿಕೆ.

ರಾಜೋಟ್ಕಿ (ನಾ)= ರಾಜ್ಯಭಾರ; ರಾಜ್ಯಾಡಳಿತ.

ರಾಟಕಾಟಿ (ನಾ)= ಹೋಗು ಬರುವಿಕೆಯ ರೂಢಿ; ಅಭ್ಯಾಸ; ಪರಿಚಯ; ವಹಿವಾಟು.

ರಾಟಾಣ (ನಾ)= ರಾಟಳ; ರಾಟಣ; ಚರಕ; ಏತ.

ರಾಟಿ (ನಾ)= ರೂಢಿ; ಅಭ್ಯಾಸ; ಚಟ; ಚರಕ; ಚರ್ಖಾ (ಕುಟ್ಟುವ ಹಾಡು: ರಾಟಿ ನೂಲಲುಬೇಕು। ಬಟ್ಟಿ ನೆಯ್ಯಲು ಬೇಕು। ಕೋಟಿ ಜನಗಳಿಗೆಲ್ಲ ಸಲಹೆಂದ ಬಸವಣ್ಣನವ್ವ।। –ಶರಣ ಕವಿ ಮಹಾಗಾಂವ).

ರಾಟ್ಯಾಟ (ನಾ)= ಹೋಗು ಬರುವಿಕೆಯ ರೂಢಿ.

ರಾಡಾನ್ರಾಡಿ (ದ್ವಿ)= ಹೊಲಸೇ ಹೊಲಸು; ಹೇಸಿಕೆ.

ರಾಡಿ (ನಾ)= ಕೆಸರು; ಮಣ್ಣುಬೆರೆತ ನೀರು; ರಬಡಿ; ಹೊಲಸು; ಕೊಳಕು.

ರಾಡಿ ಎಬ್ಬುಸು (ಕ್ರಿ)= ನೀರು ಕಲಕುಗೊಳಿಸು; ಗದ್ದಲ ಗೊಳಿಸು; ಗಲಾಟಿ ಮಾಡು.

ರಾಣಿ (ನಾ)= ರಾಜನ ಹೆಂಡತಿ; ಚಿಕ್ಕ ಬಾಲೆಯರಿಗೆ ಪ್ರೀತಿಯ ಸಂಬೋಧನೆ.

ರಾತಕೀರಾನಿ (ನಾ) ಹಿಂ.= ರಾತ್ರಿಯಲ್ಲೇ ಅರಳಿ ಸುವಾಸನೆ ಬೀರುವ ಹೂ ಮತ್ತು ಅದರ ಗಿಡ.

ರಾತೋರಾತ (ಅ) ಹಿಂ.= ರಾತ್ರಿಯಲ್ಲೇ; ರಾತ್ರಿ ಮುಗಿಯುವುದರೊಳಗಾಗಿಯೇ.

ರಾತ್ರಿ (ನಾ)= ಹೊತ್ತು ಮುಳುಗಿದ ಸಮಯದಿಂದ ಬೆಳಗಾಗುವವರೆಗಿನ ಅವಧಿ.

ರಾತ್ರ್ಯಾನ (ಅ)= ರಾತ್ರಿಯಲ್ಲಿ ತಯಾರಿಸಲಾದ; ರಾತ್ರಿಯ.

ರಾದಾರಿ (ನಾ)= ರಹದಾರಿ; ಸರಕು ಸಾಗಿಸುವ ಅಪ್ಪಣೆ ಚೀಟಿ; ಸಾಗಾಣಿಕೆ ಪರವಾನಗಿ.

ರಾಧಾ (ನಾ)= ಶ್ರೀ ಕೃಷ್ಣನ ಹೆಂಡತಿ; (ಭಜನೆ: ರಾಧಾ । ರಾಧಾ ಕೃಷ್ಣ । ರಾಧಾ).

ರಾನ (ನಾ) ಮ.= ಅಡವಿ; ಕಾಡು.

ರಾಮ (ನಾ)= ದಶರಥ ಮಹಾರಾಜನ ಮಗ ಶ್ರೀ ರಾಮ. ಮಹಾವಿಷ್ಣುವಿನ ಆರನೆಯ ಅವತಾರ.

ರಾಮಚಂದ್ರ ಎಂ.ಪಿ. (ನಾ)= ಮೂಲದ ಹುಮನಾಬಾದ ನಗರದವರಾದ, ಎಂ.ಪಿ. ಎಂದೇ ಖ್ಯಾತಿ ಮಾಡಿದ, ಬೀದರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಾಂಸದ.

ರಾಮಚಂದ್ರಬೋಡ್ಕೆ (ನಾ)= ಚಿಡ ಗುಂಪಿ ಗ್ರಾಮದ ಒಬ್ಬ ಸ್ವಾತಂತ್ರ್ಯ ಹೋರಾಟಗಾರ.

ರಾಮನವಮಿ (ನಾ)= ಶ್ರೀರಾಮ ಜನಿಸಿದ ಚೈತ್ರ ಶುದ್ಧ ನವಮಿಯ ದಿನ.

ರಾಮನ ಸೇವಕ (ನಾ)= ಹನುಮಂತ (ಭಜನೆ: ರಾಮನ ಸೇವಕ ಹನುಮಂತಾ। ನಮ್ಮನು ಕಾಯೋ ಬಲವಂತಾ).

ರಾಮನಾಥ (ನಾ)= ಜೇಡರ ದಾಸಿಮಯ್ಯನವರ ವಚನಾಂಕಿತ;

ಮುದ್ರಾಂಕಿತ (ವಚನ: ಕಡೆಗೀಲಿಲ್ಲದ ಬಂಡಿ। ಹೊಡೆಗೆಡೆವುದು ಮಾಂಬುದೇ। ಕಡೆಗೀಲು ಬಂಡಿಗಾಧಾರ। ಒಡಲೆಂಬ ಬಂಡಿಗೆ ಮೃಡ ಶರಣರ ನುಡಿಗಡಣವೇ ಕಡೆ ಗೀಲು ಕಾಣಾ ರಾಮನಾಥ).

ರಾಮಬಾಣ (ನಾ)= ಗುರಿತಪ್ಪಲಾರದ ಬಾಣ; ಅಪೇಕ್ಷಿತ ಫಲ ಕೊಡುವಂಥದ್ದು.

ರಾಮರಾಜ (ನಾ)= ಯಾರಿಗೂ ತೊಂದರೆಯಾಗದ ರಾಜ್ಯಾಡಳಿತ;/ಸುಖೀ ರಾಜ್ಯ.

ರಾಮಾಯಣ (ನಾ)= ಆದಿಕವಿ ವಾಲ್ಮೀಕಿ ರಚಿಸಿದ ಶ್ರೀ ರಾಮ ಚರಿತ್ರೆ.

ರಾವಳ (ನಾ)= ರಾವಣ; ಲಂಕಾಧಿಪತಿ; ಮಹಾ ಶಿವ ಭಕ್ತ ರಾವಣ; ಶೂರವೀರ (ದೊಡ್ಡಾಟದ ಹಾಡು: ಆಹಾರೆ ರಮಣಿ। ಮವ್ವದ ರಮಣಿ। ನಾ ಇದ್ದ ರಾವಳನೇ ಹಾಂ॥).

ರಾವಳಾಸುರ (ನಾ)= ರಾವಣಾಸುರ.

ರಾವಳೇಶ್ವರ (ನಾ)= ರಾವಣೇಶ್ವರ; ರಾವಣ; ಲಂಕಾಧಿಪತಿ.

ರಾವು (ನಾ)= ರಾಹು; ನವಗ್ರಗಳಲ್ಲಿ ಒಂದು.

ರಾವುಗನಡಿ (ನಾ)= ಸಣ್ಣದನ್ನು ದೊಡ್ಡದಾಗಿ ಇಲ್ಲವೆ ಸೊಟ್ಟಾಗಿ ತೋರಿಸುವ ಕನ್ನಡಿ; ಭೂತಗನ್ನಡಿ.

ರಾವ್ವ (ನಾ)= ರಾವಳ; ರಾವಣ; ಶೂರ (ಉದಾ: ಕೂಳಾ ತಿಂಬಾದ್ರಾಗ ಅಂವಾ ರಾವ್ವ ಹನಾ).

ರಾಶಿ (ನಾ)= ಧಾನ್ಯದ ಕುಂಪಿ; ಗುಂಪು; ಒಟ್ಟಿಲು.

ರಾಶಿ ಮಾಡು (ಕ್ರಿ)= ತೆನೆ ತುಳಿಸಿ, ತೂರಿ ಧಾನ್ಯವನ್ನು ಒಂದೆಡೆ ಸಂಗ್ರಹಿಸು.

ರಾಷ್ಟ್ರಗೀತ (ನಾ)= 'ಜನಗಣಮನ' ಎಂಬ ರಾಷ್ಟ್ರವಂದನೆಯ ಹಾಡು.

ರಾಷ್ಟ್ರಪತಿ (ನಾ)ಸಂ= ದೇಶದ ಅಧಿಪತಿ, ಒಡೆಯ; ರಾಷ್ಟ್ರಾಧ್ಯಕ್ಷ.

ರಾಷ್ಟ್ರ ಪಿತ (ನಾ) ಸಂ.= ಬಾಪೂಜಿ ಎಂದೇ ಕರೆಸಿಕೊಂಡ ಮಹಾತ್ಮಾ ಗಾಂಧೀಜಿ.

ರಾಸ (ವಿ)= ಕಡಿಮೆ ಬೆಲೆಯ.

ರಾಸೂರು (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಊರು. ಅದು ರಾಜೇಶ್ವರ ಹೆಸರಿನಿಂದಲೂ ಕರೆಯಲ್ಪಡುತ್ತದೆ. ಬಸವವಾಜ ಪಾಟೀಲ ಎಂಬ ಸ್ವಾತಂತ್ರ್ಯ ಹೋರಾಟಗಾರನ ಊರು.

ರಾಳ (ನಾ)= ಒಂದು ಪ್ರಕಾರದ ಮರ ಮತ್ತು ಅದರಿಂದ ಬರುವ ಅಂಟು.

ರಿಂಗಾಡು (ಕ್ರಿ)= ರಬ್ಬರ ಉಂಗುರದಿಂದ ಆಟ ಆಡು.

ರಿಂಗು (ನಾ)ಇಂ.= ಮಕ್ಕಳಾಟದ ರಬ್ಬರಿನ ಉಂಗುರ; ಬೆರಳಿನುಂಗುರ.

ರಿಂವ್ವಂತ (ಅ)= ರೊಂಯ್ಯನೆ; ಬಲುವೇಗವಾಗಿ.

ರಿಕಾಪು (ನಾ)= ಕುದುರೆಯ ಜೀನಿನ ಎರಡು ಬದಿಗೆ ಕುದುರೆ ಸವಾರನಿಗೆ ಕಾಲಿಡಲು ಅನುಕೂಲವಾಗುವಂತೆ ತೂಗು ಹಾಕಲಾಗುವ ಕಬ್ಬಿಣದ ಬಳೆಗಳು.

ರಿಕಾಮಿ (ನಾ) ಮ.= ಖಾಲಿ; ಕೆಲಸವಿಲ್ಲದ್ದು.

ರಿಣಾ (ನಾ)= ರಿಣ; ಋಣ; ಸಾಲ; ಉಪಕಾರ (ಗಾದೆ: ರಿಣಾ ಮಾಡ್ತು ಹೆಣಾ).

ರಿಪೇರಿ (ನಾ)= ದುರುಸ್ತಿ; ಸರಿಪಡಿಸುವಿಕೆ.

ರಿಪೇರಿ ಮಾಡು (ಕ್ರಿ)= ದುರುಸ್ತಿ ಮಾಡು; ಸರಿಪಡಿಸು.

ರಿಯಾಯತಿ (ನಾ) ಉ.= ದಯೆ; ಕರುಣೆ; ಸೋಡಿ; ಮೂಲ ಬೆಲೆಯಲ್ಲಿ ಕಮ್ಮಿಗೊಳಿಸುವಿಕೆ.

ರಿಯಾಯಾ (ನಾ) ಉ.= ನಾಗರಿಕರು.

ರಿವಾಜು (ನಾ) ಉ.= ಪದ್ಧತಿ; ರೂಢಿ; ಸಂಪ್ರದಾಯ.

ರಿಸ್ತಾ (ನಾ) ಉ.= ಸಂಬಂಧ.

ರಿಸ್ತಾ ಜುಡಾಸು (ಕ್ರಿ)= ನೆಂಟಸ್ತನ ಮಾಡು.

ರಿಸ್ತೇ ದಾರ (ನಾ) ಉ.= ಸಂಬಂಧಿಕ; ನೆಂಟ.

ರಿಸ್ತೇದಾರಿ (ನಾ) ಉ.= ಸಂಬಂಧ; ನಂಟು.

ರೀ (ಅ)= ಗಂಡಗೆ ಮಾಡುವ ಸಂಬೋಧನ.

ರೀತಿ (ನಾ)= ರೂಢಿ; ಪದ್ಧತಿ; ಪರಂಪರೆ.

ರೀತಿ ತಪ್ಪು (ಕ್ರಿ)= ಹಾದಿಬಿಡು; ರೂಢಿಯನ್ನು ಮೀರು; ರೀತಿಗೆಡು; ಹಾಳಾಗು.

ರೀತಿ ರಿವಾಜು (ನಾ) = ರೂಢಿಗತ ನಡತೆ; ನಡಾವಳಿ.

ರೀತ್ಯಾಚಾರ (ನಾ)= ರೂಢಿಯಿಂದ ಬಂದ ಆಚರಣೆ.

ರೀಪರ್ (ನಾ) ಇಂ.= ಮರದ ಪಟ್ಟಿ; ತುಂಡು; ಬದ್ದಿ.

ರೀಮು (ನಾ) ಇಂ.= ನಾಲ್ಕು ನೂರಾ ಎಂಭತ್ತು ಕಾಗದದ ಹಾಳೆಗಳ ಕಟ್ಟು.

ರೀಲು (ನಾ) ಇಂ.= ದಾರದ ಸುರುಳಿ; ಸಿನೇಮದ ಸುರುಳಿ; ತಂತಿಯ ಸುರುಳಿ.

ರುಂಡ, ರುಂಡಾ (ನಾ)= ತಲೆಯಿಲ್ಲದ ದೇಹ.

ರುಂಡಾ ಹಾರ್ಸು (ಕ್ರಿ)= ತಲೆ ಕಡಿದು ಉರುಳಿಸು.

ರುಂದಿ (ನಾ) ಮ.= ಅಗಲ; ವಿಸ್ತಾರ; ಅಗಲಳತೆ.

ರುಂಬಾಲು (ನಾ)= ರುಮಾಲು; ಮುಂಡಾಸು; ತಲೆಯ ಉಡುಪು.

ರುಕಾಸು (ಕ್ರಿ)= ಅಡ್ಡಿ ಒಡ್ಡು; ರೋಕು ಮಾಡು; ತಡೆಯೊಡ್ಡು.

ರುಕ್ಮಿಣಿ (ನಾ)= ಶ್ರೀಕೃಷ್ಣನ ಹೆಂಡತಿ.

ರುಕ್ಮೊದ್ದಿನ್ (ನಾ)= ಬಸವ ಕಲ್ಯಾಣ ತಾಲೂಕಿನ ಇಸ್ಲಾಂಪೂರು ಗ್ರಾಮದ ಒಬ್ಬ ಪ್ರಸಿದ್ಧ ಸಣ್ಣ ಕತೆಗಾರ.

ರುಖ (ನಾ) ಉ.= ದಿಕ್ಕು; ದಿಸೆ.

ರುಖ್ಖಾ (ನಾ) ಉ.= ರೋಕ್ಯಾ; ಕರ್ಜಪತ್ರ; ಕರಾರು ಪತ್ರ.

ರುಖ್ಸತ್ (ನಾ) ಉ.= ರಜೆ; ಸೂಟಿ; ಛುಟ್ಟಿ; ಬಿಡುವು.

ರುಖ್ಸತ್ ಹಾಕು (ಕ್ರಿ)= ರಜೆಯನ್ನು ಪಡೆ.

ರುಚಿ (ನಾ)= ಸ್ವಾದ; ಸವಿ.

ರುಚಿ ಆಗು (ಕ್ರಿ)= ಸ್ವಾದಿಷ್ಟವೆನಿಸು.

ರುಚಿ ತಪ್ಪು (ಕ್ರಿ)= ಸ್ವಾದ ಇಲ್ಲದಂತಾಗು; ಸವಿ ಇಲ್ಲದಂತಾಗು; ಮೈತ್ರಿ ತಪ್ಪು; ಭೇದ ಉಂಟಾಗು.

ರುಚಿ ನೋಡು (ಕ್ರಿ)= ಸ್ವಾದ ಪರೀಕ್ಷಿಸು; ಅಡಿಗೆಯಲ್ಲಿಯ ಉಪ್ಪು, ಎಣ್ಣೆ, ಖಾರ, ಸಕ್ಕರೆ, ಇತ್ಯಾದಿಗಳ ಪ್ರಮಾಣವನ್ನು ಪರೀಕ್ಷಿಸು.

ರುಚಿರುಚಿ (ದ್ವಿ)= ಅತಿಸ್ವಾದದ; ಅತಿ ಸ್ನೇಹದ; ಸಕ್ಕರೆಯ ಸ್ವಾದದ.

ರುಚಿರುಚಿಯಾಗು (ಕ್ರಿ)= ಅತಿಸ್ನೇಹವುಳ್ಳವನಾಗು; ಸ್ನೇಹ ಹೆಚ್ಚಾಗು.

ರುಚಿ ಹತ್ತು (ಕ್ರಿ)= ಸ್ವಾದಿಷ್ಟವೆನಿಸು; ಮರುಳಾಗು.

ರುಜು (ನಾ)= ಸಹಿ; ದಸ್ತಖತ್ತು; ಹೆಬ್ಬಟ್ಟೊತ್ತುವಿಕೆ.

ರುಜುಮಾಡು (ಕ್ರಿ)= ಸಹಿಮಾಡು; ಹೆಬ್ಬೆಟ್ಟೊತ್ತು.

ರುಣ (ನಾ)= ರಿಣ; ಋಣ; ಸಾಲ; ಹಂಗು.

ರುಣಾತೀರ್ಸು (ಕ್ರಿ)= ಸಾಲ ವಾಪಸ್ಸು ಮಾಡು; ಬಾಕಿ ತೀರಿಸು. ಉಪಕಾರಕ್ಕೆ ಉಪಕಾರ ಮಾಡು.

ರುದ್ರಾಕ್ಷಿ (ನಾ)= ಸಂ.= ಒಂದು ಬಗೆಯ ಮರ ಮತ್ತು ಅದರ ಕಾಯಿ; ಜಪಮಾಲೆಗೆ ಬಳಕೆಯಾಗುವ ಕಾಯಿ.

ರುಪೈ (ನಾ)= ರುಪಾಯಿ; ನಿಜಾಮ ಆಡಳಿತದಲ್ಲಿ ತೊಂಬತ್ನಾಲ್ಕು ಪೈಸೆ ಬೆಲೆಯ ನಾಣ್ಯ ಅಥವಾ ನೋಟು; ಬ್ರಿಟಿಷ ಭಾರತ ಸರಕಾರದಲ್ಲಿ ಅರವತ್ನಾಲ್ಕು ಪೈಸೆಯ ನಾಣ್ಯ ಅಥವಾ ನೋಟು; ಸ್ವತಂತ್ರ ಭಾರತದಲ್ಲಿ ನೂರು ಪೈಸೆ ಬೆಲೆಯ ನಾಣ್ಯ ಅಥವಾ ನೋಟು.

ರುಬಾಬು (ನಾ) ಉ.= ರುವಾಬು; ಪ್ರಭಾವ; ದರ್ಪ.

ರುಬ್ಗಲ್ಲು (ನಾ)= ಒರಳಲ್ಲಿ ವಸ್ತುವನ್ನು ಹಾಕಿ ಅರೆಯಲು ಬಳಸುವ ಗುಂಡುಗಲ್ಲು.

ರುಬ್ಬು (ಕ್ರಿ)= ಒರಳಲ್ಲಿ ವಸ್ತುವನ್ನು ಹಾಕಿ ಗುಂಡುಗಲ್ಲಿನಿಂದ ತಿರುವಿ ನುರಿಗೊಳಿಸು; ಸಣ್ಣಾಗುವಂತೆ ಅರೆ.

ರುಬ್ಬುಗಲ್ಲು (ನಾ)= ತೊಯ್ಸಿದ ಅಕ್ಕಿ, ಉದ್ದಿನ ಬೇಳೆ, ಕುದಿಸಿದ ಕಡಲೆ ಬೇಳೆ ಇತ್ಯಾದಿಯನ್ನು ಅರೆದು ಸಣ್ಣಗೊಳಿಸುವ ಗುಂಡುಗಲ್ಲು.

ರುಮಾಲು (ನಾ)= ಮುಂಡಾಸಿ; ಶಮ್ಲಾ; ಪೇಟಾ.

ರುವಾಬು (ನಾ) ಉ.= ರುಬಾಬು; ಪ್ರಭಾವ; ದರ್ಪ.

ರುಸುವತ್ತು (ನಾ) ಉ.= ಲಂಚ; ಗಿಂಬಳ; ಮೇಲ್ಕಾಣಿಕೆ.

ರುಸ್ತುಂ (ನಾ) ಉ.=ಜಟ್ಟಿ; ಸಮರ್ಥ; ಗಟ್ಟಿಗ; ಪೈಲವಾನ; ಒಬ್ಬ ಪೈಲವಾನನ ಹೆಸರು.

ರುಳಿ (ನಾ)= ಅಡಿಯ ಮೇಲ್ಭಾಗದಲ್ಲಿ ಕಾಲಿಗೆ ಧರಿಸುವ ಬೆಳ್ಳಿ ಅಥವಾ ಕಂಚಿನ ಕಿಲೊಕಿಲೊ ಭಾರದ ಆಭರಣ.

ರುಳಿ ಇಟ್ಗೊ (ಕ್ರಿ)= ರುಳಿಯೆಂಬ ಕಾಲಿನ ಒಡವೆಯನ್ನು ಧರಿಸಿಕೊ.

ರೂಢಿ (ನಾ)= ವಾಡಿಕೆ; ಬಳಕೆ; ಅಭ್ಯಾಸ.

ರೂಢಿತಪ್ಪು (ಕ್ರಿ)= ಬಳಕೆ ಇಲ್ಲವಾಗು; ಅಭ್ಯಾಸ ತಪ್ಪಿ ಹೋಗು.

ರೂಢಿ ಮಾಡ್ಕೊ (ಕ್ರಿ)= ಅಭ್ಯಾಸ ಮಾಡಿಕೊ.

ರೂಢಿ ಮಾತು (ನಾ)= ಜನಬಳಕೆಯ ಮಾತು, ನುಡಿ.

ರೂಪವಂತ (ನಾ)= ಚೆಲುವ; ಸುಂದರಾಂಗ.

ರೂಪವಂತಿ (ನಾ)= ಚೆಲುವೆ; ಸುಂದರಿ.

ರೂಪಾ (ನಾ)= ರೂಪ; ಆಕಾರ; ಆಕೃತಿ; ಚೆಲುವು; ಮಾಟ-ರಚನೆ.

ರೂಪಾ ಅಪರೂಪಾಗು (ಕ್ರಿ)= ಭೇಟಿ ಇಲ್ಲದಂತಾಗು; ಕಾಣದಂತಾಗು.

ರೂಪಾತಪ್ಪು (ಕ್ರಿ)= ಸೌಂದರ್ಯಗೆಡು; ಚೆಲುವುಗೆಡು; ವಿಕಾರ ರೂಪವಾಗು.

ರೂಪಾ ತೋರ್ಸು (ಕ್ರಿ)= ಮೋರೆ ತೋರಿಸು; ಮೋರೆ ಕಾಣುವಂತಾಗು.

ರೂಪಾಯಿ (ನಾ)= ಒಂದು ರೂಪಾಯಿಯ ನಾಣ್ಯ ಅಥವಾ ನೋಟು.

ರೂಪು (ನಾ)= ಆಕಾರ; ಚೆಲುವು; ಅಂದ.

ರೂಪು ಮಾಡು (ನು)= ತಿಂದು ಮುಗಿಸು.

ರೂಬರೂ (ಅ) ಉ.= ಎದುರಾ ಎದುರು; ಎದುರಲ್ಲೇ; ಪ್ರತ್ಯಕ್ಷ.

ರೂಳು (ನಾ)= ಕಾಗದದ ಮೇಲೆ ನೇರ ಗೆರೆ ಎಳೆಯಲು ಬಳಸುವ ಕಟ್ಟಿಗೆಯ ಸಾಧನ.

ರೂಳೆಳಿ (ಕ್ರಿ)= ರೋಡಿನ ಮೇಲೆ ರೋಲರನ್ನು ತಿರುಗಾಡಿಸು; ಗೆರೆ ಎಳೆ.

ರೆಪ್ಪಿ (ನಾ)= ರೆಪ್ಪೆ; ಕಣ್ಣಿನ ಮುಚ್ಚಣಿಕೆ; ಎವೆ.

ರೆಪ್ಪಿ ತೆಗಿ (ಕ್ರಿ)= ಕಣ್ಣು ತೆರೆ; ಕಣ್ಣು ಬಿಡು; ನೋಡು.

ರೆಪ್ಪಿ ಬಡಿ (ಕ್ರಿ)= ಕಣ್ಣು ಮುಚ್ಚು ತೆರೆ ಮಾಡು; ಮಿಟುಕಿಸು.

ರೇಕಳಿಕೆ (ನಾ)= ರೇಕುಳ್ಗಿ ಎಂಬ ಬೀದರ ಜಿಲ್ಲೆಯ ಒಂದು ಐತಿಹಾಸಿಕ ಊರು.

ರೇಕುಳ್ಗಿ (ನಾ)= ಬಸವ ಯುಗದಲ್ಲಿ ರೇಕಳಿಕೆ ಎಂಬ ಹೆಸರು ಹೊಂದಿದ ಊರು ರೇಕುಳ್ಗಿ ಎಂದಾಗಿದೆ. ಇದು ಬಹುರೂಪಿ ಚೌಡಯ್ಯ ಶರಣನ ಊರು. ಬುದ್ಧ ವಿಹಾರ ಇರುವ ಕ್ಷೇತ್ರ. ಇದು ಈಗ ಕರ್ನಾಟಕದ ನಾಗಪುರ ಎಂಬ ಖ್ಯಾತಿಯನ್ನು ಹೊಂದಿದ ಊರು.

ರೇಗಡಿ (ನಾ)= ಎರೆ ಭೂಮಿ; ಎರೆ; ಕರಿ ಮಣ್ಣಿನ ಭೂಮಿ.

ರೇಘಾ (ನಾ)= ಗೆರೆ; ಘೇರಿ; ಘೇತಿ.

ರೇಜಂತಾಲ (ನಾ)= ಬೀದರ ಜಿಲ್ಲೆಗೆ ಹೊಂದಿಕೊಂಡಂತಿರುವ ಆಂಧ್ರ ಸೀಮೆಯಲ್ಲಿಯ ಸಿದ್ಧಿ ವಿನಾಯಕ ಕ್ಷೇತ್ರ.

ರೇಜರ (ನಾ) ಇಂ.= ಬ್ಲೇಡು; ಪತ್ತಿ; ಕ್ಷೌರದ ಕತ್ತಿ.

ರೇಜಿಗಲ್ಲು (ನಾ)= ಕೆತ್ತಿ ಗೋಡೆಗೆ ಹೊಂದಿಸಲಾಗುವ ತುಂಡು ಗಲ್ಲು.

ರೇಟು (ನಾ) ಇಂ.= ದರ; ಧಾರಣೆ; ಮೌಲ್ಯ.

ರೇಟು ಮಾಡು (ಕ್ರಿ)= ಒತ್ತಾಯಿಸು; ಒತ್ತಡ ಹೇರು; ಮೇಲಿಂದ ಮೇಲೆ ಒತ್ತಾಯಿಸು.

ರೇಡು (ನಾ) ಇಂ.= ರೇಡಿಯೊ; ಬಾನುಲಿ; ಆಕಾಶವಾಣಿ.

ರೇಡು ಮಾಡು (ಕ್ರಿ)= ಹಲ್ಲೆ ಮಾಡು.

ರೇಣುಕಾಚಾರ್ಯ (ನಾ)= ಪಂಚ ಪೀಠದ ಜಗದ್ಗುರುಗಳಲ್ಲಿ ಪ್ರಮುಖರಾದವರು.

ರೇತಿ (ನಾ)= ಉಸುಕು; ಹರಿಯುವ ಹಳ್ಳದ ತಳದಲ್ಲಿ ಸಂಗ್ರಹವಾಗುವ ಮರುಳು.

ರೇಲು ಗಾಡಿ (ನಾ)= ರೈಲು ಬಂಡಿ; ಉಗಿ ಬಂಡಿ.

ರೇಲ್ವಟ್ಟಿ (ನಾ)= ರೈಲಿನ ಹಳಿ.

ರೇವಪ್ಪಯ್ಯ (ನಾ)= ಭಾಲ್ಕಿ ತಾಲೂಕಿನ ನಾವದಗಿ ಗ್ರಾಮದ ಕ್ರಾಂತಿಕಾರಿ, ಗಣಾಚಾರಿ ಶರಣರು.

ರೇವ್ಗಿ (ನಾ)= ರೇವಗಿ; ಕಡೆಗೋಲು; ಮೊಸರು ಕಡೆದು ಮಜ್ಜಿಗೆ ಮತ್ತು ಬೆಣ್ಣೆಯನ್ನು ಬೇರ್ಪಡಿಸುವ ಸಾಧನ.

ರೇವೋಗ್ಗಿ (ನಾ)= ರೇವಣ ಸಿದ್ಧೇಶ್ವರರ ತೀರ್ಥ ಕ್ಷೇತ್ರವಾದ ರಟ್ಕಲ್ ಎಂಬ ಊರು (ಭಜನೆ: ರೇವಣಸಿದ್ಧ ನಮ್ಮಪ್ಪಾ। ರೇವೋಗ್ಗಿದಾಗ ಹಾನಪ್ಪಾ।).

ರೇವ್ಗಿ ತಿರುವು (ಕ್ರಿ)= ಮಜ್ಜಿಗೆ ಮಾಡು.

ರೇಶ್ಮಿ (ನಾ)= ರೇಶ್ಮೆ; ರೇಷ್ಮೆಗೂಡು; ರೇಶ್ಮೆಯ ಬೆಲೆ ಬಾಳುವ ಬಟ್ಟೆ.

ರೇಷನ್ನು (ನಾ)= ಪಡಿತರ ಆಹಾರ; ಆಹಾರ ಧಾನ್ಯ.

ರೇಷಾ (ನಾ)= ರೇಷೆ; ರೇಖೆ; ಹಸ್ತರೇಖೆ (ವಚನ: ಅರ್ಥ ರೇಖೆಯಿದ್ದಲ್ಲಿ ಏನು ಫಲ? ಆಯುಷ್ಯ ರೇಷೆ ಇಲ್ಲದನ್ನಕ್ಕ?).

ರೇಷಾ ಛಂದಿರು (ಕ್ರಿ)= ಹಸ್ತರೇಖಾ ಬಲ ಉತ್ತಮವಾಗಿರು.

ರೇಷ್ಮಿಹುಳಾ (ನಾ)= ರೇಷ್ಮೆಯ ಗೂಡು ಕಟ್ಟುವ ಒಂದು ಬಗೆಯ ಹುಳು.

ರೈತ (ನಾ)= ಒಕ್ಕಲಿಗ; ಕೃಷಿತ; ಕುಣಬಿ.

ರೈತಾಪಿ (ನಾ)= ಕೃಷಿಕಾರ್ಯ; ಬೇಸಾಯ; ಕೃಷಿ.

ರೈಲು (ನಾ)= ರೇಲು; ಉಗಿ ಬಂಡಿ.

ರೊಂಚಿ (ನಾ)= ತೆಳ್ಳಗಿನ ಕಲ್ಲಿನ ಚೂಪಾದ ಅಂಚು.

ರೊಂಚು (ನಾ)= ಒಡೆದ ಚೂಪಾದ ಕಲ್ಲು.

ರೊಂಚುಗಲ್ಲು (ನಾ)= ಒಡೆದು ಚೂರಾದ ಚೂಪುಗಲ್ಲು.

ರೊಂಡಿ (ನಾ)= ನಡದ ಹಿಂಬದಿಯ ಕೆಳ ಭಾಗ.

ರೊಂಡಿ ಜರುಗು (ಕ್ರಿ)= ನಡದ ಹಿಂಬದಿಯ ಕೆಳ ಎಲುಬು ಸಡಿಲುಗೊಳ್ಳು, ಸರಿ.

ರೊಂಯ್ಯಂತ (ಅ)= ರೊಂಯ್ಯನೆ.

ರೊಕ್ಕ (ನಾ)= ದುಡ್ಡು; ಹಣ; ನಗದು; ಬಳಸಲು ಸಿದ್ಧವಾಗಿರುವ ಹಣ (ದಾಸರ ಹಾಡು: ರೊಕ್ಕ ಎರಡಕ್ಕು ದುಃಖ ಕಾಣಕ್ಕ। ಮಕ್ಕಳ ಮರಿಗಳ ಮಾಡೊದು ರೊಕ್ಕ। ಗಕ್ಕನೆ ಹೋದರ ದುಃಖ ಕಾಣಕ್ಕ।).

ರೊಕ್ಕಿಸ್ತ (ನಾ)= ಹಣವುಳ್ಳವನು; ಶ್ರೀಮಂತ; ಧನಿಕ.

ರೊಟ್ಗಿ (ನಾ)= ಗಂಗಾಳ; ತಟ್ಟೆ; ರೊಟ್ಟಿ.

ರೊಟ್ಗೇಡಿ (ನಾ)= ರೊಟ್ಟಿ ಕಾಣಲಾರದವನು/ಳು; ರೊಟ್ಟಿ ಕಾಣದೆ ಕೆಟ್ಟವನು/ಳು; ಕೋಪಿಷ್ಟ; ಸಿಟ್ಟುಳ್ಳವನು/ಳು.

ರೊಟ್ಟಿ (ನಾ)= ಜೋಳದ ಹಿಟ್ಟನ್ನು ನೀರಿನೊಂದಿಗೆ ಸೇರಿಸಿ, ಹಂಚಿನ ಮೇಲೆ ಬೇಯಿಸಿ ತಯಾರಿಸಿದ ಬಿಲ್ಲೆ; ಗೋಧಿ ಹಿಟ್ಟಿನ ಬಿಲ್ಲೆ.

ರೊಟ್ಟಿ ಬಡಿ (ಕ್ರಿ)= ಹಿಟ್ಟಿನಿಂದ ರೊಟ್ಟಿ ತಯಾರಿಸು.

ರೊಡ ಗಾಲು (ನಾ)= ಎಡಗಾಲು.

ರೊಡಗೈ (ನಾ)= ಎಡಗೈ.

ರೊಡ್ಡ (ನಾ)= ಎಡ ಗೈಯಿಂದಲೆ ಕೆಲಸ ಮಾಡುವವನು; ಎಡಚ.

ರೊಡ್ಡಿ (ನಾ)= ಎಡಗೈ ಮುಂದಾಗಿ ಬಳಸುವವಳು.

ರೊಡ್ಡಾ (ನಾ)= ರೊಡ್ಡ (ನೋಡಿರಿ).

ರೊಣ (ನಾ)= ನೊಣ.

ರೊಣ ಹದ್ದು (ನಾ)= ರಣ ಹದ್ದು.

ರೊಣ ಹೊಡಿ (ಕ್ರಿ)= ನೊಣ ಜಾಡಿಸು; ಓಡಿಸು.

ರೋಕು (ನಾ)= ತಡೆ; ಅಡ್ಡಿ.

ರೋಕ್ಯಾ (ನಾ)= ರೋಖಾ; ಸಾಲ ಪತ್ರ; ಕರಾರು ಪತ್ರ.

ರೋಖಾ (ನಾ)= ರೋಕ್ಯಾ (ನೋಡಿರಿ).

ರೋಖು (ನಾ)= ದುಡ್ಡು; ಹಣ; ರೊಕ್ಕ; ನಗದಿ.

ರೋಗು (ನಾ)= ರೋಗ; ಬೇನೆ; ಕಾಯಿಲೆ; ಜಡ್ಡು.

ರೋಜ (ನಾ)= ದಿನ; ಪ್ರತಿದಿನ.

ರೋಜಗಾರಿ (ನಾ)= ಕೂಲಿ; ಮಜೂರಿ; ಉದ್ಯೋಗ; ಕೆಲಸ.

ರೋಜನಾಮ್ಯಾ (ನಾ)= ದಿನಚರಿ; ಡೈರಿ.

ರೋಜ ರೋಜ (ಅ)= ದಿನಾಲು; ಪ್ರತಿದಿನ.

ರೋಜಾ (ನಾ) ಉ.= ಮುಸಲ್ಮಾನರು ರಮಜಾನ ತಿಂಗಳಲ್ಲಿ ಮಾಡುವ ಉಪವಾಸ ವ್ರತ; ದಿನಾಲು; ಪ್ರತಿ ನಿತ್ಯ ರೋಜಾ ನಾ.ಭಜನೆ: ಗಣಪತಿ ಗಣ ರಾಜಾ । ಮಾಡುವೆ ಪೂಜಾ॥ ಮಾಡುವೆ ಪೂಜಾ । ನಿತ್ಯ ರೋಜಾ॥).

ರೋಜಾನಾ (ಅ)= ದಿನಾಲು; ಪ್ರತಿನಿತ್ಯ.

ರೋಜಿ (ನಾ)= ಕೂಲಿ; ದಿನಗೂಲಿ; ಕೂಲಿಯ ಆದಾಯ; ದಿನಾಲು.

ರೋಜ್ಗಾರ (ನಾ) ಉ.= ಕೂಲಿ ಆಳು; ಕೂಲಿ ಆಳಿನ ದಿನದ ಆದಾಯ.

ರೋಜ್ಗಾರಿ (ನಾ)= ರೋಜುಗಾರಿ (ನೋಡಿರಿ).

ರೋಜ್ನಾಮಾ (ನಾ) ಉ.= ದಿನಚರಿ; ಡೈರಿ.

ರೋಪು (ನಾ) ಮ.= ಅಗೆ; ಸಸಿ.

ರೋಬು (ನಾ) ಉ.= ರವಾಬು; ದರ್ಪ; ಪ್ರಭಾವ.

ರೋಡು (ನಾ) ಇಂ.= ಮಾರ್ಗ; ರಾಜಮಾರ್ಗ.

ರೋಯಿಣಿ (ನಾ)= ರೋಹಿಣಿ ಮಳೆಯ ನಕ್ಷತ್ರ; ಮೃಗಾ ನಕ್ಷತ್ರಕ್ಕಿಂತ ಮೊದಲಿನ ಮಳೆಯ ನಕ್ಷತ್ರ.

ರೋಷ (ನಾ)= ಸಿಟ್ಟು.

ರೋಳಾ (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಊರಿನ ಹೆಸರು; ರೋಳ್ಯಾ ಎಂದೂ ಕರೆಯಲ್ಪಡುತ್ತದೆ.

ರೌಂಡು (ನಾ) ಇಂ.= ಸುತ್ತು.

ರಾಂಡುಹೊಡಿ (ಕ್ರಿ)= ಸುತ್ತು ಹಾಕು; ಚಕ್ರದಂತೆ ಸುತ್ತಾಡು.

ರೌದಿ (ನಾ)= ರವದಿ; ಜೋಳ, ನವಣೆ, ಸಜ್ಜೆ ಇತ್ಯಾದಿಗಳ ದಂಟಿನ ಮೇಲಿನ ಸೊಪ್ಪೆ.

ರೌಬು (ನಾ)ಉ.= ರೋಬು; ರವಾಬು; ದರ್ಪ; ಪ್ರಭಾವ.

ರ್‍ಯಾಂಪಿ (ನಾ)= ರೆಂಪೆ; ಸಮಗಾರರು ತೊಗಲು ಕತ್ತರಿಸಲು ಬಳಸುವ ಕತ್ತಿ.

ರ್‍ಯಾಗಿಂದ್ರ (ನಾ)= ರಾಘವೇಂದ್ರ.

ರ್‍ಯಾಟಿ (ನಾ)= ರಾಟಿ; ಅಭ್ಯಾಸ; ರೂಡಿ.

ರ್‍ಯಾತ್ರಿ (ನಾ)= ರಾತ್ರಿ.

ರ್‍ಯಾವಪ್ಪ (ನಾ)= ರೇವಪ್ಪ; ರೇವಣಸಿದ್ಧಪ್ಪ.

ರ್‍ಯಾವಮ್ಮ (ನಾ)= ರೇವಮ್ಮ; ರೇವಣ ಸಿದ್ಧಮ್ಮ.

ರ್‍ಯಾವೋಗ್ಗಿ (ನಾ)= ರೇವೂಗ್ಗಿ ಎಂಬ ರೇವಣಸಿದ್ದೇಶ್ವರರ ಪುಣ್ಯ ಕ್ಷೇತ್ರ (ಭಜನೆ: ರೇವಣ ಸಿದ್ಧಾನಮ್ಮಪ್ಪಾ ರ್‍ಯಾವೋಗ್ಗಿದಾಗಾ ಹಾನಪ್ಪ).

ರ್‍ವಾಗಾ (ನಾ)= ರೋಗ; ಬೇನೆ.

ರ್‍ವಾಗಾ ಬಡಿ (ಕ್ರಿ)= ರೋಗ ತಗಲು; ಬೇನೆ ಬರು; ಬೆಳೆಗೆ ರೋಗ ಉಂಟಾಗು.

ರ್‍ವಾಗಾಭೀಳು (ಕ್ರಿ)= ಬೆಳೆಗೆ ರೋಗ ಆವರಿಸು; ಬೇನೆಯುಂಟಾಗು.

ರ್‍ವಾಗುದ್ಮುದ್ದಿ (ನಾ)= ಸದಾರೋಗದಿಂದ ನರಳುವವನು; ರೋಗ ದೂರಗೊಳ್ಳದ ಬೆಳೆ.

ಲ

ಲಂಕಾ (ನಾ)= ಸಿಂಹಳ ದ್ವೀಪ; ರಾವಣನ ರಾಜ್ಯ (ಉದಾ: ಮನ್ಯಾನ ಭಾಗಾದಿ ಲಂಕಾ ಸುಟ್ಟ).

ಲಂಗಡಾ (ನಾ)ಉ.= ಕುಂಟ; ಹೆಳವ.

ಲಂಗಡಿ (ನಾ) ಉ.= ಕುಂಟುತ್ತ ನಡೆವವಳು; ಕುಂಟಾಟ; ಕುಂಟಲಿಪಿ.

ಲಂಗಾ (ನಾ) ಹಿಂ.= ಹೆಣ್ಣು ಮಕ್ಕಳ ಒಳ ಉಡುಗೆ; ಪರಕಾರ; ತೊರೆದು ನಿಂತವನು; ಜಗಳಗಂಟ; ಹುಂಬ; ಲಫಂಗ; ತುಂಟ; ಘಟಿಂಗ.

ಲಂಗೆ (ನಾ)= ಲಫಂಗರು ಹುಂಬರು (ಉರ್ದುಗಾದೆ: ಲಂಗೆ ಸಬ್ಸೆ ಅಂಗೆ).

ಲಂಗಿರ್ಝುಗಡಾ (ನಾ)= ಹುಂಬರ ಜಗಳ; ಹುಂಬತನದ ಜಗಳ.

ಲಂಗೋಟಿ (ನಾ)= ಲೊಂಗೋಟಿ; ಜನನೇಂದ್ರಿಯ ಮತ್ತು ಗುದದ್ವಾರ ಮುಚ್ಚುವಂತೆ ಟೊಂಕಕ್ಕೆ ಸಿಕ್ಕಿಸಿದ ತುಂಡು ಬಟ್ಟೆ.

ಲಂಗೋಟ್ಯಾ (ನಾ)= ಲೊಂಗೋಟ್ಯಾ; ಲಂಗೋಟಿ ಉಡುವವನು.

ಲಂಚಖೋರ (ನಾ)= ಲಂಚ ತಿನ್ನುವವನು.

ಲಂಚಾ (ನಾ)= ಲಂಚ; ಗಿಂಬಳ; ಅನೈತಿಕ ಹಣ ಸುಲಿಯುವಿಕೆ.

ಲಂಚಾತಿನು (ಕ್ರಿ)= ಲಂಚವನ್ನು ಸ್ವೀಕರಿಸು; ಆಮಿಷವನ್ನು ಹೊಂದು (ಗಾದೆ: ಲಂಚಾ ತಿಂದಾವ ಮಂಚಾ ಏರ್ದ).

ಲಂಡಿ (ನಾ) ಉ.= ಕುತ್ತಿಗೆ; ಕೊರಳು; ಗಂಟಲು.

ಲಂಡಿ ಒತ್ತು (ಕ್ರಿ)= ಕುತ್ತಿಗೆ ಒತ್ತು; ಕತ್ತು ಹಿಚುಕು.

ಲಂಬರು (ನಾ)= ನಂಬರು; ಸರ್ವೇನಂಬರು; ಹೊಲ.

ಲಂಬರ್ದಾರ (ನಾ)= ಹೊಲದೊಡೆಯ; ಸರ್ವೇನಂಬರು ಹೊಂದಿದವನು.

ಲಂಬಾ (ವಿ) ಹಿಂ= ಉದ್ದವಾದ; ಎತ್ತರವಾದ.

ಲಂಬಾಣಿ (ನಾ)= ಲಮಾಣಿ.

ಲಂಬಾ ಪೂರಾ (ನಾ)= ಸಾಕಷ್ಟು ಎತ್ತರ.

ಲಂಬಾಯಿ (ನಾ) ಹಿಂ.= ಉದ್ದಳತೆ; ಎತ್ತರ.

ಲಂಬೂ (ವಿ)= ಅತಿ ಎತ್ತರವುಳ್ಳ.

ಲಂಬೂಕಡಾ (ನಾ)= ಅತಿ ಎತ್ತರವುಳ್ಳ ವ್ಯಕ್ತಿ; ಹೀನೈಸುವಿಕೆ.

ಲಂಬೋದರ (ನಾ)= ದೊಡ್ಡ ಹೊಟ್ಟೆಯ ಗಣಪತಿ.

ಲಕಲಕ ಅನು (ಕ್ರಿ)= ಥಳಥಳ ಹೊಳೆ.

ಲಕುಮದೇವ್ವಿ (ನಾ)= ಲಕ್ಷ್ಮೀದೇವಿ.

ಲಕುಮಿ (ನಾ)= ಲಕ್ಷ್ಮೀ.

ಲಕ್ಕಣ ಗೈ (ನಾ)= ಈಗ ಲಖಣಗಾಂವ ಎಂದು ಕರೆಯಲ್ಪಡುತ್ತಿರುವ ಭಾಲ್ಕಿ ತಾಲೂಕಿನ ಒಂದು ಊರು; ಲಕ್ಷ್ಮೀದೇವಿಯ ದೇಗುಲ ಹಾಳುಗೊಂಡ ಐತಿಹಾಸಿಕ ಊರು (ಶ್ರೀ ಭಗವಾನ ಅವರ ಹೇಳಿಕೆ).

ಲಕ್ಕಿ (ನಾ)= ಒಂದು ಬಗೆಯ ಔಷಧಿ ಸಸ್ಯ.

ಲಕ್ಕಿ (ನಾ)= ಇಂ.= ಸುದೈವಿ.

ಲಕ್ಕು (ನಾ)= ಲಕ್ಷ್ಯ; ಗಮನ.

ಲಕ್ಕು (ನಾ) ಇಂ.= ಭಾಗ್ಯ; ಹಣೆ ಬರಹ; ದೈವ.

ಲಕ್ವಾ (ನಾ)= ಪಾರ್ಶ್ವವಾಯು; ಶರೀರದ ಒಂದು ಭಾಗ ನಿಷ್ಕ್ರಿಯವಾಗುವ ಒಂದು ಬಗೆಯ ರೋಗ.

ಲಕ್ಷಣ (ನಾ)= ಲಕ್ಷಣ; ಮುಖಚರ್ಯೆ; ಗುರುತು; ಚಿಹ್ನೆ: ಚೆಲುವು; ಅಂದ.

ಲಕ್ಷಣವಂತ (ನಾ)= ಸುಂದರಾಂಗ; ಖಳೆವಂತ.

ಲಕ್ಷ್ಮಿ (ನಾ)= ಮಹಾವಿಷ್ಣುವಿನ ಹೆಂಡತಿ; ಐಶ್ವರ್ಯ ಮತ್ತು ಸೌಂದರ್ಯದ ಅಧಿದೇವತೆ.

ಲಗತ್ತಾಗು (ಕ್ರಿ)= ಸೋಬ್ತಿಯಾಗು; ಸಂಗತಿಮಾಡು; ಜತ್ತಾಗು; ಹೊಂದಿಕೊ.

ಲಗತ್ತಿಸು (ಕ್ರಿ)= ಜೋಡಿಸು; ಹೊಂದಿಸು; ಸೇರಿಸು.

ಲಗಳಿ (ನಾ)= ಎತ್ತಿನ ಬೆನ್ನ ಮೇಲೆ ನಾಲ್ಕು ಕೊಡಗಳನ್ನು ಇರಿಸಲು ಬಳಸುವ ಕಬ್ಬಿಣ ಪಟ್ಟಿಗಳ ಸಾಧನ; ನೀರು ಸಾಗಿಸಲು ಎತ್ತಿನ ಬೆನ್ನ ಮೇಲೆ ಇಡುವ ನಾಲ್ಕು ಕೊಡಗಳ ಸಾಧನ.

ಲಗಳಿ ಎತ್ತು (ನಾ)= ನೀರಿನ ಲಗಳಿಯನ್ನು ಹೊರಲು ಬಳಕೆಯಾಗುವ ಹೇರೆತ್ತು; ಕಂಟ್ಲೆ.

ಲಗಾತಾರ (ಅ) ಉ.= ಒಂದೇ ಸಮನೆ; ಎಡೆ ಬಿಡದೆ- (ಉದಾ: ಮಳಿ ಲಗಾತಾರ ಭೀಳ್ಹಾತಿತ್ತು.).

ಲಗಾವ (ನಾ)= ಹೊಂದಿಕೆ; ಅನುಕೂಲ.

ಲಗಾವಾಗು (ಕ್ರಿ)= ಜತ್ತಾಗು; ಜೋಡಿಯಾಗು; ಸೋಬ್ತಿಯಾಗು.

ಲಗಾಸು (ಕ್ರಿ)= ಹೊಡೆ; ಏಟ ಹಾಕು.

ಲಗೇಚ (ಅ) ಮ.= ತಕ್ಷಣ; ಅದರ ಬೆನ್ನಹಿಂದೆಯೇ.

ಲಗ್ಗುನ (ನಾ)= ಲಗ್ನ; ಮದುವೆ.

ಲಗ್ಗುನ ಪತ್ರ (ನಾ)= ಲಗ್ನ ಪತ್ರ; ಮದುವೆಯ ಕರೆಯೋಲೆ.

ಲಗ್ನನ ಮಂಟಪ (ನಾ)= ಮದುವೆಯ ಹಂದರ; ಮದುವೆಯ ಮನೆ.

ಲಗ್ಣ (ನಾ)= ಲಗ್ನ; ಮದುವೆ.

ಲಗ್ಸಿಮಿ (ನಾ)= ಲಕ್ಷ್ಮಿ.

ಲಗ್ಸಿಮಿ ಕಾರ್ಯಾ (ನಾ)= ಲಕ್ಷ್ಮಿ ದೇವಿಯ ಹೆಸರಿನಲ್ಲಿ ನಡೆಸಲಾಗುವ ಕುರಿ ಕೋಣಗಳ ಬಲಿದಾನ ಸಮಾರಂಭ.

ಲಗ್ಸಿಮಿ ಕಾಲ್ಮುಕೊಂಡ್ಬಿದ್ದಾಳ (ಕ್ರಿ)= ಅತಿ ಸಿರಿವಂತಿಕೆ ಉಂಟಾಗಿದೆ.

ಲಗ್ಸಣ (ನಾ)= ಲಕ್ಷಣ; ಗುರುತು; ಚಿಹ್ನೆ.

ಲಗ್ಸಣವಂತ (ನಾ)= ಸುಂದರಾಂಗ; ಖಳಿವಂತ.

ಲಚಲಚ ತಿನು (ಕ್ರಿ)= ನಾಯಿಯಂತೆ ಭಕ್ಷಿಸು.

ಲಜ್ಗೆಟ್ಟಾಂವ (ನಾ)= ಲಜ್ಜೆಗೇಡಿ; ನಾಚಿಕೆಗೇಡಿ.

ಲಜ್ಗೇಡಿ (ನಾ)= ಲಜ್ಜೆಗೆಟ್ಟವನು/ಳು.

ಲಜ್ಜ (ನಾ)= ಲಜ್ಜೆ ಇಲ್ಲದವನು/ಳು.

ಲಟಲಟ (ದ್ವಿ)= ಬೇಗನೆ; ತೀವ್ರವಾಗಿ.

ಲಟ್ಕಿ (ನಾ)= ನಟಿಕೆ; ಬೆರಳುಗಳನ್ನು ಮಡಿಸಿ ಲಟಕ್ಕೆಂದು ಸದ್ದು ಮಾಡುವುದು.

ಲಟ್ಕಿಮುರಿ (ಕ್ರಿ)= ಬೆರಳು ಮಡಿಸಿ ನೆಟಿಕೆಯ ಸದ್ದು ಬರುವಂತೆ ಎರಡು ಮೆಲುಕಿನಲ್ಲಿ ಒತ್ತು; ಪ್ರೀತಿ ಪ್ರದರ್ಶಿಸು; ನಟಿಕೆ ಮುರಿದು ತಿರಸ್ಕಾರ ಪ್ರದರ್ಶಿಸು.

ಲಟ್ಬಣ್ಕಿ (ನಾ)= ಬೆಲ್ಲಣಿಗೆ; ಚಪಾತಿ, ಹೋಳಿಗೆ, ಹಪ್ಪಳ ಇತ್ಯಾದಿಗಳನ್ನು ಲಟ್ಟಿಸುವ ಸಾಧನ.

ಲಟ್ಟು (ನಾ)= ಬಡಿಗೆ; ಕೋಲು.

ಲಟ್ಟು (ನಾ) ಉ.= ಬೊಗರೆ; ಭೌರಿ.

ಲಟ್ಟು ಆಗು (ಕ್ರಿ)= ಗುಂಗೇರು; ಹುಚ್ಚೇರು; ಬೊಗರೆಯಂತೆ ಸುತ್ತಾಡು.

ಲಟ್ಟುಣ್ಗಿ (ನಾ)= ಲಟ್ಟಣಿಕೆ.

ಲಟ್ಟುಸು (ಕ್ರಿ)= ಲಟ್ಟಿಸು; ಬೆಲ್ಲಣಿಗೆಯಿಂದ ಚಪಾತಿ, ಹಪ್ಪಳ ಇತ್ಯಾದಿ ತಯಾರಿಸು.

ಲಡಯಿ (ನಾ) ಉ.= ಯುದ್ಧ.

ಲಡಾಸು (ಕ್ರಿ)= ಯುದ್ಧ ಮಾಡು; ಹೋರಾಡು.

ಲಡಿ (ನಾ)= ಸರಮಾಲೆ; ಪಟಾಕಿ, ಶಾಂಪು ಪಾಕಿಟ್, ನಿರ್ಮಾಪಾಕಿಟ್ ಇತ್ಯಾದಿಗಳ ಸರಮಾಲೆ.

ಲಡಿ ಹಚ್ಚು (ಕ್ರಿ)= ಪಟಾಕಿಯ ಸರಮಾಲೆ ಹೊತ್ತಿಸು.

ಲಡ್ಡ (ನಾ)= ಅಶಕ್ತ; ಕಮ್ಜೋರ; ಕೆಲಸಕ್ಕೆ ಬಾರದವನು.

ಲಡ್ಡಿ (ನಾ)= ಅಶಕ್ತೆ; ಕೆಲಸಕ್ಕೆ ಬಾರದವಳು.

ಲತ್ತಿ (ನಾ)= ಲತ್ತೆ; ಲಾತ್ತಿ (ಗಾದೆ: ಕಾತ್ತಿಗಿ ಲತ್ತಿ ಪೆಟ್ಟು, ಕುದುರಿಗಿ ಇಶಾರಿ ಪೆಟ್ಟು).

ಲದ್ದಿ (ನಾ)= ಆನೆ, ಕುದುರೆ, ಕತ್ತೆ, ಹೇಸರ್ಗತ್ತೆ ಒಂಟೆ ಇತ್ಯಾದಿಗಳ ಮಲದ ಮುದ್ದೆ.

ಲದ್ದಿ ಹಾಕು (ಕ್ರಿ)= (ಆನೆ, ಕುದುರೆ, ಕತ್ತೆ, ಒಂಟೆ ಇತ್ಯಾದಿ) ಮಲ ವಿಸರ್ಜಿಸು.

ಲಪಟಾಸು (ಕ್ರಿ)= ಅಪಹರಿಸು; ಲೂಟಿ ಮಾಡು; ಪರರವಸ್ತುವನ್ನು ಸ್ವಾಧೀನ ಪಡಿಸಿಕೊಳ್ಳು.

ಲಪಾಟಿ (ನಾ)= ಮಗಡಾ; ಧೋತರ ಅಥವಾ ಪಂಜೆಯನ್ನು ಮೇಲೇರಿಸಿ ಕಟ್ಟುವಿಕೆ.

ಲಪೇಟಾ (ನಾ)= ಮುಂಡಾಸಿ; ರುಮಾಲು.

ಲಫಂಗ (ನಾ)= ಹುಂಬ; ತುಂಟ; ಘಟಿಂಗ.

ಲಬ್ಜ (ನಾ) ಉ.= ಶಬ್ದ; ಪದ.

ಲಮಾಣಿ (ನಾ)= ಲಂಬಾಣಿ; ಗುಡ್ಡಗಾಡು ಜನಾಂಗ.

ಲಯ (ನಾ)= ಹಾಳು; ನಾಶ; ಪ್ರಳಯ.

ಲವ (ನಾ)= ಶ್ರೀರಾಮನ ಮಗ.

ಲವಂಗ (ನಾ)= ಸುವಾಸನೆಯುಳ್ಳ ಒಂದು ಬಗೆಯ ಸಾಂಬಾರ ಪದಾರ್ಥ.

ಲವುಡಿ (ನಾ) ಉ.= ಲೌಡಿ; ಲೌಂಡಿ; ತೊತ್ತು; ದಾಸಿ; ಸೂಳೆ; ವೇಶ್ಯೆ.

ಲಸುಣ (ನಾ) ಮ.= ಬೆಳ್ಳುಳ್ಳಿ.

ಲಸ್ಕರ್ (ನಾ) ಉ.= ಸೈನ್ಯ; ದಂಡು.

ಲಹರಿ (ನಾ)= ಉಲ್ಲಾಸ; ಸಂತೋಷ.

ಲಳ್ಗಿ (ನಾ)= ನಳಿಕೆ; ಕೊಳವೆ; ಬಂಡಿಗಾಲಿಗೆ ಹಚ್ಚುವ ಎಣ್ಣೆ ತುಂಬಿಡುವ ಬೆತ್ತದ ಕೊಳಾಯಿ; ಗುದ ದ್ವಾರ (ಗಾದೆ: ಸಲ್ಗಿ ಕೊಟ್ಟ ನಾಯಿ ಲಳ್ಗಿ ಮುಸಿ ನೋಡ್ತಂತ!).

ಲಾ (ನಾ) ಇಂ.= ಕಾನೂನು.

ಲಾಂಬಿ (ನಾ) ಮ.= ಉದ್ದಳತೆ.

ಲಾಗತ್ತು (ನಾ)= ಖರ್ಚು; ವ್ಯಚ್ಚ.

ಲಾಗ ಲಾಗೋಡಿ (ನಾ)= ಒಕ್ಕಲುತನ ನಿರ್ವಹಣೆಯ ಖರ್ಚು.

ಲಾಗಾ (ನಾ)= ಲಾಗ ಹಾಕುವಿಕೆ; ನೆಗೆಯುವಿಕೆ; ಹಾರುವಿಕೆ; ಪಲ್ಟಿ ಹೊಡೆಯುವಿಕೆ; ತಲೆ ಕೆಳಗು ಕಾಲು ಮೇಲು ಮಾಡುವಿಕೆ.

ಲಾಗಾಟಿ (ನಾ)= ಲಗಾಟಿ; ಪಲ್ಟಿ.

ಲಾಗಾ ಹಾಕು (ಕ್ರಿ)= ಪಲ್ಟಿ ಹೊಡೆ; ತಲೆ ಕೆಳಗು ಕಾಲು ಮೇಲು ಮಾಡು; ಲಾಗ ಹೊಡಿ; ಹಾರು.

ಲಾಗಾ ಹೊಡಿ (ಕ್ರಿ)= ನೆಗೆ; ಹಾರು; ಸಾಯು; ಮರಣ ಹೊಂದು; ಸೋಲು; ಅನುತ್ತೀರ್ಣನಾಗು.

ಲಾಗಿ (ನಾ)= ಜೋಳದ ನೊರಜು ಬೆಳೆ; ಜೋಳದ ದಟ್ಟ ಬೆಳೆಯಲ್ಲಿಯ ಸಣ್ಣದಾದ ದಂಟು; ಕಿಳ್ಳು.

ಲಾಗೂ ಆಗು (ಕ್ರಿ)= ಒಂದುಗೂಡು; ಹೆಂಣುಗಂಡು ಜತೆಗೂಡು, ಸೋಬ್ತಿಯಾಗು. ಪರಸ್ತ್ರೀ ಅಥವಾ ಪರಪುರುಷನೊಂದಿಗೆ ಕೂಟ ಮಾಡು.

ಲಾಗೋಡಿ, ಲಾಗೋಡು (ನಾ)= ಲಾಗವಡ; ಕೃಷಿಕಾರ್ಯದಲ್ಲಿ ಉಂಟಾಗುವ ಖರ್ಚು.

ಲಾಡ (ನಾ)= ಉ.= ಅತಿ ವಾತ್ಸಲ್ಯ.

ಲಾಡಕಿ (ನಾ)= ಲಾಡಿಕೆ; ವಾತ್ಸಲ್ಯ.

ಲಾಡ ಮಾಡು (ಕ್ರಿ)= ಅತಿವಾತ್ಸಲ್ಯ ತೋರು.

ಲಾಡಿ (ನಾ)= ನಾಡಾ; ಉದ್ದವಾಗಿ ಹೊಲಿದು ಸಿದ್ಧಗೊಳಿಸಿದ ಬಟ್ಟೆಯ ಪಟ್ಟಿ; ಲಂಗಾ, ಪಾಯ್ಜಾಮಾಗಳಲ್ಲಿ ಸೇರಿಸುವ, ಬಟ್ಟೆಯಿಂದ ಸಿದ್ಧಗೊಳಿಸಿದ ಪಟ್ಟಿ.

ಲಾಡ್ವಂತಿ (ನಾ)= ಬಸವಕಲ್ಯಾಣ ತಾಲೂಕಿನ ಒಂದು ಊರು; ಪ್ರಸಿದ್ಧ ಕಲ್ಗಿ ತುರಾ ಹಾಡುಗಾರರಾದ ಲಾಡ ಸಾಬ ಮತ್ತು ಮದನ ಸಾಬರ ಹುಟ್ಟೂರು. ಶ್ರೀ ಮಾಣಿಕ ಪ್ರಭು ಮಹಾರಾಜರ ಹುಟ್ಟೂರು.

ಲಾತ್ತಿ (ನಾ)= ಲತ್ತೆ; ಪೆಟ್ಟು; ಕಾಲಿನಿಂದ ಹಾಕುವ ಪೆಟ್ಟು; ಒದೆ; ಒದೆತ (ಗಾದೆ: ಕಾತ್ತಿಗಿ ಲಾತ್ತಿ ಪೆಟ್ಟು; ಕುದುರಿಗಿ ಇಶಾರಿ ಪೆಟ್ಟು).

ಲಾತ್ತಿ ಹಾಕು (ಕ್ರಿ)= ಕತ್ತೆ ಕುದುರೆಗಳಂತೆ ಅಂಗಾಲಿನಿಂದ ಹೊಡೆ; ಪೆಟ್ಟು ಹಾಕು; ಹೊಡೆ; ಏಟ ಹಾಕು.

ಲಾಭ (ನಾ)= ಫಾಯ್ದೆ; ನಫೆ; ಧಾನ್ಯ ಅಳೆಯುವಾಗ ಒಂದು ಎನ್ನುವ ಬದಲು 'ಲಾಭ' ಎಂದು ಬಳಸುವ ಪದ; ಪಡೆದದ್ದು ಅಥವಾ ಕೊಟ್ಟದ್ದು ಲಾಭ ಪ್ರದವಾಗಲೆಂಬ ಭಾವನೆ.

ಲಾಭ ಖೋರ (ನಾ)= ಅತಿ ಲಾಭದ ಆಶೆಯುಳ್ಳವನು.

ಲಾಭಾರೆ (ಅ)= ಒಂದು, ಒಂದನೇ ಎಂಬುದರ ಬದಲಾಗಿ 'ಲಾಭಾರೆ' ಎನ್ನುವ ರೂಢಿ; ಲಾಭವಾಗಲಿ; ಫಲಪ್ರದವಾಗಲಿ.

ಲಾಭಾಲುಕ್ಸಾನ (ನಾ)= ಲಾಭಹಾನಿ; ನಫೆ ನುಕ್ಸಾನೆ.

ಲಾಯ್ಕ (ನಾ)ಉ.= ಲಾಯಕ್ಕು; ಕಾಬಿಲ್; ಯೋಗ್ಯ; ಅರ್ಹ.

ಲಾಯ್ಕದಾರ (ನಾ)ಉ.= ಯೋಗ್ಯನಾದವನು; ಅರ್ಹನು.

ಲಾಲು (ನಾ)= ನಾಲು; ಕುದುರೆ ಅಥವಾ ಎತ್ತುಗಳ ಅಂಗಾಲಿಗೆ ಜಡಿವ ಕಬ್ಬಿಣದ ತುಂಡು; ರತ್ನ.

ಲಾಲು ಹೊಡಿ (ಕ್ರಿ)= ಕಾಲಿಗೆ ಕಬ್ಬಿಣದ ನಾಲು ಜಡೆ; ೧೯೪೮ರ ಅವಧಿಯಲ್ಲಿ ರಜಾಕಾರರ (ರಜವಿಯ ಅನುಯಾಯಿಗಳ) ಕಾಟ ಅತಿಯಾದಾಗ, ಪತ್ರೆ ಸರಕಾರ ಎಂದು ಖ್ಯಾತಿ ಹೊಂದಿದ ನಾನಾ ಸಾಬ ಎಂಬ ಸ್ವಾತಂತ್ರ್ಯ ಹೋರಾಟಗಾರರ ತಂಡದವರು, ತಮ್ಮ ಕೈಯಲ್ಲಿ ರಜಾಕಾರರು ಸಿಕ್ಕಾಗ ಅವರ ಕಾಲಿಗೆ ಕಬ್ಬಿಣದ ಲಾಲುಗಳನ್ನು ಜಡಿಯುತ್ತಿದ್ದರು. ಹೀಗೆ ಅವರಿಗೆ ಶಿಕ್ಷೆ ನೀಡುತ್ತಿದ್ದರು.

ಲಾಲ್ಟೀನು (ನಾ) ಇಂ.= ಲಾಂದ್ರು; ಖಂದೀಲು.

ಲಾಯರ (ನಾ) ಇಂ.= ವಕೀಲ; ನ್ಯಾಯವಾದಿ.

ಲಾವಣಿ (ನಾ) ಮ.= ನೆಡುವಿಕೆ; ಕಬ್ಬಿನ ಬೀಜ ಊರುವಿಕೆ; ಹೊಲವನ್ನು ಕರಾರಿನ ಮೇಲೆ ಹೆರವರಿಗೆ ಕೃಷಿಗಾಗಿ ಒಪ್ಪಿಸುವಿಕೆ.

ಲಾವಣಿಗಿಡ (ನಾ)= ಎಳೆಯದಾದ ಮಾವಿನ ಗಿಡ.

ಲಾಳಕಿ (ನಾ)= ಆಲಿಕೆ; ಬಾಟಲಿ, ಡಬ್ಬ ಇತ್ಯಾದಿಗಳಲ್ಲಿ ದ್ರವ ವಸ್ತು ಚೆಲ್ಲದಂತೆ ತುಂಬಲು ಬಳಸುವ ಸಾಧನ.

ಲಾಳಿ (ನಾ)= ಮಗ್ಗದ ಹಾಸಿನಲ್ಲಿ ಸುಳಿದಾಡುವ, ದಾರ ಹಾಸುವ ಉಪಕರಣ; ಹೇರೆತ್ತಿನ ಬೆನ್ನ ಮೇಲಾಗುವ ಹುಣ್ಣು.

ಲಾಳಿ ಭೀಳು (ಕ್ರಿ)= ಹುಣ್ಣಿನಿಂದ ಕೀವು, ರಕ್ತ ಸೋರಿ ಗಿಜಿಗಿಜಿಯಾಗು.

ಲಾಳೆತ್ತು (ನಾ)= ಬೆನ್ನಲ್ಲಿ ಹುಣ್ಣುಂಟಾದ ಹೇರೆತ್ತು (ಗಾದೆ: ಕಾಗಿ ಕರ್ರಂದ್ರ ಲಾಳೆತ್ತು ಬೆದುರಿ ಬಿತ್ತಂತ).

ಲಾಳ್ಕಿ (ನಾ)= ಲಾಳಕಿ (ನೋಡಿರಿ).

ಲಿ (ಅ)= ಇಂದ (ಉದಾ: ಕಡಚಿಲಿ, ಕೈಲಿ, ಕಾಲಿಲಿ, ಬಾಯಿಲಿ ಇತ್ಯಾದಿಯಾಗಿ ಬಳಕೆ).

ಲಿಂಗದೇವ (ನಾ)= ಇಷ್ಟಲಿಂಗ; ಕೂಡಲ ಸಂಗಮ ದೇವ ಎಂಬ ಬಸವಣ್ಣನವರ ವಚನಾಂಕಿತವನ್ನು ಬದಲಾಯಿಸಿ ಮಾತೆ ಮಹಾದೇವಿಯವರು ಬಳಸಿದ ಸುಳ್ಳು ವಚನಾಂಕಿತ.

ಲಿಂಗವಂತ (ನಾ)= ಲಿಂಗಧಾರಿ; ಲಿಂಗಾಯತ; ವೀರಶೈವ.

ಲಿಂಗ, ಲಿಂಗಾ (ನಾ)= ಇಷ್ಟಲಿಂಗ; ಸ್ಥಾವರಲಿಂಗ; ಶಿವನ ಪ್ರತೀಕ.

ಲಿಂಗಾ ಕಟ್ಟು (ಕ್ರಿ)= ಲಿಂಗಧಾರಣ ಮಾಡು; ಹುಟ್ಟಿದ ಕೂಸಿಗೆ ಲಿಂಗ ಧಾರಣೆ ಮಾಡು (ಲಿಂಗಧಾರಣ ಕ್ರಿಯೆಯ ನಂತರವೇ ಹುಟ್ಟಿದ ಮಗುವಿಗೆ ಮೊಲೆಯೂಡುವ ರೂಢಿ ಇರುವುದು).

ಲಿಂಗಾಡೆ (ನಾ)= ಲಿಂಗಾಯತರನ್ನು ಅನ್ಯ ಧರ್ಮೀಯರು ಹೀನ ಗೊಳಿಸಿ ಸಂಬೋಧಿಸುವ ಪದ. (ಗಾದೆ: ಲಿಂಗಾಡೆ ಧಿಂಗಾಡೆ).

ಲಿಂಗಾಯತ (ನಾ)= ಲಿಂಗವಂತ; ವೀರಶೈವ; ಲಿಂಗಧಾರಿ.

ಲಿಂಗಾಷ್ಟಕ (ನಾ)= ಸ್ಥಾವರ ಲಿಂಗಯ್ಯನನ್ನು ಕುರಿತು ರಚಿಸಲಾದ ಎಂಟು ನುಡಿಗಳ ಸ್ತೋತ್ರ (ಉದಾ: ಬ್ರಹ್ಮ ಮುರಾರಿ ಸುರಾರ್ಚಿತಲಿಂಗಂ। ನಿರ್ಮಲ ಭಾಸಿತ ಶೋಭಿತಲಿಂಗಂ।..........).

ಲಿಂಗು (ನಾ)= ಲಿಂಗ; ನಿಂಗ; ಲಿಂಗದೇವರು.

ಲಿಂಗೂಪ್ಜಿ (ನಾ)= ಲಿಂಗಪೂಜೆ; ಇಷ್ಟಲಿಂಗಯ್ಯನ ಪೂಜೆ (ಭಜನೆ: ಲಿಂಗ ಪೂಜಿಯಾಗುತಾದಣ್ಣಾ। ಯಾವಾಗ ನೋಡಲು। ಲಿಂಗ ಪೂಜಿಯಾಗುತಾದಣ್ಣ।).

ಲಿಕಿಪಿಕಿ (ನಾ)= ಶಿಥಿಲತೆ; ಸಡಿಲತೆ; ಬಿಗಿ ಇಲ್ಲದಿರುವಿಕೆ.

ಲಿಗಾಡು (ನಾ)= ಗೋಜು; ಉಸಾಬರಿ.

ಲಿಗಾಡು ಹಚ್ಕೊ (ಕ್ರಿ)= ಗೋಜು ಹಚ್ಚಿಕೊ; ಉಸಾಬರಿ ವಹಿಸಿಕೊ.

ಲಿಗಾಡೆ (ನಾ)= ಜಯದೇವಿ ತಾಯಿ ಲಿಗಾಡೆ; ಸೊಲ್ಲಾಪುರದ ಸಿದ್ಧರಾಮೇಶ್ವರರನ್ನು ಕುರಿತು ತ್ರಿಪದಿಯಲ್ಲಿ ಮಹಾಕಾವ್ಯವನ್ನು ರಚಿಸಿದ ಕವಯತ್ರಿ; ಸೊಲ್ಲಾಪುರ ಬಿಟ್ಟು ಬಸವ ಕಲ್ಯಾಣದಲ್ಲಿ ನೆಲೆಸಿದ ಕವಯತ್ರಿ, ಶರಣೆ ಜಯದೇವಿಯವರ ಅಡ್ಡ ಹೆಸರು.

ಲಿಫಾಫಾ (ನಾ) ಉ.= ಲಕೋಟೆ; ಕವರು.

ಲಿಬಾಸು (ನಾ) ಉ.= ವೇಷ; ಸಮವಸ್ತ್ರ.

ಲಿಹಾಜಿಡು (ಕ್ರಿ) ಉ.= ಮರ್ಯಾದೆ ಕೊಡು; ಗೌರವಿಸು.

ಲಿಹಾಜಿಲ್ಲ = ಮರ್ಯಾದೆ ಇಲ್ಲ; ಕಿಮ್ಮತ್ತಿಲ್ಲ.

ಲಿಹಾಜು (ನಾ) ಉ.= ಮನ್ನಣೆ; ಗೌರವ; ಕಿಮ್ಮತ್ತು.

ಲೀಕಾಗು (ಕ್ರಿ)= ಸೋರು; ಒಸರು.

ಲೀಡರ (ನಾ) ಇಂ.= ಮುಖಂಡ.

ಲೀನಾಗು (ಕ್ರಿ)= ಮಗ್ನನಾಗು; ತನ್ಮಯನಾಗು; ತಲ್ಲೀನ ನಾಗು.

ಲೀಪಾಥೋಪಿ (ನಾ) ಉ.= ಸಾರಣೆ ಮತ್ತು ಮೆತ್ತಣಿಕೆ.

ಲುಂಗಿ (ನಾ)= ಪಂಜೆ; ಪಂಚೆ; ಸೊಂಟಕ್ಕೆ ಸುತ್ತಿಕೊಳ್ಳುವ ಉಡುಪು.

ಲುಂಗಿ ಎತ್ಗೊಂಡೋಡು (ಕ್ರಿ)= ಪಲಾಯನ ಮಾಡು; ಓಡಿ ಹೋಗು; ಕಾಲು ಕಿತ್ತು.

ಲುಂಡಾಳಿ (ನಾ)= ಧಾನ್ಯದಲ್ಲಿ ಹುಳು ಕಟ್ಟಿದ ಜಾಳಿಗೆ ಮನೆ.

ಲುಂಡಾಳಿಗಟ್ಟು (ಕ್ರಿ)= ಧಾನ್ಯದಲ್ಲಿ ಹುಳುಜಾಳ ನಿರ್ಮಿಸು.

ಲುಂಬಿನಿ (ನಾ)= ಲುಂಬಿನಿ ವನ; ಬುದ್ಧನ ಹುಟ್ಟಿದ ಸ್ಥಳ.

ಲುಂಬಿನಿನಗರ (ನಾ)= ಬೀದರೆ ನಗರದ ಒಂದು ಬಡಾವಣೆಯ ಹೆಸರು.

ಲುಚ್ಛಾ (ನಾ) ಹಿಂ.= ದುರಾಚಾರಿ; ಲಫಂಗ; ಘಟಿಂಗ.

ಲುಚ್ಛಾಗಿರಿ (ನಾ) ಹಿಂ.= ದುರಾಚಾರ; ಹೀನಗುಣ; ಘಟಿಂಗತನ.

ಲುಚ್ಚಪನಾ (ನಾ)= ದುರಾಚಾರ; ಲುಚ್ಛಾಗಿರಿ.

ಲುಟಾರಿ (ನಾ)= ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ೧೯೪೮ಕ್ಕೆ ಮುಂಚೆ ನಿಜಾಮನ ಹೈದರಾಬಾದ ರಾಜ್ಯದಲ್ಲಿ ನಿಜಾಮನ ಮತ್ತು ಖಾಸೀಮರಜವಿಯ ಕುಮ್ಮಕ್ಕಿನಿಂದ ರಜಾಕಾರರು ಹಿಂದೂಗಳ ಮೇಲೆ ನಡೆಸಿದ ಅತ್ಯಾಚಾರ, ಕೊಲೆ, ಲೂಟಿಯಿಂದ ಕೂಡಿದ ದೌರ್ಜನ್ಯ; ಪೋಲಿಸು ಕಾರ್ಯಾಚರಣೆ ನಂತರ ಹಿಂದುಗಳು ರಜಾಕಾರರ ಮೇಲೆ ನಡೆಸಿದ ದೌರ್ಜನ್ಯ.

ಲುಟಾರಿಯಾಳ್ಯಾ (ನಾ)= ರಜಾಕಾರರು ೧೯೪೮ರ ಪೂರ್ವದಲ್ಲಿ ನಿಜಾಮರಾಜ್ಯದಲ್ಲಿ ಹಿಂದುಗಳ ಮನೆಮಾರು, ಮಾನ ಮರ್ಯಾದೆಗಳನ್ನು ಲೂಟಿ ಮಾಡಿದ ಅವಧಿ; ಪೋಲಿಸ ಕ್ರಿಯಾಚರಣೆ ನಂತರ ಹಿಂದುಗಳು ರಜಾಕಾರರ ಮೇಲೆ ನಡೆಸಿದ ದೌರ್ಜನ್ಯ.

ಲುಟಾಸು (ಕ್ರಿ)= ಲೂಟಿ ಮಾಡು; ಕೊಳ್ಳೆ ಹೊಡೆ.

ಲುಟುಲುಟು (ದ್ವಿ) = ಚಿಕ್ಕಮಕ್ಕಳು ಹೆಜ್ಜೆ ಇಡುವಿಕೆ.

ಲುಟ್ಯಾರಿ (ನಾ)= ಲುಟಾರಿ (ನೋಡಿರಿ).

ಲುಡುಕಾಸು (ಕ್ರಿ)= ಉರುಳಿಸು.

ಲುಡುಬುಡ್ಯಾ (ನಾ)= ಮಧ್ಯ ಮಧ್ಯ ಮುಖ ತೂರುವವನು.

ಲುಳಿ (ನಾ)= ರುಳಿ; ಕಾಲಿಗೆ ಧರಿಸುವ ಒಂದು ಬಗೆಯ ಆಭರಣ; ಹೊಸದಾಗಿ ಮನೆ ಸೇರಿದ ಮದುಮಗಳು ಭಯಪಟ್ಟು ಓಡಿ ಹೋಗಲು ಬರ ಬಾರದೆಂದು ಬೇಡಿಯ ತರಹದಲ್ಲಿ ಬಿಗಿಯುವ ಬೆಳ್ಳಿಯ ಕಿಲೊಕಿಲೊ ಭಾರದ ಒಡವೆ.

ಲೂಟಿ (ನಾ)= ಸುಲಿಗೆ; ದರೋಡೆ.

ಲೂಟಿ ಮಾಡು (ಕ್ರಿ)= ಕೊಳ್ಳೆ ಹೊಡೆ; ದೋಚು.

ಲೂಟ್ಮಾರಿ (ನಾ)= ಹೊಡೆದು ಬಡೆದು ಲೂಟಿ ಮಾಡುವಿಕೆ.

ಲೂಟ್ಮಾರಿ ನಡ್ಸು (ಕ್ರಿ)= ಹೊಡೆದು ಬಡೆದು ಲೂಟಿ ಮಾಡು; ದೋಚು.

ಲೆಂಕಿ (ನಾ)= ಒಂದು ಬಗೆಯ ಬಟಾಣಿ ಜಾತಿಯ ಕಾಳು ಮತ್ತು ಅದರ ಬಳ್ಳಿ; ನೆಂಕಿ.

ಲೆಂಡ (ಗು)= ಕಡಿಮೆ ಉದ್ದದ ತೋಳುಳ್ಳ.

ಲೆಂಡಂಗಿ (ನಾ)= ತೋಳಿನ ಉದ್ದ ಕಡಿಮೆ ಇರುವ ಅಂಗಿ; ಒಳ ಅಂಗಿ; ಬನೀನು.

ಲೆಂಡಾಗು (ಕ್ರಿ)= ತೋಳಿನ ಉದ್ದ ಕಡಿಮೆಯಾಗು.

ಲೆಂಡಿ (ನಾ)= ನಾಲೆ; ಬಾಂಗು.

ಲೆಂಡ್ಕಿ (ನಾ)= ಇಲಿ, ಹೆಗ್ಗಣ, ಹಲ್ಲಿ ಮೊದಲಾದವುಗಳ ಮಲದ ಹಿಕ್ಕಿ.

ಲೆಂಡ್ಕಿ ಇಡು (ಕ್ರಿ)= ಮಲವಿಸರ್ಜಿಸು; ಹಿಕ್ಕೆ ಹಾಕು.

ಲೆಂಡ್ಕಿ ಹಾಕು (ಕ್ರಿ)= ಲೆಂಡ್ಕಿ ಇಡು (ನೋಡಿರಿ).

ಲೆಂಡ್ಯಾ (ನಾ)= ಮೈನಾ; ಹಳದಿ ರೆಪ್ಪೆಗಳುಳ್ಳ ಹಕ್ಕಿ.

ಲೆಕ್ಕ ಲೆಕ್ಕಾ (ನಾ)= ಅಂಕಿ; ಸಂಖ್ಯೆ; ಗಣಿತ; ಆಯುವ್ಯಯ; ಜಮಾಖರ್ಚು.

ಲೆಕ್ಕಾ ಮಾಡು (ಕ್ರಿ) = ಕೂಡು, ಕಳೆ, ಭಾಗಾಕಾರ, ಗುಣಾಕಾರ ಇತ್ಯಾದಿ ನೆರವೇರಿಸು.

ಲೆಕ್ಕಾ ಹಾಕು (ಕ್ರಿ)= ವಿಚಾರ ಮಾಡು; ಅಭಿಪ್ರಾಯಕ್ಕೆ ಬರು.

ಲೆಕ್ಕುಣ್ಕಿ (ನಾ)= ಲೇಖಣಿ; ಲೆಕ್ಕಣಿಕೆ; ಕಲಮು.

ಲೆಕ್ಕುಣ್ಕಿ ಹಿಡಿ (ಕ್ರಿ)= ಬರೆ; ಲೇಖಿಸು.

ಲೇಂಗ್ಟಿ (ನಾ)= ಕಲ್ಬುರ್ಗಿ ಜಿಲ್ಲೆಯ ಒಂದು ಹಳ್ಳಿ; ಬ್ಯಾಲಳ್ಳಿಯ ತತ್ವ ಪದಕಾರ ಕರಿಬಸವೇಶ್ವರರ ಹುಟ್ಟೂರು.

ಲೇಂಗ್ಟಿ ಕರಿಬಸವೇಶ್ವರ (ನಾ)= ಬ್ಯಾಲಳ್ಳಿಯಲ್ಲಿ ಲಿಂಗೈಕ್ಯರಾಗಿರುವ ಕಲಬುರ್ಗಿ ಜಿಲ್ಲೆಯ ಒಬ್ಬ ಪ್ರಸಿದ್ಧ ತತ್ವ ಪದಕಾರ.

ಲೇಣೆದೇಣೆ (ನಾ) ಮ.= ಸಾಲ; ಕೊಡುವ ಪಡೆವಲೆಕ್ಕಪತ್ರ; ಲೇವಾದೇವಿ.

ಲೇಣ್ಯಾ ದೇಣ್ಯಾ (ನಾ) ಮ.= ಸಾಲ ಪಡೆವ ಮತ್ತು ಕೊಡುವ ಲೆಕ್ಕಪತ್ರ; ಲೇವಾದೇವಿ.

ಲೇನದೇನ (ನಾ) ಉ.= ಲೇವಾದೇವಿ; ಕೊಡುಕೊಳ್ಳುವಿಕೆ.

ಲೇವಾದೇವಿ (ನಾ)= ಲೇನದೇವ; ಸಾಲ ಪಡೆವ ಮತ್ತು ಕೊಡುವ ವ್ಯವಹಾರ.

ಲೇವ್ಡಿ (ನಾ)= ಹಂಗಿಸುವಿಕೆ; ಹೀನೈಸುವಿಕೆ.

ಲೇವ್ಡಿ ಎಬ್ಬುಸು (ಕ್ರಿ)= ಹಂಗಿಸು; ಹೀನೈಸು; ಅಪಮಾನಿಸು.

ಲೊಂಗೋಟಿ (ನಾ)= ಲಂಗೋಟಿ.

ಲೊಂಗೋಟ್ಯಾ (ನಾ)= ಲಂಗೋಟಿ ಧಾರಿ (ಬೈಗುಳ).

ಲೊಟಂಗಿ (ನಾ)= ಲಾಗ; ತಲೆಕೆಳಗೆ ಕಾಲು ಮೇಲೆ ಮಾಡಿ ಜಿಗಿಯುವಿಕೆ.

ಲೊಟಂಗಿ ಹೊಡಿ (ಕ್ರಿ)= ಲಾಗ ಹಾಕು.

ಲೊಂಡ (ನಾ)= ಮುಸಲ್ಮಾನ.

ಲೊಂಡಿ (ನಾ)= ಕಾಳಿನಲ್ಲಿಯ ಹುಳುವಿನ ಜಾಲ.

ಲೊಂಡಿಗಟ್ಟು (ಕ್ರಿ)= ಕಾಳಿನಲ್ಲಿ ಹುಳುವು ಜಾಳಗಟ್ಟು.

ಲೊಂಡ್ಯಾ (ನಾ)= ಮುಸಲ್ಮಾನ.

ಲೊಡಗೈ (ನಾ)= ಎಡಗೈ.

ಲೊಡ್ಡಿ (ನಾ)= ಎಡಗೈ ಮುಂದಾಗಿ ಬಳಸುವವಳು.

ಲೊಡ್ಡಾ (ನಾ)= ಎಡಗೈ ಬಳಸುವವನು.

ಲೊದಡಿ (ನಾ)= ಕಫ ಮಿಶ್ರಿತ ಉಗುಳು; ಕಫ; ಶ್ಲೇಷ್ಮ; ಗಡ್ಡೆ ಗಡ್ಡೆಯಾದ ಉಗುಳು.

ಲೊಬೊಲೊಬೊ (ದ್ವಿ)= ಬೊಬ್ಬಿಕ್ಕುವಿಕೆ.

ಲೊಬೊಲೊಬೊ ಬೊಬ್ಬಿಹೊಡಿ (ಕ್ರಿ)= ಹೊಯ್ಯೊ; ಬೊಬ್ಬಿಕ್ಕು.

ಲೊಹಾರ (ನಾ)= ಕಂಬಾರ; ಎಂಬಿ ಲೊಹಾರೆಂಬ ಕಣಜಿ ಗ್ರಾಮದ ಚಿತ್ರಕಲಾವಿದ.

ಲೋಕ (ನಾ)= ವಿಶ್ವ; ಭೂಮಿ; ಮರ್ತ್ಯಲೋಕ.

ಲೋಕರೂಢಿ (ನಾ)= ಜನ ಸಾಮಾನ್ಯರ ಪದ್ಧತಿ.

ಲೋಟಾ (ನಾ) ಹಿಂ.= ತಂಬಿಗೆ; ಚಂಬು; ಚೊಂಬು; ಗ್ಲಾಸು.

ಲೋಟಿಸು (ನಾ)= ನೋಟಿಸು; ಸೂಚನಾಪತ್ರ.

ಲೋಟು (ನಾ)= ನೋಟು; ಮುಖಬೆಲೆ ನಮೂದಿಸಿದ ಸರಕಾರದ ಖಜಾನೆಯ ಮುದ್ರಿತ ಕಾಗದ.

ಲೋಡಿಗಿ ಕೂಡು (ಕ್ರಿ)= ದಿಂಬಕ್ಕೆ ಬೆನ್ನು ಆನಿಸಿ ಕುಳಿತುಕೊ; ಟೇಕಾಕೊಡು (ಗಾದೆ: ಗ್ವಾಡಿಗಿ ಕುಂತೋರು ಲೋಡಿಗಿ ಕುಂತ್ರು, ಲೋಡಿಗಿ ಕುಂತೋರು ಗ್ವಾಡಿಗಿ ಕುಂತ್ರು).

ಲೋಡು (ನಾ)= ಬೆನ್ನಾಸರೆ; ತಲೆದಿಂಬು.

ಲೋಫರ್ (ನಾ)= ಉಂಡಾಡಿ; ಪೋಲಿ.

ಲೋಬಾನ (ನಾ)= ಸುಟ್ಟರೆ ಸುವಾಸನೆ ಕೊಡುವ ಒಂದು ಬಗೆಯ ಮರದ ಅಂಟು; ಲ್ವಾಬಾನ.

ಲೋಲಕು (ನಾ)= ಕಿವಿಯಲ್ಲಿ ನೇತಾಡುವ ಆಭರಣ.

ಲೋಲೋತಿಮಯ್ಯ (ನಾ)= ವೃತ್ತಾಕಾರವಾಗಿ ಕುಳಿತು ಕೊಂಡು ಆಟವಾಡುವ ಮಕ್ಕಳಾಟ.

ಲೌಕರ (ಅ) ಮ.= ಬೇಗನೆ.

ಲೌಕರಿ (ನಾ) ಮ.= ಉಣ್ಣೆಯದಾರ.

ಲೌಡಿ, ಲೌಂಡಿ (ನಾ)= ತೊತ್ತು; ದಾಸಿ; ಸೂಳೆ (ಗಾದೆ: ಊರಿಗಿ ಕೇಡಾದ್ರ, ಲೌಡಿಗಿ ಪಾಡಾಯ್ತಂತ!).

ಲೌಳಸರ (ನಾ)= ಲೋಳೆಸರ; ದಪ್ಪ ಎಲೆಯುಳ್ಳ ಔಷಧಿ ಸಸ್ಯ; ಎಲೆಯಲ್ಲಿ ಆಹಾರ ಸಂಗ್ರಹಿಸುವ ಔಷಧಿ ಸಸ್ಯ; ಲ್ವಾಳಸರ.

ಲ್ಯಾಪಿ (ನಾ)= ಹೊಸದಾಗಿ ಬೆಳೆಸಿದ ಕಬ್ಬಿನ ಬೆಳೆ.

ಲ್ವಾಬಾನ (ನಾ)= ಲೋಬಾನ (ನೋಡಿರಿ).

ಲ್ವಾಬಾನ ಹಾಕು (ಕ್ರಿ)= ಬೆಂಕಿಯ ಮೇಲೆ ಸುಗಂಧಿ ವಸ್ತು ಹಾಕಿ ಹೊಗೆ ಎಬ್ಬಿಸು (ಗಾದೆ: ಲ್ವಾಬಾನ ಹಾಕಲಾರದೆ ಪೀರಗ ಸವಾರಿ ಏಳಾಲ).

ಲ್ವಾಳಸರ (ನಾ)= ಲೌಳಸರ; ಲೋಳೆಸರ; ಎಲೆಯಲ್ಲಿ ಆಹಾರ ಸಂಗ್ರಹಿಸುವ ದಪ್ಪ ಎಲೆಯ ಸಸ್ಯ; ದಪ್ಪ ಎಲೆಯುಳ್ಳ ಔಷಧಿ ಸಸ್ಯ.

ಲ್ವಾಳಿ (ನಾ)= ಗಂಡಿನ ಶೋಕಿಯುಳ್ಳ ಹೆಣ್ಣು; ಗಂಡಿನ ವೀರ್ಯ ಮತ್ತು ಹೆಣ್ಣಿನ ಯೋನಿದ್ರವ (ಬೈಗುಳ).

ಲ್ವಾಳ್ಯಾ (ನಾ)= ಹೆಣ್ಣಿಗ; ಹೆಣ್ಣಿನ ಕೂಟದ ಶೋಕಿಯುಳ್ಳವನು. (ಬೈಗುಳ).

ವ

ವಂಕ (ನಾ)= ಡೊಂಕು; ವಕ್ರ.

ವಂಕಾಗು (ಕ್ರಿ)= ಡೊಂಕಾಗು; ವಕ್ರವಾಗು; ಓರೆಯಾಗು; ಹೊರಟು ಹೋಗು.

ವಂಕಾಟಂಕಾ (ವಿ)= ಅಂಕುಡೊಂಕು.

ವಂಕಾವಾರಿ (ವಿ) = ಅಡ್ಡ ತಿಡ್ಡ; ಮನಬಂದಂತೆ; ಅವಡಾ ಸವಡಾ.

ವಂಕಿ (ನಾ)= ಒಂದು ಬಗೆಯ ರಟ್ಟೆಯ ಆಭರಣ; ರಟ್ಟೆಗಡಗ; ಸಂತಾನ ನಿರೋಧ ಸಾಧನ.

ವಂಗಳ (ವಿ.) ಮ.= ಖರಾಬು; ಕೆಟ್ಟ.

ವಂಟಿ (ನಾ)= ಒಂಟಿ; ಒಂಟ್ಯಾ; ಒಂಟೆ.

ವಂಶ (ನಾ)= ಕುಲ; ಸಂತಾನ; ಔಂಸು.

ವಂಶಿಕ (ನಾ)= ಔಂಸಿಕ; ವಂಶದವನು; ಕುಲದವನು.

ವಕಾಲತ್ (ನಾ) ಉ.= ವಕೀಲಿ; ನ್ಯಾಯಾಲಯದಲ್ಲಿ ನ್ಯಾಯಕ್ಕಾಗಿ ವಾದ ಮಂಡಿಸುವಿಕೆ.

ವಕಾಲತ್‌ನಾಮಾ(ನಾ)= ನ್ಯಾಯಾಲಯ-ದಲ್ಲಿ ವಾದ ಮಂಡಿಸುವಿಕೆಯ ಕರಾರು ಪತ್ರ.

ವಕೀಲಿ (ನಾ)= ವಕಾಲತ್ತು ಮಾಡುವವನು/ಳು.

ವಕೀಲಿ ನಡ್ಸು (ಕ್ರಿ)= ವಕಾಲತ್ತು ಕೆಲಸವನ್ನು ಮಾಡು.

ವಕೀಲಿ ಮಾಡು (ಕ್ರಿ)= ನ್ಯಾಯಾಲಯದಲ್ಲಿ ವಾದ ಮಂಡಿಸು.

ವಗರಾಣಿ (ನಾ)= ವಗ್ರಾಣಿ; ಫೋಣ್ಣೆ; ಸುಸಲಾ.

ವಗಾಲು (ನಾ)= ವೈಯಾರ; ಡೌಲು; ಒಗಾಲು (ಗಾದೆ: ವಗಾಲ ಮಾಡಿ ಒಗಿಲಾಕ ಹೋದ್ರ, ಹಳ್ಳಾದ್ನಕಲ್ಲು ಬಂದು ತೊಡಿಗಿ ಬಡಿತಂತ!).

ವಗಾಲ್ಯಾ (ನಾ)= ಡೌಲು ಮಾಡುವವನು.

ವಗಾಲ್ವಾಡಿ (ನಾ)= ವೈಯಾರಿ.

ವಗೈರಾ (ಅ) ಉ.= ಮುಂತಾದ; ಮೊದಲಾದ.

ವಗೈರಾ ವಗೈರಾ (ದ್ವಿ)ಉ. = ಇಂಥಿಂಥವು.

ವಗ್ಯಾ (ನಾ)= ಮೈಲಾರಲಿಂಗನ ಅಂದರೆ ಮೈಲಾರ ಮಲ್ಲಯ್ಯನ ಒಡಬು ಹೇಳುವ ವಾಗ್ಗೇಯಕಾರ; ವಗ್ಗಯ್ಯ; ಗೊಗ್ಗಯ್ಯ; ವಾಗ್ಗೇಯಕಾರ.

ವಚನ (ನಾ)= ಸೂಳ್ನುಡಿ; ನುಡಿಗಡಣ; ಅನುಭಾವದ ಮಾತು; (ವಚನ: ಆದ್ಯರ ವಚನ ಪರುಷ ಕಂಡಣ್ಣ; ಅಧರಕ್ಕೆ ಕಹಿ; ಉದರಕ್ಕೆ ಸಿಹಿ –ಬಸವಣ್ಣ).

ವಚನ ಶಾಸ್ತ್ರ (ನಾ)= ಶಿವಶರಣರು ಸಾರಿದ ವಚನಗಳಲ್ಲಿಯ ಲೋಕ ನೀತಿ (ಹಾಡು: ವಚನ ಶಾಸ್ತ್ರ ತಯ್ಯಾರ ಮಾಡಿದ। ವರ್ಣಾಶ್ರಮವನು ದೂರ ದೂಡಿದ। ಆದನು ಸಂಗಮದೇವ ಬಸವಾ।।).

ವಚ್ಚ (ನಾ)= ವಾಚಾಳಿ; ಹರಟೆಮಲ್ಲ; ಕೊಂಗ ಗುಣದವನು.

ವಚ್ಚಹಡಿ (ನಾ)= ಅತಿವಾಚಾಳಿ; ಅತಿ ಹರಟೆಮಲ್ಲ; ಅತಿ ಕೊಂಗ ಗುಣದವನು.

ವಜನ (ನಾ) ಉ.= ತೂಕ; ಭಾರ; ಗೌರವ; ದೊಡ್ಡಸ್ತಿಕೆ.

ವಜನದಾರ (ನಾ)= ಗೌರವವುಳ್ಳವನು; ಜರಬು ಉಳ್ಳವನು.

ವಜಾ (ನಾ)= ಕಳೆಯುವಿಕೆ; ತೆಗೆದು ಹಾಕುವಿಕೆ.

ವಜಾ ಮಾಡು (ಕ್ರಿ)= ತೆಗೆದು ಹಾಕು; ಕಳೆ; ಒಂದು ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆ.

ವಜೀರ (ನಾ) ಉ.= ಮಂತ್ರಿ.

ವಜ್ಜಿ (ನಾ)= ವಜನು; ತೂಕ; ಭಾರ.

ವಜ್ಜಿಟಿಕ್ಯಾ (ನಾ)= ಚಿನ್ನದ ದಪ್ಪ ಮಣಿಗಳ ಮೂರು ಸಾಲಿನ ಕಂಠಾಭರಣ.

ವಜ್ಜ್ಯಾಗು (ಕ್ರಿ)= ಭಾರವಾಗು.

ವಜ್ಜುರು (ನಾ)= ವಜ್ರ.

ವಟಗುಡು (ಕ್ರಿ)= ವಟವಟ ಮಾಡು; ಬಾಯಿ ಬಡಿ.

ವಟವಟ್ಯಾ (ನಾ)= ಗುಂಡು ಗುಂಡಾಗಿ, ಸುತ್ತಲೆಲ್ಲ ಮುಳ್ಳು ಮುಳ್ಳಾಗಿರುವ ಕಾಯಿಯುಳ್ಳ ಒಂದು ಬಗೆಯ ಕಾಡು ಸಸ್ಯ.

ವಟಾಣಿ (ನಾ)= ಬಟಾಣಿ; ಒಂದು ವಿಧವಾದ ಬೇಳೆಕಾಳು ಮತ್ತು ಅದರ ಸಸ್ಯ.

ವಟಾರ (ನಾ)= ದೊಡ್ಡಮನೆ; ದೊಡ್ಡಿ; ಸುತ್ತುಗೋಡೆಯುಳ್ಳ ಮನೆ. (ಒಗಟು: ಥಾಟಾನ್ಥಾಟಗಿತ್ತಿ। ನಿನ್ನ ವಟಾರದಾಗ। ನನ್ನ ತಟಾರ ಕಳ್ದಾದ। ನಾ ಉಪಾಸಿದ್ದಾ। ನೀ ತಪಾಸು ಮಾಡು।।).

ವಡಾ (ನಾ)= ವಡೆ; ಸಂಡಿಗೆ; ಒಂದು ಪ್ರಕಾರದ ಕರಿದ ತಿಂಡಿ.

ವಡಾವಡಾ (ದ್ವಿ)= ವಿನಾಕಾರಣ; ಪಿರಿಪಿರಿ; ವಿನಾಕಾರಣ.

ವಡಿ (ನಾ)= ವಸ್ತ; ವಸ್ತು; ಒಡವೆ; ಆಭರಣ.

ವಡಿಮಾಡ್ನು (ಕ್ರಿ)= ಚಿನ್ನ ಅಥವಾ ಬೆಳ್ಳಿಯ ಆಭರಣವನ್ನು ತಯಾರುಗೊಳಿಸು.

ವಡ್ಡ (ನಾ)= ಕಲ್ಲು ಗಣಿಯಿಂದ ಕಲ್ಲುಗಳನ್ನು ತೆಗೆದು ಕಟ್ಟಡ ಕಾರ್ಯಕ್ಕೆ ಪೂರೈಸುವವನು; ಕಲ್ಲು ಒಡೆಯುವ ಕಾಯಕದವನು.

ವಡ್ಡತಿ (ನಾ)= ವಡ್ಡನ ಹೆಂಡತಿ; ವಡ್ಡರ ಮನೆಯ ಮಹಿಳೆ.

ವಡ್ಡನಕೇರಿ (ನಾ)= ಹುಮ್ನಾಬಾದ ತಾಲೂಕಿನ ಒಂದು ಹಳ್ಳಿ.

ವಡ್ಡಾ (ಅ)= ಏ ವಡ್ಡ? ಸಂಭೋಧನೆ.

ವಡ್ಡಾರಾಧನೆ (ನಾ)= ಶಿವಕೋಟ್ಯಾ-ಚಾರ್ಯನು ರಚಿಸಿದ ಬಾಜಿಷ್ಣುವಿನ ಕಾವ್ಯದ ಹೆಸರು. ಈ (ಬ್ರಾಜಿಷ್ಣುವು) ಬೀದರ ಜಿಲ್ಲೆಯ ದೊಡಹಳ್ಳಿ ಖೇಡ (ಹಳಿಖೇಡ-ಬಿ) ಗ್ರಾಮದವನೆಂದು ಇತ್ತೀಚಿನ ಸಂಶೋಧನೆ ಹೇಳುತ್ತದೆ.

ವಡ್ಡಿ (ನಾ)= ಒಂದು ಊರಿನ ಹೆಸರು.

ವಡ್ಡು (ನಾ)= ದೊಡ್ಡಸ್ತಿಕೆ; ಆಡಂಬರ.

ವಡ್ಡು ಹೇಳು (ಕ್ರಿ)= ದೊಡ್ಡಸ್ತಿಕೆ ತೋಡಿಕೊ; ಬಡಿವಾರ ಕೊಚ್ಚಿಕೊ.

ವಡ್ತಾಳಿ (ನಾ)= ಪಾಸಂಗು; ತಕ್ಕಡಿಯ ದಂಡಿಗೆಯು ಎರಡೂ ಕಡೆ ಸಮವಾಗಿ ನಿಲ್ಲಿಸಲು, ತಕ್ಕಡಿಯ ಪರಡೆಯಲ್ಲಿಡುವ ಭಾರ.

ವಡ್ತಾಳಿ ಕಟ್ಟು (ಕ್ರಿ)= ತಕ್ಕಡಿಯ ದಂಡಿಗೆಯು ಎರಡೂ ಕಡೆ ಸಮ ಮಟ್ಟದಲ್ಲಿರುವಂತೆ ಮಾಡು.

ವಣಕಿ (ನಾ)= ಒಣಕೆ; ಒನಕೆ; ಧಾನ್ಯ ಕುಟ್ಟಲು ಬಳಸುವ ಕಟ್ಟಿಗೆಯ ಸಾಧನ (ಗಾದೆ: ಒಳ್ಳಾಗ ತಲಿಕೊಟ್ಟ ಮ್ಯಾಲ, ಒಣಕಿ ಪೆಟ್ಟಿಗಿ ಅಂಜಬಾರ್ದು).

ವಣಗಟ್ಗಿ (ನಾ)= ಒಣಗಿ ಸೊರಗಿ ಕಟ್ಟಿಗೆಯಂತೆ ಆದವನು/ಳು.

ವಣಗಿ (ನಾ)= ರೊಟ್ಟಿ; ಅನ್ನ ಮತ್ತು ಇತರೆ ಆಹಾರ ಸೇವಿಸುವಾಗ ಬಳಸುವ; ವ್ಯಂಜನ; ತರಕಾರಿ.

ವತನ (ನಾ) ಉ.= ಹುಟ್ಟಿದೂರು; ನಾಡು; ದೇಶ.

ವತನದಾರ (ನಾ) ಉ.= ವಂಶ ಪರಂಪರೆಯ ಆಸ್ತಿಯನ್ನು ಹೊಂದಿದವನು.

ವತನಾ (ನಾ)= ವಂಶ ಪರಂಪರೆಯಾಗಿ ಬಂದ ಆಸ್ತಿ.

ವದಾ (ನಾ)= ವಧೆ; ಕೊಲ್ಲುವಿಕೆ.

ವದಾ ಮಾಡು (ಕ್ರಿ)= ವಧಿಸು; ಕೊಲ್ಲು.

ವದಿ (ಕ್ರಿ)= ಒದಿ; ಒದೆ; ಕಾಲಿನಿಂದ ಜೋರಾಗಿ ಹೊಡೆ.

ವದುಸು (ಕ್ರಿ)= ಒದೆಯಲು ಹಚ್ಚು.

ವದ್ದು ಒಗ್ಯಾಕು (ಕ್ರಿ)= ಕಾಲಿನಿಂದ ಒದ್ದು ನೆಲಕ್ಕೆ ಹಾಕು.

ವದ್ಯ (ನಾ)= ಕೃಷ್ಣಪಕ್ಷ.

ವನ (ನಾ)= ಕಾಡು; ಅರಣ್ಯ; ಘಟಾ.

ವನಭೋಜನ (ನಾ)= ಉದ್ಯಾನವನ ಇಲ್ಲವೆ ಅರಣ್ಯದಲ್ಲಿ ಮಾಡುವ ಸಾಮೂಹಿಕ ಊಟ.

ವನ ಮಹೋತ್ಸವ (ನಾ)= ಗಿಡಗಳನ್ನು ನೆಡುವ ಹಬ್ಬ.

ವನಮಾರ್ಪಳ್ಳಿ (ನಾ)= ಔರಾದ ತಾಲೂಕಿನ ಒಂದು ಹಳ್ಳಿ.

ವನವ್ಯಾಸ (ನಾ)= ಕಾಡಿನಲ್ಲಿ ಮಾಡುವ ವಾಸ; ತೊಂದರೆಯ ಜೀವನ; ಹೈರಾಣಗತಿ (ಹಂತಿಹಾಡು: ಕಲ್ಲ ಕಡುಬಾ ಮಾಡಿ। ಹುಲ್ಲ ಸ್ಯಾವಿಗಿ ಮಾಡಿ। ಬನ್ನಿ ಎಲಿಯಾ ಪತ್ರೋಳ್ಗಿ। ಪಾಂಡವರು। ಉಂಡ ಹೋಗ್ಯಾರೋ ವನವ್ಯಾಸ।).

ವಪಾರಿ ಬ್ಯಾನಿ (ನಾ)= ಒಮ್ಮೆಗ್ಗಲು ತಲೆಶೂಲೆ; ಅರೆ ತಲೆನೋವು.

ವಯಸ್ಕ (ನಾ) ಸಂ.= ಪ್ರೌಢ; ಹಿರಿಯ; ಥಂಗರಿ; ಮುದುಕ/ಕಿ.

ವಯಸ್ಕರ ಶಿಕ್ಷಣ ಸಂ.= ವಯಸ್ಸು ಮೀರಿದವರ ಶಿಕ್ಷಣ.

ವಯಾ (ನಾ)= ವಯಸ್ಸು; ವಯ; ಪ್ರಾಯ.

ವಯಾಮೀರು (ಕ್ರಿ)= ವಯಸ್ಸು ಅತಿಯಾಗು, ಮಿತಿಮೀರು.

ವಯಿನ (ನಾ)= ವೈನ; ಅನುಕೂಲ.

ವಯಿನಾಗು (ಕ್ರಿ)= ವೈನಾಗು; ಅನುಕೂಲವಾಗು; ಹಾದಿ ಒದಗು.

ವಯ್ಯಾರ (ನಾ)= ವೈಯಾರ; ಬೆಡಗು; ಬಿನ್ನಾಣ; ಅಂದ, ಸೊಗಸು.

ವಯ್ಯಾರ ಮಾಡು (ಕ್ರಿ)= ಬೆಡಗು ದೋರು; ಸೊಗಸು ದೋರು; ವಗಾಲು ಮಾಡು.

ವಯ್ಯಾರಿ (ನಾ)= ವೈಯಾರಿ; ಬೆಡಗಿ; ಬಿನ್ನಾಣಗಿತ್ತಿ (ತೆಲುಗು ಕೋಲಿನ ಹಾಡು: ವಯ್ಯಾರಿ ಭಾಮಾ। ರಾರಾ। ನಾ ವಯ್ಯಾರಿ ರಾರಾ॥).

ವರದಕ್ಷಿಣ (ನಾ)= ವರದಕ್ಷಿಣೆ; ಹೆಣ್ಣಿನ ತಂದೆಯು ವರನಿಗೆ ಕೊಡುವ ಕಾಣಿಕೆ; ಒಡವೆ, ವಸ್ತು ಇತ್ಯಾದಿ; ಹುಂಡಾ; ಡೌರಿ.

ವರಾ (ನಾ)= ವರ; ಮದುವೆಯಾಗುವ ಗಂಡು; ಮದುಮಗ; ಅನುಗ್ರಹ.

ವರಾಂಡಾ (ನಾ) ಇಂ.= ಮನೆಯ ಮುಂಭಾಗದ ಬಯಲು.

ವರುಸ, ವರ್ಸ (ನಾ)= ವರ್ಷ.

ವರ್ಗ (ನಾ) ಸಂ.= ತರಗತಿ; ಇಯತ್ತೆ.

ವರ್ತಣೂಕ (ನಾ) ಮ.= ನಡತೆ; ನಡಾವಳಿ; ವರ್ತನೆ.

ವರ್ತಮಾನ (ನಾ) ಸಂ.= ಸುದ್ದಿ; ಘಟನೆ.

ವರ್ತಮಾನ ಪತ್ರ (ನಾ) ಸಂ.= ಸುದ್ದಿ ಪತ್ರಿಕೆ; ಅಖಬಾರ.

ವರ್ತಾ (ನಾ)= ವ್ರತ; ನೋಂಪಿ.

ವರ್ತಾಂತ (ನಾ)= ವರ್ತಮಾನ; ಸುದ್ದಿ; ಸಮಾಚಾರ.

ವರ್ತಾಹಿಡಿ (ಕ್ರಿ)= ವ್ರತ ಪಾಲಿಸು.

ವರ್ತಿ (ನಾ)= ವರತೆ; ನೀರಿನ ಬುಗ್ಗೆ; ಪ್ರತಿನಿತ್ಯ ಕರಾರುವಾಕ್ಕಾಗಿ ಒಯ್ಯುವ ಹಾಲು, ಮೊಸರು, ತರಕಾರಿ ಇತ್ಯಾದಿ.

ವರ್ಮಾ (ನಾ)= ಗುಟ್ಟು; ರಹಸ್ಯ (ಕಾಲಜ್ಞಾನ: ನಿಮ್ಮ ವರ್ಮಾವ ಕೇಳಂಥ ವಸ್ತಾದ ಬರ್ತಾನ ನಿರ್ಮಾಳಿರಬೇಕಣ್ಣ। ಎಂದು ಎಂದೆನ ಬೇಡಿ ಬಂದಾವು ದಿನಮಾನ ನೋಡಿರಣ್ಣ॥).

ವರ್ಷ (ನಾ)= ವರ್ಷ; ವರುಷ.

ವಲಿ (ನಾ) ಉ.= ಮುಸಲ್ಮಾನ ಸಾಧು; ಸಂತ; ಒಲೆ.

ವಲ್ಲಭ (ನಾ) ಸಂ= ಪತಿ; ಗಂಡ (ದೊಡ್ಡಾಟದ ಮಾತು:- ಆಹೇ ವಲ್ಲಭನೆ, ಮತ್ತಾದರು ಹೇಳುತ್ತೇನೆ ಕೇಳು ವಂಥವನಾಗು। ಅದೇನಿರುವುದು ಭ್ಯಾಗನೆ ಭೊಗಳು ವಂಥವಳಾಗು।).

ವಲ್ಲ (ನಿ)= ಒಲ್ಲೆ.

ವಲ್ಲಿ = ಅದೋ ಅಲ್ಲಿ.

ವವಾಳಿ (ನಾ)= ಉರಿಯ ಮೇಲೆ ಹಿಡಿದು ಬೇಯಿಸಿದ ಹಸಿರು ಕಡಲೆಕಾಯಿ, ಅರೆಬಲಿತ ಕಡಲೆ ಕಾಯಿ.

ವಸಡಿ (ನಾ)= ವಸಡು; ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ.

ವಸಡು (ನಾ)= ವಸಡಿ.

ವಸಡ್ಡುರು (ನಾ)= ಹಲ್ಲಿನ ವಸಡಿನಲ್ಲಿ ಉಂಟಾಗುವ ಕುರು ಅಥವಾ ಹುಣ್ಣು.

ವಸಡ್ಯಾಗ (ಅ)= ವಸಡಿನಲ್ಲಿ.

ವಸೀಲಾ (ನಾ) ಉ.= ಸಿಫಾರಸು; ಖೂನ ಗೊತ್ತು.

ವಸೀಲಾ ಹಚ್ಚು (ಕ್ರಿ)= ಸಿಫಾರಸು ಬಳಸು; ಖೂನ ಗೊತ್ತು ಬಳಸು.

ವಸೂಲಿ (ನಾ) ಉ.= ಸಾಲದ ಹಣ ಪಡೆದವರಿಂದ ಸಾಲ ವಾಪಸ ಪಡೆಯುವಿಕೆ.

ವಸೂಲು ಮಾಡು (ಕ್ರಿ)= ವಾಪಸು ಇಸಿದುಕೊ.

ವಸ್ಕಾ ರಿಸ್ಕಾ ಮಾಡು (ಕ್ರಿ)= ಸಿಡಿಪಿಡಿ ಮಾಡು; ತಿರಸ್ಕಾರದ ಮಾತನ್ನಾಡು.

ವಸ್ಟು (ವಿ)= ಅವಷ್ಟು; ಅವಷ್ಟೆಲ್ಲ.

ವಸ್ಡಿ (ನಾ)= ವಸಡಿ (ನೋಡಿರಿ).

ವಸ್ತಾ (ನಾ)= ವಸ್ತ; ವಸ್ತು; ಒಡವೆ; ಪದಾರ್ಥ; ಚಿನ್ನ.

ವಸ್ತಾದ (ನಾ) ಉ.= ಉಸ್ತಾದ; ಗುರು; ಶಿಕ್ಷಕ; ಮಾಸ್ತರ; ತರಬೇತಿ ನೀಡುವವನು.

ವಸ್ತಾದಗಿರಿ (ನಾ)= ಮಾಸ್ತರಿಕೆ.

ವಸ್ತಾವಾರಿ (ನಾ)= ತರತರಹದ ವಸ್ತುಗಳಿಂದ ಕೂಡಿದ್ದುದು; ವಿಧವಿಧ.

ವಸ್ತಿ (ನಾ)= ವಾಸಿಸುವಿಕೆ; ನೆಲೆಸುವಿಕೆ.

ವಸ್ತು (ನಾ)= ಪದಾರ್ಥ; ಸಂಪತ್ತು; ಚಿನ್ನ; ಒಡವೆ; ಬಂಗಾರ.

ವಸ್ತ್ರಗಾಳ (ನಾ)= ಬಟ್ಟೆಯ ಮೂಲಕ ಪುಡಿ ಅಥವಾ ವಸ್ತುವನ್ನು ಶೋಧಿಸುವಿಕೆ; ಸೋಸುವಿಕೆ.

ವಸ್ತ್ರಗಾಳ ಮಾಡು (ಕ್ರಿ)= ಬಟ್ಟೆಯ ಮೂಲಕ ಶೋಧಿಸು, ಸೋಸು.

ವಹಿ (ನಾ)= ಬಿಳಿಹಾಳೆ ಪುಸ್ತಕ; ನೋಟು ಪುಸ್ತಕ; ಲೆಕ್ಕ ಬರೆದಿಡುವ ಪುಸ್ತಕ.

ವಹಿವಾಟು (ನಾ)= ಕಾರ್ಭಾರ; ವ್ಯವಹಾರ; ಸಂಪರ್ಕ.

ವಳಿ (ನಾ)= ಗೆರೆ; ಸಾಲು.

ವಾಂಗೀ (ನಾ) ಮ.= ಬದನೆ.

ವಾಂಗೀಭಾತ (ನಾ)= ಬದನೆಕಾಯಿ ಬೆರೆಸಿ ತಯಾರಿಸಿದ ಕಲಸನ್ನ.

ವಾಂಜರಿ (ನಾ)= ಹುಮ್ನಾಬಾದ ನಗರದ ಒಂದು ಓಣಿಯ ಹೆಸರು. ಪ್ರಸಿದ್ಧ ಸಾಹಿತಿ ಹಣಕುಣಿ ಕಾಶೀನಾಥರೆಡ್ಡಿಯವರು ವಾಸಿಸುವ ಓಣಿ.

ವಾಂತಿ (ನಾ)= ಕಾರಿಕೊಳ್ಳುವಿಕೆ; ವಮನ; ಉಲ್ಟಿ.

ವಾಂದಾ (ನಾ)= ವಾದ; ಜಗಳ.

ವಾಂದಾಭೀಳು (ಕ್ರಿ)= ವಾದ ಉಂಟಾಗು; ಜಗಳ ಉಂಟಾಗು.

ವಾಂದಾ ಹೂಡು (ಕ್ರಿ)= ಜಗಳತೆಗೆ; ವಾದ ಮಾಡು; ತಕ್ರಾರು ಮಾಡು.

ವಾಕುರ್ಕಿ (ನಾ)= ಓಕರಿಕೆ; ಕಾರಿಕೆ; ವಾಂತಿ

ವಾಗ್ಯಾ (ನಾ)= ವಗ್ಯಾ (ನೋಡಿರಿ).

ವಾಜಬಿ (ಅ)= ಯೋಗ್ಯವಾದ; ತಕ್ಕುದಾದ; ಸೂಕ್ತವಾದ.

ವಾಜಮಿ (ಅ)= ವಾಜಬಿ (ನೋಡಿರಿ).

ವಾಟ (ನಾ)ಮ.= ಮಾರ್ಗ; ಹಾದಿ.

ವಾಟಿ (ನಾ)ಮ.= ಬಟ್ಟಲು.

ವಾಟ್ಭಾಟಿ (ನಾ)= ದಾರಿಯಲ್ಲಿಯ ಭೇಟಿ; ತಕ್ರಾರು.

ವಾಟ್ನಿ(ನಾ)= ಪಾಲು; ಪಾಲು ಮಾಡುವಿಕೆ; ಹಂಚಿಕೆ; ಹಂಚುವಿಕೆ.

ವಾಟ್ನಿಮಾಡು (ಕ್ರಿ)= ಹಂಚು; ವಿತರಣೆ ಮಾಡು; ಫೋಡಿಮಾಡು; ಪಾಲು ಮಾಡು.

ವಾಡಾ (ನಾ)= ಮನೆ; ನಿವಾಸ; ದೊಡ್ಡಿ; ವಠಾರ.

ವಾಡಿ (ನಾ)= ಊರು; ಹಳ್ಳಿ; ಗ್ರಾಮ; ಗ್ರಾಮದ ಬಡಾವಣೆ; ಕಬ್ಬಿನ ಮೇಲಿನ ಸೊಪ್ಪು.

ವಾಣಿ (ನಾ) ಮ.= ಬಣಜಿಗ; ಬಣಜಗ್ಯಾ; ಲಿಂಗಾಯತ; ವ್ಯಾಪಾರ ಮಾಡುವ ಜನಾಂಗ; ಕನ್ನಡ ಭಾಷಿಕ ವ್ಯಾಪಾರಿ.

ವಾಣಿ ಗೋಷ್ಠ (ನಾ) ಮ.= ಬಣಜಿಗರ ಮಾತು; ಕನ್ನಡ.

ವಾಣ್ಯಾ (ನಾ) ಮ.= ವಾಣಿ; ವಣಿಕ; ಬಣಜಿಗ; ಕನ್ನಡಿಗ; ಕನ್ನಡ ಭಾಷಿಕ; ಲಿಂಗಾಯತ.

ವಾಣ್ಯಾಗಿ (ಅ)= ಚೆನ್ನಾಗಿ; ಸೊಗಸಾಗಿ; ಶಿಸ್ತಾಗಿ; ನುರಿಯಾಗಿ.

ವಾತ (ನಾ)= ಶರೀರದಲ್ಲಿಯ ಒಂದು ಪ್ರಕಾರದ ರೋಗ; ವಾಯಿ; ಕೀಲು ನೋವು.

ವಾತರೋಗ (ನಾ)= ಕೀಲು ಬೇನೆ.

ವಾತಾವರ್ಣ (ನಾ) ಸಂ.= ವಾತಾವರಣ; ಹವಾಮಾನ; ಪರಿಸ್ಥಿತಿ; ಸನ್ನಿವೇಶ.

ವಾದ (ನಾ)= ಸಂಭಾಷಣೆ; ತಕರಾರು.

ವಾನೆರಿ (ನಾ)= ವಾನರ; ಕೋತಿ; ಕೋಡಂಗಿ.

ವಾಮದೇವ (ನಾ)= ಶಿವ; ಈಶ್ವರ; ಚಿಡಗುಂಪಿ ಗ್ರಾಮದ ಒಬ್ಬ ದಿಗಂಬರ ಸಂತ.

ವಾಮ್ಯಾ (ನಾ)= ಶೀಲ; ಸಂಪ್ರದಾಯ; ರೂಢಿ; ಕ್ರಿಯಾಚಾರ.

ವಾಮ್ಯಾ ಮಾಡು (ಕ್ರಿ)= ಶೀಲಪಾಲಿಸು; ಸಂಪ್ರದಾಯ ನಡೆಸು; ರೂಢಿಯನ್ನು ಅನುಸರಿಸು; ಕ್ರಿಯಾಚಾರ ನೆರವೇರಿಸು.

ವಾಯಾ (ನಾ) ಮ.= ಬೇಕಾರ; ಕೆಲಸ್ಕಕೆ ಬಾರದ್ದು.

ವಾಯಿ (ನಾ)= ವಾತ (ನೋಡಿರಿ).

ವಾಯ್ಗುಳಿ (ನಾ)= ಮೇಲಿಂದ ಮೇಲೆ ಡೇಕರಿಕೆ ಬರುವಿಕೆ ಹಾಗೂ ಅಪಾನ ವಾಯು ವಿಸರ್ಜನೆ ರೋಗ.

ವಾಯ್ದಾ (ನಾ)= ವಾಯ್ದೆ; ಕರಾರು; ವಾಗ್ದಾನ; ಮಾತು; ಕಾಲಾವಕಾಶ; ಗಡುವು; ಒಪ್ಪಂದ.

ವಾರ (ನಾ) ಸಂ.= ಏಳು ದಿವಸಗಳ ಪಾಳಿ; ಸಪ್ತಾಹದ ಪ್ರತಿಯೊಂದು ದಿನ; ಬಟ್ಟೆಯ ಒಂದು ಅಳತೆ ಮಾನ.

ವಾರಕರಿ (ನಾ)= ಒಂದು ಸಂಪ್ರದಾಯ.

ವಾರಗಿ (ನಾ)= ಓರಗೆ; ಸಮವಯಸ್ಕನು/ಳು.

ವಾರಣಗಿತ್ತಿ (ನಾ)= ಓರಣಗಿತ್ತಿ; ಶಿಸ್ತುಗಾರ್ತಿ (ಹಾಡು : ವಾರ ಮೂಗುತಿ । ವಾರಣಗಿತ್ತಿ। ನೀಲಮ್ಮ ತಾಯಿ । ನಿರಂಕಾರಿ । ಮಂಗಲಂ ಜಯಮಂಗಲಂ ।)

ವಾರ ವಾರ (ದ್ವಿ)= ಪ್ರತಿವಾರ.

ವಾರಸು (ನಾ)= ವಂಶ ಪರಂಪರೆಯಿಂದ ಬಂದ ಆಸ್ತಿಯ ಹಕ್ಕು; ಪಿತ್ರಾರ್ಜಿತ ಹಕ್ಕು.

ವಾರಾಗು (ಕ್ರಿ)= ಓರೆಯಾಗು; ತಪ್ಪಿಸಿಕೊ; ಹಾದಿ ಬಿಟ್ಟು ಬೇರೆ ಕಡೆಗೆ ಹೋಗು; ಅಡ್ಡಾಗು; ಮಲಗು; ವಾರ್‍ಯಾಗು.

ವಾರಾವಾರಾ (ದ್ವಿ)= ಪ್ರತಿವಾರ.

ವಾರಿ (ನಾ)= ಗುಡ್ಡದ ಮಗ್ಗಲು; ಓರೆ (ಹಾಡು: ಭಾರಿ ಜರದ ವಾರಿರುಮ್ಮಾಲ ಸುತ್ತಿಕೊಂಬಾವಾ। ವಾರದಾಗ ಮೂರು ಸಾರಿ ಬಂದೆ ಹೋಗಾಂವಾ। ಬೇಂದ್ರೆ).

ವಾರಿಕ (ನಾ) ಮ.= ಕ್ಷೌರಿಕ; ನಾಯಿಂದ; ನಾಪಿತ; ನಾಪಿತ; ಹಡಪದ.

ವಾರಿದುರ್ಬಿ (ನಾ)= ಓರೆಯಾಗಿ ಕಟ್ಟುವ ತಲೆಗೂದಲಿನ ಗಂಟು (ವಚನ: ನೀರ ನೆರಳನು ನೋಡಿ। ಗೀರು ಗಂಧವನಿಟ್ಟು। ವಾರಿದುರ್ಬಿಕ್ಕಿ ನಡೆವವಳು। ಗಂಡನ। ಮೀರಿದವಳೆಂದ ಸರ್ವಜ್ಞ॥).

ವಾರಿಭೇತ್ಲ (ನಾ)= ನಡುಮಧ್ಯವಲ್ಲದ ಬೈತಲೆ; ಡೊಂಕು ಬೈತಲೆ.

ವಾರ್ಗಿ (ನಾ)= ಓರಗೆ.

ವಾರ್ಯಾಗು (ಕ್ರಿ)= ವಾರಾಗು (ನೋಡಿರಿ).

ವಾಲದೊಡ್ಡಿ (ನಾ)= ಸ್ನೇಹಜೀವಿ ಶಂಭುಲಿಂಗವಾಲದೊಡ್ಡಿ ಎಂಬ ಸಾಹಿತಿಯ ವಾಸದ ಊರು.

ವಾಲು (ಕ್ರಿ)= ಓರೆಯಾಗು; ತಿರುಗು; ಹೊರಳು; ಒಂದು ಪಕ್ಕಕ್ಕೆ ಬಾಗು.

ವಾಲ್ಮೀಕಿ (ನಾ)= ರಾಮಾಯಣ ಮಹಾಕಾವ್ಯ ರಚಿಸಿದ; ಸಂಸ್ಕೃತದ ಪ್ರಸಿದ್ಧ ಮಹಾಕವಿ.

ವಾಸ (ನಾ) ಸಂ.= ಇರುವವನು; ಇರುವಿಕೆ

ವಾಸಿ (ನಾ)= ನೆಲೆಸಿರುವವನು; ವಾಸ ಮಾಡುವವನು.

ವಾಸುನು (ನಾ)= ವಾಸನೆ; ಕಂಪು; ಗಂಧ; ಸುಗಂಧ; ದುರ್ಗಂಧ; ಜಾಡು; ಸುಳಿವು.

ವಾಸುನು ಏಳು (ಕ್ರಿ)= ಕಂಪು ಹರಡು; ದುರ್ಗಂಧ ಬೀರು.

ವಾಸುನು ಬರು (ಕ್ರಿ)= ವಾಸನೆ ಮೂಗಿಗೆ ತಲುಪು; ಕಂಪುಂಟಾಗು; ದುರ್ಗಂಧ ಹರಡು.

ವಾಸುನು ಹೊಂಡ್ರು (ಕ್ರಿ)= ವಾಸನೆ ಉಂಟಾಗು; ಕಂಪು ಹರಡು; ದುರ್ಗಂಧ ಹರಡು.

ವಾಸ್ತವ (ನಾ)= ನಿಜ; ಖರೆ; ಯಥಾರ್ಥ

ವಾಸ್ತವಿಕ (ವಿ)= ಖರೆ ಇದ್ದದ್ದು; ನಿಜವಾದದ್ದು, ಸರಿಯಾದದ್ದು.

ವಾಸ್ತಾ (ನಾ) ಹಿಂ.= ಸಂಬಂಧ.

ವಾಹ್ (ಅ)= ಭೇಷ ಶಾಬ್ಬಾಶ; ಭಲೆ.

ವಾಹವ್ವಾ (ಅ)= ಭಲೆ ಭಲೆ, ಭೇಷ ಭೇಷ.

ವಾಳಾ (ಅ)= ವಾಳ; ಮೈ ಮೇಲೆ ಬೆಳೆವ ದುರ್ಮಾಂಸದ ಗಡ್ಡೆ; ವಾಳಿ; ಆಳಿ.

ವಾಳಿ (ನಾ)= ಮೈ ಮೇಲೆ ವಾಳಾವುಳ್ಳವರು; ದುರ್ಮಾಂಸವುಳ್ಳವಳು. (ಗಾದೆ: ಯಾಳ್ಯಾಹೊತ್ತಿಲ್ದೆ ವಾಳಿ ಮೈನೆರೀತಂತ).

ವಾಳುಕ (ನಾ) ಮ.= ಸೌತೆಕಾಯಿ; ಪುಟ್ಟೆದ ಕಾಯಿ.

ವಿಕ್ರಮ ವಿಸಜಿ (ನಾ)= ಭಾಲ್ಕಿ ನಗರದ ಯುವ ಸಾಹಿತಿ; ಶ್ರೇಷ್ಠ ಸಾಹಿತಿ.

ವಿಕ್ರಿ (ನಾ)= ವಿಕ್ರಯ; ಬಿಕ್ರಿ; ಮಾರಾಟ.

ವಿಜಯಕುಮಾರ ಸೋನಾರೆ (ನಾ)= ಒಬ್ಬ ದಲಿತ ಕಾರ್ಯಕರ್ತ.

ವಿಟಾಳಾ (ನಾ) ಮ.= ವಿಟಾಳ; ಅಪವಿತ್ರತೆ; ಮಾಲಿನ್ಯ; ಮುಟ್ಟಾಗುವಿಕೆ.

ವಿಠ್ಠಲ (ನಾ)= ಪಂಢರಪುರದಲ್ಲಿಯ ಪಾಂಡುರಂಗ ವಿಠ್ಠಲ; ಪಂಢರಿನಾಥ ವಿಠ್ಠಲ; ವಿಠೋಬಾ; ಪುರಂದರ ವಿಠ್ಠಲ.

ವಿಠ್ಠಲ ಕಂಬಾರ (ನಾ)= ಚಿಡ ಗುಂಪಿಗ್ರಾಮದ ಒಬ್ಬ ಸ್ವಾತಂತ್ರ್ಯ ಹೋರಾಟಗಾರ.

ವಿಡಾ (ನಾ) ಮ.= ಪಾನ ಬೀಡಾ; ವೀಳ್ಯ.

ವಿರಶೆಟ್ಟಿ ಬಾಷ್ಗೆ (ನಾ)= ಬಾಲ್ಕಿತಾಲೂಕಿನ ಧನ್ನೂರು ಗ್ರಾಮದ ಒಬ ಶರಣ ಸಾಹಿತಿ.

ವಿಶ್ರಾಂತಿ (ನಾ) ಸಂ.= ಇಶ್ರಾಂತಿ; ಶ್ರಮಪರಿಹಾರ; ಬಿಡುವು; ವಿರಾಮ.

ವಿಶ್ರಾಂತಿ ಮಾಡು (ಕ್ರಿ) ಸಂ.= ಇಶ್ರಾಂತಿ ಮಾಡು; ಶ್ರಮ ಪರಿಹರಿಸು; ಬಿಡುವುಹೊಂದು; ವಿರಮಿಸು.

ವಿಶ್ವಗುರು (ನಾ) ಸಂ.= ಎಲ್ಲರ ಗುರು ಮಹಾತ್ಮಾ ಬಸವೇಶ್ವರ; ಸಮಸ್ತ ವಿಶ್ವದ ಗುರು.

ವಿಶ್ವಗುರುಬಸವಣ್ಣ (ನಾ)= ಸಮಸ್ತರ ಗುರು ಮಹಾತ್ಮಾ ಬಸವೇಶ್ವರ.

ವಿಶ್ವನಾಥ (ನಾ) ಸಂ.= ಕಾಶಿಯ ವಿಶ್ವನಾಥಲಿಂಗ. (ಭಜನೆ : ಕಾಶೀ ವಿಶ್ವನಾಥ ಗಂಗಾ ಹಂಪಿ ವಿರೂಪಾಕ್ಷ, ಲಿಂಗಾ ।।)

ವಿಷ್ಣು (ನಾ) ಸಂ.= ತ್ರಿಮೂರ್ತಿಗಳಲ್ಲೊಬ್ಬ- ನಾದ ಶ್ರೀ ಮನ್ನಾರಾಯಣ.

ವಿಸಾ (ನಾ)= ಇಸಾ; ವಿಷ.

ವಿಸಾಕುಡಿ (ಕ್ರಿ)= ವಿಷಪಾನ ಮಾಡು.

ವಿಸಾಜಿ (ನಾ)= ಮೂಲ ಬಸವ ಕಲ್ಯಾಣ ತಾಲೂಕಿನ ಕೊಳ್ಳೂರು ಗ್ರಾಮದ ನಿವಾಸಿಯಾಗಿರುವ ಭಾಲ್ಕಿಯ ಶರೇಷ್ಠ ಸಾಹಿತಿ ಡಾ. ಗುರುಲಿಂಗ ಭೀಮರಾವ ಅವರ ಅಡ್ಡ ಹೆಸರು. ಯಶಾಜಿ ಎಂಬುದು ವಿಸಾಜಿಯಾಗಿದೆ ಎಂದು ಡಾ. ಜಿ.ಬಿ. ವಿಸಾಜಿ ಹೇಳುತ್ತಾರೆ.

ವೀರ (ನಾ)= ಈರ; ಕಲಿ; ಶೂರ; ಪರಾಕ್ರಮಿ (ವೀರಭದ್ರನ ಒಡಬು: ಆಹಾರೆ ವೀರಾ । ಆಹಾರೆ ಶರ್ಭಾ.............ಹ್ಯಾಂಗ ಬರ್ತಾನ ಬರ್ಲಿ।।).

ವೀರಭದ್ರ (ನಾ)= ಶಿವನ ಹಣೆಗಣ್ಣಿನಿಂದ ಹುಟ್ಟಿ ಬಂದವನು; ದಕ್ಷ ಬ್ರಹ್ಮನ ಯಜ್ಞ ಸಂಹಾರ ಮಾಡಿದವನು.

ವೀರಶೈವ (ನಾ)= ಲಿಂಗಾಯತ.

ವೀರೇಂದ್ರ ಸಿಂಪಿ (ನಾ)= ಬೀದರ ನಗರದ ಪ್ರಸಿದ್ಧ ರಾಜ್ಯ ಮಟ್ಟದ ಸಾಹಿತಿ.

ವುಡಿ (ನಾ)= ಉಡಿ; ಸೆರಗಿನ ಪದರು; ಮಡಿಲು.

ವುಡಿಥುಂಬು (ಕ್ರಿ)= ಉಡಿಯಲ್ಲಿ ಗೋಧಿ, ಅಕ್ಕಿಯಂತಹ ಧಾನ್ಯವನ್ನು ತುಂಬು, ಸುರುವು.

ವುಡೆಕ್ಕಿ (ನಾ)= ಮದುಮಗಳಿಗೆ ಮತ್ತು ಫಲಶೋಭನ ಮಾಡಿ ಕೊಳ್ಳುವವಳ ಉಡಿಯಲ್ಲಿ ಸುರುಹುವ ಅಕ್ಕಿ; ಉಡಿಯಕ್ಕಿ.

ವುಡೆಕ್ಕಿಹಾಕು (ಕ್ರಿ)= ಮದುಮಗಳ ಉಡಿಯಲ್ಲಿ ಅಕ್ಕಿಯನ್ನು ತುಂಬು; ಸುರುವು.

ವುಡೆಕ್ಕಿ ತಿರುವು (ಕ್ರಿ)= ಉಡಿಯಲ್ಲಿ ಅಕ್ಕಿ ತುಂಬಿ ಕಳಿಸಿದವರ ಮನೆಗೆ ತಮ್ಮ ಮನೆಯ ಉಡಿಯಕ್ಕಿ ತುಂಬಿ ಕಳಿಸುವ ಪದ್ಧತಿಯನ್ನು ನಡೆಸು.

ವೂಟ (ನಾ)= ಊಟ; ಭೋಜನ.

ವೃಂದಾವನ (ನಾ)= ಮಂತ್ರಾಲಯದಲ್ಲಿರುವ ರಾಘವೇಂದ್ರ ಸ್ವಾಮಿಗಳವರ ಐಕ್ಯ ಸ್ಥಳ (ಹಾಡು: ವೃಂದಾವನಕೆ ಹಾಲನು ಮಾರಲು ಹೋಗುವ ಬಾರೆ ಬೇಗ ಸಖಿ । ಹಾಲ

ಮಾರಿ ಹರಿಯನು ಕೊಳ್ಳುವ ನಾವೇ ಧನ್ಯರು ಇಂದು ಮುಖಿ। -ಕುವೆಂಪು).

ವೆಚ್ಚ (ನಾ)= ಖರ್ಚು; ವ್ಯಯ.

ವೇದಯೇದ (ನಾ) ಸಂ.= ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ಅಥರ್ವಣ ವೇದ ಎಂಬ ಚತುರ್ವೇದಗಳು (ಗಾದೆ: ವೇದ ಸುಳ್ಳಾದರೂ ಗಾದೆ ಸುಳ್ಳಾಗದು).

ವೇದವಾಕ್ಯ ಯೇದವಾಕ್ಯ (ನಾ)= ವೇದೋಕ್ತಿ; ವೇದಗಳಲ್ಲಿರುವ ಉಕ್ತಿ; ಸೂಕ್ತಿ.

ವೇದಾಂತ ಯೇದಾಂತ (ನಾ) ಸಂ.= ವೇದದ ಕೊನೆಯ ಭಾಗವಾದ ಉಪನಿಷತ್ತು; ಅಧ್ಯಾತ್ಮ ಸಿದ್ಧಾಂತ.

ವೇದಾಂತಿ ಯೇದಾಂತಿ (ನಾ)= ವೇದಾಂತ ಮಾರ್ಗಿ; ಬ್ರಹ್ಮಜ್ಞಾನಿ; ತತ್ವಜ್ಞಾನಿ.

ವೈ (ಕ್ರಿ)= ಒಯ್ಯು; ತೆಗೆದುಕೊಂಡು ಹೋಗು.

ವೈಕುಂಟ (ನಾ)= ವೈಕುಂಠ; ವಿಷ್ಣುವಿನ ನಿವಾಸ.

ವೈಕುಂಟ್ಕ ಹೋಗು (ಕ್ರಿ)= ಶ್ರೀ ವಿಷ್ಣುವಿನ ಸಾನ್ನಿಧ್ಯಸೇರು; ಸತ್ತು ಹೋಗು.

ವೈದಿಕ್ಕು (ಕ್ರಿ)= ತೆಗೆದು ಕೊಂಡೊಯ್ದು ಇರಿಸು.

ವೈದ್ಯಸಂಗಣ್ಣ (ನಾ)= ಮೈ ಮನಕ್ಕೆ ಮದ್ದು ಕೊಡಬಲ್ಲ ಬಸವಯುಗದ ಒಬ್ಬ ಶಿವಶರಣ.

ವೈನ (ನಾ)= ಒಪ್ಪ; ಸುಖ; ಸಮಾಧಾನ; ಹೊಂದಿಕೆ; ಶಿಸ್ತು.

ವೈನಾಗು (ಕ್ರಿ)= ಒಪ್ಪವಾಗು; ಸುಖಕರವಾಗು; ಹೊಂದಿಕೆಯಾಗು; ಶಿಸ್ತಾಗು.

ವೈನಿ (ನಾ) ಮ.= ಅಣ್ಣ ಅಥವಾ ತಮ್ಮನ ಹೆಂಡತಿ; ಅತ್ತಿಗೆ.

ವೈನು (ನಾ)= ವೈನ (ನೋಡಿರಿ).

ವೈನೇ = ಒಯ್ಯೋ; ತೆಗೆದುಕೊಂಡು ಹೋಗೇ.

ವೈಭೋಗ (ನಾ)= ಐಭೋಗ; ಇಹಲೋಕದ ಸುಖ.

ವೈಯಾರಿ (ನಾ)= ಬಿನ್ನಾಣಗಿತ್ತಿ; ಬೆಡಗು ಮಾಡುವವಳು; ಒಗಾಲು ಮಾಡುವವಳು; ಡೌಲುಗಾರ್ತಿ (ಕೋಲಿನ ಹಾಡು: ವೈಯಾರೀ ವೈಯಾರೀ ವೈಯಾರಿ ಭಾಮಾ। ಬಾಬಾ ನನ ವೈಯಾರಿ ಬಾಬಾ॥).

ವೈರ (ನಾ) ಉ.= ಬೈರ; ದ್ವೇಷ; ಹಗೆತನ.

ವೈರಾಣ (ನಾ) ಉ.= ವೀರಾನ; ಅರಣ್ಯ; ಕಾಡು.

ವೈರಿ (ನಾ) ಸಂ.= ಶತ್ರು; ಹಗೆ. (ಗಾದೆ: ವೈರಿಗಿ ಕೂಸು ಅಲ್ಲಾಕ ಬರಾಲ. ಕೂಸಾದುಬೀ ವೈರಿ ವೈರಿನೇ).

ವೈರು (ನಾ) ಇಂ.= ತಂತಿ; ವಿದ್ಯುದ್ವಾಹಕ ತಂತು.

ವೈವಾಟು (ನಾ)= ರಾಟ್ಕಾಟಿ; ರೂಢಿ; ಪರಿಚಯ; ಅಭ್ಯಾಸ; ವಹಿವಾಟು; ವ್ಯಾಪಾರ.

ವೈಶಾಖ (ನಾ) ಸಂ.= ವಿವಾಹಾದಿ ಕಾರ್ಯಕ್ರಮಗಳು ಜರುಗುವ ಭಾರತೀಯ ಚಾಂದ್ರಮಾನ ವರ್ಷದ ಎರಡನೇ ತಿಂಗಳು; ಬೇಸಗೆ (ಜಾನಪದ ಪ್ರಾಸ: ವೈಶಾಖ ಮಾಸೇ। ಹೊರ್ಗ ಹಾಸ್ಗಿಹಾಸೇ। ತಣ್ಣೀರ ತಾರೇ। ನೀದೂರ ಸಾರೇ॥).

ವೋಸು (ನಾ)= ವಂಶ; ಸಂತಾನ; ವಂಶಾವಳಿ.

ವೋಸು ಖಂಡು ಭೀಳ್ಲಿ (ಕ್ರಿ)= ವಂಶ ನಿಂತು ಹೋಗಲಿ; ಸಂತಾನ ಇಲ್ಲದಂತಾಗಲಿ; ನಿರ್ವಂಶವಾಗಲಿ (ಬೈಗುಳ).

ವೋಸು ಘುಂಬಾಗಲಿ (ಕ್ರಿ)= ನಿಸ್ಸಂತಾನವಾಗಲಿ; ವಂಶನಿಂತು ಹೋಗಲಿ; ವಂಶ ಕಾಣದಂತಾಗಲಿ.

ವ್ಯತ್ಯಾಸ (ನಾ) ಸಂ.= ಅಂತರ; ಮಾರ್ಪಾಡು; ಫರಕು; ಬದಲಾಗುವಿಕೆ.

ವ್ಯಾಸ, ಯಾಸ (ನಾ)= ವೇದವ್ಯಾಸ; ದ್ವೈಪಾಯನ ಕೃಷ್ಣ; ಮಹಾ ಭಾರತದ ರಚನಾಕಾರ. (ವ್ಯಾಸ ಬೋಯಿತಿಯ ಮಗ। ಮಂಡೋದರಿ ಕಪ್ಪೆಯ ಮಗಳು. ಕುಲವನರಸದಿರಿಂಭೋ।।- ಬಸವಣ್ಣ)

ವ್ಯಾಳ್ಯಾ ಯಾಳ್ಯಾ (ನಾ)= ವೇಳೆ; ಯಾಳ್ಯಾ; ಸಮಯ; ಕಠಿಣ ಪ್ರಸಂಗ. (ತತ್ವಪದ: ವ್ಯಾಳ್ಯಾ ಬಂದ ಗ್ಯಾರ್ಥಾರಾ। ಮನಸಿಗೆ ತೂಕ ಹಾಕೊಜರಾ। ಗುರುವಿನ ಮುಂದೆ ಪಿಡಿ ಪದರಾ। ಮುಕ್ತಿ ದೊರೆಯುತದೊ ಪೂರಾ।।).

ವ್ಯಾಳ್ಯಾ ಇಲ್ದ ವ್ಯಾಳ್ಯಾ (ನಾ)= ಅ ಸಮಯ.

ವ್ಯಾಳ್ಯಾತಪ್ಸು (ನಾ)= ಸಮಯ ಮೀರು.

ವ್ಯಾಳ್ಯಾ ಬಿದ್ದಾಗ = ಸುಮಯ ಬಂದಾಗ.

ವ್ಯಾಳ್ಯಾಹೊತ್ತು (ನಾ)= ಸಮಯಾಸವಯ.

ಶ

ಶಂಕರ (ನಾ) ಸಂ.= ಮಂಗಳಕಾರಿಯಾದ ಶಿವನು. (ಭಜನೆ: ಶಿವಶಿವ ಶಿವಶಿವ ಶಂಕರಾ। ತ್ರಾಹಿ ತ್ರಾಹಿ ಗುರು ಕಿಂಕರ। ಧುಮ್ಮನ್ನೂರಿನ ಸಿದ್ಧ ಪ್ರಭು).

ಶಂಕರ ಚೊಂಡಿ (ನಾ)= ಪ್ರಸಿದ್ಧ ಜಾನಪದ ಹಾಡುಗಾರ.

ಶಂಕಾ (ನಾ) ಸಂ.= ಶಂಕೆ; ಸಂದೇಹ; ಸಂಶಯ; ಅಳುಕು; ಅಂಜಿಕೆ; ಹಿಂಜರಿತ; ಶಂಖ; ಸಮುದ್ರದಲ್ಲಿರುವ ಜಲಚರ ಜೀವಿಯ ಗೂಡು.

ಶಂಖಾ ಊಬು (ಕ್ರಿ)= ಬಾಯಿಯಿಂದ ಶಂಖ ವಾದ್ಯ ಬಾರಿಸು; ಮಠ ಮಾನ್ಯಗಳಲ್ಲಿ ಜೋರಾಗಿ ಶಂಕವನ್ನು ಬಾರಿಸು; ರಂಪ ಮಾಡು; ಬೊಬ್ಬಿಡು.

ಶಂಬರ (ನಾ)= ಶಂಭೋರ; ನೂರು.

ಶಂಬೋರ, ಶಂಭೋರ (ನಾ) ಮ.= ಶಂಬರ; ನೂರು; (ತತ್ವಪದ: ಶಂಭೋರ್ಬಿಗ್ಯಾ ನಿನಗ ನಂಬರಿರ್ಲಕಾಗಿ ಭೋಗುಸ್ತಿ ಬಡತಾನಾ। ಅಲ್ಲಿ ಇಲ್ಲಿ ಕುಂತು ಸುಮ್ಮನಾ।। –ಸಿದ್ಧಪ್ರಭು ಮಹಾರಾಜರು).

ಶಂಬೋರ್ಕಿ, ಶಂಭೋರ್ಕಿ (ನಾ) ಮ.= ನೂರರ ನೋಟು ಅಥವಾ ನಾಣ್ಯ.

ಶಂಭರ (ನಾ) ಮ.= ನೂರು, ಶತ.

ಶಂಭು (ನಾ) ಸಂ.= ಸುಖ ಸಂಪತ್ತನ್ನು ದಯ ಪಾಲಿಸುವ ಶಿವನು (ಭಜನೆ: ಎಂಬತು ನಾಲ್ಕು ಲಕ್ಷ ಜೀವರಾಶಿ। ಶಂಭು ಕಾಣುತಾನ ಕಡಿ ನಡಸಿ। –ಮರಕುಂದಿ ಬಸವಣ್ಣಪ್ಪ ಕವಿ).

ಶಂಭುಲಿಂಗ (ನಾ)= ಹುಮನಾಬಾದ ತಾಲೂಕಿನ ಮೂಲ ರೇಕಳಿಕೆ ಅಂದರೆ ಈಗಿನ ರೇಕುಳಗಿ ಗ್ರಾಮದ ಆರಾಧ್ಯ ದೇವರು. ಶಂಭುಲಿಂಗ ವಾಲದೊಡ್ಡಿ (ನಾ)= ಬೀದರ ಸಮೀಪದ ವಾಲದೊಡ್ಡಿ ಗ್ರಾಮದ ಸ್ನೇಹ ಜೀವಿ, ಜಾನಪದ ಹಾಡುಗಾರ, ಹಿನ್ನೆಲೆಗಾಯಕ, ರಂಗ ನಿರ್ದೇಶಕ ಶಂಭು ಲಿಂಗವಾಲ್ದೊಡ್ಡಿ.

ಶಂಭೋರ (ನಾ) ಮ.= ಶಂಭರ; ನೂರು; ಶತ (ಶಂಬೋರ ನೋಡಿರಿ).

ಶಂಭೋರ್ಕಿ (ನಾ)= ಶಂಭೋರ (ನೋಡಿರಿ).

ಶಕ (ನಾ)= ಶಕೆ; ನಿರ್ದಿಷ್ಟವಾದ ಕಾಲದಿಂದ ಪ್ರಾರಂಭವಾಗುವ ಕಾಲಗಣನೆ. ಉ: ಶಾಲಿವಾಹನ ಶಕ, ವಿಕ್ರಮ ಶಕ ಇತ್ಯಾದಿ.

ಶಕ್ತಿ (ನಾ) ಸಂ.= ಕಸುವು; ಬಲ; ತಾಕತ್ತು; ಆದಿ ಶಕ್ತಿ ಪಾರ್ವತಿದೇವಿ.

ಶಕ್ತಿನಾಮಾವಳಿ (ನಾ)= ಶಕ್ತಿದೇವತೆ ಕುರಿತ ೧೦೮ ನಾಮಾವಳಿ.

ಶಕ್ಯ (ನಾ) ಸಂ.= ಸಾಧ್ಯವಾದುದು; ಮಾಡಬಹುದಾದುದು.

ಶಟಿ (ಕ್ರಿ)= ಸೆಟೆ; ಸೆಟೆ; ಮುನಿ; ಮೋರೆ ಗಂಟಿಕ್ಕು.

ಶಟಿವಾರ (ನಾ)= ತತ್ವಾರ; ಕೊರತೆ.

ಶಟೇರು (ನಾ)= ಸೆಟ್ಟರು; ಸೆಟ್ಟಿಯರು (ಜೋಕುಮಾರನ ಹಾಡು: ಅಟಮಿ ಧೀನ ಹುಟಿದಾನೆ ಕೊಮರಾಯಾ। ಶಟೇರು ಕರ್ದು ಬೆಸ್ಗೊಳ್ರೀ ಜೋಕುಮಾರ।।).

ಶಣಿ (ನಾ)= ಶನಿ; ಶನಿ ಗ್ರಹ; ನವಗ್ರಹಗಳಲ್ಲೊಂದು ಗ್ರಹ.

ಶಣಿ ಕಾಟ (ನಾ)= ಶನಿಗ್ರಹದ ಉಪದ್ರವ; ಶನಿದೇವರ ಕಾಟ.

ಶಣಿನಿದೇವರು (ನಾ)= ಶನಿದೇವರು; ಶನಿಗ್ರಹ; ಶನಿಮಹಾತ್ಮ.

ಶಣಿವಾರ (ನಾ)= ಶನಿವಾರ; ಸನಿವಾರ, ವಾರದ ಏಳು ದಿನಗಳಲ್ಲೊಂದು ದಿನ; ಶನಿಯ ಹೆಸರಿನ ದಿನ.

ಶತಕ (ನಾ) ಸಂ.= ನೂರು ಪದ್ಯಗಳುಳ್ಳ ಒಂದು ಕೃತಿ (ಸೋಮೇಶ್ವರ ಶತಕ; ಹರಿಹರ ಶತಕ, ಮೊಗ್ಗೆಯ ಮಾಯಿದೇವ ಶತಕ ಇತ್ಯಾದಿ).

ಶನಿಮಾತ್ಮಾ (ನಾ)= ಭಾಲ್ಕಿ ತಾಲೂಕಿನಲ್ಲಿರುವ ಮೈಲಾರದ ಸಮೀಪದಲ್ಲಿಯ ಶನಿಮಹಾತ್ಮನ ತೀರ್ಥ ಕ್ಷೇತ್ರ.

ಶಬರಿ (ನಾ)= ರಾಮನ ಭಕ್ತೆಯಾದ ಬೇಡ ಜನಾಂಗದ ಒಬ್ಬ ತಪಸ್ವಿನಿ.

ಶಬ್ನಂ (ನಾ) ಉ.= ಇಬ್ಬನಿ; ಮಂಜು; ಹನಿಹುಲ್ಲು; ಹುಲ್ಲ ಮೇಲೆ ಹರಡಿದ ನೀರಿನ ಬಿಂದುಗಳು.

ಶಮ್ಶಾನ (ನಾ)= ಸ್ಮಶಾನ; ಮಸಣ; ಕುಣಿಗೇರಿ; ಮಸುಟ್ಗಿ.

ಶರಣ (ನಾ)= ಶಿವಶರಣ; ಶಿವನಿಗೆ ಶರಣು ಹೋದವನು; ಶರಣ ಸ್ಥಲ (ಭಜನೆ: ಶರಣರ ಹೃದಯ। ಪರಶಿವ ನಿಲಯ। ಕೈಮುಗಿವೆನು ಕೈಲಾಸದ ನಿಲಯ।।); ಶ್ರಾವಣ.

ಶರಣ ತಿಂಗ್ಳು (ನಾ)= ಶ್ರಾವಣಮಾಸ.

ಶರಣಮ್ಮ (ನಾ)= ಶರಣೆ.

ಶರಣ ಸ್ಥಲ (ನಾ)= ಆರುಸ್ಥಲಗಳಲ್ಲಿಯ ಐದನೆಯ ಸ್ಥಲ (ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬವು ಆರುಸ್ಥಲಗಳು).

ಶರಣ ಸ್ವಾಮಾರ (ನಾ)= ಶ್ರಾವಣ ಮಾಸದಲ್ಲಿ ಬರುವ ಸೋಮವಾರ.

ಶರಣಾಗು (ಕ್ರಿ)= ಶರಣ ಮಾರ್ಗವನ್ನು ಅನುಸರಿಸು; ಶರಣು ಹೋಗು; ರಕ್ಷಣೆ ಬಯಸು; ಸೋಲು ಒಪ್ಪು.

ಶರಣಾರ್ಥಿ (ನಾ)= ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣ ಶರಣೆಯರು ರೂಢಿಯಲ್ಲಿ ತಂದ ನಮಸ್ಕಾರದ ಸಮನಾಂತರ ಪದ. ಕಲ್ಯಾಣ ಕ್ರಾಂತಿಗೆ ಕಾರಣೀಭೂತವಾದ ಪದ; ಹರಳಯ್ಯ ಮಧುವಯ್ಯರಲ್ಲಿ ನಂಟುತನ ಏರ್ಪಡಿಸಿದ ಪದ.

ಶರಣಿ (ನಾ)= ಶರಣೆ; ಶರಣಮ್ಮ.

ಶರಣು = ನಮಸ್ಕಾರ; ವಂದನೆ.

ಶರಣು ಶರಣಾರ್ಥಿ (ನಾ)= ನಮೋನ್ನಮಃ ; ಬಸವಣ್ಣನವರು ಹರಳಯ್ಯ ಶರಣರಿಗೆ ಸಲ್ಲಿಸಿದ ವಂದನೆಯ ಪದ. ಕಲ್ಯಾಣ ಕ್ರಾಂತಿಗೆ ಕಾರಣೀಭೂತವಾದ ಕ್ರಾಂತಿ ಕಾರಿ ಪದ.

ಶರತ್ತು (ನಾ) ಉ.= ಷರತ್ತು; ಪಣ; ಪಂದ್ಯ; ಕರಾರು; ನಿಯಮ; ನಿಬಂಧನೆ.

ಶರಬತ್ತು (ನಾ)= ನಿಂಬೆ, ಮೋಸಂಬಿ, ಸಂತ್ರಾ ಇತ್ಯಾದಿ ಹಣ್ಣುಗಳ ರಸದಿಂದ ತಯಾರಿಸಲಾದ ಸಿಹಿ ಪಾನೀಯ, ಪಾನಕ.

ಶರಾಬಿ (ನಾ) ಉ.= ಕುಡುಕ; ಹೆಂಡ ಕುಡುಕ; ಸೆರೆ ಕುಡುಕ; ನಶಾಬಾಜ.

ಶರಾಬು (ನಾ) ಉ.= ನಶೆ ತರುವ ಪಾನೀಯ; ಸಾರಾಯಿ.

ಶರುಮು (ನಾ) ಉ.= ಶರಮ್; ಲಜ್ಜೆ; ನಾಚಿಕೆ.

ಶರುಮ್ಗೇಡಿ (ನಾ)= ಲಜ್ಜೆಗೇಡಿ; ನಾಚಿಕೆಗೇಡಿ; ಶರ್ಮ್ಗೇಡಿ.

ಶರ್ಣಮ್ಮ (ನಾ)= ಶರಣಮ್ಮ; ಶರಣೆ.

ಶರ್ಣಾರ್ತಿ (ನಾ)= ಶರಣಾರ್ಥಿ (ನೋಡಿರಿ); ಶರಣು; ನಮಸ್ಕಾರ.

ಶರ್ಪ (ನಾ)= ಸರ್ಪ; ಹಾವು.

ಶರ್ಮಾಸು (ಕ್ರಿ)= ನಾಚಿಕೆ ಹೊಂದು; ಲಜ್ಜೆಗೊಳ್ಳು.

ಶರ್ಮು (ನಾ)= ಶರುಮು (ನೋಡಿರಿ).

ಶರ್ಮುಗೇಡಿ (ನಾ)= ಶರುಮ್ಗೇಡಿ (ನೋಡಿರಿ).

ಶಾಂತ (ವಿ.)= ಸಮಾಧಾನ ಹೊಂದಿದ; (ನಾ) ಸಮಾಧಾನಿ.

ಶಾಂತಮ್ಮ ಬಲ್ಲೂರು (ನಾ)= ಬೀದರಿನ ಹಳ್ಳದ ಕೇರಿಯ ಒಬ್ಬ ಉದಯೋನ್ಮುಖ ಕವಯತ್ರಿ.

ಶಾಂತಿ (ನಾ)= ನೆಮ್ಮದಿ; ಮೌನ; ನೀರವತೆ.

ಶಾಕ (ನಾ) ಉ.= ಪಾಡುಗಾಯಿ; ಪಾಡಿಗೆ ಬಂದಮಾವು; ಮರ್ಯಾದೆ (ಗಾದೆ: ಲಾಖ ಹೋದುರ್ಬೀ ಪರ್ವಾ ಇಲ್ಲ, ಶಾಕ ಹೋಗಬಾರ್ದು).

ಶಾಣೆ (ನಾ)= ಜಾಣ; ಬುದ್ಧಿವಂತ.

ಶಾಣ್ಯಾ (ನಾ)= ಶಾಣೆ (ನೋಡಿರಿ).

ಶಾದಿ (ನಾ)= ಮದುವೆ; ವಿವಾಹ; ಲಗ್ನ.

ಶಾದಿಖಾನಿ (ನಾ) ಉ.= ಮದುವೆ ಮಂಟಪ.

ಶಾನ (ನಾ) ಉ.= ಗೌರವ; ಮರ್ಯಾದೆ; ಆಡಂಬರ; ಡೌಲು.

ಶಾನಾ (ನಾ) ತೆ.= ಹೆಚ್ಚಳ; ಆಧಿಕ್ಯ.

ಶಾಪಾ (ನಾ)= ಋಷಿ ಮುನಿಗಳಿಂದ ಬರುವ ನಿಷ್ಠುರದ ನುಡಿ; ನಿಂದೆ; ಶಾಪ.

ಶಾಪಾ ಹಾಕು (ಕ್ರಿ)= ಶಪಿಸು; ನಿಷ್ಠುರದ ಮಾತಾಡು; ನಿಂದಿಸು.

ಶಾಬ್ಬಾಸ (ನಾ)= ಲೇಸು; ಸರಿ; ಒಳಿತು; ಭೇಷ.

ಶಾಮೀಲಾಗು (ಕ್ರಿ)= ಸೇರು; ಕೂಡು; ಒಂದಾಗು; ಜತೆಗೂಡು.

ಶಾಮೀಲು (ನಾ) ಉ.= ಒಂದಾದದ್ದು; ಕೂಡಿದ್ದು.

ಶಾಯಿ (ನಾ)= ಮಸಿ; ಇಂಕು.

ಶಾಯ್ದಿ (ನಾ)= ಸಾಕ್ಷಿ; ಸಾಕ್ಷಿದಾರ.

ಶಾರ (ನಾ)= ಶಹರ; ಪಟ್ಟಣ (ಜಾನಪದ ಹಾಡು: ಕಲ್ಯಾಣ ಕಲಬುರ್ಗಿ। ಶಾರ ಬೀದರ ಕ್ವಾಟಿ। ಎಲ್ಯಾದೊ ಬಾಬಾ ನಿನದಂಡು। ಕಲಬುರ್ಗಿ। ಕಲ್ಲಾಗ ಡೇರ್‍ಯಾ ಹೊಡದಾರೊ॥); ಹೈದರಾಬಾದುನಗರ.

ಶಾಲು (ನಾ)= ಉಣ್ಣೆಯಿಂದ ತಯಾರಿಸಲಾದ ಹಚ್ಚಡ.

ಶಾಲು ಹೊಚ್ಚು (ಕ್ರಿ)= ಮಗುವಿಗೆ ಶಾಲು ಇಲ್ಲವೆ ಕಂಬಳಿ ಹೊದಿಸುವ ಕಾರ್ಯಕ್ರಮ ಮಾಡು.

ಶಾವಂತಿ (ನಾ)= ಸೇವಂತಿಗೆ; ಸೇವಂತ್ಗಿ.

ಶಾವಂತ್ಗಿ (ನಾ)= ಶಾವಂತಿ; ಸೇವಂತ್ಗಿ; ಸೇವಂತಿಗೆ.

ಶಾವಿ (ನಾ)= ಸಾವೆ. ಬರಗು, ನವಣೆ, ಹಾರ್ಕ ಮೊದಲಾದ ತೃಣಧಾನ್ಯದ ಗುಂಪಿಗೆ ಸೇರಿದ ಧಾನ್ಯ.

ಶಾವ್ಗಿ (ನಾ)= ಶಾವಿಗೆ; ಸೇವಿಗೆ; ರವೆ ಅಥವಾ ಗೋಧಿ ಹಿಟ್ಟಿನಿಂದ ಮಾಡುವ, ಪಾಯಸಕ್ಕೆ ಉಪಯೋಗಿಸುವ, ಎಳೆ ಎಳೆಯಾದ ಅಹಾರ ಪದಾರ್ಥ. ಸೇವಿಗೆ ಆಹಾರ ಶ್ರೇಷ್ಠವಾದ ಆಹಾರವೆಂಬ ಭಾವನೆ ಈ ಭಾಗದ ಜಾನಪದರಲ್ಲಿ ಬೇರೂರಿದೆ. ಗಡಿಗೆ ಬೋರಳಿಟ್ಟು ಅದರ ಮೇಲೆ ಸೇವಿಗೆ ತಯಾರಿಸುವುದು ಸ್ವಾತಂತ್ರ್ಯ ಪೂರ್ವದಲ್ಲಿ ಸಾಮೂಹಿಕ ಹಸ್ತ ಕೌಶಲ್ಯವಾಗಿತ್ತು. ಅದು ಆಗಿನ ತುರ್ತು ಸಿದ್ಧ ಆಹಾರವಾಗಿತ್ತು.

ಶಾಸಿ (ನಾ)= ಸ್ಯಾಸಿ; ಸೇಸೆ; ಅಕ್ಷತೆ; ಅಕ್ಕಿ ಕಾಳು; ಮಂಗಳಾಕ್ಷತೆ.

ಶಾಸ್ತುರು (ನಾ)= ಶಾಸ್ತ್ರ; ಧರ್ಮ ತತ್ವದ ಗ್ರಂಥ; ಧಾರ್ಮಿಕ ವಿಷಯ. (ಗಾದೆ: ಶಾಸ್ತುರು ಹೇಳ್ಲಾ ಕಾಯ್ತು, ಬದ್ನಿಕಾಯಿ ತಿಲ್ಲಾ ಕಾಯ್ತು।).

ಶಾಸ್ತ್ರಿ (ನಾ)= ಶಾಸ್ತ್ರ ಬಲ್ಲವನು; ಧರ್ಮದ ರೀತಿ ನೀತಿ ತಿಳಿಸುವವನು; ಪ್ರವಚನಕಾರ; ಕೀರ್ತನಕಾರ.

ಶಾಸ್ವಿತ (ನಾ)= ಶಾಶ್ವತ; ನಿತ್ಯವಾದುದು; ಚಿರವಾದುದು.

ಶಾಹೀರ (ನಾ) ಉ.= ಕವಿ; ಕವಿತ್ವ ಶಕ್ತಿ ಉಳ್ಳವನು.

ಶಾಹೀರಿ (ನಾ) ಉ.= ಕವಿತ್ವ; ಕಾವ್ಯ ರಚನೆಯ ಕೌಶಲ್ಯ.

ಶಿಕರಾ (ನಾ)= ಶಿಖರ; ದೇವಾಲಯದ ಗೋಪುರ.

ಶಿಕಾಮಣಿ (ನಾ)= ಶಿಖಾಮಣಿ; ಜಡೆಯ ಮಣಿ. (ಒಡಗತೆ: ಹಕಾಪಕಿ ಶಿಕಾಮಣಿ। ನಿನ್ಮುಖಾ ನೋಡ್ದುರ ನನಗ ದುಖಾಬರ್ತಾದ। ಸೂರ್ಯ).

ಶಿಕಾರಾಡು (ಕ್ರಿ)= ಬೇಟೆಯಾಡು.

ಶಿಕಾರಿ (ನಾ) ಹಿಂ.= ಬೇಟೆ; ಬೇಟೆಗಾರ (ಗಾದೆ: ಸಿಕ್ರ ಶಿಕಾರಿ, ಇಲ್ದುರ್ಭಿಕಾರಿ).

ಶಿಕಾರ್ಖಾನಿ (ನಾ)= ಆಂಧ್ರದ ನಾರಾಯಣ ಖೇಡ ತಾಲೂಕಿನ ಮಣೂರು ಮಂಡಲದ ಒಂದು ಕನ್ನಡ ಹಳ್ಳಿಯ ಹೆಸರು. ಬಸವಪುರ ಎಂತಲೂ ಅದಕ್ಕೆ ಕರೆಯುತ್ತಾರೆ.

ಶಿಕ್ಷಾ (ನಾ)= ಶಿಕ್ಷೆ; ಪಾಠ ಕಲಿಸುವಿಕೆ.

ಶಿಖಂಡಿ (ನಾ)= ಷಂಡ; ನಪುಂಸಕ; ದ್ರುಪದ ರಾಜನ ಮಗ.

ಶಿಫಾರತಿ (ನಾ)= ವಸೀಲಿ; ಪರಿಚಯದ ಪ್ರಭಾವ.

ಶಿಫಾರಸು ಹಚ್ಚು (ಕ್ರಿ)= ವಸೀಲಿ ಬಳಸು; ಪರಿಚಯದ ಪ್ರಭಾವ ಬಳಸು.

ಶಿರಬಾಗು (ಕ್ರಿ)= ನಮಸ್ಕರಿಸು; ತಲೆಬಾಗು (ದೊಡ್ಡಾಟದ ಮಾತು: ಶಿರಬಾಗಿ ಕರಮುಗಿದು ಬೇಡುವೆ ತಾಯೆ। ಜಗದಂಬೆ ಮಾಯೆ).

ಶಿರೋಮಣಿ ತಾರೆ (ನಾ)= ಬೀದರನಗರದ ಬೆತ್ಲಹೆಮ್ ಬಡಾವಣೆಯಲ್ಲಿರುವ ಒಬ್ಬ ಹಿರಿಯ ಸಾಹಿತಿ.

ಶಿರ್ಸಿಗಿಡ (ನಾ)= ಶಿರೀಷ ವೃಕ್ಷ.

ಶಿಲುಕು (ನಾ)= ಉಳಿಕೆ; ಬಾಕಿ; ಶೇಷ.

ಶಿಲ್ಕಿಡು (ಕ್ರಿ)= ಬಾಕಿ ಉಳಿಸು; ಶೇಷ ಉಳಿವಂತೆ ಮಾಡು.

ಶಿಲ್ಕು (ನಾ)= ಶಿಲುಕು (ನೋಡಿರಿ).

ಶಿವ (ನಾ)= ಈಶ್ವರ; ಉಮಾಪತಿ.

ಶಿವಕುಮಾರ ಕಟ್ಟೆ (ನಾ)= ತಾಲೂಕು ಕೇಂದ್ರವಾದ ಔರಾದ (ಬಿ) ಪಟ್ಟಣದ ಒಬ್ಬ ಯುವ ಸಾಹಿತಿ.

ಶಿವಕುಮಾರ ನಾಗ್ವಾರ (ನಾ)= ಬೀದರ ಜಿಲ್ಲೆಯ ಮರಕುಂದಿ ಊರಿನ, ರಾಜ್ಯ ಮಟ್ಟದ ಪ್ರಸಿದ್ಧ ಸಣ್ಣ ಕತೆಗಾರ.

ಶಿವಕುಮಾರ ಸ್ವಾಮಿ (ನಾ)= ಬೀದರ ನಗರದ ದಕ್ಷಿಣಕ್ಕೆ ಇರುವ ಚಿದಂಬರಾಶ್ರಮದ (ಗುಂಪಾದ) ಅಧಿಪತಿ. ಸಿದ್ಧಾರೂಢ ಮಠದ ಅಧಿಪತಿ.

ಶಿವಚಂದ್ರ ನೆಲ್ಲೋಗಿ (ನಾ)= ಹುಮ್ನಾಬಾದ ಪಟ್ಟಣದ ಸ್ವಾತಂತ್ರ್ಯಯೋಧ, ಹುತಾತ್ಮಾ; ದುಷ್ಟ ರಜಾಕಾರರಿಂದ ಹತ್ಯೆ ಗೊಂಡವರು.

ಶಿವಧಾರಾ (ನಾ)= ಶಿವದಾರ; ಇಷ್ಟಲಿಂಗದ ಕರಡಿಗೆಯನ್ನು ಧರಿಸಲು ಬಳಸುವ ದಾರ.

ಶಿವನಾಟಾ (ನಾ)= ಶಿವನ ಲೀಲೆ.

ಶಿವನ್ಕುದುರಿ (ನಾ)= ಶಿವನ ಕುದುರೆ; ಗಿಡಮರ ಬೆಳೆಗಳಲ್ಲಿ ವಾಸಿಸುವ ಒಂದು ಪ್ರಕಾರದ ಹಸಿರು ಬಣ್ಣದ ಹಾರುವ ಕೀಟ.

ಶಿವಪೂಜೆ (ನಾ)= ಶಿವಲಿಂಗ ಅಥವಾ ಇಷ್ಟಲಿಂಗದ ಪೂಜೆ.

ಶಿವರಾಜ ಕಾಡೋದೆ (ನಾ)= ಭಾಲ್ಕಿಯ ಹಿರೇಮಠದ ಪಟ್ಟಾಧ್ಯಕ್ಷರಾದ ಬಸವಲಿಂಗ ಪಟ್ಟದ್ದೇವರ ಪೂರ್ವಾಶ್ರಮದ ಹೆಸರು. ಅವರ ತಾಯಿಯ ಹೆಸರು ಭಾಗೀರತಿಬಾಯಿ. ತಂದೆಯ ಹೆಸರು ರಾಚಪ್ಪ ಕಾಡೋದೆ. ಊರು ಆಂಧ್ರದ ನಾರಾಯಣಖೇಡದ ನಾಗೂರು (ಬ).

ಶಿವರಾತ್ರಿ (ನಾ) ಸಂ.= ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯ ರಾತ್ರಿ; ಶಿವಭಕ್ತರು ಜಾಗರಣೆ ಮಾಡುವ ವಿಶೇಷ ರಾತ್ರಿ. (ವಚನ: ಶರಣ ನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ –ಬಸವಣ್ಣ).

ಶಿವಲೋಕ (ನಾ) ಸಂ.= ಸ್ವರ್ಗ; ಕೈಲಾಸ (ಹಾಡು: ಶಿವಲೋಕದಿಂದ ಒಬ್ಬ ಸಾಧು ಬಂದಾನವ್ವ। ತಂಗಿ। ಒಬ್ಬ ಸ್ವಾಮಿ ಬಂದಾನವ್ವ ತಂಗಿ।).

ಶಿವಸ್ವಾಮಿ ಚೀನಕೇರಿ (ನಾ)= ಚೀನಕೇರಿಯ ಆಧುನಿಕ ವಚನಕಾರ –ಲಿಂಗದೇವ ಮುದ್ರಾಂಕಿತ.

ಶಿವಾಜಿ (ನಾ)= ಮೊಗಲರ ವಿರುದ್ಧ ಹೋರಾಡಿ ಸ್ವತಂತ್ರ ರಾಜ್ಯ ಸ್ಥಾಪಿಸಿದ ವೀರ ಛತ್ರಪತಿ ಶಿವಾಜಿ ಮಹಾರಾಜರು.

ಶಿವಾಯಿ (ಗು)= ಹೊರತು; ವಿನಃ.

ಶಿವಾರ (ನಾ)= ಭೂಭಾಗ; ಸುತ್ತ ಮುತ್ತಣ ಭೂವಿಸ್ತಾರ.

ಶಿವುನ್ಕುದುರಿ (ನಾ)= ಶಿವನ್ಕುದುರಿ (ನೋಡಿರಿ).

ಶಿವ್ರಾತ್ರಿ (ನಾ) ಸಂ.= ಶಿವರಾತ್ರಿ (ನೋಡಿರಿ).

ಶಿಸ್ತಾಗಿ (ಅ)= ಶಿಸ್ತಿನಿಂದ; ವ್ಯವಸ್ಥಿತವಾಗಿ.

ಶಿಸ್ತು (ನಾ)= ಒಪ್ಪ; ಓರಣ.

ಶೀತ (ನಾ) ಸಂ.= ಚಳಿ; ಥಂಡಿ; ನೆಗಡಿ; ಸರ್ದಿ.

ಶೀತಾಗು (ಕ್ರಿ)= ನೆಗಡಿ ಬರು; ಥಂಡಿಯಾಗು.

ಶೀಲವಂತ (ನಾ)= ಒಳ್ಳೆಯ ನಡತೆಯುಳ್ಳವನು; ಸಚ್ಚರಿತನು; ಲಿಂಗಾಯತ ಧರ್ಮದಲ್ಲಿಯ ಒಂದು ಒಳ ಪಂಗಡ; ಶರಣ ಹರಳಯ್ಯನ ಮಗ.

ಶೀಲಾ (ನಾ) ಸಂ.= ಶೀಲ; ನಡತೆ; ಸ್ವಭಾವ; ಹೆಣ್ಣು ಅಥವಾ ಗಂಡಿನ ಸನ್ನಡತೆ; ಲೈಂಗಿಕ ಪಾವಿತ್ರ್ಯ.

ಶೀಲ್ವಂತ (ನಾ)= ಶೀಲವಂತ (ನೋಡಿರಿ).

ಶುಕುಲ್ತೀರ್ಥ (ನಾ)= ಶುಕ್ಲತೀರ್ಥ; ಹಾಲಿನಂತೆ ಬಿಳಿ ನೀರುಳ್ಳ, ಬೀದರ ಕೋಟೆಯ ಉತ್ತರ ಬದಿಯ ಜನವಾಡಾ ಮಾರ್ಗದ ಮಗ್ಗುಲಲ್ಲಿರುವ ಒಂದು ನಿರ್ಝರಿಣಿ (ನೀರ್ಬುಗ್ಗೆ).

ಶುಕ್ರಾರ (ನಾ)= ಶುಕ್ರವಾರ; ಗುರುವಾರದ ನಂತರ ಬರುವ ವಾರ.

ಶುದ್ಧಿ ಸಂಘಟನೆ (ನಾ) ಸಂ.= ಹರಡೇಕರ ಮಂಜಪ್ಪನವರು ಧರ್ಮವನ್ನು ತೊರೆದುಹೋದ ಲಿಂಗಾಯತರನ್ನು ಮತ್ತೆ ಧರ್ಮಕ್ಕೆ ಸೇರಿಸಿಕೊಳ್ಳಲು ಸ್ಥಾಪಿಸಿದ ಒಂದು ಸಂಘ. ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು, ಗುರುಮಠ ಕಲ್ಲದ ಶಾಂತವೀರ ಸ್ವಾಮಿಗಳು, ಮಹಾಗಾಂವದ ಶರಣಯ್ಯ ಸ್ವಾಮಿ, ಉದಗೀರದ ಸಂಗ್ರಾಮಪ್ಪ ಶಟಗಾರ, ಹುಡುಗಿಯ ಗುರುಪಾದಪ್ಪ ಶಿವರಡ್ಡಿ, ಮೊದಲಾದವರು ಈ ಸಂಘಟನೆಯಲ್ಲಿ ಕ್ರಿಯಾ ಶೀಲರಾಗಿದ್ದರು. ಈ ಸಂಘಟನೆಯು ಉದಗೀರ; ಜಹೀರಾಬಾದ, ಭಾಲ್ಕಿ, ಹುಮನಾಬಾದ ತಾಲೂಕಿನ ಹುಡುಗಿ ಗ್ರಾಮ ಮೊದಲಾದೆಡೆಗಳಲ್ಲಿ ವ್ಯಾಪಕ ಪರಿಣಾಮ ಬೀರಿತು.

ಶುಭ (ವಿ) ಸಂ.= ಒಳ್ಳೆಯದ್ದು; ಮಂಗಳಕರವಾದದ್ದು.

ಶುಭಕಾರ್ಯ (ನಾ) ಸಂ.= ಒಳ್ಳೆಯ ಕೆಲಸ; ಮಂಗಳ ಕೆಲಸ.

ಶುಭದಿನ (ನಾ) ಸಂ.= ಶುಭ ತಿಥಿ; ಮಂಗಳಕರವಾದ ದಿನ; ಒಳ್ಳೆಯ ದಿನ.

ಶುಭನುಡಿ (ನಾ)= ಒಳ್ಳೆಯ ಮಾತು (ಕ್ರಿ) ಒಳ್ಳೆಯ ಮಾತಾಡು. (ಗಾದೆ : ಶುಭ

ನುಡಿಯೆ ಸುಂದರಿ ಅಂದ್ರ ಹಂದುರ್ತುಂಬಾ ಬೋಳೇರು ಅಂತಂತ!)

ಶುಭಮಂಗಲ (ನಾ) ಸಂ.= ಒಳ್ಳೆಯ ಮುಕ್ತಾಯ; ಸುಖಾಂತ್ಯ.

ಶುಭರಾತ್ರಿ (ನಾ) ಸಂ.= ಸಂಜೆಯ ಸಮುಯದಲ್ಲಿ ಹೇಳುವ ನಮಸ್ಕಾರ; ಸುಖಮಯ ರಾತ್ರಿ; ರಾತ್ರಿಯ ಶುಭಾಶಯ; ಶುಭ ಹಾರೈಕೆ.

ಶುಭಾಶಯ (ನಾ) ಸಂ.= ಒಳ್ಳೆಯದಾಗಲೆಂಬ ಹಾರೈಕೆ.

ಶುಭಾಶೀರ್ವಾದ (ನಾ) ಸಂ.= ಚರಣಕ್ಕೆ ಎರಗಿದವರಿಗೆ ಶುಭವನ್ನು ಹಾರೈಸುವಿಕೆ.

ಶುರು (ನಾ) ಹಿಂ.= ಮೊದಲು; ಪ್ರಾರಂಭ; ಸುರು.

ಶುರುಮಾಡು (ಕ್ರಿ)= ಪ್ರಾರಂಭಿಸು; ಚಾಲನೆನೀಡು; ಚಲಾಯಿಸು.

ಶೂನ್ಯಪೀಠ (ನಾ) ಸಂ.= ಬಸವಕಲ್ಯಾಣದಲ್ಲಿಯ ಅಲ್ಲಮ ಪ್ರಭುದೇವರ ನಿರಂಜನ ಜಗದ್ಗುರು ಸಿಂಹಾಸನ.

ಶೂನ್ಯ ಸಂಪಾದನೆ (ನಾ)= ಶರಣ ಶರಣೆಯರ ವಚನಗಳನ್ನು ಸಂವಾದ ರೂಪದಲ್ಲಿ ಹೆಣೆದ ಅನುಭಾವ ಶಾಸ್ತ್ರ (ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ).

ಶೆಟ್ಟಿ (ನಾ)= ಸೆಟ್ಟಿ; ವ್ಯಾಪಾರಿ; ಶ್ರೇಷ್ಠಿ (ವಚನ: ಶೆಟ್ಟಿಯೆಂಬೆನೆ ಸಿರಿಯಾಳನ? ಮಡಿವಳನೆಂಬೆನೆ ಮಾಚಯ್ಯನ? –ಬಸವಣ್ಣ).

ಶೇಂಗಾ (ನಾ)= ಸೇಂಗಾ; ನೆಲಗಡಲೆ; ಭೂಯ್ಮೂಂಗ.

ಶೇಕಡಾ (ನಾ)= ಪ್ರತಿಶತ; ಪ್ರತಿನೂರಕ್ಕೆ; ನೂರಕ್ಕೆ ಇಷ್ಟು.

ಶೇಬ್ಯಾ (ನಾ)= ಶೋಭೆ; ಸಭೆ; ಕಾರ್ಯಕ್ರಮ ನಿಮಿತ್ತ ಸೇರಿದ ಜನ ಸಮೂಹ.

ಶೇವಂತಿ (ನಾ)= ಸೇವಂತಿಗೆ; ಸ್ಯಾವಂತ್ಗಿ; ಒಂದು ಬಗೆಯ ಹೂವು ಮತ್ತು ಅದರ ಗಿಡ.

ಶೋಭಾ ಮಂಗಳೂರೆ (ನಾ)= ಬೀದರ ನಗರದ ಒಬ್ಬ ಸಾಹಿತಿ.

ಶ್ರಮದಾನ (ನಾ) ಸಂ.= ಸಮಾಜ ಸೇವೆಗಾಗಿ ಕೂಲಿ ಇಲ್ಲದೆ ದುಡಿಯುವಿಕೆ. ವಿನೋಬಾ ಭಾವೆಯವರು ತೋರಿದ ಮಾರ್ಗ.

ಶ್ರವಣ ಕುಮಾರ (ನಾ)= ತಾಯಿ ತಂದೆಯರ ಸೇವೆ ಮಾಡುತ್ತಲೇ ದಶರಥ ರಾಜನಿಂದ ಹತನಾದ ಬಾಲಕ.

ಶ್ರಾದ್ಧ (ನಾ) ಸಂ.= ಪುಣ್ಯತಿಥಿ; ಹಿರಿಯ ಆತ್ಮಗಳ ಸ್ಮರಣ.

ಶ್ರಾವಣ (ನಾ) ಸಂ.= ಮಳೆಗಾಲದಲ್ಲಿ ಬರುವ ಚಾಂದ್ರಮಾನ ಪದ್ಧತಿಯ ಒಂದು ತಿಂಗಳು. ಪುರಾಣ-ಪುಣ್ಯ ಕತೆಗಳನ್ನು ಶ್ರವಣ ಮಾಡುವ ತಿಂಗಳು.

ಶ್ರೀಗಂಧ (ನಾ) ಸಂ.= ಚಂದನದ ಮರ; ಚಂದನದ ಕೊರಡು; ಚಕ್ಕೆ; ಚಂದನದ ಕೊರಡನ್ನು ತೇದು ಮಾಡಿದ ಲೇಪನ ವಸ್ತು. (ಹಂತಿ ಹಾಡು: ಹಾಲಳ್ಳಿ ಬ್ಯಾಲಳ್ಳಿ। ನಡುವ ನೀಲಮನಳ್ಳಿ। ತೆಗ್ಗಿನಾಗಾದಾ ಮೈಲಾರ। ಮಲ್ಲಯ್ಯನ। ಹುಬ್ಬಿನಾಗಾದ ಶ್ರೀಗಂಧ॥).

ಶ್ರೀನಿವಾಸ (ನಾ)= ಶ್ರೀವಿಷ್ಣು.

ಶ್ವಾನ (ನಾ) ಸಂ.= ಸ್ವಾನ; ನಾಯಿ.

ಶ್ವಾಸ (ನಾ) ಸಂ.= ಸ್ವಾಸ; ಉಸಿರಾಟ.

ಷ

ಷಟಸ್ಥಲ (ನಾ)= ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಎಂಬ ಆರುಸ್ಥಳಗಳು.

ಷಡ್ಡಕ (ನಾ)= ಸಡಕ; ಹೆಂಡತಿಯ ಅಕ್ಕ ಅಥವಾ ತಂಗಿಯ ಗಂಡ.

ಷರ್ತಿ (ನಾ)= ಜಿದ್ದು; ಪಣ.

ಷರ್ತಿ ಕಟ್ಟು (ಕ್ರಿ)= ಪಣ ಒಡ್ಡು; ಪಣಕ್ಕಿಡು; ಜಿದ್ದುಕಟ್ಟು.

ಷರ್ತು (ನಾ) ಉ.= ಷರ್ತಿ; ಜಿದ್ದು; ಪಣ.

ಸ

ಸಂಕಟ (ನಾ)= ಕಷ್ಟ; ತೊಂದರೆ; ಹಿಂಸೆ; ದುಃಖ; ಅಳಲು; (ಗಾದೆ: ಸಂಕಟ ಬಂದಾಗ ವೆಂಕಟ ರಮಣ).

ಸಂಕಟ್ದಾಗ ಬೀಳು (ಕ್ರಿ)= ಕಷ್ಟ ಅನುಭವಿಸು.

ಸಂಕಲ್ಪ (ನಾ) ಸಂ.= ಮನಸ್ಸಿನ ನಿರ್ಧಾರ; ನಿರ್ಣಯ; ಪಣ.

ಸಂಕಲ್ಪ ಮಾಡು (ಕ್ರಿ)= ನಿರ್ಧರಿಸು; ನಿರ್ಣಯಿಸು; ಪಣತೊಡು.

ಸಂಕ್ಟ (ನಾ)= ಸಂಕಟ; ಕಷ್ಟ; ತೊಂದರೆ.

ಸಂಕ್ರಾಂತಿ (ನಾ)= ಸಂಕ್ರಾಂತಿ; ಮಕರ ಸಂಕ್ರಮಣ.

ಸಂಕ್ಷಿಪ್ತ (ನಾ) ಸಂ.= ಚಿಕ್ಕದಾದುದು; ಸಣ್ಣ ಪ್ರಮಾಣದ್ದು; ಕುಗ್ಗಿದುದು.

ಸಂಕ್ಳಿ (ನಾ)= ಸಂಕೋಲೆ; ಸರಪಳಿ; ಭೂಮಿ ಅಳತೆಯ ಸರಪಳಿ.

ಸಂಕ್ಳಿಬಿಗಿ (ಕ್ರಿ)= ಸಂಕೋಲೆಯಿಂದ ಬಂಧಿಸು; ಸರಪಳಿಯಿಂದ ಕಟ್ಟು.

ಸಂಗ್ (ನಾ)= ಸಂಗ; ಸಂಘ; ಒಡನಾಟ.

ಸಂಗ (ನಾ)= ಸಂಘ; ಒಡನಾಟ; ಸಹವಾಸ (ತ್ರಿಪದಿ: ಸಜ್ಜನರ ಸಂಗವದು। ಹೆಜ್ಜೇನು। ಸವಿದಂತೆ......... ಸರ್ವಜ್ಞ).

ಸಂಗಕಟ್ಟು (ಕ್ರಿ)= ಸಂಘ ನಿರ್ಮಾಣ ಮಾಡು; ಒಡನಾಟ ಮಾಡು; ಸಹವಾಸ ಮಾಡು; ಗುಂಪುಗೂಡು.

ಸಂಗಟ (ಅ)= ಸಂಗಡ; ಸಂಗಾತ; ಜೊತೆಯಲ್ಲಿ.

ಸಂಗಟಿ (ನಾ)= ಕಡಲೆ ಹಿಟ್ಟಿನಿಂದ ತಯಾರಿಸಿದ ಪಲ್ಯ, ನಂಜಿಸಿಕೊಳ್ಳುವ ಪದಾರ್ಥ.

ಸಂಗಡ (ನಾ)= ಸಂಗಾತ; ಜೊತೆಯಾದುದು; ಒಂದಾದುದು; (ಅ) = ಜೊತೆಗೆ; ಕೂಡ.

ಸಂಗಡಿ (ನಾ)= ಸಾಂಗ್ಡಿ; ಈಜುಗುಂಬಳಕಾಯಿ.

ಸಂಗಮ (ನಾ) ಸಂ.= ಕೃಷ್ಣ ಮತ್ತು ಮಲಪ್ರಭಾ ನದಿಗಳು ಒಂದುಗೂಡುವ ಪುಣ್ಯ ಕ್ಷೇತ್ರ ಕೂಡಲಸಂಗಮ. ಮಾಂಜ್ರಾ ಮತ್ತು ನಾರಂಜಾನದಿಗಳು ಸೇರುವ ಪುಣ್ಯ ಕ್ಷೇತ್ರ ಖೇಡ ಸಂಗಮ; ನಾರದಾಸಂಗಮ; ಜಹೀರಾಬಾದ ತಾಲೂಕಿನ ಝರಾಸಂಗಮ.

ಸಂಗಾಟ (ನಾ)= ಜೊತೆ; ಸಹವಾಸ; (ಅ) ಜೊತೆಯಲ್ಲಿ; ಸಂಗಡ; ಸಂಗಾತ.

ಸಂಗಾಡ (ಅ)= ಸಂಗದಲ್ಲಿ; ಜೊತೆಗೆ; ಕೂಡ.

ಸಂಗ್ತಿ (ನಾ)= ಸಂಗಟಿ (ನೋಡಿರಿ).

ಸಂಗ್ತಿ (ನಾ)= ಸಂಗತಿ; ಕೂಡುವಿಕೆ; ಸೇರುವಿಕೆ; ಗೆಳೆತನ; ಒಡನಾಟ; ವಿಷಯ; ವಿಚಾರ.

ಸಂಗ್ತಿಫಲಾ (ನಾ)= ಸಂಗತಿಯಿಂದ ಉಂಟಾದ ಲಾಭಾಲಾಭಗಳು.

ಸಂಗ್ತಿಮಾಡು (ಕ್ರಿ)= ಗೆಳೆತನ ಮಾಡು; ಒಡನಾಟ ಬೆಳೆಸು; ಕೂಟ ಮಾಡು.

ಸಂಗ್ಯಾ (ನಾ)= ಸಂಗಪ್ಪ ಹೆಸರಿಗೆ ಕೆಡಿಸಿ ಕರೆವರೂಢಿ (ಜಾನಪದ ಪ್ರಾಸ: ಸಂಗ್ಯಾ ನಿಂಗ್ಯಾ ಕೂಡಿ। ಕರ್ಕಿ ಹೊಲಾಮಾಡಿ। ಬಿರಾಡು ಬಂತೋ ಸಂಗ್ಯಾ। ಓಡಿ ಹೋಗೋ ನಿಂಗ್ಯಾ।).

ಸಂಘ (ನಾ) ಸಂ.= ಗುಂಪು; ಸಮೂಹ; ಒಕ್ಕೂಟ; ಸಂಗ.

ಸಂಘಕಟ್ಟು (ಕ್ರಿ)= ಗುಂಪುರಚಿಸು; ಒಕ್ಕೂಟ ರಚಿಸು; ಸಂಗ ಮಾಡು.

ಸಂಘಿನಾಗ (ಅ)= ಸಂಘದಲ್ಲಿ.

ಸಂಚಾರ (ನಾ) ಸಂ.= ಅಡ್ಡಾಡುವುದು; ತಿರುಗಾಟ; ಪ್ರಯಾಣ; ಪ್ರವಾಸ. (ಉದಾ: ಕರಬಸಪ್ಪನವರು ಒಮ್ಮೆ ಸಂಚಾರ ಮಾಡುತ್ತಾ ಕಂಗಟೆ ಗ್ರಾಮಕ್ಕೆ ಹೋದರು).

ಸಂಚಾರ ಮಾಡು (ಕ್ರಿ)= ಪ್ರವಾಸ ಹೊರಡು; ಪ್ರಯಾಣಿಸು; ಸಂಚರಿಸು.

ಸಂಚಿ (ನಾ)= ಚಂಚಿ; ಎಲೆ ಅಡಕೆಯ ಚೀಲ; ಚೀಲ.

ಸಂಡಾಸು (ನಾ)= ಪಾಯಖಾನೆ; ಕಕ್ಕಸು.

ಸಂಡಾಸು ಹತ್ತು (ಕ್ರಿ)= ಭೇದಿ ಪ್ರಾರಂಭವಾಗು.

ಸಂಡೇ (ನಾ) ಇಂ.= ರವಿವಾರ; ಭಾನುವಾರ; ಆದಿತ್ಯವಾರ.

ಸಂತ (ನಾ) ಸಂ.= ಸಾತ್ವಿಕ ಸ್ವಭಾವದ ವ್ಯಕ್ತಿ; ಸಾಧು; ಭಕ್ತಿಮಾರ್ಗಿ; ಭಕ್ತಿ ಪಂಥದ ಅನುಯಾಯಿ.

ಸಂತಾನ (ನಾ) ಸಂ.= ಮಗ ಅಥವಾ ಮಗಳು.

ಸಂತಾನಾಗು (ಕ್ರಿ)= ಮಕ್ಕಳು ಉಂಟಾಗು.

ಸಂತಾಪ (ನಾ) ಸಂ.= ವ್ಯಥೆ; ಅಳಲು; ಪಶ್ಚಾತ್ತಾಪ.

ಸಂತಾರಲಿ (ಕ್ರಿ)= ಸತ್ಯಾನಾಶಾಗಲಿ; ಹಾಳು ಬೀಳಾಗಲಿ (ಬೈಗುಳ).

ಸಂತಿ (ನಾ)= ಸಂತೆ; ಗೊತ್ತಾದ ದಿನ ಮತ್ತು ಸ್ಥಳದಲ್ಲಿ ವ್ಯಾಪಾರಕ್ಕಾಗಿ ಸೇರುವ ಜನರ ಗುಂಪು; ಬಾಜಾರ. (ತತ್ವಪದ: ಬರುವಾದು ಒಂಟಿ। ಹೋಗುವಾದು ಒಂಟಿ। ಎರಡು ದಿನದ ಸಂತಿ। ಎರಡು ದಿನದ ಜಾತ್ರಿ। –ರಾಮಶೆಟ್ಟಿ ಅಣವಾರ).

ಸಂತಿಥುಂಬು (ಕ್ರಿ)= ಮಾರಾಟಗಾರರು ಮತ್ತು ಖರೀದಿದಾರರು ಒಂದು ನಿರ್ಧರಿತ ಜಾಗದಲ್ಲಿ ಬಂದು ಸೇರು.

ಸಂತೋಸ (ನಾ)= ಸಂತೋಷ; ಹಿಗ್ಗು; ಆನಂದ; ತೃಪ್ತಿ; ತಣಿವು; ಸಂತಸ.

ಸಂದಲು (ನಾ)= ಸಂದಿ; ಇಕ್ಕಟ್ಟು.

ಸಂದಲ್ (ನಾ) ಉ.= ಶ್ರೀಗಂಧ; ಗಂಧದ ಕೊರಡನ್ನು ಸಾಣೆ ಕಲ್ಲಿನ ಮೇಲೆ ತಿಕ್ಕಿ ತೆಗೆದ ಲೇಪನ.

ಸಂದಲ್ ಧಿನಾ (ನಾ)= ಪೀರನಿಗೆ ಶ್ರೀಗಂಧ ಸಮರ್ಪಣೆ ದಿನ.

ಸಂದಿ (ನಾ)= ಕಿರಿದಾದ ಓಣಿ; ಗಲ್ಲಿ; ಇಕ್ಕಟ್ಟಾದ ಜಾಗ.

ಸಂದಿಗೊಂದಿ (ನಾ)= ಓಣಿ ಓಣಿ; ಗಲ್ಲಿಗಲ್ಲಿ; ಇಕ್ಕಟ್ಟಿನ ಜಾಗದಲ್ಲಿ; ಸಂಚಾರಕ್ಕೆ ಅನುಕೂಲವಲ್ಲದ ಹಾದಿ.

ಸಂದು (ನಾ)= ಇಕ್ಕಟ್ಟಿನ ಜಾಗ; ಮೂಲೆ; ಕೋನ; ಬಿರುಕು; ಎರಡು ಗೋಡೆಗಳ ಮಧ್ಯ ಬಿಟ್ಟ ಸಂದಿ; ಸಂದೋರಿ.

ಸಂದುಲು (ನಾ)= ಸಂದಲು; ಸಂದಿ; ಇಕ್ಕಟ್ಟು; ಒತ್ತೊತ್ತು.

ಸಂದುಸು (ಕ್ರಿ)= ಸಂದು ಉಂಟಾಗುವಂತೆ ಮಾಡು; ಸೇರಲು ಪ್ರಯತ್ನಿಸು.

ಸಂದೂಕು (ನಾ)= ಮರದ ಅಥವಾ ಕಬ್ಬಿಣದ ಪೆಟ್ಟಿಗೆ.

ಸಂದೂರಿ (ನಾ)= ಸಂದಿ; ಕಿರಿದಾದ ಓಣಿ; ಗಲ್ಲಿ; ಇಕ್ಕಟ್ಟಾದ ಹಾದಿ; ಸಂದೋರಿ.

ಸಂದೋರಿ (ನಾ)= ಸಂದೂರಿ (ನೋಡಿರಿ).

ಸಂದೋರಿ ಬಿಡು (ಕ್ರಿ)= ಎರಡು ಮನೆಗಳ ನಡುವೆ ಸ್ಥಳಾವಕಾಶ ಕೊಡು; ಸೇರೀ ಜಾಗ ಬಿಡು.

ಸಂಧ್ಯಾವಂದನ (ನಾ)= ಸಂಧ್ಯಾವಂದನೆ; ಉಪನಯನವಾದ ಬ್ರಾಹ್ಮಣನು ಮಾಡುವ ನಿತ್ಯ ವೈದಿಕ ಕರ್ಮಗಳಲ್ಲೊಂದು; ಸಂಜೆಯ ಪೂಜೆ.

ಸಂಪತ್ತು (ನಾ)= ಐಶ್ವರ್ಯ; ಸಿರಿ.

ಸಂಪೂರ್ಣ (ನಾ)= ತುಂಬಿದುದು; ಭರ್ತಿಯಾದುದು (ಅ) ತುಂಬಿದ; ಭರ್ತಿಯಾದ.

ಸಂಪೂರ್ಣಾಗು (ಕ್ರಿ)= ಪೂರ್ತಿಯಾಗು ತುಂಬು; ಭರ್ತಿಯಾಗು.

ಸಂಬಂಧ (ನಾ)= ಜೋಡಣೆ; ಬಾಂಧವ್ಯ; ನಂಟು.

ಸಂಬಂಧಾಗು (ನಾ)= ಸಂಯೋಗವಾಗು; ಕೂಡು; ಒಂದಾಗು.

ಸಂಬಂಧಿ, ಸಂಬಂಧಿಕ (ನಾ)= ನೆಂಟ; ಬೀಗ; ನೆಂಟತಿ; ಬೀಗತಿ.

ಸಂಬಾರ (ನಾ)= ಸಾಂಬಾರು.

ಸಂಬಾಳ (ನಾ)= ಸಮಾಳ; ಜೋಡಿ ಮದ್ದಳೆಗಳಂತಿರುವ ಒಂದು ಬಗೆಯ ಚರ್ಮವಾದ್ಯ (ಗಾದೆ: ಸಂಬಾಳ ಭಾರ್ಸೋ ಸೈವಾ ಅಂದ್ರ ಮದುಮಕ್ಕಳರಾ ಬರ್ಲಿ ಅಂದ್ನಂತ।).

ಸಂಬಾಳ್ಸು (ಕ್ರಿ)= ಸಂಬಾಳಿಸು; ಜೋಪಾನ ಮಾಡು; ಕಾಪಾಡು; ನಿಭಾಯಿಸು; ತೂಗಿಸಿಕೊಂಡು ಹೋಗು.

ಸಂಬೋಳಿ (ನಾ)= ಎಚ್ಚರಿಕೆಯ ಸೂಚನೆ (ದಲಿತರು ತಾವು ಸವರ್ಣೀಯರ ಓಣಿಯಲ್ಲಿ ಪ್ರವೇಶಿಸುವಾಗ ನೀಡುವ ಸೂಚನೆಯ ಹಕಾರಿ; ಕೂಗು).

ಸಂಭಾಯ್ತ (ನಾ)= ಸಂಭಾವಿತ; ಸಭ್ಯ; ಗೌರವಕ್ಕೆ ಪಾತ್ರನಾದ; ಮನ್ನಣೆಯುಳ್ಳವನು/ಳು.

ಸಂಭಾಳ್ಸು (ಕ್ರಿ)= ಸಂಬಾಳ್ಸು (ನೋಡಿರಿ).

ಸಂಭೋಗ (ನಾ) ಸಂ.= ಕೂಟ; ರತಿಕ್ರೀಡೆ; ಸುರತಕ್ರೀಡೆ.

ಸಂರಕ್ಷಣ (ನಾ)= ಸಂರಕ್ಷಣೆ; ಕಾಪಾಡುವಿಕೆ.

ಸಂವಾರ (ನಾ)= ಸಂಹಾರ; ತಲೆಕತ್ತರಿಸುವಿಕೆ.

ಸಂವಾರ ಮಾಡು (ಕ್ರಿ)= ಸಂಹರಿಸು; ತಲೆಕತ್ತರಿಸು.

ಸಂಶಾ (ನಾ)= ಸಂಶಯ; ಅನುಮಾನ; ಸಂದೇಹ.

ಸಂಶಾಬರು (ಕ್ರಿ)= ಸಂಶಯ ಉಂಟಾಗು; ಅನುಮಾನ ಬರು; ಸಂದೇಹಗೊಳ್ಳು.

ಸಂಸಾರ (ನಾ) ಸಂ.= ಕುಟುಂಬ; ಲೌಕಿಕಜೀವನ; ಪ್ರಪಂಚ; ಹೆಂಡತಿ ಮಕ್ಕಳು.

ಸಂಸಾರಮಾಡು (ಕ್ರಿ)= ಕುಟುಂಬದೊಂದಿಗೆ ವಾಸಿಸು.

ಸಂಸಾರಿಕ (ನಾ)= ಸಂಸಾರಸ್ಥ; ಸಂಸಾರವಂದಿಗ.

ಸಕಸಪೀರ (ನಾ)= ಬಸವಕಲ್ಯಾಣ ಸವೀಪದ ನಾರಾಯಣಪುರ ಕೆರೆಯ ಮೇಲಿರುವ ಸಕಳೇಶ್ವರ ಮಂದಿರವು ಈಗ ಸಕಸ ಪೀರ ಎಂದು ಆಗಿದೆ.

ಸಕಿ (ನಾ)= ಸಖಿ; ಗೆಳತಿ. (ಕೋಲಿನ ಹಾಡು: ಚದುರಾ ಬಾಲೇರೆದುರಾ ಬರುವಾಗ ನಗುತಾ ನಿಂತಿದನೇ ಸಕಿಯೆ).

ಸಕುನಿ (ನಾ)= ಶಕುನಿ; ಕೌರವರ ಸೋದರ ಮಾವ; ಮೋಸಗಾರ.

ಸಕ್ಕಿ (ನಾ)= ಸಕ್ಕರೆ (ಬಾಲಭಾಷೆ).

ಸಕ್ಕು ಘೊಂಬಿ (ನಾ)= ಸಕ್ಕರೆಯ ಬೊಂಬೆ; ಸಕ್ಕರೆಯಿಂದ ತಯಾರಿಸಿದ ಬೊಂಬೆ.

ಸಕ್ನಾ (ನಾ)= ಶಕುನ; ಸ್ತ್ರೀಯ ಜನನೇಂದ್ರಿಯ.

ಸಕ್ತಿ (ನಾ)= ಸಖ್ತಿ; ತಗಾದೆ; ಜೋರಿಜ ಬರಿಯಿಂದ ವಸೂಲಿ ಮಾಡುವಿಕೆ.

ಸಕ್ತಿ ಮಾಡು (ಕ್ರಿ)= ಜಬರ್ದಸ್ತಿ ಮಾಡು; ಒತ್ತಡ ಹೇರು.

ಸಕ್ರಿ (ನಾ)= ಸಕ್ಕರೆ; ಶರ್ಕರ.

ಸಕ್ರಿ ಜ್ವಾಳಾ (ನಾ)= ಸಿಹಿ ಹೆಚ್ಚುಳ್ಳ ಒಂದು ಪ್ರಕಾರದ ಜೋಳ; ಸೀತನಿಗಾಗಿ ಬಳಕೆಯಾಗುವ ಜೋಳ.

ಸಕ್ರಿ ಬ್ಯಾನಿ (ನಾ)= ಸಕ್ಕರೆ ರೋಗ; ಮಧುಮೇಹ.

ಸಕ್ರಿರ್ವಾಗ (ನಾ)= ಸಕ್ರಿಬ್ಯಾನಿ; ಸಕ್ಕರೆ ರೋಗ; ಮಧುಮೇಹ.

ಸಖತ (ಗು)= ತೀವ್ರವಾದ; ವಿಪರೀತವಾದ; ಗಟ್ಟಿಯಾದ.

ಸಖಿ (ನಾ) ಸಕಿ; ಗೆಳತಿ; ದೋಸ್ತಿ.

ಸಖ್ತಿ (ನಾ)= ಒತ್ತಾಯ; ಒತ್ತಡ ಹೇರುವಿಕೆ; ಕಾಡುವಿಕೆ; ಜಬರ್ದಸ್ತಿ.

ಸಗಟ (ನಾ)= ಒಟ್ಟು ಮೊತ್ತ; ಸಂಪೂರ್ಣ; ಠೋಕ; ಎಲ್ಲ.

ಸಗಟಯಾಪಾರ (ನಾ)= ಸಗಟು ಖರೀದಿ ವಿಕ್ರಿ.

ಸಗಟುಯಾಪಾರಿ (ನಾ)= ಠೋಕವ್ಯಾಪಾರಿ; ಸರಕುಗಳನ್ನು ಒಟ್ಟೊಟ್ಟಿಗೆ ಖರೀದಿ ವಿಕ್ರಿ ಮಾಡುವವನು.

ಸಗಾವತ (ನಾ) ಉ.= ನೆಂಟಸ್ತನ; ಬೀಗತನ.

ಸಗಾವತ ಮಾಡು (ಕ್ರಿ)= ನೆಂಟಸ್ತನ ಮಾಡು; ಬೀಗತನ ಬೆಳೆಸು.

ಸಗ್ಗಿ ಬಗ್ಗಿ (ಅ)= ವಿನಯದಿಂದ.

ಸಗ್ಗು (ಕ್ರಿ)= ಕುಗ್ಗು; ಕುಸಿ; ಮಣಿ; ಸೋಲು.

ಸಗ್ಗುತು (ಕ್ರಿ)= ಸಗ್ಗಿತು; ಕುಗ್ಗಿತು; ಕುಸಿಯಿತು; ಮಣಿಯಿತು.

ಸಗ್ತಿ (ನಾ)= ಶಕ್ತಿ; ತಾಕತ್ತು.

ಸಚ್ಚಾ (ವಿ) ಹಿಂ.= ಸತ್ಯದ; ಸತ್ಯ ನುಡಿವ.

ಸಚ್ಚಾಯಿ (ನಾ) ಹಿಂ.= ಸತ್ಯವಂತಿಕೆ.

ಸಜಾ (ನಾ) ಹಿಂ.= ಸಜೆ; ಶಿಕ್ಷೆ; ದಂಡನೆ; ಜೈಲುವಾಸ; ಕಾರಾಗೃಹವಾಸ.

ಸಜಾ ಆಗು (ಕ್ರಿ)= ಸಜೆ ಉಂಟಾಗು; ಶಿಕ್ಷೆಯಾಗು; ದಂಡನೆ ಹೊಂದು; ಜೈಲುವಾಸವಾಗು.

ಸಜಾವಟ (ನಾ)= ಸುಂದರವಾಗಿ ಕಾಣುವಂತೆ ಹೊಂದಿಸಿ ಇಡುವಿಕೆ.

ಸಜಾಸು (ಕ್ರಿ)= ಸುಂದರವಾಗಿ ಕಾಣುವಂತೆ ಹೊಂದಿಸಿಡು.

ಸಜ್ಜಕ (ನಾ)= ರವೆ; ಶಿರಾ; ಕೇಸರಿಭಾತ; ಛಜ್ಜುಕ.

ಸಜ್ಜನ (ನಾ)= ಒಳ್ಳೆಯ ವಂಶದಲ್ಲಿ ಹುಟ್ಟಿದವನು; ಒಳ್ಳೆಯ ವರ್ತನವುಳ್ಳವನು.

ಸಜ್ಜುಕ (ನಾ)= ಸಜ್ಜಕ (ನೋಡಿರಿ).

ಸಟ್ಟಾ (ನಾ)= ಸಗಟು; ಪೂರ್ಣ; ಪೂರ್ತಿ.

ಸಟ್ಟಾಬಟ್ಟಾ (ನಾ)= ಸಿರ್ಸಾಲ; ಬೇಬಾಕ್; ಸಮ ಸಮಾನ.

ಸಟ್ಟಾಯಾಪಾರ (ನಾ)= ಸಗಟು ವ್ಯಾಪಾರ; ಠೋಕ ವ್ಯಾಪಾರ.

ಸಡಕ (ನಾ)= ಷಡ್ಡಕ; ಹೆಂಡತಿಯ ತಂಗಿಯ ಅಥವಾ ಅಕ್ಕನ ಗಂಡ. (ಗಾದೆ: ಖಟಕನ ಮನ್ಯಾಗ ಆಕಳು ಬಿಡಬಾರ್ದು, ಸಡಕನ ಮನ್ಯಾಗ ಹೆಣ್ಣು ಬಿಡಬಾರ್ದು).

ಸಡಕ್ಷರಿ (ನಾ)= ಷಡಕ್ಷರಿ.

ಸಡಲ್ಲನೆ (ಅ)= ಸಡಾನೆ; ಫಡಾನೆ; ರೊಪ್ಪನೆ; ಜೋರಾಗಿ, ಸಡಲ್ಲಂತ.

ಸಡಕಾ (ವಿ)= ಕೊಳೆತಿರುವ; ಕೆಟ್ಟು ಹೋದ.

ಸಡಾನೆ (ನಾ)= ರೊಪ್ಪನೆ; ಜೋರಾಗಿ.

ಸಡಿ (ನಾ)= ಒಂಟಿಗ; ಏಕಾಂಗಿ; ಹೆಂಡತಿ ಮಕ್ಕಳಿಲ್ಲದ ಒಬ್ಬೊಂಟಿಗ.

ಸಡುಕು (ನಾ)= ಸಡಕು; ದಾರಿ; ಮಾರ್ಗ.

ಸಡುಗುರು (ನಾ)= ಸಡಗರ.

ಸಡುಲು (ವಿ)= ಸಡಿಲು; ಬಿಗಿ ಇಲ್ಲದಿರುವುದು; ಶಿಥಿಲಗೊಂಡದ್ದು.

ಸಡುಲ್ಮಾಡು (ಕ್ರಿ)= ಸಡಿಲುಗೊಳಿಸು; ಬಿಗಿ ಇಲ್ಲದಂತೆ ಮಾಡು.

ಸಡ್ಯಾಸಿ (ಅ)= ಸಡಾನೆ; ರೊಪ್ಪನೆ; ಜೋರಾಗಿ.

ಸಡ್ಕು (ನಾ)= ಸಡುಕು (ನೋಡಿರಿ).

ಸಡ್ಡುಕ (ನಾ)= ಸಡಕ (ನೋಡಿರಿ).

ಸಣಪು (ನಾ)= ಚಿಕ್ಕಪ್ಪ.

ಸಣಾವ (ನಾ)= ಸಣ್ಣವ್ವ; ಚಿಕ್ಕಮ್ಮ; ತಾಯಿಯ ತಂಗಿ; ಚಿಕ್ಕಪ್ಪನ ಹೆಂಡತಿ.

ಸಣಿ (ನಾ)= ಶನಿ.

ಸಣಿವಾರ (ನಾ)= ಶಣಿವಾರ; ಶನಿವಾರ.

ಸಣ್ಣ (ವಿ)= ಚಿಕ್ಕ; ಕಿರಿಯ; ಕಿರಿದಾದ; ಚಿಕ್ಕದಾದ.

ಸಣ್ಣಕೆಲ್ಸಾ (ನಾ)= ನೀಚಕಾರ್ಯ; ಹೀನ ಕಾರ್ಯ.

ಸಣ್ಣಾಗಿ (ಅ)= ಸಣ್ಣಗೆ; ಕೃಷವಾಗಿ; ತೆಳ್ಳಗೆ (ತ್ರಿಪದಿ: ನುಣ್ಣಾಗಿ ಹೋಗುವುದು ಸಣ್ಣಾಗಿ ಬರುವುದು। ಕಣ್ಣಿದ್ದ ಮಗನ ತರುವುದು........ಸರ್ವಜ್ಞ॥).

ಸಣ್ಣುದು = ಸಣ್ಣದು; ಸಣ್ಣನಾದುದು; ಚಿಕ್ಕದು.

ಸಣ್ತನಕಿ (ನಾ)= ಸಣ್ಣತನ; ಹೀನತನ; ಬಾಲ್ಯ.

ಸಣ್ತಾನ (ನಾ)= ಸಣ್ಣತನ; ಹೀನತನ; ಚಿಕ್ಕಂದು; ಬಾಲ್ಯ.

ಸಣ್ದು (ನಾ)= ಸಣ್ಣದು.

ಸಣ್ಸಣ್ಣ (ದ್ವಿ)= ಸಣ್ಣಸಣ್ಣ; ಕ್ಷುಲ್ಲಕ; ಹೀನ.

ಸತತ (ದ್ವಿ)= ನಿರಂತರವಾಗಿ; ಒಂದೇ ಸಮನಾಗಿ; ಅಡೆತಡೆ ಇಲ್ಲದೆ.

ಸತಾಸು (ಕ್ರಿ)= ಸತಾಯಿಸು; ಹಿಂಸಿಸು; ಪೀಡಿಸು.

ಸತಾಳಿ (ನಾ)= ಎರಡು ಕಡೆ ಹಿಡಿಕೆಯುಳ್ಳ ಹಿತ್ತಾಳೆ, ತಾಮ್ರ ಇಲ್ಲವೆ ಸ್ಟೀಲ್ ಇತ್ಯಾದಿಗಳಿಂದ ತಯಾರಿಸಲಾದ ನೀರಿನ ಅಗಲವಾದ ಭಾಂಡೆ, ಪಾತ್ರೆ.

ಸತಿ (ನಾ)= ಹೆಂಡತಿ; ಪತ್ನಿ (ದೊಡ್ಡಾಟದ ಮಾತು: ಆಹೆ, ಪ್ರಾಣ ಸತಿಯೇ ಬೇಗನೆ ಹೇಳುವಂತವಳಾಗು। ಮತ್ತಾದರೂ ಹೇಳುತ್ತೇನೆ ಕೇಳುವಂಥವನಾಗು॥).

ಸತು (ನಾ)= ಒಂದು ಬಗೆಯ ಗಟ್ಟಿ ಲೋಹ; ಕಸುವು; ಬಲ; ಶಕ್ತಿ.

ಸತುಪರೀಕ್ಷ್ಯಾ= ಸತ್ವ ಪರೀಕ್ಷೆ.

ಸತ್ತ್ವ (ನಾ)= ಶಕ್ತಿ; ಬಲ; ಸಾರ.

ಸತ್ಪುರುಷ (ನಾ)= ಸಜ್ಜನನು; ಯೋಗ್ಯನು.

ಸತ್ಯ (ನಾ)= ಖರೆ; ನಿಜ; ಯಥಾರ್ಥ.

ಸತ್ಯ ನಾರಾಯಣ (ನಾ)= ಮಹಾವಿಷ್ಣು.

ಸತ್ಯ ನಾರಾಯಣನ ಕತೆ (ನಾ)= ಸತ್ಯ ನಾರಾಯಣನ ಸತ್ವವನ್ನು ವಿವರಿಸುವ ಕಥಾನಕ.

ಸತ್ಯವಂತ (ನಾ)= ನಿಜವನ್ನು ನುಡಿಯುವವನು (ಹಾಡು: ಸತ್ಯವಂತರ ಸಂಗವಿರಲು ಭೀತಿಯಾತಕೋ। ನಾನು ನೀನು ಬಿಟ್ಟ ಮೇಲೆ ಭಯವು ಯಾತಕೋ॥).

ಸತ್ಯಾ (ನಾ)= ಸತ್ಯ; ನಿಜ; ಖರೆ; ಸತ್ವ; ದೇವಬಲ.

ಸತ್ಯಾನಾಸಾಗಲಿ (ಕ್ರಿ)= ಸತ್ವ ಕುಗ್ಗಲಿ; ಹಾಳು ಬೀಳಾಗಲಿ (ಬೈಗುಳ).

ಸತ್ಯಾನಿಂತು ಹೋಗು (ಕ್ರಿ)= ಸತ್ವ ಇಲ್ಲದಂತಾಗು; ಪ್ರಸಿದ್ಧಿನಿಂತು ಹೋಗು; ಯಾರೂ ಕೇಳದಂತಾಗು. (ಉದಾ: ಆ ಪೀರನ ಸತ್ಯಾನಿಂತು ಹೋಗೆದ; ಅಲಿಗಿ ಯಾರ್ಬೀಹೋಗ್ಲಾತಿಲ್ಲ).

ಸತ್ಯಾರ್ಥ ಪ್ರಕಾಶ (ನಾ)= ಆರ್ಯಸಮಾಜದ ಧರ್ಮ ಗ್ರಂಥ; ದಯಾನಂದ ಸರಸ್ವತಿ ಅವರ ಉಪದೇಶಗ್ರಂಥ.

ಸತ್ವ (ನಾ)= ಶಕ್ತಿ; ಬಲ; ಸಾರ; ಕೆಚ್ಚು.

ಸತ್ವಗುಣ (ನಾ)= ಸಾತ್ವಿಕ ಗುಣ (ಭಜನೆ: ಸತ್ವರಜ ತಮಗುಣಗಳ ಅಳಿದವನೆ ತ್ಯಾಗಿ ಮಡಿವಾಳಪ್ಪನೆ ಯೋಗಿ। ಚಿಂಚೋಳಿಪುರ ಬಿಟ್ಟು ಬಂದಾ ಶಿವಯೋಗಿ। ಮಹಾಂತ ಹಟಯೋಗಿ।).

ಸತ್ಸಂಗ (ನಾ)= ಸಜ್ಜನರ ಸಹವಾಸ; ಉತ್ತಮರ ಸಂಗ; ಉತ್ತಮರ ಗುಂಪು; ದೇವರ ಧ್ಯಾನ ಮಾಡುವವರ ಗುಂಪು.

ಸದರ (ನಾ) ಉ.= ಮುಖ್ಯಸ್ಥ; ಅಧ್ಯಕ್ಷ.

ಸದರಿ (ವಿ)= ಈ ಮೊದಲು ಹೇಳಿದ, ಮೇಲೆ ಕಾಣಿಸಿದ; ಉಪರೋಕ್ತ.

ಸದರಿಗಿ ಬಾ (ಕ್ರಿ)= ಎದುರಿಗೆ ಬಾ; ಸಮಕ್ಷಮಬಾ; ಕಾಣುವಂತಾಗು.

ಸದಸ್ಯ (ನಾ) ಸಂ.= ಸಂಘ, ಸಮಿತಿ, ಸಂಸ್ಥೆಗಳೊಂದಿಗೆ ಆಯಾ ನಿಯಮಾವಳಿಗನುಸರಿಸಿ ಸಂಬಂಧ ಹೊಂದಿದವನು; ಮೆಂಬರ್.

ಸದಾ (ನಾ)= ಯಾವಾಗಲೂ; ಸರ್ವದಾ; ಹಮೇಶಾ.

ಸದಾಚಾರ (ನಾ)= ಒಳ್ಳೆಯ ನಡತೆ; ಒಳ್ಳೆಯ ಆಚಾರ; ಲಿಂಗವಂತರ ಐದು ಆಚಾರಗಳಲ್ಲಿ ಒಂದು ಆಚಾರ.

ಸದಾನಂದ ಸ್ವಾಮಿ ಮಠ (ನಾ)= ಬಸವಕಲ್ಯಾಣ ನಗರದಲ್ಲಿರುವ ಒಂದು ಸನಾತನ ಮಠ. ಸದಾನಂದ ಸ್ವಾಮಿಯವರು ನಾರಾಯಣಪುರ ಮೃತ್ಯುಂಜಯ ಸ್ವಾಮಿ- ಯವರ (ಮುರ್ತುಜಾ ಹುಸೇನರ) ದೀಕ್ಷಾಗುರುಗಳು.

ಸದಾನಂದಿ ಉಧೇಉಧೇ (ನಾ)= ಜಗಂಬೆ ಅಂಬಾಬಾಯಿಯ ಭಕ್ತರು ಹಾಕುವ ಭಿಕ್ಷೆಯ ಕೂಗು.

ಸದಿ (ನಾ)= ಸದೆ; ಒಣಗಿದ ಕಸ; ಬೆಳೆಯಲ್ಲಿ ಹುಟ್ಟಿದ ಹುಲ್ಲು; ಕಳೆ.

ಸದಿಕಳಿ (ಕ್ರಿ)= ಸದೆ ಕಿತ್ತು ತೆಗೆ; ಕಳೆತೆಗೆ; ಬೆಳೆಯಲ್ಲಿ ಹುಟ್ಟಿದ ಹುಲ್ಲನ್ನು ಕಿತ್ತಿ ತೆಗೆ.

ಸದಿಕೂಲಿ (ನಾ)= ಕಳೆತೆಗೆವ ಕಾಯಕ; ಕಳೆ ತೆಗೆದ ದುಡಿಮೆಯ ಸಂಭಾವನೆ.

ಸದ್ಗುಣ (ನಾ)= ಒಳ್ಳೆಯ ಗುಣ; ಒಳ್ಳೆಯ ಸ್ವಭಾವ.

ಸದ್ಗುರು (ನಾ)= ಒಳ್ಳೆಯ ಗುರು; ಶ್ರೇಷ್ಠ ಶಿಕ್ಷಕ (ಭಜನೆ: ಸದ್ಗುರು ಸಿಗುವುದು ದುರ್ಲಾಭಾ॥ ಸಿಕ್ಕರೆ ನಮಗೆ ಭೌಲಾಭಾ ೨ ತೂಗುತಾದ ನೋಡು ಜೋಕಾಲಿ। ಸದ್ಗುರುವಿನ ದಯದಿ। ತೂಗುತಾದ ನೋಡು ಜೋಕಾಲಿ॥).

ಸದ್ಯಕ, ಸದ್ಯಾಕ (ಅ)= ಸಧ್ಯ; ಸಧ್ಯದಲ್ಲಿ; ಈ ಹೊತ್ತಿನಲ್ಲಿ.

ಸನದು (ನಾ)= ಅಧಿಕಾರ ಪತ್ರ; ಹಕ್ಕು ಪತ್ರ; ಪ್ರಮಾಣ ಪತ್ರ.

ಸನನಸನನನ (ಧ್ವ)= ಮಳೆಬರುವಿಕೆಯನಾದ (ಪದ್ಯ: ಸನನ ಸನನನ ಸವಿಯ ರಾಗದಿ। ಮಳೆಯ ಧಾರೆಯು ಕರೆಯಲಿ। ಹನಿಗಳೊಂದರೆ ಬಿಡದೆ ಮಾತೆಯ। ಉದರದಾಳದಿ ಇಳಿಯಲಿ। –ದೇಶಾಂಶ ಹುಡಗಿ).

ಸನಾನ (ನಾ)= ಸ್ನಾನ.

ಸನಾಯಿ (ನಾ)= ಸೊನಾಯಿ; ಸನಾದಿ; ಶಹನಾಯಿ; ಒಂದು ಬಗೆಯ ಮುಖವಾದ್ಯ.

ಸನಿ (ನಾ)= ಸಮೀಪ; ಶನಿಗ್ರಹ.

ಸನಿಕಾಟ (ನಾ)= ಶನಿಕಾಟ; ಶನಿ ಪೀಡೆ.

ಸನಿದೇವರು (ನಾ)= ಶನಿದೇವರು; ಶನಿಗ್ರಹ.

ಸನಿಪಾಡ್ದಾಗ (ಅ)= ಸಮೀಪದಲ್ಲಿ; ಹತ್ತಿರದಲ್ಲಿ.

ಸನಿಮಾಡ್ಕೊ (ಕ್ರಿ)= ಸಮೀಪ ಬರುವಂತೆ ಮಾಡಿಕೊ.

ಸನಿಮಾತ್ಮಾ (ನಾ)= ಶನಿ ಮಹಾತ್ಮಾ; ಶನಿದೇವರು.

ಸನಿಸನಿ (ದ್ವಿ)= ಸಮೀಪ; ಅತಿ ಸಮೀಪ; ಅತಿ ಹತ್ತಿರ.

ಸನೀಪ (ನಾ)= ಸಮೀಪ; ಹತ್ತಿರ.

ಸನ್ಕಿ (ನಾ)= ಕೋಪ; ಅತಿಕೋಪ.

ಸನ್ಕಿ ಏರು (ಕ್ರಿ)= ಅತಿಕೋಪ ಬರು, ಕೋಪನೆತ್ತಿಗೇರು.

ಸನ್ನೇಸಿ (ನಾ)= ಸನ್ಯಾಸಿ.

ಸನ್ಮತ (ನಾ)= ಒಪ್ಪಿಗೆ; ಸಮ್ಮತಿ.

ಸನ್ಮತಾಗು = ಒಪ್ಪು; ಸಮ್ಮತಿಸು.

ಸನ್ಮಾನ (ನಾ)= ವಿಶೇಷವಾದ ಗೌರವ; ಮಾನ್ಯತೆ; ಪುರಸ್ಕಾರ; ಬಕ್ಷೀಸು.

ಸನ್ಮುಕ (ನಾ)= ಷಣ್ಮುಖ; ಷಡಾನನ; ಆರ್ಮೊಗ.

ಸನ್ಯಾಕ (ಅ)= ಸನಿಹಕ್ಕೆ; ಸಮೀಪಕ್ಕೆ; ಬಲ್ಸಾಕ.

ಸನ್ಯಾಸಿ (ನಾ)= ಸನ್ಯಾಸ ದೀಕ್ಷೆ ಹೊಂದಿದವನು; ಮನೆ ಮಾರು ತೊರೆದವನು.

ಸನ್ಯಾಸಿ ಆಗು (ಕ್ರಿ)= ಸನ್ಯಾಸ ದೀಕ್ಷೆ ಹೊಂದು; ಮನೆ ಮಾರು ತೊರೆ.

ಸಪಷ್ಟ (ನಾ)= ಸ್ಪಷ್ಟ; ನಿಚ್ಚಳವಾಗಿ ಕಾಣುವಂಥಾದ್ದು.

ಸಪಷ್ಟಹೇಳು (ಕ್ರಿ)= ಸ್ಪಷ್ಟವಾಗಿ ತಿಳಿಸು; ನಿಚ್ಚಳವಾಗುವಂತೆ ಮನವರಿಕೆ ಮಾಡಿಕೊಡು.

ಸಪಾಟ (ನಾ)= ಸಮತಲ; ಚಪ್ಪಟೆ.

ಸಪೋಟಾ (ನಾ)= ಒಂದು ಬಗೆಯ ಮರ ಮತ್ತು ಅದರ ಹಣ್ಣು; ಚಕೋತಾ.

ಸಪ್ತಮಿ (ನಾ)= ಮಾಸದ ಶುಕ್ಲ ಅಥವಾ ಕೃಷ್ಣ ಪಕ್ಷದ ಏಳನೆಯ ದಿನ.

ಸಪ್ತಾ (ನಾ)= ಸಪ್ತಾಹ; ಏಳು ದಿನಗಳ ಅವಧಿಗಾಗಿ ನಿರಂತರ ನಡೆಸಲಾಗುವ ನಿರಂತರ ಭಜನೆ ಅಥವಾ ಭಗವನ್ನಾಮ ಸ್ಮರಣ.

ಸಪ್ಪಗ (ವಿ)= ಸಪ್ಪಗೆ; ರುಚಿಯಿಲ್ಲದ; ಉಪ್ಪುಖಾರದ ಪ್ರಮಾಣದ ಕೊರತೆಯಾಗಿರುವ.

ಸಪ್ಪಗಭೀಳು (ಕ್ರಿ)= ಮೆತ್ತಗಾಗು; ಸುಸ್ತಾಗು; ಕಳಾಹೀನನಾಗು.

ಸಪ್ಪಗಾಗು (ಕ್ರಿ)= ಸಪ್ಪಗೆನಿಸು; ರುಚಿ ಇಲ್ಲದಂತಾಗು; ಉಪ್ಪು, ಖಾರ ಕಡಿಮೆಯಾಗು; ಕಳೆಗುಂದು.

ಸಪ್ಪನ್ನುಚ್ಚು (ನಾ)= ಝುರಿ ಹಾಕದೆ ತಯಾರಿಸಲಾದ ಗಂಜಿ; ತಿಳಿನುಚ್ಚು.

ಸಪ್ಪಿ (ವಿ)= ಸಪ್ಪೆ; ರುಚಿಯಿಲ್ಲದ; ಉತ್ಸಾಹವಿಲ್ಲದ; ನೀರಸ; ಸೊಪ್ಪೆ; (ನಾ) ಸೊಪ್ಪು.

ಸಪ್ಪಿಮಾರಿ (ನಾ)= ಸಪ್ಪೆಮೋರೆ; ಗೆಲುವಿಲ್ಲದ ಮುಖ; ಪೆಚ್ಚು ಮೋರೆ.

ಸಪ್ಪುಗ (ವಿ)= ಸಪ್ಪಗ (ನೋಡಿರಿ).

ಸಪ್ಪುಗಾಗು (ಕ್ರಿ)= ಸಪ್ಪಗಾಗು (ನೋಡಿರಿ).

ಸಪ್ಪುಳು (ನಾ)= ಸಪ್ಪಳ; ಶಬ್ದ; ಸದ್ದು; ಅವಾಜು.

ಸಪ್ಪುಳು ಮಾಡು (ಕ್ರಿ)= ಸದ್ದು ಮಾಡು; ಗದ್ದಲ ಎಬ್ಬಿಸು.

ಸಫಾಯಿ (ನಾ)= ನೈರ್ಮಲ್ಯ; ಸ್ವಚ್ಛತೆ.

ಸಫಾಯಿಗಾರ (ನಾ)= ಸಫಾಯಿ ಕಾರ್ಯವನ್ನು ನೆರವೇರಿಸುವವನು. ಬೀದಿ ಮತ್ತು ಚರಂಡಿ ಸ್ವಚ್ಛಗೊಳಿಸುವವನು.

ಸಬುದ (ನಾ)= ನಿಂದೆ; ಅಪವಾದ; ಶಬ್ದ (ಬೀಸುವ ಹಾಡು: ೧. ತಾ ಮಾಡಿದ ಪಾಪಾ ತಾಗಳಿಬೇಕ। ಶಿವನ ಮ್ಯಾಲ್ಯಾಕ ಸಬುದಿಡಬೇಕ।। ೨. ಬಂಜೆಂಬ ಸಬುದ ನಾ ತಾಳಾಲಾರೆ).

ಸಬುದಿಡು (ಕ್ರಿ)= ನಿಂದೆ ಮಾಡು; ಅಪವಾದ ಹೇರು.

ಸಬುರು (ನಾ) ಉ.= ಸಬರು; ಸಹನೆ; ತಾಳ್ಮೆ.

ಸಬೂರಿ (ನಾ) ಉ.= ಸಬುರು; (ನೋಡಿರಿ).

ಸಬ್ಯಾ (ನಾ) = ಸಭೆ; ಸ್ನೇಹ ಕೂಟ.

ಸಬುಸ್ಗಿ (ನಾ)= ಸಬ್ಬಸಿಗೆ; ಒಂದು ಪ್ರಕಾರದ ತರಕಾರಿ ಸೊಪ್ಪು.

ಸಭಾ (ನಾ)= ಸಭೆ; ಸ್ನೇಹಕೂಟ; ಸಮಾರಂಭ.

ಸಮಂದಿ (ನಾ)= ಸಮಾಧಿ; ಹೆಣದ ಕುಣಿಯ ಮೇಲೆ ನಿರ್ಮಿಸಿದ ಸ್ಮಾರಕ.

ಸಮಂದಿಕಟ್ಟು (ಕ್ರಿ)= ಸಮಾಧಿಯನ್ನು ನಿರ್ಮಿಸು.

ಸಮಂದಿ ಸೇರ್ಲಿ (ಕ್ರಿ)= ಸತ್ತು ಕುಣಿ ಸೇರುಂತಾಗಲಿ.

ಸಮಗಾರ (ನಾ)= ಚರ್ಮದ ಕೆಲಸ ಮಾಡುವವನು.

ಸಮಗಾರ ಹರಳಯ್ಯ (ನಾ)= ಕಲ್ಯಾಣ ಕ್ರಾಂತಿಗೆ ಕಾರಣ ಕರ್ತನಾದ ಒಬ್ಬ ಚರ್ಮ ಕಾಯಕದ ಶರಣ.

ಸಮಜಾಸು (ಕ್ರಿ)= ಸಮಾಧಾನ ಪಡಿಸು; ಸಾಂತ್ವನ ಗೊಳಿಸು.

ಸಮತಾವಾದ, ಸಮ್ತಾವಾದ (ನಾ)= ಕಮ್ಯೂನಿಷ್ಟ ವಿಚಾರ ಧಾರೆ.

ಸಮತೂಕ (ನಾ)= ಸಮಾನ ಪ್ರಮಾಣ; ಸಮಸಮ.

ಸಮಧಾನ (ನಾ)= ಸಮಾಧಾನ; ಮನಸ್ಸಿನ ಶಾಂತಿ; ನೆಮ್ಮದಿ.

ಸಮಧಾನ ಮಾಡು (ಕ್ರಿ)= ಸಮಾಧಾನ ಮಾಡು; ಮನಸ್ಸಿಗೆ ನೆಮ್ಮದಿಗೊಳಿಸು; ಹಸಿದ ಕೂಸಿಗೆ ಹಾಲೂಡಿ ಇಲ್ಲವೆ ಉಣಿಸಿ ಶಾಂತಗೊಳಿಸು.

ಸಮಯ (ನಾ)= ಕಾಲ; ವೇಳೆ; ಸಕಾಲ; ಅವಕಾಶ.

ಸಮರ್ಥರಾಮದಾಸ (ನಾ)= ಮಹಾರಾಷ್ಟ್ರದ ಒಬ್ಬ ಸಂತ.

ಸಮಾಚಾರ (ನಾ)= ಸುದ್ದಿ; ಸಂಗತಿ; ವರ್ತಮಾನ.

ಸಮಾಜ (ನಾ)= ಗುಂಪು; ಸಮೂಹ; ಸಾಂಘಿಕತೆ.

ಸಮಾನ (ನಾ)= ಎಣೆ; ಸಾಟಿ; ಸಮ.

ಸಮಾಪ್ತಿ (ನಾ)= ಕೊನೆ; ಮುಕ್ತಾಯ; ಮಂಗಲ; ಕೊನೆಗೊಂಡದ್ದು; ಮುಗಿದದ್ದು.

ಸಮಾಳ (ನಾ)= ಕೊರಳಿಗೆ ಹಾಕಿಕೊಂಡು ಇಲ್ಲವೆ ಹೆಗಲಿಗೆ ತೂಗು ಹಾಕಿಕೊಂಡು ಬಾರಿಸುವ ತೊಗಲಿನ ಜೋಡುವಾದ್ಯ; ಸಂಬಾಳ.

ಸಮಾಳ ಭಾರ್ಸು (ಕ್ರಿ)= ಸಂಬಾಳ ವಾದ್ಯವನ್ನು ಕೈಯಿಂದ ಬಾರಿಸಿ ನುಡಿಸು.

ಸಮೀಪ (ನಾ) ಸಂ.= ಹತ್ತಿರ; ಸಾಮೀಪ್ಯ; (ವಿ) ಹತ್ತಿರದ; ಸಮೀಪದ.

ಸಮ್ದುರು (ನಾ)= ಕಡಲು; ಸಾಗರ; ಸಮುದ್ರ; ಕೆಲವು ಊರುಗಳ ಹೆಸರು. ಉದಾ: ಹೊಳ ಸಮ್ದುರು.

ಸಮ್ದೆ (ವಿ) ಮ.= ಸಮಸ್ತ; ಎಲ್ಲ; ಎಲ್ಲರು.

ಸವದಿ (ನಾ) = ಪದ್ಧತಿ, ರೀತಿ; ರೂಢಿ. (ಗಾದೆ : ಸವದಿ ಇಲ್ದ ಸವದಿ, ಅದಕ್ಯಾಕ ಖೌದಿ).

ಸವಾರ (ನಾ)= ಕುದುರೆ, ಒಂಟೆ, ಎತ್ತು,ವಾಹನ ಇತ್ಯಾದಿಗಳನ್ನು ಹತ್ತಿದವನು.

ಸವಾರಾಗು (ಕ್ರಿ)= ವಾಹನವನ್ನು ಹತ್ತು; ಕುದುರೆ, ಒಂಟೆ, ಎತ್ತು ಮೊದಲಾದವನ್ನು ಹತ್ತಿ ಬಾ.

ಸವಾರಿ (ನಾ)= ಕುದುರೆ, ಕಂಟಲೆ, ಒಂಟೆ ಇಲ್ಲವೆ ಇತರೆ ವಾಹನಗಳನ್ನು ಹತ್ತುವಿಕೆ; ವಾಹನ ಹತ್ತಿ ಹೋಗುವಿಕೆ ಅಥವಾ ಬರುವಿಕೆ. ಮೈ ಮೇಲೆ ದೇವರ ಬರುವಿಕೆ.

ಸವಾರಿ ಏಳು (ಕ್ರಿ) = ಮೈ ಮೇಲೆ ದೇವರು ಬರು.

ಸವಾರಿಥುಂಬು (ಕ್ರಿ) = ಸವಾರಿ ಏಳು (ನೋಡಿರಿ).

ಸವಾರಿ ಬರು (ಕ್ರಿ) = ಸವಾರಿ ಏಳು (ನೋಡಿರಿ).

ಸವಾರಿ ಮಾಡು (ಕ್ರಿ)= ಪ್ರಾಣಿಗಳನ್ನು ಇಲ್ಲವೆ ಇತರೆ ವಾಹನಗಳನ್ನು ಏರಿ ಹೋಗು ಇಲ್ಲವೆ ಬಾ.

ಸವಾಲು (ನಾ)= ಉ.= ಪ್ರಶ್ನೆ; ಕೇಳುವಿಕೆ; ವಿಚಾರಣೆ; ಮುಳ್ಳಾವಿಗೆ ಮೇಲೆ ನಿಂತ ಗಣಾಚಾರಿಯ ಬೇಡಿಕೆ.

ಸವಾಲು ಹಾಕು (ಕ್ರಿ)= ಪ್ರಶ್ನೆ ಮಾಡು; ವಿಚಾರಿಸು; ಸ್ಪರ್ಧೆಗೆ ಆಹ್ವಾನಿಸು; ಬೇಡಿಕೆ ಒಡ್ಡು.

ಸವಾಸೇರು (ನಾ)= ಒಂದು ಅಳತೆ; ಒಂದೂ ಕಾಲು ಸೇರು.

ಸವಿ (ಕ್ರಿ)= ಸವೆ; ದುಡಿ; ನುಣ್ಣಗಾಗು; ಕೊರೆಯಲ್ಪಡು.

ಸವಿತಾ ಸಮಾಜ (ನಾ)= ಕ್ಷೌರಿಕ ಜನಾಂಗ; ಹಡಪದ ಸಮಾಜ; ಸವಿತಾ ಸಮಾಜದ ಸಂಘಟನೆ.

ಸವುಟು (ನಾ)= ಸೌಟು; ಲೋಹದಿಂದ ತಯಾರಿಸಿದ, ಅನ್ನದ ಪಾತ್ರೆಯಲ್ಲಿ ಆಡಿಸುವ ಹುಟ್ಟು; ಉದ್ದಾದ ದೊಡ್ಡ ಚಮ್ಮ ಚ; ಸಟ್ಟುಗ.

ಸವುತಿ ಕಾಯಿ (ನಾ)= ಒಂದು ಬಗೆಯ ಬಳ್ಳಿಯ ಕಾಯಿ; ತರಕಾರಿಯ ಕಾಯಿಯ ಒಂದು ಪ್ರಕಾರ.

ಸವುರು (ಕ್ರಿ)= ಸವರು; ಸ್ವಚ್ಛ ಮಾಡು; ಬಳಿ; ಓರಣ ಮಾಡು ಕಾಲಹರಣ ಮಾಡು.

ಸವುರ್ಸು (ಕ್ರಿ) = ಸವರಿಸು; ಸಂವರಿಸು; ಕಾಲವ್ಯಯ ಮಾಡು.

ಸವುಲತ್ತು (ನಾ)= ಸೌಕರ್ಯ; ಅನುಕೂಲತೆ, ಅವಕಾಶ; ರಿಯಾಯಿತಿ.

ಸವುಳು (ನಾ)= ಸೌಳು; ಚವುಳು; ಉಪ್ಪಿನ ಅಂಶದಿಂದ ಕೂಡಿದ ಮಣ್ಣು; ಕ್ಷಾರಭೂಮಿ.

ಸವ್ವು (ನಾ)= ಸವಡು; ಸಮಯಾನುಕೂಲ.

ಸವ್ತಿ (ನಾ)= ಸವತಿ (ನೋಡಿರಿ).

ಸವ್ರುಸು (ಕ್ರಿ)= ಸವುರ್ಸು (ನೋಡಿರಿ).

ಸವ್ವಲ (ನಾ)= ಸವಾಲು; ಪ್ರಶ್ನೆ.

ಸಸಿ (ನಾ)= ಮೊಳಕೆ; ದೇವಿಯ ಘಟ ಸ್ಥಾಪನೆಯಲ್ಲಿ ಮೊಳೆತ ಮೊಳಕೆ (ಕ್ರಿ) ಕೀಳು; ಉತ್ಪಾಟಿಸು; ಕಾಯಿಪಲ್ಯ ಹಸನುಗೊಳಿಸು.

ಸಸ್ಟಿ (ನಾ)= ಷಷ್ಟಿ; ಪಕ್ಷದ ಆರನೆಯ ದಿನ.

ಸಸ್ತಾ (ವಿ) ಹಿಂ.= ಅಗ್ಗ; ಕಡಿಮೆ ದರ (ಹಿಂದಿಗಾದೆ: ಸಸ್ತಾ ವಸ್ತು ರಸ್ತೆಯ ಮೇಲೆ).

ಸಸ್ತುರು (ನಾ)= ಶಸ್ತ್ರ; ಗಣಾಚಾರಿಯ ಕೈಯಲ್ಲಿಯ ಶಸ್ತ್ರ; ಚಾಕು; ಚೂರಿ, ಜಂಬೆ ಇತ್ಯಾದಿ.

ಸಽಕಾರ (ನಾ)= ಸಹಕಾರ; ಪರಸ್ಪರ ಸಹಾಯ.

ಸಽಕಾರ ಸಂಗ (ನಾ)= ಸಹಕಾರ ಸಂಘ.

ಸಽಜ (ನಾ)= ಸಹಜ; ಸರಳ; ನೇರ; ನೈಜ; (ಅ)= ಸರಿಯಾದ; ನೇರವಾದ.

ಸಽನ (ನಾ)= ಸಹನೆ; ತಾಳ್ಮೆ.

ಸಽನ ಮಾಡು (ಕ್ರಿ)= ಸಹಿಸು; ತಾಳು.

ಸಳಯಿ, ಸಳಾಯಿ, ಸಳ್ಳೈ (ನಾ)= ಸಳಾಯಿ; ಸಲಾಕೆ; ಕಬ್ಬಿಣದ ಹಳೆಯ ಹಂಚಿನಿಂದ ತಯಾರಿಸಿದ ಗೋಲಾಕಾರದ ಆಟಿಕೆ; ಉದ್ದನೆಯ ಕಬ್ಬಿಣದ ಸಲಾಕೆ.

ಸಳಳಳ (ನಾ)= ಹಾವಿನ ಸಂಚರಿಸುವ ಸದ್ದು.

ಸಳಾಕಿ (ನಾ)= ಸಳಯಿ (ನೋಡಿರಿ).

ಸಾಂಗಪಾಂಗ (ನಾ) ಮ.= ವಿಧಿವತ್ತಾದುದು; ಶಾಸ್ತ್ರೋಕ್ತವಾದುದು;ವ್ಯವಸ್ಥೆ; ಮಾರ್ಗದರ್ಶನ.

ಸಾಂಬ (ನಾ)= ಶಿವ; ಈಶ್ವರ. (ಭಜನೆ: ಸಾಂಬ ಸದಾಶಿವ ಸಾಂಬ ಸದಾಶಿವ। ಸಾಂಬ ಸದಾಶಿವ ಸಾಂಬಸದಾ॥).

ಸಾಂಬಾರ (ನಾ)= ಹುಳಿಬೇಳೆ; ಹುಳಿಸಾರು.

ಸಾಕು (ಕ್ರಿ)= ಬೇಡ; ಅಗತ್ಯ ಪೂರೈಸಿದೆ (ಹಾಡು: ಸಾಕು ಸಾಕೈ ಕುಟಿಲ ಜಂಗಮ ಮೂರ್ತಿಗಳ ಕುಣಿದಾಟವು। ಬೇಕು ನಿಜ ಜಂಗಮ ನಿಸ್ವಾರ್ಥಿಗಳ ಒಡನಾಟವು॥); ಸಲಹು.

ಸಾಕು ಮಾಡು (ಕ್ರಿ)= ನಿಲ್ಲಿಸು; ಮುಗಿಸು.

ಸಾಕ್ಸಿ (ನಾ)= ಸಾಕ್ಷಿ; ಪುರಾವೆ; ರುಜುವಾತು.

ಸಾಕ್ಸಿದಾರ (ನಾ)= ಸಾಕ್ಷಿದಾರ; ಪುರಾವೆದಾರ; ರುಜುವಾತುದಾರ.

ಸಾಗವಾನಿ (ನಾ)= ತೇಗದ ಮರ; ಸಾಗ್ವಾನಿ.

ಸಾಗು (ಕ್ರಿ)= ಮುಂದಕ್ಕೆ ಹೋಗು; ಚಾಗು.

ಸಾಗು ಮಾಡು (ಕ್ರಿ)= ಕೃಷಿ ಕಾರ್ಯ ಮಾಡು.

ಸಾಗುಸು (ಕ್ರಿ)= ಸಾಗಿಸು; ಹೋಗುವಂತೆ ಮಾಡು; ಚಾಗಿಸು.

ಸಾಗ್ವಾನಿ (ನಾ)= ಸಾಗವಾನಿ; ತೇಗದ ಮರ.

ಸಾಚಾ (ವಿ) ಹಿಂ.= ಪ್ರಾಮಾಣಿಕ (ನಾ) ಪ್ರಾಮಾಣಿಕ ವ್ಯಕ್ತಿ.

ಸಾಟಿ (ನಾ) ಮ.= ಅರವತ್ತು (ಗಾದೆ: ಸಾಟಿ ಧಾಟಿದ ಮ್ಯಾಲ ಬುದ್ನಾಟಿ).

ಸಾಡ ಒಂಟಿ (ನಾ)= ಗಂಡು ಒಂಟೆ.

ಸಾಡೇಸಾತ್ (ನಾ) ಹಿಂ.= ಏಳೂವರೆ; ಒಂದು ಸಂಖ್ಯೆ.

ಸಾಡೇಸಾತಿ (ನಾ) ಹಿಂ.=ಅನಿಷ್ಟ; ಅನಿಷ್ಟ ವ್ಯಕ್ತಿ; ಕೆಟ್ಟ ಮನುಷ್ಯ; ಕೇಡು ತರುವವನು.

ಸಾಣಿ (ನಾ)= ಚಾಕೂ, ಚೂರಿ, ಕತ್ತರಿ, ಕುಡಗೋಲು, ಕೊಡಲಿ ಇತ್ಯಾಗಳನ್ನು ಹರಿತಗೊಳಿಸುವಿಕೆ; ಮಸೆಯುವಿಕೆ; ಚೂಪುಗೊಳಿಸುವಿಕೆ.

ಸಾಣಿಕಲ್ಲು (ನಾ)= ಕತ್ತಿ, ಕುಡಗೋಲು, ಚಾಕೂ, ಚೂರಿ ಇತ್ಯಾದಿಗಳನ್ನು ಹರಿತಗೊಳಿಸಲು ಬಳಸುವ ಕಲ್ಲು; ಸಾಣೆಕಲ್ಲು; ಗಂಧದ ಕೊರಡನ್ನು ತೇಯುವ ಕಲ್ಲು.

ಸಾಣಿ ಹಿಡುಸು (ಕ್ರಿ)= ಕತ್ತಿ ಕುಡುಗೋಲಾದಿಗಳನ್ನು ಹರಿತಗೊಳಿಸಲು ಹಚ್ಚು; ಕೂರುಗೊಳಿಸು; ಮಸೆಯಲು ಹಚ್ಚು; ಮಸೆಗಲ್ಲಿನ ಮೇಲೆ ತಿಕ್ಕಲು ಹಚ್ಚು; ಸಾಣೆ ಹಿಡಿಸು.

ಸಾಣ್ಣಿ (ನಾ)= ನೆಲದ ಸಾರಣೆ; ನೆಲಕ್ಕೆ ಸೆಗಣಿಯ ರಾಡಿ ಬಳಿದು ನುಣುಪುಗೊಳಿಸುವಿಕೆ.

ಸಾಣ್ಣಿಮಾಡು (ಕ್ರಿ)= ಸೆಗಣಿಯ ರಾಡಿಯನ್ನು ಬಳಿದು ನೆಲವನ್ನು ನುಣುಪುಗೊಳಿಸು; ಗೋಡೆಯ ಸಾರಣೆ ಮಾಡು.

ಸಾತ (ನಾ)= ಏಳರ ಅಂಕಿ; ಸಪ್ತ.

ಸಾತ ಬದ್ಮಾಸ (ನಾ)= ಏಳು ಪಟ್ಟು ದುರುಳ (ಬೈಗುಳ).

ಸಾತಲುಚ್ಛಾ (ನಾ)= ಸಾತ ಬದ್ಮಾಸ; ಏಳುಪಟ್ಟು ದುರುಳ (ಬೈಗುಳ).

ಸಾತಿ (ನಾ)= ಸ್ವಾತಿನಕ್ಷತ್ರ ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ, ಸಾಥಿ; ಸಂಗಾತಿ

ಸಾತಿಕ (ನಾ)= ಸಾತ್ವಿಕ; ಒಳ್ಳೆಯ ಸ್ವಭಾವದವನು.

ಸಾತ್ವಿ (ನಾ) ಮ.= ಏಳನೆಯ ವರ್ಗ.

ಸಾದಾ (ವಿ)= ಸರಳ; ಸಾಮಾನ್ಯ.

ಸಾದಾಸೀದಾ (ವಿ)= ಸರಳ ಸ್ವಭಾವದವನು; ನೇರ ನಡೆಯುಳ್ಳವನು.

ಸಾದು (ನಾ)= ಸಾಧು; ಸನ್ಯಾಸಿ; ಯತಿ.

ಸಾದುಸು (ಕ್ರಿ)= ಸಾಧಿಸು; ಕೆಟ್ಟದ್ದನ್ನು ನೆರವೇರಿಸು; ವಂಚಿಸು.

ಸಾಧಕ (ನಾ)= ಸಾಧನೆಯ ಮಾರ್ಗ ಹಿಡಿದವನು.

ಸಾಧಕಿ (ನಾ)= ಸಾಧನೆಯ ಮಾರ್ಗ ಹಿಡಿದವಳು.

ಸಾಧನ (ನಾ)= ಸಾಧಿಸುವಿಕೆ.

ಸಾಧನಾ ಮಾಡು (ಕ್ರಿ)= ಪರಿಶ್ರಮ ಪಟ್ಟು ಸಾಧಿಸು.

ಸಾಧಾರ್ಣ (ನಾ)= ಸಾಧಾರಣ; ಸರ್ವಸಾಮಾನ್ಯ.

ಸಾಧು (ನಾ)= ಸನ್ಯಾಸಿ; ಯತಿ (ಭಜನೆ: ಶಿವಲೋಕದಿಂದ ಒಬ್ಬ ಸಾಧು ಬಂದಾನವ್ವ ತಂಗಿ। ಸ್ವಾಮಿ ಬಂದಾನವ್ವ ತಂಗಿ।। ಶಿವ ನಾಮ ನುಡಿಯ ಕೇಳಿ ಅಲ್ಲೇನಿಂತಾನವ್ವ। ಕೇಳೆ ಹಡೆದವ್ವ।।).

ಸಾಧು ಆಗು (ಕ್ರಿ)= ಸನ್ಯಾಸ ದೀಕ್ಷೆ ಹೊಂದು; ಸನ್ಯಾಸಿಯಾಗು.

ಸಾನಿ (ನಾ)= ಸ್ವಾಮಿನಿ; ವೇಶ್ಯೆಯರ ಹೆಸರಿನೊಂದಿಗೆ ಸೇರುವ ಉತ್ತರ ಪದ (ರಂಗಾಸಾನಿ, ಗಂಗಾಸಾನಿ ಇತ್ಯಾದಿ).

ಸಾನುಬೂತಿ (ನಾ)= ಸಹಾನುಭೂತಿ; ಅನುಕಂಪ.

ಸಾಪು (ವಿ)= ನುಣುಪಾದ; ಸಮತಲವಾದ; ಸ್ವಚ್ಛಗೊಂಡ; ನುಣುಪಾದ; ನುಣ್ಣನೆಯ; ಒರಟು ಇರಲಾರದ.

ಸಾಪು ಮಾಡು (ಕ್ರಿ)= ನುಣುಪುಗೊಳಿಸು; ಸಮತಲಗೊಳಿಸು; ಸ್ವಚ್ಛಗೊಳಿಸು; ನುಣ್ಣಗಾಗುವಂತೆ ಬೋಳಿಸು; ಕಿಸೆಗೆ ಕತ್ತರಿ ಹಾಕು.

ಸಾಪ್ಪಿ (ನಾ)= ಸೊಪ್ಪೆ; ಜೋಳದ ದಂಟಿನ ಇಲ್ಲವೆ ಒಣಗಿದ ಗಿಡದ ಎಲೆ; ಸಪ್ಪೆ; ಕಬ್ಬಿನ ವಾಡಿ.

ಸಾಪ್ಪುಳು (ನಾ)= ಸಪ್ಪಳ; ಸೊಪ್ಪಳ; ಸದ್ದು; ಶಬ್ದ.

ಸಾಫು (ವಿ)= ಸಾಪು (ನೋಡಿರಿ).

ಸಾಬ (ನಾ)= ಸಾಹೇಬ; ಅಧಿಕಾರಿ.

ಸಾಬಾನು (ನಾ)= ಸಾಬೂನು; ಬಟ್ಟೆ ತೊಳೆಯುವ ಸೋಪು; ಸ್ನಾನದ ಸೋಪು.

ಸಾಬೀತು (ನಾ) ಉ.= ರುಜುವಾತು ಗೊಳಿಸುವಿಕೆ.

ಸಾಬೀತು ಮಾಡು (ಕ್ರಿ)= ರುಜುವಾತುಗೊಳಿಸು; ಸಿದ್ಧಪಡಿಸು.

ಸಾಬೂತು (ಅ)= ಇದ್ದದ್ದಿದ್ದಂತೆ; ಇದ್ದ ಹಾಗೆ

ಸಾಬೂದಾಣಿ (ನಾ)= ಸಾಬೂ ಅಕ್ಕಿ.

ಸಾಬ್ರು (ನಾ)= ಸಾಹೇಬರು; ಅಧಿಕಾರಿಗಳು.

ಸಾಮಯಿಕ (ನಾ)= ಸಮಸಮಾನವಾದದ್ದು; (ವಿ) ಸಮಸಮಾನವಾದ.

ಸಾಮಾನು (ನಾ)= ಪದಾರ್ಥ; ವಸ್ತು; ಸಲಕರಣೆ; ಸಾಮಗ್ರಿ; ಒಡವೆ; ಶಿಶ್ನ; ಯೋನಿ.

ಸಾಮು (ನಾ)= ವ್ಯಾಯಾಮ; ಶರೀರ ಬಲ ಸಂವರ್ಧನೆ; ಕಸರತ್ತು.

ಸಾಯಿ (ಕ್ರಿ)= ಮರಣಹೊಂದು.

ಸಾಯಿ (ನಾ)= ಸಾಯಿನಾಥ; ಪುಟ್ಟರ್ತಿಯ ಸಾಯಿಬಾಬಾ; ಶಿರಡಿಯ ಸಾಯಿಬಾಬಾ.

ಸಾಯಿತ್ಯಾ (ನಾ)= ಸಾಹಿತ್ಯ; ಸಲಕರಣೆ; ಅಡಿಗೆಯ ಸಾಮಗ್ರಿ.

ಸಾಯಿನಾಥ (ನಾ)= ಪುಟ್ಟರ್ತಿಯ ಸಾಯಿಬಾಬಾ; ಶಿರಡಿಯ ಸಾಯಿಬಾಬಾ.

ಸಾಯಿರಾಮ್ಜಿ (ನಾ)= ಸಾಯಿಬಾಬಾನ ಭಕ್ತರು ಸಲ್ಲಿಸುವ ವಂದನೆಯ ಪದ.

ಸಾರಂಗ (ನಾ)= ಹುಲ್ಲೆ; ಜಿಂಕೆ; ಬಾರಾಸಿಂಗಿ; ಮೈಮೇಲೆ ಚುಕ್ಕೆ ಇರುವ ಚಿರತೆ; ಒಂದು ಪ್ರಕಾರದ ಮುಖವಾದ್ಯ.

ಸಾರಣಿ (ನಾ)= ಸಾರಿಸುವಿಕೆ; ಸೆಗಣಿಯ ರಾಡಿಯಿಂದ ನೆಲವನ್ನು ನುಣುಪುಗೊಳಿಸುವಿಕೆ; ಸಾರಣೆ; ಸಾಣ್ಣೆ; ಸಾರ್ಣೆ.

ಸಾರಣೆ ತೀರಣೆ (ನಾ)= ಸಾರಣೆಯ ಕಾರ್ಯವನ್ನು ತೀರಿಸುವಿಕೆ.

ಸಾರತಿ (ನಾ)= ಸಾರಥಿ; ಬಯಲಾಟದ ಸೂತ್ರಧಾರಿ (ಬಯಲಾಟದ ಮಾತು: ನಾನು ದಾರೆಂದು ಕೇಳಿದೆಯಲ್ಲಾ ಸಾರತಿ। ಹೇಳ್ತೀನಿ ಕೇಳು ನೀ ಅತಿ ಜಾಗ್ರತಿ॥).

ಸಾರಿ (ನಾ)= ಸಲ; ಬಾರಿ; ಸರದಿ; ಪಾಳಿ.

ಸಾರಿಸು (ಕ್ರಿ)= ನೆಲವನ್ನು ಸೆಗಣಿಯ ರಾಡಿಯಿಂದ ನುಣುಪುಗೊಳಿಸು; ಸುಳ್ಳನ್ನು

ತೇಲದಂತೆ ಮಾಡು; ಹುಳುಕನ್ನು ಮುಚ್ಚಿ ಮರೆಮಾಡು.

ಸಾರ್ಸಾದು ಸೂರ್ಸಾದು (ನು)= ಸಾರಣೆ ಮತ್ತು ಇತರೆ ಕೆಲಸ.

ಸಾರ್ಸು (ಕ್ರಿ)= ಸಾರಿಸು (ನೋಡಿರಿ).

ಸಾಲ್ (ನಾ)= ಸಾಲು; ಪಂಕ್ತಿ; ಶ್ರೇಣಿ (ಭಜನೆ: ಪರ್ವತಗಿರಿ ಮ್ಯಾಲ್ನಂದೀ ಕೋಲ್। ಮೆರಿಯುತ ಹೊಂಟವ ಸಾಲಿಗಿ ಸಾಲ್॥).

ಸಾಲ (ನಾ)= ಕಡ; ಉದ್ದರಿ; ಬಾಕಿ; ಹೆರವರಿಂದ ಶೇಕಡಾವಾರು ಬಡ್ಡಿಯ ಮೇಲೆ ತರುವ ಹಣದ ಅಸಲು.

ಸಾಲಗಾರ (ನಾ)= ಸಾಲವನ್ನು ಕೊಟ್ಟವ್ಯಕ್ತಿ.

ಸಾಲಾ (ನಾ)= ಬಡ್ಡಿಯಿಂದ ತಂದಸಾಲ; ಸಾಲು; ಪಂಕ್ತಿ; ಶ್ರೇಣಿ (ನಾ) ಉ. ಹೆಂಡತಿಯ ತಮ್ಮ ಅಥವಾ ಅಣ್ಣ.

ಸಾಲಿ (ನಾ)= ಶಾಲೆ; ಪರಿಪಾಠ; ರೂಢಿ ಉ. ಹೆಂಡತಿಯ ತಂಗಿ/ಅಕ್ಕ.

ಸಾಲಿಕಲಿ (ಕ್ರಿ)= ವಿದ್ಯಾಭ್ಯಾಸ ಮಾಡು; ಅಭ್ಯಾಸ ಮಾಡು; ರೂಢಿ ಮಾಡಿಕೊ.

ಸಾಲಿಗಿ ಸಾಲ್ (ಅ)= ಸಾಲು ಸಾಲಾಗಿ; ಪಂಕ್ತಿಯಲ್ಲಿ; ಅನೇಕ ಸಾಲುಗಳಲ್ಲಿ (ಭಜನೆ: ಪರ್ವತಗಿರಿ ಮ್ಯಾಲ ನಂದಿಯ ಕೋಲ್ ಮೆರೆಯುತ ಹೊಂಟವ ಸಾಲಿಗಿಸಾಲ್).

ಸಾಲು (ನಾ)= ಬೆಳೆಯ ಪಂಕ್ತಿ: ಕಾಗದದ ಓಳಿ.

ಸಾಲ್ಗಾರ (ನಾ)= ಸಾಲಗಾರ (ನೋಡಿರಿ).

ಸಾಲ್ಗಿರಾ (ನಾ)ಉ.= ಹುಟ್ಟು ಹಬ್ಬ; ಜನ್ಮದಿನ.

ಸಾಲೊಳ್ಳಿ (ನಾ)= ಸಲುವಳಿ; ಸಾಲಾವಳಿ; ಪರಂಪರೆ; ರೂಢಿ; ಪದ್ಧತಿ; ಬಳಕೆ.

ಸಾವಡಿ (ನಾ)= ಸವಡಿ; ಕೃಷಿ ಕಾಯಕದಲ್ಲಿ ಕೂಡಿ ದುಡಿಯುವ ಸಹಕಾರಿ ಪದ್ಧತಿ; ಪರಸ್ಪರ ಸಹಕಾರದಿಂದ ಕೃಷಿಕಾರ್ಯದ ನೆರವೇರಿಸುವಿಕೆ.

ಸಾವಡಿ ಕಲಿ (ಕ್ರಿ)= ಕೃಷಿಕಾಯಕದಲ್ಲಿ ಇಬ್ಬರು, ಮೂವರು ಸಹಕಾರದಿಂದ ದುಡಿಯಲು ಒಟ್ಟುಗೂಡು; ಕೂಡಿದುಡಿ; ಸಮ ಸಮಾನವಾಗಿ ದುಡಿಯಲು ಒಟ್ಟುಗೂಡು; ಒಬ್ಬರ ಹೊಲದಲ್ಲಿ ಇನ್ನೊಬ್ಬರು ದುಡಿಯಲು ಒಟ್ಟುಗೂಡು.

ಸಾವಾಸ (ನಾ)= ಸಹವಾಸ; ಒಡನಾಟ (ಉದಾ: ಅವನ ಸಾವಾಸ, ಹಾವಿನ ಸಾವಾಸ ಮಾಡಿದಂಗ್ಹ ನೋಡ್ರಿ).

ಸಾವಿರ (ನಾ)= ಒಂದು ಸಂಖ್ಯೆ; ಹತ್ತುನೂರು; ಹಜಾರ, ಸಹಸ್ರ.

ಸಾವು (ನಾ)= ಮರಣ; ಮೃತ್ಯು; ಉಸಿರು ನಿಲ್ಲುವಿಕೆ.

ಸಾವೂ (ನಾ)= ಸಾತ್ವಿಕ; ಪ್ರಾಮಾಣಿಕ.

ಸಾವ್ಕಾರ (ನಾ)= ಹಣವಂತ; ಶ್ರೀಮಂತ; ಹಣ ಉಳ್ಳವನು.

ಸಾವ್ಕಾರ್ಕಿ (ನಾ)= ಸಾವಕಾರಿಕೆ; ಬಡ್ಡಿವ್ಯವಹಾರ ನಡೆಸುವಿಕೆ.

ಸಾವ್ಕಾಶ (ಅ)= ನಿಧಾನವಾಗಿ; ಸಾವಕಾಶ.

ಸಾವ್ಚಿತ (ಅ)= ನಿಧಾನವಾಗಿ; ನಿಶ್ಚಿಂತವಾಗಿ

ಸಾವ್ಡಿ (ನಾ)= ಸಾವಡಿ (ನೋಡಿರಿ).

ಸಾವ್ತಿ (ನಾ)= ಸವತಿ; ತನ್ನಗಂಡನ ಇನ್ನೊಬ್ಬ ಹೆಂಡತಿ; ಸಪತ್ನಿ.

ಸಾಸಿ (ನಾ)= ಸಾಸಿವೆ; ಒಂದು ಪ್ರಕಾರದ ಎಣ್ಣೆಯ ಕಾಳು; ಫೋಣ್ಣೆಗೆ ಬಳಸುವ ಕಾಳು.

ಸಾಸು (ನಾ) ಮ.= ಅತ್ತೆ; ಗಂಡನ ಅಥವಾ ಹೆಂಡತಿಯ ತಾಯಿ.

ಸಾಸ್ಟಾಂಗ ಹಾಕು (ಕ್ರಿ)= ಸಾಷ್ಟಾಂಗ ನಮಸ್ಕಾರ ಮಾಡು.

ಸಾಹೇಬ (ನಾ) ಉ.= ಸಾಬ; ಅಧಿಕಾರಿ; ಒಡೆಯ; ಯಜಮಾನ.

ಸಾಳಿ (ನಾ)= ಶಾಲೆ; ಪಾಠಶಾಲೆ; ಸಾಲಿ.

ಸಿಂಗಲ್ (ನಾ) ಇಂ.= ಸಿಗ್ನಲ್; ಉಗಿ ಬಂಡಿಬರುವ ಸೂಚನೆ ನೀಡುವ ಕೈ; ಅರ್ಧಕಪ್ಪು.

ಸಿಂಗಾರ (ನಾ)= ಶೃಂಗಾರ; ಭೂಷಣ.

ಸಿಂಗಾರಿ (ನಾ)= ಚೆಲುವೆ; ಬೆಡಗಿ (ಕವನ: ಚಿಮ್ಮುತ ನಿರಿಯನು ಬನದಲಿ ಬಂದಳು ಬಿಂಕದ ಸಿಂಗಾರಿ).

ಸಿಂಗಿನ ಬಿಲ್ಲು (ನಾ)= ಇಂದ್ರ ಧನುಷ್ಯ; ಕಾಮನ ಬಿಲ್ಲು; ಮೋಡದಲ್ಲಿ ಸೂರ್ಯನ ಬೆಳಕು ಪ್ರವೇಶಿಸುವುದರಿಂದ ಉಂಟಾಗುವ ಸಪ್ತ ವರ್ಣದ ಧನುಷ್ಯ.

ಸಿಂಗು (ನಾ)= ಕೊಂಬು; ಕಹಳೆ.

ಸಿಂಗು ಊದು (ಕ್ರಿ)= ಕೊಂಬು ಊದು; ಕಹಳೆಯೂದು.

ಸಿಂಗೇರು (ನಾ)= ಕಹಳೆಯೂದುವ ಕಾಯಕದವರು.

ಸಿಂಗೇರ್ಮನಿ (ನಾ)= ಸಿಂಗು ಊದುವ ಕಾಯಕದವರ ಮನೆ.

ಸಿಂಗ್ಯಾ (ನಾ)= ಕಹಳೆ ಊದುವವನು.

ಸಿಂತುರ್ಸು (ಕ್ರಿ)= ವಂಚಿಸು; ಠಕ್ಕಿಸು.

ಸಿಂತ್ರಿ (ನಾ)= ಠಕ್ಕುಗುಣವುಳ್ಳವಳು; ವಂಚಕಿ; ವಂಚಕತನ; ವಂಚಿಸುವ (ಬೈಗುಳ).

ಸಿಂತ್ರ್ಯಾ (ನಾ)= ಠಕ್ಕ; ಮೋಸಗಾರ; ವಂಚಕ (ಬೈಗುಳ).

ಸಿಂದಿ (ನಾ)= ಸಿಂಧಿ; ಈಚಲು ಮರ ಮತ್ತು ಅದರಿಂದ ತೆಗೆದ ಹೆಂಡ, ಕಳ್ಳು.

ಸಿಂದಿಕುಡುಕ (ನಾ)= ಹೆಂಡ ಮಾರುವ ಅಂಗಡಿ; ಹೆಂಡದಂಗಡಿ.

ಸಿಂದಿ ಬನ (ನಾ)= ಈಚಲು ಮರಗಳ ವನ.

ಸಿಂದಿ ಬನದಲ್ಲಿ ಸಿಕ್ಕವಳು (ನಾ)= ಎಕಲಾಸಪೂರುವಾಡಿಯ ಸಾಹಿತಿ ಸುಬ್ಬಣ್ಣ ಅಂಬೆಸಂಗೆಯವರ ಪ್ರಥಮ ಕಾದಂಬರಿಯ ಹೆಸರು.

ಸಿಂಧನ ಕೇರಿ (ನಾ)= ರಂಜೇರುವಿನ ಸಿಂಧರ ರಾಜವಾಡೆಯ ಊರು.

ಸಿಂಧೋಲ (ನಾ)= ಒಂದು ಊರಿನ ಹೆಸರು.

ಸಿಂಪಿ (ನಾ)= ಕಪ್ಪೆಚಿಪ್ಪು; ಸಿಂಪಿಗ; ಸಿಂಪ್ಯಾ; ಮಹಾನ ಸಾಹಿತಿಗಳಾದ ಚಡಚಣದ ಲಿಂಗಣ್ಣವರ ಮತ್ತು ಅವರ ಮಗ ವೀರೇಂದ್ರರ ಮನೆತನದ ಹೆಸರು.

ಸಿಂಪಿಲಿಂಗಣ್ಣ= ಬೀದರಿನ ವಿದ್ಯಾನಗರದ ವೀರೇಂದ್ರ ಸಿಂಪಿಯವರ ತಂದೆಯ ಹೆಸರು; ಸುಪ್ರಸಿದ್ಧ ಜಾನಪದ ಸಾಹಿತಿಯ ಹೆಸರು.

ಸಿಂಪ್ಗೇರು (ನಾ)= ಸಿಂಪಿಗರು.

ಸಿಂಪ್ಯಾ (ನಾ)= ಸಿಂಪಿಗ; ಹೊಲಿಗೆ ಕಾಯಕದವನು; (ಕೋಲಾಟದ ಹಾಡು:

ಕಂಚ್ಗಾರ್ಗ ಕಾಲ್ಕೊಟ್ಟ ಬಳ್ಗಾರ್ಗ ಕೈಕೊಟ್ಟ ಸಿಂಪ್ಗ್ಯಾನ ತೋಳ್ಮ್ಯಾಲ ಮಲಗಿದೆ ನಾ ಕೋಲಕೋಲೆ).

ಸಿಂಬಿ (ನಾ)= ಮಣ್ಣುಕೊಡ, ತಾಮ್ರದ ಕೊಡ ಇಲ್ಲವೆ ಇತರ ಪಾತ್ರೆಗಳು ಉರುಳದಂತೆ ಅವುಗಳ ತಳದಲ್ಲಿಡುವ ಮರದ ತೊಗಟೆ ಇಲ್ಲವೆ ಬಟ್ಟೆ ಪಟ್ಟೆಯ ಸುರುಳಿ (ಗಾದೆ: ಕಲ್ಕೊಡ; ಹಾವಿನ ಸಿಂಬಿ).

ಸಿಂಯಾ (ನಾ)= ಸಿಂಹ.

ಸಿಂಯಾನ ಮಾರಿ (ನಾ)= ಸಿಂಹದಂತೆ ಗಡ್ಡ ಬೆಳೆಸಿದ ಮೋರೆ.

ಸಿಂಯಾಳ (ನಾ)= ಮಾನವ ವಸತಿ ಇಲ್ಲದ ನಿರ್ಜನ ಪ್ರದೇಶ; ಭಯಾನಕ ಕಾಡು ಭಾಗ.

ಸಿಂವಾಸನ (ನಾ)= ಸಿಂಹಾಸನ.

ಸಿಕಿಬೀಳು (ಕ್ರಿ)= ಸಿಕ್ಕುಬೀಳು.

ಸಿಕ್ಕ (ಕ್ರಿ)= ಸಿಕ್ಕುಬಿಟ್ಟನು; ಸಿಕ್ಕನು.

ಸಿಕ್ಕ (ನಾ)= ಸಿಖ್ಖ ಧರ್ಮಾನುಯಾಯಿ.

ಸಿಕ್ಕಾ (ನಾ)= ನಾಣ್ಯ.

ಸಿಕ್ಕಾಂಗ (ಅ)= ಬಲ್ಲಂತೆ; ಮನ ಬಂದಂತೆ (ಉದಾ: ಸಿಕ್ಕಾಂಗಾಡ್ದುರ ಯಾರ್ಬೀ ಆಡುಸ್ಗೋಮಾಲ!).

ಸಿಕ್ಕಾದ (ಕ್ರಿ)= ಸಿಕ್ಕಿದೆ.

ಸಿಕ್ಕುತು (ಕ್ರಿ)= ಸಿಕ್ಕಿತು; ಒದಗಿತು; ದೊರೆಯಿತು.

ಸಿಕ್ಕೋಟು (ಅ)= ಸಿಕ್ಕಷ್ಟು; ಸಿಕ್ಕಿದಷ್ಟು (ಗಾದೆ: ಸಿಕ್ಕೋಟೆ ಶಿವ ಶಿವಾ ಅನಬೇಕು).

ಸಿಕ್ಲೇಟು (ನಾ)= ಸಿಗರೇಟು; ಹೊಗೆ ಬತ್ತಿ.

ಸಿಕ್ಸಾ (ನಾ)= ಶಿಕ್ಷೆ; ಸಜೆ; ದಂಡನೆ.

ಸಿಕ್ಸಾಕುಡು (ಕ್ರಿ)= ಶಿಕ್ಷೆ ವಿಧಿಸು; ದಂಡಿಸು.

ಸಿಗು (ಕ್ರಿ)= ಬಂಧಿಸಲ್ಪಡು; ಸೆರೆಯಾಳಾಗು; ಕಳೆದು ಹೋದವನು ಕಣ್ಣೆದುರು ಬರು.

ಸಿಗುಸು (ಕ್ರಿ)= ಸಿಗಿಸು; ನೇತಾಡಿಸು; ತೂಗು ಹಾಕು (ಉದಾ: ರಜಾಕಾರರು ಹಿಂದೂ ಕೂಸ್ಗೋಳಿಗಿ ಹೊಟ್ಯಾಗ ಛೂರಿ ಚುಚ್ಚಿ ಗ್ವಾಡಿಗಿ ಸಿಗುಸ್ದುರು).

ಸಿಟಿ (ನಾ) ಇಂ.= ಪಟ್ಟಣ; ನಗರ.

ಸಿಟ್ಬನ್ಕ್ಯಾದಾಗ ಬುದ್ಧಿಕುಡು (ನು)= ಸಿಟ್ಟು ಬಂದಾಗ ಬುದ್ಧಿ ತಪ್ಪಿ ವರ್ತಿಸು.

ಸಿಟ್ಬನ್ಯಾಳ್ಯಾ (ನಾ)= ಸಿಟ್ಟು ಬಂದ ಸಮಯ.

ಸಿಟ್ಬಳಿ (ಕ್ರಿ)= ಕೋಪವು ಇಳಿ ಮುಖವಾಗು.

ಸಿಟ್ಟು (ನಾ)= ಕೋಪ; ಮುನಿಸು; (ಜಾನಪದ ಪ್ರಾಸ: ಸಿಟ್ಟು ಬಂದ್ರ ಹಿಟ್ಟು ಬುಕ್ಕು. ಗಾದೆ: ಸಿಟ್ಟು ತನ್ನ ವೈರಿ; ಶಾಂತಿ ವೈರಿಯ ವೈರಿ).

ಸಿಟ್ಟು ಬರು (ಕ್ರಿ)= ಕೋಪ ಉಂಟಾಗು (ಉದಾ: ಸಿಟ್ಟು ಬಂದ್ರ ಅಂವಾ ಮನ್ಶ್ಯಾನೆ ಅಲ್ಲ).

ಸಿಟ್ಟು ಮಾಡು (ಕ್ರಿ)= ರೇಗು; ಕೋಪ ದೋರು; ಮುನಿಸು ತೋರು.

ಸಿಟ್ಟೇರು (ಕ್ರಿ)= ಮುನಿಸು ಉಂಟಾಗು; ಕೋಪ ಅತಿಯಾಗು.

ಸಿಡುಲು (ನಾ)= ಸಿಡಿಲು.

ಸಿಡುಲು ಬಡಿ (ಕ್ರಿ)= ಸಿಡಿಲು ಅಪ್ಪಳಿಸು; ಸಿಡಿಲೆರಗು.

ಸಿಡ್ಕಾಫಿಡ್ಕಾಮಾಡು (ಕ್ರಿ)= ಸಿಡಿಮಿಡಿ-ಗೊಳ್ಳು; ಅಸಮಾಧಾನ ದೋರು.

ಸಿಡ್ಲು (ನಾ)= ಸಿಡಿಲು.

ಸಿಡ್ಲುಭೀಳು (ಕ್ರಿ)= ಸಿಡಿಲು ಅಪ್ಪಳಿಸು.

ಸಿತಾಳಗೇರಿ (ನಾ)= ಬೀದರ ಜಿಲ್ಲೆಯ ಒಂದು ಹಳ್ಳಿಯ ಹೆಸರು.

ಸಿದ್ದ (ನಾ)= ಸಿದ್ಧ; ಸಿದ್ಧರಾಮ; ಸೊನ್ನಲಾಪುರದ ಸಿದ್ಧರಾಮ; ಹೊನ್ನಿ ಕೇರಿಯ ಸಿದ್ಧಯ್ಯಪ್ಪ (ಭಜನೆ: ಸಿದ್ಧಾಸಿದ್ದನೆಂದು ನೀ ಕೂಗೋ। ಸದ್ಗತಿ ಮಾರ್ಗಹೊಂದಿ ಭವ ನೀಗೋ। ಮಾರ್ಗಹೊಂದಿ ಭವ ನೀಗೋ).

ಸಿದ್ಧಯ್ಯಪ್ಪ= ಹೊನ್ನಿ ಕೇರಿಯ ಸಿದ್ಧದೇವರು. ಮರಕುಂದಿ ಬಸವಣ್ಣಪ್ಪ.

ಸಿದ್ಧಾಂತ (ನಾ)= ಸಿದ್ಧಾಂತ; ಗಾಂಜಾ; ತಂಬಾಕು (ಗಾಂಜಾ ಸೇದಿದರೆ ಸಿದ್ಧಾಂತದ ಅರಿವು ಉಂಟಾಗುತ್ತದೆಂದು ಗಾಂಜಾ ವ್ಯಸನಿಗಳ ನಂಬಿಕೆ. ಅದಕ್ಕಾಗಿಯೇ ಅವರು ಗಾಂಜಾ ಸೇವನೆಗೆ ಸಿದ್ಧಾಂತ ಎನ್ನುತ್ತಾರೆ.)

ಸಿದ್ಧಾಂತ ಶಿಖಾಮಣಿ (ನಾ)= ವೀರಶೈವ ಧರ್ಮಗ್ರಂಥ.

ಸಿದ್ಧಾಂತ ಸೇದು (ಕ್ರಿ)= ಗಾಂಜಾದ ಹೊಗೆಯನ್ನು ಸೇದು; ಕುಡಿ.

ಸಿದ್ದಿಕಿ ಭಾಷಾ (ನಾ)= ಒಂದು ಜನಾಂಗದ ಹೆಸರು (ಹಾಡು: ಸಿದ್ದಿಕಿ ಭಾಷಾ। ದೇಖ ತಮಾಷಾ। ಲಾಹಿರಿಲಲ್ಲಾ ಲಾಹಿರಿಲಲ್ಲಾ॥).

ಸಿದ್ದಿಖ ಚನಬಸವಾ (ನಾ)= ನಿಜಾಮ ಕಾಲದಲ್ಲಿ ಲಿಂಗವಂತರನ್ನು ಮುಸಲ್ಮಾನರನ್ನಾಗಿ ಮತಾಂತರಗೊಳಿಸಲು ಹುಟ್ಟಿದ ದೀನ ದಾರ ಸಿದ್ದಿಖಿ ಚನ್ನಬಸವಾ ಎಂಬ ಸಂಘಟನೆ. ಶೈವರ ಅರವತ್ಮೂರು ಮಂದಿ ಪುರಾತನರು ಮತ್ತು ಅವರ ಜಗದ್ಗುರುಗಳು ನಾವೇ ಎಂದು ಇಮಾಮುಲ್ಲ ನಾಸ" ಎಂಬ ಗ್ರಂಥವನ್ನು ಪ್ರಕಟಿಸುವ ಮೂಲಕ ಸಾಧಿಸಲು ಹೊರಟದ್ದು. ಇತ್ತೀಚೆಗದು ಭಯೋತ್ಪಾದಕ ಸಂಘಟನೆ ಎಂದು ಕೂಡಾ ಬಹಿರಂಗಗೊಂಡಿದೆ.

ಸಿದ್ಧಿಖ ತಾಲೀಂ (ನಾ)= ಬೀದರ ನಗರದ ಒಂದು ಓಣಿ.

ಸಿದ್ಧರಾಮ (ನಾ)= ಸೊನ್ನಾಲಾಪುರದ ಸಿದ್ಧರಾಮೇಶ. ಶೂನ್ಯ ಪೀಠದ ಮೂರನೆಯ ಪೀಠಾಧಿಕಾರಿ.

ಸಿದ್ಧರಾಮ ಶರಣರು (ನಾ)= ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರಿಂದ ದೀಕ್ಷೆ ಹೊಂದಿದ ಶರಣ ಮಾರ್ಗಿಗಳು. ಬೆಲ್ದಾಳ ಶರಣರೆಂದೂ ಹೆಸರು ಮಾಡಿದವರು. ಕಪಲಾಪೂರದ ನಗೆಮಾರಿ ಎಂದು ಖ್ಯಾತರಾದ ಪ್ರಸಿದ್ಧ ಪ್ರವಚನಕಾರರು.

ಸಿದ್ಧಿವಿನಾಯಕ (ನಾ)= ಕರ್ನಾಟಕದ ಬೀದರ ನೆರೆಯಲ್ಲಿ ಇರುವ ಜಹೀರಾಬಾದ ತಾಲೂಕಿನ ರೇಜಂತಲ್ ಗ್ರಾಮದ ಸಿದ್ಧಿವಿನಾಯಕ ತೀರ್ಥಕ್ಷೇತ್ರ.

ಸಿದ್ಧೇವ್ರು = ಹೊನ್ನಿ ಕೇರಿಯ ಸಿದ್ಧಯ್ಯಪ್ಪ; ಸಿದ್ಧದೇವರು.

ಸಿದ್ಧೇಶ (ನಾ)= ಸಿದ್ಧರಾಮೇಶ; ಸೊನ್ನಲಾಪುರದ ಸಿದ್ಧರಾಮೇಶ (ಶಿಶು ಪ್ರಾಸ: ಮಳಿ ಬಂತೋ ಮಲ್ಲೇಶಾ ಗುಡಿಕಟ್ಟೋ ಸಿದ್ಧೇಶಾ).

ಸಿನುಮಾ (ನಾ) ಇಂ.= ಸಿನೇಮ; ಚಲನಚಿತ್ರ.

ಸಿನುಮಾ ನೋಡು (ಕ್ರಿ)= ಸೀನೆಮವನ್ನು ವೀಕ್ಷಿಸು.

ಸಿಪಾಯಿ, ಸಿಪ್ಪೈ (ನಾ)= ಸೈನಿಕ; ಯೋಧ; ಜವಾನ; ಸೇವಕ; ಚಪರಾಶಿ; ಆಳು.

ಸಿಪಾರತಿ (ನಾ)= ಸಿಫಾರಸು; ತರಫ್ದಾರಿ; ಪಕ್ಷ ವಹಿಸಿಕೊಳ್ಳುವಿಕೆ; ಪ್ರಭಾವವನ್ನು ಬೀರುವಿಕೆ.

ಸಿಪ್ಪಿ (ನಾ)= ಸಿಪ್ಪೆ; ಹಣ್ಣು, ಕಾಯಿ ಮೊದಲಾದವುಗಳ ಮೇಲಿನ ಸಿಪ್ಪೆ.

ಸಿಬುರು (ನಾ)= ಜೋಳದ ದಂಟಿನ ತೊಗಟೆಯ ಚೂರು. ಪತ್ರಾವಳಿ ಹೆಣೆಯಲು ಬಳಸುವ ಜೋಳದ ದಂಟಿನ ತೊಗಟೆಯ ಚೂರು; ಸಿಬಿರು.

ಸಿಬ್ಕಿ (ನಾ)= ಸಿಬುರು (ನೋಡಿರಿ).

ಸಿರಪೇಚು (ನಾ)= ಶಿರಸ್ತ್ರಾಣ; ಕಿರೀಟ.

ಸಿರಿಗಂಧ (ನಾ)= ಶ್ರೀಗಂಧ; ಸಿರಿಗಂಧದ ಮರ ಮತ್ತು ಅದರಿಂದ ತೇದು ತೆಗೆದ ಗಂಧ (ಹಂತಿ ಹಾಡು: ಹಾಲಳ್ಳಿ ಬ್ಯಾಲಳ್ಳಿ। ನಡುವ ನೀಲಮ್ನಳ್ಳಿ। ತೆಗ್ಗಿನಾಗಾದಾ ಮೈಲಾರ। ಮಲ್ಲಯ್ನ। ಹುಬ್ಬಿನಾಗಾದ ಸಿರಿಗಂಧ।।).

ಸಿರಿ ಬಾಗುಲು (ನಾ)= ಸಿರಿ ಸೌಂದರ್ಯದಿಂದ ಕೂಡಿದ ಬಾಗಿಲು (ಮದುವೆ ಹಾಡು: ಸುರ್ಗಿಯಾ ಸುತ್ತಟಿಗೆ। ಸಿರಿಬಾಗುಲಿಗಿ ಬಿಸುಲ್ಬಂದೆ। ನಾಲತ್ವಾಟದ ಎಲಿ ಬಂದೆ। ಹರಹರನಮಶಿವಗೆ ನೈಯಣ್ಣಿ।।).

ಸಿರಿಯಾಳಶೆಟ್ಟಿ (ನಾ)= ಅರವತ್ಮೂರು ಪುರಾತನರಲ್ಲಿ ಒಬ್ಬವನು. ತನ್ನ ಮಗ ಚಿಲ್ಲಾಳನನ್ನು ಕೊಂದು ಅಡಿಗೆ ಮಾಡಿ ಜಂಗಮಗೆ ಉಣಿಸಿದ ಶಿವಭಕ್ತ.

ಸಿರಿವಂತ (ನಾ)= ಶ್ರೀವಂತ: ಧನವಂತ; ಸಾವ್ಕಾರ.

ಸಿರಿವಂತಿ (ನಾ)= ಸಿರಿಯುಳ್ಳವಳು; ಶ್ರೀಮಂತರ ಮನೆಯ ಮಹಿಳೆ.

ಸಿರೋಳ ಶೆಟ್ಟಿ (ನಾ)= ಸಿರಿಯಾಳಶೆಟ್ಟಿಯ ಸ್ಮರಣೆಯ ದಿನ; ಸಿರಿಯಾಳ ಷಷ್ಠಿ; ನಾಗರ ಪಂಚಮಿಯ ಮರುದಿನ.

ಸಿರ್ಖಂಡ (ನಾ)= ಶ್ರೀಖಂಡ; ಮೊಸರಿನೊಂದಿಗೆ ಸಕ್ಕರೆ; ಜಾಜಿಕಾಯಿ ಇತ್ಯಾದಿ ಬೆರೆಸಿ ರುಬ್ಬಿ ತಯಾರಿಸಿದ ಪಕ್ವಾನ್ನ.

ಸಿರ್ಖುಂಬಾ (ನಾ) ಉ.= ಸೀರಖುರ್ಮಾ; ಮುಸಲಮಾನರು ರಮ್ಜಾನ ಹಬ್ಬಕ್ಕಾಗಿ ಮಾಡುವ ದೂಧ ಖೀರು; ಪಾಯಸ.

ಸಿರ್ಸಗಿ (ನಾ)= ಬೀದರ ತಾಲೂಕಿನ ಒಂದು ಹಳ್ಳಿ. ಸಿರ್ಸಿ ಎಂತಲೂ ಕರೆಯುತ್ತಾರೆ.

ಸಿರ್ಸಾಲ (ನಾ)= ಸಟ್ಟಾ ಬಟ್ಟಾ; ಬೇಬಾಕ್; ಬಾಕಿ ಇಲ್ಲದಿರುವೆ; ಚುಕ್ತಾ.

ಸಿರ್ಸೆಲ್ಯಾ (ನಾ)= ಶ್ರೀಶೈಲ ಎಂಬ ಆಂಧ್ರದ ಒಂದು ತೀರ್ಥಕ್ಷೇತ್ರ; ಮಲ್ಲಿಕಾರ್ಜುನ ಕ್ಷೇತ್ರ.

ಸಿರ್ಸೈಲ (ನಾ)= ಶ್ರೀ ಶೈಲ ಮಲ್ಲಿಕಾರ್ಜು ಕ್ಷೇತ್ರ. ಆಂಧ್ರದ ಒಂದು ತೀರ್ಥಕ್ಷೇತ್ರ.

ಸಿಲಾಯಿ (ನಾ)= ಕೈಯಿಂದ ಹಾಕಿದ ಹೊಲಿಗೆ; ಯಂತ್ರದಿಂದ ಹಾಕಿದ ಹೊಲಿಗೆ.

ಸಿಲಾಯಿಕುಂಚಿ (ನಾ)= ಯಂತ್ರದಿಂದ ಹೊಲಿದು ತಯಾರಿಸಲಾದ, ಮಗುವಿನ ತಲೆ ಮತ್ತು ಬೆನ್ನು ಮುಚ್ಚುವಂಥ ಹೊದಿಕೆ, ಕುಂಚಿಗೆ.

ಸಿಲಾರಸಾಬ (ನಾ)= ಒಬ್ಬ ಪೀರನ ಹೆಸರು.

ಸಿಲೈ (ನಾ)= ಸಿಲ್ವಯಿ; ಹೊಲಿಗೆ; ಕೈಹೊಲಿಗೆ; ಯಂತ್ರದಿಂದ ಹಾಕಿದ ಹೊಲಿಗೆ.

ಸಿಲೈ ಕುಂಚಿ (ನಾ)= ಸಿಲಾಯಿ ಕುಂಚಿ (ನೋಡಿರಿ).

ಸಿಲ್ಕು (ವಿ)= ಸಿಲ್ಲಕು; ಬಾಕಿ; ಶೇಷ; ಉಳಿದ.

ಸಿವುಟು (ಕ್ರಿ)= ಒರಸು; ಉಜ್ಜು; ತೊಡೆ; ತಿಕ್ಕು.

ಸಿವ್ಕರ್ಸು (ಕ್ರಿ)= ಸ್ವೀಕರಿಸು; ಸ್ವೀಕಾರ ಮಾಡು; ಪಡೆ; ಹೊಂದು.

ಸಿಸು (ನಾ)= ಶಿಶು; ಹಸುಳೆ; ಮಗು; ಕೂಸು; ಶುದ್ಧವಾದದ್ದು.

ಸಿಸು ಮಾತು (ನಾ)= ಶುದ್ಧ ಮಾತು; ಶಿಶುವಿನ ನುಡಿ.

ಸಿಸ್ತಾಗಿ (ಅ)= ನಿಯಮಬದ್ಧವಾಗಿ; ಕ್ರಮಬದ್ಧವಾಗಿ.

ಸಿಸ್ತು (ನಾ)= ಶಿಸ್ತು; ನಿಯಮ; ಕಟ್ಟಳೆ; ಕ್ರಮ ಬದ್ಧತೆ.

ಸಿಳ್ಹಾಕು (ಕ್ರಿ)= ಸಿಳ್ಳುಹಾಕು; ಸೀಟಿ ಹೊಡೆ; ಬಾಯಿಂದ ಜೋರಾಗಿ ಊದಿ ಸದ್ದು ಮಾಡು.

ಸಿಳ್ಳಿ (ನಾ)= ಸಿಳ್ಳುಗಣ್ಣಿನವಳು; ಪಿಚ್ಚುಗಣಿನವಳು. (ಗಾದೆ: ಹಳ್ಳಿ ಊರಾಗ ಸಿಳ್ಳಿ ಮುತ್ತೈದಿ).

ಸಿಳ್ಳು (ನಾ)= ಸೀಟಿ; ಬಾಯಿಂದ ಜೋರಾಗಿ ಊದಿ ಮಾಡುವ ಸದ್ದು; ಕಣ್ಣಿನ ಪಿಚ್ಚು; ಕಣ್ಣಿನಿಂದ ಹೊರಡುವ ಹೊಲಸು.

ಸಿಳ್ಳುಗಣ್ಣು (ನಾ)= ಪಿಚ್ಚು ಒಸರುವ ಕಣ್ಣು.

ಸಿಳ್ಳು ಹಾಕು (ಕ್ರಿ)= ಸೀಟಿ ಹೊಡೆ; ಬಾಯಿಯಿಂದ ಜೋರಾಗಿ ಊದಿ ಸದ್ದು ಮಾಡು.

ಸಿಳ್ಯಾ (ನಾ)= ಸಿಳ್ಳುಗಣ್ಣು ಉಳ್ಳವನು; ಪಿಚ್ಚುಗಣ್ಣು ಉಳ್ಳವನು (ಬೈಗುಳ).

ಸೀಗೀಕಾಯಿ (ನಾ)= ಸೀಗೆಕಾಯಿ; ಕುಂಕುಡಕಾಯಿ; ಇದರ ಪುಡಿಯನ್ನು ಮಹಿಳೆಯರು ತಲೆಗೆ ಹಚ್ಚಿ ತೊಳೆದುಕೊಳ್ಳುತ್ತಾರೆ.

ಸೀಗೀಹುಣ್ಣಿ (ನಾ)= ಆಶ್ವಯುಜ ಮಾಸದ ಹುಣ್ಣಿಮೆ.

ಸೀಜನ್ನು (ನಾ) ಇಂ.=ಸುಗ್ಗಿ; ಹಂಗಾಮು; ಬೆಳೆಯನ್ನು ಕೊಯ್ಯುವ ಕಾಲ; ಸಮೃದ್ಧಿ ಕಾಲ.

ಸೀಟು (ನಾ)ಇಂ= ಆಸನ.

ಸೀತನಿ (ನಾ)= ಸೀತ್ನಿ; ಸೀತೆನೆ; ಇನ್ನೂ ಬಲಿಯದ, ಹಾಲು ತುಂಬಿ ಸಿಹಿಯಾಗಿರುವ ತೆನೆಯ ಕಾಳು; ಬೆಳಸಿ; ಬೇಯಿಸಿದ ಹಸಿರು ಹಸಿರಾದ ಜೋಳದ ಕಾಳು.

ಸೀತಾ (ನಾ)= ಜನಕರಾಜನ ಮಗಳು; ಶ್ರೀ ರಾಮನ ಹೆಂಡತಿ.

ಸೀತೆ (ನಾ)= ಸೀತಾದೇವಿ; ಜನಕರಾಜನ ಮಗಳು; ರಾಮನ ಹೆಂಡತಿ (ತೊಗಲು ಬೊಂಬೆಯಾಟದ ಹಾಡು: ಸೀತೆ ಸುದ್ದಿ ತಂದೇವೆ, ಎಲ್ಲಾರ ಮನಿಮುಂದ ಕುಂತೇವೆ).

ಸೀತ್ನಿ (ನಾ)= ಸೀತನಿ (ನೋಡಿರಿ).

ಸೀದಾ (ನಾ)= ಅಡಿಗೆಗೆ ಅಗತ್ಯವಾದ ಅಕ್ಕಿ ಬೇಳೆ, ಬೆಲ್ಲ, ಹಿಟ್ಟು ಇತ್ಯಾದಿಯನ್ನು

ಜಂಗಮರ, ಬ್ರಾಹ್ಮಣರ, ಉನ್ನತ ವರ್ಗದವರ ಮನೆಗೆ ಕೆಳವರ್ಗದವರು ತಮ್ಮ ಮನೆಯಲ್ಲಿಯ ಸಮಾರಂಭದಂದು ಕಳಿಸುವ ವಾಡಿಕೆ; ಚಾಜಾ.

ಸೀದಾಸಾದಾ (ವಿ)= ಸರಳ; ನೇರ; ನಿಷ್ಕಪಟ; ನಿರ್ವಂಚನ.

ಸೀದಾಸಾಪ (ವಿ)= ಸೀದಾಸಾದಾ (ನೋಡಿರಿ).

ಸೀನ್ (ನಾ) ಇಂ.= ಸೀನು; ದೃಶ್ಯ.

ಸೀನು (ಕ್ರಿ)= ನೆಗಡಿ, ಘಾಟು ಮುಂತಾದವುಗಳ ಪರಿಣಾಮವಾಗಿ ಜೋರಾಗಿ ಉಸಿರನ್ನು ಮೂಗಿನಿಂದ ಹೊರತಳ್ಳು; ಅಪಶಕುನ ಸೂಚಿಸು; ಬಾಗಿಲ ಮೇಲೆ ಈ ರೀತಿ ಮಾಡಿ ಅಪಶಕುನದೋರು.

ಸೀನುಬಾ (ಕ್ರಿ)= ಸಶಬ್ದವಾಗಿ ಜೋರಾಗಿ ಮೂಗಿನಿಂದ ಶ್ವಾಸ ಹೊರಬರು.

ಸೀಮಿ (ನಾ)= ಸೀಮೆ; ಎಲ್ಲೆ; ಗಡಿ; ಮೇರೆ; ಸರಹದ್ದು.

ಸೀಮಿನಾಗಣ್ಣ (ನಾ)= ಹುಮನಾಬಾದ ತಾಲೂಕಿನ ದೊಡ್ಡ ಹಳಿಖೇಡ ಗ್ರಾಮದ ನಾಗಣ್ಣನ ತೀರ್ಥಕ್ಷೇತ್ರ.

ಸೀಮಿ ಮ್ಯಾಲಿನ ಹೊಲಾ (ನಾ)= ಊರಸೀಮೆಗೆ ಹೊಂದುತ್ತಿರುವ ಹೊಲ.

ಸೀಮಿ ಶಿವಾರ (ನಾ)= ಸೀಮಿಗೆ ಹೊಂದಿಕೊಂಡಂಥ ಭೂಭಾಗ.

ಸೀಮಿ ಹೊಲ (ನಾ)= ಊರ ಸೀಮೆಗೆ ಹತ್ತಿ ಇರುವ ಸಾಗುವಳಿಭೂಮಿ.

ಸೀರ್ (ನಾ)= ಸೀರು; ಹೇನಿನ ಮೊಟ್ಟೆ.

ಸೀರಾ (ನಾ)= ರವೆ ಮತ್ತು ಸಕ್ಕರೆಯಿಂದ ತಯಾರಿಸಲಾದ ಸಿಹಿ ತಿಂಡಿ; ಸಜ್ಜಕ; ಸಕ್ಕರೆಯ ತಿಳಿಯಾದ ಪಾಕ.

ಸೀರಾಗು (ಕ್ರಿ)= ಹೇನಿನ ಮೊಟ್ಟೆಯುಂಟಾಗು.

ಸೀರಿ (ನಾ)= ಸೀರೆ; ಚೀರ; ಮಹಿಳೆಯರು ನಡದಿಂದ ಅಡಿಯವರೆಗೆ ಸುತ್ತಿಕೊಳ್ಳುವ ಉಡುಗೆ.

ಸೀರೀ ಉಡ್ಸು (ಕ್ರಿ)= ಮಹಿಳೆಗೆ ಹೊಸ ಸೀರೆ ಉಡಿಸಿ, ಉಡಿಯಲ್ಲಿ ಜೋಡು ಖಣವಿರಿಸಿ ಸನ್ಮಾನಿಸು.

ಸೀರಿ ಬಿಡು (ಕ್ರಿ)= ಋತು ಸ್ರಾವವಾಗು; ಮುಟ್ಟಾದ ಕಾರಣ ಸೀರೆ ಬದಲಾಯಿಸು; ಮುಟ್ಟಾಗು.

ಸೀರು (ನಾ)= ಸೀರ್; ಹೇನಿನ ಮೊಟ್ಟೆ.

ಸೀರ್ಧನಿ (ನಾ)= ಸಣ್ಣದಾದ ಧ್ವನಿ.

ಸೀನ್ನಾಯಿ (ನಾ)= ನಾಯಿಯಂತಿರುವ ಒಂದು ಕಾಡು ಪ್ರಾಣಿ.

ಸೀಸ (ನಾ)= ಒಂದು ಬಗೆಯ ಲೋಹ. ಗಾಜಿನ ಬಾಟಲಿ.

ಸೀಸಾ (ನಾ)= ಗಾಜಿನ ಬಾಟಲಿ; ಸೀಸೆ.

ಸೀಸ್ಪೆನ್ಸಲ್ (ನಾ)= ಸೀಸುಕಡ್ಡಿ.

ಸೀಳು (ಕ್ರಿ)= ಹೋಳುಮಾಡು; ಒಂದರಲ್ಲಿ ಎರಡಾಗುವಂತೆ ಮಾಡು; ಗಡಿಗೆಯಲ್ಲಿ ಅಥವಾ ಪಾತ್ರೆಯಲ್ಲಿ ಬಿರುಕುಂಟಾಗು; ನೆಲದಲ್ಲಿ ಬಿರುಕುಂಟಾಗು.

ಸೀಳ್ಕಿ (ನಾ)= ಸೀಳುವಿಕೆ; ಸೀಳಿಕೆ; ಒಂದರಲ್ಲಿ ಎರಡಾಗುವಿಕೆ; ಮಡಿಕೆಯಲ್ಲಿ ಬಿರುಕು ಬಿಡುವಿಕೆ; ಭೂಮಿ ಬಿಚ್ಚುವಿಕೆ; ಬಿರುಕುಂಟಾಗುವಿಕೆ.

ಸೀಳ್ಕಿಬಿಡು (ಕ್ರಿ)= ಬಿರುಕುಂಟಾಗು.

ಸುಂಕಾ, ಸುಂಕು (ನಾ)= ಮುಳ್ಳಂತಿದ್ದು ಬಟ್ಟೆಗಂಟಿಕೊಳ್ಳುವ ಹುಲ್ಲು ಬೀಜ; ಧಾನ್ಯಗಳ ಮೇಲಿರುವ ಹೊಟ್ಟಿನ ಮೊನಚಾದ ತುದಿ.

ಸುಂಕಾಳಿ (ನಾ)= ಹುಲ್ಲುಬೀಜದ ಸಾಲುರಾಶಿ; ಸುಂಕು.

ಸುಂಕು (ನಾ)= ಸುಂಕಾ (ನೋಡಿರಿ).

ಸುಂಟಿ (ನಾ)= ಶುಂಠಿ; ಕುದಿಸಿ ಒಣಗಿಸಿದ ಖಾರಗೆಣಸು, ಅಲ್ಲ.

ಸುಂತಾಣ (ನಾ)= ಬಸವ ಕಲ್ಯಾಣ ತಾಲೂಕಿನ ಒಂದುಹಳ್ಳಿ; ಮುಂಬಯಿ-ಹೈದರಾಬಾದ ಪ್ರಾಚೀನ ಮಹಾ ಮಾರ್ಗದಲ್ಲಿ ಇದ್ದ ಹಳ್ಳಿಯೆಂದು ಹಿರಿಯರು ಹೇಳುತ್ತಾರೆ.

ಸುಂತಿ (ನಾ)= ಸುನ್ನತ; ಮುಸಲ್ಮಾನ ಧರ್ಮದ ಒಂದು ಸಂಸ್ಕಾರ; ಖತ್ನಾ.

ಸುಂತಿ ಮಾಡು (ಕ್ರಿ)= ಮುಸಲ್ಮಾನ ಧರ್ಮದ ಪ್ರಕಾರ ಗಂಡು ಮಗುವಿನ ಶಿಶ್ನದ ಶಸ್ತ್ರಕ್ರಿಯೆ ನೆರವೇರಿಸು; ಸುನ್ನತ ಮಾಡಿಸು; ಖತ್ನಾ ಮಾಡಿಸು.

ಸುಂದಾಗು (ಕ್ರಿ)= ಉತ್ಸಾಹ ಇಲ್ಲದಂತಾಗು; ಖಿನ್ನಾಗು; ಸುಸ್ತಾಗು; ಸುಂದು ಬೀಳು.

ಸುಂದು (ನಾ)= ಖಿನ್ನತೆ; ನಿರುತ್ಸಾಹ; ಅಂಗದ ಯಾವುದೇ ಭಾಗದಲ್ಲಿ ಅನುಭವ ಇಲ್ಲವಾದುದು.

ಸುಂಬುಳಿ (ನಾ)= ಸದಾಸುಂಬಳ ಸೋರಿಸುತ್ತ ತಿರುಗುವವಳು (ಬೈಗುಳ).

ಸುಂಬುಳು (ನಾ)= ಸುಂಬಳ; ಸಿಂಬಳ; ಮೂಗಿನಿಂದ ಒಸರುವ ಜಿಗುಟು ದ್ರವ, ತ್ಯಾಜ್ಯದ್ರವ.

ಸುಂಬುಳು ಖಾರ (ನಾ)= ಒಂದು ಪ್ರಕಾರದ ವಿಷಕಾರಿ ವಸ್ತು (ಮೊಹರಂ ಹಾಡು: ಸುಂಬುಳಖಾರಾ ಬಚ್ಚಾನಗರಾ। ಹಚ್ಚಿ ಮುಚ್ಚಿ ಉಣಸ್ಯಾಳೊ ತನ ಮಗನಾ। ಈಗ ಎಲ್ಲಿ ಹಾನಾ ಕರಿಯೊ ನಿನ ತಂದಿನಾ। ಈಗ ಎಲ್ಲಿ ಹಾನಾ ಕರಿಯೊನಿನ ತಂದಿನಾ।।).

ಸುಂಬುಳ್ಕಾಯಿ (ನಾ)= ಜಿಗುಟು ಜಿಗುಟಾಗಿರುವ ತಿರುಳು ಉಳ್ಳಂಥ ಕಾಯಿ (ಬಳ್ಳಿಯ ಕಾಯಿ).

ಸುಂಬುಳ್ಮೂಗು (ನಾ)= ಸದಾ ಸಿಂಬಳ ಒಸರುವ ಮೂಗು.

ಸುಂಬುಳ್ಯಾ (ನಾ)= ಸುಂಬಳು ಸೋರಿಸುತ್ತ ತಿರುಗಾಡುವವನು (ಬೈಗುಳ).

ಸುಂಬುಳ್ಸುಂಬುಳು (ದ್ವಿ)= ಜಿಗುಟು ಜಿಗುಟು; ಅಂಟಂಟು.

ಸುಕ (ನಾ)= ಸುಖ; ನೆಮ್ಮದಿ (ಹಾಡು: ಹಣೆಬಾರ್ಕತಿ ಹರಿಬ್ರಹ್ಮಗ ತಪ್ಪಿಲ ಯಾರೇನ್ಮಾಡ್ವರೋ। ಎಲ್ಲರು ಸುಕನೇ ಬೇಡ್ವರು।।).

ಸುಕಮುನಿ (ನಾ)= ಶುಕಮುನಿ; ಒಬ್ಬ ಮುನಿಯ ಹೆಸರು.

ಸುಕಾ (ನಾ)= ಸುಖ; ಸುಖಾ; ನೆಮ್ಮದಿ (ಬೀಸುವ ಹಾಡು: ಸುಕಾ ಎಲ್ಲೋರಿಗ್ಯಾದವ್ವಾ। ದುಕ್ಕಾ ಛೆಲ್ಯಾದ ಮರ್ತ್ಯಾದ ಮ್ಯಾಲಾ।। ತಾ ಮಾಡಿದ ಪಾಪಾ ತಾಗಳಿಬೇಕ। ಶಿವನ ಮ್ಯಾಲ್ಯಾಕ ಸಬುದಿಡಬೇಕ।।).

ಸುಖಸ್ತಿ ಜಂಗಮ (ನಾ)= ಸುಖಿ ಜಂಗಮ.

ಸುಖಾ (ನಾ)= ಸುಕಾ (ನೋಡಿರಿ).

ಸುಖಿ (ವಿ)= ಸುಖವುಳ್ಳ.

ಸುಖಿ ಜಂಗಮ (ನಾ)= ಸಂಸಾರಸ್ಥ ಜಂಗಮ;

ಸುಗಂಧ (ನಾ)= ಸುಗಂಧ; ಸುವಾಸನೆ; ಕಂಪು; ಪರಿಮಳ; ಗಮಾಕಿ.

ಸುಗುಣ್ಣಾರಿ (ನಾ)= ಸುಗುಣವುಳ್ಳ ಮಹಿಳೆ (ಕುಟ್ಟುವ ಹಾಡು: ಸುವ್ವಯ್ಯಾ ಸುಗುಣ್ಣಾರಿ। ಹೆಗಲ ಮ್ಯಾಲಿನ ಕೋರಿ। ಹಾರಿ ಹೋಯಿತವ್ವ ಹರದಾರಿಸುವಯ್ಯ॥).

ಸುಗ್ಗಿ (ನಾ)= ಬೆಳೆಯನ್ನು ಕೊಯ್ಯುವ ಕಾಲ; ಹಂಗಾಮು; ಸೀಜನ್ನು.

ಸುಗ್ಗಿಧಿನಾ (ನಾ)= ಬೆಳೆ ಕೊಯ್ಯುವ ದಿನಗಳು; ಸುಗ್ಗಿಯ ಕಾಲ; ಹಂಗಾಮು.

ಸುಗ್ಯಾನಮ್ಮ (ನಾ)= ಸುಜ್ಞಾನಮ್ಮ.

ಸುಗ್ಯಾನಿ (ನಾ)= ಸುಜ್ಞಾನಿ.

ಸುಚಾಸು (ಕ್ರಿ)= ತೋರು; ಮನದಲ್ಲಿ ಹೊಳೆ; ವಿಚಾರ ಮಾಡು.

ಸುಜುನಿ (ನಾ)= ಹಚ್ಚಡ; ಶಾಲು.

ಸುಡು (ಕ್ರಿ)= ಸುಟ್ಟುಹಾಕು; ದಹಿಸು; ಉರಿಸು; ಅತಿಶಾಖ ಉಂಟಾಗು; ಚುರುಕು ಮುಟ್ಟು.

ಸುಡುಗಾಡು (ನಾ)= ಸ್ಮಶಾನ; ಹೆಣಗಳನ್ನು ಸುಡುವ ಸ್ಥಳ; ಮಸಣ; ಮಸುಟ್ಗಿ.

ಸುಡುಗಾಡುಸಿದ್ಧ (ನಾ)= ಸ್ಮಶಾನದಲ್ಲಿ ವಾಸಿಸುವ ಒಂದು ಜನಾಂಗ. (ಜಾನಪದ ಪ್ರಾಸ : ಸುಡುಗಾಡಸಿದ್ಧಾ । ಸುತ್ಗೊಂಡು ಬಿದ್ದಾ । ಆಚೆಗೊಂದು ನರಿ । ಇಚೆಗೊಂದು ನರಿ ಖ್ಯಾಕ್ಕೂ ಖ್ಯಾಕ್ಕು).

ಸುಡುಗಿ (ನಾ)= ಕಾಟ; ಕೀಟಲೆ; ಕಿರಿಕಿರಿ.

ಸುಡುಗಿ ಸುತ್ತು (ಕ್ರಿ)= ಕಾಟ ಬೆನ್ನಟ್ಟು; ಕೀಟಲೆ ಸುತ್ತುವರಿ; ಕಿರಿಕಿರಿ ಆವರಿಸು.

ಸುಡುತಾದ (ಕ್ರಿ)= ಸುಡುತ್ತದೆ.

ಸುಡುಬುಡು ಸುಡುಬುಡು (ದ್ವಿ)= ಕೆಲಸಕ್ಕೆ ಬಾರದುದನ್ನು ಮಾಡುತ್ತ ಕೂಡುವಿಕೆ.

ಸುಡುಬುಡ್ಯಾ (ನಾ)= ಮನೆಯಲ್ಲುಳಿದ್ದು ಸವ್ವರಿಸುವವ (ಬೈಗುಳ).

ಸುಡುಸುಡಾ ನೀರು (ನಾ)= ಕಾದು ಕುದಿಯುತ್ತಿರುವನೀರು; ಅತಿಕಾಯ್ದ ನೀರು.

ಸುಣಗಾರ (ನಾ)= ಸುಣ್ಣದ ವ್ಯಾಪಾರಿ.

ಸುಣ್ಣಾ (ನಾ)= ಸುಣ್ಣ; ಕಲ್ಲು ಸುಟ್ಟು ತಯಾರಿಸಿದ ಗೋಡೆಗೆ ಬಳಿವ ಬಿಳಿಯ ಬಣ್ಣ.

ಸುಣ್ಣಾ ಬಣ್ಣಾ ಮಾಡು (ಕ್ರಿ)= ಸುಣ್ಣ ಮತ್ತು ಬಣ್ಣಗಳನ್ನು ಲೇಪಿಸಿ ಮನೆಯನ್ನು ಸಿಂಗರಿಸು.

ಸುಣ್ಣುದ್ಕಲ್ಲು (ನಾ)= ಸುಟ್ಟು ಸುಣ್ಣ ತಯಾರಿಸಲು ಬಳಸುವ ಕಲ್ಲು.

ಸುಣ್ಣುದ್ಡಾಯಿ (ನಾ)= ಎಲೆ ತಿನ್ನುವವರು ಸುಣ್ಣ ತುಂಬಿಟ್ಟು ಕೊಳ್ಳುವ ಡಬ್ಬಿ.

ಸುಣ್ಣುದ್ಗುತ್ತಿ (ನಾ)= ಹುಡುಗಿ ಗ್ರಾಮದ ವಾಯವ್ಯ ದಿಕ್ಕಿಗಿರುವ ಒಂದು ಗುಡ್ಡ.

ಸುಣ್ಣುದ್ಭಟ್ಟಿ (ನಾ)= ಸುಣ್ಣ ತಯಾರಿಸುವ ಕಾರ್ಖಾನೆ.

ಸುತಾನಿ (ನಾ)= ಹೊಂದಾಣಿಕೆ; ಹೊಂದಿಕೆ; ನೆಮ್ಮದಿ.

ಸುತಾನಿ ಭೀಳು (ಕ್ರಿ)= ಹೊಂದಿಕೆಯುಂಟಾಗು; ನೆಮ್ಮದಿ ಯುಂಟಾಗು; ಸುಖದ ಅನುಭವ ಉಂಟಾಗು; ಮಾಧುರ್ಯವುಂಟಾಗು.

ಸುತಾರ (ನಾ) ಮ.= ಬಡಿಗ; ಬಡಿಗ್ಯಾ.

ಸುತ್ಗಿ (ನಾ)= ಸುತ್ತಿಗೆ; ಕಲ್ಲು; ಕಬ್ಬಿಣ ಮೊದಲಾದವುಗಳನ್ನು ಕುಟ್ಟಲು ಬಳಸುವ ಒಂದು ಬಗೆಯ ಉಕ್ಕಿನ ಸಾಧನ.

ಸುತ್ತಳ್ತಿ (ನಾ)= ಸುತ್ತಳತೆ; ಸುತ್ತಲಿನ ಅಳತೆ; ಪರಿಧಿ.

ಸುತ್ತಾ (ಅ)= ಸುತ್ತಲೂ; ನಾಲ್ಕು ಕಡೆಯಲ್ಲಿ; ಸುತ್ತ-ಮುತ್ತ.

ಸುತ್ತಾಡು (ಕ್ರಿ)= ತಿರುಗಾಡು; ಅಲೆದಾಡು; ಫೇರಿ ಹಾಕು.

ಸುತ್ತಾ ಮುತ್ತಾ (ಅ)= ಸುತ್ತಲು; ನೆರೆಹೊರೆಯಲ್ಲಿ.

ಸುತ್ತಿಮುತ್ತಿ (ಅ)= ಮರಳಿ ಮರಳಿ; ಮತ್ತೆ ಮತ್ತೆ.

ಸುತ್ತು (ಕ್ರಿ)= ದಾರವನ್ನು ಸುರುಳಿಗೊಳಿಸು.

ಸುತ್ತುಂಗುರ (ನಾ)= ಸುರುಳಿಯಂತಿರುವ ತಂತಿಯುಂಗುರ.

ಸುತ್ತುನಾಗರ (ನಾ)= ಒಂದು ಪ್ರಕಾರದ ಬೇನೆ. ಕೊರಳ ಸುತ್ತ ಆಗುವ ಹುಣ್ಣು.

ಸುತ್ತು ಹಾಕಿ ಹೊಡಿ (ಕ್ರಿ)= ಸುತ್ತುವರಿದು ಹೊಡೆ; ನಾಲ್ಕೂ ದಿಕ್ಕಿನಲ್ಲಿ ಸುತ್ತಾಡಿ ಹೊಡೆ.

ಸುತ್ತುಹಾಕು (ಕ್ರಿ)= ಫೇರಿಹೊಡೆ; ಪ್ರದಕ್ಷಿಣೆ ಹಾಕು; ದೇವರ ಸುತ್ತ ಫೇರಿ ಹೊಡೆ.

ಸುತ್ತುಹೊಡಿ (ಕ್ರಿ)= ಸುತ್ತು ಹಾಕು (ನೋಡಿರಿ).

ಸುತ್ನಾಗರ (ನಾ)= ಸುತ್ತುನಾಗರ; ಒಂದು ಪ್ರಕಾರದ ಬೇನೆ. ಕೊರಳ ಸುತ್ತ ಆಗುವ ಹುಣ್ಣು.

ಸುದ್ದ (ವಿ)= ಶುದ್ಧ; ಹಸನು; ಜಳಜಳ.

ಸುದ್ದನ ಮಾರಿ (ನಾ)= ಚಂದುಳ್ಳ ಮುಖ; ಸುಂದರವಾದ ಮೋರೆ.

ಸುದ್ದಾ (ಅ)= ಕೂಡ; ಕೂಡಿಯೇ.

ಸುದ್ದಾಗು (ಕ್ರಿ)= ಶುದ್ಧಾಗು; ಒಳ್ಳೆಯವನಾಗು; ಒಳ್ಳೆಯದಾಗು.

ಸುದ್ದಿ (ನಾ)= ವಾರ್ತೆ; ಸಮಾಚಾರ; ಗೊಡವೆ; ಗೋಜು; ತಂಟೆ; ಸಂಗತಿ.

ಸುದ್ದಿರು (ಕ್ರಿ)= ಶುದ್ಧವಾಗಿರು; ಒಳ್ಳೆಯವನಾಗಿರು.

ಸುದ್ದ್ಯಾಕ (ಅ)= ಕೂಡ; (ಅಂವಾ ಸುದ್ಯಾಕ ಬರ್ಲಿಲ್ಲ, ಆಕಿ ಸುದ್ಯಾಕ ಹಣಿಕಿ ಹಾಕ್ಲಿಲ್ಲ ಎಂಬಂತೆ).

ಸುಧಾರ್ಣಾ (ನಾ)= ಸುಧಾರಣೆ; ಅಭಿವೃದ್ಧಿ.

ಸುಧಾರ್ಸು (ಕ್ರಿ)= ಸುಧಾರಣೆ ಮಾಡು; ಸುಧಾರಣೆ ಹೊಂದು; ತಿದ್ದು; ತಿದ್ದಿಕೊ; ಬೆಳೆವಣಿಗೆ ಹೊಂದು; ಅಭಿವೃದ್ಧಿಗೊಳಿಸು; ಸರಳ ಗೊಳಿಸು.

ಸುನಾರ (ನಾ)= ಅಕ್ಕಸಾಲಿಗ.

ಸುನಾವಣೆ (ನಾ)= ಫೈಸಲಾ; ನ್ಯಾಯ ನಿರ್ಣಯ.

ಸುನಿಲಕಡ್ಡೆ = ಪ್ರಸಿದ್ಧ ಜಾನಪದ ಹಾಡುಗಾರ.

ಸುನೀತಾ ವಿ. ಬಿರಾದಾರ (ನಾ)= ಬೀದರಿನ ಸಣ್ಣ ಕತೆಗಾರ್ತಿ ಮತ್ತು ಆಧುನಿಕ ವಚನಕಾರ್ತಿ.

ಸುನೇರಿ (ನಾ)= ಚಿನ್ನದ ಬಣ್ಣ; (ಗು) ಚಿನ್ನದ ಬಣ್ಣದ.

ಸುನ್ನ (ನಾ)= ಸೊನ್ನೆ; ಶೂನ್ಯ; ಪೂಜಿ.

ಸುಪಾನಿ (ನಾ)= ಮೂಗಿನ ಒಡವೆ; ಸುಪ್ಪಾಣಿ.

ಸುಪ್ಪಲಿ, ಸುಪ್ಲಿ (ನಾ)= ಸಣ್ಣ ಮೊರ; ಮಕ್ಕಳಾಟದ ಮೊರ.

ಸುಬಂಜಿ (ನಾ)= ಬೇನ ಚಿಂಚೋಳಿಯ ಒಬ್ಬ ಸಂತ ಸುಬಾನಜಿ ಮುತ್ಯಾ; ಸುಬಂಜಿ ಮುತ್ಯಾ.

ಸುಬಾ (ನಾ) ಉ.= ಸಂಶಯ.

ಸುಬಾಬರು (ಕ್ರಿ)= ಅನುಮಾನ ಉಂಟಾಗು; ಸಂಶಯ ಬರು.

ಸುಬಿದ್ರಾ (ನಾ)= ಸುಭದ್ರೆ; ಕೃಷ್ಣನ ತಂಗಿ; ಅರ್ಜುನನ ಹೆಂಡತಿ.

ಸುಮ್ನೆ (ಅ)= ಸುಮ್ಮನೆ; ವಿನಾಕಾರಣ; ಅಕಾರಣ.

ಸುಮ್ಮುಕ (ಅ)= ಸುಮ್ಮನೆ; ಮಾತಿಲ್ಲದೆ; ಮೌನವಾಗಿ; ಉಚಿತವಾಗಿ; ಪ್ರತಿಫಲವಿಲ್ಲದೆ.

ಸುಮ್ಮುಕ ಕೂಡು (ಕ್ರಿ)= ಸುಮ್ಮನೆ ಕುಳಿತುಕೊ; ಮೌನವಾಗಿ ಕುಳಿತುಕೊ; ಗಲಾಟೆ ಮಾಡದಿರು.

ಸುಮ್ಮುನ (ಅ)= ಸುಮ್ನೆ (ನೋಡಿರಿ).

ಸುಮ್ಮುನ್ಕೂಡು (ಕ್ರಿ)= ಸುಮ್ಮುಕ ಕೂಡು; ಸುಮ್ಮನೆ ಕುಳಿತುಕೊ; ಶಾಂತವಾಗಿರು; ಗಲಾಟೆ ಮಾಡದಿರು.

ಸುಮ್ಸುಮ್ನೆ (ದ್ವಿ)= ಅಕಾರಣ; ಅನಾವಶ್ಯಕ; ಸುಮ್ಮಸುಮ್ಮನೆ.

ಸುರಂಗು (ನಾ) ಹಿಂ.= ಭುಯಾರ; ನೆಲಮಾರ್ಗ; ತಲೆಕೆಳಗು ಮಾಡಿ ನೀರಲ್ಲಿ ಜಿಗಿದು ಮುಳುಗುವಿಕೆ.

ಸುರಂಗು ಹೊಡಿ (ಕ್ರಿ)= ನೀರಲ್ಲಿ ತಲೆಕೆಳಗು ಮಾಡಿ ಜಿಗಿದು ಆಳಕ್ಕೆ ಹೋಗು.

ಸುರಗಿ (ನಾ)= ಮದುವೆಯ ಸಮಾರಂಭದಲ್ಲಿ ಮದುಮಕ್ಕಳಿಗೆ ಮೀಯಿಸುವಾಗ ಅವರ ಸುತ್ತ ಐದು ತಂಬಿಗೆಗಳನ್ನಿಟ್ಟು ದಾರವನ್ನು ಸುತ್ತುವಿಕೆ. (ಸುರಗಿಯ ಹಾಡು: ಸುರಗಿಯಾ ಸುತ್ತಟಿಗೆ ಸಿರಿಬಾಗಿಲಿಗಿ ಬಿಸುಲ್ಬಂದೆ। ನಾಲತ್ವಾಟದ ಎಲಿ ಬಂದೆ ಹರ ಹರ ನಮ ಶಿವಗೆ ನೈಯೆಣ್ಣೆ॥).

ಸುರಗಿಸುತ್ತು (ಕ್ರಿ)= ಮದುಮಕ್ಕಳು ಮೀಯುವಾಗ ಅವರ ಸುತ್ತ ಐದು ತಂಬಿಗೆಗಳನ್ನಿಟ್ಟು ದಾರವನ್ನು ಸುತ್ತು.

ಸುರಯಿ (ನಾ) ಹಿಂ.= ನೀರು ತುಂಬಿಡುವ ಮಣ್ಣಿನ ಹೂಜಿ.

ಸುರಳೀತ (ವಿ)= ಸರಾಗ; ಸಲೀಸು; ಸರಳ; ಶಿಸ್ತು.

ಸುರುಳೀತಾಗು (ಕ್ರಿ)= ಸರಾಗವಾಗು; ಸಲೀಸಾಗು; ಬಾಳು ಹಸನಾಗು; ಕೆಲಸ ಸುಗಮಗೊಳ್ಳು.

ಸುರಿ (ಕ್ರಿ)= ನುಚ್ಚು ಮಜ್ಜಿಗೆ ಇತ್ಯಾದಿ ದ್ರವ ಆಹಾರವನ್ನು ಸುರ್ರಸುರ್ರ ಸದ್ದಾಗುವಂತೆ ಸೇವಿಸು, ಶಬ್ದವಾಗುವಂತೆ ಕುಡಿ.

ಸುರುಕಿ ಹೊಡಿ = ಸುರ್ರಸುರ್ರ ಸದ್ದು ಮಾಡುತ್ತ ದ್ರವ ಆಹಾರವನ್ನು ಸೇವಿಸು.

ಸುರುಸುರುಬತ್ತಿ, ಸುರ್ಸುರುಬತ್ತಿ (ನಾ)= ಸುರುಸುರುಸದ್ದು ಮಾಡುತ್ತ ಹೊತ್ತಿಕೊಳ್ಳುವ

ಪಟಾಕಿ; (ಜಾನಪದ ಪ್ರಾಸ: ಸುರುಸುರುಬತ್ತಿ ಸುರಂಗ ಬತ್ತಿ ನಾಡ್ಯಾಕೆಲ್ಲಾ ಒಂದೇ ಬತ್ತಿ; ವಿದ್ಯುತ್ತಿನ ತಂತಿ.)

ಸುರುಳಿ (ನಾ)= ಸುತ್ತಿಟ್ಟ ಸಣಬಿನ ತಟ್ಟು, ಸಿಂದಿಯ ಚಾಪೆ, ದಾರದ ಸಿಂಬೆ ಇತ್ಯಾದಿ.

ಸುರ್ಕಿ (ನಾ)= ಸುರುಕಿ; (ಸುರ್ಕಿನಾ ಊಟ ಲೇಸು -ಸರ್ವಜ್ಞ).

ಸುರ್ಕಿ ಹೊಡಿ (ಕ್ರಿ)= ತರಲ ಅಹಾರವನ್ನು ಸುರಿಸುರಿದು ಸೇವಿಸು, ಉಣ್ಣು.

ಸುರ್ಖಿ (ನಾ) ಉ.= ಕೆಂಬಣ್ಣ; ಕೆಂಪು ಮಸಿ.

ಸುರ್ತು (ನಾ)= ಅರಿವು; ಪ್ರಜ್ಞೆ; ಎಚ್ಚರ.

ಸುರ್ತುಬರು (ಕ್ರಿ)= ಮೈಮೇಲೆ ಎಚ್ಚರ ಬರು; ಎಚ್ಚರಗೊಳ್ಳು; ಪ್ರಜ್ಞೆ ಉಂಟಾಗು.

ಸುರ್ಮಾ (ನಾ)= ಕಾಡಿಗೆ; ಕಣ್ಣಿಗೆ ಹಚ್ಚಿಕೊಳ್ಳುವ ಕಪ್ಪು ಬಣ್ಣ.

ಸುಲಿ (ಕ್ರಿ)= ಕಬ್ಬಿನ ಸಿಪ್ಪೆ, ಮರದ ತೊಗಟೆ, ಪ್ರಾಣಿಯ ಚರ್ಮ ಇತ್ಯಾದಿಯನ್ನು ಕಳಚಿ ತೆಗೆ; ಅನ್ಯಾಯದಿಂದ ಹಣವನ್ನು ದೋಚು.

ಸುಲುದು ಕುಡು (ಕ್ರಿ)= ಸುಲಿದು ಕೊಡು; ಸಿಪ್ಪೆ ತೆಗೆದು ಕೊಡು; ಕಬ್ಬಿನ ಮೇಲ್ತೊಗಟೆ ತೆಗೆದುಕೊಡು; ಬಾಳೆ ಹಣ್ಣಿನ ಸಿಪ್ಪೆ ತೆಗೆದು ಕೊಡು.

ಸುಲೋಕು (ನಾ)= ಶ್ಲೋಕ; ಸಂಸ್ಕೃತ ಛಂದೋಬದ್ಧ ಕವಿತೆ.

ಸುಲೋಕು ಓದು (ಕ್ರಿ)= ಶ್ಲೋಕ ಪಠಿಸು.

ಸುಲ್ಗಿ (ನಾ)= ಸುಲಿಗೆ; ದೋಚುವಿಕೆ; ಅನ್ಯಾಯದಿಂದ ಹಣ ಸಂಗ್ರಹಿಸುವಿಕೆ.

ಸುಲ್ಗಿಮಲ್ಲಣ್ಣ (ನಾ)= ಭಕ್ತರಿಂದ ಹಣದೋಚುವ ಮಲ್ಲಣ್ಣ; ದೇವರ ಪುರೋಹಿತರು.

ಸುವರ್ಣ ಮಾಲಾದೀಕ್ಷಿತ (ನಾ)= ಬೀದರ ನಗರದ ಒಬ್ಬ ಕವಯತ್ರಿ.

ಸುವಾರ್ತೆ (ನಾ)= ಯೇಸು ಕ್ರಿಸ್ತನ ಸಂದೇಶ.

ಸುವಾಸುನು (ನಾ)= ಸುವಾಸನೆ; ಘಮಘಮ ವಾಸನೆ.

ಸುವ್ವಯ್ಯ (ನಾ)= ಕುಟ್ಟುವ ಹಾಡಿನ ಪಲ್ಲವಿ (ಹಾಡು: ಕಂದನ ಕೊಯ್ದು ಯಡಿ ಮಾಡೇ। ಸುವ್ವಯ್ಯ ಲಿಂಗ ಸುವ್ವಯ್ಯ।).

ಸುವ್ವರ (ನಾ) ಹಿಂ.= ಶೂಕದ; ಹಂದಿ.

ಸುವ್ವರ ಜಾತಿ (ನಾ)= ಹಂದಿಜಾತಿ; ಹಂದಿಕುಲ; ಹಂದಿಗುಣದ ಜನ, ಜಾತಿ.

ಸುಸ್ತ (ನಾ) ಹಿಂ.= ಮೈಗಳ್ಳತನ; ತಡಮಾಡುವಿಕೆ; ನಿಧಾನ.

ಸುಸ್ತಿ ಬಡ್ಡಿ (ನಾ)= ಅಸಲಿನೊಂದಿಗೆ ಬಡ್ಡಿಯ ಮೇಲೆ ಮರು ಬಡ್ಡಿ ಹೇರುವಿಕೆ; ಚಕ್ರಬಡ್ಡಿ.

ಸುಸ್ತುರು (ನಾ)= ಸೂತ್ರ; ಪತಂಗ (ಪಟ)ವನ್ನು ಸಮತೂಕದಲ್ಲಿ ಹಿಡಿದಿಡುವ ದಾರ.

ಸುಸ್ತುರು ಕಟ್ಟು (ಕ್ರಿ)= ಸೂತ್ರಕಟ್ಟು; ಗಾಳಿಪಟಕ್ಕೆ ಸಮತೂಕ ಕಾಯುವ ದಾರವನ್ನು ಕಟ್ಟು.

ಸುಳಿ (ನಾ)= ನೀರುಗುಂಡಾಗಿ ಸುತ್ತುವಿಕೆ; ಬಾಳೆದುಂಡಾಗಿ ಸುಳಿದೆಗೆಯುವಿಕೆ; ತಲೆಗೂದಲಿನ ಚಕ್ರ; ನೀರಿನ ಪ್ರವಾಹದಲ್ಲಿಯ ಚಕ್ರ; ಬಿರುಗಾಳಿಯಲ್ಲಿಯ ಚಕ್ರ; ಬೆನ್ನಲ್ಲಿಯ ಕೇಶ ಚಕ್ರ; ಜಲಾವರ್ತ.

ಸುಳಿಬಿಡು (ಕ್ರಿ)= ಸುಳಿಯನ್ನುತೆಗೆ; ಕುಡಿಯನ್ನು ಹೊಂದು; ಅಭಿವೃದ್ಧಿಯಾಗು.

ಸುಳುಘಾಳಿ (ಕ್ರಿ)= ಸುಂಟರಗಾಳಿ; ದೆವ್ವಗಾಳಿ; ಮೆಲ್ಲನೆ ಬೀಸುವ ಗಾಳಿ.

ಸುಳು, ಸುಳುವು (ನಾ)= ಸುಳುಹು; ಜಾಡು; ಗುರುತು.

ಸುಳುಹತ್ತು (ಕ್ರಿ)= ಗುರುತು ಹತ್ತು; ಜಾಡುಹತ್ತು; ಪತ್ತೆಯಾಗು; ಪತ್ತೆ ಹತ್ತು.

ಸುಳ್ಗೇಡಿ (ನಾ)= ಸುಳ್ಳಾಡಿ ಕೆಟ್ಟವನು; ಸುಳ್ಳಾಡುವವನು (ಬೈಗುಳ).

ಸುಳ್ಗೇಡ್ಯಾ (ನಾ)= ಸುಳ್ಳುಗಾರ; ಸುಳ್ಳಾಡುವವ (ಬೈಗುಳ).

ಸುಳ್ಳ (ನಾ)= ಸುಳ್ಳಾಡುವವನು.

ಸುಳ್ಳಾಡು (ಕ್ರಿ)= ಸುಳ್ಳು ಹೇಳು; ಹುಸಿನುಡಿ.

ಸುಳ್ಳಿ (ನಾ)= ಸುಳ್ಳಾಡುವವಳು (ಬೈಗುಳ).

ಸುಳ್ಳು (ವಿ)= ಹುಸಿ; ಅಸತ್ಯ; ಖರೆ ಅಲ್ಲದ.

ಸುಳ್ಳುಹಡಿ (ನಾ)= ಅತಿ ಸುಳ್ಳುಗಾರ; ಅತಿ ಸುಳ್ಳುಗಾರ್ತಿ (ಬೈಗುಳ).

ಸುಳ್ಳೆ (ಅ)= ಸುಮ್ಮನೆ; ಖರೆ ಇಲ್ಲದೆ; ಸತ್ಯ ಇಲ್ಲದೆ. (ಹಾಡು: ಸುಳ್ಳೆಯಾಕೊ ಬಡಿವಾರಾ ಖಾಲೆ ಆದೊ ಸಂಸಾರ –ಕೋರವಾರ ಆಣವೀರ).

ಸುಳ್ಯಾ (ನಾ)= ಸುಳ್ಳಾಡುವವನು; ಸುಳ್ಳುಗಾರ (ಬೈಗುಳ).

ಸೂಕಾ (ವಿ) ಹಿಂ.= ಒಣಗಿಸಿದ (ಫಲ, ಹಣ್ಣು, ಮುನಕ್ಕಾ, ಬಾದಾಮು, ಖರ್ಜೂರ, ಮಳ್ಳಿ ಬೀಜ ಇತ್ಯಾದಿ).

ಸೂಕ್ಸುಮ (ನಾ)= ಸೂಕ್ಷ್ಮ; ನಾಜೂಕು.

ಸೂಗ್ಸುಮ (ನಾ)= ಸೂಕ್ಸುಮ; ಸೂಕ್ಷ್ಮ; ನಾಜೂಕು.

ಸೂಚ್ನಾ (ನಾ)= ಸೂಚನೆ; ಮಾಹಿತಿ.

ಸೂಚ್ನಾ ಕುಡು (ಕ್ರಿ)= ಸೂಚಿಸು; ತಿಳಿಸು; ಮಾಹಿತಿ ನೀಡು.

ಸೂಟಿ (ನಾ)= ಛುಟ್ಟಿ; ರಜೆ; ಬಿಡುವು.

ಸೂಟು (ಕ್ರಿ)= ಸಿವುಟು; ಒರೆಸು; ಜಳಜಳಗೊಳಿಸು; (ನಾ) ಸೋಡಿ ಬಿಡುವಿಕೆ; ಛೂಟು; ಡ್ರೆಸ್ಸು.

ಸೂಟ್ಕೇಸಿ (ಕ್ರಿ)= ಒರೆಸಿ; ತಿಕ್ಕಿ; ಸಿವುಟಿ; ಜಳಜಳಗೊಳಿಸಿ.

ಸೂಟ್ಕೇಸು (ನಾ)ಇಂ.= ಬಟ್ಟೆ ಬರೆ ಇಡುವ ಪ್ರವಾಸಿ ಪೆಟ್ಟಿಗೆ.

ಸೂಡು (ನಾ)= ಹೊಂದಿಸಿ ಕಟ್ಟಿದ ತರಕಾರಿ; ಹುಲ್ಲು; ಕಣಿಕೆ ಇತ್ಯಾದಿಯ ಗಂಟು, ಕಂತೆ.

ಸೂಡು ಕಟ್ಟು (ಕ್ರಿ)= ತರಕಾರಿ, ಹುಲ್ಲು, ಕಣಿಕೆ, ನೋಟು ಇತ್ಯಾದಿಯ ಕಂತೆ ಕಟ್ಟು; ಹೊರೆಕಟ್ಟು.

ಸೂತುರ್ಧಾರಿ (ನಾ)= ಸೂತ್ರಧಾರಿ; ಬೈಲಾಟದ ಸೂತ್ರ ಹಿಡಿದು ನಡೆಸುವವನು; ಸಾರಥಿ.

ಸೂದ್ರ (ನಾ)= ಶೂದ್ರ; ದಲಿತ; ಕೆಳವರ್ಗದವನು.

ಸೂರ (ನಾ)= ಶೂರ (ಒಡಬು: ಆಹಾರೆ ವೀರಾ। ಆಹಾರೆ ಸೂರಾ। ಆಹಾರೆ ಶರ್ಭಾ॥).

ಸೂರಾಗಿಡು (ಕ್ರಿ)= ಚಪ್ಪರದಲ್ಲಿ ಹೊಂದಿಸಿಡು.

ಸೂರು (ನಾ)= ಚಪ್ಪರ; ಹುಲ್ಲಿನ ಚಪ್ಪರ; ಹುಲ್ಲಿನಾಸರೆ.

ಸೂರ್ಯಕಾಂತ ನಿನ್ನೇಕರ (ನಾ)= ಬೀದರ ನಗರದ ಮಂಗಲ ಪೇಟದ ಒಬ್ಬ ಕವಿಯ ಹೆಸರು.

ಸೂರ್ಯವಂಶಿ (ನಾ)= ಸೂರ್ಯೋದಯದ ನಂತರ ಏಳುವವನು. ನರಸಿಂಗ ಹುಳ್ಯಾ ಸೂರ್ಯವಂಶಿ ಎಂಬ ಸಾಂಸದ.

ಸೂರ್ಯಾ (ನಾ)= ಸೂರ್ಯ; ದಿನಪ; ಭಾಸ್ಕರ.

ಸೂರ್ಯಾ ಹುಟ್ಟು (ಕ್ರಿ)= ಸೂರ್ಯೋದಯವಾಗು.

ಸೂರ್ಜಾ (ನಾ)ಉ.= ಸೂರ್ಯ.

ಸೂಲಾ (ನಾ)= ಶೂಲ; ಹೆರಿಗೆ ನೋವು; ಒಂದು ಹೆರಿಗೆ ನಂತರ ಮತ್ತೊಂದು ಹೆರಿಗೆವರೆಗಿನ ಅವಧಿ.

ಸೂಲಗಿತ್ತಿ (ನಾ)= ಶೂಲಗಿತ್ತಿ; ಹೆರಿಗೆಯಾಗಲು ಸಹಕರಿಸುವವಳು.

ಸೂಳಿ (ನಾ)= ಸೂಳೆ; ವೇಶ್ಯೆ; ವ್ಯಭಿಚಾರಿಣಿ (ಬೈಗುಳ).

ಸೂಳಿಮಗ (ನಾ)= ಸೂಳೆಯಮಗ; ಹಾದರಕ್ಕೆ ಹುಟ್ಟಿದವನು; ಸೂಳೇಮಗ (ಬೈಗುಳ).

ಸೆಂಟಾ (ನಾ)= ಸೆಂಟ; ಶಾಟ; ಜನನೇಂದ್ರಿಯದ ಸುತ್ತ ಮುತ್ತ ಬೆಳೆಯುವ ಕೇಶರಾಶಿ (ತ್ರಿಪದಿ: ಹಾಟು ತುಂಬಿದ ತುಣ್ಣಿ। ಗೂಟದಂತಿರುವುದು। ಹಾಟೊಂದು ಬಿಟ್ಟು ಸುರಿದರೆ ಆ ತುಣ್ಣೆ ಖುಷಿಯ। ಸೆಂಟಕ್ಕೆ ಸರಿಯೆಂದ ಸರ್ವಜ್ಞ).

ಸೆಂಡ್ಗಿ (ನಾ)= ಸಂಡಿಗೆ; ವಡೆ; ಒಣಗಿಸಿಟ್ಟ ಸಂಡಿಗೆ.

ಸೆಕಿ (ನಾ)= ಸೆಕೆ; ಶಾಖ; ಕಾವು; ಧಗೆ; ಧೆಕೆ.

ಸೆಕಿ ಬಡಿ (ಕ್ರಿ)= ಸೆಕೆತಗಲು; ಶಾಖವು ತಗಲು; ಕಾವಿನ ಅನುಭವವಾಗು; ಧೆಕೆ ಬಡಿ.

ಸೆಕಿ ಹತ್ತು (ಕ್ರಿ)= ಸೆಕೆ ಬಡಿ (ನೋಡಿರಿ).

ಸೆಟಗಿ (ನಾ)= ಸೆಟವಿ; ವಿಧಿದೇವತೆ; ಇದಿ.

ಸೆಟಗೆವ್ವ (ನಾ)= ಸೆಟಗಿ (ನೋಡಿರಿ).

ಸೆಟಗೆವ್ವನ ಪೂಜೆ (ನಾ)= ಮಗುವಿಗೆ ತೊಟ್ಟಿಲಲ್ಲಿ ಹಾಕುವ ದಿನದಂದು, ತೊಟ್ಟಿಲ ಕೆಳಗೆ ಜೋಳ ಸುರುವಿ, ಕಳಸವಿಟ್ಟು ಮಾಡುವ ಪೂಜೆಯ ಶಾಸ್ತ್ರ; ವಿಧಿದೇವಿಯ ಪೂಜೆ.

ಸೆಟಗೊ (ಕ್ರಿ)= ಸೆಟೆ, ಮುನಿ; ನಿಗುರು; ಚಾಚು; ಸಹಕರಿಸದಿರು (ಹಾಡು: ಹಟಮಾರಿ ನನಗಂಡ। ಸೆಟಗೊಂಡು ತಾ ಹೋದ। ಊಟ ಉಡುಗಿಯ ಚಿಂತಿ ಮರೆತೇ ಹೋದ॥).

ಸೆಟಿ (ನಾ)= ಸೆಟೆ; ನಿಗುರು; ಚಾಚು; ನೆಗೆದಾಡು; ಸಹಕರಿಸದಿರು; ಮುನಿಸುದೋರು.

ಸೆಟಿಬ್ಯಾನಿ (ನಾ)= ಸೆಟೆಬೇನೆ; ಸೆಟೆಯುವಿಕೆ; ಸೆಟೆಯುವ ಅಭ್ಯಾಸ; ಟೆಟ್ನಸ್.

ಸೆಟವಿ (ನಾ)= ಸೆಟಗಿ; ಸೆಟಗೆವ್ವ; ಹಣೆ ಬರಹ ಬರೆವ ಹೆಣ್ಣು ದೇವತೆ.

ಸೆಟೇರು (ನಾ)= ಸೆಟ್ಟರು; ವ್ಯಾಪಾರಿಗಳು; ಶ್ರೀಮಂತರು (ಜೋಕುಮಾರ ಹಾಡು: ಅಟಮಿಧಿನಾ ಹುಟಿದಾನೆ ಕೊಮರಾಯಾ। ಸೆಟೇರು ಕರ್ದು ಬೆಸಗೊಳ್ರಿ ಜೋಕುಮಾರಾ॥).

ಸೆಟ್ಗಾರ (ನಾ)= ಶೆಟ್ಟಿಕಾರ; ಶೆಟ್ಟಿ; ವ್ಯಾಪಾರಿ; ಸಿರಿವಂತ.

ಸೆಟ್ಗಿ (ನಾ)= ಸೆಟಗಿ (ನೋಡಿರಿ).

ಸೆಣಮು (ನಾ)= ಸಣಬು; ಸೆಣಮಿನ ತಟ್ಟು; ಸಣಬಿನ ನಾರಿನ ಹುರಿಯಿಂದ ತಯಾರಿಸಲಾದ ಹಾಸಿಗೆ.

ಸೆಣಾವ, ಸಣಾವ (ನಾ)= ಸಣ್ಣವ್ವ; ಸಣ್ಣಮ್ಮ; ಚಿಕ್ಕಮ್ಮ.

ಸೆಣ್ಣದು (ವಿ)= ಸಣ್ಣನೆ; ಸಣ್ಣದು.

ಸೆಣ್ಪ್ (ವಿ)= ಸಣ್ಣನೆ; ಸಣ್ಣದು; ಸೆಣ್ಣದು.

ಸೆಣ್ಮಾಡು (ಕ್ರಿ)= ಶರಣು ಮಾಡು; ಶರಣು ಹೋಗು; ಅಡಿಗೆರಗು.

ಸೆಣ್ಮು (ನಾ)= ಸಣಬಿನ ಗಿಡ ಮತ್ತು ಅದರ ನಾರು.

ಸದಿ (ನಾ)= ಸದೆ; ಕಳೆ; ಬೆಳೆಯಲ್ಲಿ ಹುಟ್ಟಿದ ಹುಲ್ಲು. **(ಕ್ರಿ)=** ಸೆದಿಕಳಿ=ಬೆಳೆಯಲ್ಲಿ ಬೆಳೆದ ಕಳೆಯನ್ನು ಕಿತ್ತು ತೆಗೆ.

ಸೆರಗಾಗು (ಕ್ರಿ)= ಮುಟ್ಟಾಗು; ರಜಸ್ವಲೆಯಾಗು; ಋತು ಮತಿಯಾಗು; ಹೊರಗಾಗು; ಬಹಿಷ್ಟೆಯಾಗು.

ಸೆರಗು (ನಾ)= ಸೀರೆಯ ತಲೆಯ ಮೇಲೆ ಹೊದೆಯುವ ಭಾಗ; ಆಂಚಲ್; ಸೀಮೆ.

ಸೆರಾರತ (ನಾ) ಉ.=ಹುಡುಗಾಟಿಕೆ; ತುಂಟತನ.

ಸೆರಿ (ನಾ)= ಸೆರೆ; ಮದ್ಯ; ಹೆಂಡ; ಸರಾಯಿ.

ಸರಿಬೆಸಿ (ನಾ)= ಸರಿಬೆಸ ಆಟ; ಸಮ ವಿಷಮ ಆಟ; ಮದುಮಕ್ಕಳಾಡುವ ಸಮವಿಷಮ ಆಟ.

ಸೆರ್ಗಾಗು (ಕ್ರಿ)= ಸೆರಗಾಗು (ನೋಡಿರಿ).

ಸೆರ್ಗುಹಾಸು (ಕ್ರಿ)= ಸೂಳೆಗಾರಿಕೆ ಮಾಡು.

ಸೆರ್ಪ (ನಾ)= ಸರ್ಪ; ಹಾವು.

ಸೆರ್ವಿ, ಸೆರವಿ (ನಾ)= ಹುಲ್ಲು, ಕಟ್ಟಿಗೆ, ಕಣಿಕೆ ಇತ್ಯಾದಿಗಳ ಹೊರೆ ಕಟ್ಟಲು ಬಳಸುವ ನಾರಿನ ಹಗ್ಗ.

ಸೆಲಿ (ನಾ)= ಸೆಲೆ; ನೀರಿನ ಒಸರುವಿಕೆ; ಬುಗ್ಗೆ.

ಸೆಲ್ಯಾ (ನಾ)= ಸೆಲ್ಲೆ; ಉತ್ತರೀಯ.

ಸೆಲ್ಯಾ ಮುಂಡಾಸಿ (ನಾ)= ಕನ್ಯಾ-ವರ ಪರಸ್ಪರ ಒಪ್ಪಿಗೆಯಾದ ಮೇಲೆ, ನೆಂಟಸ್ತನ ಕುದುರಿದ ಮೇಲೆ, ಬೀಗರು ಒಬ್ಬರಿಗೊಬ್ಬರು ಮುಡಾಸಿ ಸುತ್ತಿ ಶಾಲುಹೊದಿಸಿ ಮಾಡುವ ಗೌರವ ಪದ್ಧತಿ. ಈಗ ಸೆಲ್ಲೆಟೋಪಿ ಸನ್ಮಾನ ಪ್ರಾರಂಭವಾಗಿದೆ.

ಸೆಲ್ಯಾ ಮುಂಡಾಸಿ ಸುತ್ಗೊ (ನು)= ಸನ್ಮಾನ ಸ್ವೀಕರಿಸು.

ಸೆಳಿ (ಕ್ರಿ)= ತೊಳೆದ ಬಟ್ಟೆಯನ್ನು ನೀರಲ್ಲಿ ಎಳೆದಾಡಿ ಇನ್ನಷ್ಟು ನಿರ್ಮಲಗೊಳಿಸು; ಬಟ್ಟೆತೊಳೆ (ಉದಾ: ಹರ್ಯಾ ನೀರಾಗ ಅರ್ಬಿಸೆಳ್ದೂರ ಝುಳ ಝುಳಾ ಆಗ್ತಾವ).

ಸೆಳಿಮಂಚ (ನಾ)= ಸೆಳೆದಾಡುವ ಮಂಚ; ತೂಗುವ ಮಂಚ.

ಸೆಳ್ಕೊ (ಕ್ರಿ)= ಸೆಳೆದುಕೊ; ತನ್ನತ್ತ ಬರುವಂತೆ ಮಾಡಿಕೊ; ನೀರಲ್ಲಿ ಬಟ್ಟೆಯನ್ನು ಎಳೆದಾಡಿಕೊ.

ಸೇಂಗಾ (ನಾ)= ನೆಲಗಡಲೆ; ಭುಯ್ಮೂಂಗ.

ಸೇಂಗಾಬೀಜ (ನಾ)= ನೆಲಗಡಲೆ ಕಾಳು.

ಸೇಂದಿ (ನಾ)= ಸಿಂಧಿ; ಈಚಲು ಮರದ ರಸ; ಫಾವರಿಗೆ; ನೀರು ಸೇದಿಕೊಳ್ಳುವ ಸಾಧನ.

ಸೇಂದು (ಕ್ರಿ)= ಸೇದು; ಬಾವಿ ಮೊದಲಾದವುಗಳಿಂದ ನೀರನ್ನು ಮೇಲಕ್ಕೆತ್ತು.

ಸೇಂದ್ಕೊ (ಕ್ರಿ)= ನೀರನ್ನು ಬಾವಿಯಿಂದ ಮೇಲೆತ್ತಿಕೊ; ಸೇಂದಿಯ ಸಹಾಯದಿಂದ ನೀರನ್ನು ಮೇಲೆತ್ತಿಕೊ.

ಸೇಣಿ (ನಾ)= ಎರಡು ದುಡ್ಡು (ನಿಜಾಮಕಾಲದ ನಾಣ್ಯಗಳ ಎಣಿಕೆ ಪದ್ಧತಿ) **ಮೂರು ಸೇಣಿ =** ಆರುದುಡ್ಡು; ಒಂದಾಣಿ ಒಗಟು: ಅದ್ಧೇಲಿ ಅರ್ಭಾಟ। ಮೂರಸೇಣಿ ಧಿಮಾಕ । ಮೂರ್ಸೇರಕ್ಕಿ ತಂದು। ಆರ್ಸಾರಿ ಅಳಿತಾರ। ಶಾಂತವೀರ । ಎಂಬಂತೆ.

ಸೇದಾಭಾಯಿ (ನಾ)= ಸೇಂದಿಕೊಂಡು ನೀರನ್ನು ತುಂಬಿಕೊಳ್ಳುವಂತಹ ಬಾವಿ.

ಸೇದಿ (ನಾ)= ಸೇಂದಿ; ನೀರು ಸೇದಿಕೊಳ್ಳುವ ಸಾಧನ; ಘಾವರ್ಗಿ.

ಸೇದು (ಕ್ರಿ)= ಸೇಂದು; ನೀರನ್ನು ಘಾವರಿಗೆಯಿಂದ ಮೇಲೆತ್ತು; ಹಗ್ಗದ ಆಧಾರದಿಂದ ಆಳದಲ್ಲಿ ಇರುವ ವಸ್ತುವನ್ನು ಮೇಲೆತ್ತು.

ಸೇದ್ಕೊ (ಕ್ರಿ)= ಸೇಂದ್ಕೋ (ನೋಡಿರಿ).

ಸೇಬು (ನಾ)= ಒಂದುಬಗೆಯ ಮರ ಮತ್ತು ಅದರ ಹಣ್ಣು.

ಸೇಬ್ಯಾ (ನಾ)= ಶೋಭೆ; ಸಭೆ; ಸಮಾರಂಭ.

ಸೇರಿ (ನಾ)= ಸಾಮಯಿಕ ಜಾಗ; ಎರಡು ಮನೆಗಳ ನಡುವೆ ಇರುವ ಒಟ್ಟಿನ ಖಾಲಿ ಜಾಗ.

ಸೇರಿಸು (ಕ್ರಿ)= ತಲುಪಿಸು; ಮುಟ್ಟಿಸು; ಬೆರೆಸು; ತುರುಕು.

ಸೇರು (ಕ್ರಿ)= ಮುಟ್ಟು ; ತಲುಪು; ಒಳಹೋಗು; ದಾಖಲಾಗು; ಪ್ರಿಯವಾಗು (ನಾ) ಧಾನ್ಯ ಅಳೆಯುವ ಒಂದು ಮಾಪು; ವಸ್ತುವಿನ ಒಂದು ತೂಕದ ಕಲ್ಲು; ನಾಲ್ಕು ಪಾವು.

ಸೇರ್ಕಿ (ನಾ)= ಸೇರಿಕೆ; ಇಷ್ಟ; ಹಿತ.

ಸೇರ್ಲಾರದೋರು (ನಾ)= ಹಿತ ಬಯಸದವರು; ವಿರೋಧಿಗಳು (ಗಾದೆ: ಸೇರ್ಲಾರ್ದೋರ್ೀರ್ಮ್ಂದ ಸೀರಿಕಳ್ದು ಕುಣ್ದಾಂಗ।).

ಸೇರ್ಸೇರು (ದ್ವಿ)= ಅನೇಕ ಸೇರುಗಟ್ಲೆ (ಪೀಣೆ ಹಾಡು: ಆಗುಡ್ಡ ನೋಡು। ಈಗುಡ್ಡ ನೋಡು। ಗುಡ್ಡದ ಮ್ಯಾಲ ಆನಿ ನೋಡು। ಆನಿಮ್ಯಾಲ ಅಂಬಾರಿ ನೋಡು। ಅಂಬಾರಿದಾಗ ಅರ್ಸನೋಡು। ಅರ್ಸನ್ಕೈದಾಗ ಕುಡಗಿಲನೋಡು। ಮಾರ್ಮಾರು ಹುಲ್ಲು। ಸೇರ್ಸೇರು ಹಾಲು।।).

ಸೇಲೂ (ನಾ) ಹಿಂ.= ಶಾಬಾದಿ ಕಲ್ಲು; ಘರ್ಸಿಕಲ್ಲು.

ಸೇವಂತಿ (ನಾ)= ಶೇವಂತಿ; ಸೇವಂತ್ಗಿ; ಸ್ಯಾವಂತ್ಗಿ; ಒಂದು ಬಗೆಯ ಹೂವು ಮತ್ತು ಅದರಗಿಡ.

ಸೇವಾ (ನಾ) ಸಂ.= ಸೇವೆ.

ಸೇವಾ, ಸೇವು (ನಾ)= ಸೇವಿಗೆಯಂತೆ ಒತ್ತಿ ಎಣ್ಣೆಯಲ್ಲಿ ಕರಿದು ತಯಾರಿಸುವ ಒಂದು ಬಗೆಯ ಖಾರದ ತಿನಿಸು.

ಸೈ (ನಾ)= ಸವಿ; ರುಚಿ; ರುಚಿಯಾದದ್ದು; ಖರೆ ಉದಾ: ನಿಮದ್ದೇ ಮಾತು ಸೈಯಪಾ, ಆಯ್ತಾ?.

ಸೈತ (ಅ)= ಸಹಿತ; ಕೂಡ; ಜತೆಗೂಡಿ.

ಸೈತಾನ (ನಾ) ಉ.= ದೆವ್ವ, ಭೂತ, ಪಿಶಾಚ ಮುಂತಾದ ದುಷ್ಟ ಶಕ್ತಿ.

ಸೈನಿಕಾರ (ನಾ)= ಸಂತಪೂರದ ವೀರಶೆಟ್ಟಿ ಸೈನಿಕಾರ ಎಂಬ ಸಾಹಿತಿ ಮತ್ತು ಸಮಾಜ ಕಾರ್ಯಕರ್ತ.

ಸೈನೀರ ಬಸವರಾಜ (ನಾ)= ಲಿಂಗೈಕ್ಯ ಬಸವರಾಜ ಸೈನೀರ ಎಂಬ ಕವಿ ಮತ್ತು ನಾಟಕಕಾರ. **ಬೆಳಗಾಗುತಿದೆ** ಕವನ ಸಂಕಲನದ ಮೂಲಕ ಬೀದರ ಜಿಲ್ಲೆಯಲ್ಲಿ ಕಾವ್ಯ ಪ್ರಕಾಶನಕ್ಕೆ ನಾಂದಿ ಹಾಡಿದವರು.

ಸೈನೀರು (ನಾ)= ಕುಡಿಯುವ ನೀರು.

ಸೈನೀರ್ಭಾಯಿ (ನಾ)= ಕುಡಿಯುವ ನೀರಿನ ಬಾವಿ.

ಸೈಪಾಕ (ನಾ)= ಸ್ವಯಂಪಾಕ; ಹಿಟ್ಟು; ಅಡಿಗೆಗಾಗಿ ಸಿದ್ಧಪಡಿಸಿದ ಹಿಟ್ಟು.

ಸೈಪಾಕ ಭಿಕ್ಷಾ (ನಾ)= ಸ್ವಯಂಪಾಕ ಭಿಕ್ಷೆ; ಜಂಗಮರು ಮನೆಯಮನೆಗೆ ತಿರುಗಿ ಬೇಡುವ ಹಿಟ್ಟಿನ ಭೀಕ್ಷೆ.

ಸೈಯೊಾಗು (ಕ್ರಿ)= ಸಿಹಿಯಾಗು; ರುಚಿಯಾಗು; ಹಿತವಾಗು.

ಸೈಯೆಣ್ಣಿ(ನಾ)= ಒಳ್ಳೆಣ್ಣೆ; ಉಂಬುವ ಎಣ್ಣೆ; ಅಡಿಗೆ ಎಣ್ಣೆ.

ಸೈರ (ನಾ)= ಹೂಗಾರ; ಸೈವ.

ಸೈರಮನಿ (ನಾ)= ಹೂಗಾರನ ಮನೆ.

ಸೈರಾ (ವಿ)= ತುಂಟ; ತುಡುಗು; ಅಲೆಮಾರಿ; ಬಿಡಾಡಿ.

ಸೈರಾದನ (ನಾ)= ತುಡುಗುದನ; ಅಲೆಮಾರಿದನ; ತುಂಟುದನ.

ಸೈರಿ (ನಾ)= ರಮ್ಜಾನ ತಿಂಗಳಲ್ಲಿ ಮುಲ್ಲಾಗಳು ಹಾಕುವ ಜಾಗರಣೆಯ ಹಕಾರಿ.

ಸೈಲಾಗು (ಕ್ರಿ)= ಸಡಿಲಾಗು; ಢೀಲಾಬೀಳು; ಜೋತುಬೀಳು.

ಸೈಲಿ (ನಾ)ಉ.= ಗಳತಿ; ಮಿತ್ರ.

ಸೈಲು (ವಿ)= ಸಡಿಲು; ಢೀಲಾ; ದೊಗಳೆ.

ಸೈಲುಬಿಡು (ಕ್ರಿ)= ಸಡಿಲುಬಿಡು; ಢೀಲು ಬಿಡು; ಬಿಗಿ ಹಿಡಿಯದಿರು.

ಸೈಲು ಭೀಳು (ಕ್ರಿ)= ಸೈಲಾಗು ಸಡಿಲಾಗು; ಢೀಲಾಬೀಳು; ಜೋತುಬೀಳು; ದೊಗಳೆಯಾಗು.

ಸೈವ (ನಾ)= ಶೈವ; ಶಿವಭಕ್ತ; ಹೂಗಾರ; ಸೈರ.

ಸೈಸ (ನಾ)= ಸಾಕಿದ ಕುದುರೆಯ ಸೇವೆ ಮಾಡುವವನು; (ಉದಾ: ಭರ್ತೃಹರಿಯ ಕಿರಿಯ ರಾಣಿ ಸೈಸನನ್ನು ಪ್ರೀತಿಸಿದಳು).

ಸೈಸು (ಕ್ರಿ)= ಸಹಿಸು; ತಾಳು; ಸಮಾಧಾನ ಹೊಂದು.

ಸೊಂಗು (ನಾ)= ಸೋಂಗು; ಸೋಗು; ವೇಷ; ನಾಟಕದಲ್ಲಿಯ ಪಾತ್ರ; ಕೋಲಾಟದಲ್ಲಿಯ ಪಾತ್ರ; ಬೈರೂಪಿ ಪಾತ್ರ.

ಸೊಂಡಿ (ನಾ)= ಸೊಂಡೆ; ಸೊಂಡಿಲು; ಆನೆಯ ಮೂಗು; ಗಣಪತಿಯ ಮೂಗು

(ಶಿಶುಕವಿತೆ: ಸೊಂಡಿ ಸ್ವಲ್ಪಾ ಸಣ್ಣದು ಮಾಡು ಇಲಿ ಸ್ವಲ್ಪಾ ದೊಡ್ಡದು ನೋಡು ಬೇಕಾದಷ್ಟು ಬೈನೀ ನಿಂದೇ ಭಾರಿ ಚೈನಿ॥ ಜಿ.ಪಿ. ರಾಜರತ್ನಂರವರ 'ಮುದ್ದು ಕೃಷ್ಣ' ದಿಂದ); ಏತನೀರಾವರಿ ಬಕ್ಕಣದ ನೀರು ಚೆಲ್ಲುವ ಮೂಗು.

ಸೊಂಡಿಲಿ (ನಾ)= ಸೊಂಡಿಲಂಥ ಮೂಗುಳ್ಳ ವಿಷಕಾರಿ ಇಲಿ; ಚಂಡುಲಿ; ಚುಚಂದ್ರಿ.

ಸೊಂಡಿ ಹಗ್ಗ (ನಾ)= ಆನೆಯ ಸೊಂಡಿಲಂತೆ ದಪ್ಪವಾಗಿರುವ ಏತ ನೀರಾವರಿಯ ಬಕ್ಕಣದ ನೀರು ಚೆಲ್ಲುವ ಮೂಗಿಗೆ ಕಟ್ಟುವ ಹಗ್ಗ.

ಸೊಂಡೆಗ್ಗ (ನಾ)= ಸೊಂಡಿ ಹಗ್ಗ (ನೋಡಿರಿ).

ಸೊಂತ (ನಾ)= ಸ್ವತಃ; ಕಲ್ಬುರ್ಗಿ ಜಿಲ್ಲೆಯಲ್ಲಿರುವ ಜೋಯಿಸರ (ಬುಡುಬುಡುಕೆಯವರ) ಊರು; ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ಊರು.

ಸೊಕ್ಕಿದೋರು (ನಾ)= ಸೊಕ್ಕು ಹೆಚ್ಚಾದವರು; ಹಮ್ಮುಬಿಮ್ಮಿನವರು (ಭಜನೆ: ಸೊಕ್ಕಿದೋರ ಹಲ್ಲು ಮುರಿಯುವನು। ದಿಕ್ಕು ದಿಕ್ಕಿನಲ್ಲಿ ಮೆರೆಯುವನು। ದಿಕ್ಕಿನಲ್ಲಿ ಮೆರೆಯುವನು॥ -ಸಿದ್ಧ ಪ್ರಭುಮಹಾರಾಜರು).

ಸೊಕ್ಕಿಳಿ (ಕ್ರಿ)= ಅಹಂಕಾರ ಮಾಯವಾಗು; ಗರ್ವಭಂಗವಾಗು; ಸೊಕ್ಕು ಅಡಗು.

ಸೊಕ್ಕು (ನಾ)= ಅಹಂಕಾರ; ಅಮಲು; ಮದ; ಹೆಮ್ಮೆ; ಗರ್ವ; ಠೀವಿ; ಗತ್ತು.

ಸೊಕ್ಕು ಆಡಿಸೇರ್ಲಿ (ನು)= ಅಹಂಕಾರ ಕರಗಿ ಅವನ ಹೆಣ ಅಡವಿಪಾಲಾಗಲಿ (ಬೈಗುಳ).

ಸೊಕ್ಕು ಮುರಿ (ಕ್ರಿ)= ಜಂಬವನ್ನು ಇಳಿಸು; ಗರ್ವ ಭಂಗ ಮಾಡು; ಸೊಕ್ಕು ಅಡಗಿಸು.

ಸೊಕ್ಕೇರು (ಕ್ರಿ)= ಅಹಂಕಾರ ತಲೆಗೇರು; ಘಮಂಡ ಅತಿಯಾಗು.

ಸೊಗುಡು (ನಾ)= ಸೊಗಡು; ಕಳಂಕ; ವ್ಯಸನ.

ಸೊಗುಡುಸುತ್ತು (ಕ್ರಿ)= ಗಾಳಿತಟ್ಟು; ಕಲಂಕಹತ್ತು; ಅನಾದರವುಂಟಾಗು; ಸೊಗಡು ಆದರಿಸು.

ಸೊಚ್ಚ (ನಾ)= ಸ್ವಚ್ಛ; ನಿರ್ಮಲ; ಜಳಜಳ.

ಸೊಟುಕ್ಕನೆ (ಅ)= ಸೊಟ್ಟನೆ; ರೊಪ್ಪನೆ; ರಪ್ಪನೆ.

ಸೊಟ್ಟ (ವಿ)= ಕೆಲಸಕ್ಕೆ ಬಾರದ; ತುಚ್ಛವಾದ; ಹೀನವಾದ ಅತಿ ಅಗ್ಗದ ಬೆಲೆಯ; ತೆಳ್ಳಗಿನ.

ಸೊಟ್ಟನೆ (ಅ)= ರಪ್ಪನೆ; ರೊಪ್ಪನೆ (ಕೈಯಿಂದ ಮೆಲುಕಿನಲ್ಲಿ ಹೊಡೆಯುವಿಕೆ).

ಸೊಟ್ಟ ಮಾರಿ (ನಾ)= ಸೊಟ್ಟು ಮೋರೆ; ಡೊಂಕು ಮೋರೆ.

ಸೊಟ್ಟಾಗು (ಕ್ರಿ)= ತೆಳ್ಳಾಗಾಗು; ಬಡಕಲಾಗು; ಒಣಗು.

ಸೊಟ್ಟಿ (ನಾ)= ಸೊಪ್ಪೆ; ತೊಗಟೆ.

ಸೊಡ್ಡು (ನಾ)= ಅಂಗಳ **ಕಸಗೂಡಿಸುವ** ಕಸಬಾರಿಗೆ.

ಸೊಡ್ಡುಹೊಡಿ (ಕ್ರಿ)= ಅಂಗಳಲ್ಲಿಯ ಕಸಗೂಡಿಸು.

ಸೊಡ್ಡೆಣ್ಣಿ(ನಾ)= ಸೊಡರೆಣ್ಣೆ; ದೀಪದ ಎಣ್ಣೆ ಹಣತೆಯಲ್ಲಿ ಉರಿದುಳಿದ ಜಿಡ್ಡೆಣ್ಣೆ, ಜಿಗುಟುಗಟ್ಟಿದ ಎಣ್ಣೆ.

ಸೊದ್ಯಾಣ (ನಾ)= ಸ್ವಾಧೀನ (ಗಾದೆ: ಪರಸೊದ್ಯಾಣ, ಊಟಕ ಮದ್ಯಾಣ).

ಸೊನಯಿ, ಸೊನಾಯಿ (ನಾ)= ಶಹನಾಯಿ; ಹಲಗೆವಾದ್ಯದೊಂದಿಗೆ ಬಾರಿಸುವ ಒಂದು ಮುಖವಾದ್ಯ.

ಸೊನಾಯಿಭಾರ್ಸು (ಕ್ರಿ)= ಶಹನಾಯಿ ನುಡಿಸು.

ಸೊನ್ನಲಾಪುರ (ನಾ)= ಸೊಲ್ಲಾಪುರ; ಶರಣ ಸಿದ್ಧರಾಮೇಶ್ವರರ ಕಾಯಕ ಭೂಮಿ ಹಾಗೂ ಪುಣ್ಯ ಕ್ಷೇತ್ರವಿರುವ, ಮಹಾರಾಷ್ಟ್ರಕ್ಕೆ ಸೇರಿದ ಒಂದು ಕನ್ನಡಿಗರಧಿಕವಿರುವ ಪಟ್ಟಣ. (ಆರತಿ ಹಾಡು: ಧರೆಯೊಳಧಿಕಾ ವಾಸಸೊನ್ನಲ। ಪುರದ ಸಿದ್ಧರಾಮಗೆ। ಕರ್ಪುರಾರುತಿ ಬೆಳಗಿರೇ ಕಾರುಣ್ಯ ಮೃಡಕರ ದೇವಗೆ ಕರ್ಪುರಾರುತಿ।।).

ಸೊಪನ (ನಾ)= ಸ್ವಪ್ನ; ಕನಸು.

ಸೊಬಾವ (ನಾ)= ಸ್ವಭಾವ; ನಡಾವಳಿ; ನಡೆನುಡಿ.

ಸೊರಂಡಿ (ನಾ)= ಆಳದವರೆಗೆ ಸುರಂಗದಂತೆ ಕೊರೆದು ಕೊಂಡಿರುವ ನೆಲಮಾರ್ಗ.

ಸೊರಣಿ (ನಾ)= ಸ್ಮರಣೆ; ನೆನಪು; ಧ್ಯಾನ (ಭಜನೆ: ಶಿವನ ಭಜನಿಮಾಡೋ। ಶಿವ। ಶರಣರ ಕೊಂಡಾಡೋ ಶಿವಶಿವ।। ಭವದ ಬಾಧಿ ಕಳೆಯೊ। ಆತನ। ಸೊರಣೆಯ ಮರಿಭ್ಯಾಡೋ ಶಿವಶಿವ।।).

ಸೊರಾ (ನಾ)= ಸ್ವರ; ಕಂಠ; ಧ್ವನಿ.

ಸೊರ್ಗ (ನಾ)= ಸ್ವರ್ಗ; ಕೈಲಾಸ; ದೇವಲೋಕ.

ಸೊರ್ಗು (ಕ್ರಿ)= ಸೊರಗು; ಕೃಷನಾಗು; ಬಡಕಲಾಗು; ಸೊಟ್ಟಾಗು; ಒಣಗು.

ಸೊಲುಪು (ವಿ)= ಸ್ವಲ್ಪ; ತುಸು; ಕೊಂಚ.

ಸೊಲ್ಗಿ (ನಾ)= ಎರಡು ಸೇರು ಕಾಳಿನ ಅಳತೆಮಾನ; ಸೊಲ್ಲಿಗೆ.

ಸೊಲ್ಲಿಗಿ (ನಾ)= ಸೊಲ್ಗಿ (ನೋಡಿರಿ).

ಸೊಸಿ (ನಾ)= ಸೊಸೆ; ಮಗನ ಹೆಂಡತಿ; ಅಂಬಾಬಾಯಿಯ ಘಟಸ್ಥಾಪನೆಯಲ್ಲಿ ಮೂಡುವ ಮೊಳಕೆ, ಸಸಿ.

ಸೊಳ್ಳಿ (ನಾ)= ಸೊಳ್ಳೆ; ಮೂಗಿನ ಹೊರಳೆ; ನಾಸಾರಂಧ್ರ; ದೋಮೆ; ಚಿಕ್ಕಡು.

ಸೊಳ್ಳುಸು (ಕ್ರಿ)= ಸೊಳ್ಳಿಸು; ಪೊಳ್ಳುಗೊಳಿಸು; ತಿಂದು ಹಾಕು; ಉದಾ: ಗೊಳ್ಳಿ ಹತ್ತಿ ಖಟ್ಗಿ ಎಲ್ಲಾ ಸೊಳ್ಳುಸಿ ಬಿಟ್ಟಾವ ನೋಡ್ರಿ.

ಸೋ (ನಾ)= ಸೋಬಾನೆ ಹಾಡಿನ ಪಲ್ಲವಿಯ ಕೊನೆಯ ಪದ.

ಸೋಂಗು (ನಾ)= ಸೋಗು; ತೋರಿಕೆಯ ರೂಪ; ನಟನೆ; ನಾಟಕ, ಕೋಲಾಟ, ಬೀದಿನಾಟಕ ಇತ್ಯಾದಿಗಳಲ್ಲಿ ಬಣ್ಣ ಬಳಿದುಕೊಂಡು ಆಡುವ ಪಾತ್ರ.

ಸೋಂಗು ಮಾಡು (ಕ್ರಿ)= ನಟಿಸು; ನಟನೆ ಮಾಡು; ನಾಟಕದ ಪಾತ್ರ ನಿರ್ವಹಿಸು; ವಗಾಲು ಮಾಡು; ಭೇಸು ಮಾಡು.

ಸೋಂಗು ಹಾಕು (ಕ್ರಿ)= ನಾಟಕ, ಬೀದಿ ನಾಟಕ, ಕೋಲಾಟ, ದೊಡ್ಡಾಟದಲ್ಲಿ ಬಣ್ಣ ಬಳಿದುಕೊಂಡು ಪಾತ್ರವನ್ನು ನಿರ್ವಹಿಸು.

ಸೋಂಪು (ನಾ)= ಸೋಪು; ಒಂದು ಬಗೆಯ ಸಸ್ಯ ಮತ್ತು ಸುವಾಸನೆಯಿಂದ ಕೂಡಿದ, ತಿನ್ನಬಹುದಾದ ಜೀರಿಗೆ ಯಾಕಾರದ ಕಾಳು.

ಸೋಗಿಸು (ಕ್ರಿ)= ಶೋಕಿಸು; ದುಃಖಿಸು; ಅಳು; ಕಣ್ಣೀರಿಡುತ್ತ ಗೋಳಾಡು.

ಸೋಗು (ನಾ)= ಸೋಂಗು; ತೋರಿಕೆಯ ರೂಪ; ವೇಷ; ಮಾರುವೇಷ; ಛದ್ಮ ವೇಷ; ನಟನೆ.

ಸೋಗುಲಾಡಿ (ನಾ)= ಸೋಂಗು ಮಾಡುವವನು; ನಟನಾಚತುರ.

ಸೋಗ್ಸಿಸೋಗ್ಸಿ ಅಳು (ಕ್ರಿ)= ದುಃಖ ತೋಡಿಕೊಂಡು, ಹಾಡಾಡಿಕೊಂಡು ಕಣ್ಣೀರು ಹಾಕು; ಕಣ್ಣೀರಿನೊಂದಿಗೆ ದುಃಖವನ್ನು ಪ್ರದರ್ಶಿಸು.

ಸೋಗ್ಸು (ಕ್ರಿ)= ಸೋಗಿಸು; ಶೋಕಿಸು; ದುಃಖಿಸು.

ಸೋಜಿ (ನಾ)= ರವೆ; ಸಜ್ಜಕ; ಸಜ್ಜಿಗೆ.

ಸೋಟಾ (ನಾ)= ಲಟ್ಟು; ಬಡಿಗೆ; ದೊಣ್ಣೆ (ಗಾದೆ: ಹೊಟ್ಟಿ ಹೊರ್ಗಹೋಯ್ತು, ಸೋಟಾ ಮನಿಗಿ ಬಂತು).

ಸೋಡಚೀಟಿ (ನಾ) ಮ.= ಫಾರೀಕತಿ ಪತ್ರ; ವಿವಾಹ ವಿಚ್ಛೇದನ; ಫಟಸ್ಫೋಟ; ತಲಾಕ; ತಲಾಕನಾಮಾ.

ಸೋಡಾ (ನಾ)= ಬಟ್ಟೆ ತೊಳೆಯಲು ಬಳಸುವ ಕಾಸ್ಟಿಕ ಸೋಡಾ; ಅಡುಗೆಗೆ ಉಪಯೋಗಿಸುವ ಒಂದು ಬಗೆಯ ಕ್ಷಾರ; ತಿಂಬುವ ಸೋಡಾ.

ಸೋದ (ನಾ)= ಶೋಧ; ಶೋಧನೆ; ಹುಡುಕಾಟ; ತಪಾಸು.

ಸೋದ ಮಾಡು (ಕ್ರಿ)= ಶೋಧ ಮಾಡು; ಶೋಧಿಸು; ಹುಡುಕಾಡು; ತಪಾಸುಮಾಡು.

ಸೋನಾಮುಖಿ (ನಾ) ಹಿಂ.= ಒಂದು ಬಗೆಯ ರೇಚಕ ಗುಣವುಳ್ಳ ಎಲೆ ಮತ್ತು ಅದರ ಗಿಡ.

ಸೋನ್ಯಾ (ನಾ) ಮ.= ಶೂನ್ಯ; ಶೂನ್ಯ ಮಾಸ; ಯಳ್ಳಮವಾಸ್ಯೆಯ ನಂತರದ ತಿಂಗಳ ಅವಧಿ.

ಸೋಪು (ನಾ)= ಸೋಂಪು; ಸಾಬೂನು.

ಸೋಬಾ (ನಾ)= ಶೋಭೆ; ಸಿಂಗಾರ.

ಸೋಬಾನ (ನಾ)= ಫಲಶೋಭನ ಕಾರ್ಯಕ್ರಮ; ನಿಷೇಕ; ಪ್ರಸ್ತ; ಗರ್ಭಾದಾನ.

ಸೋಬಾನ ಮಾಡು (ಕ್ರಿ)= ಫಲಶೋಭನ ಶಾಸ್ತ್ರ ಪೂರೈಸು.

ಸೋಬಾನವೆ (ನಾ)= ಫಲಶೋಭನ ಸಮಾರಂಭದಲ್ಲಿ ಹಾಡುವ ಹಾಡಿನ ಫಲ್ಲವಿ; ಸೋಬಾನೆ ಹಾಡಿನ ಪಲ್ಲವಿಯ ಕೊನೆಯಪದ.

ಸೋಮ್ವಾರ (ನಾ)= ಸೋಮವಾರ; ಚಂದ್ರವಾರ; ಸ್ವಾಮಾರ.

ಸೋರಾಕ್ವಡಾ (ನಾ)= ಸೋರುವ ಕೊಡ; ಒಸರುವ ಪಾತ್ರೆ.

ಸೋರು (ಕ್ರಿ)= ಜಿನುಗು; ಒಸರು; ತೊಟ್ಟಿಕ್ಕು; ಧಾರೆಯಾಗಿ ಬೀಳು (ತತ್ವಪದ: ಒಂಬತ್ತು ತೂತಿಲಿ ಸೋರುವ ಭಾಂಡ್ಯಾ। ಘುಂಬಿದ ತಡ ಇಲ್ದೆ ಬರಿದಾಗೊ ಭಾಂಡ್ಯಾ।। –ದೇಶಾಂಶ ಹುಡಗಿ).

ಸೋರ್ಸು (ಕ್ರಿ)= ಸೋರಿಸು; ಸೋರುವಂತೆ ಮಾಡು; ಧಾರೆಯಾಗಿ ಬೀಳುವಂತೆ ಮಾಡು

(ಉದಾ: ಸುಂಬುಳ ಸೋರ್ಸು, ಜೊಲ್ಲು ಸೋರ್ಸು ಇತ್ಯಾದಿ).

ಸೋಲು (ಕ್ರಿ)= ಸೋಲನ್ನು ಒಪ್ಪು; ಸ್ಪರ್ಧೆಯಲ್ಲಿ ಹಿನ್ನಡೆ ತೋರಿಸು; ಶರಣಾಗತನಾಗು; ದಣಿದು ಸುಸ್ತಾಗು; ಪರಾಜಯ ಹೊಂದು; ಆಯಾಸಗೊಳ್ಳು; (ನಾ) ಉದ್ದಾದ ದಪ್ಪನೆ ಹಗ್ಗ; ಅಪಜಯ; ಪರಾಭವ; ದಣಿವು; ಆಯಾಸ.

ಸೋಲ್ಸು (ಕ್ರಿ)= ಸೋಲಿಸು; ಪರಾಭವಗೊಳಿಸು; ಸೋಲನ್ನು ಒಪ್ಪುವಂತೆ ಮಾಡು.

ಸೋಸಿತೆಗಿ (ಕ್ರಿ)= ಶೋಧಿಸಿ ತೆಗೆ; ಬಂಗಾರವನ್ನು ನಿಕ್ಕಾಗೊಳಿಸು.

ಸೋಸಿನೋಡು (ಕ್ರಿ)= ವಿಚಾರ ಮಾಡು; ಮನಸಿಗೆ ತೂಕ ಹಾಕಿ ನೋಡು; ಪರೀಕ್ಷಿಸು.

ಸೋಸು (ಕ್ರಿ)= ಬಟ್ಟೆ ಅಥವಾ ಜಲ್ಲಡಿಯಲ್ಲಿ ಹಾಕಿ ಕಲ್ಮಷ ಭಾಗವನ್ನು ಬೇರ್ಪಡಿಸು.

ಸೋಳಾ ಸ್ವಾಮಾರ (ನಾ)= ಹದಿನಾರು ಸೋಮವಾರ; ಹದಿನಾರು ಸೋಮವಾರ ನಿರಂತರ ನಡೆಸುವ ಶಿವನ ವ್ರತ.

ಸೋಳಾಖಂಬಾ ಮಸ್ಜಿ (ನಾ)= ಹದಿನಾರು ಕಂಭಗಳ ಸಾಲುಗಳುಳ್ಳ ಬೀದರ ಕೋಟೆಯ ಮಸೀದಿ.

ಸೌಂಟು (ನಾ)= ಸೌಟು; ಸಟ್ಟುಗ; ಉದ್ದಾದ ದೊಡ್ಡ ಚಮ್ಮಚ.

ಸೌಂಡು (ನಾ) ಇಂ.= ಧ್ವನಿ; ಸದ್ದು.

ಸೌಂಡು ಬಿಡು (ಕ್ರಿ)= ಧ್ವನಿಯನ್ನು ವರ್ಧಿಸು.

ಸೌಟು (ನಾ)= ಸೌಂಟು; ಸಟ್ಟುಗ; ಉದ್ದಾದ ದೊಡ್ಡ ಚಮ್ಮಚ.

ಸೌಟು ಆಡ್ಸು (ಕ್ರಿ)= ಗಡಿಗೆ ಅಥವಾ ಬೊಗೋಣಿಯಲ್ಲಿ ಸೌಟನ್ನು ಸುತ್ತಾಡಿಸು.

ಸೌಡಿ (ನಾ)= ಸವಡಿ; ಸಾವಡಿ; ಕೃಷಿಕಾರ್ಯದಲ್ಲಿ ಪಾಲುದಾರಿಕೆ ಹಾಗೂ ಪರಸ್ಪರ ಸಹಕಾರ ಮನೋಭಾವದಿಂದ ದುಡಿಯುವಿಕೆ.

ಸೌಡಿಕಲಿ (ಕ್ರಿ)= ಕೃಷಿಕಾರ್ಯದಲ್ಲಿನ ನೆರೆಯೊರೆಯವರೊಂದಿಗೆ ದುಡಿಯಲು ಒಟ್ಟುಗೂಡು, ಸಹಕಾರದಿಂದ ದುಡಿಯಲು ಒಂದಾಗು.

ಸೌಭಾವ (ನಾ)= ಸ್ವಭಾವ; ಹುಟ್ಟುಗುಣ; ಸಹಜಗುಣ.

ಸೌರು (ನಾ)= ಶೌರ್ಯ; ಪರಾಕ್ರಮ.

ಸೌರ್ನೋಡು (ಕ್ರಿ)= ಶೌರ್ಯ ಪ್ರದರ್ಶನ ಗಮನಿಸು.

ಸೌಳು (ನಾ)= ಉಪ್ಪಿನ ಅಂಶದಿಂದ ಕೂಡಿದ ಮಣ್ಣು, ಸ್ವಾತಂತ್ರ್ಯಪೂರ್ವದಲ್ಲಿ ಸಾಬೂನಿನ ರೀತಿಯಲ್ಲಿ ಬಟ್ಟೆ ತೊಳೆಯಲು ಬಳಕೆಯಾಗುತ್ತಿದ್ದ ಮಣ್ಣು.

ಸೌಳ್ನೀರು (ನಾ)= ಕ್ಷಾರೀಯ ಗುಣವುಳ್ಳ ನೀರು; ಚವಳ ಭೂಮಿಯ ನೀರು.

ಸೌಳ್ಮಣ್ಣು (ನಾ)= ಉಪ್ಪಿನ ಅಂಶವುಳ್ಳ ಮಣ್ಣು; ಬಟ್ಟೆ ತೊಳೆಯಲು ಬಳಸಲಾಗುತ್ತಿದ್ದ ಮಣ್ಣು.

ಸೌಳ್ಸಾಳು (ದ್ವಿ)= ಸೌಳಿನಂತಹ ರುಚಿ; ಸೌಳು ಮಣ್ಣಿನ ಸ್ವಾದ.

ಸ್ನೋ (ನಾ) ಇಂ.= ಮುಖಶುದ್ಧಿ ಲೇಪನ.

ಸ್ಯಾಂಡ್ಗಿ (ನಾ)= ಸಂಡಿಗೆ; ವಡೆ.

ಸ್ಯಾಂವ್ಗಿ (ನಾ)= ಸೇವಿಗೆ.

ಸ್ಯಾವಂತ್ಗಿ (ನಾ)= ಸೇವಂತಿ ಗಿಡ ಮತ್ತು ಅದರ ಹೂ.

ಸ್ಯಾವಿ (ನಾ)= ಒಂದು ಪ್ರಕಾರದ ಏಕದಳ ತೃಣಧಾನ್ಯ.

ಸ್ಯಾವಿಬಾನಾ (ನಾ)= ಸಾವೆ ಕಾಳು ಥಳಿಸಿ ತಯಾರಿಸಿದ ಅಕ್ಕಿಯ ಅನ್ನ.

ಸ್ರಾಪು (ನಾ)= ಶಾಪ; ಶಪಿಸುವಿಕೆ; ಬೈಗುಳ.

ಸ್ರಾಪುಸು (ಕ್ರಿ)= ಶಪಿಸು; ಶಾಪಕೊಡು; ಬೈ.

ಸ್ವಂತ (ನಾ)= ಸ್ವತಃ ತನ್ನದೇ ಆದದ್ದು; ಖಾಸಾ; ಖುದ್ದು; ಮುದ್ದಾಮು; ಗುಲಬರ್ಗಾ ಜಿಲ್ಲೆಯಲ್ಲಿಯ ಬುಡ ಬಡಕೆಯವರು/ ಜೋಯಿಸರು ವಾಸ ಮಾಡುವ ಒಂದು ಹಳ್ಳಿ; ಬೀದರ ಜಿಲ್ಲೆಗೆ ಹೊಂದಿಕೊಂಡಂತಿರುವ ಗುಲಬರ್ಗಾ ಜಿಲ್ಲೆಯ ಒಂದು ಊರು.

ಸ್ವಯಪಾಕ,ಸ್ಯೆಫಾಕ (ನಾ)= ರೊಟ್ಟಿ ಬಡಿಯಲು ಸಿದ್ಧಗೊಳಿಸಿಟ್ಟ ಧಾನ್ಯದ ಹಿಟ್ಟು; ಅಡಿಗೆ; ಸ್ವಯಂಪಾಕ.

ಸ್ವಯ್ಪಾಕ ಭಿಕ್ಷಾ (ನಾ)= ಜಂಗಮರು ಸ್ವಯಂಪಾಕಕ್ಕಾಗಿ ಹಕಾರಿ ಹಾಕಿ ಹಿಟ್ಟು ಬೇಡುವ ಪದ.

ಸ್ವರಣಿ (ನಾ)= ಸ್ಮರಣೆ; ಸೊರಣೆ; ನೆನಪು (ಭಜನೆ: ಶಿವನ ಭಜನಿಮಾಡೋ। ಶಿವ। ಶರಣರ ಕೊಂಡಾಡೋ ಶಿವಶಿವ।। ಭವದ ಬಾಧಿಕಳಿಯೋ ಅಪ್ಪನ ಸ್ವರಣೆಯ ಮರಿಬ್ಯಾಡೋ ಶಿವಶಿವ।।).

ಸ್ವದ್ಯಾಣ (ನಾ)= ಸೊದ್ಯಾಣ; ಸ್ವಾಧೀನ (ಗಾದೆ: ಪರಸ್ವದ್ಯಾಣ ಊಟಕ ಮದ್ಯಾಣ).

ಸ್ವರ್ಗ (ನಾ)= ಸೊರ್ಗ; ನಾಕ; ದೇವಲೋಕ; ಸಗ್ಗ.

ಸ್ವಾಟಿ (ನಾ)= ಸೋಟೆ; ಮುಖದ ತುದಿ; ಗಲ್ಲ ಮತ್ತು ಬಾಯಿಯ ಮಧ್ಯ ಭಾಗ.

ಸ್ವಾಟಿತಿವಿ (ಕ್ರಿ)= ಗಲ್ಲವನ್ನು ಚಿವುಟು, ತಿವಿ.

ಸ್ವಾಟಿ ಹರಿ (ಕ್ರಿ)= ಸೋಟೆ ಹರಿಯುವಂತೆ ಚಿವುಟು.

ಸ್ವಾಟಿಹರ್ಕ (ನಾ)= ಹರಕು ತುಟಿಯುಳ್ಳಾತ.

ಸ್ವಾಟಿಹರ್ಕಿ (ನಾ)= ಹರುಕು ತುಟಿ ಉಳ್ಳಾಕೆ.

ಸ್ವಾಟಿಹರ್ದಾ, ಸ್ವಾಟಿಹರ್ದೆ (ಕ್ರಿ)= ಗಲ್ಲ ಹರಿವಂತೆ ಚಿವುಟೇನು ಎಚ್ಚರ! (ಬೈಗುಳ).

ಸ್ವಾದುರ್ಮಾವ (ನಾ)= ಸೋದರಮಾವ; ತಾಯಿಯ ತಮ್ಮ ಅಥವಾ ಅಣ್ಣ (ಗಾದೆ: ಊರೆಲ್ಲಾ ಸಾದುರ್ಮಾವದೇರ, ಸೀರಿ ಉಡ್ಸೋರ್‍ಯಾರೂ ಇಲ್ಲ).

ಸ್ವಾದ್ರತ್ತಿ (ನಾ)= ಸೋದರತ್ತೆ; ಅಪ್ಪನ ತಂಗಿ ಅಥವಾ ಅಕ್ಕ.

ಸ್ವಾದುರ್ಸೊಸಿ (ನಾ)= ಸೋದರ ಸೊಸೆ; ಗಂಡನ ತಂಗಿ ಅಥವಾ ಅಕ್ಕನ ಮಗಳು; ಹೆಂಡತಿಯ ತಮ್ಮ ಅಥವಾ ಅಣ್ಣನ ಮಗಳು; ನಾದಿನಿಯ ಮಗಳು.

ಸ್ವಾನ (ನಾ)= ಶ್ವಾನ; ನಾಯಿ.

ಸ್ವಾನಾಗು (ಕ್ರಿ)= ನಾಯಿಗುಣ ತೋರು; ನಾಯಿಯಂತೆ ವರ್ತಿಸು.

ಸ್ವಾಬ್ಮಾನ (ನಾ)= ಸ್ವಾಭಿಮಾನ; ತನ್ನ ಬಗೆಗೆ ಇರುವ ಅಭಿಮಾನ; ಆತ್ಮಗೌರವ.

ಸ್ವಾಮಾರ (ನಾ)= ಸೋಮವಾರ; ರವಿವಾರದ ನಂತರ ಬರುವ ದಿನ (ಭಜನೆ: ಎಂಟೆಂಟು ದಿನಕಾ ಸ್ವಾಮಾರಾ। ಟೆಂಗಿನ ಕಾಯಿ ಕರ್ಪೂರ।।).

ಸ್ವಾಮಾರ್ಸ್ವಾಮಾರ (ದ್ವಿ)= ಪ್ರತಿ ಸೋಮವಾರ.

ಸ್ವಾಮಿ (ನಾ)= ಜಂಗಮ; ಅಯ್ಯ.

ಸ್ವಾಮ್ಗೋಳು (ನಾ)= ಅಯ್ಯನವರು; ಜಂಗಮರು.

ಸ್ವಾಯಿ (ನಾ)= ಸೋಯಿ; ಸೋವಿ; ಅಗ್ಗ (ತತ್ವಪದ: ನಮ್ಮಾ ವಾಕೊಟ್ವ ಮಾಯಿನ ಕಾಯಿ ಬಲು ಸ್ವಾಯಿ। ತಿನಲಾಕ ಇಲ್ಲೋಬಾಯಿ। ಬಲು ಸ್ವಾಯಿ॥).

ಸ್ವಾರಿಕಾಯಿ (ನಾ)= ಸೋರೆಕಾಯಿ; ಕುಂಬಳಕಾಯಿ; ಹಸಿರುಗುಂಬಳ ಕಾಯಿ.

ಸ್ವಾರ್ತುಕ (ನಾ)= ಸಾರ್ಥಕ; ಫಲದಾಯಕ.

ಸ್ವಾಸ (ನಾ)= ಶ್ವಾಸ; ಉಸಿರಾಟ.

ಹ

ಹಂ (ನಾ)= ಅಹಮು; ಅಹಂಕಾರ.

ಹಂಕಾರ (ನಾ)= ಅಹಂಕಾರ; ಅಂಕಾರ; ಗರ್ವ.

ಹಂಗಾಮು (ನಾ)= ಸುಗ್ಗಿ; ಸೀಜನ್ನು.

ಹಂಗಾರ (ಅ)= ಹಾಗಾದರೆ.

ಹಂಗು (ನಾ)= ದಾಕ್ಷಿಣ್ಯ; ನಂಟು; ಸಂಬಂಧ; ಋಣಭಾರ; ಉಪಕಾರ; ನೀಲಿವರ್ಣದ ಕಂಠಉಳ್ಳ ಒಂದು ಶಕುನದ ಹಕ್ಕಿ; ನೀಲ ಕಂಠ ಪಕ್ಷಿ.

ಹಂಗುಸು (ಕ್ರಿ)= ಹಂಗಿಸು; ಮೂದಲಿಸು; ಹೀಯಾಳಿಸು; ಅಪಮಾನಿಸು.

ಹಂಗುಹರಿ (ಕ್ರಿ)= ಸಂಬಂಧ ಹರಿದುಕೊ; ಋಣ ಭಾರವನ್ನು ಅಲ್ಲಗಳೆದು ನಿಲ್ಲು; ತೊರೆದು ನಿಲ್ಲು.

ಹಂಗುಹರ್ದುದ್ದು (ನಾ)= ಎಲ್ಲ ತೊರೆದು ನಿಂತದ್ದು ನಿಂತವನು, ನಿಂತವಳು (ಬೈಗುಳ).

ಹಂಗೆ (ಅ)= ಹಾಂಗೆ; ಹಾಗೆ; ಅಂತೆ; ಅಂತೆಯೇ.

ಹಂಚಿ ಬಿಡು (ಕ್ರಿ)= ವಿತರಿಸು; ವಿತರಣೆಮಾಡು; ತನ್ನಲ್ಲಿ ಏನೂ ಇಲ್ಲದಂತೆ ಕೊಟ್ಟು ಬಿಡು; ಸೂಕ್ತ ರೀತಿಯಲ್ಲಿ ಪಾಲು ಮಾಡು; ಪಾಲು ನೀಡು.

ಹಂಚು (ಕ್ರಿ)= ವಿತರಿಸು; ಸೂಕ್ತ ರೀತಿಯಲ್ಲಿ ಪಾಲು ಮಾಡು; ಅವರವರ ಪಾಲನ್ನು ಅವರಿಗೆ ಕೊಡು.

ಹಂಚು (ನಾ)= ರೊಟ್ಟಿ ಬೇಯಿಸಲು ಬಳಸುವ ದುಂಡಾದ ಮಣ್ಣಿನ ಇಲ್ಲವೆ ಕಬ್ಬಿಣದ ತಟ್ಟೆ; ಮಣ್ಣಿನಿಂದ ನೆಲಗಡಲೆ ಬೇರ್ಪಡಿಸಲು ಬಳಸುವ ಅಂಗೈ ಅಗಲದ ಕಬ್ಬಿಣದ ತಗಡು, ಮಡಕೆಯ ತುಂಡು; ಬೋಕಿ; ಮೇಲ್ಛಾವಣಿಗೆ ಬಳಸುವ ಮಣ್ಣಿನ ಖಪರೋಳಗಿ.

ಹಂಚೆಬಟ್ಟು (ನಾ)= ಹಣೆಮೇಲೆ ಕುಂಕುಮ ಇಟ್ಟು ಕೊಳ್ಳುವ ಜಾಗದಲ್ಲಿ ನಿರ್ಮಿಸಿದ ಕಲೆ; ಹಂಚ್ಯಾಬಟ್ಟು; ಹಚ್ಚೆಯ ಗುರುತು.

ಹಂಚ್ಕಿ (ನಾ)= ಹಂಚಿಕೆ; ವಿಚಾರ ಮಾಡುವಿಕೆ; ಬಟವಾಡೆ; ಚಿಂತನ ಮಾಡುವಿಕೆ; ಪಾಲು; ಪಾಲುಗಾರಿಕೆ.

ಹಂಚ್ಕಿ ಹಾಕು (ಕ್ರಿ)= ವಿಚಾರ ಮಾಡು; ಚಿಂತನ ಮಾಡು; ಪಾಲು ನಿರ್ಮಿಸು.

ಹಂಚ್ಯಾಬಟ್ಟು (ನಾ)= ಹಂಚೆಬಟ್ಟು; ಹಣೆಯ ಮೇಲಿನ ಹಚ್ಚೆಯ ಗುರುತು; ಭ್ರೂಮಧ್ಯದಲ್ಲಿ ಹಾಕಿದ ಹಚ್ಚೆಗುರುತು; ಮೈಮೇಲಿನ ಹಚ್ಚೆಯ ಚಿನ್ಹೆ.

ಹಂಜಿ (ನಾ)= ಕಾಳು ತೆಗೆದ ಹತ್ತಿಯಿಂದ ತಯಾರಿಸಿದ ಸಣ್ಣಸುರುಳಿ; ಅರಳೆಯ ಬತ್ತಿ (ಗಾದೆ: ನೂತಿದ್ದೆಲ್ಲ ಹಂಜಿ ಮಾಡಿಟ್ಟಂತೆ!)

ಹಂಡ (ನಾ)= ಒಂದಕ್ಕಿಂತ ಹೆಚ್ಚು ಬಣ್ಣ ಇರುವಿಕೆ.

ಹಂಡ ಬಂಡ (ನಾ)= ಬಿಳಿ ಮತ್ತು ಕಂದುಬಣ್ಣದ ಎತ್ತು ಮತ್ತು ಆಕಳು.

ಹಂಡಾಕಳು (ನಾ)= ಹಂಡ ಬಂಡ ಬಣ್ಣದ ಹಸು; ತುಡುಗು ದನ; ಬಿಡಾಡಿದನ.

ಹಂಡಿ (ನಾ) ಹಿಂ.= ಗಡಿಗೆ; ಮಡಿಕೆ (ಉದಾ: ಧೈ ಹಂಡಿ).

ಹಂಡೆತ್ತು (ನಾ)= ಹಂಡ ಬಂಡ ಬಣ್ಣದ ಎತ್ತು; ತುಡುಗು ಎತ್ತು.

ಹಂಡ್ಯಾ (ನಾ)= ಹಾಂಡ್ಯಾ; ನೀರು ತುಂಬಿಡಲು ಬಳಸುವ ಹಿತ್ತಾಳೆ ಅಥವಾ ತಾಮ್ರದ ಪಾತ್ರೆ.

ಹಂತಾದು (ಅ)= ಅಂಥದ್ದು; ಅಂತಹದ್ದು; ಅದರಂಥದ್ದು (ಗಾದೆ: ಹಂತಾದ್ಕೆದ್ಕ ಬೇಕು ಮೆಂತ್ಯಾದ್ಕಡಬು?).

ಹಂತಾ ಹಿಂತಾ (ಅ)= ಅಂಥಿಂಥ; ಅಂತಹ ಇಂತಹ.

ಹಂತಾ ಹೆಂತಾ (ಅ)= ಅಂದೆಂಥ; ಅಂಥ ಎಂಥ.

ಹಂತಿ (ನಾ)= ಕಣದಲ್ಲಿ ಜೋಳ, ರಾಗಿ, ಭತ್ತ ಮೊದಲಾದ ಧಾನ್ಯಗಳನ್ನು ಒಕ್ಕುವಾಗ, ತುಳಿಸುವುದಕ್ಕಾಗಿ ಸಾಲಾಗಿ ಕಟ್ಟುವ ಎತ್ತು, ಆಕಳುಗಳ ಸಾಲು.

ಹಂತಿಕಟ್ಟು (ಕ್ರಿ)= ಕಣದಲ್ಲಿ ತೆನೆಗಳನ್ನು ತುಳಿಸುವುದಕ್ಕಾಗಿ ಎತ್ತುಗಳನ್ನು ಸಾಲುಸಾಲಾಗಿ ಕಟ್ಟಿ ಅಣಿಗೊಳಿಸು; ಹಂತಿಯಲ್ಲಿ ಎತ್ತುಗಳನ್ನು ನಡೆಸಿ ತೆನೆ ತುಳಿಸು.

ಹಂತಿಹೊಡಿ (ಕ್ರಿ)= ಕಣದಲ್ಲಿಯ ಸಾಲು ಸಾಲಾಗಿರುವ ಎತ್ತುಗಳು ನಡೆಯುವಂತೆ ಮಾಡು.

ಹಂತು ಹೋಗು (ಕ್ರಿ)= ಕೆಟ್ಟು ಹೋಗು; ತಗಕಾರಿಯ ಸತ್ವ ಇಲ್ಲವಾಗು; ಹಸಿರು ತರಕಾರಿ ಹಳದಿ ಬಣ್ಣಕ್ಕೆ ತಿರುಗು.

ಹಂದರ (ನಾ)= ಚಪ್ಪರ; ಮದುವೆ ಮಂಟಪ.

ಹಂದರಂಬ್ಲಿ (ನಾ)= ಮದುವೆ ಸಮಾರಂಭ ಮಂಗಲಗೊಂಡ ಮೇಲೆ, ಮದುವೆ ಮಂಟಪ ಬಿಚ್ಚುವ ಶಾಸ್ತ್ರ, ಔತಣಕೂಟ. ಹಂದರ ಬಿಚ್ಚುವಾಗ ಹಿಂದಿನ ಕಾಲದಲ್ಲಿ ಅಂಬಲಿ ಔತಣ ಕೊಡುವ ಪದ್ಧತಿ ಇತ್ತು. ಅದಕ್ಕಾಗಿ ಹಂದರಂಬ್ಲಿ ಹೆಸರು ಬಂದಿತು.

ಹಂದಪೂಜಿ (ನಾ)= ಹಂದರ ನಿರ್ಮಾಣ ಮಾಡಿದ ಮೇಲೆ ನಡೆಸುವ ಪೂಜೆಯ ಕಾರ್ಯಕ್ರಮ.

ಹಂದರ್ಹಾಕು (ಕ್ರಿ)= ಚಪ್ಪರವನ್ನು ರಚಿಸು; ಮದುವೆ ಮಂಟಪವನ್ನು ನಿರ್ಮಿಸು.

ಹಂದಿ (ನಾ)= ಊರಲ್ಲಿ ವಾಸ ಮಾಡುವ ಕೊಳಚೆ ಪ್ರಾಣಿ; ಕಾಡಿನ ಗಡ್ಡೆಗೆಣಸು ತಿಂದು ಬದುಕುವ ಒಂದು ಕಾಡು ಪ್ರಾಣಿ (ಗಾದೆ: ಹಂದಿ ಪೀಳ್ಗಿ ಹದಿನಾಸಾರ್ವ್ರ).

ಹಂದುರು (ನಾ)= ಹಂದರ; ಹಂದ್ರ; ಚಪ್ಪರ; ಮದುವೆಯ ಮಂಟಪ (ಗಾದೆ: ಶುಭ ನುಡಿಯೆ ಸುಂದರಿ ಅಂದ್ರ ಹಂದುರ್ಘುಂಬಾ ಬೋಳೇರೆ ಅಂತಂತ).

ಹಂದ್ರ (ನಾ)= ಹಂದರ; ಚಪ್ಪರ; ಮದುವೆಯ ಮಂಟಪ.

ಹಂದ್ರಂಬ್ಲಿ (ನಾ)= ಹಂದರಂಬ್ಲಿ (ನೋಡಿರಿ).

ಹಂದ್ರಾಳ (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಹಳ್ಳಿ.

ಹಂದುರ್ಬದ್ನಿ ಕಾಯಿ (ನಾ)= ಚಪ್ಪರ ಬದನೆ ಕಾಯಿ; ಕತ್ರಿ ಬದನೆಕಾಯಿ; ಟೊಮ್ಯಾಟೊ.

ಹಂಪುರ್ಗಾಲು (ನಾ)= ಮುಗಿಲು; ಹೇರಿದ ಕಾಲು. (ಒಗಟು: ಹಾಸ್ಗಾಲ್ ಹಂಪುರ್ಗಾಲ್। ದೇಶಾಕೆಲ್ಲಾ ಒಂದೇಕಾರ್ –ಮುಗಿಲು).

ಹಂಪುರ್ಸು (ಕ್ರಿ)= ಸಂಭೋಗಿಸು; ಹಸುವಿನ ಮೇಲೆ ಹೋರಿ, ಎಮ್ಮೆಯ ಮೇಲೆ ಕೋಣ ಕಾಲು ಹೇರಿ ಸಂಭೋಗಿಸು; ಹಡು; ಕೆಯ್.

ಹಂಬುಲು (ನಾ)= ಹಂಬಲ; ಹಂಬ್ಲ; ಉತ್ಕಟೇಚ್ಛೆ; ತವಕ; ನೆನಪು.

ಹಂಬುಲ್ಸು (ಕ್ರಿ)= ಹಂಬಲಿಸು; ತವಕ ಪಡು.

ಹಂಬ್ಲಾಗು (ಕ್ರಿ)= ಹಂಬಲ ಉಂಟಾಗು (ಉದಾ: ಕೂಸೀಗಿ ಮಲಿಹಾಲಿನ ಮ್ಯಾಲ ಹಂಬ್ಲಾಗ್ಯಾದ).

ಹಂಶಕವಿ (ನಾ)= ಔರಾದ ತಾಲೂಕಿನ ಬಾಜ್ಜಿನಾಗೂರು ಗ್ರಾಮದ ಒಬ್ಬ ಯುವ ಕವಿ ಮತ್ತು ಸಾಹಿತಿ. ಬೀದರ ಜಿಲ್ಲೆಯ ಧರಿನಾಡು ಕನ್ನಡ ಸಂಘ ಕೇಂದ್ರ ಸಮಿತಿ (ರಿ.) ಯ ಪ್ರಥಮ ಕಾರ್ಯದರ್ಶಿ. ಮೂಲ ಹೆಸರು: ಹಣಮಂತಪ್ಪ ಶಂಕರೆಪ್ಪ ವಲ್ಲೆಪೂರೆ.

ಹಕನಾಕ (ಅ)= ಸುಮ್ಮಸುಮ್ಮನೆ; ಅಕನಾಕ; ವಿನಾಕಾರಣ; (ಉದಾ: ಮಾತಿಲ್ಲ ಕತಿ ಇಲ್ಲ, ಹಕನಾಕ ಜೀವಾ ಕೊಟ್ಟುನ್ನೋಡ್ರಿ.)

ಹಕಲಂಪಟ್ಟಿ (ನಾ)= ನೂಕಾಟ; ತಳ್ಳಾಟ; ಅಟ್ಟುವಿಕೆ; ಓಡಿಸುವಿಕೆ.

ಹಕಲಾಸು (ಕ್ರಿ)= ಓಡಿಸು; ನೂಕು; ತಳ್ಳು; ಅಟ್ಟು.

ಹಕಲ್ಯಾ (ನಾ)= ಆಸೆಬುರುಕ; ಹಕ್ಕಲಿನ ಆಸೆ ಮಾಡುವವ; ಆಯ್ಕೊಂಡು ತಿಂದು ಬದುಕುವವ.

ಹಕಲ್ಯಾ ಹಡಿ (ನಾ)= ಅತಿ ಆಸೆಬುರುಕ/ಕಿ (ಬೈಗುಳ).

ಹಕಾರಿ (ನಾ)= ಜೋರಾದ ಕೂಗು.

ಹಕಾರಿ ಹಾಕು (ಕ್ರಿ)= ಕೂಗು; ಕೂಗು ಹೊಡೆ; ಜೋರಾಗಿ ಅರಚು.

ಹಕಾರಿ ಹೊಡಿ (ಕ್ರಿ)= ಕೂಗು; ಕೂಗು ಹೊಡೆ; ಜೋರಾಗಿ ಅರಚು.

ಹಕಿಕತರಾವ (ನಾ)= ಚಿಟಗುಪ್ಪಾ ಪಟ್ಟಣದ ಒಬ್ಬ ಸುಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ.

ಹಕೀಕತಿ (ನಾ)= ನಿಜವಾದ ಸುದ್ದಿ; ನೈಜ ಸಂಗತಿ; ವಾಸ್ತವ ಸುದ್ದಿ.

ಹಕೀಮ (ನಾ) ಹಿಂ.= ವೈದ್ಯ; ಗ್ರಾಮೀಣ ವೈದ್ಯ; ಗಾಂವಠಿ ವೈದ್ಯ.

ಹಕ್ಕಲು (ನಾ)= ನೆಲಗಡಲೆ/ಸೇಂಗಾ ರಾಶಿಯಾದ ಮೇಲೆ ನೆಲದಲ್ಲಿ ತಪ್ಪಿ ಉಳಿದ ಸೇಂಗಾ; ನೆಲದ ಮೇಲೆ ಬಿದ್ದುಳಿದ ತೆನೆ; ಉದುರಿ ಬಿದ್ದ ಉದ್ದು, ಹೆಸರು (ಕ್ರಿ) **ಹಕ್ಕಲಾಯಿ=** ಮಣ್ಣಿನಲ್ಲಿ ಅಡಗಿ ಉಳಿದ ನೆಲಗಡಲೆ/ ಸೇಂಗಾ, ನೆಲದ ಮೇಲೆ ಬಿದ್ದುಳಿದ ತೆನೆ, ಹೆಸರು ಉದ್ದುಗಳ ಕಾಯಿ ಇತ್ಯಾದಿಗಳನ್ನು ಆರಿಸಿ ಸಂಗ್ರಹಿಸು.

ಹಕ್ಕಹಲಾಲ (ನಾ)= ಪ್ರಾಮಾಣಿಕ; ಖರೆ; ಸತ್ಯ; ಪ್ರಾಮಾಣಿಕತೆ.

ಹಕ್ಕಳ್ಕಿ (ನಾ)= ಹಕ್ಕಳಿಕೆ; ಸಾರಿಸಿದ ಇಲ್ಲವೆ ಹಸಿಯಾದ ನೆಲ ಒಣಗಿದಾಗ ಅದರ ಮೇಲೇಳುವ ಪದರು ಪದರು; ಹುಣ್ಣಿನ ಮೇಲಿನ ಒಣಗಿದ ಪದರು.

ಹಕ್ಕಿ (ನಾ)= ಪಕ್ಷಿ; ವಿಹಗ.

ಹಕ್ಕು (ನಾ)= ಅಧಿಕಾರ; ಸ್ವಾಮ್ಯ; ಸ್ವಾಮಿತ್ವ.

ಹಕ್ಕುಲ್ಶೇಂಗಾ (ನಾ)= ನೆಲದಲ್ಲಿ ಅಳಿದುಳಿದ ಅಥವಾ ಬಿಟ್ಟು ಹೋದ ನೆಲಗಡಲೆ.

ಹಕ್ದಾರ (ನಾ)= ಹಕ್ಕುದಾರ; ಒಡೆತನ ಉಳ್ಳವನು; ಬಾಧ್ಯಸ್ಥ.

ಹಕ್ಯಾಳ (ನಾ)= ಔರಾದ ತಾಲೂಕಿನ ಒಂದು ಹಳ್ಳಿಯ ಹೆಸರು. ಮುಖಂಡ ಗುಣವಂತರಾವ ಎಂಬರ ಹುಟ್ಟೂರು.

ಹಕ್ಲು, ಹಾಕ್ಲು (ನಾ)= ಹಕ್ಕಲು (ನೋಡಿರಿ).

ಹಕ್ಲ್ಯಾ (ನಾ)= ಹಕಲ್ಯಾ; ಆಸೆಬುರುಕ (ಬೈಗುಳ).

ಹಕ್ಲ್ಯಾಹಡಿ (ನಾ)= ಅತಿ ಆಸೆಬುರುಕ (ಬೈಗುಳ).

ಹಗಲೆ ಹಾಡೆ (ಅ)= ಹಗಲು ಹೊತ್ತಿನಲ್ಲಿಯೆ; ಹಗಲಿರುವಾಗಲೇ.

ಹಗುಲತ (ಅ)= ಹಗಲಿನಲ್ಲಿ; ಹಗಲು ಹೊತ್ತಿನಲ್ಲಿ.

ಹಗುಲಾಗು (ಕ್ರಿ)= ಬೆಳಗಾಗು; ಸೂರ್ಯೋದಯವಾಗು.

ಹಗುಲು (ನಾ)= ಹಗಲು; ಸೂರ್ಯೋದಯದಿಂದ ಸೂರ್ಯಾಸ್ತ-ವರೆಗಿನ ಅವಧಿ.

ಹಗುಲ್ಗಳ್ಳ (ನಾ)= ಹಗಲಿನಲ್ಲಿಯೇ ಕಳ್ಳತನ ಮಾಡುವವನು.

ಹಗಲ್ಚುಕ್ಕಿ **(ನಾ)=** ಹಗಲಲ್ಲಿ ಕಾಣುವ ಚುಕ್ಕೆ (ಗಾದೆ: ಹಗುಲ್ಚುಕ್ಕಿ ಮುಗುಲ್ನಿಚ್ಚುಣ್ಕೆ ತೋರ್ಸಾಂವ).

ಹಗುಲ್ದೀಪಾ (ನಾ)= ಹಗಲು ಹೊತ್ತಿನಲ್ಲಿಯೇ ಬೆಳಗುವ ದೀಪ.

ಹಗುಲ್ಹಾದ್ರ (ನಾ)= ಹಗಲಲ್ಲಿಯೇ ನಡೆಸುವ ಸೂಳೆಗಾರಿಕೆ, ಮಿಂಡಗಾರಿಕೆ, ಹಾದರ.

ಹಗೇವು (ನಾ)= ಅಗೇವು; ಕಾಳು ಸಂಗ್ರಹಿಸಿಡುವ ನೆಲಮನೆ.

ಹಗ್ಗ (ನಾ)= ಪುಂಡಿನಾರು, ಸಣಬಿನ ನಾರು ಇಲ್ಲವೆ ಪ್ಲಾಸ್ಟಿಕ್ ಎಳೆಯಿಂದ ತಯಾರಿಸಿದ ದಪ್ಪವಾದ ಹುರಿ (ಹೆಸರು ಹೇಳುವ ಒಗಟು: ಹಗ್ಗದಲಿ ಹೊಡ್ದುರ ಮಗ್ಲಾಗ ಬರ್ತಾಳ ಮಹಾದೇವಿ); ಹಗ್ಗದಂತೆ ಇರುವ ಹಾವು (ಉದಾ: ಹಾದ್ಯಾಗ ಹಗ್ಗ ಬಿದ್ದಿತ್ತು ಅಂದರೆ ಹಾದಿಯಲ್ಲಿ ಹಾವು ಬಿದ್ದಿತ್ತು ಎಂದಂತೆ!).

ಹಗ್ಯಾ (ನಾ)= ಹಗೇವು (ನೋಡಿರಿ) ಗಾದೆ: ಉಳ್ಳವರು ಹಗ್ಯಾ ತೆಗ್ಯಾಟ್ಗೆ ಬಡೂನ ಜಿವಾ ಹಾರಿ ಹೋಯ್ತು.

ಹಗ್ಲತ (ನಾ)= ಹಗಲು ಹೊತ್ತಿನಲ್ಲಿ; ಹಗಲಿನಲ್ಲಿ.

ಹಚ್ಚಗ (ಅ)= ಹಚ್ಚಗೆ; ಹಸುರಾದ; ಹಸುರಿನ (ಗಾದೆ: ಹಚ್ಚಗಿದ್ದಲ್ಲಿ ಮೆಯ್ದು, ಭೆಚ್ಗಿದ್ದಲ್ಲಿ ಮಂಗಾಂವ).

ಹಚ್ಚಪ್ಪ ಚುಚ್ಚಪ್ಪ (ನಾ)= ನಿಂದೆಯಾಡಿ ಭೇದ ಬಿತ್ತುವವನು.

ಹಚ್ಚಪ್ಪ ಚುಚ್ಚಪ್ಪ ಮಾಡು (ಕ್ರಿ)= ಮನಸ್ತಾಪ ಹುಟ್ಟಿಸುವ ಕೆಲಸ ಮಾಡು.

ಹಚ್ಚಾ (ಅ)= ಕೈಲೆ; ದಸ್ಕಿ; ಹಾತ್ಚಾ (ಮರಾಠಿ).

ಹಚ್ಚಿಕ್ಕಮಠ್ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿಯ ಹೆಸರು.

ಹಚ್ಚಿಡು (ಕ್ರಿ)= ದೀಪ ಹೊತ್ತಿಸಿಡು; ದೀಪ ಉರಿಯುವಂತೆ ಮಾಡು; ವೈಮನಸ್ಯ ಉಂಟು ಮಾಡು; ಭೇದ ಬಿತ್ತು.

ಹಚ್ಚು (ಕ್ರಿ)= ದೀಪ ಉರಿಸು; ಮುಟ್ಟಿಸು; ಬಳಿ; ಲೇಪಿಸು; ಗಿಡನೆಡು; ಹೊಡೆ; ನಿಂದೆಯಾಡು (ಗಾದೆ: ಹಚ್ಚುಗನಾಗಿ, ಚುಚ್ಚುಗ ಮಲ್ಲಿ).

ಹಚ್ಚುಕೈ (ಕ್ರಿ)= ಕೈಯಿಂದ ಹೊಡೆ; ಏಟ ಹಾಕು; ಚೆನ್ನಾಗಿ ಬಾರಿಸು.

ಹಚ್ಚೆ ಹಿಡ್ದು (ಕ್ರಿ)= ಹಿಡಿದು ಹೊಡೆದೇನು.

ಹಜನಾಳ (ನಾ)= ಭಾಲ್ಕಿ ತಾಲೂಕಿನ ನಿಟ್ಟೂರು ಸಮೀಪದ ಒಂದು ಹಳ್ಳಿ. ದೊಡ್ಡಾಟದ ಕಲಾವಿದನೊಬ್ಬನ ಊರು.

ಹಜಮ (ನಾ) ಉ.= ಪಚನ; ಜೀರ್ಣ.

ಹಜಮಾಗು (ಕ್ರಿ)= ಜೀರ್ಣವಾಗು; ಪಚನವಾಗು; ಅರಗು.

ಹಜಾಮ (ನಾ) ಉ.= ಕ್ಷೌರಿಕ; ನಾಯಿಂದ; ನಾಪಿತ; ಹಡಪದ (ಗಾದೆ: ಅಗಸ ನಂಗೈದಾಗುಣಬೇಕು, ಹಜಾಮನಂಗಳಾ-ಗುಣಬಾರ್ದು).

ಹಜಾಮತ (ನಾ)ಉ.= ಕ್ಷೌರ; ತಲೆಬೋಳಿಸುವಿಕೆ; ಅನಗತ್ಯ ಖರ್ಚು; ಇಷ್ಟವಿಲ್ಲದ ವೆಚ್ಚ ಹೇರುವಿಕೆ.

ಹಜಾಮತಿ ಮಾಡು (ಕ್ರಿ)= ತಲೆಬೋಳಿಸು; ಕತ್ತಿಯಿಂದ ತಲೆ ಹಾಗೂ ಮುಖದ ಮೇಲೆ ಬೆಳೆದಿರುವ ಕೇಶವನ್ನು ತೆಗೆ; ಕ್ಷೌರ ಮಾಡು; ಮುಂಡನ ಮಾಡು; ಅನಾವಶ್ಯಕ ವೆಚ್ಚ ಮಾಡಿಸು.

ಹಜಾಮನ ತಿಪ್ಪಿ (ನಾ)= ಕೇಶರಾಶಿಯಿಂದ ಕೂಡಿದ ನಾಪಿತನ ಮನೆಯ ಕಸದ ಗುಡ್ಡೆ (ಗಾದೆ: ಹರ್ಕಿಹನೆರ್ಡೊರ್ಸಿಗಿ ಹಜಾಮನ ತಿಪ್ಪಿಗಿಬೀ) (ಬಲಾ ಬರ್ತಾದ!).

ಹಜಾರು (ನಾ)= ಸಾವಿರ; ಸಹಸ್ರ; ಹತ್ತುನೂರಿನ ಒಂದು ಸಂಖ್ಯೆ.

ಹಜಾರೊ (ಅ)= ಸಾವಿರೆಣಿಕೆಯ; ಸಾವಿರು ಸಂಖ್ಯೆಯ; ಸಾವಿರಗಟ್ಲೆ.

ಹಜಾರೊಗಟ್ಲೆ (ಅ)= ಸಾವಿರಗಟ್ಟಲೆ; ಸಾವಿರ ಸಂಖ್ಯೆಯಲ್ಲಿ; ಎಷ್ಟೋ ಸಾವಿರದ.

ಹಜ್ಜು (ನಾ)= ಮುಸಲ್ಮಾನರು ಮಾಡುವ ಮಕ್ಕಾ ಮದೀನಾಗಳ ತೀರ್ಥಯಾತ್ರೆ.

ಹಜ್ಜೋಳಾ (ನಾ)= ಹಳದಿ ಬಣ್ಣದ ಜೋಳ; ಹಸಿರು ಜೋಳ.

ಹಜ್ವಾಳಾ (ನಾ)= ಹಜ್ಜೋಳಾ (ನೋಡಿರಿ).

ಹಜ್ವಾಳ್ರೊಟ್ಟಿ (ನಾ)= ಹಳದಿ ಬಣ್ಣದ ಜೋಳದ ಹಿಟ್ಟಿನಿಂದ ತಯಾರಿಸಲಾದ ರೊಟ್ಟಿ.

ಹಟಕಾರ, ಹಟಗಾರ (ನಾ)= ಲಿಂಗಾಯತನೇಕಾರ; ಜಾಡ; ಜೇಡ. (ಗಾದೆ: ಹಟಗಾರ್ನ ಹೆಣ್ತಿ ಬತ್ಲೆ!).

ಹಟಮಾರಿ (ನಾ)= ಛಲಗೇಡಿ; ಛಲದ ಸ್ವಭಾವದ ವ್ಯಕ್ತಿ; ಮೊಂಡುತನವುಳ್ಳ ವ್ಯಕ್ತಿ (ಹಾಡು: ಹಟಮಾರಿ ನನಗಂಡ। ಸೆಟಗೊಂಡು ತಾ ಹೋದ।).

ಹಟಾ (ನಾ)= ಹಟ; ಛಲ; ಆಗ್ರಹ; ಮೊಂಡುತನ; ಜಿದ್ದು.

ಹಟಾ ಮಾಡು (ಕ್ರಿ)= ಛಲಮಾಡು; ಆಗ್ರಹಿಸು; ಹಟಹಿಡಿ; ಜಿದ್ದು ಮಾಡು.

ಹಟಾಸು (ಕ್ರಿ)= ಸರಿಸು; ಹಿಂದಕ್ಕೆ ಸರಿಸು; ಸೋಲಿಸು.

ಹಟಾಹಿಡಿ (ಕ್ರಿ)= ಹಟಾಮಾಡು (ನೋಡಿರಿ).

ಹಟ್ಯಾಸಾಧ್ಸಿ (ಕ್ರಿ)= ಹಟ ಸಾಧಿಸಿ; ಬೇಕೆಂತಲೆ; ಜಿದ್ದಿನಿಂದಲೆ.

ಹಟ್ಟಾ ಕಟ್ಟಾ (ವಿ.)= ಗಟ್ಟಿ ಮುಟ್ಟಿ; ಬಲಶಾಲಿ; ಸುದೃಢ.

ಹಟ್ಟು ಹೋಗು (ಕ್ರಿ)= ಸಂಭೋಗಿಸಿ ಓಡಿ ಹೋಗು; ಅತ್ಯಚಾರ ಎಸಗಿ ಮಾಯವಾಗು; ಕಳ್ಳತನ ಮಾಡು; (ಗಾದೆ: ಕರಿಕಂಬ್ಳಿದಾಂವ ಹಟ್ಟು ಹೋದ, ಬಿಳಿ ಕಂಬ್ಳಿದಾಂವ ಸಿಕ್ಕುಬಿದ್ದ).

ಹಡಗಿ (ನಾ)= ಹೆರಿಗೆ; ಪ್ರಸವ.

ಹಡಗಿ ಬ್ಯಾನಿ (ನಾ)= ಹೆರಿಗೆ ನೋವು; ಪ್ರಸವ ಕಾಲದ ಬಾಧೆ (ಗಾದೆ: ಹಡಗಿ ಬ್ಯಾನಿ ಎದ್ದಾಗ, ಹೊರ್ಸು ಹುಡುಕ್ಯಾಡಿದ್ರಂತ!).

ಹಡತಾಲ (ನಾ)= ಹರ್ತಾಲ; ಮುಷ್ಕರ.

ಹಡತಾಲ ಮಾಡು (ಕ್ರಿ)= ಹರ್ತಾಲ ನಡೆಸು; ಮುಷ್ಕರ ಹೂಡು.

ಹಡದಿ (ನಾ)= ಗುರುಹಿರಿಯರನ್ನು ಬರಮಾಡಿಕೊಳ್ಳುವಾಗ, ಮದುಮಕ್ಕಳು ದೇವಾಲಯಕ್ಕೆ ಹೋಗುವಾಗ ಊರ ಮಡಿವಾಳರು ನೆಲದ ಮೇಲೆ ನಡೆಯಲು ಹಾಸುವ ಮಡಿ ಬಟ್ಟೆ; ಹುಡದಿ.

ಹಡದಿ ಹಾಸು (ಕ್ರಿ)= ಗುರು ಹಿರಿಯರು ಮತ್ತು ಮದುಮಕ್ಕಳು ಬರುವಾಗ ಮಡಿಬಟ್ಟೆ ಹಾಸಿ ಬರ ಮಾಡಿಕೊ.

ಹಡಪದ (ನಾ)= ಹಡಪಿಗ; ನಾಯಿಂದ; ನಾಪಿತ; ಕ್ಷೌರಿಕ.

ಹಡಪದ ಅಪ್ಪಣ್ಣ (ನಾ)= ಬಸವಣ್ಣನವರ ಆಪ್ತ ಸಹಾಯಕರಾದ ಒಬ್ಬ ಶರಣ.

ಹಡಪ, ಹಡಪಿ (ನಾ)= ಕ್ಷೌರಿಕನ ಚೀಲ ಇಲ್ಲವೆ ಪೆಟ್ಟಿಗೆ (ಗಾದೆ: ಹಡಪಿ ಇಲ್ದ ಹಜಾಮನ್ಮಾರಿ ಹರ್ಗಿಽಜ ನೋಡಬಾರದು।).

ಹಡಪಮಾಡು (ಕ್ರಿ)= ಮುಳುಗಿಸು; ಕೈಕಡ ಅಥವಾ ಸಾಲವನ್ನು ಹಿಂತಿರುಗಿಸದಿರು.

ಹಡಸಿ (ನಾ)= ಸೂಳೆ; ವೇಶ್ಯೆ; ಹಾದರಗಿತ್ತಿ; ಕೀಳುಗುಣದವಳು.

ಹಡಸಿರಂಡಿ (ನಾ)= ಹಾದರಕ್ಕಿಳಿದ ವಿಧವೆ; ಮುಂಡೆ; ಹಾದರಗಿತ್ತಿ; ಶೀಲಗೆಟ್ಟ ವಿಧವೆ (ಬೈಗುಳ).

ಹಡಸ್ಯಾ (ನಾ)= ಸಲಿಂಗ ರತಿಯ ಗಂಡಸು; ಹಾದರಿಗ; ಹೆಣ್ಣಿಗ; ಜಾಣ್ಯಾ; ಷಂಡ.

ಹಡಾಹಡಿ (ನಾ)= ಬೈಯುವಿಕೆ; ಛೀಥೂ ಹಾಕುವಿಕೆ; (ಕ್ರಿ) **ಹಡಾಹಡಿ ಮಾಡು**; ಬೈ; ಶಪಿಸು; ಛೀಥೂ ಹಾಕು; ಸೇರದಿರು.

ಹಡಿ (ಕ್ರಿ)= ಹಡೆ; ಪಡೆ; ಹೊಂದು; ಹೆರು; ಪ್ರಸವಿಸು (ಹಾಡು: ಒಂದು ಹೆಣ್ಣಾರ ಹಡಿಯೇ। ಒಂದು ಗಂಡಾರ ಹಡಿಯೇ। ಎರಡಾರ ಮ್ಯಾಲ ಕೊನಿ ಮುಡಿಯೆ।।).

ಹಡಿ (ನಾ)= ನಾಯಿಗೆ ಓಡಿಸಲು ಬಳಸುವ ಧುತ್ಕಾರದ ಪದ; ಹಚಾ; ಹಾ ಎಂಬಂತೆ!.

ಹಡಿಕಿ (ನಾ)= ಹೀನ; ಕೀಳು; ಕೆಳಮಟ್ಟದ್ದು.

ಹಡಿಕಿ ಶಾಣೆತಾನ (ನಾ)= ಹೀನತನದಿಂದ ಕೂಡಿದ ಜಾಣತನ.

ಹಡಿಡಿಡಿ (ಅ)= ಜೋಗುಳ ಹಾಡಿನ ಪ್ರಾರಂಭದ ನುಡಿ (ಉದಾ: ಹಡಿಡಿಡಿ ಬಾಳಾ। ದುಡ್ಡಿಗೊಮ್ಮನ ಜ್ವಾಳಾ। ಕಲಬುರ್ಗಿ ಸಂತ್ಯಾಗ ಕರಿತಾಳ।।).

ಹಡು (ಕ್ರಿ)= ಸಂಭೋಗಿಸು; ಲೈಂಗಿಕ ಕ್ರಿಯೆ ನಡೆಸು.

ಹಡೇ (ಅ)= ಹೌದೇ ! ಹೀಗೋ! ಹೌದೇನು!.

ಹಡ್ಗಿ (ನಾ)= ಹಡಗಿ (ನೋಡಿರಿ).

ಹಡ್ಗಿಬ್ಯಾನಿ (ನಾ)= ಹಡಗಿ ಬ್ಯಾನಿ (ನೋಡಿರಿ).

ಹಡ್ಸಿ (ನಾ)= ಹಡಸಿ (ನೋಡಿರಿ).

ಹಡ್ಸ್ಯಾ (ನಾ)= ಹಡಸ್ಯಾ (ನೋಡಿರಿ).

ಹಣ (ನಾ)= ಧನ; ದ್ರವ್ಯ; ಸಂಪತ್ತು (ಹಾಡು: ಹಣವು ಘಳಿಸಬೇಕೆಂಥಾದೋ। ಅದು। ಯಾರಿಗಿ ಸಿಗು ಬಾರದಂಥಾದೋ।। ಗಾದೆ: ಹಣ ಅಂದ್ರ ಹೆಣಾ ಬೀ ಬಾಯ್ತೆರಿತಾದ).

ಹಣಕುಣಿ (ನಾ)= ಹುಮ್ನಾಬಾದ ತಾಲೂಕಿನಲ್ಲಿರುವ ಐತಿಹಾಸಿಕ ಖಜಾನೆಯ ಕೋಟೆಯುಳ್ಳ ಊರು. ಪ್ರಸಿದ್ಧ ಜಾನಪದ ಸಾಹಿತಿ ಹಾಗೂ ಸರ್ವಜ್ಞವಚನ ಪ್ರೇಮಿ ಎಚ್. ಕಾಶೀನಾಥರೆಡ್ಡಿಯವರ ಹುಟ್ಟೂರು.

ಹಣಕುಣಿ ಅಗಸಿ (ನಾ)= ಹುಮನಾಬಾದ ನಗರ ಕೋಟೆಯ ದಕ್ಷಿಣ ಮಹಾದ್ವಾರ.

ಹಣಚೆಬಟ್ಟು (ನಾ)= ಹಂಚ್ಯಾ ಬಟ್ಟು (ನೋಡಿರಿ).

ಹಣತಿ (ನಾ)= ಪ್ರಣತಿ; ಪಣತಿ; ದೀಪ ಹಚ್ಚಲು ಬಳಸುವ ಮಣ್ಣಿನ ಅಥವಾ ಲೋಹದ ಬಟ್ಟಲು.

ಹಣಾ ಆಗು (ಕ್ರಿ)= ಓಡಿಹೋಗು; ಕಾಲಿಗೆ ಬುದ್ಧಿ ಹೇಳು; (ಉದಾ: ಪೊಲೀಸರನ್ನು ಕಂಡು ಕಳ್ಳ ಹಣಾ ಆದನು).

ಹಣೆ (ನಾ)= ಹಣೆ; ಫಾಲ. (ಕ್ರಿ) ಹೊಡೆ; ಬಡಿ; ಗುದ್ದು.

ಹಣಿಕ್ಹಾಕು (ಕ್ರಿ)= ಇಣುಕಿನೋಡು; ಮರೆಯಲ್ಲಿ ನಿಂತು ನೋಡು.

ಹಣೆಬಾರ (ನಾ)= ಹಣೆಬರಹ; ತಲೆಬರಹ; ವಿಧಿಲಿಖಿತ; ದೈವ ಲಿಖಿತ.

ಹಣೆಬಾರ ಕತಿ (ನಾ)= ಹಣೆ ಬರಹದ ಕಥೆ; ವಿಧಿಲಿಖಿತದಿಂದ ಆದ ಘಟನೆ, ಸೆಟಗೆವ್ವ ಬರೆದ ಕಥೆ (ಗಾದೆ: ಹಣಿ ಬಾರ ಕತಿ ಹರಿಬ್ರಹ್ಮಗ ತಪ್ಪಿಲ। ಯಾರೇನ್ಮಾಡ್ವರೋ। ಎಲ್ಲರು ಸುಖನೇ ಬೇಡ್ವರೋ।।).

ಹಣಿಸು (ಕ್ರಿ)= ಸೋಲಿಸು; ಸೋಲು ಒಪ್ಪುವಂತೆ ಮಾಡು.

ಹಣೆಹಚ್ಚು (ಕ್ರಿ)= ಗುರು ಹಿರಿಯರು ಮತ್ತು ದೇವರಿಗೆ ಬಾಗಿ ಅಡಿಗಳಿಗೆ ಹಣೆಹಚ್ಚು, ನಮಸ್ಕರಿಸು, ಮಣಿ, ವಂದಿಸು.

ಹಣೆಗ್ಗ (ನಾ)= ಗಳೆ ಮತ್ತು ಬಂಡಿಗೆ ಹೂಡಿದ ಎತ್ತುಗಳ ಹಣೆಗೆ/ಕೋಡುಗಳಿಗೆ ಕಟ್ಟುವ ಹಗ್ಗ; ಆಟೆಗ್ಗ; ಚುಕ್ಕಾಣಿ.

ಹಣ್ಗಾರ (ನಾ)= ಹಣ್ಣುಗಾರ; ಹಣ್ಣು ಮಾರುವವನು.

ಹಣ್ಣಾರ್ತಿ (ನಾ)= ಹಣ್ಣುಗಾರ್ತಿ; ಹಣ್ಣು ಮಾರುವವಳು; ಹಣ್ಣು ಮಾರುವವನ ಮನೆಯ ಮಹಿಳೆ.

ಹಣ್ಗಿ (ನಾ)= ಹಣಿಗೆ; ಬಾಳೆಗೊನೆ; ಗೊಲ್ಲೆ; ಬಾಚಣಿಕೆ; ಹಲ್ಲಿನ ಸಾಲು.

ಹಣ್ಗಿಹಲ್ಲು (ನಾ)= ಬಾಚಣಿಕೆಯ ಕಡ್ಡಿ.

ಹಣ್ಣಾಗು (ಕ್ರಿ)= ಮೆತ್ತಗಾಗು; ಬಲಹೀನವಾಗು; ಮುದುಕನಾಗು; ಪಕ್ವವಾಗು; ಕಾಯಿಯು ತಿನ್ನಲು ಯೋಗ್ಯವಾಗು; ಮಾಗು.

ಹಣ್ಣಿಗಿ ಬಾ (ಕ್ರಿ)= ಹಣ್ಣಾಗು; ಮೆತ್ತಗಾಗು; ಪಕ್ವವಾಗು; ತಿನ್ನಲು ಯೋಗ್ಯವಾಗು; ಮುದುಕನಾಗು; ಬಲ ಕುಗ್ಗು.

ಹಣ್ಣು (ನಾ)= ಪಕ್ವವಾದ ಕಾಯಿ; ಮಾಗಿದಫಲ; ಮುಪ್ಪು.

ಹಣ್ಣು ಮಾಡು (ಕ್ರಿ)= ಕಾಯಿಯನ್ನು ಪಕ್ವಗೊಳಿಸು; ಮಾಗಿಸು; ಹೊಡೆದು ಬಡೆದು ಮೈ ಮೆತ್ತಗೆ ಮಾಡು.

ಹಣ್ಣುಹಣ್ಣುಮುದುಕ (ನಾ)= ತುಂಬಾ ವಯಸ್ಸಾದ ಮುದುಕ; (ಸ್ತ್ರೀಲಿಂಗ) ಹಣ್ಣು ಹಣ್ಣುಮುದುಕಿ.

ಹಣ್ಣು ಹಂಪಲು (ನಾ)= ಹಣ್ಣು ಮೊದಲಾದವು; ಫಲಪಕ್ವ.

ಹಣ್ಣೆಲಿ (ನಾ)= ಹಣ್ಣಾದ ಎಲೆ; ಹಸಿರನ್ನು ಕಳೆದುಕೊಂಡ ಎಲೆ; ಸತ್ವ ಕಳೆದುಕೊಂಡ ಎಲೆ; ಪೂರ್ಣವಾಗಿ ಬಲಿತು ಬಣ್ಣಗೆಟ್ಟ ಎಲೆ. (ಗಾದೆ: ಹಣ್ಣೆಲಿ ಉದುರಾಗ ಹಸುರೆಲಿ ಹಲ್ಲು ಕಿಸಿತಿತಂತ!).

ಹಣ್ತಿ (ನಾ)= ಹಣತಿ; ಪ್ರಣತಿ.

ಹಣ್ಸು (ಕ್ರಿ)= ಹಣಿಸು; ಸೋಲಿಸು; ಬಗ್ಗು ಬಡಿ.

ಹಣ್ಣಣ್ಣು (ವಿ)= ಅತಿ ಹಣ್ಣಾದ; ಮುಪ್ಪಾದ; ಹಣ್ಣು ಹಣ್ಣಾದ.

ಹಣ್ಣಣ್ಣು ಮುದುಕ (ನಾ)= ಅತಿ ವಯಸ್ಸಾದ ಹಣ್ಣು ಹಣ್ಣಾದ ವಯೋವೃದ್ಧ; (ಸ್ತ್ರೀಲಿಂಗ) ಹಣ್ಣು ಹಣ್ಣಾದ ವಯೋವೃದ್ಧೆ.

ಹತಂಡಾಗು (ಕ್ರಿ)= ಅಪ್ಪಿಕೊ; ತಬ್ಬಿಕೊ; ಮೆತ್ತಿಕೊ.

ಹತಂಡಿ (ನಾ)= ಅಪ್ಪಿಕೊಳ್ಳುವಿಕೆ; ತಬ್ಬಿಕೊಳ್ಳುವಿಕೆ; ಮೆತ್ತಿಕೊಳ್ಳುವಿಕೆ.

ಹತಂಡ್ಯೋ (ಕ್ರಿ)= ಅಪ್ಪಿಕೊಳ್ಳಿರಿ; ಅಂಟಿಕೊಳ್ಳಿರಿ; ತಬ್ಬಿಕೊಳ್ಳಿರಿ; ಮೆತ್ತಿಕೊಳ್ಳಿರಿ.

ಹತ್ತರ್ಧಾರ್ಣಿ ಹತ್ತು (ನು)= ಸಾವು ಸಮೀಪಿಸು; ಸಾಯಲು ಅಣಿಯಾಗು; ಮಾನಸಿಕ ಗೊಂದಲದಲ್ಲಿ ಸಿಲುಕು.

ಹತ್ತಿ (ನಾ)= ಅರಳೆ; ತೂಲ; ಒಂದು ಬಗೆಯ ಗಿಡ ಮತ್ತು ಅರಳೆ ಕೊಡುವ ಅದರ ಕಾಯಿ (ಶಿಶುಪ್ರಾಸ: ಹತ್ತಿ ಕಟ್ಗಿ ಬತ್ತಿ ಕಟ್ಗಿ। ಬಾವ್ನೂರು ಬಸವಾನೂರು। ಕೈಕೈಧೂಳಗ್ಯೆ। ಪಂಚುಂಪಗಡುಂ। ಎದಿಮಾಲ್ಲುಕ್ಕಿ। ಧಡಲ್ ಧುಡಲ್। ಪಾವ್ಸೇರಡ್ಕಿ। ಏನ್ ಬೇಕ್ ಬೀಡ್ಕಿ।।).

ಹತ್ತಿಕಂಕಣ (ನಾ)= ಮದುಮಕ್ಕಳ ಮುಂಗೈಗೆ ಕಟ್ಟುವ ಅರಿಷಿಣದಲ್ಲದ್ದಿದ ನೂಲೆಳೆ; ಕುರುಬರಲ್ಲಿ ಮದುಮಕ್ಕಳಿಗೆ ಹತ್ತಿ ನೂಲಿನ ಕಂಕಣ ಕಟ್ಟುವ ಒಂದು ಪಂಗಡ. ಉಣ್ಣೆ ಕಂಕಣ ಎಂಬುದು ಇನ್ನೊಂದು ಪಂಗಡ.

ಹತ್ತಿದೋಟು (ಅ)= ಹತ್ತಿದಷ್ಟು; ಬೇಕಾದಷ್ಟು; ಮನಸಿಗೆ ಬಂದಷ್ಟು.

ಹತ್ತು (ನಾ)= ಒಂದು ಸಂಖ್ಯೆ; ಒಂಭತ್ತರ ನಂತರದ ಸಂಖ್ಯೆ; ದಶ.

ಹತ್ತು (ಕ್ರಿ)= ಹೊತ್ತಿಕೊಳ್ಳು; ಉರಿಗೊಳ್ಳು; ಅಂಟಿಕೊಳ್ಳು; ಮೆತ್ತಿಕೊಳ್ಳು.

ಹತ್ತುರ್ಕ್ಯಾ (ನಾ)= ಹತ್ತರಿಕೆ; ಬೆಳೆಗಳಲ್ಲಿ ಬೆಳೆವ ಒಂದು ಪ್ರಕಾರದ ಕಾಡು ತರಕಾರಿಸೊಪ್ಪು.

ಹತ್ತುಗ್ರೂಡ ಹನ್ನೊಂದು (ನು)= ಎಲ್ಲರಂತೆ ಅದು; ಎಲ್ಲರಂತೆ ನಾನು; ಲೋಕರೂಢಿಯಂತೆ.

ಹತ್ತುರ್ಧಾಣ್ಣಿಹತ್ತು (ನು)= ಹತ್ತರ್ಧಾರ್ಣೆ ಹತ್ತು (ನೋಡಿರಿ).

ಹತ್ತೆಂಟು (ನಾ)= ಹದಿನೆಂಟು; ಅಷ್ಟಾದಶ (ಭಜನೆ: ಹತ್ತೆಂಟು ಪುರಾಣ। ನಿಮ್ಮ ನಾಮ ಸ್ಮರಣ। ಗೆಲಿಸಂಪೂರ್ಣಾ ದೇವಾನೀನೆ।। –ಸಿದ್ಧ ಪ್ರಭು ಮಹಾರಾಜರು).

ಹತ್ತೇಳಿ (ಅ)= ಹತ್ತು ಸಾರೆ; ಹತ್ತು ಬಾರಿ; ಹತ್ತು ವೇಳೆ.

ಹತ್ಯಾರ (ನಾ)= ತಲವಾರ; ಜಂಬಿಯಾ; ಬಂದೂಕು; ಪಿಸ್ತೂಲು ಇತ್ಯಾದಿ.

ಹತ್ಯಾರ ಹಾಕು (ಕ್ರಿ)= ಶಸ್ತ್ರ ನೆಲದ ಮೇಲೆ ಇಡು; ಶರಣಾಗತನಾಗು; ಸೋಲೊಪ್ಪು.

ಹತ್ಯಾಳ (ನಾ)= ಬಸವ ಕಲ್ಯಾಣ ತಾಲೂಕಿನ ಒಂದು ಹಳ್ಳಿಯ ಹೆಸರು (ಜಾನಪದ ಪ್ರಾಸ: ಏರಂಡಿ। ಎಲ್ಲ್ಯಾಳ। ಇಲ್ಲ್ವಾಳ। ಹತ್ಯಾಳ। ಹಾಲ್ಕುಡುದಾಳ।।).

ಹತ್ರಹರಹರಾ ಕಿತ್ರ ಶಿವಶಿವಾ (ನು)= ಹ್ಯಾಗಾದರೂ ಸರಿ; ಎಂತಾದರೂ ಸರಿ; ಏನಾದರೂ ಸರಿ, ಅಭ್ಯಂತರವಿಲ್ಲ.

ಹತ್ರಾಗಭೀಳು (ಕ್ರಿ)= ಹತ್ತನೇ ತಿಂಗಳ ಅಥವಾ ಹತ್ತನೇ ವರ್ಷದ ವಯಸ್ಸಿನಲ್ಲಿ ಕಾಲಿಡು, ಪ್ರವೇಶಿಸು.

ಹದ (ನಾ)= ಅಗತ್ಯ; ಅವಶ್ಯಕತೆ; ಜರೂರತ್ತು.

ಹದಗಡ್ಡಿ (ನಾ)= ಕಂಕುಳ, ತೊಡೆಸಂದು, ಬಗಲ ಸಂದುಗಳಲ್ಲಿ ಉಂಟಾಗುವ ನೋವು ಕೊಡುವ ಒಂದು ಬಗೆಯ ಗಂಟು ಅಥವಾ ಗಡ್ಡೆ.

ಹದನಕ್ಕ ಬರು (ಕ್ರಿ)= ಸಮಯ ಕೂಡು; ಪಕ್ವಗೊಳ್ಳು.

ಹದನಾ (ನಾ)= ಹದನ; ಸಮಯ; ಕಾಲ; ಪಕ್ವತೆ.

ಹದಾ (ನಾ)= ಹದ; ಅಗತ್ಯ; ಜರೂರತ್ತು; ಅವಶ್ಯಕತೆ; ನಡೆಯಲು ಕತ್ತೆಗೆ ನೀಡುವ ಅಪ್ಪಣೆ.

ಹದಾಭೀಳು (ಕ್ರಿ)= ಅಗತ್ಯ ಬೀಳು; ಅವಶ್ಯಕತೆಯುಂಟಾಗು; ಜರೂರಿಯಾಗು.

ಹದಿನೆಂಟಿ, ಹದ್ನೆಂಟಿ (ನಾ)= ಹದಿನೆಂಟರ ಹರೆಯದ ಹುಡುಗ/ಗಿ; ಹದಿಹರೆಯದವನು/ಳು; ಬದುಕಿನಲ್ಲಿ ಮಾರ್ಗ ತಪ್ಪುವ ಇಲ್ಲವೆ ಮಾರ್ಗ ಹಿಡಿಯುವ ಹೊಯ್ದಾಟದವನು/ಳು; ಚಂಚಲತೆಯ ವಯಸ್ಸಿನವನು/ಳು; ತಾರುಣ್ಯದತ್ತ ಹೆಜ್ಜೆ ಇಡುವ ಚಂಚಲರಿಗೆ ಬಯ್ಯಲು ಬಳಸುವ ಪದ. (ಬೈಗುಳ).

ಹದುನ್ನಿನ (ನಾ)= ಹದಿನೈದು ದಿನ.

ಹದುನ್ನಿನಕೊಮ್ಮೆ (ಅ)= ಹದಿನೈದು ದಿನಕೊಮ್ಮೆ.

ಹದ್ದಿನ ಕಣ್ಣು (ನಾ)= ಹದ್ದಿನಂತೆ ಸೂಕ್ಷ್ಮ ದೃಷ್ಟಿ; ವೀಕ್ಷಣೆಯ ಕಣ್ಣು; (ಗಾದೆ: ಹದ್ದಿನ ಕಣ್ಣು ಹೆಣದ ಮ್ಯಾಲ).

ಹದ್ದು (ನಾ)= ಒಂದು ಬಗೆಯ ಹಕ್ಕಿ; ಗರುಡ.

ಹದ್ದು ಬಂದ (ನಾ)= ಗುರುತಿಸಿದ ಮೇರೆ; ಗಡಿ; ಸೀಮೆ.

ಹದ್ನೆಂಟಿ (ನಾ)= ಹದಿನೆಂಟಿ (ನೋಡಿರಿ).

ಹನಾ (ಕ್ರಿ) = ಹಾನ; ಇದ್ದಾನೆ; ಓಡು.

ಹನಾ ಆಗು (ಕ್ರಿ)= ಓಡಿ ಹೋಗು; ಪಲಾಯನ ಮಾಡು.

ಹನಿ (ನಾ)= ನೀರಿನ ತೊಟ್ಟು; ದ್ರವದ ತೊಟ್ಟು; ಮಳೆ ನೀರಿನ ತೊಟ್ಟು (ಗಾದೆ: ಹನಿಲಿಂದ ಹೋದದ್ದು ಹೌದಿನಿಂದ ಬರಾಲ).

ಹನಿ ಉದುರು (ಕ್ರಿ)= ಮಳೆ ಬರು; ಕಣ್ಣೀರು ಬಿಂದು ಬಿಂದುವಾಗಿ ಉದುರು.

ಹನಿಗೂಡು (ಕ್ರಿ)= ನೀರು ಹನಿಹನಿಯಾಗಿ ಒಟ್ಟುಗೂಡು (ಗಾದೆ: ಹನಿಗೂಡಿದ್ರ ಹಳ್ಳಾ, ತೆನಿಗೂಡಿದ್ರ ರಾಶಿ).

ಹನಿಹನಿ (ದ್ವಿ)= ತೊಟ್ಟು ತೊಟ್ಟು; ಬಿಂದು ಬಿಂದು.

ಹಪಾಪಿ (ನಾ)= ದುರಾಸೆಯುಳ್ಳವನು/ಳು; ಉತ್ಕಟ ಆಸೆಯುಳ್ಳವನು/ಳು.

ಹಪಾಪಿ ಮಾಡು (ಕ್ರಿ)= ದುರಾಶೆ ಪಡು; ಉತ್ಕಟ ಆಸೆದೋರು.

ಹಪ್ತಗುಂಬಜ (ನಾ) ಉ.= ಕಲಬುರ್ಗಿನಗರದ ಏಳು ಗುಮ್ಮಟಗಳ ಸಮುಚ್ಚಯ.

ಹಪ್ತಾ (ನಾ) ಉ.= ಏಳು ದಿನಗಳ ಅವಧಿ; ಒಂದು ವಾರ; ಸಪ್ತಾಹ; ಸಾಪ್ತಾಹಿಕ ಕಂತು.

ಹಪ್ತಾವಸೂಲಿ (ನಾ)= ವಾರಕ್ಕೊಮ್ಮೆ ಗ್ರಾಹಕರಿಂದ ಬ್ಯಾಂಕಿನವರು ಸಂಗ್ರಹ ಮಾಡುವ ಹಣ; ಗೂಂಡಾಗಳ ಸಾಪ್ತಾಹಿಕ ಒತ್ತಾಯದ ಹಣ ಸಂಗ್ರಹ.

ಹಪ್ತಾವಾರಿ (ನಾ)= ವಾರಕ್ಕೊಮ್ಮೆ; ಪ್ರತಿವಾರ; ವಾರವಾರ.

ಹಪ್ಪಳು (ನಾ)= ಹಪ್ಪಳ; ಉದ್ದು, ಹೆಸರು ಮೊದಲಾದ ಹಿಟ್ಟಿಗೆ ಸಂಬಾರ ವಸ್ತುಗಳನ್ನು ಹಾಕಿ, ನೀರು ಬೆರೆಸಿ, ನಾದಿ, ಲಟ್ಟಿಸಿ, ತಯಾರಿಸಿ, ಸುಟ್ಟು, ಊಟದೊಂದಿಗೆ ನಂಜಿಸಿಕೊಳ್ಳುವ ವ್ಯಂಜನ; ಜೋಳದ ಹಿಟ್ಟಿನೊಂದಿಗೆ ಜೀರಿಗೆ, ಉಪ್ಪು ಇತ್ಯಾದಿ ಬೆರೆಸಿ, ಕುದಿಸಿ, ಬಟ್ಟೆಯ ಮೇಲೆ ಗೋಲಾಕಾರವಾಗಿ ಹರಡಿ ತಯಾರಿಸಿದ ಪಾಪಡ (ಗಾದೆ: ಹಪ್ಪಳು ಕೊಟ್ಟು ಸೆಂಡ್ಗಿ ಕಸ್ಕೊಮಾಂವ).

ಹಪ್ಪಳೊಡಿ (ಕ್ರಿ)= ಮದುವೆ ಸಮಾರಂಭದಲ್ಲಿ ಬೀಗರ ತಲೆಯ ಮೇಲೆ, ಎರಡು ಹಪ್ಪಳ ನಡುವೆ ಹಿಟ್ಟು ಸೇರಿಸಿ, ಹಾಸ್ಯಕ್ಕಾಗಿ ರಪ್ಪನೆ ಬಡಿ (ಹಳೆಯ ಪದ್ಧತಿ. ಈಗ ಅದು ಬಿಟ್ಟು ಹೋಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೋ ಒಮ್ಮೊಮ್ಮೆ ಕಂಡು ಬರುತ್ತಲಿದೆ).

ಹಪ್ಪಳ್ಕಿ (ನಾ)= ಒಣಗಿದ ನೆಲದಿಂದ, ಸಾರಿಸಿದ ನೆಲದಿಂದ ಒಣಗಿ ಎದ್ದ ಮೇಲ್ಪದರು; ಪಪ್ಪಳಿಕೆ.

ಹಪ್ಪಳ್ಖಾರಾ (ನಾ)= ಹಪ್ಪಳಿನ ಹಿಟ್ಟಿನಲ್ಲಿ ಬೆರೆಸುವ ಕ್ಷಾರ ವಸ್ತು.

ಹಪ್ಪುಳ್ಸಡು (ಕ್ರಿ)= ಹಪ್ಪಳವನ್ನು ಬೆಂಕಿಯ ಮೇಲೆ ಇಟ್ಟು ಬೇಯಿಸು.

ಹಪ್ಪುಳ್ಸೆಂಡ್ಗಿ (ನಾ)= ಹಪ್ಪಳ ಮತ್ತು ಸಂಡಿಗೆ.

ಹಬ್ಬಾ (ನಾ)= ಹಬ್ಬ; ಪರ್ವ; ಉತ್ಸವ; ಸಿಹಿಯೂಟದ ದಿನ.

ಹಬ್ಬಾಹುಣ್ಣಿ (ನಾ)= ಹಬ್ಬ ಹರಿದಿನ; ಹಬ್ಬವೂ ಹುಣ್ಣಿಮೆಯೂ.

ಹಬ್ಬು (ಕ್ರಿ)= ಹತ್ತು; ಮೇಲೇರು; ಸಂಭೋಗಿಸು; ದನದ ಮೇಲೆ ದನ ಹತ್ತು; ಲೈಂಗಿಕ ಕ್ರಿಯೆಯನ್ನು ನಡೆಸು.

ಹಬ್ಸಾ (ನಾ) ಉ.= ಬೋರ್ವೆಲ್ಲು; ಕೊಳವೆಬಾವಿ.

ಹಬ್ಬುಸು (ಕ್ರಿ)= ಮೇಲೆ ಹತ್ತಿಸು; ದನಗಳು ಲೈಂಗಿಕ ಕ್ರಿಯೆ ನಡೆಸುವಂತೆ ಮಾಡು; ಸಂಭೋಗಿಸುವಂತೆ ಮಾಡು.

ಹಮಾಮುಖಾನಿ (ನಾ) ಉ.= ಸ್ನಾನದ ಮನೆ; ಬಚ್ಚಲಮನೆ (ತತ್ವಪದ: ಹಮಾಮಖಾನಿ ಪಾಯಖಾನಿ ತೆಳಗಿನ ಖಿಡಕಿ। ಹಗ್ಲೂ ರಾತ್ರಿ ಸೋರಾ ಸಾವಿರ ತೂತಿನ ಖಿಡಕಿ।। –ದೇಶಾಂಶ ಹುಡಗಿ).

ಹಮಾಲ (ನಾ)= ಅಡತಿ ಅಂಗಡಿ, ಬಸ್ಸು ನಿಲ್ದಾಣ, ರೈಲು ನಿಲ್ದಾಣ, ಮತ್ತು ಇತರೆಡೆಗಳಲ್ಲಿ ಸಾಮಾನು ಹೊರುವ ಇಲ್ಲವೆ ಇಳಿಸುವ ಕೆಲಸ ಮಾಡುವವನು.

ಹಮಾಲಿ (ನಾ)= ಕೂಲಿಯ ಕೆಲಸ; ಕೂಲಿ; ಹಮಾಲ; ಅಡತಿಗಳಲ್ಲಿಯ ಕೂಲಿಯಾಳು.

ಹಮಾಲಿ ಮಾಡು (ಕ್ರಿ)= ಭಾರ ಹೊರುವ, ಇಳಿಸುವ ಮತ್ತು ಸಾಗಿಸುವ ಕೆಲಸ ಮಾಡು; ಅಡತಿ ಅಂಗಡಿಯಲ್ಲಿ (ದಲ್ಲಾಳಿ ಅಂಗಡಿಯಲ್ಲಿ) ದುಡಿ.

ಹಮೆತುಮೆ (ಕ್ರಿ) ಉ.= ಕಚ್ಚಾಟ; ಹೊಡೆದಾಟ.

ಹಮೆತುಮೆಕ ನಿಂದ್ರು (ಕ್ರಿ)= ಜಗಳ ಕಾದು; ಹೊಡೆದಾಡು.

ಹಮೇಶಾ (ಅ) ಉ.= ಯಾವಾಗಲೂ; ಸದಾ.

ಹಮ್ದರ್ದಿ (ನಾ) ಉ.= ಕಳಕಳಿ; ಒತ್ತಡ; ಜಬರ್ದಸ್ತಿ.

ಹಮ್ಮಿಣಿ (ನಾ)= ಹಣದ ಚೀಲ; ಹಿಂದಿನ ಕಾಲದಲ್ಲಿ ರೂಪಾಯಿ ನಾಣ್ಯಗಳನ್ನು ಉದ್ದಾದ ಚೀಲದಲ್ಲಿ ಒಂದರ ನಂತರ ಮತ್ತೊಂದರಂತೆ ಇರಿಸಿ ಸೊಂಟಕ್ಕೆ ಬಿಗಿದು ಕಟ್ಟಿಕೊಳ್ಳುವ ಚೀಲ.

ಹಮ್ಮು (ನಾ)= ನಾನು ಮೀರಿದವನೆಂಬ/ಳೆಂಬ ಅಹಂಕಾರ.

ಹಯ್ನದೆಮ್ಮಿ **(ನಾ)=** ಹಾಲು ಕೊಡುವ ಎಮ್ಮೆ.

ಹಯ್ನಾ (ನಾ)= ಹಯನ; ಹೈನ; ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಇತ್ಯಾದಿ (ಗಾದೆ: ಸುಖದ ಜೀವಕ್ಕ ಎಮ್ಮಿ ಹಯ್ನಾ).

ಹಯ್ನಾ ಮಾಡು (ಕ್ರಿ)= ಎಮ್ಮೆ, ಆಕಳುಗಳನ್ನು ಸಾಕಿ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಸಂಪಾದಿಸು.

ಹರ (ನಾ)= ಶಿವ; ಈಶ್ವರ (ಭಜನೆ: ಹರಹರ ಹರಹರ ಮಾದೇವಾ। ಪಾರ್ವತಿ ಶಂಕರ ಸದಾಶಿವಾ।।).

ಹರಂಚು (ಕ್ರಿ)= ಹರಿಹಂಚು; ಚೆಲ್ಲಾಪಿಲ್ಲಿ ಮಾಡು; ಸಿಕ್ಕಾಬಟ್ಟೆ ಹರಡು; ಕೆಡಿಸು.

ಹರನಾಮಾವಳಿ (ನಾ)= ಹರನನ್ನೂ ಕುರಿತ ನೂರೆಂಟು ನಾಮಾವಳಿ.

ಹರಗು, ಹರ್ಗು (ಕ್ರಿ)= ಹರಡು; ಗೊಬ್ಬರ ಹರಡು; ಊಳು; ಉತ್ತು.

ಹರಾ (ಕ್ರಿ)= ಇದ್ದಾರೆ; ಇರುವರು.

ಹರಾಜು (ನಾ) ಹಿಂ.= ಲಿಲಾವು; ಮಾರಾಟದ ಒಂದು ಪದ್ಧತಿ.

ಹರಾಜು ಮಾಡು (ಕ್ರಿ)= ಲಿಲಾವು ಮಾಡು; ಸ್ಪರ್ಧೆ ಏರ್ಪಡಿಸಿ ಮಾರಾಟ ಮಾಡು.

ಹರಾಮಖೋರ (ನಾ)= ನೀಚಗುಣದವ; ದ್ರೋಹ ಬಗೆವವ.

ಹರಾಮಿ (ವಿ)= ಕೀಳು ತರಹದ; ನೀಚಗುಣದ; ಕೀಳು ರೀತಿಯಿಂದ ಸಂಪಾದಿಸಿದ.

ಹರಾಸು (ಕ್ರಿ)= ಸೋಲಿಸು; ಸೋಲುವಂತೆ ಮಾಡು.

ಹರಾಸು (ನಾ)= ಹರಾಜು; ಲಿಲಾವು; ಸ್ಪರ್ಧೆಯ ಮಾರಾಟ.

ಹರಾಸು ಮಾಡು (ಕ್ರಿ)= ಹರಾಜು ಮಾಡು (ನೋಡಿರಿ).

ಹರಿ (ಕ್ರಿ)= ಒಂದರಲ್ಲಿ ಎರಡು ಮಾಡು; ಕತ್ತರಿಸು; ಚೂರು ಮಾಡು; ತುಂಡು ಮಾಡು.

ಹರಿ (ನಾ)= ನೀರಿನ ಹರಿವು; ನೀರು ತುಂಬುವ ಮಣ್ಣಿನ ಪಾತ್ರೆ; ಹರವಿ; ಕೃಷ್ಣ; ವಿಷ್ಣು (ಕಾವ್ಯ: ಹರಿನೀಂ ಮಣ್ತಿಂದೆ! ತಿನ್ನೆಂಜನನಿ! ತೋರುವಕ್ತ್ರಾಮೆಂದೊಡೆ-ಬಾಯಂ ತೆರೆವುದಂ-ರುದ್ರಭಟ್ಟ).

ಹರಿಚಂದ್ರ ರಾಜಾ (ನಾ)= ಹರಿಶ್ಚಂದ್ರ ಭೂಪತಿ.

ಹರಿದಾಸ (ನಾ)= ವಿಷ್ಣು ಭಕ್ತ; ದಾಸ (ಪುರಂದರದಾಸ ಕನಕದಾಸ, ಸೂರದಾಸ, ತುಳಸೀದಾಸ ಇತ್ಯಾದಿ).

ಹರಿ ನೀರು (ನಾ)= ಹರಿಯುವ ನೀರು; ನಿಲ್ಲಲಾರದ ಜಲ.

ಹರಿಭೀಳು (ಕ್ರಿ)= ಕಾಡು; ಬೆನ್ನು ಹತ್ತು; ದುಂಬಾಲು ಬೀಳು.

ಹರಿಹಂಚು (ನಾ)= ಬೀದಿಯಲ್ಲಿ ಚೆಲ್ಲು; ಹರಡು; ಚೆಲ್ಲಾಪಿಲ್ಲಿಮಾಡು.

ಹರುವು (ಕ್ರಿ)= ಹರಡು; ಪಸರಿಸು (ನಾ) ವಿಸ್ತಾರ; ವೈಶಾಲ್ಯ; ಹರಡುವಿಕೆ; ಹರಿಯುವಿಕೆ.

ಹರೆ (ನಾ)= ಹರೆಯ; ಹರ್ಯಾ.

ಹರೆದಾಗ (ಅ)= ಯೌವನದಲ್ಲಿ; ತಾರುಣ್ಯದಲ್ಲಿ.

ಹರೆಹೊತ್ಲೆ (ಅ)= ಮುಂಜಾವಿನಲ್ಲಿ.

ಹರ್ಕ (ನಾ)= ಹರುಕ ಬಟ್ಟೆಯುಟ್ಟವನು; ಹರ್ಕ್ಯಾ.

ಹರ್ಕಂಗಿ (ನಾ)= ಹರಿದ ಅಂಗಿ (ಜಾನಪದ ತ್ರಿಪದಿ: ತುರ್ಕರ ಪಾರನ ಮುರ್ಕಾ ಏನ್ಹೇಳಾಲಿ। ಹರ್ಕಂಗಿ ಮ್ಯಾಲ ಹಳಿಸೆಲ್ಯಾ। ಹೊತಗೊಂಡು। ಮುರ್ಕಾ ಮಾಡೂತ ಹೊಂಟಾನ).

ಹರ್ಕತ್ತಾಗು (ಕ್ರಿ)= ಅಡ್ಡಿಯಾಗು; ಆತಂಕವುಂಟಾಗು; ತಡೆಯುಂಟಾಗು.

ಹರ್ಕತ್ತು (ನಾ)= ಅಡ್ಡಿ; ಆತಂಕ; ತಡೆ

ಹರ್ಕಾಗು (ಕ್ರಿ)= ಹರಿದು ಚಿಂದಿಯಾಗು; ಹರುಕಾಗು.

ಹರ್ಕಾಮುರ್ಕಾ (ಅ)= ಹರಿದು ಚಿಂದಿಯಾದದ್ದು; ಮುರಿದು ತುಂಡಾದದ್ದು.

ಹರ್ಕಿ (ನಾ)= ಹರಕೆ; ಪ್ರಾರ್ಥನೆ; ಚಿಂದಿಯುಟ್ಟವಳು (ಗಾದೆ: ಹರ್ಕಿಗಿ ಹಳಿ ಅರ್ಬಿಸಿಕ್ರ, ಹಿತ್ಲಾಗ್ಹೊಗಿ ಮಳಾ ಹಾಕ್ತಂತ).

ಹರ್ಕಿಹನ್ನೆರ್ಡೊರ್ಸ (ನಾ)= ಹರಕೆ ಮಾಡಿದರೆ ಹನ್ನೆರಡು ವರ್ಷಗಾದರೂ ಪೂರೈಸುವುದೆಂಬ ಭಾವನೆ.

ಹರ್ಕು (ನಾ)= ಹರಿದ ಬಟ್ಟೆ, ಕಾಗದ, ಎಲೆ ಇತ್ಯಾದಿ.

ಹರ್ಕುಬಾಯಿ (ನಾ)= ಒಡಕು ಬಾಯಿ; ಗುಟ್ಟುನಿಲ್ಲದ ಬಾಯಿ; ಹರಟುವ ಬಾಯಿ.

ಹರ್ಕೊಂಡ್ಹೋಗು (ಕ್ರಿ)= ನೀರಿನಲ್ಲಿ ಕೊಚ್ಚಿಕೊಂಡು ಹೋಗು.

ಹರ್ಕ್ಯಾ (ನಾ)= ಹರ್ಕ (ನೋಡಿರಿ).

ಹರ್ಗೀಜು (ಅ)= ಎಂದೂ; ಎಂದೆಂದೂ; ಯಾವ ರೀತಿಯಿಂದಲೂ.

ಹರ್ಗು (ಕ್ರಿ)= ಹರಗು (ನೋಡಿರಿ).

ಹರ್ಗೋಲು (ನಾ)= ಹರಿಗೋಲು; ದೋಣಿ; ತೆಪ್ಪ; ನೌಕೆ (ವಚನ: ನಮ್ಮ ಬಸವಣ್ಣನ ತೊಗಲು ಏನೇನಾಯಿತು? ಹಾಸಲಿಕ್ಕೆ ಹರ್ಗೋಲಾಯ್ತು! ಬೀಸಲಿಕ್ಕೆ ಕವಣೆಯಾಯ್ತು –ಅಂಬಿಗರ ಚೌಡಯ್ಯ ನಿಜ ಶರಣ).

ಹರ್ಗ್ಯಾನಮೆಳಿ (ನಾ)= ಒಂದು ಪ್ರಕಾರದ ಮುಳ್ಳು ಬಳ್ಳಿಯ ಕಂಟಿ; ಒಂದು ಜಾತಿಯ ಮುಳ್ಳು ಬಳ್ಳಿಯ ಜಾಲ (ಗಾದೆ: ಹರ್ಗ್ಯಾನ ಮೆಳಿ ಹತ್ತುಬಿಡಾಲ!).

ಹರ್ಜನ (ನಾ)= ದಲಿತ; ಹರಿಜನ.

ಹರ್ಜಾತ್ರಿ (ನಾ)= ಮುಗಿಯಲು ಬಂದ ಜಾತ್ರೆಯ ಅಬ್ಬರ; ಮುಕ್ತಾಯದ ಜಾತ್ರೆ.

ಹರ್ಜಿಲ್ಲ (ನಿ)= ಹರ್ಕತ್ತಿಲ್ಲ; ಅಡ್ಡಿಯಿಲ್ಲ; ಪರವಾ ಇಲ್ಲ.

ಹರ್ಜು (ನಾ)= ಉ.= ಹರ್ಕತ್ತು.

ಹರ್ತಾಗು (ಕ್ರಿ)= ಅಡ್ಡಿಯಾಗು; ನಿಂತು ಹೋಗು; ತಡೆಯುಂಟಾಗು.

ಹರ್ದಾರಿ (ನಾ)= ಹರಿದೂರದ ದಾರಿ; ಒಂದು ಹರಿದಾರಿ; ಮೂರು ಮೈಲಿನ ದೂರಳತೆ.

ಹರ್ದಿದ್ದು (ಅ)= ಹರಿದದ್ದು; ಚಿಂದಿಯಾದದ್ದು; ತುಂಡಾದದ್ದು.

ಹರ್ನೀ (ನಾ)= ಇಂ. ಹರ್ನಿಯಾ; ಕಿಬ್ಬೊಟ್ಟೆಯಗಡ್ಡೆ ಬೇನೆ.

ಹರ್ಯಾ (ನಾ)= ಹರೆಯ; ಪ್ರಾಯ; ಯೌವನ (ಅ)= ಹರಿಯುವ.

ಹರ್ಯಾನೀರು = ಹರಿಯುವ ನೀರು (ಗಾದೆ: ಹರ್ಯಾ ನೀರಾಗ ಹರಹರಾ ಅಂತ ಮುಳುಗಬೇಕು).

ಹರ್ಯಾಹೊತ್ಲೆ (ಅ)= ಮುಂಜಾವಿನಲ್ಲಿ; ಮುಂಜಾವು ಆಗುತ್ತಿದ್ದಂತೆ.

ಹರ್ರೇಕ (ಅ) ಉ.= ಪ್ರತಿಯೊಂದು.

ಹರ್ರೇಕ ಮಾಲ (ನಾ)= ಪ್ರತಿಯೊಂದು ವಸ್ತು.

ಹರ್ವು (ಕ್ರಿ)= ಹರಡು; ವಿಸ್ತರಿಸು; (ನಾ) ಹರಹು; ವಿಸ್ತಾರ.

ಹರ್ಷಿ ಬಾ (ಕ್ರಿ)= ಹರ್ಷಿಸಿ ಬಾ; ಹಿಗ್ಗಿನಲ್ಲಿ ಓಡಿ ಬಾ .

ಹರ್ಹಮೇಶಾ (ಅ) ಉ.= ಯಾವಾಗಲೂ; ಸದಾಕಾಲ.

ಹಲಗಿ (ನಾ)= ಹಲಗೆ; ಹಳೆಯ ಪದ್ಧತಿಯ ತೊಗಲು ವಾದ್ಯ. (ಕ್ರಿ) **ಹಲ್ಗಿ ಭಾರ್ಸು**, ಹಲಗೆ ವಾದ್ಯ ನುಡಿಸು.

ಹಲಗ್ಯಾ (ನಾ)= ಹಲಗೆ ಬಾರಿಸುವವನು.

ಹಲಬುರ್ಗಿ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿಯ ಹೆಸರು. ಆಯುರ್ವೇದ ಶಾಸ್ತ್ರದಲ್ಲಿ ಪ್ರಸಿದ್ಧಿ ಹೊಂದಿದ, ವಲಯ ಕೇಂದ್ರದ ಊರು.

ಹಲವಾ (ನಾ)ಹಿಂ.= ಮಿಠಾಯಿ, ಸಿಹಿ ತಿಂಡಿ.

ಹಲವಾಯಿ (ನಾ) ಹಿಂ.= ಮಿಠಾಯಿಗಾರ; ಸಿಹಿ ತಿಂಡಿಯ ಮಾರಾಟಗಾರ.

ಹಲಾಕಾಗು (ಕ್ರಿ)= ಸೊರಗು; ಕ್ಷೀಣವಾಗು; ಕೊರಗು.

ಹಲಾಕು (ನಾ) ಹಿಂ.= ಸೊರಗುವಿಕೆ; ಕೊರಗುವಿಕೆ; ಕ್ಷೀಣವಾಗುವಿಕೆ.

ಹಲಾಲಖೋರ (ನಾ)= ಕಕ್ಕಸ ತೊಳೆಯುವವನು; ಭಂಗಿ.

ಹಲಾಸು (ಕ್ರಿ)= ಅಲ್ಲಾಡಿಸು; ಅಲ್ಲಾಡುವಂತೆ ಮಾಡು.

ಹಲುಡಿ (ನಾ)= ಉದ್ದುದ್ದ ಹಲ್ಲುಳ್ಳವಳು (ಬೈಗುಳ).

ಹಲುಡ್ಯಾ (ನಾ)= ಉದ್ದುದ್ದ ಹಲ್ಲುಳ್ಳವನು (ಬೈಗುಳ).

ಹಲುಬು (ಕ್ರಿ)= ದುಃಖ ಪಡು; ಅಳು; ರೋದಿಸು.

ಹಲ್ಕಟ (ನಾ)= ಕೋಣನಂಥವನು; ನೀಚ; ಕೀಳು.

ಹಲ್ಕ್ಯಾ (ನಾ)= ಹಲ್ಕಟ; ಕೀಳು; ನೀಚ ವ್ಯಕ್ತಿ.

ಹಲ್ಯಾಸು (ಕ್ರಿ)= ಅಲ್ಲಾಡಿಸು; ಸ್ಥಳ ಬಿಡು.

ಹಲ್ಕಿಸಿ (ಕ್ರಿ)= ಹಲ್ಲು ತೋರುವಂತೆ ನಗು; ನಗು; ಬಾಯಿ ತೆರೆದು ಹಲ್ಲು ತೋರಿ ನಗು.

ಹಲ್ಪಡ್ಡಿ (ನಾ)= ಹಲ್ಲುಜ್ಜಲು ಬಳಸುವ ಮಾವು, ಬೇವು, ಹುಣಸೆ, ಅತ್ತಿ, ಅಲ, ನೇರಿಲೆ ಮೊದಲಾದವುಗಳ ಕಡ್ಡಿ.

ಹಲ್ಚಿ (ನಾ)= ಬಿಲ್ಲೆಯಂಥದ್ದು; ಚಪ್ಪಟೆಗೊಂಡದ್ದು.

ಹಲ್ಗಟ (ನಾ) ಮ.= ಕೋಣ; ಮಹಿಷ; ಹುಂಬ; ಹಲ್ಕಟ.

ಹಲ್ಗಿ (ನಾ)= ಹಲಗೆ; ಗುಂಡಾದ ಚರ್ಮವಾದ್ಯ

ಹಲ್ಗಿ ಭಾರ್ಸು (ಕ್ರಿ)= ಹಲಗೆ ವಾದ್ಯವನ್ನು ನುಡಿಸು.

ಹಲ್ಗ್ಯಾ (ನಾ)= ಹಲಗೆ ಬಾರಿಸುವವನು (ಗಾದೆ: ಹಲ್ಗ್ಯಾನ್ನೂಗ್ಡ ಬಾ ಅಂದ್ರ ಹಜಾಮನ್ನೂಗ್ಡ ಬರ್ತೀನಂತಂತ!).

ಹಲ್ಚಿ (ನಾ)= ಬಿಲ್ಲೆ; ಚಪ್ಪಟೆಗೊಂಡದ್ದು.

ಹಲ್ಚಿ ಆಗು (ಕ್ರಿ)= ಬಿಲ್ಲೆಯಂತಾಗು; ಚಪ್ಪಟೆಗೊಳ್ಳು.

ಹಲ್ಪುಡಿ (ನಾ)= ದಂತ ಮಂಜನ; ಹಲ್ಲು ತಿಕ್ಕಲು ಬಳಸುವ ಹುಡಿ; ದಾತ ಮಂಜನ.

ಹಲ್ಯಾ (ನಾ)= ಒಂದು ಪ್ರಕಾರದ ಬೂದುಬಣ್ಣದ ಕಾಡು ಹಕ್ಕಿ (ಒಗಟು: ಹಲ್ಯಾನ ತತ್ತಿ ಮ್ಯಾಲ ಹಾವು ಕುಂತಾದ

–ಅಂಡ ಮತ್ತು ಶಿಶ್ನ); ದನಗಳಿಗೆ ಕೊಡುವ ಆದೇಶ.

ಹಲ್ಯಾನ್ತತ್ತಿ (ನಾ)= ಹಲ್ಯಾ ಹೆಸರಿನ ಹಕ್ಕಿ ಇಟ್ಟ ತತ್ತಿ.

ಹಲ್ಲಿ (ನಾ)= ಪಲ್ಲಿ; ಶಕುನ ನುಡಿಯ ಪ್ರಾಣಿ; ಓತಿ ಕೇತದಂತ ಒಂದು ಸಣ್ಣ ಪ್ರಾಣಿ.

ಹಲ್ಲಿ ಸಕುನ (ನಾ)= ಹಲ್ಲಿ ಶಕುನ; ಹಲ್ಲಿಯ ಚುಕ್ ಚುಕ್ ಚುಕ್ ನುಡಿಯುವಿಕೆ.

ಹಲ್ಲು (ನಾ)= ಆಹಾರವನ್ನು ಮೆಲಿದು ನುರಿ ಮಾಡುವ ದಂತ, ದಂತ ಪಂಕ್ತಿ; ಕರಗಸದ ಚೂಪಾದ ಬಾಯಿ; ಕೊಡಲಿ ಈಳಿಗೆ, ಚಾಕುಗಳ ಬಾಯಿ.

ಹಲ್ಲು ಕಟಿ (ಕ್ರಿ)= ಕಟಕಟಕಟ ಸದ್ದಾಗುವಂತೆ ಹಲ್ಲಿಗೆ ಹಲ್ಲನ್ನು ತಿಕ್ಕು; ಕೋಪವನ್ನು ಪ್ರದರ್ಶಿಸು.

ಹಲ್ಲುದುರ್ಸು (ಕ್ರಿ)= ಬಾಯಿ ಮೇಲೆ ಹೊಡೆದು ದಂತಪಂಕ್ತಿಯನ್ನು ಕೆಡಹು; ಸೊಕ್ಕಡಗಿಸು.

ಹಲ್ಲುದುರ್ಸೆ (ನು)= ಹಲ್ಲು ಬೀಳುವಂತೆ ಹೊಡೆದೇನು (ಬೈಗುಳ).

ಹಲ್ಲುಮಸಿ (ಕ್ರಿ)= ಹಲ್ಲು ಮಸೆ; ಹಲ್ಲುಕಚ್ಚು; ಕರಕರಕರ ಹಲ್ಲು ಕಡಿ; ಒಳಗೊಳಗೆ ಹೊಟ್ಟೆಕಿಚ್ಚು ಪಡು.

ಹಲ್ವಾ (ನಾ) ಹಿಂ.= ಹಲವಾ; ಮಿಠಾಯಿ; ಸಿಹಿ ತಿಂಡಿ.

ಹವಳಾ (ನಾ)= ಹವಳ; ಕೆಂಪು ಬಣ್ಣದ ರತ್ನ. (ಜೋಗುಳ ಹಾಡು: ಅಳುವ ಕಂದನ ತುಟಿಯು। ಹವಳಾದ ಕುಡಿಹಂಗ। ಕುಡಿಹುಬ್ಬು ಬೇವಿನೆಸಳಂಗ। ಕಣ್ನೋಟ। ಶಿವನ ಕೈಯಲುಗು ಹೊಳೆದಂಗ।।).

ಹವಾ (ನಾ) ಹಿಂ.= ಗಾಳಿ; ವಾಯು.

ಹವಾಖೋರಿ (ನಾ) ಹಿಂ.= ವಾಯು ವಿಹಾರ.

ಹವಾಖೋರಿಗ್ಹೋಗು (ಕ್ರಿ)= ವಾಯು ವಿಹಾರ ಮಾಡು.

ಹವಾಥುಂಬು (ಕ್ರಿ)= ವಾಹನದ ಗಾಲಿಗಳಿಗೆ ಗಾಳಿಯನ್ನು ತುಂಬು.

ಹವಾಯಿ ಝಹಾಜ (ನಾ)= ವಿಮಾನ.

ಹವಾರ ಮಾಡು (ಕ್ರಿ)= ಸರಿಮಾಡು; ಬರೋಬರಿ ಮಾಡು, ಹಾಳು ಮಾಡು; ಏನೂ ಇಲ್ಲದಂತೆ ಮಾಡು.

ಹವಾಲತಿ (ನಾ) ಉ.= ಜುಮ್ಮೇದಾರಿ; ಜವಾಬ್ದಾರಿ.

ಹವಾಲತ್ತು (ನಾ)= ಪೋಲಿಸ ಕಚೇರಿಯಲ್ಲಿನ ಬಂದೀಖಾನೆ.

ಹವಾಲಾ, ಹವಾಲಿ (ನಾ) ಉ.= ಒಪ್ಪಿಸುವಿಕೆ; ಜುಮ್ಮೇದಾರಿ; ಜವಾಬ್ದಾರಿ.

ಹವಾಹೊಡಿ (ಕ್ರಿ)= ಹವಾಥುಂಬು (ನೋಡಿರಿ).

ಹವೇಜು (ನಾ)= ಹವೀಜು; ಕೊತ್ತಂಬರಿಯ ಕಾಯಿ ಮತ್ತು ಬೀಜ.

ಹವೇಲಿ (ನಾ) ಹಿಂ.= ದೊಡ್ಡಮನೆ; ದೊಡ್ಡಿ; ಭವ್ಯ ಮನೆ.

ಹವ್ವುಹಾರು (ಕ್ರಿ)= ಹೌಹಾರು; ಬೆದರು; ಗಾಬರಿಯಾಗು.

ಹವ್ವುದಗಿಡ (ನಾ)= ಔಷಧೋಪಚಾರಕ್ಕೆ ಬಳಕೆಯಾಗುವ ಹವಳದಂತಹ ಕಾಯಿ ಹೊಂದಿರುವ ಗಿಡ ಮತ್ತು ಅದರ ಗಡ್ಡೆ; ಅಶ್ವಗಂಧ ಎಂಬ ಗಿಡ.

ಹವ್ಳಾ (ನಾ)= ಹವಳಾ (ನೋಡಿರಿ).

ಹಸಿ (ನಾ)= ನೀರಲ್ಲಿ ನೆನೆದದ್ದು; ತೇವವುಳ್ಳದ್ದು; ಹಸಿರುಕಣಿಕೆ; ಕಿಳ್ಳು; ಜೋಳದೊಳಗೆ ಬೆಳೆದ ನೊರಜು; ದನಗಳ ಹಸಿರು ಆಹಾರ.

ಹಸಿ ಬರ (ನಾ)= ಅತಿವೃಷ್ಟಿಯಿಂದ ಉಂಟಾದ ಆಹಾರದ ಕೊರತೆ.

ಹಸಿಬಿಸಿ (ನಾ)= ಅರೆಬೆಂದದ್ದು; ಅರೆಕುದ್ದದ್ದು.

ಹಸಿ ಮೈ (ನಾ)= ನೀರು ಆರದ ದೇಹ; ಬಾಣತಿ ಶರೀರ.

ಹಸಿವಾಗು (ಕ್ರಿ)= ಆಹಾರದ ಬಯಕೆಯಾಗು; ಹೊಟ್ಟೆ ಖಾಲಿಯಾಗು.

ಹಸು (ನಾ)= ಹಸಿವು; ಹಸಿವೆ; ಆಹಾರದ ಬಯಕೆ; ಹೊಟ್ಟೆಯಲ್ಲಿ ಆಹಾರ ಇಲ್ಲದಿರುವಿಕೆ.

ಹಸುಕು (ನಾ)= ಹಸಿಯಾದದ್ದು; ಅರೆಬೆಂದದ್ದು; ಅರೆಕುದ್ದದ್ದು.

ಹಸುನು (ನಾ)= ಹಸನ; ಸ್ವಚ್ಛ; ಜಳಜಳ. ಕ್ರಿ= ಹಸನಾಗು; ಸ್ವಚ್ಛವಾಗು; ಜಳಜಳವಾಗು.

ಹಸುನು ಮಾಡು (ಕ್ರಿ)= ಹಸನಗೊಳಿಸು; ಸ್ವಚ್ಛಗೊಳಿಸು; ಜಳಜಳಗೊಳಿಸು; ಕಾಳಿನಿಂದ ಕಸವನ್ನು ಬೇರ್ಪಡಿಸು.

ಹಸುರು (ನಾ)= ಹಸಿರು; ಹಚ್ಚಗಿನ ಬಣ್ಣ; ಪಚ್ಚೆ ಬಣ್ಣ.

ಹಸುರು ಹಾಂವು (ನಾ)= ಹಚ್ಚನೆ ಬಣ್ಣದ ಹಾವು.

ಹಸುರೆಲಿ (ನಾ)= ಹಚ್ಚಗಿನ ಪರ್ಣ, ಎಲೆ (ಗಾದೆ: ಹಣ್ಣೆಲಿ ಉದ್ರಾಗ ಹಸುರೆಲಿ ಹಲ್ಲುಕಿಸೀತಿತಂತ!).

ಹಸುರೇರು (ಕ್ರಿ)= ಮೈಯೆಲ್ಲ ಹಚ್ಚಗಿನ ಬಣ್ಣಕ್ಕೆ ತಿರುಗು; ಹಸಿರು ಕಾಮಣಿ ರೋಗವುಂಟಾಗು **ಹಸುರ್ಗ್ರಾಮ್ಣಿ (ನಾ)=** ಹಸಿರು ಬಣ್ಣದ ಕಾಮಣಿ ರೋಗ.

ಹಸ್ಕಾ ಬಿಸ್ಕಾ (ಅ)= ಅರೆಬೆಂದದ್ದು; ಅರೆ ಕುದ್ದದ್ದು.

ಹಸ್ತರೇಷಾ (ನಾ)= ಅಂಗೈಯಲ್ಲಿರುವ ಗೆರೆ.

ಹಸ್ತಾ (ನಾ)= ಹಸ್ತ ಎಂಬ ಹೆಸರಿನ ೧೩ನೆಯ ಮಳೆಯ ನಕ್ಷತ್ರ; ಹಸ್ತ; ಕೈ; ಕರ.

ಹಸ್ತಿ (ನಾ)= ಹಸ್ತ ಮಳೆ ನಕ್ಷತ್ರ; ಯೋಗ್ಯತೆ; ಘನತೆ; ವ್ಯಕ್ತಿತ್ವ (ಉದಾ: ನಿನ್ನ ಹಸ್ತಿ ಏನದಾ ಅಂಬಾದ ನನಗ ಛಲೋ ಗೊತ್ತದ).

ಹಸ್ತು (ಕ್ರಿ)= ಹಸಿದು; ಆಹಾರ ಬಯಕೆಯಾಗಿ.

ಹಸ್ತೆ (ಅ)= ಕೈಯಿಂದ; ಮುಖಾಂತರ; ದ್ವಾರಾ.

ಹಸ್ದ (ಕ್ರಿ)= ಹಸಿದಿದ್ದ; ಆಹಾರ ಬಯಕೆ ಉಂಟಾದ (ಗಾದೆ: ಹಸ್ದ ಹಾರೂಗ ಕೆಣಕಬಾರ್ದು, ಉಂಡ ತುರ್ಕುಗ ಕೆಣಕ ಬಾರ್ದು).

ಹಸ್ಬಿ (ನಾ)= ಹಡಪ; ನಾಪಿತನ ಸಾಹಿತ್ಯದ ಚೀಲ.

ಹಸ್ರಾಣಿ (ನಾ)= ಮಲೆತ ನೀರ ಮೇಲೆ ಬೆಳೆದಿರುವ ಸಸ್ಯ; ಅಂತರ್ಗಮನಿ; ಹಸಿರು ಪದಾರ್ಥ; ಹುಲ್ಲು; ಹಸುರಾಣಿ; ಅಂತರ್ಗಂಗಿ.

ಹಳಕು (ನಾ)= ಬಳ್ಳೊಳ್ಳಿಯ ಕಾಳು; ಬೀಜ; ಚೂರು; ತುಂಡು; ಹಳುಕು.

ಹಳದಿ (ನಾ) ಮ.= ಹಳ್ದಿ; ಅರಿಷಿಣ; ಅರಿಷಿಣ ಪುಡಿ.

ಹಳಾ (ಕ್ರಿ)= ಇದ್ದಾಳೆ; ಇರುವಳು; (ಅ) ಹಳೆಯದಾದ; ಹೀನವಾದ.

ಹಳಾ ಆಯ್ಗೇಟ (ನಾ)= ಹೀನ ತನದಿಂದ ಕೆಟ್ಟವನು; ಹೀನ; ಆಯಗೆಟ್ಟವನು; ತೂಕ ತಪ್ಪಿದವನು; ಅತಿಹೀನನು (ಬೈಗುಳ).

ಹಳಾಕ್ವಾಡಗ (ನಾ)= ಹಳೆಯ ಕೋಡಂಗಿ; ಅತಿಕೋಡಗ ಸ್ವಭಾವದವ; ಮುದಿ-ಕೋತಿಯ ಸ್ವಭಾವದವ; (ಬೈಗುಳ).

ಹಳಾಗ, ಹಳ್ಳಗ (ಅ)= ಮೆಲ್ಲಗೆ.

ಹಳಾಭಾರ್ಗಿ (ನಾ)= ಹಳೆಯ ಬಾರಿಗೆ; ಯಾತಕ್ಕೂ ಬಾರದ್ದು; ಹೀನವಾದವನು; ಕೀಳಾದವನು (ಬೈಗುಳ).

ಹಳಾಳಿ (ನಾ)= ಹಳಹಳಿ; ಕಳವಳ; ತಳಮಳ; ವಿಷಾದ; ಪಶ್ಚಾತ್ತಾಪ (ಒಗಟು: ಶಿವಾಕೊಟ್ಟಾಳ್ಳಿ, ಅದಕ್ಯಾಕ ಹಳಾಳಿ).

ಹಳಿಪತ್ರೋಳ್ಗಿ (ನು)= ಉಂಡೆಸೆದ ಪತ್ರೋಳ್ಗಿ ಯಂತವನು (ಬೈಗುಳ).

ಹಳಿ ಹದ್ದು (ನು)= ಮುದಿ; ಮುದಿಹದ್ದು; ಮುದುಕ; ಮುದುಕಿ; ಕೈಲಾಗಲಾರದವನು/ಳು, (ಬೈಗುಳ).

ಹಳು (ನಾ)= ತಗ್ಗು; ಕೊರಕಲು; ಹುದುಲು; ಕಾಡು; ಅರಣ್ಯ. (ಅ) ಮ. ಮೆಲ್ಲಗೆ; ಮೆಲ್ಲನೆ.

ಹಳುಕು (ನಾ)= ಹಳಕು (ನೋಡಿರಿ).

ಹಳೆಂಬ್ರ (ನಾ)= ಬೀದರ ಜಿಲ್ಲೆಯ ಒಂದು ಊರು. ವೀರ ಭದ್ರಪ್ಪ ಹಳೆಂಬ್ರ ಶರಣರ ಹುಟ್ಟೂರು. ಹಳೆಂಬ್ರ ಹೆಸರನ್ನು ಕೆಡಿಸಿ 'ಅಲಿಯಂಬರ' ಎಂದು ಕರೆಯುತ್ತಿದ್ದಾರೆ.

ಹಳ್ಕು (ನಾ)= ಹಳಕು (ನೋಡಿರಿ).

ಹಳ್ದಿ (ನಾ)= ಹಳದಿ; ಅರಿಷಿಣ; ಅರಿಷಿಣ ಬಣ್ಣ.

ಹಳ್ಸಿದ್ದು (ನಾ)= ಹಳಸಿದ್ದು; ರುಚಿಕೆಟ್ಟದ್ದು; ಗುಣ ಕೆಟ್ಟದ್ದು (ಗಾದೆ: ಹಳ್ಸಿದ್ಕಾ ಹಸ್ದಿದ್ಕಾ ಗಂಟು ಬಿತ್ತು!).

ಹಳ್ಸು (ಕ್ರಿ) = ಹಳಸು; ಹಳೆಯದಾಗು; ಆಹಾರದ ಸ್ವರೂಪ ಹಾಗೂ ರುಚಿ ಕೆಡು; ಆಹಾರವು ದುರ್ನಾತದಿಂದ ಕೂಡು.

ಹಳ್ಸೊಟ್ಟಿ (ನಾ)= ಹಳಸಲು ಹೊಟ್ಟೆ; ಮುಂಜಾನೆಯ ಖಾಲಿ ಹೊಟ್ಟೆ.

ಹಳ್ಸ್ಯಾದ (ಕ್ರಿ)= ಹಳಸಿದೆ; ಅನ್ನವು ಹಳಸಿ ಹೋಗಿದೆ.

ಹಳ್ಳ (ನಾ)= ನೀರಿನ ಸಣ್ಣ ಪ್ರವಾಹ; ಹಳ್ಯಾ; ನೀರಿನ ತೊರೆ; ಸಣ್ಣಕಲ್ಲು; ಹರಳು; ಖಂದೀಲಿಗೆ ಬಳಸುವ ಗಾಜಿನ ಹರಳು.

ಹಳ್ಯಾ (ನಾ)= ಹಳ್ಳ; ತೊರೆ. (ಹಂತಿಪದ: ಹಳ್ಳಾದ ಧಂಡೀಲಿ ಭೆಳ್ಯಾನ ಬಿಳಿ ಜ್ವಾಳ। ಮೆಲ್ಲಾಗ ಮೆಯ್ಯೋಗಿಳಿರಾಮಾ।).

ಹಳ್ಳಾಹೊಡಿ (ಕ್ರಿ)= ಸಣ್ಣಕಲ್ಲಿನಿಂದ ಹೊಡೆ; ಸಣ್ಣ ಹರಳಿನಿಂದ ನಯವಾಗಿ ಹೊಡೆದು ಸಂಕೇತ ನೀಡು.

ಹಳ್ಳಿ (ನಾ)= ಊರು; ಚಿಕ್ಕಗ್ರಾಮ; ಬಸವಕಲ್ಯಾಣ ತಾಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಒಂಭತ್ತರ ಮೇಲಿರುವ ಒಂದು

ಊರು. ಹಳ್ಳಿ, ಮಂಠಾಳ (ಮಠದ್ವಾಳ), ಹತ್ಯಾಳ, ಮುಡಬಿ, ರಾಜೇಶ್ವರಗಳು ಚಾಲುಕ್ಯ ಕಾಲದ ಪ್ರಸಿದ್ಧ ವ್ಯಾಪಾರಿ ಕೇಂದ್ರಗಳಾಗಿದ್ದವು.

ಹಳ್ಳಿ ಪಳ್ಳಿ (ನಾ)= ಹಳ್ಳಿಗಾಡು; ಗ್ರಾಮಾಂತರ.

ಹಳ್ಳುಗ (ಅ)= ಮೆಲ್ಲಗೆ; ಸಾವಕಾಶ; ಹಗುರ.

ಹಳ್ಳುಗಾಗು (ಕ್ರಿ)= ಹಗುರವಾಗು; ಹಾಯಾಗು; ಹಾಯೆನಿಸು.

ಹಳ್ಳುಗ್ಹಳುಗ (ದ್ವಿ)= ಮೆಲ್ಲಮೆಲ್ಲನೆ; ಮೆತ್ತಗೆ; ಸದ್ದಾಗದಂತೆ.

ಹಳ್ಳುದುಪ್ಪು (ನಾ)= ದಪ್ಪದಪ್ಪ ಹರಳಂತಿರುವ ಉಪ್ಪು.

ಹಾ (ಅ)= ಆsss ; ಓsss (ಉದಾ: ದ್ರೌಪದಿ ಸ್ವಯಂವರದಲ್ಲಿ ಅರ್ಜುನನು ವಿಜಯಿಯಾದ ಕೂಡಲೆ ಬ್ರಾಹ್ಮಣ ಸಮೂಹವು ಒಮ್ಮೇಲೆ 'ಹಾsss' ಎಂದು ಬಾಯಿ ತೆರೆಯಿತು).

ಹಾಂಗ (ಅ)= ಹಾಗೆ; ಆ ರೀತಿಯಲ್ಲಿ; ಆಕ್ರಮದಲ್ಲಿ (ಹಾಡು: ಈ ಬದುಕು ಬರಿ ಭ್ರಮಿ ತಿಕಿದಿಮ್ಮಿ ಗಿಮಿಗಿಮ್ಮಿ। ಹಾಂಗೊಮ್ಮೆ ಹೀಂಗೊಮ್ಮೆ ಕುಣೆಯೋಣು ಬಾ।। -ದ.ರಾ. ಬೇಂದ್ರೆ).

ಹಾಂಗ್ಯಾಕ (ಅ)= ಹಾಗೇಕೆ; ಆರೀತಿಯಲ್ಲೇಕೆ; ಆಕ್ರಮದಲ್ಲೇಕೆ; ಆ ಹಾದಿಯಿಂದೇಕೆ.

ಹಾಂಡೆ, ಹಾಂಡ್ಯಾ (ನಾ)= ಹಂಡೆ; ಹಿತ್ತಾಳೆ; ಅಥವಾ ತಾಮ್ರದ ದೊಡ್ಡ ಭಾಂಡೆ.

ಹಾಂಡ್ಯಾ ಭಾಂಡ್ಯಾ (ನಾ)= ಪಾತ್ರೆ ಪಡಗ.

ಹಾಂವಪ್ಪ (ನಾ)= ಹಾವಪ್ಪ ಎಂಬ ಹೆಸರು.

ಹಾಂವು (ನಾ)= ಹಾವು; ಸರ್ಪ.

ಹಾಂವ್ಗಾರ (ನಾ)= ಹಾವುಗಾರ; ಹಾವ್ಗಾರ; ಹಾವಾಡಿಗ.

ಹಾಂವ್ಗಿ (ನಾ)= ಆವುಗೆ; ಪಾದುಕೆ; ಪಾದರಕ್ಷೆ.

ಹಾಂವ್ಗೆಪ್ಪ (ನಾ)= ಆವುಗೆಪ್ಪ ಎಂಬ ವ್ಯಕ್ತಿ ನಾಮ.

ಹಾಂವ್ರಾಣಿ (ನಾ)= ಹಾವ್ರಾಣಿ; ಹಾವರಣೆ; ಸರೀ ಸೃಪವರ್ಗಕ್ಕೆ ಸೇರಿದ ಒಂದು ಪ್ರಾಣಿ; ಹಾವುರಾಣಿ (ಶಿಶುಪ್ರಾಸ: ಮುತ್ಯಾ ಮುತ್ಯಾ ಮೂಗ್ರಾಣಿ। ಮುತ್ಯಾನ್ಮೂಗಿನಾಗ ಹಾಂವ್ರಾಣಿ।।).

ಹಾಕು (ಕ್ರಿ)= ಸುರಿ; ಎರೆ; ಸೇರಿಸು; ನೀಡು; ಬಡಿಸು; ಹೊಡೆ; ಬಡೆ.

ಹಾಕು ಕೈ (ಕ್ರಿ)= ಕೈಯಿಂದ ಏಟ ಹಾಕು; ಹೊಡೆ; ಬಡಿ; ಹೇರು.

ಹಾಕು ಕೈ ನೂಕು ಕೈ (ನು)= ಹೊಡೆ; ಬಡಿ; ತಳ್ಳಾಟ ಮಾಡು.

ಹಾಕ್ಯಾಕಿ ಹೊಡಿ (ಕ್ರಿ)= ಸಿಕ್ಕಾಪಟ್ಟೆಹೊಡೆ; ನೆಲಕ್ಕೆ ಹಾಕಿ ಸುತ್ತು ಹಾಕಿ ಹೊಡೆ.

ಹಾಕ್ಯಾಕು (ಕ್ರಿ)= ಹಾಕಿಬಿಡು; ಸುರುವಿ ಬಿಡು; ಸೇರಿಸಿಬಿಡು.

ಹಾಗಲ್ಕಾಯಿ (ನಾ)= ಹಾಗಲಕಾಯಿ; ಕಹಿಸ್ವಾದವುಳ್ಳ ತರಕಾರಿಯ ಕಾಯಿ.

ಹಾಗಲ್ಬೆಳ್ಳಿ (ನಾ)= ಹಾಗಲದ ಬಳ್ಳಿ; ಕಹಿಸ್ವಾದವುಳ್ಳ ಹಾಗಲವೆಂಬ ತರಕಾರಿ ಕಾಯಿಯ ಬಳ್ಳಿ.

ಹಾಜರ (ನಾ) ಉ.= ಉಪಸ್ಥಿತ; ಎದುರಲ್ಲಿರುವಿಕೆ.

ಹಾಜರ ಜವಾಬ (ನಾ) ಉ.= ತಕ್ಷಣದ ಉತ್ತರ.

ಹಾಜರಾಗು (ಕ್ರಿ)= ಉಪಸ್ಥಿತನಾಗು; ಎದುರಲ್ಲಿರು; ಕೆಲಸಕ್ಕೆ ಬಂದುಸೇರು.

ಹಾಜರಿ (ನಾ) ಉ.= ಎದುರಲ್ಲಿರುವಿಕೆ; ಉಪಸ್ಥಿತಿ.

ಹಾಜರಿ ಪುಸ್ತಕ (ನಾ)= ಉಪಸ್ಥಿತಿ ಪಂಜಿಕೆ; ಕೆಲಸಕ್ಕೆ ರುಜುವಾದವನು ಸಹಿ ಮಾಡುವ ಪುಸ್ತಕ.

ಹಾಜೀಸಾಬ (ನಾ) ಉ.= ಹಜ್ ಯಾತ್ರೆಯನ್ನು ಅಂದರೆ ಮಕ್ಕಾ ಮದೀನಾ ಯಾತ್ರೆಯನ್ನು ಮುಗಿಸಿಕೊಂಡು ಬಂದ ಮುಸಲ್ಮಾನ ತೀರ್ಥಯಾತ್ರಿ.

ಹಾಟು (ನಾ)= ವೀರ್ಯ; ಗಂಡಿನ ಜನನೇಂದ್ರಿಯದಿಂದ ಚಿಮ್ಮುವ ವೀರ್ಯಾಣು ತುಂಬಿದ ಜಿಗುಟು ದ್ರವ (ತ್ರಿಪದಿ: ಹಾಟು ತುಂಬಿದ ಶಿಶ್ನ। ಗೂಟದಂತಿರುವುದು। ಹಾಟೊಂದು ಬಿಟ್ಟು ಸುರಿದರಾ ಶಿಶ್ನ। ಋಷಿಯ। ಶಾಟಕ್ಕೆ ಸರಿಯೆಂದ ಸರ್ವಜ್ಞ।।); ಸ್ತ್ರೀಯ ರೇತಸ್ಸು; ಮೂತ್ರ.

ಹಾಟು ಕುಡಿ (ಕ್ರಿ)= ಸಂಭೋಗಿಸು; ಮೂತ್ರ ಕುಡಿ; ಸಂಭೋಗ ಸುಖ ಹೊಂದು (ಬೈಗುಳ).

ಹಾಟ್ಗಳ್ಳ (ನಾ)= ಕಳ್ಳಕೂಟ ಮಾಡಿದವನು; ಹಾಟ್ಯಾ.

ಹಾಟ್ಯಾ (ನಾ)= ಹಾಟ್ಗಳ್ಳ; ಕಳ್ಳ ಕೂಟ ಮಾಡಿದವನು; ಅತ್ಯಾಚಾರಿ; ಅತ್ಯಾಚಾರ ಮಾಡಿದವನು (ಬೈಗುಳ).

ಹಾಡಕ್ಕಿ (ನಾ)= ದೊಡ್ಡಾಟದ ರಂಗ ತಾಲೀಮು; ನಾಟಕದ ರಂಗ ತಾಲೀಮು; ನಾಟಕಾಭ್ಯಾಸ.

ಹಾಡಕ್ಕಿಹಾಕು (ಕ್ರಿ)= ದೊಡ್ಡಾಟದ ಅಭ್ಯಾಸ ಮಾಡು; ರಂಗ ತಾಲೀಮು ಮಾಡು.

ಹಾಡು (ಕ್ರಿ)= ಹಾಡುಹೇಳು; ಗಾಯನ ಮಾಡು; (ನಾ) ಗಾನ; ಗೀತೆ; ಅವಸ್ಥೆ; ಪರಿಸ್ಥಿತಿ; ಕಷ್ಟ; ತೊಂದರೆ.

ಹಾಡುಕಟ್ಟು (ಕ್ರಿ)= ಗಾಯನ ರಚಿಸು; ಕವಿತೆ ರಚಿಸು; ಗೀತೆಯನ್ನು ಬರೆ.

ಹಾಡ್ಡಿ (ನಾ)= ಹೆಡಿಗೆ; ಅಂಬಾ ಬಾಯಿಯ ಬುಟ್ಟಿ.

ಹಾಡ್ಡಿಥುಂಬು (ಕ್ರಿ)= ಅಂಬಾ ಬಾಯಿಯಬುಟ್ಟಿಯಲ್ಲಿ ಭಕ್ತಿಯಿಂದ ನೈವೇದ್ಯತುಂಬು.

ಹಾಡ್ಡಿಗಿ (ನಾ)= ಹಾಡ್ಡಿ (ನೋಡಿರಿ).

ಹಾತೊರಿ (ಕ್ರಿ)= ಆತುರ ಪಡು; ಹಂಬಲಿಸು.

ಹಾದರ (ನಾ)= ಪರಸ್ತ್ರೀ ಅಥವಾ ಪರಪುರುಷ ಗಮನ; ವ್ಯಭಿಚಾರ; ಜಾರತನ.

ಹಾದಿ (ನಾ)= ದಾರಿ; ಮಾರ್ಗ; ರೀತಿನೀತಿ; ನಡಾವಳಿ; ರೂಢಿ; ಪದ್ಧತಿ.

ಹಾದಿಕಾಯಿ (ಕ್ರಿ)= ಎದುರು ನೋಡು; ಪ್ರತೀಕ್ಷೆ ಮಾಡು; ನಿರೀಕ್ಷಿಸು.

ಹಾದಿಕಾರ (ನಾ)= ಹಾದಿ ಹಿಡಿದು ಹೋಗುವವನು; ದಾರಿಹೋಕ; ಪ್ರಯಾಣಿಕ.

ಹಾದಿಥಂದಿರಲಿ (ಕ್ರಿ)= ನಡಾವಳಿ ಸರಿಯಾಗಿರಲಿ; ರೀತಿ ನೀತಿ ಪಾಲಿಸಲಿ, ರೂಢಿ ಉತ್ತಮವಾಗಿರಲಿ.

ಹಾದಿಬಿಟ್ಟು ಹಾದಿ (ನಾ)= ಸಲ್ಲದ ಹಾದಿ; ತಪ್ಪುದಾರಿ; ಸಲ್ಲದ ನಡಾವಳಿ, ರೂಢಿ, ಪದ್ಧತಿ.

ಹಾದಿಲಿ ಹೋಗಾಬಲಾ (ನಾ)= ಇಲ್ಲದ ಉಪದ್ವ್ಯಾಪ; ವಿನಾಕಾರಣ ಅಪವಾದಕ್ಕೆ ಗುರಿಯಾಗುವಿಕೆ (ಗಾದೆ: ಹಾದಿಲಿ ಹೋಗಾ ಬಲಾ ಮೈ ಮ್ಯಾಲ ಹಾಯ್ಕೋಡ್ತಂತ!).

ಹಾದಿಹಂದ್ರ (ನಾ)= ಹಾದಿಯ ಮೇಲೆ ಚಪ್ಪರ ಹಾಕಿ ಬೀದಿಚಳಿ ಹಾಕುವಿಕೆ (ಮದುವೆ ಇತ್ಯಾದಿ ಸಮಾರಂಭದ ಸಂದರ್ಭದಲ್ಲಿ ಹಾದಿ ಬೀದಿಗಳನ್ನು ಶೃಂಗಾರಗೊಳಿಸುವಿಕೆ).

ಹಾದುರ (ನಾ)= ಹಾದರ (ನೋಡಿರಿ).

ಹಾದುರ್ಗಿತ್ತಿ (ನಾ)= ಹಾದರ್ಗಿತ್ತಿ; ವ್ಯಭಿಚಾರಿಣಿ; ಜಾರಿಣಿ.

ಹಾದ್ರ (ನಾ)= ಹಾದರ; ವ್ಯಭಿಚಾರ; ಜಾರತನ.

ಹಾನಾ (ಕ್ರಿ)= ಇದ್ದಾನೆ (ತತ್ವಪದ: ವಸ್ತು ಅಲ್ಲಿಲ್ಲಾ ಇಲ್ಲಿಲ್ಲಾ! ಹಾನಾ ಇಲ್ಲೋ ತಾನೇ ಬಲ್ಲ!! –ಮಾಣಿಕ ಪ್ರಭು ಮಹಾರಾಜರು).

ಹಾನಾ ಇಲ್ಲೋ = ಇದ್ದಾನೋ ಇಲ್ಲವೋ!.

ಹಾಯಿ (ಕ್ರಿ)= ಅಪ್ಪಳಿಸು; ಡಿಕ್ಕಿಹೊಡೆ; ಎರಗು; ಮೇಲೆಬೀಳು.

ಹಾಯ್ (ನಾ)= ಹಾಲು; ಕ್ಷೀರ (ಬಾಲಭಾಷೆ).

ಹಾಯಾಗಿ (ಅ)= ನೆಮ್ಮದಿಯಾಗಿ; ಹಿತವಾಗಿ.

ಹಾಯಿಸು (ಕ್ರಿ)= ಹರಿಯುವಂತೆ ಮಾಡು.

ಹಾರ, ಹಾರಾ (ನಾ)= ಹೂಮಾಲೆ; ಬಂಗಾರದ ಮಣಿಗಳ ಮಾಲೆ. (ಕ್ರಿ) ಇದ್ದಾರೆ; ಇರುವರು; ಹರಾ.

ಹಾರಕ (ನಾ)= ಬರಗಿನ ಜಾತಿಯ ಒಂದು ಬಗೆಯ ತೃಣಧಾನ್ಯ.

ಹಾರಕೂಡ (ನಾ)= ಷಟ್‌ಸ್ಥಲ ಬ್ರಹ್ಮಿ ಚೆನ್ನಬಸವ ಶಿವಾಚಾರ್ಯರ ತೀರ್ಥಕ್ಷೇತ್ರ ವಿದ್ದ ಊರು. ಹಿರೇಮಠ ಪೀಠಾಧ್ಯಕ್ಷ ಚನ್ನವೀರ ಶಿವಾಚಾರ್ಯರ ಪುಣ್ಯ ಕ್ಷೇತ್ರ. ತತ್ವಪದಕಾರ ಶಾಂತಪ್ಪ ಶೀಲವಂತರ ಹುಟ್ಟೂರು.

ಹಾರಾಟಾ (ನಾ)= ಹಾರಾಟ; ಕೂಗಾಟ; ಆರ್ಭಟ.

ಹಾರಾಡು (ಕ್ರಿ)= ಕೂಗಾಡು; ರೇಗಾಡು; ಆರ್ಭಟಿಸು.

ಹಾರಿ (ನಾ)= ಹಾರೆ; ನೆಲ ಅಗಿಯುವ ಉಕ್ಕಿನ ಸಾಧನ; ಮೆಣಸಿನ ಕಾಯಿ ಕುಟ್ಟುವ ಉಕ್ಕಿನ ಸಾಧನ.

ಹಾರಿಸು (ಕ್ರಿ)= ಸ್ಫೋಟಿಸು; ಜಿಗಿಸು; ಹಾರುವಂತೆ ಮಾಡು; ಎತ್ತಿ ಹಾಕು; ಲಪಟಾಯಿಸು; ಸಿಡಿಸು; ಆಕಾಶದಲ್ಲಿ ತೇಲುವಂತೆ ಮಾಡು.

ಹಾರು (ಕ್ರಿ)= ಎಗರು; ಜಿಗಿ; ಆಕಾಶದಲ್ಲಿ ಚಲಿಸು.

ಹಾರು (ನಾ)= ಬ್ರಾಹ್ಮಣ; ಹಾರುವ.

ಹಾರುತಿ (ನಾ)= ಬ್ರಾಹ್ಮಣ ಮಹಿಳೆ.

ಹಾರುಹೊಡಿ (ಕ್ರಿ)= ಎಸೆ; ಬೀಸಿ ಎಸೆ; ಬಿಸಾಕು.

ಹಾರ್ಕ (ನಾ)= ಹಾರಕ (ನೋಡಿರಿ).

ಹಾರ್ಕಿಸುದ್ದಿ (ನಾ)= ಹಾರಿಕೆಯಸುದ್ದಿ; ಗಾಳಿಸುದ್ದಿ; ನಿರಾಧಾರ ಸುದ್ದಿ; ವದಂತಿ.

ಹಾರ್ಕೂಡ (ನಾ)= ಹಾರಕೂಡ (ನೋಡಿರಿ).

ಹಾಲತ್ತು (ನಾ) ಉ.= ಪರಿಸ್ಥಿತಿ; ಅವಸ್ಥೆ.

ಹಾಲಾತು (ನಾ) ಉ.= ಹಾಲತ್ತು (ನೋಡಿರಿ).

ಹಾಲಿ (ಅ)= ಈಗಿನ; ಸಧ್ಯದ; ಪ್ರಕೃತ; ನಿಜಾಮ ಕಾಲದ ಸ್ವಾತಂತ್ರ್ಯ ಪೂರ್ವದ ನಾಣ್ಯದ ಹೆಸರು.

ಹಾಲು (ನಾ)= ಕ್ಷೀರ; ದುಗ್ಧ (ಕೋಲಿನ ಹಾಡು: ಹಾಲು ಮಾರುತ ಬಂದಾಳಿವಳೋ। ಹವಳದ ನಾಮದ ಗೊಲ್ಲರ ಪೋರಿ॥); ಎಕ್ಕೆ, ಕಳ್ಳಿ ಮುಂತಾದ ಗಿಡಗಳ ಬಿಳಿಯರಸ; ಕಬ್ಬಿನರಸ.

ಹಾಲುಕ್ಕುಸು (ಕ್ರಿ)= ಹಾಲು ಕುದಿಸಿ ಉಕ್ಕುವಂತೆ ಮಾಡು; ಮನೆಯಲ್ಲಿ ಹಾಲುಕ್ಕಿಸುವುದು ಶುಭಲಕ್ಷಣವೆಂಬುದು ಜನಪದರ ನಂಬುಗೆ.

ಹಾಲು ತುಪ್ಪ (ನಾ)= ಹಾಲು ಮತ್ತು ತುಪ್ಪ; ಮಹಾಶಿವರಾತ್ರಿಯಂದು ಇಷ್ಟಲಿಂಗ ಪೂಜೆಯ ಸಾಮಗ್ರಿ.

ಹಾಲೆರಿ (ಕ್ರಿ)= ನಾಗಣ್ಣನಿಗೆ ಹಾಲಿನ ಅಭಿಷೇಕ ಮಾಡು; ಸತ್ತವರ ಕುಣಿಯ ಎದುರು ಹಾಲು ಸುರುವು; ಹಾಲು ಕುಡಿಸು.

ಹಾಲ್ಕುಡಿ (ಕ್ರಿ)= ಹಾಲನ್ನು ಹೀರು; ಹಾಲನ್ನು ಗಂಟಲಿಗೆ ಇಳಿಸು; ಜೋಳ, ಸಜ್ಜೆ, ಗೋದಿ ಮೊದಲಾದ ಎಳೆತೆನೆಯ ಕಾಳುಗಳು ದಂಟಿನಿಂದ ಹಾಲನ್ನು ಹೀರು.

ಹಾಲ್ಗಡಗ (ನಾ)= ಚಿಕ್ಕ ಮಕ್ಕಳ ಕಾಲಿಗೆ ತೊಡಿಸುವ ಬೆಳ್ಳಿಯ, ತಾಮ್ರದ ಇಲ್ಲವೆ ಪಂಚಲೋಹದ ಕಡಗ.

ಹಾಲ್ಗಲ್ಲ (ನಾ)=ಎಳಗೂಸಿನ ಮೃದುವಾದ ಕೆನ್ನೆ. ಅಪಕ್ವ ವಯಸ್ಸು.

ಹಾಲ್ಗುಂಜಿ (ನಾ)= ಮದುವೆಯ ಹಂದರಕ್ಕೆ ಹೊಂದಿಸಿ ಹೂಳಿದ ಹಾಲೊಸರುವ ಅತ್ತಿಯ ಕೊಂಬೆ.

ಹಾಲ್ಗೆಚ್ಚಿ (ನಾ)= ದನಗಳ ಸ್ತನ; ಮೊಲೆ.

ಹಾಲ್ಚುಕ್ಕಿ (ನಾ)= ಹಾಲುಬಣ್ಣದ ನಕ್ಷತ್ರ (ಗೌರಿ ಹಾಡು: ಹಾಲ್ಚುಕ್ಕಿ ನೀಲ್ಚುಕ್ಕಿ ಹೂವ ತಂದಿದ। ಗವರಮ್ಮ। ಹುಣ್ಣಿಮಾಡಿ। ಖಳ ಕೊಟ್ಟಿದ॥).

ಹಾಲ್ಗುಗ್ಗುಳ (ನಾ)= ಮದುವೆಗೆ ಮುನ್ನ ಗುಗ್ಗುಳದ ಅಗ್ಗಿಷ್ಟಿಕೆ ಹೊತ್ತುಕೊಂಡು ದೇವರಿಗೆ ಹೋಗಿ, ಮದುಮಕ್ಕಳು ತಮ್ಮ ಭಕ್ತಿಯನ್ನು ಸಮರ್ಪಿಸುವ ಪದ್ಧತಿ, ಶಾಸ್ತ್ರ.

ಹಾಲ್ಗೆಚ್ಚುಲು (ನಾ)= ಹಾಲು ಗೆಚ್ಚಲು; ಆಕಳು, ಎಮ್ಮೆಗಳ ಹಾಲುಗೆಚ್ಚಲು; ಸ್ತನ.

ಹಾಲ್ಢಾಳಿ (ನಾ)= ಹಾಲನ್ನು ಕಾಯಿಸುವ ಒಲಗುಣಿ; ನೆಲದ ಆಳದಲ್ಲಿ ಕುಳ್ಳನ್ನು ಒಟ್ಟಿ ಬೆಂಕಿ ಹೊತ್ತಿಸಿ ಹಾಲನ್ನು ಕಾಯಿಸುವ ಒಲೆ.

ಹಾಲ್ಹಳ್ಳಿ (ನಾ)= ಭಾಲ್ಕಿತಾಲೂಕಿನ ಒಂದು ಪ್ರಾಚೀನ ಹಳ್ಳಿ; (ಹಂತಿ ಹಾಡು: ಹಾಲ್ಹಳ್ಳಿ ಬ್ಯಾಲಳ್ಳಿ। ನಡುವ ನೀಲಂನಳ್ಳಿ। ತೆಗ್ಗಿನಾಗಾದಾ ಮೈಲಾರ। ಮಲ್ಲಯ್ಯ। ಹುಬ್ಬಿನಾಗಾದಾ ಸಿರಿಗಂಧ॥).

ಹಾವು (ನಾ)= ಸರೀಸೃಪ ವರ್ಗಕ್ಕೆ ಸೇರಿದ ಒಂದು ಪ್ರಾಣಿ; ಸರ್ಪ; ಹಾಂವು. ಹಾಲು (ಬಾಲಭಾಷೆ).

ಹಾವುಗಾರ (ನಾ)= ಹಾವಾಡಿಗ; ಹಾವನ್ನು ಆಡಿಸುವವನು.

ಹಾವುರಾಣಿ (ನಾ)= ಹಾಂವ್ರಾಣಿ; ಹಾವ್ರಾಣಿ; ಸರೀಸೃಪವರ್ಗಕ್ಕೆ ಸೇರಿದ ಒಂದು ಪ್ರಾಣಿ.

ಹಾವ್ರಾಣಿ (ನಾ)= ಹಾವುರಾಣಿ (ನೋಡಿರಿ).

ಹಾವು ಹರಿಲಿ (ಕ್ರಿ)= ಹಾವುಕಚ್ಚಲಿ (ಬೈಗುಳ).

ಹಾಸಿಕಿ (ನಾ)= ಹಾಸಿಗೆ; ಶಯ್ಯೆ (ಗಾದೆ: ಹಾಕಿಸಿ ಇದ್ದೋಷ್ಟು ಕಾಲ್ಚಾಚು).

ಹಾಸಿಕಿ ಹಾಕು (ಕ್ರಿ)= ಹಾಸಿಗೆಯನ್ನು ಸಿದ್ಧ ಪಡಿಸು.

ಹಾಸು (ಕ್ರಿ)= ಹಾಸುಗೆಯನ್ನು ಬಿಚ್ಚಿಹರಡು; ಹಾಸುಗೆಯನ್ನು ವಿಸ್ತರಿಸು.

ಹಾಸುಗಲ್ಲು (ನಾ)= ನೆಲದ ಮೇಲೆ ಹಾಸಲು ಬಳಸುವ ಚಪ್ಪಡಿ ಕಲ್ಲು; ಶಾಬಾದಿಕಲ್ಲು; ಹಾವಸೆಗಟ್ಟಿದ ಜಾರುಜಾರಾದ ಕಲ್ಲು.

ಹಾಸುಗಾಲು (ನಾ)= ಅಷ್ಟ ದಿಕ್ಕುಗಳಿಗೆ ಪಸರಿಸಿದ ಕಾಲುಳ್ಳ ಮುಗಿಲು (ಒಗಟು: ಹಾಸುಗಾಲು ಹಂಪುರ್ಗಾಲು। ದೇಶಾಕೆಲ್ಲಾ ಒಂದೇ ಕಾಲು –ಮುಗಿಲು).

ಹಾಸುರ್ಗತ್ತಿ (ನಾ)= ಹೇಸರಗತ್ತೆ.

ಹಾಸುಹೊಕ್ಕು (ನಾ)= ಮಗ್ಗದ ಉದ್ದ ಎಳೆ ಮತ್ತು ಅಡ್ಡ ಎಳೆ.

ಹಾಸ್ಗಿ (ನಾ)= ಹಾಸಿಗೆ; ಶಯ್ಯೆ.

ಹಾಸ್ಗಿಹಾಸು (ಕ್ರಿ)= ಹಾಸುಗೆಯನ್ನು ಬಿಚ್ಚಿಹರಡು.

ಹಾಳಭಾಯಿ (ನಾ)= ಹಾಳು ಬಿದ್ದ ಬಾವಿ; ದಂಡೆ ಉರುಳಿದ ಬಾವಿ; ಬಳಕೆ ಇಲ್ಲದೆ ಹಾಳಾದ ಬಾವಿ.

ಹಾಳು (ನಾ)= ನಾಶ; ಕೇಡು.

ಹಾಳು ಬೀಳು (ನಾ)= ಸರ್ವನಾಶ; ಎಲ್ಲಕೆಟ್ಟು ಹೋದದ್ದು.

ಹಾಳುಭೀಳು (ಕ್ರಿ)= ಹಾಳಾಗು; ಕೆಟ್ಟುಹೋಗು

ಹಾಳು ಮಾಡು (ಕ್ರಿ)= ಕೆಡಿಸು; ನಾಶಪಡಿಸು; ನಿರುಪಯುಕ್ತಗೊಳಿಸು.

ಹಾಳುಹೊಟ್ಟೆ (ನಾ)= ಬರಿದಾದ ಹೊಟ್ಟೆ; ಖಾಲಿ ಹೊಟ್ಟೆ.

ಹಾಳೂರು (ನಾ)= ಹಾಳುಬಿದ್ದ ಊರು; ನಾಶಗೊಂಡಗ್ರಾಮ; ಉದಾ: ಭಾಲ್ಕಿ ತಾಲೂಕಿನ ಗುಬ್ಯಾಳ ಮತ್ತು ಮೈಲಾರ ಎಂಬ ಊರುಗಳು. (ಗಾದೆ: ಹಾಳೂರ ಮ್ಯಾಲ ಹವಾಲ್ದಿ, ದೇಗ್ಲೂರು ಮ್ಯಾಲ ಚಿಟ್ಟಿ).

ಹಾಳ್ಹೊಟ್ಟಿ (ನಾ)= ಹಳಸಲು ಹೊಟ್ಟೆ; ಮುಂಜಾನೆ ಸಮಯದ ಖಾಲಿ ಹೊಟ್ಟೆ.

ಹಿಂಗಟ (ನಾ)= ಹಿಂದೆ ಬಿದ್ದದ್ದು; ತಡವಾದದ್ದು; ತಡ ಮಾಡಿ ಬಿತ್ತಿದ್ದು.

ಹಿಂಗಾರಿ (ನಾ)= ಮುಂಗಾರಿನ ನಂತರ ಬರುವ ಮಳೆ; ಹಿಂದು ಗಡೆಯಿಂದ ಬರುವ ಜೋಳ, ಕಡಲೆ ಇತ್ಯಾದಿಬೆಳೆ.

ಹಿಂಗು (ಕ್ರಿ)= ಪರಿಹಾರವಾಗು; ನಿವಾರಣೆಯಾಗು; ಹಿಂದಾಗು; ಸರಿ; ಮುಗಿ. (ನಾ) ಇಂಗು; ಅಡುಗೆಯಲ್ಲಿ ಬೆರೆಸುವ ಪದಾರ್ಥ.

ಹಿಂಗೈ (ನಾ)= ಕೈಯ ಹಿಂದು; ಕೈಯ ಹಿಂಭಾಗ.

ಹಿಂಗ್ಯಾಕ (ಅ)= ಹೀಗೇಕೆ; ಈ ರೀತಿ ಏಕೆ.

ಹಿಂಚ (ನಾ)= ನಂತರದ್ದು; ನಂತರ ಹುಟ್ಟಿದವನು/ಳು; ಹಿಂದೆ ಬಿದ್ದವನು/ಳು; ತಡವಾಗಿ ಬಂದವನು/ಳು; ಮುಂಚ ಎಂಬ ಪದದ ವಿರುದ್ಧ ಪದ ಹಿಂಚ; (ಉದಾ: ಮುಂಚ ಬಂದಾವ ಇಂವಾ, ಹಿಂಚ ಬಂದಾಂವ ಅಂವಾ).

ಹಿಂಚಾಕ (ಅ)= ಹಿಂದುಗಡೆ; ಹಿಂದ್ರಾಗಡೆ; ಹಿಂಚ (ಮುಂಚಾಕ ಪದದ ವಿರುದ್ಧ ಪದ ಹಿಂಚಾಕ).

ಹಿಂಜು (ಕ್ರಿ)= ಹತ್ತಿಯಿಂದ ಅದರ ಕಾಳನ್ನು ಬೇರ್ಪಡಿಸಿ ಅರಳೆಯನ್ನು ಎಳೆದು ತೆಗೆ.

ಹಿಂಡಿ (ನಾ)= ಎಣ್ಣೆ ಹಿಂಡಿದ ಮೇಲೆ ಗಾಣದಲ್ಲಿ ಉಳಿದ ಎಣ್ಣೆ ಕಾಳಿನ ಶೇಷ ಭಾಗ; ಎಣ್ಣೆ ಕಾಳುಗಳೊಂದಿಗೆ ಖಾರ, ಉಪ್ಪು ಇತ್ಯಾದಿ ಸೇರಿಸಿ, ಕುಟ್ಟಿ ತಯಾರಿಸಿದ ನಂಜಿಕೊಳ್ಳುವ ಪದಾರ್ಥ, ಚಟ್ನಿ, ಉದಾ: ಸೇಂಗಾ ಹಿಂಡಿ, ಕಾರಾಳ ಹಿಂಡಿ, ಎಳ್ಳು ಹಿಂಡಿ, ಅಗಸೆ ಹಿಂಡಿ; ಕೊಬ್ಬರೆ ಹಿಂಡಿ, ಪುಟಾಣಿ ಹಿಂಡಿ ಇತ್ಯಾದಿ.

ಹಿಂಡು (ಕ್ರಿ)= ಒದ್ದೆ ಬಟ್ಟೆಯನ್ನು ಹುರಿಗೊಳಿಸಿ ನೀರನ್ನು ಹೊರತೆಗೆ; ಹಣ್ಣುಗಾಯನ್ನು ಒತ್ತಿ ರಸವನ್ನು ಹೊರತೆಗೆ; ಎಣ್ಣೆ ಕಾಳಿನಿಂದ ಎಣ್ಣೆಯನ್ನು ಹೊರತೆಗೆ; ಸ್ತನದಿಂದ ಹಾಲನ್ನು ಹೊರತೆಗೆ; ಹಸುಗಳ ಹಾಲ್ಗೆಚ್ಚಲಿಂದ ಹಾಲನ್ನು ಹೊರತೆಗೆ.

ಹಿಂಡು (ನಾ)= ದನ ಕರುಗಳ ಸಮೂಹ, ಗುಂಪು.

ಹಿಂಡ್ಗಟ್ಟಿ (ಕ್ರಿ)= ಗುಂಪುಗೂಡಿ; ಒಟ್ಟಾಗಿ.

ಹಿಂಡುಗಟ್ಲೆ (ಅ)= ಹಿಂಡುಹಿಂಡಾಗಿ; ಅನೇಕ ಹಿಂಡುಗಳಲ್ಲಿ; ಗುಂಪುಗುಂಪಾಗಿ; ಒಟ್ಟೊಟ್ಟಾಗಿ.

ಹಿಂದ (ಅ)= ಹಿಂದೆ; ಹಿಂಬದಿಯಲ್ಲಿ. (ನಾ) ಹಿಂದೂ ದೇಶ; ಭಾರತ.

ಹಿಂದಕ (ಅ)= ಹಿಂದಿನ ಕಾಲದಲ್ಲಿ; ಪೂರ್ವ ಕಾಲದಲ್ಲಿ.

ಹಿಂದಣ್ಗಿ (ನಾ)= ಹಿಂದೆ ಬಿದ್ದದ್ದು; ಹಿಂಗಟ ಆದದ್ದು; ಹಿಂದಿನ ಕಾಲದ್ದು.

ಹಿಂದಾಗಡಿ (ಅ)= ಹಿಂದುಗಡೆ; ನಂತರ; ಆಮೇಲೆ.

ಹಿಂದಾಗು (ಕ್ರಿ)= ಹಿಂದೆ ಬೀಳು; ಬೆನ್ನ ಹಿಂದೆ ಬಾ.

ಹಿಂದಾಮುಂದಾ (ಅ)= ಹಿಂದೆ ಮುಂದೆ; ಆಧಾರ; ದಿಕ್ಕು (ಉದಾ: ಅವನಿಗಿ ಹಿಂದಾ ಮುಂದಾ ಯಾರೂ ಇಲ್ಲ; ದಿಕ್ಕಿಲ್ದ ಪರ್ದೇಶಿ ಅದಾ).

ಹಿಂದಿ (ನಾ)= ಹಿಂದುಸ್ತಾನಿ; ಭಾರತದ ರಾಷ್ಟ್ರೀಯ ಭಾಷೆಗಳಲ್ಲಿ ಒಂದು.

ಹಿಂದಿನ ಸರಿ (ಅ)= ಹಿಂದ್ರಾಗಡೆ; ಆಮೇಲೆ; ಆನಂತರ.

ಹಿಂದು (ನಾ)= ಹಿಂದು ಧರ್ಮ; ಹಿಂದು ಧರ್ಮದವನು/ಳು.

ಹಿಂದುಕ (ಅ)= ಹಿಂದಕ್ಕೆ; ಹಿಂದೆ; ಹಿಂದಿನ ಕಾಲದಲ್ಲಿ.

ಹಿಂದುಕ ಮುಂದುಕಾಗು (ಕ್ರಿ)= ಹಾದಿ ಹಿಡಿದು ಹೋಗುವಾಗ, ಸಾಲಲ್ಲಿ ನಿಂತಾಗ ಒಬ್ಬ ಹಿಂದೆ ಉಳಿದು ಇನ್ನೊಬ್ಬ ಮುಂದೆ ಆಗು; ವಾಂತಿ ಭೇದಿ ಮಾಡಿಕೊ.

ಹಿಂದುಕಾಗು (ಕ್ರಿ)= ಹಿಂದೆ ಬೀಳು; ಹಿಂದಾಗು.

ಹಿಂದುಕ್ತಿರುಗಿ ನೋಡು (ಕ್ರಿ)= (ಬೆಂಕಿ ಒಯ್ಯುವವರು ಮಗ್ಗುಲಲ್ಲಿದ್ದವರಿಗೆ ಹೇಳುವ ಸೂಚನೆ).

ಹಿಂದುಕ್ತಿರುಗು (ಕ್ರಿ)= ಹಿಂತಿರುಗು; ವಾಪಸಾಗು; ಮುಂದೆ ಹೋಗದೆ ಮೊದಲಿದ್ದೆಡೆಗೆ ಬಾ.

ಹಿಂದುಕಭೀಳು (ಕ್ರಿ)= ಹಿಂದೆಬೀಳು; ಹಿಂದಾಗು.

ಹಿಂದುಸ್ತಾನ (ನಾ)= ಹಿಂದು ದೇಶ; ಭಾರತ (ಜೋಗುಳ ಹಾಡು: ನಮ್ಮ ಹಿಂದುಸ್ತಾನದೇಶಕ ಸವರಾಜ್ಯಬೇಕು ಜೋಜೋ॥).

ಹಿಂದುಳಿ (ಕ್ರಿ)= ಹಿಂದೆ ಉಳಿ; ಹಿಂದೆ ಬೀಳು; ಹಿಂದಾಗು; ಮುಂದೆ ಬರದಂತಿರು.

ಹಿಂದೇಟಾ ಹಾಕು (ಕ್ರಿ)= ಹಿಂಜರಿ; ಹಿಂದಕ್ಕೆ ಸರಿ; ಅಧೈರ್ಯತಾಳು.

ಹಿಂದ್ಕ (ಅ)= ಹಿಂದುಕ (ನೋಡಿರಿ).

ಹಿಂದ್ಯಾಗು (ಕ್ರಿ)= ಹಿಂದುಕಾಗು; ಹಿಂದೆ ಬೀಳು; ಹಿಂದಾಗು.

ಹಿಂದ್ರಾಗಡಿ (ಅ)= ಹಿಂದಿನಸರಿ (ನೋಡಿರಿ).

ಹಿಂಬಾಗ್ಲು (ನಾ)= ಹಿಂದಿನ ಬಾಗಿಲು; ದಿಡ್ಡಿ ಬಾಗಿಲು.

ಹಿಂಬಾಳಿ ಹತ್ತು (ಕ್ರಿ)= ಹಿಂಬಾಲಿಸು; ಬೆನ್ನಟ್ಟು; ಬೆನ್ನು ಹತ್ತು.

ಹಿಂಬುರ್ಕಿ (ನಾ)= ಹಿಂಬರಿಕೆ; ವಾಪಸಾಗುವಿಕೆ; ಉಲ್ಟಾ ತೊಡುವಿಕೆ; ಉಲ್ಟಾ.

ಹಿಂಬ್ಡಿ (ನಾ)= ಹಿಮ್ಡಿ; ಹಿಂಬಡಿ; ಹಿಮ್ಮಡಿ; ಪಾದದ ಹಿಂದಿನ ಭಾಗ.

ಹಿಂಬ್ಳಿ ಹತ್ತು (ಕ್ರಿ)= ಹಿಂಬಾಳಿ ಹತ್ತು; ಹಿಂಬಾಲಿಸು; ಬೆನ್ನಟ್ಟು; ಬೆನ್ನು ಹತ್ತು.

ಹಿಕ್ಕಿ (ನಾ)= ಹಿಕ್ಕೆ; ಆಡು; ಕುರಿ, ಕುದುರೆ, ಕತ್ತೆಗಳ ಗುಂಡು ಗುಂಡಾದ ವಿಸರ್ಜನೆ (ಒಗಟು: ಅಲ್ಲಿ ಬುಳುಬುಳು। ಇಲ್ಲಿ ಬುಳು ಬುಳು। ಇಲ್ಲಿಂದ ಕಲ್ಯಾಣ ತನಕಾ ಬುಳು ಬುಳು॥ –ಕುರಿಹಿಕ್ಕಿ).

ಹಿಕ್ಕಿ ಹಾಕು (ಕ್ರಿ)= ಕುರಿ, ಆಡು, ಕುದುರೆ, ಒಂಟೆ ಇತ್ಯಾದಿಗಳು ಗುಂಡು ಗುಂಡಾಗಿ ಮಲ ವಿಸರ್ಜನೆ ಮಾಡು.

ಹಿಕ್ಕು (ಕ್ರಿ)= ತಲೆಗೂದಲನ್ನು ಹಣಿಗೆ ಅಥವಾ ಬಾಚಣಕೆಯಿಂದ ಬಾಚು; ಬಾಚಣಿಕೆಯಿಂದ ತಲೆಗೂದಲನ್ನು ಓರಣಗೊಳಿಸು.

ಹಿಕ್ಕೊ (ಕ್ರಿ)= ತಲೆಗೂದಲನ್ನು ಬಾಚಣಿಕೆಯಿಂದ ಓರಣಗೊಳಿಸಿಕೊ.

ಹಿಕ್ಮತಿ (ನಾ) ಉ.= ತಂತ್ರ; ತಂತ್ರಗಾರ; ಸಂಚುಗಾರ; ಚತುರ; ಜಾಣ.

ಹಿಕ್ಮತ್ತು (ನಾ) ಉ.= ಉಪಾಯ; ತಂತ್ರ; ಸಂಚು; ತರಕೀಬು; ಕರಾಮತ್ತು.

ಹಿಗ್ಗು (ಕ್ರಿ)= ಸಂತೋಷದಿಂದ ಉಬ್ಬು (ನಾ) ಸಂತೋಷ; ಆನಂದ; ಉಲ್ಲಾಸ.

ಹಿಂಚ್ಕಿ (ನಾ) ಹಿಂ.= ಬಿಕ್ಕು; ಬಿಕ್ಕಳಿಕೆ.

ಹಿಂಚ್ಕಿಹತ್ತು (ಕ್ರಿ)= ಬಿಕ್ಕುವಂತಾಗು; ಬಿಕ್ಕಳಿಕೆವುಂಟಾಗು.

ಹಿಜಡ್ಯಾ (ನಾ)= ಷಂಡ; ನಪುಂಸಕ; ಹಿಜ್ಜ; ಜಾಣ್ಯಾ; ಸಲಿಂಗರತಿ ಮೆಚ್ಚಿದವನು (ಗಾದೆ: ಹಿಜಡ್ಯಾಂದು ಹಿರ್ಸುಭಾಳ).

ಹಿಜ್ಞ (ನಾ)= ಹಿಜಡ್ಯಾ (ನೋಡಿರಿ).

ಹಿಜ್ರಿ (ನಾ)= ಮುಸಲ್ಮಾನರ ಪಂಚಾಂಗ ಪದ್ಧತಿ.

ಹಿಟ್ಟು (ನಾ)= ಧಾನ್ಯವನ್ನು ಬೀಸಿ ತಯಾರಿಸಿದ ನಯವಾದ ಪುಡಿ (ಗಾದೆ: ಹೊಟ್ಟ್ಯಾಗ ಹಿಟ್ಟಿದ್ರ ರಟ್ಟ್ಯಾಗ ಸಿಟ್ಟಿರ್ತಾದ!).

ಹಿಟ್ಟು ಅಕ್ಕಿ ಬ್ಯಾಳಿ ಬೆಲ್ಲಾ ಬಿಕ್ಷಾ (ನಾ)= ಲಿಂಗಾಯತ ಜಂಗಮರು ದೀಪಾವಳಿ ಪ್ರಸಂಗದಲ್ಲಿ ಬೇಡುವ ಭಿಕ್ಷೆ.

ಹಿಟ್ಟು ಬುಕ್ಕು (ಕ್ರಿ)= ಧಾನ್ಯದ ಪುಡಿಯನ್ನು ತಿನ್ನು (ಗಾದೆ: ಸಿಟ್ಟು ಬಂದ್ರ ಹಿಟ್ಟು ಬುಕ್ಕು).

ಹಿಡಿ (ಕ್ರಿ)= ಹಿಡಿದುಕೊ; ಕೈಯಲ್ಲಿ ಇರಿಸಿಕೊ (ನಾ) ಹಿಡಿಕೆ ತುಂಬ ಇದ್ದದ್ದು; ಕೈತುಂಬ ಇದ್ದದ್ದು; ಹಿಡಿಕೆ; ಹಿಡಿದುಕೊಳ್ಳಲು ಬರುವಂತಿರುವ ವಸ್ತುವಿನ ಭಾಗ.

ಹಿಡಿಹಿಡಿ (ದ್ವಿ)= ತೊಗೊತೊಗೊ (ಹಾಡು: ಹಿಡಿಹಿಡಿ ಅಂತಾ ಹಿಡ್ಕಿಥುಂಬಾ ರೊಕ್ಕಾ ಕುಡಾಂವಾ। ವಾರದಾಗ ಮೂರು ಸಾರಿ ಬಂದೆ ಹೋಗಾಂವಾ।। –ದ.ರಾ.ಬೇಂದ್ರೆ).

ಹಿಡ್ಕಿ (ನಾ)= ಹಿಡಿಕೆ; ಹಿಡಿ; ಹಿಡಿದುಕೊಳ್ಳುವಂಥ ಸಾಧನ; ಮುಷ್ಟಿಯಲ್ಲಿ ಹಿಡಿದು ಕೊಳ್ಳಬಹುದಾದ ಸಾಧನೆ (ಒಗಟು: ಹಿಡ್ದುರ ಹಿಡ್ಕಿ ತುಂಬಾ। ಬಿಟ್ಟುರ ಮನಿ ತುಂಬಾ। –ಬೆಳಕು).

ಹಿಡ್ಕಿಹಿಡ್ಕಿ (ದ್ವಿ)= ಹಿಡಿಕೆಹಿಡಿಕೆ; ಹಿಡಿಹಿಡಿ.

ಹಿಡ್ಕೊ (ಕ್ರಿ)= ಹಿಡಿದುಕೊ; ಹೆಣ್ಣನ್ನು ಕಾಮ ಕೇಳಿಗಾಗಿ ಒತ್ತಿ ಹಿಡಿದುಕೊ (ಗಾದೆ: ಆಡ್ಕೊಲಾಕ್ಹೋದ್ರ ಹಿಡ್ಕೊಲಾಕ ಬಂದ್ರಂತ).

ಹಿಡ್ಕೊಂಡ (ಕ್ರಿ)= ಹಿಡಿದುಕೊಂಡ; ಹೆಣ್ಣಿನ ಶೀಲ ಅಪಹರಣ ಮಾಡಿದ.

ಹಿಡ್ಗಲ್ಲು (ನಾ)= ಹಿಡಿಗಲ್ಲು; ಹಿಡಿಕೆ ತುಂಬ ಆಗುವಷ್ಟು ದಪ್ಪವಾದ ಕಲ್ಲು.

ಹಿಡ್ದ (ಕ್ರಿ)= ಹಿಡಿದ; ಹಿಡಿದುಕೊಂಡ; ಕೈಯಲ್ಲಿ ಭದ್ರವಾಗಿ ಇರಿಸಿಕೊಂಡ.

ಹಿಣಾಲು (ಕ್ರಿ)= ಎತ್ತು, ಒಂಟೆ ಮೊದಲಾದ ಪ್ರಾಣಿಗಳ ಬೆನ್ನಿನ ಮೇಲಿರುವ ಡುಬ್ಬ; ಇಣಿ; ಹೆಣಾಲು; ವೇಣಿ; ಮೇರಿ.

ಹಿತಾ (ನಾ)= ಹಿತ; ಒಳ್ಳೆಯದು.

ಹಿತಾ ಅದಾ (ಕ್ರಿ)= ಒಳ್ಳೆಯದಿದೆ.

ಹಿತಾ ಇರು (ಕ್ರಿ)= ಹೊಂದಿಕೊಂಡಿರು; ಹಿತವಾಗು; ಒಳ್ಳೆದನಾಗು.

ಹಿತಾಳಿ (ನಾ)= ಹಿತ್ತಾಳೆ; ತಾಮ್ರ ಮತ್ತು ಸತುವನ್ನು ಬೆರೆಸಿ ಮಾಡಿದ ಹಳದಿ ಬಣ್ಣದ ಮಿಶ್ರಲೋಹ.

ಹಿತ್ತುಲು, ಹಿತ್ಲ (ನಾ)= ಹಿತ್ತಿಲು; ಹೂಗಿಡಗಳು, ತರಕಾರಿಗಳು ಮುಂತಾದವನ್ನು ಬೆಳೆಸಲು ಬಳಸುವ ಮನೆಯ ಹಿಂದಿನ ಬಯಲು ಜಾಗ. (ಗಾದೆ: ೧) ಹಿತ್ತುಲ್ಗಿಡಾ ಮದ್ದಲ್ಲ ೨) ಒಗಟು: ಅಮಾಸಿ ಕತ್ಲ! ಮನಿಹಿಂದ ಹಿತ್ಲ! ಹೆಸರು ಕೇಳೋರ್ಧಣಾ ಎತ್ಲ!).

ಹಿತ್ತುಲ್ಗಿಡ (ನಾ)= ಹಿತ್ತಲಲ್ಲಿ ಬೆಳೆಸಿದ ಗಿಡಾ (ಗಾದೆ: ಹಿತ್ತುಲ್ಗಿಡ ಮದ್ದಲ್ಲ!).

ಹಿತ್ಲ (ನಾ)= ಹಿತ್ತುಲು (ನೋಡಿರಿ).

ಹಿಪ್ಪಿ (ನಾ)= ಹಾಲು ಹಿಂಡಿದ ಮೇಲೆ ಉಳಿದ ಕಬ್ಬಿನಸೊಪ್ಪು.

ಹಿಪ್ಪಿ ಭೀಟು (ಕ್ರಿ)= ಸಾರವನ್ನು ಹೀರಿ ಎಸೆ; ಮಾವು ಸಂತ್ರಾ, ಮೋಸಂಬಿ, ಕಬ್ಬು ಇತ್ಯಾದಿಗಳ ರಸವನ್ನು ಹೀರಿ ಸೊಪ್ಪನ್ನು ಎಸೆದು ಬಿಡು.

ಹಿಪ್ಪು (ಕ್ರಿ)= ನಾಲಗೆಯಿಂದ ಹೀರು; ಸೀಪು; ಚೀಪು.

ಹಿಪ್ಲಿ (ನಾ)= ಹಿಪ್ಪಲಿ; ಒಂದು ಬಗೆಯ ಮೆಣಸು; ಉದ್ದನೆಯ ಮೆಣಸು.

ಹಿಮ್ಡಿ (ನಾ)= ಹಿಮ್ಮಡಿ; ಪಾದದ ಹಿಂಭಾಗ.

ಹಿಮ್ಮಗ್ಲು (ನಾ)= ಹಿಂದಿನ ಮಗ್ಗಲು; ಹಿಂಬದಿ.

ಹಿಮ್ಮತ್ತು (ನಾ) ಉ.= ಬೆಂಬಲ; ಸಹಾಯ; ಧೈರ್ಯ; ಸಾಹಸ.

ಹಿಮ್ಯಾಳ (ನಾ)= ದೊಡ್ಡಾಟ, ನಾಟಕ ಇತ್ಯಾದಿಗಳಲ್ಲಿ ಹಾಡುವವರ ಜೊತೆಗಿದ್ದ ಧ್ವನಿಗೂಡಿಸುವವರು.

ಹಿರಿತಾನ (ನಾ)= ಹಿರಿತನ; ಹಿರಿಮೆ; ಮುಂದಾಳುತ್ವ; ಮೇಲ್ಮೆ; ಒಡೆತನ. (ಹಾಡು: ಕರೆಯದೆ ಬರಬೇಡ ಕರೆದರೊಲ್ಲೆನಬೇಡ। ಕರಕರಿಗುಣವೊಂದು ಕಡಿನೀ। ನಿನ್ನ ಹಿರಿತಾನ ಹಂಬಲ ಬಿಡುನೀ।। ಹಿರಿತಾನ ಬಂದರು। ಗರ್ವ ತಾಳದೆ। ಹಿರಿಯರ ಮನ್ನಿಸಿ ನಡಿ ನೀ। ಗುರು ಹೊರತೇನು ದೊರೆಯದು ತಿಳಿನೀ।। –ದೇಶಾಂಶ ಹುಡಗಿ).

ಹಿರಿದು (ನಾ)= ಹಿರಿಯದಾದದ್ದು; ದೊಡ್ಡದ್ದು

ಹಿರೊಡ್ಯಾ (ನಾ)= ಹಿರಿಯ ಒಡೆಯ; ಹೆಂಗಸರು ನಡೆದುಕೊಳ್ಳುವ ದೇವರು; ಬೀದರ ನಗರದ ಪೂರ್ವ ದಿಕ್ಕಿನಲ್ಲಿರುವ ಝರಣಿ ನರಸಿಂಹ ದೇವರು.

ಹಿರ್‍ಯಾ (ನಾ)= ಹಿರಿಯ; ಮನೆಯೊಡೆಯ; ಹಿರಿಯತನ ವಹಿಸಿಕೊಂಡವನು.

ಹಿರೋಣಿ (ನಾ)= ನಾಟಕ, ಸಿನೇಮಾ ಇತ್ಯಾದಿಗಳಲ್ಲಿಯ ನಾಯಕಿ ಪಾತ್ರಧಾರಿಣಿ.

ಹಿರ್ಗಡಿ (ನಾ)= ಹಿರಿಯಗಡಿ; ಹಿರೆಮಣಿ; ಆಟದಲ್ಲಿಯ ಮುಖ್ಯ ಆಟಗಾರ; ಆಟದಲ್ಲಿಯ ಮುಂದಾಳು.

ಹಿರ್ನಾಗಾಯಿ (ನಾ)= ಹಿರೆನಾಗಾಯಿ; ಬಸವ ಕಲ್ಯಾಣ ತಾಲೂಕಿನ ಒಂದು ದೊಡ್ಡ ಊರು. ಅದರ ಹೆಸರು ಈಗ ಹಿರ್ನಾಗಾಂವ ಎಂದು ರೂಪಗೆಟ್ಟಿದೆ.

ಹಿಲಾಲು (ನಾ)= ಬಟ್ಟೆಯನ್ನು ಎಣ್ಣೆಯಲ್ಲಿ ತೋಯ್ಸಿ ಮಾಡಿದ ದೀವಟಿಗೆ; ಪಂಜು.

ಹಿಸಾಬು (ನಾ) ಉ.= ಲೆಕ್ಕ; ಹಣದ ಆಯವ್ಯಯದ ನಿತ್ಯದ ಲೆಕ್ಕ.

ಹಿಸಾಬು ಕಿತಾಬು (ನಾ) ಉ.= ಲೆಕ್ಕಪತ್ರ; ಖಾತೆಕಿರ್ದಿ.

ಹಿಸಾಳಿ ಹೊಡಿ (ಕ್ರಿ)= ಹಿಸುಕು; ಕಿವುಚು; ಕಚ್ಚಿಕಚ್ಚಿ ಹಿಂಸಿಸು.

ಹಿಸುಕು, ಹಿಸ್ಕು (ಕ್ರಿ)= ಕಿವುಚು; ಹಿಂಡು; ಕುತ್ತಿಗೆಒತ್ತು; ಹಿಚುಕು.

ಹಿಸ್ಕಿ ಬಿಸ್ಕಿ ಮಾಡು (ಕ್ರಿ)= ಹಿಸುಕುವಿಕೆ ಅತಿಗೊಳಿಸು; ಅತಿಯಾಗಿ ಹಿಂಸಿಸು; ಪೀಡಿಸು; ಪ್ರಾಣಿಗೆ ಪ್ರಾಣ ಸತಾಯಿಸು.

ಹಿಸ್ಕು (ಕ್ರಿ)= ಹಿಸುಕು (ನೋಡಿರಿ).

ಹಿಸ್ಸ್ಯಾ (ನಾ) ಹಿಂ.= ಹಿಸ್ಸೆ; ಪಾಲು; ಭಾಗ.

ಹಿಸ್ಸಾ (ನಾ)= ಹಿಸ್ಯಾ (ನೋಡಿರಿ).

ಹಿಸ್ಸೆದಾರ (ನಾ) ಹಿಂ.= ಪಾಲುದಾರ; ಭಾಗಿದಾರ; ಭಾಗಸ್ಥ.

ಹಿಹಿಹಿಹಿ (ಧ್ವಿ)= ಹಲ್ಲು ಕಿಸಿಯುವಿಕೆ; ನಗುವಿಕೆ.

ಹೀಂಗ (ಅ)= ಹೀಗೆ; ಈ ರೀತಿಯಾಗಿ; ಈ ಕ್ರಮದಲ್ಲಿ; ಈ ಕಡೆಯಿಂದ; ಈ ದಾರಿಯಿಂದ (ಕೋಲಿನ ಹಾಡು: ಹೀಂಗ್ಹಿಂಗ್ಹಿಂಗ್ಹಿಂಗಂದ ನಲ್ಲತ್ತಿಗೆ।).

ಹೀನ (ನಾ) ಸಂ.= ಕೆಟ್ಟ ಮನುಷ್ಯ; ಅಲ್ಪ ಮನುಷ್ಯ. (ವಿ.) ಕೀಳಾದ; ಕೆಟ್ಟ; ದುಷ್ಟ (ಭಜನೆ: ಹರಹರ ಹರಹರ ಅನುವಲ್ಲಿ। ನಿನ್ನ ಹೀನ ಬುದ್ಧಿಯನು ಬಿಡುವಲ್ಲಿ).

ಹೀರಿಕಾಯಿ (ನಾ)= ಹೀರೆಕಾಯಿ; ತರಕಾರಿಯಾಗಿ ಬಳಕೆಯಾಗುವ ಒಂದು ಬಗೆಯ ಕಾಯಿ (ಜಾನಪದ ಪ್ರಾಸಃ ಹೀರಿಕಾಯಿಗೀರಿ ಬಮ್ಮಾನ ಚೂಡಾ। ಕುಂಬಳ್ಕಾಯಿ ಗೀರಿ ಬಮ್ಮಾನ ಚೂಡಾ॥).

ಹೀರು (ಕ್ರಿ)= ಚೀಪು; ರಸವನ್ನು ಸೆಳೆ; ಹಿಪ್ಪು; ಸೀಪು.

ಹುಂ (ಅ)= ಸಂಶಯ, ಪ್ರಶ್ನೆ, ಸಮ್ಮತಿ, ಅನುಮತಿ, ಕೋಪ, ತಿರಸ್ಕಾರ, ನಿಂದೆ, ಭಯ ಮುಂತಾದ ಭಾವವನ್ನು ಸೂಚಿಸಲು ಬಳಕೆಯಾಗುವ ನಿಪಾತಾವ್ಯಯ (ಉದಾ: ಕತೆಯಂಕೇಳೆಲೆ ಕಂದಾ ಹುಂ ರಘುಜನೇಂಬಂಸಕಾಂತಂ ವನಸ್ಥಿತನಾದಂ ಹುಂ–ರುದ್ರಭಟ್ಟ).

ಹುಂಕುರ್ಸು (ಕ್ರಿ)= ಹುಂಕರಿಸು; ಹುಂ ಎಂದು ಸದ್ದುಮಾಡು; ಅಬ್ಬರಿಸು.

ಹುಂಜಾ (ನಾ)= ಹುಂಜ; ಗಂಡುಕೋಳಿ.

ಹುಂಡಾ (ನಾ)= ಹುಂಡ್ಯಾ; ಹುಂಡೆ; ವರದಕ್ಷಿಣೆ.

ಹುಂಡಿ (ನಾ)= ಬ್ಯಾಂಕಿನ ಚೆಕ್ಕು.

ಹುಂಡ್ಯಾ (ನಾ)= ಹುಂಡಾ (ನೋಡಿರಿ).

ಹುಂಬ (ನಾ)= ಹೊಂಬ.

ಹುಕುಂ (ನಾ) ಉ.= ಅಪ್ಪಣೆ; ಆಜ್ಞೆ; ಆದೇಶ.

ಹುಕುಮತ್ತು (ನಾ) ಉ.= ಆಡಳಿತ; ಸರಕಾರ.

ಹುಕುಮು (ನಾ)= ಹುಕುಂ (ನೋಡಿರಿ).

ಹುಕ್ಕಾ (ನಾ) ಉ.= ತಂಬಾಕು ಸೇದುವ ಒಂದು ಸಾಧನ; ಗುಡುಗುಡಿ.

ಹುಗು (ಕ್ರಿ)= ಒಳಹೋಗು; ಪ್ರವೇಶಿಸು; ಸೇರು; ಹೊಗು.

ಹುಗುಸು (ಕ್ರಿ)= ಹುಗಿಸು; ಹೊಗುವಂತೆ ಮಾಡು; ಒಳಸೇರುವಂತೆ ಮಾಡು; ಪ್ರವೇಶಿಸುವಂತೆ ಮಾಡು.

ಹುಗುಸ್ಯಾ (ನಾ)= ಬೊಗರೆ ಆಟದಲ್ಲಿಯ ಒಬ್ಬ ಹುದ್ದರಿ. ಅವನು ತನ್ನ ಬೊಗರೆಯಿಂದ ಸೋತವನ ಬೊಗರೆಗೆ ಮೊಳೆ ಹೋಗುವಂತೆ ಮಾಡುತ್ತಾನೆ ಹುಗುಸ್ಯಾನ ಜತೆಯಲ್ಲಿ ಕಿಡಸ್ಯಾ, ಬುತ್ಯಾ ಎಂಬ ಹುದ್ದರಿಗಳೂ ಇರುತ್ತಾರೆ.

ಹುಗ್ಗಿ (ನಾ)= ಥಳಿಸಿದ ಗೋದಿಯನ್ನು ಬೆಲ್ಲದೊಂದಿಗೆ ಕುದಿಸಿ ಮಾಡುವ ಪಾಯಸ; ಅಕ್ಕಿ ಹೆಸರು ಬೇಳೆ ಸಕ್ಕರೆ ಬೆರೆಸಿ ಮಾಡುವ ಪಾಯಸ.

ಹುಗ್ಗಿಗೌಡ (ನಾ)= ಹಳ್ಳಿಯಲ್ಲಿ ಪದನಿಮಿತ್ತ ಸನ್ಮಾನದ ಗೌಡ; ಬಾಗಿಣ ಸ್ವೀಕರಿಸುವ ಗೌಡ; ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸನ್ಮಾನ ಪೂರ್ವಕ ಕರೆಯಲ್ಪಡುವ ಗೌರವದ ಗೌಡ.

ಹುಗ್ಗಿ ಮಾಡು (ಕ್ರಿ)= ಹುಗ್ಗಿ ಔತಣಕ್ಕೆ ಕಾರಣೀಭೂತಳಾಗು; ಮೈನೆರೆ; ಪುಷ್ಪವತಿಯಾಗು; ಪ್ರಥಮ ರಜೋದರ್ಶನ ಹೊಂದಿದವಳಾಗು, ನೆಂಟಸ್ತನ ನೆರವೇರು.

ಹುಚ್ಚ (ನಾ)= ಬುದ್ಧಿಭ್ರಮಣೆಯಾದವನು; ಮಾನಸಿಕ ರೋಗಿ; ತಿಳಿಗೇಡಿ; ದಡ್ಡ.

ಹುಚ್ಚಾಗು (ಕ್ರಿ)= ಹುಚ್ಚು ಹಿಡಿ; ಬುದ್ಧಿ ಭ್ರಮಣೆಯಾಗು.

ಹುಚ್ಚಿ (ನಾ)= ಬುದ್ಧಿಭ್ರಮಣೆಯಾದವಳು; ಅವಿವೇಕಿಯಾದವಳು.

ಹುಚ್ಚುತಾನ (ನಾ)= ಹುಚ್ಚುತನ; ಅವಿವೇಕ.

ಹುಚ್ಚೇರು (ಕ್ರಿ)= ಹುಚ್ಚುಹಿಡಿ; ಹುಚ್ಚುತನ ಉಂಟಾಗು.

ಹುಚ್ಚಿ (ನಾ)= ಹುಚ್ಚೇರಿದವನು/ಳು.

ಹುಚ್ನಾಯಿ (ನಾ)= ಹುಚ್ಚೇರಿರುವ ಶ್ವಾನ; ಬುದ್ಧಿಭ್ರಮಣೆಗೊಂಡ ಶ್ವಾನ; ಹುಚ್ಚುನಾಯಿ.

ಹುಚ್ಹಿಡಿ (ಕ್ರಿ)= ಹುಚ್ಚೇರು; ಬುದ್ಧಿ ಭ್ರಮಣೆಯುಂಟಾಗು; ಹುಚ್ಚಾಗು.

ಹುಜದುಲಿ (ನಾ)= ಹುಚ್ಚ; ಮರುಳ; ಬುದ್ಧಿಗೇಡಿ; ವಿವೇಕಹೀನ (ಬೈಗುಳ).

ಹುಜೂರು (ನಾ) ಉ.= ಸಮಕ್ಷಮ; ಎದುರು.

ಹುಜ್ಜತ್ತು (ನಾ) ಉ.= ಪ್ರತ್ಯುತ್ತರ ಕೊಡುವಿಕೆ; ಎದುರಾಡುವಿಕೆ; ಜಗಳ ಕಾದುವಿಕೆ.

ಹುಜ್ರಾಹುಜೂರು (ದ್ವಿ)ಉ.= ಎದುರಾ ಎದುರು; ಸಮಕ್ಷಮದಲ್ಲಿಯೇ; ಎದುರಲ್ಲಿಯೇ.

ಹುಟ್ಕಿ (ನಾ)= ಹುಟ್ಟು; ಜನ್ಮ; ಜನ್ಮದಿಂದ ಬಂದದ್ದು.

ಹುಟ್ಟಾ (ನಾ)= ಹುಟ್ಟಿದಂದಿನಿಂದ; ಜನ್ಮದಾರಭ್ಯ (ಗಾದೆ: ಹುಟ್ಟಾ ಸತ್ತಿಲ್ಲ, ಸುಡ್ಗಾಡು ಕಂಡಿಲ್ಲ).

ಹುಟ್ಟಾಡ್ಸು (ಕ್ರಿ)= ಅಡಿಗೆ ಪಾತ್ರೆಯಲ್ಲಿ ಕಟ್ಟಿಗೆಯ ಸೌಟನ್ನು ಸುತ್ತಾಡಿಸು.

ಹುಟ್ಟಿ (ನಾ)= ಜೇನುಗೂಡು; ಜೇನಿನ ಮನೆ.

ಹುಟ್ಟಿಕಿ (ನಾ)= ಜನ್ಮದಿಂದ ಬಂದದ್ದು; ಹುಟ್ಕಿ; ಜನ್ಮ; ಹುಟ್ಟು.

ಹುಟ್ಟು (ಕ್ರಿ)= ಜನ್ಮತಾಳು; ಜನಿಸು.

ಹುಟ್ಟು (ನಾ)= ಜನ್ಮ; ಜನನ; ಕಟ್ಟಿಗೆಯ ಸೌಟು; ದೋಣಿ ನಡೆಸುವ ಸಾಧನ.

ಹುಟ್ಟುಗುಣಾ (ನಾ)= ಹುಟ್ಟಿನಿಂದ ಬಂದ ಗುಣ; ಜನ್ಮದಾರಭ್ಯ ಬಂದ ಸ್ವಭಾವ (ಗಾದೆ: ಹುಟ್ಟುಗುಣಾ ಹುಟ್ಟಿಲಿ ಹೊಡ್ದುರ್ಬೀ ಹೋಗಾಲ!).

ಹುಟ್ಟುಸು (ಕ್ರಿ)= ಹುಟ್ಟಿಸು; ಜನ್ಮಕೊಡು (ಗಾದೆ: ಹುಟ್ಟಿಸಿದ್ದೇವ್ರು ಹುಲ್ಲುಮೆಯ್ಸಾಲ!).

ಹುಟ್ಟು ಹಾಕು (ಕ್ರಿ)= ಹುಟ್ಟು ಹೊಡಿ; ದೋಣಿ ನಡೆಸು.

ಹುಟ್ಟುಹೊಡಿ (ಕ್ರಿ)= ಹುಟ್ಟುಹಾಕು (ನೋಡಿರಿ).

ಹುಡಗಿ (ನಾ)= ಹುಮನಾಬಾದ ತಾಲೂಕಿನ ಒಂದು ಹಳ್ಳಿ. ಶರಣರಾದ ಕರಬಸಪ್ಪ (ಕರಿಬಸವೇಶ್ವರ) ಯಂಕಮ್ಮ ಮತ್ತು ಮಡಿವಾಳಪ್ಪನವರ ಪುಣ್ಯ ಕ್ಷೇತ್ರವಿರುವ ಹಳ್ಳಿ. ಕನ್ನಡ ಕಟ್ಟಿದ ಗುರುಪಾದಪ್ಪ ಶಿವರೆಡ್ಡಿ, ಶಾಮರಾವ ಪಾಟೀಲ, ಮಹ್ಮದ ಸಾಬ ಶಮ್ಮನ, ಸೋಮಶೇಖರ ಶಿವಾಚಾರ್ಯ ದೇವೇಂದ್ರಪ್ಪ ಬಡಿಗೇರರ ಕಾಯಕ ಕ್ಷೇತ್ರ. ಸಾಹಿತಿಗಳಾದ ದೇಶಾಂಶ ಹುಡಗಿ, ಬಸವರಾಜ ಸೈನೀರ ಮತ್ತು ಕೆ.ಜಿ. ಮಾಶೆಟ್ಟಿಯವರ ಹುಟ್ಟೂರು. ಶರಣ ಚಿತ್ರ ಕಲಾವಿದ ಬಸವರಾಜ ಮುಗಳಿ ಹಾಗೂ ಅಂಬಣ್ಣ ಬೋಯಿಯವರ ಹುಟ್ಟೂರು. ಪಂಚಾಯತ ಚಟುವಟಿಕೆಯಲ್ಲಿ ಅಗ್ರಣಿ ಊರು. ಕೃಷಿ ಕ್ಷೇತ್ರದಲ್ಲಿ ಹೆಸರು ಮಾಡಿದ ಗುರುಲಿಂಗಪ್ಪ ಕಾರಾಮುಂಗಿಯವರ ಹುಟ್ಟೂರು. ಲಿಂಗಾಯತ ಸಮಾಜದ ಜೀವಂತ ಚಟುವಟಿಕೆಯ ಕೇಂದ್ರ.

ಹುಡದಿ (ನಾ)= ಗೊಂದಲ; ಗಲಾಟೆ; ಹುಡುಗಾಟಿಕೆ; ಚೆಲ್ಲಾಟ; ಹೊಡೆದಾಟ.

ಹುಡದಿಯೆಬ್ಬುಸು (ಕ್ರಿ)= ಗೊಂದಲ ಹುಟ್ಟಿಸು; ಗಲಾಟೆ ಮಾಡು; ಹುಡುಗಾಟಿಕೆ ನಡೆಸು; ಚೆಲ್ಲಾಟ ಪ್ರಾರಂಭಿಸು; ಹೊಡೆದಾಟ ನಡೆಸು.

ಹುಡುಕು (ಕ್ರಿ)= ಶೋಧಿಸು; ಕೈಸವರಿ ಶೋಧಿಸು.

ಹುಡ್ಕಾಟ (ನಾ)= ಹುಡುಕಾಟ; ಹುಡುಕುವಿಕೆ; ಶೋಧ.

ಹುಡ್ಕಾಡು (ಕ್ರಿ)= ಶೋಧಿಸು; ಹುಡುಕು; ತಡಕಾಡು.

ಹುಡ್ಗಾಟ್ಕಿ (ನಾ)= ಹುಡುಗುತನ; ಕುಚೇಷ್ಟೆ.

ಹುಡ್ಗಿ (ನಾ)= ಹುಡುಗಿ; ಚಿಕ್ಕ ವಯಸ್ಸಿನ ಬಾಲಕಿ; ಹುಡಗಿ ಎಂಬ ಒಂದು ಗ್ರಾಮ.

ಹುಡ್ತುತುತು (ನಾ)= ಹುತುತು ಆಟ; ಕಬಡ್ಡಿ ಆಟ.

ಹುಡ್ತಿ (ನಾ)= ಹೊಡೆತ; ಹೊಡೆದಾಟ.

ಹುಡ್ತಿ ಮಾರ (ನಾ)= ಮಿತಿಮೀರಿದ ಹೊಡೆದಾಟ.

ಹುಡ್ದಿ (ನಾ)= ಹುಡದಿ (ನೋಡಿರಿ).

ಹುಣಿಚಿಕಾಯಿ (ನಾ)= ಹುಣಸೆ ಕಾಯಿ.

ಹುಣಚಿಹಣ್ಣು (ನಾ)= ಹುಣಸೆ ಹಣ್ಣು; ಹಣ್ಣಾದ ಹುಣಸೆ ಕಾಯಿ.

ಹುಣಜಿ (ನಾ)= ಭಾಲ್ಕಿ ತಾಲೂಕಿನ ಒಂದು ಸಣ್ಣ ಊರು.

ಹುಣ್ಣಿ (ನಾ)= ಹುಣ್ಣಿಮೆ; ಪೂರ್ಣಿಮೆ. (ಗಾದೆ: ಹುಣ್ಣಿಗಿ ಹತ್ತುದ್ರ ಅಮಾಸಿತನಕಾ ಬಿಡಾಲ।).

ಹುಣ್ಣು(ನಾ)= ಬಾವು; ಗಾಯ; ವ್ರಣ; ಕೀವು ಗಟ್ಟಿದ ಪಕ್ಕು.

ಹುಣ್ಣುಹುಗುಳು (ನಾ)= ಹುಣ್ಣು; ಗಾಯ, ಬಾವು ಇತ್ಯಾದಿ; ಚರ್ಮದ ಮೇಲೆ ಹಾಗೂ ಗಂಟಲಲ್ಲಿ ಉಂಟಾಗುವ ವಿವಿಧ ಬಾಧೆಗಳು.

ಹುತುತು (ನಾ)= ಕಬಡ್ಡಿ ಆಟ; ಹುಡ್ತುತುತು ಆಟ; ಒಂದು ಬಗೆಯ ಇಬ್ಬಣ ಆಟ.

ಹುತ್ಗೊ (ಕ್ರಿ)= ಹೊತ್ತುಕೊ. ಬೆನ್ನು ಭುಜ ಅಥವಾ ತಲೆಯ ಮೇಲೆ ಇರಿಸಿಕೊ; ಜವಾಬ್ದಾರನಾಗು.

ಹುತ್ತಿಗಿ ಹಾಲೆರಿ (ಕ್ರಿ)= ಹುತ್ತಿನಲ್ಲಿ ಹಾಲು ಸುರುವು; ಹುತ್ತಕ್ಕೆ ಹಾಲು ಕುಡಿಸು.

ಹುತ್ತಿನ ಮ್ಯಾಲಿನ ಹಾವಾಗು (ನು)= ಕಾವಲು ನಿಲ್ಲು; ಕಾವಲುಗಾರನಾಗು.

ಹುತ್ತು (ನಾ)= ಹುತ್ತ; ಗೊರಳೆಗಳು ನಿರ್ಮಿಸಿದ ಮಣ್ಣಿನ ಮನೆ; ಹಾವಿನ ಮನೆ.

ಹುತ್ತೇರು (ಕ್ರಿ)= ಗೊರಳೆಯ ಮನೆ ನಿರ್ಮಾಣಾಗು.

ಹುತ್ತೇರ್ಸು (ಕ್ರಿ)= ಗೊರಳೆಗಳು ಮನೆಯನ್ನು ನಿರ್ಮಿಸು.

ಹುದಿ (ಕ್ರಿ)= ಹೊತ್ತುಕೊ; ಹೆಗಲು, ತಲೆ ಅಥವಾ ಬೆನ್ನ ಮೇಲೆ ಇರಿಸಿಕೊ.

ಹುದುಲು (ನಾ)= ಕೆಸರು; ರಾಡಿ; ಮೇಲೆ ಒಣಗಿದಂತೆ ಇದ್ದು ಒಳಗೆ ಕೆಸರು ಉಳ್ಳ ತಾಣ (ಹಾಡು: ನನ ಕೈಯ ಹಿಡಿದಾಕೆ। ಅಳು ನುಂಗಿ ನಗು ಒಮ್ಮೆ। ನಾನುನು ನಕ್ಕೇನ। ಇಲ್ಲದಿರ್ಕ ನಿನ್ನ ಅಳುವು ಹುಚ್ಚು ಹಳ್ಳದ ಕಳ್ಳಾ। ಹುದುಲಾಗ ಸಿಕ್ಕೇನ। ಕಳ್ಳಾ ಹುದುಲಾಗ ಸಿಕ್ಕೇನ।। –ದ.ರಾ. ಬೇಂದ್ರೆ).

ಹುದ್ದಾ (ನಾ)ಉ.= ಹುದ್ದೆ; ಅಹುದಾ; ಅಧಿಕಾರ; ಪದವಿ.

ಹುದ್ದೆದಾರ (ನಾ)= ಅಧಿಕಾರಿ; ಅಹುದೆದಾರ.

ಹುನೇರಿ, ಹುನೇರು (ನಾ)ಉ.= ಯುಕ್ತಿ; ಉಪಾಯ; ಚಾತುರ್ಯ; ಕೌಶಲ್ಯ.

ಹುನೇರ್ಗಿರಿ (ನಾ)= ಜಾಣತನ; ಚಾತುರ್ಯ; ಕೌಶಲ್ಯ.

ಹುಪ್ಪಳ (ನಾ)= ಭಾಲ್ಕಿ ತಾಲೂಕಿನ ಒಂದು ಹಳ್ಳಿ. ಅದು ಈಗ ಮರಾಠಿಗರ ಬಾಯಲ್ಲಿ ಹುಪ್ಳಾ ಆಗಿದೆ.

ಹುಬಾಬು (ನಾ) ಉ.= ಖಂದೀಲಿಗೆ ಹಾಕುವ ಗಾಜಿನ ಗೋಲ.

ಹುಬ್ಬಳ್ಳಿಮಾಟಾ (ನಾ)= ಹುಬ್ಬಳಿಯವರು ತಯಾರಿಸುವ ಕೊಡ, ತಂಬಿಗೆ, ಚರಿಗೆ ಇತ್ಯಾದಿಗಳ ಸ್ವರೂಪ.

ಹುಬ್ಬಿ (ನಾ)= ಒಂದು ಮಳೆ ನಕ್ಷತ್ರದ ಹೆಸರು (ಗಾದೆ: ಹುಬ್ಬಿ ಮಳಿಗಿ ಹುಬ್ಬು ಬೀ ತೊಯ್ಯಾಲ!).

ಹುಬ್ಬು (ನಾ)= ಎರಡೂ ಕಣ್ಣುಗಳ ಮೇಲ್ಭಾಗದಲ್ಲಿ ಹಣೆಗೆ ಹೊಂದಿದಂತೆ ಇರುವ ಕಿರುಗೂದಲಿನ ಸಾಲು (ಹಂತಿ ಹಾಡು: ಹಾಲಳ್ಳಿ ಬ್ಯಾಲಳ್ಳಿ। ನಡುವ ನೀಲಮನಳ್ಳಿ। ತಗ್ಗಿನಾಗಾದಾ ಮೈಲಾರ ಮಲ್ಲಯ್ನ। ಹುಬ್ಬಿನಾಗಾದಾ ಸಿರಿಗಂಧ।।).

ಹುಬ್ಬುಗಂಟ್ಹಾಕು (ಕ್ರಿ)= ಕೋಪ, ತಿರಸ್ಕಾರ, ಬೇಸರ ಇತ್ಯಾದಿಗಳನ್ನು ಸೂಚಿಸಲು ಹುಬ್ಬನ್ನು ಸಿಂಡರಿಸು, ಮುಖವನ್ನು ಗಂಟು ಹಾಕು.

ಹುಬ್ಬುಗಟ್ಟಿ (ನಾ)= ಎರಡು ಹೊಲಗಳ ಮಧ್ಯದಲ್ಲಿರುವ ಕಟ್ಟೆಯ ಇಬ್ಬದಿಯ ಅಂಚು.

ಹುಬ್ಬುತೀಡು (ಕ್ರಿ)= ಹುಬ್ಬುಗಳನ್ನು ತಿದ್ದಿ ತಿದ್ದಿ ಓರಣಗೊಳಿಸು.

ಹುಬ್ಬುಹಾರ್ಸು (ಕ್ರಿ)= ಹುಬ್ಬುಗಳು ನೆಗೆದಾಡುವಂತೆ ಮಾಡು.

ಹುಬ್ಬೇರ್ಸು (ಕ್ರಿ)= ಹುಬ್ಬುಗಳನ್ನು ಎತ್ತರಿಸುವ ಮೂಲಕ ಆಶ್ಚರ್ಯ, ಸಂತೋಷ, ಗರ್ವಕೋಪ ಇತ್ಯಾದಿ ಸೂಚಿಸು.

ಹುಮ್ನಾಬಾದಿ (ನಾ)= ಬೀದರ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದರ ಮೊದಲಿನ ಹೆಸರು ಜಯಸಿಂಗನಗರ ಎಂದಿದ್ದುದಾಗಿ ಹೇಳುತ್ತಾರೆ. ಕೋಟೆ, ಪಗಡಿ ಬಾಜಾರ ಇತ್ಯಾದಿಗಳನ್ನು ಹೊಂದಿದ ಊರು ಇದಾಗಿದೆ ವೀರಭದ್ರದೇವರ ಪುಣ್ಯ ಕ್ಷೇತ್ರ ಹಾಗೂ ಬಸವ ತೀರ್ಥ ಕ್ಷೇತ್ರ ಹೊಂದಿದ ನಗರ ಇದಾಗಿದೆ. ಜಾನಪದ ಸಾಹಿತಿ ಎಚ್. ಕಾಶೀನಾಥರೆಡ್ಡಿಯವರ ವಾಸದ ವಾಂಜರಿ ಇದೇ ಪಟ್ಟಣದಲ್ಲಿದೆ. ಸಾಹಿತಿ ಸೋಮನಾಥ ಯಾಳವಾರ ಕರುಣಾ ಸಲಗರ, ಜಯದೇವಿ ಗಾಯಕವಾಡ, ಕವಿತಾಮಲ್ಲಪ್ಪ, ಮಲ್ಲೇಶ್ವರಿ ಉದಯಗಿರಿ, ಆಯ್.ಆರ್. ಚೆನ್ನಗಿರಿ ಮೊದಲಾದವರು ಇದೇ ಪಟ್ಟಣ ವಾಸಿಯಾಗಿದ್ದಾರೆ (ಹಂತಿಯ ಹಾಡು: ಹುಮ್ನಾಬಾದಿ ಹುಟ್ಟಿ। ಹೂವಿನ ಬಾಜಾರ್ಕಟ್ಟಿ। ವೀರಯ್ಯ ಹುಟ್ಟಿ ಗುಡಿಕಟ್ಟಿ। ಉಪಾರಣ್ಣ। ಕಳಸಾ ಏರಟಿಗೆ ಜಿವ ಬಿಟ್ಟಿ॥).

ಹುಮ್ಮಸು (ನಾ)= ಹುಮ್ಮಸು; ಉತ್ಸಾಹ; ಹರುಷ.

ಹುಯ್ಯಿ (ಕ್ರಿ)= ಹೊಯ್ಯಿ; ಧಾರೆಯಾಗಿ ಮಳೆಗರೆ; ಬೊಗಸೆಯಲ್ಲಿ ನೀರು ಸುರುವು; ಮೂತ್ರ ವಿಸರ್ಜಿಸು (ಹಾಡು: ಹುಯ್ಯೋ ಹುಯ್ಯೋ ಮಳೆರಾಯಾ ಹುವ್ವಿನ ತ್ವಾಟಕ ನೀರಿಲ್ಲಾ ನೀರಿಲ್ಲಾ॥).

ಹುರಿ (ಕ್ರಿ)= ಕಾಳು, ಬೇಳೆ, ಭತ್ತ, ನವಣೆ ಇತ್ಯಾದಿಯನ್ನು ಬಾಣಲೆಯಲ್ಲಿ ಹಾಕಿ ಕಾಯಿಸು. ನಾಶಪಡಿಸು; ನಾಶವಾಗು; ಇಲ್ಲವಾಗು. **(ನಾ)=** ನಾರಿನಿಂದ ಹೊಸೆದು ಮಾಡಿದ ಪಡು, ದಾರ, ಹಗ್ಗ; ಸುತಳಿ.

ಹುರಿಹಾಕು (ಕ್ರಿ)= ಹೊಸೆ; ನಾರನ್ನು ಹುರಿಗೊಳಿಸು.

ಹುರಿಹೊಡಿ (ಕ್ರಿ)= ನಾರಿನಂತೆ ಇತರೆ ವಸ್ತುವನ್ನು ಹೊಸೆ; (ಉದಾ: ಕೈಕಾಲುಗಳನ್ನು ನಾರಿನಂತೆ ತಿರುವು; ಕುತ್ತಿಗೆಯನ್ನು ತಿರುವು).

ಹುರುಕು, ಹುರ್ಕು (ನಾ)= ಒಣತುರಿ; ತುರಿಕೆ ಉಂಟು ಮಾಡುವ ಮೈಕೈ ಮೇಲಿನ ಪಕ್ಕುಗಳು; ಕಜ್ಜಿ; ಖಜ್ಜಿ.

ಹುರುಟು (ನಾ)= ಪೋರಾ ಬಟ್ಟಿ; ಪಾರಾಬಟ್ಟಿ; ಹುರುಟ.

ಹುರುಟು ಹೋರಿ (ನಾ)= ತಿದ್ದಲಾರದ ತರುಣ ಎತ್ತು.

ಹುರ್ಗಡ್ಲಿ (ನಾ)= ಹುರಿದ ಕಡಲೆ; ಉಪ್ಪು, ಖಾರಹಚ್ಚಿ ಬಿಸಿ ಮಾಡಿದ ಕಡಲೆ ಕಾಳು.

ಹುರ್ಜೆಟ್ಟಿ (ನಾ)= ಹೊಸೆದ ಸಣಬಿನ ಇಲ್ಲವೆ ಪುಂಡಿಯನಾರು.

ಹುರ್ದುಬುಕ್ಕು (ನು)= ಕಾಡು, ಕೀಟಲೆ ಕೊಡು; ಪೀಡಿಸು.

ಹುರ್ಪುಡ್ಸು (ಕ್ರಿ)= ಚಡಪಡಿಸು; ಬೆಂಕಿಯಲ್ಲಿ ಬಿದ್ದು ಒದ್ದಾಡು.

ಹುಲಿ (ನಾ)= ಪುಲಿ; ವ್ಯಾಘ್ರ; ಒಂದು ಬಗೆಯ ಕ್ರೂರ ಪ್ರಾಣಿ.

ಹುಲಿಕಟ್ಯಾಟ (ನಾ)= ಹುಲಿಯನ್ನು ಕುರಿಗಳಿಂದ ಕಟ್ಟಿ ಹಾಕುವ ಜನಪದ ಆಟ.

ಹುಲಿಕಾಯಿ (ನಾ)= ಒಂದು ಬಗೆಯ ಕಾಡುಗಿಡದ ಕಾಯಿ. ಈ ಗಿಡದ ಕಾಯಿ ತಿಂದರೆ ನಾಲಗೆ ನೀಲವರ್ಣಕ್ಕೆ ತಿರುಗುತ್ತದೆ.

ಹುಲಿಮಾರಿ (ನಾ)= ಹುಲಿ ಮೋರೆ; ವ್ಯಾಘ್ರದ ಮೋರೆ.

ಹುಲಿಯೇಸ್ಯಾ (ನಾ)= ಹುಲಿವೇಷ; ಅಲಾವಿ ಕುಣಿತದಲ್ಲಿ ಧರಿಸುವ ಹುಲಿಯ ವೇಷ.

ಹುಲುಲಿ (ನಾ)= ಉಲುಲಿ; ಹುಲುಲಿ; ಹುರುಳಿ.

ಹುಲ್ಕುಂಟಿ ಮಠ (ನಾ)= ಹುಮ್ನಾಬಾದ ತಾಲೂಕಿನ ದುಬಲ್ಗುಂಡಿ ಹತ್ತಿರ ವಿರುವ ಪ್ರಾಚೀನ ವಿರಕ್ತ ಮಠ ಹಾಗೂ ತೀರ್ಥಕ್ಷೇತ್ರ; ಹುಲ್ಸೂರು ವಿರಕ್ತ ಮಠದ ಅಧೀನದಲ್ಲಿರುವ ಮಠ.

ಹುಲ್ಪಡ್ಡಿ (ನಾ)= ಹುಲ್ಲಿನ ಎಸಳು; ಹುಲ್ಲಿನ ಕಡ್ಡಿ.

ಹುಲ್ಮಾ (ನಾ) ಉ.= ಸೀತೆನಿ; ಬೆಳಸಿ; ಉಮ್ಮಿಗೆ.

ಹುಲ್ಬೀಜ (ನಾ)= ಹುಲ್ಲಿನ ಕಾಳು; ಹುಲ್ಲಿನಿಂದ ಉದುರಿದ ಬೀಜ.

ಹುಲ್ಲು (ನಾ)= ತೃಣ; ದನಗಳಿಗೆ ಅಹಾರವಾಗುವಂಥ ಕಡ್ಡಿಯಂತ ಸಸ್ಯ. (ಹಂತಿಹಾಡು: ಕಲ್ಲ ಕಡುಬವ ಮಾಡಿ। ಹುಲ್ಲು ಸ್ಯಾವಿಗಿ ಮಾಡಿ। ಬನ್ನಿ ಎಲಿಯಾ ಪತರೋಳಿ। ಪಾಂಡವರು। ಉಂಡ ಹೋಗ್ಯಾರೋ ವನವಾಸ।।).

ಹುಲ್ಲುಖಡ್ಡಿ (ನಾ)= ಹುಲ್ಲಿನ ಎಸಳು, ಕಡ್ಡಿ.

ಹುಲ್ಲು ಘುಡ್ಸಿ (ನಾ)= ಹುಲ್ಲಿನಿಂದ ನಿರ್ಮಿಸಿದ ಗುಡಿಸಲು.

ಹುಲ್ಲೆಪ್ಪ ಚಿಂಚೋಳಿ (ನಾ)= ಬೀದರ ಜಿಲ್ಲೆಯ ನೆರೆಯ ಆಂಧ್ರದ ಜಹಿರಾಬಾದದ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸೇವಕ.

ಹುಲ್ಸೂರು (ನಾ)= ಗುರು ಬಸವೇಶ್ವರ ಸಂಸ್ಥಾನ ವಿರಕ್ತ ಮಠವಿರುವ ಊರು. ಮಠದ ಪೀಠಾಧಿಪತಿಗಳು ಆಧುನಿಕ ವಚನಕಾರರೂ ತತ್ವಪದಕಾರರೂ ಆದ ಶಿವಾನಂದ ಶಿವಯೋಗಿಗಳ ಕಾಯಕ ಕ್ಷೇತ್ರ. ಹಳೆಯ ವಿಧಾನ ಸಭಾಸದಸ್ಯತ್ವದ ಕೇಂದ್ರ ಸ್ಥಳ. ಮಹೇಂದ್ರ ಕುಮಾರರು ಶಾಸಕರಾಗಿರುವ ಕ್ಷೇತ್ರ.

ಹುವ್ವಾ (ನಾ)= ಹೂವು; ಪುಷ್ಪ; ಕುಸುಮ; ಕಣ್ಣ ಗುಡ್ಡೆಯ ಮೇಲಿರುವ ಬಿಳಿಯ ಕಲೆ.

ಹುವ್ವಾ ಆಳ್ಳು (ಕ್ರಿ)= ಮೊಗ್ಗರಳಿ ಹೂವಾಗು.

ಹುವ್ವಿನ ಗಿಡ (ನಾ)= ಹೂ ಕೊಡುವ ಗಿಡ.

ಹುವ್ವಿನ ಸರಾ (ನಾ)= ಹೂಮಾಲೆ.

ಹುವ್ವುಕ (ಅ)= ಹೂವಿಗೆ; ಹೂವಕ್ಕೆ (ಹಾಡು: ಕುಕ್ಕೆನ್ನುವುಕ ಭಾಳ ಪಿರಿಯ ಮಾಡಿದ। ಯಾಕೋರಂಗಯ್ಯ ನಿಮ್ಮ ಕಾಕ ಬದಿಗಳು। ಸಾಕನಡಿನಡಿ ಸರಿಯೆ ಸವ್ತಿ ಮನಿಕಡಿ। ಹರಿಯ ಹಾಯಲೆ ದೊಡ್ಡ ಮಡುವ ಡುಮುಕಲೆ।।).

ಹುಷಾರ್ (ವಿ)= ಎಚ್ಚರ; ಜಾಗರೂಕ.

ಹುಷಾರಿ (ನಾ)= ಜಾಗರೂಕತೆ; ಎಚ್ಚರಿಕೆ; ಜಾಣತನ.

ಹುಸಿಹೋಗು (ಕ್ರಿ)= ಸುಳ್ಳಾಗು.

ಹುಸುಕ (ನಾ)= ಹುಸಿಕ; ಸುಳ್ಳು ಹೇಳುವವನು; ಸುಳ್ಳುಗಾರ; ಕಪಟಿ; ವಂಚಕ.

ಹುಸ್ನಾಸಾಬ (ನಾ)= ಬಸವಕಲ್ಯಾಣ ತಾಲೂಕಿನ ಕೊಳ್ಳೂರು ಗ್ರಾಮದ ಹುಸೇನ ಸಾಬ ಎಂಬವರ ಕಾವ್ಯನಾಮ ಕೊಳ್ಳೂರು

ಹುಸ್ನಾಸಾಬ; ಹಾರ್ಕೂಡ ಚೆನ್ನಬಸವರ ಪರಮ ಶಿಷ್ಯ.

ಹುಸ್ಯಾ (ಅ)= ಬೆಕ್ಕನ್ನು ಓಡಿಸಲು ಬಳಸುವ ಆದೇಶದ ಧ್ವನಿ, ಅಪ್ಪಣೆ ಪದ.

ಹುಳಾ (ನಾ)= ಹುಳು; ಕ್ರಿಮಿ; ಕೀಟ.

ಹುಳಾ ಆಡು (ಕ್ರಿ)= ನೀರಿನಲ್ಲಿ ಇಲ್ಲವೆ ಆಹಾರದಲ್ಲಿ ಹುಳು ಉಂಟಾಗಿ ಸುತ್ತಾಡುತ್ತಿರು.

ಹುಳಿ (ನಾ)= ಹುಣಿಸೆಹಣ್ಣು; ನಿಂಬೆಹಣ್ಣುಗಳಲ್ಲಿರುವ ಆಮ್ಲೀಯತೆ.

ಹುಳಿ ಜೆಂಡು, ಹುಳಿಜೆಟ್ಟು (ನಾ)= ಅತಿ ಹುಳಿಯಾದದ್ದು.

ಹುಳಿಢೇಕುರ್ಕಿ (ನಾ)= ಅಪಚನ ಹಾಗೂ ಆಮ್ಲೀಯತೆಯಿಂದ ಉಂಟಾಗುವ ಡೇಕರಿಕೆ.

ಹುಳಿನುಚ್ಚು (ನಾ)= ಜೋಳದ ರವೆಗೆ ಝುರಿ ಹಾಕಿ ತಯಾರಿಸಿದ, ಸುರಿದುಂಬುವ ತರಲ ಆಹಾರ. ಹುಳಿ ನುಚ್ಚಿನೊಂದಿಗೆ ಮಜ್ಜಿಗೆ ಮತ್ತು ಅಗಸೆಯ ಹಿಂಡಿ ಇದ್ದರೆ ಸ್ವಾದವು ಇಮ್ಮಡಿ, ಮುಮ್ಮಡಿಗೊಳ್ಳುತ್ತದೆ.

ಹುಳಿಬ್ಯಾಳಿ (ನಾ)= ಹುಳಿ ಬೆರೆಸಿದ ಬೇಳೆಯ ಸಾರು.

ಹುಳಿಮಾನ್ಕಾಯಿ (ನಾ)= ಹಣ್ಣಾದರೂ ಹುಳಿಯಿಂದ ಕೂಡಿರುವ ಮಾವಿನ ಹಣ್ಣು.

ಹುಳಿಮುದ್ದಿ (ನಾ)= ಅತಿ ಹುಳಿಯಿಂದ ಕೂಡಿದ್ದುದು.

ಹುಳಿ ಹಿಂಡು (ಕ್ರಿ)= ನಿಂಬೆ ಅಥವಾ ಹುಣಿಸೆ ಹಣ್ಣಿನಿಂದ ರಸವನ್ನು ಹೊರತೆಗೆ (ನು) ಕೆಲಸ ಕೆಡಿಸು; ಕೆಲಸ ಹಾಳು ಮಾಡು.

ಹುಳುಕು (ನಾ)= ಹುಳು ಹಿಡಿದ ವಸ್ತು; ಹುಳು ತಿಂದು ಕೆಟ್ಟುಹೋದದ್ದು; ಅಂತರಂಗದ ದುರ್ಗುಣ.

ಹುಳುಕ್ಮಾರಿ (ನಾ)= ಮೈಲಿಬೇನೆಯಿಂದ ವಿಕಾರಗೊಂಡ ಮೋರೆ.

ಹುಳುಚು (ನಾ)= ಅಲ್ಲಲ್ಲಿ ಹಕ್ಕಳಿಕೆ ಕಂಡ, ಸಾರಣೆ ಕಾಣದ ಮನೆಯ ನೆಲ, ರಾಶಿಯ ಕಣ.

ಹುಳುಬುಚ್ಚಿ (ನಾ)= ಹಾದರಗಿತ್ತಿ, ಪುರುಷಲೋಲೆ, ಚಂಚಲೆ.

ಹುಳು ಬ್ಯಾಳಿ (ನಾ)= ಹುಳಿ ಬೆರೆಸಿದ ಬೇಳೆ ಸಾರು; ಹುಳಿ ಸಾರು.

ಹುಳ್ಗಡಕ (ನಾ)= ಹಾದರಿಗ; ಕಾಮುಕ; ಚಂಚಲ (ಬೈಗುಳ).

ಹುಳ್ಗಡಕಿ (ನಾ)= ಹಾದರಗಿತ್ತಿ; ಚಂಚಲೆ (ಬೈಗುಳ).

ಹುಳ್ಗಡಕ್ಯಾ (ನಾ)= ಹುಳ್ಗಡ್ಕ; ಹಾದರಿಗ; ಕಾಮುಕ; ಚಂಚಲ (ಬೈಗುಳ).

ಹುಳ್ಚಿಕ್ಕಿ (ನಾ)= ಹುಳಿಯಿಂದ ಕೂಡಿದ ಎಲೆಯುಳ್ಳ ತರಕಾರಿ ಸೊಪ್ಪು.

ಹುಳ್ಢೇಕುರ್ಕಿ (ನಾ)= ಅಪಚನ ಹಾಗೂ ಆಮ್ಮೀಯತೆಯಿಂದ ಉಂಟಾಗುವ ಡೇಕರಿಕೆ.

ಹುಳ್ಪಲ್ಯಾ (ನಾ)= ಕಡ್ಲೆಹಿಟ್ಟಿನೊಂದಿಗೆ ಹುಣಸೆ ಹುಳಿ, ಖಾರ, ಉಪ್ಪು, ಅರಿಷಿಣ ಬೆರೆಸಿ ತಯಾರಿಸಿದ ಪಲ್ಯ.

ಹುಳ್ಬಾನಾ (ನಾ)= ಥಳಿಸಿದ ಜೋಳದ ಕಾಳಿಗೆ ಝುರಿ ಹಾಕಿ ಅಲ್ಲ, ಬಳ್ಳೊಳಿ ಬೆರೆಸಿ ತಯಾರಿಸಿದ ಬೋನ. ಯಳ್ಳಾಮಾಸಿ

ಹಬ್ಬಕಾಗಿ ತಯಾರಿಸುವ ವಿಶೇಷ ಬೋನ. ಇದರ ಜತೆಯಲ್ಲಿ ಅಂಬಲಿ ಇರುವುದು ಅಗತ್ಯ.

ಹುಳ್ಳಾನುಚ್ಚು (ನಾ)= ಹುಳಿನುಚ್ಚು (ನೋಡಿರಿ).

ಹೂಂ (ನಾ)= ಹೌದು ಎಂಬುದಕ್ಕೆ ಸಂಕ್ಷಿಪ್ತ ಸೂಚಕ; ಕತೆ ಕೇಳುವವರು 'ಕೇಳುತಿದ್ದೇನೆ' ಎಂಬ ಬದಲು ಬಳಸುವ ಸಂಕ್ಷಿಪ್ತ ಸೂಚಕ.

ಹೂಂ ಅನು (ಕ್ರಿ)= ಸಮ್ಮತಿಸು; ಒಪ್ಪಿಗೆ ಸೂಚಿಸು.

ಹೂಂ ಅನುಸು (ಕ್ರಿ)= ಹೌದೆನ್ನಿಸು; ಹೂಂ ಅನ್ನುವಂತೆ ಮಾಡು.

ಹೂಂಕುರ್ಸು (ಕ್ರಿ)= ಅಬ್ಬರಿಸು; ಹೂಂ ಎಂದು ರೋಷ ತೋರು.

ಹೂಂಸು (ನಾ)= ಅಪಾನ ವಾಯು (ಒಗಟು: ಚಿಟ್ಕುದ್ರಿ ಬಿಟ್ಟುರ್ಸಿಗಾಲ –ಹೂಸು).

ಹೂಂಸುಬಿಡು (ಕ್ರಿ)= ಅಪಾನವಾಯು ವಿಸರ್ಜಿಸು.

ಹೂಂಸುಬುರ್ಕಿ (ನಾ)= ಸದಾ ಅಪಾನವಾಯು ಬಿಡುವವಳು (ಬೈಗುಳ) (ಗಾದೆ: ಹೂಂಸುಬುರ್ಕಿಗಿ ಕೂಸೊಂದು ನೆವನಾ).

ಹೂಂಸುಬುರ್ಕ್ಯಾ (ನಾ)= ಸದಾ ಅಪಾನ ವಾಯು ಬಿಡುವವನು. (ಬೈಗುಳ).

ಹೂಂಸ್ಯಾ (ನಾ)= ಹೂಂಸುಬುರ್ಕ್ಯಾ (ನೋಡಿರಿ).

ಹೂಂಹೊಡಿ (ಕ್ರಿ)= ಸಮ್ಮತಿಸು; ಒಪ್ಪಿಗೆ ಸೂಚಿಸು.

ಹೂಕಿ (ನಾ)= ತೀಟೆ; ಬೆದೆ.

ಹೂಕಿ ಏಳು (ಕ್ರಿ)= ತೀಟೆಯುಂಟಾಗು; ಬೆದೆಯುಂಟಾಗು; ಕಾಮಾತುರ ಉಂಟಾಗು.

ಹೂಗಾರ (ನಾ)= ಹೂಕಟ್ಟಿ ಮಾರುವವನು; ಹೂವಾಡಿಗ.

ಹೂಗಾರ್ತಿ (ನಾ)= ಹೂಗಾರ ಮನೆಯ ಮಹಿಳೆ.

ಹೂಜಿ (ನಾ)= ಸುರೈ; ನೀರು ತುಂಬಿಡಲು ಬಳಸುವ, ಉದ್ದ ಕುತ್ತಿಗೆಯ ಮಣ್ಣಿನ ಪಾತ್ರೆ.

ಹೂಟಿ (ನಾ)= ಪಾಳಿ; ಏರ್ಪಾಡು; ಯೋಜನೆ.

ಹೂಡ (ನಾ)= ಪೋರಾಬಟ್ಟಿ; ಅರಿವು ಮೂಡಲಾರದವನು/ಳು (ಬೈಗುಳ).

ಹೂಡು (ಕ್ರಿ)= ಬಂಡಿ, ರಥ, ನೇಗಿಲು ಮೊದಲಾದುವನ್ನು ಎಳೆಯಲು ಎತ್ತು, ಕುದುರೆ ಮೊದಲಾದುವನ್ನು ಹೊಂದಿಸಿ ಕಟ್ಟು; ನೊಗಹೇರು; ಗಳೆಹೊಡಿ; ತೊಡಗಿಸು.

ಹೂಡ್ಕಿ (ನಾ)= ಹೂಡಿಕೆ; ಹೂಡುವಿಕೆ; ಹೊಂದಿಸುವಿಕೆ; ತೊಡಗಿಸುವಿಕೆ.

ಹೂಡ್ಯಾ (ನಾ)= ಹೂಡೆ; ಕೋಟೆಯ ತೆನೆ; ಬುರುಜು.

ಹೂಬೇಹೂಬು (ಅ) ಉ.= ತದ್ರೂಪ; ಅದರಂತೆಯೇ; ಅದಕೂ ಇದಕೂ, ಅವನಿಗೂ ಇವನಿಗೂ ವ್ಯತ್ಯಾಸವಿಲ್ಲದಂತೆ.

ಹೂರು (ನಾ)= ಯೋನಿ; ಸ್ತ್ರೀಜನನೇಂದ್ರಿಯ.

ಹೂರುಣ (ನಾ)= ಹೂರಣ; ಹೂರ್ಣ; ಕಡುಬು, ಹೋಳಿಗೆ ಮುಂತಾದವುಗಳಲ್ಲಿ

ತುಂಬುವ ಬೆಲ್ಲ, ಕೊಬ್ಬರಿ ಕುದಿಸಿದ ಬೇಳಿ ಇತ್ಯಾದಿಗಳ ಮಿಶ್ರಣ.

ಹೂರುಣ್ಗಡುಬು (ನಾ)= ಕುದಿಸಿ, ಬೆಲ್ಲ ಅಥವಾ ಸಕ್ಕರೆಯೊಂದಿಗೆ ನುಣ್ಣಗೆ ಅರೆದು ತಯಾರಿಸಿದ ಬೇಳೆಯನ್ನು ಕಣಕದಲ್ಲಿ ತುಂಬಿ, ಕರಿದು ತಯಾರಿಸಿದ ಕಡುಬು.

ಹೂವಾ (ನಾ)= ಹೂವು; ಪುಷ್ಪ; ಕುಸುಮ.

ಹೂಸು (ನಾ)= ಹೂಂಸು; ಅಪಾನವಾಯು.

ಹೂಸು ಬಿಡು (ಕ್ರಿ)= ಅಪಾನವಾಯು ವಿಸರ್ಜಿಸು.

ಹೂಳು (ನಾ)= ಹೂಳಿಕೆ; ಬಾವಿಯ ತಳಸೇರಿದ ಕಲ್ಲು, ಮಣ್ಣು, ಕಸಕಡ್ಡಿ ಇತ್ಯಾದಿ.

ಹೂಳು (ಕ್ರಿ)= ಮಣ್ಣುಮಾಡು; ಶವವನ್ನು ಕುಣಿಯಲ್ಲಿಟ್ಟು ಮಣ್ಣಿನಿಂದ ಮುಚ್ಚು, ಹುಗಿ.

ಹೂಳೆ (ಕ್ರಿ)= ಹೂಳುವೆನು; ಕುಣಿಯಲ್ಲಿಟ್ಟು ಮಣ್ಣು ಮುಚ್ಚುವೆನು; ಹುಗಿಯುವೆನು (ಬೈಗುಳ).

ಹೂಳ್ಕಿ (ನಾ)= ಹೂಳಿಕೆ; ಬಾವಿಯಲ್ಲಿ ಬಿದ್ದ ಹೂಳು.

ಹೂಳ್ಕಿತೆಗಿ (ಕ್ರಿ)= ಬಾವಿಯಲ್ಲಿ ಬಿದ್ದ ಹೂಳನ್ನು ಹೊರತೆಗೆ; ವ್ಯಕ್ತಿಯ ಹೀನತನವನ್ನು ಬಯಲಿಗೆಳೆ.

ಹೂಳ್ಕಿಹೊರಗ್ಹಾಕು (ಕ್ರಿ)= ವ್ಯಕ್ತಿಯ ಹೀನತನವನ್ನು ಬಹಿರಂಗ ಪಡಿಸು.

ಹೆಂಗಸು, ಹೆಂಗ್ಸು (ನಾ)= ಹೆಣ್ಣು; ಸ್ತ್ರೀ; ಮಹಿಳೆ; ನಾರಿ.

ಹೆಂಗ್ಸೂಭೋರ್ಗಿ (ನಾ)= ಸಂಕ್ರಾಂತಿಯ ಮುನ್ನಾದಿನ ಮಹಿಳೆಯರು ಆಚರಿಸುವ ಹಬ್ಬ; ಹೆಂಗಸರು ಎಳ್ಳು ಕರಟಿಗೆಯನ್ನು ಬಳಿದುಕೊಂಡು ತಲೆ ಸ್ನಾನ ಮಾಡಿ, ಎಳ್ಳು-ಬೆಲ್ಲ, ಕ್ಯಾರಕಾಯಿ, ಸೌತೆ, ಬೋರೆಕಾಯಿ, ಹಸಿರುಗಡಲೆ; ಕಬ್ಬು, ಇತ್ಯಾದಿ ತಿನ್ನುವ ಹಬ್ಬ.

ಹೆಂಗ್ಯಾ (ನಾ)= ಷಂಡ; ನಪುಂಸಕ.

ಹೆಂಟಿ (ನಾ)= ಮಣ್ಣು, ಬೆಲ್ಲ ಮುಂತಾದವುಗಳ ಮುದ್ದೆ, ಉಂಡೆ.

ಹೆಂಡತಿ (ನಾ)= ಮಡದಿ; ಪತ್ನಿ.

ಹೆಂಡಿ (ನಾ)= ಸಗಣಿ; ಗೋಮಯ.

ಹೆಂತ (ಅ)= ಎಂತಹ; ಎಂಥ.

ಹೆಂತಾತ (ಅ)= ಎಂಥಾತ; ಎಂಥವನು.

ಹೆಂತಾದು (ಅ)= ಎಂಥಾದ್ದು; ಎಂತಹದು.

ಹೆಂತಾವ (ಅ)= ಎಂಥಾವ; ಎಂಥವನು.

ಹೆಂತೆಂತಾ (ಸ.)= ಎಂಥೆಂಥ.

ಹೆಂತೋರು (ಸ.)= ಎಂಥವರು (ಗಾದೆ: ಹೆಂತೋರಿಗಿ ಹಂತೋರು ಸಿಕ್ರ ಕುಂತಂಗ ನಿಂತಂಗಾಗ್ತಾದ).

ಹೆಗುಲು (ನಾ)= ಹೆಗಲು; ಭುಜ; ಎತ್ತು, ಕುದುರೆ, ಆನೆ ಮೊದಲಾದವುಗಳ ಕುತ್ತಿಗೆಯ ಮೇಲ್ಭಾಗ.

ಹೆಗುಲ್ಕೊಡು (ಕ್ರಿ)= ಸಹಾಯ ಮಾಡು; ನೆರವು ನೀಡು; ನೊಗವನ್ನು ಹೊರು; ಜವಾಬ್ದಾರಿ ವಹಿಸು.

ಹೆಗ್ಗುಣ (ನಾ)= ಹೆಗ್ಗಣ; ಇಲಿಯ ಜಾತಿಗೆ ಸೇರಿದ ಒಂದು ಬಗೆಯ ಪ್ರಾಣಿ.

ಹೆಚ್ಚಾಗು (ಕ್ರಿ)= ಅತಿಯಾಗು; ಜಾಸ್ತಿಯಾಗು.

ಹೆಚ್ಚಿಗಿ (ಅ)= ಹೆಚ್ಚಿಗೆ; ಅಧಿಕ.

ಹೆಚ್ಚು (ನಾ)= ಹೆಚ್ಚಳ; ಆಧಿಕ್ಯ.

ಹೆಚ್ಚು ಮಾಡು (ಕ್ರಿ)= ಉಳಿಸು; ಅತಿಯೆನ್ನುವಂತೆ ಮಾಡು.

ಹೆಜ್ಜಗುಜ್ಜ (ನಾ)= ಹೆಚ್ಚು ಕಡಿಮೆ; ಸಣ್ಣದೊಡ್ಡ.

ಹೆಜ್ಜಿ (ನಾ)= ಹೆಜ್ಜೆ; ಅಡಿ; ಪಾದ; ಪಾದ ಊರಿದ ಗುರುತು.

ಹೆಜ್ಜಿಕಿತ್ತು (ಕ್ರಿ)= ಅಡಿ ಇಡು; ಮುಂದೆ ಸಾಗು; ಓಡಿಹೋಗು.

ಹೆಟ್ಟ (ನಾ)= ಮುಳ್ಳ ಮೇಲೆ ಮುಳ್ಳು ಹೇರಿದ ಹೊರೆ; ಗಿಡದಿಂದ ಕಡಿದ ಟೊಂಗೆಗಳ ರಾಶಿ.

ಹೆಟ್ಟ ಎಳಿ (ಕ್ರಿ)= ಬಿತ್ತಿದ ಹೊಲದ ಸಾಲುಗಳನ್ನು ಸಮತಳಗೊಳಿಸು; ಒಂದರ ಮೇಲೊಂದು ಹೇರಿದ ಗಿಡದ ಟೊಂಗೆಗಳನ್ನು ಎಳೆದುಕೊಂಡು ಹೋಗು.

ಹೆಟ್ಟು (ಕ್ರಿ)= ಎಟೆ; ಜೋರಾಗಿ ಹೊಡೆ; ಚುಚ್ಚು; ನಾಟುವಂತೆ ಮಾಡು; ಸಂಭೋಗಿಸು.

ಹೆಡಕು, ಹೆಡ್ಕು (ನಾ)= ಹೆಕ್ಕತ್ತು; ಕತ್ತಿನ ಹಿಂಭಾಗ.

ಹೆಡಿ (ನಾ)= ಹೆಡೆ; ಅಗಲಗೊಂಡ ನಾಗರ ಹಾವಿನ ಮುಖ.

ಹೆಡಿಎತ್ತು (ಕ್ರಿ)= ಹಾವು ತನ್ನ ಮುಖವನ್ನು ಅಗಲಗೊಳಿಸಿ ಮೇಲೆತ್ತು; ತಲೆ ಎತ್ತು.

ಹೆಡ್ಗಿ (ನಾ)= ಹೆಡಿಗೆ; ಬುಟ್ಟಿ.

ಹೆಡ್ಗಿಜಾತ್ರಿ (ನಾ)= ಬುಟ್ಟಿ ಜಾತ್ರಿ.

ಹೆಣ (ನಾ)= ಜೀವವಿಲ್ಲದ ಶರೀರ; ಶವ.

ಹೆಣಗಾಡು (ಕ್ರಿ)= ಹೆಣಗು; ಹೋರಾಡು.

ಹೆಣಾಲು (ನಾ)= ಹೆಳಲು; ವೇಣಿ.

ಹೆಣಿ (ಕ್ರಿ)= ಹೆಣೆ; ಗೋಪು ಹಾಕು.

ಹೆಣಿಕಿ (ನಾ)= ಹೆಣೆಯುವಿಕೆ; ಗೋಪು ಹಾಕುವಿಕೆ.

ಹೆಣುಗು (ಕ್ರಿ)= ಹೋರಾಡು; ಕಾಳಗಮಾಡು; ಹೆಣಗಾಡು.

ಹೆಣುಗ್ಯಾಡು (ಕ್ರಿ)= ಹೆಣಗು (ನೋಡಿರಿ).

ಹೆಣೂರ್‍ಯಾ (ನಾ)= ಷಂಡ; ಸಲಿಂಗ ಕಾಮುಕ; ಮಂಗಳಮುಖಿ.

ಹೆಣ್ಣಾಳು (ನಾ)= ಕೂಲಿಮಾಡುವ ಮಹಿಳೆ

ಹೆಣ್ಣು (ನಾ)= ಹೆಂಗಸು; ಸ್ತ್ರೀ; ವಧು; ಮದುಮಗಳು.

ಹೆಣ್ಣುಕುಡು (ಕ್ರಿ)= ಕನ್ನೆಯನ್ನು ಒಪ್ಪಿಸು.

ಹೆಣ್ಣುತರು (ಕ್ರಿ)= ಅನ್ಯರ ಮನೆಯ ಹೆಣ್ಣನ್ನು ತಮ್ಮ ಮನೆಗೆ ತಂದುಕೊ.

ಹೆಣ್ಣುನೋಡು (ಕ್ರಿ)= ತನ್ನ ಮಗನಿಗಾಗಿ ಕನ್ಯೆಯನ್ನು ಶೋಧಿಸು; ವಧುವನ್ನು ಹುಡುಕು.

ಹೆಣ್ತಿ (ನಾ)= ಹೆಂಡತಿ; ಮಡದಿ; ಪತ್ನಿ (ಗಾದೆ: ಹೆಣ್ತಿ ಅಂದ್ರ ಹಿಗ್ತಾನ, ಸೀರಿತಾ ಅಂದ್ರ ಅಳ್ತಾನ).

ಹೆತ್ತಿದುತ್ಪಾ (ನಾ)= ಹೆರೆತ ತುಪ್ಪ.

ಹೆದುರು (ಕ್ರಿ)= ಹೆದರು; ಅಂಜು; ಭಯಪಡು.

ಹೆದುರ್ಕಿ (ನಾ)= ಹೆದರಿಕೆ; ಅಂಜಿಕೆ.

ಹೆದುರ್ಸು (ಕ್ರಿ)= ಹೆದರಿಸು; ಅಂಜಿಸು; ಭಯಪಡಿಸು; ಬೆದರಿಸು.

ಹೆಪ್ಪ (ನಾ)= ಹಾಲನ್ನು ಮೊಸರುಗೊಳಿಸಲು ಬಳಸುವ ಹುಳಿದ್ರವ; ಹಾಲಿಗೆ ಹಾಕುವ ಮೊಸರು ಅಥವಾ ಮಜ್ಜಿಗೆ; ಗಡ್ಡೆ.

ಹೆಪ್ಪುಗಟ್ಟು (ಕ್ರಿ)= ನೀರು; ತುಪ್ಪ; ಕೊಬ್ಬರೆಣ್ಣೆ ಇತ್ಯಾದಿ ತರಲ ವಸ್ತುಗಳು ಘನರೂಪ ತಾಳು.

ಹೆಪ್ಪುಹಾಕು (ಕ್ರಿ)= ಹೆಪ್ಪಿಡು; ಹಾಲನ್ನು ಮೊಸರುಗೊಳಿಸಲು ಅದರಲ್ಲಿ ತುಸು ಮಜ್ಜಿಗೆ ಬೆರೆಸು.

ಹೆಬ್ಬಟ್ಟು (ನಾ)= ಹೆಬ್ಬೆರಳು; ಹಿರಿಯ ಬೆರಳು.

ಹೆಬ್ಬಳ್ಳು (ನಾ)= ಹೆಬ್ಬೆಟ್ಟು; ಹೆಬ್ಬೆರಳು.

ಹೆಬ್ಬೇನು (ನಾ)= ಗಂಡುಗುಂಡಾದ ಕಾಯಿಯುಳ್ಳ ಬೇವಿನ ತರಹದ ಮರ.

ಹೆಬ್ರಾಸಿ (ನಾ)= ಏಬ್ರಾಸಿ (ನೋಡಿರಿ).

ಹೆಸುರಿಡು (ಕ್ರಿ)= ಹೆಸರಿಡು; ಹೆಸರನ್ನು ಇಡು; ಹೆಸರಿಸು; ನಾಮಕರಣ ಮಾಡು; (ಹಾಡು: ಬಸುರಿದ್ದಿನಿ ಹೆಸರೇನಿಡಲಿ ಹೇಳ).

ಹೆಸುರು (ನಾ)= ಹೆಸರು; ನಾಮಧೇಯ; ನಾಮಾಂಕಿತ; ಒಂದು ಬಗೆಯ ದ್ವಿದಳ ಧಾನ್ಯ.

ಹೆಸರು ಮಾಡು (ಕ್ರಿ)= ಕೀರ್ತಿಗಳಿಸು; ಅಪಕೀರ್ತಿಗೆ ಗುರಿಯಾಗು.

ಹೆಳು (ನಾ)= ಹೆಳವ; ಹೆಳವ ಜಾತಿಯವನು (ಗಾದೆ: ಎಳಿಗಿ ಎಳಿ ಹಚ್ಚುದ್ರ ಹೆಳು ಸುದ್ದ ಬಳಗದಾಗ ಬರ್‍ತಾನ).

ಹೆಳುತಿ (ನಾ)= ಹೆಳವರ ಜಾತಿಯ ಮಹಿಳೆ.

ಹೇಂದ್ರ್ಯಾ (ನಾ)= ಷಂಡ; ಸಲಿಂಗ ಕಾಮುಕ; ನಪುಂಸಕ; (ಬೈಗುಳ).

ಹೇಕಡ (ನಾ)= ಹೊಂಬ; ಹುಂಬ; ಉದ್ಧಟ.

ಹೇಜರು (ನಾ)= ಉದ್ದಗಲ್ಲು; ಬಾಲಗಲ್ಲು; ಮೂಲಿಗಲ್ಲು.

ಹೇಟಾ ಮೇಟಾ (ವಿ)= ಹಿಂದೆ ಮುಂದೆ ಇರುವ (ಹಲ್ಲು); ಅಸಹಜ; ಹಿಂಚಮುಂಚ.

ಹೇಡಂಬಿ (ನಾ)= ಹಿಡಿಂಬಾ; ಹಿಡಿಂಬೆ.

ಹೇನು (ನಾ)= ತಲೆಯಲ್ಲಿಯ ಕ್ರಿಮಿ; ಒದ್ದೆ ಬಟ್ಟೆಯಲ್ಲಿ ಹುಟ್ಟುವ ಕ್ರಿಮಿ; ಗಿಡಗಳಿಗೆ ರೋಗ ಉಂಟು ಮಾಡುವ ಕ್ರಿಮಿ.

ಹೇರು (ಕ್ರಿ)= ಒಂದರ ಮೇಲೆ ಒಂದು ಇಡು; ಹೊಡೆ; ಗುದ್ದು; (ನಾ) ಹೊರೆ; ಭಾರ.

ಹೇರೆತ್ತು (ನಾ)= ಭಾರವನ್ನು ಹೊರುವ ಎತ್ತು; ಕಂಟಲೆ.

ಹೇಲಾಗೇರಿ (ನಾ)= ಮಲ ವಿಸರ್ಜನೆಯ ಬಯಲು.

ಹೇಲು (ಕ್ರಿ)= ಮಲ ವಿಸರ್ಜನೆ ಮಾಡು; (ನಾ) ಮಲ; ಲಂಚ.

ಹೆಲ್ಗುಂಡಿ (ನಾ)= ಮಲವಿಸರ್ಜನೆ ಮಾಡಿ ತೊಳೆದುಕೊಳ್ಳಲಾರದ ಗುದ.

ಹೇಲ್ಗುಂಡ್ಯಾ (ನಾ)= ಸದಾ ಮಲವಿಸರ್ಜನೆಯಲ್ಲಿ ತೊಡಗಿರುವವನು; ಮಲವಿಸರ್ಜನೆ ಮಾಡಿ ಗುದ ಪ್ರಕ್ಷಾಲನ ಮಾಡಿಕೊಳ್ಳಲಾರದವನು (ಬೈಗುಳ).

ಹೆಲ್ಭುಗ್ರಿ (ನಾ)= ತೊಟ್ಟಿಲು ಕಾರ್ಯಕ್ರಮಕ್ಕೆ ಬಂದವರಿಗೆ ಹಂಚಲು ತಯಾರಿಸಿದ ಗುಗ್ಗರಿ (ಗಾದೆ: ಹೇಲ್ಭುಗ್ರಿ ತಿಂದು ಹೆಸುರಿಟ್ಟಿದೇನು, ಹೆಸರು ಕಿಡ್ಸಿ ಕರಿಲಾಕ?).

ಹೇಲ್ತಿನು (ನಾ)= ಲಂಚತಿನ್ನು; ಅನ್ಯರ ಆದಾಯವನ್ನು ಪಡೆದುಕೊ.

ಹೇಸಿಕಿ (ನಾ)= ಹೇಸಿಕೆ; ಹೊಲಸು; ಕೊಳಕು; ಹೇಸಿಗೆ.

ಹೇಸು (ಕ್ರಿ)= ಅಸಹ್ಯ ಪಡು.

ಹೇಸ್ಕಿ (ನಾ)= ಹೇಸಿಕಿ (ನೋಡಿರಿ).

ಹೈ (ನಾ)= ರೂಢಿ; ಸ್ವಭಾವ; ಪದ್ಧತಿ; (ಕ್ರಿ) ದನಗಳಿಗೆ ಆದೇಶ.

ಹೈಕಲಿ (ಕ್ರಿ)= ರೂಢಿ ಮಾಡಿಕೊ; ಅಭ್ಯಾಸ ಮಾಡಿಕೊ, ರಾಟಿ ಮಾಡಿಕೊ.

ಹೈಕೈಕಡಿ (ಕ್ರಿ)= ಚಂಡಿನಾಟದಲ್ಲಿ ಸೋತವನು ಓಟ ಕಿತ್ತು; ಕಾಲು ಕಿತ್ತು; ಓಡಿಹೋಗು; ಬಿಟ್ಹೋಡು.

ಹೈಗೈ (ನಾ)= ನಿರ್ಲಕ್ಷ್ಯ; ಹಿಂದೆ ಮುಂದೆ ನೋಡುವಿಕೆ.

ಹೈಗೈಮಾಡು (ಕ್ರಿ)= ಹಿಂದೆ ಮುಂದೆ ನೋಡು; ನಿರ್ಲಕ್ಷ್ಯ ಮಾಡು.

ಹೈತ್ಗಿ (ನಾ)= ಪಿತ್ತದಿಂದ ಮೈಮೇಲೆ ಏಳುವ ಗದಡು.

ಹೈನಾ (ನಾ)= ಹೈನು; ಹಯನು.

ಹೈಬತ್, ಹೈಬತ್ತು (ನಾ)= ಉ. ಗಾಬರಿ; ದಿಗಿಲು; ಭಯ.

ಹೈಬತ್ ಭೀಳು (ಕ್ರಿ)= ಗಾಬರಿಯಾಗು; ದಿಗಿಲುಗೊಳ್ಳು.

ಹೈಬತ್ಯಾ (ನಾ)= ಗಾಬರಿಗೊಳ್ಳುವವನು; ದಿಗಿಲುಗೊಳ್ಳುವವನು (ಬೈಗುಳ).

ಹೈಯಾ (ನಾ)= ಹೈ; ದನಗಳಿಗೆ ಆದೇಶ.

ಹೈರಾಣ (ನಾ)= ದಣಿವು; ಬಳಲಿಕೆ; ಕಷ್ಟ; ತೊಂದರೆ.

ಹೈರಾಣಾಗು (ಕ್ರಿ)= ದುಡಿ; ಬಳಲು; ಆಯಾಸಗೊಳ್ಳು.

ಹೈರಾಣಿ (ನಾ)= ಬಳಲಿಕೆಯ ಸ್ಥಿತಿ.

ಹೈರಾಣ್ಗತಿ (ನಾ)= ಹೈರಾಣ; ಬಳಲಿಕೆಯ ಸ್ಥಿತಿ.

ಹೈವಾನ (ನಾ) ಉ.= ದನ; ಪಶು; ಕಾಡುಪ್ರಾಣಿ.

ಹೈವಾನಿ (ನಾ) ಉ.= ದನದಂಥವನು; ಕಾಡು ಪ್ರಾಣಿಯಂಥವನು.

ಹೈವಾನಗಿರಿ (ನಾ)= ದನದಂಥ ವರ್ತನೆ; ಕಾಡುಪ್ರಾಣಿಯ ಸ್ವಭಾವ.

ಹೊಂಟ (ಕ್ರಿ)= ಹೊರಟ.

ಹೊಂಟಾರ (ಕ್ರಿ)= ಹೊರಟಿದ್ದಾರೆ.

ಹೊಂಡ್ರು (ಕ್ರಿ)= ಹೊರಡು; ಹೋಗು.

ಹೊಂದಾಣ್ಕಿ (ನಾ)= ಹೊಂದಾಣಿಕೆ; ಹೊಂದಿಕೆ; ಸಾಮರಸ್ಯ.

ಹೊಂದಿಕಿ (ನಾ)= ಹೊಂದಿಕೆ; ಹೊಂದಾಣ್ಕಿ; ಸಾಮರಸ್ಯ.

ಹೊಂದುಸು (ಕ್ರಿ)= ಹೊಂದಿಸು; ಸೇರಿಸು; ಕೂಡಿಸು; ಓರಣಗೊಳಿಸು.

ಹೊಂದ್ಕಿ (ನಾ)= ಹೊಂದಿಕೆ; ಹೊಂದಾಣಿಕೆ; ಸಾಮರಸ್ಯ.

ಹೊಂಬ (ನಾ)= ಹುಂಬ; ಅವಿವೇಕಿ; ದಡ್ಡ.

ಹೊಕ್ಕು (ನಾ)= ನೇಯುವಾಗ ಮಗ್ಗದಲ್ಲಿ ಹಾಕುವ ಅಡ್ಡ ನೂಲೆಳೆ.

ಹೊಕ್ಕುಳು (ನಾ)= ಹೊಕ್ಕಳು; ನಾಭಿ; ಹೊಟ್ಟೆಯ ಮೇಲಿರುವ ಸಣ್ಣಕುಳಿ.

ಹೊಕ್ಕುಳ್ಗೂಟ (ನಾ)= ಬೀಸುಕಲ್ಲಿನ ಒಳಗೂಟ, ಕೇಂದ್ರದ ಗೂಟ, ನಡುಗೂಟ.

ಹೊಗಾಡ್ಯಾ (ವಿ)= ಸಲ್ಲದ; ಹುಂಬತನದ; ಅನುಭವ ಇಲ್ಲದ.

ಹೊಗಿ (ನಾ)= ಹೊಗೆ; ಧೂಮ.

ಹೊಗಿಘಾಣಿ (ನಾ)= ಹೊಗೆ ವಾಸನೆ; ಅಡುಗೆಗೆ ತಗುಲಿದ ಹೊಗೆ ವಾಸನೆ.

ಹೊಗಿ ಎಬ್ಬುಸು (ಕ್ರಿ)= ಹೊಗೆ ಉಂಟು ಮಾಡು; ಹೊಗೆ ಹರಡುವಂತೆ ಮಾಡು.

ಹೊಗಿ ಹಾಕು (ಕ್ರಿ)= ಹೊಗೆ ಎಬ್ಬಿಸು; ಹೊಗೆ ಹರಡು; ಧೂಮವನ್ನು ಉಂಟು ಮಾಡು; (ಗಾದೆ: ಎದ್ದು ಹೋಗು ಅಂಬಾ ಬದಲಿ ಹೊಗಿ ಹಾಕಿದ್ರಂತ!).

ಹೊಗು (ಕ್ರಿ)= ಹುಗು; ಒಳಸೇರು; ಪ್ರವೇಶಿಸು.

ಹೊಗ್ಗ (ಕ್ರಿ)= ಹೋಗುಗೆ; ಹೋಗಲೆ; ಹೋಗೆಲೆ; ಹೋಗ್ಬೆ.

ಹೊಚ್ಚು (ಕ್ರಿ)= ಮುಚ್ಚು; ಆಚ್ಛಾದಿಸು.

ಹೊಟ್ಟಿ (ನಾ)= ಹೊಟ್ಟೆ; ಉದರ; ಅನ್ನದ ಚೀಲ.

ಹೊಟ್ಟಿ ಉರಿ (ಕ್ರಿ)= ಅನ್ಯರ ಕಾಟದಿಂದ ಸಂಕಟಪಡು; ಕರುಬು; ಅಸೂಯೆ ಪಡು; ಹೊಟ್ಟೆಯೊಳಗೆ ಸಂಕಟ ಅಥವಾ ನೋವು ಉಂಟಾಗು.

ಹೊಟ್ಟೆ ಕಟ್ಗೊಂಡು ಹೋಗು (ನು)= ಹೊಟ್ಟೆಪಾಡಿಗಾಗಿ ದುಡಿಯಲು ಅನ್ಯತ್ರ ಹೋಗು.

ಹೊಟ್ಟಿಕಿಚ್ಚು (ನಾ)= ಅಸೂಯೆ; ಮಾತ್ಸರ್ಯ.

ಹೊಟ್ಟಿತೊಳ್ಸು (ಕ್ರಿ)= ಹೊಟ್ಟೆಯಲ್ಲಿಯ ವಿಷವನ್ನು ವಾಂತಿ ಮಾಡಿಸಿ ಹೊರ ಹಾಕು.

ಹೊಟ್ಟಿಥುಂಬು (ಕ್ರಿ)= ಹೊಟ್ಟೆ ಭರ್ತಿಯಾಗು; ಸಂತೃಪ್ತಿಯಾಗು.

ಹೊಟ್ಟಿನೊಯ್ಯು (ಕ್ರಿ)= ಹೊಟ್ಟೆಯಲ್ಲಿ ನೋವು ಉಂಟಾಗು.

ಹೊಟ್ಟಿಬಡ್ಕ (ನಾ)= ಅನ್ನಕ್ಕಾಗಿ ಚಡಪಡಿಸುವವನು; ಹೊಟ್ಟೆ ಬಡುಕ.

ಹೊಟ್ಟಿ ಭೀಳು (ಕ್ರಿ)= ಗರ್ಭಪಾತವಾಗು.

ಹೊಟ್ಟು (ನಾ)= ಧಾನ್ಯದ ಮೇಲಿನ ಸಿಪ್ಪೆ, ಕವಚ; ಮರದ ಪುಡಿ; ತಲೆಯಲ್ಲಿಯ ಧೂಳು.

ಹೊಟ್ಯಾಗ (ಅ)= ಹೊಟ್ಟೆಯಲ್ಲಿ.

ಹೊಟ್ಲಾಗು (ಕ್ರಿ)= ಗರ್ಭಿಣಿಯಾಗು.

ಹೊಡಿ (ಕ್ರಿ)= ಪೆಟ್ಟು ಹಾಕು (ನಾ) ತೆನೆಯ ಪ್ರಾರಂಭಿಕ ಅವಸ್ಥೆ.

ಹೊಡಿಗಟ್ಟು (ಕ್ರಿ)= ಹೊಡೆ ಮೂಡು; ತೆನೆಗಟ್ಟು.

ಹೊಡ್ತಿ (ನಾ)= ಹೊಡೆತ; ಪೆಟ್ಟು ಹಾಕುವಿಕೆ.

ಹೊಡ್ತಿ ಮಾರ (ನಾ)= ಮತ್ತೆ ಮತ್ತೆ ಹೊಡೆಯುವಿಕೆ.

ಹೊತಾಳಿ (ನಾ)= ಸಗಣಿಯ ಮುದ್ದೆ.

ಹೊತಾಳಿ ಹೊತಾಳಿ (ದ್ವಿ)= (ಸಗಣಿಯ) ಮುದ್ದೆ ಮುದ್ದೆ.

ಹೊತ್ಗಮನಿ (ನಾ)= ಹೊತ್ತು ಕಳೆಯುವಿಕೆ; ಕಾಲಹರಣ.

ಹೊತ್ಕೊ (ಕ್ರಿ)= ಹೊತ್ತುಕೊ; ಹೊರು.

ಹೊತ್ತು (ನಾ)= ಸೂರ್ಯ; ಸಮಯ; ವೇಳೆ; ಕಾಲ (ಕ್ರಿ) ಹತ್ತಿಕೊಳ್ಳು; ಜ್ವಾಲೆಯುಂಟಾಗು; ಬೆಂದು ಹೋಗು.

ಹೊತ್ತು ಮುಣ್ಗಾಮಾರಿ (ನಾ)= ಪಶ್ಚಿಮ ದಿಕ್ಕು; ಪಡುವಣ.

ಹೊತ್ತುಸು (ಕ್ರಿ)= ಹೊತ್ತಿಸು; ಉರಿಯುಂಟುಮಾಡು.

ಹೊತ್ತೇರಿ (ಅ)= ಸೂರ್ಯ ನೆತ್ತಿಯ ಮೇಲೆ ಬಂದು; ಮಧ್ಯಾಹ್ನವಾಗಿ.

ಹೊತ್ರಾಳೆ (ನಾ)= ಮುಂಜಾನೆ; ಬೆಳಿಗ್ಗೆ; ನಸುಕು.

ಹೊದ್ಕಿ (ನಾ)= ಸಮಾರಂಭಗಳಲ್ಲಿ ಉಡಿಸುವ ಗೌರವ ಉಡುಗೆ; ಹೊದಕೆ.

ಹೊನ್ನ ಹುಡುಗಿ (ನಾ)= ಹುಡುಗಿ ಗ್ರಾಮಕ್ಕೆ ಜನಪದರು ಕೊಟ್ಟ ಹೆಸರು. (ಸೀಗಿ ಹಾಡು: ಹಳಿಖೇಡ ಮುಂದಿರುವ। ಹೊನ್ನಾ ತೂಗೀತೇ ಹೊನ್ನ ಹುಡುಗಿ ಕೋಲೆ। ಹೊನ್ನಾನೆ ತೂಗೀತೇ ಹೊನ್ನ ಹುಡುಗಿ ಮುಂದಿರುವ। ಚಿನ್ನಾ ತೂಗೀತೇ ಚಿಡಗುಂಪಿ ಕೋಲೆ।।).

ಹೊನ್ನುಂಗೂರು (ನಾ)= ಚಿನ್ನದ ಉಂಗುರ (ಹಾಡು: ಅರಳೆಲಿ ಮಾಂಗಾಯಿ। ಬೆರಳಿಗುಂಗುರವಿಟ್ಟು। ಸರಸ ಹೊನ್ನುಂಗೂರವರು ತೂಗೀರೇ। ನೀವು ತೋಗೀರೇ।।).

ಹೊನ್ನುಗ್ಗಿ (ನಾ)= ಕಾರು ಹುಣ್ಣಿಮೆಯ ಮುನ್ನಾದಿನ ತಯಾರಿಸುವ ದನಗಳ ನೈವೇದ್ಯದ ಹುಗ್ಗಿ; ಕುಸುಬೆಯ ಹಾಲು ಮತ್ತು ಕಿಚಡಿ.

ಹೊಯ್ಕ (ನಾ)= ಬೆಳೆಯ ಸ್ಥಿತಿಗತಿ, ಲಕ್ಷಣ.

ಹೊಯ್ಕೊ (ಕ್ರಿ)= ಬೊಬ್ಬಿಕ್ಕು; ತಲೆಸ್ನಾನ ಮಾಡು.

ಹೊಯ್ತಾ (ಕ್ರಿ)= ಹೋಗ್ತಾ; ಹೋಗುತ್ತೇನೆ.

ಹೊಯ್ತು (ಕ್ರಿ)= ಹೋಯಿತು; ಉಚ್ಚೆಮಾಡಿತು; ಮೂತ್ರ ವಿಸರ್ಜಿಸಿತು.

ಹೊಯ್ಮಾಲಿ (ನಾ)= ಸೋಗಲಾಡಿ; ಒಯ್ಯಾರಿ; ಹಾದರಗಿತ್ತಿ.

ಹೊಯ್ಯಿ (ಕ್ರಿ)= ಹಾಕು; ಸುರುವು; ಮೂತ್ರ ವಿಸರ್ಜಿಸು.

ಹೊರಕಡಿ (ನಾ)= ಮಲ ವಿಸರ್ಜನೆ.

ಹೊರಕಡಿಗಿ ಹೋಗು (ಕ್ರಿ)= ಮಲ ವಿಸರ್ಜನೆಗೆ ಹೋಗು.

ಹೊರಗಿನ ಛಾಳಿ (ನಾ)= ವ್ಯಭಿಚಾರ; ಹೊರಚಾಳಿ.

ಹೊರಗಿನ ರುಚಿ (ನಾ)= ಹೊರಗಿನ ಗಾಳಿ; ವ್ಯಭಿಚಾರ.

ಹೊರಗೆ ಕೂಡು (ಕ್ರಿ)= ಮುಟ್ಟಾಗು; ಮಾಸಿಕ ರಜೋದರ್ಶನವಾಗು; ಬಹಿಷ್ಠೆಯಾಗು.

ಹೊರಡು (ಕ್ರಿ)= ಹೋಗು.

ಹೊರಮುಚ್ಚುಗ್ಯಾ (ನಾ)= ಮುಟ್ಟಿದ ಕೂಡಲೆ ತನ್ನ ಎಲೆಯನ್ನು ಬಿಚ್ಚಿಕೊಳ್ಳುವ ಸಸ್ಯ.

ಹೊರಸು (ನಾ)= ಹಗ್ಗದ ಮಂಚ; ನೂಲಿನ ಮಂಚ.

ಹೊರಿ (ನಾ)= ಹೊರೆ; ಭಾರ.

ಹೊರ್ಕಡಿ (ನಾ)= ಹೊರಕಡಿ (ನೋಡಿರಿ).

ಹೊರ್ಗ (ಅ)= ಹೊರಗೆ; ಹೊರಕ್ಕೆ; ಹೊರಗಡೆ.

ಹೊರ್ತು (ನಾ)= ಹೊರತು.

ಹೊರ್ಮ್ಯಾ (ನಾ)= ಹೊರಮ್ಮೆ; ಹೊರೆ ಮಗ್ಗಲು.

ಹೊರ್ಸು (ಕ್ರಿ)= ಹೊರಸು; ಹಗ್ಗದ ಮಂಚ (ಒಗಟು: ನಾಕ್ಕಾಲಿನ ನಾಗಪ್ಪ। ನೆಂಟ್ರು ಬಂದ್ರು ಬಾಗಪ್ಪ। =ಹೊರಸು).

ಹೊಲ (ನಾ)= ಬೆಳೆ ಬೆಳೆಯುವ ಭೂಮಿ; ಕೃಷಿಭೂಮಿ.

ಹೊಲಗೇರಿ (ನಾ)= ಹೊಲೆಯರು ವಾಸಿಸುವ ಕೇರಿ; ದಲಿತರ ಕೇರಿ.

ಹೊಲತಿ (ನಾ)= ಹೊಲೆಯರ ಮಹಿಳೆ.

ಹೊಲ್ಗಿ (ನಾ)= ಹೊಲಿಗೆ; ಹೊಲಿಯುವಿಕೆ.

ಹೊಲ್ತಿ (ನಾ)= ಹೊಲತಿ; ಹೊಲೆಯರ ಮಹಿಳೆ.

ಹೊಲ್ಯಾ (ನಾ)= ಹೊಲೆಯ; ದಲಿತ.

ಹೊಲ್ಸು (ನಾ)= ಹೊಲಸು; ಕೊಳೆ; ಕೊಳಕು.

ಹೊಲ್ಸು ಮಾತು (ನಾ)= ಕೆಟ್ಟ ಮಾತು.

ಹೊಲ್ಸಿ (ನಾ)= ಹೊಲಸಾಗಿರುವವಳು (ಬೈಗುಳ).

ಹೊಲ್ಸ್ಯಾ (ನಾ)= ಹೊಲಸಾಗಿರುವವನು (ಬೈಗುಳ).

ಹೊಸಾ (ವಿ)= ಹೊಸ; ನೂತನ, ನವೀನ; (ಗಾದೆ: ಹೊಸಾ ಹೊಸಾ ಗಂಡ ಹೊಸ್ತುಲು ಧಾಟಗುಡಾಲ। ಇರಿರ್ತಾ ಗಂಡ ಇರ್ಗುಡಾಲ।).

ಹೊಸಿ (ಕ್ರಿ)= ಹೊಸೆ; ಕಡೆ; ಮಥಿಸು; ಕದಡು; ನಾರಿನಿಂದ ಹಗ್ಗ ತಯಾರಿಸು.

ಹೊಸ್ತುಲು (ನಾ)= ಹೊಸತಿಲು; ಬಾಗಿಲು.

ಹೊಸ್ತುಲು ಹುಣ್ಣಿ (ನಾ)= ಹೊಸತಿಲ ಹುಣ್ಣಿಮೆ; ಹೊಸತಿಲ ಪೂಜಿಸುವ ಹುಣ್ಣಿಮೆ; ತೆನೆಕಟ್ಟುವ ಹುಣ್ಣಿಮೆ.

ಹೊಳಿ (ಕ್ರಿ)= ಪ್ರಕಾಶಿಸು; ಮಿಂಚು; ಶೋಭಿಸು (ನಾ)= ನದಿ; ತೊರೆ.

ಹೊಳು (ನಾ)= ಹೊಳುವು; ಸುಳಿವು.

ಹೊಳ್ಳು (ಕ್ರಿ)= ಉರುಳು; ಆಚೆಗೆ ಸರಿ.

ಹೊರಳು (ನಾ)= ಟೊಳ್ಳು. (ಕ್ರಿ)= ಹೊಳ್ಳು; ಮಗ್ಗುಲಾಗು.

ಹೊಳ್ಳುಸು (ಕ್ರಿ)= ಹೊರಳಿಸು; ಉರುಳಿಸು.

ಹೊಳ್ಯಾಡು (ಕ್ರಿ)= ಹೊರಳಾಡು; ನೆಲದ ಮೇಲೆ ಉರುಳಾಡು; ಚಡಪಡಿಸು; ಕೆಲಸ ನೆರವೇರದಿರು.

ಹೋಗಾಟ್ಗೆ (ಅ)= ಹೋಗುವಷ್ಟರಲ್ಲಿ.

ಹೋಗಾಮಿ (ಕ್ರಿ)= ಹೋಗೋಣ (ಭಜನೆ ಹಾಡು: ಹೋಗಾಮಿ ನಡಿರಿ ಸಿರಿಶೈಲಕ। ಮಲ್ಲಿಕಾರ್ಜುನನ ದರುಶನಕ॥).

ಹೋಗು (ಕ್ರಿ)= ತೆರಳು; ಗಮಿಸು; ಹೊರಡು.

ಹೋಗ್ಗ (ಕ್ರಿ)= ಹೋಗುಗ; ಹೋಗಲೆ; ಹೋಗ್ಬೆ.

ಹೋಡು (ನಾ)= ಹೊಲ; ಕೃಷಿ ಭೂಮಿ.

ಹೋತಾ (ನಾ)= ಗಂಡು ಮೇಕೆ; ಗಂಡು ಆಡು.

ಹೋಮ (ನಾ)= ಸಂ.= ಯಜ್ಞ; ಯಾಗ.

ಹೋಯ್ತು (ಕ್ರಿ)= ಹೋಯಿತು; ನಿರ್ಗಮಿಸಿತು.

ಹೋರಿ (ನಾ)= ಎಳೆ ಪ್ರಾಯದ ಗಂಡು ಕರು; ಗೂಳಿ.

ಹೋಳಗಿ (ನಾ)= ಹೋಳಿಗೆ; ಒಬ್ಬಟ್ಟು (ಭಜನೆ: ಕರ್ಬಾಸಪ್ಪನ ಜೋಳಗಿ। ದೇಶಾಕೆಲ್ಲಾ ಹೋಳಗಿ).

ಹೋಳಾ (ನಾ)= ಹ್ವಾಳಾ; ಪೋಳಾ; ಮರಾಟಿಗರು ಆಚರಿಸುವ ಮುಂಗಾರು ಹಬ್ಬ.

ಹೋಳಿ (ನಾ)= ಕಾಮನ ಹಬ್ಬ.

ಹೋಳಿ ಧೂಳಂಡಿ (ನಾ)= ಕಾಮದಹನದ ಮರುದಿನ; ಬಣ್ಣದ ಓಕುಳಿ ಆಡುವ ದಿನ.

ಹೋಳಿ ಹುಣ್ಣೆ (ನಾ)= ಕಾಮದಹನ ಮಾಡುವ ಹುಣ್ಣಿಮೆ.

ಹೋಳು (ಕ್ರಿ)= ಈಳಿಗೆಯಿಂದ ಕಾಯಿಯನ್ನು ಚೂರು ಮಾಡು; ತುಂಡು ಮಾಡು ; (ನಾ)= ಚೂರು; ತುಂಡು.

ಹೋಳುಣ್ಣಿ (ನಾ)= ಹೋಳಿ ಹುಣ್ಣಿಮೆ; ಕಾಮದಹನದ ಹುಣ್ಣಿಮೆ.

ಹೋಳ್ಗಿ (ನಾ)= ಹೋಳಿಗೆ.

ಹೋಳ್ಗಿಜ್ವಾಳಾ (ನಾ)= ಗೋಧಿಯಂತೆ, ರಾಗಿಯಂತೆ ಜಗಿಯುಳ್ಳ ಕೆಂಬಣ್ಣದ ಜೋಳ; ರಾಗಿಮುದ್ದೆಯಂತೆ ಮುದ್ದೆ ತಯಾರಿಸಲು ಬಳಸುವ ಜೋಳ.

ಹೋಳ್ಗಿ ಮಣಿ (ನಾ)= ಹೋಳಿಗೆ ಲಟ್ಟಿಸುವ ಮಣೆ.

ಹೋಳ್ಗಿ ಬುಟ್ಟಿ (ನಾ)= ಹೋಳಿಗೆ ಇರಿಸುವ ಬೆತ್ತದ ಬುಟ್ಟಿ.

ಹೋಳ್ಗಿ ಮಾಡು (ಕ್ರಿ)= ಹೋಳಿಗೆ ಸಿದ್ಧಗೊಳಿಸು.

ಹೋಳ್ಗಿ ಹಂಚು (ನಾ)= ಹೋಳಿಗೆಯನ್ನು ಬೇಯಿಸಲು ಬಳಸುವ ಹಂಚು.

ಹೌದು (ನಾ)= ನೀರಿನ ತೊಟ್ಟಿ. (ಅ) ಸಮ್ಮತಿಯನ್ನು ಸೂಚಿಸುವ ಒಂದು ಅವ್ಯಯ.

ಹೌಲಟ್ (ನಾ)= ಹುಚ್ಚ; ಹುಚ್ಚೇರಿದವನು; ಅರಿವು ಗೇಡಿ. (ಬೈಗುಳ).

ಹೌಲಾ (ನಾ) ಉ.= ಹುಚ್ಚ; ಮರುಳ. (ಬೈಗುಳ).

ಹೌಲಿ (ನಾ) ಉ.= ಹುಚ್ಚಿ; ಮರುಳಿ (ಬೈಗುಳ).

ಹೌಲ್ದಾಲ (ವಿ.)= ಹುಚ್ಚುಚ್ಚು.

ಹೌಸು (ನಾ)= ತಿಳುವಳಿಕೆ.

ಹೌಹಾರು (ಕ್ರಿ)= ಬೆದರು; ಗಾಬರಿಯಾಗು.

ಹ್ಯಾಂಗ (ಅ)= ಹೇಗೆ.

ಹ್ಯಾಂಗಾರಾ (ಅ)= ಹೇಗಾದರೂ.

ಹ್ವಾತಾ (ನಾ)= ಹೋತ; ಗಂಡು ಆಡು; ಗಂಡು ಕುರಿ.

ಹ್ವಾರ್‍ಯಾ (ನಾ)= ವೈಭವ; ಜರ್ಬು; ಪರಿಶ್ರಮ; ಪ್ರಯತ್ನ; ಜೋರು.

ಹ್ವಾರ್‍ಯಾ ಆದಾ (ಕ್ರಿ)= ವೈಭವವಿದೆ; ಜರ್ಬು ಇದೆ, ಪ್ರಯತ್ನ ಇದೆ; ಜೋರಾಗಿದೆ.

ಹ್ವಾಳಾ (ನಾ)= ಹೋಳಾ; ಪೋಳಾ; ಮರಾಠರು ಆಚರಿಸುವ ಮುಂಗಾರು ಹಬ್ಬ.

ಹ್ವೊಲ್ಸು (ನಾ)= ಹೊಲಸು; ಗಲೀಜು.

ಹ್ವೊಲ್ಸ್ಯಾ (ನಾ)= ಸದಾ ಹೊಲಸಾಗಿರುವವನು (ಬೈಗುಳ).

ಳ

ಳಾಳಿ (ನಾ)= ಲಾಳಿ; ಲ್ವಾಳಿ.

ಳಾಳೆತ್ತು (ನಾ)= ಲಾಳೆತ್ತು; (ಗಾದೆ: ಕಾಗಿ ಕರ್‍ರಂದ್ರ ಳಾಳೆತ್ತು ಬೆದುರಿ ಬಿತ್ತಂತ!).

ಳೊಳಂಗ (ನಾ)= ಘಂಟೆ ಸದ್ದು.

ಳೊಳಂಗ ಳೊಳಂಗ (ದ್ವಿ)= ಘಂಟೆಯ ನಿರಂತರ ಸದ್ದು.

ಳೌಳಸರ (ನಾ)= ಲೋಳೆಸರ; ಎಲೆಯಲ್ಲಿ ಆಹಾರ ಸಂಗ್ರಹಿಸುವ ಒಂದು ಪ್ರಕಾರದ ಔಷಧಿ ಸಸ್ಯ.

ಳ್ವಾಳ್ಯಾ (ನಾ)= ಲ್ವಾಳ್ಯಾ; ಹೆಣ್ಣಿಗ; ಕಾಮುಕ (ಬೈಗುಳ).

ಳ್ವಾಳಿ (ನಾ)= ಲ್ವಾಳಿ; ಸ್ತ್ರೀಯ ರೇತಸ್ಸು; ಪುರುಷನ ವೀರ್ಯ; ಹುಣ್ಣಿನಲ್ಲಿಯ ಕೀವು.

ಳ್ವಾಳಿ ಭೀಳು (ಕ್ರಿ)= ಹುಣ್ಣು ಒಡೆದು ಕೀವು ಹೊರ ಬೀಳು; ಕೀವು ಸೋರು.

ಸಿರಿಗನ್ನಡಂ ಗೆಲ್ಗೆ!
ಬಿದರಿ ಕನ್ನಡಂ ಗೆಲ್ಗೆ!
ವಿಶ್ವ ಕನ್ನಡಂ ಗೆಲ್ಗೆ!

ಅನುಬಂಧ-೧

ಅಮಾವಾಸ್ಯಗಳು

೧-ಅಗತಾದಿ ಅಮಾಸಿ
೨-ಬಾದ್ಮಿ ಅಮಾಸಿ
೩-ಮಣ್ಣೆತ್ತಿನೆಮಾಸಿ
೪-ನಾಗರಮಾಸಿ
೫-ಚೌತಿ ಅಮಾಸಿ
೬-ದಸರಿ ಅಮಾಸಿ
೭-ದಿವುಳ್ಗಿ ಅಮಾಸಿ
೮-ಚೆಟ್ಟಿ ಅಮಾಸಿ
೯-ಯಳ್ಳಾಮಾಸಿ
೧೦-ಅವತ್ರಾಮಾಸಿ
೧೧-ಶಿವರಾತ್ರಿ ಅಮಾಸಿ
೧೨-ಉಗಾದಿ ಅಮಾಸಿ

ಹುಣ್ಣಿಮೆಗಳು

೧-ದವುಂದ್ಹುಣ್ಣೆ
೨-ಅಗ್ಯಾದಹುಣ್ಣೆ
೩-ಕಾರುಣ್ಣೆ
೪-ಕೊಟ್ಗಿಹುಣ್ಣೆ
೫-ನೂಲ್ಹುಣ್ಣೆ
೬-ಜೋಕ್ಯಾನ್ಹುಣ್ಣೆ
೭-ಶೀಗಿಹುಣ್ಣೆ
೮-ಗೌರಿಹುಣ್ಣೆ
೯-ಚೆಟ್ಟಿಹುಣ್ಣೆ, ಭಂಡಾರಹುಣ್ಣೆ
೧೦-ಬನ್ದಹುಣ್ಣೆ
೧೧-ತೆನ್ನಕಟ್ಹುಣ್ಣೆ, ಹೊಸತ್ಲಹುಣ್ಣೆ
೧೨-ಹೋಳುಣ್ಣೆ

ವಾರಗಳು

೧-ಸ್ವಾಮಾರ
೨-ಮಂಗಳಾರ
೩-ಬುಧಾರ, ಬುದುವಾರ
೪-ಭೇಸ್ತಾರ
೫-ಶುಕ್ರಾರ
೬-ಸಣಿವಾರ
೭-ಆಯ್ತಾರ

ಕಾಲಗಳು

೧-ಮಳ್ಗಾಲ
೨-ಛಳ್ಗಾಲ
೩-ಬ್ಯಾಸ್ಗಿಕಾಲ

ಮಳೆ ನಕ್ಷತ್ರಗಳು

೧-ಅಶ್ವಿನಿ

೨-ಭರಣಿ

೩-ಕಿರ್ಕತ್ತು

೪-ರೋಯಿಣಿ

೫-ಮಿರ್ಗ

೬-ಆರಿದ್ರಿ

೭-ಸಣ್ಣ ಫುಸ್ಯಾ

೮-ಧೊಡ್ಡ ಫುಸ್ಯಾ

೯-ಅಸ್ಲೀಸ್ಯಾ

೧೦-ಮಗಿ

೧೧-ಹುಬ್ಬಿ

೧೨-ಉತ್ರಿ, ಉತ್ತರಿ

೧೩-ಹಸ್ತ, ಹಸ್ತಿ

೧೪-ಚಿತ್ತಿ

೧೫-ಸಾತಿ

೧೬-ಇಸಾಕಿ

೧೭-ಆನ್ರಾದಿ

೧೮-ಜ್ಯೇಷ್ಠಾ

೧೯-ಮೂಲಾ

೨೦-ಪೂರ್ವಾಷಾಢಾ

೨೧-ಉತ್ತರಾಷಾಢಾ

೨೨-ಶ್ರವಣಾ

೨೩-ಧನಿಷ್ಠಾ

೨೪-ಶತತಾರಾ

೨೫-ಪೂರ್ವಾಭಾದ್ರ

೨೬-ಉತ್ತರಾಭಾದ್ರ

೨೭-ರೇವತಿ

ಮನರಂಜನೆಗಳು

೧-ಬೈಲಾಟ (ಧೊಡ್ಡಾಟ)

೨-ಡಪ್ಪಿನಾಟ

೩-ಕಟಬಾವ್ನ ಘೊಂಬಿ ಆಟ

೪-ನಾಟಕ

೫-ಪ್ರವಚನ (ಕೀರ್ತನ)

೬-ಭಜನೆ

೭-ಕೋಲಾಟ

೮-ಭೈರೂಪಿ (ಜಾತಗಾರ)

೯-ಪಾತುರ್ನಾಚ

೧೦-ಗೀಗೀಪದ

೧೧-ಭುಲಾಯಿ ಹಾಡುಗಳು

೧೨-ವೀರಭದ್ರನ ಒಡಬುಗಳು

೧೩-ವಗ್ಯಾನ ಒಡಬುಗಳು

೧೪-ಕಾಲಜ್ಞಾನ

೧೫-ಅಲಾಯಿ ಹಾಡುಗಳು

೧೬-ಉತ್ಸವ/ ಜಾತ್ರೆಗಳು

೧೭-ದೇವಕಾರ್ಯ

೧೮-ಗಣಾಚಾರ

೧೯-ಕುಸ್ತಿ/ಮಲ್ಲಂಬ

ಮನೆಯಲ್ಲಿಯ ಆಟಗಳು

೧-ಹುಣ್ಚೆ ಪಕ್ಕದಾಟ

೨-ಹುಲಿಕಟ್ಟಾಟ

೩-ಕಣ್ಮುಚ್ಗಿ ಆಟ

೪-ಕುಂಟಾಟ (ಕುಂಟಲಿಪಿ)

೫-ಮುಟ್ಟಾಟ

೬-ಪಗಡಿ ಆಟ (ಕವಡಿ ಆಟ)

೭-ಒಗಟದ ಆಟ

೮-ಹೂಂ ಅನ್ನಾ ಆಟ

೯-ಚಿತ್ತಪಟ್ಟ ಆಟ

೧೦-ಘರ್ಕುಲಿ ಆಟ

೧೧-ಘೊಂಬಿ ಆಟ

ಬೀದಿ ಆಟಗಳು (ಹೊರಾಂಗಣ)

೧-ಹೈಕೈ ಚೆಂಡಿನಾಟ

೨-ಪುಟಗುಳಿ ಚೆಂಡಿನಾಟ

೩-ಚಿಣಿಫಣಿ ಆಟ

೪-ಈಸಲಾಟ (ಈಜಾಟ)

೫-ಝಾಡಫಣಿ ಆಟ

೬-ಖೋ ಖೋ ಆಟ

೭-ಹುತುತು ಆಟ

೮-ನಮಕ (ಉಪ್ಪಿನ್ಮಡಿ ಆಟ)

೯-ನೋಡ್ನೋಡ್ತಿಮ್ಮಯ್ಯ ಆಟ

೧೦-ಗೌರಿಕುಳ್ಳಿ ಪೂಜಿ ಆಟ

೧೧-ಗಡಿಭುಪ್‌ಜಾ ಆಟ

೧೨-ಕುಂಞಾನಾಟ

೧೩-ಧಪ್ಪನ್ಧಪ್ಪಿ ಆಟ

೧೪-ಭೌರಿ ಆಟ (ಬೊಗರೆಯಾಟ)

ಜನಸಾಮಾನ್ಯರ ಆಹಾರ

೧. ಜೋಳದ ರೊಟ್ಟಿ/ಭೆಜ್ಜಿ ರೊಟ್ಟಿ/ಬೆರ್ಕಿ ರೊಟ್ಟಿ/ಧಪಾಟಿ/ಗೋದಿ ರೊಟ್ಟಿ, ಚಪಾತಿ.

೨. ತೊಗ್ರಿಬ್ಯಾಳಿ ಸಾರು.

೩. ನವಣೆಬಾನಾ/ಬರಗಿನ ಬಾನಾ/ಸ್ಯಾವಿ ಬಾನಾ/ಹಾರ್ಕ ಬಾನಾ/ಕಳವಿ ಬಾನಾ.

೪. ತೊಗರಿ, ಅವರಿ, ಹೆಸರು, ಉದ್ದು, ಅಲ್ಸಂದಿ, ಉಲುಲಿ (ಹುರುಳಿ), ಚಣಗಿ ಇತ್ಯಾದಿಗಳ ಕಾಳಿನಪಲ್ಯ, ಹಿಂಡಿಪಲ್ಯ, ಘುಗ್ಗರಿ ಇತ್ಯಾದಿ.

೫. ತರಕಾರಿ : ಫುಂಡಿಪಲ್ಲ್ಯ, ಕುಕ್ಕಿನ ಪಲ್ಲ್ಯ, ಸಬ್ಸಿ, ಕಲ್ಸಬ್ಸಿ, ಚಗ್ಚಿ, ಮುಟ್ಗಿ ಪಲ್ಲ್ಯ, ಸ್ಯಾಂವಿಪಲ್ಲ್ಯ, ನುಗ್ಗಿಪಲ್ಲ್ಯ, ಮೆಂತಿಪಲ್ಲ್ಯ, ಹತ್ತರ್ಕ್ಯಾನ ಪಲ್ಲ್ಯ, ಭೆಂಡಿ, ಬದ್ನಿ, ಚವಳಿ, ಬಿನಿಸು, ಅವರಿ, ಅಲ್ಸಂದಿ, ಮೆಣಸಿನಕಾಯಿ, ತೊಂಡಿಕಾಯಿ, ಸೌತಿಕಾಯಿ, ಟಮಾಟಾ.

೬. ಸಿದ್ಧ ಆಹಾರಗಳು (ರೆಡಿಮೇಡ್ ಫುಡ್) :
ಸ್ಯಾವ್ಗಿ, ಭಟವಿ, ಸೌತಿ ಬೀಜ, ಪಾಡ್ಡಿ.
ನಂಜಿಸಿಕೊಳ್ಳುವ ಪದಾರ್ಥಗಳು : ಮಾಯನ್ಕಾಯಿ ಹೋಳು (ಉಪ್ಪಿನಕಾಯಿ), ನಿಂಬಿಕಾಯಿ (ಉಪ್ಪಿನಕಾಯಿ), ಅಂಬಾಡಿಕಾಯಿ (ಉಪ್ಪಿನಹೋಳು), ಬಾರಿಕಾಯಿ ಖಾರಾ, ಹುಣ್ಸೆನಕಾಯಿ ಖಾರಾ, ನೆಲ್ಲಿಕಾಯಿ ಖಾರಾ, ಟಮಾಟ್ಯಾನ ಖಾರಾ, ಉಳಾಗಡ್ಡಿ ಖಾರಾ, ಬಳ್ಳೊಳ್ಳಿ ಖಾರಾ, ಫುಟಾಣಿ ಖಾರಾ, ಖೊಬ್ರಿಖಾರಾ, ಉದ್ದಿನಹಪ್ಪ, ಜ್ವಾಳದ ಹಪ್ಪ, ಅಕ್ಕಿ ಹಪ್ಪ, ಕುರುಡ್ಗಿ, ಸೆಂಡ್ಗಿ, ಎಳ್ಸೆಂಡ್ಗಿ, ಭೆಜ್ಜಿಸೆಂಡ್ಗಿ,
ಬಾಳ್ಕ ತರಕಾರಿ : ಭೆಂಡಿ, ಚವಳಿ

೭. ಹಬ್ಬದೂಟದ ಆಹಾರ :

ಹೋಳ್ಗಿ, ಹೂರುಣ್ಗಡುಬು, ಚಪಾತಿ, ಪೂರಿ, ಪುಟಗುಳಿ (ಭಜಿ), ಹಪ್ಪ, ಸೆಂಡ್ಗಿ, ಕುರಡ್ಗಿ, ಧಪಾಟಿ, ಸಪ್ಪನಬ್ಯಾಳಿ, ತುಂಬ್ಗಾಯಿ, ಹಿಂಡಿಪಲ್ಲ್ಯ, ಕಳವಿಬಾನಾ, ಬಿರೇಂಜಿ, ಹುಳ್ಬಾನಾ, ಅಂಬ್ಲಿ, ಭಜ್ಜಿ, ಖುಸ್ಬಿಹಾಲು ಖಿಚಡಿ, ಘೋದಿ ಮಾಲ್ದಿ, ಖೊಬ್ರಿ ಮಾಲ್ದಿ, ಹುಗ್ಗಿ, ಸ್ಯಾವ್ಗಿ, ದೂದಖೀರು.

ಉಡುಪುಗಳು :

ಸೀರಿ, ಕುಬ್ಸಾ, ಲಂಗಾ, ಬಾಡಿ, ನೂರಿ, ಮಿಡ್ಡಿ, ಧೋತ್ರು, ಪ್ಯಾಂಟು, ಬುಷರ್ಟು, ಅಂಗಿ, ಬನೀನು, ಟೋಪಿ, ರುಮಾಲು, ಟುವಾಲು, ದಸ್ತಿ, ಝಾಂಗು.

ಒಡವೆಗಳು :

ನತ್ತು, ಮೂಗ್ತಿ, ಭೆಂಡೋಲಿ, ಸಿಂಗಾರ ಕರ್ಮಣಿ, ಕಾರಿಪಟ್ಗಿ, ವಜ್ಜಿ ಟಿಕ್ಕ್ಯಾ, ಫೌಜ್ಜಿ ಟಿಕ್ಕ್ಯಾ, ಗುಂಡಿನ ಸರ, ಗುಳ್ಳು, ಘೋದಿಮಣಿ, ತುರ್ಬಿನ್ನುವಾ, ಭಂಗಾರುಂಗುರು, ಭಂಗಾರ ಬಳಿ, ಪಾಟ್ಲಿ, ಬಿಂದ್ಲಿ, ಭಂಗಾರ ಖಡಗಾ, ಕಾಲ್ಗಡ್ಗ, ರುಳಿ, ಪಾಯ್ಜಾಮ, ಕಾಲುಂಗುರು, ಪಿಲ್ಯಾ, ಡಾಬು, ಲಾಕಿಟ್ಟು, ಲೋಲಕ್ಕು, ಝುಮ್ಕಾ

ವಾಸದ ಮನೆಗಳು :

ಛಪ್ರ, ಗುಳಾರ, ಗುಂಪಾ, ಹಾದಿ, ಬೀದಿ, ಗಿಡದನೆಳ್ಳು, ಝೋಪ್ಡಿ, ಘುಡ್ಸಿ, ಹಂಚಿನ ಮನಿ, ತಗಡದ ಮನಿ, ಛತ್ತಿನ ಮನಿ, ಆರ್.ಸಿ.ಸಿ. ಇತ್ಯಾದಿ

ಧಾರ್ಮಿಕ ಜಾಗಗಳು :

ಹಣಮಂದ್ರೇವ್ರ ಗುಡಿ, ಬಸವಕೇಂದ್ರ, ಬಸವ ಮಂಟಪ, ಮಹಾದೇವನ ಗುಡಿ, ಬಸವಣ್ಣನ ಗುಡಿ, ಅನುಭವ ಮಂಟಪ, ಮಠ, ಮಸೀದಿ, ಚರ್ಚು, ದರ್ಗಾ, ಲಕ್ಷ್ಮಿಗುಡಿ, ಮರ್ಗೆಮ್ಮ, ದುರ್ಗಮ್ಮ, ಪೋಚಮ್ಮ, ಎಲ್ಲಮ್ಮ, ಹಿರೋಡ್ಯಾ, ಮಸೋಬಾ.

ಅನುಬಂಧ-೨

ಕೋಶಕ್ಕೆ ಆಡುನುಡಿ ನೀಡಿದವರು

ಸಮಸ್ತ ಬೀದರ ಜಿಲ್ಲೆ, ಆಂಧ್ರದ ಜಹೀರಾಬಾದು ಮತ್ತು ನಾರಾಯಣಖೇಡ ತಾಲೂಕುಗಳು, ಮಹಾರಾಷ್ಟ್ರದ ಉದಗೀರ ಮತ್ತು ಉಮ್ಮರ್ಗಾ ತಾಲೂಕುಗಳು, ಗುಲಬರ್ಗಾ ಜಿಲ್ಲೆಯ ಚಿಂಚೋಳಿ ಹಾಗೂ ಗುಲಬರ್ಗಾ ತಾಲೂಕು ಇತ್ಯಾದಿ ಭಾಗದ ಸಮಸ್ತ ಸರ್ವಸಾಮಾನ್ಯರು ನನ್ನ ಈ ಬೀದರ ಕನ್ನಡ ಕೋಶಕ್ಕೆ ತಮ್ಮ ಆಡುನುಡಿಯ ಸಂಪತ್ತನ್ನು ಧಾರೆಯೆರೆದಿದ್ದಾರೆ. ಅದರಲ್ಲೂ ವಿಶೇಷವಾಗಿ ಬಾಲ್ಯದಿಂದ ಇಲ್ಲಿಯವರೆಗೆ ಆಡುನುಡಿ ಸಿರಿಯನ್ನು ಒದಗಿಸಿದವರು ಈ ಕೆಳಕಂಡಂತೆ ಇದ್ದಾರೆ. ಎಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕ್ರ.ಸಂ.	ಹೆಸರು ಮತ್ತು ವಿವರ	ಊರು
೧.	ಭೀಮಬಾಯಿ ಶರಣಪ್ಪ ದೇವರಾಯ	ಹುಡಗಿ
೨.	ಶರಣಪ್ಪ ಗುಂಡಪ್ಪ ದೇವರಾಯ	ಹುಡಗಿ
೩.	ನಾಗಮ್ಮ ಗುಂಡಪ್ಪ ಯರಬಾಗಿ	ಗೋರಂಪಳ್ಳಿ
೪.	ತಂಗೆಮ್ಮ ಈರಪ್ಪ ಯರಬಾಗಿ	ಗೋರಂಪಳ್ಳಿ
೫.	ಗುರಮ್ಮ ಭೀಮರಾಯ ಹುಂಪ್ಳಿ	ಮರಗುತ್ತಿ (ಗುಲಬರ್ಗಾ)
೬.	ಪುತಳಾಬಾಯಿ ಶರಣಪ್ಪ ಮಾಲಿಪಾಟೀಲ	ಘೋರ ಜಂಬಗಿ (ಗುಲಬರ್ಗಾ)
೭.	ಕೋಂಡಾದೇವಿ ಗ್ರಾಮೀಣ ಶೂಲಗಿತ್ತಿ	ಮುಡಬಿ
೮.	ಕಾಶಪ್ಪ ಕೋಂಡಗಿ	ಮುಡಬಿ
೯.	ಮಾರುತಿ ಹರಿಜನ	ಮುಡಬಿ
೧೦.	ಮಲ್ಲಮ್ಮ ಮಾಣಿಕಪ್ಪ ದೇವರಾಯ	ಹುಡಗಿ
೧೧.	ಶೋಭಾ ಅಪ್ಪಾರಾಯ ದೇವರಾಯ	ಹುಡಗಿ
೧೨.	ನಾಗಮ್ಮ ಅಣ್ಣಾರಾಯ ದೇವರಾಯ	ಹುಡಗಿ
೧೩.	ಪಾರ್ವತಿ ಶಾಮಾರಾಯ ದೇವರಾಯ	ಹುಡಗಿ
೧೪.	ಕಸ್ತೂರಿ ಬಾಯಿ ಮಹಾಂತಪ್ಪ ಬೆಳೆಂಬಗಿ	ಹುಡಗಿ
೧೫.	ಪಾರ್ವತಿ ಶಿವರಾಜ ಮುಗಳಿ	ಹುಡಗಿ

೧೬.	ಸಾವಿತ್ರಿ ಬಸವರಾಜ ಮುಗಳಿ	ಹುಡಗಿ
೧೭.	ಕಾವೇರಿ ಬಸವರಾಜ ಯರಬಾಗಿ	ಗೋರಂಪಳ್ಳಿ
೧೮.	ಕನ್ಯಾಕುಮಾರಿ ಜಗನ್ನಾಥ ಮೂಲಗೆ	ಶಿಖಾರಖಾನಿ (ಆಂಧ್ರ)
೧೯.	ಉಮಾದೇವಿ ಅಂಗನವಾಡಿ ಕಾರ್ಯಕರ್ತೆ	ಹಲಬುರ್ಗಿ
೨೦.	ಸುರೇಖಾ ಕುಲ್ಕರ್ಣಿ	ನೀಲಂನಳ್ಳಿ
೨೧.	ಶಿವರಾಮ ಮೇತ್ರಿ	ಭಾಲ್ಕಿ
೨೨.	ಬಾಬಸೆಟ್ಟಿ ಮಂಠಾಳಕರ್	ಭಾಲ್ಕಿ
೨೩.	ಬಾಬುರಾವ ಗಾದಗಿ	ಬೀದರ
೨೪.	ಶಾಂತಾಬಾಯಿ ಗಾದಗಿ	ಬೀದರ
೨೫.	ರಘುನಾಥ ಮಲ್ಲಪ್ಪ ಹಡಪದ	ಚಿಟ್ಟಾವಾಡಿ ಬೀದರ
೨೬.	ದತ್ತಾತ್ರೇಯ ಬಿಚ್ಚಪ್ಪ ಗುಮ್ಮಳ	ಗಾದಗಿ
೨೭.	ಬಸವರಾಜ ಲಾಲಾ ಕಣಜಿ	ಕಣಜಿ
೨೮.	ಬಿ.ಎನ್. ಸೋಲಾಪೂರೆ	ಕಮಲನಗರ
೨೯.	ಸರಸ್ವತಿ ರಾಮಯ್ಯಾ ಅಂಗನವಾಡಿ ಕಾರ್ಯಕರ್ತೆ	ಲಖನಗಾಂವ
೩೦.	ಹಣಮಂತಪ್ಪ ಶಂಕರೆಪ್ಪ ವಲ್ಲೇಪೂರೆ (ಹಂಶಕವಿ)	ನಾಗೂರು (ಬಿ)
೩೧.	ಚೆನ್ನಮ್ಮ ವಲ್ಲೇಪೂರೆ	ನಾಗೂರು (ಬಿ)
೩೨.	ಎಮ್.ಜಿ. ದೇಶಪಾಂಡೆ	ಮೋರಗಿ (ಆಂಧ್ರ)
೩೩.	ರಮೇಶ ಕುಲಕರ್ಣಿ	ಬಂಬಳಗಿ
೩೪.	ಹೀರಾ ರಮೇಶ ಕುಲಕರ್ಣಿ	ಬಂಬಳಗಿ
೩೫.	ಸಂಗೀತಾ ಶರಣಪ್ರಕಾಶ ಮುಗಳಿ	ಹುಡಗಿ
೩೬.	ಮೀನಾಕ್ಷಿ ಕಲ್ಯಾಣರಾವ ಮುಗಳಿ	ಹುಡಗಿ
೩೭.	ಪ್ರೊ. ಸಿದ್ರಾಮಪ್ಪಾ ಮಾಸಿಮಾಡೆ	ಬಸವನಗರ ಬೀದರ
೩೮.	ಕಮಳಾಬಾಯಿ ಭದ್ರಪ್ಪ ಕಟ್ಟೆ	ಯದಲಾಪೂರ
೩೯.	ಮಹಾದೇವಿ ಪೆಂಚಪಳ್ಳಿ	ಚಿಂಚೋಳಿ ತಾಲೂಕು
೪೦.	ಮಾಣಿಕಪ್ಪ ಧೋಬಿ	ಬೀದರ
೪೧.	ಲಕ್ಷ್ಮಣಧೋಬಿ	ಅಲ್ಲಮಪ್ರಭುನಗರ, ಗೊರ್ನಳ್ಳಿ ಬೀದರ.

೪೨.	ಚಂದ್ರಪ್ಪ ಹೆಬ್ಬಾಳಕರ	ವಿದ್ಯಾನಗರ, ಬೀದರ
೪೩.	ಶಂಭುಲಿಂಗ ವಾಲದೊಡ್ಡಿ	ವಾಲದೊಡ್ಡಿ, ಬೀದರ
೪೪.	ಮಲ್ಲೇಶ್ವರಿ ಉದಯಗಿರಿ	ಮುಧೋಳ (ಬೀದರ)
೪೫.	ಮಂಗಲಾ ಕಪ್ರೆ	ಚಿಟಗುಪ್ಪ
೪೬.	ಅನಸುಯಾ ಪಾಟೀಲ	ಔರಾದ (ಬೀದರ)
೪೭.	ಸುನಿತಾ ವ್ಹಿ. ಬಿರಾದಾರ	ಚಂದರ್ಗಿ ಔರಾದ (ಬೀದರ)
೪೮.	ಮಲ್ಕವ್ವ ಬಸವಂತರಾಯ ಕುಡಳ್ಳಿ	ಭುಂಯಾರ (ಚಿಂಚೋಳಿ ತಾ.)
೪೯.	ವೀರಪ್ಪ ಅಮೃತಪ್ಪ ಪಸಾರ್ಗಿ	ಅಲ್ಲಮಪ್ರಭುನಗರ, ಬೀದರ
೫೦.	ರಘುನಾಥರಾವ ಪಾಂಚಾಳ	ಯರನಳ್ಳಿ
೫೧.	ಬಾಬುರಾವ ಪಾಂಡ್ರಿ	ಉದಗೀರ, ಮಹಾರಾಷ್ಟ್ರ
೫೨.	ಪ್ರೊ. ಮಾಣಿಕರಾವ ಬಿರಾದಾರ	ಉದಗೀರ, ಮಹಾರಾಷ್ಟ್ರ
೫೩.	ನಾಗಲಿಂಗ ಕವಿಗಳು	ಕೈಲಾಸಪೂರು (ಖಾಜಾಪುರ)
೫೪.	ಸಿದ್ಧವ್ವಾ ಮಾದಪ್ಪ ಬಿರಾದಾರ	ಮುಡಬಿ
೫೫.	ರಾಜಮ್ಮ ಮಲ್ಲಾರೆಡ್ಡಿ ಪಾಟೀಲ	ಮುಡಬಿ
೫೬.	ರುಕ್ಮೋದ್ದಿನ್ ಇಸ್ಲಾಂಪೂರ	ಇಸ್ಲಾಂಪೂರ
೫೭.	ಮಾರುತಿ ತೋರಣ ತತ್ವಪದಕಾರರು	ತೋರಣ ಕಾಲೋನಿ, ಬೀದರ
೫೮.	ಜಗದೇವಿ ದುಬಲಗುಂಡೆ	ಶಿವನಗರ, ಬೀದರ
೫೯.	ಪುಷ್ಪಾವತಿ ಜಿ. ಕನಕಾ	ಶಿವನಗರ ದಕ್ಷಿಣ, ಬೀದರ
೬೦.	ಅವಿನಾಶ ಬಸವರಾಜ ಯರಬಾಗಿ	ಗೋರಂಪಳ್ಳಿ
೬೧.	ಚೆನ್ನಪ್ಪ ಗಣಪತರಾವ ಸಂಗೋಳ್ಗಿ	ಸಂಗಮೇಶನಗರ, ಬೀದರ
೬೨.	ಗುರುನಾಥರಾವ ಸಾಹು	ಧನ್ನೂರು (ಆರ್)
೬೩.	ಎಸ್.ಎಮ್. ಜನವಾಡಕರ	ಬೀದರ (ಆನಂದನಗರ)
೬೪.	ಚಿತಾಂಬರಾಯ ಬಗದೂರಿ	ಬಗದೂರಿ
೬೫.	ಹಾಶಪ್ಪ ಪಂಚ ಪಾಟೀಲ	ಮುಡಬಿವಾಡಿ
೬೬.	ಮಹೇಂದ್ರಕುಮಾರ, ಶಾಸಕರು	ಹುಲ್ಸೂರು
೬೭.	ಮಾರುತಿ ಹರಿಜನ (ಹೌಸಿಂಗ್ ಬೋರ್ಡ್ ಬೀದರ)	ಮದರಗಾಂವ.

ಅನುಬಂಧ-೩

ದೇಶಾಂಶ ಹುಡಗಿ ಕೃತಿಗಳು

೧. ಗ್ರಾಮ ಶಿಲ್ಪಿಗಳು, ಪ್ರ : ಗ್ರಾಮ ಸನ್ಮಾನ ಸಮಿತಿ ಹುಡಗಿ, ೧೯೮೦, ವ್ಯಕ್ತಿ ಚಿತ್ರಗಳು.

೨. ಬದುಕಿನ ಸುತ್ತ (ಕವನ ಸಂಕಲನ) ಪ್ರ : ಖಡ್ಕೆ ಪ್ರಕಾಶನ, ಬೀದರ, ೧೯೮೮, ವ್ಯಕ್ತಿ ಚಿತ್ರಗಳು.

೩. ಅಕ್ಷರ ಜ್ಯೋತಿ (ಸಾಕ್ಷರತಾ ಗೀತೆಗಳು) ಪ್ರ : ಕನ್ಯಾಕುಮಾರಿ ಪ್ರಕಾಶನ, ಬೀದರ, ವ್ಯಕ್ತಿ ಚಿತ್ರಗಳು.

೪. ಬೀದರ ದೀಪ-೧ (ಸಂಪಾದನೆ-ಕನ್ನಡ) ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ : ಇತರರೊಂದಿಗೆ.

೫. ಬೀದರ ದೀಪ-೨ (ಸಂಪಾದನೆ-ಕನ್ನಡ) ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ : ಇತರರೊಂದಿಗೆ.

೬. ಬೀದರ ದೀಪ-೩ (ಸಂಪಾದನೆ-ಕನ್ನಡ) ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ : ಇತರರೊಂದಿಗೆ.

೭. ಬೀದರ ದೀಪ-೧ ಮರಾಠಿ ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ: ಇತರರೊಂದಿಗೆ.

೮. ಬೀದರ ದೀಪ-೨ ಮರಾಠಿ ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ: ಇತರರೊಂದಿಗೆ.

೯. ಬೀದರ ದೀಪ-೩ ಮರಾಠಿ ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ: ಇತರರೊಂದಿಗೆ.

೧೦. ಬೀದರ ದೀಪ-೧ ಉರ್ದು ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ: ಇತರರೊಂದಿಗೆ.

೧೧. ಬೀದರ ದೀಪ-೨ ಉರ್ದು ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ: ಇತರರೊಂದಿಗೆ.

೧೨. ಬೀದರ ದೀಪ-೧ ಉರ್ದು ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೩ ಸಂ: ಇತರರೊಂದಿಗೆ.

೧೩. ಹಮಾರೆ ಖವಾನೀನ ಉರ್ದು ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೪ ಸಂ : ಇತರರೊಂದಿಗೆ.

೧೪. ನವಚೇತನ ಕನ್ನಡ ಪ್ರ : ಬೀದರ ಸಾಕ್ಷರತಾ ಸಮಿತಿ, ಬೀದರ, ೧೯೯೫ ಸಂ: ಇತರರೊಂದಿಗೆ.

೧೫. ಮಹಾತ್ಮಾ ಬಸವೇಶ್ವರ (ಹಿಂದಿಯಿಂದ ಕನ್ನಡಕ್ಕೆ) ಪ್ರ : ಕಲ್ಯಾಣ ಕರ್ನಾಟಕ ಪ್ರಕಾಶನ, ಮುಕ್ತಿ ಮಂದಿರ, ಬೀದರ, ೧೯೯೫, ಅನುವಾದ.

೧೬. ನಾಕಂಡ ನನ್ನವರು ಪ್ರ : ಕನ್ಯಾಕುಮಾರಿ ಪ್ರಕಾಶನ, ಬೀದರ, ೧೯೯೬, ವ್ಯಕ್ತಿಚಿತ್ರ.

೧೭. ಬೀದರ ಜಿಲ್ಲೆಯ ಬರಹಗಾರರು ಪ್ರ : ಜಿಲ್ಲಾ ಕ.ಸಾ.ಪ. ಬೀದರ, ೧೯೯೮, ವ್ಯಕ್ತಿಚಿತ್ರ.

೧೮. ಸಿದ್ಧರಾಮೇಶ್ವರ ವಚನಗಳು ಪ್ರ : ಕ.ಕ. ಪ್ರಕಾಶನ, ಮುಕ್ತಿ ಮಂದಿರ, ಬೀದರ, ೧೯೯೮, ಸಂಪಾದನೆ.

೧೯. ಬೀದರ ಜಿಲ್ಲೆಯ ತತ್ವ ಪದಗಳು ಪ್ರ : ಪ್ರಸಾರಾಂಗ ಗುಬರ್ಗಾ ವಿ.ವಿ., ಗುಲಬರ್ಗಾ, ೧೯೯೮, ಉಪನ್ಯಾಸ.

೨೦. ಧರಿನಾಡಿನ ಕಾವ್ಯ (ಸಂ) ಪ್ರ : ಜಿ. ಕ.ಸಾ.ಪ. ಬೀದರ, ೨೦೦೧, ಸಂಪಾದನೆ

೨೧. ಬಸವ ಶಿಶು (ಸಂ) ಪ್ರ : ಧರಿನಾಡು ಕನ್ನಡ ಸಂಘ, ಕೇಂ.ಸ., ೨೦೦೨, ಸಂಪಾದನೆ.

೨೨. ಗುರುಪುತ್ರ (ಸಂ) ಪ್ರ : ಕನ್ಯಾಕುಮಾರಿ ಪ್ರಕಾಶನ, ಬೀದರ, ೨೦೦೨, ಸಂಪಾದನೆ.

೨೩. ಕಾವ್ಯಕಾರಂಜಿ (ಸಂ) ಪ್ರ : ಧ.ನಾ.ಕ. ಸಂಘ, ಕೇಂ.ಸ., ೨೦೦೩, ಬೀದರ, ೨೦೦೩, ಸಂ : ಇತರರೊಂದಿಗೆ.

೨೪. ಧರಿನಾಡಿನ ಜಾನಪದ ಗಾದೆಗಳು (ಸಂ) ಪ್ರ : ಧ.ನಾ.ಕ. ಸಂಘ., ಕೇಂದ್ರ ಸಮಿತಿ, ಬೀದರ ೨೦೦೫, ಸಂಪಾದನೆ.

೨೫. ದಿಗಂಬರ ವಚನಗಳು ಪ್ರ : ಧ.ನಾ.ಕ. ಸಂಘ., ೨೦೦೬ ಕೇಂ.ಸ. ಬೀ, ಆಧುನಿಕ ವಚನಗಳು.

೨೬. ಕನ್ನಡದ ದೀಪ (ಡಾ।। ಜಿ.ಬಿ. ವಿಸಾಜಿ ಅಭಿನಂದನ ಗ್ರಂಥ) ಪ್ರ : ವಿಸಾಜಿ ಅಭಿನಂದನ ಸಮಿತಿ, ಭಾಲ್ಕಿ, ೨೦೦೬, ಸಂ : ಇತರರೊಂದಿಗೆ.

೨೭. ದಿಗಂಬರ ಕರಿಬಸವೇಶ್ವರರು ಪ್ರ : ಶ್ರೀ ಕೊತ್ತಲ ಬಸವೇಶ್ವರ ಭಾ.ಶಿ. ಸಮಿತಿ, ಸೇಡಂ, ೨೦೦೬, ಚರಿತ್ರೆ.

೨೮. ಸ್ನೇಹಜೀವಿ (ಶಂಭುಲಿಂಗ ವಾಲದೊಡ್ಡಿ) ಪ್ರ : ಧ.ನಾ.ಕ,ಸಂ. ಕೇಂದ್ರ ಸಮಿತಿ, ಬೀದರ, ೨೦೦೬, ಸಂ : ಇತರರೊಂದಿಗೆ.

೨೯. ಕಂಬನಿಯ ಕಡಲು (ಶಂಭುಲಿಂಗ ವಾಲದೊಡ್ಡಿ) ಪ್ರ : ಧ.ನಾ.ಕ,ಸಂ. ಕೇಂದ್ರ ಸಮಿತಿ, ಬೀದರ, ೨೦೦೬, ಸಂ : ಇತರರೊಂದಿಗೆ.

೩೦. ಮಾಸ್ತರನ ಮನೆ (ಸಣ್ಣ ಕತೆಗಳು) ಪ್ರ : ಧ.ನಾ.ಕ,ಸಂ. ಕೇಂದ್ರ ಸಮಿತಿ, ಬೀದರ, ೨೦೦೭, ಸಣ್ಣಕತೆಗಳು.

೩೧. ಪುಸ್ತಕಗಳ ಸುತ್ತಮುತ್ತ (ಲಲಿತ ಪ್ರಬಂಧ) ಪ್ರ : ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೦೮, ಲಲಿತ ಪ್ರಬಂಧಗಳು.

೩೨. ಮುಕ್ತಿಸಂಗ್ರಾಮದ ಮೌಕ್ತಿಕಗಳು ಪ್ರ : ಧ.ನಾ.ಕ.ಸಂ. ಕೇಂದ್ರ ಸಮಿತಿ, ಬೀದರ, ೨೦೦೮, ವ್ಯಕ್ತಿ ಚಿತ್ರಗಳು.

೩೩. ಧರಿನಾಡಿನ ಜಾನಪದ ಒಗಟಗಳು (ಸಂ) ಪ್ರ : ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೦೯, ಸಂಶೋಧನ.

೩೪. ಕಂದಗುಳದ ಕುಂದಣದ ಹರಳುಗಳು ಪ್ರ : ಧ.ನಾ.ಕ.ಸಂ. ಕೇಂದ್ರ ಸಮಿತಿ, ಬೀದರ, ೨೦೦೯, ವ್ಯಕ್ತಿಚಿತ್ರಗಳು.

೩೫. ಜ್ಯೋತಿ ಬೆಳಗುತಿದೆ (ಕವನ ಸಂಕಲನ) ಪ್ರ : ಕಾರ್ತಿಕ ಎಂಟರ್‌ಪ್ರೈಸಸ್, ಬೆಂಗಳೂರು, ೨೦೦೯, ಕವನ ಸಂಕಲನ.

೩೬. ಗಂಡೆದೆಯ ಗುರು ಚೆನ್ನಬಸವ ಪ್ರ : ಬಸವ ಧರ್ಮ ಪ್ರಸಾರ ಸಂಸ್ಥೆ, ಹಿರೇಮಠ ಸಂಸ್ಥಾನ, ಭಾಲ್ಕಿ, ೨೦೧೦, ಚರಿತ್ರೆ.

೩೭. ಧರಿನಾಡು ಕನ್ನಡ ಹಕ್ಕಿಗಳು ಪ್ರ : (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರ.

೩೮. ಪವಾಡ ಪುರುಷ ಕರಿಬಸವೇಶ್ವರ (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರ.

೩೯. ದಿಗಂಬರ ದೀಪ್ತಿ (ಸಮಗ್ರ ವಚನಗಳು) (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರ.

೪೦. ಇವಳು (ಚುಟುಕುಗಳು) (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರನಲ್ಲಿ

೪೧. ಅಷ್ಟೂರಿನ ಅಲ್ಲಮಪ್ರಭು ಅಹ್ಮದ ಶಾಹವಲಿ (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರ.

೪೨. ಬೀದರ ಜಿಲ್ಲೆಯಲ್ಲಿ ಕನ್ನಡ ಕಟ್ಟಿದವರು (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರ.

೪೩. ಚೆನ್ನಬಸವ ಚರಿತೆ (ಕಾವ್ಯ) (ಅಚ್ಚಿನಲ್ಲಿ) ಪೂಜಾ ಪ್ರಿಂಟರ್ಸ್, ಬೀದರ.

ಪತ್ರಿಕಾರಂಗದಲ್ಲಿ

೧. ಶಾಂತಿಕಿರಣ	ದ್ವೈಮಾಸಿಕ	ಸಹಸಂಪಾದಕ
೨. ಉತ್ತರ ಕರ್ನಾಟಕ	ದೈನಿಕ	ಅಂಕಣಕಾರ
೩. ಪಬ್ಲಿಕ	ದೈನಿಕ	ಅಂಕಣಕಾರ
೪. ವಚನಕ್ರಾಂತಿ	ದೈನಿಕ	ಸಾಹಿತ್ಯ ವಿಭಾಗ.

ಈ ಕೋಶವು ಕಲ್ಯಾಣ ಕರ್ನಾಟಕದ ಗಂಡು ಭಾಷೆಯ ಸೊಗಡನ್ನು, ಗತ್ತನ್ನು, ಅರ್ಥವಂತಿಕೆಯನ್ನು ಪರಿಚಯಿಸುವ ಒಂದು ವಿಶಿಷ್ಟ ಪ್ರಯೋಗ. ತಮ್ಮ ಪ್ರದೇಶದ ಭಾಷಾವೈಶಿಷ್ಟ್ಯವನ್ನು ಸೂಕ್ಷ್ಮವಾಗಿ ಗ್ರಹಿಸುವ ಈ ಕೋಶಕಾರರು ಕಿವಿತೆರೆದು ಪ್ರಾದೇಶಿಕ ವೈಲಕ್ಷಣ್ಯವನ್ನಷ್ಟೇ ಅಲ್ಲದೆ ತಮ್ಮ ಪ್ರದೇಶದ ಭಾಷಾಪ್ರಯೋಗಕ್ಕೆ ಸಾಕ್ಷಿಯಾಗಿ ಜನಬಳಕೆಯ, ಸಾಹಿತ್ಯದ ದೇಸೀಗುಣವನ್ನು, ಅದರ ಬಹುಮುಖೀ ಸಾಂಸ್ಕೃತಿಕ ಆಯಾಮವನ್ನು, ಸಾಮಾನ್ಯವಾಗಿ ಅಲ್ಪಪ್ರಾಣವಿರಬೇಕಾದ ಕಡೆ ಮಹಾಪ್ರಾಣದ ಬಳಕೆಯಲ್ಲಿನ ಗಂಡುಭಾಷೆಯ ಸ್ವಾರಸ್ಯವನ್ನು, ಜಾನಪದೀಯತೆಯನ್ನು ಗುರುತಿಸುತ್ತಾ ಹೋಗುವರು. ಬಾಲ್ಯದಲ್ಲಿ ತಾಯಿ-ತಂದೆಯರು ಆಡುತ್ತಿದ್ದ ಬಿದರಿ ಕನ್ನಡ ಆಡುನುಡಿಯ ಶ್ರೀಮಂತಿಕೆಯಿಂದ ವಿಶೇಷವಾಗಿ ಪ್ರಭಾವಿತರಾಗುವರು. ದೈನಂದಿನ ವ್ಯವಹಾರದಲ್ಲಿ ತಮ್ಮ ಕಿವಿಗೆ ಬಿದ್ದ ಹೊಸ ಪದಗಳನ್ನು ನಿರಂತರವಾಗಿ ದಾಖಲಿಸುತ್ತಾ ಬಂದಿರುವರು. ಪದಗಳ ಸಂಗ್ರಹಕಾರ್ಯದಲ್ಲಿ ವಕ್ತೃಗಳನ್ನು (informants) ಬಳಸಿಕೊಂಡಿರುವರು. ಈ ಕೋಶಕ್ಕೆ ಪದಗಳನ್ನು ಸಂಗ್ರಹಿಸುವಲ್ಲಿ ೧೪ ವರ್ಷಗಳ ದೀರ್ಘ ಶ್ರಮವಿದೆ. ಒಂದು ಧ್ಯಾನಸ್ಥ ಮನಸ್ಸಿನ ಏಕಾಗ್ರತೆ ಈ ಕೋಶದಲ್ಲಿ ಪ್ರತಿಫಲನಗೊಂಡಿದೆ. 'ಬೀದರ ಕನ್ನಡ ಕೋಶವನ್ನು ಪೂರ್ತಿಗೊಳಿಸುವುದೇ ನನ್ನ ತಪಸ್ಸು' ಎಂದು ಹೇಳುವ ಕೋಶಕಾರರ ಮಾತಿನಲ್ಲಿ ಸತ್ಯಾಂಶವಿದೆ. ನನಗೆ ಇಲ್ಲಿ ಮುಖ್ಯವಾಗಿ ಕಾಣಿಸುವುದು ಕೋಶಕಾರರ ನಿತಾಂತ ಶ್ರದ್ಧೆ ಹಾಗೂ ಅರ್ಪಣಾ ಮನೋಭಾವ. ಅವರು ಪ್ರೌಢಶಾಲೆಯ ಕನ್ನಡ ಬೋಧಕರಾಗಿ, ವಯಸ್ಕರ ಶಿಕ್ಷಣ ಯೋಜನಾಧಿಕಾರಿಯಾಗಿ, ಬೀದರಿನ ಸಾಕ್ಷರತಾ ಸಮಿತಿ ಪ್ರಚಾರಕರಾಗಿ ಕೆಲಸ ಮಾಡಿರುವರು. ಹೀಗಾಗಿ ಅವರ ವೃತ್ತಿಜೀವನದ ಜೊತೆ ಈ ಕೋಶ ರಚನೆಯು ಅವಿನಾಭಾವ ಸಂಬಂಧವನ್ನು ಹೊಂದಿದೆ.

'ಮುನ್ನುಡಿ'ಯಿಂದ — ಡಾ. ಎಸ್. ವಿದ್ಯಾಶಂಕರ